ಓಂ

ಜಂಗಮ ಜ್ಯೋತಿ


ಶ್ರೀ ಜಗದ್ಗುರು ಜಯದೇವ ಪ್ರಶಸ್ತಿ



ಶತಮಾನ ಮಹೋತ್ಸವ

ಸ್ಮರಣ ಸಂಚಿಕೆ

ಚಿತ್ರದುರ್ಗ, 6 ಅಕ್ಟೋಬರ್ 1975



ಶ್ರೀ ಮಚ್ಚಿನ್ಮೂಲಾದ್ರಿ ಬೃಹನ್ಮಠದಲ್ಲಿ ಸಮಾಧಿ ಮಂದಿರ

ಓಂ

ಜಂಗಮ ಜ್ಯೋತಿ

ಶ್ರೀ ಜಯದೇವ ಪ್ರಶಸ್ತಿ

ಪ್ರಧಾನ ಸಂಪಾದಕರು

ಪ್ರೊ॥ ಜಿ. ಎಸ್. ಸಿದ್ಧಲಿಂಗಯ್ಯ, ಎಂ. ಎ.,

ಪ್ರಕಾಶಕರು

ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ
ಶತಮಾನ ಮಹೋತ್ಸವ ಸಮಿತಿ, ಚಿತ್ರದುರ್ಗ.

080.882945
JAY

g 3467

"Jangama Jyothi" Souvenir in commemoration of Jagadguru Sree Jayadeva Murugharajendra Mahaswamiji Centenary Celebrations, Edited by Prof. G.S. Siddalingaiah, M.A., Chitradurga, October 1975.

ಬೆಲೆ: 20 ರೂಪಾಯಿ

ಶ್ರೀ ಗುರುದೇವ ಪ್ರಿಂಟರ್ಸ್, ಚಿತ್ರದುರ್ಗ
ಇವರಿಂದ ಮುದ್ರಿಸಲ್ಪಟ್ಟಿತು.



ಮಹಾಕರ್ತೃ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಶಿವಯೋಗ ಸಮಾಧಿ

"Jangama Jyothi" Souvenir in commemoration of Jagadguru Sree Jayadeva Murugharajendra Mahaswamiji Centenary Celebrations, Edited by Prof. G.S. Siddalingaiah, M.A., Chitradurga, October 1975.

ಬೆಲೆ: 20 ರೂಪಾಯಿ



ಮಹಾಕರ್ತೃ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಶಿವಯೋಗ ಸಮಾಧಿ



ಶ್ರೀಮನ್ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು
ಬೃಹನ್ಮಠ ಚಿತ್ರದುರ್ಗ



ಶ್ರೀಮನ್ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು
ಬೃಹನ್ಮಠ ಚಿತ್ರದುರ್ಗ



ಶ್ರೀಮನ್ನಿರಂಜನ ಜಗದ್ಗುರು ಜಯವಿಭವ ಮುರುಘರಾಜೇಂದ್ರ ಮಹಾಸ್ವಾಮಿಗಳು
ಬೃಹನ್ಮಠ ಚಿತ್ರದುರ್ಗ



ಶ್ರೀಮನ್ನಿರಂಜನ ಜಗದ್ಗುರು ಜಯವಿಭವ ಮುರುಘರಾಜೇಂದ್ರ ಮಹಾಸ್ವಾಮಿಗಳು
ಬೃಹನ್ಮಠ ಚಿತ್ರದುರ್ಗ



ಶ್ರೀಮನ್ನಿರಂಜನ ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು
ಬೃಹನ್ಮಠ ಚಿತ್ರದುರ್ಗ



ಶ್ರೀಮನ್ನಿರಂಜನ ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು
ಬೃಹನ್ಮಠ ಚಿತ್ರದುರ್ಗ

॥ ಶ್ರೀ ಗುರು ಮುರುಘೇಶಾಯ ನಮಃ ॥

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು

ಶ್ರೀ ಜಯದೇವ ಜಗದ್ಗುರುಗಳ ಶತಮಾನ ಮಹೋತ್ಸವ ಸ್ಮರಣ ಸಂಚಿಕೆಗೆ ದಯಪಾಲಿಸಿದ

ಶುಭ ಸಂದೇಶ

—o—

ಒಡಲಿಲ್ಲದಾತ ಜಂಗಮ, ಪ್ರಾಣವಿಲ್ಲದಾತ ಭಕ್ತನಯ್ಯಾ.
ಆಚಾರವೇ ಜಂಗಮ, ವಿಚಾರವೇ ಭಕ್ತನಯ್ಯಾ.
ಆಚಾರ ವಿಚಾರವೆಂಬುದು ಸ್ವಾನುಭಾವವು ನೋಡಾ ಕೂಡಲ ಸಂಗಮ ದೇವಾ.

—ಬಸವಣ್ಣನವರು.

ವೀರಶೈವ ನಿರ್ಣಯ ಪರಮಾವತಾರ, ಶರಣ ಶಿರೋಮಣಿ-ಬಸವಣ್ಣನವರು ತಮ್ಮ ಅಂತರಂಗದ ಲಿಂಗೋಪಾಸನೆಯಾದ ಶೂನ್ಯಸಾಧನೆಯ, ಪ್ರತ್ಯಕ್ಷ ನಿದರ್ಶನವೆನ್ನುವಂತೆ, ಶೂನ್ಯಸಿಂಹಾಸನವನ್ನು ರಚಿಸಿ, ಶೂನ್ಯಮೂರ್ತಿ ಪ್ರಭುದೇವರನ್ನು ಆ ಸಿಂಹಾಸನದ ಮೇಲೆ ಮುಹೂರ್ತಗೊಳಿಸಿ, ಪರಮಾನಂದ ಪುಲಕಿತರಾದರು. ಶೂನ್ಯಪೀಠದಲ್ಲಿ ಮಂಡಿಸಿದ್ದ ಅಲ್ಲಮಪ್ರಭು, ಅನುಭವ ಮಂಟಪದ ನಂದಾದೀಪವಾಗಿ, ಶರಣ ಸಂದಣಿಯಲ್ಲಿ, ದಿವ್ಯಾನುಭವದ ದೀಪ್ತಿಯನ್ನು ದಯಪಾಲಿಸಿದರು. ವ್ಯಕ್ತಿ ಜೀವನವನ್ನು ಶುಭ್ರಗೊಳಿಸಿ, ಸಮಾಜ ಜೀವನವನ್ನು ಭದ್ರಗೊಳಿಸುವ ಮಹಾ ಕಾರ್ಯದಲ್ಲಿ, ಬಸವಣ್ಣನವರಿಗೆ, ಪ್ರಭುದೇವರ ಮಾರ್ಗದರ್ಶನ ಅವಶ್ಯವಾಗಿತ್ತು. ಭಕ್ತಿಯ ತವನಿಧಿಯಾದ ಬಸವಣ್ಣನವರು, ಪ್ರಭುವಿನ ಮಹೋಪದೇಶದಿಂದ, ವ್ಯಕ್ತಿ ಹಾಗೂ ಸಮಾಜದ ಶಿವಪಥವನ್ನು ಕಂಡುಕೊಂಡರು. ವ್ಯೋಮಕಾಯ ಅಲ್ಲಮನನ್ನು ಹಿಡಿದು ತಂದು, ಅಂಬರಾಸನದಲ್ಲಿ ಕುಳ್ಳಿರಿಸಿದ್ದು ಎಷ್ಟು ಸೋಜಿಗ! ಎಷ್ಟು ಸಮಂಜಸ!! ಪೀಠಕ್ಕೆ ತಕ್ಕ ವ್ಯಕ್ತಿ: ವ್ಯಕ್ತಿಗೆ ತಕ್ಕ ಪೀಠ! ಈ ತೆರನಾದ ಸಂಯೋಜನೆ ಮಹಾನುಭಾವಿ ಬಸವಣ್ಣನವರಿಗಲ್ಲದೆ ಯಾರಿಗೆ ಸಾಧ್ಯ !!

ಪ್ರಭು ಪರಂಪರೆಯಲ್ಲಿ ಒಂದನೆಯವರಾದ ಜ್ಞಾನನಿಧಿ ಚನ್ನಬಸವೇಶ್ವರರ ತರುವಾಯ, ಕಟ್ಟಿಗೆಹಳ್ಳಿ ಸಿದ್ಧವೀರ ಸ್ವಾಮಿಗಳವರೆಗೆ, ಸುಮಾರು ನಾಲ್ಕು ಶತಮಾನಗಳ ಕಾಲ, ಶೂನ್ಯಪೀಠವು ಒಂದೆಡೆಯಲ್ಲಿ ನಿಲ್ಲದೆ, ಅಲ್ಲಲ್ಲಿ ಸಂಚರಿಸುತ್ತ ಬಂದದ್ದು, ಚರಿತ್ರೆಯಲ್ಲಿ ವ್ಯಕ್ತವಾಗಿದೆ. ಅನಂತರ, ಮುರುಘರಾಜೇಂದ್ರರ ಮಹಿಮಾತಿಶಯದಿಂದ, ಶಿಖಾ-ಶೈಲ (ಅಧಿಕಾರದ ಮೂಲ ಮುದ್ರೆ) ಸಮೇತವಾಗಿ, ಅದು ಚಿನ್ಮೂಲಾದ್ರಿಗೆ ಬಂದು ನೆಲಸಿದ್ದು ಗಮನಾರ್ಹವಾಗಿದೆ. ಮುರುಘರಾಜೇಂದ್ರರು, ಚಿನ್ಮೂಲಾದ್ರಿಯ ಶೂನ್ಯಸಿಂಹಾಸನ ಪರಂಪರೆಯಲ್ಲಿ ಮೊದಲಿಗರು; ಮೂಲ ಕರ್ತೃಗಳು.

ಕಟ್ಟಿಗೆಹಳ್ಳಿ ಸ್ವಾಮಿಗಳು, ತಮ್ಮ ಶಿಷ್ಯರಾದ ಸೋಡಸಿದ್ಧಲಿಂಗರಿಗೆ, ಶಿವಾನುಭವ ಪಟ್ಟವನ್ನು ಕರುಣಿಸಿ, ಇನ್ನೋರ್ವ ಶಿಷ್ಯರಾದ ಮುರುಘರಾಜೇಂದ್ರರಿಗೆ ಶಿಖಾ-ಶೈಲ ಪಟ್ಟವನ್ನು ಕಟ್ಟಬೇಕೆಂದು ಕಟ್ಟಪ್ಪಣೆ ಮಾಡಿದ್ದರು. ಹಾಗೆ ಹೇಳಿ ಶಿವೈಕ್ಯರಾದ ಗುರುಗಳ ಅಪ್ಪಣೆಯನ್ನು, ಸೋಡಸಿದ್ಧಲಿಂಗರು ಯಥಾವತ್ತಾಗಿ ಪಾಲಿಸಿದರು. ಶಿವಾನುಭವ ಪಟ್ಟ, ಶಿಖಾ ಪಟ್ಟ—ಎರಡೂ ಭಿನ್ನವಾದರೂ ಪರಸ್ಪರ ಪ್ರೀತಿ-ವಿಶ್ವಾಸಗಳಿಂದ, ಘನತೆ-ಗೌರವಗಳಿಂದ ಅಭಿನ್ನವಾಗಿಯೇ ಇದ್ದುವು. ಸೋಡಸಿದ್ಧಲಿಂಗರೂ, ಮುರುಘರಾಜೇಂದ್ರರೂ ಮರೆಯಾದ ಬಳಿಕ, ಕಾರಣಾಂತರಗಳಿಂದ ವಿರಸ-ವೈಷಮ್ಯಗಳು ಬೆಳೆದುವು; ಸಮಯ ಭೇದಗಳೂ ಪ್ರಬಲವಾದುವು. ಅವರ ವರ್ಣನೆ ಇಲ್ಲಿ ಬೇಕಿಲ್ಲ—ವಿವರಗಳನ್ನು, ನಿರಂಜನ ವಂಶರತ್ನಾಕರದಲ್ಲಿ ನೋಡಿ ಅರ್ಥಮಾಡಿಕೊಳ್ಳಬೇಕು. ಒಟ್ಟಿನಲ್ಲಿ, ಸಮಯ ಭೇದ, ಗುರುಪರಂಪರೆಯ ನಿಯಮಿತ ಆಚರಣೆಗಳಿಗೆ ಸೀಮಿತವಾಗಿರದೆ, ಅನೇಕ ಸಮಸ್ಯೆಗಳಿಗೆ ತವರ್ಮನೆಯಾಯಿತು !

ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ, ನಮ್ಮ ದೇಶದ ಸ್ಥಿತಿ ಮಾತ್ರವಲ್ಲ. ಗಂಡುಗಲಿತಕ್ಕೆ ಹೆಸರಾದ ಒಳಪಂಗಡಗಳ ಕಚ್ಚಾಟ—ದುರಭಿಮಾನ ಹಲವು ಹುಚ್ಚುಗಳಿಂದಾಗಿ ಸಮಾಜದಲ್ಲಿ ಸಮನ್ವಯವಿರಲಿಲ್ಲ. ವಿದ್ಯೆ ಉದ್ಯೋಗ ಉದ್ಯಮಗಳಲ್ಲಿ ಗಂಡೆಲ್ಲ ಕ್ಷೇತ್ರಗಳಲ್ಲಿ ಹಿಂದುಳಿದಿತ್ತು. ಸಮಸ್ಯೆಗಳು ಈಗ ಮತ್ತಷ್ಟು ಜಟಿಲಗೊಳ್ಳುತ್ತಿದ್ದವು. ಇಂಥ ಅಸ್ತವ್ಯಸ್ತ ಸ್ಥಿತಿಯಲ್ಲಿ "ಶಕ್ತಿಯ ಸಾಕಾರ ರೂಪ ಮೂರ್ತಿಯಂತೆ" ಸಮಾಜದ ಭಾಗ್ಯ ರವಿಯಾಗಿ, ಜಯದೇವ ಜಗದ್ಗುರುಗಳು ಉದಯವಾದರು! ಅವರು, ದಿನಾಂಕ ೩—೧೦—೧೯೦೩ ರಲ್ಲಿ ಪಟ್ಟಾಭಿಷಿಕ್ತರಾಗಿ, ದಿನಾಂಕ ೭—೧೦—೧೯೫೬ ರವರೆಗೆ, ಚಿತ್ರದುರ್ಗದ ಮುರುಘಾಮಠದ ಗದ್ದುಗೆಯನ್ನು ಅಲಂಕರಿಸಿ, ಸುಮಾರು ೫೩ ವರ್ಷ ಕಾಲ, ಸಾರ್ವಜನಿಕ ಜೀವನದ ಆಧಾರದ ಸ್ತಂಭವಾಗಿ ನಿಷ್ಕಳಂಕವಾಗಿ ಬಾಳಿದರು! "ಸುಳಿದರೆ ಸಿಟ್ಟಿನ ಜಂಗಮನಾಗಿ ಸುಳಿಯಬೇಕು" —ಎಂಬ ಶ್ರುತಿ ಮಾತಿನ ಅನುಷ್ಠಾನಕ್ಕೆ, ಅವರು ಜಂಗಮಮೂರ್ತಿಯಾಗಿ, ನಾಡಿನ ನಾಲ್ಕೂ ದಿಕ್ಕಿನಲ್ಲಿ ಸುತ್ತಿದರು—ದೇಶ ಮಧ್ಯದಲ್ಲಿ ಅಪೂರ್ವ ವೈಭವದಿಂದ ಸಂಚರಿಸಿದರು; ಸಮಾಜವನ್ನು ಎಚ್ಚರಿಸಿದರು: ಸಮಸ್ಯೆಗಳನ್ನು ಪರಿಹರಿಸಲು ಅವಿಶ್ರಾಂತವಾಗಿ ಶ್ರಮಿಸಿದರು. ಅವರು ಏನು ಮಾಡಿದರು? ಎಷ್ಟು ಮಾಡಿದರು? ಹೇಗೆ ಮಾಡಿದರು? ಅನ್ಯಾಯ - ಅಕ್ರಮಗಳೊಡನೆ ಹೇಗೆ ಹೋರಾಡಿದರು?— ಎಂಬುದನ್ನು ಕೇವಲ ನಿರ್ಮೋಹ ದೃಷ್ಟಿಯಿಂದ ನೋಡಿದಾಗ, ಅವರ ಪ್ರಭುಶಕ್ತಿಯು ಮಹೋನ್ನತ ವ್ಯಕ್ತಿತ್ವ ಗೋಚರವಾಗದಿರದು! ಸಮಾಜದ ಸಮೃದ್ಧಿಗಾಗಿ, ದೇಶದ ಅಭಿವೃದ್ಧಿಗಾಗಿ, ಧರ್ಮದ ಧ್ಯೇಯವನ್ನಷ್ಟೇ ಇಟ್ಟು; ತಮ್ಮ ಪರಿಶುದ್ಧ, ಪವಿತ್ರ ಪ್ರಾಮಾಣಿಕ ಜೀವನವನ್ನೇ ಧಾರೆಯೆರೆದ ಅವರು, ಸಾರ್ವಜನಿಕ ಜೀವನಕ್ಕೆ ಒಂದು ಶ್ರೇಷ್ಠ ಆದರ್ಶವಾಗಿದ್ದರು! ಅವರು ಕೈಕೊಂಡ ಕಾರ್ಯಗಳ ಪಟ್ಟಿಯನ್ನು ಇಲ್ಲಿ ಕೊಡಲು ಇಷ್ಟ-ಪಟ್ಟಿಲ್ಲ;—ಏಕೆಂದರೆ, ಅವರ ಕ್ರತುಶಕ್ತಿಯನ್ನಾಗಲಿ, ಕಾರ್ಯಕ್ಷೇತ್ರವನ್ನಾಗಲಿ, ಅಂಕಿ-ಅಂಶಗಳಿಂದ ಅಳೆದು ತಿಳಿಯಲು ಈ ಸಂಕ್ಷಿಪ್ತ ಸಂದೇಶದಲ್ಲಿ ಸಾಧ್ಯವಿಲ್ಲ! ಧರ್ಮ, ಸಮಾಜ, ಶಿಕ್ಷಣ ಮುಂತಾದವುಗಳ ಮುಖ್ಯ ಕಾರ್ಯಕಲಾಪಗಳಿಗೆ ಅಂದು ಅವರು ಒಂದು ಕೇಂದ್ರವಾಗಿದ್ದರು—ಎಂದರೆ ಸಾಕು!

ಜೀವನದುದ್ದಕ್ಕೂ, ಸಂಯಮ-ಸದಾಚಾರಗಳಿಗೆ, ಸ್ಥೈರ್ಯ ಧೈರ್ಯಗಳಿಗೆ ಬಲವಾಗಿ ಹೊಂದಿಕೊಂಡಿದ್ದ ಅವರು- ಅಸಾಧಾರಣ ಸ್ಮರಣ ಶಕ್ತಿ, ಸೂಕ್ಷ್ಮ ಹಾಗೂ ತೀಕ್ಷ್ಣ ವಿಚಾರ ಶಕ್ತಿ, ಪ್ರಭಾವಶಾಲಿ - ಪ್ರತಿಭಾಶಾಲಿ ಸಮಶೀಲ ಬುದ್ಧಿ, ಸಕಲರಿಗೂ ಲೇಸನೇ ಬಯಸುವ ಉದಾರ ಹೃದಯ—ಇವೆಲ್ಲವನ್ನೂ ಸಹಜವಾಗಿಯೇ ಸಂಪಾದಿಸಿದ್ದರು. ಇಂತಹ ಗುಣ ಸಂಪತ್ತಿನಿಂದ ಶ್ರೀಮಂತರಾದ ಜಯದೇವರು ಎಲ್ಲ ಸಂದರ್ಭದಲ್ಲಿಯೂ ವಿಜಯದೇವರಾದರು! ಪ್ರಪ್ರಥಮವಾಗಿ ಅವರ ಯೋಗ್ಯತೆಯನ್ನು, ಯೋಗದೃಷ್ಟಿಯಿಂದ ಅರ್ಥಮಾಡಿಕೊಂಡು ಅಪ್ಪಣೆ ಮಾಡಿದವರು ಅಥಣಿಯ ಮಹಾ ತಪಸ್ವಿಗಳು!

ಶ್ರೀ ಜಯದೇವ ಜಗದ್ಗುರುಗಳ ಶತಮಾನ ಮಹೋತ್ಸವವನ್ನು, ಈ ನವರಾತ್ರಿಯ ಆರಂಭದಿಂದ, ಮೊದಲು ಚಿತ್ರದುರ್ಗದಲ್ಲಿಯೇ ಆಚರಿಸಬೇಕೆಂದು ಸಮಿತಿಯವರು ತೀರ್ಮಾನಿಸಿದ್ದಾರೆ. ಒಂದು ವರ್ಷ ಕಾಲ ಅದು, ಬೇರೆ ಬೇರೆ ಸ್ಥಳಗಳಲ್ಲಿ ನಡೆದು, ಮುಂದಿನ ನವರಾತ್ರಿಯ ಕಾಲದಲ್ಲಿ, ಚಿತ್ರದುರ್ಗದಲ್ಲಿಯೇ ಮುಕ್ತಾಯವಾಗಬೇಕೆಂಬುದು ಅವರ ಬಯಕೆ. ಈಗ ಶತಮಾನ ಮಹೋತ್ಸವದ ಸ್ಮರಣ ಸಂಚಿಕೆಯೊಂದನ್ನು ಅವರು ಪ್ರಕಟಿಸುತ್ತಿದ್ದಾರೆ. ಅಲ್ಪಾವಧಿಯಲ್ಲಿಯೇ ಉತ್ತಮ ಬರಹಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಬರಮಾಡಿಕೊಂಡಿದ್ದಾರೆ. ಸ್ಮರಣ ಸಂಚಿಕೆಯಲ್ಲಿ, ಲೇಖಕರ ಅಭಿಪ್ರಾಯ- ಅಭಿರುಚಿಗಳಿಗೆ, ಅತಿ ಉದಾರವಾಗಿ ಅವಕಾಶ ಕಲ್ಪಿಸಿಕೊಡಲಾಗಿದೆ! ಶ್ರೀ ಗುರುಮುರುಘೇಶನ ಆಶೀರ್ವಾದದಿಂದ, ಈ ಸ್ಮರಣ ಸಂಚಿಕೆಯು, ಅಮೂಲ್ಯ-ಅಪೂರ್ವ ವಿಚಾರಗಳ ನಿಕ್ಷೇಪವಾಗಲಿ-ಎಂದು ಹಾರೈಸಲಾಗಿದೆ.

ಶ್ರೀ ಬೃಹನ್ಮಠ, ಚಿತ್ರದುರ್ಗ
ದಿನಾಂಕ ೩—೯—೧೯೭೫, ಬುಧವಾರ.

ಭದ್ರಂ ಭೂಯಾತ್.



ಚಿತ್ರದುರ್ಗದಲ್ಲಿ ದಸರಾ ಮಹೋತ್ಸವ—ಒಂದು ದೃಶ್ಯ



ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಶತಮಾನ ಮಹೋತ್ಸವ ಸ್ವಾಗತ ಸಮಿತಿ

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಶತಮಾನ ಮಹೋತ್ಸವ ಸ್ವಾಗತ ಸಮಿತಿಯ ಕಾರ್ಯಕಾರಿ ಮಂಡಳಿ

ಅಧ್ಯಕ್ಷರು

ಶ್ರೀ ವೀರಭದ್ರಪ್ಪನವರು ಎಂ. ಚಿಗಟೇರಿ, ದಾವಣಗೆರೆ

ಉಪಾಧ್ಯಕ್ಷರುಗಳು

ಶ್ರೀ ಜಿ. ಎಂ. ಹಾಲಪ್ಪನವರು, ದಾವಣಗೆರೆ
ಶ್ರೀ ಆರ್. ಆರ್. ಶ್ರೀನಿವಾಸಮೂರ್ತಿಯವರು, ದಾವಣಗೆರೆ
ಶ್ರೀ ಎಚ್. ಸಿ. ಬೋರಯ್ಯನವರು, ಬಿ.ಎ.,ಎಲ್ಎಲ್.ಬಿ., ಚಿತ್ರದುರ್ಗ
ಶ್ರೀ ಎಂ ಕೊಟ್ರಯ್ಯನವರು, ಚಿತ್ರದುರ್ಗ

ಕಾರ್ಯದರ್ಶಿಗಳು

ಶ್ರೀ ಪಿ. ಸಂಗಪ್ಪನವರು, ಚಿತ್ರದುರ್ಗ
ಶ್ರೀ ಇ. ಸಿ. ಕೊಟ್ರಬಸಪ್ಪನವರು, ಚಿತ್ರದುರ್ಗ
ಶ್ರೀ ಜಿ. ಎಂ. ಮಹೇಶ್ವರಪ್ಪನವರು, ಬಿ.ಎ., ಚಿತ್ರದುರ್ಗ
ಶ್ರೀ ಪಿ. ಎಸ್. ಮಹದೇವಪ್ಪನವರು, ಚಿತ್ರದುರ್ಗ

—: ಸದಸ್ಯರುಗಳು :—

ಪ್ರೊಫೆಸರ್ ಜಿ. ಎಸ್. ಸಿದ್ಧಲಿಂಗಯ್ಯನವರು, ಎಂ.ಎ.,
ಶ್ರೀ ಕೆ. ಹೆಚ್. ಸತ್ಯನಾರಾಯಣರಾವ್‌ರವರು
ಶ್ರೀ ಕೆ. ವಿ. ನಾಗಭೂಷಣಶೆಟ್ಟರು
ಶ್ರೀ ಪಿ. ಎಸ್. ನಂಜುಂಡಪ್ಪನವರು
ಶ್ರೀ ಬಿ. ಗೋವಿಂದಪ್ಪನವರು
ಶ್ರೀ ಟಿ. ಎಂ. ಕೆ. ಪೀರ್‌ಸಾಹೇಬರವರು
ಶ್ರೀ ಮಂಜರಿ ಹನುಮಂತಪ್ಪನವರು
ಶ್ರೀ ಡಿ. ಎಂ. ರುದ್ರಯ್ಯನವರು, ಬಿ.ಎ.,ಬಿ.ಎಲ್.,
ಶ್ರೀ ಎಚ್.ಎಂ.ತಿಪ್ಪೇಸ್ವಾಮಿಯವರು,ಬಿ.ಎಸ್‌ಸಿ.,ಎಲ್‌ಎಲ್.ಬಿ.,
ಶ್ರೀ ಡಿ. ಎಸ್. ಸಿದ್ದಪ್ಪನವರು
ಶ್ರೀ ಬಿ. ನೀಲಕಂಠಯ್ಯನವರು
ಶ್ರೀ ಡಿ. ಎಂ. ತಿಪ್ಪೇಸ್ವಾಮಿಯವರು
ಶ್ರೀ ಎಸ್. ಜಯದೇವಪ್ಪನವರು
ಶ್ರೀ ಆರ್. ಜಯಪ್ಪನವರು
ಶ್ರೀ ಎಂ. ವಿವೇಕಾನಂದಯ್ಯನವರು
ಶ್ರೀ ಪುಕ್‌ರಾಜ್ ಟಿ. ಷಾ. ರವರು, ಬಿ.ಎ.,ಬಿ.ಎಲ್.,
ಶ್ರೀ ಸಿ. ಈಶ್ವರಪ್ಪನವರು
ಶ್ರೀ ಎಂ. ಬಿ. ಚನ್ನಬಸವನಗೌಡರು
ಶ್ರೀ ಎಸ್.ಆರ್. ಲಕ್ಷ್ಮೀಕಾಂತರೆಡ್ಡಿಯವರು, ಬಿ.ಎಸ್‌ಸಿ. (ಅಗ್ರಿ)
ಶ್ರೀ ಇ. ಜಿ. ಸಿದ್ದಣ್ಣನವರು, ಬಿ.ಎಸ್‌ಸಿ.,
ಶ್ರೀ ಬಿ. ಎಂ. ಕೊಟ್ರಬಸಯ್ಯನವರು

ಪರಿವಿಡಿ

ಶ್ರೀ ಜಯದೇವ ಸಂಪುಟ

ಸಾಹಿತ್ಯ ಸಂಪುಟ

ಸಂಪಾದಕರ ನುಡಿ

ವರುಷ ವರುಷವೂ ಚಿನ್ಮೂಲಾದ್ರಿ ಬೃಹನ್ಮಠದಲ್ಲಿ ನವರಾತ್ರಿಯ ಉತ್ಸವ ನಡೆದರೂ ಈ ವರುಷದ ಉತ್ಸವ ವಿಶೇಷವಾದುದಾಗಿದೆ. ಸಾವಿರ ಸಾವಿರ ಬಿಳಲುಗಳೂರಿ ಕೋಟ್ಯಂತರ ಜೀವಿಗಳಿಗೆ ಆಶ್ರಯವಾದ ಆಲದ ಮರದಂತೆ ಕೃತಾರ್ಥರಾದ ಶ್ರೀ ಜಯದೇವ ಜಗದ್ಗುರುಗಳವರ ನೂರು ವರುಷದ ಹಬ್ಬವು ಇದರೊಂದಿಗೆ ಸೇರಿ ಇದರ ಮಹತ್ವ ಇನ್ನೂ ಹೆಚ್ಚಾಗಿದೆ. ಹಾಗಾಗಿಯೆ ಆ ಪುಣ್ಯಜೀವಿಯ ಸಾರ್ಥಕ ಸ್ಮೃತಿಗಾಗಿ ಈ ಸ್ಮರಣ ಸಂಚಿಕೆಯನ್ನು ಯೋಜಿಸಲಾಗಿದೆ.

ಶ್ರೀ ಮನ್ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಶತಮಾನೋತ್ಸವದ ಸವಿನೆನಪಿಗೆ ಮುಡಿಪಾದ ಈ ಮಹಾಸಂಪುಟದಲ್ಲಿ ಎರಡು ಭಾಗಗಳಿವೆ.

ಮೊದಲನೆಯದು "**ಶ್ರೀ ಜಯದೇವ ಸಂಪುಟ**". ಭಕ್ತಾದಿಗಳ ಮನಸ್ಸನ್ನು ಸೂರೆಗೊಳ್ಳುವ ಈ ವಿಭಾಗದಲ್ಲಿ ಚಿನ್ಮೂಲಾದ್ರಿಯ ಬೃಹನ್ಮಠ ನಡೆದು ಬಂದ ದಾರಿಯ ಕಥೆಯಿದೆ. ಅಲ್ಲಿ ಬೆಳಗಿದ ಪುಣ್ಯಜೀವಿಗಳ ಬದುಕಿನ ಹಲವಾರು ವಿವರಗಳಿವೆ. ಬೃಹನ್ಮಠದಲ್ಲಿ ಪಟ್ಟಕ್ಕೆ ಬಂದ ಜಗದ್ಗುರುಗಳವರ ಕ್ರಮ ಹಾಗೂ ಜೀವನ ಚಿತ್ರಗಳ ನಿರೂಪಣೆಯಿದೆ. ಹಲವಾರು ಕವನಗಳೂ ಇವೆ. ಇವೆಲ್ಲ ಶ್ರೀ ಮನ್ನಿರಂಜನ ಜಗದ್ಗುರು ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾ ಸ್ವಾಮಿಗಳವರ ದೃಗ್ಗೋಚರವಾಗಿ ಬಂದಿವೆ.

ಎರಡನೆಯದು "**ಸಾಹಿತ್ಯ ಸಂಪುಟ**". ಕರ್ನಾಟಕದ ಎಲ್ಲ ಹಿರಿಯ, ಕಿರಿಯ ಸಾಹಿತಿಗಳು ಹಾಗೂ ವಿದ್ವಾಂಸರುಗಳಿಂದ ಲೇಖನಗಳನ್ನು ಬರೆಯಿಸಿ ಪ್ರಕಟಿಸುವ ಮಹತ್ವಾದ ಯೋಜನೆಯೊಂದಿಗೆ ಕಾರ್ಯಾರಂಭ ಮಾಡಿದರೂ ತಮಗಿರುವ ಕಾರ್ಯಭಾರ ಹಾಗು ಕಾಲಪರಿಮಿತಿಗಳ ಕಾರಣವಾಗಿ ಮುವತ್ನಾಲ್ಕು ಜನ ವಿದ್ವಾಂಸರು ಮಾತ್ರ ಲೇಖನಗಳನ್ನು ಕಳುಹಿಸಿ ಉಪಕರಿಸಿದ್ದಾರೆ. ವಿದ್ವತ್ತು, ಸಂಶೋಧನೆ ಹಾಗೂ ಅಧ್ಯಯನಗಳ ಫಲರೂಪವಾದ ಮುವತ್ನಾಲ್ಕು ಲೇಖನಗಳಿಂದ ಈ ಭಾಗ ಸಮೃದ್ಧಿಗೊಂಡಿದೆ. ವಚನ ಸಾಹಿತ್ಯ - ಶೂನ್ಯ ಸಂಪಾದನೆ, ವೀರಶೈವ ಸಾಹಿತ್ಯ ಮತ್ತು ವೀರಶೈವ ಧರ್ಮದ ತೌಲನಿಕ ಅಧ್ಯಯನ ಎಂಬ ಮೂರು ಉಪಭಾಗಗಳಲ್ಲಿ ಇಲ್ಲಿನ ಲೇಖನಗಳು ವ್ಯವಸ್ಥೆಗೊಂಡಿವೆ. ಮುದ್ರಣ ಕಾರ್ಯ ಇನ್ನೇನು ಮುಗಿಯುವ ವೇಳೆಗೆ ನಮ್ಮ ಕೈಸೇರಿದ ಕೆಲವು ಲೇಖನಗಳು ಇವೆ. ಶತಮಾನೋತ್ಸವದ ಸ್ಮರಣ ಸಂಚಿಕೆ ಇಲ್ಲಿಗೆ ಕೊನೆಗೊಳ್ಳಲಾರದು. ಏನಿದ್ದರೂ ಇದು ಮೊದಲ ಹೆಜ್ಜೆ. ಈ ಸಂದರ್ಭದಲ್ಲಿ ಶತಮಾನೋತ್ಸವ ಹಾಗೂ ದಸರೆಯ ಹಬ್ಬಗಳ ಅಂಗವಾಗಿ ನಡೆಯುವ ಸಾಹಿತ್ಯ, ಧರ್ಮ, ಇತಿಹಾಸ ಮತ್ತು ಸಂಗೀತ ಸಮ್ಮೇಳನಗಳಲ್ಲಿ ಮಂಡಿಸಲಾದ ವಿಷಯಗಳನ್ನು ಒಳಗೊಂಡಂತೆ ಮತ್ತೊಂದು ಮಹಾ ಸಂಪುಟವನ್ನು ತರುವ ಸಂಕಲ್ಪವು ಸನ್ನಿಧಿಗಿದೆ ಎಂದು ವಿನಮ್ರನಾಗಿ ಸೂಚಿಸಬಯಸುತ್ತೇನೆ.

ಈ ಸ್ಮರಣ ಸಂಚಿಕೆಯ ಸಂಪಾದಕನಾದುದು ಒಂದು ಯೋಗಾಯೋಗ. ನಾಡಿನ ವಿದ್ವಾಂಸರು ಹಾಗೂ ಸಾಹಿತಿಗಳಿಂದ ಲೇಖನಗಳನ್ನು ತರಿಸಿಕೊಳ್ಳಬೇಕು ಎಂದು ಶ್ರೀ ಜಗದ್ಗುರುಗಳವರು ಆಜ್ಞಾಪಿಸಿದಾಗ ಇದೊಂದು ಮಹಾ ಯೋಜನೆಯೆಂದು ಹೂಗುಟ್ಟಿದೆ. ಲೇಖನಗಳು ಬಂದಮೇಲೆ ನೀವೆ ಇದರ ಸಂಪಾದಕರಾಗಬೇಕು ಎಂಬ ಪ್ರೀತ್ಯಾಗ್ರಹ ಬಂದಿತು. ಬೃಹನ್ಮಠ ಹಮ್ಮಿಕೊಂಡಿದ್ದ ಈ ಬೃಹತ್ಕಾರ್ಯದ ರೂಪರೇಖೆಗಳನ್ನು ಕಣಸುತ್ತಿದ್ದ ಸನ್ನಿಧಿಯ ಮಾತುಗಳನ್ನು ಕೇಳುತ್ತಿದ್ದ ನಾನು ಹೊಣೆಗೇಡಿಯಾಗಬಾರದು ಎಂದಷ್ಟೆ ಹೂಗೊಟ್ಟು, ಸಂಪಾದಕನ ಭಾರ-ಭಾಗ್ಯ-ಹೊತ್ತಿದ್ದೇನೆ, ಲೇಖಕರ ಹಕ್ಕು ಮತ್ತು ಹೊಣೆಗಳಿಗೆ ಅಪಚಾರವಾಗದಂತೆ.

ಈ ಮಹಾ ಸಂಪುಟದ ತುಂಬ ಹಾಲುಹಾಳೆಗಳ ಮೇಲೆ ಮುದ್ರಿತವಾದ ಅನೇಕ ಭಾವಚಿತ್ರಗಳಿವೆ. ಇವುಗಳಲ್ಲಿ ಮುಖ್ಯವಾದುವು ಬೃಹನ್ಮಠ ನಾಡಿನ ವಿವಿಧ ಭಾಗಗಳಲ್ಲಿ ವಿದ್ಯಾರ್ಥಿಗಳಿಗಾಗಿ

ತೆರೆದಿರುವ ಜಯದೇವ ವಿದ್ಯಾರ್ಥಿ ನಿಲಯಗಳ ಚಿತ್ರಗಳು ಹಾಗೂ ಜಗದ್ಗುರುಗಳವರುಗಳ ವಿವಿಧ ಭಂಗಿಗಳ ಭಾವಚಿತ್ರಗಳು. ಅಪರೂಪವೂ ಕಲಾತ್ಮಕವೂ ಆದ ಈ ಭಾವಚಿತ್ರಗಳ ಐತಿಹಾಸಿಕ ಮಹತ್ವ ಕೂಡ ಕಡಿಮೆಯಾದುದಲ್ಲ. ಈ ಎಲ್ಲ ಭಾವಚಿತ್ರಗಳನ್ನು ಸಂಗ್ರಹಿಸಿ ಮತ್ತು ವ್ಯವಸ್ಥೆಗೊಳಿಸಿ ಭಕ್ತಾದಿಗಳಾದವರು ಈ ಸಂಪುಟದ ಸೌಂದರ್ಯವನ್ನು ಹೆಚ್ಚಿಸಿದ್ದಾರೆ.

ಇಲ್ಲಿರುವ ಲೇಖನಗಳು ಅಚ್ಚಿನ ಮನೆಗೆ ಹೋದಾಗ ಇದ್ದ ಕಾಲಾವಧಿ ಕೇವಲ 40–45 ದಿನಗಳು. ಇರುವಷ್ಟು ಕಾಲಾವಧಿಯಲ್ಲಿಯೇ ಎಲ್ಲ ಲೇಖನಗಳ ಅಚ್ಚಿನ ಪ್ರತಿಗಳನ್ನು ಎಸ್. ಜೆ. ಎಂ. ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರುಗಳಾಗಿರುವ ಶ್ರೀ ಜಿ. ಶಿವಕುಮಾರ್, ಎಂ.ಎ., ಮತ್ತು ಶ್ರೀ ಟಿ. ಶಂಭುಲಿಂಗಪ್ಪ, ಎಂ.ಎ., ಇವರು ಅತ್ಯಂತ ಶ್ರಮವಹಿಸಿ ತಿದ್ದಿದ್ದಾರೆ; ಗುರುಕೃಪೆಗೆ ಪಾತ್ರರಾಗಿದ್ದಾರೆ. ಪತ್ರ ವ್ಯವಹಾರದಲ್ಲಿ, ಲೇಖನಗಳನ್ನು ಜೋಪಾನಗೊಳಿಸುವಲ್ಲಿ ಸಹ ಸಂಪಾದಕರಾಗಿ ಶ್ರಮಿಸಿದ್ದಾರೆ. ಇವರಿಗೆ ಹೃತ್ಪೂರ್ವಕವಾದ ಕೃತಜ್ಞತೆಗಳು. ಶ್ರೀ ಲಕ್ಷ್ಮಣ್ ತೆಲಗಾವಿ, ಎಂ.ಎ., ಇವರು ಅಚ್ಚಿನ ಪ್ರತಿಗಳನ್ನು ತಿದ್ದುವ ಕಾರ್ಯದಲ್ಲಿ ಸಾಕಷ್ಟು ಹೊಣೆಯನ್ನು ಹೊತ್ತು ನಿರ್ವಹಿಸಿದ್ದಾರೆ. ಇವರಿಗೂ ವಂದನೆಗಳು.

ಈ ಬೃಹತ್ ಸಂಪುಟವನ್ನು ಅಂದವಾಗಿ ಮುದ್ರಿಸಿಕೊಟ್ಟ ಚಿತ್ರದುರ್ಗದ ಶ್ರೀ ಗುರುದೇವ ಪ್ರಿಂಟರ್ಸ್ ಮಾಲೀಕರಾದ ಶ್ರೀ ಎಂ. ಚನ್ನವೀರಯ್ಯನವರಿಗೂ ಮತ್ತು ಮುದ್ರಣ ಕಾರ್ಯದಲ್ಲಿ ಅತ್ಯಂತ ಭಕ್ತಿ, ಶ್ರದ್ಧೆಗಳಿಂದ ಸಹಕರಿಸಿದ ಕಾಯಕ ವರ್ಗದವರಿಗೂ, ರಕ್ಷಾ ಪುಟವನ್ನು ಅಂದವಾಗಿ ಮುದ್ರಿಸಿಕೊಟ್ಟ ಬೆಂಗಳೂರಿನ ನವೀನ ಪ್ರಿಂಟರ್ಸ್ ಪ್ರೈವೇಟ್ ಲಿ., ಅವರಿಗೂ, ರಕ್ಷಾಪುಟ ರಚಿಸಿದ ಹಾಗೂ ಬ್ಲಾಕ್ ತಯಾರಕರಾದ ಬೆಂಗಳೂರಿನ ವಿ. ಪಿ. ಆರ್ಟ್ ಸ್ಟುಡಿಯೋ ಇವರಿಗೂ ನಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳು. ಇವರೆಲ್ಲರೂ ತಮ್ಮ ತಮ್ಮ ಕಾರ್ಯಗಳನ್ನು ಗುರುಸೇವೆಯೆಂದು ಭಕ್ತಿಯಿಂದ ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಇನ್ನೂ ಕಣ್ತಪ್ಪಿ ಉಳಿದಿರುವ ಕೆಲವು ಅಚ್ಚಿನ ತಪ್ಪುಗಳ ಬಗ್ಗೆ ನಿಮ್ಮೆಲ್ಲರ ಕ್ಷಮೆ ಇರಲಿ.

ಸಂಪಾದಕನಾಗಿ ನಾನು ಮಾಡಿರುವುದು ಕೇವಲ ಮಾಲೆಗಾರನ ಕೆಲಸ. " ಕಟ್ಟಿಯುಮೇನೊ ಮಾಲೆಗಾರನ ಪೊಸಬಾಸಿಗಂ ಮುಡಿವ ಬೋಗಿಗಳಿಲ್ಲದೆ ಬಾಡಿಪೋಗದೆ ? "

ಇಗೋ ಕೊಳ್ಳಿ ' ಜಂಗಮ ಜ್ಯೋತಿ ' ಶ್ರೀ ಜಯದೇವ ಜಗದ್ಗುರು ಸ್ಮರಣ ಸಂಪುಟವನ್ನು ನಿಮ್ಮ ಕೈಯಲ್ಲಿ ಇರಿಸುತ್ತಿದ್ದೇನೆ.

ಗಾಂಧಿ ಜಯಂತಿ
ಚಿತ್ರದುರ್ಗ

ನಮಸ್ಕಾರ
ಜಿ. ಎಸ್. ಸಿದ್ದಲಿಂಗಯ್ಯ

ಶೂನ್ಯ ಸಿಂಹಾಸನದ ಸೂರ್ಯ

ಮನುಜ ರೂಪದಿ 'ದೇವ', 'ಜಯ' ಪಡೆವನೆಂಬುದಕೆ
ಸತ್ಯಸಾಕ್ಷಿಯು ನೀವೆ "ಜಯದೇವ" ಗುರುವೆ
ನಿಷ್ಠೆಯಿಂ ನಂಬಿ ನೆನೆಯುವ ಸತ್ಯವಂತರಿಗೆ
ಬೇಡಿದುದನೀವ ಭಕ್ತರ ಕಲ್ಪತರುವೆ. ॥ ೧ ॥

ಉತ್ತುಂಗದೆತ್ತರದ ಚಿತ್ಪ್ರಕಾಶದ ಬೆಳಕು
ನಿಮ್ಮರೂಪದಿ ನಾಡಿನಲಿ ಪ್ರಜ್ವಲಿಸಿತು
ನಿಮ್ಮ ದರ್ಶನ ಪಡೆದ ಜನದ ಮನಮನದಲ್ಲಿ
ಶರಣತತ್ವದ ಚೇತನವು ಸಂಚಲಿಸಿತು. ॥ ೨ ॥

'ವೀರಶೈವಮತಾಬ್ಧಿ ಚಂದ್ರ' ಗುರು ನಿಮ್ಮಿಂದ
ಲೋಕ ಬಿತ್ತರವಾಯ್ತು ಶಿವತತ್ವ ಶರಧಿ
ಸಕಲ ಜೀವಾತ್ಮರಿಗೆ ಲೇಸಿನಾಸರೆಯಾಗಿ
ಜಗದಗಲವಾಯ್ತು ನಿಮ್ಮಯ ಪ್ರಭಾ ಪರಿಧಿ. ॥ ೩ ॥

ದಿವ್ಯ ವ್ಯಕ್ತಿತ್ವದಲಿ ಅಮೃತಶಕ್ತಿಯ ಪಡೆದು
ಪುಣ್ಯಧಾರೆಯನೆರೆದ ಶಿವಕಾಮಧೇನು
ನಾಡಿನಾಕಾಶದಲಿ ಧರ್ಮಪ್ರಕಾಶದಲಿ
ಶಿವಯೋಗ ಸಂಸ್ಕೃತಿಯ ಬೆಳಗಿಸಿದ ಭಾನು. ॥ ೪ ॥

ಜನಸೇವೆಯಲಿ ನಿಮ್ಮ ತನುಮನಗಳನು ಸವೆಸಿ
ಜೀವಂತದೇವರೆನಿಸಿದೆ ಭಕ್ತಜನಕೆ
ಬಡವಬಲ್ಲಿದರೆನದೆ ಎಲ್ಲ ಜನರನು ಹರಸಿ
ಆನಂದವನು ಕರುಣಿಸಿದೆ ನೊಂದ ಮನಕೆ. ॥ ೫ ॥

ಧರ್ಮಾಶ್ವಮೇಧದಲಿ ನಡೆವ ಅಶ್ವದ ತೆರದಿ
ನಾಡಿನಲಿ ಧರ್ಮ ದಿಗ್ವಿಜಯ ಸಾಧಿಸಿದೆ
ಧರ್ಮದಿಗ್ಗಜದಂತೆ ಧರ್ಮವನೆ ಮೇಲೆತ್ತಿ
ಶಿವಯೋಗಧರ್ಮಕೇತನವ ಹಾರಿಸಿದೆ. ॥ ೬ ॥

ಜೀವರಾಗದ ಮೋಹಬಂಧನದಿ ಬಸವಳಿದು
ಬಿಡುಗಡೆಗೆ ಹಲುಬುತಿಹ ಜನಕೆ ಕನಿಕರಿಸಿ
ರಕ್ತಿಯೇ ಬಂಧನ ವಿರಕ್ತಿಯೇ ಬಿಡುಗಡೆಯು
ಎನುತ ತಿಳಿಸಿದಿರಿ ನೀವೆವರ ಸಂತಯಿಸಿ. ॥ ೭ ॥

ನೀರಿನೊಳಗಿದ್ದು ನೀರನ್ನೆ ಅಂಟಿಸಿಕೊಳದ
ಕಮಲಪತ್ರದ ತೆರದಿ ಉನ್ನತವಿರಾಗಿ
ಶಿವಭಾವದಲಿ ಅಮಿತಜನವನಾಕರ್ಷಿಸಿದೆ
ಉದ್ದಾಮ ಶಿವಯೋಗಿ ಶಿವನೊಳನುರಾಗಿ ‖ ೮ ‖

ಜ್ಞಾನವೇ ಧರ್ಮವನು ತಿಳಿವ ತಳಹದಿಯೆಂದು
ಜ್ಞಾನದಾಸೋಹವನೆ ಎಲ್ಲೆಡೆಯುನಡೆಸಿ
'ಜಯದೇವನಿಲಯಗಳ' ನಲ್ಲಲ್ಲಿ ಸ್ಥಾಪಿಸಿದೆ
ಜ್ಞಾನಾರ್ಥಿಗಳಿಗಲ್ಲಿ ನೆಲೆಯನೇರ್ಪಡಿಸಿ. ‖ ೯ ‖

ಎಲ್ಲವನು ಒಳಗೊಂಡು ಏನಿಲ್ಲದಂತಿರುವ
ಪರಿಪೂರ್ಣ ವೈರಾಗ್ಯವೇ 'ಶೂನ್ಯ' ತತ್ವ.
ಶೂನ್ಯಪೀಠದ ನಿಧಿಯೆ, ವೈರಾಗ್ಯವಾರಿಧಿಯೆ
ಶಿವಯೋಗ ಋಷಿಯೆ ನೀಪಡೆದೆ ಅಮರತ್ವ ‖ ೧೦ ‖

ವಿಶ್ವವೆಲ್ಲವನು ತುಂಬಿಹುದು ಶೂನ್ಯದ ತತ್ವ.
ಅದುವೆ ಶಿವಯೋಗಿಗಳ ದಿವ್ಯಾತ್ಮ ಸತ್ವ.
ಚಿತ್ರದುರ್ಗದ ಪೂಜ್ಯ ಶೂನ್ಯಪೀಠ ಗುರುತ್ವ
ನಿನ್ನಿಂದಪೆಗ್ಗಳಿಸಿ ಮೆರೆಯಿತು ಮಹತ್ವ. ‖ ೧೧ ‖

ನಿರ್ಮಲ, ನಿರಂಜನ, ನಿರಾಕಾರ, ನಿರ್ಲೇಪ,
ಲಿಂಗಾನುಭಾವವೇ 'ಶೂನ್ಯ'ತೆಯ ಸಾರ
ನುಡಿಯಲ್ಲಿ, ನಡೆಯಲ್ಲಿ, ಹಿಡಿದಕಾಯಕದಲ್ಲಿ,
ನಿಮ್ಮ ಜೀವನವೆ 'ಶೂನ್ಯ'ತೆಯ ಸಾಕಾರ. ‖ ೧೨ ‖

ಸಕಲ ಮಾನವರ ಕಲ್ಯಾಣವನೆ ಹಾರೈಸಿ
ವಿಶ್ವವ್ಯಾಪಕವಾಯ್ತು ನಿಮ್ಮ ಔದಾರ್ಯ
ಶೂನ್ಯಪೀಠದ ಕೀರ್ತಿ ಘನತೆಯನು ದೇಶದಲಿ
ಬೆಳಗಿಸಿದ, ಶೂನ್ಯಸಿಂಹಾಸನದ ಸೂರ್ಯ. ‖ ೧೩ ‖

ಬೆಂಗಳೂರು/29—9—75

—ಸ. ಮ. ಕೊ. ಸೋಗಿ



ಶ್ರೀ ಜಯದೇವ ಸಂಪುಟ

|| ಶ್ರೀ ಮುರುಘೇಶಾಯ ನಮಃ ||

ಪಟ್ಟವಲ್ಲರಿ

ಬರೆದವರು:— ಶ್ರೀ ಕೆ. ಬಸಪ್ಪನವರು
ರಿ|| ಸ್ಕೂ|| ಮಾಸ್ಟರ್, ಕಾಶೀಪುರ

ಕಂದ|| ಶ್ರೀಮತ್ ಸತ್ಯ ಸ್ಫುರಿತಂ
ಸೀಮಾತೀತಂ ನಿರಂಗ ನಿರುಪಮನನಘಂ ||
ಪ್ರೇಮ ಸುಧಾರಸ ಭರಿತಂ
ಪ್ರೇಮದೊಳೆಮಗೀಗೆ ಶುಭಮನಾಪರಬೊಮ್ಮಂ ||

ಶರಣೆಂಬೆಂ ಸನ್ಮತಿಯಂ
ವರಚಿನ್ಮೂಲಾದ್ರಿವಾಸ ಗುರುಮುರುಘೇಶಂ ||
ಪರಮ ಜಗದ್ಗುರು ನಿರುಪಮ
ಚರಕುಲ ಚಕ್ರೇಶನಿತ್ತು ರಕ್ಷಿಸಲೆನ್ನಂ ||

ಹರಸುತಲೆನ್ನಂ ಪಾಲಿಕೆ
ವರಚಿನ್ಮೂಲಾದ್ರಿ ಪೀಠ ಮಂಡಿತರನಿಶಂ ||
ಪರಮ ಜಗದ್ಗುರು ಭಕ್ತೋ
ದ್ಧರಣರ್ ಶ್ರೀ ಮಲ್ಲಿಕಾರ್ಜುನ ಪ್ರಭುವರ್ಯರ್ ||

ಶ್ರೀ ಅಲ್ಲಮಪ್ರಭು ದೇವರು

೧

ಭಾ|| ಷ|| ಬಲ್ಲಿದನು ಬಸವಣ್ಣ ರಚಿಸಿದ
ಸಲ್ಲಲಿತಮೀ ಶೂನ್ಯ ಪೀಠವ
ದಲ್ಲಮ ಪ್ರಭುವಲ್ಲದನ್ಯರಿಗೇರಲಸದಳವು ||
ಭುಲ್ಲವಿಸಿ ತಾನೇರಿ ಪೀಠವ
ದಲ್ಲಮನು ಗುರುವಾದ ಜಗದೊಳ
ಗಲ್ಲಿಗಲ್ಲಿಗೆ ಚರಿಸಿ ಶಿವತತ್ವವನು ತಾ ಬಿತ್ತಿ || ೧

೨

ಈತನೇ ನಿರ್ಮಾಯ ನಿರುಪಮ
ನೀತ ನಿರ್ಗುಣ ನಿಷ್ಕಳಂಕನು
ಈತ ಶಿವ ಶಿರ ಚಕ್ರಮಧ್ಯದ ಪರಮ ಚರಲಿಂಗ ||
ಈತ ಲೋಕ ಹಿತಾರ್ಥಕಾಗಿಯೆ
ಭೂತಳದೊಳವತರಿಸಿದಲ್ಲಮ
ನೀತ ಚರಕುಲ ಚಕ್ರಿಯೆನಿಸಿದ ಲೋಕ ವಿಖ್ಯಾತ || ೨

೩

ವೇದ ಶಾಸ್ತ್ರಗಳೆಲ್ಲವೀತನ
ಹಾದಿಯನು ತಾವಿಡಿದುವೆಂದೆನೆ
ಮೇದಿನಿಯೊಳಪ್ರತಿಮನೀತನು ಪರಮ ಸುಜ್ಞಾನಿ ||
ಭೇದವಾದಿಗಳೆಲ್ಲವೀತನ
ವಾದದೆದುರೊಳು ನಿಲ್ಲಲರಿಯದೆ
ಹೋದರೀತನ ಪಾದಪಿಡಿಯೊಳು ಶರಣು ಹೊಕ್ಕರಲಾ || ೩

೪

ದೇಶ ದೇಶಂಗಳಲಿ ಚರಿಸುತ
ಲೀಶ ಭಕ್ತರಭೀಷ್ಟವನು ಸಂ
ತೋಷದಿಂ ಪರಿಪೂರ್ಣಗೊಳಿಸುತೆ ಚನ್ನಬಸವಂಗೆ ||
ಭಾಸುರಪ್ರದ ಶೂನ್ಯಪೀಠದ
ಲೇಸೆನಿಪ ಪಟ್ಟವನು ಕಟ್ಟುತೆ
ತೋಷದಿಂ ತೆರಳಿದನು ಶ್ರೀಗಿರಿಗಾಗಿಯಲ್ಲಮನು || ೪

ಶ್ರೀ ಚೆನ್ನಬಸವಣ್ಣನವರು
(೧ ನೇ ಪಟ್ಟ)

೧

ಶಿವಮತಕೆ ಬಂದೆಡರನೆಲ್ಲವ
ತವಿಸಿ ಶಿವಮತದೇಳ್ಗೆಗೋಸುಗ
ಬುವಿಗೆ ಬಂದ ಕುಮಾರನಲ್ಲವೆ ಚೆನ್ನಬಸವಣ್ಣ ||
ಸವಿದನೀತನು ಷಟ್‌ಸ್ಥಲಂಗಳ
ವಿವರವನು ಸಲೆ ಬ್ರಹ್ಮಚಾರಿಯು
ವಿವರಿಸಲು ಸಕಲಾಗಮಂಗಳೊಳೀತ ಪರಿಣತನು || ೫

೨

ತನ್ನ ಗುರುವಿತ್ತಾಜ್ಞೆಯನು ಸಲೆ
ಮನ್ನಿಸುತ ಹೊತ್ತದನು ತಲೆಯೊಳು
ಭಿನ್ನವಿಲ್ಲದೆ ದೇಶದೇಶಂಗಳಲಿ ಚರಿಸುತಲಿ ||
ಉನ್ನತದ ಶಿವತತ್ವವನು ತಾ
ಸುಸ್ನೇಹೋನ್ನತ ಮೆನಲು ಬೋಧಿಸಿ
ತನ್ನ ಭಕ್ತರ ಸಲಹುತಿರ್ದನು ಚೆನ್ನಬಸವಣ್ಣ || ೬

೩

ವೀರಶೈವ ಸಮಾಜದೇಳ್ಗೆಗೆ
ದಾರಿ ದೀಪಂಗಳಂತೆ ಬೆಳಗುವ
ಸಾರತರ ಸುವಿರಕ್ತ ಮಠಗಳ ತೆರೆಯುತಲ್ಲಲ್ಲಿ ॥
ಭೂರಿ ಸದ್ಗುಣ ನಿಲಯರೆನಿಸಿದ
ವೀರವಿರತರನಲ್ಲಿ ನಿಯಮಿಸ
ಪಾರ ಕೀರ್ತಿಯ ಗಳಿಸಿ ಮೆರೆದರು ಚೆನ್ನಬಸವಣ್ಣ ॥ ೭

೪

ವಾ॥ ಷ॥ ಬೆಳುವಕ್ಕದೊಳು ಬೆಳೆವ ತಿಂಗಳಿನ ತೆರನಂತೆ
ನಳನಳಿಸಿ ಥಳಥಳಿಸಿ ಮೆರೆಯುತಿರೆ ಶಿವಮತವು
ಚೆಲುವ ವರಗುರು ಚೆನ್ನಬಸವಣ್ಣನಿಂದ ಮಿಗಿಲು ಮಹಿಮೆ
ರುಂಟೇ ॥
ತೊಳತೊಳಗುತಿಹ ಶೂನ್ಯಪೀಠದೊಳಗರ್ಭದಿಂ
ಹೊಳೆ ಹೊಳೆದು ಹೊರಬಂದ ನವಕಿರಣಗಳ ತೆರದೆ
ಬೆಳಗುತಿವೆ ಸುವಿರಕ್ತ ಮಠಗಳಿವು ಗುರುಚೆನ್ನಬಸವೇಶ
ರೊಲುಮೆಯಿಂದಂ ॥ ೮

೫

ಬಸವಣ್ಣನಿಂ ಬಳಿಕ ವಸುಮತಿಯೊಳೀ ಚೆನ್ನ
ಬಸವಣ್ಣ ಬಿಜ್ಜಳನಿಗತಿ ಮುಖ್ಯ ಮಂತ್ರಿಯೆನೆ
ಹಸನಾಗಿ ಜಂಗಮರ ದಾಸೋಹ ಮೇಣ್
ರಾಜಕಾರ್ಯದೊಳು ನಿರತನಿರಲು ॥
ರಸೆಯೊಡೆಯ ಬಿಜ್ಜಳಂ ಜಗದೇವ ಶರಣ ನಿಂ
ದಸುವಳಿದ ಬಳಿಕಳಿಯ ಬಿಜ್ಜಳಂ ದೊರೆಯಾಗೆ
ಹಸಗೆಟ್ಟುದಾರಾಜ್ಯ ವಿಪ್ಲವಕ್ಕೆಡೆಗೊಟ್ಟು ಕಲ್ಯಾಣ
ಪುರವರದೊಳು ॥ ೯

೬

ಶರಣರಂ ಸಲೆ ಕೂಡುತಿರಲಾಗದಿಲ್ಲೆಂದು
ಭರದಿಂದ ಹೊರಟನಾ ಚೆನ್ನಬಸವಣ್ಣನೆನೆ
ಹಿರಿದಾದ ಸೈನ್ಯಮಂ ಕೂಡಳಿಯ ಬಿಜ್ಜಳಂ ಬೆನ್ನಟ್ಟ
ತಾ ಬರುತಿರೆ ॥
ಬರುತಿರ್ಪ ಸೇನೆಯಂ ರಕ್ಕಸಂ ಕಡೆಗಟ್ಟ
ಶರಣರಗಣಂ ಸೇರಲುಳವಿಯಂ ಸುಖವಾಗಿ
ಗುರು ಚೆನ್ನಬಸವರಸನೊಲವಿನಿಂದುಳುವಿಯೊಳ್
ಶಿವಚಿಂತನೆಯೊಳಿರ್ದನು ॥ ೧೦

೭

ವರಶಿಖಾಶೈಲಮಂ ಕನಕ ಸಿಂಹಾಸನವ
ಕರೆದು ಮಲ್ಲೂಖಾನನವನ ಕರಕಿವನಿತ್ತು
ತೆರಳಲು ಡೆಲ್ಲಿಗೆ ಮುಂದೆ ಬಾದಷಹ ನೀವಪ್ಪೆ ಬರಲು
ನಮ್ಮವರಲ್ಲಿಗೆ ॥
ನೆರೆ ಪವಾಡವ ತೋರೆ ಮತ್ತವರ ಕೈಗಿವನು
ಮೆರೆಯದಂತೀವುದೆಂದೊರೆದು ಮತ್ತಿದರಂತೆ
ಬರೆದು ಲಿಖಿತವನೊಂದ ಮತ್ತವನಿಗಿತ್ತನದ
ಗುರುಚೆನ್ನಬಸವೇಶನು ॥ ೧೧

೮

ಶಿವಶರಣರಂ ಕೂಡಿ ಗುರು ಚೆನ್ನಬಸವೇಶ
ನವಿರತ ಶಿವಾನುಭವಗೋಷ್ಠಿಯಂ ನಡೆಸುತ್ತ
ಶಿವಪೂಜೆ ಶಿವಕಥನದೊಳು ಸಂದು ಬಸವಾದಿ ಪ್ರಮಥರಂ
ಕೊಂಡಾಡುತ ॥
ಶಿವಕಥಾ ಶ್ರವಣದೊಳ್ ಮನಮಗ್ನನಾಗಿರುತ
ಶಿವಶರಣರೈಕ್ಯಮಂ ತಿಳಿಸುತ್ತಮವರಿಂಗೆ
ಶಿವನಲ್ಲಿ ಬಯಲಾದನೊಲವಿನಿಂದುಳವಿಯಲಿ
ಶ್ರೀ ಚೆನ್ನಬಸವೇಶನು ॥ ೧೨

ಶ್ರೀ ತೋಂಟದಾರ್ಯರು

(೨ ನೇ ಪಟ್ಟ)

೧

ಕಂದ. ಪರಮ ನಿರಂಜನ ಪೀಠವ
ಗರುವ ಶ್ರೀ ಚೆನ್ನಬಸವರಾಜರ ಬಳಿಕಂ ।
ಹರುಷದೊಳೇರುತೆ ಮೆರೆದರ್
ಗುರುವರರೀ ಸಿದ್ಧಲಿಂಗ ವಟುವರರಿಳೆಯೊಳ್ ॥ ೧೩

೨

ಹರದನ ಹಳ್ಳಿಯೊಳೊಪ್ಪುವ
ಗರುವ ಶ್ರೀ ಶೂನ್ಯ ಸಿಂಹ ಪೀಠಾಧ್ಯಕ್ಷರ್ ।
ಚರಕುಲ ಚಕ್ರೇಶರಿವರ್
ಪರಮ ಶ್ರೀ ತೋಂಟದಾರ್ಯ ಯತಿಕುಲವರ್ಯರ್ ॥ ೧೪

೩

ಭುವನದೊಳವನತಿಗೊಂಡಿಹ
ಶಿವಮತಮಂ ವೃದ್ಧಿಗೊಳಿಸಿ ಮೆರೆಸುವ ಕತದಿಂ ।
ದವನಿಯೊಳನಾದಿ ಜಂಗಮ
ನವತಾರವದಾಯ್ತು ತೋಂಟದಾರ್ಯರ ರೂಪಿಂ ॥ ೧೫

೪

ಶಿವತತ್ವಾರ್ಥಕ್ಕೆಳಸು
ತ್ತವಿಕಲರೆನಿಸಿರ್ಪ ಜನರಿಗಲಸದೆ ಮತ್ತಾ ।
ಶಿವಚಿಂತೆಯೊಳ್ ಮನಮಂ
ತವೆ ನಿಲಿಸುವ ಜನರಿಗಿವರೆ ಚಿಂತಾರತ್ನಂ ॥ ೧೬

೫

ಭಾ. ಷ. ಗರುವ ತೋಂಟದ ಸಿದ್ಧಲಿಂಗೇ
ಶ್ವರರ ಯೋನಿಜರೆಣಿಸಲಿಳೆಯೊಳು
ದುರಿತ ದುರ್ಗಣದೂರರಿವರೆನೆ ನಿತ್ಯನಿರ್ಮಳರು ।
ವರತಪೋಧನರಿವರು ಶಾಂತರು
ಪರಮ ಕರುಣಾಶಾಲಿಗಳು ತಾ
ವುರು ವಿವೇಕಿಗಳತುಳ ಮಹಿಮಾನ್ವಿತರು ಸಾತ್ವಿಕರು ॥ ೧೭

೬

ಆಡರನೃತವನೆಂದಿಗಿವರು ನಿ
ಗೂಢ ತತ್ವಜ್ಞಾನಿಗಳು ಮಾ
ತಾಡುವರು ಸತ್ಯವನೆ ನಿತ್ಯವು ನಿಂದೆಗೆಡೆಗುಡರು ।
ನೋಡೆ ತ್ರಿಮತಸ್ಥರೊಳು ವಾದವ
ಮಾಡಿ ನೋವಿಂಗೆಡೆಯದಿನಿತುಂ
ಮೂಡದಂದದೊಳುತ್ತರವ ತಾವಿತ್ತು ಗೆಲ್ಲುವರು ॥ ೧೮

೭

ಪರಮಗುರುವರ ತೋಂಟದಾರ್ಯರು
ಹರುಷ ಮಿಗೆ ಪಟ್ಟಾಧಿಕಾರವ
ಗುರುನಿರಕ್ಷರ ಬೋಳ ಬಸವೇಶ್ವರರಿಗೀಯುತ ಲಿ ।
ಚರಿಸಿ ದೇಶದೊಳಲ್ಲಿಗಲ್ಲಿಗೆ
ಪರಮ ಶಿವತತ್ವವನು ಭಕ್ತರಿ
ಗೊರೆಯುತಲಿ ಕಗ್ಗೆರಿ ಬಳಿಯಲಿ ಬಂದು ನೆಲಸಿದರು ॥ ೧೯

೮

ಬಳಿಕಲಾ ಕಗ್ಗೆರಿ ಪುರಹೊರ
ವಳಯದಲಿ ಶೋಭಿಸುವ ತೋಂಟದೆ
ನೆಲಸಿ ಘನತರ ತಪವನಾಚರಿಸುತ್ತಲಿರಲಲ್ಲಿ ।
ಕಳೆದುವೀ ಪರಿ ಹಲವು ದಿನಗಳು
ಬೆಳೆದುಕೊಂಡಿತು ಹುತ್ತವವರಿಗೆ
ಸುಳಿಯದಾಯಿತು ಗುರುವಿನಿರವದು ಜನರ ಕಂಗಳಿಗೆ ॥ ೨೦

೯

ಪುರದ ಭಕ್ತನ ಮನೆಯ ಗೋವೊಂ
ದಿರದೆ ಪ್ರತಿದಿನ ಬಂದದಲ್ಲಿಗೆ
ಕರೆಯುತಿರಲದ ಹಾಲನೆಲ್ಲವ ಹುತ್ತದೊಳ ಬಾಯ್ಗೆ ।
ಮರಳಿ ಮನೆಗೈತಂದು ಹಾಲನು
ಕರೆಯತಿರಲೊಂದು ದಿನ ಮತ್ತದ
ಪರಿಕಿಸಲು ಮನೆಯೊಡೆಯ ಗೋವಿನ ಹಿಂದೆ ತಾ ಹೊರಟ ॥ ೨೧

೧೦

ಎಂದಿನಂದದೆ ಹುತ್ತದೆಡೆಗೈ
ತಂದು ಹಾಲನು ಕರೆಯೆ ತುರವದ
ನಂದು ಕಾಣುತೆ ಮರಳಿ ಪುರಕ್ಕೈತಂದು ಮನೆಯೊಡೆಯ ।
ಚಂದದಿಂ ನಡೆದುದನು ತಿಳಿಸಲು
ಮಂದಿ ಕೌತುಕಬಟ್ಟು ತೋಟಕೆ
ಬಂದು ಹುತ್ತವ ಸುತ್ತಬಿಡಿಸಿದರಂದು ಚಚ್ಚರದಿ ॥ ೨೨

೧೧

ಸಂದ ಶಿವಯೋಗಿಗಳ ಕಂಡಾ
ನಂದದಿಂ ಪುರಜನರು ವಂದಿಸು
ತಂದು ಸಂಭ್ರಮದಿಂದಲೂರಿಗೆ ಗುರುವ ಕರೆತಂದು ।
ಚಂದದಿಂ ಪೂಜೋಪಚಾರಗ
ಳಿಂದ ತುಷ್ಟಿಯ ಬಡಿಸಿ ಗುರುವರ
ರಿಂದಲಾಶೀರ್ವಾದ ಪಡೆದರು ಪುರದ ಭಕ್ತಜನ ॥ ೨೩

೧೨

ಬೆಳಸಿ ಪಯಣವ ಮುಂದಕಲ್ಲಿಂ
ತಲುಪಿ ಯೆಡೆಯೂರಿಂಗೆ ಹರುಷದಿ
ನೆಲಸುತಲ್ಲಿಯೆ ಭವ್ಯ ಮಠವನು ರಚಿಸುತದರಲ್ಲಿ ।
ತೊಳಪಯೋಗ ಸಮಾಧಿಯೊಂದನು
ತಳುವದಲೆ ವಿರಚಿಸುತಲದರೊಳು
ಕುಳಿತು ಶಿವಯೋಗದೊಳು ಬೆರೆದರು ಪರಮಗುರುವರರು॥೨೪

ಶ್ರೀ ಗುರು ಬೋಳ ಬಸವೇಶ್ವರರು

(೩ ನೇ ಪಟ್ಟ)

೧

ಪೇಳಲಸದಳವೀ ನಿರಕ್ಷರ
ಬೋಳ ಬಸವೇಶ್ವರರ ಮಹಿಮೆಯ
ಶಾಲೆಯೊಳಗೋದದೆಯೆ ಘನವಿದ್ವಾಂಸರೆನಿಸಿಹರು ।
ಪೇಳುವರು ಶಾಸ್ತ್ರಗಳನಿವರಂ
ಪೋಲುವವರಿನ್ನಿಲ್ಲ ವೆಂಬೊಲು
ಮೇಲೆನಿಪ ಷಟ್‌ಸ್ಥಲದೊಳತಿ ನೈಪುಣ್ಯವಡೆದಿಹರು । ೨೫

೨

ಕಂದ॥ ಎಡೆಯೂರೊಳ್ ಕಂಗೊಳಿಪುದು
ಒಡೆಯರ್ ಶ್ರೀ ತೋಂಟದಾರ್ಯ ಮಠವೊಂದದ ರೊಳ್ ।
ಒಡನೆಯೆ ತಮ್ಮಧಿಕಾರವ
ಪಡೆದರಿವರ್ ತೋಂಟದಾರ್ಯ ಯತಿವರರಿಂದಂ ॥ ೨೬

೩

ಬಾಧಿಸುತಿತ್ತಂದಿನ ದಿನ
ವೋದಲು ಮೇಣ್ ಬರೆಯೆ ಬರದ ಮೂಢರೆನುತ್ತಂ ।
ಹೋದೆಡೆ ಗೆಳೆಯರೆ ಹಳಿಯುವ
ರಾದುದರಿಂದಿದುವೆ ಜಾಡ್ಯಮೆನಿಸುತ್ತಿವರಂ ॥ ೨೭

೪

ಕಳೆಯುವೆನಿದನೆಂದೆನುತಂ
ಕುಳಿತರ್ ಗುರುಪದವ ನೆನೆಯುತುಜ್ವಳ ತಪದೊಳ್ ।
ಸುಳಿಯಲ್ ಗುರ್ವಾನುಗ್ರಹ
ಬೆಳೆಯಿತು ಮತ್ತಿವರೊಳಖಿಳ ವಿದ್ಯಾನಿವಹ ॥ ೨೮

೫

ಪರಸಮಯಂಗಳ ಜಯಿಸುತೆ
ಭರದಿಂ ಶಿವಮತವ ಬೆಳಸಿ ಚರಿಸುತ ನಾಡೊಳ್ ।
ತೆರಳುತೆ ಮಧುಗಿರಿಗಾಗಳೆ
ಮೆರೆದರು ತಮ್ಮತುಳ ಮಹಿಮೆಗಳನಾ ಪುರದೊಳ್ ॥ ೨೯

೬

ಗುರುತರ ಪೀಠದೊಳಿರಿಸುತೆ
ಪರಮಶ್ರೀ ಸಿದ್ಧವೀರ ಗುರುವರರಂ ತಾಂ ।
ಪರಶಿವನೊಳಗಾದರು ಸ
ದ್ಗುರುವರರೀ ಬೋಳ ಬಸವರಾ ಮಧುಗಿರಿಯೊಳ್ ॥ ೩೦

ಶ್ರೀ ಸಿದ್ಧವೀರಸ್ವಾಮಿಗಳು

(೪ ನೇ ಪಟ್ಟ)

೧

ಶ್ರೀಮತ್ ಷಟ್‌ಸ್ಥಲ ಪಟ್ಟವ
ಧೀಮಂತರ್ ಸಕಲ ಶಾಸ್ತ್ರ ಕೋವಿದರೆನಿಪಾ ।
ಮಾ ಮೈಮರ್ ತಾ ಪಡೆಯುತೆ
ಲೀ ಮಹಿಯೊಳ್ ಸಿದ್ಧವೀರ ವಿಭುಗಳ್ ಮೆರೆದರ್ ॥ ೩೧

೨

ಚರಿಸುತ ದೇಶದೊಳೆಲ್ಲೆಡೆ
ನೆರೆಗೆಲ್ಲುತೆ ಶಾಸ್ತ್ರಮುಖದೆ ಪರವಾದಿಗಳಂ ।
ಭರದಿಂ ವಿಸ್ತೃತಗೊಳಿಸಿದ
ರುರುತರಮೀ ವೀರಶೈವ ಮತಮಂ ಧರೆಯೊಳ್ ॥ ೩೨

೩

ವಿಧಿಗನುಗುಣಮೆನೆ ಲೆಕ್ಕದೆ
ಪದುಳದೆ ಹನ್ನೆರಡು ಸಾಸಿರಂಗಳ ಜನರಿಂ ।
ಗೊದಗಿಸಿದರ್ ಲಿಂಗವನಾ
ಸದಯರ್ ಶ್ರೀ ಸಿದ್ಧವೀರ ಗುರುಗಳ್ ಮುದದಿಂ ॥ ೩೩

೪

ಭಾ॥ ಷ॥ ಅಂದು ಗುಮ್ಮಳಪುರಕೆ ಬಂದಾ
ನಂದದಿಂ ನಿಜಮಹಿಮೆ ತೋರುತೆ
ಸಂದಶ್ರೀ ಗುರುಸಿದ್ಧರೆಂಬಾ ದೇಶಿಕೇಂದ್ರರನು ।
ಚಂದದಿಂ ಪೀಠದೊಳಗಿರಿಸುತೆ
ಕುಂದದಲೆ ಶಿವನಲ್ಲಿ ಬೆರೆದರ
ದಿಂದಿಗೂ ಮತ್ತವರ ಗದ್ದುಗೆ ಮೆರೆದುದಾಪುರದೆ ॥ ೩೪

ಶ್ರೀ ಗುರುಸಿದ್ಧ ದೇಶಿಕೇಂದ್ರ ಸ್ವಾಮಿಗಳು

(೫ ನೇ ಪಟ್ಟ)

೧

ಕಂದ॥ ಸುರುಚಿರಮೆನಿಸಿದ ಗುಮ್ಮಳ
ಪುರದೊಳ್ ಗುರುಸಿದ್ಧ ದೇಶಿಕೇಂದ್ರ ಪ್ರಭುಗಳ್ ।
ಗರುವ ನಿರಂಜನ ಪೀಠದೆ
ಪರಮ ಜಗದ್ಗುರುಗಳೆನಿಸಿ ಮೆರೆದರ್ ಧರೆಯೊಳ್ ॥ ೩೫

೨

ಶಿವಭಕ್ತರಲ್ಲದನ್ಯ
ರ್ಗವಕಾಶಂ ದೊರೆಯದೆನುತ ಗುರುವರರಾಗಳ್ ।
[illegible]ವಸಂದೇಶವನೀಯುತ
ಭವಿಗಳನಿರದಟ್ಟೆ ಮತ್ತೆ ಗುಮ್ಮಳ ಪುರದಿಂ ॥ ೩೬

೩

ಪುರಪೂರ [illegible]
ಗುರುತರ ಮೆನಿಸಿರ್ಪ ಲಿಂಗ ಮುದ್ರೆಯ ಶಿಲೆಯಂ ।
ಭರದಿಂ ನಿಲ್ಲಿಸಿ ಭವಿಗಳ್
ಪುರಮಂ ಪುಗಲೀಯದಂತೆ ಕಾವಲ ನಿಟ್ಟರ್ ॥ ೩೭

೪

ಶಿವನೊಳ್ ಭಕ್ತಿಯನಿರಿಸುತ
ಲವಿಕಲರೆನಿಸಿರ್ಪ ಜನಕೆ ದೀಕ್ಷೆಯ ಕೊಡಿಸು ।
ತ್ತವಿರಳ ಕೀರ್ತಿಯ ಗಳಿಸಿದ
ರಿವರೀ ಗುರುಸಿದ್ಧ ದೇಶಿಕೇಂದ್ರ ಪ್ರಭುಗಳು ॥ ೩೮

೫

ದೇಶದೊಳೆಲ್ಲೆಡೆ ಚರಿಸುತ
ಭಾಸಿಪ ಷಟ್‌ಸ್ಥಲದ ಬೋಧೆಗೈಯ್ಯುತ ಲೊಲವಿಂ ।
ಪೋಷಿಸಿ ಭಕ್ತ ಸಮೂಹವ
ತೋಷದೆ ಗೂಳೂರಿಗಿರದೆ ತೆರಳಿದರಾಗಳ್ ॥ ೩೯

೬

ಭಾ॥ ಷ॥ ನೆಲಸಿಗೂಳೂರೊಳಗೆ ಕೆಲದಿನ
ಬಳಿಕ ನಿಜ ಪಟ್ಟಾಧಿಕಾರವ
ತಳುವದಲೆ ತಾವಿತ್ತರಾಗಳೆ ಗಗನದಾರ್ಯರಿಗೆ ।
ಕಳೆದು ಭೌತ ಶರೀರವನು ತಾ
ಬೆಳಗಿದರು ತಮ್ಮಾತ್ಮದೀಪ್ತಿಯ
ಹೊಳೆವ ಪರಶಿವನಾತ್ಮದೊಳಗೆರಡಿಲ್ಲದೊಂದಾಗಿ ॥ ೪೦

ಶ್ರೀ ಗಗನ ಸ್ವಾಮಿಗಳು

(೬ ನೇ ಪಟ್ಟ)

೧

ಕಂದ॥ ಶ್ರೀ ಗಗನಸ್ವಾಮಿಗಳಿರ
ದಾಗಳೆ ತಾವೇರಿ ಶೂನ್ಯ ಸಿಂಹಾಸನಮಂ ।
ಬೇಗನೆ ಪರಿವರ್ಧಿಸಲು
ದ್ಯೋಗಿಸಿದರ್ ವೀರಶೈವ ಧರ್ಮದ ಬೆಳೆಯಂ ॥ ೪೧

೨

ಭಾ॥ ಷ॥ ನೆಲಸಿ ಗೂಳೂರಲ್ಲಿ ಕೆಲ ದಿನ
ಬೆಳಸಿ ಪಯಣವ ಮುಂದಕಲ್ಲಿಂ
ತಳುವದಾ ಮಾಗಡಿಗೆ ತಾವೈತರುತಲಾ ಪುರದೆ ।
ನೆಲಸಿದರಸನ ನಾಡಗೌಡನಿ
ಗೊಲಿದು ಶಿವತತ್ವಾರ್ಥದರಿವನು
ತಿಳುಹಿ ಕರುಣದಿ ಲಿಂಗ ದೀಕ್ಷೆಯ ನಿತ್ತರಾತನಿಗೆ ॥ ೪೨

೩

ಪರಮ ಭಕ್ತನದಾಗಲಾತನು
ಪುರದ ಭಕ್ತರ ನೆರವಿನಿಂದಾ
ಪುರದೊಳರುವತ್ತಾರು ವಿರತರ ಮಠಗಳನು ರಚಿಸೆ ।
ಕರೆಸಿ ಸುಚರಿತರೆನಿಪ ಸುತ್ತಲ
ನೆರೆಯ ಹಳ್ಳಿಯ ಜನರಿಗಾಗಳೆ
ಕರುಣ ನಿಧಿಗಳು ಲಿಂಗದೀಕ್ಷೆಯ ನಿತ್ತರೊಲವಿನಲಿ ॥ ೪೩

೪

ವೀರಶೈವ ಸಮಾಜದೇಳ್ಗೆಯು
ತೋರಿ ಬೆಳಗುತಲಿರಲು ಭಕ್ತರ
ಕೋರಿಕೆಯ ಕೈಕೊಂಡು ಭೈರವ ದುರ್ಗಕಾಗಮಿಸಿ ।
ಭೂರಿ ಸಂತಸಗೊಂಡು ಬಳಿಕಾ
ಪೂರ ಭಕ್ತರ ಸೇವೆಯನು ಮನ
ವಾರೆ ಕೈಗೊಳುತಂದು ಕೆಲದಿನವಿರ್ದರಾಪುರದೆ ॥ ೪೪

೫

ಕರೆಸಿ ಕಟ್ಟಿಗೆ ಹಳ್ಳಿವಾಸದ
ಪರಮ ಗುರುವರ ಸಿದ್ಧವೀರರ
ನಿರದೆ ನಿಜಪಟ್ಟಾಧಿಕಾರವನವರಿಗೀಯುತಲಿ ।
ಗರುವ ಭೈರವ ದುರ್ಗದಲ್ಲಿಯೆ
ಪರಮ ಗಗನ ಸ್ವಾಮಿಗಳು ತಾ
ವಿರದೆ ನಿರ್ವಯಲಾಗಲಲ್ಲಿದೆಯವರ ಗದ್ದುಗೆಯು ॥ ೪೫

ಶ್ರೀ ಕಟ್ಟಿಗೆಹಳ್ಳಿ ಸ್ವಾಮಿಗಳು

(೭ ನೇ ಪಟ್ಟ)

೧

ಕಂದ॥ ಶ್ರೀಮತ್ ಕಟ್ಟಿಗೆಹಳ್ಳಿ
ಸ್ವಾಮಿಗಳಿರದೇರಿ ಶೂನ್ಯ ಪೀಠವ ಗಗನ ॥
ಸ್ವಾಮಿಗಳವರ ಬಳಿಕ್ಕಂ
ಮಾನ್ಯಮರ್ ಪರಮ ಪೂಜ್ಯರೆನಿಸುತೆ ಮೆರೆದರ್ ॥ ೪೬

೨

ಭಾ॥ ಷ॥ ವೀರಶೈವಾಚಾರವನು ಸಲೆ
ಧಾರಿಣಿಯೊಳಿದ ಬೆಳಸಲೆಂಬೀ
ಕಾಳಣಿದಿ ಚರಿಸುತಿರೆ ಗುರುಗಳು ದೇಶಮಧ್ಯದೊಳು ।
ಸೇರಿಪರಸಮಯಿಗಳ ಮೇಳವು
ಭೂರಿವಾದಕೆ ಕರೆಯಲದರೊಳು
ತೂರಿ ಗುರುಗಳು ಜಯವ ಪಡೆದರು ಶಾಸ್ತ್ರಮುಖದಿಂದ॥ ೪೭

೩

ಗುರುಗಳನು ಮೆಚ್ಚುತ್ತೆ ಮೈಸೂ
ರರಸರಾಗಳೆ ತಮ್ಮ ನಗರಕೆ
ಭರದಿ ಕರೆಸುತಲತುಳ ವೈಭವದಿಂದ ಗುರುವರರ ।
ಮೆರವಣಿಗೆ ಮಾಡಿಸುತ ಪುರದೊಳು
ಹಿರಿದು ಬಿರುದಾವಳಿಗಳಿಂದುರೆ
ಹರುಷದಿಂ ಕಾಣಿಕೆಯ ನಿತ್ತರು ನಮಿಸಿ ಗೌರವದಿ ॥ ೪೮

೪

ಮಾಗಡಿಯೊಳೊಪ್ಪುವ ಬೃಹನ್ಮಠ
ಕಾಗಮಿಸುತಿರಲಂದು ತಾವನು
ರಾಗದಿಂ ಸಾಕಿರ್ದ ವಟುವರರಿರ್ವರಂ ಕರೆಸಿ ।
ಆಗ ತಮ್ಮಧಿಕಾರವನು ತಾ
ವಾಗರಿಷ್ಠರಿಗೀಯುತಲಿ ಮ
ತ್ತಾಗಳವರಿಂ ಕರಿಯ ಮುರುಘೇಶಂಗೆ ಕೊಡಿಸಿದರು॥ ೪೯

೫

ಕಂದ॥ ತೆರಳುತೆ ಡೆಲ್ಲಿಗೆ ಮತ್ತ
ಲ್ಲಿರುವ ಶಿಖಾಶೈಲ ಕನಕ ಸಿಂಹಾಸನಮಂ ।
ತರುವುದೆನುತ್ತಂ ತಮ್ಮಯ
ಮರಿಗಳ್ಗಪ್ಪಣೆಯನಿತ್ತರಾ ಗುರುವರ್ಯರ್ ॥ ೫೦

೬

ಬಳಿಕಾ ಸ್ವಾಮಿಗಳಾಗಳೆ
ತಿಳುವಳ್ಳಿಗೆ ತೆರಳುತಲ್ಲಿ ಕೆಲದಿನವಿರ್ದುಂ ।
ಕಳೆದರ್ ಭೌತ ಶರೀರವ
ಸುಳಿದರ್ ಶಿವನೊಳಗೆ ಬೆರೆದೊಂದಾಗುತ್ತಂ ॥ ೫೧

ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳು

(೮ ನೇ ಪಟ್ಟ)

೧

ಭಾ॥ ಷ॥ ಬೆಳಗುತಿಹುದೀ ಚಿತ್ರದುರ್ಗದೊ
ಳಿಳೆಯ ಮಂಗಳಧಾಮ ಮೆಂಬೊಲು
ತೊಳಪ ಚಿನ್ಮೂಲಾದ್ರಿಯಂಕಿತ ಹಿರಿಯ ಮಠವೊಂದು ।
ಚೆಲುವರೀ ಗುರು ಮುರುಘರಾಜರು
ತಳೆದು ಪಟ್ಟವ ಶೂನ್ಯ ಪೀಠದೆ
ಬೆಳಗಿದರು ತನ್ಮಠದ ಕೀರ್ತಿಯನಿಳೆಯೊಳೆಲ್ಲೆಡೆಗೆ ॥ ೫೨

೨

ಪರಶಿವನು ತಾನಿಳೆಯೊಳೀ ಗುರು
ಮುರುಘರಾಜನ ರೂಪಿನಿಂದವ
ತರಿಸಿ ಪರತರ ವೀರಶೈವೋದ್ಧಾರ ಕಾರ್ಯದಲಿ ।
ನಿರತರಾಗುತೆ ಚಿತ್ರದುರ್ಗದ
ವರ ಬೃಹನ್ಮಠದೊಡೆಯರೊಳು ತಾ
ವರಿಯೆ ಮೊದಲಿಗರಾಗಿ ಮೆರೆದಿಹರಲ್ತೆ ಧರಣಿಯೊಳು ॥ ೫೩

೩

ಬರಮನಾಯಕನೆಂಬ ಬಾಲನ
ಶಿರದ ಮೇಲ್ಗಡೆ ಹೆಡೆಯ ಬಿಚ್ಚುತೆ
ಯುರಗನಿರಲದ ಕಂಡು ಅರಸೊತ್ತಿಗೆಯನಾತಂಗೆ ।
ಕರುಣಿಸಲ್ಕಾ ಮುರುಘರಾಜನು
ಪ್ರರದ ರಾಜನ ಚಂದ್ರಮೌಳಿಯ
ದೊರೆತನವು ಗುರುಕೃಪೆಯೊಳಾಯಿತು ಬರಮನಾಯ್ಕನಿಗೆ ॥ ೫೪

೪

ವೀರಶೈವ ಮತಪ್ರಸಾರಕೆ
ಭಾರತದೊಳೆಲ್ಲೆಡೆಗೆ ಚರಿಸುತ
ಸೇರಿ ಡೆಲ್ಲಿಯನಲ್ಲಿ ಮಡಿದಿಹ ಪಟ್ಟದಾನೆಯನು ।
ಬೀರಿ ಕರುಣೆಯೊಳದನು ಬದುಕಿಸಿ
ತೋರೆ ಮಹಿಮೆಯ ಬಾದಷಹಗ
ಪಾರ ಸಂತಸಮುದಿಸೆ ಗೌರವಿಸಿದನು ಗುರುಗಳನು ॥ ೫೫

೫

ಅರಮನೆಗೆ ಕರೆದೊಯ್ದು ಗುರುಗಳ
ಚರಣ ಕಮಲದ ಪೂಜೆಗೆಯ್ಯುತ
ವರ ಶಿಖಾಶೈಲವನು ಮತ್ತಾ ಕನಕ ಪೀಠವನು ।
ಪರಮ ಗುರುವರ ಚೆನ್ನಬಸವೇ
ಶ್ವರರ ಕಾಲದೆ ದೊರಕಿತೆಲ್ಲವ
ಮರಳಿ ಗುರುಗಳಿಗಿತ್ತು ಸನ್ಮಾನಿಸಿದ ಬಾದಷಹ ॥ ೫೬

೬

ಮತ್ತೆ ಹೈದರಾಬಾದಿಗಾಗಮಿ
ಸುತ್ತಲಲ್ಲಿಯ ಪಟ್ಟಗಾನೆಯ
ಕುತ್ತಮಂ ಪರಿಹರಿಸೆ ಗುರುಗಳು ತಮ್ಮ ಮಹಿಮೆಯಲಿ ।
ಚಿತ್ತವರಳಲು ನಾಲ್ಕು ಬೆಳುಗೊಡೆ
ಮತ್ತೆರಡು ಪಲ್ಲಕ್ಕಿಗಳ ತಾ
ನಿತ್ತನಂದು ನವಾಬನಾಗುರುವರರಿಗತಿ ಮುದದಿ ॥ ೫೭

೭

ತೆರಳಿ ಮಹಿಷನ ಪುರಕೆ ಗುರುವರ
ಮುರುಘರಾಜರು ಸುತ್ತ ನೆರೆದಿಹ
ಪರಸಮಯಿಗಳ ಜಯಿಸಿ ವಾದದೆ ಮತ್ತೆ ತಾವಲ್ಲಿ ।
ಪರಮ ಶಿವ ತತ್ವವನು ಬೆಳಗುತೆ
ಪುರದರಸುಗಳು ಕೊಟ್ಟ ನಾನಾ
ಪರಿಯ ಬಿರುದಾವಳಿಗಳಂ ಸ್ವೀಕರಿಸಿ ಮೆರೆದರಲಾ ॥ ೫೮

೮

ಮರಳಿ ಚಿನ್ಮೂಲಾದ್ರಿಗೈದುತೆ
ಬರಮ ನಾಯ್ಕನಿಗೀಯೆ ದರುಶನ
ಹರುಷ ಮಿಗೆ ಕೊಂಡಾಡಿ ವಂದಿಸಿ ಗಿರಿಯ ಮೇಲೊಂದು ॥
ಹಿರಿಯ ಮಠವನು ರಚಿಸಿ ಮತ್ತಾ
ಗಿರಿಯ ಕೆಳಗಡೆ ಬರಮನಾಯ್ಕನು
ಪರಮ ಯೋಗಸಮಾಧಿ ನಿರ್ಮಿಸಿ ಗುರುವಿಗರ್ಪಿಸಿದ ॥ ೫೯

೯

ಕಂದ. ಮುರುಘಾ ಸ್ವಾಮಿಗಳಿಮ್ಮಡಿ
ಗುರುಸಿದ್ಧ ಸ್ವಾಮಿಗಳನು ಪಟ್ಟದೊಳಿರಿಸು ।
ತ್ತಿರದಾಯೋಗ ಸಮಾಧಿಗೆ
ತೆರಳುತ್‌ಲಾ ಕಾಯಸಹಿತ ಶಿವನೊಳಗಾದರ್ ॥ ೬೦

೧೦

ಇದು ಚಿನ್ಮೂಲಾದ್ರಿಯೊಳಿಹ
ಮೊದಲನೆ ಗುರುವರರ ಕರ್ತೃಗದ್ದುಗೆಯಿದು ತಾಂ ।
ಸದಮಲ ಭಕ್ತರಭೀಷ್ಟವ
ಮುದದಿಂದೊಗಿಸುತಲಿರ್ಪ ಮಹಿಮಾಗಾರಂ ॥ ೬೧

ಶ್ರೀ ಇಮ್ಮಡಿ ಗುರುಸಿದ್ಧಸ್ವಾಮಿಗಳು

(೯ ನೇ ಪಟ್ಟ)

೧

ಕಂದ. ಶ್ರೀಮನ್ ಮುರುಘಾ ಪೀಠವ
ನೀ ಮಹಿಯೊಳ್ ಮುರುಘರಾಜರಾದ ಬಳಿಕ್ಕಂ । ೬೨
ಪ್ರೇಮದೊಳಾ ಗುರುಸಿದ್ಧ
ಸ್ವಾಮಿಗಳಿರದೇರಿ ಮೆರೆದರತಿ ವೈಭವದಿಂ ॥

೨

ಅರಿಯಲಿಮ್ಮಡಿ ಮುರುಘರಾಜರು
ಧರೆಯೊಳೀ ಗುರುಸಿದ್ಧ ಗುರುವಿವ
ರರಿತಿಹರು ಸಲೆ ವೇದ ವೇದಾಂತಾಗಮಂಗಳನು ।
ಪರಮ ಸುಜ್ಞಾನಿಗಳು ಕವಿಗಳು
ವರ ತಪೋಧನರಿವರು ನೋಡಲು
ಬರೆದಿಹರು ಹಲವಾರು ಶಿವಸಂಬಂಧ ಗ್ರಂಥಗಳ ॥ ೬೩

೩

ಇಳೆಯೊಳಿವರೀ ಸ್ವಾದಿಯರಸರು
ತಿಳಿಯಲನುಪಮ ವೀರಶೈವರು
ಬೆಳೆದುದಿವರಿಗೆ ಭಕ್ತಿ ಬೆಳೆಯದು ಮುರುಘ ಪೀಠದೊಳು ।
ಚೆಲುವರಿಮ್ಮಡಿ ಮುರುಘರಾಜರ
ತಳುವದಲೆ ತಾ ಕರೆಸಿಕೊಂಡನು
ಸುಳಿದ ಭಕ್ತಿಯೊಳಾ ಸದಾಶಿವರಾಯನುತ್ಸುಕದಿ ॥ ೬೪

೪

ಅರಸನೆಸಗಿದ ಭಕ್ತಿಗೊಲಿಯುತೆ
ಹರುಷದಿಂದಾ ಮುರುಘರಾಜರು
ಭರದಿ ಬಂದಾ ದೊರೆಯ ಬಯಕೆಯ ಪೂರ್ಣಗೊಳಿಸುತಲಿ ।

ತ್ವರಿತದಿಂದಾನಂದ ಪುರದೊಳು
ವಿರಚಿಸುತಲಲ್ಲೊಂದು ಮಠವನು
ಚರಿಸಿವರು ಮಲೆನಾಡಿನೆಲ್ಲೆಡೆಗಳಲಿ ಸುತ್ತಾಡಿ ॥ ೬೫

೫

ಭರದಿ ಶಿವಮತದಮಳ ಧರ್ಮವ
ಚರಿಸಿ ಮಲೆನಾಡಿನೊಳಗೆಲ್ಲೆಡೆ
ಹರಡಿದರು ತಾವಂದು ಪಡುವಣ ಕಡಲ ತಡಿವರೆಗೆ ।
ತ್ವರಿತದಿಂ ಸುಳಿದೆಗೆದು ಬೆಳೆದುದು
ಪರಮ ಶಿವಮತವಂದದಿಮ್ಮಡಿ
ಮುರುಘರಾಜರ ಕೀರ್ತಿ ಬೆಳಸಿನ ಬೆಳಗಿದೆಂಬಂತೆ ॥ ೬೬

೬

ಬರಮನಾಯ್ಕನ ಕರೆಗೆ ಗುರುವರ
ರಿರದೆ ತಾವೋಗೊಟ್ಟು ತಮ್ಮಯ
ಹಿರಿಯತನಮಂ ಮೆರೆದು ಚಿನ್ಮೂಲಾದ್ರಿಗಾಗಮಿಸಿ ।
ಭರದೊಳಾ ಸ್ವಾದಿಯೊಳಗೊಪ್ಪುವ
ಪರಮ ವಟುವರ ಚೆನ್ನಬಸವೇ
ಶ್ವರರನಿರಿಸಿದರಂದು ಚಿನ್ಮೂಲಾದ್ರಿ ಪೀಠದೊಳು ॥ ೬೭

೭

ಮರಳಿ ಬಂದರನಂತಪುರಕೆನೆ
ಭರದೊಳಿಮ್ಮಡಿ ಮುರುಘರಾಜರು
ಹರುಷದಿಂ ತಾವಂದು ತಮ್ಮಯ ಮಠದೆ ನೆಲಸಿರಲು ।
ವರುಷವೆಂಬತ್ತೊಂದು ತುಂಬಲು
ತೊರೆದು ಭೌತ ಶರೀರವನು ತಾ
ವಿರದೆ ತಮ್ಮಾತ್ಮವನು ಶಿವನೊಳಗೈಕ್ಯಗೊಳಿಸಿದರು ॥ ೬೮

೮

ಮೆರೆವುದೀ ಗುರುವರರ ಗದ್ದುಗೆ
ಧರಣಿಗಿದು ಕೈಲಾಸವೆಂಬುವ
ತೆರದೊಳೊಪ್ಪುವನಂತ ಪುರದೊಳಗತುಳ ವೈಭವದಿ ।
ನೆರೆದ ಭಕ್ತರಭೀಷ್ಟವನು ತಾಂ
ಹರುಷದಿಂದೀಡೇರಿಸುತ್ತಿಹ
ಪರಮ ಭಕ್ತರ ಕಲ್ಪತರುವೆಂದಿದು ವಿರಾಜಿಪುದು ॥ ೬೯

ಶ್ರೀ ಸ್ವಾದಿ ಚೆನ್ನಬಸವ ಸ್ವಾಮಿಗಳು

(೧೦ ನೇ ಪಟ್ಟ)

೧

ಕಂದ॥ ಶ್ರೀಮನ್ ಮುರುಘಾ ಪೀಠವ
ಧೀಮಂತರ್ ಸ್ವಾದಿ ಚೆನ್ನಬಸವೇಶ್ವರರೀ ।
ಸ್ವಾಮಿಗಳೊಲವಿಂದೇರುತ
ಲೀ ಮಹಿಯೊಳ್ ಪರಮ ಪೂಜ್ಯರೆನಿಸುತೆ ಮೆರೆದರ್ ॥ ೭೦

೨

ಭಾ॥ ಷ॥ ಸಲ್ಲಲಿತಮಹ ಚಿತ್ರದುರ್ಗದೊ
ಳಲ್ಲಿ ಮೆರೆಯುವ ವರ ಬೃಹನ್ಮಠ
ದಲ್ಲಿ ದಾಸೋಹವನು ನಡೆಸುತಲಿರ್ದು ತಾವೆಂದು ।
ಅಲ್ಲಿ ನೆರೆದಿಹ ಶಿಷ್ಯವೃಂದ
ಕ್ಕೆಲ್ಲ ಬೋಧೆಯಗೈದು ಷಟ್‌ಸ್ಥಲ
ದಲ್ಲಿ ಶಾಸ್ತ್ರಂಗಳೊಳು ಪರಿಣತರೆನಿಸಲಿಸಗಿದರು ॥ ೭೧

೩

ನೋಡಲಿವರು ಸಮಾಜದೇಳ್ಗೆಗೆ
ನಾಡೆ ವಿದ್ಯಾಭ್ಯುದಯ ಕಾರ್ಯಕೆ
ಕೂಡೆ ಧನ ಸಂಗ್ರಹಣೆ ಮಾಡಲು ತಾವು ಮನದಂದು ।
ನಾಡಿನಲಿ ಸಂಚರಿಸೆ ಹೊರಟರು
ಕೂಡಿ ಹರಪನಳ್ಳಿಗಾಗಳೆ
ಬೀಡ ಬಿಟ್ಟರು ಪುರದ ಹೊರವಳಯದಲಿ ದೇಗುಲದಿ ॥ ೭೨

೪

ತಂದೆಯನು ಕೊಂದಿರ್ಪ ಪಾಪಿಯು
ಒಂದು ತಮ್ಮರಮನೆಗೆ ಕರೆತರ
ಲೆಂದು ಬಿನ್ನಹಮಾಡೆ ಯುಕ್ತಿಸಲಂದು ಗುರುವರರು ।
ತಂದೆಯನು ನೀ ಕೊಂದ ಕತದಿಂ
ದಿಂದು ನಿಮ್ಮರಮನೆಗೆ ಬರದಿಹೆ
ವೆಂದು ತಾವಾ ಸೋಮಶೇಖರರಾಯನಿಗುತ್ತರಸಿ ॥ ೭೩

೫

ಇಲ್ಲಿ ನಾವಿರಲಾಗದೆನೆ ಮ
ತ್ತಲ್ಲಿ ನಿಲ್ಲದೆ ತೆರಳಿ ಮುಂದಕೆ
ಮೆಲ್ಲ ಮೆಲ್ಲನೆ ಪಯಣ ಬೆಳಸುತ ಮಾಗಡಿಗೆ ತಲಪಿ ।
ಅಲ್ಲಿ ಭಕ್ತರ ಸೇವೆಯನು ಕೈ
ಕೊಳ್ಳುತವರಿಷ್ಟಾರ್ಥವೆಲ್ಲವ
ಸಲ್ಲಿಸುತಲಾಪುರದೆ ಗುರುವರರಿರ್ದರರ್ಥಿಯಲಿ ॥ ೭೪

೬

ಕೆಲ ದುರಾಚಾರಿಗಳ ದಂಡಿಸಿ
ಸಲಹುತಾಶೀರ್ವದಿಸಿ ಶಿಷ್ಯರ
ಬೆಳಗುತಿರ್ದರು ಮುರುಘ ಪೀಠದ ಬೆಳಗನೆಲ್ಲೆಡೆಗೆ ।
ಬಳಿಕ ತಮ್ಮಯ ಭೌತ ದೇಹವ
ಕಳೆದು ಮಾಗಡಿಯಲ್ಲಿ ತಾ ಶಿವ
ನೊಳಗೆ ಬೆರೆದರು ಚೆನ್ನಬಸವೇಶ್ವರರು ಹರುಷದಲಿ ॥ ೭೫

ಶ್ರೀ ಸಿರಹಟ್ಟಿ ಸಿದ್ಧಲಿಂಗಸ್ವಾಮಿಗಳು
(೧೧ ನೇ ಪಟ್ಟ)

೧

ಕಂದ. ಶ್ರೀ ಗುರು ಮುರುಘಾ ಪೀಠವ
ರಾಗದೆ ಸಿರಹಟ್ಟಿ ಸಿದ್ಧಲಿಂಗ ಪ್ರಭುಗಳ್ ।
ಆಗಮ ವೇದ್ಯರ್ ಸಲೆ ಭೂ
ಭಾಗದೊಳಿದನೇರಿ ಜಗದೆ ಬೆಳಗುತಲಿರ್ದರ್ ॥ ೭೬

೨

ಭಾ. ಷ. ಆಗಮಂಗಳೊಳತುಳ ನಿಪುಣರು
ಜಾಗರೂಕರು ಲೋಕದಾಟದೆ
ನೀಗಿದವರೆನೆ ಮದನಬಾಧೆಯ ಯೋಗಿವರ್ಯರಲಾ ।
ನಾಗಭೂಷಣನಮಳ ಕಿಂಕರ
ಪೂಗಸಾಗರ ಪೂರ್ಣಚಂದ್ರಮ
ರಾಗಿ ಮೆರೆದರು ಸಿದ್ಧಲಿಂಗ ಯತೀಶರೀಧರೆಯೊಳ್ ॥ ೭೭

೩

ವೀರಶೈವಾಚಾರ ಧರ್ಮವ
ಧಾರಿಣಿಯ ಜನಕಿದನು ಮೂಡಿಸೆ
ನೂರು ಮೇಣ್ ಹದಿನೈದು ವರಚರಮೂರ್ತಿಗಳ ಕೂಡಿ ।
ಭೂರಿ ವೈಭವದಿಂದ ಸಲೆ ವೈ
ಸೂರ ನಾಡೊಳು ಚರಿಸಿ ತತ್ವವ
ಸಾರುತಲಿ ಕಡೆಯಲ್ಲಿ ಯೆಡೆಯೂರಿಂಗೆ ತಲುಪಿದರು ॥ ೭೮

೪

ಬಂದು ಯೆಡೆಯೂರಲ್ಲಿ ಗುರುವರ
ರಂದು ನೆಲಸಲು ಪುರದ ಜನವಾ
ನಂದದಿಂ ವಂದಿಸುತ ಭಕ್ತಿಯ ಸಲಿಸಿ ಗುರುಗಳಲಿ ।
ಚೆಂದದಿಂದೀ ಪುರದ ಪಟ್ಟದ
ಸಂದಗುರುಗಳಿಗಂದು ನಿರ್ನೆರ
ವೊಂದು ಕುಂದದು ಬಂದುದನು ಬೆನ್ನೈಸಿಕೊಳಲಾಗ ॥ ೭೯

೫

ನೆರೆಗುರುಸ್ಥಲದಮಳ ಪಟ್ಟದ
ಗುರುಗಳನು ಕರೆಸುತ್ತಲವರನು
ಪರಿಕಿಸಲು ನಿರ್ದೋಷಿಗಳು ಪರಿಶುದ್ಧರಿವರೆಂದು ।
ವರ ಜಗದ್ಗುರು ಸಿದ್ಧಲಿಂಗಾ
ರ್ಯರುಗಳಪ್ಪಣೆ ಕೊಡಿಸಲಲ್ಲಿನ
ಗುರುಗಳಿಗು ಪುರಪ್ರಮುಖರಿಗಾಯ್ತು ಸಂತಸವು ॥ ೮೦

೬

ನೋಡಲೀನಾ ನಾಡನಾಳುವ
ಕೇಡಿಗಳು ಮಲ್ಲಮ್ಮನೆಂಬುವ
ಪೀಡೆಗೊಪ್ಪದು ಗುರುಗಳೆಸಗಿದ ಸತ್ಯ ವರ್ತನೆಯು ।
ಮೋಡಿಯಿಂ ಗುರುಗಳೊಳು ವಿರಸವ
ಹೂಡಿ ತಾಗೋಡಾಡಿ ಕೆಲಜನ
ಕೇಡಿಗಳ ಕೂಡಿಹಳು ವಂಚಕಿ ಸತ್ಯವಿಮುಖಳಲಾ ॥ ೮೧

೭

ಅರಿದು ಸದ್ಗುರುವರರು ಮತ್ತದ
ನೆರೆ ಬಹಿಷ್ಕಾರವನು ಕೊಟ್ಟರು
ಪರಮ ನೀಚಳು ದುಷ್ಟ ಮಲ್ಲಮ್ಮನಿಗದಾಕ್ಷಣವೇ ।
ಅರಿತಪನು ಮಲ್ಲಮ್ಮನಾಗಳೆ
ಹೊರಳಿದಳು ಗುರುಪಾದದೆಡೆಯೊಳು
ಮರೆದು ಮನ್ನಿಸಿ ತಪ್ಪನೆಲ್ಲವ ಸಲಹಬೇಕೆಂದು ॥ ೮೨

೮

ಇತ್ತಳಾಕೆಯು ತಪ್ಪುಗಾಣಿಕೆ
ಗೊತ್ತೆಯನು ಗುರುಪಾದದೆಡೆಯೊಳು
ಮತ್ತೆರಡು ಸಾಸಿರದ ಹೊನ್ನನು ಸುಗುಣವೆಳವಡಲು ।
ಉತ್ತಮಿಕೆಯಲಿ ಬಾಳುವುದು ಸ
ದ್ವೃತ್ತಿಯನು ಕೈಕೊಂಡು ನೀನೆನ
ಲಿತ್ತರಾಗುರುವರರು ಮಲ್ಲಮ್ಮನಿಗೆ ಬೋಧೆಯನು ॥ ೮೩

೯

ಕಾವುದೈ ಗುರುದೇವ ತಮ್ಮಡಿ
ದಾವರೆಯ ದರ್ಶನದಿ ಧನ್ಯಳು
ತಾವು ದಯಮಾಡೆನ್ನ ಮನೆಗಾಗಮಿಸಬೇಕೆಂದು ।
ತೀವಿಡುರು ಭಕ್ತಿಯಲಿ ಬೇಡಲು
ಓವಿ ಗುರುವರರಂದು ಕರುಣಿಸಿ
ಕೋವಿಮುತ್ತೂರರಸಿಯಾಸೆಯ ಪೂರ್ಣಗೊಳಿಸಿದರು ॥ ೮೪

೧೦

ತೆರಳುತೆಡೆಯೂರಿಂದ ಗುರುವರ
ರಿರದೆ ಚಂಗಡಿ ಹಳ್ಳಿಗೈದುತೆ
ನಿರತರಾಗಿರೆ ದುಷ್ಟಶಿಷ್ಟರ ಶಿಕ್ಷೆರಕ್ಷೆಯಲಿ ।
ಇರುತಲೀಪರಿ ಕಳೆಯೆ ಕೆಲದಿನ
ಬೆರೆದರಾಗುರುವರರು ಶಿವನೊಳು
ಮೆರವುದೀ ಪುರವರದೊಳೀ ಗುರುವರರ ಗದ್ದುಗೆಯು ॥ ೮೫

ಶ್ರೀ ಗುರುಪಾದ ದೇಶಿಕೇಂದ್ರರು

(೧೨ ನೇ ಪಟ್ಟ)

೧

ಭಾ॥ ಷ॥ ಧರೆಯೊಳೊಪ್ಪುವ ಚಿತ್ರದುರ್ಗದೆ
ವರಬೃಹನ್ಮಠದಲ್ಲಿ ಮೆರೆಯುವ
ಪರಮ ಗುರುವರ ಮುರುಘರಾಜೇಂದ್ರರ ಸುಪೀಠವನು ।
ಇರದಲಂಕರಿಸುತಲಿ ಮೆರೆದರು
ಗರುವ ಶ್ರೀ ಗುರುಪಾದ ದೇಶಿಕ
ರುರುವ ವೀರಶಿವಾಗಮಂಗಳೊಳತುಳ ಪರಿಣತರು ॥ ೮೬

೨

ಪರಮ ಷಟ್‌ಸ್ಥಲ ಚಕ್ರವರ್ತಿಗ
ಳುರುವ ವೇದಪುರಾಣ ಶಾಸ್ತ್ರಗ
ಳರಿತ ಮಹಿಮೋನ್ನತರು ಸುಜ್ಞಾನಿಗಳು ಕರುಣಿಗಳು ।
ಸರಸ ಸಜ್ಜನಿಕೆಯಲಿ ತುಂಬಿದ
ಹರನಿಯಂತಿಹ ವರಜಗದ್ಗುರು
ಗರುವ ಶ್ರೀ ಗುರುಪಾದ ದೇಶಿಕರಿಳೆಗೆ ಪೂಜ್ಯರಲಾ ॥ ೮೭

೩

ಕಾಮ ಕಲೆಯೊಳು ನೋಡಲತಿ ನಿ
ಸ್ಸೀಮಳನುಪಮ ರೂಪ ಸುಂದರಿ
ಕೋಮಲೆಯು ಬಹು ಕುಶಲೆಯತಿಶಯ ಚಟುಲ ಚಂಚಲೆಯು ।
ಕಾಮರಸದಳ ನಯನೆಯನೆ ವೇಶ್ಯೆಯು
ಕಾಮುಕರ ಕಣ್ಮಣಿಯು ತಾನೆನೆ
ರಾಮಣೀಯಕಳಾಗಿ ಕೊಂಗುಂಟಿಯಲಿ ನೆಲಸಿಹಳು ॥ ೮೮

೪

ಯುವಕ ಜನಮನ ಕಲಕಿ ಕಣ್ಣಿಗೆ
ಜವನಿಕೆಯ ತಾ ಕವಿಸಿ ಯುವತಿಯು
ಸವಿನುಡಿಗಳಿಂ ತನ್ನ ಮೋಹದ ಬಲೆಗೆ ಕೆಡಹುತಲಿ ।
ಭವದ ಕಡಲಿಗೆ ನೂಂಕುವಳು ಮ
ತ್ತವರನೆಲ್ಲವನೆನುತ ದೂರನು
ಸವಿನಯದಿ ಗುರುಗಳೊಳು ಪುರಜನಮಂದು ಬಿನ್ನೈಸೆ ॥ ೮೯

೫

ಗುರುಗಳಾ ಯುವಜನರ ಮೇಳಕೆ
ನೆರೆಬಹಿಷ್ಕಾರವನು ಕೊಡಲಾ
ತರುಣ ತಂಡವು ಚಿತ್ರದುರ್ಗದ ದೊರೆಗಳೊಳು ತಾವು ।
ಹಿರಿದು ದೂರನು ಕೊಡಲದಾಕ್ಷಣ
ಗುರುಗಳೊಳು ವಿರಸವನು ತಾಳುತೆ
ತರುಣ ತಂಡಕೆ ತನ್ನ ಬೆಂಬಲವಿತ್ತನಾ ದೊರೆಯು ॥ ೯೦

೬

ದೊರೆ ಮುಳಿದ ಬಳಿಕಿನ್ನು ತಾವಿ
ಲ್ಲಿರಲು ಬಾರದೆನ್ನುತ ಗುರುವರ
ರಿರದೆ ಮುಂದಕೆ ಪಯಣ ಬೆಳೆಸುತ ಹಾವನೂರಿಂಗೆ ।
ಬರಲು ಹನುಮನ ಗೌಡನೆಂಬುವ
ಪರಮ ಭಕ್ತನು ಮಾಡಿ ಬಿನ್ನಹ
ಹರುಷದಿಂ ನಿಜನಿಳಯಕುತ್ಸವದಿಂದ ಕರೆತಂದ ॥ ೯೧

೭

ಹನುಮಗೌಡನು ಹಿರಿದು ಮಾಡುವ
ಘನತರದ ಸದ್ಭಕ್ತಿಗೊಲಿಯುತ
ಲನುವರಿತು ತಾವಲ್ಲಿ ಕೆಲದಿನವಿರ್ದುಮಾ ಬಳಿಕ ।
ಮನವೆಳಸಿ ಗುಣಮೆಟ್ಟುಕಲ್ಲಿಂ
ಗನುಪಮೋಜ್ವಳ ಮೂರ್ತಿಯಿವರೆಂ
ದೆನಿಪ ಶ್ರೀ ಗುರುಪಾದದೇಶಿಕರೊಲ್ದು ತೆರಳಿದರು ॥ ೯೨

೮

ಅಂದು ಪುರಜನಮತುಳ ವೈಭವ
ದಿಂದ ಸುಸ್ವಾಗತಿಸಿ ಪರಮಾ
ನಂದದಿಂ ಗುರುವರರ ಕರೆತಂದಿರಲು ಪುರವರದೆ ।
ಸಂದ ಗುರು ಸಾನಿಧ್ಯದಿಂ ಪುರ
ದಂದ ಹೆಚ್ಚಿತು ಭಕ್ತಜನ ಹೃ
ನ್ಮಂದಿರದೆ ಸುಜ್ಞಾನ ಮೊಳೆಯಿತು ಪುರದ ಪುಣ್ಯಮಿದು ॥ ೯೩

೯

ಗುರುವರರು ಗುಣಮೆಟ್ಟುಕಲ್ಲಿನೊ
ಳಿರದೆ ತಮ್ಮಾ ಪಂಚಭೌತಿಕ
ವರಶರೀರವನುಳಿದು ತಮ್ಮಾತ್ಮವನು ಶಿವನೊಳಗೆ ।
ಬೆರಸಿದರು ಮತ್ತಿವರ ಗದ್ದುಗೆ
ಮೆರೆವುದೀ ಗುಣಮೆಟ್ಟುಕಲ್ಲಿನೊ
ಳಿರದೆ ಪರಶಿವನಿಳಿಯವಿದು ತಾನೆಂಬ ತೆರದಿಂದ ॥ ೯೪

ಶ್ರೀ ಮೂರು ಸಾವಿರದ ಗುರುಪಾದಸ್ವಾಮಿಗಳು

(೧೩ ನೇ ಪಟ್ಟ)

೧

ವಾ॥ ಷ॥ ಮೂರು ಸಾವಿರದ ಗುರುಪಾದ ದೇಶಿಕರಿವರು
ಚಾರುತರಮೆನಿಸಿರ್ಪ ಶೂನ್ಯಸಿಂಹಾಸನವ
ನೇರಿ ತಾಂ ಜಗದ ಗುರುವೆನಿಸಿ ಪರತತ್ವಮಂ ತಿಳಿವ ಜಿಜ್ಞಾಸುಗಳಿಗೆ ।
ದಾರಿದೀಪಮದಾಗೆ ಭೂರಿಭವಭಾರಿಗಳ
ಭಾರಮಂ ತಾನಿಳುಹೆ ಮಾರಹರ ತತ್ವಾರ್ಥ
ಸಾರಮಂ ಸದ್ಭಕ್ತತತಿಗರುಹಿ ಧಾರಿಣಿಗೆ ಸಲೆ ಪೂಜ್ಯರೆನಿಸಿರ್ಪರು ॥ ೯೫

೨

ವರವೇದವೇದಾಂತ ಪರಮಸಿದ್ಧಾಂತಗಳ
ನುರುತರದ ಪೌರಾಣದೊಳು ಸುರಿತ ಮಾಮ್ಸೈಮ
ರರಿಯಲೀ ವರವೀರಶೈವಾಗಮಂಗಳೊಳು ಪರಿಣತರು
ತಾನೆನಿಸಿರೆ ।
ಪರಮ ಶಿವಪೂಜೆಯಲಿ ಲೋಲುಪರು ತಾವಾಗಿ
ವರವೀರಶೈವಮಂ ವಸುಧೆಯೊಳು ಬಿತ್ತರಿಸಿ
ಪರಶಿವನೆ ಧರೆಗಿಳಿದು ಬಂದನೆಂಬಂದದಿಂ ಮೆರೆದರೀ
ಗುರುವರ್ಯರು ॥ ೯೬

೩

ಕರಮೆಸೆವ ಮದಕರಿಯ ವಂಶದೊಳು ಹಿರಿಯರಸು
ಬರಮಣ್ಣನಾಯ್ಕನಿಗೆ ವರಜಗದ್ಗುರುವೆನಿಪ
ಮುರುಘೇಂದ್ರ ರಾಜರೊಳು ಹಿರಿದಾಗಿ ಬೆಳೆದಿತ್ತು
ಗುರುಭಕ್ತಿಯಾದೊಡೇನು !
ಪುರದರಸುತನಕೆನ್ನನಾರಿಸದೆ ಗುರುವರರು
ಪರರ ಹೆಸರನು ಸೂಚಿಸಿದರೆಂಬ ಕತದಿಂದ
ಗುರುಗಳೊಳು ವಿರಸಮಂ ತಳೆದನಾ ಮೂರ್ಖದೊರೆ
ಕಡೆಯ ಮದಕರಿನಾಯ್ಕನು ॥ ೯೭

೪

ಮೈಸೂರ ಹೈದರನು ಸೇನೆಯಿಂದೊಡಗೂಡಿ
ದೇಶದೇಶಂಗಳನು ಜಯಿಸುತ್ತ ತಾ ಬಂದು
ಭಾಸುರದ ವರಚಿತ್ರದುರ್ಗದಾ ಕೋಂಟೆಗುರೆ ಲಗ್ಗೆಯಂ
ತಾ ಹೂಡಲು ।
ಆಸುರದ ಕೋಟೆಯದು ಭೇದಿಸಲಬೇದ್ಯವೆನೆ
ಸೂಸದಿರೆ ಮುಂದೇನಮಾಡಬೇಕೆಂಬರಿವು
ರೋಷದಿಂ ನುಗ್ಗಿದನು ಮುರುಘಮಠದೊಳಗಂದು
ಹೈದರನು ಸೇನೆಗೂಡಿ ॥ ೯೮

೫

ಮುರಘಮಠದಾ ಸ್ವಾಮಿಗಳ ಕರುಣೆಯಿರಲವಗೆ
ಸರಿಯನಿವಸಮಗೆಂದು ತಿಳಿದು ಹೈದರನಂದು
ಮುರುಘ ಮಠಮಂ ನುಗ್ಗಿ ಲೂಟಿ ಮಾಡಲು ಬಯಸಿ
ಸೇನೆಯಂ ಕೂಡಿ ಬರಲು ।
ಹೊರಗಿನ ಮಹಾದ್ವಾರಮಂ ದಾಂಟಿ ಮಠದ ಬಳಿ
ಬರಲವಗೆ ಕಂಗಾಣದಂತಾಗೆ ಬಳುಕಿತಾಂ
ಮರಳಿದನು ಮಠದಿಂದ ಕೈಕಾಲುಗಳು ಸೋತು ಮೈಬೆವರಿ
ಬಾಯಾರಲು ॥ ೯೯

೬

ಗುರುಗಳೊಳು ವಿರಸಮಂ ತಳೆದಿರ್ಪ ಮಾನವಗೆ
ದೊರೆತನವು ಸಿರಿತನವು ಕರಿಗೊಳ್ಳದಿಪ್ಪುದೇಂ
ಮರಳಿ ತಾಂ ಹೈದರನು ಚಿತ್ರದುರ್ಗವ ಮುತ್ತೆ ಸೇನೆಯಂ
ಕೂಡಿ ಬಂದು ।
ಛರದಿ ತಂತ್ರವ ಮಾಡಿ ಕೋಂಟೆಯಿಂದೊಳ ಹೊಕ್ಕು
ತರಿದನಾಮದಕರಿಯ ಬಲವೆಲ್ಲಂ ಮುತ್ತೆ
ಸೆರೆಹಿಡಿದು ಮದಕರಿಯನಾಯ್ಕನಂ ಕೋಂಟೆಯಂ
ವಶಪಡಿಸಿಕೊಂಡನಂದು ॥ ೧೦೦

೭

ಅರಿಯಲೀ ಮದಕರಿಯನಾಯ್ಕರೊಳು ಬರಮಣ್ಣ
ಹಿರಿಯರಸು ಗುರುಭಕ್ತಿಯುತನಾಗಿ ರಾಜ್ಯಮಂ
ಧರೆಮೆಚ್ಚಲಾಳಿದಂ ಮತ್ತುಳಿದರಿನ್ನಿಬ್ಬರರಸುಗಳು
ಮೂರ್ಖರಲ್ತೆ ।
ಗುರುಭಕ್ತಿಯಂ ತೊರೆದು ಪರಿಭವವನುಭವಿಸಿ
ಅರಿಗಳಿಗೆ ರಾಜ್ಯವಂ ನೆರೆಸೋತು ಕೊನೆಯಲ್ಲಿ
ಸೆರೆಸಿಕ್ಕು ಮರಣಕ್ಕೆ ಪಕ್ಕಾದರಿವರೆನಲು ಸೋಜಿಗವೆ
ಧಾತ್ರಿಯಲಿ ॥ ೧೦೧

೮

ಧರೆಯೊಳೀ ವರವೀರಶೈವಾಚಾರಮಂ
ಪರಿಶುದ್ಧಗೊಳಿಸುತ್ತೆ ಹಿರಿದು ಸನ್ಮಾರ್ಗದೊಳ್
ಮೆರೆವ ದಾರಿಯ ತೋರಿ ಮೂರಾದ ಸಾವಿರದ ಗುರುಪಾದ
ಗುರುವರ್ಯರು ।
ವರಬೃಹನ್ಮಠದಲ್ಲಿಯಾ ಚಿತ್ರದುರ್ಗದೊಳ್
ಪರಮಶಿವಯೋಗದೊಳ್ ಸಲೆಸಂದು ಬಯಲಾದ
ಪರಿಯನದನೇವೇಳ್ವೆ ಭಕ್ತಜನರಂದಲ್ಲಿ ನೋಡೆ
ಜಯಜಯವೆನುತಿರೆ ॥ ೧೦೨

ಶ್ರೀ ಮೂರು ಸಾವಿರದ ಸಿದ್ಧಲಿಂಗಸ್ವಾಮಿಗಳು

(೧೪ ನೇ ಪಟ್ಟ)

೧

ರಾಮಣೀಯಕಮೆನಿಪ ವರಚಿತ್ರದುರ್ಗದೊಳ್
ಸ್ವಾಮಿ ಗುರುಮುರುಘೇಶನೊಲಿದೇರಿ ಮೆರೆದನಿ
ಸ್ಸೀಮನನುಪಮಮೆನಿಪ ದಿವ್ಯತೇಜದೊಳೆಸೆವ ಶೂನ್ಯ
ಸಿಂಹಾಸನವನು ।
ಪ್ರೇಮದಿಂ ಮೂರು ಸಾವಿರದ ಸಿದ್ಧಲಿಂಗ
ಸ್ವಾಮಿಗಳು ತಾವೇರಿ ಲೋಕೈಕ ವಿಭುವೆನಿಸು
ತೀ ಮಹಿತ ಗುರುವರ್ಯರೆಸೆದಿಹರು ಸರ್ವಜನ
ಸಂಸ್ತುತ್ಯರಪ್ರತಿಮರು ॥ ೧೦೩

೨

ವೇದವೇದಾಂತದೊಳು ಸಕಲಾಗಮಂಗಳೊಳು
ಸಾಧಿಸಿದರತುಳ ನೈಪುಣ್ಯಮಂ ಸತ್ಯಸಂ
ಶೋಧನೆಗೆ ನೆಲೆಯಪ್ಪ ಶೈವಸಿದ್ಧಾಂತಗಳ
ನೆರೆಯರಿತಮಾಮ್ಸೈಮರು ।
ಮೇದಿನಿಯೊಳಪ್ರತಿಮ ಗಣಗುಣಾನ್ವಿತರಿವರು

ಸಾದರದೆ ಶಿವತತ್ವ ಸಾರವಂ ಭಕ್ತರಿಗೆ
ಬೋಧಿಸುತಲಾಚಾರ ಸಂಪನ್ನರಂ ಮಾಡಿ ಮೆರೆದರೀ
ಗುರುವರ್ಯರು ॥ ೧೦೪

೩

ಜಂಗಮರು ಭಕ್ತರುಗಳೆಂಬೆರಡು ಪಕ್ಷಗಳು
ಭಂಗಮಂ ತಂದಿಹವು ವೀರಶೈವ ಸಮಾಜ
ದಂಗಕ್ಕೆ ಬೆಳೆದಿಹುದು ವಿಪುಳತರ ವಿದ್ವೇಷ ಗಗನಕ್ಕೆ
ತಾನೇರುತ ॥

ತುಂಗಚರಿತರು ಸಿದ್ಧಲಿಂಗಗುರುವರರಂದು
ಸಾಂಗದಿಂದಿದನರಿತು ತಾವೆಂದು ಕರೆಸಿದರು
ಪಂಗಡಗಳೆರಡರಾ ಹಿರಿಯರಂ ಹಿರಿದು ಬುದ್ಧಿಯನೊರೆದು
ಸರಿಗೈದರು ॥ ೧೦೫

೪

ಹೊರಟರಾ ಗುರುವರರು ಸಕಲ ಬಿರುದುಗಳೊಡನೆ
ಭರದಿ ತಾಂ ಸಲೆ ಭಕ್ತರಿಷ್ಟಾರ್ಥಮಂ ಸಲಿಸೆ
ಕರಮೆಸೆವ ಸುರುಚಿರದ ರಾಣೆಬೆನ್ನೂರಿಂಗೆ ಪರಮ
ಸಂತೋಷದಿಂದ ।

ಬರುತಿರಲು ದಾರಿಯಲಿ ದೊರೆಯೆ ರಟ್ಟೆಯಹಳ್ಳಿ
ವರಜಗದ್ಗುರು ಸಿದ್ಧಲಿಂಗ ಗುರುವಾ ಪುರದ
ವರಪಟ್ಟದಾರ್ಯನಿಂ ವಾಮಪಂಥದ ನಡೆಯು
ಜರುಗುತಿರಲದನರಿಯುತ ॥ ೧೦೬

೫

ಕೊಟ್ಟರಾಗುರುವರರು ನೆರೆ ಬಹಿಷ್ಕಾರಮಂ
ಪಟ್ಟದಾರ್ಯನಿಗೆ ಶಿವಮಾರ್ಗಮಂ ಬಿಟ್ಟು ತಾಂ
ಕೆಟ್ಟವಾಮಾಚಾರಮಂ ಪಿಡಿದು ನಡೆಯುತಿಹನೆಂಬುಂದು
ದೂಸರಿಂದ ।

ಕೆಟ್ಟೆಕೆಟ್ಟೆನೆನುತ್ತ ಕೆಟ್ಟೋಡಿ ತಾ ಬಂದು
ಪಟ್ಟದಾರ್ಯನು ಗುರುಗಳಡಿಗೆರಗಿ ಬೇಡಿಕೊಳೆ
ದಿಟ್ಟರಾಗುರುವರ್ಯ ಸಿದ್ಧಲಿಂಗೇಶ್ವರರು ಮನ್ನಿಸಿದರಾ
ಮರುಳನ ॥ ೧೦೭

೬

ವೀರಶೈವಾಚಾರ ಪಂಥಮಂ ನೀ ತೊರೆದು
ದಾರಿತಪ್ಪಿದೆಯೇಕೆ ವಾಮಪಂಥವ ಬೆರೆದು
ಕೋರುವರೆ ಸುರಧೇನು ತಾನಿರಲು ಸುಜನರಾಗೊಡ್ಡಾದನವ
ಮಹಿಷಿಯ ।

ದಾರಿ ತೋರುವ ನೀನೆ ದಾರಿತಪ್ಪಿದ ಬಳಿಕ
ತೋರುವರದಾರೊ ಶಿವಮಾರ್ಗಮಂ ಧರೆಗಿಂದು
ಸೇರುನೀಂ ಶಿವಮಾರ್ಗಮಂ ಮರುಳೆಯೆಂದಂದು ಸಾರಿದರು
ಗುರುವರ್ಯರು ॥ ೧೦೮

೭

ತೆರಳಿದರು ಗುರುವರರು ವರರಟ್ಟೆಹಳ್ಳಿಯಿಂ
ಭರದಿ ಮಾಗಡಿಗೆ ತಾವೆಂದು ಸೇರಲು ಬಂದು
ಪುರದ ಜನ ಗುರುವರರ ವೈಭವೋತ್ಸವದಿಂದ ಪುರವರಕೆ
ಕರೆತಂದಿರೆ ।

ಪರಮ ಶಿವತತ್ವಮಂ ಪುರಜನಕೆ ಬೋಧಿಸುತ
ಲಿರುತಿರಲು ಕೆಲದಿನದ ಬಳಿಕಲಾಗುರುವರರು
ಪರಶಿವನೊಳೊಂದಾಗಿ ಬೆರೆದಿರಲು ಭಕ್ತಜನರಂದು
ಜಯಜಯವೆನುತಿರೆ ॥ ೧೦೯

೮

ಕಂದ॥ ಮೆರೆವುದು ಮತ್ತೀಗುರುಗಳ
ಸುರುಚಿರಮೆನಿಸಿರ್ಪ ಪರಮ ಗದ್ದುಗೆಯದು ತಾಂ ।
ಧರೆಯೊಳ್ ಮಾಗಡಿ ಪುರದೊಳ್
ಪರಶಿವನಾವಾಸಮೆಂಬ ತೆರದಿಂ ಸೊಬಗಿಂ ॥ ೧೧೦

ಶ್ರೀ ಒಪ್ಪತ್ತಿನ ಚೆನ್ನವೀರಸ್ವಾಮಿಗಳು

(೧೫ ನೇ ಪಟ್ಟ)

೧

ವಾ॥ ಷ॥ ನೋಡಲೊಪ್ಪೊತ್ತಿನಾ ಚೆನ್ನವೀರೇಶ್ವರರು
ರೂಢಿಯೊಳ್ ಹೆಸರಾಂತ ಬೃಹನ್ಮಠದಲ್ಲಿ
ನಾಡೆ ರಂಜಿಸುತಿರ್ಪ ವರಜಗದ್ಗುರು ಮುರುಘರಾಜೇಂದ್ರ
ವಿಷ್ಟರವನು ।

ಕೂಡಿ ನಲವಿಂದೇರಿ ವರಜಗದ್ಗುರುವೆನಿಸಿ
ಮೂಡಿ ಬರೆ ಸುಜ್ಞಾನ ರವಿ ಹೃದಯ ಬಿಂಬದೊಳ್
ಬಾಡುತಿರೆ ಲೌಕಿಕದ ಕುಮುದ ಕುಟ್ಮಲಮಿವರು ಕೂಡಿಹರು
ಶಿವಯೋಗದೆ ॥ ೧೧೧

೨

ಪಟ್ಟಕಟ್ಟುವ ದಿವಸ ನಡೆಸಿದಾಡಂಬರವು
ಇಟ್ಟಣಿಸಿ ನೆರೆದ ಜನಸಂದಣಿಯ ತಿಕ್ಕಾಟ
ಕಟ್ಟದಿರೊಳುರೆಕಂಡ ಮಕ್ಕಳಿನ ಕೊರಚಾಟ ಬಿಕ್ಷುಕರ
ಗೋಳಾಟವು ।

ಪಟ್ಟಣವ ನೋಡಲುರೆ ಬಂದ ಸಿದ್ಧಾರ್ಥನೊಲು
ದಟ್ಟಯಿಸಿ ನೆರೆಕಂಡ ಗೊಂದಲವು ಕಂಗಳಿಗೆ
ದಟ್ಟದಂತಾಗೆ ಮನಮರುಗಿ ಗುರುವರರು ವೈರಾಗ್ಯಮಂ
ತಳೆದರಂದು ॥ ೧೧೨

೩

ನೋಡೆ ಷಟ್‌ಸ್ಥಲ ಪಟ್ಟಮಂ ಪಡೆದಾರೊದಡಂ
ಗೂಢತರಮೆನಿಸಿರ್ಪ ತಮ್ಮಾತ್ಮ ಲಿಂಗದೊಳ್
ಗಾಢನಿಷ್ಠೆಯು ಬಲಿಯೆ ಲೋಕದಾಟವ ಮರೆದು ಪರಮ
ವೈರಾಗ್ಯದಿಂದ ।

ಕೂಡಿ ತಾಂ ಪರಮ ಪಂಚಾಕ್ಷರಿಯ ಮಂತ್ರಮಂ
ನಾಡೆ ಜಪಿಸುತ್ತ ಶಾಂತವಾತಾವರಣಮಂ
ಕೂಡಿಕೊಳಲಿಚ್ಛಿಸುತ ವರಬೃಹನ್ಮಠದಿಂದ ಗುರುವರರು ೧೧೩
ಹೊರಹೊರಟರು ॥

೪

ಹಗಲಿರಳು ಪಯಣಮಂ ಬೆಳೆಸುತ್ತ ಗುರುವರರು
ಮಿಗೆ ವಿರಾಜಿಸುತಿರ್ಪ ತಿಳುವಳ್ಳಿಯಂ ಸೇರಿ
ಜಗದ ಜನಜಂಗುಳಿಗೆ ಕಾಣದೊಲು ಪಟ್ಟಾಭಿಷಿಕ್ತರಾದಂದಿ
ನಿಂದ ।
ಮಿಗದಂತೆ ತಾವೆಂದು ಹದಿನೇಳು ದಿನದಲ್ಲಿ
ಜಗದೊಳೊಗುಮಿಗೆಯಿಂದಲೊಗೆ ತಂದ ಮಾಯೆಯಂ
ಬಗೆಯೆದೆಯೆ ಶಿವನೊಡಲ ಮಡಿಲೊಡವೆ ತಾವಾದರೀ
ಚೆನ್ನವೀರೇಶರು ॥ ೧೧೪

ಶ್ರೀ ವ್ಯಾಕರಣದ ಸಿದ್ಧಲಿಂಗಸ್ವಾಮಿಗಳು

(೧೬ ನೇ ಪಟ್ಟ)

೧

ವರಚಿತ್ರದುರ್ಗದೊಳ್ ಪರಿಶೋಭಿಸುತ್ತಿರ್ಪ
ಪರಮ ಚಿನ್ಮೂಲಾದ್ರಿ ಶೂನ್ಯ ಸಿಂಹಾಸನವ
ಗುರುತರ ವ್ಯಾಕರಣದಾ ಸಿದ್ಧಲಿಂಗೇಶರಿವರೇರಿ ಮಂಡಿಸುತ್ತಾ।
ಪರಮ ಪೂಜ್ಯತೆವಡೆದು ವರಜಗದ್ಗುರುವಾಗಿ
ಕರಮೆಸೆವ ವರವೀರಶೈವಮತ ಶರನಿಧಿಯ
ಪರಿಪೂರ್ಣ ಚಂದ್ರಮರು ತಾವೆನಿಸಿ ಪರಿಶೋಭಿಸುತ್ತಿರ್ಪರೀ
ಮಹಿಮರು ॥ ೧೧೫

೨

ಕಾಶಿಯೊಳ್ ವ್ಯಾಕರಣ ಶಾಸ್ತ್ರದಭ್ಯಾಸಮಂ
ತೋಷದಿಂ ಮಾಡಿ ವೈಯ್ಯಾಕರಣರೆನಿಸುತ ವಿ
ಶೇಷ ಗೌರವ ಪಡೆದು ಮತ್ತುಳಿದ ಶಾಸ್ತ್ರಂಗಳೊಳ್
ನಿಪುಣರಿವರೆನಿಸುತೆ ।
ಕಾಶಿ ರಾಮೇಶ್ವರವನೊಳಕೊಂಡು ಶೋಭಿಸುವ
ದೇಶದೊಳ್ ಶಾಸ್ತ್ರೋಕ್ತ ವಾದದಿಂ ತ್ರಿಮತಸ್ಥ
ರಾಶಿಯಂ ಗೆಲಿದವರ ಶಿವಭಕ್ತರಂ ಮಾಡಿ ಮೆರೆದರೀ
ಗುರುವರ್ಯರು ॥ ೧೧೬

೩

ಪಂಡಿತರ ತಂಡವದು ಹಿಂಡೇಳ್ವ ಪುಳಕದಿಂ
ಪಾಂಡಿತ್ಯದೊಳಗೆಣಿಸೆ ಗಂಡುಗಲಿಯಿವರೆಂದು
ದಿಂಡುಗೆಡೆದಿವರಡಿಗೆ ಕೊಂಡಾಡುತಿರೆ ಸಿದ್ಧಲಿಂಗೇಶ
ಯತಿವರರನು ।
ದಂಡಧರ ವೈರಿಯೆಂಬಂದದಿಂದಿವರು ಭೂ
ಮಂಡಲದೆ ಚರಿಸುತ್ತೆ ಮಾಗಡಿಗೆ ದಯಮಾಡಿ
ಮಂಡೆಯೊಳ್ ಕೈಮೊತ್ತು ಮುಗಿಯುತಿರೆ ಭಕ್ತಜನ ಶಿವನಲ್ಲಿ
ಮರೆಯಾದರು ॥ ೧೧೭

ಶ್ರೀ ನೈಘಂಟಿನಾ ಸಿದ್ಧಬಸವೇಶ ಸ್ವಾಮಿಗಳು

(೧೭ ನೇ ಪಟ್ಟ)

೧

ಅರಿಯೆ ನೈಘಂಟಿನಾ ಸಿದ್ಧಬಸವಸ್ವಾಮಿ
ವರಜಗದ್ಗುರು ಮುರುಘರಾಜೇಂದ್ರ ಪೀಠಮಂ
ಹರುಷದಿಂದಾರೋಹಣಂಗೈದು ವರಜಗದ್ಗುರುವಾಗಿ
ಧಾರಿಣಿಯೊಳು ।
ಸರುವ ಜನ ಕಲ್ಯಾಣಕಾರಕರು ಸಂತತಂ
ಪರಮ ಕರುಣಾಕರರು ವರಶಾಂತಮೂರ್ತಿಗಳು
ಹರಭಕ್ತ ಸುರಧೇನು ವಿಬುಧಜನ ಸಂಸ್ತುತ್ಯರೆನಿಸಿಹರು
ಗುರುವರ್ಯರು ॥ ೧೧೮

೨

ಬನವಾಸಿಯೆಂಬುದಿದು ಶಿವಭಕ್ತಬೀಡರಿಯೆ
ವನರಾಜಿಯಿಂದೊಪ್ಪೆ ಸೌಂದರ್ಯ ನಗರವಿದು
ಘನ ಗುಣಾಢ್ಯನು ಗೌಡನೆಂಬೊಬ್ಬ ಶಿವಭಕ್ತನಿಹನಲ್ಲಿ ಯಾ
ಪುರದೊಳು ।
ತನಯನಿಹನಿವಗೊಬ್ಬ ದುರುಳನತ್ಯಾಚಾರಿ
ವಿನಯ ದೂರನು ಮೂರ್ಖ ವಿಷಯಲಂಪಟನೆನಿಸಿ
ಜನಜನಿತನಾಗಿಹನು ಕೇಳುತೀವಾರ್ತೆಯಂ ಗುರುವರರು
ಸಲೆ ಮುನಿದರು ॥ ೧೧೯

೩

ಕರೆಸಿದರು ತನಯನಂ ತಾತನಂ ಗುರುವರರು
ನೆರೆವಿಚಾರಿಸಲಿವನು ಚಾಂಡಾಲ ಕನ್ಯೆಯಂ
ಬೆರೆದಿಹುದು ಸಹಜಮೆಂದೊಪ್ಪಿ ತಂದೆಯು ಪೇಳೆ
ಗುರುವರರು ತಾವಾಗಳೇ ।
ದುರುಳನಿಗೆ ನೆರೆ ಬಹಿಷ್ಕಾರಮಂ ತಾವಿತ್ತು
ಸೆರೆನೀರು ಬೆಂಕಿಯಂ ದೊರಕದಂತೆಸಗುತ್ತ
ಪರಿಪಾಲನಂಗೈದರುರುತರದ ಧರ್ಮಮಂ ಚ್ಯುತಿಯದಕೆ
ಬಾರದಂತೆ ॥ ೧೨೦

೪

ಅಂದು ಸದ್ಗುರುವರರು ಷಟ್‌ಸ್ಥಲದ ಮಾರ್ಗಮಂ
ಚಂದದಿಂ ಸಂದೇಹಮಿಲ್ಲದೊಲು ಸದ್ಭಕ್ತ
ವೃಂದಕ್ಕೆ ಬೋಧಿಸುತ ಸನ್ಮಾರ್ಗದೊಳ್ ನಡೆಯೆ
ಮಾರ್ಗದರ್ಶಕರಾಗುತೆ ।

ಅಂದವಡೆದೊಪ್ಪುವಾ ಹಾವೇರಿ ಪುರವರಕೆ ಸಾ
ನಂದದಿಂದಾಗಮಿಸಿ ಕೆಲದಿವಸಮಲ್ಲಿರ್ದು
ವೊಂದುದಿನ ಶಿವನಲ್ಲಿ ಬಯಲಾದರೀ ಸಿದ್ಧಬಸವೇಶ
ಯತಿವರರು ॥ ೧೨೧

ಶ್ರೀ ಸಣ್ಣಬರಹದ ರಾಚವಟಿ ಸ್ವಾಮಿಗಳು

(೧೮ ನೇ ಪಟ್ಟ)

೧

ಕರಮೆಸೆವ ಷಟ್‌ಸ್ಥಲದ ಪಟ್ಟಮಂ ಪಡೆದರೆನೆ
ವರಸಿದ್ಧ ಬಸವೇಶ ಯತಿಪುಂಗವರ ಬಳಿಕ
ಧರೆಯೊಳೀ ಸಣ್ಣಬರಹಮೆನೆ ಹೆಸರಿಸುವ ರಾಚವಟ
ಗುರುದೇವರು ।
ಮುರುಘಮಠದುರುಕೀರ್ತಿ ಬೆಳಗುತಿಹುದೆಲ್ಲೆಡೆಗೆ
ಶರಣಜನ ಜಂಗಮರ ದಾಸೋಹಕೇಂ ಕೊರತೆ
ನೆರೆಧನ್ಯರಾ ಮಠದ ಪರಿವಾರದವರು ಮೇಣ್ ಬಿಕ್ಷುಕರ
ತಂಡವೆಲ್ಲಾ ॥ ೧೨೨

೨

ಕಾಶಿಯಿಂ ರಾಮೇಶ್ವರದವರೆಗೆ ಪಸರಿಸಿಹ
ದೇಶಂಗಳೊಳು ಚರಿಸಿ ಕಾಣಿಕೆಯ ರೂಪದೆ ವಿ
ಶೇಷ ಧನಮಂ ಬರಿಸಿ ಭಕ್ತಜನ ಗುರುವರ್ಗ ವಿರತರಿಂದೆಲ್ಲ
ರಿಂದ ।
ತೋಷದಿಂದಾ ಮಠದ ಹಳೆಯ ಕಟ್ಟಡವೆಂದು
ತಾಶಿಥಿಲಮೆನಲದನು ಸರಿಪಡಿಸಿ ಮಠದಲ್ಲಿ
ಲೇಸೆನಿಪ ದಾಸೋಹ ಮೊದಲಾದ ಕಾರ್ಯಗಳು
ನಡೆಯುವಂತೆಡೆಗೊಟ್ಟರು ॥ ೧೨೩

೩

ದಾನಯ್ಯನೆಂಬೊಬ್ಬ ಜಂಗಮನು ದುರ್ಗದೊಳ್
ತಾನಿಹನು ಗುಣದೊಳವನವಿಚಾರಿ ವಂಚಕನು
ಹೀನಮತಿ ಮೂರ್ಖಗಡ ರಾಚವಟ ಗುರುಗಳೊಳ್
ದ್ವೇಷಮಂ ತಳೆದಿರ್ಪನು ।
ಭಾನುವಿನ ಬಲ್ಬೆಳಗು ಗೂಗೆಗೊಪ್ಪದು ಸಹಜ
ನಾನು ನಾನೆಂದೆಂಬ ಹಮ್ಮುಬಿಮ್ಮಿರಲು ಮುಂ
ದೇನು ತೋರದವಂಗೆ ಗುರುಗಳು ಸಮಾಜದಿಂ
ಹೊರಗೆಳೆದರಾ ಮೂರ್ಖನ ॥ ೧೨೪

೪

ತೆರಳಿದನು ದಾನಯ್ಯ ಪರಮ ಪೀಠಾಧಿಪರ
ಚರಣ ಸನ್ನಿಧಿಗಂದು ತನ್ನೆಲ್ಲ ತಪ್ಪುಗಳ
ಮರೆಮಾಚಿ ಸಭ್ಯನಿವನೆಂಬಂತೆ ನಟಿಸುವನು ಗುರುವರರ
ಬಳಿಯೊಳಲ್ಲಿ ।
ಗುರುವರರ ವರಕೃಪೆಯು ದೊರಕಿಹುದು ತನಗಿಂದು
ಪರಿಪೂತ ನಾನೆಂದು ಚರಿಸುತಿರಲುರ್ವಿಯೊಳ್
ನೆರೆತಿಳಿದು ಮತ್ತಿದನು ರಾಚವಟ ಗುರುವರರು ತಾವೆಂದು
ಕೆರಳಿದರಲಾ ॥ ೧೨೫

೫

ನೆರೆ ಬಹಿಷ್ಕೃತನಾದ ದುರುಳದಾನಯ್ಯನಿಗೆ
ನೆರವಿತ್ತು ಸಹಕರಿಸೆ ವಿಹಿತವಲ್ಲವು ನಿಮಗೆ
ಸರಿದೋರದೆಮಗೆಂದು ಸೂಚಿಸಿರೆ ತಾವೆಂದು ರಾಚವಟ
ಗುರುವರ್ಯರು ।
ಪರಮಪೀಠಾಚಾರ್ಯರಿದನರಿತು ಬೆಚ್ಚುತಂ
ಮರುಳನಂ ನೆರೆನಂಬಿ ಮರುಳಾದವೆಲೆ ದೇವ
ಮರೆದೆಮ್ಮ ತಪ್ಪುಗಳ ಮನ್ನಿಸೆನೆ ಬಿನ್ನೈಸೆ ರಾಚವಟ
ಗುರುವರರೊಳು ॥ ೧೨೬

೬

ಸೌಂದರ್ಯದಿಂದೊಪ್ಪುತಿಹ ಚಿತ್ರದುರ್ಗಕ್ಕೆ
ಸಂದಿರ್ದ ಸೀಮೆಯೊಳು ಹದಿನೇಳು ಗಡಿಸುತ್ತ
ಮುಂದೆಂದು ತಮ್ಮಾಜ್ಞೆಯಂ ಮೀರಿ ಹೆಜ್ಜೆಯಂ
ತಾವಿಡುವುದಿಲ್ಲೆನ್ನುತ ।
ಸಂದ ಸಿಂಹಾಸನದ ಪಟ್ಟದಾಚಾರ್ಯರುರೆ
ಚಂದದಿಂ ಪತ್ರಮಂ ಬರೆದೊಪ್ಪಿಸಿರಲಂದು
ಕುಂದದಲೆ ಸನ್ಮಾನಂ ಮಾಡಿ ಮತ್ತವರ ಗುರುವರರು
ಬೀಳ್ಕೊಟ್ಟರು ॥ ೧೨೭

೭

ತಿಳಿಯಲೀ ಗುರುವರರ ಕೀರ್ತಿಲತೆ ಮಡಲಿರಿದು
ನಳನಳಿಸಿ ಬೆಳೆದಿಳೆಯೊಳೆಲ್ಲೆಡೆಗೆ ಹಬ್ಬಿರಲು
ತಿಳಿದದನು ಮುಮ್ಮಡಿಯ ಕೃಷ್ಣಭೂಪಾಲಕಂ ವಿಖ್ಯಾತ
ರಾಜೇಂದ್ರನು ।
ತಳುವದಲೆ ನಿಜರಾಜಧಾನಿಗಿವರಂ ಕರೆಸಿ
ಕೊಳಲೆಳಿಸಿ ಹರಿಕಾರರೊಡನಂದು ಮೇನೆಯಂ
ಬೆಲೆಬಾಳ್ವ ಮುತ್ತುರತ್ನಂಗಳಂ ಬಿನ್ನಹದ ಪತ್ರಮಂ
ಕಳಿಸಿಕೊಡಲು ॥ ೧೨೮

೮

ವಸುಮತೀಶನು ತೋರಿದತಿಶಯದ ಭಕ್ತಿಗೊಲಿ
ದಸಮಮಹಿಮಾನ್ವಿತರು ರಾಚವಟ ಗುರುವರ್ಯ
ರೊಸೆದೇರಿ ಮೇನೆಯಂ ಸಕಲ ಬಿರುದುಗಳೊಡನೆ
ಮೈಸೂರಿಗಾಗಮಿಸಲು ।
ಒಸೆದು ಮುಮ್ಮಡಿಕೃಷ್ಣ ಭೂಪಾಲ ತಾ ಬಂದು
ನೊಸಲೊತ್ತಿ ಗುರುಪಾದದೆಡೆಯಲ್ಲಿ ನಮಿಸುತ್ತ
ಭಸಿತಧರನಂತೆಸೆವ ಗುರುವರರನರಮನೆಗೆ
ಕರೆದೊಯ್ದನುತ್ಸವದೊಳು ॥ ೧೨೯

೯

ಸಾರತರದುದ್ಯಾನ ವಿಸ್ತಾರವೀಥಿಗಳು
ತೋರುತಿರಲುನ್ನತದ ಸೌಧಂಗಳಿಂದ ಮೈ
ಸೂರು ನಗರವಿದು ಬಹುರಮ್ಯಮೆನಲೀಪುರದೆ ಸಿಂಗರದ
ಹಂದರಗಳು ।
ಓರಣದ ತೋರಣಂ ರಂಗವಲ್ಲಿಗಳಿಂದ
ತೋರುತಲಿ ಶೋಭಾಯಮಾನಮೆನೆ ಗುರುಗಳಂ
ಭೂರಿವಾದ್ಯಗಳಿಂದ ಸಕಲಬಿರುದುಗಳೊಡನೆ ಸಂಭ್ರಮದೆ
ಕರೆತಂದನು ॥ ೧೩೦

೧೦

ಅರಸನಾಗುರುವರರನರಮನೆಗೆ ಕರೆದೊಯ್ದು
ಉರುತರದ ಭಕ್ತಿಯಿಂ ಪಾದಪೂಜೆಯ ಮಾಡಿ
ಪರಿತುಷ್ಟಿಗೊಳಿಸುತಿರೆ ಗುರುವರರು ತ್ರೈಮಾಸ ಪುರದೆ
ನೆಲಸಿರ್ದರು ।
ಅರಸನೆಸಗಿರ್ದತುಳ ಭಕ್ತಿಯಂ ತ್ಯಾಗಮಂ
ಗುರುವರರು ಮನಗಂಡು ಹರುಷದಿಂದರಸನಿಗೆ
ಪರಮಸಂಪದವೊದಗಿ ಸೊಗದಿಂದ ಬಾಳೆಂದು ಹರಸಿದರು
ಮನಮೆಚ್ಚುತೆ ॥ ೧೩೧

೧೧

ಆನೆಯಂ ಕುದುರೆಯಂ ಧನಕನಕ ವಸ್ತುವಂ
ದಾನವಾಗಿತ್ತಗಡ ಕಾಣಿಕೆಯ ರೂಪದಿಂ
ಸಾನುರಾಗದೊಳರಸ ರಾಚವಟಿ ಗುರುಗಳಿಗೆ ಪತ್ರಶಾಸನವ
ಬರೆಸಿ ।
ದಾನವೆನಲೀರಾಜ ಕಾಣಿಕೆಯ ರೂಪದಿಂ
ತಾನಿತ್ತುದೆಲ್ಲಮಂ ಸ್ವೀಕರಿಸಿ ಗುರುವರರು
ಮೇನೆಯಂ ತಾವೇರಿ ಗಮಿಸಿದರು ನಲವಿನಿಂ ಮರಳಿ
ಚಿನ್ಮೂಲಾದ್ರಿಗೆ ॥ ೧೩೨

೧೨

ವರಬೃಹನ್ಮಠದಲ್ಲಿ ರಾಚವಟಿ ಗುರುವರರು
ಗುರುಲಿಂಗ ಜಂಗಮರ ನಿತ್ಯದಾಸೋಹಮಂ
ತರಿಸಂದು ನಡೆಸುತಿರಲರಿವಾಯ್ತು ಶಿವನಲ್ಲಿ ಬಯಲಪ್ಪ
ದಿನವವರಿಗೆ ।
ತರಿಸಿದರು ಶೂನ್ಯ ಸಂಪಾದನೆಯ ಕೃತಿಯನದ
ನೆರೆದ ಭಕ್ತರಿಗರುಹುತದರರ್ಥಮಂ ಮುದದಿ
ಬೆರೆದು ಶಿವನಲ್ಲಿ ಬಯಲಾದರೆನೆ ಭಕ್ತಜನರಲ್ಲಿ
ಜಯಜಯವೆನುತಿರೆ ॥ ೧೩೩

ಶ್ರೀ ಸಾವಳಗಿ ಗುರುಶಾಂತಸ್ವಾಮಿಗಳು

(೧೯ ನೇ ಪಟ್ಟ)

೧

ಪಾವನಕೆ ಪಾವನಂ ಶೂನ್ಯಸಿಂಹಾಸನವು
ಪಾವನಾತ್ಮರಿಗಲ್ಲದನ್ಯರಿಗೆ ಸಲ್ಲದಿದು
ಭಾವಿಸಲು ಜಗದ ಗುರು ರಾಚವಟಿ ಗುರುವರರ ಬಳಿಕ ಮೀ
ವಿಷ್ಟರವನು ।
ಕೋವಿದರು ತಾವೆನಿಪ ಸಕಲ ಶಾಸ್ತ್ರಂಗಳೊಳು
ಸಾವಳಿಗೆ ಗುರುಶಾಂತದೇಶಿಕರು ತಾವೇರಿ
ಭೂವಲಯದೊಳು ಮೆರೆದರತುಳ ವೈಭವದಿಂದ ಸರ್ವಜನ
ಪೂಜ್ಯರೆನಿಸಿ ॥ ೧೩೪

೨

ಶಿವನಲ್ಲಿ ಬಯಲಾಗೆ ರಾಚವಟಿ ಗುರುವರರು
ಭವದೂರಮೆನಿಸಿರ್ಪ ಶೂನ್ಯಸಿಂಹಾಸನಕೆ
ಸುವಿಲಸತ್ ಪ್ರಭುವಿಲ್ಲದಾಗಿರಲು ಮುಮ್ಮಡಿಯ
ಕೃಷ್ಣಭೂಪಾಲಕರಂದು ।
ತವ ಸನ್ನಿಧಿಯೊಳಿರ್ದ ಬಸವಲಿಂಗಯ್ಯನಂ
ಜವದಿತಾಂ ಕಳಿಸಿಕೊಡೆ ಪಟ್ಟವೇರಲ್ಕೆಂದು
ಶಿವಭಕ್ತಜನತೆಗಿದು ಸರಿದೋರದಂತಾಗಲಾ ಜನತೆ
ಸಿಡಿದೆದ್ದರು ॥ ೧೩೫

೩

ಅಂದಿಗಾ ಮೈಸೂರ ರಾಜ್ಯದಾಡಳಿತವದು
ಹಿಂದಿರ್ದ ರಾಜರಿಂ ಕೈತಪ್ಪಿ ಮತ್ತಿಂದು
ಸಂದುದಾಂಗ್ಲೇಯರಿಗೆ ವಿಕ್ಟೋರಿಯಾ ರಾಣಿಯಧಿಕಾರ
ಕೊಳಪಟ್ಟಿರೆ ।
ನೊಂದ ಜನ ದೂರನಿದ ರಾಣಿಗೊಪ್ಪಿಸಲಂದು
ಅಂದಿನಾ ಮುರುಘೇಶನಿತ್ತ ಸಂದೇಶದೊಲು
ಸಂದ ಜನವೊಪ್ಪಿರ್ದ ವಟುವರನೆ ಸರಿಯೆಂದು ರಾಣಿ
ನಿರ್ಣಯವನಿತ್ತಳು ॥ ೧೩೬

೪

ಶಿವಯೋಗ ಸಾಮ್ರಾಜ್ಯ ಸಾರ್ವಭೌಮರು ನೋಡೆ
ಭವದೂರರವಿಕಲರು ಸುಮನಸಪ್ರಿಯರಿವರು
ಅವಿರಳ ಜ್ಞಾನಿಗಳು ಸತ್ಯಸಂದರು ಶಾಂತರುರು
ವಿವೇಕಿಗಳಮರ್ತ್ಯರು ।
ಇವರೊಳಿಂತೊಪ್ಪುತಿಹ ವಿಮಳತರ ಸದ್ಗುಣದ
ನಿವಹಮಂ ಮನಗಂಡು ಷಟ್‌ಸ್ಥಲದ ಪಟ್ಟಕ್ಕ
ಮಿವರರುಹರೆಂದೆನುತ ಜನತೆಯಿವರಂ ಪಟ್ಟದೊಳಗಿರಿಸಿ
ಮೆರೆಸಿದರಲಾ ॥ ೧೩೭

೫

ಪಟ್ಟವೇರಿದ ಬಳಿಕ ಗುರುಶಾಂತದೇಶಿಕರು
ನೆಟ್ಟನೆನೆ ಮಠದ ಪಡುವಣ ದಿಸೆಯೊಳೊಪ್ಪಿರ್ದ
ದಟ್ಟಡಿವಿಯಂ ಕಡಿಸಿ ಚಿದಾರಣ್ಯಮೆಂಬುದ್ಯಾನಮಂ
ವಿರಚಿಸುತಲಿ ।
ಕಟ್ಟಿಸಿದರಾವನದ ಮಧ್ಯದೊಳ್ ಕಂಗಳಿಗೆ
ಕಟ್ಟಿದಂತಿರ್ದ ಸುಂದರದ ಭವನಮಂ ತಾಂ
ಕೊಟ್ಟಹರು ಮತ್ತದಕೆ ಚಿದ್ವಿಲಾಸಮದೆಂಬ ನಾಮಮಂ
ತಾವಲ್ಲಿ ನೆಲೆಸಿರ್ಪರು । ೧೩೮

೬

ಸ್ವಾದಿಯ ದೊರೆಗುವರ ಬಸವಲಿಂಗರಸುತಾಂ
ಮೋದದಿಂ ಮದುವೆ ಸಂಬಂಧಮಂ ಮಲತಾಯಿ
ಆದರಿಸದಿಹಳೆಂಬ ದೂಸರಿಂ ಮನದೆ ದುಗುಡುವನಾಂತು
ಮುರುಘಮಠಕೆ ।
ಐದಿದಂ ಮತ್ತವನು ಗುರುಶಾಂತ ದೇಶಿಕರ
ಪಾದದೆಡೆಯೊಳು ಬಿದ್ದು ತನ್ನಿರವ ನಿರವಿಸಲು
ಆ ದಯಾಮಯರಂದು ಮನಕರಗಿ ಬುದ್ಧಿವಾದವನೊರೆದು
ಶಾಂತಗೊಳಿಸೆ ॥ ೧೩೯

೭

ಪುಂಗನೂರಿನೊಳಿರ್ಪ ದೊರೆಗುವರಗೊಪ್ಪುತಿಹ
ಮಂಗಳದ ಕನ್ಯೆಯಂ ತಂದು ಮದುವೆಯ ನೆಗಳೆ
ಸಿಂಗರದ ದಂಪತಿಗಳೊಲಿದು ಗುರುಸೇವೆಯೊಳು ನಿರತರಾಗಿರೆ
ಮಠದೊಳು ।
ತುಂಗಚರಿತರು ನೋಡೆ ಕರೆಸಿಕೊಂಡರು ಬಸವ
ಲಿಂಗರಾಜನ ಸಾಕುತಾಯಿಯಂ ನೀನೀ ಸು
ಮಂಗಲೆಯು ಮೇಣ್ ತನಯನಂ ಸಹಕರಿಸಿ ಬಾಳೆಂದು
ಪೇಳಿ ಬೀಳ್ಕೊಟ್ಟರು ॥ ೧೪೦

೮

ಬಸವಪ್ಪನೆಂಬುವಂ ಹೊಳಲಕೆರೆಯವನೀತ
ಮಿಸುಪ ಮುರುಘಾಪೀಠದೊಳಗಿವನಿಗತಿ ಭಕ್ತಿ
ವಿಷಮ ವಿದ್ವೇಷವದು ಗುರುಶಾಂತ ದೇಶಿಕರೊಳತಿಯಾಗಿ
ಬೆಳೆದುದೇಕೋ ।
ರಸೆಯರಿಯಲೀ ವಿಷದ ಸೇಡು ತೀರಿಸಿಕೊಳಲು
ಬಸವಪ್ಪನುಜ್ಜಯನಿ ಪೀಠಾಧಿಕಾರಿಗಳ
ನೊಸೆದು ತನ್ನೂರಿಂಗೆ ಕರೆಸಿ ಮೆರವಣಿಗೆಯಂ
ನೆಗಳುತಿರಲಾ ಸಮಯದೆ ॥ ೧೪೧

೯

ಬಸವಪ್ಪನತಿ ಮುದ್ದು ಹಿರಿಗುವರ ತಾ ನೋಡ
ಲಸುವ ನೀಗಿದನಂದು ಬಾವಿಯೊಳು ಬಿದ್ದೆಂಬ
ಅಶುಭ ವಾರ್ತೆಯ ಕೇಳಿ ದೆಸೆಗೆಟ್ಟು ಶವದೆಡೆಗೆ ತಾನೋಡಿ
ಬಂದು ನೋಡಿ ।
ಬಸವಳಿದು ಬಾಯೊಣಗಿ ಮನನೊಂದು ಗೋಳಿಟ್ಟು
ತುಸು ಧೈರ್ಯಮಂ ಕೊಂಡು ಶವದ ಸಂಸ್ಕಾರಮಂ
ಬಸವಪ್ಪ ತಾನೆಸಗಿ ಬಳಿಕಮಾ ಗುರುಶಾಂತ ದೇಶಿಕರ
ಮರೆಹೊಕ್ಕನು ॥ ೧೪೨

೧೦

ಬಿಡದೆನ್ನ ಕಾವುದೈ ಗುರುದೇವ ನಾನಿಂದು
ಜಡಮತಿಯು ಗುರುವಿಂಗೆ ದ್ರೋಹಮಂ ಬಗೆದಿರ್ಪ
ಕಡುಮೂರ್ಖನತಿಪಾಪಿ ಮರೆದೆನ್ನ ನೂರಾರು ತಪ್ಪುಗಳ
ಮನ್ನಿಸೆನುತ ।
ಕಡುದೈನ್ಯದಿಂ ಬೇಡಿಕೊಳಲಂದು ಗುರುದೇವ
ಒಡೆಯರಾ ಗುರುಶಾಂತ ದೇಶಿಕರ ಮನಕರಗಿ
ನಡೆ ನುಡಿಯೊಳೊಳ್ಳಿದನು ನೀನಾಗಿ ಬಾಳೆಂದು
ಹಿತವಚನಮಂ ನುಡಿದರು ॥ ೧೪೩

೧೧

ಗುರುಶಾಂತ ಮುನಿವರರ ಕರೆಸಿ ನಿಜಪುರಕೆ ತಾಂ
ಮೆರೆಸಬೇಕೆಂಬಿಚ್ಛೆ ತನಗುದಿಸಿ ಬರಲಂದು
ಗುರುಗಳಂ ಬಿನ್ನೈಸಿಕೊಳಲೊಪ್ಪಿ ಹೊಳಲಕೆರೆಗವರಿರದೆ
ಪಯಣ ಬೆಳಸೆ ।
ಬರುತಿರಲು ಮಾರ್ಗದೊಳು ಕೆಲರು ವೈದಿಕರಲ್ಲಿ
ಬಿರುದುಗಳನೆಲ್ಲಮಂ ಬಳಸಲಾಗದದೆಂದು
ಕೊರಚಾಡೆ ಲೆಕ್ಕಿಸದೆ ಗುರುವರರು ಹೊಳಲಕೆರೆ ಪುರವರಕೆ
ಸಾರ್ದರಂದು ॥ ೧೪೪

೧೨

ಬಳಿಕಮಾ ಗುರುಶಾಂತ ಯತಿವರರು ತಮಗಿರ್ಪ
ಸಲೆ ಸಕಲ ಬಿರುದುಗಳನೊಡೆವೆರೆದು ಮೆರೆಯುತಿಹ
ಸಲುವಳಿಯು ತಮಗಿರ್ಪುದಂ ತೋರಿ ವೈದಿಕರ ಬಾಯ್ತಡೆದು
ನಿಲ್ಲಿಸಿದರು ।
ಘಳಿಲನಾ ಪುರವರದೆ ಭಕ್ತಿಯಿಂ ಬಸವಪ್ಪ
ನೊಳಕೊಂಡ ಪುರದಜನಮೆಲ್ಲರುಂ ಸಲೆಸಂದು
ನಲವಿನಿಂ ಮೆರೆಸಿದರು ಸಕಲ ಬಿರುದುಗಳೊಡನೆ
ಗುರುಶಾಂತ ಮುನಿವರರನು ॥ ೧೪೫

೧೩

ಸಿರಸಿಯೆಂಬೂರಿನಲ್ಲಿ ಬಣ್ಣದಾ ಮಠದಲ್ಲಿ
ಚರಮೂರ್ತಿ ತಾನೊಬ್ಬ ಪಚ್ಚ ಕಂಥೆಯ ಪೆಸರ
ಮುರಿಗಯ್ಯನೆಂಬುವಂ ತಾನೆ ಗುರುವನ್ಯಗುರುವಿಲ್ಲೆಂಬ
ಹಮ್ಮಿನಿಂದ ।
ಮೆರೆಯುತಿರೆ ಕೇಳ್ದಿದನು ಗುರುಶಾಂತ ಯತಿವರರು
ಕರೆಸಿ ಬುದ್ಧಿಯ ಪೇಳೆ ಕೇಳದಿರಲಾತಂಗೆ
ನೆರೆ ಬಹಿಷ್ಕಾರಮಂ ತಾವೀಯೆ ಸತ್ತ ಬಳಿಕೊಯ್ದರವನಂ
ಹೊಲೆಯರು ॥ ೧೪೬

೧೪

ಶಿವನಲ್ಲಿ ಬಯಲಪ್ಪದಿನವವರಿಗರುಹಾಗೆ
ಶಿವಭಜನೆಯುಂ ಶಿವಾನುಭವ ಗೋಷ್ಟಿಯುಂ ಮೇ
ಣವಿರತಂ ಶಿವಕೀರ್ತನಂಗಳಂ ಮಠದಲ್ಲಿ ನಡೆಸುತಿರಲತಿಶಯ
ಮೆನೆ ।
ಶಿವಶಾಸ್ತ್ರಬಲ್ಲವರು ಗೋಮುಖ ಸಮಾಧಿಯಂ
ತವಕದಿಂ ವಿರಚಿಸಲು ಗುರುಶಾಂತಗುರುವರರು
ಶಿವನಲ್ಲಿ ತಾವೈಕ್ಯರಾಗುತಿಹ ಸೋಮವಾಸರೆ
ಸನ್ನಿಹಿತವಾಗಿರೆ ॥ ೧೪೭

೧೫

ಗುರುಶಾಂತ ಯತಿವರ್ಯರೀ ಶೂನ್ಯಪೀಠಕ್ಕೆ
ಸರಿಯಾದ ವಟುವರರನಾರಿಸಲು ಬಗೆದು ತವ
ಕರುಣೆಯಿಂ ಬೆಳೆದಿರ್ಪ ಸಣ್ಣ ಪಾದದ ಚನ್ನವೀರ
ವಟುವರರನಂದು ।
ಕರೆಸಿ ಪೀಠದೊಳಿರಿಸಿ ಪಟ್ಟಮಂ ಕಟ್ಟುತ್ತ
ವರಶಿಖಾಶೈಲಮಂ ಮತ್ತವರ ವಶಕಿತ್ತು
ಕರಮೆಸೆವ ಗೋಮುಖ ಸಮಾಧಿಯೊಳು ನಿಂದವರು
ಪರಶಿವನೊಳೊಂದಾದರು ॥ ೧೪೮

ಶ್ರೀ ಸಣ್ಣಪಾದದ ಚೆನ್ನವೀರಸ್ವಾಮಿಗಳು

(೨೦ ನೇ ಪಟ್ಟ)

೧

ಪರಮ ಚಿನ್ಮೂಲಾದ್ರಿ ಪೀಠಮಂ ಹರುಷದಿಂ
ಗುರುಶಾಂತ ದೇಶಿಕರ ತರುವಾಯ ಧರಣಿಯೊಳ್
ಕರಮೆಸೆವ ಸಣ್ಣಪಾದದ ಚೆನ್ನವೀರೇಂದ್ರ ಗುರುದೇವರೇರಿ
ಮೆರೆದು ।
ವರಜಗದ್ಗುರುವಾಗಿ ವಿಬುಧಜನ ಸೇವಿತಂ
ಕುರುಣಾಬ್ಧಿ ರಾಕಾಸುಧಾಕರಂ ನಿರ್ಮಳಂ
ಶರಣಜನ ರಕ್ಷಕಂ ಸುಭಗರಿವರೆನಿಸುತಂ ವಸುಮತಿಯೊಳೊ
ಪ್ಪಿರ್ದರು ॥ ೧೪೯

೨

ಹಾಲುಮತದವನೀತ ಕೆಂಚೆಲ್ಲಗೌಡನೆನೆ
ಪೇಳಲೀತನವಾಸ ಮಾಯಕೊಂಡವು ನೋಡೆ
ಮೇಲೆನಿಪ ಸದ್ಭಕ್ತಿಯುದಿಸಿರ್ಪುದೀತಂಗೆ ಮುರುಘೇಂದ್ರ
ಪೀಠದಲ್ಲಿ ।
ಲೋಲುಪನು ತಾನಾಗೆ ಗುರುಪಾದ ಪೂಜೆಯೊಳು
ಶೀಲಸಂಪನ್ನನಿವ ಗುರುವರರ ಬೇಡಿ ತ
ನ್ನಾಲಯಕೆ ಕರೆತಂದು ಭಕ್ತಿಯಿಂ ಗುರುಪಾದ ಪೂಜೆಯಂ
ನೆರವೇರಿಸೆ ॥ ೧೫೦

೩

ಗುರುವರರ ಚರಣದೆಡೆ ಬಿದ್ದು ತಾಮತ್ತೆದ್ದು
ಕರಮುಗಿದು ಮನವರಳಿ ಭಕ್ತಿಪರಿವಶನಾಗಿ
ನೆರೆಕುಣಿದು ಹಿರಿದಾದ ಕಾಣಿಕೆಯನೊಲವಿನಿಂ ಗುರುಪಾದ
ಕರ್ಪಿಸಿರಲು ।
ಪರಿಜನರು ಪುರಜನರು ಗುರುಗಳಿಗೆ ನಮಿಸುತ್ತ
ಪರಮಭಕ್ತನು ನೋಡೆ ಕೆಂಚೆಲ್ಲಗೌಡನುಂ
ಗುರುಗಳಾಶೀರ್ವಾದಮಂ ಪಡೆದರಿವರೆಣಿಸೆ ನೆರೆಧನ್ಯರೀ
ಧರೆಯೊಳು ॥ ೧೫೧

೪

ಜಗದಗುರುವೆನಿಸಿರ್ಪ ಚೆನ್ನವೀರೇಶ್ವರರು
ಮಿಗೆ ವಿರಾಜಿಸುತಿರ್ಪ ಸಕಲ ಬಿರುದುಗಳೊಡನೆ
ಯೊಗುಮಿಗೆಯೊಳುತ್ಸವದೆ ಮರಳಿ ಚಿನ್ಮೂಲಾದ್ರಿಗೈತರ್ಪ
ಸಮಯದಲ್ಲಿ ।
ಸೊಗಸಿನಿಂದೊಪ್ಪಿರಲು ವಿಪ್ರಸಂದೋಹವದು
ತಗದಕಾರ್ಯಕೆ ತೊಡಗಿ ಹೊಟ್ಟೆಯುರಿಯಿಂದವರು
ಜಗಳಕ್ಕೆ ಕಾಲ್ಕೆರೆದು ಸಂದಿರಲು ಸೋಲಾಗಿ ಮತ್ತವರು
ಹಿಂಜರಿದರು ॥ ೧೫೨

೫

ಗುರುವರರು ತಾ ವಿಪ್ರಸಂದೋಹಮಂ ಕರೆಸಿ
ಹಿರಿದಾಗಿ ಬುದ್ಧಿಯಂ ಪೇಳುತವರೊಪ್ಪುವೊಲು
ತೆರಳಿದರು ಮುಂದಕ್ಕೆ ವರಬೃಹನ್ಮಠಕಾಗಿ ಸೇರಿದರು
ಮಠವನಲ್ಲಿ ।
ಶರಣಜನ ಪರಿಜನರ ದಾಸೋಹಮಂ ನಡೆಸು
ತಿರಲಲ್ಲಿಯೆಂದಿನೊಲು ಬಹುಕಾಲಮಲ್ಲಿರ್ದು
ಪರಶಿವನೊಳೊಂದಾಗಿ ಬೆರೆದು ಬಯಲಾದರೀ
ಚೆನ್ನವೀರೇಂದ್ರರಂದು ॥ ೧೫೩

ಶ್ರೀ ಮಹಾಲಿಂಗೇಂದ್ರ ಸ್ವಾಮಿಗಳು

(೨೧ ನೇ ಪಟ್ಟ)

೧

ಚೆನ್ನವೀರೇಶ್ವರರ ತರುವಾಯ ಸುಗುಣಸಂ
ಪನ್ನರೆನಿಸಿದ ಮಹಲಿಂಗೇಂದ್ರರೇರುತಂ
ಮನ್ನಣೆಯ ಷಟ್‌ಸ್ಥಲದ ಪೀಠಮಂ ಬಣ್ಣಿಸಲ್ಕಸದಳವಿದೆಂ
ಬಂದದಿ ।
ಚೆನ್ನೆನಲು ಮುರುಘೇಂದ್ರ ಪೀಠದುರುತರ ಕೀರ್ತಿ
ಯುನ್ನತದ ಶಿಖರವನ್ನೇರಿ ಬೆಳಗುವ ತೆರದೆ
ಸನ್ನುತ ಮಹಾಲಿಂಗ ಮುನಿವರರು ತಾವೆಸಗಿ ಜಗದಿ
ಮಹತಿಯ ಪಡೆದರು ॥ ೧೫೪

೨

ಪಟ್ಟವೇರಿದ ಬಳಿಕ ದಿಗ್ವಿಜಯಕೆಳುಸುತಲಿ
ತೊಟ್ಟನೆನೆ ಹೊರಟು ಸಕಲ ಬಿರುದುಗಳೊಡನೆ
ನೆಟ್ಟನೆನೆ ಸಂಚರಿಸಿ ಭಕ್ತರಿಷ್ಟಾರ್ಥಮಂ
ಸಲಿಸುತಾಶೀರ್ವದಿಸುತ ।
ಅಟ್ಟಹಾಸದೆ ಮೆರೆವ ದುಷ್ಟರಂ ದಂಡಿಸುತ
ಹೊಟ್ಟೆಯುರಿಯಿಂದಡ್ಡಬಂದ ವಿಪ್ರರ ಗೆದ್ದು
ಕೊಟ್ಟಿರ್ಪ ಕಾಣಿಕೆಯನೊಪ್ಪದಿಂ ಸ್ವೀಕರಿಸಿ ಮುಂದಕ್ಕೆ
ಪಯಣ ಬೆಳಸಿ ॥ ೧೫೫

೩

ಕರವೆಸೆವ ಸವಣೂರವರ ನವಾಬರು ಮತ್ತೆ
ಸಿರಸಂಗಿ ದೇಸಾಯಿ ಜಾಯಪ್ಪ ಮೊದಲಾದ
ದೊರೆಗಳಿವರಾದರದೆ ಪಾದಪೂಜೆಯ ನೆಗಳಿ
ಕಾಣಿಕೆಯನರ್ಪಿಸಿರಲು ।
ಅರೆಭಾವಿ ನಿಡುಸೂಸಿ ಮಹಲಿಂಗಪುರವರದ
ಚರವರ್ಯರಿಂದಾದರಾತಿಥ್ಯಮಂ ಪರಮ
ಹರುಷದಿಂ ಕೈಕೊಂಡು ತಾವಂದು ಮರಳಿ
ಚಿನ್ಮೂಲಾದ್ರಿಗೈತಂದರು ॥ ೧೫೬

೪

ಉಳವಿ ಸುಕ್ಷೇತ್ರವಿದು ಶಿವಭಕ್ತಿಗಾಗರವು
ತಿಳಿವಿನುಗ್ರಾಣವಿದು ಭವಿಗಳಿಗೆ ದೂರವಿದು
ಚೆಲುವಿನಾ ಚೆನ್ನಬಸವಣ್ಣ ಮೊದಲಾದ
ಶಿವಶರಣರಿಂಗಾಶ್ರಯವಿದು ।
ತಿಳಿಯಾಂತ ಮನದಿಂದಲೀ ಮಹಾಲಿಂಗೇಂದ್ರ
ರುಳವಿಯಾತ್ರೆಗೆ ಹೊರಟರನುಚರರನೊಳಗೊಂಡು
ಬಲ ಸಹಿತವೆಲ್ಲರುಂ ಸುಕ್ಷೇತ್ರಮಂ ಸಾರ್ದು
ಹರುಷಪುಳಕಿತರಾದರು ॥ ೧೫೭

೫

ಚೆನ್ನಬಸವ ಯತೀಶರುನ್ನತ ರಥೋತ್ಸವಂ
ಚೆನ್ನೆನಲು ನೆರವೇರಲಾಕ್ಷಣಂ ನೆರೆದಜನ
ನನ್ನಿಯಿಂ ಸಂತುಷ್ಟಿಬಡಿಸುತ್ತಲೀ ಮಹಾಲಿಂಗೇಂದ್ರ
ಯತಿವರ್ಯರು ।
ಮನ್ನಣೆಯ ಭಕ್ತ ಮಾಹೇಶ್ವರರ ಸಂದೋಹ
ಕುನ್ನತ ವಿಭೂತಿ ಧನಕನಕ ವಸ್ತ್ರಂಗಳಂ
ಭಿನ್ನವಿಲ್ಲದೆ ದಾನವಾಗಿತ್ತು ತೆರಳಿದರು ತಾವೆಂದು
ಸಿರಸಿಂಗಿಗೆ ॥ ೧೫೮

೬

ಗುರುಮಹಾಲಿಂಗೇಂದ್ರ ಯತಿವರರ ಹೆಸರಿನಲಿ
ಮೆರೆಯುತಿರೆ ಬೆಳಗಾವಿಯಲಿ ವಿದ್ಯಾಸಂಸ್ಥೆ
ಗುರುಗಳಿದಕಧಿಕಧನ ದಾನವಾಗಿತ್ತಿಹರು ಹರುಷದಿಂ
ನೋಡಲಂದು ।
ಸಿರಸಂಗಿಯೊಳು ಮಠವ ವಿರಚಿಸುತ ಜಾಯಪ್ಪ
ಗುರುಮಹಾಲಿಂಗೇಂದ್ರ ಮುನಿವರರಿಗರ್ಪಿಸಿರೆ
ಗುರವರರು ತಾವಲ್ಲಿ ಕೆಲಕಾಲ ನೆಲಸಿರ್ದು ಶಿವನಲ್ಲಿ
ಬಯಲಾದರು ॥ ೧೫೯

ಶ್ರೀ ರುದ್ರಸ್ವಾಮಿಗಳು

(೨೨ ನೇ ಪಟ್ಟ)

೧

ಶ್ರೀಮದಚ್ಯುತವೆನಿಪ ಶೂನ್ಯಸಿಂಹಾಸನವ
ನೀ ಮಹಾಲಿಂಗೇಂದ್ರ ದೇಶಿಕರ ತರುವಾಯ
ನೇಮದಿಂ ಶ್ರೀರುದ್ರ ಮುನಿವರರು ತಾವೇರಿ
ವರಜಗದ್ಗುರುವಾಗಿರೆ ।
ಈ ಮಹಿಮರೆಣಿಸಲ್ಕೆ ವಿಶ್ವಸುಪ್ರೇಮಿಗಳು
ಕಾಮನಂ ಮರ್ದಿಸಿದ ಸುಜ್ಞಾನಿ ಸಜ್ಜನ
ಸ್ತೋಮವಾರಿಧಿ ಸೋಮರಿವರೆನಿಸಿ ಮೆರದಿಹರು
ಲೋಕವಿಖ್ಯಾತರಾಗಿ ॥ ೧೬೦

೨

ಭಾರತದೊಳೆಲ್ಲೆಡೆಗೆ ಹರಡಿರಲು ಬರವೆಂದು
ತೋರುತಿರಲೆಲ್ಲೆಲ್ಲು ಜನತೆ ಹಾಹಾಕಾರ
ಭೂರಿಧನಧಾನ್ಯಗಳ ದವಸಗಳನೆಲ್ಲಮಂ ಮಠದಿಂದ
ತರಿಸಿಕೊಂಡು ।
ಸೂರೆಗೊಂಡರು ಜನಕೆ ಮಠದೊಳಿರ್ಪಾನೆಯಂ
ವಾರುವವಂ ಸಿಬ್ಬಂದಿ ವರ್ಗಮಂ ತೆಗೆದಿರ್ಪ
ರೀರುದ್ರ ಮುನಿವರರು ಲೋಕಹಿತಕಾಗೆನಲು
ಪೂಜ್ಯರಿವರೀಧರೆಯೊಳು ॥ ೧೬೧

ಶ್ರೀ ಬ್ಯಾಡಗಿಯ ಮುಪ್ಪಿನ ಸ್ವಾಮಿಗಳು

(೨೩ ನೇ ಪಟ್ಟ)

೧

ನೋಡಲೀ ರುದ್ರೇಶ ಯತಿವರರ ತರುವಾಯ
ರೂಢಿಯೊಳ್ ವಿಖ್ಯಾತ ಮುರುಘೇಂದ್ರ ಪೀಠದೊಳ್
ಬ್ಯಾಡಗಿಯ ಮುಪ್ಪಿನ ಸ್ವಾಮಿಗಳು ಮಂಡಿಸಿದ
ವರ್ಷವದೆ ಶುಭವರ್ಷವು ।
ಪಾಡಳಿದ ಮೈಸೂರ ರಾಜಮನೆತನಕಂದೆ
ಕೂಡಿ ಬಂದಿತು ರಾಜ್ಯದೊಡೆತನವದಾಂಗ್ಲರಿಂ
ನಾಡೆ ತಾ ಪಟ್ಟಾಭಿಷಿಕ್ತರಾದರು ನೋಡೆ
ಚಾಮೇಂದ್ರ ಭೂಪಾಲರು ॥ ೧೬೨

೨

ಸೊಸುತಿಹುದತಿಭಕ್ತಿ ಮೈಸೂರ ದೊರೆಗಳಿಗೆ
ಭಾಸುರಪ್ರದಮಾದ ಮುರುಘೇಂದ್ರ ಪೀಠದೊಳು
ಭಾಸಿಪ ಶ್ರೀ ಮುಪ್ಪಿನಾರ್ಯರಂ ಬಳಿಸಾರ್ದು ಚರಣದೆಡೆ
ಶಿರಬಾಗುತೆ ।
ಪೇಶಲಂ ನಾಲ್ವಡಿ ಶ್ರೀ ಕೃಷ್ಣ ಭೂಮಿಪಂ
ತೋಷದಿಂ ತಾವೆನ್ನ ಪಟ್ಟಕ್ಕೆ ದಯಮಾಡಿ
ಲೇಸನೀಡಲು ಬೇಡುತಿಹೆನೆಂದೊಡೀ ಗರುವಗುರುವರರ
ಘನತೆಯೆನಿತೋ ॥ ೧೬೩

೩

ಬರಮಣ್ಣನೆಂಬುವಂ ಮೆರೆವ ದಾವಣಗೆರೆಯ
ಪುರವರದೆ ವಾಸಿಸುವ ಪರಮಶಿವಭಕ್ತನಿವ
ಹರುಷದಿಂ ಕರೆಸಿದಂ ಶ್ರೀ ಮುಪ್ಪಿನಾರ್ಯರಂ ತನ್ನ
ಮನೆಗಾಸಮಯದೆ ।
ಮರಣ ಶಯ್ಯೆಯೊಳಿರ್ದ ತನ್ನ ಮಗುವಂ ತಂದು
ಗುರುವರರ ಪದದೆಡೆಯೊಳಿಟ್ಟು ಬಿನ್ನೈಸಿಕೊಳೆ
ಗುರುವರರು ಶಿವಪೂಜೆ ಸಮಯದೊಳು ಬಳಿಯಿರಿಸಿ
ರಕ್ಷಿಸಿದರಾಕೂಸನು ॥ ೧೬೪

೪

ಪತಿತ ಪಾವನರೆನಿಪ ಗುರುವರರು ತಮಗೊದಗಿ
ದತಿಶಯದ ನಷ್ಟಮಂ ಲೆಕ್ಕಿಸದೆ ಮತ್ತವರು
ಸತತ ದಾಸೋಹಮಂ ನಿತ್ಯದೀಪಾರಾಧನಂಗಳಂ ಬೇಸರಿಸದೆ।
ಹಿತದಿಂದ ನಡೆಸುತಿರೆ ವರ ಬೃಹನ್ಮಠದಲ್ಲಿ
ಕತಿಪಯ ದಿನಂಗಳಿರ್ದಲ್ಲಿ ಮತ್ತಂದು ತಮ
ಗತಿಹಿತಮೆನಲ್ ಬ್ಯಾಡಿಗೆಗೆ ತೆರಳಿ ತಾವಿರದೆ ಶಿವನಲ್ಲಿ
ಬಯಲಾದರು ॥ ೧೬೫

ಶ್ರೀ ಜಯದೇವ ಮುರುಘರಾಜೇಂದ್ರ ಸ್ವಾಮಿಗಳು

(೨೪ ನೇ ಪಟ್ಟ)

೧

ಕಂದ॥ ಶ್ರೀಶಿವ ಸಮರೂಪಿಗಳೀ
ಭಾಸುರವರ ಮುಪ್ಪಿನಾರ್ಯರಾದ ಬಳಿಕ್ಕಂ ।
ತೋಷದೆ ಜಯದೇವ ಪ್ರಭು
ಭಾಸಿಪ ವರಶೂನ್ಯಪೀಠದೊಡೆತನವಡೆದರ್ ॥ ೧೬೬

೨

ಭಾ॥ ಷ॥ ಸಕಲ ವೇದಾಗಮ ಪುರಾಣ
ಪ್ರಕರವನು ನೆರೆಯರಿತು ಕಾಶಿಯೊ
ಳಖಿಳ ವಿದ್ವನ್ಮಣಿಗಳೊಳು ತಾವಳ ಮಣಿಯೆನಿಸಿ ।
ಪ್ರಕಟರಾಗುತೆ ತಮ್ಮ ಸದ್ಗುಣ
ನಿಕರದಿಂ ಜಾಣ್ಮೆಯೊಳು ಲೋಕವ
ಚಕಿತಗೊಳಿಸಿದರಂದು ಶ್ರೀ ಜಯದೇವ ವಟುವರರು ॥ ೧೬೭

೩

ಈಶಭಕ್ತಿಯೊಳಗ್ರಗಣ್ಯರು
ದೇಶಸೇವೆಯೊಳತಿ ಧುರೀಣರು
ಲೇಸಿಗರು ಮಲ್ಲಪ್ಪ ವಾರದರಿವರೆ ಮೊದಲಾದ ।
ದೇಶಭೂಷಣ ಗಣ್ಯಪುರುಷರು
ತೋಷದಿಂದೀ ಮುರುಘಪೀಠದೊ
ಳಾಸಿಸಿದರಿರಿಸಲ್ಕೆ ಶ್ರೀ ಜಯದೇವ ವಟುವರರ ॥ ೧೬೮

೪

ಇವರೊಳೊಪ್ಪುವ ಸಚ್ಚರಿತ್ರಕೆ
ಇವರೊಳೆಸೆಯುವ ಸದ್ಗುಣಂಗಳಿ
ಗಿವರ ಜಾಣ್ಮೆಗೆ ಮೆಚ್ಚಿ ದೇಶದ ಗಣ್ಯನಾಯಕರು ।
ಭವುಕ ಚಿನ್ಮೂಲಾದ್ರಿ ಪೀಠ
ಕ್ಕಿವರೆ ತಕ್ಕವರೆನುತ ಭಾವಿಸು
ತಿವರಿಗೀ ಪೀಠದೊಳು ಪಟ್ಟವ ಕಟ್ಟಿ ಮೆರೆಸಿದರು ॥ ೧೬೯

೫

ಪಟ್ಟಕಟ್ಟಿದ ಬಳಿಕ ಗುರುಗಳು
ದಿಟ್ಟತನದಿಂ ದೇಶಮಧ್ಯದೆ
ನೆಟ್ಟನೆನೆ ಸಂಚರಿಸೆ ಹೊರಟರು ಭಕ್ತರೆಡೆಗೆಂದು ॥
ದಿಟ್ಟ ಹೊರಳಿತು ಕಂಡರವರೊಳು
ದಟ್ಟಯಿಸಿದಜ್ಞಾನ ತಿಮಿರವ
ನಟ್ಟಸಲು ಜನತೆಯೊಳು ವಿದ್ಯಾಪ್ರಗತಿಯದು ಮುಖ್ಯ ॥೧೭೦

೬

ವೀರಶೈವ ಸಮಾಜದಲ್ಲಿ ವಿ
ಚಾರಿಸಲು ಸಲೆ ಬಿಜ್ಜಗಲಿತವ
ರೂರಿಗೊಬ್ಬರು ದೊರೆಯೆ ದುರ್ಲಭವದನು ತಿಳಿದಂದು ।
ಸಾರಗುಣಿ ಜಯದೇವ ವಿಭುಗಳ
ಪಾರಧನವನು ಬೀಯಮಾಡುತು
ದಾರ ಗುಣದಿಂ ಜನರ ವಿದ್ಯಾಪ್ರಗತಿಗೆಳಸಿದರು ॥ ೧೭೧

೭

ಮಕ್ಕಳೋದಿಂಗೂಟ ವಸತಿಗೆ
ತಕ್ಕ ಸೌಕರ್ಯಗಳನೊದಗಿಸ
ಲಕ್ಕರೆಯೊಳಲ್ಲಲ್ಲಿ ಶಾಲೆ ಪ್ರಸಾದ ನಿಲಯಗಳ ।
ಚೆಕ್ಕಸಂಬೆರಗಾಗೆ ವಿರಚಿಸು
ತಕ್ಕರಿಗರಂ ಮಾಡೆ ಜನತೆಯು
ಚೊಕ್ಕಶ್ರೀ ಜಯದೇವಗುರುಗಳಿಗಾವಗಂ ರಿಣಿಯು ॥ ೧೭೨

೮

ವೀರಶೈವ ಸಮಾಜವಲ್ಲದೆ
ಬೇರೆ ಬೇರೆ ಮತೀಯರೊಳಗು ವಿ
ಚಾರಿಸುವಡೊಂದಿನಿತು ಭೇದವು ತೋರದವರಲ್ಲಿ ॥
ಸಾರಗುಣಿಗಳುದಾರಿಗಳು ಗಂ
ಭೀರರೀ ಜಯದೇವ ವಿಭುಗಳ
ಪಾರಧನವನು ಸೂರೆಗೊಂಡರು ಜನತೆ ಹಿತಕಾಗಿ ॥ ೧೭೩

೯

ನಾಡೆ ವಿದ್ಯಾಹೀನರೆನಿಸಿದ
ಮೂಢ ಜನತೆಯ ಹೃದಯದೊಳು ನಲಿ
ದಾಡಿ ನರ್ತಿಪಳಿಂದು ಸಡಗರದಿಂದಲೆನೆ ವಾಣೀ ।
ಮೂಢರಂ ಪ್ರೌಢರೆನೆ ಮಾಡಿದ
ಗಾಢತರದುರು ಧವಳಯಶವದು
ನೋಡೆ ವಿದ್ಯಾದಾನಿ ಶ್ರೀ ಜಯದೇವ ಯತಿಗಳಿಗೆ ॥ ೧೭೪

೧೦

ಪರಮ ಚಿನ್ಮೂಲಾದ್ರಿಯಂಕಿತ
ಗರುವ ಶಾಖಾಮಠಗಳೆನಿಸಿದ
ವರವಿರಕ್ತರ ಮಠಗಳಲ್ಲಿನ ರೀತಿ ನೀತಿಗಳು ।
ಬರಿದೆ ಲೋಗರ ಮನೆಗಳಂದದೊ
ಳಿರುವುದನು ಗುರುವರರು ಕಂಡರು
ಚರಿಸುತಿರೆ ದಿಗ್ವಿಜಯ ಕಾಲದೆ ದೇಶಮಧ್ಯದೊಳು ॥ ೧೭೫

೧೧

ಮರುಗುತಲಿ ಮನದಲ್ಲಿ ಗುರುಗಳ್
ತ್ವರಿತದಿಂ ಸಚ್ಚರಿತ ಸದ್ಗುಣ
ಭರಿತರಹ ವಿದ್ವಾಂಸರೆನಿಸಿದ ದಕ್ಷವಟುಗಳನು ।
ಕರೆಸಿ ಮಠದೊಳು ನೇಮಿಸುತ ಮ
ತ್ತಿರದೆ ಮಠಗಳ ಸುವ್ಯವಸ್ಥೆಯೊ
ಳಿರಿಸಿದುರುಕೀರ್ತಿಯದು ಶ್ರೀ ಜಯದೇವ ಯತಿಗಳಿಗೆ॥ ೧೭೬

೧೨

ಕೊಡಗು ನಾಡಿನ ದೊರೆಗಳಿಂ ಸಲೆ
ಪಡೆದ ಮಠದುಂಬಳಿಗಳೆಲ್ಲವ
ಪಡೆದು ಕೆಲರಕ್ರಮದೊಳನುಭವಿಸುತ್ತಲಿರೆ ಕಂಡು ।
ಬಿಡದೆ ಹೋರಾಟವನು ಕೈಕೊಂ
ಡೊಡನೆ ಮಠದಾಸ್ತಿಯನು ಹಿಂದಕೆ
ಪಡೆದು ಕೊಂಡರು ಮರಳಿ ಶ್ರೀ ಜಯದೇವ
ಗುರುವರರು ॥ ೧೭೭

೧೩

ದುಡುಮೆ ಮಾಡಲು ವಣಿಜ ವರ್ಗಕೆ
ಕಡವ ಕೊಡುತಲಿ ಧನದ ರೂಪದಿ
ಪಡೆದು ಮತ್ತವರಿಂದ ಬಂದಾದಾಯದಿಂದಂದು ।
ಬಿಡದೆ ಮಠದಾದಾಯ ಹೆಚ್ಚಿಸಿ
ಕಡೆಗೆ ಭಕ್ತಹಿತಾರ್ಥಕಾಗಿಯೆ
ಕೊಡುವರದನೆಲ್ಲವನು ಶ್ರೀ ಜಯದೇವ ವಿಭುವರರು ॥ ೧೭೮

೧೪

ಬಳಿಕ ರೋಗದ ಮೂಲವೆನು ಸಲೆ
ತಿಳಿವಡವರು ಪ್ರಯೋಗ ಶಾಲೆಯ
ತಳುವದಲೆ ವಿರಚಿಸಲು ಧನವನು ದಾನವಾಗಿತ್ತು ।
ಇಳೆಗೆ ಮಹದುಪಕಾರಗೈದರು
ಸುಳಿದು ನಲ್ವೆಸರಾಂತ ಶಾಲೆಯು
ಬೆಳಗುತಿದೆ ಮೈಸೂರ ನಗರದೊಳಮೃತ ಕಲಶದೊಲು॥ ೧೭೯

೧೫

ನೋಡೆ ರಾಷ್ಟ್ರಪಿತಾಮಹಾರಹ
ರೂಢಿಯೊಳ್ ಪ್ರಖ್ಯಾತರೆನಿಸಿದ
ಗಾಢದಿಂ ಭಾವೈಕ್ಯಗೊಳಿಪ ಮಹಾತ್ಮಗಾಂಧಿಯರು ॥
ನಾಡೆ ಸಂದರ್ಶಿಸುತಲಿವರನು
ಕೂಡೆ ವಂದಿಸಿ ಮತ್ತೆ ಸಲೆ ಕೊಂ
ಡಾಡಿ ಗೌರವಿಸಿದರು ಶ್ರೀ ಜಯದೇವ ಯತಿವರರ ॥ ೧೮೦

೧೬

ದೇಶದೊಳ್ ಪ್ರಖ್ಯಾತರೆನಿಸಿ ವಿ
ಶೇಷ ಗೌರವ ಪಡೆದರಿರ್ವರು
ದೇಶ ಹಿತಚಿಂತಕರು ಮತ್ತಾಧರ್ಮರಕ್ಷಕರು ।
ಲೇಸನೆಳಸುವ ಮಾತುಕತೆಗಳ
ನಾ ಸುಧಾರಕರಾಡಿದರು ಸಂ
ತೋಷದಿಂ ಹಾವೇರಿಪುರದೊಳಗಂದು ಕೆಲನಿಮಿಷ ॥ ೧೮೧

೧೭

ಶೀಲದೊಳು ಬಾಳುತಿಹ ಜನರೊಳು
ಮೇಲು ಕೀಳುಗಳೆಂಬುದಿಲ್ಲವು
ಶೀಲದಿಂ ಹೊರತಾದ ಜನಕೆಯದೆಲ್ಲ ಕೀಳಹುದು ।
ಮೇಲು ಕೀಳುಗಳರಸುವಡೆ ಗುಣ
ಶೀಲಗಳು ಬಹುಮುಖ್ಯವಲ್ಲದೆ
ಪೇಳೆ ಹುಟ್ಟಿನ ಕುಲವು ಕಾರಣವಲ್ಲ ಜನತೆಯೊಳು ॥ ೧೮೨

೧೮

ಕೊಲುವವನು ಮಾದಿಗನು ಮತ್ತಾ
ಹೊಲಸು ತಿಂಬುವರೆಲ್ಲ ಹೊಲಯರು
ಸಲೆ ಸಮಸ್ತರ ಲೇಸನೆಳಸುವನಾತ ಕುಲಜನಲಾ ।
ಚೆಲುವ ನುಡಿಗಳೊಳೀ ಜಗದ್ಗುರು
ಸುಲಭದೊಳಗೊಪ್ಪಿಸಲು ಮೆಚ್ಚುತೆ
ತಲೆಯ ತೂಗಿದರಂದು ಗಾಂಧಿ ಮಹಾತ್ಮರೀನುಡಿಗೆ ॥ ೧೮೩

೧೯

ಭಾರತದ ಬಹುಭಾಗದೊಳು ಸಂ
ಚಾರವನು ಕೈಕೊಂಡು ಭಕ್ತೋ
ದ್ಧಾರ ಕಾರ್ಯದೆ ನಿರತರಾಗಿರಲಂದು ಗುರುವರರು ।
ಶೂರಿಗಳು ರಾಜಾಧಿರಾಜರು
ದಾರಿಗಳು ಮತಿಗಳು ಭಕ್ತಿಭಾವದೆ
ಗೌರವಿಸಿದರು ಭೂರಿಕಾಣಿಕೆ ಸಲಿಸಿ ಗುರುವರರ ॥ ೧೮೪

೨೦

ಧಾರಿಣಿಯೊಳಪ್ರತಿಮರೀ ವೈ
ಸೂರ ನಾಲ್ವಡಿ ಕೃಷ್ಣರಾಯರು
ಭೂರಿ ಗುರುಸಂದರ್ಶನಾಕಾಂಕ್ಷಿತರು ತಾವಾಗಿ ।
ಸಾರ ಚಿನ್ಮೂಲಾದ್ರಿಯನು ತಾಂ
ಸೇರಿ ಗುರುದರ್ಶನವ ಪಡೆದು
ದ್ಗಾರ ತೆಗೆದರು ಧನ್ಯನಾದೆನುತ್ತ ಹರುಷದೊಳು ॥ ೧೮೫

೨೧

ರೋಗ ಮೂಲವ ತಿಳಿವ ಶಾಸ್ತ್ರ ಪ್ರ
ಯೋಗಶಾಲೆಯ ನಿರ್ಮಿಸುವ ಸಲು
ವಾಗಿಯಾ ಕಟ್ಟಡದ ಶಂಕುಸ್ಥಾಪನೋತ್ಸವಕೆ ।
ಆಗಳಾ ಜಯದೇವ ವಿಭುಗಳ
ಬೇಗದಿಂ ನಗರಕ್ಕೆ ಕರೆಸಿ ಸ
ರಾಗದಿಂ ಸಲೆ ಗೌರವಿಸಿದರು ಕೃಷ್ಣ ಭೂವರರು ॥ ೧೮೬

೨೨

ಸ್ವಾಮಿ ಶ್ರೀ ಜಯದೇವ ವಿಭುವರ
ರೀ ಮಹಿಮೆಯೊಳಪ್ರತಿಮ ಭಕ್ತ
ಸ್ತೋಮ ವಾರಿಧಿ ಸೋಮ ಯತಿಕುಲ ಸಾರ್ವಭೌಮರಲಾ ।
ನಾಮಹಿಮರಿವರೆಣಿಸೆ ವಿಶ್ವ
ಪ್ರೇಮಿಗಳು ಸಚ್ಚರಿತ ಸದ್ಗುಣ
ಧಾಮರಿವರಂ ಪೊಗಳಲೆನ್ನಳವಲ್ಲವೀಧರೆಯೊಳ್ ॥ ೧೮೭

೨೩

ಅಂಬುಧಿಯೊಳಡಗಿರ್ದ ಜಲಮಂ
ಅಂಬುಜಾಕ್ಷನು ತನ್ನ ಕರದಿಂ
ದಂಬರಕೆ ಸೆಳೆದದನು ಮತ್ತಾ ಮಳೆಯ ರೂಪದೊಳು ।
ಅಂಬುಧಿಗೆ ಸುರಿವಂತೆ ಭಕ್ತ ಕ
ದಂಬ ತಮಗರ್ಪಿಸಿದ ಧನವನು
ತುಂಬಿ ಕೊಡುವರು ಭಕ್ತ ಹಿತಕದ ಮತ್ತೆ
ಗುರುವರರು ॥ ೧೮೮

೨೪

ಲೋಗರಂತಿವರಲ್ಲಿ ನಡೆನುಡಿ
ಸಾಗಿಬಂದರು ಪಾರಮಾರ್ಥಿಕ
ಭಾಗಕೇನೊಂದಿನಿತು ಕೊರತೆಯು ತಾಗದಿವರಲ್ಲಿ ।
ಜಾಗತಿಕ ಕಾರ್ಯಗಳು ನೆರೆ ಶಿವ
ಯೋಗದೊಳು ಬೆರೆತು ಬರೆ ಶಿವ
ಯೋಗಿಯಲ್ಲವೆ ನಮ್ಮ ಶ್ರೀ ಜಯದೇವ ಯತಿವರರು ॥ ೧೮೯

೨೫

ಹೂವಿನೊಳು ಪರಿಮಳವು ಬೆರೆದೊಲು
ಭಾವದೊಳು ನೆರೆ ಪಾರಮಾರ್ಥವು
ತೀವಿಕೊಂಡದು ಬೆಳಗುತಿರ್ಪುದು ಪಾವನಾತ್ಮರೊಳು ।
ಆವಗಂ ಸಲೆ ಭಕ್ತಜನ ಸಂ
ಜೀವಿನಿಯು ತಾವೆನಿಸಿ ಶ್ರೀ ಜಯ
ದೇವವಿಭುಗಳು ಭಕ್ತ ರಕ್ಷಣೆಗಾಗಿಯುದಿಸಿಹರು ॥ ೧೯೦

೨೬

ಬೆಳಗುತೀಮಠದಮಳ ಕೀರ್ತಿಯು
ಸುಳಿದದೆಲ್ಲೆಡೆ ದಿಗ್‌ದಿಗಂತದಿ
ಮೊಳೆತುದೆಲ್ಲೆಡೆ ವೀರಶೈವಾಚಾರ ಸಂಸ್ಕೃತಿಯು ।
ಬೆಳೆದುದತಿ ವಿದ್ಯಾಭಿವೃದ್ಧಿಯು ।
ತೊಲಗಿದುದು ಸಲೆ ಜನರ ಮೌಢ್ಯತೆ
ಬೆಳಗಲೀ ಪಿಠದೊಳು ಶ್ರೀ ಜಯದೇವ ಯತಿವರರು ॥ ೧೯೧

೨೭

ಕಂದ॥ ಶ್ರೀ ಜಯದೇವ ಪ್ರಭುಗಳ್
ಮಾಜದೆ ತಮುತ್ತರಾಧಿಕಾರವನೊಲವಿಂ ।
ಶ್ರೀಜಯವಿಭವರ್ಗೀಯುತ
ಲೀಜಗದೊಳ್ ವಂದ್ಯರೆನಿಸಿ ಬೆಳಗುತ್ತಿರ್ದರ್ ॥ ೧೯೨

೨೮

ಕೆಲದಿನಮಿರಲೀ ಪರಿಯೊಳ್
ಕಳೆದರ್ ನಿಜತನುವಿನಲ್ಲಿ ಮತ್ತಾ ಶಿವನೊಳ್ ।
ಬೆಳಗಲ್ಕಾತ್ಮ ಜ್ಯೋತಿಯು
ಸುಳಿದರ್ ಶಿವನಾಗಿ ಮತ್ತದೆರಡಿಲ್ಲೆಂಬೊಲ್ ॥ ೧೯೩

೨೯

ಈ ಮಹಿಮರ ಗದ್ದುಗೆಯದು
ಕಾಮಿತ ಫಲಮೀವುತಿರ್ಪ ಭವ್ಯಾಗಾರಂ ।
ನೇಮದಿ ಬೆಳಗುತ್ತಿರ್ಕುಂ
ಸ್ವಾಮಿಗೆ ಸುಪ್ರೀತಮಪ್ಪ ದಾವಣಗೆರೆಯೊಳ್ ॥ ೧೯೪

ಶ್ರೀ ಜಯವಿಭವ ಸ್ವಾಮಿಗಳು

(೨೫ ನೇ ಪಟ್ಟ)

೧

ಕಂದ॥ ಶ್ರೀ ಜಯವಿಭವ ಸ್ವಾಮಿಗ
ಳೀಜಗದೊಳ್ ಪೂಜ್ಯಮೆನಿಪ ಮುರುಘಾ ಪೀಠಂ ।
ರಾಜಿಸುತಿರಲಾ ಪೀಠವ
ಮಾಜದೆ ತಾವೇರಿ ಮೆರೆದರೀಧಾರಿಣಿಯೊಳ್ ॥ ೧೯೫

೨

ಭಾ॥ ಷ॥ ವೇದವೇದಾಂತಾಗಮಂಗಳಿ
ವಾದಿಯಾಗಿಹ ಸಕಲ ಶಾಸ್ತ್ರಗ
ಳೋದಿ ಪರಿಣತರಾದ ಶ್ರೀ ಜಯವಿಭವದೇವರೆನೆ ।
ಮೇದಿನಿಯೊಳಿವರೆಣಿಸಲಾಚಾ
ರಾದಿ ಸದ್ಗುಣ ಶೀಲರತಿಮೃದು
ವಾದ ಮಿತಭಾಷಿಗಳು ಶಾಂತರು ಸತ್ಯವಾದಿಗಳು ॥ ೧೯೬

೩

ಲಿಂಗನಿಷ್ಠರು ಬ್ರಹ್ಮಚಾರಿಗ
ಳಂಗಲಿಂಗದ ಸಾಮರಸ್ಯದೊ
ಳಿಂಗಿತವ ತಾವರಿತು ನಡೆವ ಮಹಾ ತಪಸ್ವಿಗಳು ।
ತುಂಗಚರಿತರುದಾರ ಗುಣಿಗಳು
ಮಂಗಳಪ್ರದರಿವರು ಲೋಕದೆ
ಸಾಂಗದಿಂ ಗಳಿಸಿಹರು ದೈವೀ ಸಂಪದಂಗಳನು ॥ ೧೯೭

೪

ಇವರು ಷಡ್ಭಾಷಾ ವಿಶಾರದ
ರಿವರು ಷಟ್‌ಸ್ಥಲ ತತ್ವವೇತ್ತರು
ಇವರು ಸುಜ್ಞಾನಿಗಳು ನೋಡೆ ಶಿವಸ್ವರೂಪಿಗಳು ।
ಭವುಕ ಶ್ರೀ ಜಯದೇವ ಯತಿಗಳ
ನವಿರತಂ ಜಾನಿಸುತ ವಿನಯದೊ
ಳಿವರು ಮಠದುನ್ನತಿಯ ಸಾಧಿಸುತಿರ್ದರರ್ಥಿಯಲಿ ॥ ೧೯೮

೫

ಭಾರತದ ರಾಷ್ಟ್ರದೊಳು ಚೀಣರು
ಮೇರೆಯಿಂ ಸಲೆಮೀರಿ ನುಗ್ಗಿರೆ
ಘೋರ ಸಮರವು ಘಟಿಸಿ ಭಾರತ ಮತ್ತು ಚೀಣರಿಗೆ ।
ಭಾರಿ ಹೋರಾಟವದು ನಡೆದಿರೆ
ವೀರ ಯೋಧರ ಬಲವದಲ್ಲದೆ
ಭೂರಿಧನದಾವಶ್ಯಕತೆಯದು ತೋರೆ ಭಾರತಕೆ ॥ ೧೯೯

೬

ಸಾರಹೃದಯರುದಾರಿಗಳು ಗಂ
ಭೀರರೀಜಯವಿಭವ ದೇವರು
ತೋರೆ ರಾಷ್ಟ್ರಪ್ರೇಮವವರಿಗೆ ಕನಕ ಮಕುಟವನು ।
ತೋರ ಬೆರಳುಂಗುರವನಲ್ಲದೆ
ಭೂರಿ ಧನಮಂ ಕೊಟ್ಟು ದೇಶದ
ವೀರ ಯೋಧರ ಹರಸಿದರು ನಿಜ ರಾಷ್ಟ್ರಹಿತಕಾಗಿ ॥ ೨೦೦

೭

ನಾರಿಕೇಳದ ತರುವ ಮಠದಾ
ವಾರದೊಳಗಡೆ ನೆಟ್ಟು ಬೆಳೆಸಿರ
ಲೋರಣದೆ ಜಯವಿಭವ ದೇವರು ಬಹಳ ಶ್ರಮದಿಂದ ।
ಬೀರುತಿರಲೆಲ್ಲೆಡೆಗೆ ಘಮ ಘಮ
ಸೌರಭವನಾ ಪುಷ್ಪವಾಟಿಯು
ತೋರುತಿದೆ ನೋಡಲಿದು ನಂದನವನವಿದೆಂಬಂತೆ ॥ ೨೦೧

೮

ಕೆಲವು ದಿನಗಳ ಬಳಿಕ ತಮ್ಮಯ
ಸಲೆ ಕಳೇಬರವದನು ನೂಂಕುತ
ಬೆಳಗಿದರು ತಮ್ಮಾತ್ಮದೀಪ್ತಿಯ ಶಿವನೊಳೊಂದಾಗಿ ।
ಬೆಳಗುತಿಹುದಿವರಮಳ ಗದ್ದುಗೆ
ಹೊಳೆಯುತಿರ್ಪಾ ಚಿತ್ರದುರ್ಗದೊ
ಳಿಳೆಯ ಮಂಗಳಧಾಮವೆಂಬೊಲು ವರಬೃಹನ್ಮಠದೆ ॥ ೨೦೨

ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು

(೨೬ ನೇ ಪಟ್ಟ)

೧

ಕಂದ॥ ಶ್ರೀ ಜಯವಿಭವರ ಬಳಿಕಂ
ತೇಜೋನಿಧಿಯಪ್ಪ ಶೂನ್ಯಸಿಂಹಾಸನಮಂ ।
ಸಾಜದೆ ತಾವೇರುತೆ ರಾ
ಜಿಸುತಿಹರಲ್ತೆ ಮಲ್ಲಿಕಾರ್ಜುನ ವಿಭುಗಳ್ ॥ ೨೦೩

೨

ಲೋಕೈಕ ಪ್ರಭುಗಳಿವರ್
ಸಾಕಾರವ ತಾಳ್ದು ಬಂದ ಶಿವನಿವರೆಂಬರ್ ।
ವ್ಯಾಕರಣಾಚಾರ್ಯರಿವರ್
ಭೀಕರ ಭವಹಾರಿ ಮಲ್ಲಿಕಾರ್ಜುನ ವಿಭುಗಳ್ ॥ ೨೦೪

೩

ಕನ್ನಡ ಹಿಂದಿಯು ಸಂಸ್ಕೃತ
ಮಿನ್ನುಳಿದಿಹ ವರ ಮರಾಠ ಭಾಷೆಗಳೊಳು ತಾಂ ।
ಉನ್ನತ ಮಟ್ಟದ ಪಂಡಿತ
ರೆನ್ನಿಸಿ ಕೊಂಡಿರ್ಪರಲ್ತೆ ಮದ್ಗುರುವರ್ಯರ್ ॥ ೨೦೫

೪

ಭಾ॥ ಷ॥ ಕಾಶಿಯೊಳ್ ವ್ಯಾಕರಣ ಶಾಸ್ತ್ರಾ
ಭ್ಯಾಸವನು ಕೈಕೊಂಡು ಮತ್ತೆ
ವಿಶೇಷ ಪ್ರಗತಿಯುವಡೆದು ವೈಯ್ಯಾಕರಣರೆಂದೆನಿಸಿ ।
ತೋಷದಿಂ ವೇದಾದಿ ಶಾಸ್ತ್ರಾ
ಭ್ಯಾಸದೊಳ್ ಪ್ರಗತಿಯನು ಸಾಧಿಸಿ
ದೇಶ ಮಧ್ಯದೆ ಶ್ರೇಷ್ಠ ವಿದ್ವನ್ಮಣಿಗಳೆನಿಸಿಹರು ॥ ೨೦೬

೫

ನೋಡಲಿವರತಿ ವಾಗ್ಮಿಗಳು ಸರಿ
ಜೋಡಿ ಮತ್ತಿಲೆಂಬವೊಲು ಮಾ
ತಾಡುವರು ವೇದಾರ್ಥಕನುಗುಣವಪ್ಪ ನುಡಿಗಳಲಿ ।
ಕೂಡಿಹುದು ಶಿವನಂಶಮಿವರೊಳು
ಗಾಢಮನೆ ಜಯದೇವಮುನಿ ಕೊಂ
ಡಾಡುತಿರ್ದರಂದು ಮತ್ತಿವರಮಳ ಗುಣಗಳನು ॥ ೨೦೭

೬

ಇವರು ಪ್ರತಿಭಾಶಾಲಿಗಳು ಮ
ತ್ತಿವರು ಸುಜ್ಞಾನಿಗಳು ಕುಶಲರು
ಇವರು ಸತ್ಯವ್ರತರು ಷಟ್‌ಸ್ಥಲ ತತ್ವಕೋವಿದರು ।

ಇವರು ಧರ್ಮೋದ್ಧಾರಕರು ಮ
ತ್ತಿವರು ನೋಡಲು ವೀರಶೈವವ
ಭುವನದೊಳ್ ಸಲೆ ಬೆಳಗೆ ಬಂದ ಮಹಾವಿಭೂತಿಗಳು॥ ೨೦೮

೭

ವರ ಜಗದ್ಗುರು ಶೂನ್ಯಪೀಠದಿ
ಮೆರೆವ ಶ್ರೀ ಜಯದೇವ ಯತಿಗಳ
ಪರಮ ನಾಮಾಂಕಿತದ ದಾವಣಗೆರೆಯೊಳೊಪ್ಪುತಿಹ ।
ಗುರುತರಾನ್ವಿತ ವೈದ್ಯ ವಿದ್ಯೆಯ
ನೆರಿಪ ಶಾಲೆಗಪಾರ ಧನವನು
ಧರೆಯರಿಯೆ ತಾವಿತ್ತರೀ ಗುರುವರರು
ಕೊಡುಗೆಯನು ॥ ೨೦೯

೮

ವೀರಶೈವವು ಸಕಲ ಧರ್ಮದ
ಸಾರವೆಂಬುದ ತಿಳಿದು ಮತ್ತೆ ಪ್ರ
ಸಾರ ಕಾರ್ಯಕೆ ತೊಡಗಿ ಹಲಕೆಲ ಧರ್ಮಗ್ರಂಥಗಳ ।
ಚಾರುತರವೆನೆ ಪ್ರಕಟಗೊಳಿಸಿತು
ದಾರಗುಣದಿಂ ಧರೆಗೆ ಮಹದುಪ
ಕಾರಗ್ಯೈದರು ಮಲ್ಲಿಕಾರ್ಜುನ ವಿಭುಗಳವರೆಣಿಸೆ ॥ ೨೧೦

೯

ಹಲವು ವಿದ್ಯಾ ಸಂಸ್ಥೆಗಳು ಮೇಣ್
ಹಲಕೆಲವು ವಿದ್ಯಾರ್ಥಿ ನಿಲಯಂ
ಗಳಿಪ್ರು ಶ್ರೀ ಗುರು ಮಲ್ಲಿಕಾರ್ಜುನ ವಿಭುಗಳಾಶ್ರಯದೆ ।
ಬೆಳಗುತಿಹ ವರಶುಕ್ಲ ಪಕ್ಷದ
ಬೆಳೆವ ಬೆಳುದಿಂಗಳಿನ ತೆರದೊಳು
ತಿಳಿಯಲೀ ಗುರುವರರು ವಿದ್ಯಾ ಪ್ರಗತಿಶೀಲರಲಾ ॥ ೨೧೧

೧೦

ಧರೆಯೊಳೀ ಜಯದೇವ ವಿಭುಗಳ
ಗರುವ ಶತಮಾನೋತ್ಸವವ ತಾಂ
ಪರಮ ವೈಭವದಿಂದ ನೆರವೇರಿಸಲು ಮನದಂದು ।
ಚರಿಸಿ ದೇಶದೆ ಭಕ್ತ ಕೋಟಿಯ
ನೆರವಿಯಿಂ ಬಹು ಧನವ ಗಳಿಸುತ
ಲಿರುವರುತ್ಸಾಹದೊಳು ಶ್ರೀಗುರು ಮಲ್ಲಿಕಾರ್ಜುನರು ॥ ೨೧೨

ಮಂಗಳಂ ಶುಭಂ ಭದ್ರಂ.

ಪರವನರಿದ ಸತ್ಪುರುಷರ ಸಂಗದಿಂದ **ಶಿವ**ಯೋಗದ ವಚನಾಮೃತವನು ಸದ್ಭಕ್ತಿಯುಳ್ಳ ಮಾಹೇಶ್ವರನು ತನ್ನ ಶ್ರೋತ್ರಮುಖದಲ್ಲಿ ಕೇಳಿ,ಮನೋಮುಖದಲ್ಲಿ ಹಾರೈಸಿ, ತೃಪ್ತಿಮುಖದಲ್ಲಿ ಸಂತೋಷವನೆಯ್ದ ಬಲ್ಲಡೆ, ಆ ಸುಖವು ಪರಿಣಾಮವ ನೊಡಗೂಡುವದು. ಹೀಂಗಲ್ಲದೆ ಸಂಸಾರ ವಿಷಯ ರಸವ ತನ್ನ ಹೃದಯಕೂಪ ದಲ್ಲಿ ತುಂಬಿಕೊಂಡಪ್ಪ ಜೀವರ ಕಾಯದಲ್ಲಿ ವಚನಾಮೃತವ ತುಂಬಿಹರೆ, ಭಿನ್ನ ಘಟದಲ್ಲಿ ಉದಕವ ಹೊಯ್ದಂತೆ ಕಾಣಾ ಗುಹೇಶ್ವರಾ.

— ಅಲ್ಲಮಪ್ರಭು.

॥ ಶ್ರೀ ಗುರು ಮುರುಘೇಶಾಯ ನಮಃ ॥

ರಚನೆ:—
ಬಸವೇಶ್ವರ ಶಿವಪ್ಪ ತ[illegible]ಪ್ಪದ
ಗದಗ

ಶ್ರೀ ಜಯದೇವ ಶ್ರೀ ಪಾದಾಷ್ಟಕಂ

ಎನ್ನದೀ ಮಸ್ತಕದಿ ರಾಜಿಪುದು ಶ್ರೀಪಾದ
ಚೆನ್ನಶ್ರೀ ಜಯದೇವ ಮುರುಘೇಂದ್ರ ಶ್ರೀಪಾದ
ಎನ್ನ ಕಣ್ ಮನಭಾವ ತುಂಬಿರುವ ಶ್ರೀಪಾದ
ಉನ್ನತೋನ್ನತ ಕಲೆಯ ವೈಭವದ ಶ್ರೀಪಾದ ॥ ಪ ॥

ಶ್ರೀ ಮುರುಘರಾಜೇಂದ್ರ ಪೀಠ ಬೆಳಗುವ ಪಾದ
ಸ್ವಾಮಿ ಚರಕುಲಸಾರ್ವಭೌಮನೆನಿಸಿದ ಪಾದ
ಕಾಮಿತಾರ್ಥವನಿತ್ತು ಹರುಷಗೊಂಬುವ ಪಾದ
ಪ್ರೇಮದಿಂ ನುತಿಸುವೆನು ಜಯದೇವ ಶ್ರೀಪಾದ ॥ ೧ ॥

ಧರೆಯ ಪಾವನಗೊಳಿಸಲವತಾರ ಶ್ರೀಪಾದ
ಪರಮ ಶ್ರೀ ಶಿವಯೋಗಿ ಕರವರದ ಶ್ರೀಪಾದ
ಶರಣರೆದೆಯಲಿ ನಿತ್ಯ ನರ್ತಿಸುವ ಶ್ರೀಪಾದ
ಗುರು ನಿರಂಜನ ತೇಜ ಜಯದೇವ ಶ್ರೀಪಾದ ॥ ೨ ॥

ಉರಗಾದ್ರಿ ರಜತಾದ್ರಿ ಮೆಟ್ಟಿ ಮೆರೆದಿಹ ಪಾದ
ಹರಸಮಯ ಪರಸಮಯ ಭೇದವಳಿದಿಹ ಪಾದ
ಚರಣಭಕ್ತರಿಗೊಂದೆ ದೃಷ್ಟಿ ಪರುಷದ ಪಾದ
ಮುರುಘ ಶ್ರೀ ಜಯದೇವ ಲೋಕವಿಶ್ರುತ ಪಾದ ॥ ೩ ॥

ಕನಕವೃಷ್ಟಿಯ ಕರೆದು ಸಿರಿಯ ಬೆಳಸಿದ ಪಾದ
ಧನಿಕರಿಗೆ ಸರಸತಿಯ ವೀಣೆ ನುಡಿಸಿದ ಪಾದ
ಘನತರ ಸುವಿದ್ಯಾರ್ಥಿಗಳ ಪೊರೆವ ಶ್ರೀಪಾದ
ಜನಹಿತಕೆ ಸಂಚಾರ ಜಯದೇವ ಶ್ರೀಪಾಪ ॥ ೪ ॥

ವೀರಶೈವರಿಗೆಲ್ಲ ಚಿರನೆನಹು ಶ್ರೀಪಾದ
ವೀರಶೈವಾಚಾರ ಸಂಭ್ರಮದ ಶ್ರೀಪಾದ
ವೀರಶೈವಾಕಾಶ ತಂಬೆಳಗು ಶ್ರೀಪಾದ
ವೀರವಿರತಿಯ ಭಾನು ಜಯದೇವ ಶ್ರೀಪಾದ ॥ ೫ ॥

ಪರಮ ಪಂಚಾಚಾರ ಷಟ್‌ಸ್ಥಲಾತ್ಮಕ ಪಾದ
ಪರತರಷ್ಟಾವರಣವೆಂಗವಾಗಿಹ ಪಾದ
ಸುರುಚಿರಾನಂದದಿಂ ಪೂಜೆಗೊಂಬುವ ಪಾದ
ಹರುಷ ತುಂಬಿದ ನಗೆಯ ಜಯದೇವ ಶ್ರೀಪಾದ ॥ ೬ ॥

ಭಯಭಕ್ತಿ ಭಾಗ್ಯರಿಗೆ ಸುಪ್ರಸನ್ನದ ಪಾದ
ಜಯವೆಂದು ಕನ್ನಾಡ ಕೀರ್ತಿ ಬೆಳಗಿದ ಪಾದ
ಜಯವಿಭವ ಮುರುಘನಲಿ ತನ್ನ ನೋಡಿದ ಪಾದ
ಜಯದೇವ ಶ್ರೀಕಾರ ಓಂಕಾರಮಯ ಪಾದ ॥ ೭ ॥

ಎಲ್ಲಿ ನೋಡಿದಡಲ್ಲಿ ಜಯದೇವ ಶ್ರೀಪಾದ
ಸಲ್ಲಲಿತದನುಭವದ ಚಿದ್ಬೆಳಗು ಶ್ರೀಪಾದ
ಬಲ್ಲವರಿಗಲ್ಲಮಪ್ರಭುವಾದ ಶ್ರೀಪಾದ
ಮಲ್ಲಿಕಾರ್ಜುನ ಮುರುಘ ತಾನಾದ ಶ್ರೀಪಾದ ॥ ೮ ॥

ಜಯವಿಭವ ಕರಕಂದ ಬಸವೇಶ ಶ್ರೀಪಾದ
ಮಯದಷ್ಟಕವ ರಚಿಸಿ ಪಾಡುವನು ಶ್ರೀಪಾದ
ದಯೆಗೆ ನಿತ್ಯದಿ ಪರಿಸೆ, ಸುಖನೆರೆದು, ಶ್ರೀಪಾದ
ಬಯಕೆ ಸಂತತವೊದಗಿಪುದು ಅದುವೆ ಶ್ರೀಪಾದ



ಮೈಸೂರಿನಲ್ಲಿ ಶ್ರೀ ಜಯದೇವ ಜಗದ್ಗುರುಗಳವರ ಪಲ್ಲಕ್ಕಿ ಉತ್ಸವ

॥ ಶ್ರೀ ಗುರು ಮುರುಘೇಶಾಯ ನಮಃ ॥

ಶ್ರೀ ಜಯದೇವ ಸುಪ್ರಭಾತ

ಬರೆದವರು: **ಪಿ. ಗುಂಡದಪ್ಪ,** ಹೆಡ್‌ಮಾಸ್ಟರ್
ಬೆಳಲಗೆರೆ.

ಏಳು ಶ್ರೀ ಮುರಿಗೇಶ ಏಳು ಭವ ಭಯ ನಾಶ
ಏಳು ನೆಲೆ ಚಿನ್ಮೂಲ ಪ್ರಭು ಪೀಠಧೀಶ
ಏಳು ಗುರು ಚಕ್ರೇಶ ಏಳು ಚರವರಧೀಶ
ಏಳು ಶ್ರೀ ಜಯದೇವ ಬೆಳಗಾಯಿತು ॥ ೧ ॥

ಭರತಖಂಡದ ಜೀವ ಕರುನಾಡ ಮಧ್ಯದಾ
ಚಿತ್ರದುರ್ಗದ ಶೂನ್ಯ ಸಿಂಹಾಸನಾಧೀಶ
ವರನಿರಂಜನ ಜಗದ್ಗುರುವರನೆ ಜಯದೇವ
ಮುರಿಗೇಶ ನಿನ್ನಪದ ಸುಪ್ರಭಾತಂ ॥ ೨ ॥

ಏಳುಗಿರಿ ಶಿಖರದಲಿ ಏಳು ಗುಹೆ ಗುಡಿಗಳಲಿ
ತಾಳ ಮೇಳದ ಗಂಟೆ ಜಾಗಟೆಗಳು
ಬಾಳಾಕ್ಷ ಜಯದೇವ ಲೀಲೆ ಡೋರೆಂಬುವುವು
ಏಳಯ್ಯ ಮಹಸ್ವಾಮಿ ಬೆಳಗಾದದು ॥ ೩ ॥

ಸೂರ್ಯನುದಿಸುತ್ತಿಹನು ಸರ್ವ ಭಕ್ತರು ಬಂದು
ಹರ್ಷದಿಂ ನಿನ್ನಡಿಯ ಭಜಿಸುತಿಹರು
ಸರ್ವವಾದ್ಯಗಳೆಲ್ಲ ಘೋರ್ಗರೆದು ಮೊರೆಯುತಿವೆ
ಸರ್ವೇಶ ಜಯದೇವ ಗುರುವೆ ಏಳು ॥ ೪ ॥

ವೀರಶೈವೋದ್ಧಾರ ಗುರುಚಂದ್ರ ಜಯದೇವ
ಮುರಿಗೇಶ ನಿನ್ನಡಿಯ ಭಜಿಸುತಿಹೆವು
ಕರುಣಿಸೀ ಭಕ್ತರನು ದುರಿತಗಳ ನೋಡಿಸಲು
ಗುರುಸ್ವಾಮಿ ಏಳಯ್ಯ ಬೆಳಗಾದದು ॥ ೫ ॥

ಶಾಲಿವಾಹನ ಶಕೆಯ ಕಾಲ ಹದಿನೇಳು ನೂರ್
ಮೇಲೆ ತೊಂಭತ್ತಾರು ಭಾವನಾಮ
ಶೀಲ ಶ್ರಾವಣ ಮಾಸ ಮೇಲು ಗುರುವಿನ ದಯದಿ
ಲೀಲಮೂರುತಿ ನೀನು ಉದಯವಾದೆ ॥ ೬ ॥

ಬಿನ್ನಳೂರಿನ ಮಠದ ಚನ್ನಬಸವರ ಧರ್ಮ
ಪತ್ನಿ ಬೋರಾಂಬೆಯುದರದಿಂ ಜನಿಸಿ
ಚನ್ನವೀರನು ಎಂಬ ಸನ್ನುತದ ನಾಮದಲಿ
ಮುನ್ನ ಮೆರೆದಾ ಸ್ವಾಮಿ ಪಾಲಿಸೆಮ್ಮ ॥ ೭ ॥

ಡಂಬಳದಿ ಗದುಗಿನಲಿ ಸಾಂಬ ವಿದ್ಯೆಯ ಕಲಿತೆ
ತುಂಬು ಸಂತೋಷದಲಿ ಗುರುವು ಮೆಚ್ಚಿ
ಬೆಂಬಲವನೀಯಲು ಸಂಭ್ರಮದಿ ಕಾಶಿಯಲಿ
ಹಂಬಲಿಸಿ ಷಟ್‌ಶಾಸ್ತ್ರ ಕಲಿತ ಗುರು ಏಳು ॥ ೮ ॥

ಲೋಕಮಾನ್ಯರು ತಿಲಕ ಗೋಖಲೇ ಹಿರಿಯರೂ
ವಿಖ್ಯಾತ ಗಾಂಧೀಜಿ ಮಾಲವೀಯ
ಶಿಕ್ಷಕರು ನಾಯಕರು ಅಕ್ಕರಿಂ ಗೌರವಿಸೆ
ಪ್ರಖ್ಯಾತಿ ಪಡೆದ ಗುರು ಜಯದೇವ ಏಳು ॥ ೯ ॥

ಸವದತ್ತಿ ಮಠದಾ ಬಸವ ಪುರಾಣಕ್ಕೆ
ಶಿವಯೋಗಿ ಅಥಣಿಯಿಂ ದಯಮಾಡಿರೇ
ಶಿವತತ್ವ ಕಳೆದೋರಿ ಶಿವಯೋಗಿ ಕೃಪೆವಡೆದ
ಶಿವಪುತ್ರ ಜಯದೇವ ಮುರಿಗೇಶನೆ ॥ ೧೦ ॥

ವಾರದಾ ಮಲ್ಲಪ್ಪ ಅರಟಾಳ ಗೌಡರೂ
ಶಿರಸಂಗಿ ದೇಸಾಯಿ ಕಂಬಳೀಯವರೂ
ದುರ್ಗದಾ ಕಾಡಪ್ಪ ರಾಷ್ಟ್ರಪಿತ ಗಾಂಧೀಜಿ
ವರಚನ್ನಮಲ್ಲಪ್ಪ ಬಂದಿಹರು ಏಳು ॥ ೧೧ ॥

ಬುಳ್ಳ ಮಡಿವಾಳಪ್ಪ ಗಿಲ್ಗಂಜಿ ಸಿದ್ದಪ್ಪ
ಎಲ್ಲ ಹರಗುರುಚರರು ಬಂದಿರುವರು
ಜಲ್ಲಿದನೆ ಜಯದೇವ ಅಲ್ಲಮ ಪ್ರಭುವಾಗಿ
ಸಲ್ಲೀಲೆಯನು ತೋರಲೇಳು ಗುರುವೆ ॥ ೧೨ ॥

ಶ್ರೀಮನ್ಮಹಾರಾಜ ಶ್ರೀಮನ್ನಿರಂಜನನೆ
ಸ್ವಾಮಿ ಶ್ರೀ ಜಯದೇವ ಮುರಿಗೇಶನೆ
ಶ್ರೀಮಜ್ಜಗದ್ಗುರೂ ಶ್ರೀ ಮಹಾಪ್ರಭುದೇವ
ನೀ ಮಹಿಯನುದ್ಧರಿಸಲೇಳು ಗುರುವೆ ॥ ೧೩ ॥

ಭಕ್ತಿಗೊಡೆಯನು ನೀನು ಮುಕ್ತಿದಾತನು ನೀನು
ಭಕ್ತಕಲ್ಪದ್ರುಮನು ಶಕ್ತ ನೀನು
ಮುಕ್ಕಣ್ಣನಾಗಿಯಿಳೆಯಕ್ಕರಿಂ ಪೊರೆಯುತಿಹ
ಭಕ್ತ ಬಂಧುವೆ ಏಳು ಜಯದೇವನೆ ॥ ೧೪ ॥

ಪ್ರಭುದೇವ ಬಸವಣ್ಣರಭವತತ್ವವೆ ಸಾರಿ
ಈ ಭುವಿಲಿ ಬೆಳಗಿಸಿದ ವೀರಶೈವ
ಮಬ್ಬಿನಲಿ ಮುಳುಗುತ್ತೆ ನೂರ್ಭಾಗ ಹರಿಯುತಿದೆ
ಪ್ರಭು ಮೂರ್ತಿ ಜಯದೇವ ಏಳು ಸ್ವಾಮಿ ॥ ೧೫ ॥

ಶೀತಮಾರುತನಿಲ್ಲಿ ಪ್ರೀತಿಯಿಂಬೀಸುತಿಹ
ಖ್ಯಾತ ಶ್ರೀ ಜಯದೇವ ಮುರಿಗೇಶನೆ
ಓತು ನಿನ್ನಯ ಯಶದ ಕೀರ್ತಿ ಹಾಡುವ ಭಕ್ತ
ವ್ರಾತವನು ಪೊರೆ ಏಳು ಬೆಳಗಾದುದು ॥ ೧೬ ॥

ನಾಸ್ತಿಕರ ಖಂಡಿಸೀ ಯಾಸ್ತಿಕರನುದ್ಧರಿಸಿ
ಹಸ್ತಿ ಹಯ ಪಶು ಪಕ್ಷಿ ಮನುಜರನು ಸಲಹಿ
ಸುಸ್ಥಿರದ ಶಿವಕಳೆ ವಿಶಿಷ್ಠದದ್ವೈತವನು
ಭಕ್ತಕೋಟಿಗೆ ತೋರ್ದ ಗುರುವೆ ಏಳು ॥ ೧೭ ॥

[illegible] ಈಶ ಭಕ್ತರ ಪೊರೆದು
[illegible] ಛತ್ರ ನಿಲಯಂಗಳ
ಅಸ್ಪತ್ರೆ ಕಾಲೇಜು ಅಷ್ಟಭಾಗದೊಳ್ಕಟ್ಟ
[illegible]ದೀಶ ಮುರಿಗೇಶ ಜಯದೇವ ಏಳು ॥ ೧೮ ॥

ವೀರಶೈವೋದ್ಧಾರ ಗುರು ಕರುಣ ಚೈತನ್ಯ
ಗುರುಚರರ ಭಕ್ತರಾ ಚಕ್ರವರ್ತಿ
ಭರಮಣ್ಣ ನಾಯಕಗೆ ಅರಸುಪಟ್ಟವನಿತ್ತ
ಮುರಿಗೇಶ ಪ್ರಭುದೇವ ಗುರುವೆ ಏಳು ॥ ೧೯ ॥

ನಿನ್ನ ಘನ ಕರುಣದೊಳು ಶೂನ್ಯ ತತ್ವದ ಬೆಳಗು
ಕನ್ನಡಾಂಧ್ರ ಮರಾಠ ಭಾರತದಿ ಹರಡಿ
ಮುನ್ನ ಪ್ರಭು ಬಸವಣ್ಣರುನ್ನತದ ಸಿದ್ಧಾಂತ
ವನ್ನು ಜಗಕೇ ತೋರ್ದ ಜಯದೇವನೆ ॥ ೨೦ ॥

ಜಯ ವಿಭವದೇವಂಗೆ ಜಯಮಲ್ಲಿಕಾರ್ಜುನಗೆ
ಜಯವಿತ್ತು ಹರಸಿದಾ ಜಯದೇವನೆ
ಜಯಕೀರ್ತಿ ಹಾಡುವರ ದಯಪೆರಸಿ ಕಾಪಾಡು
ಜಯದೇವ ಮುರಿಗೇಶ ದೊರಿಯೆ ಏಳು ॥ ೨೧ ॥

ಜಯದೇವ ಜಯದೇವ ಜಯ ಜಗದ್ಗುರು ದೇವ
ಜಯದೇವ ಶ್ರೀ ಮುರುಘರಾಜೇಂದ್ರನೆ
ಜಯ ಸುಪ್ರಭಾತವನು ಜಯವೆನುತ ಹಾಡುವೆವು
ದಯೆದೋರು ಜಯದೇವ ಮುರಿಗೇಶನೆ ॥ ೨೨ ॥

ನಾಗ ಮುರಿಗಿಯ ಬೆತ್ತ ಬೇಗ ಕರದೊಳು ಪಿಡಿದು
ಸಾಗಿ ಬಾರೈ ಗುರುವೆ ದುರುಗವೇರಿ
ಯೋಗಿ ಶ್ರೀ ಜಯದೇವ ನಾಗಭೂಷಣಸ್ವಾಮಿ
ರಾಗದಿಂ ಕೋಗಿಲೆಗಳುಲಿಯುತ್ತಿವೆ ॥ ೨೩ ॥

ಧರೆಯೊಳಗೆ ಜಯದೇವ ಮುರಿಗೇಶಸ್ವಾಮಿಯ
ವರಸುಪ್ರಭಾತವನು ಹಾಡಿದವರು
ಗುರುಕೃಪೆಯ ಪಡೆಯುತ್ತೆ ಸಿರಿಯಾಯುಗಳ ಪಡೆದು
ಚಿರಕಾಲ ಇಹಪರದಿ ಶಿವನ ಕಾಣುವರು ॥ ೨೪ ॥



ಶೂನ್ಯಪೀಠ - ಐತಿಹಾಸಿಕ ವಿವೇಚನೆ

ಲೇಖಕರು :
ಪಂಡಿತರತ್ನಂ, ಪದ್ಮಶ್ರೀ ಡಾ॥ ಬಿ. ಶಿವಮೂರ್ತಿಶಾಸ್ತ್ರಿಗಳು,
ಬೆಂಗಳೂರು-೧೦

ಚಿತ್ರದುರ್ಗ ಚಿನ್ಮೂಲಾದ್ರಿ ಶೂನ್ಯಪೀಠಾಧಿಪತಿಗಳಾದ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾ ಸ್ವಾಮಿಗಳ ಶತಮಾನೋತ್ಸವ ಸಮಾರಂಭವು ವೈಭವದಿಂದ ನಡೆಯುವ ಈ ಕಾಲದಲ್ಲಿ ನಾವು ಶೂನ್ಯಪೀಠದ ಪರಂಪರೆಯನ್ನು ಕುರಿತು ತಿಳಿಯುವುದು ಸಕಾಲಿಕವೆಂದು ಭಾವಿಸಲಾಗಿದೆ.

ವೀರಶೈವ ಸಮಾಜದಲ್ಲಿ ಮಠಗಳ ಸ್ಥಾನಮಾನಗಳು ಅತ್ಯಂತ ಪ್ರಮುಖವಾಗಿವೆ. ಲಿಂಗವಂತರಲ್ಲಿ ಗುರುವರ್ಗ, ವಿರಕ್ತವರ್ಗ ಮತ್ತು ಶರಣವರ್ಗ ಎಂಬ ಮೂರು ಪ್ರಕಾರದ ಮಠಗಳಿವೆ. ಕಾಶಿ, ಕೇದಾರ, ಶ್ರೀಶೈಲ, ಉಜ್ಜಯಿನಿ ಮತ್ತು ರಂಭಾಪುರಿ ಎಂಬ ಈ ಐದು ಪೀಠಗಳನ್ನು ಪಂಚಪೀಠಗಳೆಂದು ಗುರುವರ್ಗದವರು ಕರೆಯುತ್ತಾರೆ. ವೀರ, ನಂದಿ, ಭೃಂಗಿ, ಸ್ಕಂದ ಮತ್ತು ವೃಷಭ ಎಂಬ ಐದು ಗೋತ್ರಗಳನ್ನು ಈ ಪಂಚಪೀಠಗಳಿಗೆ ಗಂಟುಹಾಕಲಾಗಿದೆ. ವಿರಕ್ತ ವರ್ಗದವರು ಕಲ್ಯಾಣದಲ್ಲಿ ಹನ್ನೆರಡನೆಯ ಶತಮಾನದಲ್ಲಿ ಅಲ್ಲಮಪ್ರಭುವಿನ ಅಧ್ಯಕ್ಷತೆಯಲ್ಲಿ ಬಸವಣ್ಣನವರು ನೆಲೆಗೊಳಿಸಿದ ಶೂನ್ಯ ಪೀಠವನ್ನು ತಮ್ಮ ಮೂಲಸ್ಥಾನವೆಂದು ಹೇಳುತ್ತಾರೆ. ಈ ಶೂನ್ಯಪೀಠದ ಪರಂಪರೆಯಲ್ಲಿ ಪ್ರಭು ಸಂಪ್ರದಾಯ, ಸಿದ್ಧಲಿಂಗೇಶ್ವರ ಸಂಪ್ರದಾಯ, ನಂದಿಕೇಶ್ವರ ಸಂಪ್ರದಾಯ ಎಂಬ ಮೂರು ಗುರುವಂಶಗಳನ್ನು ಹೇಳಲಾಗಿದೆ. ಈ ಮೂರು ಗುರುವಂಶಗಳು ಕಲ್ಯಾಣದ ಶರಣರ ತತ್ವಗಳಿಗೆ ತಲೆಬಾಗಿವೆ. ಅಂದರೆ ವಚನ ಶಾಸ್ತ್ರವನ್ನು ತಮ್ಮ ಪ್ರಮಾಣ ಗ್ರಂಥಗಳೆಂದು ಭಾವಿಸಿವೆ. ಈ ಶೂನ್ಯಪೀಠದ ಪರಂಪರೆಯಲ್ಲಿ ಕೆಲವು ಕಾಲಾನಂತರ ಮುರುಘಾಸಮಯ, ಚೀಲಾಳ ಸಮಯ, ಕುಮಾರ ಸಮಯ, ಕೆಂಪಿನ ಸಮಯ ಮತ್ತು ಸಂಪಾದನೆಯ ಸಮಯ ಎಂದು ಐದು ಭೇದಗಳಾಗಿವೆ. ಈ ಭೇದಗಳಲ್ಲಿ ಕಡೆಯವೆರಡು ಜೀರ್ಣವಾಗಿದ್ದು, ಮೊದಲು ಮೂರು ಉಳಿದುಬಂದಿವೆ. ಮೇಲಿನ ಗುರುವರ್ಗ, ವಿರಕ್ತವರ್ಗ ಮಠಗಳಲ್ಲದೆ ಶರಣಸ್ಥಳದ ಮಠಗಳೂ ವೀರಶೈವ ಸಮಾಜದಲ್ಲಿ ಉಳಿದುಬಂದಿವೆ. ಕಲಬುರ್ಗಿಯ ಶರಣಬಸವೇಶ್ವರ ಮಠ, ಕಾನಾಮಡು ಶರಣರ ಮಠ, ದೇವನೂರು ಗುರುಸ್ವಾಮಿಗಳ ಮಠ ಮೊದಲಾದುವುಗಳನ್ನು ಶರಣ ಸ್ಥಳದ ಮಠಗಳೆಂದು ಹೇಳಲಾಗಿದೆ* ವೀರಶೈವ ಸಮಾಜದ ಇಂದಿನ ಸ್ಥಿತಿಗಳಿಗೂ, ಮೇಲಿನ ಮೂರು ಪರಂಪರೆಯ ಮಠಗಳಿಗೂ ನಿಕಟವಾದ ಸಂಬಂಧವಿದೆ. ವೀರಶೈವ ಸಾಧನೋಪಾಯಗಳಾದ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ ಮತ್ತು ಶಿವದೀಕ್ಷೆ ಎಂಬಿವುಗಳಿಗೂ ಮಠಗಳಿಗೂ ನಿಕಟವಾದ ಸಂಬಂಧವಿದೆ. ಈ ಮಠಗಳನ್ನು ಬಿಟ್ಟರೆ ಲಿಂಗವಂತ ಸಮಾಜವು ಪಂಚ ಪ್ರಾಣಗಳಿಲ್ಲದ ದೇಹದಂತೆ ಚೈತನ್ಯ ರಹಿತವಾಗುತ್ತದೆ. ಕುಂಭಕೋಣಂ ಪೆರಿಯ ಮಠ, ಸುತ್ತೂರು [illegible] ಸಿರಿಗೆರೆ ಮಠ, ಚೌಡಯ್ಯ ದಾನಪುರ ಮಠ, ನಿಡುಮಾಮಿಡಿ ಮಠ, ಸಿದ್ಧಗಿರಿ ಮಠ ಮೊದಲಾದವು ತಮ್ಮದೇ ಆದ ಬೇರೆ ಬೇರೆ [illegible]ಗಳನ್ನು ಹೇಳುತ್ತವೆ.

ಪ್ರಕೃತ ನಮ್ಮ ಈ ಲೇಖನದಲ್ಲಿ ಕಲ್ಯಾ[illegible] ಪರಂಪರೆಯನ್ನು ಕುರಿತು ನಾವು ಚರ್ಚಿಸುತ್ತೇ[illegible] ಮೊದಲನೆ ಗುರು ಅಲ್ಲಮಪ್ರಭು, ಎರಡನೆಯವರು ಚೆನ್ನಬಸ[illegible] ಮೂರನೆಯವರು ಸಿದ್ಧರಾಮೇಶ್ವರ, ಅನಂತರ ಅನಾದಿಗಣನಾಥ ಆದಿಗಣೇಶ್ವರ, ನಿರ್ಮಾಯ ಗಣೇಶ್ವರ (ಮಾಡೇಶ್ವರ) ನಿರಂಜನ ಸ್ವಾಮಿಗಳು, ಜ್ಞಾನಾನಂದಸ್ವಾಮಿ, ಆತ್ಮಗಣವರರು, [illegible] ಗಣನಾಥ, ರುದ್ರಮುನಿಸ್ವಾಮಿ, ಬಸವಪ್ರಭುಸ್ವಾಮಿ, [illegible] ಸ್ವಾಮಿ, ಚೆನ್ನವೀರಸ್ವಾಮಿ ಗೋಸಲ ಸಿದ್ಧೇಶ್ವರಸ್ವಾಮಿ, [illegible]ಚಾರ್ಯಸ್ವಾಮಿ, ದಿವ್ಯಲಿಂಗೇಶ್ವರರು, ಚೆನ್ನಬಸವರಾಜೇಂದ್ರರು, ತೋಂಟದ ಸಿದ್ಧಲಿಂಗರು, ನಿರಕ್ಷರ ಬೋಳ ಬಸವೇಶ್ವರರು. ಸಿದ್ಧವೀರೇಶಸ್ವಾಮಿಗಳು, ಗುರುಸಿದ್ಧದೇಶಿಕೇಂದ್ರರರು, ಗಗನದಾರ್ಯರು, ಸಿದ್ಧವೀರಸ್ವಾಮಿಗಳು, ನೋಡಸಿದ್ಧಲಿಂಗ ದೇಶಿಕೇಂದ್ರರು ಎಂಬಿಷ್ಟು ಹೆಸರುಗಳನ್ನು ನಿರಂಜನ ವಂಶ ರತ್ನಾಕರದಲ್ಲಿ ಹೇಳಲಾಗಿದೆ. ಪ್ರಭುದೇವರ ಗುರುವಾದ ಅನಿಮಿಷಾರ್ಯರು ಅವರ ಗುರುವಾದನಂದಿಕೇಶ್ವರರು, ಈ ಇಬ್ಬರ ಹೆಸರುಗಳು ಈ ಪರಂಪರೆಯಲ್ಲಿ ಸೇರಿಸದಿರುವುದು ತುಂಬಾ ಆಲೋಚಿಸತಕ್ಕ ಸಂಗತಿಯಾಗಿದೆ. ಅಂದರೆ ಪ್ರಭುದೇವರಿಂದ ಇಪ್ಪತ್ತೈದು ತಲೆಯ ಹೆಸರುಗಳನ್ನು ಮೇಲಿನ ನಿರಂಜನ ವಂಶ ರತ್ನಾಕರದಲ್ಲಿ ಹೇಳಲಾಗಿದೆ. ಭಗವಾನ್ ಸಿದ್ಧಲಿಂಗೇಶ್ವರರು ತಮ್ಮ ಷಟ್‌ಸ್ಥಲ ಜ್ಞಾನಸಾರಾಮೃತದಲ್ಲಿ ತಮ್ಮ ಗುರು ಪರಂಪರೆಯನ್ನು ಹೇಳುತ್ತ, ಅನಾದಿಗಣೇಶ್ವರ, ಆದಿಗಣೇಶ್ವರ, ನಿರ್ಮಾಯಗಣೇಶ್ವರ, ನಿರಂಜನಗಣೇಶ್ವರ, ಜ್ಞಾನಾನಂದಗಣೇಶ್ವರ, ಆತ್ಮಗಣೇಶ್ವರ, ಅಧ್ಯಾತ್ಮಗಣೇಶ್ವರ, ರುದ್ರಗಣೇಶ್ವರ, ಬಸವಪ್ರಭುದೇವರು, [illegible]ಲಿಂಗದೇವರು, ಚೆನ್ನವೀರದೇವರು, ಗೋಸಲದೇವರು, ಶಂಕರದೇವರು, ದಿವ್ಯಲಿಂಗದೇವರು, ಚೆನ್ನಬಸವೇಶ್ವರದೇವರು, ಇವರ ಶಿಷ್ಯ ಸಿದ್ಧಲಿಂಗನಾಸಯ್ಯ ಎಂದು ಹೇಳಿರುತ್ತಾರೆ. ಅಂದರೆ ನಿರಂಜನ ವಂಶ ರತ್ನಾಕರದಲ್ಲಿ ಹೇಳಿದ [illegible] ಅಂದರೆ ಅಲ್ಲಮಪ್ರಭು, ಚೆನ್ನಬಸವೇಶ್ವರ,

* ಗುರುಸ್ಥಲ ಮತ್ತು ಷಟ್‌ಸ್ಥಲದ ಮಠಾಧಿಪತಿಗಳು ಬ್ರಹ್ಮಚಾರಿಗಳಾಗಿರಬೇಕೆಂಬ ನಿಯಮವಿದೆ. ಆದರೆ ಶರಣಸ್ಥಲದ ಮಠಗಳಲ್ಲಿ ಸಂಸಾರಿಗಳಾಗಿದ್ದವರು ಕೂಡ ಮಠಾಧಿಪತಿಗಳಾಗಬಹುದೆಂಬ ಸಂಪ್ರದಾಯವಿದೆ. ತಮಿಳುನಾಡಿನ ಬೊಮ್ಮನ ಪಾಳಯಂ ಮೊದಲಾದ ಮಠಗಳ ಅಧ್ಯಕ್ಷರಾಗಿರತಕ್ಕವರು ಸಂಸಾರದಿಂದ ನಿವೃತ್ತರಾದವರು ಮಠಾಧಿಪತಿಗಳಾಗಿರುವುದೂ ಉಂಟು.

ಸಿದ್ಧರಾಮೇಶ್ವರ ಎಂಬ ಮೂರು ಹೆಸರುಗಳನ್ನು ಬಿಟ್ಟಿರುತ್ತಾರೆ. ಬೋಳ ಬಸವೇಶ್ವರರು ಸಿದ್ಧಲಿಂಗೇಶ್ವರರ ಕರಸಂಜಾತರೆಂದು ಸಿದ್ಧೇಶ್ವರ ಪುರಾಣ ಮತ್ತು ನಿರಂಜನ ವಂಶ ರತ್ನಾಕರದಲ್ಲಿ ಹೇಳಿದೆ. ಶ್ರೀ ಸಿದ್ಧಲಿಂಗೇಶ್ವರರು ಬಸವಾದಿ ಪ್ರಮಥರನ್ನು ಭಕ್ತಿಯಿಂದ ಕೊಂಡಾಡಿದ್ದಾರೆ. ಅವರ ಸಿದ್ಧಾಂತಗಳಿಗೆ ತಲೆಬಾಗಿದ್ದಾರೆ. ಹರದನಹಳ್ಳಿಯ ತಮ್ಮ ಗುರು ಸಂಪ್ರದಾಯವನ್ನು ಹೇಳುವಾಗ ಮೊದಲ ಮೂರು ಪ್ರಮುಖವಾದ ಹೆಸರುಗಳನ್ನು ಏತಕ್ಕಾಗಿ ಬಿಟ್ಟರು ಎಂಬುದನ್ನು ಊಹಿಸುವುದು ಕಷ್ಟವಾಗಿದೆ.

ಕಲ್ಯಾಣದ ಶೂನ್ಯಪೀಠವು ಉಳವಿ ಮಹಾಮನೆ, ಸೊನ್ನಲಿಗೆ ಮೊದಲಾದ ಹಲವು ಸ್ಥಳಗಳಲ್ಲಿ ಸಂಚರಿಸಿ ಅನಂತರ ಹರದನಹಳ್ಳಿಗೆ ಬಂದುನಿಂತಂತೆ ತೋರುತ್ತದೆ. ಹರದನಹಳ್ಳಿಯಿಂದ ಎಡೆಯೂರಿಗೂ, ಎಡೆಯೂರಿನಿಂದ ಮಧುಗಿರಿ ಪಕ್ಕದ ಸಿದ್ಧಾಪುರಕ್ಕೂ ಬಂದು ನಿಲ್ಲುತ್ತದೆ. ಅನಂತರ ಗೂಳೂರು, ಗುಮ್ಮಳಾಪುರ, ಭೈರವದುರ್ಗ, ತೀಳವಳ್ಳಿ ಮೊದಲಾದ ಕಡೆ ಸಂಚರಿಸುತ್ತದೆ. ಈ ಸಮಯಕ್ಕೆ ಕಟ್ಟಿಗೆಹಳ್ಳಿ ಸಿದ್ಧವೀರಸ್ವಾಮಿಗಳು ಶೂನ್ಯಪೀಠದ ಅಧ್ಯಕ್ಷರಾಗಿರುವಾಗ ನಾವು ಈ ಮೊದಲು ಹೇಳಿದಂತೆ ವಿರಕ್ತವರ್ಗದಲ್ಲಿ ಭಿನ್ನಾಭಿಪ್ರಾಯವುಂಟಾಗಿ ಚೀಲಾಳಸಮಯ, ಮುರುಘಾಸಮಯ, ಕುಮಾರಸಮಯ ಎಂಬ ಮೂರು ಭೇದಗಳಾದಂತೆ ಕಂಡುಬರುತ್ತದೆ. ಅಲ್ಲಿಂದ ಮುಂದೆ ಈ ಮೂರು ಪೀಠಗಳಲ್ಲಿ ಬೇರೆ ಬೇರೆ ಸ್ವಾಮಿಗಳಾಗುತ್ತಾರೆ. ಮುರುಘಾಸಮಯದಲ್ಲಿ ಮುರುಘಶಾಂತವೀರಸ್ವಾಮಿ, ಇಮ್ಮಡಿ ಗುರುಸಿದ್ಧಸ್ವಾಮಿ, ಸ್ವಾದಿ ವೀರಚನ್ನಬಸವಸ್ವಾಮಿಗಳು, ಶಿರಹಟ್ಟಿ ಸಿದ್ಧಲಿಂಗ ಸ್ವಾಮಿಗಳು, ಗುರುಪಾದಸ್ವಾಮಿಗಳು, ಮೂರು ಸಾವಿರದ ಗುರುಪಾದಸ್ವಾಮಿಗಳು, ಮೂರು ಸಾವಿರದ ಸಿದ್ಧಲಿಂಗ ಸ್ವಾಮಿಗಳು, ಒಪ್ಪೊತ್ತಿನ ಚೆನ್ನವೀರಸ್ವಾಮಿಗಳು, ವ್ಯಾಕರಣ ಸಿದ್ಧಲಿಂಗಸ್ವಾಮಿಗಳು, ನಿಘಂಟಿನ ಸಿದ್ಧಬಸವಸ್ವಾಮಿಗಳು, ಸಣ್ಣ ಬರೆಹದ ರಾಜೋಟಿಸ್ವಾಮಿಗಳು, ಸಾವಳಗಿ ಗುರುಶಾಂತಸ್ವಾಮಿಗಳು, ಸಣ್ಣಪಾದದ ಚೆನ್ನವೀರಸ್ವಾಮಿಗಳು, ಮಹಾಲಿಂಗಸ್ವಾಮಿಗಳು ಹೆಬ್ಬಾಳದ ರುದ್ರಸ್ವಾಮಿಗಳು, ಮುಪ್ಪಿನಸ್ವಾಮಿಗಳು, ವಿಖ್ಯಾತರಾದ ಜಯದೇವಸ್ವಾಮಿಗಳು, ಜಯವಿಭವಸ್ವಾಮಿಗಳು ಎಂಬ ಹದಿನೆಂಟು ಮಂದಿ ಸ್ವಾಮಿಗಳು ಆಗಿಹೋಗಿದ್ದಾರೆ. ಈಗ ಚಿನ್ಮೂಲಾದ್ರಿ ಶೂನ್ಯಪೀಠದಲ್ಲಿ ಶ್ರೀ ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು ವಿರಾಜಮಾನರಾಗಿದ್ದಾರೆ. ಮುರುಘಾಸಮಯದಲ್ಲಿ ಪೂರ್ವೋಕ್ತ ಹೆಸರುಗಳ ಪ್ರಕಾರ ಪ್ರಸ್ತುತ ಶ್ರೀಗಳು ಹತ್ತೊಂಬತ್ತನೇಯವರಾಗಿದ್ದಾರೆ.

ಮುರುಘಾಮಠವು ಚಿತ್ರದುರ್ಗದಲ್ಲಿ ಎಂದು ಸ್ಥಾಪನೆಯಾಯಿತು ಎಂಬುದು ನಾವು ತಿಳಿದುಕೊಳ್ಳಬೇಕಾದ ಸಂಗತಿ. ಕನ್ನಡ ಕವಿಚರಿತ್ರೆಯಲ್ಲಿ ಮುರುಘಾಮಠದ ಕೆಲವು ಕವಿಗಳ ಹೆಸರುಗಳನ್ನು ನಾವು ಓದಬಹುದಾಗಿದೆ. ಮುರುಗಿಯ ಶಾಂತವೀರಸ್ವಾಮಿಗಳು (ಕ್ರಿ.ಶ. 1530) ಇವರು ಪ್ರಭಲಿಂಗಕಂದ, ವೈರಾಗ್ಯದ ಷಟ್ಪದಿ, ಏಕೋನ ವಿಂಶತಿ ಪ್ರಬಂಧ ಇವುಗಳನ್ನು ಬರೆದಿದ್ದಾರೆ. ಇವರು ವೀರಶೈವ ಕವಿ ಎಂದೂ, ಮುರುಘಾಮಠದ ಸ್ವಾಮಿಗಳೆಂದೂ ಕನ್ನಡ ಕವಿಚರಿತ್ರೆಯಲ್ಲಿ ಹೇಳಿದೆ. (ಕ.ಕ.ಚರಿತ್ರೆ ಭಾ. 2 ಪು. 212) ಈತನು ಕಟ್ಟಿಗೆಹಳ್ಳಿ ದೇವರ ಶಿಷ್ಯನೆಂದು ಹೇಳಲಾಗಿದೆ. ಈತನು ತೋಂಟದ ಸಿದ್ಧಲಿಂಗನ ಶಿಷ್ಯನಾದ ಬೋಳ ಬಸವೇಶ್ವರನ ಅನುಗ್ರಹಕ್ಕೆ ಪಾತ್ರನಾಗಿದ್ದನೆಂದೂ ಹೇಳಲಾಗಿದೆ. ಈತನ ಕಾಲ (ಕ್ರಿ.ಶ. 1530). ಮಹಾಂತಸ್ವಾಮಿ (1560) ಈತನು ಇಮ್ಮಡಿಯ ಮುರುಗಿಯ ಶಾಂತವೀರನ ಸ್ತುತಿರೂಪವಾದ ಒಂದು ಷಟ್ಪದಿ ಗ್ರಂಥವನ್ನು ಬರೆದಿದ್ದಾನೆ. ಇದಕ್ಕೆ 'ನಾಂದ್ಯ' ಎಂಬ ಹೆಸರಿದೆ. ಇವನು ವೀರಶೈವ ಕವಿ. ಇವನಿಗೆ ಮಹಾಂತಸ್ವಾಮಿಯೆಂಬ ಹೆಸರಿದೆ. ಮುರುಗಿಯ ಶಾಂತವೀರನಾದ ಮೇಲೆ ಆ ಮಠಕ್ಕೆ ಸ್ವಾಮಿಯಾಗಿದ್ದನೆಂದು ತೋರುವುದರಿಂದ ಇವನ ಕಾಲವು ಸುಮಾರು 1560 ಆಗಿರಬಹುದೆಂದು ಊಹಿಸುತ್ತೇವೆ ಎಂದು ಕ. ಕ. ಚರಿತ್ರೆಯಲ್ಲಿ ಹೇಳಿದೆ. (ಭಾಗ 2 ಪು. 293) ಮುರುಗಿಯ ದೇಶಿಕೇಂದ್ರ ಎಂಬ ಕವಿಯು ಹಮ್ಮಿರ ಕಾವ್ಯವನ್ನು ಬರೆದಿದ್ದಾನೆ. ಇವನ ಕಾಲ (1569) ಇವನು ವೀರಶೈವ ಕವಿ. ಮುರುಘಾಮಠದ ಸ್ವಾಮಿಯಾಗಿದ್ದನೆಂದು ತೋರುತ್ತದೆ ಎಂದು ಕ.ಕ.ಚರಿತ್ರೆಯಲ್ಲಿ ಹೇಳಿದೆ (ಭಾಗ 2 ಪು. 291) ಇಮ್ಮಡಿ ಗುರುಶಿದ್ಧಸ್ವಾಮಿ ಎಂಬಾತನು 'ಪ್ರಭುಲೀಲಾ' ಎಂಬ ಒಂದು ಸಂಸ್ಕೃತ ಗ್ರಂಥವನ್ನು ಬರೆದಿದ್ದಾನೆ. ಇವನ ಕಾಲ (1710) ಇವನು ಮುರುಘಾಮಠದ ಸ್ವಾಮಿಯೆಂದು ಹೇಳಲಾಗಿದೆ. ಮಹಾದೇವ ಎಂಬ ಕವಿಯು ಮಹಾಲಿಂಗೇಂದ್ರ ವಿಜಯ ಎಂಬ ಗ್ರಂಥವನ್ನು ಬರೆದಿದ್ದಾನೆ. ಇವನ ಕಾಲ 1875 ಎಂದು ಕ.ಕ. ಚರಿತ್ರೆಯಲ್ಲಿ ಹೇಳಿದೆ. (ಭಾ. 3 ಪು. 2117) ಈ ಗ್ರಂಥವನ್ನು ಡಾ॥ ಎಲ್. ಬಸವರಾಜು ಸಂಪಾದಿಸಿ ಚಿತ್ರದುರ್ಗದ ಮುರುಘಾಮಠದಲ್ಲಿ ಪ್ರಕಟಿಸಿದ್ದಾರೆ. ನಾವು ಇದುವರೆಗೆ ಹೇಳಿದ ಕವಿಗಳ ಆಧಾರದ ಮೇಲೆ ಕ್ರಿ.ಶ. 16ನೆಯ ಶತಮಾನದಲ್ಲಿ ಚಿತ್ರದುರ್ಗದಲ್ಲಿ ಮುರುಘಾಮಠವಿತ್ತೆಂದು ಸಿದ್ಧವಾಗುತ್ತದೆ. ಮುರುಘಾಮಠದ ಮೂಲಕರ್ತೃಗಳು ಮುರಘರಾಜೇಂದ್ರ ಸ್ವಾಮಿಗಳು.

'ಮುರುಘ' ಎಂಬ ಶಬ್ದವು ತಮಿಳಿನಿಂದ ಬಂದುದು. ಅರವ ಭಾಷೆಯಲ್ಲಿ ಮುರುಘನ್ ಎಂದರೆ ಷಣ್ಮುಖ ಎಂದು ಹೆಸರು. ಷಣ್ಮುಖನು ತಮಿಳುನಾಡಿನ ಜನಪ್ರಿಯ ದೇವತೆ. ಅರವತ್ತುಮೂರು ಮಂದಿ ಪುರಾತನರಲ್ಲಿ 'ಮುರುಘ'ರು ಎಂಬ ಒಬ್ಬ ಮಹಾತ್ಮರಿದ್ದಾರೆ. ಆದುದರಿಂದ ಈ ಹೆಸರು ತಮಿಳುನಾಡಿನಿಂದ ಕರ್ನಾಟಕಕ್ಕೆ ಬಂದುದು ಎಂದು ನಾವು ತಿಳಿಯಬೇಕು. ಕಟ್ಟಿಗೆಹಳ್ಳಿ ಸಿದ್ಧವೀರಸ್ವಾಮಿಯ ಕಾಲದಿಂದೀಚಿಗೆ ವಿರಕ್ತರಲ್ಲಿ ಸಮಯ ಭೇದವಾಗಿದೆಯೆಂದು ಹಿಂದೆ ಹೇಳಲಾಗಿದೆ. ಸಿದ್ಧಲಿಂಗೇಶ್ವರನಾದ ಮೇಲೆ ಬೋಳ ಬಸವೇಶ್ವರ, ಗುಮ್ಮಳಾಪುರದ ಸಿದ್ಧಲಿಂಗಸ್ವಾಮಿ, ಅನಂತರ ಗೂಳೂರು ಸಿದ್ಧವೀರ ಸ್ವಾಮಿ ಇವರುಗಳಾದ ಮೇಲೆ ಕಟ್ಟಿಗೆಹಳ್ಳಿ ಸಿದ್ಧಲಿಂಗಸ್ವಾಮಿಯ ಹೆಸರು ಬರುತ್ತದೆ. ಸಿದ್ಧಲಿಂಗೇಶ್ವರರ ಕಾಲ (1480) ಅನಂತರ ಕಟ್ಟಿಗೆಹಳ್ಳಿ ಸ್ವಾಮಿಯವರಿಗೆ ನಾಲ್ಕು ತಲೆಗಳಾಗುವುದರಿಂದ ಅವರ ಕಾಲವನ್ನು 1500 ಎಂದು ಇಟ್ಟುಕೊಳ್ಳಬಹುದು. ಅನಂತರದಲ್ಲಿಯೇ ಚಿತ್ರದುರ್ಗ ಶೂನ್ಯಪೀಠ ಸ್ಥಾಪನೆಯಾಗಿರಬೇಕು. ಹೀಗಾದರೆ ಕವಿಚರಿತ್ರೆಯಲ್ಲಿ ಹೇಳುವ ಮುರುಘಾಮಠದ ಕವಿಗಳ ಕಾಲ ಹೊಂದಿ

ಕೊಳ್ಳುತ್ತದೆ ಎಂಬುದು ಗಮನಾರ್ಹ. ಮುರುಘಾಮಠ ಎಂಬ ಹೆಸರಿನಿಂದಅನೇಕ ಊರುಗಳಲ್ಲಿ ಮಠಗಳಿವೆ. ನಮಗೆ ತಿಳಿದಿರುವಂತೆ ಗುಳೇದಗುಡ್ಡ,ತುಮಕೂರು, ಧಾರವಾಡ, ಕುಮಟ, ಕಾಸರಗೋಡು, ಅನಂತಪುರ(ಆನಂದಪುರ), ಸಿದ್ಧಾಪುರ ಮೊದಲಾದ ಕಡೆಗಳಲ್ಲೆಲ್ಲಾ ಮುರುಘಾಮಠಗಳಿವೆ. ಇವೆಲ್ಲಾ ಮುರುಘಾಮಠದ ಶಾಖೆಗಳು ಚಿತ್ರದುರ್ಗದ ಮುರುಘಾಮಠವೇ ತಮ್ಮ ಮೂಲಸ್ಥಾನವೆಂದು ಹೇಳುತ್ತಾಬಂದಿವೆ.

'ಚಿತ್ರದುರ್ಗದ ಪಾಳೆಯಗಾರರು'ಎಂಬ ಗ್ರಂಥದಲ್ಲಿ ಭರಮಪ್ಪ ನಾಯಕನ ಕಾಲದಲ್ಲಿ ಮೇಲುದುರ್ಗದ ಮಠವನ್ನು ಕಟ್ಟಲಾಯಿತೆಂದು ಹೇಳಲಾಗಿದೆ (ಪು. 44). ಭರಮಪ್ಪನಾಯಕನು ರಾಜನಾಗುವುದಕ್ಕೆ ಮೊದಲು ಮುರುಘಾಮಠದ ಸ್ವಾಮಿಗಳೊಬ್ಬರು ಅವನು ಮುಂದೆ ರಾಜನಾಗುವನೆಂಬ ಭವಿಷ್ಯವನ್ನು ಹೇಳಿದಂತೆ ಅದೇ ಗ್ರಂಥದಲ್ಲಿ ಹೇಳಲಾಗಿದೆ(ಪು. 38). ಭರಮಪ್ಪನಾಯಕನು ಕ್ರಿ. ಶ. 1689 ರಿಂದ ಕ್ರಿ. ಶ. 1720 ರವರೆಗೆ ರಾಜ್ಯಭಾರ ಮಾಡಿದಂತೆ ಆ ಪಾಳೆಯಗಾರರ ಚರಿತ್ರೆಯಲ್ಲಿ ನಿರೂಪಿತವಾಗಿದೆ. ಅಂದರೆ ಕ್ರಿ.ಶ. 1700 ರ ಸುಮಾರಿನಲ್ಲಿ ಚಿತ್ರದುರ್ಗದ ಬೆಟ್ಟದ ಮೇಲೆ ಮಠವನ್ನು ಕಟ್ಟಲಾಯಿತೆಂದು ತೋರುತ್ತದೆ. ಅದಕ್ಕೆ ಮೊದಲೇ ಬೆಟ್ಟದ ಬುಡದಲ್ಲಿ ಈಗಿರುವ ಬೃಹನ್ಮಠವು 1650 ರಲ್ಲಿ ಸ್ಥಾಪನೆಯಾಗಿರಬಹುದೆಂಬುದನ್ನು ನಂಬಬೇಕಾಗಿದೆ. ಶಿವಮೊಗ್ಗ ಜಿಲ್ಲೆ ಅನಂತಪುರ (ಆನಂದಪುರ)ದಲ್ಲಿ ಮುರುಘಾ ಮಠದಲ್ಲಿ ಒಂದು ತಾಮ್ರ ಶಾಸನವಿದೆಯೆಂದು ಅದರ ಕಾಲ 1660 ಎಂದು ಹೇಳಲಾಗಿದೆ. ಆದರೆ ಈ ಶಾಸನವು ನಂಬಿಕೆಗೆ ಅರ್ಹವಲ್ಲವೆಂದು ಇತಿಹಾಸ ಪಂಡಿತರಾದ ಡಾ॥ ಎಂ. ಎಂ. ಕಲಬುರ್ಗಿಯವರು ಹೇಳಿದ್ದಾರೆ (ಶಾಸನಗಳಲ್ಲಿ ಶಿವಶರಣರು ಪು. 67). ಒಂದು ವೇಳೆ ಈ ಶಾಸನ ನಿಜವೆಂದು ಒಪ್ಪಿಕೊಂಡರೂ ಚಿತ್ರದುರ್ಗದಲ್ಲಿ ಅಷ್ಟುಹೊತ್ತಿಗಾಗಲೇ ಮುರುಘಾ ಮಠವು ಸ್ಥಾಪನೆಯಾಗಿತ್ತೆಂದು ನಾವು ಈ ಹಿಂದೆ ಹೇಳಿದ ಸಂಗತಿಗಳಿಂದ ನಿರ್ಧರಿಸಬಹುದಾಗಿದೆ.

ಕಲ್ಯಾಣ ಪಟ್ಟಣದ ಶೂನ್ಯಪೀಠದ ಪರಂಪರೆಯಲ್ಲಿ ಇನ್ನೊಂದು ಗುರು ಸಂಪ್ರದಾಯ ಉಂಟೆಂದು ಏಕೋತ್ತರ ಷಟ್‌ಸ್ಥಲದ ಕರ್ತೃ ಹಾಗೂ ಪ್ರಭುದೇವರ ವಚನಗಳಿಗೆ ಟೀಕೆಯನ್ನು ಬರೆದವರೂ ಆದ ಮಹಾಲಿಂಗದೇವರು ಹೇಳುತ್ತಾರೆ† ಆ ಪರಂಪರೆಯಲ್ಲಿ ಪರಮೇಶ್ವರನೇ ಮೂಲವಾಗಿವುಳ್ಳ ನಂದಿಕೇಶ್ವರ ದೂರ್ವಾಸದೇವರು, § ತ್ರಿಣೇತ್ರ ದೇವರು, ಉರಿಲಿಂಗ ಪೆದ್ದಣ್ಣ, ಸರ್ವೇಶ್ವರ ದೇವರು, ವಿಶ್ವೇಶ್ವರ ಪೆದ್ದಣ್ಣ, ಸಂಹಿತೆ ಕಾಳಿದಾಸ ಭಟ್ಟರು, ಸದಾಶಿವದೇವರು, ಪ್ರಣವಿ ದೇವರು, ಈಶಾನ್ಯದೇವರು,‡ ಚನ್ನಸೋಮದೇವರು, ಬಗೆಯ ಬಂಕನಾಥ, ಶಂಕರದೇವರು, ಗಂಗಾಧರದೇವರು, ಬಂಕನಾಥದೇವರು, ಪುರಾಣದ ಮಾಯಿದೇವರು, ಬಂಕಯ್ಯ ದೇವರು, ಮಹಾಲಿಂಗ ದೇವರು, ಕುಮಾರ ಬಂಕನಾಥ, ಭಕ್ತಿಭಂಡಾರಿ ಜಕ್ಕಣ್ಣ ಎಂಬ ಇಪ್ಪತ್ತು ಮಂದಿ ಹೆಸರುಗಳನ್ನು ಹೇಳಲಾಗಿದೆ. ಇದು ಅಲ್ಲಮಪ್ರಭು ಸಂಪ್ರದಾಯಕ್ಕೆ ವಿಭಿನ್ನವಾಗಿಯೇ ಇದೆ. ಈ ಹೆಸರುಗಳಲ್ಲಿ ಉರಿಲಿಂಗ ಪೆದ್ದಣ್ಣ ವಚನಕಾರ. ಇವನು ಆಂಧ್ರ ದೇಶದ ಶಿವಲೆಂಕ ಮಂಚಣ್ಣನ ಮಗನಾದ ಉರಿಲಿಂಗದೇವರ ಶಿಷ್ಯನು. ಉರಿಲಿಂಗ ದೇವನು ಒಬ್ಬ ಪ್ರಸಿದ್ಧ ವಚನಕಾರನು. ಅವನ ಕಾಲ ಕ್ರಿ.ಶ. 1170. ಉರಿಲಿಂಗ ಪೆದ್ದಿ ಈ ಉರಿಲಿಂಗದೇವನ ಶಿಷ್ಯ ಹಾಗೂ ವಚನಕಾರ; ನಲ್ಲೂರಿ ಮಠಕ್ಕೆ ಸ್ವಾಮಿಯಾಗಿದ್ದನು. (ಕ.ಕ.ಚ.ಭಾ ೧ ಪು. 275)

ಇನ್ನು ಈ ಪರಂಪರೆಯಲ್ಲಿ ಪುರಾಣದ ಮಾಯಿದೇವನು ಪುಲಿಗೆರೆಯವನೆಂದೂ, ಬೇಲೂರಿನಲ್ಲಿ ನಡೆದ ಕೆರೆಯ ಪದ್ಮರಸ ಮತ್ತು ತ್ರಿಭುವನ ತಾತನ ವಾದದಲ್ಲಿ ಪದ್ಮರಸರ ಪಕ್ಷವನ್ನು ವಹಿಸಿದ್ದನೆಂದೂ ಕವಿ ಚರಿತ್ರೆಯಲ್ಲಿ ಹೇಳಿದೆ (ಭಾಗ ೧. ಪುಟ ೨೧೬). ಮಹಾಲಿಂಗ ದೇವರು ಏಕೋತ್ತರ ಶತಸ್ಥಲದ ಕರ್ತೃವೆಂದು ಈ ಹಿಂದೆಯೇ ಹೇಳಲಾಗಿದೆ. ಈತನ ಕಾಲ 1420. ಇವನ ಶಿಷ್ಯನಾದ ಕುಮಾರ ಬಂಕನಾಥನು ಜಕಣ್ಣಾಚಾರ್ಯನ ಗುರು. ಇವನ ಕಾಲ 1430. ಈ ಹೆಸರುಗಳನ್ನು ಬಿಟ್ಟರೆ ಮಹಾಲಿಂಗದೇವನು ಹೇಳುವ ಗುರು ಪರಂಪರೆಯಲ್ಲಿ ಮಿಕ್ಕವರ ಹೆಸರು ಅಪ್ರಸಿದ್ಧವಾಗಿವೆ. ಆದರೆ ಈ ಪರಂಪರೆಯ ಕಟ್ಟಕಡೆಯ ಜನರೂ ಅಲ್ಲಮಪ್ರಭುವಿನ ವಚನಗಳನ್ನು ಮರೆಹೊಕ್ಕಿದ್ದಾರೆ. ಅರ್ಥಾತ್ ಕಲ್ಯಾಣದ ಗುರುಪರಂಪರೆಯನ್ನು ಒಪ್ಪಿಕೊಂಡಿದ್ದಾರೆ ಎಂಬುದು ಗಮನಾರ್ಹ ಸಂಗತಿ.

ಶೂನ್ಯಪೀಠ, ಶೂನ್ಯಸಂಪಾದನೆ ಮೊದಲಾದವುಗಳು ಪಾರಿಭಾಷಿಕ ಶಬ್ದಗಳು. ವೀರಶೈವ ಸಿದ್ಧಾಂತದಲ್ಲಿ ಬ್ರಹ್ಮ, ಶಿವ, ಲಿಂಗ, ಶೂನ್ಯ, ನಿರ್ಬಯಲು, ಬಯಲು, ನಿಶ್ಶೂನ್ಯ, ಸ್ಥಲ ಇತ್ಯಾದಿ ಶಬ್ದಗಳು 'ದೇವರಿಗೆ' ಪರ್ಯಾಯವಾದವು. ಉಪನಿಷತ್ತಿನಲ್ಲಿ ಯಾವುದನ್ನು 'ಬ್ರಹ್ಮ' ಎಂದು ಕರೆಯುತ್ತಾರೋ ಅದನ್ನು ವಚನಕಾರರು 'ಶೂನ್ಯ' ಎಂದು ಕರೆಯುತ್ತಾರೆ. ಶೂನ್ಯ ಸಂಪಾದನೆಯೆಂದರೆ ಶಿವನನ್ನು ಸಂಪಾದಿಸುವುದು ಎಂದು ಅರ್ಥ. ಶಿವಾಗಮಗಳಲ್ಲಿ ಯಾವುದನ್ನು 'ಲಿಂಗ' ಎಂದು ಕರೆಯುತ್ತಾರೋ, ಅದನ್ನು ವಚನ ಶಾಸ್ತ್ರದಲ್ಲಿ 'ಶೂನ್ಯ' ಎಂದು ಕರೆಯುತ್ತಾರೆ. ಶೂನ್ಯಪೀಠ ಎಂದರೆ ಪರಶಿವತತ್ತ್ವಗಳನ್ನು ಬೋಧಿಸುವ ಪೀಠ ಎಂದು ಅರ್ಥ. ವೀರಶೈವ ಸಮಾಜ ಮತ್ತು ಸಿದ್ಧಾಂತಗಳಲ್ಲಿ ಈ ಶೂನ್ಯಪೀಠದ ಮಹತ್ವ ಬಹಳವಾಗಿದೆ. ಶಿವಾಗಮಗಳಿಂದ ಸ್ಫೂರ್ತಿಯನ್ನು ಹೊಂದಿದ ಶಿವತತ್ವಗಳನ್ನು ಬೋಧಿಸುವ ಸಲುವಾಗಿಯೇ ಕಾರಣ ಪುರುಷರಾದ ಬಸವೇಶ್ವರರಿಂದ ಈ ಪೀಠವು ಕಲ್ಯಾಣದಲ್ಲಿ ಸ್ಥಾಪಿತವಾಯಿತು. ಸನಾತನವಾದ ವೀರಶೈವ ಧರ್ಮದಲ್ಲಿ ಬಸವಣ್ಣನವರು ಅನುಭವ ಮಂಟಪದ ಆದೇಶದಂತೆ ಒಂದು ದೊಡ್ಡ ಕ್ರಾಂತಿಯನ್ನು ಉಂಟುಮಾಡಿದರೆಂಬುದು ಇತಿಹಾಸ ಪ್ರಸಿದ್ಧವಾಗಿದೆ. ಆ ಕ್ರಾಂತಿಕಾರಕ ತತ್ತ್ವಗಳನ್ನು ಜನತೆಯಲ್ಲಿ ಅನುಷ್ಠಾನಕ್ಕೆ ತರುವಂತೆ ಮಾಡಬೇಕೆಂಬುದೇ ಶೂನ್ಯಪೀಠದ ಸ್ಥಾಪನೆಯಲ್ಲಿ ಬಸವಣ್ಣನವರ ಮುಖ್ಯೋದ್ದೇಶವಿತ್ತೆಂದು ಕಾಣುತ್ತದೆ.

† ಏಕೋತ್ತರ ಶತಸ್ಥಲದ ಪೀಠಿಕೆ ‡ ಕೂಡಲಸಂಗಮದ ಈಶಾನ್ಯಗುರುವಿಗೂ ಈತನಿಗೂ ಸಂಬಂಧವುಂಟೆ ?
§ ಇವನು ಶಿವಭಕ್ತ ದುರ್ವಾಸನಿಗಿಂತ ಭಿನ್ನನೇ ?

ಶೂನ್ಯಪೀಠದ ಪರಂಪರೆಯಲ್ಲಿ ಚಿತ್ರದುರ್ಗದ ಮುರುಘಾ ಮಠವು ಸುಮಾರು 400 ವರ್ಷಗಳಿಂದ ತನ್ನದೇ ಆದ ಕೆಲವು ಮಹತ್ವದ ದಾಖಲೆಗಳನ್ನು ಸ್ಥಾಪಿಸಿಕೊಂಡು ಬಂದಿದೆ. ಅದರಲ್ಲಿ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು ಸಮಾಜಕ್ಕೂ, ದೇಶಕ್ಕೂ, ಅಪರಿಮಿತವಾದ ಉಪಕಾರಗಳನ್ನು ಮಾಡಿರುತ್ತಾರೆ. ಅವರನ್ನು ಕಣ್ಣಾರ ಕಂಡವರು ಅವರು ಅಸಧಾರಣ ಪುರುಷರೆಂದೂ, ಆದರ್ಶ ಗುರುಗಳೆಂದೂ ಭಾವಿಸಿದ್ದಾರೆ. ಅಂತಹ ಮಹಾಮಹಿಮರ ಶತಮಾನೋತ್ಸವವನ್ನು ಆಚರಿಸುವ ಸೌಭಾಗ್ಯ ನಮಗೆ ಬಂದುದು ಶಿವನ ಕೃಪೆಯೆಂದೇ ತಿಳಿಯಬೇಕಾಗಿದೆ.

ಚಿತ್ರದುರ್ಗ.

ಚಿತ್ರದುರ್ಗವು ಕರ್ನಾಟಕದ ಪ್ರಮುಖವಾದ ಒಂದು ಪಟ್ಟಣ. ಬೆಂಗಳೂರು-ಧಾರವಾಡ ಹೆದ್ದಾರಿಯಲ್ಲಿದೆ. ಇದು ಜಿಲ್ಲೆಯ ಮುಖ್ಯ ಪಟ್ಟಣ. ಇದು ವ್ಯಾಪಾರ ಕೇಂದ್ರವೇ ಅಲ್ಲದೆ ಐತಿಹಾಸಿಕ ದೃಷ್ಟಿಯಿಂದಲೂ ಮಹತ್ವದ ಸ್ಥಳವಾಗಿದೆ. ಹಿಂದಿನ ಕಾಲದಲ್ಲಿ ಇದು ಒಂದು ಗಣ್ಯವಾದ ಗಿರಿದುರ್ಗವಾಗಿತ್ತು. ಇಲ್ಲಿ ಹತ್ತಿ ಮತ್ತು ಧಾನ್ಯದ ವ್ಯಾಪಾರ ಬಹಳವಾಗಿ ನಡೆಯುತ್ತದೆ. ಈ ಜಿಲ್ಲೆಯಲ್ಲಿ ಚಾಲುಕ್ಯರು, ಹೊಯ್ಸಳರು, ವಿಜಯನಗರದವರು ಮತ್ತು ಚಿತ್ರದುರ್ಗದವರು ಇವರಿಗೆ ಸಂಬಂಧಪಟ್ಟ ಹಲವು ಮಹತ್ವವಾದ ಶಿಲಾಶಾಸನಗಳಿವೆ. ಈ ಜಿಲ್ಲೆಗೆ ಸೇರಿದ ಮೊಳಕಾಲ್ಮೂರು ತಾಲ್ಲೂಕಿನ ಬ್ರಹ್ಮಗಿರಿಯಲ್ಲಿ ಅಶೋಕನ ಶಿಲಾಶಾಸನ ಸಿಕ್ಕಿದೆ. ದಾವಣಗೆರೆ, ಚಳ್ಳಕೆರೆ ಮೊದಲಾದುವು ಈ ಜಿಲ್ಲೆಯ ಮತ್ತೆ ಕೆಲವು ವ್ಯಾಪಾರ ಸ್ಥಳಗಳು. ಚಿತ್ರದುರ್ಗ ಬೆಟ್ಟವು ಮದಿಕರಿ ನಾಯಕರ ಕಾಲದ ಏಳುಸುತ್ತಿನ ಕೋಟೆಯಿಂದ ವಿರಾಜಮಾನವಾಗಿದೆ. ಕೆಳದಿಯ ರಾಜ್ಯದ ಭುವನಗಿರಿದುರ್ಗದಲ್ಲಿ ಏಳುಸುತ್ತಿನ ಕೋಟೆಯಿದ್ದರೂ ಅದು ಚಿತ್ರದುರ್ಗ ಕೋಟೆಯಂತೆ ಬಲವಾಗಿಲ್ಲ. ಈ ಕೋಟೆಯ ಒಳಭಾಗದಲ್ಲಿ ಅಂದರೆ ಬೆಟ್ಟದ ಮೇಲೆ ಸಂಪಿಗೆ ಸಿದ್ಧೇಶ್ವರ, ಹಿಡಿಂಬೇಶ್ವರ, ಬಸವೇಶ್ವರ, ಓಬಳೇಶ್ವರ ಮೊದಲಾದ ಕೆಲವು ದೇವಾಲಯಗಳಿವೆ. ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ಅಧಿಕಾರಕ್ಕೆ ಒಳಪಟ್ಟ ಸುಭದ್ರವೂ, ವಿಸ್ತಾರವೂ ಆದ ಮಠವಿದೆ. ಅದನ್ನು ಮೇಲಿನ ಮಠ ಎಂದು ಕರೆಯುತ್ತಾರೆ. ಇದು ಭರಮಪ್ಪ ನಾಯಕನ ಕಾಲದಲ್ಲಿ ಕಟ್ಟಲ್ಪಟ್ಟಿದೆಂದು ಪಾಳೆಯಗಾರರ ಚರಿತ್ರೆಯಲ್ಲಿ ಹೇಳಿದೆ. ಮಹಾಭಾರತ ಕಾಲದಲ್ಲಿ ಪ್ರಸಿದ್ಧನಾದ ಹಿಡಿಂಬಾಸುರನ ದೇವಾಲಯವು ಚಿತ್ರದುರ್ಗ ಬೆಟ್ಟದಲ್ಲಿದೆ. ಇವನ ತಂಗಿಯಾದ ಹಿಡಂಬಿಯನ್ನು ಪಾಂಡವ ಭೀಮಸೇನನು ಮದುವೆಯಾಗಿದ್ದನೆಂದೂ, ಇವರ ಹೊಟ್ಟೆಯಲ್ಲಿ ಘಟೋದ್ಗಚ ಎಂಬ ಮಹಾವೀರನು ಮಗನಾಗಿ ಹುಟ್ಟಿದ್ದನೆಂದೂ ಭಾರತದಲ್ಲಿ ಹೇಳಿದೆ. ಆ ಕಾಲದ ಮಾಯಾಯುದ್ಧದಲ್ಲಿ ಘಟೋದ್ಗಚನು ಅಗ್ರಗಣ್ಯನಾಗಿದ್ದನು. ಕುರುಕ್ಷೇತ್ರದಲ್ಲಿ ಪಾಂಡವರಪರವಾಗಿ ಕೌರವರ ಮೇಲೆ ಇವನು ಯುದ್ಧ ಮಾಡಿದನು.

ಚಿತ್ರದುರ್ಗದ ಬೆಟ್ಟದ ತಪ್ಪಲಿನಲ್ಲಿ ಅಂಕಲಗಿ ಮಠವಿದೆ. ಇದು ಮುರುಘಾಮಠದ ಅಧಿಕಾರಕ್ಕೆ ಒಳಪಟ್ಟಿದೆ. ಇಲ್ಲಿ ಕದಂಬರ ಕಾಲದ ಪ್ರಾಕೃತ ಶಾಸನವಿದೆ. ಈ ಬೆಟ್ಟದ ತಪ್ಪಲಿನಲ್ಲಿ ಬೌದ್ಧರ ಕಾಲದಲ್ಲಿ ಚಂದ್ರವಳ್ಳಿಯೆಂಬ ಒಂದು ನಗರವಿತ್ತೆಂದು ಇಲ್ಲಿನ ಭೂಪ್ರದೇಶಗಳನ್ನು ಉತ್ಖನನ ಮಾಡಿದ ತಜ್ಞರು ಹೇಳುತ್ತಾರೆ. ಇಲ್ಲಿ ರೋಮನರ ಮತ್ತು ಚೀನಾದವರ ನಾಣ್ಯಗಳು ಸಿಕ್ಕಿವೆ. ಅಂದರೆ ಕ್ರಿ.ಶ. ಪ್ರಾರಂಭ ಕಾಲದಲ್ಲಿ ಈ ಚಂದ್ರವಳ್ಳಿ ಪಟ್ಟಣವು ಒಳ್ಳೆಯ ವ್ಯಾಪಾರ ಸ್ಥಳವಾಗಿತ್ತೆಂದು ಊಹಿಸಬಹುದು. ಚಿತ್ರದುರ್ಗಕ್ಕೆ ಅನತಿದೂರದಲ್ಲಿರುವ ಜೋಗಿಮಟ್ಟಿಯು ಜಿಲ್ಲೆಯ ಆರೋಗ್ಯ ಕೇಂದ್ರವೆಂದು ಹೇಳಲಾಗಿದೆ. ಇದು ಸಮುದ್ರ ಮಟ್ಟಕ್ಕೆ 3,803 ಅಡಿಗಳ ಎತ್ತರದಲ್ಲಿದೆ. ಈ ಜಿಲ್ಲೆಯಲ್ಲಿ ಇದೇ ಎತ್ತರವಾದ ಸ್ಥಳ.

ಚಿತ್ರದುರ್ಗ ಪಟ್ಟಣಕ್ಕೆ ಅನತಿ ದೂರದಲ್ಲಿ ಬೆಟ್ಟದ ಬುಡದಲ್ಲಿ ಶೂನ್ಯ ಸಿಂಹಾಸನದ ಪರಂಪರೆಗೆ ಸೇರಿದ ಮುರುಘಾಮಠವಿದೆ. ಇದು ಇದೇ ಹೆಸರಿನ ಗುಳೇದಗುಡ್ಡ, ಧಾರವಾಡ, ಕುಮಟೆ, ಕಾಸರಗೋಡು, ಸಿದ್ಧಾಪುರ, ತುಮಕೂರು, ಅನಂತಪುರ (ಈಗಿನ ಆನಂದಪುರ) ಮೊದಲಾದ ಊರುಗಳಲ್ಲಿರುವ ಮುರುಘಾಮಠಗಳಿಗೆ ಮೂಲಸ್ಥಾನವೆಂದು ಹೇಳಲಾಗಿದೆ. ಇಲ್ಲಿ ಕಲ್ಯಾಣದ ಶೂನ್ಯಸಿಂಹಾಸನಕ್ಕೆ ಸೇರಿದ ಚಿನ್ಮೂಲಾದ್ರಿಯ ಶೂನ್ಯಪೀಠವಿದೆ. ಇದರ ಸಂಸ್ಥಾಪಕರು ಮುರುಘರಾಜೇಂದ್ರ ಸ್ವಾಮಿಗಳು. ಅವರ ಗದ್ದುಗೆಯು ಶ್ರೀಮಠದಲ್ಲಿ ಕರ್ತೃಗಳ ಗದ್ದುಗೆ ಎಂಬ ಹೆಸರಿನಿಂದ ವಿರಾಜಮಾನವಾಗಿದೆ. ಈ ಮುರುಘಾಮಠವು ಬೃಹತ್ತು ಮತ್ತು ಮಹತ್ತುಗಳಿಂದ ಕೂಡಿರುವುದರಿಂದ ಇದನ್ನು ಬೃಹನ್ಮಠ ಎಂದು ಕರೆಯುತ್ತಾರೆ. ಈ ಮಠವನ್ನು ಕ್ರಿ.ಶ. 1530 ರಲ್ಲಿ ಸ್ಥಾಪಿಸಿರಬೇಕೆಂದು ಇತಿಹಾಸತಜ್ಞರು ತರ್ಕಿಸುತ್ತಾರೆ. ಈ ಮಠದ ಶಿಲ್ಪವೂ ಕೂಡ 400–500 ವರ್ಷಗಳಷ್ಟು ಪ್ರಾಚೀನವಾದುದೆಂದು ಮೈಸೂರು ಗೆಜಿಟಿಯರ್‌ನಲ್ಲಿ ಹೇಳಿದೆ. ಭಾರತದಲ್ಲಿ ಇರುವ ಹಲವಾರು ಪ್ರಮುಖವಾದ ಮಠಗಳಲ್ಲಿ ಈ ಮುರುಘಾಮಠವು ಪರಿಗಣಿಸಲ್ಪಟ್ಟಿದೆ. ಈ ಮಠದ ಪರಂಪರೆಯಲ್ಲಿ ಅನೇಕ ಕವಿಗಳೂ, ವಿದ್ವಾಂಸರೂ ಆಗಿಹೋಗಿರುತ್ತಾರೆ. ಇವರಲ್ಲಿ ಕನ್ನಡದಲ್ಲಿಯೂ, ಸಂಸ್ಕೃತದಲ್ಲಿಯೂ ಗ್ರಂಥಗಳನ್ನು ಬರೆದ ಮಹನೀಯರಿದ್ದಾರೆಂಬುದು ಗಮನಾರ್ಹ. ಮುಖ್ಯವಾಗಿ ಕಲ್ಯಾಣದ ಶೂನ್ಯಪೀಠದ ಪರಂಪರೆಯಲ್ಲಿ ಚಿತ್ರದುರ್ಗದ ಮುರುಘಾಮಠವು ಪ್ರಮುಖವಾದುದೆಂದು ಪರಿಗಣಿಸಲ್ಪಟ್ಟಿದೆ. ಈ ಮಠದ ಸ್ವಾಮಿಗಳು ಚಿತ್ರದುರ್ಗದ ಪಾಳೆಯಗಾರರು, ಮೈಸೂರು ಮಹಾರಾಜರು, ಕೊಲ್ಲಾಪುರದ ಮಹಾರಾಜರು ಮೊದಲಾದ ಅನೇಕ ಮಂದಿ ರಾಜಾಧಿರಾಜರಿಗೆ ಗುರುಗಳಾಗಿರುತ್ತಾರೆ. ಈ ಮಠದ ಸಂಪತ್ತು ಮತ್ತು ಮಹತ್ತು ಹೆಚ್ಚಲು ಇದೂ ಒಂದು ಮುಖ್ಯವಾದ ಕಾರಣವಾಗಿದೆ.

ಈ ಮಠದಲ್ಲಿ ಈ ಹಿಂದೆ ಅಧ್ಯಕ್ಷರಾಗಿದ್ದ ಶ್ರೀ ಜಯದೇವ ಜಗದ್ಗುರುಗಳು ಅತ್ಯಂತ ಪ್ರಖ್ಯಾತರು. ಅವರ ಹೆಸರಿನಲ್ಲಿ ಚಿತ್ರದುರ್ಗ, ದಾವಣಗೆರೆ, ಬೆಂಗಳೂರು, ಮೈಸೂರು, ತುಮಕೂರು, ತಿಪಟೂರು, ಅರಸೀಕೆರೆ, ಧಾರವಾಡ ಮತ್ತು ಕಾಶಿ ಕ್ಷೇತ್ರಗಳಲ್ಲಿ

ವಿದ್ಯಾಕೇಂದ್ರಗಳು, ಪ್ರಸಾದ ನಿಲಯಗಳು, ಪುಸ್ತಕಾಲಯಗಳು, ವೈದ್ಯಮಂದಿರಗಳು ಬಹಳವಾಗಿವೆ. ವಿದ್ಯಾದಾನಕ್ಕಾಗಿ ಸುಮಾರು 50 ಲಕ್ಷಕ್ಕಿಂತಲೂ ಹೆಚ್ಚು ಹಣವನ್ನು ಅವರು ಖರ್ಚುಮಾಡಿರುತ್ತಾರೆ. ಹರಿಜನೋದ್ಧಾರ ವಿಷಯದಲ್ಲಿ ಅವರು ಹಿಂದೂ ಮಠಾಧಿಪತಿಗಳಲ್ಲಿ ಪ್ರಪ್ರಥಮರಾಗಿದ್ದಾರೆ. 1938 ರಲ್ಲಿ ಹಾವೇರಿಯಲ್ಲಿ ಜಯದೇವ ಜಗದ್ಗುರುಗಳು ಮಹಾತ್ಮಾಗಾಂಧಿಯವರನ್ನು ಭೆಟ್ಟಿಯಾಗಿದ್ದರು. ಹರಿಜನೋದ್ಧಾರದ ಬಗೆಗೆ ಬಸವಣ್ಣನವರು ಕೈಗೊಂಡ ದಾರಿ ಏನೆಂಬುದನ್ನು ಅವರಿಗೆ ನಿರೂಪಿಸಿದರು. ಕುಲ, ಜಾತಿ, ಭೇದವಿಲ್ಲದೆ ಅರ್ಹರೆಂದು ತೋರಿದ ವಿದ್ಯಾರ್ಥಿಗಳಿಗೆ ಉದಾರಾಶ್ರಯವನ್ನು ಕೊಟ್ಟಿರುತ್ತಾರೆ. ಅವರನ್ನು ಕಂಡ ಜನ ಆದರ್ಶಗುರುಗಳೆಂದು ಅಸಾಧಾರಣ ಪುರುಷರೆಂದು ಈಗಲೂ ಕರೆಯುತ್ತಾರೆ. ಅವರ ಶತಮಾನೋತ್ಸವವು ಈಗ ನಡೆಯುತ್ತಿರುವುದು ನಿಜಕ್ಕೂ ಕನ್ನಡಿಗರಿಗೆ ಸಂತೋಷವನ್ನುಂಟುಮಾಡುವ ಸಂಗತಿಯಾಗಿದೆ.

ಈ ಮುರುಘಾಮಠಕ್ಕೆ ಯೋಗಿ, ಜೋಗಿ, ಭೋಗಿ ಎಂಬ ಮೂರು ಜನರ ಸಂಕೇತವಾಗಿ ಮೂರು-ಘಿ ಅಥವಾ ಮುರುಘಿ ಎಂಬ ಹೆಸರು ಬಂದಿತೆಂದು ಮೈಸೂರು ಗೆಜೆಟ್‌ಯರ್‌ನಲ್ಲಿ ಹಾಗೂ ಹಲವು ಪತ್ಯ ಪುಸ್ತಕಗಳಲ್ಲಿ ಹೇಳಿರುವುದು ಶುದ್ಧ ತಪ್ಪು. ತಮಿಳಿನಲ್ಲಿ ಮುರುಘನ್ ಎಂದರೆ ಷಣ್ಮುಖನೆಂದು ಅರ್ಥ. ಅರುವತ್ತು ಮೂರು ಮಂದಿ ಪುರಾತನರಲ್ಲಿ ಮುರುಘರು ಎಂಬ ಒಬ್ಬ ಮಹಾತ್ಮರಿದ್ದಾರೆ. ಅವರು ಷಣ್ಮುಖನ ಅವತಾರವೆಂದು ಭಾವಿಸಲಾಗಿದೆ. ಅವರ ಹೆಸರಿನಲ್ಲಿರುವ ಈ ಮಠಕ್ಕೆ ಮುರುಘಾಮಠ ಎಂಬ ಹೆಸರು ಆ ಕಾರಣದಿಂದ ಬಂದಿದೆ. ಈಗ ಈ ಚಿನ್ಮೂಲಾದ್ರಿ ಶೂನ್ಯಪೀಠದ ಅಧ್ಯಕ್ಷರಾಗಿ ಶ್ರೀ ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು ವಿರಾಜಮಾನರಾಗಿದ್ದಾರೆ. ಇವರ ಕಾಲದಲ್ಲಿ ಶ್ರೀಮಠದ ಕೀರ್ತಿಯು ಕ್ರಮ ಕ್ರಮದಿಂದ ಹೆಚ್ಚುತ್ತಾ ಬಂದಿದೆಯೆಂಬುದು ಸ್ಮರಣಾರ್ಹ.

ಕರಿ ಘನ; ಅಂಕುಶ ಕಿರಿದೆನ್ನಬಹುದೆ ? ಬಾರದಯ್ಯಾ
ಗಿರಿ ಘನ; ವಜ್ರ ಕಿರಿದೆನ್ನಬಹುದೆ ? ಬಾರದಯ್ಯಾ
ತಮಂಧ ಘನ; ಜ್ಯೋತಿ ಕಿರಿದೆನ್ನಬಹುದೆ ? ಬಾರದಯ್ಯಾ
ಮರಹು ಘನ; ನಿಮ್ಮ ನೆನೆವ ಮನ ಕಿರಿದೆನ್ನಬಹುದೆ ?
ಬಾರದಯ್ಯಾ ಕೂಡಲ ಸಂಗಮದೇವಾ.

—ಬಸವಣ್ಣ

ಕರ್ತೃ ಮುರಿಗೇಶ

ಸಂಗ್ರಹಕಾರರು .
ಪಿ. ಗುಡದಪ್ಪ, ಹೆಡ್‌ಮಾಸ್ಟರ್,
ಜಿಳಲಗೆರೆ.

ಚಿತ್ರದುರ್ಗಾಧೀಶ ಕರ್ತೃ ಮುರಿಗೇಶ
ಧಾತ್ರಿ ಭಕ್ತರನು ಪೊರೆಯುವ
ಸತ್ಯ ಪ್ರಕಾಶ ಬಾ ಮುರಿಗೇಶ

"ಏಳು ಕಲ್ಲುಗಳ ಎತ್ತರದ ಗೋಡೆಗಳು
ಏಳು ಸುತ್ತಿನ ಕೋಟೆಯ ಸಾಲುಗಳು
ಏಳು ಗಿರಿ ಗುಹೆಗಳು ಏಳು ಕೆರೆ ತೊರೆಗಳು
ಏಳುನೂರು ಕಲ್ಲುಮಠಧೀಶ ಮುರಿಗೇಶ ಬಾ" ॥ ೧ ॥

"ಧವಳಗಿರಿ ಬಳಿಯೊಳಿರುವೆರಡು ಕೆರೆಯ ಬಳಿ
ಶಿವನ ರಜತಾದ್ರಿ ಬೃಹನ್ಮಠದ ಗುರು ಪೀಠದಿ
ಭವದ ಭಯವಳಿಸುವ ಲಿಂಗದ ನೆಲೆಯರುಹುವ
ಶಿವನ ಅನುಭಾವವೀಯುವ ಮುರಿಗೇಶ ಬಾ" ॥ ೨ ॥

"ಮಂಗಳಾಂಗನೆ ಗುರು ಲಿಂಗಚರವಂದಿತ
ಜಂಗಮಾಗ್ರಣಿ ಶೂನ್ಯಪೀಠ ಜಗದ್ಗುರುವರ
ಲಿಂಗ ಲೀಲಾಂಗನೆ ತುಂಗ ಭಸಿತಾಂಗನೆ
ಸಂಗ ಶರಣರನುದ್ಧರಿಸಲ್ಕೆ ಮುರಿಗೇಶ ಬಾ" ॥ ೩ ॥

ಮುರಿಗೆ ಶಾಂತವೀರ[1]

ಲೇಖಕರು : ಎಸ್. ಶಿವಣ್ಣ, ಎಂ.ಎ.,
ಕನ್ನಡ ಅಧ್ಯಯನ ಕೇಂದ್ರ,
ಬೆಂಗಳೂರು ವಿಶ್ವವಿದ್ಯಾನಿಲಯ.

ಶೂನ್ಯ ಸಿಂಹಾಸನ ಪರಂಪರೆಗೆ ಸಂಬಂಧಿಸಿದ ಚಿತ್ರದುರ್ಗದ ಬೃಹನ್ಮಠವು ವೀರಶೈವ ಧಾರ್ಮಿಕ ಸಂಸ್ಥೆಗಳಲ್ಲಿ ಒಂದಾಗಿದ್ದು, ವೀರಶೈವ ಸಮಾಜದ ಪುರೋಭಿವೃದ್ಧಿಗೆ ಅತಿಶಯವಾದ ಸೇವೆಯನ್ನು ಸಲ್ಲಿಸಿದೆ ಹಾಗೂ ಸಲ್ಲಿಸುತ್ತಲಿದೆ. ಈ ಮಠದ ಗುರುಪರಂಪರೆ ಸುಮಾರು ಹದಿನೇಳನೆಯ ಶತಮಾನದ ಮಧ್ಯಂದಿನಿಂದ ಇಂದಿನ ವರೆಗೂ ಅವಿಚ್ಛಿನ್ನವಾಗಿ ನಡೆದುಬಂದಿದೆ. ಈ ಪರಂಪರೆಯ ಇತಿಹಾಸವನ್ನು ತಿಳಿಯುವಲ್ಲಿ ಗುರುಮಠದ ಶಿಷ್ಯರಾದ ಮಹಾದೇವನ (ಕ್ರಿ .ಶ. 1870) 'ಮಹಾಲಿಂಗೇಂದ್ರ ವಿಜಯ'[2] ಮತ್ತು ರುದ್ರದೇವ (ಸು. 19 ಶ.) ನ 'ಮುರಗೇಂದ್ರ ವಿಜಯ ಕಾವ್ಯ'[3] ಗಳು ಪ್ರಮುಖ ಆಕರಗಳಾಗಿವೆ. ಅಲ್ಲದೆ ಆನುಷಂಗಿಕವಾಗಿ ಆ ಪ್ರದೇಶದ ಶಾಸನ ಸಾಮಗ್ರಿ, 'ಪಟ್ಟವಲ್ಲರಿ' ಮೊದಲಾದುವುಗಳನ್ನು ಬಳಸಿಕೊಳ್ಳಬಹುದಾಗಿದೆ.

ಬೃಹನ್ಮಠದ ಸ್ವಾಮಿಗಳ ಪರಂಪರೆಯನ್ನು ತಿಳಿಸುವ ಮಹಾಂತ ಸ್ವಾಮಿ (ಸು. 1700) ಕೃತ 'ಮಹಾಂತಸ್ವಾಮಿಗಳ ನಾಂದ್ಯ',[4] ಸೋಮಶೇಖರ ಶಿವಯೋಗಿ (ಸು. 1750) ಕೃತ 'ಷಟ್ಸ್ಥಲ ಜ್ಞಾನಸಾರಾಮೃತ ವಚನದ ಟೀಕೆ'[5] ಹಾಗೂ ಮಹಾದೇವ (ಕಿ.ಶ. 1870) ನ 'ಮಹಲಿಂಗೇಂದ್ರನ ವಿಜಯ'[2] ಗಳಲ್ಲಿ ಏಕತೆ ಇಲ್ಲ.

ಮಹಾಂತಯ್ಯ[4] ನಂತೆ ಮುರಿಗೆ ಶಾಂತವೀರನವರೆಗಿನ ಗುರು ಪರಂಪರೆ ಈ ರೀತಿ ಇದೆ:—

ಸಿದ್ಧಲಿಂಗ
|
ಬೋಳ ಬಸವ
|
ಉದ್ದವಾದ ಗುರು (=ಗಗನದಾರ್ಯ)
|
ಸಿದ್ಧ ಕಟ್ಟಗೆಹಳ್ಳಿ ದೇವ
|
ಮುರಿಗೆಯದೇವ (=ಮುರಿಗೆ ಶಾಂತವೀರ)

ಸೋಮಶೇಖರ ಶಿವಯೋಗಿ[5] ಯ ಪ್ರಕಾರ:—

ತೋಂಟದ ಸಿದ್ಧಲಿಂಗ
|
ಬೋಳ ಬಸವೇಶ್ವರ
|
ಗುಮ್ಮಳಾಪುರದ ಸಿದ್ಧವೀರಯ್ಯ
|
ಗಗನದಯ್ಯ
|
ಕಟ್ಟಗೆಹಳ್ಳಿ ಸಿದ್ಧಲಿಂಗೇಶ್ವರ
|
ಮುರಿಗೆ ಶಾಂತವೀರೇಶ್ವರ.

ಮಹಾದೇವನಂತೆ[2] :—

ಚೆನ್ನಬಸವ
|
ತೋಂಟದ ಸಿದ್ಧಲಿಂಗ
|
ಬೋಳ ಬಸವ
|
ಸಿದ್ಧವೀರ (ಗುಮ್ಮಳಾಪುರ)
|
ಗೂಳೂರು ಸಿದ್ಧವೀರ
|
ಗಗನದಯ್ಯ
|
ಕಟ್ಟಗೆಹಳ್ಳಿ ಸ್ವಾಮಿ
|
ಮುರಿಗೆ ಶಾಂತವೀರ.

ಮುರಿಗೆ ಶಾಂತವೀರರಿಗೆ ಮುರುಗೆಯ ದೇಶಿಕ, ಮುರುಗೆ ಗುರು, ಮುರುಗೆರಾಯ ಮೊದಲಾದ ಹೆಸರುಗಳೂ ಉಂಟು[6]. 'ಮುರಿಗೆ ಶಾಂತವೀರೇಶ್ವರನ ಕಂದ'[7] ದಿಂದ ಇವರಿಗೆ ಕರಿಬಸವರಾಜ ಎಂಬ ಹೆಸರೂ ಇದ್ದಂತೆ ತಿಳಿದುಬರುತ್ತದೆ.

ಕಟ್ಟಗೆಹಳ್ಳಿ ಸಿದ್ಧಲಿಂಗರ ಕರಜಾತರಾದ ಮುರಿಗೆ ಶಾಂತವೀರರ ಜನನ, ಬಾಲ್ಯಾದಿಗಳ ಬಗೆಗೆ ಯಾವ ವಿಷಯವು ತಿಳಿದುಬಂದಿಲ್ಲ. ಮಹಾದೇವ ಕವಿ ಅಲ್ಲಮನಪರಾವತಾರದಂತಿದ್ದ ಶಾಂತವೀರರು ಹಸ್ತದಲ್ಲಿನ ವೀಣಾ ನಾದದೊಡನೆ ದೇಶಗಳ ಸಂಚಾರ ಮಾಡುತ್ತ ಚಿನ್ಮೂಲಗಿರಿ (ಚಿತ್ರದುರ್ಗ) ಯ ಬಳಿಗೆ ಬಂದಂತೆ ನಿರೂಪಿಸಿದ್ದಾನೆ.

ಆಗಿನ ಅವರ ಬಹಿರ್ವೇಶದ ವರ್ಣನೆ ಹೀಗಿದೆ:—

ಅಂಬಕಯುಗಂ ಲೋಹಿತಂ ಸ್ಮಶ್ರುತೋಹಿತಂ
ಶುಂಭದಖಿಲಾಂಗರೋಮಾಳಿಯೂರ್ಧ್ವಂ ಕರಾ
ಲಂಬಿತದ್ವಯತಂತ್ರೀವೀಣಾರವಂ ದಕ್ಷಿಣೋರುಹಸ್ತಾಬ್ಜದಲ್ಲಿ
ಇಂಬಿನಿಂ ತಾಳ್ದ ಮುರಿಗೆಯ ಮುದ್ಗರಂ ಮಸ್ತ
ಕಾಂಬುಜಕೆ ಮುರಿಗೆಯಾಕಾರಕೃತ ಕೌಶೇಯ
ದಂಬರಂ ದೇಹದೊಳ್ ಮುರಿಗೆಯಾಗಿರೆ ಪೊದೆದ ಶಾಲುಮದು
ರಂಜಿಸುತಿರೆ (17–6)

ಮುರಿಗೆಯಾಗಿರಲನಿತು ಚಿಹ್ನಂಗಳಂಗದೊಳ್
ಧರಿಸಿದ ವಳಕ್ಷಭಸ್ಮೋದ್ಧೂಳನಂ ಗಳದೊ
ಳಿರಿಸಿದ ಶಿವಾಕ್ಷಮಣಿಮಾಲಿಕಾ ವಿಸರಮುಂ ಕರದ ಕಿನ್ನರಿಯರವದಿಂ
ಸ್ಮರಿಸುತಂ ಶುದ್ಧ ಪಂಚಾಕ್ಷರಿಯ ಮನುವನಿಂ
ತಿರೆ ನಿಜಾನಂದದಿಂ ಚರಿಸುವನಪೂರ್ವತರ
ಪರಮ ಮುನಿಯಾಕಾರದಿಂದಮಾ ಮುರಿಗೇಂದ್ರ ರಾಜೇಂದ್ರ
ಪಂಚಾನನಂ (17–7)

ಮುಂದುವರಿಯುವುದು

ಮುರಿಗೆ ಶಾಂತವೀರರ ಅನುಗ್ರಹದಂತೆ ಬಿಳಿಚೋಡು ಸಂತತಿಯ ಭರಮನಾಯಕ (1688–1720) ಚಿತ್ರದುರ್ಗದ ಪಾಳೆಯಗಾರನಾಗಿ, ಅವರು ತನ್ನ ರಾಜಧಾನಿಯಲ್ಲಿ ಸ್ಥಿರವಾಗಿ ನೆಲಸುವಂತೆ ಬೆಟ್ಟದ ಮೇಲೆ–ಅರಮನೆ ಒತ್ತಿಗೆ ಇದ್ದ ಚಂಪಕಸಿದ್ಧೇಶ್ವರ ದೇವಾಲಯದ ಹತ್ತಿರ–360 ಅಂಕಣಗಳುಳ್ಳ ಬೃಹನ್ಮಠವನ್ನು ರಚಿಸಿ ಅರ್ಪಿಸಿದನು. ಮತ್ತೆ ಕೆಲವು ವರ್ಷಗಳ ಅನಂತರ ಶಾಂತವೀರರ ಚರಮೇಪ್ಸಿತದಂತೆ–ಅವರ ಶಿವಯೋಗ ಸಮಾಧಿಗೆ ಅನುಕೂಲಿಸುವಂತೆ ಗಿರಿಯ ತಪ್ಪಲಿನಲ್ಲಿ ಈಗಿರುವ ಮತ್ತೊಂದು ಬೃಹನ್ಮಠವನ್ನು ಮಾಡಿಸಿಕೊಟ್ಟನು.

ಶಾಂತವೀರರು ಯಾವಜ್ಜೀವಪರ್ಯಂತವೂ ನಿರ್ಗದರಾಗಿ ನಿರಂತರ ನಾಡಿನಲ್ಲೆಲ್ಲ ಸುತ್ತಾಡಿ ಮೈಸೂರು, ಡಿಲ್ಲಿ, ಹೈದರಾಬಾದ್ ಮೊದಲಾದೆಡೆಗಳಲ್ಲಿ ಹಲವು ಮಹಿಮೆಗಳನ್ನು ಮೆರೆದಿದ್ದಾರೆ.

ಚಿತ್ರದುರ್ಗದಲ್ಲಿ ನೆಲಸಿದ ಅನಂತರ ಶಾಂತವೀರರು ನಿತ್ಯದಾಸೋಹ ವ್ಯವಸ್ಥೆಯನ್ನು ಕೈಕೊಂಡುದಲ್ಲದೆ ನಾಡಿನ ಬೇರೆಡೆಗಳಲ್ಲೂ ದಾಸೋಹ ವ್ಯವಸ್ಥೆಗಾಗಿ ಶ್ರಮಿಸಿದರು. ಇದಕ್ಕಾಗಿ ದುಡಿದವರಲ್ಲಿ ಹರಪನಹಳ್ಳಿ ಸೀಮೆಯಲ್ಲಿನ ಚೀಲಾಳಪ್ಪ ಮತ್ತು ಸ್ವಾದಿ ಸೀಮೆಯಲ್ಲಿನ ಕುಮಾರಪ್ಪ ಪ್ರಮುಖರು.

ಶಾಂತವೀರರ ಕಾಲದಲ್ಲಿ ಮೈಸೂರು ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಧನಗೂರು, ನಂಜನಗೂಡು ತಾಲ್ಲೂಕಿನ ಹುಲ್ಲಹಳ್ಳಿ, ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದಪುರ ಮತ್ತು ಹೈದರಾಬಾದ್ ಮೊದಲಾದೆಡೆಗಳಲ್ಲಿ ಮುರುಘಾ ಮಠಗಳು ಸ್ಥಾಪಿತವಾದವು.[8]

ಶಾಂತವೀರರು ತಮ್ಮ ಪೀಠದ ಉತ್ತರಾಧಿಕಾರಿಗಳಾಗಿ ಇಮ್ಮಡಿ ಗುರುಸಿದ್ಧರನ್ನು ನೇಮಿಸಿದರು. ಆದರೆ ಅವರೂ ಸಹ ತಮ್ಮಂತೆ ಮುಪ್ಪಾದುದನ್ನು ಗಮನಿಸಿ ಅವರ ಉತ್ತರಾಧಿಕಾರಿಗಳಾಗಿ ಸೋದೆಯ ಚೆನ್ನಬಸವಸ್ವಾಮಿಗಳನ್ನು ನೇಮಿಸಿದರು.[9]

ಮುರಿಗಾ ಶಾಂತವೀರರ ಅಂತ್ಯದ ಬಗೆಗೆ ಇಮ್ಮಡಿ ಗುರುಸಿದ್ಧರು ಸ್ವಭಾನು ಸಂ| ಅಧಿಕ ಶ್ರಾವಣ ಶುದ್ಧ ಬಿದಿಗೆ ಸೋಮವಾರ ರಾತ್ರಿ ಮೂರುವರೆ ತಾಸಿನಲ್ಲಿ (ಅಂದರೆ ಕ್ರಿ. ಶ. 5–5–1703 ರಲ್ಲಿ) ಶಿವಲಿಂಗದೊಳು ಬೆರೆದರೆಂದು[10] ತಿಳಿಸಿದ್ದಾರೆ. ಇವರ ಸಮಾಧಿ ಚಿತ್ರದುರ್ಗದ ಬೃಹನ್ಮಠದ ಆವರಣದಲ್ಲಿದೆ.

ಮುರಿಗಾ ಶಾಂತವೀರರು ಧಾರ್ಮಿಕರಂಗದಲ್ಲಿ ಗುರುಗಳಾಗಿ ಸಮಾಜಕ್ಕೆ ಸೇವೆ ಸಲ್ಲಿಸಿದಂತೆ ಸಾಹಿತ್ಯ ರಂಗದಲ್ಲೂ ಗಮನಾರ್ಹವಾದ ಕೃಷಿಗೈದಿದ್ದಾರೆ.

ಕರ್ನಾಟಕ ಕವಿಚರಿತೆಕಾರರಾದ ರಾವ್‌ಬಹದ್ದೂರ್ ಆರ್. ನರಸಿಂಹಾಚಾರ್ಯರು ಶಾಂತವೀರರ ಹೆಸರಿನಲ್ಲಿ ಈ ಕೆಳಕಂಡ 4 ಕೃತಿಗಳನ್ನು ಸೂಚಿಸಿದ್ದಾರೆ.

1) **ಏಕೋನವಿಂಶತಿ ಪ್ರಬಂಧ**[11] : 19 ವಾರ್ಧಕ ಷಟ್ಪದಿಗಳ 'ವೇದಾಂತ ಬೋಧಕ ಕೃತಿ' ಇದಕ್ಕೆ ವ್ಯಾಖ್ಯಾ[12]ನವೊಂದು ರಚಿತವಾಗಿದೆ.

2) **ಪ್ರಭುಲಿಂಗದ ಕಂದ**[13]: ವೀರಶೈವ ಶಿವಯೋಗ ನಿರೂಪಣೆ ಕೃತಿಯ ವಸ್ತು. 53 ಕಂದಗಳಿದ್ದು ಪ್ರತಿ ಕಂದದ ಅಂತ್ಯದಲ್ಲು 'ರಾಜಲಿಂಗ ಪ್ರಭುವೇ' ಎಂಬ ಅಂಕಿತವಿದೆ. ಪರ್ವತ ಶಿವಯೋಗಿಯ ಟೀಕೆಯೊಂದು ಈ ಕೃತಿಗೆ ಉಪಲಬ್ಧವಿದೆ[14].

3) **ವೈರಾಗ್ಯ ಷಟ್ಪದಿ**[15]: 101 ವಾರ್ಧಕ ಷಟ್ಪದಿಗಳಿವೆ. 'ನೀತಿವೇದಾಂತ ಬೋಧಕ' ಕೃತಿ.

4) **ಶಿವಲಿಂಗ ಮಹಿಮಾ ಷಟ್ಪದ**[16]: 105 ವಾರ್ಧಕ ಷಟ್ಪದಿಗಳಿವೆ. ಪ್ರತಿ ಷಟ್ಪದಿಯ ಅಂತ್ಯದಲ್ಲೂ 'ಶಿವಲಿಂಗೇಶ್ವರಾ' ಅಂಕಿತವಿದೆ.

ಮೇಲಿನ ಕೃತಿಗಳಲ್ಲಿ ಮೂರನೆಯದಾದ ವೈರಾಗ್ಯ ಷಟ್ಪದಿ ಶಾಂತವೀರರ ಸ್ವತಂತ್ರ ಕೃತಿಯಲ್ಲ. ಅದು ಮುಖ ಬೋಳುಸಿದ್ಧರಾಮ (ಕ್ರಿ.ಶ. 1596)ನ 'ಷಟ್ಸ್ಥಲ ತಿಲಕ'ದಿಂದ ಆರಿಸಿದ ಷಟ್ಪದಿಗಳ ಸಂಗ್ರಹರೂಪದ ಕೃತಿಯಾಗಿದೆ ಎಂಬ ಅಂಶವನ್ನು ವಿದ್ವಾನ್ ಎಂ. ಎಸ್. ಬಸವರಾಜಯ್ಯನವರು ಬೆಳಕಿಗೆ ತಂದಿದ್ದಾರೆ.[17]

ನಾಲ್ಕನೆಯದಾದ ಶಿವಲಿಂಗ ಮಹಿಮಾ ಷಟ್ಪದದ ಕರ್ತೃ ಇಮ್ಮಡಿ ಗುರುಸಿದ್ಧರು. ಇಮ್ಮಡಿ ಗುರುಸಿದ್ಧರ ಕೃತಿಗಳ 'ಅಂಕಿತ'ವಾದ ಶಿವಲಿಂಗೇಶ್ವರಾ ಇಲ್ಲಿನ ಷಟ್ಪದಿಗಳ ಅಂತ್ಯದ ಅಂಕಿತವಾಗಿದೆ. ಅಲ್ಲದೆ ಇದರ ಹಸ್ತ ಪ್ರತಿಗಳ ಆರಂಭದಲ್ಲಿ ಸ್ಪಷ್ಟವಾಗಿ ಇಮ್ಮಡಿ ಗುರುಸಿದ್ಧರು ಶಿವಲಿಂಗ ಮಹಿಮಾ ಷಟ್ಪದಿಯ ಕೃತಿಕಾರರೆಂದು ಉಲ್ಲೇಖಿಸಿದೆ.[18]

ಕವಿಚರಿತೆಕಾರರು ಗುರುತಿಸಲಾಗದ ಈ ಕೆಳಗಿನ ಕೃತಿಗಳು ಮುರಿಗಾ ಶಾಂತವೀರರ ರಚನೆಗಳೆಂದು ವಿದ್ವಾನ್ ಎಂ. ಎಸ್. ಬಸವರಾಜಯ್ಯನವರು ತಿಳಿಸಿದ್ದಾರೆ.

1) ಕಟ್ಟಿಗೆಹಳ್ಳಿ ಸ್ವಾಮಿಗಳ ತಾರಾವಳಿ : ಕಟ್ಟಿಗೆಹಳ್ಳಿ ಸಿದ್ಧಲಿಂಗರ ಚರಿತೆ[19].

2) ನೀಲಾಂಬಿಕೆ ಲಲಿತ ಸ್ತೋತ್ರ[20] : ಬಸವನ ಪತ್ನಿ ನೀಲಾಂಬಿಕೆ ಸ್ತುತಿ. ಭಾಮಿನಿ ಮತ್ತು ವಾರ್ಧಕ ಷಟ್ಪದಿಗಳ 25 ಪದ್ಯಗಳಿವೆ.

3) ಪಾರಿಜಾತ :[21] ಭಾಮಿನಿಷಟ್ಪದಿಯಲ್ಲಿದೆ.

4) ಮುರುಗೆಸ್ವಾಮಿಗಳ ಮುಕ್ತಿಪ್ರದೀಪಿಕೆ[22]

5) ಮುರಿಗೆಸ್ವಾಮಿಗಳ ವಚನ[23]

6) ರಾಜೇಂದ್ರ ವಿಜಯ ಅಥವಾ ಹಮ್ಮೀರ ಕಾವ್ಯ[24]: ಚಂಪೂಕೃತಿ. 9 ಪ್ರಕರಣಗಳಿವೆ. ಅಲ್ಲಮಪ್ರಭುವಿನ ಗುರು ಅನಿಮಿಷೇಂದ್ರನ ಚರಿತೆ ಕೃತಿಯ ವಸ್ತು.

7) ಲಿಂಗಸಾವಧಾನ ಪ್ರಣವ ಸಂಬಂಧಿ : ಸಮಾಧಿ ಕ್ರಿಯದ ಉದ್ಧರಣೆ.[25]

ಇವುಗಳಲ್ಲದೆ ಡಾ|| ಎಲ್. ಬಸವರಾಜು ಅವರ ಸಂಗ್ರಹದಲ್ಲಿ ಮುರಿಗೆದೇಶಿಕ ವಿರಚಿತ '[ಲಿಂ]ಗದ ಮಹಿಮೆ' ಎಂಬ ಕೃತಿಯೊಂದಿದೆ. ಇದೂ ಸಹ ಶಾಂತವೀರನದಿರಬಹುದು. ಇದರಲ್ಲಿ 7 ಪದ್ಯಗಳಿವೆ.

ಮುರಿಗಾ ಶಾಂತವೀರರನ್ನು ಶಿಷ್ಯರುಗಳೇ ಮೊದಲಾದ ಮಹಾಂತಯ್ಯ (ಸು. 1700), ಕಪ್ಪಿ ನಂಜಯ್ಯ (ಸು. 1700), ಇಮ್ಮಡಿ ಗುರುಸಿದ್ಧ (ಕ್ರಿ. ಶ. 1720), ಸಿದ್ಧಲಿಂಗ ಶಿವಯೋಗಿ[26] (ಸು. 1720), ಚನ್ನಬಸವ[27] (ಸು. 1700), ಹಿರೇಮದಕರಿ ನಾಯಕನ ತಾರಾವಳಿಯ ಅಜ್ಞಾತಕರ್ತೃ[28] (ಸು. 1740), ಜ್ವಲಕಂಠ ಮಹಾಸ್ವಾಮಿ[29] (ಸು. 1750) ಮೊದಲಾದವರು ತಮ್ಮ ಕೃತಿಗಳಲ್ಲಿ ಸ್ತುತಿಸಿದ್ದಾರೆ.

ಬಸವಣ್ಣನವರ ಷಟ್‌ಸ್ಥಲ ವಚನದ ಓಲೆಪ್ರತಿಯೊಂದರ ಆರಂಭದಲ್ಲಿ ಗುರುಬಸವ ಲಿಂಗಾಯನಮಃ ದ ಅನಂತರ ಮುರಿಗೆಯ ಶಾಂತವೀರೇಶ್ವರಾಯ ನಮಃ ಎಂದಿದೆ.[30]

ಏಕೋನವಿಂಶತಿ ಪ್ರಬಂಧಕ್ಕೆ ಟೀಕೆ ಬರೆದಿರುವ ಅಜ್ಞಾತ ಟೀಕಾಕಾರ ತನ್ನ ಕೃತಿಯ ಅಂತ್ಯದಲ್ಲಿ ಶಾಂತವೀರನನ್ನು ಕುರಿತು 'ಶ್ರೀಮದ್ದೇಶಿಕ ವೀರಶೈವ ಸಿದ್ಧಾಂತ ಸ್ಥಾಪನಾಚಾರ್ಯ ಷಟ್‌ಸ್ಥಲ ಚಕ್ರವರ್ತಿ ಮಾಯಾ ಕೋಲಾಹಳ ವಿರಕ್ತ ಶಿಖಾಮಣಿ ನಿರಂಜನ ಪ್ರಭು ಶ್ರೀಮನ್ಮುರಿಗೆಯ ಶಾಂತವೀರ ದೇಶಿಕೇಂದ್ರೇಣ ವಿರಚಿತಾ ಏಕೋನವಿಂಶತಿ ಪ್ರಬಂಧಾಖ್ಯ' ಎಂದಿರುವನು.

ಇಮ್ಮಡಿ ಗುರುಸಿದ್ಧರು 'ಅಮ್ಮವ್ವೆಯ ಯಕ್ಷಗಾನ'ದ ಅಂತ್ಯದಲ್ಲಿ ತಮ್ಮ ಗುರುಗಳ ಸ್ತುತಿರೂಪವಾದ ಹಾಡೊಂದನ್ನು ರಚಿಸಿದ್ದು[32] ಅದನ್ನು ಈ ಮುಂದೆ ಉದ್ಧರಿಸಿದೆ.

ಶ್ರೀ ಸದಾಶಿವ ಗುರುಮೂರ್ತಿಗೆ ಜಯ
ಭಾಸುರ ಮುರಿಗೆಯ ಶಾಂತ ವೀರೇಶಗೆ || ಪಲ್ಲ ||

ವಿನುತ ಸಲ್ಲಾಪಗೆ ವಿನಯ ಕಲಾಪಗೆ
ಮುನಿಸತಿಗಳ ಮನೋವಾಸನಿಗೆ
ವನಮಾಲಿ ವರದಗೆ ವರನದಿಗಭೀರಗೆ
ಮನುರಾಜ ಮಯನಿಗೆ ಮಂಗಳಂ || ೧ ||

ಅಂಗಜಹರನಿಗೆ ಅಸಮವೈಭವನಿಗೆ
ಮಂಗಳರೂಪಗೆ ಮಹನೀಯಗೆ
ಪುಂಗವಗಮನಗೆ ಪೂರ್ಣವಿಲಾಸಗೆ
ಜಂಗಮ ಮೂರ್ತಿಗೆ ಜಯ ಗುಣಗೆ || ೨ ||

ಸಕಲ ನಿಃಕಲನಿಗೆ ಸತತ ನಿಶ್ಚಲನಿಗೆ
ವಿಕಲ ಕುಜ ಪರಶುವಿಗೆ
ಸುಕವಿಸನ್ನುತನಿಗೆ ಸುರಚಿರ ವಚನಗೆ
ಅಕಲಂಕ ಪರಶಿವಲಿಂಗ ರಾಜೇಂದ್ರನಿಗೆ || ೩ ||

ಮೇಲಿನ ಹಾಡಿನ 'ಸುಕವಿಸನ್ನುತ' ಎಂಬ ಪದಪುಂಜ ಗಮನಾರ್ಹವಾದುದು. ಇದು ಅತಿಶಯೋಕ್ತಿಯ ಮಾತಲ್ಲ. ಮುರಿಗೆ ಶಾಂತವೀರನ ಸ್ತುತಿರೂಪವಾದ ಷಟ್ಪದಿ, ವೃತ್ತ, ಕಂದ ಮತ್ತು ಹಾಡುಗಳ ರೂಪದಲ್ಲಿನ ಕೃತಿಗಳು ಉಪಲಬ್ಧವಿದ್ದು ಅವುಗಳನ್ನು ಈ ಮುಂದೆ ಸಂಕ್ಷೇಪವಾಗಿ ಪರಿಚಯಿಸಲಾಗಿದೆ.

1) **ಮಂಗಳಾಷ್ಟಕ**[33] **:** ಕೃತಿ ಅಪೂರ್ಣವಾಗಿದ್ದು 5 ವೃತ್ತಗಳು ಮಾತ್ರ ಲಭಿಸಿವೆ. ಕೃತಿಕಾರನ ಬಗೆಗೆ ಯಾವ ಸಂಗತಿಯು ತಿಳಿಯುವುದಿಲ್ಲ. ಇದರ ಮೊದಲ ಮತ್ತು ಐದನೆಯ ಪದ್ಯಗಳು ಇಂತಿವೆ.

ಮಂಗಳಾರತಿ ಎತ್ತಿರೆ ಶಿವಲಿಂಗ ಶಾಂತ ವೀರೇಶಗೆ
ತುಂಗ ಕುಚದ ನಾರಿಯರುಗಳೆಲ್ಲ ನೆರೆದು ಗಮ್ಮನೆ
ರಂಗ ಮುಖ್ಯರ ಗಂಡ ಕೋವಿದ ರಾಜ ತೇಜ ವಿಲಾಸಗೆ
ಸಿಂಗರಾಂಗದ ಸಾರತತ್ವದ ವಾಸ ಮುರಿಗೆಯ ದೇವಗೆ || ೧ ||

ನೂತ್ನಲೀಲೆಯ ಪುತ್ರ (?) ಸದ್ಗುಣಗಾತ್ರ ಭಾಸುರ ಕಾಂತಗೆ
ಸ್ವಾತ್ಮ ಜ್ಞಾನದ ಜ್ಯೋತಿ ರೂಪಿನ ಕಾರ್ಯ ಕಾರಣದೇವಗೆ
ಆತ್ಮಜ್ಯೋತಿಯ ತೋರಿ ರಕ್ಷಿಪ ಭರ್ಗ ಸೋಜಿಗ ಚೆಲ್ವಗೆ
ರತ್ನದಾರತಿ ಎತ್ತಿರೆ ಘನ ಚನ್ನ ಮುರಿಗೆಯ ದೇವಗೆ || ೫ ||

2) **ಅಯ್ಯನವರ ನಾಂದ್ಯ** ಅಥವಾ **ಮುರಿಗೆಯ ಶಾಂತ ವೀರೇಶ್ವರನ ಪಂಚವಿಂಶತಿ ನಾಂದ್ಯ**[34] **:** ಮಹಾಂತ ಸ್ವಾಮಿ (ಸು. 1700) ಕೃತ.25 ಭಾಮಿನಿ ಷಟ್ಪದಿಗಳಿವೆ. ಇಲ್ಲಿಯ ಪ್ರತಿ ಪದ್ಯದಲ್ಲು ಶಾಂತವೀರೇಶನ ಉಲ್ಲೇಖವಿದೆ.

ಶಿವನು ಶರಧಿಯೊಳಂದು ಗಿರಿಜೆಗೆ
ಶಿವರಹಸ್ಯಾಗಮವ ಪೇಳಿದ
ವಿವರದರ್ಥವನೆಲ್ಲ ಶಿವ ಜಂಗಮದ ಮಹಿಮೆಯನೂ
ಕವಿಗಳರಿಯರುಯೆಂದು ಭುವನದಿ
ಭವಹರನು ತಾನೊಂದು ರೂಪದಿ
ಶಿವಲೋಕದಿಂದಿಳಿದ ಮುರಿಗೆಯ ಶಾಂತವೀರೇಶಾ (2)

ಆದಿಯಲಿ ಗುರು ತೋಂಟದಾರ್ಯಂ
ಭೇದವಿಲ್ಲದೆ ಬಂದು ಇಳೆಯೊಳು
ನಾದಮೂರುತಿ ಕಟ್ಟಿಯಾ ನಿಜಸಿದ್ಧಲಿಂಗಾರ್ಯಂ
ಆದನೆಂಬುದ ಜೀವರರಿಯರು
ವಾದಿಗಳು ತಾವೆತ್ತ ಬಲ್ಲರು
ಮೇದೇವಪತಿ ನೀವೆಯಾದ ಮುರಿಗೆಯಾಚಾರ್ಯಾ (೧೨)

3) **ಮುರಿಗೆಯ ಸ್ವಾಮಿಗಳು ನಿರೂಪಿಸಿದ ನಾಂದ್ಯ** ಅಥವಾ **ಮುರಿಗೆ ಸ್ವಾಮಿಗಳ ನಾಂದ್ಯ:**[35] ಸಿದ್ಧಾಂತ ಸ್ವಾಮಿ(ಸು.1700) ಕೃತವಾಗಿರುವುದು. ಇದರಲ್ಲಿ ವಾರ್ಧಕ ಮತ್ತು ಭಾಮಿನಿಯ 24 ಷಟ್ಪದಿಗಳಿವೆ. ಮೊದಲ ಪದ್ಯದಲ್ಲಿ ಶಾಂತವೀರೇಶ್ವರನ ಸ್ತುತಿ ಇದೆ.

4) **ಮುರಿಗೆಯ ಸ್ವಾಮಿಗಳ ಸ್ತೋತ್ರದ ನಾಂದ್ಯ**[36] **:** ಕಪ್ಪಿ ನಂಜಯ್ಯ (ಸು. 1700) ವಾರ್ಧಕ, ಪರಿವರ್ಧಿನಿ ಮತ್ತು ಭಾಮಿನಿ ಷಟ್ಪದಿಗಳ 25 ಪದ್ಯಗಳಿವೆ. ಕೃತಿಗೆ 'ಶಾಂತಿವೀರೇಶ್ವರನ ಸ್ತೋತ್ರದ ನಾಂದ್ಯ' ಎಂಬ ಹೆಸರೂ ಉಂಟು.

5) **ಮುರಿಗೆ ಶಾಂತವೀರೇಶ್ವರನ ಕಂದ**[2] **:** ಕರ್ತೃವಿನ ಹೆಸರಿಲ್ಲ. 25 ಕಂದಗಳಿವೆ. ಕೃತಿಗೆ 'ಮುರಿಗೆಯ ಕಂದ' ವೆಂಬ ಮತ್ತೊಂದು ಹೆಸರೂ ಉಂಟು. ಪ್ರತಿ ಕಂದದ ಅಂತ್ಯದಲ್ಲೂ ಶಾಂತವೀರೇಶಾ ಎಂಬ ಅಂಕಿತವಿದೆ.

ಕರಕಮಲದ ನ[ಡ]ನಡುವಿನ
ವರಕುಸುಮದ ತುಟ್ಟ, ತುದಿಯ ಸಿಂಹಾಸನದೊಳು
ಹರುಷದಿ ಮೂರ್ತ[ವ]ಮಾಡಿದ
ವರಗುರು ಪರಮ ಪ್ರಕಾಶ ಶಾಂತವಿರೇಶಾ (೮)

ಮು[ರಿಗೆಯ] ಶಾಂತವಿರೇಶ್ವರ
ಕರಿಬಸವರಾಜರೆಂಬಿತ್ತೆರದಭಿಧಾನದಿ
ಚರಿಸುತಲಿ ಬಂದ ಭಕ್ತರ
ಪೊರೆಯಲುಬೇಕೆನುತ ಈಶ ಶಾಂತವಿರೇಶಾ (೨೩)

6) **ಮುರಿಗೆ ಸ್ವಾಮಿಗಳ ತಾರಾವಳಿ**[37]**:** ಕೃತಿಗೆ 'ಮುರಿಗೆಯ ಶಾಂತವೀರಸ್ವಾಮಿಗಳ ತಾರಾವಳಿ' ಎಂಬ ಹೆಸರೂ ಇದ್ದಂತೆ ತಿಳಿದು ಬಂದಿದೆ. ಹಾಡಿನ ರೂಪದಲ್ಲಿದೆ.

7) ಮುರಿಗೆ ಶಾಂತವೀರನ ಹೆಸರನ್ನು ಅಂಕಿತವಾಗುಳ್ಳ ಹಾಡುಗಳು ಹಲವಾರು ಹಸ್ತಪತ್ರಿಕೆಗಳಲ್ಲಿ ಉಪಲಬ್ಧವಿವೆ. ಮುರಿಗೆಯ ಶಾಂತವೀರೇಶಾ – ಅಂಕಿತದ ಎರಡು ಹಾಡುಗಳ ಪಲ್ಲವಿಗಳನ್ನು ಈ ಕೆಳಗೆ ಕೊಡಲಾಗಿದೆ.

i) ವಾರಿಜಮುಖಿ ಕರತಾರೆ ಎನ್ನಯ ಕಾಂತ
ಬಾರಲೊಲ್ಲನು ಸಂಜೀವ
ನೀರಜಭವೆ ×××××× ಚೆಲ್ಲ
ಬಾರನಯ್ಯ ನಮ್ಮ ಮನೆಗಿರದೆ[38] ‖ ಪಲ್ಲ ‖

ii) ವಾರ್ಧಕ ಷಟ್ಪದಿ
ವಿಮಲ ರುದ್ರಾಕ್ಷಿ ಮಣಿ ಮಾಲಿಗಳ ಜಪವನ್ನು
ಕ್ರಮವರಿದು ಮಾಡಿಮೊಡೆ ಸತ್ಫಲವು ಸದ್ಭಾವ
ಸುಮನದಿಂ ಸಿದ್ದಿಯಹುದಯ್ಯ ನಂಬುಗೆಯುಳ್ಳ ಸದ್ಭಕ್ತ
ಶರಣ ಜನಕೆ[39] ‖ ಪ ‖

ಅಡಿ ಟಿಪ್ಪಣಿಗಳು:

1) ಈ ಲೇಖನವನ್ನು ರಚಿಸುವಲ್ಲಿ ಮಹಾದೇವನ ಮಹಾಲಿಂಗೇಂದ್ರ ವಿಜಯದ 'ಪೀಠಿಕೆ' (ಸಂ॥ ಎಲ್. ಬಸವರಾಜು)ಮತ್ತು ವಿದ್ವಾನ್ ಎಂ. ಎಸ್. ಬಸವರಾಜಯ್ಯನವರು 'ಗುರುಕುಲ' (ಸಂಪುಟ 1, ಸಂಚಿಕೆ 1, ಮಾರ್ಚ್ 1969) ದಲ್ಲಿ ಪ್ರಕಟಿಸಿರುವ 'ಶ್ರೀ ಗುರು ಮುರುಘಾ ಶಾಂತವೀರದೇಶಿಕೇಂದ್ರ ಮಹಾಸ್ವಾಮಿಯವರು' ಎಂಬ ಲೇಖನಗಳಿಂದ ವಿಷಯ ಸಾಮಗ್ರಿಯನ್ನು ಸ್ವೀಕರಿಸಲಾಗಿದ್ದು ಅವರುಗಳಿಗೆ ನನ್ನ ಕೃತಜ್ಞತೆಗಳನ್ನರ್ಪಿಸುತ್ತೇನೆ.

2) (ಸಂ.) ಎಲ್. ಬಸವರಾಜು, ಚಿತ್ರದುರ್ಗ [1971)

3) (ಸಂ.) ಶಿ. ಮೂ. ಶಿದ್ಧಲಿಂಗಾರ್ಯ, ಸಾಲೀ ಮಠ, ರೋಣ (1906)

4) ಆರ್. ನರಸಿಂಹಾಚಾರ್: ಕರ್ನಾಟಕ ಕವಿ ಚರಿತೆ, ಸಂಪುಟ II – 293 [1919]

5) ಆರ್. ನರಸಿಂಹಾಚಾರ್: ಕಕಚ, II 527

6) ಗುರುಕುಲ, 1–1 [ಪು. 2]

7) (ಸಂ.) ಎಸ್. ಶಿವಣ್ಣ, ಸಾಧನೆ, 1.3 (ಪು-167–171 ಜುಲೈ-ಸೆಪ್ಟೆಂಬರ್ 1972) ಪದ್ಯ 23.

8) ಗುರುಕುಲ, 1–1 [ಪು. 3]

9) ಗುರುಕುಲ, 1–1 [ಪು. 2]

10) ಗುರುಕುಲ, 1–1 [ಪು. 5]

11) ಆರ್. ನರಸಿಂಹಾಚಾರ್ : ಕಕಚ, II 214

12) ಕ್ರಮಾಂಕ 1321 [ಗರಿ 329 – 337], ಮಹಾರಾಜ ಸಂಸ್ಕೃತ ಪಾಠಶಾಲೆ [ಮೈಸೂರು] ಸಂಗ್ರಹ

13) ಆರ್. ನರಸಿಂಹಾಚಾರ್ : ಕಕಚ II 212–13

14) (ಸಂ.) ಬುದ್ಧಯ್ಯಸ್ವಾಮಿ ಪುರಾಣಿಕ್ ಧಾರವಾಡ 1931

15) ಆರ್. ನರಸಿಂಹಾಚಾರ್: ಕಕಚ, II 213

16) ಆರ್. ನರಸಿಂಹಾಚಾರ್: ಕಕಚ, II 572

17) ಗುರುಕುಲ, 1—1 [ಪು. 3]

18) ಕನ್ನಡ ಹಸ್ತ ಪ್ರತಿಗಳ ವರ್ಣನಾತ್ಮಕ ಸೂಚೀ, ಚತುರ್ಥ ಸಂಪುಟ, ಸಂಖ್ಯೆ 1747

19) ಗುರುಕುಲ, 1.1 [ಪು. 3] ಮತ್ತು ಕಕಚ III 419

20) ಗುರುಕುಲ, 1.1 [ಪು. 3] ಮತ್ತು ಕಕಚ III 424; ಸಂ) ಚೆನ್ನಮಲ್ಲಿಕಾರ್ಜುನ, ಸದ್ಧರ್ಮ ದೀಪಿಕೆ, ಸಂಖ್ಯೆ 149 [1958]

21) ಗುರುಕುಲ, 1.1 [ಪು. 3]

22) ಗುರುಕುಲ, 1.1 [ಪು. 3] ಮತ್ತು ಕಕಚ, III 427

23) ಗುರುಕುಲ, 1.1 [ಪು. 3] ಮತ್ತು ಕಕಚ, III 427

24) ಗುರುಕುಲ, 1.1 [ಪು. 3] ಮತ್ತು ಕಕಚ, II 291; [ಸಂ] ಎಂ. ಎಸ್. ಸುಂಕಾಪುರ [1957]

25) ಗುರುಕುಲ, 1.1 [ಪು. 3]

26) ಗುರುಕುಲ, 1.1 [ಪು. 4]: ಕಕಚ II 322 ಮತ್ತು ಮಹಾಲಿಂಗೇಂದ್ರ ವಿಜಯದ ಪೀಠಿಕೆ [ಪು. 76]

27) 'ನುಲಿಯ ಚಂದಯ್ಯನ ಕಥೆ'ಯ ಕರ್ತೃ ಕಕಚ, II 556; [ಸಂ.] ಚನ್ನಮಲ್ಲಿಕಾರ್ಜುನ [ಹಾವೇರಿ]

28) [ಸಂ.] ಹುಲ್ಲೂರು ಶ್ರೀನಿವಾಸ ಜೋಯಿಸ್; ಶರಣ ಸಾಹಿತ್ಯ, 9.1 [ಪು. 37–44]

29) ಹಾಡಿನ ರೂಪದ 'ಶಿವದೀಕ್ಷಾ ವಿವೇಕ ಸಿಂಧು ಚಿಂತಾಮಣಿ'ಯ ಕರ್ತೃ. ಇದರ ಓಲೆ ಪ್ರತಿ ಕನ್ನಡ ಅಧ್ಯಯನ ಸಂಸ್ಥೆ [ಮೈಸೂರು] ಯಲ್ಲಿದೆ.

30) ಈ ಪ್ರತಿ 'ಕರ್ನಾಟಕ ವಿಶ್ವ ವಿದ್ಯಾಲಯ'ದ 'ಕನ್ನಡ ಅಧ್ಯಯನ ಪೀಠ'ದಲ್ಲಿನ 'ವಚನ ವಾಙ್ಮಯ ಭಂಡಾರ'[ಧಾರವಾಡ] ದಲ್ಲಿದೆ. ಕ್ರಮಾಂಕ 160.

31) ಮಹಾರಾಜ ಸಂಸ್ಕೃತ ಪಾಠಶಾಲೆ [ಮೈಸೂರು] ಸಂಗ್ರಹದ ಪ್ರತಿ ಕ್ರಮಾಂಕ 1321 [ಗರಿ 337ರ ಹಿಂಭಾಗ]

32) ಈ ಹಾಡನ್ನು ನನ್ನ ಗಮನಕ್ಕೆ ತಂದುದಲ್ಲದೆ ಬಳಸಿಕೊಳ್ಳಲು ಅನುಮತಿಯಿತ್ತ ವಿದ್ವಾನ್ ಎಂ. ಎಸ್. ಬಸವರಾಜಯ್ಯನವರಿಗೆ ನನ್ನ ವಂದನೆಗಳು.

33) ಶ್ರೀ ಬಿ. ನಂಜುಂಡಪ್ಪ [ಕನಕಪುರ] ನವರ ಸಂಗ್ರಹ.

34) ಈ ಪದ್ಯಗಳನ್ನು 'ಕನ್ನಡ ಅಧ್ಯಯನ ಕೇಂದ್ರ' [ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು]ದ ಸಂಗ್ರಹದಲ್ಲಿನ ಕ್ರಮಾಂಕ K. 265/4 ರಿಂದ ಉಲ್ಲೇಖಿಸಿದೆ.

35) ಆರ್. ನರಸಿಂಹಾಚಾರ್ : ಕಕಚ II. 294; ಕಹವಸೂ III 1336.

36) ಆರ್. ನರಸಿಂಹಾಚಾರ್ : ಕಕಚ II 294; ಕಹವಸೂ III 1337

37) ಆರ್. ನರಸಿಂಹಾಚಾರ್ : ಕಕಚ III 427

38) ಕ್ರಮಾಂಕ 1131, ಕ. ಅ. ಸಂಸ್ಥೆ [ಮೈಸೂರು]

39) ಕ್ರಮಾಂಕ 1001, ,, ,,

ಹೊಲೆಯರ ಬಾವಿಯಲೊಂದು ಎಲು ನಟ್ಟಿದ್ದರೆ
ಹೊಲೆ ಹೊಲೆಯೆಂಬುದೀ ಲೋಕವೆಲ್ಲಾ;
ಹಲವೆಲುವಿದ್ದ ಬಾಯಲ್ಲಿ ಒಲವರವ ನುಡಿದರೆ ಅದು
ಹೊಲೆಯರ ಬಾವಿಯಿಂದ ಕರ ಕಷ್ಟ ಕಾಣಾ ರಾಮನಾಥ.

—ದೇವರ ದಾಸಿಮಯ್ಯ

ಜಯದೇವ ಜಗದ್ಗುರುಗಳವರ ಶ್ರೀಪಾದದಲ್ಲಿ ನಮನ

ಶ್ರೀ ಪಿ. ಜಿ. ಬಿದರೀ ಮಠ,
ಹೆ॥ ಮಾ॥ ಎಸ್. ಜೆ. ಎಂ. ಹೈಸ್ಕೂಲ್
ದಾವಣಗೆರೆ

(ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳವರು ಅಪ್ಪಣೆ ಕೊಡಿಸಿದ ಭಾಷಣದ ಪ್ರೇರಣೆ)

ಓ ಗುರುವೆ ಕೃಪೆಮಾಡಿ ಅರವಟಿಗೆಯನ್ನಿಟ್ಟು
ಬ್ರಹ್ಮಾಮೃತದ ಪಾನವನಿತ್ತಿರಿ.
ಚರಿಸುವೀ ಅರವಟಿಗೆಯನುಕೊಂಡು ದೆಸೆದೆಸೆಗೆ
ಅಮೃತವೃಷ್ಟಿಯಗರೆದು ಶುಭಗೈದಿರಿ.

ಆತ್ಮಸಾಧನೆಯಿಂ ವಿವೇಕದೃಷ್ಟಿಯ ಗಳಿಸಿ
ಲೋಕಸಾಧನೆಯಿಂ ವಿಶಾಲಗೊಳಿಸಿ.
ರಕ್ಷಿಸುತ ಬೆಳಸಿದಿರಿ ತಿದ್ದುತ ಸಮಾಜವನು
ಸಂಜೀವಿನಿಯು ಎನಿಸಿ ಲೀಲೆ ಮೆರೆಸಿ.

ಲಿಂಗಪೂಜಾಪ್ರೇಮಿ, ಸಿದ್ಧ, ತಾಪಸ, ವಾಗ್ಮಿ,
ಬುದ್ಧಿ ಭಾವ ಪ್ರತಿಭೆಗಳ ಸಂಗಮ.
ವಜ್ರದಿಂದಲು ಕಠಿಣ, ಕುಸುಮದಿಂ ಕೋಮಲವು.
ನಿಮ್ಮಾಳ ಅಗಲಗಳನಳೆಯೆನಮಮ !

ಸೂಕ್ಷ್ಮ ನಿರ್ಣಯ ನಿಮದಸಾಮಾನ್ಯ ಗುರುದೇವ
ಇಷಣಿ ಯುಕ್ತಿಗಳ ಸಮನ ಮುರುಘೇಶಗೆ.
ಹಿಂದಿಲ್ಲ ಮುಂಬರದು ಇಂಥ ಚಾಣಾಕ್ಷತನ
ನಿಮ್ಮ ಪಾದವೆ ಗಮ್ಯ ಜನಕೋಟಿಗೆ

ಮನಕೆ ಬೇಸರವಾಯ್ತೆ ? ಲಿಂಗಯ್ಯನೊಡನಾಟ
ಪೂಜೆ ಮುಗಿಸಿರೆ ಮತ್ತೆ ಮೊದಲ ಸ್ಫೂರ್ತಿ.
ಜಗಕೆ ನಿಮ್ಮುಪದೇಶವೀರೀತಿ ಕೃತಿಯಿಂದ
ಹೊರಗೆ ಶಾಂತಿಯ ಶೋಧ ಬರಿಯ ಭ್ರಾಂತಿ.

ಆವಗಂ ನೆನಪಿನಲಿ ಹಸುರಾಗಿ ಉಳಿಯುವುದು
ಸರ್ವಕಾಲಿಕವಾದ ನಿಮ್ಮ ಸೊಲ್ಲು ;
"ನಿನಗಾಗಿ ನೇಸರನು ಪಡುವಣದಿ ಮೂಡುವನೆ ?
ಶಕ್ತಿಯಿರೆ ಗೆಲ್ ಅಥವ ಹೊಂದಿಕೊಳ್ಳು."

ಆಚರಣೆಗಳನಡುವ ಜ್ಞಾನವನು ಸಂಗ್ರಹಿಸಿ
ಶುದ್ಧಾತ್ಮ ಸಿದ್ಧಾತ್ಮ ಎನಿಸಿದಾರ್ಯ.
ಆನಂದಮಯ ಜೀವ ಅಮೃತ ಪ್ರಭೆಯನು ಹರಡಿ
ಮುಕ್ತಾತ್ಮ ನಿರ್ದೇಹಿಯಾದೆಯಯ್ಯ.

ಸ್ವಾಮಿ ಎಂದರೆ ಯಾರು ? ನಿಮ್ಮಿರವು ಉತ್ತರವು.
ಸಜ್ಜನಿಕೆ ಶಾಂತಿ ಮುಕ್ತಿಗಳ ಫಲವ—
ಜನಕೆ ಒಲವಿಂದಿತ್ತು ನಾಕವನೆ ನಿರ್ಮಿಸಿದೆ.
ನಿನ್ನ ಗರಿಮೆಗೆ ಮಣಿವೆ ಬಾಗಿ ಶಿರವ.

ಇಮ್ಮಡಿ ಮುರಿಗಾ ಗುರುಸಿದ್ಧ

ಲೇಖಕರು: **ಡಾ|| ಎಸ್. ವಿದ್ಯಾಶಂಕರ,** ಎಂ.ಎ.,
ಪಿ.ಎಚ್ ಡಿ.
ಕನ್ನಡ ಅಧ್ಯಯನ ಕೇಂದ್ರ,
ಬೆಂಗಳೂರು ವಿಶ್ವವಿದ್ಯಾನಿಲಯ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಷಡಕ್ಷರಿಯಾದ ಮೇಲೆ ಚಂಪೂವನ್ನು ಕಾವ್ಯಕ್ಕೆ ಸಮರ್ಥ ಮಾಧ್ಯಮವನ್ನಾಗಿ ಬಳಸಿ ಅದರ ಸಮಸ್ತ ಕಸುವನ್ನು ತನ್ನ ದೈವದತ್ತ ಪ್ರತಿಭೆಯಿಂದ ದುಡಿಸಿಕೊಂಡವನು ಕನ್ನಡದ ಸುಪ್ರಸಿದ್ಧ ವೀರಶೈವ ಕವಿಯೂ ಕರ್ನಾಟಕದ ಅತ್ಯಂತ ಪ್ರಸಿದ್ಧ ಮಠಗಳಲ್ಲೊಂದಾದ ಚಿತ್ರದುರ್ಗದ ಮುರಿಗಾ ಮಠದ ಹೆಸರಾಂತ ಗುರುವೂ ಆದ ಇಮ್ಮಡಿ ಮುರಿಗಾ ಗುರುಸಿದ್ಧ. ಕನ್ನಡದಲ್ಲಿ ಹೆಸರಾಂತ ಕವಿ ಹಾಗೂ ಮಠಪತಿ ಎರಡೂ ಆದವರಲ್ಲಿ ಷಡಕ್ಷರಿಯ ಹೆಸರು ತಕ್ಷಣ ನೆನಪಿಗೆ ಬರುತ್ತದೆ. ಷಡಕ್ಷರಿಯ ನಂತರ ನೆನಪಿನಾಳದಲ್ಲಿ ಉಳಿಯುವವನು ಇಮ್ಮಡಿ ಮುರಿಗಾ ಗುರುಸಿದ್ಧ.

ಇಮ್ಮಡಿ ಮುರಿಗಾ ಗುರುಸಿದ್ಧನ ಪೂರ್ವನಾಮ ಗುರುಸಿದ್ಧ ಶಿವಯೋಗಿ. ಚಿನ್ಮೂಲಾದ್ರಿಯ ಬೃಹನ್ಮಠದ ಮುರಿಗಾ ಶಾಂತವೀರನ ಕೃಪಾಕಟಾಕ್ಷಕ್ಕೆ ಪಾತ್ರನಾದ ಮೇಲೆ ಇಮ್ಮಡಿ ಮುರಿಗಾ ಗುರುಸಿದ್ಧ ದೇಶಿಕೇಂದ್ರ ಎಂಬ ಹೆಸರು ಬಳಕೆಗೆ ಬಂದಿತು. ಇಮ್ಮಡಿ ಮುರಿಗಾ ಗುರುಸಿದ್ಧ ದೇಶಿಕೇಂದ್ರ, ಇಮ್ಮಡಿ ಗುರುಸಿದ್ಧ, ದ್ವಿತೀಯ ಮುರಿಗಾ ಗುರುಸಿದ್ಧ ದೇಶಿಕೇಂದ್ರ, ಲೀಲಾಖ್ಯದ ಮುರಿಗಾ ಶಿವಯೋಗಿ - ಎಂದು ನಾನಾ ಹೆಸರುಗಳಿಂದ ಇವನನ್ನು ಕರೆಯಲಾಗಿದೆ.

ಧನಗೂರಿನಲ್ಲಿ ನಿರಂಜನ ಪೀಠಾಧೀಶನಾಗಿ ದಕ್ಷಿಣಾಮೂರ್ತಿಯಂತೆ ವೀರಶೈವೋಪದೇಶಕನಾಗಿದ್ದ ಉದ್ದಾನ ಯೋಗೀಶನ ವಂಶದಲ್ಲಿ ಹುಟ್ಟಿದವನು ತಾನೆಂದೂ, ಧನಗೂರಿನ ಶ್ರೀಮನ್ನಿರಂಜನ ಮಹಾಪೀಠಾಧೀಶನೂ ಗುರುರಾಡ್ವರ ಸೇವಿತನೂ ಆದ ಸೋಮಶೇಖರ ದೇಶಿಕರ ಪಾದಕಮಲವು ತನ್ನ ಹೃತ್ಸರೋವರದಲ್ಲಿ ನೆಲೆಸಲು ಅವರ ಉಪದೇಶದಿಂದ ತಾನು ಭುವಿಯಲ್ಲಿ ಗುರುರೂಪ ತಾಳಿದೆನೆಂದೂ, ಕುಂಭಪಲ್ಲಿಯೆಂಬ ಸ್ಥಳದಲ್ಲಿ ನೆಲೆಸಿ ಸದಾ ಸೋಹಂ ಸೋಹಂ ಎಂಬ ಮಂತ್ರವನ್ನು ಹಂಸ ಹಂಸ ಎಂದು ಲೋಪಿಸುತ್ತಾ ಮಹಾಯೋಗಿ ಎನ್ನಿಸಿದ ಚಿದ್ಬಸವೇಶ (ಬಸವಲಿಂಗ)ನಿಂದ ತಾನು ಪಂಡಿತನಾದೆನೆಂದೂ, ಮುರಿಗೆಯ ಶಾಂತವೀರದೇಶಿಕನಿಂದ ತಾನು ಪರರೂಪ ಪಡೆದೆನೆಂದೂ ಹಾಲಾಸ್ಯ ಪುರಾಣ[1] ಹಾಗೂ ಪ್ರಭುಲೀಲಾ ಕಾವ್ಯ[2]ಗಳಲ್ಲಿ ಸ್ವಕೀಯ ವಿವರಗಳನ್ನು ಇಮ್ಮಡಿ ಗುರುಸಿದ್ಧನು ನೀಡಿರುವನು. ಯತಿರಾಜ ಹರೀಶ, ಮಹಾಗುಣಿ ಚನ್ನವೀರೇಶ್ವರ, ಮಹಾಜ್ಞಾನಿ ಆರಾಧ್ಯ ಕರಿಬಸವ, ಸುಸಂಗೀತ ವಿದ್ಯಾಬ್ಧಿ ಚಂದ್ರ ಮುಚ್ಚನ್ನ ಬಸವ —ಈ ಮಹನೀಯರು ಕವಿಯ ಸಮಕಾಲೀನರು. ಇವರ ಹೆಸರಿನ ಮುಂದಿರುವ ವಿಶೇಷಣವೇ ಇವರ ಹಿರಿತನವನ್ನು ಸಾರುತ್ತದೆ. ಈ ವಿದ್ವಜ್ಜನರ ಒತ್ತಾಯ 'ಹಾಲಾಸ್ಯ ಮಹಾ ಪುರಾಣ'ದ ಉದ್ಭವಕ್ಕೆ ಕಾರಣವಾಯಿತು.[3] ಈ ನಾಲ್ವರಲ್ಲಿ ಮುಚ್ಚನ್ನ ಬಸವ (ಚೆನ್ನ ವೃಷಭ)ನು ನುಲಿಯ ಚಂದಯ್ಯನ ಕಥೆಯನ್ನು 25 ಹಾಡುಗಳಲ್ಲಿ ಬರೆದಿರುವನು. ಉಳಿದವರ ಬಗೆಗೆ ಹೆಚ್ಚಿಗೆ ಏನೂ ತಿಳಿದು ಬಂದಿಲ್ಲ.

ಇಮ್ಮಡಿ ಮುರಿಗೆ ಗುರುಸಿದ್ಧನು ವಿರಕ್ತ ಪರಂಪರೆಗೆ ಸೇರಿದವನಾದುದರಿಂದ ತನ್ನ ಬಗೆಗೆ ತಂದೆ ತಾಯಿ, ಬಂಧು ಬಳಗಗಳ ಬಗೆಗೆ ತನ್ನ ಕೃತಿಗಳಲ್ಲಿ ವಿವರಗಳನ್ನೇನನ್ನೂ ನೀಡಿಲ್ಲ. ಚಿನ್ಮೂಲಾದ್ರಿಯ ಬೃಹನ್ಮಠದ ಪೀಠವನ್ನೇರಿದ ಯತಿಶ್ರೇಷ್ಠರುಗಳ ಬಗೆಗೆ ಹೆಚ್ಚಿನ ವಿವರ ತಿಳಿದು ಬರುವುದು ಮಹಾದೇವ ಕವಿಯ (ಕ್ರಿ. ಶ. 1870) 'ಮಹಾಲಿಂಗೇಂದ್ರ ವಿಜಯ'ವೆಂಬ ಬೃಹದ್ಗ್ರಂಥದಿಂದ ಮಾತ್ರ.

ಚಿನ್ಮೂಲಾದ್ರಿಯ ಬೃಹನ್ಮಠದ ಪ್ರಥಮ ಪ್ರವರ್ತಕರು ಮುರಿಗೇಂದ್ರ ರಾಜೇಂದ್ರರು. ಇವರನ್ನು ಮುರಿಗ ಶಾಂತವೀರ ಸ್ವಾಮಿಗಳೆಂದೂ ಕರೆಯುವರು. ತೋಂಟದ ಸಿದ್ಧಲಿಂಗನ ಪರಂಪ

---

1 ಪ್ರಣವ ಧನುಃಪುರಸ್ಥ ಚಿತಿಶಕ್ತಿ ಸುಪೀಠ ಮಠಾಧಿರಾಜಸಂ
ಪ್ರಣುತ ಭವಾಪಹಾರಿ ಗರುರಾಡ್ವರ ಸೇವಿತ ಸೋಮಶೇಖರ
ಪ್ರಣುತ ಸುನಾಮದೇಶಿಕಪದಾಂಬುಜಮೆನ್ನಯ ಹೃತ್ಸರೋಗ್ರದೊಳ್
ಬಣಿತೆಯಿನೆಯ್ದೆ ನಿಂದೊಡಿರದಾಂ ಗುರುರೂಪಮನಾಳ್ದೆ ನುರ್ವಿಯೊಳ್ ||

ಮಿಸುಪ ಕೇವಲಕುಂಭಪಲ್ಲಿಯೆನಿಪ್ಪ ತಾಣದೊಳಾವಗಂ
ಸಸಿನೆ ಸೋಹಮೆನಿಪ್ಪ ಮಂತ್ರಹಂಸಗಳಂ ಸಲೆ ಲೋಪಿಸಲ್
ಬೆಸುಗೆಯಾದುದೆ ಯೋಮಯೋರ್ಜಿತ ಸತ್ಕಲಾನ್ವಿತ ಶಬ್ದಮ
ಣ್ಯಸದೃಶಾಭಿಧದೇವ ಚಿದ್ಬಸವೇಶನಿಂ ಬುಧನಾದೆ ನಾಂ ||

ಪರಮ ಚಿದದ್ವಯಾತ್ಮಕ ಗುರುದ್ವಯಮಂತದು ತಾನೆಯಾಗಿ ನಿ
ಷ್ಠುರತರ ಭೇದತಾಮಸನಿವಾರಣ ಸೂರ್ಯನಮಾಯನುತ್ಯಪಾ
ಕರನೆನಿಸುತ್ತೆ ಲೋಕತತಿಯೊಳ್ ನೆರೆ ಪೂಜ್ಯಪದಾಬ್ಜನಾದ ಸ
ನ್ಮುರಿಗೆಯ ಶಾಂತವೀರ ವರದೇಶಿಕನಿಂ ಪರರೂಪವೊಂದಿದೆಂ ||
(ಆ. 12. ಪ 149-151)

2 ಸರ್ಗ 1. ಪ 29—39.

3 ಹಾಲಾಸ್ಯ ಪುರಾಣ ಆ. 1.

ರಿಗೆ ಸೇರಿದ ಗುರುಗಳೆಲ್ಲರೂ ಚರರೂಪಿಗಳಾಗಿದ್ದರು. ನಿತ್ಯಸಂಚಾರಿಗಳಾಗಿದ್ದ ಇವರು ಒಂದೆಡೆ ಮಠ ಕಟ್ಟಿ ನಿಂತುದು ಮುರಿಗೇಂದ್ರ ರಾಜೇಂದ್ರರ ಕಾಲಕ್ಕೆ [ಕ್ರಿ. ಶ. 1640-1703]. ಮುರಿಗೇಂದ್ರ ರಾಜೇಂದ್ರ ಸ್ವಾಮಿಗಳ ಹೆಸರಿನೊಡನೆ ಸೇರಿರುವ 'ಮುರಿಗೆ' ಎಂಬ ವಿಶೇಷಣವು ಇವರ ನಂತರ ಬಂದ ಎಲ್ಲ ಜಗದ್ಗುರುಗಳಿಗೂ ಅವರವರ ಹೆಸರಿನೊಡನೆ ಸೇರ್ಪಡೆಯಾಗಿರುವುದು ಗಮನೀಯ ಸಂಗತಿಯಾಗಿದೆ. ಮುರಿಗೆ ಎಂಬ ಪದದ ವ್ಯುತ್ಪತ್ತಿ ಇಲ್ಲಿಯವರೆವಿಗೂ ಸರ್ವರಿಗೂ ಸಮ್ಮತವಾಗಿರುವಂತೆ ಕಾಣೆ. ಮಹಾದೇವ ಕವಿಯ ಪ್ರಕಾರ ಮುರಿಗೆಯೆಂದರೆ ನುಲಿನುಲಿಯಾಗಿರುವುದು ಎಂದರ್ಥ. ರಾಜೇಂದ್ರ ಮಹಾಸ್ವಾಮಿಗಳ ಕೈಯಲ್ಲಿ ಮುರಿಗೆಯ ಮುದ್ಗರವಿದ್ದಿತು; ಅವರು ತಲೆಗೆ ಮುರಿಗೆ ಮುರಿಗೆಯಾದಂತಹ ವಸ್ತ್ರವನ್ನು ಸುತ್ತಿದ್ದರು; ಎದೆ ಬೆನ್ನಿಗೆ ಮುರಿಗೆಯಾಗಿ ಒಂದು ಶಾಲನ್ನು ಹೊದ್ದಿದ್ದರು ಎನ್ನುವಲ್ಲಿ ಮೇಲಿನ ಅರ್ಥ ಸ್ಫುಟವಾಗಿದೆ. ಡಾ|| ಎಲ್. ಬಸವರಾಜುರವರು"............ ಬಹುಶಃ ಈ ಮಾತು ಶಿವಪುತ್ರನಾದ ಷಣ್ಮುಖನಿಗೆ ಪರ್ಯಾಯವಾಗಿ ತಮಿಳಿನಲ್ಲಿ ಅನ್ವಯಿಸುವ 'ಮುರುಗನ್' ಎಂಬುದರಿಂದ ಬಂದಿರಬೇಕು..........." ಮುರುಗನ್, ಮುರುಗ (ಷಣ್ಮುಖ, ಕುಮಾರಸ್ವಾಮಿ) ಆ ಲಾಂಛನದವರು ಮುರುಗಿಯವರು, ಮುರುಗೇಂದ್ರರು, ಮುರುಗೇಶ, ಮುರುಗಿಯವರು ಇತ್ಯಾದಿಯಾಗಿರಬೇಕು" ಎಂದಿರುವರು.[1] ಅವರ ಈ ಅಭಿಪ್ರಾಯ ಇನ್ನಷ್ಟು ವಿವರಣೆಯಿಂದ, ಆಧಾರಗಳಿಂದ ಪುಷ್ಟಿಗೊಳ್ಳಬೇಕಾಗಿದೆ.

ಮಹಾದೇವಕವಿಯ 'ಮಹಾಲಿಂಗೇಂದ್ರ ವಿಜಯ'ವು ಇಮ್ಮಡಿ ಮುರಿಗೆ ಗುರುಸಿದ್ಧ ದೇಶಿಕೇಂದ್ರನ ಬಗೆಗೆ ಕೆಳಗಿನಂತೆ ವಿವರ ನೀಡುತ್ತದೆ :

ಚಿನ್ಮೂಲಾದ್ರಿಯ ಬೃಹನ್ಮಠದ ಮುರಿಗೆ ಶಾಂತವೀರಸ್ವಾಮಿಗಳಿಂದ ಇಮ್ಮಡಿ ಮುರಿಗೆ ಗುರುಸಿದ್ಧ ದೇಶಿಕನೆಂಬ ಹೆಸರು ಪಡೆದು ಪಟ್ಟಾಧಿಕಾರವನ್ನು ಹೊಂದಿದ ಮೇಲೆ ನಾನಾ ದೇಶದ ಭಕ್ತರ ಮಾಹೇಶ್ವರರ ಸಂತೋಷಕ್ಕೆ ಕರುಣಗೈವುತ್ತ ಚಿತ್ರದುರ್ಗದ ಮಹಾ ಮ ಠ ದ ಲ್ಲಿ ಶೋಭಿಸಿರಲು ಹರಪನಹಳ್ಳಿಯಲ್ಲಿದ್ದ ಮುರಿಗೇಂದ್ರ ರಾಜೇಂದ್ರರ ಮತ್ತೋರ್ವ ಶಿಷ್ಯನಾದ ಚೀಲಾಳನೆಂಬವನು ಗುರುಸಿದ್ಧ ದೇಶಿಕನ ಅತುಲ ಸತ್ಕೀರ್ತಿಯನ್ನು ಕೇಳಿ ಸಹಿಸಲಾರದೆ ಮುಳಿಸುಗೊಂಡು "ಮುರಿಗೇಶ್ವರನು ಮುಖ್ಯ ಚರಮೂರ್ತಿಯಾದ ನನ್ನನ್ನು ಲಕ್ಷಿಸದೆ ಓರ್ವ ಮರಿಗೆ ಪಟ್ಟಗಟ್ಟಿ ಅವಮಾನ ಮಾಡಿದನು" ಎಂದು ಹೀನೈಸಿ ನುಡಿದು ದುರ್ಗಕ್ಕೆ ಬಂದು ಗುರುಸಿದ್ಧ ಸ್ವಾಮಿಗೆ ವಿಮುಖನಾಗಿ ದುರ್ವರ್ತನೆಯಲ್ಲಿ ತೊಡಗಿದನು. ಚೀಲಾಳನ ದುರಹಂಕಾರವನ್ನು ಕಂಡು ಈ ಅನುಚಿತ ವರ್ತನೆ ಶಿಷ್ಯವರ್ಗಕ್ಕೆ ಸಲ್ಲದು ಎಂದು ಅವನಿಗೆ ಬಹಿಷ್ಕಾರ ಹಾಕಿ ಮಠದಿಂದ ಹೊರವಟ್ಟಿಸಿದರು. ಗುರುವಾಜ್ಞೆ ಮೀರಿದ ಚೀಲಾಳನನ್ನು ಚಿತ್ರದುರ್ಗದರಸು ಬಿಚ್ಚುಗತ್ತಿಯ ಬರಮಣ್ಣನಾಯಕ (ಬ್ರಹ್ಮಣ್ಣನಾಯಕ) ದೇಶದಿಂದ ಹೊರಗಟ್ಟಿದನು. ಹರಪನಹಳ್ಳಿಗೆ ಬಂದ ಚೀಲಾಳನನ್ನು ಆ ಊರ ಒಡೆಯನು ಮನ್ನಿಸಿ ಮಠಮಾನ್ಯಗಳನ್ನು ಕಟ್ಟಿಸಿಕೊಟ್ಟನು.

ಮುರುಗೇಂದ್ರರ ರಾಜೇಂದ್ರರ ಮತ್ತೋರ್ವ ಶಿಷ್ಯ ಕುಮಾರ. ಈತನೂ ಗುರುಸಿದ್ಧ ದೇಶಿಕನ ಉನ್ನತಿಯನ್ನು ಕೇಳಿ ಸಹಿಸದೆ ಸ್ವಾದಿಗೆ ಬಂದು ಅದರರಸು ಸದಾಶಿವರಾಜನಿಗೆ ಇಲ್ಲ ಸಲ್ಲದ್ದು ಹೇಳಿ ಅವನ ಮನಸ್ಸನ್ನು ಕೆಡಿಸಿ ತನ್ನವನನ್ನಾಗಿ ಮಾಡಿಕೊಂಡನು. ಕುಹಕಿಗಳ ಗರ್ವವನ್ನು ಮುರಿಯಲೆಂದೇ ಗುರುಸಿದ್ಧ ದೇಶಿಕ ಚಿತ್ರದುರ್ಗದಿಂದ ಸಕಲ ಬಿರುದಾವಳಿಗಳಿಂದ ಕೂಡಿ ದೇಶ ಸಂಚಾರಕ್ಕೆ ಹೊರಟು ದೇಶ ದೇಶಗಳನ್ನೆಲ್ಲಾ ಸುತ್ತಿ ಸ್ವಾದಿ ಸೀಮೆಗೆ ಬಂದನು. ರಾಜ ಸಕಲ ಮರ್ಯಾದೆಗಳೊಡನೆ ಸ್ವಾಗತಿಸದಿದ್ದಾಗ ಕಾರಣವನ್ನು ಅರಿತ ಗುರುಸಿದ್ಧ ದೇಶಿಕ ಅರಮನೆಗೆ ಕಾಲ್ನಡಿಗೆಯಲ್ಲೇ ಬಂದು ಅರಸನ ಮುಂದೆ ನಿಂತನು. ಕಂಡೂ ಮಣಿಯದ ಅರಸನ ಮದಾಂಧತೆಯ ಬಗೆಗೆ ಮುಳಿಸುಗೊಳ್ಳದೆ ಗಂಭೀರ ಧ್ವನಿಯಲ್ಲಿ ರಾಜನನ್ನು ಕುರಿತು "ಹಿಂದೆ ಶರಣರು ಈ ಸ್ವಾದಿಯ ಮೂಲಕವೇ ಉಳುವೆಗೆ ಹೋಗಿ ಅಲ್ಲಿಂದ ಕೈಲಾಸ ಮುಟ್ಟಿದರು. ಕಲ್ಯಾಣದ ಪ್ರಮಥರೆಷ್ಟೋ ಮಂದಿ ಇಲ್ಲೇ ಇಂದಿಗೂ ಅಗೋಚರರಾಗಿ ತಪಸ್ಸು ಮಾಡುತ್ತ ಆನಂದದಿಂದಿರುವರು. ಹಿಂದೆ ಈ ವಿಷಯ ತಿಳಿಸಿದಾಗ ನೀನು ನಂಬದೆ ಇದ್ದೆ. ಆ ವೇಳೆಯಲ್ಲಿ ಓರ್ವ ಶರಣನು ನಿನಗೆ ದರ್ಶನವಿತ್ತು ಪುಸ್ತಕವೊಂದನ್ನು ಕೊಟ್ಟು ಇದನ್ನು ಯಾವನು ಓದುವನೋ ಅವನೇ ನಿನಗೆ ಸದ್ಗುರು, ಮಹಾಗುರು ಎಂದು ಹೇಳಿ ಅದೃಶ್ಯನಾಗಲಿಲ್ಲವೇ ? ಅವನಿಂದ ನೀನು ಪಡೆದ ಪುಸ್ತಕವನ್ನು ತಂದು ಕೊಡು" ಎಂದನು. ಆಗ ರಾಜನಿಗೆ ಜ್ಞಾನೋದಯವಾಯಿತು. ಭಯದಿಂದ ಕಂಪಿತನಾಗಿ ಗುರುಮೂರ್ತಿಯ ಪಾದಗಳಿಗೆ ಅಡ್ಡಬಿದ್ದು, "ಗುರುವರ್ಯಾ, ನಿಮ್ಮ ಮಹಿಮಾದಿ ವಿಶೇಷಗಳನ್ನು ತಿಳಿಯದೆ ಅಜ್ಞಾನದಿಂದ ನಾನು ಮನೋದೋಷ ತೀವ್ರವಾಗಿ ನಿಮ್ಮನ್ನು ನಿಂದಿಸಿದ ಕಾರಣದಿಂದ ವಾಗ್ದೋಷಿ; ನಿಮ್ಮ ಪಾದಗಳೆಡೆಗೆ ಹೋಗಿ ನಮಿಸದೆ ಅಹಂಕರಿಸಿ ಇಲ್ಲಿಯೇ ನಿಂತಿದ್ದರಿಂದ ಕಾಯಕದೋಷಿ; ಶಿವಪುರಾತನರ ವಾಕ್ಯಗಳನ್ನು ತಿಳಿಯದವನಾದ ಕಾರಣದಿಂದ ಸರ್ವದೋಷಿ. ಕುಮಾರ ಜಂಗಮನಿಂದ ನನ್ನ ಬುದ್ಧಿಗೆಟ್ಟಿತು, ಮನ ಮಲಿನವಾಯಿತು. ನನ್ನ ಸಕಲಾಪರಾಧಗಳನ್ನು ಕ್ಷಮಿಸುವುದು" ಎಂದು ಭಕ್ತಿಯಿಂದ ಪ್ರಾರ್ಥಿಸಿದನು. ದುರಾತ್ಮನಾದ ಕುಮಾರನನ್ನು ಅರಸ ತನ್ನ ದೇಶದಿಂದ ಹೊರದಬ್ಬಿದನು. ಸ್ವಾದಿ ಸೀಮೆಯಿಂದ ಬಹಿಷ್ಕಾರಗೊಂಡು ಹುಬ್ಬಳ್ಳಿಗೆ ಬಂದ ಕುಮಾರ ಅಲ್ಲಿಯ ಸೆಟ್ಟಿಯನ್ನು ಭಕ್ತನನ್ನಾಗಿ ಮಾಡಿ ಸ್ವಾದಿ ಸೀಮೆಯಿಂದ ಅಡಕೆ, ಮೆಣಸು ಮುಂತಾದ ಪದಾರ್ಥಗಳು ಚಿತ್ರದುರ್ಗಕ್ಕಾಗಲೀ ಅಥವಾ ಚಿತ್ರದುರ್ಗದ ಪದಾರ್ಥಗಳು ಸ್ವಾದಿ ಸೀಮೆಗಾಗಲೀ ಹೋಗಿ ಬರದಂತೆ ಕಟ್ಟು ಮಾಡಿ ಸೇಡು ತೀರಿಸಿಕೊಂಡನು.

ಗುರುಸಿದ್ಧ ದೇಶಿಕನು ಸ್ವಾದಿಯಿಂದ ನಗರದೇಶಕ್ಕೆ ಹೊರಟು ದಾರಿಯಲ್ಲಿ ಸಿಕ್ಕಿದ ಎಸಳೂರಿನಲ್ಲಿ ತಂಗಿದನು. ಕುಮಾರ ಜಂಗಮನು ಗುರುಸಿದ್ಧ ದೇಶಿಕನನ್ನು ಕೊಲ್ಲಿಸುವ ಸಂಚು ಹೂಡಿ, ಸ್ವಾದಿಯ ಕೆಲವರು ಪುಂಡರ ಸ್ನೇಹ ಬೆಳೆಸಿ, ಅವರನ್ನು ಎಸಳೂರಿಗೆ ಆ ಹೀನ ಕಾರ್ಯ ಮಾಡಿಸಲು ಅಟ್ಟಿದನು. ಕುಮಾರನ ಪುಂಡ ಜನರು

1. ಮಹಾಲಿಂಗೇಂದ್ರ ವಿಜಯ, ಪೀಠಿಕೆ, ಪು. 75.

ಜಗದ್ಗುರು ಎಸಳೂರಿನ ಮಠದಲ್ಲಿರುವನೆಂದು ತಿಳಿದು ಅಲ್ಲಿಗೆ ಆಯುಧ ಸಮೇತರಾಗಿ ಬಂದು ತಮ್ಮನ್ನು ತಡೆದ ತುಂಬು ಗರ್ಭಿಣಿಯನ್ನು ಕತ್ತಿಯಿಂದಿರಿದು ಕೊಂದರು. ಅಷ್ಟೇ ಅಲ್ಲದೆ ಒಳಬಂದ ಅವರು ಧ್ಯಾನಸ್ಥರಾಗಿದ್ದ ಆ ಮಠದ ಚರಮೂರ್ತಿಯನ್ನು ಗುರುಸಿದ್ಧ ದೇಶಿಕನೆಂದು ಭಾವಿಸಿ ಇರಿದರು. ಕುಮಾರನ ಸಂಚನ್ನು ತಿಳಿದಿದ್ದ ಗುರುಸಿದ್ಧ ದೇಶಿಕನು ಯಾರಿಗೂ ತಿಳಿಯದಂತೆ ಎಸಳೂರಿನಿಂದ ಸಿರಸಿಗೆ ಬಂದಿದ್ದನು. ಕುಮಾರನ ಕಡೆಯವರ ಕರಾಳ ವರ್ತನೆಯನ್ನು ಕೇಳಿ ಕನಲಿದ ಗುರುಸಿದ್ಧ ದೇಶಿಕನು 'ಕುಮಾರನು ಜಂಗಮ ಮಹಾಚಾರಗಳಿಗೆ ದೂರನು, ಇವನ ಬಳಕೆಯ ಮಾಡಲಾಗದು' ಎಂದು ಶಾಸನ ಹೊರಡಿಸಿ ದೇಶದ ಎಲ್ಲಾ ಭಾಗಗಳಿಗೂ ಕಳುಹಿಸಿದನು. ಆ ಸುದ್ದಿ ತಿಳಿದ ಕುಮಾರ ಭಯಗೊಂಡು ಗುರುಮೂರ್ತಿಯಿದ್ದಲ್ಲಿಗೆ ಬಂದು "ಈ ದ್ರೋಹ ನನ್ನಿಂದಾದುದಲ್ಲ, ನನ್ನ ಜನಗಳಿಂದಾದುದು. ಕ್ಷಮಿಸಬೇಕು" ಎಂದು ಬಗೆ ಬಗೆಯಾಗಿ ಬೇಡಿಕೊಂಡನು. ಜಂಗಮ ದ್ರೋಹಿಯ ಮುಖದರ್ಶನವಾಗಕೂಡದೆಂದು ಗುರುಮೂರ್ತಿ ಮುಖ ತಿರುವಿದನು. ಪಶ್ಚಾತ್ತಾಪದಗ್ಧನಾದ ಕುಮಾರ ಎಸಳೂರಿಗೆ ಬಂದು ತನ್ನ ಕಡೆಯವರು ಕೊಂದ ಜಂಗಮನ ಸಮಾಧಿಯ ಬಳಿ ಬಂದು ತನ್ನನ್ನು ತಾನೇ ಇರಿದುಕೊಂಡು ಮಾಡಿದ ತಪ್ಪಿಗೆ ಶಿಕ್ಷೆ ವಿಧಿಸಿಕೊಂಡನು.

ಸಕಲ ಸದ್ಭಕ್ತರಿಂದ ಪೂಜೆಯನ್ನು ಸ್ವೀಕರಿಸುತ್ತಾ ಅಕುಟಿಲ ಮಾಹೇಶ್ವರ ವೃಂದಕ್ಕೆ ಷಟ್‌ಸ್ಥಲ ಮಾರ್ಗವನ್ನು ಬೋಧಿಸುತ್ತ, ಗುರುಸಿದ್ಧ ದೇಶಿಕನು ದೇಶ ಸಂಚಾರ ಮಾಡುತ್ತಾ ಹಳೇಬೀಡಿಗೆ ಬಂದನು. ಆ ಊರಿನಲ್ಲಿ ಇಬ್ಬರು ಪಟ್ಟದ ಸ್ವಾಮಿಗಳು ನಿಷ್ಠಾಪೂರ್ಣರಾಗಿ ಭಕ್ತ ಸಮೂಹದಲ್ಲಿ ಸುಧಾರಣೆಗಳನ್ನು ಮಾಡಿ ಜನಪ್ರಿಯರಾಗಿದ್ದುದು ಅಲ್ಲಿನ ಹಲವು ಮಠದವರಿಗೆ ಅಪ್ರಿಯವಾಗಿದ್ದಿತು. ಹೀಗಾಗಿ ಅವರು ಪಟ್ಟದ ಸ್ವಾಮಿಗಳ ವಿರುದ್ಧ ಅಪಪ್ರಚಾರ ಮಾಡತೊಡಗಿದರು. ಆ ವೇಳೆಗೆ ಅಲ್ಲಿಗೆ ಬಂದ ಗುರುಸಿದ್ಧ ದೇಶಿಕನಿಗೆ ಆ ವಂಚಕರು ಪಟ್ಟದ ಮೂರ್ತಿಗಳು ನೀಚಚಂಡಾಲ ಭವಿಸಂಸ್ಪರ್ಶವುಳ್ಳವರೆಂದು ದೂರಿತ್ತರು. ವಿಚಾರಣೆ ನಡೆಸಿದ ಗುರುಸಿದ್ಧ ದೇಶಿಕನಿಗೆ ಅವರಿರ್ವರೂ ದೋಷರಹಿತರೆಂಬ ಅಂಶ ತಿಳಿಯಿತು. ಆರೋಪ ಹೊರಿಸಿದವರಿಗೇ ಗುರುಸಿದ್ಧದೇಶಿಕ ಬಹಿಷ್ಕಾರ ಹಾಕಿ ತಾನು ನ್ಯಾಯ ಪಕ್ಷಪಾತಿಯೆಂಬುದನ್ನು ನಿರೂಪಿಸಿದನು.

ಹೀಗೆ ಗುರುಸಿದ್ಧಸ್ವಾಮಿಯು ದುರಾಚಾರಪರರಾದ ಭಕ್ತ ಮಾಹೇಶ್ವರರ ಸೊಕ್ಕು ಮುರಿದು, ಪರಮತದವರನ್ನು ತಮ್ಮ ಪಾಂಡಿತ್ಯದಿಂದ ಅಂಜಿಸಿ, ಶಿವಾಚಾರದ ಏಳ್ಗೆಯನ್ನುಂಟು ಮಾಡಿ, ಶರಣು ಬಂದವರನ್ನು ರಕ್ಷಿಸಿ ಅನಂತಪುರಕ್ಕೆ ಬಂದನು. ಅಲ್ಲಿ ಸ್ವಾದಿಯ ಚನ್ನಬಸವದೇವರಿಗೆ ಪಟ್ಟಗಟ್ಟಿ ಲಿಂಗೈಕ್ಯನಾದನು.

ಇಮ್ಮಡಿ ಗುರುಸಿದ್ಧ ದೇಶಿಕನ ಬಗೆಗೆ ಇಷ್ಟು ವಿವರ ಮಹಾದೇವ ಕವಿಯಿಂದ ನಮಗೆ ಲಭ್ಯವಾಗುತ್ತದೆಯಾದರೂ ಇವಿಷ್ಟರಿಂದಲೇ ಅವನ ಬಹುಮುಖ ವ್ಯಕ್ತಿತ್ವದ ಪರಿಚಯವಾಗುವುದಿಲ್ಲ. ಸಾಮಾಜಿಕವಾಗಿ, ಧಾರ್ಮಿಕವಾಗಿ ಅವನ ಮಹತ್ವದ ಪಾತ್ರವೇನೆಂಬುದು ನಮಗೆ ಸ್ಪಷ್ಟವಾಗುವುದಿಲ್ಲ. ಪ್ರತಿಭಾವಂತ ಕವಿಯಾಗಿ ಅವನ ಕೊಡುಗೆ ಏನೆಂಬುದು ತಿಳಿಯುವುದಿಲ್ಲ. ಮಹಾದೇವ ಕವಿಯ ದೃಷ್ಟಿಯೆಲ್ಲ ಗುರುಸಿದ್ಧ ತನ್ನ ವೈರಿಗಳನ್ನು ಹೇಗೆ ನಾಮಾವಶೇಷರನ್ನಾಗಿ ಮಾಡಿದನೆಂಬುದರ ಕಡೆಗೇ ಮೀಸಲಾಗಿದೆ. ಹೀಗಾಗಿ ಆತ, ಆಗಿನ ಕಾಲಕ್ಕೆ ಅತ್ಯಂತ ಪ್ರಭಾವಶಾಲಿಯಾಗಿದ್ದು ಬಹು ದೀರ್ಘ ಕಾಲ ಬಾಳಿದ ಪ್ರಸಿದ್ಧ ಮಠಪತಿ ಹಾಗೂ ಪ್ರತಿಭಾ ಸಂಪನ್ನ ಕವಿ ಎರಡೂ ಆಗಿದ್ದ ಇಮ್ಮಡಿ ಗುರುಸಿದ್ಧನ ವ್ಯಕ್ತಿತ್ವದ ಹಲವು ಮುಖಗಳ ಪರಿಚಯ ನಮಗಾಗಿಸದೆ ನಿರಾಶೆಯನ್ನುಂಟು ಮಾಡುತ್ತಾನೆ. ಗುರುಸಿದ್ಧನು ತನ್ನ ಕೃತಿಗಳಲ್ಲಿ ಕೊಡುವ ಅಲ್ಪ ಸ್ವಲ್ಪ ವಿವರಗಳಿಂದಲೇ ಅವನ ಬಗೆಗೆ ತಿಳುವಳಿಕೆ ಹೊಂದುವುದು ಅನಿವಾರ್ಯವಾಗುತ್ತದೆ.

ಸೋಮಶೇಖರ ಶಿವಯೋಗಿಯ (ಸು. ಕ್ರಿ. ಶ. 1700) ಹೇಳಿಕೆಯ ಪ್ರಕಾರ ತೋಂಟದ ಸಿದ್ಧಲಿಂಗೇಶ್ವರನ ಶಿಷ್ಯಪರಂಪರೆಯಲ್ಲಿ ಇಮ್ಮಡಿ ಮುರಿಗೆ ಸಿದ್ಧವೀರನು ಏಳನೆಯವನು[1] ಶಿಷ್ಯಪರಂಪರೆಯ ಕ್ರಮ ಕೆಳಗಿನಂತಿದೆ :

ಬೋಳ ಬಸವೇಶ್ವರ
|
ಗೂಳೂರು ಸಿದ್ಧಲಿಂಗಯ್ಯ
|
ಗುಮ್ಮಳಾಪುರದ ಸಿದ್ಧವೀರಯ್ಯ
|
ಗಗನದಯ್ಯ
|
ಕಟ್ಟಿಗೆಹಳ್ಳಿ ಸಿದ್ಧಲಿಂಗೇಶ್ವರ
|
ಮುರಿಗೆ ಶಾಂತವೀರೇಶ್ವರ
|
ಮುರಿಗೆ ಗುರುಸಿದ್ಧೇಶ್ವರ

ಕವಿ ಚರಿತೆಕಾರರು ಇವನ ಕಾಲವನ್ನು ಸು. 1660 ಆಗಬಹುದು ಎಂದಿರುವರು.[2] ಇಮ್ಮಡಿ ಮುರಿಗೆ ಗುರುಸಿದ್ಧನು 'ಪಂಚಾಶಿಕಾಗಮ'ವನ್ನು ಶಾ. ಶಕ 1630ರಲ್ಲಿಯೂ, 'ಬಿಜ್ಜ ಮಹಾದೇವಿಯ ಚಾರಿತ್ರ'ವನ್ನು ಶಾಲಿವಾಹನ ಶಕ 1634 ಖರಸಂವತ್ಸರ ಶ್ರಾವಣ ಶುಕ್ಲ ಸಪ್ತಮಿ ಬುಧವಾರ ಪೂರ್ಣಮಾಡಿದುದಾಗಿ ಹೇಳಿಕೊಂಡಿರುವನು. ಅಂದರೆ ಗ್ರಂಥ ಸಮಾಪ್ತಿಯ ಕಾಲ ಕ್ರಿ. ಶ. 1708 ಹಾಗೂ ಕ್ರಿ.ಶ. 1712 ಎಂದಾಗುತ್ತದೆ. 'ಹಾಲಾಸ್ಯ ಪುರಾಣ' ಪೂರ್ಣಗೊಂಡ ಕಾಲವನ್ನು ಅವನೇ ಕೃತಿಯ ಕೊನೆಯಲ್ಲಿ ಹೀಗೆ ಹೇಳಿರುವನು :

ಓವಿದ ಶಾಲಿಸುವಾಹನ
ಸಾವಿರದರುನೂರರಿಂದೆ ನಾಲ್ವತ್ತೆರಡನೆ
ಯಾವರಿಸಿದ ನುತ ಶಾರ್ವರಿ
ಭಾವಿತ ವರಸಿಂಹಲಗ್ನದೊಳಗತಿಶಯದಿಂ ||
ಇದು ಜೇಷ್ಠದ ಬೆಳ್ಪಕ್ಕದ
ತದಿಗೆಯ ರವಿವಾರ ಪುಷ್ಯಭ ದ್ರುವಯೋಗಾ

1. ನೋಡಿ: ಕರ್ನಾಟಕ ಕವಿಚರಿತೆ ಭಾಗ 2. ಪು. 527.
2. ಕರ್ನಾಟಕ ಕವಿಚರಿತೆ, ಭಾಗ 3, ಪು. 251.

[illegible]
ಪದಿನಾಲ್ಕಳಿಗೆಯೊಳ್ ಪೂರ್ಣಮಾಯ್ತು ಪುರಾಣಂ ॥
([illegible] 12. [illegible] 163-4)

ಕವಿಯ ಹೇಳಿಕೆಯಂತೆ 'ಹಾಲಾಸ್ಯ ಪುರಾಣ'ವು ಕ್ರಿ. ಶ. 1720 ಕ್ಕೆ ಪೂರ್ಣವಾಯಿತು. ಕ್ರಿ. ಶ. 1708 ಕ್ಕೇ ಇಮ್ಮಡಿ ಮುರಿಗಾ ಗುರುಸಿದ್ಧ ಕಾವ್ಯರಚನೆ ಮಾಡಿರಬೇಕಾದರೆ ಆ ವೇಳೆಗೆ ಅವನಿಗೆ 20 ವರ್ಷಗಳಾಗಿದ್ದಿರಬಹುದು. ಅಂದರೆ ಕವಿಯ ಕಾಲ ಸು. ಕ್ರಿ. ಶ. 1688 ಎಂದಾಗುತ್ತದೆ. ಡಾ॥ ಜಿ. ಮರುಳಸಿದ್ದಯ್ಯನವರು 'ಪ್ರಭುಲೀಲಾ' ಮಹಾ ಕಾವ್ಯದ ಪೀಠಿಕೆಯಲ್ಲಿ (ಪು. xi) ಕವಿಯ ಕಾಲವನ್ನು ಕ್ರಿ. ಶ. 1687—1824 ಎಂದು ನಿರ್ಧರಿಸಿರುವರು. ಅವರ [illegible] ಜೋಯಿಸರು ಕವಿಯ ಐಕ್ಯಕಾಲವನ್ನು ಶಾಲಿವಾಹನ ಶಕ 1651 ಅಂದರೆ ಕ್ರಿ. ಶ. 1729 ಎಂದು ನಿರ್ಧರಿಸಿರುವರು (ಪು. 4). ಡಾ॥ ಮರುಳಸಿದ್ದಯ್ಯನವರಾಗಲಿ, ಹುಲ್ಲೂರು ಶ್ರೀನಿವಾಸ ಜೋಯಿಸರಾಗಲಿ ಕವಿಯ ಕೊನೆಗಾಲವನ್ನು ಕರಾರುವಾಕ್ಕಾಗಿ ಹೇಳಲು ತಮಗಿರುವ ಆಧಾರಗಳೇನೆಂಬುದನ್ನು ಎಲ್ಲೂ ಸ್ಪಷ್ಟಪಡಿಸಿಲ್ಲ. ಕವಿಯ ಪ್ರತಿಭೆ ಮೊದಲಿಗೆ ಸಣ್ಣ ಪುಟ್ಟ ಕೃತಿ ರಚನೆಯಲ್ಲಿ ಹಾಗೂ ತಾತ್ವಿಕ ಗ್ರಂಥರಚನೆಯಲ್ಲಿ ವ್ಯಕ್ತಗೊಂಡು ಕ್ರಮ ಕ್ರಮೇಣ ವಿಕಾಸಶೀಲವಾಗಿ ಬೆಳೆದು ಬೃಹದ್ ಕೃತಿ ರಚನೆಗೆ ಪ್ರೇರಣೆಯೊದಗಿಸಿರಬೇಕು. ಏಕೆಂದರೆ ಈತನ 'ಪಂಚಾಶಿಕಾಗಮ'ವು ವಿರೂಪಾಕ್ಷ ಪಾದನೆಂಬ ಸಂಸ್ಕೃತ ಕವಿಯ 'ವಿರೂಪಾಕ್ಷ ಪಂಚಾಶಿಕೆ' ಹಾಗೂ ವಿದ್ಯಾ ಚಕ್ರವರ್ತಿಯ 'ವಿರೂಪಾಕ್ಷ ಪಂಚಾಶಿಕಾ ವಿವೃತಿಃ'—ಇವುಗಳ ಆಧಾರದ ಮೇಲೆ ರಚಿತವಾದ ತಾತ್ವಿಕ ಗ್ರಂಥ. ಇದರ ರಚನಾ ಕಾಲ ಕ್ರಿ.ಶ. 1708. ಕವಿಯು 1712 ರಲ್ಲಿ ರಚಿಸಿದ 'ಬಿಜ್ಜಮಹಾದೇವಿಯ ಚಾರಿತ್ರ'ವು ಯಕ್ಷಗಾನ ಕೃತಿಯಾಗಿದ್ದು ಗಾತ್ರದಲ್ಲಿ ಪುಟ್ಟದಾಗಿದೆ. ಬರಹ ಕುದುರಿದಂತೆ, ಆತ್ಮವಿಶ್ವಾಸ ಗರಿಯೊಡೆದಂತೆ 1720 ರ ವೇಳೆಗೆ 'ಹಾಲಾಸ್ಯ ಪುರಾಣ', 'ಪ್ರಭು ಲೀಲಾ' ಮೊದಲಾದ ಉದ್ಘ ಕೃತಿಗಳು ಬೆಳಕು ಕಂಡಿರಬೇಕು. ಹುಟ್ಟು ಪ್ರತಿಭಾವಂತನಾದ ಕವಿಗೆ ಕಾವ್ಯಕನ್ಯೆ ಆತನ ಇಪ್ಪತ್ತನೆಯ ವಯಸ್ಸಿಗೇ ಒಲಿದಳೆಂದು ಭಾವಿಸುವುದಾದರೆ ಕವಿಯ ಕಾಲ ಕವಿ ಚರಿತೆಕಾರರು ಹೇಳುವಂತೆ ಸು. 1660 ಎಂದಾಗದೆ ಸು. 1688 ಎಂದಾಗುತ್ತದೆ.

ಹಿಂದೆಯೇ ತಿಳಿಸಿದಂತೆ ಇಮ್ಮಡಿ ಮುರಿಗೆ ಗುರುಸಿದ್ಧನು ಪರಮ ವಿರಾಗಿ; ಕರ್ನಾಟಕದ ಪ್ರಸಿದ್ಧ ಗುರುಪೀಠದಧಿಪತಿ. ಹೀಗಾಗಿ ಈತ ತನ್ನ ಪೂರ್ವಭವದ ವಿವರಗಳನ್ನೇನನ್ನೂ ತನ್ನ ಕೃತಿಗಳಲ್ಲಿ ಕೊಟ್ಟಿಲ್ಲ. ಮೈಸೂರು ಜಿಲ್ಲೆಗೆ ಸೇರಿದ ಧನುಗೂರಿನವನಾದ ಈತ ಚಿನ್ಮೂಲಾದ್ರಿಯ ಬೃಹನ್ಮಠದ ಪೀಠಾಧಿಕಾರಿಯಾದುದು ಹೇಗೆ ? ಈ ಪ್ರಶ್ನೆಗೆ ಉತ್ತರ ಸಿಗದು. ಊಹೆ ಮಾತ್ರ ಸಾಧ್ಯ.

ಮುರಿಗಾ ಗುರುಸಿದ್ಧನು ಪ್ರಕಾಂಡ ಪಂಡಿತ. ಉಭಯ ಭಾಷಾ ಕವಿತ್ವ ನಿಪುಣ. ಷಟ್‌ಸ್ಥಲ ಜ್ಞಾನಿ. ವೀರಶೈವ ಧರ್ಮ ಗುರು. ಜನಸಾಮಾನ್ಯರು ಪಂಡಿತರು—ಈರ್ವರೂ ಬಗೆ ಮೆಚ್ಚುವಂತೆ ಕವಿತ್ವ ರಚನೆ ಮಾಡಬಲ್ಲ ಪ್ರತಿಭಾ ಸಂಪನ್ನ. ಇವನಿಂದ ರಚಿತವಾದ ಕೃತಿಗಳು[1] ಕೆಳಗಿನಂತಿವೆ :

ಕನ್ನಡ

1. ಬಿಜ್ಜಮಹಾದೇವಿ ಚಾರಿತ್ರ—ಯಕ್ಷಗಾನ
2. ಹೋಳೀಪದ—ಜನಪದ ಸಾಹಿತ್ಯ
3. ಹಾಲಾಸ್ಯ ಪುರಾಣ—ಚಂಪೂ ಮಹಾ ಕಾವ್ಯ
4. ಶೂನ್ಯಮಂತ್ರಗೋಪ್ಯ—ವಚನ
5. ಪಂಚಾಶಿಕಾಗಮ
6. ಶಿವಲಿಂಗನಾಂದ್ಯ
7. ಮಿಶ್ರಾರ್ಪಣ
8. ಶಿವಲಿಂಗ ಮಹಿಮಾ ಷಟ್ಪದಿ
9. ಕೈವಲ್ಯಸೋಪಾನನಾಮ್ನೈಕೋತ್ತರ ಶತಸ್ಥಲ
10. ಸ್ಕಂದ ಕಲ್ಯಾಣ
11. ಯೋಗಕಲಾಪಸಾರ (ಶಿವ-ಗಿರಿಜಾ ಸಂವಾದ)
12. ಶಿವಲಿಂಗ (ಅ) ಶಿವಲಿಂಗೇಶ ಅಂಕಿತವಿರುವ ಹಾಡುಗಳು—361. (ಈ ಹಾಡುಗಳ ಸಂಕಲನದ ಓಲೆಯ ಪ್ರತಿ ಧಾರವಾಡದ ಶ್ರೀ ಎಸ್. ಆರ್. ಗುಂಜಾಳ್ ಅವರ ಸಂಗ್ರಹದಲ್ಲಿದೆಯೆಂದು ತಿಳಿದುಬಂದಿದೆ).

ಸಂಸ್ಕೃತ

13. ಪ್ರಭುಲೀಲಾ
14. ನಂದೀಶ್ವರ ಜಯ ದಂಡಕಂ

ಬಿಜ್ಜಮಹಾದೇವಿಯ ಚಾರಿತ್ರ

ಇದು ಯಕ್ಷಗಾನ ರೂಪದಲ್ಲಿದೆ. ಬಿಜ್ಜಾವರದ ಕದಿರ ಕಾಯಕದವಳಾದ ಅಮ್ಮವ್ವೆಯು ಶಿವನನ್ನೇ ಮಗನಾಗಿ ಪಡೆಯಲು ಬಯಸಿದ್ದಳು. ಅವಳ ಹಂಬಲವನ್ನು ಪೂರೈಸಲು ಶಿವನು ಶಿಶುವೇಷ ಧರಿಸಿ

1 ಇವುಗಳಲ್ಲಿ 'ಹಾಲಾಸ್ಯ ಪುರಾಣ'ವು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಶ್ರೀ ಜಿ. ಜಿ. ಮಂಜುನಾಥ, ಎಂ.ಎ., ಇವರಿಂದ ಸಂಪಾದಿತವಾಗಿ ಇಷ್ಟರಲ್ಲೇ ಪ್ರಕಟವಾಗಲಿದೆ. 'ಪ್ರಭುಲೀಲಾ' ಮಹಾಕಾವ್ಯವು ಡಾ॥ ಜಿ. [illegible] ವಿದ್ಯಾಲಯದ ಪ್ರಸಾರಾಂಗದ ವತಿಯಿಂದ ಪ್ರಕಟವಾಗಿದೆ. ಶೂನ್ಯಮಂತ್ರ ಗೋಪ್ಯ, ಪಂಚಾಶಿಕಾಗಮ, ಶಿವಲಿಂಗ ನಾಂದ್ಯ ಮಿಶ್ರಾರ್ಪಣ, ಶಿವಲಿಂಗ ಮಹಿಮಾ ಷಟ್ಪದಿ—ಈ ಕೃತಿಗಳು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿರುವ ಡಾ॥ ಎಸ್. ವಿದ್ಯಾಶಂಕರ ಅವರಿಂದ ಸಂಪಾದಿತವಾಗಿದ್ದು ಸದ್ಯದಲ್ಲೇ ಪ್ರಕಟವಾಗಲಿವೆ.

ಬಂದು ಅವಳಿಗೆ ಮಗನಾದನು. ಅವಳ ಭಕ್ತಿಯನ್ನು ಪರೀಕ್ಷಿಸಲು ಶಿಶುರೂಪೀ ಶಿವನು ಬಾಯಿಲೆಯಿಂದ ನರಳುವುದಕ್ಕೆ ಪ್ರಾರಂಭ ಮಾಡಿದನು. ಅಮ್ಮವ್ವೆ ದುಃಖದಿಂದ ಶಿವಲಿಂಗದ ಎದುರಿಗೆ ಹೋಗಿ ತನ್ನ ತಪ್ಪನ್ನು ತಿಳಿಸೆಂದು ಕತ್ತಿಯನ್ನೆತ್ತಿ ಕೊರಳನ್ನು ಕತ್ತರಿಸಿಕೊಳ್ಳಲು ಹೊರಟಳು. ಶಿವ ಪ್ರತ್ಯಕ್ಷನಾಗಿ ಅವಳನ್ನು ಕೈಲಾಸಕ್ಕೆ ಕೊಂಡೊಯ್ದನು. ಈ ಜನಪ್ರಿಯ ಶರಣೆಯ ಕಥೆ ಇಮ್ಮಡಿ ಮುರಿಗೇಶನ ಈ ಯಕ್ಷಗಾನ ಕೃತಿಗೆ ವಸ್ತುವಾಯಿತು.

ಹಾಲಾಸ್ಯ ಪುರಾಣ

ನಾಲ್ಕು ಕಾಂಡ ಹನ್ನೆರಡು ಆಶ್ವಾಸಗಳಿಂದ ಕೂಡಿದ ಬೃಹದ್ ಚಂಪೂಕಾವ್ಯ. 'ಸುಂದರೇಶ್ವರ ವಿಲಾಸ'ವೆಂಬ ಮತ್ತೊಂದು ಹೆಸರೂ ಈ ಕೃತಿಗಿದೆ. ಇದರ ವಸ್ತು ಸ್ಕಾಂದಪುರಾಣದ ಅಗಸ್ತ್ಯ ಸಂಹಿತೆಯ ಮಧ್ಯದಲ್ಲಿರುವ ಹಾಲಾಸ್ಯ ಮಹಾತ್ಮ್ಯವಾಗಿದೆ. ಸಕಲ ಕಲಾ ವಿಶಾರದನೂ ನರೇಂದ್ರ ಶಿರೋಮಣಿಯೂ ಲಿಂಗಜಂಗಮಾರ್ಚಕನೂ ಆದ ಸೋದೆಯ ಪ್ರಭು ಸದಾಶಿವ ಭೂಪನು[1] (ಕ್ರಿ. ಶ. 1673-1696) ಹಿಂದೆ ವರ್ಣಕದಲ್ಲಿ ಹಾಲಾಸ್ಯ ಪುರಾಣವನ್ನು ರಚಿಸಿದ್ದನು. ಪ್ರಮಥರ ಅಭಿಪ್ರಾಯದಂತೆ ಅದನ್ನೇ ಆಧರಿಸಿ ವಸ್ತುಕದಲ್ಲಿ ಇಮ್ಮಡಿ ಮುರಿಗಾ ಗುರುಸಿದ್ದನು ಬರೆದಿರುವನು.

ಪ್ರಾರಂಭದಲ್ಲಿ ಶಿವ, ಪಾರ್ವತಿ,ವಿಘ್ನೇಶ,ಷಣ್ಮುಖ,ವೀರಭದ್ರ-ಇವರುಗಳನ್ನು ಒಂದೊಂದು ಪದ್ಯದಲ್ಲಿ ನುತಿಸಿ, ನಂದಿ, ಭೃಂಗಿ, ವೃಷಭ, ಮಹಾಗುರು ರೇಣುಕ, ದಾರುಕ, ಸುಂದರ ಕಲಿಕಂಬಕ, ಗಣನಾಥ, ಸಿರಿಯಾಳ, ಚಂದಯ, ಬಸವೇಶ, ಮಡಿವಳ್ಳ ಮಾಚಯ್ಯ, ನಾಗಣಾನಂದ — ಇವರುಗಳನ್ನು ಒಂದು ಪದ್ಯದಲ್ಲಿ ಸ್ತುತಿಸಿ, ಹಂಪೆಯ ಹರಿಹರದೇವ, ರಾಘವಾಂಕ, ಪಾಲ್ಕುರಿಕೆಯ ಸೋಮನಾಥ, ಪಂಡಿತಾರಾಧ್ಯ-ಇವರುಗಳು ತನ್ನ ಕೃತಿಗೆ ಸೊಂಪಿನ ರಸ ಭಾವಾದಿಗಳನ್ನು ನೀಡಲೆಂದು ಪದ್ಯವೊಂದರಲ್ಲಿ ಪ್ರಾರ್ಥಿಸಿರುವನು. ಪೂರ್ವ ಶಿವಕವಿಗಳಲ್ಲಿ ತೋಂಟದಾರ್ಯ[2], ಕೊಟ್ಟೂರೇಶ, ಭುಜಂಗೇಶ್ವರ, ಕರತಳದ ನಾಗಿದೇವ[3] — ಈ ನಾಲ್ವರನ್ನು ಒಂದು ಪದ್ಯದಲ್ಲಿ (ಪ. 8) ನೆನೆದಿರುವನು. (ಇವರಲ್ಲಿ ತೋಂಟದಾರ್ಯ ಹಾಗೂ ಕರತಳದ ನಾಗಿದೇವರು ಪ್ರಸಿದ್ಧರಿರುವರು. ಕೊಟ್ಟೂರೇಶ, ಭುಜಂಗೇಶ್ವರರ ಬಗೆಗೆ ಹೆಚ್ಚಿನ ವಿವರಗಳೇನೂ ತಿಳಿದು ಬಂದಿಲ್ಲ).

ಬಳಸಿ ಬಳಸಿ ಜಡ್ಡುಗಟ್ಟಿಹೋಗಿದ್ದ, ಅರ್ಥವಿಹೀನವಾಗಿದ್ದ ಅಷ್ಟಾದಶ ವರ್ಣನೆಗಳನ್ನು ಕವಿ ಕೈಬಿಟ್ಟಿರುವನು :

ನೀರಸವಾಕ್ಯದ ವರ್ಣನೆ
ಸಾರಂಪೆ ಶಿವಭಕ್ತಜನಕೆ ರಸಹೀನಮಿದೆಂ
ದೋರಂದಿಸುತಿದಸದನಂ
ಚಾರಮಣನ ಲೀಲೆಗಳ್ಗೆ ತೊಡಕಪ್ಪುದರಿಂ ||(ಆ 1. ಪ. 12)

ಕವಿಯ ಅಭಿಪ್ರಾಯದಂತೆ ಅಷ್ಟಾದಶ ವರ್ಣನೆಗಳು ಶಿವನ ಲೀಲೆಗಳನ್ನು ವರ್ಣಿಸುವಲ್ಲಿ ತೊಡಕು. ಆದ್ದರಿಂದ ಶಿವಭಕ್ತಜನರು ಒಲ್ಲದ ಆ ನೀರಸ ವಾಕ್ಯದ ವರ್ಣನೆಗಳು ರಸಹೀನವೆಂದು ಕವಿ ಅವನ್ನು ವರ್ಜಿಸಿರುವನು.

' ಹಾಲಾಸ್ಯ ಪುರಾಣ 'ಕ್ಕೆ ' ಕಾಲಾಸ್ಯ ಭಯಂಕರಂ ಹರಂ ಸುಂದರನ್' ಅಧಿಪನು. ಶಿವಭಕ್ತರು, ಕವಿಗಳು ಕೃತಿಯಲ್ಲಿ ತಪ್ಪಿದ್ದರೆ ಅದನ್ನು ಅನಂತೋತ್ಸವದಿಂದ ಸ್ವಲ್ಪವೂ ಇಲ್ಲದಂತೆ 'ತಿದ್ದುಗೆ' ಎಂದು ಕವಿ ಕೈಮುಗಿದು ವಿನಯಪೂರ್ವಕವಾಗಿ ಪ್ರಾರ್ಥಿಸಿರುವನು (ಪ. 15-16). 'ವ್ಯಾಕರಣದ ಸಮ್ಮತಿಯಿಂ ಲೋಕದೊಳರಿದೆನಿಪ ತೆರದೆ ಪೇಳ್ದ' ಈ ಕೃತಿಯನ್ನು ಎಚ್ಚರಿಕೆಯಿಂದ ಶಿವಭಕ್ತರು ಸ್ವೀಕರಿಸಿದ್ದೇ ಆದರೆ ನನಗೆ ಅತಿ ಹೆಚ್ಚಿನ ಸಂತೋಷವಾಗುತ್ತದೆ (ಪ. 17) ಎಂದು ಕವಿ ಹೇಳಿರುವನು.

ಕೃತಿಯ ಅಂತ್ಯ ಗದ್ಯದಲ್ಲಿ ಕವಿ ತನ್ನನ್ನು 'ಶಿವಲಿಂಗಾನುಜ್ಞಾ ನಿರೂಪಿತ ಉಭಯ ಕವಿತ್ವ ನಿಪುಣ ಜ್ಞಾನಪವಿತ್ರಿಶಿಷ್ಯಜ್ಞಾನದರಿದ್ರ ಪದಂವಾರಣಂ ದ್ವಿತೀಯ ಮುರಿಗಾ ಗುರುಸಿದ್ಧ ಶಿವಯೋಗೀಂದ್ರಂ' ಎಂದು ಕರೆದುಕೊಂಡಿರುವನು.

ಶೂನ್ಯಮಂತ್ರಗೋಪ್ಯ

ವೀರಶೈವ ಧರ್ಮದ ತತ್ವಸಿದ್ಧಾಂತವನ್ನು ಪ್ರತಿಪಾದಿಸುವ ವಚನಗ್ರಂಥ. ಹದಿನೆಂಟನೆಯ ಶತಮಾನದಲ್ಲಿ ಮೂಡಿ ಬಂದ ವಚನಗ್ರಂಥವಿದಾಗಿರುವುದರಿಂದ ಈ ಕೃತಿಗೆ ಹೆಚ್ಚಿನ ಸ್ಥಾನ-ಮಾನಗಳಿವೆ. ಇದರಲ್ಲಿ ಒಟ್ಟು 209 ವಚನಗಳಿವೆ. ಪ್ರತಿಯೊಂದು ವಚನವೂ ಶಿವಲಿಂಗಾಂಕಿತದಿಂದ ಮುಕ್ತಾಯವಾಗುತ್ತದೆ. ಉದಾಹರಣೆಗೆ ಕೆಲವು ವಚನಗಳನ್ನು ನೋಡಬಹುದು :

---

1 ಸೋದೆಯ ಪ್ರಭು ಸದಾಶಿವ ಭೂಪನ ವರ್ಣಕ ' ಹಾಲಾಸ್ಯ ಪುರಾಣ'ವು ಕವಿ ಚರಿತೆಕಾರರ ಕಣ್ಣಿಗೆ ಬಿದ್ದಿಲ್ಲ. ಹಾಲಾಸ್ಯ ಪುರಾಣವಲ್ಲದೆ ಈತ 'ಗುರುನಂದೀಶ' ಅಂಕಿತದಲ್ಲಿ 'ಪಂಚಶತ ನೀತಿ'ಯನ್ನು ಕಂದ, ವೃತ್ತಗಳಲ್ಲಿ ಬರೆದಿರುವನು. ಈ ಕೃತಿ ಅಚ್ಚಾಗಿದೆ. ಈತ ಶಂಕರಾರಾಧ್ಯನ ಸಂಸ್ಕೃತ ಬಸವ ಪುರಾಣಕ್ಕೆ ಟೀಕೆ ಬರೆದಿರುವನು. ಆದರೆ ಈ ಕೃತಿ ದೊರಿತಿಲ್ಲ.

2 ಈತ ಷಟ್‌ಸ್ಥಲಜ್ಞಾನ ಸಾರಾಮೃತದ ಕರ್ತೃ.

3 ಈತ ಅಕ್ಷರದ ಚೌಪದನ, ಕರಸ್ಥಲದ ನಾಗಿದೇವರ ತ್ರಿವಿಧಿ, ಪರಮ ವಿರಕ್ತನ ಐಕ್ಯಸ್ಥಲ (ತ್ರಿ), ಮಡಿವಾಳಯ್ಯಗಳ ತಾರಾವಳಿ, ಮೂರೇಳು ದೀಕ್ಷೆಯ ಪದ (ವಾರ್ಧಕ ಷಟ್ಪದಿಯಲ್ಲಿರುವ ಇದನ್ನು ಜ. ಚನಿಯವರು ಸಂಪಾದಿಸಿರುವರು) ಲಿಂಗ ನಿಜ ಸ್ಥಲದ ತ್ರಿವಿಧಿ, ಹಾಡುಗಳು (ನೋಡಿ : ಡಾ|| ಎಲ್. ಬಸವರಾಜುರವರ ಶಿವದಾಸ ಗೀತಾಂಜಲಿ), ವಚನಗಳು (ವಾರ್ಧಕ ಷಟ್ಪದಿಯಲ್ಲಿರುವ ವಚನಗಳು ಒಂಭತ್ತು ದೊರೆತಿವೆ. ನೋಡಿ– ಕ. ಕ. ಚ. ಭಾ. 3. ಪು 241), ಶಾಂತ ಶತಕ [108 (?) ಕಂದ. ಶ್ರೀ ಚನ್ನಮಲ್ಲಿಕಾರ್ಜುನರಿಂದ ಸಂಪಾದಿತವಾಗಿ 'ಸದ್ಧರ್ಮ ದೀಪಿಕೆ'ಯ 64–67 ಸಂಚಿಕೆಗಳಲ್ಲಿ ಅಚ್ಚಾಗಿದೆ), ಶಾಂಭವೀ ವಿವರ (ವಾರ್ಧಕ ಷಟ್ಪದಿಯಲ್ಲಿದೆ. ಸದ್ಧರ್ಮ ದೀಪಿಕೆಯ 60 ನೇ ಸಂಚಿಕೆಯಲ್ಲಿ ಪ್ರಕಟವಾಗಿದೆ.)

ಅಂಗಾತ್ಮ ಪ್ರಾಣೇಂದ್ರಿಯ ವಿಷಯ ತೃಪ್ತಿಗಳು
ಲಿಂಗಾತ್ಮಕವೆಂದು ನಿರೂಪಿಸಿದೆಯಯ್ಯ
ನೀನವಿರಳ ಪರಂಜ್ಯೋತಿಸ್ವರೂಪನಾದುದರಿಂ ನಿರುಪಾಧಿಕ
ನಿರಾವರಣ ನಿರಂಜನನೆನಿಸಿರ್ಪೆಯಯ್ಯ
ಪರಮಶಿವಲಿಂಗ ಪರಾಪರವೈಭವೋತ್ತುಂಗ ॥ ೩ ॥

ಸ್ಥೂಲ ಸೂಕ್ಷ್ಮ ಕಾರಣಾಂಗತ್ರಯದಲ್ಲಿ
ಸ್ಥೂಲ ಸೂಕ್ಷ್ಮ ಕಾರಣಲಿಂಗವಾಗಿ ನಿಂದೆಯಯ್ಯ
ಮಹೇಶ್ವರ ಸದಾಶಿವ ಪರಮಶಿವಲಿಂಗ
ದಿವ್ಯನಾಮ ಷಟ್‌ಸ್ಥಲಬ್ರಹ್ಮ ದೃಙ್ಮಂಡಲ ವಿರಾಜಿತ
ಶುದ್ಧ ಪ್ರಸಾದರೂಪ ಶಿವಲಿಂಗ ನಿರಂತರಾಂತರಂಗ ॥ ೪ ॥

ಮತ್ತಂ ಭವಿಗಳ ಪ್ರಾಕೃತ ದೃಷ್ಟಿ ಪತಿತವಾದ ಶುದ್ಧ
ಪದಾರ್ಥಂಗಳಂ ಕಳೆದು
ನಿವೃತ್ತಿಯಂ ಮಾಡಿ ವಿಶುದ್ಧಾದ್ವೈತ ದೃಗ್ವಿಲೀನ ಶುದ್ಧ
ಪ್ರಸಾದಮಯ ವಸ್ತುವಂ
ಸ್ವೀಕರಿಪನಾವನವನೆ ವಿಶೇಷ ವೀರಶೈವನೆಂದು ನಿರವಿಸಿದೆಯಯ್ಯ
ಪರಶಿವಲಿಂಗಯ್ಯ ॥ ೨೮ ॥

ಪಂಚಾಶಿಕಾಗಮ

ಇದು ಶಿವಪಾರಮ್ಯವನ್ನು ಪ್ರತಿಪಾದಿಸುವ, ಭಾಮಿನೀ ಷಟ್ಪದಿಯಲ್ಲಿ ರಚಿತವಾದ ಹಿರಿ ಕೃತಿ. ಗ್ರಂಥದಲ್ಲಿ ಎರಡು ಪ್ರಕರಣ, ನಾಲ್ಕು ಸ್ಕಂದ, ಹದಿನಾಲ್ಕು ಸಂಧಿ, ಒಟ್ಟು 660 ಷಟ್ಪದಿಗಳಿವೆ. ಪ್ರತಿಯೊಂದು ಸ್ಕಂದದ ಆದ್ಯಂತ ಪದ್ಯಗಳಲ್ಲಿ ಶಿವಸ್ತುತಿಯ ಅನಂತರ ತೋಂಟದ ಸಿದ್ಧಲಿಂಗನ ಸ್ತುತಿ ಬಂದಿದೆ. ಕವಿ ತನ್ನ ಕೃತಿರಚನಾ ಕಾಲವನ್ನು ಗ್ರಂಥಾಂತ್ಯದಲ್ಲಿ ಹೀಗೆ ಹೇಳಿರುವನು :

ಸರ್ವಧಾರಿಯಮಾ ಧರ್ಮದ ಸದ
ಖರ್ವ ವೈಶಾಖದಸಿತೋದ್ಯದ
ಪೂರ್ವಪಕ್ಷೇಕಾದಶಿಯ ಶಶಿವಾರದುದಯದೊಳು
ಪರ್ವಪೂರ್ವಕವಾಗಿ ಮುಗಿಯಿ
ತ್ತುರ್ವಿ ವಿಬುಧರು ಮೆಚ್ಚುವಂದದೆ
ಶರ್ವ ಶಿವಲಿಂಗೇಶನಾಜ್ಞೆಯೊಳಿದುವೆ ಶುಭಮಸ್ತು ॥
(ಸಂ. 14. ಪ. 49)

ಮೇಲಿನ ಪದ್ಯದಲ್ಲಿ ಬರುವ ವರ್ಷ, ಮಾಸ ತಿಥಿ, ವಾರಗಳು ಕ್ರಿ. ಶ. 1708 ನೆಯ ಏಪ್ರಿಲ್ ತಿಂಗಳ 8 ನೆಯ ತಾರೀಖಿಗೆ ಹೊಂದಿಕೆಯಾಗುತ್ತದೆ.

ಕವಿಯು ಪ್ರಾರಂಭದಲ್ಲಿ ಶಿವ–ಪಾರ್ವತಿ – ತೋಂಟದ ಸಿದ್ಧಲಿಂಗರನ್ನು ಒಂದೊಂದು ಪದ್ಯದಲ್ಲಿ ಸ್ತುತಿಸಿದ ಮೇಲೆ ಗುರುಶ್ರೇಷ್ಠನಿಗೆ, ಗಣಪತಿ, ನಂದಿ, ವೀರೇಶ್ವರ, ಕುಮಾರಸ್ವಾಮಿ ಹಾಗೂ ಭುವನದ ಪುರಹರನ ಶರಣರ ಅಡಿದಾವರೆಗಳನ್ನು ನೆನೆದು ವಂದಿಸಿ ದೇವೇಂದ್ರನಿಗೆ ಪರಶಿವನು ಉಪದೇಶಿಸಿದ ಪಂಚಾಶಿಕಾಗಮವನ್ನು ಹೇಳಲು ತೊಡಗುವನು. ಕವಿಯು ವಿನಯಪರನಾಗಿ

ಪೊಡವಿಯೊಳು ತತ್ವಪ್ರಬಂಧಗ
ಳಿಡಿಕಿಱಿದು ತುಂಬಿಹವಿದೇತರ
ಜಿನನಿನಗ್ಗದ ಕವಿತೆಯಿಂದಿದನಾಳವಾಡದಿರಿ
ಕಡಲುಪಕೆ ಪರಿಪೂರ್ಣವಾಗಿರೆ
ತಡಿಯೊಳಿರ್ದವರೆಲ್ಲರುಂ ನೀ
ರಡಸಿ ಬಂದೊರತೆಯ ಜಲವನೇಂ ಕುಡಿಯದುಳಿದಪರೆ ॥
(ಪ. 5)

ಎಂದು ತನ್ನ ಕೃತಿಯ ಬಗೆಗೆ ಹೇಳಿಕೊಂಡಿರುವನು. ವ್ಯಾಕರಣ, ಅಲಂಕಾರ, ತತ್ವರಸಗಳು ತನ್ನ ಕೃತಿಯಲ್ಲಿ ನೆರೆದು ನೆಲಸಿದ್ದರೂ ಕಾಣಬರುವ ತಪ್ಪುಗಳನ್ನು ಅನಸೂಯರಾದ ಬುಧರು ತಿದ್ದಬೇಕೆಂದು ಕವಿ ಪ್ರಾರ್ಥಿಸಿರುವನು :

ಸರಸ ಸಂಧಿ ಸಮಾಸ ತದ್ಧಿತ
ನಿರುತ ಕಾರಕ ಮುಖ್ಯ ಲಕ್ಷಣ
ಸುರುಚಿರ ವ್ಯಾಕರಣ ಸದಲಂಕಾರ ತತ್ವರಸ
ನೆರೆದು ನೆಲಸಿದ ಕೃತಿಯದರೊಳಧಿ
ಕರಿಸಿ ತೋಱುವ ಬುಧರು ತಪ್ಪದು
ಜರೆದಿರಲು ರುಜುಮಾಡಿ ಮೆಱೆವುದಸೂಯೆಯನು ಬಿಟ್ಟು ॥
(ಪ. 6)

ಕೃತಿಯ ಮೊದಲ ಕಾಂಡದಲ್ಲಿ ಜಗವೆ ಒಡಲು ಈಶನೆ ಅದರ ಆತ್ಮನೆಂಬುದನ್ನೂ, ಎರಡನೆಯ ಕಾಂಡದಲ್ಲಿ ಶಿವನೇ ಜಗವೆಂದೂ, ಮೂರನೆಯ ಕಾಂಡದಲ್ಲಿ ಜಗವೇ ಶಿವನೆಂದೂ, ನಾಲ್ಕನೆಯ ಕಾಂಡದಲ್ಲಿ ಆ ಶಿವನೇ ಜಗವೆಂದೂ ಕವಿ ಹೇಳಿರುವನು (ಪ. 7).

ಪ್ರತಿಯೊಂದು ಅಧಿಕರಣದ ಕೊನೆಯಲ್ಲಿ

ಇದು ಪರಮ ಶಿವತತ್ವಕೋವಿದ
ಹೃದಯ ಬುಧಹರ್ಷಾಮೃತಾರ್ಣವ
ವಿದಿತ ಪೂರ್ಣಶಶಾಂಕ ಸಾಧಕವೃಂದಮುಖಮುಕುರ
ಸದರವಾದಪವರ್ಗ ಸಾಮ್ರಾ
ಜ್ಯದ ಮಹಾ ಪಟ್ಟಾಭಿಷೇಕ
ಪ್ರದವಿ...........ನೆಯಧಿಕರಣ ಪಂಚಾಶಿಕಾಗಮದಿ ॥

ಎಂದೂ, ಪ್ರತಿಯೊಂದು ಸ್ಕಂದಾಂತ್ಯದಲ್ಲಿ

ನಿಂದು ತುಂಬಿದಹಂಪ್ರಕಾಶವ
ನಂದು ವಿಶ್ವಶರೀರವನು ತಾ
ನೊಂದಿ ಸಾಕ್ಷಾತ್ಕಾರ ಪರಾಮರ್ಶನವನೆಸಗುತ್ತ
ಸಂದೆಯವನಪಹರಿಸಿ ಸಕಲಾ
ನಂದಪರಮಾತ್ಮಕನೆಯಾಗಿಹ
ಚಂದವನು ಪೇಳುವುದು ಕೇಳ್...........ಸಂಧಿ ॥

ಎಂದೂ ಹೇಳಲಾಗಿದೆ. ಈ ಕೃತಿಯನ್ನು ಯಾರಿಗೆ ಹೇಳಬೇಕು, ಯಾರಿಗೆ ಹೇಳಬಾರದೆಂಬುದನ್ನು ಕವಿ ಕೆಳಗಿನಂತೆ ಹೇಳಿರುವನು:

ಶಾಂತರಿಗೆ ನಿಶ್ಚಿಂತರಿಗೆ ಗುಣ
ವಂತರಿಗೆ ಗುರುಚರಣ ಭಕ್ತ್ಯಾ
ಕ್ರಾಂತರಿಗೆ ಕರುಣಾಂತರಂಗರಿಗಿದನು ಬೋಧಿಪುದು
ಭ್ರಾಂತರಿಗೆ ಬಹು ಚಿಂತರಿಗೆ ರತಿ
ವಂತರಿಗೆ ಮೂರ್ಖರಿಗೆ ಜಗದೊಳ
ಸಂತರಿಗೆ ಬಗೆಯೊಗೆದಿದನು ಪೇಳುವುದುಚಿತವಲ್ಲ" (14-46)

ಶಿವಪಾರಮ್ಯವನ್ನು ಸಾರುವ ಈ ಕೃತಿಯು ಸಂಸ್ಕೃತ ಕವಿಯಾದ ವಿರೂಪಾಕ್ಷನಾಥಪಾದನೆಂಬುವವನ 'ವಿರೂಪಾಕ್ಷ ಪಂಚಾಶಿಕೆ'ಯೆಂಬ ಕೃತಿಯನ್ನು ಆಧರಿಸಿ ರಚಿತವಾಗಿದೆ. ಇದಲ್ಲದೆ ಮತ್ತೊಬ್ಬ ಸಂಸ್ಕೃತ ಕವಿಯಾದ ವಿದ್ಯಾ ಚಕ್ರವರ್ತಿಯ 'ವಿರೂಪಾಕ್ಷ ಪಂಚಾಶಿಕಾ ವಿವೃತಿಃ' ಎಂಬ ವ್ಯಾಖ್ಯಾನವೂ ಆಧಾರವಾಗಿದೆ. ವಿದ್ಯಾ ಚಕ್ರವರ್ತಿಯು 'ಕಾವ್ಯಪ್ರಕಾಶ', 'ಅಲಂಕಾರ ಸರ್ವಸ್ವ' ಎಂಬ ಗ್ರಂಥಗಳಿಗೆ ಕ್ರಮವಾಗಿ 'ಸಂಪ್ರದಾಯ ಪ್ರಕಾಶಿನಿ' ಮತ್ತು 'ಅಲಂಕಾರ ಸರ್ವಸ್ವ ಸಂಜೀವಿನಿ' ಎಂಬ ವ್ಯಾಖ್ಯಾನಗಳನ್ನೂ, ವಿರೂಪಾಕ್ಷನಾಥ ಪಾದನ 'ವಿರೂಪಾಕ್ಷ ಪಂಚಾಶಿಕೆ'ಗೆ ವ್ಯಾಖ್ಯಾನವನ್ನೂ ಬರೆದಿರುವನು[1]. ಮೂಲ ಮತ್ತು ವ್ಯಾಖ್ಯಾನಗಳ ಛಾಯೆಯು ಕನ್ನಡ ಪಂಚಾಶಿಕಾಗಮದಲ್ಲಿ ಅನೇಕ ಕಡೆ ಕಾಣಬರುತ್ತದೆಂದು ಶ್ರೀ ಎಸ್. ಅನಂತರಂಗಾಚಾರ್ ಅವರು ಅಭಿಪ್ರಾಯಪಡುವರು.[2]

ಶಿವಲಿಂಗನಾಂದ್ಯ

ಇದರಲ್ಲಿ ಇಪ್ಪತ್ತೈದು ಭಾಮಿನಿ ಹಾಗೂ ವಾರ್ಧಕ ಷಟ್ಪದಿಗಳಿವೆ. ಇವುಗಳಲ್ಲಿ ಶಿವನ ಸ್ತುತಿಗಳಿವೆ. ಈ ಕೃತಿಯನ್ನು ಒಲಿದು ಓದಿದವನಿಗೆ ಸಿಗುವ ಫಲವನ್ನು ಕವಿ ಹೀಗೆ ವರ್ಣಿಸುವನು :

ಸಲೆ ನಿನ್ನ ಪಂಚವಿಂಶತಿ ನುತಿಯನಿದನಾವ
ನೊಲಿದೋದಿದಪನವಗೆ ಭವಬಂಧನವದಿಲ್ಲ
ಸುಲಭದಿಂದರ್ಥವನು ಮಾಡಿದಾತಗೆಯಂತೆ ಕೇಳ್ದನಿಗದೆ
ತೆರನಲ್ಲೈ
ಚಿಲಿಪಾಲು ಸಕ್ಕರೆಯ ಬೆರಕೆಯನು ಸವಿದನಿಗೆ
ನೆಲೆಯಾದಪುದೆಯಂಬಿಲದ ರುಚಿಯದರ ತೆರದೆ
ಚಲಿತಾನ್ಯ ನುತಿ ನಿನ್ನ ನುತಿಯೆ ನುತಿ ಯಿದಕೆ ಬೆಲೆಯಿಲ್ಲ
ಶಿವಲಿಂಗೇಶ್ವರಾ ॥ (ಪ. 25).

ಮಿಶ್ರಾರ್ಪಣ

ತನ್ನ ನಿಜವನು ತಿಳಿದು ಷಟ್‌ಸ್ಥಲಬ್ರಹ್ಮದಲ್ಲಿ ಏಕತ್ವವನ್ನು ಹೊಂದಿ ಜೀವನು ಮುಕ್ತನಾಗಿ ಸಂಚರಿಸುವ ಕ್ರಮವನ್ನು ಕವಿಯು ಐದು ವಾರ್ಧಕ ಪದ್ಯಗಳಲ್ಲಿ ಹೇಳಿರುವನು. ಉದಾಹರಣೆಗೆ ಒಂದು ಪದ್ಯವನ್ನು ಪರಿಶೀಲಿಸಬಹುದು :

ತರದಿಂತೆ ಪೊಡಶೋತ್ತರಯುಗ ಶತಾರ್ಪಣದ
ಪರಿಯ ಪರಿವಿಡಿಯಿಂದೆ ಕಂಡನುಭವಿಪುದು ಚಿ
ತ್ಸರಧಿ ಮೇಲ್ವರಿಯಲುರು ಶಾಂತಿಚಂದ್ರಿಮನುದಿಸೆ
ಪರಮಶಿವಲಿಂಗೇಶನಾ ।
ವರ ಪಕ್ಷನಿಧಿ ಸಿಂದು ಬಾಣ ದ್ವಿಕಾಸ್ಯ ವಿ
ವಿಸ್ಫುರುದಂಗಯುತ ಚತುರ್ನಿಧಿ ರವಿ ನವೋಜ್ವಲಿತ
ಸರಳ ಲಿಂಗಾನ್ವಿತ ಸ್ಥಳಕುಳಂಗಳನೆಯ್ದೆ ಭಾವಿಪುದು
ಷಟ್ಸ್ಥಲದೊಳು ॥ (ಪ. 5)

ಶಿವಲಿಂಗ ಷಟ್ಪದಿ

ಇದರಲ್ಲಿ 105 ವಾರ್ಧಕಗಳಿವೆ. ಪ್ರತಿಯೊಂದು ಪದ್ಯವೂ 'ಶಿವಲಿಂಗೇಶಾ' ಎಂಬ ಅಂಕಿತದೊಡನೆ ಮುಕ್ತಾಯವಾಗುತ್ತದೆ. ಶಿವನ ಲೀಲಾವಿಲಾಸಗಳು, ಅಪ್ರತಿಮತ್ವ, ಭಕ್ತವತ್ಸಲತೆ, ಕರುಣಾಮೃತತ್ವ, ಸತ್ಯಪಾಸಿಂಧುತ್ವ–ಇತ್ಯಾದಿ ಸಂಕೀರ್ಣ ವಿಷಯಗಳು ಒಂದೊಂದು ಪದ್ಯಕ್ಕೆ ವಸ್ತುವಾಗಿದೆ. ವೇದ, ಆಗಮ, ಪುರಾಣಗಳ ಸಾಕ್ಷ್ಯಾಧಾರಗಳಿಂದ ಶಿವಾಧಿಕ್ಯದ ವಿವರಣೆ, ಶಿವನ ಲೀಲಾವಿಲಾಸಗಳ ಸ್ಮರಣೆ ಕವಿಗೆ ಆನಂದ ತಂದುಕೊಡುವವುಗಳಾಗಿವೆ. ನಿದರ್ಶನಕ್ಕೆ ಕೆಲವು ಪದ್ಯಗಳನ್ನು ನೋಡಬಹುದು :

ಅನಧಿಕ ತಾನಧಿಕವೆಂದಜಾಚ್ಯುತರು ಬಹು
ಮಾನಕ್ಕೆ ಹೋರುತಿರಲವರ ನಡುವಪರಿಮಿತ
ಭಾನುಕಳೆಗಳನವಗವಿಸಿ ತೋರ್ಪ
ತೇಜೋನಿಧಾನವಸ್ತುವಿನ ನಿಲವಾ ।
ನೂನವಾಗಿಯೆ ಕಾಂಬೆವೆಂದಂಜಿ ಪೊಂಗಾಲ
ರಾನತೋನ್ನತ ವೇಷದಿಂ ಪರಿದರಿಸಿ ಬಳಲೆ
ನೀನವರ ಮದವ ಮುರಿದವಳ ಬುದ್ಧಿಯನಿತ್ತು
ಪೊರದೆ ಶಿವಲಿಂಗೇಶಾ ॥ (ಪ. 4)

ಸುಂದರನ ಬಂಟ ಕಲಿಗಣನವರ ಶಿಷ್ಯ ಕ
ಣಂದನುರು ಪಾದುಕೆಯನಾಂತ ಬಿಜ್ಜಾಂಬಿಕೆಯ
ಕಂದನುರುಲಿಂಗಪೆದ್ದಿಯ ಪುರುಷ ಬಾಣನರಮನೆಯ
ಬಾಗಿಲ ಕಾಯ್ದನು ।
ಸಂದೆಯುವದೇನಜನಸುತನುತ್ಕೃತನ ಪುತ್ರ
ನಂದುಮಾಧರನ ಜೋಳಿಯು ಕೇಷವನು ಕೊಂಡು
ಕುಂದಿಲ್ಲದಿವನೆಂಬುದಿದು ನಿನ್ನ ಭಕ್ತವತ್ಸಲತೆ
ಶಿವಲಿಂಗೇಶ್ವರಾ ॥ (ಪ. 5)

ಮುಂಗಯ್ಯ ಕಂಕಣಕೆ ಕನ್ನಡಿಯದೇಕೆ ಭುವ
ನಂಗಳೊಳು ಸಚರಾಚರ ಪ್ರಾಣಿಗಳ ಶರೀ
ರಂಗಳೊಳು ಪುಲ್ಲಿಂಗಮುದ್ರೆಯು
ಸ್ತ್ರೀಲಿಂಗಮುದ್ರೆಯು ಮೆಱೆವುತಿರಲು
ರಂಗನುಂ ಬೊಮ್ಮನುಂ ದೇವೇಂದ್ರನುಂ ಸುದೈ
ವಂಗಳಾಡೊಡೆಯವರ ಚಕ್ರಾಬ್ಜವಜ್ರಗಳು
ಸಾಂಗ ಮುದ್ರೆಗಳು ಜೀವರ ದೇಹದೊಳಗುಂಟೆ
ಪೇಳು ಶಿವಲಿಂಗೇಶ್ವರಾ ॥ (ಪ. 24)

1. ಎಸ್. ಅನಂತರಂಗಾಚಾರ್ : ವಿರೂಪಾಕ್ಷ ಪಂಚಾಶಿಕೆ : ಶರಣ ಸಾಹಿತ್ಯ ಸಂ. 2. ಸಂಚಿಕೆ 8-9.
2. ಅದೇ

[illegible] ಡಂಬರಗಳಲ್ಲಿ ಕವಿಗೆ [illegible] ಕಂಡುಬರುವಂತೆ [illegible] ಪದ, [illegible] ಪದ, [illegible] ಪದ, [illegible] ಕವಿಗೆ ಸಂಸ್ಕೃತದ [illegible]

ಷಡಕ್ಷರಿ ಹಾಗೂ ಇಮ್ಮಡಿ ಮುರಿಗಾ ಗುರುಸಿದ್ಧರಲ್ಲಿ ಸಮಾನ ಗುಣಗಳಿವೆ. ಇಬ್ಬರೂ ಪರಮ ವಿರಕ್ತ ಗುರುಗಳು. ಸಮಕಾಲೀನರು ಒಂದೇ ವಶಂಕ್ಕೆ ಸೇರಿದವರು. ವೀರಶೈವ ಸಮಾಜದ ಪ್ರಾಣದೇವತೆಗಳಾಗಿದ್ದವರು. ಪರಸ್ಪರ ಅರಿತವರು. ಉಭಯ ಬಾಷಾ ವಿದ್ವಾಂಸರು. ಅಪ್ರತಿಮ ಪ್ರತಿಭಾ ಸಂಪನ್ನರು. ಚಿಕ್ಕದೇವರಾಜ ಯುಗದ ವೀರಶೈವ ಸಾಹಿತ್ಯದ ತಲೆಮಣಿಗಳು. ಷಡಕ್ಷರಿಯ ಬಗೆಗೆ ಇಮ್ಮಡಿ ಮುರಗಾ ಗುರುಸಿದ್ಧನಿಗೆ ಅಪಾರ ಗೌರವಾದರಗಳಿದ್ದುವು. ಷಡಕ್ಷರಿ 'ಕವಿಕರ್ಣರಸಾಯನ'ವೆಂಬ ಸಂಸ್ಕೃತ ಮಹಾಕಾವ್ಯವನ್ನು ಬರೆದಂತೆ ಇವನೂ 'ಪ್ರಭುಲೀಲಾ' ಎಂಬ ಮಹಾಕಾವ್ಯ ಬರೆದಿರುವೆನು. ಷಡಕ್ಷರಿ ಷಟ್‌ಸ್ಥಲ ಜ್ಞಾನಿಯಾಗಿದ್ದಂತೆ ಈತನೂ ಆಗಿದ್ದನು. ಷಡಕ್ಷರಿಯ ತುಂಬುಪ್ರಭಾವಮುದ್ರೆಗೆ ಈತ ಒಳಗಾಗಿದ್ದನೆಂದರೆ ತಪ್ಪಾಗಲಾರದು. ಷಡಕ್ಷರಿ ಲಿಂಗೈಕ್ಯನಾದಾಗ ಅತೀವ ದುಃಖದಿಂದ ಸಂತಪ್ತನಾಗಿ ಈತ ಬಗೆಗದಡಿ ಚರಮಗೀತೆಯೊಂದನ್ನು ರಚಿಸಿರುವನು. ಆ ಮೂಲಕ ತನ್ನ ಭಾಷ್ಪಾಂಜಲಿಯನ್ನು ದುಃಖದಿಂದ ನಾಂದ ಮನದಿಂದ ಅರ್ಪಿಸಿ ತನ್ನ ಪ್ರೀತ್ಯಾದರಗಳನ್ನು ಪ್ರಕಟಪಡಿಸಿರುವನು :

ಭಳಿರೆ ಭಲರೆ ನಿಮಗೆಣೆಯಾವನೀ ಲೋಕ
ದೊಳು ಮಹಾಗುರು ಷಡಕ್ಷರಿದೇವ ದೇವಾ ॥ ಪಲ್ಲವಿ ॥

ಸುವಿವೇಕಶಾಲಿ ಸುಧೃತ ಚಂದ್ರಮೌಲಿ ಸ
ತ್ಕವಿ ಚಕ್ರವರ್ತಿ ಸನ್ನುತ ಶುಭಕೀರ್ತಿ
ಪ್ರವಿಮಲಕಾಯ ಪ್ರಚುರಸಾಮಗೇಯ ನಿ
ರ್ಭವ ಭಾವಚಾರಿಯತುಳ ಸುಖಕಾರಿ ॥ ೧ ॥

ನಿನ್ನ ಕಣ್ಗೊನೆಯಾಲಿಗಡಲೊಳುದಯಿಸಿದಾ
ಚುನ್ನೆ ಮೊಲಕುಮಿ ಲೋಕವನು ಕಾಯ್ದು ಹಳೊ
ಚಿನ್ನಬಸಿರನರಸಿಯನೇಳಿಸುವ ನಿನ್ನ
ನನ್ನಿವಾತಿನೊಳೊಪ್ಪುತಿಹರೀ ಸಕಲರು ॥ ೨ ॥

ವಿನಯ ಪಾಣಿನಿ ಸೋಮ ಭೀಮ ಶಂಕರನಾಮ
ವೆನು ತಳೆದವನಿಗೆಯಿತಂದು ಸಾದರಜೆ
ಘನ ಬಸವೇಶಪುರಾಣವನೊರೆದ ಸ
ಪನುಪಮ ಶಿವಲಿಂಗದೊಳು ಬೆರೆದನಘಾ ॥ ೩ ॥

ಮೇಲಿನ ಹಾಡಿನಲ್ಲಿ ಕವಿಯ ಪ್ರಾಂಜಲ ಭಕ್ತಿಯು ಪಡಿಮೂಡಿದೆ. ಷಡಕ್ಷರಿಯನ್ನು ಮಹಾಗುರು, ಸುವಿವೇಕಶಾಲಿ, ಸತ್ಕವಿ ಚಕ್ರವರ್ತಿ, ಶುಭಕೀರ್ತಿ, ನಿರ್ಭವ — ಎಂದೂ ಪಾಣಿನಿ, ಸೋಮ [illegible] ಕಣ್ಣೀರ್ಗರೆಯುತ್ತಾ ಭಕ್ತಿ ತಲ್ಲೀನನಾಗಿ ಅಲಘು ಕಾಣಿಕೆಯಾಗಿ ತನ್ನ ಎದೆಯಾಳದಿಂದ ಮೂಡಿ ಬಂದ 'ಚರಮಗೀತೆ'ಯನ್ನು ಹಾಡಿರುವನು.

ಇಮ್ಮಡಿ ಮುರಿಗಾ ಗುರುಸಿದ್ಧನು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಷಡಕ್ಷರಿಯಾದ ಮೇಲೆ ಸ್ಮರಣೀಯ ವೀರಶೈವ ಕವಿಯಾಗಿರುವನು. ಈತ ಪ್ರಕಾಂಡ ಪಂಡಿತ. 'ಪ್ರಭುಲೀಲಾ' ಸಂಸ್ಕೃತ ಮಹಾಕಾವ್ಯ ಹಾಗೂ ' ಹಾಲಾಸ್ಯ ಮಹಾತ್ಮೆ ' ಕನ್ನಡ ಚಂಪೂ ಕೃತಿಯು ಇವನ ಅಪ್ರತಿಮ ಪ್ರತಿಭಾ ಸಂಪತ್ತಿಗೆ, ವೈದುಷ್ಯಕ್ಕೆ ನಿದರ್ಶನಗಳು. ಇವನ ಉಳಿದ ಕೃತಿಗಳು ವೀರಶೈವ ಧರ್ಮದ ತಾತ್ವಿಕ ಸಿದ್ಧಾಂತದ ಬಗೆಗಿನ ಆಳವಾದ ಇವನ ತಿಳುವಳಿಕೆಯನ್ನು ಶ್ರುತಪಡಿಸುತ್ತವೆ. ' ಷಟ್‌ಸ್ಥಲ ಜ್ಞಾನಿ 'ಯಾಗಿದ್ದ ಈತ ತನ್ನ ತಾತ್ವಿಕ ಜ್ಞಾನವನ್ನೆಲ್ಲಾ ತನ್ನ ಲಘು ಕೃತಿಗಳಲ್ಲ ಧಾರೆಯೆರೆದಿರುವನು. ನಮ್ಮಲ್ಲಿ ಧರ್ಮಗಳಿಗೆ ಸಂಬಂಧಿಸಿದ ತಾತ್ವಿಕ ಸಾಹಿತ್ಯ ಹೇರಳವಾಗಿದೆ. ಆದರೆ ಎಷ್ಟು ಮಂದಿ ತತ್ವಗಳು ನಮ್ಮ ಮನಂಬುಗುವಂತೆ ಹೇಳಿರುವರು ? ಈ ಪ್ರಶ್ನೆಗೆ ಬೆರಳೆಣಿಕೆಯ ಮಂದಿ ನಿದರ್ಶನಕ್ಕೆ ಸಿಗಬಹುದು. ಇಮ್ಮಡಿ ಮುರಿಗಾ ಗುರುಸಿದ್ಧ ಈ ಬೆರಳೆಣಿಕೆಯ ಕವಿಗಳಲ್ಲಿ ಮುಖ್ಯನೆಂಬುದು ಅತಿಶಯೋಕ್ತಿಯ ಮಾತಲ್ಲ.

ಹೆಸರು, ಕಾಲ, ದೇಶ ತಿಳಿಯದ ಕವಿಯೋರ್ವನು ಇಮ್ಮಡಿ ಮುರಿಗಾ ಗುರುಸಿದ್ಧನ ಬಗೆಗೆ ತನ್ನ ಎದೆಯಾಳದ ಗೌರವವನ್ನು ನುಡಿಕಾಣಿಕೆಯಾಗಿ ಹೀಗೆ ಅರ್ಪಿಸಿರುವನು :

ಬಾರೆನ್ನಯ್ಯನೆ ಭಾಗ್ಯನಿಧಿಯೆ ಬಾ ಭಕ್ತಚಿಂತಾಮಣಿ
ಬಾರೆನ್ನಾದಿ ಅನಾದಿ ಕರ್ತು ಸತತಂ ಬಾರೆನ್ನ ರಕ್ಷಿಪ್ಪನೇ
ಬಾರೆನ್ನ ಭವಪಟ್ಟೆ ಮೆಟ್ಟಿದಭವಾ ಬಾ ಮನ್ಮನೋಪ್ರಿಯನೇ
ಬಾರಾ ಷಡುಸ್ಥಲ ಚಕ್ರವರ್ತಿ ಮುರಿಗಂ ಲಿಂಗಂ
ಗುರುಸಿದ್ಧನೇ ॥ ೧ ॥

ಬಾ ರಾಜೇಂದ್ರ ಕಿರೀಟ ಮದನಾ ಬಾ ಗರ್ವವಿಚ್ಛೇದನಾ
ಬಾರಾ ಬಾ ಗಜದೈತ್ಯಚರ್ಮವಸನಾ ಬಾ ಅಂಧಕ ಸಂಹಾರಾ
ಬಾರಾ ಬಾ ಫಣಿರಾಜಕರ್ನಕಟಿಕಾ ಬಾ ಹರಿಮದನಾರಿ ಬಾ
ಬಾರಾ ಬಾ ಗುರುಸಿದ್ಧಲಿಂಗ ಮುರಿಗಂ ಲಿಂಗಂ
ಗುರುಸಿದ್ಧನೇ ॥ ೨ ॥

ಬಾರಾ ಬ್ರಹ್ಮಕಪಾಲ ವೇಣು ಡಮರಾ ಬಾ ಶೂಲವಾಂತಿಪ್ಪನೇ
ಬಾರಾ ತ್ರಿಪುರವ ಯೆಚ್ಚುಸುಟ್ಟು ಖಳರಂ ಬಾ ಗರ್ವ[ವ]ಗ್ಗಿಪನೇ
ಬಾರಾ ಬಾ ಸುರರಟ್ಟೆ ಮುಟ್ಟೆ ಸುಡುವಾ ಬಾ ನಂಜುಂಡಿಪ್ಪನೇ
ಬಾರಾ ವ್ಯಾಘ್ರಜನುಟ್ಟೆ ದಿಟ್ಟೆ ಮುರಿಗಂ ಲಿಂಗಂ
ಗುರುಸಿದ್ಧನೇ ॥ ೩ ॥

ಬಾರಾ ಪಂಕಜ [illegible] ಬಾ [illegible]
ಬಾರಾ ಭಾಳ [illegible] ಬಾ [illegible] ದಂತಿಪ್ಪನೇ

ಬಾರಾರ್ಕಾಗ್ನಿ ಶಸಿಲೋಚನಂಗಳಿಂದಾ ಶೋಭಿಸುತಿಪ್ಪನೇ
ಬಾರರ್ಧಾಂಗದಿ ಪೆಣ್ಣನಾಂತ ಮುರಿಗಂ ಲಿಂಗಂ
ಗುರುಸಿದ್ಧನೇ ॥ ೪ ॥

ಬಾರಾ ಚನ್ನನೊಳಂಬಲಿಂಗೆ ಮನಸಂ ನೀ ಮಾಡಿಕೊಂಡುಂಡನೇ
ಬಾರಾ ಬಾಲೆಯ ಬೇಡಲೀಯೆ ಶಿಶುವೇಷಂ ತಾಳ್ದು ಯಿದಾತನೇ
ಬಾರಾ ಬಾಳದೊಳರ್ಚಿಸಲ್ ಕೃಪೆಯಿಂದಂ ರೂಪದೋರಿಪ್ಪನೇ
ಬಾರಾ ಬಾಣನ ಬಾಗಿಲ ಕಾಯ್ದ ಮುರಿಗಂ ಲಿಂಗಂ
ಗುರುಸಿದ್ಧನೇ ॥ ೫ ॥

ಬಾರಾ ಪೆಣ್ಮೊಲೆಯಲ್ಲಿ ಪೂಜೆಗೊಳಲು ಕೈಯೆತ್ತಿ ಪೊನ್ನಿತ್ತನೇ
ಬಾರಾ ಪಿಕ್ಕೆಯ ಲಿಂಗವೆಂದು ಪೂಜೆಗೊಳಲು ಗೊಲ್ಲಾಳ
ಗೊಲಿದಾತನೇ
ಬಾರಾ ಕಟ್ಟಿಗೆ ಬಿಟ್ಟಿಗೈದು ಪಸಿದಂ ಮುಂ ದೋಸೆ ಮೆದ್ದಾತನೇ
ಬಾರಾ ಕಲ್ಲಿನೊಳಿಟ್ಟ ಪೆಟ್ಟಿಗೊಲಿದಂ ಲಿಂಗಂ
ಗುರುಸಿದ್ಧನೇ ॥ ೬ ॥

ಕಂದನಪ್ಪನ ಒಪ್ಪವಿಟ್ಟು ಕರೆಯಲ್ ಕಾಣುತ್ತಲಾ ಮೋಹದಿಂ
ಬಂದ ಪುತ್ರನೆ ಪ್ರೀತಿಯಿಂದ ಬಿಗಿದಂ ಸಂತೈಸುವಂತೆನ್ನಯ
ಚಂದಂಗೂಡಿದ ವಾಕ್ಯ ಕೇಳ್ದು ದಯದಿಂ ಬಂದೀಗ ರಕ್ಷಿಪ್ಪುದೈ
ತಂದೆ ಗುರುನಾಥ ನಿಮ್ಮ ಕೃಪೆಯಂ ಲಿಂಗಂ ಗುರುಸಿದ್ಧನೇ ॥೭॥

ದೇವಾ ಎನ್ನಯ ಬಿನ್ನಹಂಗಳೊಲವಿಂ ನೀ ಕೇಳಿತೈತಂದಡಂ
ಈವೆನೆ ಎನ್ನಯ ದೇಹ ವರ್ತಮಾನಮುಂ ನೀ ಸಂತಸಂಗೊಳ್ಳ
ಪ್ರೊಲ್
ಸೇವೆಯಂ ಮನಮುಟ್ಟಿ ಮಾಳ್ಪೆನೆನಗಂ ನೀ ಮೆಚ್ಚನೀವಂದದಿ
ದೇವ ಷಡುಸ್ಥಲ ಚಕ್ರವರ್ತಿ ಮುರಿಗಂ ಲಿಂಗಂ
ಗುರುಸಿದ್ಧನೇ ॥ ೮ ॥++

ಇಮ್ಮಡಿ ಮುರಿಗಾ ಗುರುಸಿದ್ಧನನ್ನು ಕುರಿತ ಈ ಸ್ತವನವು ಅಜ್ಞಾತ ಕವಿಯೋರ್ವನ ಭಕ್ತಿ ಕುಸುಮಾಂಜಲಿ. ಈ ಕವಿ ಇಮ್ಮಡಿ ಮುರಿಗಾ ಗುರುಸಿದ್ಧನನ್ನು ಶಿವನಿಗೆ ಅಭೇದವಾಗಿ ಭಾವಿಸಿ ಭಕ್ತಿಕಂಪಿತನಾಗಿ ಸ್ತುತಿಸಿರುವನು. ಶಿವನು ಭಕ್ತರೊಡನಾಡಿದ ಲೀಲೆಗಳನ್ನು ಉಲ್ಲೇಖಿಸುತ್ತಾ ಆ ಲೀಲೆಗಳನ್ನು ನಟಿಸಿ ತೋರಿದ ಶಿವನೇ ಮುರಿಗಾ ದೇಶಿಕನೆಂಬ ಅಭೇದ ಭಾವದಿಂದ ಸ್ತುತಿಸುತ್ತಾ "ಕಂದನು ಪ್ರೀತಿಯಿಂದ ಕರೆಯಲು ಹೇಗೆ ತಂದೆಯಾದವನು ಬಂದು ಮೋಹದ ತನ್ನ ಕಂದನನ್ನು ಬಿಗಿಯಾಗಿ ಅಪ್ಪುವನೋ ಮಗನನ್ನು ಸಂತೈಸುವನೋ ಹಾಗೆಯೇ ತಂದೆಯೇ, ಗುರುನಾಥನೇ ನನ್ನ ಚಂದಂಗೂಡಿದ ವಾಕ್ಯಗಳನ್ನು ಕೇಳಿ ದಯೆಯಿಂದ ಬಂದು ನನ್ನನ್ನು ರಕ್ಷಿಸುವುದು" ಎಂದು ಪ್ರಾರ್ಥಿಸಿರುವನು. ಈ ಭಕ್ತ ಕವಿಯ ಕೋರಿಕೆಗೆ ಗುರುವು ಓಗೊಟ್ಟಲ್ಲಿ ತನ್ನನ್ನೇ ಅವನಿಗೆ ಅರ್ಪಿಸುವಷ್ಟು ನಿಷ್ಠೆ ಗಟ್ಟಿಯಾದುದು. ಈ ಸಮರ್ಪಣ ಭಾವ ನಿಜಕ್ಕೂ ಮೆಚ್ಚುವಂತಹದು. ಈ ಅಜ್ಞಾತ ಕವಿಯು ಈ ಬಗೆಯಲ್ಲಿ ತನ್ನ ಮನ ಬಿಚ್ಚಿ ತುಂಬಿ ಬಂದ ಭಕ್ತಿಭಾವದಿಂದ ತಲ್ಲೀನನಾಗಿ 'ಗುರುಸ್ತವನ'ವನ್ನು ಹಾಡಿರಬೇಕಾದರೆ ಇಮ್ಮಡಿ ಮುರಿಗಾ ದೇಶಿಕೇಂದ್ರನ ವ್ಯಕ್ತಿತ್ವ ನಿಜಕ್ಕೂ ಭವ್ಯವಾಗಿರಬೇಕು; ಮೇರುಸದೃಶವಾಗಿರಬೇಕು.

—o—

ಸರ್ವಸಂಗ ಪರಿತ್ಯಾಗವಮಾಡಿದ ಶಿವಶರಣನ ಲೋಕದ ಸಂಸಾರಿಗಳೆಂತು ಮೆಚ್ಚುವರಯ್ಯ ? ಊರೊಳಗಿದ್ದರೆ ಉಪಾಧಿಕನೆಂಬರು, ಅಡವಿಯೊಳಗಿದ್ದರೆ ಮೃಗನೆಂಬರು, ಹೊನ್ನ ಬಿಟ್ಟರೆ ದರಿದ್ರನೆಂಬರು, ಹೆಣ್ಣ ಬಿಟ್ಟರೆ ನಪುಂಸಕನೆಂಬರು, ಪುಣ್ಯವ ಬಿಟ್ಟರೆ ಪೂರ್ವಕರ್ಮಿ ಎಂಬರು, ಮಾತನಾಡದಿದ್ದರೆ ಮೂಗನೆಂಬರು, ಮಾತನಾಡಿದರೆ ಜ್ಞಾನಿಗೇಕಯ್ಯ ಮಾತೆಂಬರು, ನಿಜವನ್ನಾಡಿದರೆ ನಿಷ್ಠುರಿ ಎಂಬರು, ಸಮತೆಯ ನುಡಿದರೆ ಅಂಜುವನೆಂಬರು. ಇದು ಕಾರಣ ಕೂಡಲ ಚೆನ್ನಸಂಗಯ್ಯ ನಿಮ್ಮ ಶರಣ ಲೋಕದಿಚ್ಛೆಯ ನುಡಿಯ, ಲೋಕದಿಚ್ಛೆಯ ನಡೆಯ.

— ಚೆನ್ನಬಸವಣ್ಣ.

ಮಹಾಲಿಂಗೇಂದ್ರ ವಿಜಯದಲ್ಲಿ ಶ್ರೀ ಮುರುಘರಾಜೇಂದ್ರರು

ಅಲ್ಲಮಾಪ್ರಭುವೆ ಪೂರ್ವತರ ವೇಷಂಬೆತ್ತು
ಎಲ್ಲ ಲೋಕಂಗಳೊಳ್ ಸಂಚರಿಸಲೈದಿದನೊ,
ಉಲ್ಲಸತ್ ಕಾಲರುದ್ರಂ ಭೈರವಾಕೃತಿಯೊಳಿಲ್ಲಿಗೈತಂದನೆನಲು
ಕ್ಷುಲ್ಲತರಮಾಯಾಮಯಾಳಿವೈದ್ಯಂ, ಸಮು
ತ್ಫುಲ್ಲರಕ್ತಾಂಭೋಜಲೋಚನಯುಗಂ ತೋರ್ದ
ನಲ್ಲಿಯ ಕವೀಃನಿಕರಂ ನುತಿಸುತಿರೆ ಮಹಾಮಹಿಮನಾನಂದದಿಂದಂ॥

ಅವನೀತಲಂ ಪಾವನಂಗೈವ ಕಾರಣದಿ
ನವತರಿಸಿದ ಭವನಾಕಾರ ಸಾಕಾರನಂ
ಭುವನೋನ್ನತಂ ಮಹಾಮಹಿಮಾವನೀಧ್ರದಂತಿರ್ದ ಸಾಕ್ಷಾತ್ ಭದ್ರನಂ
ಪ್ರವಿಮಲಾಂತಃಕರಣನಂ ಕೃಪಾವರಣನಂ
ಭವಮಹಾಂಬುಧಿತರಣನಂ ಸದಾಶರಣನಂ
ಭವಿಕಪರಮಾನಂದರುಂದ್ರನಂ ನಿಖಿಲಗುರುಮುರಿಗೇಂದ್ರನಂ ಕಂಡನು ॥

ಚಾರುಹಸ್ತಾಗ್ರವೀಣಾರಾವಕಂ ನುತಿಪ
ಸಾರ ಪಂಚಾಕ್ಷರೀ ಮಂತ್ರನಾದಕ್ಕೆ ಸರಿ
ಯಾರೆ ನೋಡುವೆನೆನಲ್ ತದ್ವಯಧ್ವನಿಯೊಡನಮಾನಂದಿಸುತಿಪ್ಪನಂ
ಮಾರಹರನಂ ದುರಿತಭೂರುಹಕುಠಾರನನ
ಪಾರ ಜಗದಾರಾಧ್ಯನಂ ನಿಖಿಲ ಭಕ್ತೇಷ್ಟ
ಪೂರನಂ ವಿನುತಮಂದಾರನಂ ಮುರಿಗೇಂದ್ರರಾಜೇಂದ್ರನಂ ಕಂಡನು ॥

ಪರತರಶ್ರೀ ಮಹಾಮುರಿಗೇಂದ್ರರಾಜೇಂದ್ರ
ಗುರುಜಗದ್ಗುರು ಷಟ್ಸ್ಥಲಾದಿ ಪಟ್ಟಾಧ್ಯಕ್ಷ
ವರಚೆನ್ನಬಸವಸಾಮ್ರಾಜ್ಯೋದ್ಧಾರ ಸಕಲಭಕ್ತಾಭೀಷ್ಟಫಲದಾಯಕ
ಸ್ಫುರದಲ್ಲಮಪ್ರಭುವರಾಂಗ ಮಾಯಾಮೇಘ
ಮರುದಂಗಜಮದಮತ್ತೇಭ ಕಂಠೀರವೋ
ತ್ತರಪೂರ್ಣ ಮಹಿಮ ಜಂಗಮರೂಪನೆಂಬ ಬಿರುದಾವಳೀ ಗದ್ಯಂಗಳಂ ॥

ಮಹಾದೇವ ಕವಿ

17 ನೇ ಅಧ್ಯಾಯ : 8, 59, 60, 89 — ಪದ್ಯಗಳು.



ನಿಧಿ ಸಂಗ್ರಹಣಾ ಸಮಾರಂಭದಲ್ಲಿ ಪ್ರಪ್ರಥಮವಾಗಿ ಪೂಜ್ಯ ಸನ್ನಿಧಿಯವರಿಗೆ
ಕಪಾಡಿಗರ ಪಟ್ಟಿಯ ಗ್ರಾಮಸ್ಥರ ಪರವಾಗಿ ಪಿ. ಸಂಗಪ್ಪನವರಿಂದ ನಿಧಿ ಸಮರ್ಪಣೆ



ನಿಧಿ ಸಂಗ್ರಹಣಾ ಸಮಿತಿಯ ಪ್ರಪ್ರಥಮ ಸಮಾರಂಭದಲ್ಲಿ ಪೂಜ್ಯ ಜಗದ್ಗುರುಗಳವರಿಂದ
ಮಾನ್ಯ ನಿಜಲಿಂಗಪ್ಪನವರಿಗೆ ಸನ್ಮಾನ



ನಿಧಿ ಸಂಗ್ರಹಣಾ ಸಮಿತಿಯ ಮೊದಲನೆಯ ಸಮಾರಂಭದ ಸಮಯದಲ್ಲಿ—ಪೂಜ್ಯ ಜಯದೇವ ಜಗದ್ಗುರುಗಳವರ
ಭಾವ ಚಿತ್ರದೊಂದಿಗೆ ಮಾನ್ಯ ಶ್ರೀ ಸಿದ್ದವನಹಳ್ಳಿ ನಿಜಲಿಂಗಪ್ಪನವರು



ಶ್ರೀ ಶಿವಯೋಗಾಶ್ರಮ, ದಾವಣಗೆರೆ



ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ವಿದ್ಯಾರ್ಥಿ ನಿಲಯ, ದಾವಣಗೆರೆ



ರಾಕ್ಷಸನಾಮ ಸಂವತ್ಸರದ ಯುಗಾದಿ ಹಬ್ಬದಂದು ಶ್ರೀ ಜಯದೇವ ಜಗದ್ಗುರುಗಳವರ
ಶತಮಾನೋತ್ಸವ ನಿಧಿ ಸಂಗ್ರಹಣಾ ಸಮಿತಿಯ ಪ್ರಪ್ರಥಮ ನಿಧಿ ಸಂಗ್ರಹಣಾ ಸಮಾರಂಭ
ಕಪಾಡಿಗರ ಪಟ್ಟಿ (ಜಯದೇವ ಪುರ)



ನಿಧಿ ಸಂಗ್ರಹಣಾ ಸಮಾರಂಭದಲ್ಲಿ ಸನ್ಮಾನ್ಯ ನಿಜಲಿಂಗಪ್ಪನವರಿಂದ ಭಾಷಣ

ಶ್ರೀ ಬೃಹನ್ಮಠದಲ್ಲಿ ದೊರೆತ ಕೆಲವು ಅಪ್ರಕಟಿತ ಶಾಸನಗಳು

– **ಲಕ್ಷ್ಮಣ್ ತೆಲಗಾವಿ,** ಎಂ.ಎ.,
ಸಂಶೋಧಕ-ಇತಿಹಾಸ ವಿಭಾಗ,
ಮಾನಸಗಂಗೋತ್ರಿ,
ಮೈಸೂರು-6.

೧

ಪ್ರವೇಶ

ಗತಕಾಲದ ಇತಿಹಾಸವನ್ನರಿತುಕೊಳ್ಳುವಲ್ಲಿ ಶಾಸನಗಳು ತುಂಬಾ ಉಪಯುಕ್ತಕಾರಿಯಾಗಿವೆ. ಇಂದಿನ ಸಾಮಾಜಿಕ ಆರ್ಥಿಕ, ಧಾರ್ಮಿಕ ಹಾಗೂ ರಾಜಕೀಯ ವಿಚಾರಗಳನ್ನು ಅರಹುವಲ್ಲಿ ಶಾಸನಗಳು ನೇರ ಮತ್ತು ಖಚಿತ ಮಾಹಿತಿಯನ್ನು ನೀಡಬಲ್ಲಂಥವು ಗಳಾಗಿವೆ. ಇತಿಹಾಸ ರಚನೆಯಲ್ಲಿ ಬಳಸಿಕೊಳ್ಳುವ ಸಾಧನಗಗಲ್ಲಿ ಶಾಸನಾಧಾರಗಳು ಪ್ರಧಾನವಾದವು; ಮೂಲಾಧಾರ (Primary Source) ಗಳೆಂದು ಕರೆಯಲ್ಪಟ್ಟವು

ಸಾಮಾನ್ಯವಾಗಿ ಬಂಡೆಶಾಸನಗಳು (Rock Inscriptions), ಶಿಲಾ ಶಾಸನಗಳು (Stone Inscriptions) ಮತ್ತು ತಾಮ್ರಪಟ ಶಾಸನಗಳು (Copper plate Inscriptions) ಎಲ್ಲರಿಗೂ ಚಿರಪರಿಚಿತವಾಗಿರುತ್ತವೆ. ನಿರೂಪ ಅಥವಾ ಸನ್ನದುಗಳನ್ನು ಎಲ್ಲರೂ ನೋಡಿರುತ್ತಾರೆ. ಇವುಗಳೇ ಅಲ್ಲದೆ ಕೆಲವು ವಸ್ತುಗಳ ಮೇಲೂ ಶಾಸನ ಕೊರೆದಿರಲಾಗಿರುತ್ತದೆಂದು ಅವುಗಳ ಪರಿಚಯವಿರುವವರಿಗೆ ಗೊತ್ತಿರುತ್ತದೆ. ಇವುಗಳಲ್ಲಿ ದಾನ ವಾಗಿ, ಧರ್ಮವಾಗಿ ಕೊಡಲ್ಪಟ್ಟ ವಸ್ತುಗಳೇ ಹೇರಳವಾಗಿರುತ್ತವೆ. ಅಂತಹ ವಸ್ತುಗಳು ಆಯಾ ಪ್ರದೇಶವನ್ನಾಳುವ ಅರಸನಿಂದಲೋ ಅಧಿಕಾರಿಯಿಂದಲೋ, ಇಲ್ಲವೇ ಪ್ರೀತ್ಯಾದರಗಳಿಂದ ಕೂಡಿದ ಯಾವನೇ ಒಬ್ಬ ಸಾಮಾನ್ಯ ವ್ಯಕ್ತಿಯಿಂದಲೋ ನೀಡಲ್ಪಟ್ಟಿರ ಬಹುದು. ಅವರು ನೀಡಿದಂತಹ ವಸ್ತುವಾಗಲಿ, ಅವುಗಳ ಮೇಲೆ ಬರೆದಿರುವಂತಹ ಸಂಗತಿಗಳಾಗಲಿ ಇತಿಹಾಸ ರಚನೆಯ ದೃಷ್ಟಿಯಿಂದ ಅತ್ಯಮೂಲ್ಯ ಸಾಧನವೆನಿಸುತ್ತವೆ. ಗತಕಾಲದ ಯಾವುದೇ ಸಂದರ್ಭವನ್ನು ಮನಗಾಣಿಸುವಲ್ಲಿ ಇವು ತಮ್ಮ ಪಾತ್ರ ನಿರ್ವಹಿಸುತ್ತವೆ. ಇಂತಹವುಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸುವ ಮತ್ತು ಸೂಕ್ತವಾಗಿ ಬಳಸಿಕೊಳ್ಳುವ ಮನೋಧರ್ಮ ಮತ್ತು ಸಾಮರ್ಥ್ಯಗಳು ಇತಿಹಾಸಕಾರನಲ್ಲಿ ಇದ್ದರೆ ಮಾತ್ರ ಇವುಗಳ ಉಪಯುಕ್ತತೆಯನ್ನು ಸಮಂಜಸವಾಗಿ ಪುಷ್ಟೀಕರಿಸಲು ಸಾಧ್ಯ ವಾಗುತ್ತದೆ.

ಕೇವಲ ಬಂಡೆಶಾಸನ, ಶಿಲಾಶಾಸನ, ತಾಮ್ರಪಟಶಾಸನ, ನಿರೂಪಗಳಲ್ಲದೆ ಹಲವಾರು ವಸ್ತುಗಳ ಮೇಲೆಯೂ ಶಾಸನ ಗಳಿರುವುದು, ಬರಹಗಳಿರುವುದು ಕಂಡು ಬರುತ್ತದೆ. ಹಿತ್ತಾಳೆಪಟ ಶಾಸನ, ಗಂಟೆಶಾಸನ, ತಟ್ಟೆಶಾಸನ, ನಗಾರಿಶಾಸನ, ಕೊಳಗದ ಶಾಸನ, ಡಮರುಗಶಾಸನ–ಇಂತಹ ಕೆಲವು ಶಾಸನಗಳನ್ನು ಇಲ್ಲಿ ಉದಾಹರಿಸಬಹುದು. ಇವುಗಳೇ ಅಲ್ಲವೇ ಕತ್ತಿ–ಕಠಾರಿ, ಫಿರಂಗಿ, ಕವಚ ಇವೇ ಮೊದಲಾದ ವಸ್ತುಗಳ ಮೇಲಿನ ಬರಹಗಳನ್ನೂ ಉಲ್ಲೇಖಿಸಬಹುದು. ಒಂದಲ್ಲ ಒಂದು ದೃಷ್ಟಿಯಿಂದ ಇವುಗಳಿಂದ ಇತಿಹಾಸಕ್ಕೆ ಲಾಭವುಂಟು.

೨

ಶ್ರೀ ಬೃಹನ್ಮಠ

ಚಿತ್ರದುರ್ಗದ ಶ್ರೀ ಬೃಹನ್ಮಠ ಸಂಸ್ಥಾನವು ಇತಿಹಾಸ ಪ್ರಸಿದ್ಧವಾದದು. ಪ್ರಾಚೀನ ಮತ್ತು ಭವ್ಯ ಪರಂಪರೆಗಳನ್ನು ಈ ಮಠ ಹೊಂದಿದೆಯೆಂಬುದನ್ನು ಹಲವಾರು ಗ್ರಂಥಗಳು ಸಾರು ತ್ತವೆ. ಶ್ರೀ ಬೃಹನ್ಮಠದ ಪರಂಪರೆಯಲ್ಲಿ ಎಂಟನೆಯ ಪೀಠಾಧಿಕಾರಿ ಗಳಾಗಿ ಬಂದ ಶ್ರೀ ಮುರಿಗೇಂದ್ರರಾಜೇಂದ್ರರ (ಸು. ಕ್ರಿ.ಶ. 1640–1710) ಕಾಲದಲ್ಲಿ ಚಿತ್ರದುರ್ಗದಲ್ಲಿ ಒಂದು ಗುರುಥಾನಿ (ಮಠ) ಸ್ಥಾಪಿತವಾಯಿತು. ಶೂನ್ಯ ಸಿಂಹಾಸನ ಪರಂಪರೆಯಲ್ಲಿ ಮೊದಲ ಮಠ ಕಲ್ಯಾಣದಲ್ಲಿ ಸ್ಥಾಪಿತಗೊಂಡಿದ್ದು, ಅನಂತರ ಆ ಸಂಪ್ರದಾಯದ ಗುರುಪರಂಪರೆಯವರು ಭಕ್ತೋದ್ಧಾರಕ್ಕಾಗಿ ಸದಾ ಪ್ರವಾಸದಲ್ಲಿಯೇ ಇರುತ್ತಿದ್ದುದರಿಂದ ಒಂದು ಸ್ಥಿರ ಮಠ ಇರದೆ ಅವರು ನಿಂತಲ್ಲಿಯೇ ಮಠವೆಂದಾಗುತ್ತಿತ್ತು. ಆದರೆ ಮೊಟ್ಟಮೊದಲ ಬಾರಿಗೆ ಶ್ರೀ ಮುರಿಗೇಂದ್ರ ರಾಜೇಂದ್ರರ ಕಾಲಕ್ಕೆ ಒಂದು ಸ್ಥಿರಮಠ ಅಥವಾ ಮೂಲ ಮಠ ಚಿತ್ರದುರ್ಗದಲ್ಲಿ ಸ್ಥಾಪಿತಗೊಂಡಿತು. ಅಂದಿನಿಂದ ಇಂದಿನವರೆಗೂ ಈ ಮಠವೇ ಆ ಸಂಪ್ರದಾಯದ ಜಗದ್ಗುರುಗಳವರಿಗೆ ತಪೋಭೂಮಿಯಾಗಿರುವುದೆಂದರೆ ಉತ್ಪ್ರೇಕ್ಷೆ ಯೇನಲ್ಲ.

ಶ್ರೀ ಬೃಹನ್ಮಠದ ಸ್ಥಾಪನೆ ಮತ್ತು ಅದರ ಐತಿಹಾಸಿಕತೆ ಯನ್ನು ಕುರಿತು ಬರೆಯುವಲ್ಲಿ ಸಾಧನ-ಸಾಮಗ್ರಿಗಳು ಹೇರಳವಾಗಿ ದ್ದರೂ ಖಚಿತ ನಿರೂಪಣೆಯನ್ನು ನೀಡುವ ನೇರ ಸಾಕ್ಷ್ಯಾಧಾರಗಳು ಅಷ್ಟಾಗಿ ಇಲ್ಲವೆಂದು ಹೇಳಬಹುದು. ಮಠದಲ್ಲಿರುವ ಪಟ್ಟವಲ್ಲರಿ, ನಿರಂಜನ ವಂಶರತ್ನಾಕರ ಗ್ರಂಥಗಳು ಮಠದ ಪರಂಪರೆಯ ಬಗ್ಗೆ ಬೆಳಕು ಚೆಲ್ಲುತ್ತವೆ. ಈಚೆಗೆ ಪ್ರಕಟಗೊಂಡ (ಡಾ|| ಎಲ್. ಬಸವ ರಾಜು ಅವರು ಸಂಪಾದಿಸಿರುವ) 'ಮಹಾದೇವನ ಮಹಾಲಿಂಗೇಂದ್ರ

ವಿಜಯ'ವು ಈ ಮೇಲಿನ ಗ್ರಂಥಗಳಿಗಿಂತ ಪ್ರಾಚೀನವೂ, ಪ್ರಾಮಾಣಿ ಭೂತವೂ ಆದುದೆಂದು ತಿಳಿದು ಬರುತ್ತದೆ. ಇವೆಲ್ಲವೂ ಸಾಹಿತ್ಯ ಕೃತಿಗಳಾಗಿದ್ದು ಮಠದ ಇತಿಹಾಸವನ್ನು ತಮ್ಮದೇ ಆದ ಶೈಲಿ ಯಲ್ಲಿ, ವಿಚಾರಗಳಲ್ಲಿ ಹೇಳುತ್ತವೆ. (ಪ್ರಾಸಂಗಿಕವಾಗಿ ಅಂದು ಅಸ್ತಿತ್ವದಲ್ಲಿದ್ದ ಕೆಲವು ಪಾಳೆಯಪಟ್ಟುಗಳ ಬಗ್ಗೆಯೂ, ಪಾಳೆಯ ಗಾರರ ವ್ಯವಹಾರಗಳ ಬಗ್ಗೆಯೂ ಕೊಂಚ ಮಾಹಿತಿ ಒದಗಿಸಿ ಕೊಡುತ್ತವೆ). ಆದರೆ ಈ ಗ್ರಂಥಗಳಲ್ಲಿ ಮಠಕ್ಕೆ ಸಂಬಂಧಿಸಿದಂತೆ ಉಕ್ತಗೊಂಡಿರುವ ಅಂಶಗಳನ್ನು ಪುಷ್ಟೀಕರಿಸಲು ಇತರ ಸಾಧನಗಳ ಅವಶ್ಯಕತೆಯೂ ಇದೆಯೆಂಬುದನ್ನು ನಾವು ಮನಗಾಣುತ್ತೇವೆ. ಈ ದಿಶೆಯಲ್ಲಿ ಹೊಸ ಸಾಮಗ್ರಿಯನ್ನು ಸಂಗ್ರಹಿಸಲು ತಕ್ಕ ಪ್ರಯತ್ನ ನಡೆಯಬೇಕಾಗಿದ್ದು, ಅದಕ್ಕೆ ಪೂರಕವಾಗಿ ಮಠದಲ್ಲಿ ರಕ್ಷಿಸಿಡ ಲ್ಪಟ್ಟಿರುವ ಕೆಲವು ವಸ್ತುಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿದಾಗ ಮಠದ ಇತಿಹಾಸದ ದೃಷ್ಟಿಯಿಂದಲೂ ಮತ್ತು ಹಿರಿಮೆಯ ದೃಷ್ಟಿ ಯಿಂದಲೂ ಗಹನವೆನ್ನಬಹುದಾದ, ಗಮನಾರ್ಹವೆನ್ನಬಹುದಾದ ಕೆಲವು ಅಪ್ರಕಟಿತ ಶಾಸನಗಳು ಬೆಳಕಿಗೆ ಬಂದವು. ದೊರೆತ ಶಾಸನಗಳಲ್ಲಿ ಕೆಲವು ಉಪಯುಕ್ತವಾದುವುಗಳೆಂದು ಪರಿಗಣಿಸಲ್ಪಡು ವಂತಹವು; ಉಳಿದವು ಸಾಮಾನ್ಯ ಬರಹಗಳು. ಆದರೆ ಈ ಬರಹ ಗಳೂ ಮಠದ ಇತಿಹಾಸದ ಬಗ್ಗೆ ಮಾಹಿತಿ ನೀಡುತ್ತವೆ. ಮಠ ದಲ್ಲಿಟ್ಟಿರುವ ನೂರಾರು ಪ್ರಾಚೀನ ವಸ್ತುಗಳಲ್ಲಿ ಕೆಲವನ್ನು ಮಾತ್ರವೇ ಈವರೆಗೆ ಶೋಧಿಸಿ ಅವುಗಳ ಮೇಲಿನ ಬರಹಗಳನ್ನು ಅಭ್ಯಸಿಸಲು ಪ್ರಯತ್ನಪಡಲಾಗಿದೆ. ಸಮಯಾನುಸಾರ ಉಳಿದವುಗಳನ್ನೂ ಹೊರ ತರುವ ಪ್ರಯತ್ನ ಮಾಡಬೇಕಾಗಿದೆ.

೩

ಶಾಸನ ವಿಚಾರ

ಅಪ್ರಕಟಿತ ಶಾಸನ ಮತ್ತು ಬರಹಗಳನ್ನು ಶ್ರೀ ಬೃಹನ್ಮಠದಲ್ಲಿನ ಪ್ರಾಚೀನ ಗಂಟೆ, ನಗಾರಿ, ಕೊಳಗ, ಕಳಸ, ಡಮರುಗ ಇತ್ಯಾದಿ ವಸ್ತುಗಳಿಂದ ಸಂಗ್ರಹಿಸಲಾಗಿದೆ. ಕೇವಲ ಮುಖ್ಯವಾದವುಗಳನ್ನು ಇಲ್ಲಿ ಕೊಡಲಾಗಿದೆ. ಅವುಗಳ ಬರಹಗಳಲ್ಲಿನ ವಿಷಯ ಮತ್ತು ವಿವರಣೆ ಗಳನ್ನು ನಾವಿಲ್ಲಿ ಅರಿತುಕೊಳ್ಳಬಹುದು:

೧. ಗಂಟೆ ಶಾಸನಗಳು

(ಅ) **ಸ್ವಸ್ತಿಶ್ರೀ ವಿಜೆಯುದ್ಬಯು ಶಾಲ್ಲಿವಹನ ಶಖಾ ವರುಷ ೧೬೩೪ ನಂದನ ಸಂವತ್ಸರದ ಕಾರ್ತಿಕ ಬ ೮ ಸೋಮ ವಾರದಲೂ । ಮುರ್ರಿಗೆ ಸಿಧೆಶ್ವರ ದೆವರ್ರಿಗೆ ಕಾಮಗೆತ್ತಿ ಕಸ್ತುರ್ರಿ ನೆದಕೆರ್ರಿ ನಾಯುಕರ ಬರಮುಂಣ ನಾಯುಕರು ಮಾಡಿಸಿದ ಸೆವೆ ॥**

ಟಿಪ್ಪಣಿ : ಈ ಗಂಟೆ ಶಾಸನವು ಶ್ರೀ ಬೃಹನ್ಮಠದ ಇತಿಹಾಸ ವನ್ನು ತಿಳಿಸುವ ಬಹು ಮುಖ್ಯ ಆಧಾರವಾಗಿದೆ. ಈ ಗಂಟೆಯು 16×18 ಅಂಗುಲಗಳಷ್ಟು ದೊಡ್ಡದಾಗಿದ್ದು, ಗಂಟೆಯ ಮೇಲೆ ನಾಲ್ಕು ಸಾಲುಗಳಲ್ಲಿ ಶಾಸನವನ್ನು ಕೊರೆಯಲಾಗಿದೆ. ಚಿತ್ರದುರ್ಗದ ಪಾಳೆಯಗಾರರು ಮತ್ತು ಮಠದ ನಡುವೆ ಇದ್ದ ಸಂಬಂಧವನ್ನು ಸೂಚಿಸುವ ದ್ಯೋತಕವಾಗಿದೆ ಇದು. ಇತಿಹಾಸ ತಿಳಿಸುವಂತೆ, ಚಿತ್ರದುರ್ಗ ಸಂಸ್ಥಾನದ ಹನ್ನೆರಡನೆಯ ದೊರೆಯಾಗಿ ಆಡಳಿತ ನಡೆಸಿದವನು ಬಿಚ್ಚುಕತ್ತಿ ಭರಮಣ್ಣನಾಯಕ (ಕ್ರಿ. ಶ. 1689–1720); ಶೂರನಾದ ಅರಸ. ಇವನು ಚಿತ್ರದುರ್ಗದ ಸಿಂಹಾಸನಕ್ಕೆ ಬರುವ ಮುನ್ನ ಚಿತ್ರದುರ್ಗದ ಕೋಟೆಯಲ್ಲಿ 'ರಕ್ತ ಕ್ರಾಂತಿ' ಪ್ರಾರಂಭವಾಗಿತ್ತು. ದುರ್ಬಲರು ಮತ್ತು ಜಾಣರಲ್ಲದ ಅರಸರನ್ನು ಮೂಲೆಗೊತ್ತಿ ಮುದ್ದಣ್ಣನೆಂಬ ದಳವಾಯಿ ತಾನೇ ಸರ್ವಾಧಿ ಕಾರಿಯಾಗಲು ಪ್ರಯತ್ನಿಸುತ್ತಿದ್ದ. ಅವನಿಗೆ ಬೆಂಬಲವಾಗಿ ಅವನ ತಮ್ಮಂದಿರು ಹಿಂಸೆಯನ್ನು ಪ್ರಾರಂಭಿಸಿದ್ದರು. ಇಂತಹ ದುರಾಡಳಿತದ ದೆಸೆಯಿಂದಾಗಿ ಸಿಂಹಾಸನದ ನಿಜವಾದ ಹಕ್ಕುದಾರ ನಾದ ಕಸ್ತೂರಿ ರಂಗಪ್ಪನಾಯಕನ ಮಗ ಭರಮಣ್ಣನಾಯಕನು ತಾತ್ಕಾಲಿಕವಾಗಿ ಬಿಳಿಚೋಡು ಗ್ರಾಮದಲ್ಲಿ ತಲೆಮರೆಸಿಕೊಳ್ಳಬೇ ಕಾಯಿತು. ಇವನಿಗೆ ಮುರುಗೇಂದ್ರಯ್ಯ ಪರದೇಶಿಗಳು ಅಥವಾ ಶ್ರೀ ಮುರಿಗೇಂದ್ರ ರಾಜೇಂದ್ರರ ಭೇಟಿಯಾದದ್ದು ಅಲ್ಲಿಯೇ. (ಇವರ ನಿಜವಾದ ಹೆಸರು ಶಾಂತವೀರರೆಂದು; ಜಗದ್ಗುರು ಮುರುಗ ಶಾಂತ ವೀರಸ್ವಾಮಿಗಳೆಂತಲೂ ಇವರು ಪ್ರಖ್ಯಾತರಾಗಿದ್ದಾರೆ). ಸಂಚಾರ ನಿಮಿತ್ತ ಪ್ರಯಾಣ ಮಾಡುತ್ತಿದ್ದ ಶ್ರೀ ಮುರಿಗೇಂದ್ರ ರಾಜೇದ್ರರು ಬಿಳಿಚೋಡು ಗ್ರಾಮದ ಕಡೆಯಿಂದ ಹಾಯ್ದು ಹೋಗುವಾಗ ಮರದ ಕೆಳಗೆ ಮಲಗಿ ನಿದ್ರೆ ಮಾಡುತ್ತಿದ್ದ ಭರಮನಾಯಕನ ತಲೆಯ ಮೇಲೆ ಹೆಡೆಬಿಚ್ಚಿ ಆಡುತ್ತಿದ್ದ ನಾಗಸರ್ಪವನ್ನು ಕಂಡರೆಂತಲೂ, ಆಶ್ಚರ್ಯ ಪಟ್ಟು ಅವನನ್ನು ಎಬ್ಬಿಸಿ ಅವನ ಪೂರ್ವೋತ್ತರಗಳನ್ನು ವಿಚಾರಿಸಿ ಕೊಂಡು 'ಮುಂದೆ ಚಿತ್ರದುರ್ಗದ ಅರಸನಾಗುವಿ'ಯೆಂದು ಹೇಳಿ ಆಶೀರ್ವದಿಸಿದರೆಂತಲೂ ಗ್ರಂಥಗಳಿಂದ ತಿಳಿದುಬರುತ್ತದೆ. ಈ ಕಥೆ ಯನ್ನು ಕೃತಿಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಹೇಳಲಾಗಿದೆ. ಕೆಲ ವೊಮ್ಮೆ ಇತಿಹಾಸ ದಾಖಲೆಗಳಿಗೂ ಈ ಮೇಲ್ಕಂಡ ಸಂಗತಿಯನ್ನೊಳ ಗೊಂಡ ಸಾಹಿತ್ಯ ಗ್ರಂಥಗಳಿಗೂ ಒಮ್ಮತವಿಲ್ಲದಿರುವುದು ಗಮನಕ್ಕೆ ಬರುತ್ತದೆ. ಏನೇ ಆದರೂ ಕೆಲವು ತಿಂಗಳುಗಳ ನಂತರ ಚಿತ್ರದುರ್ಗದ ಕೋಟೆಯಲ್ಲಿ ನಡೆಯುತ್ತಿದ್ದ ದುರಾಡಳಿತ ಕೊನೆ ಗೊಂಡು ಮುದ್ದಣ್ಣ ಮತ್ತು ಅವನ ತಮ್ಮಂದಿರೆಲ್ಲರೂ ಕೊಲ್ಲಲ್ಪಟ್ಟರು. ನಿಷ್ಠಾವಂತ ದಳವಾಯಿ ಭರಮಣ್ಣನಾಯಕ ಮತ್ತು ಇತರರು ಬಿಳಿ ಚೋಡಿಗೆ ಬಂದು ಬಿಚ್ಚುಕತ್ತಿ ಭರಮಣ್ಣನಾಯಕನನ್ನು ರಾಜ ಮರ್ಯಾದೆಯೊಡನೆ ಕರೆದುಕೊಂಡು ಹೋಗಿ ಚಿತ್ರದುರ್ಗದ ಅರಸ ನನ್ನಾಗಿ ಪಟ್ಟ ಕಟ್ಟಿದರು.

ಶ್ರೀ ಮುರಿಗೇಂದ್ರ ರಾಜೇಂದ್ರರ ಆಶೀರ್ವಾದದಿಂದ ತಾನು ಅರಸನಾದೆನೆಂದು ಭಾವಿಸಿದ ಭರಮಣ್ಣನು ಅವರಿಗೆ ತನ್ನ ಗೌರವಾ ದರಗಳನ್ನು ಸೂಚಿಸಲು ಹಾಗೂ ಅವರ ಸೇವೆ ಮಾಡಲು ಕಾತರನಾ ಗಿದ್ದ. ಮುರಿಗೇಂದ್ರರು ಹತ್ತಾರು ವರುಷಗಳ ಕಾಲ ಮೈಸೂರು, ಡಿಲ್ಲಿ, ಹೈದರಾಬಾದ್ ಇವೇ ಮೊದಲಾದ ಸ್ಥಳಗಳಲ್ಲಿ ಸಂಚಾರ ಕೈ

080-882945
JAY

ಗೊಂಡು ಚಿತ್ರದುರ್ಗಕ್ಕೆ ಮರಳಿದಾಗ ಭರಮಣ್ಣನು ಕೃತಜ್ಞತಾ ಭಾವದಿಂದ ಗುರುಗಳನ್ನು ಆಹ್ವಾನಿಸಿ, ಸತ್ಕರಿಸಿ ಅವರ ಮೇಲಿನ ಪೂಜ್ಯಭಾವದಿಂದ ಬೆಟ್ಟದ ಮೇಲೆ ಶ್ರೀ ಸಂಪಿಗೆ ಸಿದ್ಧೇಶ್ವರ ದೇವಾಲಯದ ಪಕ್ಕದಲ್ಲಿ ಕುಸುರಿ ಕಲೆಯ ಕಲ್ಲಿನ 360 ಅಂಕಣಗಳ ವಿಸ್ತಾರವುಳ್ಳ ಒಂದು ಬೃಹತ್ ಮಠ(ಬೃಹನ್ಮಠ)ವನ್ನು ಕಟ್ಟಿಸಿಕೊಟ್ಟ. ಅವರ ಪೂಜಾ ಕಾರ್ಯಗಳಿಗೆ ವ್ಯವಸ್ಥೆ ಮಾಡಿದ. ಅನಂತರ ಬೆಟ್ಟದಿಂದ ಅನತಿ ದೂರದಲ್ಲಿ ಅವರಿಗಾಗಿ ಇನ್ನೊಂದು ಮಠವನ್ನು ನಿರ್ಮಿಸಿ ಕೊಟ್ಟ. ತನ್ನ ಏಳು ಮಂದಿ ಮಕ್ಕಳ ಪೈಕಿ ಒಬ್ಬನನ್ನು ಗುರುಗಳ ಸೇವೆಗೆ ನೇಮಿಸಿದ. ಅರಸು ಮನೆತನದವರಲ್ಲಿ ಕೆಲವರು ಗುರುಗಳಿಂದ ವೀರಶೈವ ಧರ್ಮ ದೀಕ್ಷೆಯನ್ನು ಕೈಗೊಂಡರು. ಒಟ್ಟಿನಲ್ಲಿ ತನ್ನ ಭಕ್ತ್ಯಾತಿಶಯವನ್ನು ಹೇಗೆ ಪ್ರದರ್ಶಿಸಬಹುದೋ ಹಾಗೆ ಮಾಡಿದ. ಚಿತ್ರದುರ್ಗದಲ್ಲಿ ಮಠ ಸ್ಥಾಪನೆಯಾದಂದಿನಿಂದ ಜಗದ್ಗುರುಗಳವರ ಮೂಲ ಪೀಠ ಇಲ್ಲಿಯೇ ನೆಲೆಗೊಂಡಂತಾಯಿತು. ಇದು ಶ್ರೀ ಬೃಹನ್ಮಠ ಮತ್ತು ಚಿತ್ರದುರ್ಗ ಪಾಳೆಯಗಾರರ ನಡುವಣ ಸಂಬಂಧಕ್ಕೆ ನಾಂದಿ ಹಾಡಿತು.

ಕ್ರಿ. ಶ. 1710ರಲ್ಲಿ ಶ್ರೀ ಮುರಿಗೇಂದ್ರ ರಾಜೇಂದ್ರರು ಶಿವೈಕ್ಯರಾದರು. ಇವರ ನಂತರ ಇಮ್ಮಡಿ ಗುರುಸಿದ್ಧ ಸ್ವಾಮಿಗಳು (ಸು. ಕ್ರಿ. ಶ. 1710-1725) ಬೃಹನ್ಮಠದ ಜಗದ್ಗುರುಗಳಾಗಿ ಪೀಠವನ್ನಲಂಕರಿಸಿದರು. ಈ ಮೇಲ್ಕಂಡ ಶಾಸನದಲ್ಲಿ ಉಕ್ತವಾಗಿರುವ 'ಮುರ್‍ರಿಗೆ ಸಿಧೆಶ್ವರ ದೆವರ್‍ರಿಗೆ' ಎಂಬ ವಾಕ್ಯದ ಸಿದ್ಧೇಶ್ವರರು ಇವರೇ ಎಂಬುದರಲ್ಲಿ ಸಂದೇಹವಿಲ್ಲ. ಇಮ್ಮಡಿ ಗುರುಸಿದ್ಧ ಸ್ವಾಮಿಗಳು ಮಹಾ ವಿದ್ವಾಂಸರಾಗಿದ್ದು, ಕನ್ನಡ ಮತ್ತು ಸಂಸ್ಕೃತಗಳೆರಡರಲ್ಲೂ ಅಗಾಧ ಪಾಂಡಿತ್ಯ ಪಡೆದವರಾಗಿದ್ದರು. ಇವರು ಸ್ವತಃ 'ಹಾಲಾಸ್ಯ ಲೀಲೆ' ಎಂಬ ಕನ್ನಡ ಚಂಪೂ ಗ್ರಂಥ ಹಾಗೂ 'ಪ್ರಭುಲೀಲೆ' ಎಂಬ ಸಂಸ್ಕೃತ ಕಾವ್ಯ ಇವುಗಳನ್ನು ರಚಿಸಿದರು. ಆದ್ದರಿಂದ ಇವರನ್ನು ಲೀಲೆಯ ಇಮ್ಮಡಿ ಗುರುಸಿದ್ಧರು, ಲೀಲೆಯ ಮುರಿಗೇ ಸಿದ್ಧರು, ಲೀಲೆಯ ಮುರಿಗೇ ಸ್ವಾಮಿಗಳು ಎಂದು ಕರೆಯಲಾಗುತ್ತಿತ್ತೆಂದು ತಿಳಿಯುತ್ತದೆ. ಅಲ್ಲದೆ ಗುರುಸಿದ್ಧಸ್ವಾಮಿಗಳು ಕುಂಭಪಲ್ಲಿಯ ಬಸವಲಿಂಗ ಎಂಬುವರಲ್ಲಿ ವಿದ್ಯಾಭ್ಯಾಸವನ್ನು ಮಾಡಿದರೆಂತಲೂ, ಮುರಿಗಾ ಶಾಂತವೀರ (ಶ್ರೀ ಮುರಿಗೇಂದ್ರ ರಾಜೇಂದ್ರ)ರಿಂದ ಮಹಾ ಜ್ಞಾನವನ್ನು ಪಡೆದು ಮುರಿಗಾ ಗುರುಸಿದ್ಧಯೋಗಿಯಾದರೆಂದೂ 'ಪ್ರಭುಲೀಲೆ'ಯಲ್ಲಿ ಹೇಳಿದೆ. (ನೋಡಿ: ಮಹಾಲಿಂಗೇಂದ್ರ ವಿಜಯ ಟೀಕೆ, ಪು. 86). ಆದ್ದರಿಂದ ಶಾಸನದಲ್ಲಿ ಉಲ್ಲೇಖಗೊಂಡಿರುವ ಮುರಿಗಾ ಸಿದ್ಧೇಶ್ವರರು ಇಮ್ಮಡಿ ಗುರುಸಿದ್ಧ ಸ್ವಾಮಿಗಳೇ ಆಗಿದ್ದಾರೆ. ಶಾಸನ ನೀಡಿರುವ ಕಾಲವಾದರೂ ಶಾ. ಶ. 1634, ಅಂದರೆ ಕ್ರಿ. ಶ. 1712. ಆಗ ಚಿತ್ರದುರ್ಗದ ಅರಸನಾಗಿದ್ದವನು ಭರಮಣ್ಣ ನಾಯಕನೇ. ತನ್ನ ಪ್ರಿಯ ಗುರು ಶ್ರೀ ಮುರಿಗೇಂದ್ರ ರಾಜೇಂದ್ರರ ಶಿಷ್ಯರಾಗಿ ಪೀಠಕ್ಕೆ ಬಂದ ಗುರುಸಿದ್ಧ ಸ್ವಾಮಿಗಳಲ್ಲೂ ಅವನು ಎಂದಿನ ಭಕ್ತಿ, ವಿಶ್ವಾಸಗಳನ್ನೇ ತೋರಿಸುತ್ತಿದ್ದುದರಲ್ಲಿ ಯಾವ ಅನುಮಾನವೂ ಇಲ್ಲ. ಗುರುಸಿದ್ಧ ಸ್ವಾಮಿಗಳ ಕಾಲದಲ್ಲಿ ನಾಯಕನು ನೀಡಿರಬಹುದಾದ ಹಲವಾರು ಕಾಣಿಕೆಗಳಲ್ಲಿ ಈ ಗಂಟೆಯೂ ಸೇರಿರಬೇಕು. ಬಹುಶಃ ಪೂಜೆ-ಪುರಸ್ಕಾರಗಳು ಸುಗಮವಾಗಿ ನಡೆಯುವಂತೆ ಏರ್ಪಡಿಸಲು ಈ ಗಂಟೆಯನ್ನು ನಾಯಕನು ಸ್ವಾಮಿಗಳಿಗೆ ಭಕ್ತಿಯಿಂದ ಮಾಡಿಸಿಕೊಟ್ಟಿರಬೇಕೆಂದು ತೋರುತ್ತದೆ. ಈ ಗಂಟಿ ಶಾಸನವು ಪಾಳೆಯಗಾರರು ಮತ್ತು ಶ್ರೀ ಬೃಹನ್ಮಠದ ನಡುವೆ ನೆಲೆಗೊಂಡಿದ್ದ ನೇರ ಸಂಪರ್ಕದ ಬಗ್ಗೆ ಬೆಳಕು ಚೆಲ್ಲುತ್ತದೆ.

(ಆ) ॥ ಶ್ರೀ ಮುರಿಗೇಂದ್ರ ॥ ॥ಮು॥ಬ॥ನ॥ಗಂಟೆ ವಂದು॥

ಟಿಪ್ಪಣಿ : ಈ ಮೊದಲಿಗೆ ಪ್ರಸ್ತಾಪಿಸಿರುವ ಶಾಸನವಿರುವ ಬೃಹತ್ ಗಂಟೆಯಷ್ಟೆ ಈ ಗಂಟೆಯೂ ದೊಡ್ಡದಾಗಿದೆ. ಇದನ್ನು ಕಂಚಿನಿಂದ ನಿರ್ಮಿಸಲಾಗಿದ್ದು, ಅಷ್ಟು ಪ್ರಾಚೀನವಾದುದಲ್ಲವೆಂದು ಕಂಡುಬರುತ್ತದೆ.

2. ಡಮರುಗ ಶಾಸನ

ಹಾಗಲವಾಡಿ ಅರಸು ಮುದ್ವೀರಪ್ಪನಾಯಕರ ಭಕ್ತಿ

ಟಿಪ್ಪಣಿ : ಶ್ರೀ ಬೃಹನ್ಮಠದಲ್ಲಿ ರಕ್ಷಿಸಿಡಲ್ಪಟ್ಟಿರುವ ಹಾಗೂ ಅಪರೂಪದ ವಸ್ತುಗಳಲ್ಲೊಂದಾಗಿರುವ ಡಮರುಗವೊಂದರ ಮೇಲೆ ಈ ಮೇಲಿನ ಎರಡು ಸಾಲಿನ ಬರಹವಿದೆ. ಅದು ಹೇಳುವಂತೆ ಹಾಗಲವಾಡಿ ಪಾಳೆಯಗಾರ ಮುದ್ದುವೀರಪ್ಪ (ಮುದ್ವೀರಪ್ಪ)ನು ಡಮರುಗವನ್ನು ಮಠಕ್ಕೆ ಭಕ್ತಿಯಿಂದ ಒಪ್ಪಿಸಿದ್ದಾನೆ. ಇಲ್ಲಿ ಕಾಲ ಸೂಚಿತವಾಗಿಲ್ಲ. ಯಾರಿಗೆ ಒಪ್ಪಿಸಿದ್ದು ಎಂಬುದೂ ಉಲ್ಲೇಖಗೊಂಡಿಲ್ಲ.

ಡುಮರುಗ ಶಾಸನದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಮುದ್ದುವೀರಪ್ಪ ನಾಯಕ ಮತ್ತು ಅವನ (ಹಾಗಲವಾಡಿ) ಮನೆತನದ ಬಗ್ಗೆ ಇಲ್ಲಿ ವಿಚಾರ ಮಾಡುವುದು ಸೂಕ್ತ. ಹಾಗಲವಾಡಿ ಪಾಳೆಯಗಾರರು ತುಮಕೂರು ಜಿಲ್ಲೆಯ ಹೆಚ್ಚಿನ ಭಾಗವನ್ನು ತಮ್ಮ ಅಧೀನ ಮಾಡಿಕೊಂಡು ಒಟ್ಟು 300 ವರ್ಷಗಳ ಕಾಲ ಆಡಳಿತ ನಡೆಸಿದರು. ಇಂದಿನ ಗುಬ್ಬಿ ತಾಲ್ಲೂಕಿನಲ್ಲಿರುವ ಹಾಗಲವಾಡಿ ಇವರ ರಾಜಧಾನಿಯಾಗಿದ್ದಿತು; ಅಂತೆಯೇ ಇವರಿಗೆ ಹಾಗಲವಾಡಿ ಪಾಳೆಯಗಾರರೆಂದು ಹೆಸರಾಯಿತು. ಈ ಮನೆತನದಲ್ಲಿ ಒಟ್ಟು ಹದಿಮೂರು ಜನ ಆಳ್ವಿಕೆ ನಡೆಸಿದರು. ಇವರ ಮೂಲ ಪುರುಷ ಎರಿನಾದ ನಾಯಕನೆಂಬುವನು; ಕ್ರಿ.ಶ. 1478 ರಲ್ಲಿ ಈ ಪ್ರಾಂತಕ್ಕೆ ಬಂದು ರಾಜ್ಯ ಸ್ಥಾಪಿಸಿದ. ಈ ವಂಶದಲ್ಲಿ ಪತ್ತನೇ ದೊರೆಯಾಗಿ ಆಡಳಿತ ನಡೆಸಿದವನೇ ಮುದ್ದುವೀರಪ್ಪ; ಸ್ವಭಾವತಃ ಶೂರನಾದ ಅರಸ; ಕ್ರಿ.ಶ. 1740 ರಿಂದ 1753 ರವರೆಗೂ ಆಳಿದ. ಇವನ ಸಮಯದಲ್ಲಿ ಹೈದರಾಬಾದಿನ ಸಲಾಬತ್‌ಜಂಗನೊಡನೆ ಯುದ್ಧ ನಡೆಯಿತು. ಜಂಗನು ಸೋತುಹೋದ. ಕ್ರಿ.ಶ. 1752 ರಲ್ಲಿ ದಿಲಾವರ್ ಖಾನನಿಗೂ ಮುದ್ದುವೀರಪ್ಪನಿಗೂ ಯುದ್ಧ ನಡೆಯಿತು. ಯುದ್ಧದಲ್ಲಿ ದಿಲಾವರ್ ಪರಾಜಿತಗೊಂಡನಲ್ಲದೆ, ನಾಯಕನ ಪರಾಕ್ರಮವನ್ನು ಮೆಚ್ಚಿ 'ರಾಜಾಜಂಗ್ ಬಹಾದೂರ್' ಎಂಬ ಬಿರುದನ್ನೂ, ಹನ್ನೆರಡು ಹಳ್ಳಿಗಳನ್ನೂ ಕಾಣಿಕೆಯಾಗಿತ್ತ.

ಹಾಗಲವಾಡಿ ಪಾಳೆಯಗಾರರು ಸರ್ವಧರ್ಮಗಳನ್ನೂ ಸಮಾನ ರೀತಿಯಲ್ಲಿ ಪ್ರೋತ್ಸಾಹಿಸುತ್ತಿದ್ದರು. ಬ್ರಾಹ್ಮಣರಿಗೂ, ವೀರಶೈವರಿಗೂ ಮಠ-ಮಾನ್ಯಗಳಿಗೂ ದತ್ತಿಗಳನ್ನು ಬಿಟ್ಟುಕೊಟ್ಟಿದ್ದಾರೆ. 17 ನೇ ಶತಮಾನದಲ್ಲಿ ಈ ಪಾಳೆಯಗಾರರು ವೀರಶೈವ ಮತವನ್ನವಲಂಬಿಸಿದ್ದರೆಂದು ತಿಳಿದುಬರುತ್ತದೆ. 18 ನೇ ಶತಮಾನದ ಮಧ್ಯೆ ಭಾಗದಲ್ಲಿ ಆಳ್ವಿಕೆಗೆ ಬಂದ ಮುದ್ದುವೀರಪ್ಪನಾಯಕನೂ ವೀರಶೈವನಾಗಿದ್ದು, ಅಭಿಮಾನದಿಂದ ಡಮರುಗವನ್ನು ಪೂಜಾಕಾರ್ಯ ಉದ್ದೇಶ ಇತ್ಯಾದಿಗಳಿಗಾಗಿ ಶ್ರೀ ಬೃಹನ್ಮಠಕ್ಕೆ ಒಪ್ಪಿಸಿರಬೇಕೆಂದು ಊಹಿಸಬಹುದು. ಈ ಪಾಳೆಯುಗಾರರ ವಂಶಸ್ಥರು ತಮ್ಮ ಹೆಸರಿನೊಡನೆ 'ಐಯ್ಯನವರು' ಎಂದು ಕರೆದುಕೊಳ್ಳುವರೆಂತಲೂ, ಇವರು ಗೋನವಳಗೋತ್ರದವರೆಂತಲೂ ತಿಳಿಯುತ್ತದೆ. ಚಿತ್ರದುರ್ಗ ಸಂಸ್ಥಾನದೊಂದಿಗೆ ಹಾಗಲವಾಡಿ ಪಾಳೆಯಗಾರರು ರಾಜಕೀಯ ಭಾಂದವ್ಯವನ್ನಿಟ್ಟುಕೊಂಡಿದ್ದರು.

3. ಕೊಳಗದ ಶಾಸನಗಳು

(ಅ) । ಶ್ರಿ ಮುೂರಿಗೆರಾಜೆಂದ್ರ

ಟಿಪ್ಪಣಿ : ಈ ವಾಕ್ಯವನ್ನು ಕೊಳಗವೊಂದರ ಮೇಲೆ ಕೆತ್ತಲಾಗಿದೆ. ಅಕ್ಷರಗಳನ್ನು ಗಮನಿಸಿದರೆ 19 ನೇ ಶತಮಾನದ ಉತ್ತರಾರ್ಧದಲ್ಲಿ ಈ ಕೊಳಗವನ್ನು ಶ್ರೀ ಬೃಹನ್ಮಠಕ್ಕೆ ಕಾಣಿಕೆಯಾಗಿ ಕೊಟ್ಟಂತೆ ತೋರುತ್ತದೆ.

(ಆ) ॥ ಚಿಂನ್ಮಯದ್ರಿ ವುಲಿಗುಂದಿ ಆಡವಿಯೊಗಿಂದ್ರಾ
ಸ್ವಾಮಿಗಳಿಗೆ ಚಂನ್ನ
ಬಸಪನ ಮಗ ಕುಣಗಲ್ ವಿರಸೆಟ್ಯೆಪನ್ನು ಭಕ್ತಿಯಿಂದ
[....ಯಿದರಂನ್ನ]ವಪ್ಪಿ
ಶಿದ ಶಿವಾರ್ಥ

ಟಿಪ್ಪಣಿ : ಈ ಕೊಳಗದ ಮೇಲಿನ ಬರಹವು ಹೇಳುವಂತೆ, ಚಿತ್ರದುರ್ಗ (ಚಿಂನ್ಮಯದ್ರಿ) ಬೆಟ್ಟದ ಪಶ್ಚಿಮಕ್ಕೆ ನೆಲೆಗೊಂಡಿರುವ ವುಲಿಗುಂದಿ (ಈಚಿನ ಹೆಸರು: ಹುಲಿಗೊಂದಿ; ಇದರ ಪಕ್ಕದಲ್ಲೆ ಚಿತ್ರದುರ್ಗದ ಬೆಟ್ಟಕ್ಕೆ ಹೊಂದಿಕೊಂಡಂತೆ ಬಸವನಗೊಂದಿ, ಬಾರಲಗೊಂದಿ, ನೀರಲಗೊಂದಿ ಪ್ರದೇಶಗಳಿರುವುವು.) ಮಠ (ಅಂಕಲಿಮಠ)ದ ಅಡವಿಯೋಗಿಂದ್ರಾ ಸ್ವಾಮಿಗಳಿಗೆ ಬಸಪ್ಪ ಎಂಬಾತನ ಮಗ ಕುಣಿಗಲ್ಲು ವೀರಸೆಟ್ಟೆಪ್ಪನು ತನ್ನ ಭಕ್ತಿಯ ಕಾಣಿಕೆಯಾಗಿ ಕೊಳಗವೊಂದನ್ನು ಅರ್ಪಿಸುತ್ತಾನೆ. (ಸುಮಾರು ಇನ್ನೂರು ಸೇರು ದವಸ ತುಂಬಬಹುದಾದಷ್ಟು ದೊಡ್ಡದಾಗಿದೆ ಈ ಕೊಳಗ).

ಈ ಬರಹದಲ್ಲಿ ಉಲ್ಲೇಖಗೊಂಡಿರುವ ಅಡವಿಯೋಗಿಂದ್ರಾ ಸ್ವಾಮಿಗಳ ಐತಿಹಾಸಿಕತೆಯನ್ನು ನಾವಿಲ್ಲಿ ಪರಿಶೀಲಿಸಬೇಕು. ಶ್ರೀ ಬೃಹನ್ಮಠದ ಇತಿಹಾಸವನ್ನರುಹುವ 'ಮಹಾದೇವನ ಮಹಾಲಿಂಗೇಂದ್ರ ವಿಜಯ'ದ ಯಾವ ಪುಟದಲ್ಲಿಯೂ ಇವರ ಹೆಸರು ಕಾಣಬರುವುದಿಲ್ಲ. ಚಿತ್ರದುರ್ಗ ಜಗದ್ಗುರುಗಳ ಆಜ್ಞೆಯನ್ನು ಪರಿಪಾಲಿಸುತ್ತಿದ್ದ ಚರಮೂರ್ತಿಗಳಲ್ಲಿ ಇವರೊಬ್ಬರಾಗಿರಬೇಕೆಂದು ತೋರುತ್ತದೆ. ಏಕೆಂದರೆ ಹುಲಿಗೊಂದಿ ಮಠವು ಶ್ರೀ ಬೃಹನ್ಮಠದ ಅಧೀನದಲ್ಲಿದ್ದ ಶಾಖಾ ಮಠಗಳಲ್ಲೊಂದಾಗಿದ್ದಿತು. ಅಡವಿಯೋಗಿಂದ್ರಾ ಸ್ವಾಮಿಗಳು ಖಾಸಾ ಮಠದ ಚರಮೂರ್ತಿಗಳಾಗಿದ್ದಂತೆಯೂ, ಹುಲಿಗೊಂದಿ ಮಠ ದಾಸೋಹ ಮಠವಾಗಿದ್ದಂತೆಯೂ ಹೇಳಲಾಗುತ್ತದೆ.

ಇತಿಹಾಸದ ಪ್ರಕಾರ, ಭರಮಣ್ಣನಾಯಕನ ಕಾಲದಲ್ಲಿ (ಕ್ರಿ.ಶ. 1689-1721) ಈಗಿನ ಅಂಕಲಿ ಮಠವನ್ನು ಪರದೇಶಪ್ಪನ ಗವಿಯೆಂದು ಕರೆಯುತ್ತಿದ್ದರು. ಈಚೆಗೆ ಅಡವಿಯೋಗಿಂದ್ರಾ ಸ್ವಾಮಿಗಳು ತಮ್ಮ ಶಿಷ್ಯರೊಂದಿಗೆ ಇಲ್ಲಿ ವಾಸವಾಗಿದ್ದರು. ಈ ಸ್ವಾಮಿಗಳ ನಿಜನಾಮ ರೇಚಪ್ಪನವರೆಂದು ತಿಳಿದುಬರುತ್ತದೆ. ಇವರು ಬೆಳಗಾಂ ಜಿಲ್ಲೆಯ ಅಂಕಲಗಿ ಎಂಬ ಊರಿನಲ್ಲಿರುವ ಪ್ರಸಿದ್ಧ ವೀರಶೈವ ಮಠದಿಂದ ಬಂದಿದ್ದು ಇಲ್ಲಿ ವಾಸವಾಗಿದ್ದಿರಬೇಕೆಂದು ಹೇಳಲಾಗಿದೆ. ಜನಪದ ಸಾಹಿತ್ಯದಲ್ಲಿ ಇವರನ್ನು ಅಂಕಲಗಿ ಅಡವಿ ಸ್ವಾಮಿಗಳೆಂದೇ ಸಂಬೋಧಿಸಲಾಗಿದೆ. ಇವರ ಹೆಸರಿನಿಂದಾಗಿ ಇಂದಿನ ಅಂಕಲಿ ಮಠವು ಪ್ರಸಿದ್ಧಿಗೆ ಬಂದಿರುವುದಾಗಿ ತಿಳಿಯುತ್ತದೆ. ಆದರೂ ಈ ಬಗ್ಗೆ ಸಂಶೋಧನೆ ಕೈಗೊಳ್ಳುವುದು ಅಗತ್ಯವೆನಿಸುತ್ತದೆ.

4. ನಗಾರಿ ಶಾಸನಗಳು

(ಅ) ರಂಗೈಯ

ಟಿಪ್ಪಣಿ: ಸುಮಾರು ಐದು ಅಡಿ ಎತ್ತರ, ಹತ್ತು ಅಡಿ ಸುತ್ತಳತೆಯಿಂದ ಕೂಡಿರುವ ಬೃಹತ್ ನಗಾರಿಯೊಂದರ ಮೇಲೆ ಈ ಹೆಸರನ್ನು ಕೆತ್ತಲಾಗಿದೆ. ಕಳೆದ ಶತಮಾನಕ್ಕೆ ಸೇರಿದ ವಸ್ತು ಇದಾಗಿದೆಯೆಂಬುದನ್ನು ಈ ಮೇಲಿನ ಅಕ್ಷರಗಳಿಂದ ಊಹಿಸಬಹುದು. 'ರಂಗಯ್ಯ' ಎಂಬುದು ನಗಾರಿಯನ್ನು ಮಠಕ್ಕೆ ಒಪ್ಪಿಸಿಕೊಟ್ಟಾತನ ಹೆಸರಿರಬೇಕು.

(ಆ) ಶ್ರೀ ಚಿತ್ರದುರ್ಗದಾ । ಮುರಿಗೆ ರಜಿಂದ್ರ ಸೊಮಿಗಳ ಮಠಕ್ಕೆ
ಮೆಲ್ಲುಗ್ಯೆ ಬನುಲ್ಲಾಪುರುದಾ [ಯೆಟಪ್ಪೆ
ಬವಾದ] । ಬಕ್ತಿಯಿಂದಾ ವೊಪಿಸಿದ ಡಂಕೆ

ಟಿಪ್ಪಣಿ: ಶ್ರೀ ಬೃಹನ್ಮಠಕ್ಕೆ ಒಪ್ಪಿಸಿಕೊಟ್ಟ ಇನ್ನೊಂದು ನಗಾರಿ (ಡಂಕೆ)ಯ ಮೇಲೆ ಕೆತ್ತಿರುವ ಈ ಬರಹದಲ್ಲಿ ಬನ್ನುಲಾ

ಪುರದ ವಾಸಿಯೋರ್ವರು (?) ಅದನ್ನು ಕಾಣಿಕೆಯಾಗಿ ಕೊಟ್ಟಂತೆ ತಿಳಿಸಲಾಗಿದೆ. ಯಾರು ಕಾಣಿಕೆಯಾಗಿತ್ತವರು ಎಂಬ ಬಗ್ಗೆ ಬರಹದಲ್ಲಿ ಸ್ಪಷ್ಟವಿಲ್ಲ. ಕೊಟ್ಟ ಕಾಲವನ್ನೂ ವ್ಯಕ್ತಪಡಿಸಿಲ್ಲ. ಇದೂ ಸಹ ಕಳೆದ ಶತಮಾನಕ್ಕೆ ಸೇರಿದುದೆಂಬುದರಲ್ಲಿ ಸಂದೇಹವಿಲ್ಲ.

5. ಕರ್ತೃಗಳ ಗದ್ದುಗೆಯ ಮೇಲಿನ ಮಂಟಪದ ಶಿಖರಕ್ಕೆ ಅಳವಡಿಸಿರುವ ಕಳಸದ ಮೇಲೆ ॥ **ಶ್ರೀ ಮುರಿಗ್ಯಾ ಗುರೂ** ॥ ಎಂಬ ಅಂಕಿತವಿದೆ. ಈ ಬಗ್ಗೆ ಹೆಚ್ಚಿನ ಸಂಗತಿಗಳು ಲಭ್ಯವಿಲ್ಲ.

ಕೃತಜ್ಞತೆಗಳು: ಈ ಲೇಖನ ರಚನೆಯಲ್ಲಿ ಸಲಹೆಗಳನ್ನಿತ್ತು ಸಹಕರಿಸಿದ ಡಾ॥ ಎಲ್. ಬಸವರಾಜು, ಪಂಡಿತ ಚನ್ನಪ್ಪ ಎರೆಸೀಮೆ, ಶ್ರೀ ಬಿ. ನಂ. ಚಂದ್ರಯ್ಯ, ಡಾ॥ ಎಂ. ವಿ. ಶ್ರೀನಿವಾಸ್, ಚನ್ನಬಸವ ದೇವರು ಇವರಿಗೆ ವಂದನಾ ಪೂರ್ವಕವಾಗಿ ಕೃತಜ್ಞತೆಗಳನ್ನರ್ಪಿಸುತ್ತೇನೆ.

ಆಧಾರ

1. ಮಹಾದೇವನ ಮಹಾಲಿಂಗೇಂದ್ರ ವಿಜಯ (1971) : (ಸಂ.) ಡಾ॥ ಎಲ್. ಬಸವರಾಜು

2. ಹಾಗಲವಾಡಿ ಪಾಳಯಗಾರರು (1931) : ಎಂ. ಎಸ್. ಪುಟ್ಟಣ್ಣ

3. 'ಶರಣ ಸಾಹಿತ್ಯ'ದಲ್ಲಿ ಪ್ರಕಟಗೊಂಡಿರುವ ಕೆಲವು ಲೇಖನಗಳು

—o—

ಈಳೆ ನಿಂಬೆ ಮಾವು ಮಾದಲಕ್ಕೆ ಹುಳಿ ನೀರನೆರೆದವರಾರಯ್ಯ !
ಕಬ್ಬು ಬಾಳೆ ಹಲಸು ನಾರಿವಾಳಕ್ಕೆ ಸಿಹಿ ನೀರನೆರೆದವರಾರಯ್ಯಾ !
ಕಳವೆ ಶಾಲಿಗೆ ಓಗರದ ಉದಕವನೆರೆದವರಾರಯ್ಯಾ !
ಮರುಗ ಮಲ್ಲಿಗೆ ಪಚ್ಚೆಗೆ ಪರಿಮಳದುದಕವನೆರೆದವರಾರಯ್ಯಾ !
ಇಂತೀ ಜಲವು ಒಂದೇ, ನೆಲವು ಒಂದೇ, ಆಕಾಶವು ಒಂದೇ,
ಒಂದೇ ಜಲವು ಹಲವು ದ್ರವ್ಯಂಗಳಕೂಡಿ ತನ್ನ ಪರಿ ಬೇರಾದಹಾಗೆ,
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯನು
ಹಲವು ಜಗಂಗಳ ಕೂಡಿಕೊಂಡಿರ್ದರೇನು, ತನ್ನ ಪರಿ ಬೇರೆ.

—ಮಹದೇವಿಯಕ್ಕ.

ಲೋಕದ ಬೆಳಕು

[illegible] ಶಿವಾಜಿಗೌಡ,
ಚಿತ್ರದುರ್ಗ.

ಶ್ರೀ ಜಯದೇವ, ಶ್ರೀ ಜಯವಿಭವ, ಶ್ರೀ ಮಲ್ಲಿಕಾರ್ಜುನ
ಮಕ್ಕಳಾಗಿ ಜನಿಸಿದರು ಶ್ರೀ ಗುರು ಮುರುಘೇಶನ ॥ ಪ ॥

ಅನ್ನದಾನ, ವಿದ್ಯಾದಾನ ಲೋಕಕ್ಕೆ ಹೆಸರು
ಜನರೆಲ್ಲ ಕಂಡಿಹುದು ಅವರಿಂದ ಉಸಿರು;
ನೆನೆದವರ ನಡೆದರೇ ಬಾಳೆಲ್ಲ ಹಸಿರು
ಅನಾಮದಾ ಶಕ್ತಿ ಮನದಂತೆ ಪೈರು. ॥ ೧ ॥

ಪರಶಿವನ ಪ್ರತಿರೂಪ ಈ ಲೋಕದಲ್ಲಿ
ಅವತರಿಸಿ ಪಸರಿಸಿತು ಪ್ರತಿ ಮೂಲೆಯಲ್ಲಿ
ಲೋಕಕ್ಕೆ ಹೆಸರಾಂತ ಶ್ರೀ ಬೃಹನ್ಮಠದಲ್ಲಿ
ಚಿತ್ರದುರ್ಗ ಬೃಹನ್ಮಠದ ಮಡಿಲಲ್ಲಿ. ॥ ೨ ॥

ಭಯ, ಭಕ್ತಿಭಾವನೆ ಈ ಮನದಲ್ಲಿರಿಸಿ,
ಹರ ಗುರುವು ತಾನೆ ಆದ ಅವನಿಲ್ಲಿ ಉದಿಸಿ;
ಅಮರವಾಗಿ ಬೆಳಗಿದೆ ನೀತಿ ಅನುಸರಿಸಿ.
ಕುವರರಾಗಿ ಬಂದರಿವರು ಅವನಿಂದ ಜನಿಸಿ. ॥ ೩ ॥

ಹೆಸರೊಂದು, ಪ್ರತಿಯಾಗಿ ನೂರೆಂಟು ರೂಪ,
ಮುರುಘೇಶನಿಂದ ಬೆಳಕು ಈ ಲೋಕದೀಪ;
ಮುರುಘೇಶ ಮುರುಘೇಶ ಸುಳಿವಿಲ್ಲತಾಪ
ಈ ನಾಮನೆನೆದವರ ಪರಿಹಾರ ಪಾಪ. ॥ ೪ ॥

ಶೂನ್ಯಪೀಠದ ಪರಂಪರೆ

ಲೇಖಕರು : **ಬಿ. ನಂ. ಚಂದ್ರಯ್ಯ**, ಎಂ.ಎ.,
ಕನ್ನಡ ರೀಡರ್,
ಮಹಾರಾಜ ಕಾಲೇಜ್, ಮೈಸೂರು.

ಹನ್ನೆರಡನೆಯ ಶತಮಾನ ಕರ್ನಾಟಕದ ಜನಜೀವನದಲ್ಲಿ ರೋಮಾಂಚನಕಾರಿಯಾದ ಕಾಲ. ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ವಿಪ್ಲವಗಳಿಂದ ಕಂಗಾಲಾಗಿದ್ದ ಜನತೆಗೆ ಅತೃಪ್ತಿಯ ಜೀವನವನ್ನೆದುರಿಸಿ, ಸಮಸ್ತರೂ ಸಮಾನರು, ಮನುಷ್ಯಮಾತ್ರರಲ್ಲಿ ಯಾವುದೇ ರೀತಿಯ ಭಿನ್ನ-ಭಾವಗಳಿಗೆಡೆಯಿಲ್ಲವೆಂಬುದನ್ನು ಆಚಾರದಲ್ಲಿ ಆಚರಿಸಿ ತೋರಿಸಿದವನು ಭಕ್ತಿಭಂಡಾರಿ, ಧರ್ಮಭಂಡಾರಿ ಬಸವಣ್ಣ. ಸನಾತನವಾಗಿ ನಡೆದುಬಂದ ಜಾತ್ಯಾಂಧತೆಯ ಸೋಗಿನಲ್ಲಿ ದಡಕ್ಕೆ ಚಿಮ್ಮಿದ ಮೀನಿನಂತೆ ಮಿಲಿಮಿಲಿ ಒದ್ದಾಡುತ್ತಿದ್ದ ಸಮಾಜ ಜೀವನದಲ್ಲಿ ಆಮೂಲಾಗ್ರ ಬದಲಾವಣೆಯನ್ನು ತರಲು, ತಾನು ಹಮ್ಮಿಕೊಂಡ ಕಾರ್ಯಗಳನ್ನು ನಿಜಜೀವನದಲ್ಲಿ ಅಳವಡಿಸಲು ತನ್ನ ಮಹಮನೆಯಲ್ಲಿಯೇ 'ಅನುಭವ ಮಂಟಪ'ವನ್ನು ನಿರ್ಮಿಸಿ, ಅದರಲ್ಲಿ ಅತ್ಯಾಶ್ಚರ್ಯಕರವಾದ 'ಶೂನ್ಯ ಸಿಂಹಾಸನ'ವನ್ನು ಸ್ಥಾಪಿಸಿ ಅದರಲ್ಲಿ ಅಲ್ಲಮನನ್ನು ಮೂರ್ತಗೊಳಿಸಿ ತನ್ನ ಕಾರ್ಯಕ್ರಮಗಳನ್ನು ನಿರ್ವಹಿಸಿದನು. ಸೂರ್ಯಪ್ರಭೆಯಷ್ಟು ನಿಚ್ಚಳವಾಗಿರುವ ಅನುಭವ ಮಂಟಪ ಮತ್ತು ಶೂನ್ಯಪೀಠಗಳ ಬಗ್ಗೆ ಸಾಕಷ್ಟು ತಪ್ಪು ಕಲ್ಪನೆಗಳಿರುವಂತೆ ಕಾಣುತ್ತದೆ. ಈ ವಿಷಯದಲ್ಲಿ ಒಂದೆರಡು ಮಾತುಗಳನ್ನು ಬರೆಯಬಹುದೆಂದು ಕಾಣುತ್ತದೆ.

ಭೀಮಕವಿಯ ಬಸವ ಪುರಾಣದಲ್ಲಿ ಅಧಿಕ ಪ್ರಮಾಣದಲ್ಲಿ ತತ್ವಗೋಷ್ಠಿ, ಒಡ್ಡೋಲಗ ಮುಂತಾದ ಪದಗಳ ಉಲ್ಲೇಖ ಬರುವುದಲ್ಲದೆ, ಅನುಭವ ಮಂಟಪದ ಹತ್ತಿರ ಹತ್ತಿರಕ್ಕೆ ಬರುವ "ಕೂಡಲ ಸಂಗಮೇಶನ ಭವನ ಮಂಟಪದೊಳಗೆ ವಿವಿಧ ಭಕ್ತರುವೆರಸಿ" ಒಡ್ಡೋಲಗವಿತ್ತ ವಿಷಯವೂ ಪ್ರಸ್ತಾಪಿತವಾಗಿದೆ. ಈ ಮಾತು ಭೀಮಕವಿಯ ಕಲ್ಪಿತವಾಗಿರದೆ ಅದು ತೆಲುಗು ಬಸವಪುರಾಣದ ಪ್ರತಿಕೃತಿಯಾಗಿರಬೇಕು. ಅಂದರೆ ಅನುಭವ ಮಂಟಪದ ಉಲ್ಲೇಖ ಹನ್ನೆರಡನೆಯ ಶತಮಾನದ ಬಸವಾದಿ ಪ್ರಮಥರ ತೀರ ಸನಿಹದ ಸಮಯಕ್ಕೆ ಹೋಗುತ್ತದೆ. ಅಲ್ಲಿಂದ ೧೫ ನೇ ಶತಮಾನಕ್ಕೆ ಬಂದರಂತೂ ಅನುಭವ ಮಂಟಪದ ಉಲ್ಲೇಖ ಇನ್ನೂ ಸ್ಪಷ್ಟವಾಗಿ ಕಂಡುಬರುತ್ತದೆ. ಉದಾ: ಸಿಂಗಿರಾಜ ಪುರಾಣದಲ್ಲಿ ಬರುವ ಮಹಾಮನೆ, ಅನುಭವ ಮಂಟಪ, ಹಾಗೂ ಶೂನ್ಯ ಸಿಂಹಾಸನಗಳ ಸುಂದರವಾದ ಚಿತ್ರವನ್ನು ನೋಡಬಹುದು- "ಶ್ರೀಕಾರದಾಕಾರವಾಗಿ ಕಲ್ಯಾಣ ಭೂ । ನಾಕೇಶ್ವರನ ಪದಸ್ಥದ ಹಸ್ತ ತಾನಾಗಿ । ವಾಕು ಮನ ನಯನ ಕರಚರಣದ್ವೈಮುಖ ಪರುಷ ತನ್ನರಮನೆಯೊಳೂ ॥ ಪಾಕಶಾಸನ ಪ್ರಶಸ್ತದೊಳು ಮಯನಿರ್ಮಿತನಿ । ಜಾಕಾರ ಕೈವಲ್ಯನಾಮ ಜಂಗಮಲಿಂಗ । ವಾಕರುಷಣದ **ಮಹಾ ಮಂಟಪ** ಸ್ಥಳವ ಸ್ಥಳಗೊಳಿಸಿಪ್ಪನಂತಜಿಳೊಳೂ ॥" (ಸಿಂ. ಪು-48-3, 4); "ಭಾವಬ್ರಹ್ಮ ಸ್ವರೂಪಿತ ತತ್ವ ನಿಜ ಮಹಾ । ಕೇವಲಜ್ಞಾನ ಜ್ಯೋತಿರ್ಲಿಂಗ ಲಿಂಗದೇ । ಹಾವಯವ ನಿರ್ದೇಹದೇಹಿಕದಿ ಬಂದೆನ್ನ ದಾಸೋಹ ಕ್ರೀ ಕರ್ಮವ ॥ ತಾವವಗ್ರಹಿಸೆನಗೆ ಸೋಹಾಮೃತವನೂಡಿ । ದಾ ವಿಭು ಪ್ರಸನ್ನೋತ್ತರದಿ ಮೂರ್ತಿಗೊಳಲೀಶಿವ । ಭಾವಕಿಕ್ಕಿದ ಪ್ರತಿಷ್ಠಿತವೆನಲು **ಶೂನ್ಯಸಿಂಹಾಸನವನಲ್ಲಿ** ನೆಗಳ್ದ ॥" (ಪ್ರ. ಪು, 7–267).

ಬಸವಣ್ಣನವರ ಅರಮನೆ (ಮಹಾಮನೆ), ಅದರಲ್ಲಿ ಅನುಭವ ಮಂಟಪ, ಆ ಅನುಭವ ಮಂಟಪದಲ್ಲಿ ಶೂನ್ಯಸಿಂಹಾಸನ- ಈ ಪರಿವಿಡಿಯಲ್ಲಿ ಮೂರೂ ನೆಲೆಗೊಂಡಂತೆ ತೋರುತ್ತದೆ. ಈ ಪದ ಬಸವಣ್ಣನವರಂತೆ ಮಿಕ್ಕ ಶರಣರ ಮನೆಗಳನ್ನು ಉಲ್ಲೇಖಿಸುವಲ್ಲಿಯೂ ಪ್ರಯೋಗವಾಗಿದೆ. ಬಸವಣ್ಣನವರ ಮಹಾಮನೆಯಲ್ಲಿ ಅನುಭವ ಮಂಟಪವಿದ್ದರೂ ಆ ಅನುಭವ ಮಂಟಪದಲ್ಲಿ ಶೂನ್ಯ ಪೀಠವನ್ನು ಪ್ರತಿಷ್ಠಾಪಿಸಿದುದೂ ಅದರ ವೈಶಿಷ್ಟ್ಯ.

ಚನ್ನಬಸವಪುರಾಣದಲ್ಲಿಯು ಸಹ ಬಸವಣ್ಣನವರ ವರಗೃಹದಲ್ಲಿಯೇ (ಮಹಾಮನೆಯಲ್ಲಿಯೇ) ಅನುಭವ ಮಂಟಪವಿದ್ದ ವಿಷಯ ಪ್ರಸ್ತಾಪಿತವಾಗಿದೆ. ಈ ಮಾತಿಗೆ ಪುಷ್ಟಿಯನ್ನು ಕೊಡುವಂತೆ ಹಡಪದ ರೇಚಣ್ಣನವರ ಹೆಸರಿನಲ್ಲಿರುವ ಸುದೀರ್ಘವಾದ ವಚನವೊಂದರಲ್ಲಿ ಕಲ್ಯಾಣದಲ್ಲಿದ್ದ ಅನುಭಾವ ಮಂಟಪ, ಮೇರುಮಂಟಪ, ಚರಮಂಟಪ, ಪರಮಾನಂದ ಪ್ರಕಾಶಮಂಟಪ, ಪ್ರಸಾದ ಮಂಟಪ, ಆರಾಧ್ಯ ಮಂಟಪ, ಜಿಂಗಣಿಗಲ ಮಂಟಪಗಳ ಉಲ್ಲೇಖವಿದ್ದ ಆಯಾ ಶರಣರ ಉಲ್ಲೇಖ ಬೇರೆಬೇರೆ ಮಂಟಪಗಳಲ್ಲಿ ಬಂದರೆ, ಚನ್ನಬಸವಣ್ಣನವರ ಪ್ರಸ್ತಾಪ ಅನುಭವ ಮಂಟಪದಲ್ಲಿ ಬರುತ್ತದೆ.

ನೀಲಮ್ಮನವರ ವಚನವೊಂದು–"........ ಚನ್ನಬಸವನೆಂಬ ಪ್ರಸಾದಿಯ ಪಡೆದು, ಅನುಭವ ಮಂಟಪವನು ಮಾಡಿ, ಅನುಭವ ಮೂರ್ತಿಯಾದ ನಮ್ಮ ಬಸವಯ್ಯನು. ಅಜೀವ ಸಂಪಾದಿಸಿ, ಆಚಾರವನಂಗಂಗೊಳಿಸಿ, ಏಳನೂರೆಪ್ಪತ್ತಮರಗಣಂಗಳ ಅನುಭವ ಮೂರ್ತಿಗಳ ಮಾಡಿದಾತ ನಮ್ಮ ಬಸವಯ್ಯನು........" ಎಂದಿದೆ.

ಬಸವಣ್ಣನವರು ಕಲ್ಯಾಣದಲ್ಲ ಅನುಭವ ಮಂಟಪವನ್ನು ಸ್ಥಾಪಿಸಿ ಅಲ್ಲಿ ಶೂನ್ಯ ಪೀಠವನ್ನು ನಿರ್ಮಿಸಿದರು. ಆ ಪೀಠದಲ್ಲಿ ಪ್ರಭುದೇವರನ್ನು ಕುಳ್ಳಿರಿಸಿ ಆರಾಧಿಸಿದರೆಂಬುದು ಅನೇಕ ಆಧಾರಗಳಿಂದ ವ್ಯಕ್ತವಾಗುತ್ತದೆ. ಈ ಶೂನ್ಯ ಪೀಠದ ಪ್ರಥಮ ಗುರುವೆಂದರೆ ಪ್ರಭುದೇವರೇ. ಅಂತೆಯೇ ಆ ಪರಂಪರೆಗೆ "ಪ್ರಭು ಸಂಪ್ರದಾಯ" ಎಂದು ಕರೆಯಲಾಗುತ್ತಿದೆ..... ಪ್ರಭು ಶೂನ್ಯಪೀಠವನ್ನೇರಿ, ಮರಳಿ ಸಂಚಾರಕ್ಕೆ ಹೊರಟಮೇಲೆ ಚನ್ನಬಸವಣ್ಣನವರನ್ನು ಆ ಪೀಠದ ಮೇಲೆ ಕುಳ್ಳಿರಿಸಿದಂತಿದೆ. ಅದರ ಮುಖ್ಯ ಕಾರ್ಯವಾದ ಷಟ್ಸ್ಥಲ ನಿರ್ಣಯ ಹಾಗೂ ಉದ್ಧಾರಗಳು ಶೂನ್ಯಪೀಠಸ್ಥಲದಿಂದಲೇ ನಡೆದಿರಬೇಕು.

ಆದುದರಿಂದ ಚನ್ನಬಸವಣ್ಣನವರನ್ನು ಶೂನ್ಯಪೀಠದ ಎರಡನೇ ಅಧಿಕಾರಿಗಳೆಂದು ಕರೆಯುವ ರೂಢಿಯಿದೆ. ಇದಕ್ಕೆ ಪುಷ್ಟಿಯನ್ನು ಕೊಡುವ ಕೆಲವು ಉಲ್ಲೇಖಗಳು ದೊರೆಯುತ್ತವೆ.

"ಚನ್ನಬಸವೇಶ್ವರ ಸ್ವಾಮಿಗಳು ಕಲ್ಯಾಣದಲ್ಲಿ ಅನುಭಾವ ಮಂಟಪದಲ್ಲಿ ಗರ್ದುಗೆಯ ಮೇಲೆ ಮೂರ್ತ ಮಾಡಿ ಎಲ್ಲ ಶಿವಗಣಂಗಳಿಗೆ ನಿರೂಪಿಸಿದ ಸಕೀಲಂಗಳ ವಚನ" ಎಂಬ ಉಲ್ಲೇಖವೊಂದು ವಚನಗಳ ತಾಳಯೋಲೆ ಪ್ರತಿಯಲ್ಲಿ ದೊರೆಯುತ್ತದೆ. (ವಚನಭಂಡಾರದ ಪ್ರತಿ-ನಂ. 11. ಪುಟ 52A)

ಕೊಂಡೆಯ ಮಂಚಣ್ಣ ಪ್ರಮಥರ ಉತ್ಕರ್ಷವನ್ನೂ ಕಂಡು ಬಿಜ್ಜಳನಲ್ಲಿ ದೂರುವುದನ್ನು ನೋಡಿದರೆ, ಪ್ರಮಥರ ಸಂಘಟನೆ, ಭಕ್ತಿ ಸಾಮ್ರಾಜ್ಯಕ್ಕೆ ದೊರೆತ, ರಾಜವೈಭವಗಳ ಪರಿಚಯವಾಗಿ, ಪ್ರಾಯಃ ಚನ್ನಬಸವಣ್ಣನವರಿಗೆ ಪ್ರಮಥರು ಕಟ್ಟಿದ ಪಟ್ಟ, ಅವರ ಶೂನ್ಯ ಸಿಂಹಾಸನಾರೋಹಣವನ್ನು ಸೂಚಿಸುವಂತಿದೆ. ಶೂನ್ಯಪೀಠವನ್ನೇರಿದ ತಮ್ಮ ಅಂತಃಸ್ಥಿತಿಯನ್ನು ಚನ್ನಬಸವಣ್ಣನವರೇ ತಮ್ಮ ವಚನವೊಂದರಲ್ಲಿ ಹೀಗೆ ವಿವರಿಸಿದ್ದಾರೆ. "ಎನ್ನ ಮನದಲ್ಲಿ ಇದೇ ಪಥವಯ್ಯಾ, ಬೆರಸುವಡೆ। ಪ್ರಾಣದ ಮಥನ ಭಾವನಟ್ಟ ತನುಸ್ಥಿತಿ ಮಱೆದು; । ಭ್ರಾಂತು ಸೂತಕವೆಲ್ಲಾ [ನಿವಾ]ರಿಸಿಹೋದವು **ಶೂನ್ಯ ಸಿಂಹಾಸನದ ಮೇಲೆ !** ಕೂಡಲ ಚನ್ನಸಂಗಾ ನಿಮ್ಮ ಶರಣ ಪ್ರಭೆಯಿಂದ ।" (ಚಬವ. 1461)· ಇದರಿಂದ ಚನ್ನಬಸವಣ್ಣನವರು ಅನುಭವ ಮಂಟಪದಲ್ಲಿ ಶೂನ್ಯ ಪೀಠದ ಅಧಿಕಾರಿಗಳಾಗಿದ್ದರೆಂದು ವ್ಯಕ್ತವಾಗುತ್ತದೆ.1

ಪ್ರಭುದೇವರು ಸಿದ್ಧರಾಮದೇವರನ್ನು ಕಲ್ಯಾಣಕ್ಕೆ ಕರೆದುಕೊಂಡುಬಂದ ಮೊದಲ ಸಂದರ್ಭದಲ್ಲಿ ಶೂನ್ಯಪೀಠಾರೋಹಣದ ಮಾತು ಶೂನ್ಯಸಂಪಾದನೆಯಲ್ಲಾಗಲೀ, ಪ್ರಭುಲಿಂಗಲೀಲೆಯೊಳಗಾಗಿಯಾಗಲೀ ಉಕ್ತವಾಗಿಲ್ಲ. ಆದರೆ ಅದೇ ಎರಡನೆಯ ಸಾರಿ ಪ್ರಭು ಕಲ್ಯಾಣಕ್ಕೆ ಬಂದಾಗ ಶೂನ್ಯಸಿಂಹಾಸನವನ್ನು ಏರುತ್ತಾನೆ. ಅಷ್ಟರಲ್ಲಿ ಅದನ್ನು ರಚಿಸಿ ಹನ್ನೆರಡು ವರ್ಷಗಳಾಗಿವೆ. ಪ್ರಭುದೇವರು ಶೂನ್ಯ ಸಿಂಹಾಸನವನ್ನೇರಿ, ಆರೋಗಣೆಯನ್ನು ಮಾಡಿ, ಶರಣರಿಗೆ ಮನೋಲಯದ ಗತಿಯನ್ನು ಬೋಧಿಸಿ ಹೋಗುವಷ್ಟರಲ್ಲಿ ಕಲ್ಯಾಣದ ವಿಪ್ಲವವೇ ತೋರಿಬರುತ್ತದೆ2. ಮುಕ್ತಿಕಂಠಾಭರಣದಲ್ಲಿ ಬಸವರಾಜರು ಗದಗದನೆ ನಡುಗಿ ನಡುಗದಂತೆ ಸಾಷ್ಟಾಂಗವಿಕ್ಕಿ ಎದ್ದು ಕರಾಂಜಲಿತರಾಗಿ ನುಡಿದ ೧೧೭ ನೆಯ ವಚನ ಈ ವಿಪ್ಲವದ ಸಂಕೇತವಾಗಿದೆ. ಪ್ರಾಯಃ ಇದನ್ನರಿತ ಪ್ರಭುದೇವರೇ ಚನ್ನಬಸವಣ್ಣನವರನ್ನು ಕರೆಸಿ ಮುಂದಿನ ವ್ಯವಸ್ಥೆಯನ್ನು ಮಾಡಿದಂತೆ ತೋರುತ್ತದೆ.

ಅಲ್ಲಮಪ್ರಭು ದೇವರ ವಚನವೊಂದು ಶೂನ್ಯಸಿಂಹಾಸನದ ಬಗೆಗಿನ ಕಲ್ಪನೆಯನ್ನು ಸ್ಪಷ್ಟವಾಗಿ ನೀಡುತ್ತದೆ. ಈ ವಚನದಲ್ಲಿ ಬರುವ ಮಾತುಗಳನ್ನೇ ಮುಂದೆ ಬಂದ ಷಟ್ಪದಿಕಾರರೂ ಇತರ ಕವಿಗಳೂ ಬಳಸಿರುವುದನ್ನು ಕಾಣುತ್ತೇವೆ: "**ಅಚಲಸಿಂಹಾಸನವನಿಕ್ಕಿ ನಿಶ್ಚಲ ಮಂಟಪವು ಸಂಚದೋವರಿಯೊಳಗೆ,** ರುಚಿಗಳೆಲ್ಲವನು ನಿಲಿಸಿ, ಪಂಚರತ್ನದ ಶಿಖರ, ಮಿಂಚುಕೊಂಡಿಯ ಕಳಸ, ವಚನ ಚಿತ್ರದ ಪುಷ್ಪದ ರಚನೆಯೇ ನವರಂಗದಲ್ಲಿ ಖೇಚರಾದಿಯ ಗಮನ ವಿಚಾರಪರ ನುಂಗಿ ಗುಹೇಶ್ವರನಿಂದ ಸಚರಾಚರವ ಮಿಂಚಿತ್ತು." (ಪ್ರ. ದೇ. ವ. 23).

"ರುಚಿರ ಮಾಣಿಕ್ಯ ಪ್ರಭಾಮಯ । ನಿಚಿತಮಾಗಿರ್ದ ಚಲಕಾಂಚನ।
ರಚಿತ **ಘನಸಿಂಹಾಸನವನೆ**ಯ್ತಂದು ತಾನೇಱ್ ॥ ಸುಚಿದನೂನ
ಪ್ರಭುವಿರಲು ತನು ।
ರುಚಿ ವಿಶದದಿಂದಾವರಿಸಿ ದಿಗು । ಪ್ರಚಯದೊಳು ಥಳಥಳಿಸಿ
ಬೆಳಗಿದುದೇನ ಬಣ್ಣಿಸುವೆ" ॥ ೮–೧೦ ॥
—ಭೀಮಕವಿಯ ಬಸವ ಪುರಾಣ.

"ಅನುಗೊಳಿಸಿದನು **ಶೂನ್ಯಸಿಂಹಾ । ಸನವೆಂ**ದದಕಿಟ್ಟು ಹೆಸರನು ।
ವಿನುತ ಪಶ್ಚಿಮ ಮಾರ್ಗದಲಿ ತಾ ಕಂಡುದೆಲ್ಲವನು ॥ ಕನಕ ಮರಕತ
ಮುಖ್ಯ ಮಣಿಗಳ ।
ಘನತರದ ಕೇವಣದ ಲಹರಿಯ । ಮಿನುಗಿ ಮಿಸುಗುವ ವಿಮಲ
ಪೀಠವ ಬಸವ ನಿರ್ಮಿಸಿದ ॥"
[ಗತಿ–೧, ಪದ್ಯ ೯, ಪ್ರಭುಲಿಂಗಲೀಲೆ]

ಪ್ರಭುದೇವರ ವಚನವು ಬಸವಣ್ಣನವರ ಕಾಲದಲ್ಲಿಯೇ ಬರೆಯಲ್ಪಟ್ಟಪರಿಂದ ಅಲ್ಲಮನು ಸ್ಥೂಲ ಶೂನ್ಯಸಿಂಹಾಸನವನ್ನು ಕಣ್ಣಾರೆ ನೋಡಿದ ಬಳಿಕ ಈ ಮೇಲಿನ ಬೆಡಗಿನ ವಚನವನ್ನು ರಚಿಸಿದಂತೆ ಭಾಸವಾಗುತ್ತದೆ. ಈ ವಚನದಲ್ಲಿ ಬಂದಿರುವ ಶಬ್ದಗಳನ್ನೇ ಬಸವ ಪುರಾಣ, ಪ್ರಭುಲಿಂಗಲೀಲೆಯ ಕರ್ತೃಗಳೂ ಅನುಕರಿಸಿದ್ದಾರೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಉಭಯ ಪಕ್ಷಗಳಲ್ಲಿಯೂ ಪ್ರಭುದೇವರ ವಚನದಲ್ಲಿರುವ ಸಿಂಹಾಸನದ ಚಿತ್ರವು ಹನ್ನೆರಡನೆಯ ಶತಮಾನದ ಶೂನ್ಯಸಿಂಹಾಸನದ ಪ್ರತಿರೂಪವೆಂದು ವಿಶದವಾಗುತ್ತದೆ. ಮೇಲ್ಕಂಡ ಯಥೋಕ್ತಿಗಳಲ್ಲಿ ಇಷ್ಟು ಸ್ಪಷ್ಟವಾದ ಶಬ್ದ ಸಾಮ್ಯವಿದ್ದರೂ ಬಸವಪುರಾಣದಲ್ಲಿ ಶೂನ್ಯವೆಂಬ ಪದವು ಬಂದಿರುವುದಿಲ್ಲವಾದುದರಿಂದ ಅದು ಚಾಮರಸನ ಶೂನ್ಯಸಿಂಹಾಸನವಲ್ಲವೆಂದು ಕೆಲವರು ಹೇಳಬಹುದು.

ಪ್ರಭುಲಿಂಗಲೀಲೆಯಲ್ಲಿ ಹೇಳಿರುವ ಶೂನ್ಯಸಿಂಹಾಸನವನ್ನು ಏರಲಿಕ್ಕೆ ಯಾರಿಂದಲೂ ಸಾಧ್ಯವಿಲ್ಲದ್ದರಿಂದ ಎಲ್ಲರೂ ಅದನ್ನು ಬೆರಗಿನಿಂದ ದೂರದಲ್ಲಿಯೇ ನಿಂತು ನೋಡುತ್ತಿದ್ದರೆಂದು ವರ್ಣನೆಯು ಬರುತ್ತದೆ. ಹಾವಿನ **ಹುತ್ತವು** ಇತರ ಜಂತುಗಳಿಗೆ **ಸೇರಲಸಾಧ್ಯ**ವಾಗುವಂತೆ ಅದು ರಚಿಸಲ್ಪಟ್ಟಿತ್ತೆಂದು ಪ್ರಭುಲಿಂಗಲೀಲೆಯಲ್ಲಿ ಹೇಳಿದರೆ, ಹರಿತವಾದ ಕತ್ತಿಯ ಅಲಗುಗಳಿಂದ ರಚಿಸಲ್ಪಟ್ಟಿತ್ತೆಂದು ಪ್ರಭುದೇವರ ಪುರಾಣದಲ್ಲಿ ಹೇಳಿದೆ (೯–೮). ಈ ಉಭಯ ವರ್ಣನೆಗಳಿಂದ ಅದು ಸಾಮಾನ್ಯವಾದೊಂದು ಸಿಂಹಾಸನವಾಗಿರದೆ, ಪ್ರಭುದೇವರಿಗಾಗಿ ಮೀಸಲಿರಿಸಿದ ಒಂದು ಅಸಾಧ್ಯ ಸಿಂಹಾಸನವಾಗಿತ್ತೆಂದು ವ್ಯಕ್ತವಾಗುತ್ತದೆ. ಇದು 'ಏರು' ಎಂಬ ಪದದಿಂದ ಮತ್ತಷ್ಟು

1. ಅನುಭವ ಮಂಟಪದ ಐತಿಹಾಸಿಕತೆ-ಚ. ಉತ್ತಂಗಿ, 1951
2. ಷಟ್ಸ್ಥಲ ಪ್ರಭೆ–ಡಾ॥ ಆರ್. ಸಿ. ಹಿರೇಮಠ, 1966

ಮೆಂದಟ್ಟಾಗುತ್ತದೆ. ಸಾಮಾನ್ಯವಾಗಿ ಜಂಗಮರನ್ನು ಸನ್ಮಾನದಿಂದ ಕುಳ್ಳಿರಿಸುತ್ತಿದ್ದ ಸಿಂಹಾಸನವು ಇದಲ್ಲದ್ದರಿಂದ ಚಾಮರಸನು ತನ್ನ ಪ್ರಭುಲಿಂಗಲೀಲೆಯಲ್ಲಿ 'ಶೂನ್ಯಸಿಂಹಾಸನವನೇರಿದ ಗತಿ' ಎಂದು ಹೇಳಿದ್ದಾನಲ್ಲದೆ, ಪ್ರಭುದೇವರನ್ನು 'ಕುಳ್ಳಿರಿಸಿದ' ಗತಿ ಎಂದು ಹೇಳಿಲ್ಲ. ಬಸವ ಪುರಾಣದಲ್ಲಿಯೂ 'ಏರು', 'ಕುಳ್ಳಿರು' ಎಂಬೀ ಪದಗಳಲ್ಲಿರುವ ವ್ಯತ್ಯಾಸವನ್ನು ಲಕ್ಷಿಸಿದಂತೆ ಕಾಣುವುದಿಲ್ಲ. ಇದಲ್ಲದೆ ಪ್ರಭುದೇವರು ಶೂನ್ಯ ಸಿಂಹಾಸನವೇರುವ ಕಾಲಕ್ಕೆ 'ಮುಕ್ತಕೇಶಿ'ಯಾಗಿದ್ದರೆಂದು ಬಸವ ಪುರಾಣದಲ್ಲಿ ಹೇಳಿದೆ (೮—೫). ಇದೇ ಅಭಿಪ್ರಾಯವನ್ನು ಹೇಳುವ ಮಡಿವಾಳ ಮಾಚಯ್ಯನ ವಚನವನ್ನು ನೋಡಬಹುದು—"ಬಲಕ್ಕೆ ಮುರಿದನು ಪೌಳಿಯ ಉತ್ತರದ ಬಾಗಿಲಲ್ಲಿ ತಲೆವಾಗಿ ಹೊಕ್ಕು ಗತಿಯ ಪವಣದಲಿ ಧವಳಾರಮಪ್ಪ ಪಶ್ಚಿಮದ್ವಾರದಿಂ ತ್ರಿವಿಧಿ ಗತಿಯ '**ಶೂನ್ಯಸಿಂಹಾಸನ**'ದ ಮೇಲೆ 'ಮುಕ್ತಕೇಶ'ದ ಪರಮ ಗುರುರಾಜನೇರಿದ ನೋಡಾ ಕಲಿದೇವರ ದೇವಾ." ಈ ವಚನದಲ್ಲಿ ಬಂದಿರುವ 'ಶೂನ್ಯಸಿಂಹಾಸನ', 'ಮುಕ್ತಕೇಶ'ವೆಂಬ ಪದಗಳು ಲಕ್ಷಿಸತಕ್ಕವಾಗಿವೆ. ಮೇಲೆ ಹೇಳಿದ ವಿವರಣೆಗಳಿಂದ ಶೂನ್ಯಸಿಂಹಾಸನವು ವಿಶಿಷ್ಟ ಹಾಗೂ ಅಸಾಧ್ಯವಾದ ರಚನೆಯಾಗಿತ್ತೆಂದೂ ಇವೆಲ್ಲ ವರ್ಣನೆಗಳಿಗೆ ಬಸವ ಪುರಾಣವೇ ಮೂಲಾಧಾರವಾಗಿರುವುದೆಂದೂ ವ್ಯಕ್ತವಾಗುತ್ತದೆ.

ಬಸವಣ್ಣನವರ ಭಕ್ತಿಯಶವನ್ನು ಕೇಳಿ ಅಲ್ಲಮನು ಕಲ್ಯಾಣಕ್ಕೆ ಬಂದ ಪ್ರಸ್ತಾಪವು ಬಸವಪುರಾಣದ ಎಂಟನೆಯ ಸಂಧಿಯಲ್ಲಿ ವಿಸ್ತಾರವಾಗಿ ಬಂದಿದೆ. ಬಸವಣ್ಣನವರು ಶೂನ್ಯಸಿಂಹಾಸನವನ್ನು ರಚಿಸಿ ಅದನ್ನು ಯೋಗ್ಯನಾದ ಪುರುಷನಿಂದ ಅಲಂಕರಿಸಬೇಕೆಂದು ಬಹುಕಾಲ (ಅಂದರೆ ಸು. 12 ವರ್ಷಗಳ ಕಾಲ) ಕಾದುಕೊಂಡಿರುತ್ತಾರೆ. ಇದಕ್ಕೆ ಪೂರಕವಾಗಿ ಅವರ ಸಮಕಾಲೀನ ಶರಣನ ವಚನವೊಂದು ಹೀಗಿದೆ—"ಅಂಗದ ಪ್ರಕೃತಿಯ ಲಿಂಗದಲ್ಲಿ ಅಳಿದು, ಮನದ ವಿಕೃತಿಯ ಅರಿವಿನಲ್ಲಿ ಅಳಿದು, ಜೀವಭ್ರಾಂತಿಯ ನಿಶ್ಚಿಂತ ಪದದಲ್ಲಿ ಅಳಿದು, ನಿಶ್ಶೂನ್ಯ ನಿರಾಮಯವಾದ ನಿವಾಸಕ್ಕೆ ಸದಾಚಾರವೆಂಬ ಕೆಸರುಗಲ್ಲನಿಕ್ಕಿ, ಸರ್ವಾಚಾರ ಸಂಪತ್ತೆಂಬ ಹೂಗಲ್ಲ ಮುಚ್ಚಿ, ಅಂತಃಕರಣ ಚತುಷ್ಟಯವೆಂಬ ನಾಲ್ಕು ಕಂಭಗಳಂ ನಿಲಿಸಿ, ಜ್ಞಾತೃವೆಂಬ ಭಿತ್ತಿಯ ಮೇಲೆ ಜ್ಞಾನವೆಂಬ ಶಿಖರಿಯನಸುಗೊಳಿಸಿ ಜ್ಞೇಯವೆಂಬ **ಹೊನ್ನ ಕಳಶವಂ ಶೃಂಗಾರ**ವಮಂ ಮಾಡಿ, ಬ್ರಹ್ಮರಂಧ್ರದ ಊರ್ಧ್ವದ್ವಾರವೆಂಬ ನಿಜದ್ವಾರವಂ ಮಾಡಿ ನಿರ್ವಯಲಲ್ಲಿ ನೆಲೆಗೊಳಿಸಿ ಬಸವ ಪ್ರಿಯ ಕೂಡಲ ಚನ್ನಸಂಗಯ್ಯನ ಶರಣ ಪ್ರಭುದೇವರ ಬರವಿಂಗೆ **ಶೂನ್ಯಸಿಂಹಾಸನವ** ರಚಿಸಿ, ಬರವ ಹಾರುತ್ತಿರ್ದನೆನ್ನ ಪರಮಗುರು ಬಸವಣ್ಣನು." ಹೀಗೆ ಬಸವಣ್ಣನವರು ಅಲ್ಲಮನಿಗಾಗಿ ರಚಿಸಿದ 'ಶೂನ್ಯಸಿಂಹಾಸನ'ದ ವರ್ಣನೆ ಬಂದಿದೆ. ಹೀಗೆ ಬಸವಣ್ಣನವರು ಶೂನ್ಯಸಿಂಹಾಸನವನ್ನು ರಚಿಸಿಕೊಂಡು ಪ್ರಭುದೇವರ ಬರವಿಗಾಗಿ ಕಾಯುತ್ತಿರುವ ಸಮಯಕ್ಕೆ ಅಲ್ಲಮಪ್ರಭುಗಳು ಬಂದು ಯಾರಿಂದಲೂ ಏರಲಾಗದ ಆ ಶೂನ್ಯಸಿಂಹಾಸನವನ್ನು ನಿರ್ದೇಹಿಯಾದುದರಿಂದ ಸಹಜವಾಗಿ ಏರಿಬಿಡುತ್ತಾರೆ. ಇದನ್ನು ನೋಡಿ ಬಸವಣ್ಣನವರು ಬೆರಗಾಗಿ ಮೈಮರೆದು ನಿಂತುಕೊಳ್ಳಲು ಆರೋಗಣೆಗಾಗಿ ಬಂದಿದ್ದ ಜಂಗಮವೃಂದವೆಲ್ಲವೂ ಸಂತಾಪಗೊಂಡು ಬಸವಾಲಯದಿಂದ ಹಿಂತಿರುಗಿ ಹೋಗಿಬಿಡುತ್ತದೆ. ಆಗ ಅವರಿಗಾಗಿ ಸಿದ್ಧಪಡಿಸಿದ್ದ ಭಕ್ಷ್ಯ-ಭೋಜ್ಯಗಳೆಲ್ಲವೂ ಪ್ರಭುಗಳಿಗೆ ಸಲ್ಲಿಸಲ್ಪಡುತ್ತವೆ. ಆದರೆ ಅವರ ಹಸಿವೇ ಅಡಗುವುದಿಲ್ಲ. ಆಗ ಬಸವರಾಜರು ತಮ್ಮನ್ನೇ ಸಮರ್ಪಿಸಲು ಸಿದ್ಧರಾಗುತ್ತಾರೆ. ಇದಾದ ಬಳಿಕ ಅಲ್ಲಮರಿಗೂ ಸಕಲ ಜಂಗಮರಿಗೂ ಮಹಾ ತೃಪ್ತಿಯುಂಟಾಗುತ್ತದೆ. ಬಸವಪುರಾಣದಲ್ಲಿ ಬಂದಿರುವ ಈ ಕಥೆಯು ಅದೇ ಕ್ರಮವನ್ನನುಸರಿಸಿ ಪ್ರಭುಲಿಂಗಲೀಲೆಯಲ್ಲಿಯೂ ಬಂದಿದೆ. ಉಭಯ ಗ್ರಂಥಗಳಲ್ಲಿ ಒಂದೇ ಕಥಾ ಸಂದರ್ಭವು ಒಂದೇ ಬಾರಿ ಒಂದೇ ಕ್ರಮದಿಂದ ಒಂದೇ ರೀತಿಯಲ್ಲಿ ಬಂದಿರುವುದನ್ನು ನೋಡಿದರೆ ಬಸವಪುರಾಣದಲ್ಲಿ ಹೇಳಲ್ಪಟ್ಟಿರುವ ಆ ಸಿಂಹಾಸನವು ಶೂನ್ಯಸಿಂಹಾಸನವನ್ನಲ್ಲದೆ ಬೇರೊಂದು ಸಿಂಹಾಸನವಲ್ಲವೆಂದು ಖಚಿತವಾಗುತ್ತದೆ. ಇವೆಲ್ಲಕ್ಕೂ ಮೂಲವಾಗಿ ಮೇಲೆ ಹೇಳಿರುವ ಸಮಕಾಲೀನ ವಚನಗಳಲ್ಲಿಯೇ ಈ ಮಾತು ಬಂದಿರುವುದರಿಂದ ಬಸವಣ್ಣನವರ ಮಹಮನೆಯಲ್ಲಿ ಅನುಭವ ಮಂಟಪ, ಅದರಲ್ಲಿ ಶೂನ್ಯಸಿಂಹಾಸನ ಸ್ಥಾಪಿತವಾಗಿದ್ದುವೆಂಬುದು ನಿಚ್ಚಳವಾಗಿ ತಿಳಿದುಬರುತ್ತದೆ. ಈ ಶೂನ್ಯಪೀಠಕ್ಕೆ ಪ್ರಭುದೇವರು ಮೊದಲ ಪಟ್ಟಾಧ್ಯಕ್ಷರೆಂದೂ, ಆದುದರಿಂದ ಈ ಶೂನ್ಯಪೀಠ ಪರಂಪರೆಗೆ ಪ್ರಭುಸಂಪ್ರದಾಯವೆಂದೂ, ಎರಡನೆಯ ಪಟ್ಟಾಧ್ಯಕ್ಷರು ಚನ್ನಬಸವಣ್ಣನವರೆಂದೂ ಹಿಂದೆಯೇ ನೋಡಿದ್ದೇವೆ.

ಬಸವಣ್ಣನವರ ಅಂತರಂಗದ ಹಂಬಲ ಹಾಗೂ ದೂರದೃಷ್ಟಿಯ ಫಲವಾಗಿ ರಚಿತವಾದ ಶೂನ್ಯಸಿಂಹಾಸನದ ಪ್ರಥಮ ಪಟ್ಟಾಧ್ಯಕ್ಷರಾಗಿ ಪ್ರಭುದೇವರು ಮೂರ್ತಮಾಡಿದರು. ಉತ್ತರ ವಾತುಲಾಗಮದ ಪ್ರಕಾರ ಇವರನ್ನು ಶಿವನ ಹಣೆಯಿಂದ ಉದ್ಭವಿಸಿದ 'ಚರಲಿಂಗ'ದ ಅವತಾರವೆಂದು ಹೇಳಲಾಗಿದೆ. ಇವರೇ ಬೇರೆ ಬೇರೆ ಯುಗದಲ್ಲಿ ಬೇರೆ ಬೇರೆ ಹೆಸರಿನಿಂದ ಅವತರಿಸಿದರೆಂದೂ ಕಲಿಯುಗದಲ್ಲಿ ಪ್ರಭುದೇವರೆಂಬ ಹೆಸರಿನಿಂದ ಅವತರಿಸಿದರೆಂದೂ ಹೇಳಲಾಗಿದೆ. ಶಿವನು ಭಕ್ತಾಧೀನನೆಂದು ಪ್ರಸಿದ್ಧನಾಗಿರುವುದರಿಂದ ಶಿವನ ಅವತಾರವೇ ಆದ ಪ್ರಭುದೇವರು ಭಕ್ತೋದ್ಧಾರಕ್ಕೆಂದು ಧರೆಯಲ್ಲಿ ಸಂಚರಿಸುತ್ತ ಆಸನ್ನಭವಿಗಳನ್ನು ಉದ್ಧರಿಸುತ್ತ ಕಲ್ಯಾಣಕ್ಕೆ ಬಂದು ಲಿಂಗಾನುಸಂಧಾನದ ಮೂಲಕ ಆತ್ಮಸಾಕ್ಷಾತ್ಕಾರದ ಮಾರ್ಗವನ್ನು ಬೋಧಿಸುತ್ತ ಶೂನ್ಯಸಿಂಹಾಸನವನ್ನೇರುತ್ತಾರೆ. ಕೆಲಕಾಲ ಮಾತ್ರ ಅಲ್ಲಿ ತಂಗಿದ್ದು ಷಟ್ಸ್ಥಲ ಧರ್ಮಬೋಧೆ ಮಾಡಿ ಅನಂತರ ಬಸವಣ್ಣನವರ ಅಳಿಯ ಚನ್ನಬಸವಣ್ಣನವರಿಗೆ ಶೂನ್ಯಪಟ್ಟವನ್ನು ಕಟ್ಟಿ, ಷಟ್ಸ್ಥಲ ಧರ್ಮಪ್ರಚಾರದಲ್ಲಿ ಕಲ್ಯಾಣದ ಶರಣರೊಂದಿಗೆ ಸಹಕರಿಸಿ ಜಂಗಮಸ್ವರೂಪಿಯಾದ ಅಲ್ಲಮಪ್ರಭುದೇವರು ಶೀಘ್ರದಲ್ಲಿಯೇ ನಡೆಯಲಿರುವ ಕಲ್ಯಾಣದ ವಿಪ್ಲವವನ್ನು ಮನಗಂಡು ಮುಂದಿನ ವ್ಯವಸ್ಥೆಯನ್ನು ನಿರ್ಣಯಿಸಿ ಆ ಕಾರ್ಯವನ್ನು ಚನ್ನಬಸವಣ್ಣನವರಿಗೆ ನೇಮಿಸಿ ಶ್ರೀಶೈಲದ ಕದಳಿಗೆ ಹೋಗಿ ಅಲ್ಲಿ ಬಯಲಾಗುತ್ತಾರೆ.

ಪ್ರಭುದೇವರಾದಿಯಾಗಿ ಪ್ರಮಾಣಿಸಿ ಚನ್ನಬಸವಣ್ಣನವರು [illegible] ಪ್ರಮಥರ [illegible] ಷಟ್ಸ್ಥಲ ಸಿದ್ಧಾಂತವನ್ನು ಸ್ಪಷ್ಟವಾಗಿ ನಿರೂಪಿಸಿ, ಪ್ರಮಥರಿಗೆ ಬೋಧಿಸಿ 'ಷಟ್ಸ್ಥಲ ಬ್ರಹ್ಮಿ' ಎನಿಸುತ್ತಾರೆ. ಪರಮೇಶನ ಭಕ್ತಿಯೇ ಪ್ರಾಣವಾಗಿರುವ ನಾಗಾಂಬಿಕೆ-ಶಿವಸ್ವಾಮಿಯವರ ಪುತ್ರರಾದ ಚನ್ನಬಸವಣ್ಣನವರು ಬಸವಣ್ಣನವರ ಮಹಮನೆಯಲ್ಲಿ ಜ್ಞಾನ ಪ್ರಭೆಯಾಗಿ ಸಿಡಿಲ ಮರಿಯಾಗಿ ಸೋದರಮಾವ ಬಸವಣ್ಣನವರ ಮಹತ್ಕಾರ್ಯದಲ್ಲಿ ಮಹತ್ ಪಾತ್ರವನ್ನು ವಹಿಸುತ್ತಾರೆ. ಪ್ರಮಥರನ್ನೆಲ್ಲ ಸಂಘಟಿಸಿ ದಿವ್ಯವೂ ಭವ್ಯವೂ ಆದ ನೂತನ ಸಮಾಜ ನಿರ್ಮಾಣ ಕಾರ್ಯದಲ್ಲಿ ಸಕ್ರಿಯ ಪಾತ್ರ ವಹಿಸುತ್ತಾರೆ. ಆದರೆ ಬಸವಣ್ಣನವರು ಕಪ್ಪಡಿಯ ಸಂಗಮನಾಥನಲ್ಲಿ ಐಕ್ಯವಾದ ಕೆಲವೇ ದಿನಗಳಲ್ಲಿ ಕಲ್ಯಾಣದಲ್ಲಿ ಉಂಟಾದ ವಿಪ್ಲವದಲ್ಲಿ ಅಲ್ಲಿ ನಿಲ್ಲದೆ ಉಳುವೆಯ ಕಡೆಗೆ ಹೊರಟು ಮಾರ್ಗಮಧ್ಯದಲ್ಲಿ ಎದುರಾದ ಬಿಜ್ಜಳನ ಅಳಿಯನ ಸೇನೆಯ ಉಪಟಳವನ್ನು ಎದುರಿಸಿ ಉಳುವೆಯನ್ನು ತಲುಪಿ ಹೊನ್ನರಳಿ ಮರಕ್ಕೆ ಉಯ್ಯಾಲೆಯನ್ನು ಕಟ್ಟಿ ಅಲ್ಲಿಯೇ ಬಯಲಾಗುತ್ತಾರೆ. ಇದಕ್ಕೆ ಮುನ್ನ ಚನ್ನಬಸವಣ್ಣನವರು ಶೂನ್ಯಪೀಠದ ಪ್ರಭಾವ ಮತ್ತು ಷಟ್ಸ್ಥಲ ಧರ್ಮ ಬೋಧೆಯ ವಿಷಯದಲ್ಲಿ ದೀರ್ಘವಾಗಿಯೇ ಪ್ರಮಥರೊಂದಿಗೆ ಪ್ರಸ್ತಾಪಿಸಿ ಮುಂದಿನ ವ್ಯವಸ್ಥೆಯನ್ನು ಮಾಡಿರಲೇಬೇಕು. ಆದರೆ ಅದರ ಸ್ಪಷ್ಟವಾದ, ಸ್ಥಿರವಾದ ವಿವರಗಳು ದೊರೆಯದೇ ಇದ್ದರೂ ಆಯಾ ಪ್ರಮಥರ ನಿಲವಿಗನುಗುಣವಾಗಿ ಉಳುವೆ, ಶ್ರೀಶೈಲ, ಸೊಲ್ಲಾಪುರ, ಓರಂಗಲ್ಲು, ಐಹೊಳೆ, ಬನವಾಸಿ, ಬೇಲೂರು, ಹಂಪೆ, ಪುಲಿಗೆರೆ, ಹರದನಹಳ್ಳಿ ಮುಂತಾದ ಕಡೆಗಳಲ್ಲಿ ಇದ್ದಂತೆ ತೋರುತ್ತದೆ. ಮೊದಲನೆಯ ಶೂನ್ಯಪೀಠ ಕಲ್ಯಾಣದಲ್ಲಿ ನಿರ್ಮಾಣವಾಯಿತು. ಅನಂತರ ಮುರಿಗಿಸ್ವಾಮಿಗಳು ಚಿತ್ರದುರ್ಗದಲ್ಲಿ ಚಿನ್ಮೂಲಾದ್ರಿ ಮಠವನ್ನು ಸ್ಥಾಪಿಸುವತನಕ ಸ್ಥಿರವಾದ ಪರಂಪರೆಗಳ ಶೂನ್ಯಪೀಠವಾಗಲಿ ಸ್ಥಾಪಿತವಾದಂತೆ ಕಂಡು ಬರುವುದಿಲ್ಲ. ೧೧೯೦ ರ ವೇಳೆಗೆ ಚನ್ನಬಸವಣ್ಣನವರ ಪಟ್ಟವಾದಮೇಲೆ ೧೫ನೇ ಶತಮಾನದ ಕೊನೆಯ ಕಾಲಕ್ಕೆ ಬರುವ ವೇಳೆಗೆ ಸುಮಾರು ಮೂರು ಶತಮಾನಗಳ ಕಾಲ ಈ ನಿರಂಜನ ಪಟ್ಟವು ಹೇಗೆ ಮುಂದುವರಿಯಿತೆಂಬುದು ತೀರ ಅಸ್ಪಷ್ಟ. ಆದರೆ ನಿರಂಜನ ವಂಶರತ್ನಾಕರದ ಪ್ರಕಾರ ಶೂನ್ಯಪೀಠದ ಅಧ್ಯಕ್ಷರ ವಿವರ ಈ ರೀತಿ ಇದೆ: 1) ಅಲ್ಲಮ ಪ್ರಭು, 2) ಚನ್ನಬಸವೇಶ್ವರ, 3) ಸಿದ್ಧರಾಮೇಶ್ವರ, 4) ಅನಾದಿ ಗಣನಾಥ, 5) ಆದಿ ಗಣೇಶ್ವರ, 6) ನಿರಂಜನ ಗಣೇಶ್ವರ, 7) ನಿರಂಜನಸ್ವಾಮಿ, 8) ಜ್ಞಾನದ ಸ್ವಾಮಿ, 9) ಆತ್ಮ ಗಣೇಶ್ವರ, 10) ಅಧ್ಯಾತ್ಮ ಗಣಾನಾಥ, 11) ರುದ್ರಮುನಿಸ್ವಾಮಿ, 12) ಬಸವ ಪ್ರಭುಸ್ವಾಮಿ, 13) ಆದಿಲಿಂಗಸ್ವಾಮಿ, 14) ಚನ್ನವೀರಸ್ವಾಮಿ, 15) ಗೋಸಲಸಿದ್ಧೇಶ್ವರಸ್ವಾಮಿ, 16) ಶಂಕರಾಚಾರ್ಯ ಸ್ವಾಮಿ, 17) ದಿವ್ಯಲಿಂಗೇಶ್ವರಸ್ವಾಮಿ, 18) ಚನ್ನಬಸವರಾಜೇಂದ್ರ (ತೋಂಟದ ಸಿದ್ಧಲಿಂಗ), 19) ನಿರಕ್ಷರ ಜೋಳಬಸವೇಶ್ವರ, 20) ಸಿದ್ಧವೀರೇಶ ಸ್ವಾಮಿಗಳು, 21) ಗುರುಸಿದ್ಧ ದೇಶಿಕೇಂದ್ರ, 22) ಗಗನವಾರ್ಯ, 23) ಸಿದ್ಧವೀರಸ್ವಾಮಿ, 24) ನೋಡ ಸಿದ್ಧಲಿಂಗ ದೇಶಿಕೇಂದ್ರ ಮತ್ತು 25) ಮುರುಘಾಸ್ವಾಮಿ.

ಆದರೆ ಮಹಾದೇವ ಕವಿಯ ಮಹಾಲಿಂಗೇಂದ್ರ ವಿಜಯದಲ್ಲಿ ಶೂನ್ಯ ಪೀಠದ ಪರಂಪರೆ ಇದಕ್ಕಿಂತ ಸ್ವಲ್ಪ ಭಿನ್ನವಾಗಿದೆ. ಮಹಾದೇವನ ಪ್ರಕಾರ ಅಲ್ಲಮಪ್ರಭು ಶೂನ್ಯಪೀಠದ ಪ್ರವರ್ತಕರೇ ಹೊರತು ಪೀಠಾಧ್ಯಕ್ಷರಾಗಿರಲಿಲ್ಲವೆಂದೂ, ಚನ್ನಬಸವಣ್ಣನವರೇ ಪ್ರಥಮ ಪಟ್ಟಾಧ್ಯಕ್ಷರೆಂದೂ ಹೇಳಿದೆ. ಅವರಾದಮೇಲೆ ಎರಡನೆಯ ಪಟ್ಟಾಧ್ಯಕ್ಷರಾದ ತೋಂಟದ ಸಿದ್ಧಲಿಂಗ ಶಿವಯೋಗಿಗಳವರೆಗೆ ಮುಂದುವರಿದ ಶೂನ್ಯಪೀಠ ಪರಂಪರೆ ಅಸ್ಪಷ್ಟವಾಗಿದೆ. ಎರಡನೆಯ ಪೀಠಾಧ್ಯಕ್ಷರಾದ ತೋಂಟದ ಸಿದ್ಧಲಿಂಗ ಶಿವಯೋಗಿಗಳು ಎಂಟು ವರ್ಷದ ಬಾಲಕನ ರೂಪವನ್ನು ಧರಿಸಿ ಧರೆಗಿಳಿದು ಹರದನಹಳ್ಳಿಯ ಗೋಸಲ ಚನ್ನಬಸವೇಶ್ವರರ ಮಠಕ್ಕೆ ಬಂದು ಅವರ ಪದಕಮಲಕ್ಕೆರಗಿ, ಅವರನ್ನು ಒಪ್ಪಿಸಿ ಅವರಿಂದ ಶಿವದೀಕ್ಷೆ ಪಡೆದು ಗುರುಕರಕಮಲ ಸಂಜಾತರಾಗಿ ಅಲ್ಲಿಯೇ ಇದ್ದು ನಾನಾ ಪವಾಡಗಳನ್ನು ಮೆರೆದು, ಗುರುಗಳ ಅಪ್ಪಣೆಯಂತೆ ನಾಡಿನ ಬಹುಭಾಗಗಳಲ್ಲಿ ಸಂಚರಿಸಿ, ಅಲ್ಲಲ್ಲಿ ನಾನಾ ಮಹಿಮೆಗಳನ್ನು ಮೆರೆಯುತ್ತ, ಪರವಾದಿಗಳನ್ನು ತರ್ಕದಲ್ಲಿ ಗೆದ್ದು ಸಮಭಾವವನ್ನು ನೆಲೆಗೊಳಿಸಿ, ಷಟ್ಸ್ಥಲವನ್ನು ಬೋಧಿಸುತ್ತ ಕಗ್ಗೆರೆಯ ವನದಲ್ಲಿ ಶಿವಯೋಗ ಸಮಾಧಿಗೆ ಸಂದು, ಜನರನ್ನು ಆಕರ್ಷಿಸಿ ಎಡೆಯೂರಿನಲ್ಲಿ ಚಟ್ಟನದೇವರು ಕಟ್ಟಿಸಿದ ಕಲ್ಲುಮಟದಲ್ಲಿ ನಿರ್ವಿಕಲ್ಪ ಸಮಾಧಿಯಲ್ಲಿ ಮುಳುಗುತ್ತಾರೆ. ಪ್ರಭುದೇವರಾದಮೇಲೆ ೧೫ನೇ ಶತಮಾನದಲ್ಲಿ ಮತ್ತೆ ಪ್ರಭುಗಳ ಅಪರಾವತಾರಿಯೆಂದೇ ಹೆಸರಾಗಿ, ಷಟ್ಸ್ಥಲವನುದ್ಧರಿಸಿದ ಮಹಾಶಿವಯೋಗಿಗಳು, ತೋಂಟದ ಸಿದ್ಧಲಿಂಗ ಶಿವಯೋಗಿಗಳು. 12 ನೇ ಶತಮಾನದಲ್ಲಿ ಅಲ್ಲಮ-ಬಸವಣ್ಣ-ಚನ್ನಬಸವಣ್ಣನವರ ನೇತೃತ್ವದಲ್ಲಿ ನಡೆದ ಉತ್ಕ್ರಾಂತಿ ಮತ್ತೆ ತೋಂಟದ ಸಿದ್ಧಲಿಂಗ ಯತಿ, ಅವರ ಪಟ್ಟಶಿಷ್ಯರಾದ ಚಂದ್ರಶೇಖರ-ಜೋಳ ಬಸವರಿಂದ ನಡೆಯಿತೆಂದರೆ ತಪ್ಪಾಗಲಾರದು. ಇವರ ನಂತರ ಇವರ ಪಟ್ಟಶಿಷ್ಯರಾದ ಜೋಳ ಬಸವಸ್ವಾಮಿಗಳು ಮೂರನೆಯ ಶೂನ್ಯ ಪೀಠಾಧ್ಯಕ್ಷರಾಗುತ್ತಾರೆ.

ಜೋಳ ಬಸವಸ್ವಾಮಿ : (ಪಟ್ಟ 3)

ಶೂನ್ಯ ಸಿಂಹಾಸನದ ಎರಡನೆಯ ಪಟ್ಟಾಧ್ಯಕ್ಷರಾದ ಜಂಗಮಮೂರ್ತಿ ಸಿದ್ಧಲಿಂಗ ಶಿವಯೋಗಿಗಳು ಎಡೆಯೂರಿನಲ್ಲಿ ಪಟ್ಟದ ಚಟ್ಟನದೇವರು ನಿರ್ಮಿಸಿದ ಕಲ್ಲುಮಠದಲ್ಲಿ ನಿರ್ವಿಕಲ್ಪ ಸಮಾಧಿಯಲ್ಲಿ ನಿಲ್ಲುವುದಕ್ಕೆ ಮುಂಚೆ ಕಡು ವಿರಕ್ತನೂ ವಿಷಯ ನಿರ್ಲಿಪ್ತನೂ ಅಖಿಲ ಸಂಸರ್ಗ ಸಂಬಂಧ ರಹಿತನೂ ದೃಢವಿಮೋಹಾಂಭೋದ ಮಾರುತನೂ ಸದ್ಭಕ್ತ ಜಡಜವಿಕಸಿತ ಸೂರ್ಯನೂ ಆರ್ಯಜನಮಂಡನನೂ ಮಹಾಮೂರ್ತಿಯೂ ಎನಿಸಿದ ತನ್ನ ಪಟ್ಟ ಶಿಷ್ಯ ಜೋಳ ಬಸವೇಶನಿಗೆ ಶೂನ್ಯ ಸಿಂಹಾಸನದ ಪಟ್ಟವನ್ನು ಕಟ್ಟಿ ಬಯಲಾಗುತ್ತಾರೆ.

ಬಾಲ್ಯದಲ್ಲಿ ಸ್ಫುರಿತಾಕ್ಷರವು ತಿಳಿಯದಿದ್ದುದರಿಂದ 'ನಿರಕ್ಷರ'ದ ಹೆಸರು ಸಾರ್ಥಕವಾಯಿತು. ಮುಗ್ಧತೆ ಸ್ವಭಾವದಿಂದಾಗಿ 'ಜೋಳ' ವೆಂದಾಯಿತು; ಸದ್ಭಕ್ತಿ ಸ್ವಭಾವದಿಂದ ಭಕ್ತಿಭಂಡಾರಿಯಾಗಿ ಬಸವನೆಂದಾಯ್ತು. ಈ ಮೂರರ ಮುಪ್ಪುರಿಯಿಂದ 'ನಿರಕ್ಷರದ ಜೋಳಬಸವ'ನೆಂಬ ಅಭಿದಾನದಿಂದ ಪಟ್ಟಾಧ್ಯಕ್ಷರಾದರು.

ಶುಭಚರಿತ ತೋಂಟದ ಯತೀಶನ ಕರುಣೆಯಿಂದ ಆತನಿಗೆ ಮಾತು ಬಂತು. ಯತಿವರ್ಯರ ಮುಖದಿಂದ ಷಟ್ಸ್ಥಲ ಬೋಧೆಯನ್ನು ಕೇಳಿ, ನ್ಯಾಯ, ಮೀಮಾಂಸೆ, ವ್ಯಾಕರಣ, ವೇದಾಗಮ ಪುರಾಣೋಪನಿಷತ್ತುಗಳಲ್ಲಿ ವಿದ್ವಾಂಸನೆನಿಸಿ ವಿಭ್ರಾಜಿಸಿದನು. ಈತನು ಶ್ರುತಿ ಮಹಾಂಬೋಧಿ ಮಂಥನಾಚಲ, ಷಟ್‌ಶಾಸ್ತ್ರ ಮೂಲ ಸ್ಥಂಭ ಉಪನಿಷದ್ವಿತತಿಹರ್ಮ್ಯಾಂತ ಮಂಜುಲಮಣಿದೀಪ, ಉಜ್ವಲ ಪುರಾಣಮೆಂಬ ಕ್ಷಿತಿಜಾತ ವನವಸಂತ, ಮಹಾವಿಬುಧಸಂತತಿನುತ, ವಿನುತ ಷಟ್ಸ್ಥಲ ಶಾಸ್ತ್ರಸಾರ ಸಂಗತಿರತ, ಮಾರಮದ ವಿದ್ರಾವಕ, ಮಹಾಮಾಯಾ ವಿಕಾರ ಗಜಕಂಠೀರವ, ಭೂತಳಾಭವ, ಸೂರಿಜನ ಪಾರಿಜಾತ, ಮಹಾಮೇರುಗಿರಿಸಾರಸತ್ವವನ, ಸದಾಚಾರ ವಾರಿಧಿ, ಪೂರ್ಣಶೀತಲಕರ, ಸ್ಫುರತ್ ವೀರಶೈವ ಪ್ರವರ, ಷಟ್ಸ್ಥಲಬ್ರಹ್ಮ ಸಾಕಾರ, ಜೈನ ಚಾರ್ವಾಕಾದಿ ಮತಭೇದಕ ಪನ್ನಗೇಂದ್ರ ಎಂದು ಮುಂತಾಗಿ ಪೆಂಪುವಡೆದು ಮಾಹೇಶ್ವರ ವೃಂದದಲ್ಲಿ ಜಗದ್ಗುರುವೆನಿಸಿ ಶೋಭಿಸುತ್ತಿದ್ದನು.

ತನ್ನ ಗುರುವರ್ಯರು ಹಮ್ಮಿಕೊಂಡಿದ್ದ ಕಾರ್ಯವನ್ನು ವ್ಯಾಪಕಗೊಳಿಸಿ ಪ್ರಚಾರ ಮಾಡಿದನು. ಇದಕ್ಕಾಗಿ ಸಪ್ತಶತ ಚರಮೂರ್ತಿಗಳು ಮತ್ತು ತ್ರಿಸಹಸ್ರ ವಿರಕ್ತರಿಗೆ ಶಾಸ್ತ್ರಬೋಧೆಯನ್ನು ಮಾಡಿ ಅವರ ಮೂಲಕ ಷಟ್ಸ್ಥಲ ಪ್ರಚಾರ ಕಾರ್ಯ ಇನ್ನೂ ವ್ಯಾಪಕವಾಗಿ ಪ್ರಸಾರವಾಗುವಂತೆ ಮಾಡಿದನು. ಅಷ್ಟಕ್ಕೇ ನಿಲ್ಲದೆ ನಾಡಿನ ನಾನಾ ಭಾಗಗಳಲ್ಲಿ ತಾನೂ ಅವರೊಂದಿಗೆ ಸಂಚರಿಸಿ ಷಟ್ಸ್ಥಲ ಬೋಧೆಯನ್ನು ಮಾಡಿ ಶೈವಸಂಪನ್ನರನ್ನು ಅಲ್ಲಲ್ಲಿ ನಿಲ್ಲಿಸಿ ವಿರತ-ಚರಮೂರ್ತಿಗಳೊಂದಿಗೆ ಮಧುಗಿರಿಗೆ ಬಂದು ಬಿಡಾರ ಮಾಡಿದ್ದಾಗ ಅಲ್ಲಿಯೇ ಅವಿರಳಾನಂದದಿಂದ ನಿಜೈಕ್ಯವನ್ನು ಪಡೆದನು.

ತನ್ನ ಗುರುಗಳಿಗಿದ್ದಂತೆ ಈತನಿಗೂ ಅನೇಕ ವಿದ್ವಾಂಸರು ಈತನ ಶಿಷ್ಯರಾಗಿದ್ದರು. ಅವರಲ್ಲಿ ಭಾವಚಿಂತಾರತ್ನ ಮತ್ತು ವೀರಶೈವಾಮೃತ ಮಹಾಪುರಾಣವನ್ನು ಬರೆದ ಎರಡನೆಯ ಮಲ್ಲಣಾರ್ಯ ಮತ್ತು ತೋಂಟದ ಸಿದ್ಧಲಿಂಗ ಶಿವಯೋಗಿಯ ಇನ್ನೊಬ್ಬ ಶಿಷ್ಯನಾದ ಚಂದ್ರಶೇಖರನಿಂದ ಪ್ರೇರಿತನಾಗಿ ಅವನ ಅಪ್ಪಣೆಯಂತೆ ಸಿದ್ಧೇಶ್ವರ ಪುರಾಣವನ್ನು ಬರೆದ ಈ ಮಲ್ಲಣಾರ್ಯನ ಪುತ್ರ ಶಾಂತೇಶ ಮುಖ್ಯರಾದವರು. 1650ರ ಸುಮಾರಿನಲ್ಲಿದ್ದ ಸಿದ್ಧನಂಜೇಶನು ತನ್ನ ಗುರುರಾಜ ಚಾರಿತ್ರದಲ್ಲಿ ಈ ಬೋಳಬಸವನನ್ನು ಸ್ತುತಿಸಿದ್ದಾನೆ.

ಗೂಳೂರು ಸಿದ್ಧಲಿಂಗ :

(**ಪಟ್ಟ 4. ಕಾಲ ಸು. ಕ್ರಿ. ಶ.** 1550–1570)

ಬೋಳ ಬಸವಸ್ವಾಮಿಗಳಾದ ಮೇಲೆ ಚಿಂತಿತಾರ್ಥಪ್ರದನೂ ಅನಂತ ಸದ್ಗುಣ ವಿಶಾಂತನೂ ಅಖಿಲಾಮ್ನಾಯಶಾಸ್ತ್ರ ಪಾರಂಗತನೂ ಉಮಾಕಾಂತ ಮತವರ್ಧನ ಮಹಾವೃದ್ಧನೂ ಆದ ಗೂಳೂರು ಸಿದ್ಧವೀರೇಶನು ನಾಲ್ಕನೆಯ ಷಟ್ಸ್ಥಲಬ್ರಹ್ಮ ಸಾರ್ವಭೌಮನೆನಿಸಿ ಪಟ್ಟಾಧಿಕಾರಕ್ಕೆ ಬರುತ್ತಾನೆ. ಮಹಾಲಿಂಗೇಂದ್ರ ವಿಜಯದ ಪ್ರಕಾರ ಈತನು 5 ನೆಯವನು. ಆದರೆ ಡಾ|| ಎಲ್. ಬಸವರಾಜು ಅವರನ್ನು ಅನುಸರಿಸಿ ಇವನನ್ನು 4ನೆಯವನನ್ನಾಗಿ ಸ್ವೀಕರಿಸಿದೆ. (ಇಲ್ಲಿ ಕೊಟ್ಟಿರುವ ಕಾಲ ಮುಂತಾದುವನ್ನು ಹೇಳುವಾಗ ಅವರು ಮಹಾಲಿಂಗೇಂದ್ರ ವಿಜಯದ ಪೀಠಿಕೆಯಲ್ಲಿ ಹೇಳಿರುವ ಅಂಶಗಳನ್ನು ತೆಗೆದುಕೊಳ್ಳಲಾಗಿದೆ).

ಈತನು ಶಾಂತ ಮಾನಸ, ಅನುಪಮ ಮಹಾಮಹಿಮ ಸಂಪೂರ್ಣನ, ಶುದ್ಧ ಚರಿತ, ಪ್ರಮಥ ಪ್ರದೀಪ, ಅಮಿತಬಲಿಷ್ಠ ಜನ ಪಾಪ ದಾವಾನಲ, ಸಕಲಸಿದ್ಧಿ ಪ್ರದ, ನಿರುಪಮಾನ ವೈಭವ, ಭಕ್ತಾವಳೀ ಸೇವಿತ, ಸದಾಮಲ ವೀರಶೈವ ಸನ್ನದ್ಧವೇಷ, ಪ್ರಸಿದ್ಧ ಷಟ್ಸ್ಥಲ ಪರಬ್ರಹ್ಮ ಸಂವಿತ್ಸಾರ್ವಭೌಮ. ಇಷ್ಟು ಮಾತ್ರವಲ್ಲ, ಕಾಮವನ ವಹ್ನಿರೂಪ, ಕಾಲಕರ್ಮಸಂದಾಮದಾತ್ರ, ಪರಾಭೂತಮಾಯ, ಸುಚಿದ್ವ್ಯೋಮ ಪ್ರಭಾ ಮಂಡಲ, ಭಕ್ತಿಪಾಲನಲಲಾಮ, ಆದ್ಯಂತ ಶೂನ್ಯ, ಚಾಮೀಕರಾಂಗಭಾಸ, ಲಸಚ್ಚರವರ ಸ್ತೋಮಾಶ್ರಿತ, ಷಟ್‌ಶಾಸ್ತ್ರ ಸೀಮಾದಿಮೂಲ ಎಂದು ಮುಂತಾಗಿ ಸಕಲ ಭಕ್ತಾವಳಿಯಿಂದ ಪ್ರಶಂಸೆಗೆ ಪಾತ್ರನಾದವನು. ಶಾಂತ ಸ್ವಭಾವದ ಸಿದ್ಧಲಿಂಗ ಸ್ವಾಮಿಗಳು ನಾಡಿನಲ್ಲೆಲ್ಲ ಸಂಚರಿಸುತ್ತ ಭಕ್ತರಿಗೆ ನಿರ್ವಂಚನೆಯಿಂದ ಕರುಣಾಮೃತ ಧಾರೆಯನ್ನು ಕರೆಯುತ್ತ, ವಂಚಕರಾದ ಭವಿಜನೌಘವನ್ನು ಧಿಕ್ಕರಿಸುತ್ತ ಅಖಿಲ ಚರಮೂರ್ತಿಗಳಿಗೆ ಪ್ರಾಂಚಿತ ಮಹಾಲಿಂಗಸ್ಥಲ ವಿಭೇದವನ್ನು ಚಂಚದತುಲಪ್ರಕಾಶವಾಗುವಂತೆ ಬೋಧಿಸಿ ಭಕ್ತರನ್ನು ಶಿಷ್ಯರನ್ನಾಗಿಯೂ ಜಂಗಮರನ್ನು ವಿಶಿಷ್ಟರನ್ನಾಗಿಯೂ ಮಾಡುತ್ತ ಸಮಾಜದ ಸರ್ವಾಂಗೀಣ ಉನ್ನತಿಯನ್ನು ಸಾಧಿಸುತ್ತಿದ್ದನು.

ಸಮಸ್ತ ಗುಣಗಣಭೂಷಿತರಾದ ಸಿದ್ಧಲಿಂಗರು ಮತಾಂಧರನ್ನು ಸಕಲ ಶಾಸ್ತ್ರ ಸಂವಾದದಿಂದ ಪರಾಭವಿಸುತ್ತ, ಮೀನಕೇತನ ವೈರಿಭಕ್ತರ ಹೆಬ್ಬೆಳಸನ್ನು ಬೆಳಸುತ್ತ ಹನ್ನೆರಡು ಸಾವಿರ ಜನರಿಗೆ ಲಿಂಗಧಾರಣೆ ಮಾಡಿ ಅನೂನಶೀಲವಂತರನ್ನಾಗಿಸಿ ಜನತೆಯ ಮೆಚ್ಚುಗೆಗೆ ಪಾತ್ರರಾದರು. ಅನ್ಯರು ಆಶ್ಚರ್ಯಪಡುವಂತೆ ಮಹಾ ಷಟುಸ್ಥಲೋದ್ಧಾತ ಪಟ್ಟಬದ್ಧರೆಂದೆನಿಸಿ ಮತಿಮಿಗಿಲ್ ಮಹಿಮೆಗಳಂ ತೋರ್ದು ಶಿಷ್ಟರಕ್ಷಣ ದುಷ್ಟಶಿಕ್ಷಣರಾಗಿ ಭಕ್ತವೃಂದವನ್ನು ಪಾಲಿಸುತ್ತ ಉನ್ನತಶೀಲರೆನಿಸಿ ಗುಮ್ಮಳಾಪುರಕ್ಕೆ ಬಂದು ಭಕ್ತವೃಂದಕ್ಕೆ ಆಶೀರ್ವದಿಸಿ ಅಲ್ಲಿಯೇ ಬಯಲಾದರು.

ಗುಮ್ಮಳಾಪುರದ ಸಿದ್ಧವೀರಸ್ವಾಮಿ :

(**ಪಟ್ಟ 5 ಕಾಲ ಸು. ಕ್ರಿ. ಶ.** 1570-1590)

ಶುಭಚರಿತರಾದ ಸಿದ್ಧಲಿಂಗ ಸ್ವಾಮಿಗಳಾದ ಮೇಲೆ ಚಿಂತಿತಾರ್ಥಪ್ರದನೂ ಅನಂತ ಸದ್ಗುಣ ವಿಶಾಂತನೂ ಅಖಿಲಾಮ್ನಾಯ ಶಾಸ್ತ್ರಪಾರಂಗತನೂ ಉಮಾಕಾಂತ ಮತವರ್ಧನ ಮಹಾವೃದ್ಧನೂ ಆದ ಗುಮ್ಮಳಾಪುರದ ಸಿದ್ಧವೀರೇಶನು 5 ನೆಯ ಶೂನ್ಯಪೀಠಾಧಿಕಾರಿಯಾದನು.

ಈತನು ಕುಸುಮಕೋದಂಡ ಖಂಡನ ಚಣಂ, ಕಾಲಸಂವಿಶಸಂ, ಮಾಯಾ ಭುಜಂಗ ಮುಖಗೇಶನ್, ಉದ್ಧಸಿತ ಸಕಲೇಂದ್ರಿಯಂ, ವಿಗತ ಕಲ್ಮಷನ್, ಅಖಿಲ ರಾಗಾದಿ ಗುಣವಿದೂರಂ, ಭಸಿತ ರುದ್ರಾಕ್ಷ

ಘೋಷಿತನ್, ಅಂಗ-ಲಿಂಗ ಸಮರಸನ್, ಷಟ್ಸ್ಥಲ ಮಹಾಜ್ಞಾನ ಸತ್ಸುಧಾ ಸಪಾನ ಮತ್ತು ಚರವರ್ಯ ಸೇವಿತನ್, ಅಭವಸಾಮ್ಯ ಸ್ವರೂಪನ್ ಆಗಿ, ಘನ ಜಗದ್ಗುರುವೆನಿಸಿ, ವೀರಶೈವ ಪ್ರಸರದನು- ಬೋಧೆಯನ್ನು ಸಕಲ ಭಕ್ತ ಮಾಹೇಶ್ವರರಿಗೆ ತಿಳಿಸುತ್ತ ನಿಖಿಳ ದೇಶ ಗಳಲ್ಲಿ ಸಂಚರಿಸುತ್ತ ವಿಬುಧಾಳಿ ನುತಿಸುತ್ತಿರಲು ಸಕಲೇಷ್ಟಪ್ರದಾಯ ನೆನಿಸಿ ಮಹಿಮೆಗಳನ್ನು ಮೆರೆಯುತ್ತಿದ್ದನು.

ಮಹಿಮಾಸ್ಪದನಾದ ಗೊಳೂರು ಸಿದ್ಧವೀರೇಶ್ವರನು ಕಾಮಿತಾ ರ್ಥದ ಗುಮ್ಮಳಾಪುರಕ್ಕೆ ಬಂದು ಅಲ್ಲಿನ ಗ್ರಾಮಾಧಿಪತಿಯಿಂದ ಪತ್ರ ವನ್ನು ಬರೆಸಿ, ಊರಿನ ನಾಲ್ಕು ದಿಕ್ಕುಗಳಲ್ಲಿ ಲಿಂಗಮುದ್ರಾ ಶಿಲೆ ಗಳನ್ನು ಸ್ಥಾಪಿಸಿ, ಆ ಪುರದ್ವಾರಕ್ಕೆ ಸೋಮಧರ ಭಕ್ತರನ್ನು ಕಾವಲಾ ಗಿರಿಸಿ ಭವಿಗಳಾರೂ ಆ ಸೀಮೆಯನ್ನು ಮೆಟ್ಟಲೀಸದಂತಿರಿಸಿದ್ದನು. ಅಲ್ಲಿ ಪ್ರತಿಯೊಂದು ಆಚಾರವನ್ನೂ ಶ್ರುತಿ ಪುರಾಣಾಗಮ ವಿಧಾನ ದಿಂದ ನಿರ್ಣಯಿಸುತ್ತ ಅಲ್ಲಿನ ಸತಿ-ಸುತ-ಸಹೋದರರ್ ಮುಂತಾಗಿ ಎಲ್ಲ ಭಕ್ತಮಂಡಳಿಗೆ ವೀರಾಗಮಾಚಾರವನ್ನು ತಪ್ಪದಂತೆ ನಡೆಯಲು ವೀರಶೈವ ದೀಕ್ಷೆಯನ್ನಿತ್ತು ಆ ಪದ್ಧತಿಯೊಳಾಚರಿಪ ಗತಿಯ ನೇಮಿಸಿ ಷಟ್ಸ್ಥಲ ಜ್ಞಾನಬೋಧೆಯನ್ನು ಮಾಡುತ್ತ ದಿನದಿಂದ ದಿನಕ್ಕೆ ಶಿವಲಿಂಗ ಪೂಜಾ ಪ್ರವರ್ತನೆಯನ್ನು ಮಾಡಿ, ಜಂಗಮ ದಾಸೋಹವನ್ನೇರ್ಪಡಿಸಿ ಆನಂದ ಸಂದೋಹಯುಕ್ತನಾಗಿದ್ದನು. ಅಲ್ಲಿನ ಭಕ್ತಮಂಡಳಿಯೆಲ್ಲ ಲಿಂಗಾನುಸಂಧಾನದಲ್ಲಿ ಅವಿರಳಾನಂದ- ತುಂದಿಲರಾಗಿದ್ದು ಆ ಪಟ್ಟಣವನ್ನು ಕೈಲಾಸಕ್ಕೆ ಸಮನಾಗಿಸಿದರು. ಹೀಗೆ ಗುಮ್ಮಳಾಪುರದ ಸಿದ್ಧವೀರಾಚಾರ್ಯರು ಕಾಲಕರ್ಮಗಳನ್ನು ಮೀರಿ ವಿಪುಲ ಮಹತ್ವಗಳನ್ನು ಮೆರೆದು ಬಹುಭಕ್ತ ಸಂತತಿಗೆ ಕಾರು ಣ್ಯವನ್ನು ಸೈಗರೆಯುತ್ತ ಅಲ್ಲಿಯೇ ಶಿವಯೋಗದಲ್ಲಿ ನಿಂದರು.

ಗಗನದ ಸ್ವಾಮಿಗಳು :
(ಪಟ್ಟ 6 ಕಾಲ ಸು. ಕ್ರಿ. ಶ. 1590-1620)

ಉರುತರ ಸತ್ವರೂಪರೂ ಅವನೀಮಹಿತರುದ್ರರೂ ವಿಕಾರಾದಿ ವಿಚ್ಛಿದ್ರರೂ ಅನುಪಮ ಭಕ್ತ ಭಕ್ತಿಪ್ರದಾಯಕರೂ ಎನಿಸಿದ ಗಗನದ ಸ್ವಾಮಿಗಳು 6 ನೆಯ ಷಟ್ಸ್ಥಲ ಪಟ್ಟಾಧಿಕಾರವನ್ನು ವಹಿಸಿಕೊಂಡು ಅಗಣಿತವಿರಕ್ತ ಚರವೃಂದಕ್ಕೆ ಷಟ್ಸ್ಥಲ ಸಿದ್ಧಾಂತವನ್ನು ಬೋಧಿ ಸುತ್ತ ಮಾಹೇಶ್ವರ ಪ್ರಭುವೆನಿಸಿ ನಿಗಮಾಗಮಾದಿ ಷಟ್‌ಶಾಸ್ತ್ರ ಸಮ್ಮತ ಸರ್ವ ಸುಗಮೋಕ್ತಿಯಿಂದ ವಾದಿವೃಂದವನ್ನು ಜಯಿಸುತ್ತ ವಿರಕ್ತವರೇಣ್ಯರಾಗಿ ಶೋಭಿಸುತ್ತಿದ್ದರು. ಕಂದರ್ಪದರ್ಪ ವಿದ್ರಾ ವಕಂ, ದಂಡಭೃದ್‌ಗಂಧ ದ್ವಿಪೇಂದ್ರ ಕಂಠೀರವಂ, ಮಾಯಾ ಕಬಂಧವಲ್ಲೀ ವಿತಾನದ್ವಿಪಂ, ಕಾಲಕರ್ಮಾದಿ ದೂರಂ, ಅನಘಂ ಎಂದು ಮುಂತಾಗಿ ಸಕಲರೂ ಆನಂದದಿಂದ ಕೊಂಡಾಡುತ್ತಿರಲು, ಮಾಹೇಶ್ವರರು ಸಹಿತ ಬಹುದೇಶಗಳಲ್ಲಿ ಸಂಚರಿಸುತ್ತ ಮಾಗಡಿಗೆ ಬಂದು ಆ ಪಟ್ಟಣದ [illegible] ಶಿಷ್ಯಮಠಗಳನ್ನು ಕಟ್ಟಿಸಿ [illegible] ಮಠಗಳಲ್ಲಿ [illegible] ವ್ಯವಸ್ಥೆ ಮಾಡಿ, ದುರಾಚಾರ ದಲ್ಲಿ ವರ್ತಿಸುವ ಭಕ್ತರನ್ನು ಮಠಕ್ಕೆ ಕರೆಸಿ ಬಂಧಿಸಿ ಸದಾಚಾರವನ್ನು ಬೋಧಿಸಿ, ಶಿವಾಗಮಶಾಸ್ತ್ರವಿದಿತವಾದ ಗುರುಸಮರ್ಚನೆ, ಲಿಂಗ ಪೂಜನ, ಜಂಗಮೋತ್ಕರದ ದಾಸೋಹ, ಭಸ್ಮರುದ್ರಾಕ್ಷ ಮಣಿಧಾರಣ, ಶಿವಮಂತ್ರಸ್ಮರಣ, ಜಂಗಮಸಾಂಗತ್ಯ [illegible] ಸೇವೆಗಳನ್ನು ಸದಾ ಕಾಲವೂ ಮಾಡಬೇಕೆಂದು ಹರಭಕ್ತರಿಗೆ ನಿಯಮಿಸಿದರು.

ಭಕ್ತನಾದವನು ಪರಧನ, ಪರವಧು, ಪರವಸ್ತುವಾಹನ, ಪರ ಗೃಹಾದಿಗಳೆಂಬಿವನ್ನು ಮನಸ್ಸಿನಲ್ಲಿಯೂ ಭಾವಿಸದಿರಬೇಕು. ಪರ ಲೋಪವೆಗೋಸುಗ ಮಿಥ್ಯಾ ಪ್ರವರ್ತನೆಗಳನ್ನು ನೆರೆಯದಿರಬೇಕು. ಶಿವ ಭಕ್ತರಲ್ಲಿ ಕುಹಕ, ಮತ್ಸರ, ಡಂಭ ಹಿಂಸಾದಿಗಳನರಿಯದಿರಬೇಕು. ಹರನೊಳೆನಿತು ಭಕ್ತಿಯುಂಟೊ, ಹರಭಕ್ತರೊಳಗನಿತು ಭಕ್ತಿಯಂ ನಟಿಸಬೇಕು. ಶಿವಭಕ್ತರಲ್ಲದವರೊಡನಾಟ, ಬಂಧುತನ, ಗೆಳೆತನ, ಕ್ರಯ–ವಿಕ್ರಯಗಳನ್ನು ಬಿಡಬೇಕು. ಭವಿ ನಿವಾಸದಲ್ಲಿ ವಾಸ ಮಾಡಲಾಗದು; ಭವಿಪಾಕ ಮೊದಲಾದವನ್ನು ಬಿಡಬೇಕು. ಮತ್ತ- ವಿಚಾರಯುತರ ಗೋಷ್ಠಿಯನ್ನು ಬಿಡಬೇಕು. ವ್ಯವಹಾರದಲ್ಲಾ ದೊಡಂ ವ್ಯರ್ಥಾಲಾಪಗಳನ್ನು ಬಿಡಬೇಕು. ಎಂದು ಮುಂತಾಗಿ ಬೋಧಿಸಿ ಶಿವಾಚಾರ್ಯ ಮಾರ್ಗದಲ್ಲಿ ನಡೆಯುವಂತೆ ಭಕ್ತರಿಗೆ ಆಚಾರದ ನಡೆಗಲಿಸಿದನು.

ಇವರ ಈ ಸದಾಚಾರ ವರ್ತನೆಯನ್ನು ಕೇಳಿದ ಮಾಗಡಿಯ ಭೂಪಾಲನು ಗಗನದಾರ್ಯರ ಪಾದಯುಗ್ಮವನ್ನು ಕಂಡು ಸಾಷ್ಟಾಂಗ ವೆರಗಿ ಸ್ತುತಿಸಿ ತಾವು ಲೇಸಾಗಿ ನಮ್ಮ ಗುರುಗಳಾಗಿ ಭಕ್ತಿವಿನ್ಯಾಸ ವನ್ನು ನೆಗಳಬೇಕೆಂದು ಪಾದಗಳಿಗೆರಗಿದ ಭೂಪಾಲನನ್ನು ಆಶೀರ್ವ ದಿಸಿ, ಉಮೇಶ ದೀಕ್ಷಾಬದ್ಧನೆನಿಸಿ ಲಿಂಗಧಾರಣೆ ಮಾಡಿದನು. ಅನಂತರ ಆ ನೃಪತಿಯು ಶಿವಭಕ್ತಿ ಹೆಚ್ಚಲು ಜಗದಾರ್ಯ ಗಗನ ದಾರ್ಯರ ಅಪ್ಪಣೆಯಂತೆ ತನ್ನ ದೇಶದ ಜನರಿಗೆ ಶಿವಲಿಂಗಧಾರಣೆ ಯನ್ನು ಮಾಡಿಸಿ ಭೂಮಿಯಲ್ಲಿ ವೀರಶೈವಾಚಾರ ವರ್ತನೆಯನ್ನು ಬೆಳೆಸಿ ಸಕಲವಿನಿಯೋಗದವರಿಂದ ಪ್ರಜಾಳಿಯಿಂದ ಗುರುಸೇವೆಯನ್ನು ಮಾಡಿಸಿದನು. ಗಗನದಾರ್ಯರು ಸಕಲ ಮಾಹೇಶ್ವರರ ಒಗುಮಿ ಗೆಯ ಸೇವೆಯನ್ನು ಕೈಕೊಳ್ಳುತ್ತ ವೀರಶೈವ ಮತವಿಂತು ವರ್ಧಿಸುತ್ತಿ ರಲು ಅದನ್ನು ಕಂಡು ಆನಂದದಿಂದ ಸಗುಣ-ನಿರ್ಗುಣ ಪರಬ್ರಹ್ಮ ಮೆನಿಸುವ ಷಟ್ಸ್ಥಲಾಚಾರಪೇಳ್ತರವನ್ನು ಜಗದಲ್ಲಿ ಪರಕಲಿಸಿ ಸದ್ಭ ಕ್ತರಿಗೆಲ್ಲ ಆಶೀರ್ವದಿಸುತ್ತ ಹರಭಕ್ತಿಗಣ ಜಯ ಜಯ ಎನುತ್ತಿರಲು ಭೈರವನ ದುರ್ಗದಲ್ಲಿ ಬಯಲಾದರು.

ಕಟ್ಟಿಗೆಹಳ್ಳಿ ಸ್ವಾಮಿಗಳು :
(ಪಟ್ಟ 7 ಕಾಲ ಸು. ಕ್ರಿ. ಶ. 1620-1640)

ಕಂತುಮದಮಾತಂಗ ಕಂಠೀರವನೂ ಕಾಲಕಾಂತಾರವಹ್ನಿಯೂ ಮಾಯಾ ಮೇಘಮಾರುತನೂ ಕಾಂತಿತೀಕ್ಷ್ಣಮಪಾಕೃತ ಮಲ- ತ್ರಯನೂ ಶೈವವಿದ್ಯಾಸಮುದ್ರನೂ ವೇದ ವೇದಾಂತ ಷಟ್‌ಶಾಸ್ತ್ರ ಪೌರಾಣಾಗಮಾದಿ ಧೀರನೂ ಷಟ್ಸ್ಥಲಬ್ರಹ್ಮ ನಿರ್ಣಯ ವಿವಾದ ನಿಷ್ಣಾತನೂ ಭೋಗಮೋಕ್ಷಪ್ರದನೂ ಕೈವಲ್ಯಕಾಂತಾವರನೂ ಸಾದರ ಸಕಲ ಮಾಹೇಶ್ವರವ್ರಾತ ಪರಮೋದಪಾದನೂ ನಿಖಿಲಭಕ್ತ ಸಂಸೇವ್ಯ ಘನಪಾದಾಂಬುಜನೂ ಎನಿಸಿದ ಕಟ್ಟಿಗೆಹಳ್ಳಿಯಾರ್ಯ ಪೇಶಿಕೇಂದ್ರನು 7ನೆಯ ಶೂನ್ಯಪೀಠಾಧಿಕಾರಿಯಾದನು. ಸಕಲ

ದೇಶಗಳಲ್ಲಿ ಸಂಚರಿಸುತ್ತ, ಭಕ್ತನಿಕರದಲ್ಲಿ ಷಟ್ಸ್ಥಲಬ್ರಹ್ಮ ಎನಿಸುತ್ತ ವೀರಮಾಹೇಶ್ವರರು ಈತನನ್ನು ಓಲಗಿಸುತ್ತಿರಲು ಒಮ್ಮೆ ಅಕುಟಿಲನೂ ಲಿಂಗಪೂಜಾನಿರತನೂ ಲಿಂಗಚಿತ್ಸುಖಯುತನೂ ಲಿಂಗಪ್ರಸಾದೋಪಭೋಗಿ ಲಿಂಗಪ್ರಾಣಿಯೆನಿಸಿದ ಸಂಪಾದನೆಯ ಸಿದ್ಧವೀರೇಶನೆಂಬ ವಿರಕ್ತನು ಕಟ್ಟಿಗೆಹಳ್ಳಿಯಾರ್ಯರ ಅನುಕಂಪೆಯನ್ನು ಪಡೆಯಲೋಸುಗ ಬಂದು ಅವರ ಚರಣಯುಗಳಕ್ಕೆ ನಮಿತನಾಗಿ ಪಂಪಾದಮಹಿಮ, ಜಗದಾರಾಧ್ಯ, ಮತ್ಸ್ವಾಮಿ, ನಮ್ಮಿಷ್ಟ ಲಿಂಗದ ಗೋಳಕವು ಅಗಲಿದೆ, ಇದಕ್ಕೆ ತಮ್ಮಾಜ್ಞೆಯಂತಿಹುದು ಅಂತು ನಡೆಯುವೆನೆಂದು ವಿಜ್ಞಾಪಿಸಿದನು.

ಆ ಚರಮೂರ್ತಿಯ ವಿಜ್ಞಾಪನೆಯನ್ನು ಕೇಳಿ ಚರವರ್ಯ, ಬಂಧುರದ ಲಿಂಗಪೀಠದಿಂದ ಸಡಿಲಗೊಂಡು ಒಂದು ಕೂದಲಿನ ಷೋಡಶ ಭಾಗವು ಸೀಳುಬಿಟ್ಟರೂ ಅಮಂಗಲ. ಆದರೆ ಅದು ಪೀಠದಿಂದ ಕೇವಲ ಸಡಿಲಗೊಂಡು ಬೇರಾಗಿದ್ದರೂ ಭಯವಿಲ್ಲ. ಅವು ಮೂಲದಲ್ಲಿಯೇ ಬೇರೆ ಬೇರೆಯಾಗಿರುವುವು. ಅವೆರಡನ್ನೂ ಕೂಡಿಸಿ ಒಂದು ಮಾಡಲಾಗಿದೆ. ಆದುದರಿಂದ ಈಗ ಅದರ ಕಂಥೆಯನ್ನು ಬಲಿದು ಲಿಂಗವನ್ನು ಧರಿಸಿ ಪೂಜಿಸಬಹುದು ಎಂದು ಆಜ್ಞಾಪಿಸಲು ಆ ಶೀಲ ಸಂಪಾದನೆಯ ಚರಮೂರ್ತಿಯು ಗುರುವಾಜ್ಞೆಯಂತೆ ಕಂಥೆಯನ್ನು ಬಲಿಯುತ್ತ ಮೂರು ಬಾರಿ ಧರಿಸಿಕೊಂಡರೂ ಅದು ಅಗಲಿದ್ದುದರಿಂದ ಈ ಲಿಂಗದಲ್ಲಿಯೇ ತನ್ನ ಪ್ರಾಣವನ್ನು ನೀಗುವೆನೆಂದು ಆಗ್ರಹಿಸುತ್ತಿರಲು, ಎಲೆಲೆ ಚರಮೂರ್ತಿ ಲಿಂಗ ಸಂಬಂಧ ಜೀವವನ್ನು ಹೇಗೆ ಬಿಡುತ್ತೇನೆಂದು ಹೇಳುವೆ ? ಲಲಿತವಾದ ಅಷ್ಟಾವರಣಕ್ಕೆ ನೀಂ ದೂರ ಎಂದು ಸ್ವಲ್ಪವೂ ಅಲಸದೆ ಆತನನ್ನು ತಮ್ಮ ಸ್ಥಾನದಿಂದ ಹೊರಗೆ ನಿಲ್ಲಿಸಿದರು.

ಅಷ್ಟಕ್ಕೆ ಮನಸ್ಸನ್ನು ಕಿರಿದು ಮಾಡಿಕೊಂಡು ಕಿನಿಸಿ ಕಿಂಕಿರಿ ಹೋಗಿ ಸಂಪಾದನೆಯ ಚರಮೂರ್ತಿಯು ಅವರ ಮೇಲಿನ ವೈರದಿಂದ ಅದನ್ನು ಸಾಧಿಸಲೋಸುಗ ಮಹಿಷಪುರ (ಮೈಸೂರು) ಕ್ಕೆ ಬಂದು ರಾಮಾನುಜರ ವೈಷ್ಣವರನ್ನು ಬೆರೆದು ಅನಂತರ ಹತ್ತಿ ಬಣಜಿಗರನ್ನು ತನಗೆ ಸಹಾಯಕರನ್ನಾಗಿ ಮಾಡಿಕೊಂಡು, ಮಹಿಷಪುರಿಯ ಅರಸನ ಬಳಿಗೆ ಬಂದು, ಕಟ್ಟಿಗೆಹಳ್ಳಿಯ ಸ್ವಾಮಿಗಳನ್ನು ವಾದದಿಂದ ಪರಾಭವಗೊಳಿಸುವೆನೆಂದು ಕಿವಿತುಂಬಿದನು. ಆಗ ಮಹಿಷಪುರಿಯರಸು ಬಹಳ ಸನ್ಮಾನದಿಂದ ಆ ಜಗದ್ಗುರುಗಳನ್ನು ಕರೆಸಿ, ಪೀಠದಲ್ಲಿ ಮೂರ್ತಗೊಳಿಸಿ ತ್ರಿಮತಸ್ಥರಿಂದ ವಾದಮಾಡಿಸಲು ವೇದಶಾಸ್ತ್ರಾದ್ಯುಕ್ತಿಯಿಂದ ಅಗಾಧಚೇತನರಾದ ಗುರುಗಳು ಅವರನ್ನೆಲ್ಲ ಪರಾಭವಿಸಿ ರಂಜಿಸಲು ಆ ಭೂಪನು ಜಗದ್ಗುರುಗಳ ಕರುಣೆಯನ್ನು ಪಡೆದನು. ಇತ್ತ ಹತ್ತಿ ಬಣಂಜಿಗರು ಕೆಲವರು ಗುರುಗಳ ಚಿನ್ಮಯಪಾದವನ್ನು ಕಂಡು ಬದುಕಿದರು. ಅತ್ತ ಕೆಲವರು ಆ ಪುಣ್ಯವನ್ನು ಪಡೆಯಲಾಗದೆ ಬಹಿಷ್ಕೃತರಾಗಿ ಇಂದಿಗೂ ಆ ಪುರ ಪ್ರಾಂತ್ಯದಲ್ಲಿ ತಿಗುಳರು, ತೆಲುಗು ಬಣಂಜಿಗರೆನಿಸಿ ಶೈವಸಂಸ್ಕಾರ ಘನಯೋಗಕ್ಕೆ ದೂರಾಗಿ ಉಳಿದಿದ್ದಾರೆ. ಸಂಪಾದನೆಯ ಚರಮೂರ್ತಿ ತನ್ಮಹೀಶನಡಿಗಳ್ಗೆರಗದೆ ಎದುರಾಗಿ ಸ್ವೇಚ್ಛೆಯಿಂದ ವರ್ತಿಸುತ್ತಾನೆ.

ಅಲ್ಲಿಂದ ಹೊರಟು ನಾನಾ ಭಾಗಗಳಲ್ಲಿ ಸಂಚರಿಸುತ್ತ ಕಟ್ಟಿಗೆಹಳ್ಳಿಯಾರ್ಯರು ನಗರ ಪ್ರಾಂತಕ್ಕೆ ಬಂದು ಅಲ್ಲಿನ ಭಕ್ತರಿಗೆ ಒಗುಮಿಗೆಯ ಕಾರುಣ್ಯಧಾರೆಯನ್ನು ಕರೆಯುತ್ತ ಮಹಿಮೆಗಳನ್ನು ತೋರುತ್ತ ಶಿವಮತವನ್ನು ನಿರ್ಣಯಿಸುತ್ತ ತಿಳುವಳ್ಳಿ ಗ್ರಾಮಕ್ಕೆ ಬಂದು ಅನುಪಮ ವೀರ್ಯನಾದ ಕಟ್ಟಿಗೆಹಳ್ಳಿಯಾರ್ಯನು ಭಕ್ತಗಣ ಜಯ ಜಯವೆನಲ್ಕೆ ಅಲ್ಲಿಯೇ ಬಯಲಾದನು.

ಮುರಿಗೇಂದ್ರ ರಾಜೇಂದ್ರರು :
(ಪಟ್ಟ 8 ಕಾಲ ಸು. ಕ್ರಿ. ಶ. 1640-1710)

ಸು. ಕ್ರಿ. ಶ. 1156–57ರಲ್ಲಿ ಬಸವಣ್ಣನವರಿಂದ ಸ್ಥಾಪಿತವಾದ ಶೂನ್ಯಸಿಂಹಾಸನಕ್ಕೆ ಅಲ್ಲಮಪ್ರಭುಗಳು ಆದ್ಯಪ್ರವರ್ತಕರಾಗಿ ಚೆನ್ನಬಸವಣ್ಣನವರು ಪ್ರಥಮ ಪೀಠಾಧಿಕಾರಿಗಳಾಗಿದ್ದರೆಂಬುದನ್ನು ಹಿಂದೆ ನೋಡಿದ್ದೇವೆ. ಅಲ್ಲಮಪ್ರಭುಗಳು ಚನ್ನಬಸವಣ್ಣನವರನ್ನು ಶೂನ್ಯಪೀಠದಲ್ಲಿ ಕೂರಿಸುವಾಗಲೇ ತಾರಕಾರಿಯೆನಿಸಿದ ಚನ್ನಬಸವಣ್ಣನಿಗೆ "........ಈ ವಂಶಪಾರಂಪಾರೆಯಂ ಪಿಡಿದು ಪೃಥ್ವಿಯೊಳು ವಿರತಕುಲ ಸ್ಥಾಪಿಸುವ ಕಾಲಕ್ಕೆ । ಮತ್ತದಕೆ ವರಮೂಲಮುದ್ರೆ ಬೇಕದನೀಗ ನಿರ್ಮಿಸುವೆನೆಂದು........" (3-4) ಪರಿಪರಿಯ ಶಿವಮಂತ್ರ ಪ್ರಣಮಮಂ ಘೋಷಿಸುತ " ಬಾರೊ ಬಾರೆಲೆ ತಾರಕಾರಿಯೆಂದೆನಲಾಗ । ಸಾರದಿಂ ಪೋದನಾ ಚನ್ನಬಸವೇಶ್ವರಂ । ಮಾರಾರಿ ಸಂಮುಖದಿ ನಿಂದಿರಲ್ಕಾಕ್ಷಣದಿ ಚುಂಬಿಸುತ ಪ್ರೀತಿಯಿಂದಾ ॥ ಮೆರೆವ ಮಸ್ತಕದಿ ಧರಿಸಿರ್ದ ಚಂದ್ರನ ತೆಗೆದು। ನೆರೆಮೆಚ್ಚಿ ಕುವರಂಗೆ ಕೊಟ್ಟನೆಂದೆನೆ ತೋರ್ಪ । ವರಮುದ್ರೆಯಂನು ಹಸ್ತದೊಳಿತ್ತು ಪರಿಣಮಿಸಿ ಕರುಣಿಸಿದನಾ ಸಮಯದೀ ॥"[3—6]ಎಂದು ಬನಹಟ್ಟಿಯ ಘನಮಠಾಧ್ಯಕ್ಷರಾದ ಶ್ರೀಗುರು ರುದ್ರದೇವರು ರಚಿಸಿರುವ 'ಮುರುಗೇಂದ್ರ ವಿಜಯ' ಕಾವ್ಯದಲ್ಲಿ ಹೇಳಿದೆ. ಅಂದರೆ ಈ ದಿವ್ಯ ನಿರಂಜನ ಪರಂಪರೆಗೆ ಧರ್ಮಾಧಿಕಾರದ ಚಿಹ್ನೆಗಳಾಗಿ ಸಿಂಹಾಸನ–ಶಿಖೆ–ಶೈಲ ಎಂಬ ಮುದ್ರೆಗಳನ್ನು ಅಲ್ಲಮಪ್ರಭುವೇ ನಿರ್ಮಿಸಿ ಚನ್ನಬಸವಣ್ಣನವರಿಗೆ ಕೊಟ್ಟಿದ್ದರೆಂದು ಖಚಿತವಾಗಿ ತಿಳಿದುಬರುತ್ತದೆ.

ಅನತಿಕಾಲದಲ್ಲಿಯೇ ಉಂಟಾಗಲಿರುವ ಕಲ್ಯಾಣದ ವಿಪ್ಲವವನ್ನು ಮುಂಗಂಡ ಪ್ರಭುದೇವರು ಧರ್ಮಾಧಿಕಾರದ ಸಂಕೇತಗಳಾದ ಈ ಶಿಖಾ-ಶೈಲ ಮುಂತಾದ ಮುದ್ರೆಗಳನ್ನು ಜೋಪಾನಪಡಿಸುವ ವ್ಯವಸ್ಥೆಯನ್ನೂ ಚನ್ನಬಸವಣ್ಣನವರಿಗೆ ತಿಳಿಸಿ ಆ ಜವಾಬ್ದಾರಿಯನ್ನು ಅವರಿಗೆ ವಹಿಸಿದಂತೆ ಕಂಡುಬರುತ್ತದೆ. ಇದೇ 'ಮುರಗೇಂದ್ರ ವಿಜಯ'ದ ಪ್ರಕಾರ "........ಚನ್ನಿಗನೆ ಕಲ್ಯಾಣದೊಳಗಿರ್ದುವೆಂತ್ಯದಲಿ । ಸನ್ನುತದಿ ಬಿಜಮಾಡು ಸಮಯದೊಳು ಪೋಗಿಯಾ । ಚನ್ನ ಶ್ರೀರಂಗಪತ್ತನದಿ ಸುಸ್ಥಲನೋಡಿಯೊಂದೆಡೆಯೊಳಿರಿಸೆಂದನೂ ॥" [3–7] ಎಂದಿದೆ. ಆದೇ ರೀತಿ ಕಲ್ಯಾಣಕ್ರಾಂತಿಯಾಗಿ ಪ್ರಮಥರು ಸಹಿತ ಉಳುವೆಯ ಕಡೆಗೆ ಪ್ರಯಾಣ ಮಾಡುತ್ತಿದ್ದಾಗ ಮಾರ್ಗ ಮಧ್ಯದಲ್ಲಿ ಶಿಖಾ–ಶೈಲ ಮುಂತಾದ ಚಿಹ್ನೆಗಳನ್ನು ಜೋಪಾನಪಡಿಸುವ ದೃಷ್ಟಿಯಿಂದ ಅವರನ್ನು ಉಳುವೆಯಲ್ಲಿರುವಂತೆ ಹೇಳಿ ತಾನು ಶ್ರೀರಂಗಪಟ್ಟಣಕ್ಕೆ ಬಂದು ಅಲ್ಲಿನ ಕೋಟೆ–ಕೊತ್ತಲಗಳ ವೈಭವವನ್ನು ನೋಡುತ್ತ ತವಕದಿಂದ ಬರುತ್ತಿರುವಾಗ ಊರಹೊರಗೆ

ಕಂತುಹರವಾಹನದ ಶಿಲೆ ಬಯಲೊಳಿರ್ಪುದ ಕಂಡು "ಶಿಲೆಗಳೊಳ ಗಧಿಕ ಸುಕೃತನು ನೀನುಮದರಿಂದ। ನೆಲೆಯಾದುದೀ ವೃಷಭ ರೂಪ ಸಂಪದವೆಂದು। ನಲಿದು ಬರುವರು ಸರ್ವಜನ ನಮಿಸಲ್ಕಿಂ ನಡಿಗೆ ಬಸವ ಬಸವೇಶನೆಂದೂ ॥ ಒಲಿದು ಪೇಳಿದೆಯಲಾ ಹೌದೀಗ ನಿಂನೊಚನ। ಬಲು ಪರಾಕ್ರಮಿ ಷಟುಸ್ಥಲಮೂರ್ತಿ ನಿನ್ನಪದ। ಜಲಜದರ್ಶನಮಾಗಲಹಂ ಕೃತಾರ್ಥನುಮಾದೆ ಭಲರೆ ಭಲ ಭಲ ರೆಂದನೂ ॥ ೨೧ ॥ ಹರಸುತನು ಸುಮುಖದಿ ನಿಂದು ವೃಷಭನಿಗೆಂದ। ಪರಶಿವನು ಯನಗೊಂದು ಮುದ್ರೆಯಿತ್ತಪನದನು। ಶಿರಿರಂಗ ನಗರ ದೊಳಗಿಟ್ಟು ಪೋಗೆಂದ ನಾನೀ ಕಾರಣಕೆ ಬಂದೆನೂ ॥ ಸರಸದಿಂದೀ ಪುರವನೊಂದುಳಿಯದಂತೆ ನಾಂ। ಚರಿಸಿ ಬಂದೆನು ಕಾಣದೊಂದು ನಿರ್ಮಲ ಸ್ಥಲವ। ಪರಮಾತ್ಮನಾಜ್ಞೆಯಂ ತಪ್ಪಲಾಂ ಪಾತಕಿಯು ಪರಿಹರಿಸು ನೀನೆಂದನೂ ॥ ೨೨ ॥ ದಂಡನಾಯಕನೆ ಪೇಳೇನುಪಾ ಯವುಮಿದಕೆ। ಪಂಡಿತೋತ್ತಮನು ನೀನು ಪತಿಕರಿಸಿ ಹೇಳ್ವುದೆನೆ। ಯಂಡೊಲಿದು ಪೇಳ್ದ ನೀಂ ಮುದ್ರೆಯಂ ತಾರೆಂದು ನುಂಗುತಲಿ ಚನ್ನಣ್ಣಗೇ ॥ ಮಂಡಲದಿ ನಾನಿರುವ ಪರಿಯಂತರೀ ಘಟಿಕ। ಕಂಡ ಕಲಿಯುಗದ ನರರಿಂಗೆ ಕುರುಹನು ದೋರೆ। ಖಂಡಪರಶುವಿ ನಾಜ್ಞೆಯಂತಿಹನು ಮುಳವಿಂಗೆ ಪೋಗೆಂದ ನಂದೀಶ್ವರಾ ॥"೩–೨೩ ॥ ಅಲ್ಲಿಂದ ಚನ್ನಬಸವೇಶ್ವರನು ಉಳವಿಗೆ ಬಂದು ಪ್ರಮಥರೊಂದಿಗೆ ಕೈಲಾಸವನ್ನು ಸೇರುತ್ತಾನೆ.

ಅನಂತರ ಅಲ್ಲಮಪ್ರಭುವೇ ಮುರುಗಾರಾಧ್ಯನೆಂಬ ನಾಮವ ಧರಿಸಿ ತುಂಗಾ ನದಿಯನ್ನು ದಾಟುವಾಗ ಪವಾಡವನ್ನು ಮೆರೆದು ಸರ್ಪಗಳೆರಡರ ಶಾಪವನ್ನು ತೊಲಗಿಸಿ ಮುರಗಿ ದಂಡವನ್ನು ಮಾಡಿ ಹಸ್ತದಲ್ಲಿ ಧರಿಸಿ ಸಂಚರಿಸುತ್ತ ಚಿನ್ಮೂಲಾದ್ರಿಯ ನಗರಕ್ಕೆ ಬಂದು ಅಲ್ಲಿನ ಅರಣ್ಯ, ಪರ್ವತಸ್ತೋಮಗಳ ಸೌಂದರ್ಯವನ್ನು ಕಂಡು ಬೆರಗಾಗಿ ಮುಗ್ಧನಾಗಿ ಅಲ್ಲಿ ಸಂಜೆಯಾಗಲು ಪಟ್ಟಣಕ್ಕೆ ಅನತಿ ದೂರದಲ್ಲಿದ್ದ ಸಿಂದಿ ವನದ ಛಾಯೆಯಲ್ಲಿದ್ದ ಗೋಪಾಲನೊಬ್ಬನು ಅವರ ಪಾದಕ್ಕೆ ನಮಿಸಿ ತಂದೆ ಬಾರೆಂದು ಕರೆಯಲು ಆ ರಾತ್ರಿ ಆ ಆಶ್ರಮದಲ್ಲಿ ತಂಗುತ್ತಾರೆ. ಮಾರನೆಯ ದಿನ ಸೂರ್ಯೋದಯವಾದ ಮೇಲೆ ವನದಲ್ಲಿ ತಿರುಗಾಡಲೆಂದು ಬಂದಾಗ ಮೆದಕೇರಿಯೆಂಬ ಬಾಲಕನು ಬಳಲಿ ನೆರಳಲ್ಲಿ ಮಲಗಿರುವಾಗ ಒಂದು ಸರ್ಪ ಅವನ ತಲೆಯ ಮೇಲೆ ಆಡುತ್ತಿರುವುದನ್ನು ಕಂಡು ಅಲ್ಲಿಗೆ ಬರಲು, ಸರ್ಪವು ಅಲ್ಲಿಂದ ತೆರಳಿದಮೇಲೆ, ಬಾಲಕನನ್ನು ಎಬ್ಬಿಸಿ ನೀನು 'ಪುಣ್ಯವಂತ; ಮುಂದೆ ಅವನಿಪತಿಯಾಗಿ ಬಾಳುವೆ' ಎಂದು ಹೇಳಿ ಅರಣ್ಯದಲ್ಲಿ ಚರಿಸುತ್ತ ಅಲ್ಲಿಯೇ ಇರುವರು. ಚಿನ್ಮೂಲಾದ್ರಿಪುರದರಸು ಸಾಯಲು ಪಟ್ಟದಾನೆಯು ಈ ಬಾಲಕನ ಕೊರಳಿಗೆ ಮೂರು ಸಾರಿ ಮಾಲೆ ಸೂಡಲು ಆತನನ್ನು ದೊರೆಯನ್ನಾಗಿ ಮಾಡುವರು. ಅನಂತರ ಆತನು ಗುರುಗಳಿಗೆ ಅರಣ್ಯದಲ್ಲಿ ಒಂದು ಮಠವನ್ನು ಕಟ್ಟಿಸಿಕೊಡುವನು. ಇವರು ಆ ಮಠದಲ್ಲಿರುವಾಗ ಶ್ರೀರಂಗಪಟ್ಟಣದ ಛಾದುರನೆಂಬ ಮುಸಲ್ಮಾನ ರಾಜನು ಮೂರ್ತಿಗಳನ್ನೆಲ್ಲ ಛಿದ್ರಿಸುವಾಗ ಪಟ್ಟಣದ ಹೊರಬಯಲಿನಲ್ಲಿದ್ದ ಶಿಲಾಬಸವ ಮೂರ್ತಿಯನ್ನು ಹೊಡೆಯುವಾಗ ನಾನಾರೀತಿಯ ಧ್ವನಿಗಳುಂಟಾಗಲು ಧರ್ಮಗುರುಗಳನ್ನೆಲ್ಲ ಕರೆಸಿ ಚರ್ಚಿಸಲು ಒಬ್ಬ ಜಂಗಮನು ಅದರ ಮಹಿಮೆಯನ್ನು ತಿಳಿಸಲು ಭಕ್ತಿಯಿಂದ ಅದರಲ್ಲಿಂದ ಶಿಖಾ-ಶೈಲ ಮುದ್ರೆಗಳನ್ನು ತನ್ನ ವಶಕ್ಕೆ ತೆಗೆದುಕೊಂಡು ಚಿನ್ಮೂಲಾದ್ರಿಯ ಮೇಲೆ ದಂಡೆತ್ತಿಬಂದು ಆಗ ದೊರೆಯಾಗಿದ್ದ ಮದಕರಿನಾಯಕನನ್ನು ಕೊಂದು ಅರಣ್ಯದಲ್ಲಿದ್ದ ಶಾಂತಾ ಮುರುಗಾರಾಧ್ಯನ ಮಠಕ್ಕೆ ಬಂದಾಗ ಅಹಂಕರಿಸಿ ತನ್ನ ಕಣ್ಣುಗಳನ್ನು ಕಳೆದುಕೊಳ್ಳುತ್ತಾನೆ. ಅನಂತರ ಗುರುಗಳ ಕರುಣೆ ಯಿಂದ ಕಣ್ಣುಗಳು ಬರಲು ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಪಟ್ಟಣಕ್ಕೆ ಹಿಂತಿರುಗುತ್ತಾನೆ. ಇತ್ತ ಶಾಂತಾ ಮುರುಗರು ಇನ್ನು ಕೈಲಾಸಕ್ಕೆ ತೆರಳುವ ಕಾಲ ಸನ್ನಿಹಿತವಾಯಿತೆಂದರಿತು ಅಲ್ಲಿ ಶೂನ್ಯ ಸಿಂಹಾಸನವನ್ನು ಸ್ಥಾಪಿಸಿ, ದಸರಾ ಉತ್ಸವವನ್ನು ಮಹರ್ನಮಿ ಯಂದು ನೆರವೇರಿಸುತ್ತಾರೆ. ಆಗ ಶ್ರೀರಂಗಪಟ್ಟಣದ ಛಾದುರನು ಬಂದು ಶಿಖಾ-ಶೈಲ ಮುದ್ರೆಗಳನ್ನು ಗುರುಗಳಿಗೆ ಅರ್ಪಿಸುತ್ತಾನೆ. ಶಾಂತಾ ಮುರುಗರು ತಮ್ಮ ಬಳಿಯಿದ್ದ ಮರಿಗಳಿಗೆ ಶೂನ್ಯಪಟ್ಟವನ್ನು ಕಟ್ಟಿ ನಮ್ಮನ್ನು ಕಂಡಂತೆಯೇ ಭಕ್ತಿಯಿಂದ ಇವರನ್ನು ಕಾಣಬೇ ಕೆಂದು ಹೇಳಿ ಕೈಲಾಸಕ್ಕೆ ಹೋಗುತ್ತಾರೆ. ಇದಿಷ್ಟು' 'ಮುರಿಗೇಂದ್ರ ವಿಜಯದ'ಲ್ಲಿ ಬರುವ ವೃತ್ತಾಂತ.

ಇಲ್ಲಿ ನಿರಂಜನ ಪೀಠದ ಧರ್ಮಾಧಿಕಾರದ ಚಿನ್ಹೆಗಳಾದ ಶಿಖಾ-ಶೈಲ ಮುಂತಾದ ಮುದ್ರೆಗಳು ದೆಹಲಿಗೆ ಹೋದುದಾಗಲಿ, ಮುರುಗಾರಾಧ್ಯರು ದೆಹಲಿಗೆ ಹೋಗಿ ಮಹಿಮೆಯನ್ನು ಮೆರೆದು ಈ ಚಿನ್ಹೆಗಳನ್ನು ಮರಳಿ ತಂದ ವೃತ್ತಾಂತವಾಗಲೀ ಬಂದಿಲ್ಲ. ಆದರೆ ಮಹಾಲಿಂಗೇಂದ್ರ ವಿಜಯದಲ್ಲಿ ಉಳವಿಗೆ ಹೋದ ಚನ್ನಬಸವಣ್ಣನವರು ತಮ್ಮ ಬಳಿಯಲ್ಲಿದ್ದ ಮಲ್ಲೂಖಾನನನ್ನು ಕೃಪಾದೃಷ್ಟಿಯಿಂದ ನೋಡಿ ಸಿಂಹಾಸನ ಶಿಖಾ-ಶೈಲಗಳೆಂಬ ಚಿನ್ಹತ್ರಯಗಳನ್ನು ಅವನ ವಶಕ್ಕೆ ಕೊಟ್ಟು, ನೀನು ಇವುಗಳನ್ನು ತೆಗೆದುಕೊಂಡು ದೆಹಲಿಗೆ ಹೋಗು. ಅಲ್ಲಿ ನಿನಗೆ ಬಾದಶಹ ಪಟ್ಟವಾಗುವುದು. ಮುಂದೆ ನಮ್ಮವರು ಬಂದಾಗ ಮಹಿಮೆಗಳನ್ನು ಮೆರೆದರೆ ಈ ಅಧಿಕಾರ ಚಿನ್ಹತ್ರಯಗಳನ್ನು ಅವರಿಗೆ ಮರಳಿ ಕೊಡುವ ವ್ಯವಸ್ಥೆಯನ್ನು ಮಾಡು ಎಂದು ಆಶೀರ್ವದಿಸಿ ಅವನನ್ನು ಕಳುಹಿಸಿಕೊಟ್ಟಂತೆ ಹೇಳಿದೆ. ಅದೇ ಪ್ರಕಾರ ಶಾಂತಾ ಮುರುಗೇಂದ್ರ ರಾಜೇಂದ್ರರು ಚಿನ್ಮೂಲಾದ್ರಿಯಲ್ಲಿ ಗೋಪಾಲಕ ಬಾಲಕನನ್ನು ಹರಸಿ, ತಮ್ಮ ಬಳಿ ಇಟ್ಟುಕೊಂಡಿದ್ದು, ಅಲ್ಲಿನ ರಾಜನಾದ ಚಂದ್ರಮೌಳೀಶನಿಗೆ ಮಕ್ಕಳಿಲ್ಲದಿರಲು ಈ ಬಾಲಕನಿಗೇ ಬಿಚ್ಚುಗತ್ತಿಯ ಭರಮನಾಯಕನೆಂದು ನಾಮಕರಣ ಮಾಡಿ ಆತನ ವಶಕ್ಕೆ ಒಪ್ಪಿಸಿ, ಮೈಸೂರಿಗೆ ತೆರಳುತ್ತಾರೆ. ಅಲ್ಲಿ ವಾದದಲ್ಲಿ ಶಿವೇತರ ಮತಸ್ಥರನ್ನು ಗೆದ್ದು ದೆಹಲಿಗೆ ತೆರಳುತ್ತಾರೆ. ಅಲ್ಲಿ ಶಿವಭಕ್ತ ಮುದಿಮಲ್ಲಪ್ಪನ ಮನೆಯಲ್ಲಿದ್ದು ದೆಹಲಿಯ ಬಾದಶಹನ ಸತ್ತ ಪಟ್ಟದಾನೆಗೆ ಪ್ರಾಣವಿತ್ತು, ರಾಜನ ಭಕ್ತಿಯನ್ನು ಸ್ವೀಕರಿಸಿ, ಅಲ್ಲಿದ್ದ ಸಿಂಹಾಸನ–ಶಿಖಾ–ಶೈಲಗಳನ್ನು ಪಡೆದು, ಬಾದಶಹನಿಂದ "ಕಲಂದರ್ ಬಾದಶಹ ಅಲ್ಲಾ ಖುದಾಪರ" ಎಂಬ ಬಿರುದನ್ನು ಪಡೆದು, ಉತ್ಸವವನ್ನು ಮಾಡಿಸಿಕೊಂಡು 12,000 ಆನೆಗಳನ್ನು ಪಡೆದು ಹೈದರಾಬಾದಿಗೆ ಬಂದು ಅಲ್ಲಿಯೂ ಅದೇ ರೀತಿಯ ಮಹಿಮೆಯನ್ನು ಮೆರೆದು, ಅಲ್ಲಿ ಒಂದು ವಿರಕ್ತ ಮಠವನ್ನು ಕಟ್ಟಿಸಿ ಅದಕ್ಕೆ ರುಸುಮು-ಕಾಣಿಕೆ ಭೂಮಿಯನ್ನು ನೇಮಕ ಮಾಡಿಸಿ, ಶ್ವೇತಛತ್ರಿಗಳ ಜೋಡಿಯನ್ನು, ಎಪ್ಪತ್ತೆರಡು ಬಿರುದುಗಳನ್ನು ಪಡೆದು ಮತ್ತೆ ಚಿನ್ಮೂಲಾದ್ರಿಗೆ ವಿಜಯ ಮಾಡು

ತ್ತಾರೆ. ಅಷ್ಟು ಹೊತ್ತಿಗೆ ರಾಜನಾಗಿದ್ದ ಇವರ ಕರುಣೆಯ ಕಂದ ಬಿಚ್ಚುಗತ್ತಿಯ ಭರಮನಾಯಕನು ವೈಭವದ ಮೆರವಣಿಗೆ ಮಾಡಿಸಿಕೊಂಡು ಬಂದು ಒಂದು ಮಠವನ್ನು ಕಟ್ಟಿಸಿ ರಾಜಗುರುಗಳನ್ನಾಗಿ ಮಾಡಿಕೊಳ್ಳುತ್ತಾನೆ.

ಕದನ ಪ್ರಚಂಡ ಮತ್ತಿ ತಿಮ್ಮಣ್ಣನಾಯಕ-1567–1587

ತಿರುಪತಿಯ ಕಡೆಯಿಂದ ಬಂದ ಸಬ್ಬಗಡಿ ಓಬನಾಯಕನ ಮಗ ತಿಮ್ಮಣ್ಣನಾಯಕ. ಆಗ ಕಾಮಗೇರೆ ವಂಶಸ್ಥ ಯಶೋವಂತ ಚಿತ್ರನಾಯಕರು ಆನೆಗೊಂದಿ ನರಪತಿ ಕೃಷ್ಣರಾಜ ಮಹಾರಾಜಾಧಿರಾಜರ ಅಜ್ಞಾನುಸಾರ ಈ ಪರ್ವತಕ್ಕೆ ಜಹಗೀರು ತೆಗೆದುಕೊಂಡು ಈ ಪರ್ವತ ವಾಸವನ್ನು ಮಾಡಿ ಕಿಲ್ಲೆ ಕಟ್ಟಿಸಿದರು. ಆದ್ದರಿಂದ ಈ ಪರ್ವತಕ್ಕೆ 'ಚಿತ್ರದುರ್ಗ' ಎಂದು ಹೆಸರಾಯಿತು. ಇವರು ತಿಮ್ಮಣ್ಣನಾಯಕನ ಪರಾಕ್ರಮವನ್ನು ನೋಡಿ ತಮ್ಮ ಮಗಳು ಕಮಲಾಂಬೆಯನ್ನು ಕೊಡಬೇಕೆಂದು ಮಾಡಿಕೊಂದಿದ್ದರು. ಆದರೆ ಇವರ ಸಂಬಂಧಿ ಕಸ್ತೂರಿ ರಂಗನಾಯಕನು ಈಕೆಯನ್ನು ಮದುವೆಯಾಗಿ ತಾನು ರಾಜ್ಯಕ್ಕೆ ಒಡೆಯನಾಗಬೇಕೆಂದುಕೊಂಡಿದ್ದ. ಆದರೆ ಈತನ ಸಣ್ಣತನ, ನೀಚಕೆಲಸಗಳಿಂದಾಗಿ ಕಮಲಾಂಬೆಯಾಗಲಿ, ಚಿತ್ರನಾಯಕರಾಗಲೀ ಅವನನ್ನು ಸಹಿಸುತ್ತಿದ್ದಂತೆ ಕಂಡುಬರುವುದಿಲ್ಲ.

ಒಮ್ಮೆ ಕಸ್ತೂರಿರಂಗಪ್ಪನಾಯಕನು ಕಳ್ಳರೊಡೆಯನ ವೇಷ ಧರಿಸಿ ಸಿದ್ಧಪುರುಷರನ್ನು ಹಿಂಸಿಸುತ್ತಿರುವಾಗ ತಿಮ್ಮಣ್ಣನಾಯಕನ ಅಕಸ್ಮಿಕ ಆಗಮನದಿಂದ ಆತ ಆ ಸನ್ಯಾಸಿಯನ್ನು ಬಿಟ್ಟು ಓಡಿ ಹೋಗುತ್ತಾನೆ. ಆಗ ಆ ಸಿದ್ಧಪುರುಷರು"ಅಯ್ಯಾ ರಾಜಾಧಿ ರಾಜನೂ ಶೂರಾಗ್ರೇಸರನೂ ಆಗಿರುವ ನಿನ್ನ ಮುಖವನ್ನು ನೋಡಿದೊಡನೆಯೇ ಚಿನ್ಮೂಲಗಿರಿಯ ರಾಜ್ಯ ಸ್ಥಾಪನೆಯಾಯಿತೆಂದು ಹರ್ಷಿಸಿದೆನು. ಮಹಾತ್ಮನೊಬ್ಬನ ಸಹಾಯದಿಂದ ಈ ಗಿರಿಯ ಮೇಲೆ ರಾಜ್ಯವನ್ನು ಸ್ಥಾಪಿಸಿ, ಇಗೋ ! ಇಲ್ಲಿ ಕಾಣುವ ಸಿದ್ಧೇಶ್ವರ ಲಿಂಗವನ್ನು ದೊಡ್ಡ ದೇವಸ್ಥಾನದಲ್ಲಿ ಪ್ರತಿಷ್ಠಿಸಿ ದೇಹವನ್ನು ಬಿಡಬೇಕೆಂಬುದು ನನ್ನ ಜೀವನದ ಸಂಕಲ್ಪ ಈ ನನ್ನ ಮನೋರಥವು ನಿನ್ನಿಂದ ನೆರವೇರುವುದೆಂದು ನಿನ್ನ ಮುಖದಲ್ಲಿರುವ ರಾಜ ಲಕ್ಷಣಗಳಿಂದಲೂ ನಿನ್ನ ನಡೆನುಡಿಗಳಿಂದಲೂ ನನಗೆ ತೋರುತ್ತಿರುವುದು. ನೀನೇನನ್ನು ಕೇಳುವೆ, ಹೇಳು.

"ಸಾಧುಗಳೇ, ನಾನು ರಾಜಾಧಿರಾಜನೆಂದರೇನು ? ಅದೆಲ್ಲ ಕನಸು. ಈಗ ನನ್ನ ಒಡೆಯನೂ ಸಮೀಪ ಬಂಧುವೂ ಆದ ಚಿತ್ರನಾಯ್ಕನು ವ್ಯಾದಿಗ್ರಸ್ಥನಾಗಿದ್ದಾನೆ. ದಿನದಿನಕ್ಕೆ ಆತನ ಬಲ ಕುಂದುತ್ತಿದೆ. ಆತನಿಗೆ ಗಂಡು ಮಕ್ಕಳಿಲ್ಲದಿರುವುದರಿಂದ ಆತನು ಮೃತ ಹೊಂದಿದರೆ ಚಂದ್ರಗಿರಿ ರಾಜ್ಯದ ಆಡಳಿತವು ಅನ್ಯಕ್ರಾಂತವಾಗವುದು. ತಮಗೆ ವೈದ್ಯ ವಿದ್ಯೆಯಲ್ಲಿ ಪರಿಶ್ರಮವಿರುವುದೆಂದು ಹೇಳಿದಿರಿ. ತಾವು ದಯಮಾಡಿ ಬಂದು ರಾಜರಿಗೆ ಔಷಧವನ್ನು ಕೊಡಬೇಕಾಗಿ ಬೇಡಿಕೊಳ್ಳುತ್ತೇನೆ" ಎಂದನು.

ಕೂಡಲೇ ಆ ಸಿದ್ಧಪುರುಷರು ಚಿತ್ರನಾಯಕನ ಬಳಿಗೆ ಬಂದು ಔಷಧ ಕೊಡಲು ತೊಡಗುತ್ತಾರೆ. ಅವರ ಆಗಮನವನ್ನು ಕಂಡ ಕೂಡಲೆ ಮುಖಬಿಳಿಚಿಕೊಂಡ ಕಸ್ತೂರಿರಂಗಪ್ಪನಾಯಕನ ಕೀಳು ವರ್ತನೆಯನ್ನು ಸಹಿಸದೆ ಚಿತ್ರನಾಯಕರು ಅವನನ್ನು ಹೊರ ಹಾಕುತ್ತಾರೆ. ಸಿದ್ಧಪುರುಷರ ಔಷಧದಿಂದ ರಾಜರು ಗುಣಮುಖರಾಗುತ್ತಾರೆ.

ತನ್ನ ಕುತಂತ್ರಗಳೇನೂ ಇಲ್ಲಿ ಸಾಗದುದನ್ನು ಕಂಡು ದುರ್ನಡತೆಯ ಕಸ್ತೂರಿರಂಗಪ್ಪನಾಯಕನು ವಿಜಯನಗರದ ಸಾಳ್ವ ನರಸಿಂಗ ರಾಯನ ನೇತೃತ್ವದಲ್ಲಿ ದಾಳಿ ಮಾಡುತ್ತಾನೆ. ಆದರೆ ತಿಮ್ಮಣ್ಣನಾಯಕನ ಪರಾಕ್ರಮ ಸಿದ್ಧಪುರುಷನ ಮಾರ್ಗದರ್ಶನಗಳಿಂದ ಸಾಳ್ವ ನರಸಿಂಗರಾಯ ಸೋತು ಸೆರೆಯಾಗುತ್ತಾನೆ. ಕಸ್ತೂರಿ ರಂಗಪ್ಪನಾಯಕ ಅಲ್ಲಿಗೂ ತನ್ನ ದುರ್ನೀತಿ, ದುರ್ನಡತೆಯನ್ನು ಬಿಡದೆ ರಾಣಿಯವರು ಮತ್ತು ಮಗಳು ಕಮಲಾಂಬೆಯರನ್ನು ಮೋಸದಿಂದ ಲಕ್ಷ್ಮನಾಗತಿಯ ಸಹಾಯದಿಂದ ಮೇನೆಯಲ್ಲಿ ದೂರ ಸಾಗಿಸುತ್ತಾನೆ. ಆದರೆ ಮತ್ತೆ ತಿಮ್ಮಣ್ಣನಾಯಕ ಹಾಗೂ ಸಿದ್ಧಪುರುಷರ ಸಹಾಯದಿಂದ ಈ ಅಪಾಯವೂ ಪಾರಾಗುತ್ತದೆ. ಕೊನೆಗೆ ಮೊಂಡಕೈ ಸರದಾರ ತಿಮ್ಮಣ್ಣನಾಯಕ ಚಿನ್ಮೂಲಗಿರಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ತನ್ನ ಮಾವನ ಜ್ಞಾಪಕಾರ್ಥವಾಗಿ ಅದಕ್ಕೆ 'ಚಿತ್ರದುರ್ಗ' ಎಂದು ಹೆಸರಿಟ್ಟು ಸಾಧುವಿನ ಅಪ್ಪಣೆಯಂತೆ ಚಿತ್ರದುರ್ಗದ ಅದ್ಭುತವಾದ ಕೋಟೆಯನ್ನು, ಸಿದ್ಧೇಶ್ವರ ದೇವಸ್ಥಾನ, ಏಕನಾಥೇಶ್ವರಿಯ ದೇವಸ್ಥಾನಗಳನ್ನು ಕಟ್ಟಿಸಿ ಧರ್ಮದಿಂದ ರಾಜ್ಯವಾಳುತ್ತಿದ್ದು ಚಿತ್ರದುರ್ಗದ ನಾಯಕರಿಗೆ ಮೂಲಪುರುಷನಾಗುತ್ತಾನೆ. [ಚಿತ್ರದುರ್ಗದ ಬೆಟ್ಟ ಮತ್ತು ನಾಯಕ ಸಾಮ್ರಾಜ್ಯ ಪಿ. ಕೃಷ್ಣರಾವ್, ಮೈಸೂರು ಗೆಜೆಟಿಯರ್, ಚಿತ್ರದುರ್ಗ ಜಿಲ್ಲೆ ಮತ್ತು ಚಿತ್ರದುರ್ಗದ ಬಖೈರುಗಳಲ್ಲಿಯೂ ಈ ವಿಷಯ ಬರುತ್ತದೆ.]

ಆ ಸಿದ್ಧಪುರುಷರು ತಿಮ್ಮಣ್ಣನಾಯಕನಿಗೆ ಹಾದಿತೋರಿಸಿ 'ಅರಿತು ನಡೆದರೆ ಆರು ಪಟ್ಟ, ಮರೆತು ನಡೆದರೆ ಮೂರು ಪಟ್ಟ' ಎಂದು ಉಪದೇಶಿಸುತ್ತಾರೆ. ತಿಮ್ಮಣ್ಣನಾಯಕನು ಆ ಸಿದ್ಧರ ಅಪ್ಪಣೆಯಂತೆ ಅಲ್ಲಿಯೇ ಇದ್ದು ಮೇಲುದುರ್ಗದ ಕೋಟೆಯನ್ನು, ಅರಮನೆಯನ್ನು ಕಟ್ಟಿಸುತ್ತಾನೆ. ಈ ಸಿದ್ಧಪುರುಷರು ಯಾರು ? ಇವರನ್ನು ಒಂದು ಕಡೆ ರಸಸಿದ್ಧರು ಎಂದೂ ಕರೆಯಲಾಗಿದೆ. ಇವರಿಗೂ ಇಲ್ಲಿನ ಮಠಕ್ಕೂ ಸಂಬಂಧವಿರಬಹುದೇ ?

ಮುರಿಗೇಂದ್ರ ರಾಜೇಂದ್ರರು ಚಿತ್ರದುರ್ಗಕ್ಕೆ ಬಂದು ಭರಮನಾಯಕನಿಂದ ಮಠವನ್ನು ಕಟ್ಟಿಸಿ ನೆಲೆಯಾಗಿ ನಿಲ್ಲುವವರೆಗೂ ಹಿಂದಿನ ಪೂಜ್ಯ ಪೀಠಾಧ್ಯಕ್ಷರಿಗೆ ಈ ರೀತಿಯಾದ ಒಂದು ಮಠವಿರಲಿಲ್ಲ. ಅಲ್ಲದೆ ಹಿಂದಿನ ಯಾವ ಸ್ವಾಮಿಗಳಿಗೂ ಈಗಿನಂತೆ 'ಮುರಿ' ಗಳಿರಲಿಲ್ಲ. ಆದರೆ ಮುರಿಗೇಂದ್ರ ರಾಜೇಂದ್ರರು ಈ ಪೀಠಕ್ಕೆ ಬಂದ ನಂತರ ಚಿನ್ಮೂಲಾದ್ರಿಯಲ್ಲಿ ಬೃಹನ್ಮಠವು ಸ್ಥಾಪನೆಯಾಗಿ, ಚರಮೂರ್ತಿಗಳ ನೇಮಕವಾಗಿ ಇವರೇ ಮುಂದೆ ಸಾಮಾನ್ಯವಾಗಿ ಮಠಾಧ್ಯಕ್ಷರಾಗುವ ಪರಿಪಾಠಿ ಮುಂದುವರಿಯುತ್ತಿದೆ. 1399-1610 ರವರೆಗೆ ಪ್ರಾರಂಭದ ಮೈಸೂರಿನ ಒಡೆಯರು ಮತ್ತು ಉಮ್ಮತ್ತೂರಿನ

ಕ್ರಿ.ಶ. 1550-1763 ರವರೆಗೆ ಕೆಳದಿ ಅಥವಾ ಇಕ್ಕೇರಿ ಅರಸರು ರವರ ಕಾಲದಲ್ಲಿ ಮೈಸೂರು ರಾಜ್ಯದಲ್ಲಿ ಲಿಂಗಾಯತ ಧರ್ಮವು ರಾಜ್ಯಧರ್ಮವಾಗಿತ್ತು. ಅವರ ಪ್ರಧಾನ ಮಠವು ಮೈಸೂರು ದೇಶದ ಚಿತ್ರದುರ್ಗದಲ್ಲಿ ಸ್ಥಾಪಿತವಾಗಿದೆ ಎಂದು ಎಡ್ವರ್ಡ್ ಪಿ. ರೈಸ್‌ರವರು ಹೇಳುತ್ತಾರೆ.[1] ಈ ಮಠವು ಮೊದಲು ಚಿತ್ರದುರ್ಗದ ಬೆಟ್ಟದ ಮೇಲಿದ್ದು ಈಗ ಈಗಿರುವ ಸ್ಥಾನಕ್ಕೆ ವರ್ಗಾವಣೆಯಾಯಿತು. ಈ ಚಿತ್ರದುರ್ಗಕ್ಕೆ ಚಿನ್ಮೂಲಗಿರಿದುರ್ಗ ಎಂದು ಹೆಸರಿತ್ತು. ಇದರ ಸಂಸ್ಕೃತ ರೂಪವೇ ಚಿನ್ಮೂಲಾದ್ರಿ ಆಗಿದೆ. ಇದರ ಕರ್ತೃಗಳು ಶೂನ್ಯಪೀಠಾಧ್ಯಕ್ಷರಾದ ಶ್ರೀಮನ್ನಿರಂಜನ ಮುರಿಗೇಂದ್ರ ರಾಜೇಂದ್ರ ಮಹಾಸ್ವಾಮಿಗಳು.

ಇವರ ಹೆಸರು ಶಾಂತವೀರಸ್ವಾಮಿಗಳು. 'ಮುರಗಾ' ಎಂಬುದು ಇವರಿಂದ ಮೊದಲಾಗಿ ಮುಂದಿನ ಪೀಳಿಗೆಯವರಿಗೆಲ್ಲ ಈ ಅಭಿದಾನ ಸಂಪ್ರದಾಯಬದ್ಧವಾಗಿ ಮುಂದುವರಿಯುತ್ತಿದೆ. 'ಮುರಗಾ' ಶಬ್ದಕ್ಕೆ ನಾನಾ ರೀತಿಯ ವ್ಯುತ್ಪತ್ತಿಗಳನ್ನು ಹೇಳುತ್ತಾರೆ. ಯೋಗಿ, ಜೋಗಿ, ಭೋಗಿ ಎಂಬ ಪದಗಳ ಕೊನೆಯಲ್ಲಿರುವ ಮೂರು 'ಗಿ' ಗಳಿಂದಾಗಿ 'ಮುರುಗಾ' ಶಬ್ದ ಬಂತೆಂದು ಹೇಳುವುದರಿಂದ ಹಿಡಿದು ಅವರ ಕೈಯಲ್ಲಿ ಮುರಿಗೆಯ ಮುದ್ಗರವಿದ್ದುದರಿಂದ, ಅವರು ತಲೆಗೆ ವಸ್ತ್ರವನ್ನು ಮುರಿಗೆ ಮುರಿಗೆಯಾಗಿ ಸುತ್ತುತ್ತಿದ್ದುದರಿಂದ, ಎದೆ ಮತ್ತು ಬೆನ್ನಿಗೆ ಶಾಲನ್ನು ಮುರಿಗೆಯಾಗಿ ಸುತ್ತುತ್ತಿದ್ದುದರಿಂದ ಅವರ ಕೈಯಲ್ಲಿ ಮುರಿಗೆಯಾದ ಬೆತ್ತವಿದ್ದುದರಿಂದ ಈ ಅಭಿದಾನ ವಿತ್ತೆಂದು ನಾನಾ ರೀತಿಯ ಜನಪ್ರಿಯ ವ್ಯುತ್ಪತ್ತಿಗಳನ್ನು ಹೇಳುತ್ತಾರೆ. ಆದರೆ ತಮಿಳು ನಾಡಿನ ಶೈವರಲ್ಲಿ 'ಷಣ್ಮುಖ' ಅವರ ತೀರ ಪೂಜನೀಯನಾದ ದೇವತೆ. ಈತನಿಗೆ 'ಮುರುಘಾ' ಎಂದು ಕರೆಯುತ್ತಾರೆ. ಚಿನ್ಮೂಲಾದ್ರಿ ಪೀಠ ಪರಂಪರೆಯಲ್ಲಿ ಬರುವ ಸ್ವಾಮಿಗಳು ತಾರಕಾರಿಯಾದ ಷಣ್ಮುಖನನ್ನು ಬಹಳವಾಗಿ ಸ್ತುತಿಸುತ್ತಾರೆ. 'ಮುರಗೇಂದ್ರ ವಿಜಯ'ದಲ್ಲಿ ಅದರ ಕರ್ತೃಗಳಾದ ಬನಹಟ್ಟಿ ಘನ ಮಠಾಧ್ಯಕ್ಷರಾದ ರುದ್ರದೇವರು ಚನ್ನಬಸವಣ್ಣನವರನ್ನು ಷಣ್ಮುಖನ ಅವತಾರಿಯೆಂದು ಚಿತ್ರಿಸಿರುವುದಲ್ಲದೆ, ಮಹಾಲಿಂಗ ದೇವರನ್ನು ಷಣ್ಮುಖನ ಅವತಾರಿಯೆಂದೇ ಚಿತ್ರಿಸಿದ್ದಾರೆ. ಮಹಾಲಿಂಗೇಂದ್ರ ವಿಜಯದಲ್ಲಿಯೂ ಈ ಪದ್ಧತಿ ಇದೆ. ಇಮ್ಮಡಿ ಮುರಗಾ ಗುರುಸಿದ್ಧ ದೇಶಿಕೇಂದ್ರರು ಕೂಡ ತಮ್ಮ ಹಾಲಾಸ್ಯ ಪುರಾಣದಲ್ಲಿ ಸುಂದರ (ಷಣ್ಮುಖ)ನನ್ನು ಅಲ್ಲಲ್ಲಿ ಸ್ತುತಿಸುತ್ತಾರೆ. ಆದುದರಿಂದ ಮುರುಗನ್, ಮುರುಗ (ಕುಮಾರಸ್ವಾಮಿ) ಲಾಂಛನದವರು, ಮುರುಗಿಯವರು, ಮುರುಗೇಶ, ಮುರುಗೇಂದ್ರ ಇತ್ಯಾದಿಯಾಗಿ ಇರಬೇಕು. ಇದು ಹೆಚ್ಚು ಸಂಭವನೀಯ ಎಂದು ತೋರುತ್ತದೆ. ಹೀಗಾಗಿ ಇವರು ಈ ಮಠದ ಆದ್ಯ ಕರ್ತೃಗಳಾಗಿ ಜಗದ್ಗುರು ಮುರುಗ ಶಾಂತವೀರಸ್ವಾಮಿಗಳೆಂದು ಪ್ರಸಿದ್ಧರಾಗಿ ಈ ಮಠದಲ್ಲಿಯೇ ಸಜೀವ ಸಮಾಧಿಯನ್ನು ಪಡೆದರು.

ಇವರ ಆಧ್ಯಾತ್ಮ ತೇಜಸ್ಸಿಗೆ ಮಾರುಹೋಗಿ ಭರಮನಾಯಕನ ಕಾಲಕ್ಕೆ ಚಿತ್ರದುರ್ಗದ ಅರಸು ಮನೆತನದವರು ವೀರಶೈವ ದೀಕ್ಷೆಯನ್ನು ತೆಗೆದುಕೊಂಡಿದ್ದರು. ಇದನ್ನು ನೋಡಿದರೆ ಇವರ ವರ್ಚಸ್ಸು ಹೇಗಿದ್ದಿರಬಹುದೆಂಬುದು ಮನಗಾಣದೇ ಇರದು.

ಇಮ್ಮಡಿ ಮುರಿಗಾ ಗುರುಸಿದ್ಧ ದೇಶಿಕೇಂದ್ರರು :
(ಪಟ್ಟ 9. ಕಾಲ ಸು. ಕ್ರಿ. ಶ. 1710-1725)

ಮೂಲಕರ್ತೃಗಳಾದ ಮುರಿಗೇಂದ್ರರ ಆಶೀರ್ವಾದ ಬಲದಿಂದ ಆತ್ಮತೇಜಸ್ಸನ್ನು ವೃದ್ಧಿಗೊಳಿಸಿಕೊಂಡು ಬೃಹನ್ಮಠದ ಹಿರಿಮೆ-ಗರಿಮೆಗಳನ್ನು ಬೆಳಗಿದ ಮಹಂತರು ಇಮ್ಮಡಿ ಗುರುಸಿದ್ಧ ಸ್ವಾಮಿಗಳು. ಕನ್ನಡ–ಸಂಸ್ಕೃತಗಳೆರಡರಲ್ಲೂ ಆಳವಾದ ಪಾಂಡಿತ್ಯವನ್ನು ಗಳಿಸಿದ್ದ ದೊಡ್ಡ ವಿದ್ವಾಂಸರು. ಮುರಿಗಾ ಶಾಂತವೀರರ ಅನುಗ್ರಹಕ್ಕೆ ಪಾತ್ರರಾಗಿ ಅವರು ಹಿರಿದ ಸಿಂಹಾಸನವನ್ನೇರಿದ ಬಳಿಕ ಇವರಿಗೂ ಸಂಪ್ರದಾಯದಂತೆ ಇಮ್ಮಡಿ ಮುರಿಗಾ ಗುರುಸಿದ್ಧ ದೇಶಿಕೇಂದ್ರರೆಂದು ಹೆಸರು ಬಂದಿದೆ. ಇವರಿಗೆ ಇರ್ಮಡಿ ಮುರಿಗಾ ಗುರುಸಿದ್ಧ ದೇಶಿಕೇಂದ್ರ, ಲೀಲಾಖ್ಯದ ಮುರಿಗಾಖ್ಯ ಶಿವಯೋಗಿ ಎಂದು ಮುಂತಾದ ಹೆಸರುಗಳಿವೆ.

ಬರಮಣ್ಣನಾಯಕನು ಚಂಪಕಾ ಸಿದ್ಧೇಶನ ಸ್ಥಾನದೊತ್ತಿನಲ್ಲಿ 360 ಅಂಕಣದ ಶಿಲಾ ಮಠವನ್ನು ಕಟ್ಟಿಸಿಕೊಟ್ಟು ಮುರಿಗೇಂದ್ರ ರಾಜೇಂದ್ರರನ್ನು ಅದರಲ್ಲಿ ಸ್ಥಾಪಿಸಲು ಅವರು ಅಲ್ಲಿಯೇ ದಾಸೋಹವನ್ನು ನಡೆಸುತ್ತ ತಮ್ಮ ಬಳಿಯಿದ್ದ ಮೂವರು ಚರಮೂರ್ತಿಗಳಲ್ಲಿ ಚೀಲಾಳಪ್ಪನವರನ್ನು ಗೌರವ ಭಿಕ್ಷಾರ್ಥವಾಗಿ ಹರಪನಹಳ್ಳಿಗೂ, ಕುಮಾರಪ್ಪನವರನ್ನು ಸ್ವಾದಿ ಸೀಮೆಗೂ ಕಳುಹಿಸಿ, ಆ ಬೆಟ್ಟದ ಸಮೀಪದಲ್ಲಿ ಶಿವಯೋಗ ಸಂಪ್ರಾಪ್ತರಾಗುವುದಕ್ಕೆಂದು ಈಗಿನ ಮಠವನ್ನು ಬರಮನಾಯಕನಿಂದ ಕಟ್ಟಿಸಿಕೊಂಡು ತಮ್ಮ ಬಳಿಯಲ್ಲಿದ್ದ ಇನ್ನೊಬ್ಬ ಮರಿದೇವರಿಗೆ ಘನಜಗದ್ಗುರು ಇಮ್ಮಡಿಯ ಮಹಾಗುರುಸಿದ್ಧ ಸ್ವಾಮಿಗಳೆಂದು ಹೊಸ ಅಭಿದಾನವನ್ನು ಕೊಟ್ಟು ಸ್ವರ್ಣಸಿಂಹಾಸನಾಗ್ರದಲ್ಲಿ ಕುಳ್ಳಿರಿಸಿ ಶಿಖಾ-ಶೈಲಗಳನ್ನು ಕೊಟ್ಟು ಪಟ್ಟಸ್ಥಲ ಪಟ್ಟವನ್ನು ಕಟ್ಟಿ ಭಕ್ತ ಪರಮ ಮಾಹೇಶ್ವರರು ಜಯ ಜಯವೆನುತ್ತಿರಲು ಹಠಯೋಗದಲ್ಲಿ ಸಂಸಕ್ತರಾಗುತ್ತಾರೆ.

ಅನಂತರ ಗುರುಸಿದ್ಧ ದೇಶಿಕರು ಷಟ್ಸ್ಥಲದ ಪಟ್ಟವನ್ನು ತಳೆದು ಉರುತರ ಚರಿತ್ರನ್, ಅಮಲಿನ ಗಾತ್ರನ್. ಪರಾತ್ಪರನ್, ಅತುಲ ಸಾಧು ಸನ್ಮಿತ್ರನ್, ಅನುಪಮ ಭವಾಂಭೋನಿಧಿ ಮಹಾವಹಿತ್ರನ್, ಪಂಡಿತ ಪರಿಸ್ತುತನ್, ಮಂಡಿತ ಮಹಾಜ್ಞಾನ ನಿಧಿ, ಜಿತ ಕುಸುಮಕೋದಂಡನ್, ಖಂಡಿತ ದುರೀಷಣ ಸಮೂಹನ್, ಉರ್ವರೀ ಮಂಡಲ ಪ್ರಥಿತಸಿತಕೀರ್ತಿ ಮಹನೀಯ ಗುಣಷಂಪನ್ ಅಭವಾಗಮ ಕಲಾಕೌಶಲಂ ಜಗದ್ಗುರು ಸಾರನಾಗಿ ರಂಜಿಸುತ್ತಿದ್ದರು. ಷಟ್ಸ್ಥಲದ ಸುವಿಚಾರ ಸಾರವನ್ನು ಭಕ್ತಗಣ ವೀರ ಮಾಹೇಶ ಗಣಗಳಿಗೆ ಬೋಧಿಸುತ್ತ ಬಹುದೇಶ ಭಕ್ತರಿಗೆ ಕರುಣಾಮೃತ ಧಾರೆಯನ್ನು ಕರೆಯುತ್ತ ಚಿತ್ರದುರ್ಗದ ಮಠದಲ್ಲಿರುತ್ತಿದ್ದರು.

ಮುರಿಗಾ ಜಗದ್ಗುರುಗಳಿಂದ ಹರಪನಹಳ್ಳಿಗೆ ಕಳುಹಿಸಲ್ಪಟ್ಟದ್ದ ಚೀಲಾಳ ಚರಮೂರ್ತಿಯು ಈ ವಿಷಯವನ್ನು ಕೇಳಿ ಸಹಿಸ

1. Lingayitism is the Statereligion of the early Wodeyars of Mysore and Ummathur from 1399-1610 and of the Nayaks of Keladi (ikkeri or Bedanur) from 1550-1763. Their principal matha in the Mysore Country is at Chitradurga. History of Kanarese literature Second Edition. PP 51-52.
—E. P. Rice.

ಲಾರದೆ ಮಿಗಿಲಾದ ಕೋಪವನ್ನು ತಾಳಿ ಮುರಿಗೇಶ್ವರನು ಮುಖ್ಯರಾದ ನಮ್ಮನ್ನು ಕೇಳದೆ ಮೇಲನ್ನರಿಯದೆ ಒಬ್ಬ ಮರಿಗೆ ಪಟ್ಟ ಕಟ್ಟಿದನು ಎಂದು ಕಾಳುನುಡಿಯನ್ನು ನುಡಿದಿದ್ದಲ್ಲದೆ ದುರ್ಗಕ್ಕೆ ಬಂದು ಗುರುಲೋಲ ಕರುಣಾಪಾತ್ರರು, ಮಹಾ ಗುರುಗಳು ಎಂದು ಆಲೋಚಿಸದೆ ಜಗದ್ಗುರು ಮಹಾ ಗುರುಸಿದ್ಧ ಸ್ವಾಮಿಗಳಿಗೆ ವಿಮುಖನಾಗಿ ಸಲ್ಲದ ನುಡಿಗಳನ್ನಾಡಿದುದಲ್ಲದೆ, ಅವರ ಮೇಲೆ ಎರಗಲು ಹಿಂದೆ ಮುಂದೆ ನೋಡಲಿಲ್ಲ.

ಆಗ ಗುರುಸಿದ್ಧ ದೇಶಿಕರು ಆತನ ದುರಹಂಕಾರವನ್ನು ತಿಳಿದು, ಗುರುಪುತ್ರನಾದವನು ಗುರುದೇವನಾಜ್ಞೆಯನ್ನು ಮೀರಬಹುದೆ ? ಬಲ್ಲತನವೇ ತಿಳಿಯಲಿದು ಶಿಷ್ಯವರ್ಗಕ್ಕೆ ? ಇದು ಸಲ್ಲದು ಎಂದು ನಿರಾಕರಿಸುತ್ತ, ಇನ್ನು ಮಠದಲ್ಲಿ ನಿಲ್ಲಲಾಗದೆಂದು ಚೀಲಾಳ ಚರಮೂರ್ತಿಯನ್ನು ಮಠದಿಂದ ಹೊರಹಾಕಿಸಿದರು. ಇದನ್ನು ತಿಳಿದು ಮನನೊಂದು, ಚೀಲಾಳಪ್ಪನ ವರ್ತನಕ್ಕೆ ಹೇಸಿ ಬರಮಣ್ಣನಾಯಕನು ಈ ಚರಮೂರ್ತಿಯು ಗುರುವಾಜ್ಞೆಯನ್ನು ಮೀರಿದನೆಂದು, ತನ್ನ ದೇಶದಲ್ಲಿಯೇ ಇಂಥವರು ಇರಬಾರದೆಂದು ದೇಶದಿಂದಲೇ ಆತನನ್ನು ಬಹಿಷ್ಕರಿಸಿದನು. ಆಗ ಚೀಲಾಳಪ್ಪನು ಮತ್ತೆ ಹರಪನಹಳ್ಳಿಗೆ ಹಿಂದಿರುಗಿ ಬರಲು ಅಲ್ಲಿನ ರಾಜನು ಆ ವಿಷಯವನ್ನು ತಿಳಿದು ಅವರನ್ನು ಮನ್ನಿಸಿ ಭಕ್ತಿಯಿಂದ ಅವರಿಗೆ ಮಠಮಾನ್ಯಗಳನ್ನು ರಚಿಸಿಕೊಟ್ಟು ಅದರಲ್ಲಿ ಅವರನ್ನು ಸ್ಥಾಪಿಸಿದನು. ಅಂದಿನಿಂದ ಚೀಲಾಳ ಸಂಪ್ರದಾಯವೊಂದು ಹರಪನಹಳ್ಳಿಯಲ್ಲಿ ಬೆಳೆಯಿತು.

ಇತ್ತ ಸ್ವಾದಿಗೆ ಬಂದಿದ್ದ ಕುಮಾರ ಚರಮೂರ್ತಿಗಳು ಗುರುಸಿದ್ಧದೇಶಿಕರ ವರ್ತನವನ್ನು ಕೇಳಿ ಚಿತ್ತದಲ್ಲಿ ಅಸಹ್ಯವನ್ನು ತಾಳಿ ಸದಾಶಿವ ರಾಜನಿಗೆ ದುರ್ಬೋಧೆಯನ್ನು ಮಾಡಿ, ಇವನು ಗುರುಪಾದ ಸನ್ನಿಧಿಗೆ ಹೋಗದಂತೆ ಮಾಡಿ, ಗುರುಗಳ ಬಗ್ಗೆ ಕ್ರೂರವಾದ ಮಾತುಗಳನ್ನಾಡುತ್ತಿರಲು ಇದನ್ನು ತಿಳಿದ ಗುರುಸಿದ್ಧರು ಕ್ರೂರ ಚಿತ್ತರ ಗರ್ವವನ್ನು ಮುರಿಯಬೇಕೆಂದು ಸಕಲ ಬಿರುದಾವಳಿ ಸಹಿತವಾಗಿ ವೈಭವದಿಂದ ದುರ್ಗದಿಂದ ಹೊರಟು ದೇಶದಲ್ಲಿ ಸಂಚರಿಸುತ್ತ, ಸ್ವಾದಿಯ ಸೀಮಾಂತರಕ್ಕೆ ಬಂದಾಗ ವಿಕಲನಾದ ರಾಜ ಸದಾಶಿವ ಭೂಪತಿಯು ಭಯಭಕ್ತಿಯಿಂದ ತಮ್ಮಲ್ಲಿಗೆ ಬಾರದಿದ್ದುದನ್ನು ತಿಳಿದು ತಮ್ಮ ಸಮಸ್ತ ಪರಿವಾರವನ್ನು ಅಲ್ಲಿಯೇ ಬಿಟ್ಟು ಪಾದಚಾರಿಗಳಾಗಿ ತಾವು ಏಕಾಕಿ ಎಂಬುದನ್ನು ಪ್ರಕಟಿಸುವಂತೆ ಗಳಗಳನೆ ನಡೆದುಬಂದು ಆ ಸದಾಶಿವನ ರಾಜಗೃಹವನ್ನು ಪ್ರವೇಶಿಸಿದರೂ,ಕುಳಿತಿದ್ದ ರಾಜನಿಗೆ ಹೇಳಿದರು- “ಎಲೈ ರಾಜನೇ, ಹಿಂದೆ ಚನ್ನಬಸವಣ್ಣ ಮೊದಲಾದ ಶರಣರು ಶಿವಭಕ್ತಿಯನ್ನು ಮೆರೆದು ಬಯಲಾದ ನಾಡು, ಈ ನಿನ್ನ ಭೂಮಿ, ಇಂದಿಗೂ ಎಷ್ಟೋ ಶರಣರು ಶರಣಲೀಲೆಯನ್ನು ಮೆರೆಯುತ್ತಿರುವರೆಂದು ಕೇಳಿದೆ. ನೀನು ಉದಾಸೀನನಾಗಿದ್ದ ಕಾಲಕ್ಕೆ ಒಬ್ಬ ಪ್ರಮಥನು ಜಂಗಮರೂಪಿನಲ್ಲಿ ಬಂದು ಮಹಿಮೆಯಿಂದ ಕೂಡಿದ ಪುಸ್ತಕವೊಂದನ್ನು ನಿನಗೆ ಕೊಟ್ಟು, ಈ ಪುಸ್ತಕವನ್ನು ಯಾರು ಓದುವರೋ ಅವರೇ ಸದ್ಗುರು, ತ್ವದ್ಗುರು ಎಂದು ಹೇಳಿ ಅದೃಶ್ಯನಾದನು. ಆ ಪುಸ್ತಕವನ್ನು ಇಲ್ಲಿ ತಾ” ಎಂದು ಗುರುಸಿದ್ಧ ಗುರುಮೂರ್ತಿಗಳು ಕೇಳಲು ಅದನ್ನು ಕೇಳಿದ ಅವನೀಪಾಲನು ಆ ಕ್ಷಣದಲ್ಲಿಯೇ ಭಯದಿಂದ ನಡುಗುತ್ತ ಸಾಷ್ಟಾಂಗ ನಮಸ್ಕಾರ ಮಾಡಿ ಕೈಗಳನ್ನು ಮುಗಿದು, “ಗುರುದೇವ ಹೃತಭಾವ,ಭವಮಾಯಾ ವಿಭಾವ ಗುರುಸಿದ್ಧ ಗುರುದೇವ ಮುರಿಗಾ ಮಹಾದೇವ ಕಾರುಣ್ಯ ಚಿಂತಾರತ್ನಲಬ್ಧ ಸಂಜೀವ ಶರಣಾನುಭಾವ ನೀಚವಚನಾಘಾಂಧಕಾರದಿಂ ತೀವಿದಜ್ಞಾನಯುತನಂ ಮಹಾಮೂಢನಂ ಶತಶತಾಗಸ್ಕೃತಕನಂ ಸುಜ್ಞಾನ ಸಂಜೀವನದಿಂದ ನೀವು ಕಾಪಾಡಿದಿರಿ. ಗುರುವರ್ಯ ನಿಮ್ಮ ಮಹಿಮಾದಿ ವಿಶೇಷಗಳನ್ನು ತಿಳಿಯದೆ ಅಜ್ಞಾನದಿಂದ ನಿಂದಿಸಿದ ಕಾರಣದಿಂದ ವಾಗ್ದೋಷಿ, ತಮ್ಮ ಪಾದಮೂಲಕ್ಕೆ ನಮಿಸದೆ ಅಹಂಕಾರದಿಂದ ಇಲ್ಲಿಯೇ ಉಳಿದುದರಿಂದ ಕಾಯದೋಷಿ, ಹರಪುರಾತನರ ವಾಕ್ಯವನ್ನು ತಿಳಿಯದಾದ ಕಾರಣದಿಂದ ಸರ್ವದೋಷಿ. ತಾವು ನನ್ನ ಸಕಲಾಪರಾಧವನ್ನು ಕ್ಷಮಿಸಬೇಕೆಂದೂ, ತನ್ನನ್ನು ರಕ್ಷಿಸಬೇಕೆಂದೂ ಕೇಳಿಕೊಂಡನು. ಇಷ್ಟೆಲ್ಲವೂ ಕುಮಾರ ಜಂಗಮನಿಂದ ಚ್ಯುತಿಯಾದುದೆನ್ನಮತಿ, ಮಲಿನಮಾದುದು ಮನಂ; ಗತಿಯೊಳು ನೀನೆ ಉತ್ತಮ ಗುರು” ಎಂದು ಮರಳಿ ಮರಳಿ ಅವರ ಪಾದಗಳ ಮೇಲೆ ಉರುಳುತ್ತ, ನೀವೇ ಜಗದ್ಗುರುಗಳೆಂದು ಹೊಗಳುತ್ತ ಭರದಿಂದ ಪ್ರಮಥರಾಶೀರ್ವಾದ ಪುಸ್ತಕವನೊಪ್ಪಿಸುತ್ತ ಗುರುಸಿದ್ಧರ ಪರಮ ಕಾರುಣ್ಯವನ್ನು ಸದಾಶಿವರಾಜನು ಪಡೆದನು.

ಜಗದಾರ್ಯ, ಇನ್ನು ನಿಮ್ಮಾಜ್ಞೆಯನ್ನು ಎಂದೆಂದಿಗೂ ಮೀರಿ ನಡೆಯುವುದಿಲ್ಲ ಎಂದು ಹೇಳಿ ಗುರುವಿನಾಜ್ಞೆಯನ್ನು ಮೀರಿ ನಡೆದವನೂ, ಗುರುಪದವನ್ನು ನಿಂದಿಸಿದವನೂ, ಆ ಗುರು ನಿಂದೆಯನು ನನ್ನಿಂದ ಕೇಳಿಸಿದವನೂ, ನನ್ನಿಂದ ಕಠಿಣವಾದ ಗುರುನಿಂದೆಯನ್ನು ಮಾಡಿಸಿದವನೂ, ಗುರುನಿಂದೆ ಮಾಡಿದವನೂ ಆದ ಕುಮಾರಪ್ಪನನ್ನು ಬೇಗ ಈ ದೇಶದಿಂದ ಬಹಿಷ್ಕರಿಸಬೇಕು ಇಲ್ಲವೇ ತಾನು ಸಾಯಬೇಕು ಎಂದು ನಿರ್ಧರಿಸಿ ಕ್ರೂರತರವಾಗ್ಮಿಯಾದ ಕುಮಾರ ಚರಮೂರ್ತಿಯನ್ನು ತನ್ನ ಸೀಮೆಯಿಂದ ಹೊರಹಾಕಿಸಿದನು.

ಗುರುಸಿದ್ಧ ಸ್ವಾಮಿಗಳಿಂದ ಅವಮಾನಿತನಾಗಿ, ಸದಾಶಿವ ಭೂಪಾಲನಿಂದ ದೂರೀಕೃತನಾಗಿ, ಕ್ರೋಧ, ಈರ್ಷೆಯಿಂದ ಕುದಿಯುತ್ತಿದ್ದ ಕುಮಾರ ಚರಮೂರ್ತಿಯು ಅಲ್ಲಿನ ಜನರಿಗೆಲ್ಲ ತಿಳಿಯುವಂತೆ ಸ್ವಾದಿ ಸೀಮೆಯನ್ನು ಧಿಕ್ಕರಿಸುತ್ತ ಹುಬ್ಬಳ್ಳಿಗೆ ಬಂದು ಅಲ್ಲಿನ ಪಟ್ಟಣಶೆಟ್ಟಿಯನ್ನು ಕುಟಿಲ ಪ್ರಯತ್ನಗಳಿಂದ ತನ್ನ ವಶವರ್ತಿಯನ್ನಾಗಿ ಮಾಡಿಕೊಂಡು, ಸ್ವಾದಿ ಸೀಮೆಯಲ್ಲಿ ಉತ್ಪನ್ನವಾದ ಅಡಕೆ, ಮೆಣಸು ಮುಂತಾದ ಪದಾರ್ಥಗಳು ತಮ್ಮ ಪಟ್ಟಣಕ್ಕೆ ಬಾರದಂತೆ, ತಮ್ಮ ಪಟ್ಟಣದಲ್ಲಿ ಉತ್ಪನ್ನವಾದ ವಸ್ತುಗಳು ಸ್ವಾದಿಸೀಮೆಗೆ ಬಾರದಂತೆ ತಡೆಗಟ್ಟಿ ವ್ಯಾಪಾರವನ್ನು ಸ್ಥಗಿತಗೊಳಿಸಿ ಆರ್ಥಿಕ ವ್ಯವಸ್ಥೆ ಹದಗೆಡುವಂತೆ ಮಾಡಿದನು. ಅಷ್ಟಕ್ಕೆ ನಿಲ್ಲದೆ ತನ್ನ ಆಜ್ಞೆಯಲ್ಲಿದ್ದ ಕೆಲವು ಪತ್ತಿನ ಪುಂಡರನ್ನು ಹುರಿದುಂಬಿಸಿ ಗುರುಸಿದ್ಧ ಶಿವಯೋಗಿಗಳ ಕೊಲೆ ಮಾಡಿಸುವ ಹೀನಕಾರ್ಯಕ್ಕೆ ಕೈಹಾಕಿದನು.

ರಾಜಪೂಜಿತ ಸನ್ಮಾನಿತರಾದ ಗುರುಸಿದ್ಧದೇಶಿಕರು ಉತ್ಸವಗೊಂಡು ಅಲ್ಲಿಂದ ನಗರದ ಸೀಮೆಯ ಕಡೆಗೆ ಹೊರಟು ಮಾರ್ಗ ಮಧ್ಯದಲ್ಲಿದ್ದ ಎಸಳೂರಿಗೆ ಬಂದು ಮುಕ್ಕಾಂ ಮಾಡಿ ಅಲ್ಲಿಂದ ಮುಂದುವರಿದು ಸಿರಸಿಗೆ ಬಂದು ಅಲ್ಲಿ ಮೂರ್ತ ಮಾಡಿದ್ದರು. ಈ

ಸಂದರ್ಭದಲ್ಲಿ ಎಸಳೂರಿನಲ್ಲಿಯೇ ಗುರುಗಳನ್ನು ಕೊಲೆಗೈಯ್ಯ ಬೇಕೆಂದು ಕುಮಾರಪ್ಪನ ಕಡೆಯ ಚಂಡಾಲರು ರಾತ್ರಿ ಕತ್ತಲೆಯಲ್ಲಿ ಒಂದುಗೂಡಿ ಜಗದ್ಗುರುಗಳು ಎಸಳೂರು ಮಠದಲ್ಲಿದ್ದಾರೆ, ಅವರನ್ನು ಈ ರಾತ್ರಿ ಇಲ್ಲಿಯೇ ತೀರಿಸಿಬಿಡಬೇಕೆಂದು ಯೋಚಿಸಿ ಆಯುಧಪಾಣಿ ಗಳಾಗಿ ಅಲ್ಲಿಗೆ ಬಂದರು. ಇದನ್ನು ಹೇಗೋ ಅರಿತ ಜಗದ್ಗುರುಗಳು ಆ ರಾತ್ರಿಯೇ ಅಲ್ಲಿಂದ ಹೊರಟು ಸಿರಸಿಗೆ ಬಂದುಬಿಟ್ಟಿದ್ದರು. ಕೊಲೆ ಗಡುಕರು ಅವರನ್ನು ಇರಿಯಲೆಂದು ಬಂದಾಗ ಗರ್ಭಿಣಿ ಸ್ತ್ರೀಯೋ ರ್ವಳು ಅಲ್ಲಿಗೆ ಬಂದು—"ಇಲ್ಲಿ ಆ ಜಗದ್ಗುರುಗಳಿಲ್ಲ, ನೀವು ಹೋಗಿ" ಎಂದು ಹೇಳಲು, ಕೂಡಲೇ ಖಡ್ಗದಿಂದ ಆ ಗರ್ಭಿಣಿಯನ್ನು ಕ್ರೂರ ರೀತಿಯಲ್ಲಿ ಘಾಯಗೊಳಿಸಿ ಕೊಂದು, ಆ ಮಠದ ಚರಮೂರ್ತಿ ಗಳನ್ನು ವಿಚಿತ್ರರೀತಿಯಲ್ಲಿ ಇರಿದು ತೀರಿಸಿ ಬೆಳಗಾಗುವುದರೊಳಗೆ ಈ ಕಟುಕರು ಹುಬ್ಬಳ್ಳಿಯನ್ನು ಸೇರಿದರು.

ಅಮಾನುಷವಾದ ಈ ಕಟುಕ ಕಾರ್ಯವನ್ನು ಸಿರಸಿಯಲ್ಲಿದ್ದ ಇಮ್ಮಡಿ ಗುರುಸಿದ್ಧಸ್ವಾಮಿಗಳು ಕೇಳಿ ಕನಲಿ ಘುಡಿ ಘುಡಿಸುತ್ತ ಈ ದುಷ್ಕರ್ಮವನ್ನು ಕುಮಾರಸ್ವಾಮಿಯು ಮನಃಪ್ರೀತಿಯಿಂದ ಮಾಡಿ ದನಲಾ ಎಂದು ವ್ಯಥೆಪಟ್ಟು, ಮಹಾಪಾತಕವನ್ನು ಮಾಡಿದನೆಂದು ಆಕ್ರೋಶವನ್ನು ತಾಳಿ, ಈ ಘೋರ ಚಾಂಡಾಲನನ್ನು ಯಾರೂ ಹತ್ತಿರ ಸೇರಿಸಬಾರದು, ಅವನೊಂದಿಗೆ ಯಾವುದೇ ರೀತಿಯ ಬಳಕೆ ಯನ್ನು ಇಟ್ಟುಕೊಳ್ಳಕೂಡದು ಎಂದು ಬಹಿಷ್ಕಾರ ಶಾಸನವನ್ನು ರಚಿಸಿ ಎಲ್ಲ ಪಟ್ಟಣಗಳ ಜಂಗಮ ಮಠಾಧಿಪತಿಗಳಿಗೆ ಕಳುಹಿಸಿ ಕೊಟ್ಟರು.

ಇದನ್ನು ತಿಳಿದ ಕುಮಾರನು ತಾನು ನಿಂದಿತನಾದೆನೆಂದು ತಿಳಿದು ಭಯಗೊಂಡು ಗುರುಮೂರ್ತಿಗಳ ಸನ್ನಿಧಿಗೆ ಬಂದು ಅವರ ಪಾದಗಳ ಮೇಲೆ ಉರುಳಾಡಿ ಈ ದ್ರೋಹ ನನ್ನಿಂದಲ್ಲ, ನನ್ನ ಜನ ಗಳಿಂದ ನಡೆಯಿತು. ಇದನ್ನು ಕ್ಷಮಿಸಬೇಕು ಎಂದು ನಾನಾ ರೀತಿ ಯಲ್ಲಿ ಬೇಡಿಕೊಳ್ಳುತ್ತಿರಲು, ಗುರುಮೂರ್ತಿಗಳು ಈ ಜಂಗಮ ದ್ರೋಹಿಯ ದರ್ಶನವಾಗಕೂಡದೆಂದು ಮೇಲಿಂದ ಮೇಲೆ ಕೋಪಿ ಸುತ್ತ ಉದ್ಘೋಷಿಸುತ್ತಿರಲು ಕುಮಾರ ಜಂಗಮನು ತನ್ನ ದೇಹ ವನ್ನು ನೀಗುವೆನೆಂದು ಆ ಮೃತ ಚರಮೂರ್ತಿಯ ಪಕ್ಕದಲ್ಲಿಯೇ ತನ್ನ ದೇಹವನ್ನು ಕಳೆದುಕೊಳ್ಳಲು ಎಸಳೂರು ಮಠದಲ್ಲಿಯೇ ಅಲ್ಲಿನ ಚರಮೂರ್ತಿ ಮತ್ತು ಕುಮಾರ ಚರಮೂರ್ತಿ ಇಬ್ಬರ ಗದ್ದುಗೆಗಳಾ ದವು. ಅಲ್ಲಿಯೇ ಇನ್ನೊಂದು ಕಡೆ ಆ ಗರ್ಭಿಣಿಯ ಗದ್ದುಗೆಯೂ ಆಯಿತು.

ಇತ್ತ ಕುಮಾರನ ಅನುವರ್ತಿಗಳಾದ ಜಂಗಮರು ಹುಬ್ಬಳಿಯ ಶೆಟ್ಟಿ ಮೊದಲಾದವರನ್ನು ಕಟ್ಟಿಕೊಂಡು ಮಠಗಳನ್ನು ರಚಿಸಿಕೊಂಡು ಮೆರೆಯುತ್ತ ಚಿತ್ರದುರ್ಗದವರಿಗೆ ವಿರುದ್ಧವಾಗಿ ವರ್ತಿಸುತ್ತಿರಲು ಇವರಿಗೆ 'ಕುಮಾರ ಸಮಯ'ದವರೆಂದು ಹೆಸರಾಯಿತು. ಇವರನ್ನು ದೂರವಿಟ್ಟು ಜಗದ್ಗುರು ಮಹಾಗುರು ಗುರುಸಿದ್ಧ ಶಿವಯೋಗಿ ಸಾರ್ವ ಭೌಮರು ಸಕಲ ಭಕ್ತರಿಂದ ಪೂಜೆಯನ್ನು ಕೈಕೊಳ್ಳುತ್ತ ಅಕುಟಿಲ ಮಾಹೇಶ್ವರ ವೃಂದಕ್ಕೆ ಷಟ್ಸ್ಥಲ ಬೋಧೆಯನ್ನು ಮಾಡುತ್ತ ಸಕ ಲರೂ ಕೊಂಡಾಡುತ್ತಿರಲು, ದೇಶದಲ್ಲಿ ಸಂಚರಿಸುತ್ತ ಹಳೆಯಬೀಡಿಗೆ ಬಿಜಯ ಮಾಡಿಸಿದರು.

ಅಲ್ಲಿ ಪಟ್ಟದ ಮೂರ್ತಿಗಳಿಬ್ಬರು ಜನಹಿತವನ್ನು ಸಾಧಿಸುತ್ತ ಪೂಜ್ಯರೆನಿಸಿ ಜನಮಧ್ಯದಲ್ಲಿ ಶೋಭಿಸುತ್ತಿದ್ದರು. ಇವರ ಈ ಶ್ರೇಯ ವನ್ನು ಸಹಿಸದ ಅಲ್ಲಿನ ಇತರ ಅನೇಕ ಮಠಗಳವರು ತಮ್ಮ ತಮ್ಮ ಹಿಂಬಾಲಕರನ್ನು ಕೂಡಿಕೊಂಡು ಜಗದ್ಗುರುಗಳ ಬಳಿಗೆ ಬಂದು ಈ ಪಟ್ಟದ ಮೂರ್ತಿಗಳಿಬ್ಬರ ಮೇಲೆ ಅಲ್ಲ ಸಲ್ಲದ ದೂರುಗಳನ್ನು ತೂರಿ ವೇಶ್ಯಾಲಂಪಟತ್ವದ ನಿಂದೆಯನ್ನು ಹೊರಿಸಿ ಇವರಿಗೆ ತಕ್ಕ ಶಿಕ್ಷೆಯಾಗ ಬೇಕೆಂದು ಸಾಧಾರವಾಗಿ ನಿವೇದಿಸಿಕೊಂಡರು. ಆಗ ಗುರುಗಳು ಇಬ್ಬಣದವರನ್ನು ಕರೆಸಿ ಸಾಕ್ಷಿ-ಪುರಾವೆಗಳಿಂದ ಪರಾಮರ್ಶಿಸಲಾಗಿ ಈ ಪಟ್ಟದ ಮೂರ್ತಿಗಳಿಬ್ಬರೂ ನಿರ್ದೋಷಿಗಳೆಂದು ತಿಳಿಯಿತು. ಇದರಿಂದ ಕುಪಿತರಾದ ಗುರುಗಳು ಈ ಕುಟಿಲ ಜಂಗಮರನ್ನು ದೂರ ಮಾಡಿ ಬಹಿಷ್ಕರಿಸಿದರು.

ಹೀಗಾಗಿ ಚೀಲಾಳ ಸಮಯ, ಕುಮಾರ ಸಮಯ, ಕೆಂಪಿನ ಸಮಯ, ಸ್ವಾತಂತ್ರಿಗಳ ಸಮಯ, ಮಾಯಕಟ್ಟಿನ ಸಮಯ, ಗದ್ದಕಟ್ಟಿನ ಸಮಯ, ಗೂಳಿಕೊಂಡ ಕಾಂತಯ್ಯಗಳ ಸಮಯ ಎಂದು ಮುಂತಾಗಿ ವೀರಶೈವೇತರ ಆಚಾರಗಳಿಗೆ ಹೆಸರಾಗಿ ಹದಿ ನಾರು ಸಮಯಗಳು ಏರ್ಪಟ್ಟವು.

ಹೀಗೆ ಇಮ್ಮಡಿ ಗುರುಸಿದ್ಧ ಸ್ವಾಮಿಗಳು ದುರಾಚಾರ ಮಾಹೇ ಶ್ವರರ ದುರ್ವೃತ್ತಿ, ಬಿಮ್ಮಗಳನ್ನು ಅಳಿಸಿ, ಪರಮತವನಳಿಸಿ, ಶಿವಾ ಚಾರಜೇಳ್ಗೆಯನಾಗಿಸಿ ಒಮ್ಮೆ ನತರಾದವರನ್ನು ಪಾಲಿಸಿ, ಅನಂತ ಪುರಕ್ಕೆ ಬಂದು ಷಟ್ಸ್ಥಲಬೋಧೆಯನ್ನು ಮಾಡುತ್ತ, ತಮ್ಮ ಆಯು ಷ್ಯವನರಿದು, ನಯಯುತ ಸ್ವಾದಿ ಚನ್ನಬಸವೇಶ ಸ್ವಾಮಿಗಳಿಗೆ ಪಟ್ಟವಾಗಲಿ ಎಂದು ನಿಕಟವರ್ತಿಗಳಿಗೆ ಹೇಳಿ, ಜಯಜಯಧ್ವನಿ ಯುಣ್ಮುತ್ತಿರಲು ಬಯಲಾಕಾರದಲ್ಲಿ ನಿಂದರು.

ಮಹಾ ತತ್ವಜ್ಞಾನಿಗಳೂ ಷಟ್ಸ್ಥಲಶಾಸ್ತ್ರ ವಿಶಾರದರೂ ಮಹಾ ಶಿವಯೋಗಿಗಳೂ, ಉನ್ನತ ದೇಶಿಕೇಂದ್ರರೂ, ಮಹಾ ಕವಿ ಗಳೂ, ಬಹುಮುಖ ಪ್ರತಿಭಾಶಾಲಿಗಳೂ, ಭಾಷಾದ್ವಯ ಪ್ರಕಾಂಡ ಪಂಡಿತರೂ ಆದ ಜಗದ್ಗುರು ಇಮ್ಮಡಿ ಮುರಿಗಾ ಗುರುಸಿದ್ಧ ದೇಶಿ ಕೇಂದ್ರರು ಲೋಕವನ್ನು ತಿದ್ದಲು, ಅಭಿರುಚಿಯನ್ನು ಸಂಸ್ಕರಿಸಲು, ಜನಮನವನ್ನು ತೊಳೆದು ಬೆಳಗಲು, ಸರಳವಾದ ಜಾನಪದ ದಾಟಿ ಯನ್ನೂ, ಪ್ರೌಢ ಕಾವ್ಯಗಳ ಮಾರ್ಗಶೈಲಿಯನ್ನೂ, ಹಾಡುಗಬ್ಬದ ಮೋದರಿಯನ್ನೂ, ಯಕ್ಷಗಾನ ಶೈಲಿಯನ್ನೂ ಬಳಸಿಕೊಂಡು ಕಾವ್ಯ ಸೃಷ್ಟಿ ಮಾಡಿದರು. ಸ್ವತಂತ್ರವಾಗಿ, ಅನುವಾದ ರೂಪವಾಗಿ, ವಿವರ ಣಾತ್ಮಕವಾಗಿ ಗ್ರಂಥ ರಚನೆ ಮಾಡಿದರು.

1) ಹೋಳೀ ಪದ (ಜನಪದ ಸಾಹಿತ್ಯ), 2) ಬಿಜ್ಜ ಮಹಾ ದೇವಿ (ಅಮ್ಮವ್ವೆ) ಚಾರಿತ್ರ (ಯಕ್ಷಗಾನ), 3) ಕೈವಲ್ಯ ಸೋಪಾನ ನಾಮ್ಯೈಕೋತ್ತರ ಶತಸ್ಥಲ (ಸೂತ್ರಪದಗಳಿರುವ ಹಾಡುಗಳು), 4) ಶೂನ್ಯಮಂತ್ರಗೋಪ್ಯ (ಶಿವಲಿಂಗೇಶ್ವರಾಂಕಿತ ವಚನಗ್ರಂಥ),

5) ಶಿವಲಿಂಗ ಮಹಿಮಾ ಷಟ್ಪದಿ, 6) ಮಿಶ್ರಾರ್ಪಣ ವಾರ್ಧಿಕ, 7) ಶಿವಲಿಂಗನಾಂದ್ಯ (ಭಾ.ಷ), 8) ಯೋಗಕಲಾ ಪ್ರಸಾರ, ಭಾ.ಷ. (ಶಿವ ಗಿರಿಜಾ ಸಂವಾದ), 8) ಸ್ಕಾಂದ ಕಲ್ಯಾಣ (ಕನ್ನಡ ಪದ್ಯ), 10) ವಿರೂಪಾಕ್ಷ ಪಂಚಾಶಿಕಾಗಮ (ಕನ್ನಡ ಪದ್ಯ), 11) ಹಾಲಾಸ್ಯಲೀಲಾ (ಪುರಾಣ), (ಕನ್ನಡ ಚಂಪು), 12) ಪ್ರಭುಲೀಲಾ (ಸಂಸ್ಕೃತ ಮಹಾ ಕಾವ್ಯ), 13) ನಂದೀಶ್ವರ ಜಯದಂಡಕ (ಸಂಸ್ಕೃತ), ಇವು ಇವರು ಬರೆದಿರುವ/ಇವರ ಹೆಸರಿನಲ್ಲಿ ದೊರೆತ ಗ್ರಂಥಗಳು.

ಇವರು ಕನ್ನಡ-ಸಂಸ್ಕೃತಗಳೆರಡರಲ್ಲೂ ಪ್ರಕಾಂಡ ವಿದ್ವಾಂಸರು ಎಂಬುದಕ್ಕೆ ಹಾಲಾಸ್ಯ ಲೀಲೆ ಮತ್ತು ಪ್ರಭುಲೀಲೆಗಳೇ ಸಾಕ್ಷಿ. ಈ ಗ್ರಂಥಗಳನ್ನು ರಚಿಸಿದುದರಿಂದ ಇವರಿಗೆ ದ್ವಿತೀಯ ಮುರಿಗಾಖ್ಯ ಗುರುಸಿದ್ಧ ದೇಶಿಕೇಂದ್ರರೆಂದೂ, ಲೀಲಾಖ್ಯದ ಮುರಿಗಾಖ್ಯ ಶಿವಯೋಗಿಗಳೆಂದೂ ಹೆಸರು ಬಂದಿದೆ. ಇವರು ತಮ್ಮ ಹಾಲಾಸ್ಯಲೀಲೆಯನ್ನು ಸಕಲ ವಿಶಾರದನೂ ನರೇಂದ್ರ ಶಿರೋಮಣಿಯೂ ಲಿಂಗ ಜಂಗಮಾರ್ಚಕನೂ ಆದ ಸೋದೆಯ ಪ್ರಭು ಹಿಂದೆವರ್ಣಕದಲ್ಲಿ ಹೇಳಿದುದನ್ನು ಪ್ರಮಥರ ಇಷ್ಟದಂತೆ ವಸ್ತುಕದಲ್ಲಿ ಹೇಳುತ್ತೇನೆ ಎಂದು ಹೇಳಿ, ತಾವು ಬಾಲ್ಯದಲ್ಲಿ ಸೋಮಶೇಖರ ಶಿವಯೋಗಿಗಳಿಂದ ಶಿವಲಿಂಗದೀಕ್ಷೆಯನ್ನು ಪಡೆದಂತೆಯೂ, ಗುರುಬಸವಲಿಂಗರಿಂದ ವಿದ್ಯಾಭ್ಯಾಸ ಮಾಡಿದುದಾಗಿಯೂ ಶಾಂತವೀರ ಮುರಗೇಂದ್ರ ರಾಜೇಂದ್ರರಿಂದ ಭಾಸ್ವತ್ ಇರ್ಮಡಿ ಮುರಿಗಾ ಗುರುಸಿದ್ಧ ದೇಶಿಕೇಂದ್ರನೆಂಬಭಿಧಾನವನ್ನು ಪಡೆದಂತೆಯೂ ಹೇಳಿಕೊಂಡಿದ್ದಾರೆ. ಅಲ್ಲದೆ ತಾವು ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು ಹರಿಣಪುರ ಅಥವಾ ಈಗಿನ ಹುಲ್ಲಹಳ್ಳಿಯವರೆಂದೂ ತಿಳಿಸುತ್ತಾರೆ.

ಹೀಗೆ ಜಗದ್ಗುರು ಇಮ್ಮಡಿ ಮುರಿಗಾ ಗುರುಸಿದ್ಧ ದೇಶಿಕೇಂದ್ರರು ಒಂದು ಕಡೆ ಆಧ್ಯಾತ್ಮ ಸಿದ್ಧಿಯಲ್ಲಿ ಉನ್ನತ ಶಿಖರವನ್ನೇರಿ ಶಿವಯೋಗಿಗಳಾಗಿ ಧಾರ್ಮಿಕ ಕ್ಷೇತ್ರದಲ್ಲಿ, ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ, ನಡೆಸುತ್ತಿದ್ದ ಅತ್ಯಾಚಾರಗಳನ್ನು ಅತ್ಯಾಚಾರಿಗಳನ್ನು ಸಮೂಲವಾಗಿ ನಾಶ ಮಾಡುತ್ತ ಸ್ಫಟಿಕ ನಿರ್ಮಲವಾದ ಷಟ್ಸ್ಥಲ ಬೋಧೆ ಮಾಡುತ್ತಾ ಶಿವಾಚಾರ ಸದಾಚಾರಗಳನ್ನು ನೆಲೆಯಾಗಿ ನಿಲ್ಲಿಸುತ್ತ, ಇನ್ನೊಂದು ಕಡೆ ತಾವು ಪಡೆದಿದ್ದ ಅನುಭವ, ವಿದ್ವತ್ತೆಗಳನ್ನು ಕಾವ್ಯಧಾರೆಯ ಮೂಲಕ ಜನಮನಕ್ಕೆ ಹರಿಸುತ್ತ ಅವರ ಮನಸ್ಸನ್ನು ಸದಾಚಾರದ ಕಡೆಗೆ ತಿರುಗಿಸುತ್ತ ಸಮಾಜ ಪರಿಷ್ಕರಣೆಯನ್ನು ಮಾಡುತ್ತ ಆಧ್ಯಾತ್ಮ ಚರಿತ್ರೆ ಹಾಗೂ ಸಾಹಿತ್ಯ ಚರಿತ್ರೆಗಳಲ್ಲಿ ಪ್ರಾತಃಸ್ಮರಣೀಯರಾಗಿದ್ದಾರೆ. ಹಾಲಾಸ್ಯಲೀಲೆಯಲ್ಲಿ ಅವರು ಬಳಸಲಾಗಿರುವ ಸುಮಾರು 180ಕ್ಕೂ ಮಿಕ್ಕ ಛಂದೋ ಪ್ರಯೋಗಗಳು ಅವರ ಶಾಸ್ತ್ರಜ್ಞಾನಕ್ಕೆ ಸಾಕ್ಷಿ ನುಡಿಯುತ್ತವೆ.

ಇಂಥ ಮಹನೀಯರಿಂದ ಮುಂದಿನ ಅನೇಕ ಕವಿಗಳು, ಟೀಕಾಕಾರರು ಸ್ಫೂರ್ತಿಯನ್ನು ಪಡೆದು ತಮ್ಮ ಗ್ರಂಥಗಳಲ್ಲಿ ಅವರನ್ನು ಸ್ಮರಿಸಿದ್ದಾರೆ. ಶಿವಸೂತ್ರ ಟೀಕಾಕಾರನಾದ ಶಿವಯೋಗೀಶ್ವರನು ತನ್ನ ಟೀಕೆಯ ಆದ್ಯಂತದಲ್ಲಿಯೂ, ಮಲ್ಲಿಕಾರ್ಜುನ ಸ್ತೋತ್ರಂ, ದೇವೀಸ್ತೋತ್ರಂ ಮತ್ತು ದೇವ್ಯಷ್ಟಕಂಗಳನ್ನು ರಚಿಸಿರುವ ಮರುಳೇಶನು ತನ್ನ ಈ ಕೃತಿಗಳ ಕೊನೆಯಲ್ಲಿ ಈ ದ್ವಿತೀಯ ಮುರಿಗಾ ಗುರುಸಿದ್ಧರನ್ನು ಸ್ತುತಿಸಿದ್ದಾರೆ.

ಸ್ವಾದಿಯ ಚನ್ನಬಸವ ಸ್ವಾಮಿಗಳು (ಪಟ್ಟ 10)
ಕಾಲ ಸು. ಕ್ರಿ. ಶ. 1725–1730

ಇಮ್ಮಡಿ ಮುರಿಗಾ ಗುರುಸಿದ್ಧ ಶಿವಯೋಗಿಗಳು ಶಿವಯೋಗದಲ್ಲಿ ನೆಲೆನಿಂದಮೇಲೆ ಅವರ ಅಂತಿಮ ಬಯಕೆಯಂತೆ ಷಟ್ಸ್ಥಲ ಮಹಾ ವಿಭವಮೂರ್ತಿ ವಿಜಿತಾಗಹೃತಸಮವರ್ತಿ ಪಾವನ ಸದಾಚಾರವರ್ತಿ ಪರಿಧೂತ ಸುಮಕೋದಂಡ ಮಾರ್ಗಣಾರ್ತಿ ಭಾವಿತ ಮುನೀಂದ್ರ ಸಂಘಾತಿ ದಯಾಸ್ಫಾತಿ ಭಾವುಕ ಮಹೇಶ ಸಂಸ್ತಾವ ಸಾರ ಪ್ರೀತಿ ವಿಜಿತಮಾಯಾವಿಭೀತಿ ಶರಣಾನುರಾಗಾರ್ಣವ ಸುಧಾ ಪ್ರಸೂತಿ ಎಂದು ಮುಂತಾಗಿ ಭಕ್ತರ ಪ್ರಶಂಸೆಗೆ ಒಳಗಾದ ಚನ್ನಬಸವ ದೇವರನ್ನು ಷಟ್ಸ್ಥಲ ಪಟ್ಟಬದ್ಧರನ್ನಾಗಿ ಮಾಡಲು ಅವರು ಚಿತ್ರದುರ್ಗದ ಬೃಹನ್ಮಠದಲ್ಲಿದ್ದು ಜಂಗಮ ದಾಸೋಹ ಮೊದಲಾದುವನ್ನು ಹಿಂದಿಗಿಂತ ಅಧಿಕತರವಾಗಿ ನಡೆಸುತ್ತ, ಅನೇಕ ಸತ್ಕಾರ್ಯಗಳನ್ನು ಮಾಡುತ್ತ ಅಸಂಖ್ಯಾತ ಶಿಷ್ಯವೃಂದಕ್ಕೆ ಶಾಸ್ತ್ರ ಆಚಾರ-ವಿಚಾರಗಳನ್ನು ಕಲಿಸುತ್ತ ಈ ಎಲ್ಲ ಕಾರ್ಯಗಳ ಖರ್ಚಿಗೋಸುಗ ಕಾಣಿಕೆಯನ್ನು ಸ್ವೀಕರಿಸಿ ತರಲು ಸಮಸ್ತ ಪರಿವಾರ ಸಮೇತರಾಗಿ ಬಿರುದು ಬಾವಲಿಗಳೊಂದಿಗೆ ವೈಭವದಿಂದ ಮಠದಿಂದ ಹೊರಟು ದೇಶದಲ್ಲಿ ಸಂಚರಿಸುತ್ತ ಹರಪನಹಳ್ಳಿಗೆ ಬಂದರು.

ಆ ಪಟ್ಟಣದ ಸಮೀಪದಲ್ಲಿದ್ದ ಗುಡ್ಡದಮಠದಲ್ಲಿ ಪರಂಜ್ಯೋತಿ ಸ್ವರೂಪರಾದ ಸ್ವಾಮಿಗಳು ಊರನ್ನು ಪ್ರವೇಶಿಸದೆ ಇಳಿದುಕೊಂಡಿರುವಾಗ ಆ ಊರಿನ ಭಕ್ತ ಮಾಹೇಶ್ವರ ವೃಂದವು ಅವರ ಸನ್ನಿಧಿಗೆ ಬಂದು"ದೇವ ಚಿತ್ತೈಸು, ಈ ಪುರವನ್ನಾಳುತ್ತಿರುವ ದೊರೆ ಸೋಮಶೇಖರ ನಾಯಕನು ಗುರುವಿನಾಜ್ಞೆಯನ್ನು ಉಲ್ಲಂಘಿಸಿದ ಚರಮೂರ್ತಿಗೆ ಆಶ್ರಯವನ್ನು ಕೊಟ್ಟನಲ್ಲದೆ, ತನ್ನ ತಂದೆಯನ್ನೇ ಕೊಂದು ತಾನು ಪಟ್ಟಕ್ಕೆ ಬಂದಿದ್ದಾನೆ" ಎಂದು ಹೇಳಿದರು.

ಅಷ್ಟರಲ್ಲಿ ಜಗದ್ಗುರುಗಳು ಬಂದು ಊರ ಹೊರಗಿನ ಗುಡ್ಡದ ಮಠದಲ್ಲಿರುವರೆಂಬ ಸುದ್ದಿಯನ್ನು ಕೇಳಿ ತನ್ನ ಪಾಪ ಪರಿಹಾರಕ್ಕೆಂದು ತಕ್ಷಣ ಗುರುಪಾದ ಸನ್ನಿಧಿಗೆ ಬಂದು ಶತಪ್ರಣಾಮಗಳನ್ನು ಮಾಡಿ ಕರಾಂಜಲಿ ಮುಕುಳಿತನಾಗಿ ಶ್ರೀಪಾದಗಳನ್ನು ಸ್ತುತಿಸುತ್ತ ತಮ ಪಾದಗಳು ಅಂತಃಪುರಕ್ಕೆ ಚಿತ್ತೈಸಿ ಲಿಂಗಾಭಿಷೇಕಾದಿಗಳನ್ನು ಮಾಡಬೇಕೆಂದು ಪದಭಂಗಸಂ ಲಿಂಗಾಂಗ ಸಂಗಸಂ ಚನ್ನಬಸವೇಶ ಯತಿ ತುಂಗನಂ ಸಾಂಗಮಾಗಿಯೆ ಬಿನ್ನಪಂಗೆಯ್ಯಲು ಆ ಭೂಮಿಪಂಗೆ ಗುರುಗಳು ಇಂತೆಂದರು-ಧಾತ್ರಿಯೊಳ್ ಲಿಂಗಜಂಗಮ ಭಕ್ತರಿಂತಿರಲಿ ಬೇಡವೆ ? ಶಾಸ್ತ್ರನಿರ್ಣಯದೊಳು ಗುರುವರ ದ್ರೋಹಿಗೆ ಆಶ್ರಯವಿತ್ತು ಪಾಳಿಪುದು, ಗುರುಭಕ್ತನಂ ನಿಜತಾತನಂ ಸಂಹರಿಪುದು ನೀತಿಯೆ ? ಧರೆಯ ಸಂಪತ್ತಿಯಿಂದ ಮೈಮರೆತು ಚರಿಪ ಮೂಢ, ಗುರುದ್ರೋಹಿಗಾಶ್ರಯವಿತ್ತ ದ್ರೋಹಿ, ತಂದೆಯನ್ನು ಕೊಂದ ಪಾಪಿ, ಹೀಗೆ ದೋಷತ್ರಯ ಪಾಪಿಯಾದ ನಿನ್ನಾಲಕ್ಕೆಂತು ಬರ್ಪೆವೈ ಪಾಪಾ

ಶ್ಯನೆ ? ಎಂದು ನಿರವಿಸಿ, ಭಕ್ತರಾಚಾರದಿಂದ ಬಹಿಷ್ಕರಿಸಿ ನಿರಾಕರಿಸಿದ ಪತ್ರಮಂ ಬರೆಸಿ ಕಂದರ್ಪದರ್ಪವಿದ್ರಾವಕರಾದ ಚನ್ನಬಸವ ಜಗದ್ಗುರುಮೂರ್ತಿಗಳು ಆ ಪುರವನ್ನು ಬಿಟ್ಟು ಸಕಲ ಚರವೃಂದ ಸಹಿತ ವೈಭವದಿಂದ ಕೂಡಿದ ಮೈಸೂರು ಸೀಮೆಗೆ ಬಂದು ಅಲ್ಲಿಂದ ಮಾಗಡಿಪುರಕ್ಕೆ ಬಂದು ಆ ಪಟ್ಟಣದ ಭಕ್ತರ ಪೂಜೆಯನ್ನು ಕೈಕೊಂಡು ಚಂದ್ರಭಾಗೆ [illegible] ಗುರುಗಳು ದುರಾಚಾರ ಮೂಢಾತ್ಮರನ್ನು ಧಿಕ್ಕರಿಸುತ್ತ, ಘನ ಸದಾಚಾರಯುಕ್ತರನ್ನು ಪಾಲಿಸುತ್ತ ಪರಶಿವಮತಾಬ್ಧಿಯನ್ನು ವರ್ಧಿಸುತ್ತ ಮಾಗಡಿಯ ಭಕ್ತರು ಜಯಧ್ವನಿಗೈಯುತ್ತಿರಲು ಷಟ್ಸ್ಥಲ ಸಮಾಧಿಗೆ ಸಂದು ಬಯಲಾದರು.

ಸಿರಹಟ್ಟಿ ಸಿದ್ಧಲಿಂಗ ದೇಶಿಕರು :
(ಪಟ್ಟ 11. ಕಾಲ ಸು. ಕ್ರಿ. ಶ 1730–1750)

ದುರಿತಭೂಜಕುಠಾರನ್, ಅಂಬುಜ ಶರಾಸವನವರಪವನಮಿತ್ರನ್ ಅಭಿಭೂತ ವೈವಸ್ವತನ್, ಗುರು ಸದಾಚಾರ ನಿರ್ಧೂತ ಮಾಯಾಪಟಲನ್, ಮಹಾಷಟ್ಸ್ಥಲಾಬ್ಧಿ ಚಂದ್ರೋದಯನ್, ಪರಿವೀತ ಘೋರ ಸಂಸಾರ ಪಾರಾವಾರನ್, ಮೋಹ ತಿಮಿರ ಮಾರ್ತಾಂಡನ್, ಅಭವನ್, ಸಾರಕಾರುಣ್ಯ ನೇತ್ರಾಂಚಲನ್, ಸೂರಿಜನ ಮಂದಾರನ್, ಉದ್ಧಭಕ್ತ ಮಹೇಶ ಸಂಸ್ತುತನ್, ಅವನಿಭಾಗ ಪೂಜಿತಪದನ್, ಮಹಿಮಾಗಾರನ್, ಪೂರ್ಣಕೌಶಲನ್ ಎಂದು ಪ್ರಸಿದ್ಧನಾದ ಸಿದ್ಧಲಿಂಗೇಶನು ಸ್ವಾದಿ ಚನ್ನಬಸವಸ್ವಾಮಿಗಳಾದ ಮೇಲೆ ಷಟ್ಸ್ಥಲ ಪಟ್ಟವನ್ನು ತಳೆದು ಘನದುರ್ಗದಲ್ಲಿ ರಾರಾಜಿಸುತ್ತಿದ್ದನು.

ನಾಡಿನ ಜನಮನವನ್ನು ಪರಿಷ್ಕರಿಸಿ ಅವರನ್ನು ಸದಾಚಾರದಲ್ಲಿ ನಿಲ್ಲಿಸುವ ತವಕದಿಂದ ಜಗದ್ಗುರುಗಳು ನೂರಹದಿನೈದು ಚರವರ್ಯರೊಡಗೂಡಿ ಸಂಚರಿಸುತ್ತ ಭೂಮಿಯಲ್ಲಿ ಅಸದೃಶ ವೈಭವದಿಂದ ಶೋಭಿಸುತ್ತಿದ್ದ ಮೈಸೂರು, ಶ್ರೀರಂಗಪಟ್ಟಣದ ಸೀಮೆಯನ್ನು ಪಾವನಮಾಡುತ್ತಾ ಎಡೆಯೂರ ಸೀಮಾಂತರಕ್ಕೆ ಬಂದಿರಲು ಇದನ್ನು ತಿಳಿದ ಅಲ್ಲಿಯ ಜನ ಬಂದು ನಮಿಸಿ ಪೂಜಿಸುತ್ತಿರಲು ಒಂದು ದಿನ ಅಲ್ಲಿನ ದೇಶಭಕ್ತರು ಬಂದು ಗುರುಗಳಲ್ಲಿ ಈ ರೀತಿ ಬಿನ್ನವಿಸಿದರು—ಇಲ್ಲಿರುವ ಗುರುಸ್ಥಲದ ಪಟ್ಟದಾರ್ಯರಿಗೆ ಸದಾಚಾರ ದೋಷ ನಿಂದೆ ಬಂದಿದೆ. ಜಗದ್ಗುರುವರ್ಯರು ಈ ದೋಷವನ್ನು ವಿಚಾರಿಸಬೇಕೆಂದು ನಮಿಸಲು, ಮಹಾಗುರುಗಳಾದ ಸಿದ್ಧಲಿಂಗೇಶ್ವರರು ಆ ಪಟ್ಟದಾರ್ಯರನ್ನು ಬರಿಸಿ ವಿಚಾರಿಸಲಾಗಿ ಅವರಲ್ಲಿ ಯಾವ ದೋಷವೂ ಇಲ್ಲವೆಂದೂ ಕುಹಕಿಗಳು ಈ ರೀತಿ ಮಿಥ್ಯಾರೋಪ ಮಾಡಿರುವರೆಂದು ಹೇಳಿ ಅವರನ್ನು ಅಂಗೀಕರಿಸಿದರು.

ಇದನ್ನು ಕೇಳಿದ ಆ ಸೀಮೆಯ ದೇಸಾಯಿಣಿ ಕೋವಿ ಮುತ್ತೂರ ಮಲ್ಲಮ್ಮನೆಂಬವಳು ನಾಡಿನ ಜನ ಪರಸ್ಪರ ದ್ವೇಷಾಸೂಯೆಯಲ್ಲಿರಬೇಕೆಂದು ಬಯಸಿ ಜಗದ್ಗುರುಗಳೊಂದಿಗೆ ಹೊಂದಿಕೊಂಡ ಜನರನ್ನು ಮತ್ತೆ ಅವರ ವಿರುದ್ಧ ಎತ್ತಿಕಟ್ಟಿದಳು. ಆದರೆ ಅನಾಚಾರ ದುರ್ವರ್ತನೆಗಳಿಗೆ ಕುಠಾರಪ್ರಾಯರಾಗಿದ್ದ ಜಗದ್ಗುರುಗಳ ಮುಂದೆ ಇವಳ ಆಟ ನಡೆಯಲಿಲ್ಲ. ಆದಕ್ಕೆ ಪ್ರತಿಯಾಗಿ ಆಕೆಗೆ ಬಹಿಷ್ಕಾರ ಹಾಕಿ ನಿರೂಪವನ್ನು ಹೊರಡಿಸಿದರು. ಇದನ್ನು ತಿಳಿದ ದೇಸಾಯಿಣಿ ಅತಿ ಭಯಗೊಂಡು ಗದಗದನೆ ನಡುಗುತ್ತ ಓಡೋಡಿ ಬಂದು ಮುರಿಗಾ ಜಗದ್ಗುರುವರ್ಯರ ಪಾದಂಗಳಿಗೆ ಸದ್ಭಕ್ತಿಯಿಂದ ಸಾಷ್ಟಾಂಗ ಶತಸಂಖ್ಯಾ ಪ್ರಣಾಮಗಳನ್ನು ಮಾಡಿ,"ದೇವನೆ, ಮದೀಯ ದುರಹಂಕಾರವನದಾವದಾವಾಗಳನೆ,ಮದಜ್ಞಾನಶರಧಿ ಬಡಬಾಗಳನೆ, ತೀವಿದ ಮಹತ್ವ ಮಂಡಿತನೆ,ಗುರುವರ ಜಗದ್ಗುರು ನನ್ನನ್ನು ರಕ್ಷಿಸು; ನಿಮ್ಮ ಪಾದಮಹಿಮೆಯನ್ನು ಅರಿಯದೆ ಆ ಕಾರ್ಯವನ್ನೆಸಗಿದೆ' ನಿಮಗೆ ನಮಿಸದೆ ಜನರಿಗಾಜ್ಞೆಯನ್ನು ಮಾಡಲು ನಾನೆನಿತರವಳು, ನನ್ನ ಸರ್ವಾಪರಾಧಗಳನ್ನು ಕ್ಷಮಿಸಿ, ನಮ್ಮ ಮನೆಗೆ ಬಂದು ನನ್ನನ್ನು ಉದ್ಧಾರ ಮಾಡಬೇಕೆಂದು"ಪಾದಗಳ ಮೇಲೆ ದಿಂಡುರುಳಿ, ತನ್ನಗೈದ ತಪ್ಪಿಗೆ ಸಾವಿರ ಹೊನ್ನನ್ನು ಕಪ್ಪಗಾಣಿಕೆ ಕೊಟ್ಟಳು. ಹೀಗೆ ಪದತಲದಲ್ಲಿ ಶರಣಾಗತಳಾಗಿದ್ದ ಮಲ್ಲಮ್ಮನನ್ನು ಓವಿ ಕರುಣೆಯಿಂದ ಪರಿಗ್ರಹಿಸಿ, ಅವಳ ಶತಾಪರಾಧಗಳನ್ನು ಕ್ಷಮಿಸಿ, ಆಕೆಯ ಬಿನ್ನಪವನ್ನು ಅಂಗೀಕರಿಸಿ, ಅವಳ ಮನೆಗೆ ನಡೆದು, ಶಿವದೀಕ್ಷೆ, ಶಿವಾಚಾರಗಳ ನಡೆಗಲಿಸಿ ಅಲ್ಲಿಂದ ಹೊರಟು ದುರಾಚಾರಿಗಳನ್ನು ಖಂಡಿಸುತ್ತ, ಸದಾಚಾರವನ್ನು ಮಂಡಿಸುತ್ತ ಚಂಗಡಿಹಳ್ಳಿಗೆ ಬಂದರು. ಭಕ್ತರಾಚಾರ ದಂಡನ ಖಂಡನಗಳಲ್ಲಿ ಶಕ್ತನೆನಿಸುತ್ತ, ವೀರ ಮಾಹೇಶ್ವರರಿಗೆ ಷಟ್ಸ್ಥಲ ಮಹಾಬೋಧೆಯನ್ನು ಮಾಡುತ್ತ ಸಕಲ ಸಂಪೂಜ್ಯನೆನಿಸಿ ನಾಡಿನಲ್ಲಿ ಸದಾಚಾರವನ್ನು ಬಿತ್ತುತ್ತ ಭವ ಭೀಕರರಾದ ಸಿರಹಟ್ಟಿ ಸಿದ್ಧಲಿಂಗ ಸ್ವಾಮಿಗಳು ಮುಕ್ತಿವಲ್ಲಭರೆನಿಸಿ ಚಂಗಡಹಳ್ಳಿಯಲ್ಲಿರಲು ಶಿವಭಕ್ತ ಮಾಹೇಶ್ವರರು ಜಯಜಯಧ್ವನಿಗೈಯುತ್ತಿರಲು ಅಲ್ಲಿಯೇ ನಿರವಯವನೈದಿದರು.

ಗುರುಪಾದ ದೇಶಿಕರು :
(ಪಟ್ಟ 12. ಕಾಲ ಸು. ಕ್ರಿ. ಶ. 1750-1760)

ಶೂನ್ಯಸಿಂಹಾಸನ ಪರಂಪರೆ ವೀರಾಗಮಾಚಾರ ನಿಷ್ಠೆಯಿಂದ ಪರಿಪ್ಲುತವಾದುದು. ಅಲ್ಲಮನಿಂದ ಪ್ರಾರಂಭವಾದ ಈ ಪೀಠ ಪರಂಪರೆಯಲ್ಲಿ ಇಂಥ ನಿಷ್ಠರೇ ಬರುತ್ತಿದ್ದಾರೆ. ಇಂಥ ವೀತರಾಗಿಗಳ ಪೀಠದಲ್ಲಿ ಸಹಜವಾಗಿಯೇ ನಿರ್ಧೂತ ಕಲಿಮಲಂ, ಪರಿಹೃತಾಮಯ ಮಲತ್ರಯನ್, ಅಖಿಲ ಸಂಸಾರದೂರನ್, ಅನಘಂ, ವೀರಾಗಮಾಚಾರ ನಿರ್ಣಯ ಸಮುತ್ಸುಲನ್, ಸಂಪೂರ್ಣ ಕೌಶಲನ್, ಖಂಡಿತ ವಿದೃಪ್ತ ಸುಮದಂಡನೆ, ಅಖಿಲ ಬ್ರಹ್ಮಾಂಡ ಮಂಡಲಪೂಜ್ಯ ಪಂಡಿತನ್, ಸಕಲ ವಿಷಯಾವನೀಧರ ವಜ್ರನ್, ಆಶ್ರಿತ ಜನೌಘರಕ್ಷಂ ಎನಿಸಿ ಗುರುಮಾರ್ಗವರ್ಧಿತರಾದ ಗುರುಪಾದ ದೇಶಿಕರು ಷಟ್ಸ್ಥಲ ಪಟ್ಟವನ್ನು ಏರಿದರು. ಚಿತ್ರದುರ್ಗದಲ್ಲಿ ಸದಾ ಲಿಂಗ ಜಂಗಮ ದಾಸೋಹ ಸಂಭ್ರಮದೊಳಿರುತಿರಲು ಒಂದು ದಿನ ಕೊಂಗುಂಟಿಯೆಂಬ ಗ್ರಾಮದಲ್ಲಿ ಮಹಾಜಿತೋಭವೆ ಜಲಜಾತದಂಡಕೋದಂಡ ಸಂಯುಗ ಮಹಾ ಬಲಕಲಾಶಾಲಿ ಲೀಲಾಲೋಲೆಯಾದ ಸೂಳೆಯೊಬ್ಬಳು ತನ್ನ ವಿಫುಲ ಸೌಂದರ್ಯದಿಂದ ಶೋಭಿಸುತ್ತ ಆ ಊರಿನ ತರುಣರನ್ನೆಲ್ಲ ತನ್ನತ್ತ ಆಕರ್ಷಿಸಿ ಮರುಳುಗೊಳಿಸುತ್ತ ಮೀರಿದ ದುರ್ವರ್ತನೆಯಿಂದ ಸದಾಚಾರವನ್ನು ಅಣಕಿಸುತ್ತ ತರುಣ ತಂಡವನ್ನು ಅಧಃಪಾತಕ್ಕೆ ಎಳೆಯುತ್ತಿರಲು ಆ ಊರಿನ ವೃದ್ಧರೆಲ್ಲ ಸೇರಿ

ಮುರಿಗಾ ಜಗದ್ಗುರುಗಳ ಬಳಿಗೆ ಬಂದು ಸಾಷ್ಟಾಂಗ ಮಾಡಿ ಸುದ್ದಿಯನ್ನು ಬಿನ್ನವಿಸಲು ದಯಾನಿಧಿ, ಧರ್ಮಸಿಂಧುವೆನಿಸಿದ ಜಗದ್ಗುರುಗಳು ತರುಣರನ್ನು ಕರೆಸಿ ಪರಾಮರ್ಶಿಸಿ ಸದಾಚಾರ ಮಾರ್ಗಕ್ಕೆ ಬರದಿರಲು ಅವರನ್ನು ಬಹಿಷ್ಕರಿಸಿದರು.

ಇದರಿಂದ ಭೀತರಾದ ತರುಣರು ಚಿತ್ರದುರ್ಗದ ದೊರೆಯ ಬಳಿಗೆ ಬಂದು ಮಠದ ಸ್ವಾಮಿಗಳು ನಮಗೆ ಬಹಿಷ್ಕಾರ ಹಾಕಿರುವರೆಂದೂ,ನಮ್ಮಂಥ ತರುಣರು ನಾಡನ್ನು ಬಿಟ್ಟು ಹೋಗುವುದೆಲ್ಲಿಗೆಂದೂ ರಕ್ಷಣೆ ಕೇಳಿದರು.

ತರುಣರ ಮೊರೆಯನ್ನು ಕೇಳಿದ ರಾಜನು ಸಹಜವಾಗಿಯೇ ಜಗದ್ಗುರುಗಳ ಬಳಿಗೆ ಬಂದು ನಮಿಸಿ, ಗುರುಗಳೇ,ಪವಿತ್ರತಮವಾದ ತಮ್ಮ ಪಾದಸ್ಪರ್ಶಮಾತ್ರದಿಂದ ಚಾಂಡಾಲ ಸಂಸ್ಪೃಷ್ಟ ದೋಷಪರಿಹಾರವಾಗುವುದರಲ್ಲಿ ಸಂದೇಹವೇನು ? ಅಲ್ಲದೆ ಇದು ಅಜ್ಞಾನ ಕೃತದೋಷ, ಸುಜ್ಞಾನದೊಲುಮೆಯಿಂದ ಅಳಿವುದು ಎಂದು ಶಾಸ್ತ್ರಾಗಮಗಳಲ್ಲಿ ಹೇಳಿದೆ. ಪತಿತರನ್ನು ಉದ್ಧಾರ ಮಾಡುವುದೇ ಧರ್ಮ ವಿಧಿಯಲ್ಲವೆ ! ತಮಗೆ ತಿಳಿಯ ಹೇಳುವಷ್ಟು ಧಾರ್ಷ್ಟ್ಯ ನನಗಿಲ್ಲ. ಅಭವ ಭಕ್ತವೃಂದದ ಪಾದಸ್ಪರ್ಶದಿಂದ ಅಖಿಲತಿರ್ಯಗ್ಯೋನಿಗಳ್ ಮುಕ್ತಿಯಂ ಪಡೆಯುವುವು ಎಂದ ಮೇಲೆ ಭಕ್ತರಿಗೆ ಚಂಡಾಲ ಸಂಸರ್ಗದೋಷವೆಂತಹುದು, ರಕ್ಷಿಪುದು ಎಂದು ಮುಂತಾಗಿ ಕಟಕಿಯನ್ನಾಡಿದನು.

"ಎಲೈ ರಾಜನೆ, ನೀನು ಹೇಳಿದ ಈ ಮಾತುಗಳು ಇಂಥವರಿಗೆ ಅನ್ವಯಿಸುವುದಿಲ್ಲ. ಕಾಮಾಗ್ನಿಯಿಂದ ಚಿರಚಿರನೆ ಬೆಂದು, ವೇಶ್ಯೆಯರಿಗೆ ಮರುಳಾಗಿ ಭಕ್ತರಾಚಾರವನ್ನು ಜಂಗಮಲಿಂಗನಿಷ್ಠೆಯನ್ನು ತೊರೆದು ಪರವಧುವಿಗೆ ಅಳುಪುವರು ಭಕ್ತರಲ್ಲ. ಲಿಂಗನಡೆನುಡಿಗಳಿರವಿನಿಂ ಲಿಂಗದೊಳ್ ಸಕಲೇಂದ್ರಿಯಂಗಳುಂ ಸಾಂಗಮಾಗಿರಲ್ ಆತನೇ ಪರಮ ಭಕ್ತ. ಅಂಥ ಮಹಾ ಭಕ್ತನ ಶರೀರದ ಗಾಳಿ ಸೋಂಕಿದರೂ ಸಕಲ ಪ್ರಾಣಿಗಳು ಮುಕ್ತ್ಯಂಗನೆಯ ತೋಳ್ತೆಕ್ಕೆಯಲ್ಲಿರುತ್ತವೆ. ಇದಲ್ಲದೆ ಬರಿಯ ಭಕ್ತರಿಂದೇನು ಫಲ ? ಲೌಕಿಕದ ಆಚಾರ ಮಾರ್ಗವನ್ನು ತಪ್ಪದೆ ಪಿನಾಕಿಯ ಭಕ್ತಿಮಾರ್ಗವನ್ನು ನಡೆಸುತ್ತ ಲೋಕಪೂಜ್ಯರಾದವರು ಭಕ್ತರು, ದುರಾಚಾರಿಗಳು ಭಕ್ತರೇ ? ತಾನು ಶುದ್ಧ ಭಕ್ತನೆಂದು ಹೇಳಿಕೊಂಡ ಮೇಲೆ, ಲೋಕವಿರುದ್ಧವಾದ ಆಚಾರವನ್ನು ನೆಗಳಿ ಬಹಿಷ್ಕೃತರಾದವರು ಭಕ್ತರಾಚಾರದಲ್ಲಿ ಬರುವರೇ ? ಭವಿಗಳನ್ನು ಚಿತ್ತಪಾಕವನರಿದು ಭಕ್ತರಂ ಮಾಡಲಾದಪುದು. ಆದರೆ ಭಕ್ತರೂ ಭವಿಗಳಾದರೆ ಅವರನ್ನು ಮತ್ತೆ ಭಕ್ತರನ್ನಾಗಿ ಮಾಡಲಾಗುವುದೆ ? ಅಕ್ಕಿಯನ್ನು ಬೇಯಿಸಿ ಅನ್ನ ಮಾಡಬಹುದು, ಆದರೆ ಬೇಯಿಸಿ ತಂಗಳಾದ ಅನ್ನವನ್ನು ಮತ್ತೆ ಶುಚಿ ಮಾಡಲಾಗುವುದೆ ? ಆದುದರಿಂದ ಎಲೈ ರಾಜನೆ, ದುರಾಚಾರಿಗಳು, ಉನ್ಮಾರ್ಗಿಗಳು ಶಿವಭಕ್ತರಾಗರು, ಅಂಥವರನ್ನು ಬಹಿಷ್ಕರಿಸಿದೆವು. ಇದರ ಗೊಡವೆ ನಿನಗೆ ಬೇಡ" ಎಂದರು.

ಈ ಮಾತನ್ನು ಕೇಳಿದ ದೊರೆ ಮುಂಬರುವುದನ್ನರಿಯದೆ,ಗುರುವಾಣಿಯನ್ನು ಪುರಸ್ಕರಿಸದೆ ದುರಾಲಾಪದಿಂದ ವಿಮುಖನಾಗಿ ಚಂದವಲ್ಲದ ನಷ್ಟಮನದಿಂದ ಹಿಂತಿರುಗಿದನು. ಸಿಂಧುಜೂಟ ಸಮಾನರಾದ ಮಹಾ ಗುರುವಾದ ಜಗದ್ಗುರುಗಳು ಆ ರಾಜನ ಮೇಲಿನ ಬೇಸರದಿಂದ ಸದಾಚಾರವಿಲ್ಲದ, ಅವಿವೇಕಿ ರಾಜನ ಪಟ್ಟಣದಲ್ಲಿರಲಾಗದೆಂದು ದುರ್ಗದ ಮಠವನ್ನು ತ್ಯಜಿಸಿದರು.

ಅಖಿಳಚರ ವೃಂದದೊಡನೆ ಆ ಬೃಹನ್ಮಠವನ್ನು ಬಿಟ್ಟು ದೇಶ ಸಂಚಾರಕ್ಕೆಂದು ಹೊರಟು ಬರುತ್ತಿರುವಾಗ, ಮಾರ್ಗಮಧ್ಯದಲ್ಲಿ ಸಿಕ್ಕಿದ ಹಾವನೂರಿನ ಹನುಮಗೌಡನೆಂಬ ಭಕ್ತನು ಪರಮ ಗುರುವರ್ಯ ಗುರುಪಾದ ಮಾಹೇಶ್ವರನ ಚರಣವನ್ನು ಕಂಡು, ಅತಿ ಭಕ್ತಿಯಿಂದ ನುತಿಸಿ ನನ್ನ ಭಕ್ತಿಯೊಳಿರ್ಪುದೆಂದು ಬಹುತರವಾಗಿ ಬಿನ್ನವಿಸಲು, ಆತನ ಭಕ್ತಿಭಾವನೆಗೊಲಿದು ಆತನ ಆಲಯದಲ್ಲಿ ಲಿಂಗ ಪೂಜಾದಿ ಚರದಾಸೋಹವಂ ಮಾಡುತ್ತ ಕೆಲದಿನಗಳಿದ್ದು ಆತನಿಗೆ ಆಶೀರ್ವಾದವನ್ನು ನೀಡಿ ಆ ಪುರವನ್ನುಳಿದು ಚರತತಿಯೊಂದಿಗೆ ಗುಣಮೆಟ್ಟೆ ಕಲ್ಲೆಂಬ ಪುರಕೆ ದಯಮಾಡಿಸಿ, ಅಲ್ಲಿ ವೀರಶೈವಾಚಾರ ನಿರ್ಣಯವನ್ನು ಮಾಡಿ ಷಟ್ಸ್ಥಲ ಮಾರ್ಗವನ್ನು ತಿಳಿಸುತ್ತ ವೀರ ಮಾಹೇಶ್ವರವ್ರಾತ ಅವರನ್ನು ಹೊಗಳುತ್ತಿರಲು ಅಲ್ಲಿಯೇ ಬಯಲಾದರು.

ಮೂರು ಸಾವಿರದ ಗುರುಪಾದ ದೇಶಿಕರು :
(ಪಟ್ಟ 13. ಕಾಲ ಸು. ಕ್ರಿ. ಶ. 1760-1779)

ಗುರುಪಾದ ದೇಶಿಕರಾದ ಮೇಲೆ ವೀರಶೈವಾಚಾರ ಸಾರ ನಿರ್ಣಯ ಕಲಾ ಕೌಶಲರಾದ ಮೂರು ಸಾವಿರದ ಗುರುಪಾದ ದೇಶಿಕರು ಶಿಖಾ-ಶೈಲಗಳಿಂದ ನಿರಂಜನ ಪೀಠದಲ್ಲಿ ಪಟ್ಟಾಭಿಷಿಕ್ತರಾಗಿ ಚಿತ್ರದುರ್ಗದ ಮಠದಲ್ಲಿಯೇ ಇರುತ್ತಾರೆ. ಪ್ರಾಯಃ ಓಬಳನ್ಮನಾಗತಿಯ ಉಸ್ತುವಾರಿಯಲ್ಲಿ ಕೊನೆಯ ಮದಕರಿನಾಯಕನು ಆಳುತ್ತಿದ್ದ ಕಾಲದಲ್ಲಿ ಅವಳ ಏರ್ಪಾಡಿನಂತೆ ಪಟ್ಟಾಭಿಷೇಕ ಮಹೋತ್ಸವ ನಡೆದಿರುವಂತೆ ಕಾಣುತ್ತದೆ. ಇವರು ಪಟ್ಟಕ್ಕೆ ಬಂದ ಮೇಲೆ ಸದ್ಭಕ್ತಿ ಪಥದಲ್ಲಿ ನಡೆಯದೆ ಕಿರುಕುಳ ಕುಲಾಚಾರವೆಂಬ ಕೀಳುದಾರಿಯಲ್ಲಿ ನಡೆಯುತ್ತಿದ್ದ ಮೂಢಾತ್ಮರನ್ನು, ಮೂರ್ಖರನ್ನು, ದುರಾಚಾರಿಗಳನ್ನು ತಿಳಿಯಹೇಳಿ ಸದಾಚಾರ ಮಾರ್ಗವನ್ನು ಬೋಧಿಸುತ್ತ ಅವರಲ್ಲಿದ್ದ ದುರ್ಮತಿ ದುರಾಚಾರಗಳನ್ನು ದೂರೀಕರಿಸುತ್ತ ಪುನೀತರನ್ನಾಗಿಸುತ್ತ ಶೋಭಿಸುತ್ತಿದ್ದರು.

ಕಾರಣಾಂತರಗಳಿಂದ ಆಗಿನ ರಾಜನಿಗೂ ಮಠದವರಿಗೂ ಹೊಂದಾಣಿಕೆಯಿರಲಿಲ್ಲವೆಂದು ತೋರುತ್ತದೆ. ಈ ಸಂದರ್ಭದಲ್ಲಿ ಶ್ರೀರಂಗಪಟ್ಟಣದ ಬಾದಶಹ ಹೈದರಾಲಿಯು ಗರ್ವಾಂಧನಾಗಿ ಸಕಲ ಸೇನಾಸಮೇತನಾಗಿ ಬಂದು ಚಿತ್ರದುರ್ಗದ ಕೋಟೆಯನ್ನು ಮುತ್ತುತ್ತಾನೆ. ಆಗಲೂ ಮದಕರಿನಾಯಕನು ಜಗದ್ಗುರುಗಳ ಕೃಪಾಹಸ್ತವನ್ನು ತಿರಸ್ಕರಿಸಿ ಬೆಟ್ಟದ ಮೇಲಿನ ಕೋಟೆಯಲ್ಲಿ ಸುಭದ್ರವಾಗಿ ನಿಲ್ಲುತ್ತಾನೆ. ಎರಡೂ ಪಡೆಗಳಿಗೆ ಘೋರ ಯುದ್ಧ ನಡೆಯುತ್ತದೆ. ನರಮೇಧವೇ ನಡೆದುಹೋಗುತ್ತದೆ. ಜಯಾಪಜಯಗಳು ಎರಡೂ ಪಕ್ಷಗಳಲ್ಲಿ ಅತ್ತಿಂದಿತ್ತ ಇತ್ತಿಂದತ್ತ ತೂಗುಯ್ಯಾಲೆಯಾಡುತ್ತಿರುತ್ತದೆ. ಆಗ ಅಲ್ಲಿದ್ದ ಕ್ಷುದ್ರನೊಬ್ಬನು ಬಂದು ಈ ಮದಕರಿನಾಯಕ

ಸಿಗೆ ಮುರಿಗೇಶರ ಕೃಪಾಬಲವಿದೆ. ಅದನ್ನು ಮೊದಲು ನಿನ್ನವಶಕ್ಕೆ ತೆಗೆದುಕೊಳ್ಳುವುದು ಎಂದು ಹೇಳಲು ಹೈದರನು ಮಠಕ್ಕೆ ನುಗ್ಗಿ ಮುರಿಗೇಂದ್ರರ ಸಿಂಹಾಸನವಿರುವ ಕೋಣೆಯ ಬಾಗಿಲನ್ನು ಮುರಿಯುವ ಸಮಯಕ್ಕೆ ಅವನ ಕಣ್ಣುಗಳು ಹೋದಂತಾಗಲು ಅವನು ಹೆದರಿ ತನ್ನ ಪಟ್ಟಣದ ಕಡೆಗೆ ಹಿಂತಿರುಗುತ್ತಾನೆ.

ಇದನ್ನು ತಿಳಿದ ಮದಕರಿನಾಯಕನು ದುರ್ಗವನ್ನು ಬಿಟ್ಟು ಕಾಡಿಗೆ ಪಲಾಯನ ಮಾಡುತ್ತಿರುವಾಗ ಹೈದರನು ಹೊಂಚಿ ಅವನನ್ನು ಸೆರೆಹಿಡಿಯುತ್ತಾನೆ. ಅನಂತರ ಆತನು ಮುರುಗೀ ಮಠಕ್ಕೆ ನುಗ್ಗಿ ಅಲ್ಲಿದ್ದ ಐಶ್ವರ್ಯವನ್ನೆಲ್ಲ [illegible] ಕ್ಷುಭಿತರಾದ ಮೂರು ಸಾವಿರದ ಗುರುಪಾದ ಸ್ವಾಮಿಗಳು ತಡೆಯಲಾರದೆ ಈತನ ವಂಶ ಕ್ಷಯವಾಗಲೆಂದು ಶಪಿಸಿದರು.

ದುಷ್ಟನಿಗ್ರಹ ಶಿಷ್ಟಪರಿಪಾಲನಪರಾಯಣರಾದ ಜಗದ್ಗುರುಗಳು ಜನರ ಇಷ್ಟಾರ್ಥಗಳನ್ನು ನೆರವೇರಿಸುತ್ತ ಮಠದಲ್ಲಿರುವಾಗ ವೀರ ಮಾಹೇಶ್ವರರು ಜಯಜಯ ಧ್ಯಾನಗೈಯುತ್ತಿರಲು ಅಲ್ಲಿಯೇ ಬಯಲಾದರು. ಇವರ ಗದ್ದಿಗೆ ಅಲ್ಲಿಯೇ ಮಠದಲ್ಲಿದೆ.

ನೂರೊಂದು ಸಾವಿರದ ಸಿದ್ಧಲಿಂಗ ಸ್ವಾಮಿಗಳು :
(ಪಟ್ಟ 14. ಕಾಲ ಸು. ಕ್ರಿ. ಶ. 1779–1790)

ಧೀರಜನ ಸನ್ನುತನ್, ಉದಾರ ಮಹಿಮಾನ್ವಿತನ್, ಅಪಾರ ಕರುಣಾರಸನ್, ಅಮೇಯ ಸುಗುಣೌಘನ್, ಅನಂತಗಣ ಸಮ್ಮತನ್ ವೀತ ಸಂಸಾರ ಸಾಗರತರಂಗಂ, ಸಮುತ್ಖಾತ ಖಲಪಂಚಶರಶರ ಶಂಕುಬೃಂದಂ, ಉದ್ಧೀತ ಖರತರದಂಡಧರನ್, ಅಧೀತಾಗಮ ಸ್ತೋಮ ಪರಿಪೂತ ಚರಿತಂ, ನೀತಘನ ವೀರಶೈವಾಚಾರ ಶರಧಿಸಿತ ಶೀತಕಿರಣಂ, ಲುಪ್ತಕರಣೇಂದ್ರಿಯನ್, ಮೃತ್ಯುಘಾತನೆನಿಸಿದ ಸಿದ್ಧಲಿಂಗ ಸ್ವಾಮಿಗಳು ಶೂನ್ಯಪೀಠ ಪರಂಪರೆಯಲ್ಲಿ ಹದಿನಾಲ್ಕನೆಯವರಾಗಿ ಷಟ್ಸ್ಥಲ ಪಟ್ಟವನ್ನು ಸ್ವೀಕರಿಸಿದರು.

ಆ ಸಮಯದಲ್ಲಿ ಗುರು-ಭಕ್ತ ವರ್ಗಗಳಲ್ಲಿ ಅಜ್ಞಾನದಿಂದಾಗಿ ಕಚ್ಚಾಟ, ತಿಕ್ಕಾಟಗಳು ಜುಗುಪ್ಸೆ ತರುವ ರೀತಿಯಲ್ಲಿ ಬೆಳೆದು ಸಮಾಜದ ಶಾಂತಿಯನ್ನು ಕಲಕಿದ್ದವು. ಈ ಮಧ್ಯೆ ಘನಲಿಂಗ ಜಂಗಮದ ದಾಸೋಹವನ್ನು ನೆಗಳುತ್ತ, ಷಟ್ಸ್ಥಲಾಚಾರವನ್ನು ನಿರ್ಣಯಿಸುತ್ತ, ಭಕ್ತಮಾಹೇಶ್ವರರಿಬ್ಬರೂ ಇವರನ್ನು ಸಮಾನವಾಗಿ [illegible] ಭಕ್ತರು, ಇನ್ನೊಂದು ಕಡೆ ಮಾಹೇಶ್ವರರು ರಾಗದ್ವೇಷ ವೈಷಮ್ಯಗಳಿಂದ ಪರಸ್ಪರ ತಮ್ಮ ತಮ್ಮಲ್ಲೀ [illegible] ಭಕ್ತ-ಮಾಹೇಶ್ವರರಿಬ್ಬರನ್ನು ಕರೆಸಿ ಶಾಸ್ತ್ರಾಗಮಾಧಾರಗಳಿಂದ ನಿರ್ಣಯಿಸಿ ಹೇಳಿದರೂ ತಿಳಿಯದೆ ಅವಿಚಾರದಿಂದ ಆ ನಿರ್ಣಯಕ್ಕೆ ಒಪ್ಪದೆ ಅಜ್ಞಾನದಿಂದ ಗರ್ವಿತರಾಗಲು ಆ ಭಕ್ತ-ಮಾಹೇಶ ಮೂಢರಿಗೆ ತಮ್ಮ ಪರಮಾಜ್ಞೆಯನ್ನು ನಿರವಿಸಿದರು. ಇದನ್ನು ಕೇಳಿ ಭಯದಿಂದ ಮಾಹೇಶ್ವರರ ಗುಂಪನ್ನು ಕಟ್ಟಿಕೊಂಡು ಕುಣಿಯುತ್ತಿದ್ದ ತಡಾಕಿಯ ರುದ್ರಘನ ಶಾಂತಿವೀರನೆಂಬ ಮಾಹೇಶ್ವರ ಮತ್ತು ಭಕ್ತರ ಗುಂಪನ್ನು ಕಟ್ಟಿಕೊಂಡು ಕುಣಿಯುತ್ತಿದ್ದ ರಾಣಿಬೆನ್ನೂರ ಸೆಟ್ಟಿ [illegible] ಭಕ್ತರು [illegible] ಶಾಂತ [illegible] ಗಳಡಿಗೆ ಬಾಗಿ, ನಮಿಸಿ ನಮ್ಮ ಸರ್ವಾಪರಾಧಗಳನ್ನು ಕ್ಷಮಿಸಬೇಕೆಂದು ವಿನಂತಿಸಿಕೊಂಡರು. ಅವರಿಗೆ ಕರುಣಾಮೃತ ವರ್ಷಧಾರೆಯನ್ನು ಕರೆದು ಸಮಾಜದಲ್ಲಿ ಉಂಟಾಗುತ್ತಿದ್ದ ಇಂಥ ಘಾತಕಗಳನ್ನೆಲ್ಲ ಆಗಾಗ್ಗೆ ಅಲ್ಲಲ್ಲಿಯೇ ಪರಿಹರಿಸುತ್ತ ಸಮಾಜದಲ್ಲಿ ಸದಾಚಾರವನ್ನು ನೆಲೆಗೊಳಿಸುತ್ತ ಶಾಂತಿ ನೆಮ್ಮದಿಗಳನ್ನುಂಟು ಮಾಡಿದರು.

ಸಕಲ ಭಕ್ತರು ನೀಡುವ ಬಿನ್ನಪಗಳನ್ನು ಅಂಗೀಕರಿಸುತ್ತ ರಾಣಿಬೆನ್ನೂರಿನ ಕಡೆ ಹೊರಟಾಗ ಮಾರ್ಗ ಮಧ್ಯದಲ್ಲಿದ್ದ ರಟ್ಟಿಹಳ್ಳಿಯಲ್ಲಿ [illegible] ಸಹಸ್ರ ಶಿಷ್ಯವೃಂದವನ್ನು ಪಡೆದುಕೊಂಡು ಪೂಜ್ಯನಾದ ಪಟ್ಟದಾರ್ಯನು [illegible] ಜ್ಞಾನದಿಂದ [illegible] ತೆಯ ನಾಮಕುಂಭಗಳನ್ನು ಪೂಜಿಸುತ್ತ ವಾಮಾಚಾರ ನಿರತನಾಗಿರುವುದನ್ನು ಕಂಡ ಗುರುಗಳು ಈತನು ಮಹಿ ವಿಹೀನ, ವೀರಶೈವಾಚಾರಕ್ಕೆ ದೂರನು ಎಂದು ಆಜ್ಞಾಪಿಸಲು ಆತನು ಭೀತಿಗೊಂಡು ಸಿದ್ಧಲಿಂಗೇಶನ ಪಾದಾಬ್ಜಗಳನ್ನು ಕಂಡು ಬದ್ಧಾಂಜಲಿಯಿಂದ ತ್ರಿವಾರ ಪ್ರಣಾಮದಿಂದೆದ್ದು ಭಯಭಕ್ತಿಯಿಂದ ಅವರ ಮುಂದೆ ನಿಂತಿರಲು ಆತನನ್ನು ನೋಡುತ್ತ—ಶುದ್ಧ ಘನವೀರ ಶೈವಾಗಮಾಚಾರದಿಂದ ಶುದ್ಧನಾಗದೆ ಭವಿಗಳಂತೆ ಕುಂಭವನ್ನು ಕದ್ದು [illegible] ತರ ಭಕ್ತಿಯೈ. ಇದು ಮಾಹೇಶ್ವರ ಧರ್ಮವೆ? ಮೋಕ್ಷವನ್ನು ಬಯಸಿ ನೀನು ದೊಡ್ಡವನೆಂದು ನಿನ್ನ ಬಳಿಗೆ ಬರುವ ಭಕ್ತರಿಗೆ ಈ [illegible] ಯನ್ನು ತೋರಿ ಮೋಕ್ಷವನ್ನು [illegible]? ಗುರುಪಾದ ಕಾರುಣ್ಯದಿಂದ ರಾಜಿಸುವ ಪಟ್ಟದಾಚಾರ್ಯನಾದ ನೀನು ಕುಂಭವಾಚಿಯನ್ನು ಪೂಜಿಸದೆ ಪೂಜ್ಯನಾಗಿ ಧರೆಯ ಭಕ್ತರ ದುರಾ[illegible] ಗುರುತನ ನಿನಗಿರುವಾಗ ನೀನೇ ಇಂಥ ದುರಾಚಾರವನ್ನು ಮಾಡಿದರೆ ಹೇಗೆ? ನರಪತಿಯ ಪಟ್ಟವನ್ನು ತಳೆದು ತದ್ಭೃತ್ಯನಹ ನರಶೂದ್ರ ಪಟ್ಟಮಂ ತಳೆಯಲಾದವುದೆ? ಸುರವರರತ್ನವಿರೆ ಗಾಜನುರುಮಣಿಯೆನಾಳ್ದ ಪರಿಯಲ್ತೆ ನಿನ್ನಯ ರೀತಿ! ನಿನ್ನ ಈ ಚರಿತೆ ಪಟ್ಟದಾರ್ಯ ಚರಿತೆಯಲ್ಲ, ಕೆಟ್ಟ ಶೂದ್ರನ ಚರಿತೆಯಾಯಿತು ಎಂದು ಮುಂತಾಗಿ ಗುರುಗಳು ದಟ್ಟಿಸುತ್ತಿರಲು ಪಟ್ಟದಾರ್ಯನು ಕಂಪಿಸುತ್ತ ಶತ ಪ್ರಣಾಮಗಳನ್ನು ಮಾಡಿ ಕಾಣಿಕೆಯನ್ನು ಕೊಟ್ಟು ಅಪರಾಧವನ್ನು ಕ್ಷಮಿಸಬೇಕೆಂದು ಬಿನ್ನವಿಸಲು ಗುರುಸಿದ್ಧಲಿಂಗೇಶರು ಕರುಣಿಸುತ್ತ ನೀನು ಇನ್ನು ಮುಂದೆ ಇಂತಿರಬೇಡವೆಂದು ಹೇಳಿ ಕುಂಭಗಳ ಪರಿಪೂಜೆಯನ್ನು ಬಿಡಿಸಿ, ವಾಮಾಚಾರವನ್ನು ನಿಲ್ಲಿಸಿ ವೀರಶೈವ ಕ್ರಮದೊಳಿರಿಸಿದರು.

ಹೀಗೆ ದಾರಿತಪ್ಪಿದವರನ್ನು, ಅವಿವೇಕ, ಅಜ್ಞಾನಗಳಿಂದ ವಾಮಾಚಾರ ಮಾರ್ಗವನ್ನು ಹಿಡಿದವರನ್ನು ಝಂಕಿಸಿ, ಕರುಣಿಸಿ, ಬೋಧಿಸಿ ಸನ್ಮಾರ್ಗ-ಸದಾಚಾರದಲ್ಲಿ ನಿಲ್ಲಿಸುತ್ತಾ, ಪತಿತರನ್ನು ಪಾವನಗೊಳಿಸುತ್ತ ರಾಣಿಬೆನ್ನೂರಿಗೆ ಹೋಗದೆ ಮಾಗಡಿಗೆ ಬಂದು, ತಪಸ್ಸು ಮಾಡಿ, ಮಹಿಮೆಗಳನ್ನು ಮೆರೆದು ಅಲ್ಲಿಯೇ ಬಯಲಾದರು.

ಒಪ್ಪತ್ತಿನ ಚನ್ನವೀರಸ್ವಾಮಿಗಳು :
(ಪಟ್ಟ 15. ಕಾಲ ಸು. ಕ್ರಿ. ಶ. 1790)

ಶೂನ್ಯಸಿಂಹಾಸನ ಆಧ್ಯಾತ್ಮಸಿದ್ಧಿಯ ತುರೀಯಾವಸ್ಥೆಯ ಸಂಕೇತ. ಅಂತರಂಗದ ಸಿದ್ಧಿ ಬಹಿರಂಗದಲ್ಲಿ ತೋರಿ ನೆಲೆಗೊಂಡ ದಿವ್ಯಪೀಠ. ಆ ಪೀಠದಲ್ಲಿ ಮಂಡಿಸುವ ಶಕ್ತಿಗೆ ಬಾಹ್ಯ ವೈಭವ ಅನವಶ್ಯ ಎಂದು ಭಾವಿಸಿ ಅದನ್ನು ತೊರೆದವರು ಒಪ್ಪೊತ್ತಿನ ಚನ್ನವೀರಸ್ವಾಮಿಗಳು. ಸಂಸಾರ ಜಲದ ಜಂಝಾನಿಲನ್, ನಿರ್ಮುಕ್ತ ಕರಣೇಂದ್ರಿಯನ್, ಅಖಿಲ ವಿಷಯದೂರನ್, ತೃಣೀಕೃತ ಜಗಜ್ಜಾಲ, ವಿಕಾರದೂರನ್ ಎನಿಸಿದ ಒಪ್ಪೊತ್ತಿನ ಚನ್ನವೀರಸ್ವಾಮಿಗಳು ಷಟ್‌ಸ್ಥಲ ಪಟ್ಟಾಧ್ಯಕ್ಷರಾಗಿ ಪದವಿ ಸ್ವೀಕರಿಸುವ ಸಮಯದಲ್ಲಿ ಉತ್ಸವಕ್ಕಾಗಿ ಏರ್ಪಾಟಾದ ಛತ್ರ–ಚಾಮರ ಅಂದಳ ಬಿರುದಿನ ಉಗ್ಘಡಣೆ ಬಹುವಾದ್ಯಗಳ ಬಹುಘೋಷ, ಚರವರೇಂದ್ರ ಸಂಸೇವನ, ಭಕ್ತಜನದ ಚರಣ ಪರಿಪೂಜನ, ತಳಿರು-ತೋರಣ ಮುಂತಾದ ಅತಿ ವಿಜೃಂಭಣೆಯಿಂದ ವ್ಯವಸ್ಥಿತವಾದ ವೈಭವಗಳನ್ನು ಕಂಡು ನೈಜ ವಿರಕ್ತನಾದ ನನಗೇಕೆ ಈ ವೈಭವ, ಈ ಬಾಜಾಬಜಂತ್ರಿಗಳು ? ಅಂತರಂಗ ಸಾಧನೆ, ಶೂನ್ಯ ಸಂಪಾದನೆ ನಮ್ಮ ಧ್ಯೇಯವಾಗಿರುವಾಗ ಬಾಹ್ಯಾಡಂಬರ ಸೂಚಕವಾದ ಈ ವೈಭವೋಪೇತವಾದ ಮೆರವಣಿಗೆ ಉತ್ಸವಗಳು ಕೇವಲ ತೋರಿಕೆಯ ಅನಾವಶ್ಯಕವಾದ ಖರ್ಚು ಎಂದು ಮುಂತಾಗಿ ಭಾವಿಸಿ ಪಲ್ಲಕ್ಕಿಯಿಂದಿಳಿದು ತಾವು ಧರಿಸಿದ್ದ ಉಡುಪನ್ನು ತೆಗೆದು, ಕೇವಲ ಕೌಪೀನಧಾರಿಯಾಗಿ ಭಕ್ತರು ಮಹಂತರು ಚರಮೂರ್ತಿಗಳು ಎಷ್ಟೇ ಬೇಡಿಕೊಂಡರೂ ನಿಲ್ಲದೆ ಕೇವಲ ಅಂತರ್ಮುಖಿಗಳಾಗಿ ತಿಳುವಳ್ಳಿಗೆ ಬಂದು ಯಾರೂ ಕಾಣದಂತಿದ್ದು ಪಟ್ಟವಾದ ಹದಿನೇಳು ದಿವಸಕ್ಕೆ ಸರಿಯಾಗಿ ಚಂಚಲ ಮನಸ್ಸನ್ನು ನಿಜಲಿಂಗದಲ್ಲಿ ನಿಲಿಸಿ ಬೆಳಗಿನಲ್ಲಿ ಬೆಳಗಾದರು.

ಒಂದೊಪ್ಪೊತ್ತು ಮಾತ್ರ ಮಠದಲ್ಲಿದ್ದು ಆ ವೈಭವವನ್ನು ಒಂದೇ ಏಟಿಗೆ ಹರಿದೆಸೆದು ಅನೇಕ ವರುಷಗಳು ಸಾಧಿಸಲಾಗದ ನಿರವಯವ ಸ್ಥಿತಿಯನ್ನು ಒಂದೊಪ್ಪತ್ತಿನಲ್ಲಿ ಪಡೆದು ಲೋಕವನ್ನೇ ಚಕಿತಗೊಳಿಸಿದ ಮಹಾಮೂರ್ತಿಯಾದುದರಿಂದ ಅವರಿಗೆ ಒಪ್ಪೊತ್ತಿನ ಚನ್ನವೀರ ಸ್ವಾಮಿಗಳೆಂದು ಹೆಸರಾಯಿತು. ಇಂಧನದಲ್ಲಿ ಅಗ್ನಿಯಿರುವಂತೆ, ಕುಸುಮದಲ್ಲಿ ಪರಿಮಳವಿರುವಂತೆ, ರತ್ನದಲ್ಲಿ ಕಾಂತಿಯಿರುವಂತೆ ತನ್ನಲ್ಲಿಯೇ ಅಡಗಿದ್ದ ಲಿಂಗವನ್ನು ಅರಿತು ಲಿಂಗಾಂಗಿಯಾಗಿ ಷಟ್‌ಸ್ಥಲವೇ ತಾನಾಗಿ ಶೂನ್ಯವನ್ನು ಸಂಪಾದಿಸಿದ ಘನಲಿಂಗಿಗಳಾದರು, ಲೋಕವನ್ನು ಮಿಂಚಿನಂತೆ ಬೆಚ್ಚಿಸಿದರು.

ವ್ಯಾಕರಣದ ಸಿದ್ಧಲಿಂಗ ಸ್ವಾಮಿಗಳು :
(ಪಟ್ಟ 16. ಕಾಲ ಸು. ಕ್ರಿ. ಶ. 1790-1800)

ಇವರ ಹೆಸರೇ ಸೂಚಿಸುವಂತೆ ವ್ಯಾಕರಣದಲ್ಲಿ ಪ್ರಕಾಂಡ ಪಾಂಡಿತ್ಯವನ್ನು ಗಳಿಸಿಕೊಂಡಿದ್ದುದರಿಂದ ಇವರಿಗೆ ವ್ಯಾಕರಣದ ಸಿದ್ಧಲಿಂಗ ಸ್ವಾಮಿಗಳೆಂದು ಹೆಸರಾಯಿತು. ಕನ್ನಡ, ಸಂಸ್ಕೃತ, ಪ್ರಾಕೃತ ಮುಂತಾದ ಭಾಷೆಗಳ ವ್ಯಾಕರಣದಲ್ಲಿ ಅಪಾರ ಜ್ಞಾನವನ್ನು ಪಡೆದಿದ್ದರು. ಅವಿಮುಕ್ತ ಕ್ಷೇತ್ರವೆನಿಸಿದ ಕಾಶಿಯಲ್ಲಿ ಪಾಣಿನಿಯ ವ್ಯಾಕರಣ, ಕಾತಂತ್ರ, ಜೈನೇಂದ್ರ ವ್ಯಾಕರಣಗಳನ್ನು ಅರಗಿಸಿಕೊಂಡಿದ್ದುದಲ್ಲದೆ, ಪ್ರಾಕೃತ-ಅಪಭ್ರಂಶಗಳಲ್ಲೂ ಸಿದ್ಧಿಯನ್ನು ಗಳಿಸಿದ್ದರು. ಧಾರ್ಮಿಕ ಗ್ರಂಥಗಳ ನೈಜವಾದ ಅರ್ಥವಿವರಣೆ, ತತ್ವಾಲೋಕಗಳಿಗೆ ವ್ಯಾಕರಣ ಜ್ಞಾನ ಅಂದರೆ ಶಬ್ದ ಶಾಸ್ತ್ರದ ಸರಿಯಾದ ತಿಳಿವಳಿಕೆಗೆ ಅವಶ್ಯಕವೆಂದು ಎಲ್ಲ ವೈಯ್ಯಾಕರಣಿಗಳೂ ಹೇಳಿದ್ದಾರೆ. ಅಂತೆಯೇ ವ್ಯಾಕರಣ ಪಂಡಿತರಾದ ಸಿದ್ಧಲಿಂಗ ಸ್ವಾಮಿಗಳು ಷಟ್‌ಸ್ಥಲ ಶಾಸ್ತ್ರದಲ್ಲಿ ಪರಿಣತರು ಮಾತ್ರವಲ್ಲದೆ, ಸಕಲ ಶಾಸ್ತ್ರಾಗಮೋಪನಿಷತ್ತುಗಳ ಸ್ಪಷ್ಟವಾದ ಜ್ಞಾನವನ್ನು ಪಡೆದಿದ್ದು ಕಾಶಿಯಿಂದ - ರಾಮೇಶ್ವರದವರೆಗಿನ ಎಲ್ಲ ವರ್ಗದ ವಿದ್ವಾಂಸರನ್ನು ವಾದದಲ್ಲಿ ಪರಾಭವಿಸಿ ಪಂಡಿತ ಪ್ರಶಂಸೆಗೆ ಪಾತ್ರರಾಗಿದ್ದರು.

ಪಂಡಿತನ್, ಪಂಡಿತಸ್ತುತನ್, ಭವರೋಗ ಪಂಡಿತನ್, ಪಾಂಡುರ ಯಶೋ ಮಂಡಿತಂ, ದಿಗ್ವಿಮಂಡಲ ಮಹತ್ವಗುಣಷಂಡ ಪಂಡೀಕೃತಕರಂಡಕ ಮುಖಂಡಾಶಯನ್, ದಂಡಧರಚಂಡವೇದಂಡ ಮೃಗರಾಜನ್, ಉದ್ದಂಡಜಿತ ಕುಸುಮ ಕೋದಂಡನ್, ಅಖಿಲೇಂದ್ರಿಯ ನಿಖಂಡನ್, ಅಶೇಷ ಶಿವಗಣ ಮಧ್ಯವಿಪುಳದೋರ್ದಂಡನ್ ಎಂದು ಪ್ರಸಿದ್ಧರಾಗಿದ್ದರು.

ಶಾಸ್ತ್ರ ಸಿದ್ಧಾಂತಗಳನ್ನು ಸ್ವತಃ ಅರಗಿಸಿಕೊಂಡು, ಸರಳ ಶೈಲಿಯಲ್ಲಿ ಭಕ್ತ-ಮಾಹೇಶ್ವರರಿಗೆ ತಿಳಿಯಾಗಿ ಬೋಧಿಸುತ್ತಾ ಷಟ್‌ಸ್ಥಲ ಶಾಸ್ತ್ರ ನಿರ್ಣಯ ಮಾಡಿ ಸದಾಚಾರ–ಶಿವಾಚಾರಗಳನ್ನು ಭೂಮಿಯಲ್ಲಿ ನೆಲೆಗೊಳಿಸುತ್ತ ಸಕಲ ವೈಭವ–ಬಿರುದಾವಳೀ ಸಹಿತ ಮಾಗಡಿಗೆ ಬಂದು ಅನತಿಕಾಲದಲ್ಲಿಯೇ ಬಯಲಾದರು.

ನೈಘಂಟಿನ ಸಿದ್ಧಬಸವ ಸ್ವಾಮಿಗಳು :
(ಪಟ್ಟ 17.)

ಚಾರು ಚರಿತನ್ ಜಂಗಮನುತನ್, ಷಟ್‌ಸ್ಥಲಾಚಾರ ಬೋಧನ ವಿಚಾರ ಭರಿತನ್, ಪರಮ ಲಿಂಗಾಂಗ ಸಂಗ ಸುಖ ಸಾರ ಸುರತನ್, ವಿಮಲ ದೇಹ ಲೇಪಿತ ಮಹಾಕ್ಷಾರಮಿಶ್ರಿತ ಹಾಸನ್, ಭೂರಮಣರಾಜಿಪೂಜಿತಪದನ್, ವಿರಹಿತ ಕ್ರೂರರಾಗಾದಿ ದೋಷವ್ರಜನ್, ಮಂಜುಲಾಕಾರನ್, ಅರಿಭೀಷಣನ್ ಎನಿಸಿ ಶೋಭಿಸುತ್ತ ಅವನೀ ಭೋಗ ಭಾಗ್ಯವನ್ನು ಅಣು ಸಮಾನವಾಗಿ ಭಾವಿಸುತ್ತ ಚಿನ್ಮಯ ಪರತರ ವಿಭಕ್ತಿ ಭಾವಂ ಬಲಿದು ಶಿವಗಣದ ದಾಸೋಹವನ್ನು ಮನವೊಲಿದು ನಡೆಸುತ್ತ ಭಕ್ತರು ಸುಪ್ರೀತರಾಗಿರಲು ದುರ್ಗ ಮಠದಲ್ಲಿದ್ದರು.

ಜನವಾಸಿಯ ಗೌಡನು ಹರಭಕ್ತನಾಗಿ ಶಿವಾಚಾರದಲ್ಲಿ ನಡೆಯುತ್ತಿದ್ದನು. ಆದರೆ ಆತನ ಮಗನು ತಂದೆಯ ಆಚಾರದಲ್ಲಿ ನಡೆಯುವುದನ್ನು ಬಿಟ್ಟು ದುರಳರ ಸಂಗವನ್ನು ಮಾಡಿ ದಾಸಿ-ವೇಶಿಯರ ಸಂಗಾನುರಕ್ತನಾಗಿ ತನಗೆ ವ್ಯವಹಾರವಾಗಿ ದುರಾಚಾರದಲ್ಲಿ ವರ್ತಿಸುತ್ತಿದ್ದನು. ಇವನು ಶಿವಲಿಂಗವನ್ನೊಂದು ದಿನವೂ ಪೂಜಿಸನು,

ಒಮ್ಮೆಯೂ ಮರೆತಾದರೂ ಶಿವಮಂತ್ರವನ್ನು ನಾಲಗೆಯಿಂದ ಉಚ್ಚರಿಸನು, ಕಿವಿಯಿಂದ ಶಿವಕಥಾಲಾಪವನ್ನು ಕೇಳನು, ಭಕ್ತಿಯಿಂದ ಶಿವಭಕ್ತರಿಗೆ ನಮಿಸನು; ಹುಸಿ, ಕಳವು, ದಂಭ, ಮದ, ಪರದಾರ, ಪರಗೋಷ್ಠಿ, ಪರನಿಂದೆ, ಪರಾಪವಾದಗಳಲ್ಲಿ, ಸುಜನ ವಿರೋಧ ದುರ್ಜನ ವಿವಾದ ಕೂಟ ಸಾಕ್ಷಿಗಳಲ್ಲಿ ತೃಪ್ತಿಪಡೆಯುತ್ತ ಕೃತಘ್ನರ ದುರ್ಗುಣಗಳೇ ತನಗೆ ನಿಯಮವಾಗಿ ಉದ್ವೃತ್ತನೂ ಉಚ್ಛೃಂಖಲನೂ ಆಗಿ, ಊರಿಗೆ ತಲೆನೋವಾಗಿ ಪರಿಣಮಿಸಿದ್ದನು. ಇಷ್ಟು ಸಾಲದೆಂಬಂತೆ ದುರಾಚಾರ ದುರ್ವ್ಯತರತನಾಗಿದ್ದ ಈತನು ರಸ್ತೆಯಲ್ಲಿ ಓಡಾಡುತ್ತಿದ್ದ ಸುಂದರ ತರುಣಿಯರನ್ನು ಛೇಡಿಸುತ್ತ ರತಿಕ್ರೀಡಾ ವಿಲಾಸದಲ್ಲಿ ಮುಳುಗಿರುತ್ತಿದ್ದನು.

ಗೌಡನಾತ್ಮಜನ ಈ ಉಪಟಳವನ್ನು ಸಹಿಸಲಾರದ ಭಕ್ತಜನರು ಸಿದ್ಧಬಸವೇಶ ಸ್ವಾಮಿಗಳ ಬಳಿಗೆ ಬಂದು ಶತ ಪ್ರಣಾಮಗಳನ್ನು ಮಾಡಿ "ಗುರುಗಳೇ, ಮತಿಹೀನ ಗೌಡನ ಸುತಂ ನಮ್ಮ ಪುರದಲ್ಲಿ ಶಿವಾಚಾರ ಮಾರ್ಗವನ್ನುಳಿದು ಚಂಡಾಲ ಸತಿಯೊಡನೆ ಇದ್ದಾನೆ, ಸದಾ ದುರಾಚಾರ ದುಷ್ಟನಾಗಿ ಸುರತ ಕೇಳಿಯಲ್ಲಿ ನಿರತನಾಗಿ ಸಮಾಜಕಂಟಕನಾಗಿದ್ದಾನೆ" ಎಂದು ಬಿನ್ನವಿಸಿದರು.

ವಿಷಯವನ್ನು ತಿಳಿದ ಜಗದ್ಗುರುಗಳು ಆತನ ತಂದೆಯನ್ನು ಬರಿಸಿ, ವಿಷಯವನ್ನು ನಿರ್ಣಯಿಸಿ ಆ ದೋಷಿಯನ್ನು ಬಹಿಷ್ಕರಿಸಿದರು. ಹೀಗೆ ಸದಾಚಾರವನ್ನು ನಿಲಿಸುತ್ತ, ದುರಾಚಾರವನ್ನು ತೊಲಗಿಸುತ್ತ ಹಾವೇರಿಗೆ ಬಂದು, ಭಕ್ತರಿಂದ ಪೂಜೆಯನ್ನು ಕೈಕೊಳ್ಳುತ್ತ ಅಲ್ಲಿಯೇ ಬಯಲಾದರು.

ಸಣ್ಣ ಬರಹದ ರಾಚವಟಿ ಸ್ವಾಮಿಗಳು :
(ಪಟ್ಟ 18. ಕಾಲ ಸು. ಕ್ರಿ. ಶ. 1820–1830)

ಸಿದ್ಧಬಸವ ಸ್ವಾಮಿಗಳು ಹಾವೇರಿಯಲ್ಲಿದ್ದಾಗಲೇ ಬಯಲಾದ ಕಾರಣ ಶಿಖಾ-ಶೈಲ ಸಿಂಹಾಸನಗಳು ಅಲ್ಲಿಯೇ ಉಳಿದಿದ್ದವು. ಹಾವೇರಿಯ ಭಕ್ತವೃಂದ ಚಿತ್ರದುರ್ಗದ ಮೇಲಿನ ಮಮತೆ, ಅಭಿಮಾನಗಳಿಂದ ಶಿಖಾಶೈಲ ಸಿಂಹಾಸನಗಳನ್ನು ಶೂನ್ಯಪೀಠ ಸ್ಥಳವಾದ ಚಿತ್ರದುರ್ಗಕ್ಕೆ ತಂದು ಶುಭಚರಿತರಾದ ರಾಚವಟಿ ಗುರುಗಳಿಗೆ ಷಟ್ಸ್ಥಲ ಮಹಾಪಟ್ಟವನ್ನು ಕಟ್ಟಿದರು.

ಷಟುಸ್ಥಲ ಪರಬ್ರಹ್ಮ ಸಾಕಾರಮೂರ್ತಿಗಳಾದ ರಾಚವಟಿ ಸ್ವಾಮಿಗಳು ಪಟ್ಟಾಧ್ಯಕ್ಷರಾದ ಮೇಲೆ ನಿತ್ಯ ದಾಸೋಹ, ನಿತ್ಯ ದೀಪಾರಾಧನೆಗಳ ವ್ಯವಸ್ಥೆ ಮಾಡಿದರು. ಇದಕ್ಕಾಗಿ ಕಾಶಿಯಿಂದ ರಾಮೇಶ್ವರದವರೆಗೂ ಸಂಚರಿಸಿ ದೇಶಾದ್ಯಂತ ಮಠಮಾನ್ಯರಿಂದ ಭಕ್ತವೃಂದದಿಂದ ಪಾದಕಾಣಿಕೆಯನ್ನು ಸ್ವೀಕರಿಸುತ್ತ ಪ್ರತಿವರ್ಷವೂ ಕಾಣಿಕೆ ದ್ರವ್ಯ-ಧಾನ್ಯ ರೂಪದಲ್ಲಿ ಸ್ಥಿರವಾಗಿ ಬರುವಂತೆ ವ್ಯವಸ್ಥೆ ಮಾಡಿದರು. ಇದರಿಂದ ಮಠಕ್ಕೆ ಬಂದು ಹೋಗುವ ಭಕ್ತರಿಗೆ ಪ್ರಸಾದ ವ್ಯವಸ್ಥೆಯಾಯಿತು. ನಿತ್ಯವೂ ಜಂಗಮ ಪೂಜೆ, ದೀಪಾರಾಧನೆ, ದಾಸೋಹ ಕಾರ್ಯಗಳು ತಪ್ಪದೇ ನಡೆಯುವಂತಾಯಿತು.

ಕರ್ತೃಗಳಾದ ಮುರಿಗೇಂದ್ರ ರಾಜೇಂದ್ರರ ಕಾಲಕ್ಕೆ ಕಟ್ಟಲಾಗಿದ್ದ ಮಠವು ಜೀರ್ಣವಾಗಿರಲು ಅದನ್ನು ಪುನರುಜ್ಜೀವಿಸಿದರು. ಇವರ ಈ ಕರ್ತೃತ್ವ ಶಕ್ತಿಯನ್ನು ಕಂಡು ಹರಭಕ್ತ ಸಂದೋಹ ಕೊಂಡಾಡುತ್ತಿರಲು ದುರ್ಗದಲ್ಲಿದ್ದ ಕಂಬಳಿಯ ದಾನಯ್ಯನೆಂಬವನು 'ನಮಿಸೆ ನಾಂ ಗುರುಪಾದಕಂ' ಎಂದು ತಾನು ಗರ್ವದಿಂದಿದ್ದು ಗುರುಗಳ ಬಗ್ಗೆ ಅಪಪ್ರಚಾರ ಮಾಡಿದುದಲ್ಲದೆ ಇತರರನ್ನು ಪ್ರಚೋದಿಸುತ್ತಿದ್ದನು. ಜಗದ್ಗುರುಗಳು ಆವನ ಈ ಉದ್ವರ್ತನೆಯನ್ನು ಕಂಡು ದುರಾಚಾರಿಯಾದ ಈ ಜಂಗಮನನ್ನು ಘನ ವೀರಶೈವಾಚಾರ ಮಾರ್ಗದಿಂದ ಬಹಿಷ್ಕರಿಸಿದರು.

ಬಹಿಷ್ಕಾರದಿಂದ ಲಜ್ಜಿತನಾಗದೆ ಈ ದಾನಯ್ಯನು ಹೇರಳವಾಗಿ ಹಣವನ್ನು ದುಂದು ವೆಚ್ಚ ಮಾಡಿ ಉಜ್ಜಯಿನಿ. ಬಾಳೆಹಳ್ಳಿ, ಶ್ರೀಶೈಲ ಮಹಾಸನದ ಗುರುಗಳ ಬಳಿಗೆ ಹೋಗಿ ತನ್ನ ದುರ್ವರ್ತನೆಯನ್ನು ತೋರಗೊಡದೆ ಅವರ ಅನುಗ್ರಹದಿಂದ ತಾನು ಪುನೀತನಾದೆನೆಂದು ಗರ್ವಿಷ್ಠನಾಗಿ ಮೆರೆಯುತ್ತಿದ್ದನು.

ಇದನ್ನು ತಿಳಿದ ರಾಚವಟಿ ಸ್ವಾಮಿಗಳು ಆ ಮೂರು ಪೀಠದ ಜಗದ್ಗುರುಗಳಿಗೆ ತಮ್ಮ ಅಸಮ್ಮತಿಯನ್ನು ಸೂಚಿಸಿದರು. ಒಳಗನ್ನರಿದ ಸಿಂಹಾಸನತ್ರಯಾಧೀಶ್ವರರು ತಮ್ಮ ಶತ ಪ್ರಣಾಮಗಳನ್ನು ತಿಳಿಸಿ, ಅರಿಯದೆ ದಾನಯ್ಯನೊಡನಾಡಿ ನಾವೀಗ ಮತಿಹೀನರಾದೆವು ಎಂದು ತಮ್ಮ ಅಪರಾಧಗಳನ್ನು ಒಪ್ಪಿಕೊಂಡು ಇನ್ನು ಮುಂದೆ ಯತಿವರಾರ್ಜಿತ ಚಿತ್ರದುರ್ಗ ಸೀಮಾಂತರದ ಗತಿಯೆನಿಪ ಪದಿನೇಳು ಗಡಿಯಲ್ಲಿ ತಮ್ಮ ಆಜ್ಞೆಯಿಲ್ಲದೆ ಬರಲೊಲ್ಲೆವು, ಶೂನ್ಯಪೀಠಕ್ಕೆ ಚ್ಯುತಿ ಬಾರದಂತೆ ನೆಗಳ್ವೆವು ಎಂದು ಪತ್ರವನ್ನು ಬರೆದು ಒಪ್ಪಿಸಿದರು. ತಪ್ಪೊಪ್ಪಿಕೊಂಡು ನಮಿಸಿದ ಗುರುತ್ರಯರನ್ನು ಕರುಣಿಸಿ ಸನ್ಮಾನಿಸಿ ಪಟ್ಟದಾರ್ಯರನ್ನು ಬೀಳ್ಕೊಂಡರು.

ಚಿತ್ರದುರ್ಗದಲ್ಲಿ ರಾಚವಟಿ ಸ್ವಾಮಿಗಳು ಶೂನ್ಯಪೀಠಾಧ್ಯಕ್ಷರಾಗಿರಲು, ಆಗ ಮೈಸೂರಿನ ಮಹಾರಾಜರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರು ಮುರಿಗೇಂದ್ರ ಶೂನ್ಯಸಿಂಹಾಸನದ ಪರಮಗುರು ರಾಚವಟಿದೇವರ ಚರಣ ಸಂದರ್ಶನದಿಂದ ಪುನೀತರಾಗಬೇಕೆಂದು ಬಯಸಿ ಅಶ್ವ, ರಥ, ಗಜ ಪರಿವಾರ ಪರಿವೃತವಾಗಿ ಮಹಾಮಣಿಮಯಾಂದೋಳಿಕೆಯನ್ನು ಬಿನ್ನಹದ ಓಲೆಯನ್ನು ಭಕ್ತಿಯಿಂದ ಚಿತ್ರದುರ್ಗಕ್ಕೆ ಕಳುಹಿಸಿಕೊಟ್ಟರು.

ಗುರುವರನ ಸನ್ನಿಧಿಗೆ ಬಂದ ಭೃತ್ಯರು ವಿವಿಧ ಸನ್ನುತಿಗಳಿಂದ ಸಾಷ್ಟಾಂಗ ಪ್ರಣಾಮಪೂರ್ವಕವಾಗಿ ಬಲಿದ ಭಕ್ತಿಯಿಂದ ಮಹಾರಾಜರ ಅಪೇಕ್ಷೆಯನ್ನು ಬಿನ್ನವಿಸಿಕೊಂಡರು. ಆಗ ಜಗದ್ಗುರುಗಳು ಭೂಪನ ಇಷ್ಟವನ್ನು ನೆರವೇರಿಸಲು ನಿಶ್ಚಯಿಸಿದರು.

ಶಿವ ಜಂಗಮವೃಂದ, ಭಕ್ತಸಂದೋಹ, ಪಂಡಿತರ, ಗಾಯಕರ ಬಿರುದಾವಳಿಗಳನ್ನು ಪಠಿಸುವ ವಂದಿ ಮಾಗಧರ, ಚತುರಂಗಸೇನೆಯ ಮಧ್ಯೆ 72 ಬಿರುದುಗಳ ನಾದವನ್ನು ಕೇಳುತ್ತ ಮಣಿಮಯ ಪಾಲಕಿಯಲ್ಲಿ ಮಂಡಿಸಿ ಭೋರ್ಗರೆವ ಮಂಗಳ ವಾದ್ಯಗಳ ಶಬ್ದವನ್ನು ಕೇಳುತ್ತ ಮೈಸೂರು ಪ್ರಾಂತದ ಬಳಿಗೆ ಬಂದರು.

ರಾಜರ ಅಪ್ಪಣೆಯಂತೆ ಮೈಸೂರು ಪ್ರಾಂತದ 120 ಗಡಿಗಳವರು ಹಸಿರು ತಳಿರು ತೋರಣಗಳಿಂದ ಅಲಂಕರಿಸಿದ್ದರು. ದಾರಿಯಲ್ಲಿ ಮೈಯಿಕ್ಕಿದ ಭಕ್ತಾಳಿಗಳ ಪೂಜೆಯನ್ನು ಕೈಕೊಂಡು, ಕಾಣಿಕೆಯನ್ನು ಸ್ವೀಕರಿಸಿ ಮೈಸೂರು ಪಟ್ಟಣದ ಬಳಿಗೆ ಬಂದರು.

ಸ್ವಾಮಿಗಳ ದೀರ್ಘಪ್ರಯಾಣ ಮುಗಿದು ಇನ್ನು ಒಂದು ದಿನದ ಪ್ರಯಾಣ ಉಳಿದಿದೆ ಎನ್ನುವಾಗ ಮಹಾರಾಜರು ಸಕಲ ರಾಜಮರ್ಯಾದೆಗಳಿಂದ ಬಂದು ಗುರುಗಳನ್ನು ಸಂಧಿಸಿದರು. ಜಗದ್ಗುರುಗಳಿಗೆ ನಮಸ್ಕರಿಸಿ, ಎದ್ದು ನಿಂತು ಸ್ವಾಮಿಗಳ ತೇಜಃಪುಂಜವಾದ ಮುಖವನ್ನು ನೋಡಿ ತಣಿದರು. ಪರಶಿವ ಪರಂಜ್ಯೋತಿ ಸ್ವರೂಪರಾದ ಮಹಾಸ್ವಾಮಿಗಳ ತೇಜೋರೂಪ ಮಹಾರಾಜರ ಚಿತ್ತಭಿತ್ತಿಯಲ್ಲಿ ಅಚ್ಚೊತ್ತಿದಂತಾಯಿತು. ಸಂತೃಪ್ತಿಯ ಆನಂದದಿಂದ ಕೂಡಿದ ಮಹಾರಾಜರು ಸ್ವಾಮಿಗಳನ್ನು ಕರೆತರಲು ತಕ್ಕ ವ್ಯವಸ್ಥೆ ಮಾಡಿ, ಅವರನ್ನು ಸ್ವಾಗತಿಸುವ ಸಿದ್ಧತೆಗಳನ್ನು ತಾವೇ ಖುದ್ದಾಗಿ ನೋಡುವ ತವಕದಿಂದ ಮೈಸೂರಿಗೆ ಬಂದರು.

ಜಗದ್ಗುರುಗಳು ಮೈಸೂರನ್ನು ತಲಪುವ ವೇಳೆಗೆ ರಾತ್ರಿಯಾಗಿತ್ತು. ಪಂಜಿನ ಬೆಳಕಿನಲ್ಲಿ ಅವರನ್ನು ಮೆರವಣಿಗೆಯಲ್ಲಿ ಅರಮನೆಗೆ ಕರೆತಂದು, ರಾತ್ರಿ ಅಲ್ಲಿಯೇ ಬಿಡಾರಮಾಡಲು ವ್ಯವಸ್ಥೆಗೊಳಿಸಿದರು. ಮಾರನೆಯ ದಿನ ಅರಮನೆಯಲ್ಲಿ ಜಗದ್ಗುರುಗಳ ಪೂಜೆ ಅದ್ದೂರಿಯಿಂದ ಸಾಂಗವಾಗಿ ನೆರವೇರಿತು. ಮಹಾಸ್ವಾಮಿಗಳು ಮೂರು ತಿಂಗಳ ಕಾಲ ಮೈಸೂರಿನಲ್ಲಿದ್ದು ಚಿತ್ರದುರ್ಗಕ್ಕೆ ಹೊರಟರು.

ಮೂರು ತಿಂಗಳ ಕಾಲ ಮೈಸೂರಿನಲ್ಲಿದ್ದು ಮಹಾರಾಜರ ತ್ಯಾಗ, ನಿಷ್ಠೆ, ಭಕ್ತಿಗಳನ್ನು ಕಣ್ಣಾರೆ ಕಂಡು ಸಕಲ ಸಂಪತ್ತು ದೊರಕಲೆಂದು ಮನಸಾರೆ ಆಶೀರ್ವದಿಸಿದರು. ಸ್ವಾಮಿಗಳು ಹೊರಡುವಾಗ ಮಹಾರಾಜರು ತಮ್ಮ ಭಕ್ತಿಯ ಕಾಣಿಕೆಯಾಗಿ ಆನೆ-ಕುದುರೆಗಳನ್ನು, ಬೃಹನ್ಮಠದ ನಿತ್ಯ ದೀಪಾರಾಧನೆಗಾಗಿ ಧನವನ್ನೂ, ಸ್ವಾಮಿಗಳ ಲೋಕ ಸಂಗ್ರಹ ಕಾರ್ಯನಿರ್ವಹಣೆಗಾಗಿ ಬೇಕಾಗುವ ವಿವಿಧ ವಸ್ತು ವಾಹನ ಮುಂತಾದವುಗಳನ್ನು ಪತ್ರಶಾಸನ ಬರೆಸಿ ದಾನ ಕೊಟ್ಟರು.

ಪ್ರಥಮ ಬಾರಿಗೆ ಮೈಸೂರು ರಾಜರ ಆಡಳಿತಕ್ಕೆ ಒಳಪಟ್ಟ ಮೇಲೆ, ರಾಜರ ಭಕ್ತಿ-ಗೌರವಗಳಿಗೆ ಪಾತ್ರರಾಗಿ ಚಿತ್ರದುರ್ಗಕ್ಕೆ ಮರಳಿ ಬಂದ ಮೇಲೆ, ಕಾಲಜ್ಞಾನ ದರ್ಶಿಗಳಾದ ಮಹಾಗುರುಗಳು ತಮ್ಮ ಐಕ್ಯವನ್ನು ಅರಿತು ತಮ್ಮ ನೆಚ್ಚಿನ ಶಿಷ್ಯ ಸದಾಶಿವನನ್ನು ಕೂಗಿ ಕರೆದರು.

ಚಿರಪರಿಚಿತನಾಗಿದ್ದ ಸದಾಶಿವನಿಗೆ ಈ ಧ್ವನಿ ಅಪರೂಪವಾದ ರೀತಿಯಲ್ಲಿ ಕೇಳಿ, ಒಂದು ವಿಧವಾದ ಭಯಮಿಶ್ರಿತ ಆಶ್ಚರ್ಯದಿಂದ ಓಡಿಬಂದ ಸದಾಶಿವನಿಂದ ಶಿವಾನುಭಾವದ ಪುಸ್ತಕವೊಂದನ್ನು ತರಿಸಿ ಅದರ ಅರ್ಥವನ್ನು ನಿರ್ಣಯಿಸಿ ಹೇಳುತ್ತ ಬೆಳಗಿನ ಝಾವದವರೆಗೂ ಆ ಆನಂದದಲ್ಲಿ ಮುಳುಗಿದ್ದು, ಹರಭಕ್ತನಾಸ್ಯಮಂ ನೋಡುತ್ತ – "ಕೇಳು,ನಾಳಿನುದಯದಿಂದ ಮುಂಜಾವ ವೇಳೆಯೊಳಗೆ ಈಶಾನ ದಿಕ್ಕಿನಲ್ಲಿ ಮೇಘಾಳಿಯುದಿಸುತ್ತ, ಅದರಲ್ಲಿ ಗುಡುಗು ಮಿಂಚುಗಳು ಹೊಳೆಯುತ್ತಿರಲು ಆ ಸಮಯದಲ್ಲಿ ಕಾಲಹರನಾಜ್ಞೆಯಿಂದ ನಾವು ಕೈಲಾಸಕ್ಕೆ ಹೋಗುತ್ತೇವೆ", ಎಂದು ಹೇಳಿದರು.

ಆ ಮಾತನ್ನು ಕೇಳಿ ಭಯಕಂಪಿತನಾದ ಆ ಭಕ್ತನು ಬೆಳಗಾಗುವಷ್ಟರಲ್ಲಿ ಮಠದ ಚರಮೂರ್ತಿಗಳಿಗರುಹಿ, ದುರ್ಗದ ಮಹಾಭಕ್ತ ಸೆಟ್ಟಿ ಮುಖ್ಯರುಗಳಿಗೆ ತಿಳಿಸಲು ಇದನ್ನು ಕೇಳಿದ ಜನ ಗುಂಪು ಗುಂಪಾಗಿ ಮಠದ ಕಡೆ ಸಾಗರದೋಪಾದಿಯಲ್ಲಿ ನುಗ್ಗಿ ಬಂದಿತು. ಅಷ್ಟರಲ್ಲಿ ಜಗದ್ಗುರುಗಳು ಮಠದ 'ಕೈಲಾಸ ಬಾಗಿಲ' ಮಧ್ಯದಲ್ಲಿ ಶಯನ ಮಂಚವನ್ನಿಡಿಸಿ ಅಭಿಷೇಕ, ಲಿಂಗಾರ್ಚನೆಯನ್ನು ಮುಗಿಸಿ ತನ್ನ ಕಾಲ ಬರುವವರೆಗೆ ಆದರಗ್ರದಲ್ಲಿ ಪವಡಿಸಿದರು. ಆ ದಿನ ಈ ಮಹಿಮರು ಶಿವಾನುಭವ ಗೋಷ್ಠಿಯನ್ನೆಸಗದೆ ಮೌನವಾಗಿದ್ದು ಆ ವೇಳೆಗೆ ಸರಿಯಾಗಿ ಪರಶಿವನನ್ನು ಸೇರಿದರು. ಆಗ ಅವರ ದಿಂಬಿನ ಬಳಿ ಮಠದ ಬೀಗದ ಕೈಗಳು ಹೊಳೆಯುತ್ತಿದ್ದವು.

ಸಾವಳಿಗೆ ಗುರುಶಾಂತ ಸ್ವಾಮಿಗಳು :

(ಪಟ್ಟ 19. ಕಾಲ ಸು. ಕ್ರಿ. ಶ. 1833–1840)

ರಾಚವಟಿ ಸ್ವಾಮಿಗಳು ಬಯಲಾದ ಮೇಲೆ ಕಲಿಕಾಲದ ಮಹಿಮೆಯೆಂಬಂತೆ ಮೌನವಾಗಿ ನಡೆದು ಬರುತ್ತಿದ್ದ ಶೂನ್ಯಪೀಠದ ಪಟ್ಟಕ್ಕಾಗಿ ತಿಕ್ಕಾಟಗಳು ಪ್ರಾರಂಭವಾದವು. ಮೈಸೂರ ದೊರೆ ತನ್ನ ಬಳಿಯಲ್ಲಿದ್ದ ಬಸವಲಿಂಗನೆಂಬ ಜಂಗಮನಿಗೆ ಶೂನ್ಯಪೀಠದ ಪಟ್ಟವಾಗಬೇಕೆಂದು ನಿರ್ಣಯಿಸಿ ಸ್ವಲ್ಪ ಸೇನೆಯೊಂದಿಗೆ ಚಿತ್ರದುರ್ಗಕ್ಕೆ ಕಳುಹಿಸಿಕೊಟ್ಟರು.

ಇದನ್ನು ತಿಳಿದ ಭಕ್ತವೃಂದ ತನ್ನ ಅಸಮ್ಮತಿಯನ್ನು ಸೂಚಿಸಿ, ಆ ದುರ್ಗದ ಮಠದಲ್ಲಿದ್ದ ಚರಮೂರ್ತಿಗಳೆಲ್ಲ ಕೂಡಿ ಮೊದಲಿನಿಂದಲೂ ಮುರಿಗೇಂದ್ರ ಕರ್ತೃಗಳ ಅಪ್ಪಣೆಯಂತೆ ಸಮಸ್ತ ದೇಶದ ಭಕ್ತ ಮಾಹೇಶ್ವರರು ಒಪ್ಪಿ ಶೈವಾಗಮಾಚಾರ ಕೋವಿದರಾದವರನ್ನು ಮಹಾಪಟ್ಟಾಧಿಕಾರಿಯನ್ನಾಗಿ ಮಾಡುವುದು,ಅನೂಚಿನವಾಗಿ ನಡೆದುಕೊಂಡು ಬಂದಿರುವ ಸಂಪ್ರದಾಯ. ಅದನ್ನು ಬಿಟ್ಟು ಈಗ ರಾಜಾಜ್ಞೆಯಿಂದ ಕಳುಹಿಸಲ್ಪಟ್ಟ ಚರಮೂರ್ತಿಗೆ ಪಟ್ಟ ಕಟ್ಟುವುದು ಸಾಧ್ಯವಿಲ್ಲ ಎಂದು ಪಟ್ಟಕ್ಕಾಗಿ ಕಲಹವುಂಟಾಯಿತು. ಉತ್ತರದ ಸೀಮೆಯವರು ಕೂಡ ಇದನ್ನು ಒಪ್ಪದೆ ಚಿತ್ರದುರ್ಗದ ಚರಮೂರ್ತಿಗಳ ಪಕ್ಷವನ್ನು ವಹಿಸಿದರು. ಇದರಿಂದಾಗಿ ಮೂರು ವರ್ಷಗಳ ಕಾಲ ಯಾವ ನಿರ್ಣಯವೂ ಆಗದೆ ಸಿಂಹಾಸನ ಬರಿದಾಗಿರಬೇಕಾಯಿತು. ಕೊನೆಗೆ ಈ ರೀತಿಯ ಬಾಯಿ ಮಾತಿನಿಂದ ಇದು ತೀರ್ಮಾನವಾಗುವುದಿಲ್ಲವೆಂದು ತಿಳಿದು ಬೇಸರಪಟ್ಟುಕೊಂಡು ಕುಂಪಣಿ ರಾಣಿಗೆ, ವಿಕ್ಟೋರಿಯಾ ಮಹಾರಾಣಿಗೆ ಮುರಿಗೇಂದ್ರರಿಂದ ನಿಯಮಿತವಾದ ಆಜ್ಞೆಯ ನಕಲೊಂದನ್ನು ಕಳುಹಿಸಿ ಆಕೆಯ ಆಜ್ಞೆಗಾಗಿ ಕಾಯುತ್ತಿದರು. ರಾಣಿಯು ಹಿಂದಿನ ಪ್ರಮಾಣ ವಾಕ್ಯವನ್ನು ಪರಿಗ್ರಹಿಸಿ, ಮುರಿಗೇಂದ್ರರ ಆಜ್ಞೆ, ಅಖಿಲ ದೇಶ ವರ್ತಿತ ಭಕ್ತ ಮಾಹೇಶ್ವರರ ಸಮ್ಮತಿ, ಪಟ್ಟಸ್ಥಳದ ನಿಜಜ್ಞಾನವನ್ನು ಪಡೆದ ಚರಮೂರ್ತಿ ಈ

ಮೂರೂ, ಮೂರರಲ್ಲಿ, ಗುರುವಾಜ್ಞೆಯೇ ಮುಖ್ಯ ಎಂದು ಭಾವಿಸಿ, ಇದು ಶಾಸ್ತ್ರ ಸಮ್ಮತವೆಂದು ನಿರ್ಧರಿಸಿ ಎಲ್ಲರಿಗೂ ಸಮ್ಮತಿಯಾಗುವ ಮೂರ್ತಿಯನ್ನು ಪೀಠಾಧ್ಯಕ್ಷರನ್ನಾಗಿ ಮಾಡಬೇಕೆಂದೂ, ಆ ಕಾರ್ಯ ಸುಸೂತ್ರವಾಗಿ ನಡೆಯಲು ಸ್ವಲ್ಪ ಸೇನೆಯ ಸಹಾಯವನ್ನು ಕಳುಹಿಕೊಟ್ಟಳು. ಕೊನೆಗೆ ಎಲ್ಲರ ಸಮ್ಮತಿಯಂತೆ ಮದಹರನಾದ ಸಾವಳಿಗೆ ಗುರುಶಾಂತ ದೇವರಿಗೆ ಷಟ್ಸ್ಥಲ ಶಿಖಾ ಪಟ್ಟವಾಯಿತು.

ನಿಖಿಲ ಪೂಜಾ ಸನ್ನುತಂ, ಸುವಿವೇಕಸಾರ ಷಟ್ಸ್ಥಲ ಪೂರ್ಣ ನಿರ್ಣಯಂ, ಕಾಮಿಕಾದ್ಯಾಗಮಾಂತನಿಪುಣಂ, ವಿಶ್ವಭುವನದೀಪಿತ ಮಹಾದೀಪನ್, ಕಾಮಕಾಲ ಪೃಧ್ವೀಕರಂ, ಪ್ರಣುತ ಪರಿಕರ ಮಹಾಶ್ರೀಕರಂ, ಕುಜನಶಿಕ್ಷ ಸಜ್ಜನ ರಕ್ಷಣಾಂಕಶೀಲಂ ಎನಿಸಿ ಚಿತ್ರದುರ್ಗದ ಮಠದ ಶೂನ್ಯಸಿಂಹಾಸನಾಧೀಶರಾಗಿ ಗುರುಶಾಂತ ಸ್ವಾಮಿಗಳು ಶೋಭಿಸುತ್ತಿದ್ದರು.

ನಿಖಿಲ ಭಕ್ತ ಮಾಹೇಶ್ವರರೊಂದಿಗೆ ಶಾಸ್ತ್ರ ಚರ್ಚೆ ಮಾಡುತ್ತ ಶಿವಲಿಂಗ ಜಂಗಮ ಪೂಜಾ ದಾಸೋಹ ಕಾರ್ಯಗಳನ್ನು ನೆರವೇರಿಸುತ್ತಿರಲು, ತಮ್ಮ ಮಠದ ಪಶ್ಚಿಮ ಭಾಗದ 'ಚಿದಾರಣ್ಯ'ದಲ್ಲಿ ಚಿದ್ವಿಲಾಸ ಭವನವನ್ನು ನಿರ್ಮಿಸಿದರು. ನಾನಾ ವಿಧ ಪರಿಮಳ ಪುಷ್ಪಗಳಿಂದ ಶೋಭಿಸುತ್ತಿದ್ದ ಆ ಅರಣ್ಯದಲ್ಲಿ ನೋಡಿದವರ ಕಣ್ಮನಗಳನ್ನು ಸೆರೆಹಿಡಿಯುವಂತಿತ್ತು ಧವಲ ಶಿಲೆಗಳಿಂದ ನಿರ್ಮಿತವಾಗಿದ್ದ ಈ ಮಂಟಪ. ಘನವಾದ ತಪ, ಜಪ,ಅನುಷ್ಠಾನ, ಶಿವಲಿಂಗ ಪೂಜೆಗಳಿಗೆ ಈ ಮಂಟಪ ಅನುಕೂಲವಾಗಿತ್ತು.

ಚಿದಾರಣ್ಯದ ಮಧ್ಯೆ ಕಂಗೊಳಿಸುತ್ತಿದ್ದ ಚಿದ್ವಿಲಾಸ ಭವನದಲ್ಲಿ ಜಗದ್ಗುರುಗಳು ತಮ್ಮಲ್ಲಿ ತಾವು ತನ್ಮಯರಾಗಿದ್ದರು. ಈ ಸಂದರ್ಭದಲ್ಲಿ ಸ್ವಾದಿ ಅರಸು ಮನೆತನದ ಬಸವಲಿಂಗರಾಜನು ತನ್ನ ಮಲತಾಯಿಯೊಂದಿಗೆ ಹೊಂದಿಕೊಳ್ಳದೆ, ಅಡ್ಡಿ ಆತಂಕಗಳಿಂದ ಕೂಡಿದ ರಾಜ್ಯದಲ್ಲಿದ್ದೇನು ಪ್ರಯೋಜನ ಎಂದು ಬೇಸರಪಟ್ಟುಕೊಂಡು ಆತ್ಮ ಸಾಕ್ಷಾತ್ಕಾರಕ್ಕಾಗಿ ಕಾಶಿಯಾತ್ರೆ ಹೊರಡುವ ಸಿದ್ಧತೆಯಲ್ಲಿದ್ದನು. ಆಗ ಸುದ್ದಿಯನ್ನು ತಿಳಿದ ಜಗದ್ಗುರುಗಳು ಆ ಬಸವಲಿಂಗನನ್ನು ಕರೆಸಿ, ರಾಜನ ಮನಸ್ಸಿನ ಉದ್ವೇಗವನ್ನು ತಿಳಿದುಕೊಂಡು ಮದುವೆಯಾಗದೇ ಇರುವ ಈ ಅವಸ್ಥೆಯಲ್ಲಿ ಮಾಡಿಕೊಂಡಿರುವ ಈ ನಿನ್ನ ನಿರ್ಣಯ ಅಕಾಲಿಕವಷ್ಟೇ ಅಲ್ಲ, ಬಾಲಿಶವೂ ಆಹುದು. ಅಷ್ಟೇ ಅಲ್ಲ, ತನ್ನಲ್ಲಿರುವ ಆತ್ಮದ ಸಾಕ್ಷಾತ್ಕಾರಕ್ಕೆ ಕಾಶಿಗೆ ಹೋಗುವುದು ಕುದುರೆಯನ್ನು ಹತ್ತಿ, ತಾನು ಕುಳಿತಿರುವ ಕುದುರೆಗಾಗಿ ದೇಶದಲ್ಲೆಲ್ಲ ಅಲೆದಂತಾಗುತ್ತದೆ. ಇಲ್ಲಿಯೇ ಇದ್ದು ನೀನು ಆ ಆತ್ಮಸಾಕ್ಷಾತ್ಕಾರವನ್ನು ಮಾಡಿಕೋ ಎಂದು ಹೇಳಿ ನಿಲ್ಲಿಸಿಕೊಂಡರು.

ಜಗದ್ಗುರುಗಳ ಪದತಲದಲ್ಲಿ ಶಾಂತಿಮಯ ಚಿದ್ವಿಲಾಸ ಭವನದ ಆವರಣದಲ್ಲಿ ಆಧ್ಯಾತ್ಮಿಕ ಪರಿಸರದಲ್ಲಿ ಶಿವಪೂಜಾ ನಿರತನಾಗಿದ್ದ ಬಸವಲಿಂಗನಿಗೆ ಮದುವೆ ಮಾಡಬೇಕೆಂಬ ಚಿಂತೆ ಗುರುಗಳಿಗೆ ಆವರಿಸಿತು. ಕೊನೆಗೆ ರಾಜಕುಮಾರನಿಗೆ ಅನುರೂಪಳಾದ ಕನ್ಯೆಯನ್ನು ಹುಡುಕಿಸಿ ಪುಂಗನೂರಿನ ರಾಜಕುಮಾರಿಯನ್ನು ಎಲ್ಲರ ಸಮ್ಮತಿಯಂತೆ ಒಪ್ಪಿಸಿ ಶುಭ ಮುಹೂರ್ತದಲ್ಲಿ ಮದುವೆ ಮಾಡಿಸಿದರು.

ಮದುವೆಯಾದ ಬಸವಲಿಂಗನು ಪತ್ನೀ ಸಮೇತನಾಗಿ ಗುರುಗಳ ಬಳಿಗೆ ಬಂದು ಆಶೀರ್ವಾದವನ್ನು ಪಡೆದು ಗುರುಸೇವೆಯಲ್ಲಿ ಪತ್ನೀ ಸಮೇತನಾಗಿ ನಿಂತನು. ಗುರುಸೇವೆಯಲ್ಲಿ ತೊಡಗಿದ ದಂಪತಿಗಳನ್ನು ಕಂಡು ಕರುಣೆ ಉಕ್ಕಿ ಬಂದು, ಬಸವಲಿಂಗನ ಮಲತಾಯಿಯನ್ನು ಕರೆಸಿ, ಆಕೆಗೂ ಬೋಧಿಸಿ, ಎಲ್ಲರ ಕೈಗಳನ್ನು ಹಿಡಿಸಿ ಒಡೆದ ಮನಸ್ಸುಗಳನ್ನು ಕೂಡಿಸಿ ಎಲ್ಲರನ್ನೂ ಆಶೀರ್ವದಿಸಿ ಸ್ವಾದಿಗೆ ಕಳುಹಿಸಿದರು.

ಹೀಗೆ ಹೋಳಾದ ಮನ-ಮನೆಗಳನ್ನು ಮತ್ತೆ ಒಂದುಗೂಡಿಸುತ್ತ ಸಮಾಜದ ನೆಮ್ಮದಿಯನ್ನು ಕಾಪಾಡಿಕೊಂಡು ಬರುತ್ತಿರುವಾಗ್ಗೆ ಹೊಳಲುಕೇರಿಯಲ್ಲಿ ಒಂದು ವಿದ್ರೋಹಕಾರಿ ಘಟನೆ ನಡೆಯಿತು. ಅಲ್ಲಿ ಬಸವಪ್ಪನೆಂಬ ಭಕ್ತ ತಲೆ-ತಲೆಮಾರುಗಳಿಂದ ಮಠಕ್ಕೆ ಭಕ್ತಿಯಿಂದ ನಡೆದುಕೊಂಡು ಬರುತ್ತಿದ್ದು, ಆದೇಕೋ ಏನೋ ಇದ್ದಕ್ಕಿದ್ದಂತೆ ಅಕಾರಣವಾಗಿ ಮಠವನ್ನು, ಸಾವಳಿಗೆ ಗುರುಶಾಂತ ಸ್ವಾಮಿಗಳನ್ನು ಅವಾಚ್ಯ ಶಬ್ದಗಳಿಂದ ಬೈಯ್ಯುತ್ತ ಊರೊಳಗೆಲ್ಲ ಓಡಾಡಿದನು. ಅಷ್ಟಕ್ಕೇ ನಿಲ್ಲದೆ ಮಠದ ಬಾಗಿಲಿಗೂ ಬಂದು ಮುರಿಗೇಂದ್ರರ ಗದ್ದಿಗೆಯತ್ತ ಕೈಮಾಡಿ ಮಹಿಮೆಗಳನ್ನೆಲ್ಲ ಅಲ್ಲಗಳೆದು ತಿರಸ್ಕಾರದ ಸುಡಿಗಳನ್ನಾಡಿದನು. ಈ ಮಠದವರನ್ನು ಕೀಳುಗೈಯ್ಯಬೇಕೆಂದು ಉಜ್ಜಯಿನಿಗೆ ಓಡಿಹೋಗಿ ಅಲ್ಲಿನ ಪಟ್ಟದಾರ್ಯರನ್ನು ಒಪ್ಪಿಸಿ ತಮ್ಮ ಊರಿಗೆ ಬರಬೇಕೆಂದು ಬಿನ್ನವಿಸಿಕೊಂಡನು. ಬಸಪ್ಪನ ಮನದ ಹಂಚಿಕೆಯನ್ನು ಅರಿಯದ ಸ್ವಾಮಿಗಳು ಬಂದು ಊರ ಮುಂದಿನ ಶಿವಾಲಯದಲ್ಲಿ ಬೀಡುಬಿಟ್ಟರು.

ಇದನ್ನು ತಿಳಿದ ಜಗದ್ಗುರುಗಳು ಚರಮೂರ್ತಿಗಳನ್ನು ಹೊಳಲುಕೇರಿಗೆ ಕಳುಹಿಸಿದರು. ಅಲ್ಲಿಗೆ ಬಂದ ಚರಮೂರ್ತಿಗಳು ಆ ಊರಿನ ಭಕ್ತ ಜನರನ್ನು, ಬಸಪ್ಪನನ್ನು ಸೇರಿಸಿ, ಈಗ ಬಸಪ್ಪನವರು ಏರ್ಪಡಿಸಿರುವ ಉತ್ಸವ ಕೇವಲ ಚಿತ್ರದುರ್ಗದ ಮಠಕ್ಕೆ ಕಳಂಕ ಹಚ್ಚಿಸಬೇಕೆಂಬ, ಮುರಿಗಾ ಜಗದ್ಗುರುಗಳನ್ನು ಧಿಕ್ಕರಿಸಬೇಕೆಂಬ ಕುಟಿಲ-ವಂಚನೆಯಿಂದ ಕೂಡಿದುದೆಂದೂ, ಇದನ್ನು ಆಗಗೊಡಬಾರದೆಂದೂ ಚರಮೂರ್ತಿಗಳು ಮೇಲಿಂದ ಮೇಲೆ ಹೇಳುತ್ತಿದ್ದರೂ, ಊರಿನ ವೃದ್ಧ ಭಕ್ತಾದಿಗಳು ಇದು ಶಾಸ್ತ್ರಸಮ್ಮತವಲ್ಲವೆಂದು ವಿರೋಧಿಸಿದರೂ, ಅದಾವುದನ್ನು ಕೇಳದೆ ಸ್ವಾಮಿಗಳನ್ನು ಉತ್ಸಾಹದಿಂದ ಊರಬೀದಿಗಳಲ್ಲಿ ಮೆರವಣಿಗೆಯನ್ನು ಕರೆತಂದನು.

ಇದನ್ನು ತಿಳಿದ ಜಗದ್ಗುಗಳು ತಮಗಿಂತ ಗುರು ಪರಂಪರೆಗೇ ಇದು ಅಪಚಾರವೆಂದು ಕೋಪಿಷ್ಟರಾಗಿ ಮುರಿಗೇಂದ್ರ ರಾಜೇಂದ್ರರ ಗದ್ದುಗೆಯ ಬಳಿಗೆ ಬಂದು ಕಣ್ಮುಚ್ಚಿ ಕೈಯೆತ್ತಿ ಮುರಿಗೇಶ ಸೋತ ಬಸವಯ್ಯ ಗೆದ್ದ ಎಂದು ಹೇಳಿ ಗದುಗ್ದೆಯಲ್ಲಿ ಒಬ್ಬರೇ ಹೋಗಿ ಪವಡಿಸಿದರು.

ಹೊಳಲುಕೇರಿಯಲ್ಲಿ ಬಸಪ್ಪನು ಉಜ್ಜಯಿನಿಯ ಸ್ವಾಮಿಗಳನ್ನು ಮೆರವಣಿಗೆಯಲ್ಲಿ ಕರೆದೊಯ್ಯುತ್ತಿರುವಾಗ ಯಾರೋ ಬಂದು ನಿಮ್ಮ ಹದಿನಾರು ವರ್ಷದ ಮಗ ಬಾವಿಯಲ್ಲಿ ಬಿದ್ದು ಸತ್ತ ಎಂದು ಹೇಳಿದ ಕೂಡಲೇ ಹಾವನ್ನು ಕಂಡವನು ಹೌಹಾರಿ

ಬೆಚ್ಚಿ ಬೀಳುವಂತೆ ಕೆಟ್ಟೆನಲ್ಲೋ ಸತ್ತೆನಲ್ಲೋ ಎಂದುಕೊಂಡು ಬಾವಿಯ ಬಳಿಬಿದ್ದೆಯಾಗಿ ಸತ್ತು ಬಿದ್ದಿದ್ದ ಮಗನನ್ನು ಕಂಡು ಗೋಳಾಡಿದನು. ಉಜ್ಜಯಿನಿಯ ಗುರುಗಳು ತಮಗಿನ್ನೇನು ಕಾದಿದೆಯೋ ಎಂದು ಅಲ್ಲಿಂದ ಕಾಲುಕಿತ್ತರು.

ಇದನ್ನು ತಿಳಿದ ಗುರುಶಾಂತಸ್ವಾಮಿಗಳು ಗದ್ದುಗೆಯಿಂದ ಎದ್ದು ಬಂದು ಮೊದಲಿನಂತೆಯೇ ಮುರಿಗೇಶ ಗೆದ್ದ ಬಸವಯ್ಯ ಸೋತ ಎಂದು ನುಡಿದರು. ಅಷ್ಟು ಹೊತ್ತಿಗೆ ಬಸವಯ್ಯನಿಗೆ ತನ್ನ ಪಾಪದ ಅರಿವಾಗಿ ಮುರಿಗೇಶನೇ ಗತಿ ಎಂದು ಮಠದತ್ತ ಧಾವಿಸಿ ಬಂದನು. ಮಠದ ಬಾಗಿಲು ಆರು ತಿಂಗಳಕಾಲ ಅವನಿಂದ ಮುಚ್ಚಿತ್ತು. ಅಲ್ಲಿಯೇ ಇದ್ದು ಗುರುಗಳ ಧ್ಯಾನದಲ್ಲಿಯೇ ಮುಳುಗಿದ ಬಸಪ್ಪ ನರಪೇತಲನಾದ. ಅದನ್ನು ಕಂಡ ಭಕ್ತರು ಸ್ವಾಮಿಗಳಲ್ಲಿ ಅರಕೆ ಮಾಡಿಕೊಂಡ ಮೇಲೆ ಬಸವಯ್ಯನಿಗೆ ಅನುಗ್ರಹಿಸಿದರು. ಆಗ ಬಸಪ್ಪನೂ ಗೆದ್ದ.

ಈಗ ಜಗದ್ಗುರುಗಳನ್ನು ಹೊಳಲಕೇರಿಗೆ ಕರೆದುಕೊಂಡು ಹೋಗಿ ಮೆರವಣಿಗೆ ಮಾಡಿಸಬೇಕೆಂಬ ಅದಮ್ಯವಾದ ಆಸೆ, ಅದನ್ನು ಗುರುಗಳ ಮುಂದಿಟ್ಟ. ಗುರುಗಳು ಕೂಡಲೇ ಅದನ್ನು ಒಪ್ಪಿದರು. ಆದರೆ ಹೊಳಲುಕೇರಿಗೆ ಹೋಗುವಾಗ ದಾರಿಯಲ್ಲಿ ವೈದಿಕರು ಗುಂಪು ಗೂಡಿ ಅವರನ್ನು ತಡೆದು, ಅಡ್ಡಪಾಲಕ್ಕಿ ವ್ಯಾಸಭುಜಕಟ್ಟೆದ ನಂದೀ ಧ್ವಜ ಮುಂತಾದ ಬಿರುದುಗಳನ್ನು ಮುರುಘಾ ಮಠದವರು ಬಳಸಬಾರದೆಂದು ಆಗ್ರಹಪಡಿಸಿದರು. ಆದರೆ ಜಗದ್ಗುರುಗಳು ಅದನ್ನು ಲಕ್ಷಿಸದೆ ಹೊಳಲುಕೇರಿಯ ಬಳಿಗೆ ಬಂದು ಅಲ್ಲಿನ ಶಿವಾಲಯದಲ್ಲಿ ಬಿಡಾರ ಮಾಡಿ ವೈದಿಕ ಮುಖಂಡರನ್ನು ಅಲ್ಲಿಗೆ ಕರೆಸಿ ಈ ಮೇಲಿನ ಬಿರುದುಗಳನ್ನು ಧರಿಸುವ, ಬಳಸುವ ಹಕ್ಕು ನಮಗೆ ಸರ್ಕಾರದಿಂದ ದತ್ತವಾಗಿದೆ ಎಂಬುದನ್ನು ಸರ್ಕಾರದ ಪತ್ರಗಳನ್ನು ತೋರಿಸುವುದರ ಮೂಲಕ ಅವರ ಬಾಯಿ ಮುಚ್ಚಿಸಿದರು. ಅಲ್ಲಿಂದ ಊರೊಳಗೆ ಮೆರವಣಿಗೆಯಲ್ಲಿ ಹೋಗಿ ಭಕ್ತರಿಗೆಲ್ಲ ದರ್ಶನ ಕೊಟ್ಟು ಬಸವಯ್ಯನ ಪೂಜೆಯನ್ನು ಸ್ವೀಕರಿಸಿ ಅವನನ್ನು ಸಂತೋಷಪಡಿಸಿದರು.

ಅತ್ತ ಸಿರಸಿಯಲ್ಲಿ ಬಣ್ಣದ ಮಠದ ಪಚ್ಚಿ ಕಂಥೆಯ ಮುರಿಗಪ್ಪನೆಂಬ ಚರಮೂರ್ತಿಯು ತಾನೇ ಜಂಗಮನೆಂಬ ದುರಹಂಕಾರದಿಂದ ಬೀಗಿ ಮೆರೆಯುತ್ತ, ತನಗಿಂತ ದೊಡ್ಡ ಗುರುವಿನ್ನಿಲ್ಲವೆಂದೂ, ಚಿತ್ರದುರ್ಗದ ಜಗದ್ಗುರುಗಳೇನೂ ದೊಡ್ಡವರಲ್ಲವೆಂದೂ ತಲೆತಿರುಕನಾಗಿ ಪೈಪೋಟಿಯಲ್ಲಿ ನಿರತನಾಗಿದ್ದನು. ಆಗ ಇದನ್ನು ತಿಳಿದ ಗುರುಶಾಂತ ಸ್ವಾಮಿಗಳು ಆ ಜಂಗಮಮೂರ್ತಿಯನ್ನು ಚಿತ್ರದುರ್ಗಕ್ಕೆ ಕರೆಸಿಕೊಂಡು ನಾನಾ ರೀತಿಯಲ್ಲಿ ಬುದ್ಧಿ ಹೇಳಿದರೂ ಕೇಳದಿರಲು ಅವನಿಗೆ ಬಹಿಷ್ಕಾರ ಹಾಕಿದರು. ಕೊನೆಗೆ ಈತನು ಸತ್ತಾಗ ಅವನನ್ನು ಹೂಳುವುದಕ್ಕೆ ಕೂಡ ಯಾರೂ ಬರಲಿಲ್ಲವೆಂದು ಹೇಳುತ್ತಾರೆ. ಅಂದರೆ ಆಗಿನ ಕಾಲಕ್ಕೆ ಧಾರ್ಮಿಕ ಕ್ಷೇತ್ರದಲ್ಲಿ ಮುರುಗೀ ಮಠದ ಆಜ್ಞೆಯೆಂದರೆ ಹಾಗಿತ್ತು ಎಂಬುದು ಗೊತ್ತಾಗುತ್ತದೆ.

ಹೀಗೆ ಸಾವಳಿಗೆ ಗುರುಶಾಂತ ಸ್ವಾಮಿಗಳು ಕರುಣೆ, ನಿರ್ದಾಕ್ಷಿಣ್ಯ, ಷಟ್ಸ್ಥಲಜ್ಞಾನಗಳ ಅವತಾರವೇ ಆಗಿದ್ದು ಮಠದ, ಸಮಾಜದ ಶಾಂತಿ, ನೆಮ್ಮದಿಗಳನ್ನು ಕಾಯ್ದುಕೊಂಡು ಇನ್ನೇನು ತಮ್ಮ ಐಕ್ಯ ಒಂದು ತಿಂಗಳಿದೆ ಎಂಬುದನ್ನು ಅರಿತು ತಾವು ನಿರ್ಮಿಸಿದ ಚಿದ್ವಿಲಾಸ ಭವನದಲ್ಲಿ ಪುರಾಣ, ಪುಣ್ಯಕಥೆ, ಶಿವಾನುಭವ ಗೋಷ್ಠಿ, ಭಜನೆ, ವಚನ ಪ್ರವಚನ ಮುಂತಾದವುಗಳ ವ್ಯವಸ್ಥೆಯಾಗಬೇಕೆಂದು ಬಯಸಿದರು. ಅವರ ಬಯಕೆಯಂತೆ ವ್ಯವಸ್ಥೆಯಾಯಿತು. ಇನ್ನೆಂಟು ದಿನಗಳಲ್ಲಿ ಸೋಮವಾರ ಶಿವೈಕ್ಯರಾಗುವೆವೆಂದು ಹೇಳಿದರು.

ಇದನ್ನು ಕೇಳಿದ ಭಕ್ತಸಮೂಹ ಸಾಗರದಂತೆ ಮಠದತ್ತ ಮಹಾ ಜಗದ್ಗುರುಗಳ ದರ್ಶನಕ್ಕಾಗಿ ಧಾವಿಸಿ ಬರುತ್ತಿತ್ತು. ಸೋಮವಾರ ಸಮೀಪಿಸುತ್ತಿತ್ತು. ಆಗ ಭಕ್ತ ಸಮೂಹ ಬಂದು ಹಿಂದಿನಂತೆ ಸಿಂಹಾಸನಕ್ಕೆ ಜಗಳವಾಗಬಾರದೆಂದೂ ತಮ್ಮ ಉತ್ತರಾಧಿಕಾರಿಗಳನ್ನು ತಾವೇ ನಿಯಮಿಸಬೇಕೆಂದೂ ಕೇಳಿಕೊಂಡಿತು. ಅವರ ಬೇಡಿಕೆಯಂತೆ ತಮ್ಮ ಕೃಪಾಪಾತ್ರರಾಗಿದ್ದ ಸಣ್ಣಪಾದದ ಚನ್ನವೀರ ಸ್ವಾಮಿಗಳನ್ನು ಕರೆಸಿ ಅವರಿಗೆ ಶಿಖಾ ಶೈಲಗಳನ್ನು ಕೊಟ್ಟು ಸಿಂಹಾಸನದ ಮೇಲೆ ಕುಳ್ಳಿರಿಸಿ ಷಟ್ಸ್ಥಲ ಪಟ್ಟಾಭಿಷೇಕೋತ್ಸವವನ್ನು ಮಾಡಿದರು. ಇನ್ನು ಮುಂದೆ ಇವರ ಆಜ್ಞೆಯೇ ತಮ್ಮ ಆಜ್ಞೆಯೆಂದು ತಿಳಿಯುವಂತೆ ಹೇಳಿ, ಅದೇ ಸೋಮವಾರದಂದು ತಮಗಾಗಿ ನಿರ್ಮಿಸಿದ್ದ ಗೋಮುಖ ಸಮಾಧಿಯಲ್ಲಿ ನಿಂದು ಶಿವನಲ್ಲಿ ಒಳಗಾದರು.

ಸಣ್ಣಪಾಡದ ಚನ್ನವೀರ ದೇಶಿಕರು :
(ಪಟ್ಟ 20. ಕಾಲ ಸು. ಕ್ರಿ. ಶ. 1840-1860)

ಸಾವಳಿಗೆ ಗುರುಶಾಂತ ಸ್ವಾಮಿಗಳಿಂದಲೇ ಶೂನ್ಯಸಿಂಹಾಸನವನ್ನೇರಿದ ಚನ್ನವೀರಸ್ವಾಮಿಗಳು ಚಿತ್ರದುರ್ಗದ ಬೃಹನ್ಮಠದಲ್ಲಿ ಜಂಗಮ ದಾಸೋಹ, ಷಟ್ಸ್ಥಲಬೋಧೆಯನ್ನು ಮಾಡುತ್ತ ಸಮಾಜ ವಿರೋಧಿ ಚಟುವಟಿಕೆಗಳನ್ನು ಮೊಳಕೆಯಲ್ಲಿಯೇ ಚಿವುಟಿ ಹಾಕುತ್ತ ಬೃಹನ್ಮಠದ ಘನತೆ-ಗಾಂಭೀರ್ಯಗಳನ್ನು ಕಾಪಾಡಿಕೊಂಡು ಬರುತ್ತಿದ್ದರು.

ಒಮ್ಮೆ ದಾವಣಗೆರೆಯ ಸಮೀಪದ ಮಾಯಕೊಂಡದ ಹಾಲುಮತದ ಕೆಂಚೆಲ್ಲಗೌಡನು ಜಗದ್ಗುರುಗಳ ಬಳಿಗೆ ಬಂದು ಸಾಷ್ಟಾಂಗ ಪ್ರಣಾಮ ಮಾಡಿ ನಮ್ಮೂರಿಗೆ ದಯಮಾಡಿಸಿ ಪಾದಪೂಜೆ ಸ್ವೀಕರಿಸಬೇಕೆಂದು ಒಪ್ಪಿಸಿದನು. ಆಗ ಎಪ್ಪತ್ತೆರಡು ಬಿರುದುಗಳು, ಛತ್ರ ಚಾಮರುಗಳು ಮೊದಲಾದ ವೈಭವಗಳಿಂದ ಭಕ್ತರಿಂದ ಸುತ್ತುವರಿದು ಪ್ರಯಾಣ ಬೆಳಸಿ ದಾವಣಗೆರೆಯನ್ನು ದಾಟಿ ಮಾಯಕೊಂಡಕ್ಕೆ ಬಂದು ಕೆಂಚೆಲ್ಲಗೌಡನ ಭಾವಪೂರಿತವಾದ ಭಕ್ತಿಪೂಜೆಯನ್ನು ಸ್ವೀಕರಿಸಿದರು. ಆತನ ಮುಗ್ಧ ಭಕ್ತಿಯನ್ನು ಕಂಡು ಕರಗಿದರು. ಕೆಂಚೆಲ್ಲಗೌಡನಿಗೆ ತಮ್ಮ ಅಂತರಂಗದಲ್ಲಿ ಅನುಪ್ರಮಾಡಿಕೊಟ್ಟರು. ಆತನನ್ನು ಆಶೀರ್ವದಿಸಿ ಅನುಗ್ರಹಿಸಿದರು.

ಕೆಂಚೆಲ್ಲಗೌಡನ ಮನೆಯ ಪೂಜೆಯನ್ನು ತೀರಿಸಿಕೊಂಡು ನಂದಿಧ್ವಜ, ವ್ಯಾಸತೋಳು ಮುಂತಾದ ಬಿರುದು ವೈಭವಗಳಿಂದ ಚಿತ್ರದುರ್ಗದ ಕಡೆಗೆ ಬರುವಾಗ ಅದನ್ನು ಕಂಡ ವೈದಿಕರು

ಈ ಮೆರವಣಿಗೆ ಕೇವಲ ನಮ್ಮ ಗುರುಗಳಾದ ಶಂಕರಾಚಾರ್ಯರಿಗೆ ಸಲ್ಲಬೇಕೇ ಹೊರತು, ಇನ್ನಾರಿಗೂ ಅಲ್ಲ. ಈ ರೀತಿಯ ಜಂಗಮರ ವೈಭವ ನಮ್ಮ ಗುರುಗಳಿಗಾದ ಅವಮಾನ ಎಂದು ತಿಳಿದು ಮೆರವಣಿಗೆಯನ್ನು ಅಡ್ಡಗಟ್ಟಿದುದೇ ಅಲ್ಲದೆ, ಆಯುಧಪಾಣಿಗಳಾಗಿ ಬಂದು, ಕಲ್ಲುಗಳನ್ನು ಜಗದ್ಗುರುಗಳ ಕಡೆಗೂ ಬೀರಿ ಜಗಳಕ್ಕೆ ನಿಂತರು. ಆಗ [illegible] ವಿಪ್ರರನ್ನು [illegible]. ಕರುಣಾಮಯಿಗಳಾದ ಜಗದ್ಗುರುಗಳೇ, ವಿಪ್ರರಲ್ಲಿ ಕೆಲವರು ಮುಖಂಡರನ್ನು ಕರೆಸಿ ವೇದ ಧರ್ಮವನ್ನು ಅವರಿಗೆ ತಿಳಿಯ ಹೇಳಿ, ಇದರಲ್ಲಿ ಮೇಲುಕೀಳಿನ ಪ್ರಶ್ನೆಯಿಲ್ಲ, ವ್ಯಾಸದೂಷಣೆಯಲ್ಲ, ಶಂಕರಾಚಾರ್ಯರಿಗೆ ಅವಮಾನವೇನಿಲ್ಲ ಎಂದು ಮುಂತಾಗಿ ಬೋಧಿಸಿ ಕಳುಹಿಸಿದರು.

ಯಾರಿಗೂ ಅನ್ಯಾಯ ಮಾಡದೆ, ಯಾರನ್ನು ಮೇಲುಕೀಳೆಂದು ಭಾವಿಸದೆ ಸಮತೂಕದಲ್ಲಿದ್ದು ಸರ್ವ ಸಮಾನತೆಯನ್ನು ಸ್ಥಾಪಿಸಿ ಚಿತ್ರದುರ್ಗದಲ್ಲಿ ಹಲವುಕಾಲ ಪಟ್ಟದಾರ್ಯರಾಗಿದ್ದು ಬಯಲಾದರು.

ಮಹಾಲಿಂಗ ಸ್ವಾಮಿಗಳು :
(ಪಟ್ಟ 21. ಕಾಲ ಸು. ಕ್ರಿ. ಶ. 1863–1870)

ಮಲಪ್ರಹರಿಣೀ ನದಿಯ ದಡದಲ್ಲಿದ್ದ ಪಂಪಾನದಿ ಅಗ್ರಹಾರದ ವಿರತಯ್ಯ–ಬಸವಾಂಬೆಯರಿಗೆ ಜಂಗಮ ವೇಶದಲ್ಲಿದ್ದ ಶಿವನ ಅನುಗ್ರಹದಿಂದ ಜನಿಸಿದ ಸತ್ಪುತ್ರರು ಮಹಾಲಿಂಗಸ್ವಾಮಿಗಳು. ಬಾಲ್ಯದಲ್ಲಿಯೇ ಅಮಾನುಷ ಮಹಿಮೆಗಳನ್ನು ಮೆರೆಯುತ್ತಿದ್ದ ಬಾಲಕನನ್ನು ಜೋಪಾನವಾಗಿ ಸಾಕುತ್ತಿದ್ದ ತಂದೆ-ತಾಯಿಗಳು ಪ್ರಭುಶಕ್ತಿಯನ್ನು ಪಡೆದು ಪರಶಿವನಂತೆ ತೇಜಸ್ವಿಯಾಗಿ ಕಂಗೊಳಿಸುತ್ತಿದ್ದ ತಮ್ಮ ಪುತ್ರನನ್ನು ಮಹಿಮಾಸ್ಪದವಾದ ಕರಿಬಸವ ಶಿವಯೋಗಿಗಳ ಕಾಲಕ್ಕೆ ನಿರ್ಮಿತವಾಗಿದ್ದು ಆಗ ಮಠಾಧ್ಯಕ್ಷರಾಗಿದ್ದ ಪವಾಡಪುರುಷ ರುದ್ರಸ್ವಾಮಿಗಳ ಬಳಿಗೆ ಬಂದು ಎಂಟು ವರ್ಷದ ಮುಗ್ಧಸ್ವಭಾವದ ಮಹಲಿಂಗೇಂದ್ರರನ್ನು ಅವರಿಗೆ ಒಪ್ಪಿಸಿಕೊಟ್ಟರು.

ರುದ್ರಶಿವಯೋಗಿಗಳ ಸೇವೆಯಲ್ಲಿಯೇ ತತ್ಪರರಾಗಿ ಆನಂದ ಪಡೆಯುತ್ತಿದ್ದ ಮಹಾಲಿಂಗೇಂದ್ರರಿಗೆ ಗುರುಗಳೇ ತಂದೆ-ತಾಯಿ, ಸರ್ವಸ್ವವೂ ಆದರು. ಗುರು ಶುಶ್ರೂಷೆ ಮಾಡುತ್ತ ಅವರ ಬಾಯಿಂದಲೇ ಹಲವಾರು ಘನತತ್ವಗಳನ್ನು ಕೇಳುತ್ತ ತಾವೂ ಮಹಾನುಭಾವಿಗಳಾದರು. ಗುರುಸಿದ್ಧಸ್ವಾಮಿಗಳಿಂದ ದೀಕ್ಷೆಯೂ ಆಗಿ ಷಟ್ಸ್ಥಲ ಬ್ರಹ್ಮಿಯೆನಿಸಿದರು. ಪಂಪಾ ನದೀ ಅಗ್ರಹಾರದ ರುದ್ರಸ್ವಾಮಿಗಳ ಮಠದಲ್ಲಿದ್ದಾಗಲೇ ಅನೇಕ ಮಹಿಮೆಗಳನ್ನು ಮೆರೆದು ಮಹಿಮಾಪುರುಷರಾದರು.

ಮಹಾಲಿಂಗರ ಮಹಿಮೆಗಳನ್ನು ಅರಿತ ಹತ್ತಿರದ ಶಿವಪುರದ ಭಕ್ತರು ಬಂದು ತಮ್ಮೂರಿನಲ್ಲಿ ಅವರಿಗೆ ಒಂದು ಮಠವನ್ನು ಕಟ್ಟಿಸಿ ಕೊಡುವುದಾಗಿ, ಅವರು ಆ ಮಠಕ್ಕೆ ಬಂದು ಅಲ್ಲಿದ್ದುಕೊಂಡು ನಮಗೆ ಕೃಪೆ ಮಾಡಬೇಕೆಂದೂ ಬೇಡಿಕೊಂಡರು. ಗುರುಗಳ ಜೊತೆಯಲ್ಲಿ ಮಹಾಲಿಂಗರೂ ಒಪ್ಪಿಕೊಂಡರು. ಅಂತೆಯೇ ಕುಶಲಶಿಲ್ಪಿಗಳಿಂದ ನಿರ್ಮಿತವಾದ ಬೃಹನ್ಮಠಕ್ಕೆ ಬಂದು ಅಲ್ಲಿನ ಅಧ್ಯಕ್ಷಪೀಠದಲ್ಲಿ ಮಂಡಿಸಿದರು. ಇಲ್ಲಿಗೆ ಬಂದಕೂಡಲೇ ಈ ಮಠದಲ್ಲಿ ಪ್ರತಿವರ್ಷ ಆಶ್ವಯುಜ ಮಾಸ ಶುಕ್ಲಪಕ್ಷದಲ್ಲಿ ರಥೋತ್ಸವದ ವ್ಯವಸ್ಥೆ ಮಾಡಿದರು. ಈ ಉತ್ಸವ ಅತ್ಯಂತ ಜನಪ್ರಿಯತೆಯನ್ನು ಗಳಿಸಿಕೊಂಡಿತು. ಈ ಮಠದಲ್ಲಿಯೂ ನಿತ್ಯ ಜಂಗಮ ದಾಸೋಹ, ಶರಣ ವಚನ ಪ್ರವಚನ, ಪುರಾಣ ಹಾಗೂ ಶಿವಾನುಭವಗೋಷ್ಠಿಗಳು ನಡೆಯುತ್ತಿದ್ದವು.

ಮಹಾಲಿಂಗರು ತಮ್ಮ ಜೀವನದಲ್ಲಿ ಅನೇಕ ವಸ್ತುಗಳನ್ನು ತ್ಯಾಗಮಾಡಿ ಕಠಿಣ ವ್ರತಗಳನ್ನು ನಡೆಸುತ್ತ ಶಿವಾಗಮಗಳಿಗನು ಸಾರವಾದ ನಿಯಮಿತ ಜೀವನವನ್ನು ಜಿತೇಂದ್ರಿಯರಾಗಿ ನಡೆಸುತ್ತಿದ್ದರು. ಮಠದಲ್ಲಿ ವ್ಯವಸ್ಥೆಯಾಗಿದ್ದ ದಾಸೋಹ, ಆರಾಧನೆ ಮುಂತಾದ ಕಾರ್ಯಗಳಿಗೆ ಭಕ್ತಿಭಿಕ್ಷೆಯನ್ನು ಎತ್ತಲು ಪಶ್ಚಿಮ ದೇಶದ ಕಡೆಗೆ ಕುದುರೆ ಸವಾರಿಯಲ್ಲಿ ಹೊರಟುಬರುತ್ತಿರುವಾಗ ಮಾರ್ಗ ಮಧ್ಯದಲ್ಲಿ ನಾನಾ ವಿಧವಾದ ಹೂವಿನಗಿಡಗಳೂ, ವೃಕ್ಷಗಳಿಂದ ಸುತ್ತುವರಿಯಲ್ಪಟ್ಟ ಉದ್ಯಾನದ ಮಧ್ಯದಲ್ಲಿದ್ದ ಒಂದು ಕಲ್ಯಾಣಿಯನ್ನು ಕಂಡು ಅಲ್ಲಿಗೆ ಬಂದರು. ಹಸುರಿದ್ದ ಮರದ ಬಳಿ ಕುದುರೆಯನ್ನು ಕಟ್ಟಿ ತಾವು ಮರವೊಂದರ ನೆರಳಿನಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದರು.

ಆಗ ಆ ಉದ್ಯಾನದ ಒಡೆಯನಾದ ಶಿವಲಿಂಗ ದೇಶಿಕನು ಮಹಾಲಿಂಗರ ಆಗಮನ ವಾರ್ತೆಯನ್ನು ಕೇಳಿ ಪುಣ್ಯಪುಂಜವೇ ತನ್ನಲ್ಲಿಗೆ ಬಂದಿತ್ತು ಎಂದು ಭಾವಿಸಿ, ಅವರ ಬಳಿಗೆ ಧಾವಿಸಿ ಬಂದು ಪಾದಗಳಿಗೆ ನಮಸ್ಕರಿಸಿ ತಾವು ಇಂದು ಇಲ್ಲಿಯೇ ಇದ್ದು ಶಿವಪೂಜೆ ಆರೋಗಣೆಗಳನ್ನು ಮುಗಿಸಬೇಕೆಂದೂ, ಈ ಕೊಳದ ನೀರು ಯೋಗ್ಯವಲ್ಲವೆಂದೂ, ಅಭಿಷೇಕಕ್ಕೆ ಬೇರೆ ನೀರು ತರುವುದಾಗಿ ಹೇಳಿದನು. ಆ ಮಹಾಲಿಂಗರು ನಿಮ್ಮ ಪಾದಸ್ಪರ್ಶದಿಂದ ಪವಿತ್ರವಾಗಿರುವ ನೀರು ಇಲ್ಲಿರುವಾಗ ಬೇರೆ ಬಾವಿಯ ನೀರು ಬೇಡವೆಂದು ಹೇಳಿ ತಾವು ಅಲ್ಲಿಂದೆದ್ದು ಗಳಗಳನೆ ಬಾವಿಯೊಳಕ್ಕಿಳಿದು ಆ ನೀರಿನಿಂದಲೇ ಕೈಕಾಲು ತೊಳೆದು ಮೇಲಕ್ಕೆ ಬರಲು ಆ ಕೊಳೆತ ನೀರೆಲ್ಲ ಪನ್ನೀರಾಯಿತು. ಇದನ್ನು ಕೇಳಿದ ಕೂಡಲೇ ಹತ್ತಿರದ ಊರಿನ ಜನರೆಲ್ಲ ಅಲ್ಲಿಗೆ ಬಂದು, ಮಹಾಲಿಂಗರ ಮಹಿಮೆಯನ್ನು ಕೊಂಡಾಡಿ ಅವರ ಪಾದಕ್ಕೆ ನಮಿಸಿ ಪುನೀತರಾದರು. ಅಲ್ಲಿಯೇ ಶಿವಪೂಜೆ–ಆರೋಗಣೆಗಳನ್ನು ಮುಗಿಸಿಕೊಂಡು ಶಿವಲಿಂಗ ಸ್ವಾಮಿಗಳಿಗೂ, ಅಲ್ಲಿಗೆ ಬಂದ ನಾನಾ ಭಕ್ತರ ಎಲ್ಲ ರೀತಿಯ ಕೋರಿಕೆಗಳನ್ನು ಈಡೇರಿಸಿ ಅವರಿಗೆಲ್ಲ ಆಶೀರ್ವಾದ ಮಾಡಿ ಮುಂದೆ ಪ್ರಯಾಣ ಬೆಳೆಸಿದರು.

ಹಿಂದಿನ ಜಗದ್ಗುರುಗಳಾದ ಸಣ್ಣ ಪಾದದ ಚನ್ನವೀರದೇಶಿಕರು ಬಯಲಾಗುವುದಕ್ಕೆ ಮುನ್ನ ಮಹಾಲಿಂಗರೇ ಚಿತ್ರದುರ್ಗದ ಶೂನ್ಯ ಪೀಠಕ್ಕೆ ಅಧ್ಯಕ್ಷರಾಗಬೇಕೆಂಬ ತಮ್ಮ ಕೊನೆಯ ಬಯಕೆಯನ್ನು ತಿಳಿಸಿದ್ದರು. ಅವರಿಚ್ಛೆಯಂತೆ ಮಹಾಲಿಂಗರು ಚಿತ್ರದುರ್ಗದ ಕಡೆ ಪ್ರಯಾಣ ಬೆಳೆಸಿದರು. ಸಹಸ್ರಾರು ಜನ ಭಕ್ತರು ಈ ಗುರುಗಳನ್ನು ನೋಡಲು ನೆರೆದಿರುವಂತೆ ಮಹಾಲಿಂಗರು ಅಲ್ಲಿಗೆ ಬಂದಿಳಿದರು. ಕೂಡಲೇ ಅವರಿಗೆ ವಿಧಿವತ್ತಾಗಿ ಎಲ್ಲ ವಸ್ತ್ರಾಭರಣಗಳನ್ನು ಧರಿಸಿ ಮಂಗಳವಾದ್ಯಗಳು ಭೋರ್ಗರೆಯುತ್ತಿರಲು ಶಿಖಾ–ಶೈಲಗಳ

ನ್ನಿತ್ತು ಶೂನ್ಯಪೀಠದ ಅಧಿಕಾರವನ್ನು ಅವರಿಗೆ ವಹಿಸಿಕೊಟ್ಟರು. ಮಹಾಲಿಂಗೇಂದ್ರರು ಚಿತ್ರದುರ್ಗದ ಶೂನ್ಯಪೀಠದ 21ನೆಯ ಪೀಠಸ್ಥಲ ಪಟ್ಟಾಧಿಕಾರವನ್ನು ವಹಿಸಿಕೊಂಡರು.

ಈ ಸಂದರ್ಭದಲ್ಲಿ ಶಿವಾನುಭವ ಗೋಷ್ಠಿ, ಶೈವಾಗಮ, ಪುರಾಣ ವೇದ ಉಪನಿಷತ್ತುಗಳ ಪ್ರವಚನ-ವ್ಯಾಖ್ಯಾನಗಳು, ಗಾನ-ನೃತ್ಯಗಳು ವೈಭವದಿಂದ ನಡೆದವು. ವಿದ್ವಾಂಸರಿಗೆ ದಾನ-ದಕ್ಷಿಣೆಗಳ ವಿತರಣೆ ಯಾಯಿತು. ಅಲಂಕಾರಗಳ ಮಧ್ಯೆ ಕಂಗೊಳಿಸುತ್ತಿದ್ದ ಮಹಾಲಿಂಗೇಂದ್ರರ ಸಮ್ಮುಖದಲ್ಲಿ ನಾನಾ ಮಠ-ಮಾನ್ಯಗಳಿಂದ, ಭಕ್ತ ಮಾಹೇಶ್ವರರಿಂದ, ರಾಜ ಮಹಾರಾಜರುಗಳಿಂದ ಬಂದಿದ್ದ ಕಾಣಿಕೆ ರಾಶಿರಾಶಿಯಾಗಿ ಝಗ-ಝಗಿಸುತ್ತಿದ್ದು ಶಿವನ ಸಭೆಯನ್ನು ಹೋಲುವಂತಿತ್ತು.

ತ್ರಿಕಾಲ ಪೂಜಾನಿಷ್ಠರಾದ ಮಹಾಸ್ವಾಮಿಗಳು ಮಠದಲ್ಲಿ ನಿತ್ಯ ಶಿವಾನುಭವ ಗೋಷ್ಠಿ ಮುಂತಾದುವನ್ನು ನಡೆಸುತ್ತ ಇಡೀ ಭರತ ಖಂಡದ ಜನರ ಕುತೂಹಲವನ್ನು ಕೆರಳಿಸಿದರು. ದೇಶದ ನಾನಾ ಕಡೆಗಳಿಂದ ಭಕ್ತರು ಇಲ್ಲಿಗೆ ಬಂದು ಹೋಗುತ್ತಿದ್ದರು. 12ನೆಯ ಶತಮಾನ ಮತ್ತೆ ಮರುಕಳಿಸಿದಂತಾಗಿತ್ತು.

ಒಂದು ವಸಂತ ಮಾಸದಲ್ಲಿ ಮಹಾಲಿಂಗ ಜಗದ್ಗುರುಗಳು ದೇಶ ಸಂಚಾರ ಹೊರಡಬೇಕೆಂದು ನಿರ್ಣಯಿಸಿ, ಸಕಲ ಬಿರುದು–ಬಾವಲಿಗಳೊಂದಿಗೆ ಪರಿವಾರ ಸಮೇತರಾಗಿ ಅತ್ಯಂತ ವೈಭವದಿಂದ, ಪ್ರಯಾಣಕ್ಕೆ ಬೇಕಾಗುವ ಅಗತ್ಯ ಸಿಬ್ಬಂದಿ, ಸಾಮಾನು-ಸರಂಜಾಮುಗಳೊಂದಿಗೆ ಮಹಾಮಠದ ಮಹಾದ್ವಾರದಿಂದ ಹೊರಟು ಮೊದಲು ಭರಮಸಾಗರಕ್ಕೆ ಬಂದು, ಅಲ್ಲಿಂದ ಹೆಬ್ಬಾಳು ಮಾರ್ಗವಾಗಿ ದಾವಣಗೆರೆ ಬಂದರು. ಅಲ್ಲಿ ಸ್ವಾಮಿಗಳು ಸಿಂಹಾಸನದಲ್ಲಿ ಮಂಡಿಸಿ ಭಕ್ತರಿಂದ ಕಾಣಿಕೆಗಳನ್ನು ಸ್ವೀಕರಿಸಿ ಅಲ್ಲಿಂದ ಹೊರಟು ಹರಿಹರದಲ್ಲಿ ಬಿಡಾರ ಮಾಡಿದರು. ಅಲ್ಲಿನ ಭಕ್ತರು ಅದ್ಭುತವಾದ ಮಂಟಪವನ್ನು ಕಟ್ಟಿಸಿ, ಸಿಂಹಾಸನದಲ್ಲಿ ಮೂರ್ತಗೊಳಿಸಿ ತಮ್ಮ ಭಕ್ತಿಯನ್ನು ಅರ್ಪಿಸಿದರು. ಅಲ್ಲಿಂದ ಹೊರಟ ಜಗದ್ಗುರುಗಳು ದಾರಿಯಲ್ಲಿ ದೊರೆತ ಅಪೂರ್ವ ಸ್ವಾಗತ, ಭಕ್ತಿಯ ಕಾಣಿಕೆಗಳನ್ನು ಸ್ವೀಕರಿಸುತ್ತ ತುಂಗಭದ್ರೆಯನ್ನು ದಾಟಿ ರಾಣೆಬೆನ್ನೂರಿಗೆ ಬಂದರು.

ರಾಣಿಬೆನ್ನೂರಿನಲ್ಲಿ ಜಗದ್ಗುರುಗಳು ಇದ್ದಾಗ ಸಂಗೀತ-ನರ್ತನಗಳು ನಡೆದುವು. ಶಿವಪುರಾಣ ವಿಚಾರ, ಶಿವಕೀರ್ತನೆ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ವಿಜೃಂಭಣೆಯಿಂದ ಜರುಗಿದವು. ಅಲ್ಲಿ ತಮಗೆ ದೊರೆತ ಭಕ್ತಿಯ ಕಾಣಿಕೆಯನ್ನು ಜಗದ್ಗುರುಗಳು ಬಡಬಗ್ಗರಿಗೆ ಅಲ್ಲಿಯೇ ವಿತರಣೆ ಮಾಡಿದರು. ಅಲ್ಲಿಂದ ಹೊರಟು ತುಮ್ಮಿನಕಟ್ಟಿ, ಬ್ಯಾಡಗಿ, ಗುತ್ತಲ, ಹಾಲ್ಲೂರು ಮಾರ್ಗವಾಗಿ ಸುರಪುರಕ್ಕೆ ಬಂದು ಅಲ್ಲಿನ ಭಕ್ತರಿಂದ ಕಾಣಿಕೆಯನ್ನು ಸ್ವೀಕರಿಸಿ ಹಾವೇರಿಗೆ ಬಂದು ಮೊಕ್ಕಾಂ ಮಾಡಿದರು. ಅಲ್ಲಿ ತಂಗಿರುವಾಗ ಸವಣೂರಿನ ನವಾಬನು ಮಹಾಲಿಂಗ ಜಗದ್ಗುರುಗಳ ಬಳಿಗೆ ತಮ್ಮ ಮಂತ್ರಿಗಳನ್ನು ಕಳುಹಿಸಿ, "ತಾವು ನಮ್ಮೂರಿಗೆ ದಯಮಾಡಿಸಿ ನಮ್ಮ ಭಕ್ತಿಯನ್ನು ಸ್ವೀಕರಿಸಬೇಕೆಂದು" ಬಿನ್ನವಿಸಿಕೊಂಡನು. ಅದರಂತೆ ಜಗದ್ಗುರುಗಳು ಒಪ್ಪಿ, ಸವಣೂರನ್ನು ಸಮೀಪಿಸುತ್ತಿರಲು ನವಾಬನು ಸಕಲ ರಾಜಮರ್ಯಾದೆಗಳೊಡನೆ ಅವರನ್ನು ಇದಿರುಗೊಂಡು ಪ್ರಣಾಮಗಳನ್ನು ಸಲ್ಲಿಸಿ ಅತ್ಯಂತ ವಿಜೃಂಭಣೆಯಿಂದ ರಾಜ ಮರ್ಯಾದೆಗಳಿಂದ ಊರಿನಲ್ಲಿ ಮೆರವಣಿಗೆ ಮಾಡಿಸುವ ಸಂದರ್ಭದಲ್ಲಿ ಈ ಅದ್ದೂರಿಯ ಉತ್ಸವವನ್ನು ಕಂಡು ಕರುಬಿದ ಜನರು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಒಂದುಗೂಡಿ ಗಲಾಟೆ ಮಾಡುವ ಸನ್ನಾಹದಲ್ಲಿದ್ದರು. ಇದನ್ನು ಗುರುತಿಸಿದ ನವಾಬನು ತನ್ನ ಕಡೆಯ ಸೈನಿಕರನ್ನು ಬಿಟ್ಟು ಅವರನ್ನು ಪೈಮುರಿಯ ಹೊಡೆದು ಓಡಿಸಿದನು. ಅನಂತರ ಮಹಾಸ್ವಾಮಿಗಳನ್ನು ಅರಮನೆಗೆ ಕರೆದುಕೊಂಡು ಹೋಗಿ ಸತ್ಕರಿಸಿ ಸವಣೂರಿನ ಮಠದಲ್ಲಿ ಅವರಿಗೆ ವ್ಯವಸ್ಥೆ ಮಾಡಿದನು. ಆಗ ಜಗದ್ಗುರುಗಳು ಬೀಳ್ಕೊಡಲು ಬಂದಿದ್ದ ನವಾಬನನ್ನು ಕುರಿತು, "ನಾವು ನಿಮ್ಮೂರಿಗೆ ಬಂದು ಜಗಳ ತಂದಂತಾಯಿತು" ಎಂದು ವ್ಯಥೆಪಟ್ಟರು. ಸೈತಾನಸೇನೆಗೆ ಎದುರಾಗಿ ಮಾನವ ಸತ್ಪುತ್ರರು ನಡೆಸಬೇಕಾದ ಹೋರಾಟದ ಮಾದರಿ ಇದೆಂದು ಹೇಳಿ ಸ್ವಾಮಿಗಳ ಮೆಚ್ಚುಗೆಯನ್ನು ಗಳಿಸಿದನು.

ಸಕಲ ಬಿರುದಾವಳಿಗಳಿಂದ ಹೊರಟ ಜಗದ್ಗುರುಗಳು ಗುಡಿಗೇರಿಗೆ ಬಂದು, ಅಲ್ಲಿಂದ ನರಗುಂದಕ್ಕೆ ಬಂದು ಅಲ್ಲಿನ ಭಕ್ತರಿಂದ ಚಿನ್ನದ ಮಂಟಪದಲ್ಲಿ ಪಾದಪೂಜೆ ಮಾಡಿಸಿಕೊಂಡರು. ಅಲ್ಲಿಯೇ ಸಿರಸಂಗಿಯ ರಾಜನಾದ ಜಾಯಪ್ಪನಿಂದ ಪೂಜೆಗೊಂಡರು. ಅಲ್ಲಿಂದ ಹೊರಟು ಸವದತ್ತಿ, ಮುನಿಪುರ, ಶಿವಪೇಟೆಗಳಲ್ಲಿ ಸತ್ಕಾರ ಹೊಂದಿ ಸಿರಸಂಗಿಗೆ ಬಂದರು. ಅಲ್ಲಿ ಶೂನ್ಯಸಿಂಹಾಸನ ಸಮಾರಂಭ ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಅಲ್ಲಿಗೇ ಕರ್ನಾಟಕದ ಎಲ್ಲ ಭಾಗಗಳಿಂದ ಭಕ್ತಾದಿಗಳು ಬಂದು ತಮ್ಮ ಭಕ್ತಿಯನ್ನು ಅರ್ಪಿಸುತ್ತಿರಲು ಸುಮಾರು ಆರು ತಿಂಗಳ ಕಾಲ ಅಲ್ಲಿ ವಾಸ್ತವ್ಯ ಮಾಡಬೇಕಾಯಿತು.

ಅನಂತರ ದುರುದುಂಡಿ ಸ್ವಾಮಿಗಳಿಂದ ಪವಿತ್ರಗೊಂಡು ಪ್ರಖ್ಯಾತವಾಗಿದ್ದ ಅರಭಾವಿಯ ಬಳಿಯ ಅರಣ್ಯಕ್ಕೆ ಬಂದು ಅವರ ಶಿಷ್ಯರಾಗಿದ್ದ ಸಿದ್ಧಲಿಂಗ ಸ್ವಾಮಿಗಳಿಂದ 20 ದಿನಗಳ ಕಾಲ ಸಮಸ್ತ ಪರಿವಾರಕ್ಕೂ ದಾಸೋಹ ನಡೆದು ತೃಪ್ತರಾಗಿ ನಿಡಸೊಸಿಗೆ ಬಂದರು. ಅಲ್ಲಿಯೂ ಮೂರು ದಿನಗಳಿಂದ ಬಸವ ಸ್ವಾಮಿಗಳಿಂದ ಸತ್ಕಾರವನ್ನು ಪಡೆದು ಅತ್ಯಂತ ಮಹಿಮಾಶಾಲಿಗಳಾದ ಜಟಾಧಾರಿ ಮಹಾಲಿಂಗ ಸ್ವಾಮಿಗಳಿಗೆ ಮಾಲೋಜಿ ರಾಜನು ತನ್ನ ಭಕ್ತಿಯ ಕಾಣಿಕೆಯಾಗಿ ಕಟ್ಟಿಸಿಕೊಟ್ಟಿದ್ದ ಮಹಾಲಿಂಗಪುರಕ್ಕೆ ಬಂದು ಆ ಮಠದಲ್ಲಿ ಸಿಂಹಾಸನಾರೋಹಣ ಮಾಡಿ ಅವರಿಂದ ಕಾಣಿಕೆಯನ್ನು ಸ್ವೀಕರಿಸಿ ಚಿತ್ರದುರ್ಗಕ್ಕೆ ಹಿಂತಿರುಗಿದರು.

ಒಮ್ಮೆ ಶಿವಶರಣರ ಮುಕ್ತಾಯ ಸ್ಥಲವಾದ ಉಳುವೆಗೆ ಹೋಗಬೇಕೆಂದು ನಿಶ್ಚಯಿಸಿ, ಚನ್ನಬಸವ ಪುರಾಣ ಪ್ರವಚನವನ್ನು ಪ್ರಾರಂಭಿಸಿ ಉಳುವೆ ಯಾತ್ರೆಗೆ ಬೇಕಾಗುವ ಸಕಲ ಸಾಮಾನು–ಸರಂಜಾಮು ಪಡಿ ಪದಾರ್ಥಗಳನ್ನೆಲ್ಲಾ ವ್ಯವಸ್ಥೆಗೊಳಿಸಿ ಉಳುವೆಗೆ ಹೊರಟರು. ಆ ದೃಶ್ಯ ಅತ್ಯಂತ ಮಂಗಳ ದರ್ಶನೀಯವಾದುದೇ

ಸರಿ ! ಸಿರಸಿಗೆ ಬಂದ ಮಹಾಸ್ವಾಮಿಗಳು ಸಾವಿರಾರು ಅಂಕಣದ ಮಂಟಪದ ರಚನೆಗೆ ಬೇಕಾದ ಸಾಮಾನುಗಳನ್ನು ವ್ಯವಸ್ಥೆಗೊಳಿಸಿ, ಅದಕ್ಕೆ ಬೇಕಾದ ಶಿಲ್ಪಿಗಳನ್ನು ಕಳುಹಿಸಿಕೊಟ್ಟರು. ಉಳುವೆಯಲ್ಲಿ ಮಂಟಪ ರಚನೆಯಾಗಿ ಮಧ್ಯೆ ಹೇಮಮಯ ಸಿಂಹಾಸನವು ನೆಲೆಗೊಂಡು ಅಡಿಗೆ ಮುಂತಾದ ವ್ಯವಸ್ಥೆಯಾದ ವಿಷಯ ತಿಳಿದಕೂಡಲೆ ಜಗದ್ಗುರುಗಳು ಉಳುವೆಯ ಕಡೆ ಹೊರಟರು.

ಭಕ್ತ ಸಮೂಹದೊಡನೆ ಹೊರಟ ಗುರುಗಳು ಮೇಲುಗ್ಯೆ ಮಲ್ಲಾಪುರದ ಮೂಲಕ, ಧೂಪ ದೇವಾಲಯ ಮುಂತಾದುವನ್ನು ನಿಟ್ಟಿಸುತ್ತ ಮುಂದೆ ಕಂಡ ಪರ್ವತವನ್ನು ಹತ್ತಿ ಇಳಿದು ಉಳುವೆಯನ್ನು ತಲುಪಿದರು. ಕಿನ್ನರಿ ಬೊಮ್ಮ ತಂದೆಗಳ ಹೊಳೆಯನ್ನು ದಾಟಿ,ಮಹಾಮನೆಯ ಗವಿ, ಅಕ್ಕನಾಗಮ್ಮನವರ ಗುಹೆ, ಭಸ್ಮರಾಶಿ, 12 ನೇ ಶತಮಾನದ ಗಣಂಗಳು ಬಿಟ್ಟುಹೋಗಿದ್ದ ಊಟದೆಲೆಗಳನ್ನು ಸುಟ್ಟಿದ್ದ ಕರಿಕುಬೆಟ್ಟ, ಮಡಿವಾಳ ಮಾಚಯ್ಯನ ಚಿಲುಮೆ ಮುಂತಾದುವನ್ನು ಸಂದರ್ಶಿಸಿದರು.

ಅಲ್ಲಿಂದ ಮುಂದೆ ಹೋಗಿ ಚನ್ನಬಸವಣ್ಣನವರ ಆಲಯವನ್ನು ಅದರ ಪಕ್ಕದಲ್ಲೇ ಇದ್ದ ಹೊನ್ನರಳಿಮರನನ್ನು ಅದಕ್ಕೆ ಕಟ್ಟಿದ್ದ ಚಿನ್ನದುಯ್ಯಾಲೆಯನ್ನು ನೋಡಿಕೊಂಡು ಬಸವೇಶ್ವರನ ರಥೋತ್ಸವಕ್ಕಾಗಿ ತಾವೇ ಕಟ್ಟಿಸಿದ್ದ ಕಲ್ಯಾಣ ಮಂಟಪಕ್ಕೆ ಹೋದರು. ಅಲ್ಲ ಭಕ್ತರು ಜಗದ್ಗುರುಗಳನ್ನು ಸಂದರ್ಶಿಸಿ ಊಟದ ವ್ಯವಸ್ಥೆ ಮಾಡಿದರು.

ಮಾರನೆಯ ಮಾಘ ಪೂರ್ಣಮಿಯ ದಿನ ವಿಶಿಷ್ಟವಾಗಿ ರಚಿಸಿದ ಚೆನ್ನಬಸವೇಶ್ವರರ ರಥೋತ್ಸವ. ನಾನಾರೀತಿಯಿಂದ ಅಲಂಕೃತವಾಗಿದ್ದ ರಥದ ಸುತ್ತ ಭಕ್ತಾದಿಗಳು ಸೇರಿದ್ದಾಗ ರಥಕ್ಕೆ ಕಟ್ಟಿದ ಎರಡು ನೂರಿನ ಮಿಣಿಗಳನ್ನು, ಮುತ್ತೈದೆಯರು ಚನ್ನಬಸವೇಶ್ವರರ ಹಾಡುಗಳನ್ನು ಹಾಡುತ್ತಿರಲು, ಜಗದ್ಗುರು ಮಹಾಲಿಂಗಸ್ವಾಮಿಗಳು ಎಳೆದರು. ತಾವೂ ಒಂದು ಪಲ್ಲಕ್ಕಿಯಲ್ಲಿ ಕುಳಿತು ಮೆರವಣಿಗೆ ಹೊರಟರು. ಭಕ್ತರು ಇವರನ್ನು ಚನ್ನಬಸವಣ್ಣನವರ ಅವತಾರವೆಂದೇ ಜಯಜಯಕಾರ ಮಾಡುತ್ತಿರಲು ಸ್ವಾಮಿಗಳು ಬಂದು ಮಂಟಪದಲ್ಲಿ ಸಿಂಹಾಸನದ ಮೇಲೆ ಮಂಡಿಸಿ, ಬಂದು ನಮಸ್ಕರಿಸಿದವರಿಗೆ ಧನ-ಕನಕ-ವಸ್ತುಗಳನ್ನು ಕೊಟ್ಟು ಆಶೀರ್ವದಿಸಿದರು.

ಮಾರನೆಯ ದಿನವೂ ಜಗದ್ಗುರುಗಳು ಸಿಂಹಾಸನದಲ್ಲಿ ಮಂಡಿಸಿರಲು ಓಲಗದಲ್ಲಿ ಶಿವಾನುಭಾವಿಗಳು, ಚರಮೂರ್ತಿಗಳು, ದೇಶಿಕರು, ವೀರಮಾಹೇಶ್ವರರು,ವಿದ್ವಾಂಸರು, ಶಿವಭಕ್ತರಾದ ರಾಜರು ಪಾಳೆಯಗಾರರು ಮುಂತಾದವರು ಮಂಡಿಸಿದ್ದರು. ವಿವಿಧ ರೀತಿಯ ಸಾಂಸ್ಕೃತಿಕ ಕಾರ್ಯಗಳು ಜರುಗಿದವು. ವಿಕ್ಟೋರಿಯಾ ರಾಣಿಯ ಸರ್ಕಾರದ ಸಾಹೇಬರೂ ಬಂದಿದ್ದು ಅತ್ಯಂತ ಆನಂದಪಟ್ಟರು.

ಉಳವಿಗೆ ಹೊರಡುವಾಗ ಚಿತ್ರದುರ್ಗದ ಬೃಹನ್ಮಠದಲ್ಲಿ ಪ್ರಾರಂಭವಾಗಿ ಚನ್ನಬಸವ ಪುರಾಣದ ಪ್ರವಚನ ಉದಕ್ಕೂ ನಡೆಯು [illegible]

ಮುಕ್ತಾಯವಾಯಿತು. ಪುರಾಣವನ್ನು ಪಠಿಸಿದವನಿಗೆ ಸಭೆಯಲ್ಲಿಯೇ ಕನಕಾಭರಣಗಳನ್ನು ದಿವ್ಯ ವಸ್ತುಗಳನ್ನು ಕೊಟ್ಟು ಗೌರವಿಸಿದರು.

ಮಾರನೆಯ ದಿನ ಜಗದ್ಗುರುಗಳು ಉಳಿದುದೆಲ್ಲವನ್ನೂ ಅಲ್ಲಿಯೇ ಭಕ್ತಾದಿಗಳಿಗೆ ವಿತರಣೆ ಮಾಡಿ ಇನ್ನು ಉಳಿದ ವಸ್ತುಗಳನ್ನು ಸವದತ್ತಿಗೆ ಕಳುಹಿಸಿದರು, ಸ್ವಾಮಿಗಳು ಸಿರಸಂಗಿಗೆ ಬಂದಾಗ ಅಲ್ಲಿಯ ರಾಜಾ ಜಯಪ್ಪನು ಸ್ವಾಮಿಗಳ ಸನ್ನಿಧಿಗೆ ಬಂದು ಚಿತ್ರದುರ್ಗದಲ್ಲಿರುವ ಬೃಹನ್ಮಠಕ್ಕೆ ಸಮನಾದ ಮಠವೊಂದನ್ನು ಕಟ್ಟಿಸಿಕೊಡುವುದಾಗಿ ಬಿನ್ನವಿಸಿ ಜಗದ್ಗುರುಗಳ ಅಪ್ಪಣೆ ಪಡೆದು ಬಹಳ ಶೀಘ್ರವಾಗಿ ಭಕ್ತಾದಿಗಳೆಲ್ಲರ ನೆರವಿನಿಂದ ಮಠವನ್ನು ಕಟ್ಟಿಸಿ ಅಲ್ಲಿಯೇ ವೈಭವದಿಂದ ಸ್ವಾಮಿಗಳಿಗೆ ಪುನಃ ಸಿಂಹಾಸನಾರೋಹಣ ಮಾಡಿಸಿ ದಶಮಿಯ ದಿನ ಸ್ವಾಮಿಗಳನ್ನು ಆನೆಯ ಮೇಲೆ ಅಂಬಾರಿಯಲ್ಲಿ ಕೂರಿಸಿ ಸಿರಸಂಗಿಯ ಪಟ್ಟಣದಲ್ಲಿ ಮೆರವಣಿಗೆ ಮಾಡಿಸಿದನು. ದಶಮಿಯ ಉತ್ಸವ ಮೂರು ದಿನಗಳ ಕಾಲ ನಡೆಯಿತು.

ಜಗದ್ಗುರುಗಳು ಸಿರಸಂಗಿಯಲ್ಲಿರುವಾಗಲೆ ಶಿಕ್ಷಣತಜ್ಞರಾದ ಚನ್ನಬಸಪ್ಪ ಎಂಬುವರು ಸ್ವಾಮಿಗಳ ಬಳಿಗೆ ಬಂದು ಬೆಳಗಾವಿಯಲ್ಲಿ ವೀರಶೈವ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಒಂದು ಪಾಠಶಾಲೆಯನ್ನು ನಡೆಸುವಂತೆ ಕೇಳಿಕೊಂಡರು. ಮಹಾಲಿಂಗ ಸ್ವಾಮಿಗಳು ಒಪ್ಪಿ ಉದಾರವಾಗಿ ಧನ ಸಹಾಯ ಮಾಡಿದರು. ಬೆಳಗಾವಿಯಲ್ಲಿ ಪ್ರಪ್ರಥಮವಾಗಿ "ಮುರುಗಾ ಜಗದ್ಗುರು ಮಹಾಲಿಂಗ ಪಾಠಶಾಲೆ" ಪ್ರಾರಂಭವಾಯಿತು. ಇಲ್ಲಿಂದ ಮುಂದೆ ವೀರಶೈವ ವಿದ್ಯಾರ್ಥಿಗಳ ವಿದ್ಯಾರ್ಜನೆಗಾಗಿ ಮುರುಗಾ ಮಠದ ವತಿಯಿಂದ ವಿದ್ಯಾ ಸಂಸ್ಥೆಗಳು, ವಿದ್ಯಾರ್ಥಿ ನಿಲಯಗಳು ಪ್ರಾರಂಭವಾದವು. ಇದುವರೆಗೆ ಅನ್ನ ದಾಸೋಹ ಮಾತ್ರ ನಡೆಯುತ್ತಿದ್ದ ಮಠದಿಂದ ಸಮಾಜದ ಉನ್ನತಿಗೆ ಅತ್ಯವಶ್ಯಕವಾಗಿದ್ದ ಜ್ಞಾನ ದಾಸೋಹ ಕಾರ್ಯವೂ ದಿನದಿಂದ ದಿನಕ್ಕೆ ವ್ಯಾಪಕವಾಗಿ ಬೆಳೆಯುತ್ತ ಹೋಗಿ ಮುಂದೆ ಜಯದೇವ ಜಗದ್ಗುರುಗಳ ಕಾಲಕ್ಕೆ ಇದು ತನ್ನ ಉನ್ನತಿಯ ಗೌರೀಶಂಕರವನ್ನು ಮುಟ್ಟಿತು.

ಜಗದ್ಗುರುಗಳು ಇನ್ನೂ ಸಿರಸಂಗಿಯಲ್ಲಿರುವಾಗಲೇ ಸೊಲ್ಲಾಪುರದ ಭಕ್ತರು ಬಂದು ನಮ್ಮೂರಿಗೆ ದಯಮಾಡಿಸಬೇಕೆಂದು ಬಿನ್ನವಿಸಿಕೊಂಡರು. ಭಕ್ತರ ಇಚ್ಛೆಯಂತೆ ಸಿರಸಂಗಿಯಿಂದ ಹೊರಟು ದಾರಿಯಲ್ಲಿ ಸಿಕ್ಕಿದ ಪಂಪಾ ನದಿ ಅಗ್ರಹಾರದಲ್ಲಿ ಮಕ್ಕಾಂ ಮಾಡಿದಾಗ ಅಮರಶೆಟ್ಟಿ ಚನ್ನಬಸಪ್ಪ ಎಂಬ ಪ್ರಸಿದ್ಧ ವರ್ತಕರು ಬಂದು ಸ್ವಾಮಿಗಳನ್ನು ಬಾಗಲಕೋಟೆಗೆ ಕರೆದುಕೊಂಡು ಹೋಗಿ ವೈಭವದ ಉತ್ಸವ, ಪಾದಪೂಜೆ, ಸಿಂಹಾಸನಾರೋಹಣ ಮುಂತಾದ ಸಮಾರಂಭಗಳಿಂದ ಸತ್ಕರಿಸಿದನು.

ಅಲ್ಲಿಂದ ಹೊರಟು ಸ್ವಾಮಿಗಳು ಗುಳೇದಗುಡ್ಡದಲ್ಲಿ ಮಕ್ಕಾಂ ಮಾಡಿದ್ದಾಗ ಅವರಿಗೆ ವಿಪರೀತ ಜ್ವರ ಬಂದು ಹಾಸಿಗೆ ಹಿಡಿದರು. ಈ ಸುದ್ದಿಯನ್ನು ಕೇಳಿದ ಅಮರಶೆಟ್ಟಿ ಚನ್ನಬಸಪ್ಪನು ಓಡೋಡಿ ಬಂದು ಜಗದ್ಗುರುಗಳ ಪರಿಸ್ಥಿತಿಯನ್ನು ಕಂಡು ಸ್ವಾಮಿಗಳನ್ನು

ಒಪ್ಪಿಸಿ ವೈದ್ಯೋಪಚಾರಕ್ಕಾಗಿ ಸಿರಸಿಂಗಿಗೆ ಕರೆದೊಯ್ಯುವಾಗ ಪಂಪಾ ನದೀ ಅಗ್ರಹಾರಕ್ಕೆ ಬರುವ ವೇಳೆಗೆ ಸ್ವಾಮಿಗಳ ಸ್ಥಿತಿ ತೀರ ಚಿಂತಾ ಜನಕವಾಯಿತು. ಜನರು ಅವರ ಈ ಅವಸ್ಥೆಯನ್ನು ಕಂಡು ಗೋಳಿಟ್ಟರು. ಸ್ವಾಮಿಗಳು ಅವರೆನ್ನೆಲ್ಲ ಸಂತೈಸುತ್ತಿರುವಂತೆಯೇ ಗುರುಬಸವಲಿಂಗ ಗುರುಬಸವಲಿಂಗ ಎಂದು ಉಚ್ಚರಿಸುತ್ತಲೇ ಬಯಲಾದರು.

ರುದ್ರಸ್ವಾಮಿಗಳು :
(ಪಟ್ಟ 22. ಕಾಲ ಸು. ಕ್ರಿ. ಶ. 1870–1881)

ಮಹಾಲಿಂಗಸ್ವಾಮಿಗಳಾದಮೇಲೆ ರುದ್ರಸ್ವಾಮಿಗಳು ಶೂನ್ಯ ಪೀಠಾಧ್ಯಕ್ಷರಾಗಿ ಉತ್ತರ ಕರ್ನಾಟಕದ ಪ್ರವಾಸವನ್ನು ಕೈಕೊಂಡರು. ದಾವಣಗೆರೆ, ರಾಣೆಬೆನ್ನೂರು ಮಾರ್ಗವಾಗಿ ಹಿರೇಕೆರೂರಿಗೆ ದಯಮಾಡಿಸಿ ಅಲ್ಲಿಯೇ ದಸರಾ ಮಹೋತ್ಸವದ ಅಂಗವಾಗಿ ಸಿಂಹಾಸನಾರೋಹಣ ಮಾಡಿದರು. ಆ ಕಾಲಕ್ಕೆ ಕಾಣಿಕೆಯನ್ನು ಅರ್ಪಿಸಲು ಬಂದ ಭಕ್ತಾದಿಗಳ ಕೈಯಲ್ಲಿ ಚಿನ್ನದ ಸರಿಗೆ ಇದ್ದುದನ್ನು ಕಂಡು ಭಕ್ತಿಯಿಂದ ಆತ್ಮ ಸಮರ್ಪಣೆಯ ಸಂಕೇತವಾಗಿ ಕಾಣಿಕೆ ಸಮರ್ಪಿಸುವ ಸಮಾರಂಭಗಳಲ್ಲಿ ಇಂಥ ಆಡಂಬರಗಳಿಗೆ ಅವಕಾಶವಿಲ್ಲವೆಂಬಂತೆ ಅವರನ್ನು ಆಕ್ಷೇಪಿಸಿದರು. ಪ್ರಾಯಶಃ ಅವರ ಈ ಬೋಧನೆ ಆ ಜನರಲ್ಲಿ ಸುಧಾರಣೆಯನ್ನು ತಂದಿರಬೇಕು.

ಜಗದ್ಗುರುಗಳ ನೇತೃತ್ವದಲ್ಲಿ ಹಾವೇರಿಯ ಉತ್ಸವ ಅನೇಕ ಭಕ್ತಾದಿಗಳನ್ನು ತನ್ನತ್ತ ಆಕರ್ಷಿಸಿತ್ತು. ಅದೇ ಸಮಯಕ್ಕೆ ಭಾರತದಲ್ಲಿ ಘೋರ ಕ್ಷಾಮವೂ ತಲೆದೋರಿತು. ಆಗ ಸ್ವಾಮಿಗಳು ಮಠದಲ್ಲಿದ್ದ ದವಸ-ಧಾನ್ಯವನ್ನೆಲ್ಲ ಬಳಸಿ ಸುತ್ತ ಮುತ್ತ ಗಂಜಿಯ ಕೇಂದ್ರಗಳನ್ನು ಸ್ಥಾಪಿಸಿ ವ್ಯವಸ್ಥೆ ಮಾಡಿದರು. ವೈಭವದ ಚಿನ್ಹೆಗಳನ್ನೆಲ್ಲ ತ್ಯಾಗ ಮಾಡಿದರು. ನಿಜವಾದ ಮಾನವತಾರಾಧನೆಯ ಮೂರ್ತಿಗಳೆನಿಸಿದರು.

ಏನಾದರೇನು, ಸಮಾಜದ ಹುತ್ತದಲ್ಲಿ ಅಲ್ಲಲ್ಲಿ ವಿಷಸರ್ಪಗಳಿಗೂ ಕಡಿಮೆಯಿಲ್ಲ. ಸ್ವಾಮಿಗಳು ರಾಣಿಬೆನ್ನೂರಿನಲ್ಲಿದ್ದಾಗ ಮಠದ ಕಾರಭಾರಿಯಾದ ಸಿದ್ಧರಾಮಪ್ಪನೆಂಬುವನು ಜಗದ್ಗುರುಗಳೊಂದಿಗೆ ಮನಸ್ತಾಪವನ್ನು ಬೆಳೆಸಿ ನಿರ್ವಾಣಪ್ಪ, ರಾಚಪ್ಪ ಎಂಬ ಪುಂಡರನ್ನು ಕೂಡಿಕೊಂಡು ದುರ್ಗಕ್ಕೆ ಬಂದು ಮಠದಲ್ಲಿದ್ದ ದವಸ-ಧಾನ್ಯಗಳನ್ನೆಲ್ಲ ದೋಚಿ ಸ್ವಂತಕ್ಕೆ ಹೆಚ್ಚಿನ ಬೆಲೆಯಲ್ಲಿ ಮಾರಿಕೊಂಡು ಕಂಗಾಲಾಗಿದ್ದ ಜನರಿಗೆ ಉರುಲಾದನು. ಅಷ್ಟಕ್ಕೆ ತನ್ನ ಧೂರ್ತತನವನ್ನು ಮಿತಿಗೊಳಸದೆ ಇನ್ನೂ ಹಲವರು ಪುಂಡರನ್ನು ಕೂಡಿಕೊಂಡು ಸ್ವಾಮಿಗಳು ಏಕಾಂತದಲ್ಲಿದ್ದಾಗ ಅವರನ್ನು ಸುತ್ತುವರಿದು ಮಠದ ಖಜಾನೆಯ ಬೀಗದ ಕೈಯನು ಕೊಡುವಂತೆ ಒತ್ತಾಯಪಡಿಸಿ ಬೆದರಿಕೆ ಹಾಕಿದನು. ಆದರೆ ಸಾರ್ವಜನಿಕ ಹಣದ ಜವಾಬ್ದಾರಿಯನ್ನು ಹೊತ್ತಿದ್ದ ಸ್ವಾಮಿಗಳು ಒಪ್ಪದೇ ಇರಲು,ಮಠದ ನಿಧಿಯನ್ನು ದೋಚಲು ಭಂಡಾರಿ ಸಿದ್ದ ಕರ್ತೃಗಳ ಗದ್ದುಗೆಗೆ ಮುತ್ತಿಗೆ ಹಾಕಲು ಹವಣಿಸಿದ.ಆದರೆ ಅಲ್ಲಿಯೂ ಬೀಗಮುದ್ರೆ ಮಾಡಿಸಿರಲು,ಸಿದ್ಧರಾಮಪ್ಪ,ದುರ್ಗದ ನಿರ್ವಾಣಶೆಟ್ಟಿ, ರಾಚಪ್ಪ ಮುಂತಾದವರು ವೇಷ ಕಟ್ಟಿ, ಕರ್ತೃ ಮುರುಗೇಂದ್ರರ ಗದ್ದುಗೆಯನ್ನು ದರ್ಶನ ಮಾಡಬೇಕೆಂದು ವಂಚಿಸಿ, ಗದ್ದುಗೆಯ ಬೀಗ ತೆಗೆಸಿ ಒಳಗೆ ಸೇರಿಕೊಂಡು ರಾತ್ರೋ ರಾತ್ರಿ ಅಲ್ಲಿದ್ದ ನಗನಾಣ್ಯ ವಜ್ರ ವೈಡೂರ್ಯ ಶಿಖಾಶೈಲಗಳನ್ನು ಅಪಹರಿಸಿಕೊಂಡು ಹೋದರು.

ಈ ಸುದ್ದಿ ತಿಳಿದಕೂಡಲೇ ರಾಣಿಬೆನ್ನೂರು, ಹರಿಹರ, ಹಾವೇರಿ, ಬ್ಯಾಡಗಿ ಮುಂತಾದ ಕಡೆಗಳಿಂದ ಮಠದ ಅಭಿಮಾನಿಗಳೂ ಭಕ್ತರೂ ಬಂದು ಮಠಕ್ಕೆ ಬೆಂಬಲವಾಗಿ ನಿಂತು ಅಪರಾಧಿಗಳಲ್ಲೊಬ್ಬನಾದ ರಾಚಪ್ಪನನ್ನು ಹಿಡಿದು ಅವನಲ್ಲಿದ್ದ ಶಿಖಾಶೈಲಗಳನ್ನು ವಶಪಡಿಸಿಕೊಂಡು ಮಠಕ್ಕೆ ಒಪ್ಪಿಸಿದರು. ಆದರೆ ಕಳುವಾದ ಲಕ್ಷಾಂತರ ರೂಪಾಯಿಗಳು, ನಗ-ನಾಣ್ಯಗಳು ದೊರಕಲಿಲ್ಲ. ಇವುಗಳನ್ನು ಕದ್ದೊಯ್ದ ಸಿದ್ಧರಾಮಪ್ಪನು ಪೂನಾದಲ್ಲಿ ಮಾರಿಕೊಂಡು ಬರುತ್ತಿರುವಾಗ ದಾರಿಯಲ್ಲಿ ಕಿಲಕೇಘಾಟದ ಹತ್ತಿರ ಕುದುರೆ ಗಾಡಿ ಮುರಿದುಬಿದ್ದು ಅಪಘಾತದಲ್ಲಿ ಅವನು ಸತ್ತುಹೋದನು.

ಆದರೆ ಸ್ವಾಮಿಗಳು ಕಳೆದುಕೊಂಡಿದ್ದಕ್ಕೆ ಚಿಂತಿಸಲಿಲ್ಲ. ಭಿಕ್ಷೆಯೆತ್ತಿ ಮಠದಲ್ಲಿ ಎಂದಿನಂತೆ ತಪ್ಪದೆ ದಾಸೋಹ ನಡೆಸುತ್ತಿದ್ದರು. 1880 ರಲ್ಲಿ ಬೀರೂರಿನಲ್ಲಿಯೂ, 1881 ರಲ್ಲಿ ನ್ಯಾಮತಿಯಲ್ಲಿಯೂ ದಸರಾ ಮಹೋತ್ಸವವನ್ನು ನಡೆಸಿ ಅಲ್ಲಿ ಭಕ್ತವೃಂದ ಕೊಟ್ಟ ಕಾಣಿಕೆಯಿಂದ ಬರಿದಾಗಿದ್ದ ಬೃಹನ್ಮಠದ ಖಜಾನೆಯನ್ನು ತುಂಬಿ ಮತ್ತೆ ಅಕ್ಷಯವಾಗುವಂತೆ ಮಾಡಿದರು. ಹೀಗೆ ಜನಸೇವೆಯಲ್ಲಿ ತೊಡಗಿದ್ದ ಸ್ವಾಮಿಗಳು 1881ರಲ್ಲಿ ಶಿವೈಕ್ಯರಾದರು.

ಬ್ಯಾಡಗಿ ಮುಪ್ಪಿನ ಸ್ವಾಮಿಗಳು :
(ಪಟ್ಟ 23. ಕಾಲ ಸು. ಕ್ರಿ. ಶ. 1881-1903)

ಈ ಸ್ವಾಮಿಗಳು ಶೂನ್ಯಪೀಠದ ಪಟ್ಟಾಧ್ಯಕ್ಷರಾದ ವರ್ಷ ಬೃಹನ್ಮಠದ ಇತಿಹಾಸದಲ್ಲಿ ಅವಿಸ್ಮರಣೀಯವಾದುದು, ಅನೇಕ ಕಾರಣಗಳಿಗಾಗಿ. ಇವರು ಪಟ್ಟವಾದ ವರ್ಷವೇ 1831ರಲ್ಲಿ ಕಿತ್ತುಕೊಂಡಿದ್ದ ಮೈಸೂರಿನ ಅರಸುತನವನ್ನು ಚಾಮರಾಜ ಒಡೆಯರಿಗೆ ಮತ್ತೆ 50 ವರ್ಷಗಳ ನಂತರ ಬಿಟ್ಟುಕೊಟ್ಟು ಅವರನ್ನು ಮೈಸೂರರಸರಾಗಿ ಸಿಂಹಾಸನದಲ್ಲಿ ಕೂರಿಸಿದರು. ಇವರು ಪಟ್ಟಕ್ಕೆ ಬಂದ ವರ್ಷ ಮಾತ್ರವಲ್ಲ, ಇವರ ಜೀವನವಿಡೀ ಇಂತಹ ಮಹತ್ವಪೂರ್ಣ ಘಟನೆಗಳಿಂದಲೇ ಕೂಡಿದುದಾಗಿದೆ. ಅದೇ ಕಾಲಕ್ಕೆ ಉತ್ತರ ಭಾರತದಲ್ಲಿ ರಾಮಕೃಷ್ಣ ಪರಮಹಂಸ, ವಿವೇಕಾನಂದರ ವಾಣಿ ದೇಶದಾದ್ಯಂತ ಮೊಳಗುತ್ತಿತ್ತು. 1893 ರಲ್ಲಿ ವಿವೇಕಾನಂದರು ಚಿಕಾಗೋ ನಗರದಲ್ಲಿ ಭಾರತೀಯ ತತ್ವವನ್ನು ಸಿಂಹವಾಣಿಯಲ್ಲಿ ವಿಶ್ವಾದ್ಯಂತ ಮೊಳಗಿಸಿದರು. ಮೈಸೂರಿನ ಚಾಮರಾಜ ಒಡೆಯರು, ವಿವೇಕಾನಂದರು ಅಮೇರಿಕೆಗೆ ಹೋಗುವಾಗ ತೋರಿದ ಅಭಿಮಾನ, ಗೌರವ, ಪೂಜ್ಯಭಾವನೆಗಳನ್ನೇ ಬ್ಯಾಡಗಿ ಮುಪ್ಪಿನ ಸ್ವಾಮಿಗಳಿಗೂ ತೋರಿದರೆಂದರೆ ಅದು ಅತಿಶಯೋಕ್ತಿಯಲ್ಲ. ದೇಶೀಯವಾದ ಸರಳತೆಯೊಂದಿಗೆ ವಿದೇಶೀಯವಾದ ಯಾವುದೋ ಒಂದು ಸುಂದರ ಮೋಡಿ ಎಳೆಎಳೆಯಾಗಿ ಹಾಸಿ ಬಲೆಯಾಗಿ ಬೀಸಿತ್ತು. ಅದುದರಿಂದಲೇ ಈ ಸ್ವಾಮಿಗಳು ಮಹಾರಾಜರ ಗಮನವನ್ನು ಸೆಳೆದಂತೆ ಸಾಮಾನ್ಯ ಜನರ ಗೌರವವನ್ನು ಸೆಳೆದರು.

ಸ್ವಾಮಿಗಳು ಒಮ್ಮೆ ದಾವಣಗೆರೆಯಲ್ಲಿ ಪಲ್ಲಾಘಟ್ಟೆ ಭರಮಣ್ಣನವರ ಮನೆಯಲ್ಲಿ ಶಿವಪೂಜೆಗೆ ಹೋದಾಗ ಅವರ ಮಗು ಮರಣೋನ್ಮುಖವಾಗಿರುವುದನ್ನು ಕಂಡು ತಮ್ಮ ಪೂಜಾ ಕಾಂಡದಲ್ಲಿ ತಮ್ಮ ಜೋಳಿಗೆಯಲ್ಲಿಯೇ ಇಟ್ಟುಕೊಂಡು ಪೂಜಾ ನಿರತರಾಗಿ ಆ ಮಗುವಿನ ಪ್ರಾಣಕ್ಕಾಗಿ, ಆರೋಗ್ಯಕ್ಕಾಗಿ, ಅಭ್ಯುದಯಕ್ಕಾಗಿ ಮೊರೆಯಿಟ್ಟರು. ಮಗು ಪ್ರಾಣಾಪಾಯದಿಂದ ಪಾರಾಯಿತಂತೆ. ಒಟ್ಟಿನಲ್ಲಿ ಧರ್ಮವನ್ನು ನಂಬಿದವರಿಗೆ,ರಕ್ಷಣೆ ಒದಗಿಸಬೇಕೆಂಬುದು ಅವರ ಆಶಯವಾಗಿತ್ತು.

1903ರಲ್ಲಿ ಸ್ವಾಮಿಗಳು ದಾವಣಗೆರೆಯಲ್ಲಿ ದಸರಾ ಮಹೋತ್ಸವದ ಅಂಗವಾಗಿ ಶೂನ್ಯಸಿಂಹಾಸನಾರೋಹಣ ಸಮಾರಂಭದ ಸಂಭ್ರಮದಲ್ಲಿ ಮಗ್ನರಾಗಿದ್ದಾಗ, ಅವರ ಬಳಿಯಿದ್ದ ಶಿವಬಸವಯ್ಯನೆಂಬ ಜಂಗಮ 70-80 ಸಾವಿರ ರೂಪಾಯಿ ಬೆಲೆ ಬಾಳುವ ಆಭರಣಾದಿಗಳನ್ನು ಜಗದ್ಗುರುಗಳ ಬಿಡಾರದಿಂದ ಕದ್ದುಕೊಂಡು ಸೊಲ್ಲಾಪುರಕ್ಕೆ ಓಡಿಹೋದನು. ಆದರೂ ಸ್ವಾಮಿಗಳು ಸ್ಥಿತಪ್ರಜ್ಞೆಯನ್ನು ಕಳೆದುಕೊಳ್ಳದೆ ಸಮಾರಂಭದಲ್ಲಿ ಭಾಗವಹಿಸಿದರು.

ನಾಲ್ಮಡಿ ಕೃಷ್ಣರಾಜ ಒಡೆಯರು ತಮ್ಮ ಪಟ್ಟವಾಗುವುದಕ್ಕೆ ಮೊದಲು ಚಿತ್ರದುರ್ಗದ ಬೃಹನ್ಮಠಕ್ಕೆ ಬಂದು ಮುಪ್ಪಿನ ಸ್ವಾಮಿಗಳನ್ನು ಕಂಡು 1903 ರಲ್ಲಿ ನಡೆಯುವ ತಮ್ಮ ಪಟ್ಟಾಭಿಷೇಕೋತ್ಸವಕ್ಕೆ ದಯಮಾಡಿಸಬೇಕೆಂದು ಬಿನ್ನವಿಸಿದರು. ಅಂದಿನ ಕಾಲದ ನಿರಂಕುಶ ಪ್ರಭುಗಳು ತಮ್ಮ ತಾರುಣ್ಯದಲ್ಲಿಯೂ ಮುಪ್ಪಿನ ಸ್ವಾಮಿಗಳನ್ನು ವಿನಮ್ರತೆಯಿಂದ ಸಂಭಾವಿಸಬೇಕಾದರೆ ಅವರು ಅಂದಿನ ಸಮಾಜದಲ್ಲಿ ಎಷ್ಟು ಗಣ್ಯರೂ, ಪೂಜ್ಯರೂ ಆಗಿದ್ದರೆಂಬುದು ಸ್ಪಷ್ಟವಾಗುತ್ತದೆ.

1903ರಲ್ಲಿ ಜಗದ್ಗುರುಗಳು ಬ್ಯಾಡಗಿಯಲ್ಲಿ ಶಿವೈಕ್ಯರಾದರು. ಅಲ್ಲಿಯೇ ಅವರ ಗದ್ದುಗೆ ನಿರ್ಮಿತವಾಗಿದೆ.

ಜಯದೇವ ಸ್ವಾಮಿಗಳು :
(ಪಟ್ಟ 24- ಕಾಲ ಸು. ಕ್ರಿ. ಶ. 1903—1956)

ಗದುಗಿನ ಹತ್ತಿರದ ಬಿನ್ನಾಳ ಗ್ರಾಮದ ಬಡ ಜಂಗಮ ಕುಟುಂಬದಲ್ಲಿ ಜನಿಸಿದ ಶ್ರೀಗಳವರು, ತಂದೆ ತಾಯಿಗಳ ಹರಕೆಯಂತೆ ಗದುಗಿನ ತೋಂಟದಾರ್ಯ ಮಠದಲ್ಲಿಯೇ ಮರಿಯಾಗಿದ್ದುಕೊಂಡು ಮಾಧ್ಯಮಿಕ ಮಟ್ಟದ ವ್ಯಾಸಂಗವನ್ನು ಮುಗಿಸಿದರು. ಮುಂದೆ ಕಾಶಿಗೆ ಹೋಗಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಬೇಕೆಂಬ ಹಂಬಲ ಅತಿಯಾಗಿತ್ತು. ಆದರೆ ಅಲ್ಲಿಗೆ ಹೋಗುವಷ್ಟು ಹಣದ ಬಲ ಅವರಿಗಿರಲಿಲ್ಲ. ಆದರೆ ವಿದ್ಯಾಭ್ಯಾಸ ಮಾಡಬೇಕೆಂಬ ಬಯಕೆ ಬಲವತ್ತರವಾಗಿದ್ದ ಪ್ರಯುಕ್ತ ಕಾಲಿಗೆ ಬುದ್ಧಿಕೊಟ್ಟು ಬರಿಗೈಯಲ್ಲಿಯೇ ಕಾಶಿಯನ್ನು ಸೇರಿದರು. ಅಲ್ಲಿನ ಪ್ರಕಾಂಡ ವಿದ್ವಾಂಸರ ನೇತೃತ್ವದಲ್ಲಿ [illegible]

ಅಷ್ಟು ಹೊತ್ತಿಗೆ ಚಿತ್ರದುರ್ಗದ ಶೂನ್ಯಪೀಠದ ಅಧಿಕಾರಿಗಳಾಗಿದ್ದ ಬ್ಯಾಡಗಿ ಮುಪ್ಪಿನ ಸ್ವಾಮಿಗಳು ಶಿವೈಕ್ಯರಾದ ಪ್ರಯುಕ್ತ ಆ ಪೀಠಕ್ಕೆ ಅಧಿಪತಿಗಳನ್ನಾಗಿ ಮಾಡುವ ವಿಷಯದಲ್ಲಿ ಸಾಕಷ್ಟು ಪೈಪೋಟಿ ನಡೆದಿತ್ತು. ಆಗ್ಗೆ ವೀರಶೈವ ಸಮಾಜದ ಧುರೀಣರೂ, ದಾನಿಗಳೂ ಎನಿಸಿದ್ದ ವಾರದ ಮಲ್ಲಪ್ಪನವರ ಮಧ್ಯಸ್ಥಿಕೆ, ಅಥಣಿ ಶಿವಯೋಗಿಗಳ ಅನುಗ್ರಹಗಳ ಫಲವಾಗಿ ಜಯದೇವ ಸ್ವಾಮಿಗಳಿಗೆ ಚಿತ್ರದುರ್ಗದ ಶೂನ್ಯಪೀಠದ ಅಧಿಕಾರ ಲಭಿಸಿತು.

ಪಟ್ಟಾಧಿಕಾರಿಗಳಾದಮೇಲೆ ಜಯದೇವ ಸ್ವಾಮಿಗಳು ಅನೇಕ ಆರ್ಥಿಕ ಕಾರ್ಯಕ್ರಮಗಳನ್ನು ರೂಪಿಸಿಕೊಂಡರು. ಆದರೆ ಹಿಂದಿನ ಇಬ್ಬರು ಸ್ವಾಮಿಗಳು ತೀರ ಸಾತ್ವಿಕರೂ, ಅಧ್ಯಾತ್ಮವಾದಿಗಳೂ ಆದುದರ ಫಲವಾಗಿ ಮಠದಲ್ಲಿದ್ದ ಐಶ್ವರ್ಯವೆಲ್ಲ ಸೋರಿಹೋದುದನ್ನು ಹಿಂದೆ ನೋಡಿದ್ದೇವೆ. ಆದರೂ ಧೈರ್ಯಗೆಡದೆ ಹುಟ್ಟಿನಿಂದಲೂ ಕಷ್ಟದಲ್ಲಿ ಬೆಳೆದ, ಅದರೆ ಅಧ್ಯವಸಾಯಿಗಳಾದ ಸ್ವಾಮಿಗಳಿಗೆ ಈ ಆರ್ಥಿಕ ತೊಂದರೆ ತೊಂದರೆಯಾಗಿ ಕಾಣಲಿಲ್ಲ. ಮನಸ್ಸಿದ್ದಲ್ಲಿ ಮಾರ್ಗವಿದೆ; ಕಷ್ಟಪಟ್ಟರೆ ಫಲವುಂಟು ಎಂಬ ಪುರುಷ ಪ್ರಯತ್ನದಲ್ಲಿಯೂ ಅತೀವ ನಂಬಿಕೆಯನ್ನಿಟ್ಟಿದ್ದ ಸ್ವಾಮಿಗಳು ಅಗಾಧವಾದ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು.

ಕಾರ್ಯೋನ್ಮುಖರಾಗಬೇಕು, ಅಷ್ಟರಲ್ಲಿ ಸ್ವಾಮಿಗಳಿಗೆ ಪಟ್ಟವಾದ ವರುಷವೇ ಗಾಯವಾಗಿ ಬಹಳ ನೋವು ಕೊಟ್ಟಿತು. ನೋವಿನಿಂದ ನರಳುತ್ತಿರುವಾಗ ಆದಿ ಕರ್ತೃಗಳಾದ ಮುರಿಗೇಂದ್ರ ರಾಜೇಂದ್ರರು ಜಯದೇವ ಜಗದ್ಗುರುಗಳ ಕನಸಿನಲ್ಲಿ ಕಾಣಿಸಿಕೊಂಡು "ಸುತ್ತು-ಕಟ್ಟು" ಎಂದು ಎರಡು ಸಾರಿ ಹೇಳಿ ಮಾಯವಾದರಂತೆ. ಅದರಂತೆ ಜಗದ್ಗುರುಗಳು ಗಾಯಕ್ಕೆ ಮಂತ್ರದ ಪಟ್ಟ ಸುತ್ತಿ ಕಟ್ಟಿದರು. ಗಾಯ ವಾಸಿಯಾಯಿತು. ಊರೂರು ಸುತ್ತಿ ಹಣವನ್ನು ಸಂಗ್ರಹಿಸಿದರು, ಮಠದ ಖಜಾನೆ ತುಂಬಿತು.

ಸಾರ್ವಜನಿಕರಿಂದ ಸಂಗ್ರಹಿಸಿದ ಹಣ ವ್ಯರ್ಥ ಸವೆಯಲಾಗದು. ಅದು ಸಮಾಜದ ಮುನ್ನಡೆಗೆ ವಿನಿಯೋಗವಾಗಬೇಕು, ಒಂದು ಚಿಕ್ಕಾಸೂ ಅಪವ್ಯಯವಾಗದಂತೆ ಜಗದ್ಗುರುಗಳು ನೋಡಿಕೊಳ್ಳುತ್ತಿದ್ದರು. ಒಮ್ಮೆ ಅವರಿಗೆ ಜನ್ಮವಿತ್ತ ತಾಯಿ ತಮ್ಮ ದಿವ್ಯ ಪುರುಷನನ್ನು ಕಣ್ಣಾರೆ ನೋಡಿ ಧನ್ಯರಾಗಬೇಕೆಂದು ಬಂದಾಗ ಸ್ವಾಮಿಗಳಿಗೆ ಕ್ಷಣಕಾಲ ಕಂಠ ತುಂಬಿ ಬಂದರೂ ತಡೆದುಕೊಂಡು, "ಪ್ರಸಾದ ಸ್ವೀಕರಿಸಿ ಹೋಗಿ,"ಎಂದು ಹೇಳಿದರಂತೆ. ಆಗ ಚರಮೂರ್ತಿಗಳು ಹೋಗುವಾಗ ಅವರಿಗೆ ಒಂದು ಸೀರೆ-ಕಣ ಕೊಟ್ಟು ಕಳುಹಿಸಿದರಂತೆ. ಸ್ವಾಮಿಗಳು ಮಠದ ಲೆಕ್ಕವನ್ನು ಪರಿಶೀಲಿಸುವಾಗ ಅದನ್ನು ಕಂಡು ಅದನ್ನು ಕೊಟ್ಟವರಿಂದಲೇ ವಸೂಲಿ ಮಾಡಿಸಿ ಲೆಕ್ಕಕ್ಕೆ ಸೇರಿಸಿದರಂತೆ. ಇಷ್ಟೊಂದು ಎಚ್ಚರಿಕೆಯಿಂದ ಗುರುಗಳು ಭಕ್ತವೃಂದದ ಹಣ ಅಪವ್ಯಯವಾಗದಂತೆ ನೋಡಿಕೊಳ್ಳುತ್ತಿದ್ದರು.

ಜಗದ್ಗುರುಗಳು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಅವುಗಳನ್ನು ಕಾರ್ಯಗತಗೊಳಿಸುತ್ತಿದ್ದರು. ಅವುಗಳಲ್ಲಿ ಅತ್ಯಂತ ಮುಖ್ಯವಾದವುಗಳೆಂದರೆ ಧರ್ಮಪ್ರಸಾರ ಮತ್ತು ವಿದ್ಯಾಪ್ರಸಾರ. ಜನತೆಯಲ್ಲಿ ಅರಿವು ಮೂಡಿಸಲಿಕ್ಕೆ ವಿದ್ಯೆ, ಪುನೀತರಾಗುವುದಕ್ಕೆ ಧರ್ಮ ಇವೆರಡೂ ಎರಡು ಕಣ್ಣುಗಳಿದ್ದಂತೆ. ಈ ಅತಿ ಮುಖ್ಯವಾದ

ಕಾರ್ಯಗಳನ್ನು ಬಹು ವ್ಯಾಪಕವಾಗಿ ಮಾಡಿದ್ದ ಜಯದೇವ ಜಗದ್ಗುರುಗಳ ಮಹಾ ಸಿದ್ಧಿಯೆಂದೇ ಹೇಳಬೇಕು. ಆದರಲ್ಲೂ ವೀರಶೈವ ಜನಾಂಗ ತಾನಿರುವವರೆಗೂ ಈ ಕಾರ್ಯಗಳಿಗಾಗಿ ಅವರಿಗೆ ಋಣಿಯಾಗಿರಬೇಕು. ಒಂದು ಕಡೆ ಮೈಸೂರಿನಲ್ಲಿ ನಾಲ್ಮಡಿ ಕೃಷ್ಣರಾಜ ಒಡೆಯರು ಪಟ್ಟಾಭಿಷಿಕ್ತರಾಗಿ ರಾಜಕೀಯವಾಗಿ ಮೈಸೂರು ಪ್ರಾಂತದ ಜನಮನದಲ್ಲಿ ಉಳಿದರೆ,ಇನ್ನೊಂದುಕಡೆ ಜಗದ್ಗುರು ಜಯದೇವ ಸ್ವಾಮಿಗಳು ಸಮಸ್ತ ಕರ್ನಾಟಕದ ಜನಮನದ ಸಿಂಹಾಸನದಲ್ಲಿ ಧಾರ್ಮಿಕ ಚಕ್ರವರ್ತಿಗಳಾಗಿ ಏಕ ಕಾಲದಲ್ಲಿ ಕಂಗೊಳಿಸಿದರೆಂದರೆ ಅದು ಹೆಚ್ಚಿನ ಮಾತಲ್ಲ.

ಬಡತನದಲ್ಲಿ ವಿದ್ಯಾಭ್ಯಾಸ ಮಾಡಿ ಕಷ್ಟಪಟ್ಟಿದ್ದ ಸ್ವಾಮಿಗಳಿಗೆ ತಮ್ಮಂತೆಯೇ ಮುಂದಿನ ವಿದ್ಯಾರ್ಥಿಗಳು ಕನಲಬಾರದು ಎಂದು ಬಯಸಿ ಅನೇಕ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿದರು. ಎಲ್ಲ ಧರ್ಮಗಳಿಗೂ ಅವರು ಮುಸಲ್ಮಾನರಾಗಲೀ, ಬ್ರಾಹ್ಮಣರಾಗಲೀ, ಹರಿಜನರಾಗಲೀ, ಎಲ್ಲರಿಗೂ, ಕೇಳಿದವರಿಗೆಲ್ಲ ತಾರತಮ್ಯ ಭಾವವಿಲ್ಲದೆ ದಾನ ಮಾಡಿದರು. ಅವರ ಕಾಲಕ್ಕೆ ವಿದ್ಯಾ ಪ್ರಸಾರಕ್ಕಾಗಿ ಆರೋಗ್ಯ ಭವನಕ್ಕಾಗಿ ಸುಮಾರು 50 ಲಕ್ಷದಷ್ಟು ಹಣವನ್ನು ದಾನವಾಗಿ ಕೊಟ್ಟಿದ್ದರಿಂದ ಮೇಲೆ ಇವರ ಕಾರ್ಯವ್ಯಾಪ್ತಿಯನ್ನೂ ಅದನ್ನು ಆಗುಗೊಳಿಸಿದ ಕ್ರಿಯಾಶಕ್ತಿಯನ್ನು ಯಾರೂ ಮನಗಾಣಬಹುದು. ಧಾರವಾಡ, ಕೊಲ್ಲಾಪುರ, ಸಾಂಗ್ಲಿ, ದೌಂಡ್, ಸತಾರ, ನಿಪ್ಪಾಣಿ, ಕೊಲ್ಲಾಪುರ, ಅಥಣಿ, ಬಾಗಲಕೋಟೆ, ಬೆಂಗಳೂರು, ತುಮಕೂರು.ದಾವಣಗೆರೆ, ತಿಪಟೂರು,ಮೈಸೂರು, ಕಾಶಿ ಮುಂತಾದ ಕಡೆ ಇವರು ಸ್ಥಾಪಿಸಿದ ಪ್ರಸಾದ ನಿಲಯಗಳು,ಗ್ರಂಥ ಭಂಡಾರಗಳು, ಮಹಿಳಾ ಸಮಾಜಗಳು, ಆಸ್ಪತ್ರೆಗಳು ಇಂದಿಗೂ ಅವರ ಹೆಸರು ಹೇಳುತ್ತಿವೆ.

1934 ರಲ್ಲಿ ಮಹಾಸ್ವಾಮಿಗಳು ಹಾವೇರಿಯಲ್ಲಿದ್ದಾಗ, ಮಹಾತ್ಮ ಗಾಂಧಿಯವರು ಕರ್ನಾಟಕದ ಪ್ರವಾಸವನ್ನು ಕೈಗೊಂಡಿದ್ದಾಗ ಹಾವೇರಿಯ ಹೊಸ ಮಠದಲ್ಲಿ ಗಾಂಧೀಜಿ ಮತ್ತು ಸ್ವಾಮೀಜಿಯವರ ಸಮಾಗಮವಾಗಿ ಅವರಿಬ್ಬರ ಮಧ್ಯೆ ಹಲವಾರು ರಚನಾತ್ಮಕ ವಿಷಯಗಳ ಬಗ್ಗೆ ಚರ್ಚೆ ನಡೆಯಿತು. ಗಾಂಧೀ ವಾದವನ್ನು ಸರಿಯೆಂದು ಒಪ್ಪಿ ಸ್ವತಃ ಖಾದಿಧಾರಿಗಳಾಗಿ ಮೊದಲ ವಿಶ್ವ ಮಹಾಯುದ್ಧದ ಸಂದರ್ಭದಲ್ಲಿ ಭಾರತ ಸರ್ಕಾರಕ್ಕೆ ಸ್ವತಃ ಮಠದಿಂದ ಅಪಾರವಾದ ಸಹಾಯವನ್ನು ಮಾಡಿದುದಲ್ಲದೆ ತಮ್ಮ ಭಕ್ತರಿಂದಲೂ ಸಹಾಯ ಮಾಡಿಸುವುದರ ಮೂಲಕ ರಾಷ್ಟ್ರ ಸುಧಾರಣೆಯಲ್ಲಿಯೂ ಅತ್ಯಂತ ಆಸಕ್ತಿಯಿಂದ ಪಾಲ್ಗೊಂಡು ಅದಕ್ಕಾಗಿ ದುಡಿದರು.

1937 ನೆಯ ಇಸವಿಯಲ್ಲಿ ನಾಲ್ಮಡಿ ಕೃಷ್ಣರಾಜ ಒಡೆಯರು ಮಹಾಸ್ವಾಮಿಗಳವರ ದರ್ಶನಕ್ಕೆಂದು ಚಿತ್ರದುರ್ಗದ ಬೃಹನ್ಮಠಕ್ಕೆ ಬಂದಿದ್ದಾಗ ಅವರ ಜೊತೆಯಲ್ಲಿ ಬಂದಿದ್ದ ದಿವಾನ್ ಮಿರ್ಜಾ ಸಾಹೇಬರ ಪ್ರಾರ್ಥನೆಯಂತೆ ಮೈಸೂರಿನಲ್ಲಿ ಕಟ್ಟಲು ಏರ್ಪಾಟಾಗಿದ್ದ ರೋಗ ನಿದಾನ ಚಿಕಿತ್ಸಾಲಯಕ್ಕೆ 40 ಸಾವಿರ ರೂಪಾಯಿಗಳನ್ನು ಉದಾರ ಮನಸ್ಸಿನಿಂದ ದಾನ ಮಾಡಿದರು. ಆ ಕಟ್ಟಡದ ಶಂಖುಸ್ಥಾಪನೆಯ ಸಮಾರಂಭದ ಸಂದರ್ಭದಲ್ಲಿ ಜಗದ್ಗುರುಗಳಿಗೆ ಅರ್ಪಿಸಿದ ಬಿನ್ನವತ್ತಳಿಗೆ ಉತ್ತರವಾಗಿ, 'ಇದು ಸಮಾಜದ ಹಣ, ಸಮಾಜ ಸೇವಾ ಕಾರ್ಯಕ್ಕೆ ಆ ನಿಧಿಯನ್ನು ಅರ್ಪಿಸುವುದು ನಮ್ಮ ಕರ್ತವ್ಯ, ಹೀಗಿರುವಾಗ ನಮ್ಮನ್ನು ಹೊಗಳಿ ಹೊನ್ನಶೂಲಕ್ಕೆ ಹಾಕಿದ್ದೀರಿ' ಎಂದು ಹೇಳಿರುವ ಮಾತು ಜಗದ್ಗುರುಗಳ ದೃಷ್ಟಿಕೋನ, ಕರ್ತವ್ಯನಿಷ್ಠೆ, ಪರೋಪಕಾರ ಬುದ್ಧಿಯ ಸಂಕೇತವಾಗಿದೆ.

ಅಖಿಲ ಕರ್ನಾಟಕ 7ನೇ ಏಕೀಕರಣ ಪರಿಷತ್ತನ್ನು ಉದ್ಘಾಟಿಸುತ್ತ ಕರ್ನಾಟಕದ ಏಕೀಕರಣ ಪರಸ್ಪರ ಅರಿವು-ಪ್ರೇಮದ ಸಂಕೇತ, ನಾಡು-ನುಡಿಗಳ ಬೆಳವಣಿಗೆಗೆ ಹಾದಿ ಎಂದು ಮುಂತಾಗಿ ಮಾಡಿದ ಅವರ ಭಾಷಣ ಜಗದ್ಗುರುಗಳಿಗೆ ನಾಡು-ನುಡಿ-ಸಂಸ್ಕೃತಿಗಳ ಬೆಳವಣಿಗೆಯ ಬಗೆಗೆ ಇದ್ದ ಗೌರವ-ಅಭಿಮಾನಗಳನ್ನು ಸೂಚಿಸುತ್ತದೆ.

ಹೀಗೆ ಜಗದ್ಗುರು ಜಯದೇವ ಸ್ವಾಮಿಗಳು ಭಟ್ಟಂಗಿಗಳ ಹೊಗಳಿಕೆಗಳಿಗೆ ಮನಸ್ಸು ಕೊಟ್ಟು ಮರುಳಾಗದೆ ಕರ್ಮಯೋಗಿಗಳಾಗಿ ಸ್ವತಂತ್ರ ಭಾರತ ನಿರ್ಮಾಣ, ಕರ್ನಾಟಕ ಏಕೀಕರಣ, ಅಸ್ಪೃಶ್ಯತಾ ನಿವಾರಣೆ, ಜಾತ್ಯತೀತ ಸಮಾಜ ಕಲ್ಪನೆ, ವಿದ್ಯಾಭ್ಯಾಸ ವ್ಯವಸ್ಥೆ, ಪ್ರಸಾದ ನಿಲಯಗಳ ನಿರ್ಮಾಣ ಮುಂತಾದ ರಚನಾತ್ಮಕ ಕಾರ್ಯಗಳನ್ನು ಆಗುಮಾಡುತ್ತಲೇ ಆಧ್ಯಾತ್ಮಿಕ ಸಿದ್ಧಿಯನ್ನು ಗಳಿಸಿಕೊಂಡು ಜನತಾ ಸೇವೆಯಲ್ಲಿ ತಮ್ಮ ದೇಹವನ್ನು ತೇಯುತ್ತ ಜನತಾ ಜನಾರ್ಧನರಾಗಿ 1956ರಲ್ಲಿ ಬಯಲಾದರು. ಅವರ ಸಮಾಧಿ ದಾವಣಗೆರೆಯಲ್ಲಿ ಕಂಗೊಳಿಸುತ್ತಿದ್ದು ಸಹಸ್ರಾರು ಭಕ್ತರನ್ನು ಆಕರ್ಷಿಸುತ್ತ ಅದೊಂದು ಯಾತ್ರಾಸ್ಥಳವಾಗಿ ಪರಿಣಮಿಸಿದೆ.

ಜಯ ವಿಭವ ಸ್ವಾಮಿಗಳು :
(ಪಟ್ಟ 25. ಕಾಲ ಸು. ಕ್ರಿ. ಶ. 1949—1964)

ಮುಳುಗುಂದದ ಶ್ರೀ ಶಿವಲಿಂಗ ಮರಿದೇವರು ಚಿಕ್ಕವರಿದ್ದಾಗಲೇ ಜಯದೇವ ಜಗದ್ಗುರುಗಳ ಕೃಪಾದೃಷ್ಟಿಗೆ ಬಿದ್ದು, ಅವರ ಸಹಾಯ ಪ್ರೋತ್ಸಾಹಗಳಿಂದ ಕಾಶಿಯಲ್ಲಿ ವಿದ್ಯಾಭ್ಯಾಸ ಮುಗಿಸಿ ಬಂದ ಮೇಲೆ ತಮ್ಮ ಬಳಿಯಲ್ಲಿಯೇ ಅವರನ್ನು ಇಟ್ಟುಕೊಂಡು ತಾವಿನ್ನು ಜೀವಂತವಿರುವಾಗಲೇ ಇವರಿಗೆ ಉತ್ತರಾಧಿಕಾರವನ್ನು ವಹಿಸಿಕೊಟ್ಟು 'ಜಯವಿಭವ' ಎಂದು ಆಶೀರ್ವದಿಸಿದರು. ತಾವು ಹಮ್ಮಿಕೊಂಡಿದ್ದ, ಆದರೆ ಇನ್ನೂ ಈಡೇರದೇ ಇದ್ದ ಹಲವಾರು ಯೋಜನೆಗಳು ಇವರಿಂದ ಈಡೇರಿಯಾವು ಎಂಬ ಆಶೆಯನ್ನಿಟ್ಟುಕೊಂಡು ತರಬೇತಿ ಕೊಡುತ್ತಿದ್ದರು. ಜಗದ್ಗುರುಗಳ ಹರಕೆ—ಆಶೀರ್ವಾದಗಳನ್ನು ಹೊತ್ತ ಜಯವಿಭವ ಸ್ವಾಮಿಗಳು ಅವರ ಕೃಪಾಪಾತ್ರರಾಗಿ ತಮ್ಮ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದರು.

1956ರಲ್ಲಿ ಜಗದ್ಗುರುಗಳು ಶಿವೈಕ್ಯರಾದಾಗ ಸ್ವತಂತ್ರನಾದೆನೆಂದು ಅಹಂಕರಿಸದೆ, ಮಹಾ ಮಾರ್ಗದರ್ಶಿಗಳು ಇಲ್ಲವಾದರಲ್ಲಾ, ಏಕಾಂಗಿಯಾಗಿಬಿಟ್ಟೆನಲ್ಲಾ ಎಂದು ಚಿಂತಿಸಿದರು. ವೈರಾಗ್ಯದ ಪ್ರತಿಮೂರ್ತಿ, ವಿಷಯ ತ್ಯಾಗಿ, ಆಡಂಬರ ದ್ವೇಷಿಗಳಾದ ಸರಳ ಹೃದಯಿ ಜಯ ವಿಭವ ಸ್ವಾಮಿಗಳು ಮಠದ ಶ್ರೀ ಪರಂಪರೆಗೆ ಕಿಂಚಿತ್ತು

ಊನ ಬರದ ರೀತಿಯಲ್ಲಿ ಎಲ್ಲವನ್ನೂ ಸಾಂಗವಾಗಿ ನಡೆಸಿಕೊಂಡು ಬರುತ್ತಿದ್ದರು.

1962ರಲ್ಲಿ ಹಿಂದೀ-ಚೀನಿ ಭಾಯ-ಭಾಯ್ ಎಂದು ಕೂಗುತ್ತಿದ್ದ ಹಳದೀ ಬಣ್ಣದ ಚೀನೀಯರು ಭಾರತವನ್ನು ಬೆನ್ನಿನಲ್ಲಿ ಇರಿದಾಗ ಉದ್ವೇಗಗೊಂಡ ಸ್ವಾಮಿಗಳು ತಾವು ಧರಿಸಿದ್ದ ಚಿನ್ನದ ಕಿರೀಟ, ಕೈಬೆರಳ ಉಂಗುರುಗಳ ಜೊತೆಗೆ ಸಾವಿರಾರು ರೂಪಾಯಿಗಳನ್ನು ರಾಷ್ಟ್ರ ರಕ್ಷಣಾ ನಿಧಿಗೆ ಸಮರ್ಪಿಸಿದ್ದು ಅವರ ಧೋರಣೆಯೇನೆಂಬುದನ್ನು ಸ್ಪಷ್ಟಪಡಿಸುತ್ತದೆ. ಇಷ್ಟೇ ಅಲ್ಲದೆ ದೀನ ದಲಿತರಿಗೆ ಕೊಡುಗೈ ದೊರೆಗಳಾಗಿ, ಅರ್ಥಿಗಳಿಗೆ ಕಲ್ಪವೃಕ್ಷವಾಗಿ ಸಮಾಜದ ಉನ್ನತಿಯೇ ಉಸಿರಾಗಿ ಬಾಳಿದರು. ಶೂನ್ಯಪೀಠದ ಸಮುದಾಯ ಸಂಸ್ಥೆಗಳನ್ನು ನಾಡಿನೆಲ್ಲೆಡೆಗಳಲ್ಲಿ ಕಂಗೊಳಿಸುವಂತೆ ಮಾಡಿದರು.

ಮಲ್ಲಿಕಾರ್ಜುನ ಸ್ವಾಮಿಗಳು :
(ಪಟ್ಟ 26. ಕಾಲ ಕ್ರಿ. ಶ. 1964)

ಚಿತ್ರದುರ್ಗದ ಶೂನ್ಯಸಿಂಹಾಸನದ ಪರಂಪರೆಯಲ್ಲಿ ಆಗಿ ಹೋದ ಮಹಾ ದಿವ್ಯ ಚೈತನ್ಯಗಳನ್ನು ಒಮ್ಮೆ ಸಿಂಹಾವಲೋಕನ ದೃಷ್ಟಿಯಿಂದ ನೋಡಿದಾಗ ಬೆರಳು ಮೂಗಿನ ಮೇಲೆ ನಿಲ್ಲುತ್ತದೆ, ತಲೆದೂಗಿ ಬರುತ್ತದೆ, ಬುದ್ಧಿ ತತ್ತರಿಸುತ್ತದೆ. ಆಧ್ಯಾತ್ಮ ಸಿದ್ಧಿ ಬೇಕೆ, ಷಟ್ಸ್ಥಲ ಜ್ಞಾನ ಮೇರುಗಳು ಬೇಕೆ, ಸಮಾಜ ಸುಧಾರಕರು ಬೇಕೆ, ಕವಿಗಳು ಬೇಕೆ, ವಿದ್ವಾಂಸರು ಬೇಕೆ, ಶಿವಯೋಗಿಗಳು ಬೇಕೆ, ಎಲ್ಲ ರೀತಿಯ ಮಹಾ ಚೇತನಗಳನ್ನೇ ಕೂಡಿ ಮೈಗೂಡಿಸಿಕೊಂಡು ಜ್ವಲಂತ ಇತಿಹಾಸವನ್ನು ಸೃಷ್ಟಿಸಿಕೊಂಡು ಬಂದಿದೆ ಈ ಉಜ್ವಲವಾದ ಶೂನ್ಯಸಿಂಹಾಸನ ಪರಂಪರೆ. ಇಂಥ ಮಹಾ ಮೇರು ಸದೃಶವಾದ ಸಿಂಹಾಸನ ಪರಂಪರೆಯಲ್ಲಿ ಶೂನ್ಯ ಪೀಠದ ಅಧ್ಯಕ್ಷರಾಗ ಬಯಸುವವರಿಗೆ ಎಂಟೆದೆ ಬೇಕು; ಆತ್ಮಶಕ್ತಿ ಬೇಕು; ಧೀ ಶಕ್ತಿ ಬೇಕು. ಈ ಶಕ್ತಿತ್ರಯಗಳನ್ನು ಮೈಗೂಡಿಸಿಕೊಂಡು ಈ ಜ್ಯೋತಿರ್ಮಾನವಾದ ಚಿತ್ಪ್ರಭೆಯಿಂದ ಕೂಡಿದ ಸಿಂಹಾಸನದ ಇಪ್ಪತ್ತಾರನೆಯ ಪಟ್ಟಾಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು, ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು 1964 ರಲ್ಲಿ.

ಬಿಜಾಪುರ ಜಿಲ್ಲೆಯ ಜಮಖಂಡಿ ತಾಲೂಕಿನ ಕಾಜಿಬಿಳಗಿಯಲ್ಲಿ ಜನ್ಮವೆತ್ತಿದ ಶ್ರೀಗಳು ಎಳೆಯ ವಯಸ್ಸಿನಲ್ಲಿಯೇ ಅಥಣಿ ಗಚ್ಚಿನ ಮಠದ ಶ್ರೀ ಸಿದ್ಧಲಿಂಗ ಸ್ವಾಮಿಗಳ ಕೃಪಾದೃಷ್ಟಿಗೆ ಬಿದ್ದರು. ಅಲ್ಲಿಯೇ ಜಗದ್ಗುರು ಜಯದೇವ ಸ್ವಾಮಿಗಳ ದೃಷ್ಟಿಗೆ ಬಿದ್ದು ಅವರ ಹಸ್ತದಿಂದಲೇ ಕಾವಿಯ ಕಪಿನಿಯನ್ನು ಧರಿಸಿಕೊಂಡರಂತೆ. ಜ್ಞಾನ ಪಿಪಾಸುಗಳಾದ ಮಹಾಸ್ವಾಮಿಗಳು ಕೂಡಲೇ ಕಾಶಿಗೆ ದಯಮಾಡಿಸಿ ವ್ಯಾಕರಣ, ವೇದಾಂತ, ಸಾಹಿತ್ಯಗಳಲ್ಲಿ ಅಗಾಧ ಪಾಂಡಿತ್ಯವನ್ನು ಗಳಿಸಿಕೊಂಡು ಹಿಂತಿರುಗಿ ಬಂದ ಕೂಡಲೇ ಜಗದ್ಗುರು ಜಯದೇವ ಸ್ವಾಮಿಗಳು ಅವರ ವಿದ್ಯೆ–ವಿನಯಗಳನ್ನು ಕಂಡು ಸಮಾಜ ಸೇವಾ ಕಾರ್ಯದಲ್ಲಿ ನಿಯೋಜಿಸಿದರು. ಶಿವಭಕ್ತನ ದೇಹ ವೃಥಾ ಸವೆಯಲಾಗದು, ಜಂಗಮ ಸೇವೆಯಲ್ಲಿ ಸವೆಯಬೇಕು. ಅದರಂತೆ ಶ್ರೀಗಳವರು ತಿಪಟೂರಿನ ವೀರಶೈವಾನಂದಾಶ್ರಮ, ದಾವಣಗೆರೆಯ ವಿರಕ್ತ ಮಠಗಳಲ್ಲಿ ತೋರಿದ ಉತ್ಸಾಹ, ದಕ್ಷತೆಗಳನ್ನು ಕಂಡು ಮೆಚ್ಚಿದ ಜಯದೇವ ಸ್ವಾಮಿಗಳು ದಾವಣಗೆರೆಯ ಮಠಾಧ್ಯಕ್ಷರನ್ನಾಗಿ ಮಾಡಿ ಆಶೀರ್ವದಿಸಿದರು. 1946 ರಿಂದ 1954ರವರೆಗೆ 18ವರ್ಷಗಳ ಕಾಲ ಅಲ್ಲಿನ ಮಠಾಧ್ಯಕ್ಷರಾಗಿದ್ದು ಅನುಭವದಿಂದ ಹದವಾಗಿ ಪಳಗಿದ ಮಾಗಿದ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದರು.

1964ರಲ್ಲಿ ಜಯವಿಭವ ಸ್ವಾಮಿಗಳು ಶಿವೈಕ್ಯರಾದಾಗ ಶೂನ್ಯ ಪೀಠಕ್ಕೆ ತಕ್ಕವರು ಯಾರೆಂದು ಹುಡುಕುವಾಗ ಈ ದಿವ್ಯ ಶಕ್ತಿಯು ಅವತಾರವಾಯಿತು, ಪ್ರಶಸ್ತವಾದ ಮುಹೂರ್ತದಲ್ಲಿ ಶೂನ್ಯ ಪೀಠದಲ್ಲಿ ಪಟ್ಟಾಭಿಷೇಕವಾಯಿತು. ತಾವು ಈ ಅಧಿಕಾರವನ್ನು ಕೈಗೆ ತೆಗೆದುಕೊಂಡಂದಿನಿಂದ ನಿರಂತರವಾಗಿ ಈ ಮಠದ ದಿವ್ಯ ಶಕ್ತಿ ಅನೇಕ ಮಹಾ ಶಕ್ತಿಗಳ ದಿವ್ಯ ಪ್ರಭೆಯಲ್ಲಿ ಮಿಂದು ನಾನಾ ರೂಪಗಳಲ್ಲಿ ಪ್ರವಹಿಸುತ್ತ ಸಮಾಜ ಸೇವೆಯನ್ನು ಮಾಡುತ್ತಿದೆ.

ಜಯದೇವ ಜಗದ್ಗುರುಗಳಂತೆಯೇ ಮಲ್ಲಿಕಾರ್ಜುನ ಮಹಾಸ್ವಾಮಿಗಳ ಶಕ್ತಿಯೂ ಅತ್ಯಂತ ಕ್ರಿಯಾತ್ಮಕವಾದುದು, ರಚನಾತ್ಮಕವಾದುದು. ಹಿಡಿದ ಕೆಲಸವನ್ನು ಏನೇ ಆಗಲಿ, ಎಷ್ಟೇ ಕಷ್ಟವಾಗಲೀ ಮಾಡಿಯೇತೀರಬೇಕೆಂಬ, ಮಾಡಿ ಮುಗಿಸುವ ಚೇತನ ಇದು. ಹಿಂದಿನಿಂದ ನಡೆದುಬಂದ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿರುವುದೇ ಅಲ್ಲದೆ, ಹೊಸಹೊಸ ಕಾರ್ಯಕ್ಷೇತ್ರಗಳ ಕ್ಷಿತಿಜಗಳನ್ನು ವಿಸ್ತರಿಸುತ್ತಲೇ ಬರುತ್ತಿದ್ದಾರೆ. ಷಟ್ಸ್ಥಲ ಧರ್ಮದ ಬೋಧೆ ಪ್ರಚಾರಗಳು ವಾಣಿ ರೂಪದಲ್ಲಿ ಮಾತ್ರವಾದರೆ ಸಾಲದು, ಅವು ಸ್ಥಿರವಾಗಿ ಉಳಿಯಬೇಕಾದರೆ, ಮುಂದಿನ ಪೀಳಿಗೆಗಳು ಅವುಗಳ ಅಧ್ಯಯನ ಮಾಡಬೇಕಾದರೆ ಅವು ಅಚ್ಚಾಗಿ ಗ್ರಂಥ ರೂಪದಲ್ಲಿ ಪ್ರಕಟವಾದಾಗಲೇ. ಈ ದೃಷ್ಟಿಯಿಂದ ಕನ್ನಡ-ಸಂಸ್ಕೃತ ಗ್ರಂಥಗಳ ಪ್ರಕಟನೆಗಾಗಿ ಒಂದು 'ಗ್ರಂಥ ಪ್ರಕಟನ' ಶಾಖೆಯನ್ನು ತೆರೆದು ಅದರ ಮೂಲಕ ಅಮೂಲ್ಯ ಗ್ರಂಥಗಳನ್ನು ಮೊದಲ ಬಾರಿಗೆ ಪ್ರಕಟಿಸುವ ಸ್ತುತ್ಯ ಕಾರ್ಯವನ್ನು ಮಾಡುತ್ತಿದ್ದಾರೆ. ಶೂನ್ಯ ಸಂಪಾದನೆಗಳಲ್ಲಿ ಮುಖ್ಯವಾದ ಮಹಾದೇವಯ್ಯ ಶೂನ್ಯ ಸಂಪಾದನೆ ಗ್ರಂಥ ಮೊದಲಬಾರಿಗೆ ಪ್ರಕಟವಾದುದು ಈ ರೀತಿಯಿಂದಲೇ.

ಮಹಾ ಶ್ರೀಗಳವರು ಮಾಡಿದ ಅತ್ಯಂತ ಮಹತ್ವಪೂರ್ಣವಾದ, ಶಾಶ್ವತ ಕೀರ್ತಿಯನ್ನು ತರುವ ಒಂದು ಶ್ರೇಷ್ಠ ಕಾರ್ಯವೆಂದರೆ 800 ವರ್ಷಗಳಿಂದ ಸತತವಾಗಿ ಹರಿದುಬಂದಿರುವ ಮಾನವ ಕಲ್ಯಾಣ ಮಾರ್ಗದರ್ಶಿಗಳಾದ ಶಿವಶರಣರ ವಚನಗಳನ್ನು ಹಿಂದಿಗೆ ಅನುವಾದಿಸಲು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಉದಾರವಾಗಿ ಮಾಡಿದ ಒಂದು ಲಕ್ಷ ರೂಪಾಯಿ ದಾನ. ಇದುವರೆಗೂ ಅತ್ಯಂತ ಪ್ರಾಯೋಗಿಕವಾದ, ಶಿಷ್ಟ ಸಮಾಜ ನಿರ್ಮಾಣಕ್ಕೆ ಯೋಗ್ಯವಾದ ಅನುಭವ ಸಾಹಿತ್ಯವೆನಿಸಿದ ವಚನ ಸಾಹಿತ್ಯ ಹೊರ ಜಗತ್ತಿಗೆ ತಿಳಿಯದೆ ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿ ಅಜ್ಞಾತಾವಸ್ಥೆಯಲ್ಲಿತ್ತು. ಅಂಥ ಸರ್ವಜನಾದರಣೀಯವಾದ ಸಾಹಿತ್ಯವನ್ನು ಕನ್ನಡೇತರ ಪ್ರಪಂಚಕ್ಕೆ ಅರಿವು ಮಾಡಿಕೊಡಲು ಉಪಕಾರ ಮಾಡಿ ಅನುವುಮಾಡಿ ಅದಕ್ಕೆ ಧನ ಸಹಾಯವನ್ನು ಮಾಡಿರುವುದು ನಿಜಕ್ಕೂ ಶ್ಲಾಘನೀಯವಾದ ಶ್ರೇಷ್ಠತಮ ಕಾರ್ಯವಲ್ಲದೆ ಮತ್ತೇನು !

ನಿಗರ್ವಿಗಳೂ, ವಿದ್ಯಾವಿನಯ ಸಂಪನ್ನರೂ, ವ್ಯಾಕರಣ ವಿದ್ವಾಂಸರೂ, ಸರಳ ವ್ಯಕ್ತಿಗಳೂ, ಸಹೃದಯರೂ, ಮುಕ್ತ ಮನಸ್ಸಿನ ಸತ್ವಶಾಲಿಗಳೂ ಆಗಿರುವ ಜಗದ್ಗುರು ಶ್ರೀ ಮಲ್ಲಿಕಾರ್ಜುನ ಮುರುಘ ರಾಜೇಂದ್ರ ಮಹಾಸ್ವಾಮಿಗಳ ದಿವ್ಯ ನೇತೃತ್ವದಲ್ಲಿ ಇನ್ನೂ ಇಂಥ ಅನೇಕ ಮಹತ್ವಪೂರ್ಣ ಕಾರ್ಯಗಳು ಜರುಗುತ್ತವೆ ಎನ್ನುವುದಕ್ಕೆ ಈಗ ಶ್ರೀಗಳವರು ಹಮ್ಮಿಕೊಂಡಿರುವ ಕಾರ್ಯಗಳೇ ಸಾಕ್ಷಿ ನುಡಿಯುತ್ತವೆ. ಪ್ರೌಢ ಶಾಲೆಗಳು, ಪ್ರಥಮ ದರ್ಜೆ ಕಾಲೇಜುಗಳು, ವಿದ್ಯಾರ್ಥಿ ನಿಲಯಗಳು ಇನ್ನೂ ಇಂಥ ಅನೇಕ ರಚನಾತ್ಮಕ ಕಾರ್ಯಗಳು ಶ್ರೀಗಳವರಿಂದ ಪ್ರಾರಂಭವಾಗಿ ಉನ್ನತ ರೀತಿಯಲ್ಲಿ ನಡೆಯುತ್ತಿರುವುದು, ಅವರ ಕ್ರಿಯಾಪಟುತ್ವಕ್ಕೊಂದು ಸಾಕ್ಷಿಯಾಗಿದೆ. ಅನುಭವದ ಮೂಸೆಯಲ್ಲಿ ಪಳಗಿರುವ ಶ್ರೀಗಳವರಿಂದ ಇನ್ನೂ ಅನೇಕ ರಚನಾತ್ಮಕ ಕಾರ್ಯಗಳು ಕ್ರಿಯಾಶೀಲವಾಗುವುದನ್ನು ಸಮಾಜ ಇದುರು ನೋಡುತ್ತಿದೆ.

ಚಿತ್ರದುರ್ಗದಲ್ಲಿರುವ ಕಲ್ಯಾಣದ ಶೂನ್ಯಪೀಠ ಪರಂಪರೆಯಲ್ಲಿ ಆಗಿಹೋಗಿರುವ ಮಹಾ ಸ್ವಾಮಿಗಳ ಇತಿಹಾಸಾವಲೋಕನದಿಂದ ನಿರಂತರವಾಗಿ ಸಮಾಜ ಕಲ್ಯಾಣ, ಒಟ್ಟಿನಲ್ಲಿ ಮಾನವ ಕಲ್ಯಾಣ ಹೇಗೆ ನಡೆದುಕೊಂಡು ಬಂದಿದೆ ಎಂಬುದರ ಒಂದು ಸ್ಥೂಲ ಚಿತ್ರವನ್ನು ಇಲ್ಲಿ ಮನಗಾಣಬಹುದು. ಭಾರತ ಮೂಲತಃ ಧರ್ಮಲೇಪ ರಾಷ್ಟ್ರ. ಆ ಧರ್ಮಲಾಂಛನದಡಿಯಲ್ಲಿ ನಡೆದುಕೊಂಡು ಬರುತ್ತಿರುವ ಗುರುಪೀಠ ಪರಂಪರೆ ಧರ್ಮ ಭಾರತದ ಪೂರ್ಣ ನಿರ್ಮಾಣ ಕಾರ್ಯದಲ್ಲಿ ಸಲ್ಲಿಸುತ್ತಿರುವ ಸೇವೆ, ನೀಡುತ್ತಿರುವ ಧರ್ಮ ಹಸ್ತ ಯಾರೂ ಮರೆಯುವಂಥದಲ್ಲ.

ಚುಟುಕು

* * * *

ಶೂನ್ಯ ಸಿಂಹಾಸನಾಧಿಕಾರಕ್ಕೆ ನಡೆದ ಚುನಾವಣೆಯಲ್ಲಿ ಜಯದೇವಶಾಸ್ತ್ರಿಗಳ ಪ್ರತಿಸ್ಪರ್ಧಿ ನಿ. ಪ್ರ. ಹಾನಗಲ್ಲ ಕುಮಾರಸ್ವಾಮಿಗಳು. ಇವರು ಆಗಾಗಲೇ ಆಶ್ರಮಸ್ಥರಾಗಿ ತುಂಬಾ ಪ್ರಭಾವಶಾಲಿಗಳಾಗಿದ್ದರು. ಜಯದೇವಶಾಸ್ತ್ರಿಗಳು ವಿದ್ಯಾವಂತರಾಗಿದ್ದರೂ ಆಗ ತಾನೆ ಕಾಶಿಯಿಂದ ಬಂದಿದ್ದರು. ಆದರೂ ಜಯದೇವ ಶಾಸ್ತ್ರಿಗಳಿಗೇ ಚುನಾವಣೆಯಲ್ಲಿ ಜಯ ದೊರೆಯಿತು. ಇದು ಶಿವನ ಲೀಲೆ ಎಂದೇ ಭಕ್ತಾದಿಗಳು ಆಗ ಭಾವಿಸಿದರು ಮತ್ತು ಈಗಲೂ ಭಾವಿಸುತ್ತಾರೆ.

ಜಯದೇವ ಶಾಸ್ತ್ರಿಗಳಿಗೆ ಚುನಾವಣೆಯಲ್ಲಿ ಜಯ ದೊರೆತಮೇಲೆ, ಅವರು ಹಾನಗಲ್ಲು ಶ್ರೀಗಳನ್ನು ಕಂಡು "ನಾನು ಈಗಲೂ ತಮಗೆ ಈ ಸ್ಥಾನವನ್ನು ಬಿಟ್ಟುಕೊಡಲು ಸಿದ್ಧನಿದ್ದೇನೆ" ಎಂದು ತಿಳಿಸಿದರು. ಅದಕ್ಕೆ ಹಾನಗಲ್ಲ ಶ್ರೀಗಳು "ನಿಮ್ಮ ಜಯದ ಲಾಭವನ್ನು ನಾನು ಪಡೆದುಕೊಳ್ಳಲು ಇಷ್ಟಪಡುವುದಿಲ್ಲ'' ಎಂದು ಅಪ್ಪಣೆ ಮಾಡಿದರು. ಇದು ಉಭಯರ ದೊಡ್ಡಸ್ತಿಕೆಯನ್ನು ಸೂಚಿಸುತ್ತದೆಯಲ್ಲವೆ ?

ಟಿ. ಎಬ. ಚನ್ನಪ್ಪ,
ಬೆಂಗಳೂರು.

ಸ್ತುತಿ

ಲೇಖಕರು :
ಟಿ. ಶಂಭುಲಿಂಗಪ್ಪ, ಎಂ.ಎ.,
ಶ್ರೀ ಜ. ಮು. ಕಾಲೇಜು, ಚಿತ್ರದುರ್ಗ.

ಪಟ್ಟವಲ್ಲರಿಯ 26ನೆಯ ಪಟ್ಟ ಪುಷ್ಪ
ಸೌರಭದಿಂದೆ ಘಮಘಮಿಸಿ ಕಂಗೊಳಿಸುವ
ತೇಜೋನಿಧಿ,
ಶ್ರೀಮತ್ ಬೃಹನ್ಮಠಾಧೀಶ,
ನಿರಂಜನ ಜಗದ್ಗುರು,
ಶ್ರೀ ಶ್ರೀ ಮಲ್ಲಿಕಾರ್ಜುನ ಪ್ರಭು – ನಮೋ ನಮೋ. ॥ 1 ॥

ಬಾನ ಮುಗಿಲ್ಗಳ ಚುಂಬನವೋಲ್
ವೈನತೇಯದಂತೆ ತೋರಿ
ನಿಮ್ಮ ಹಿಂದಿನ ಜಗದ್ಗುರುಗಳ
ಬಾಳ ಸವಿಯನು ಹಾಯ್ದು
ಮೆರೆಯುತ, ಕಂಗೊಳಿಪ
ಶ್ರೀಮತ್ ಚಿನ್ಮೂಲಾದ್ರಿ ಬೃಹನ್ಮಠ – ಅದರ ಉದ್ಧಾರಕ –
ನಮೋ ನಮೋ. ॥ 2 ॥

ಯೋಜನೆಗಳಾಚೆ ಎಲ್ಲಿಯೋ ಸಂಚರಿಸುತಿಹ
ಶ್ರೀ ಜಯದೇವರ ಸೋಜಿಗದ ಗೀತವನು
ಹಿಡಿದು, ಷಟ್ ಸಮ್ಮೇಳನದಿ ಉಜ್ವಲಗೊಳಿಸಿ
ಆನಂದವನು ಶ್ರೋತೃ ಪಥವನೈದಿಸುವ
ಸಾಧಕ, ಸಿದ್ಧಪುರುಷ, ಚಿದಾನಂದ, ಚಿದ್ಯಂತ್ರ – ನಮೋ ನಮೋ.
॥ 3 ॥

ಈ ಶತಮಾನ ಮಹೋತ್ಸವದಿಂದೆ ಶ್ರೀ ಜಯದೇವರ
ವರ ಸುಪ್ರಭಾತ ಗೀತವ ದಯಪಾಲಿಸಿ, ಆಲಿಸಿ,
ಶ್ರೋತೃ ಸಂಮೋದಕೆ ಕಾರಣ ಪುರುಷ,
ಶಿವಸೂಚಿಯಾಗುವಂತೆ
ಮನದ ಮೊನೆ ಮಾಡು
ಲೋಕ ತನ್ನ ತಾ ಅರಿಯುವಂತೆ.
ಹೇ ಭಾವನಾ ಲಹರಿ, ಸಹೃದಯೀ – ನಮೋ ನಮೋ. ॥ 4 ॥

ಸುಜ್ಞಾನಿ,
ಪ್ರತಿಭಾಶಾಲಿ,
ಸತ್ಯವ್ರತ,
ಷಟ್ಸ್ಥಲ ಕೋವಿದ,
ಶ್ರೀ ಜಯದೇವರ ಮಂಗಳ ಕಾರ್ಯಗಳನು
ಕರಣ ಗೋಚರ ಮಾಗೆ ಸ್ಪಂದಿಸುತ
ಕಂಗೊಳಿಪ,
ನಿತ್ಯ ನಿರಂತರ ಧ್ಯಾನಿ, ಧರ್ಮೋದ್ಧಾರಕ – ನಮೋ ನಮೋ.॥ 5 ॥

ವೈದ್ಯ ವಿದ್ಯಾ ಲಹರಿ,
ಸಕಲ ವಿದ್ಯಾ ಪ್ರೋತ್ಸಹಶಾಲಿ,
ಸಂತತ ಸಂಜನಿಸುವ
ಆನಂದ ದಾಯಕ, ಓ ಸಾಹಿತ್ಯ ಪ್ರೇಮಿ–
ಸನಾತನ ಧರ್ಮ ವೀರಶೈವ ಧರ್ಮವೆಂದು,
ಎಲ್ಲ ಧರ್ಮಗಳ ಸಾರ ಈ ವೀರಶೈವ ಧರ್ಮವೆಂದೂ
ಸಾರಿ, ಧರ್ಮ ಗ್ರಂಥಗಳ ಸಹಕಾರಿ ಚಾರುಶೀಲ–ನಮೋ ನಮೋ.
॥ 6 ॥

ಹಲವು ವಿದ್ಯಾ ಸಂಸ್ಥೆಗಳ ದಾನಿ,
ಕೆಲವು ವಿದ್ಯಾರ್ಥಿ ನಿಲಯ ಉದಾರಿ,
ಅಕ್ಕರೆ, ಅಕ್ಕರೆಯ ಮಾತುಗಳಾಡುತ
ಚೊಕ್ಕರ್ಥದೆ ತಿಳಿಸುತ
ನಕ್ಕು, ನಗಿಸುವ ಹಾಸ್ಯಪ್ರೇಮಿ, ವಾಕ್‌ದ್ರೂಪಿ,
ಚಾರು ಚಂದ್ರಮ ಚಕೋರಾಯಮಾನ, ಆಹ್ಲಾದಕರ,
ನಮೋ ನಮೋ. ॥ 7 ॥

ಈ ಶತಮಾನದ
ಶ್ರೀ ಜಯದೇವ ಶತಮಾನ
ಮಹೋತ್ಸವದ,
ಉತ್ಸವಶಾಲಿ.
ಭಕ್ತ ಕುಲಕೋಟಿ ಆದರದಿಂದ ಮೆರೆದು
ಬೃಹನ್ಮಠೋದ್ಧಾರಕನೆನಸಿದ,
ವೈರಾಗ್ಯಮೂರ್ತಿ, ಕರುಣಾನಿಧಿ, ಕನ್ನಡ ಯಶದುಂದುಭಿ–
ನಮೋ ನಮೋ. ॥ 8 ॥



ಶ್ರೀ ಜಯದೇವ ಮುರುಘರಾಜೇಂದ್ರ ಸ್ವಾಮಿಗಳವರ ಅಂಬಾರಿ ಉತ್ಸವ ಬ್ಯಾಡಗಿ



ದಾವಣಗೆರೆಯಲ್ಲಿರುವ ಶ್ರೀ ಜಯದೇವ ಜಗದ್ಗುರುಗಳವರ ಶಿವ ಸಮಾಧಿ



ಶ್ರೀ ಜಯದೇವ ಜಗದ್ಗುರುಗಳವರು ಮತ್ತು ಮೈಸೂರು ಮಹಾರಾಜರಾದ ಶ್ರೀ ಕೃಷ್ಣರಾಜ ಒಡೆಯರವರು



ಮೈಸೂರಿನಲ್ಲಿ ಶ್ರೀ ಜಯದೇವ ಜಗದ್ಗುರುಗಳವರು

ವಿಶ್ವವಿಭೂತಿ ಶ್ರೀ ಜಯದೇವ ಯತಿ

ಲೇಖಕರು :
ಜಿ. ಶಿವಕುಮಾರ್, ಎಂ.ಎ.,
ಶ್ರೀ ಮುರುಘರಾಜೇಂದ್ರ ಕಾಲೇಜ್,
ಚಿತ್ರದುರ್ಗ.

ಸಮಾಜದಲ್ಲಿ ಧರ್ಮ ಖಿಲವಾಗಿ, ಅಜ್ಞಾನವೇ ತನ್ನ ಆಧಿಪತ್ಯವನ್ನು ನಡೆಸಿ ವಿಜೃಂಭಿಸುತ್ತಿರುವಾಗ ಅದಕ್ಕೆ ಅಂಕುಶವನ್ನಿಟ್ಟು, ಸತ್ವವನ್ನಡಗಿಸಿ ಜ್ಞಾನದ ಬೆಳಕನ್ನು ತೋರಿಸಲು ಮಹಾಪುರುಷರ ಅವತಾರವಾಗಲೇಬೇಕಾಗುತ್ತದೆ. ಪ್ರಪಂಚದ ಧರ್ಮೇತಿಹಾಸದಲ್ಲಿ ಅನೇಕ ವಿಭೂತಿ ಪುರುಷರು ಜನ್ಮತಾಳಿ ವಿಶ್ವಜನಾಂಗವನ್ನು ಸನ್ಮಾರ್ಗದಲ್ಲಿ ನಡೆಸಿರುವುದು ಸರ್ವ ವಿದಿತ. 20 ನೇ ಶತಮಾನದ ಆರಂಭ ದಶಕಗಳಲ್ಲಿ ವೀರಶೈವ ಸಮಾಜ ಧಾರ್ಮಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ಪಂಗಡವಾಗಿತ್ತು. ಈ ಸಮಾಜಕ್ಕೆ ನವಚೈತನ್ಯವನ್ನು ತುಂಬಿ ಪ್ರಗತಿಯ ಪಥದಲ್ಲಿ ಮುನ್ನಡೆಸಿದ ಪ್ರಾತಃಸ್ಮರಣೀಯರೆಂದರೆ ಚಿತ್ರದುರ್ಗದ ಶೂನ್ಯ ಸಿಂಹಾಸನಾಧೀಶರಾದ ಜಗದ್ಗುರು ಶ್ರೀ ಜಯದೇವ ಯತಿವರರು. ಅಲ್ಲಮ ಪ್ರಭುವಿನಿಂದ ಆರಂಭವಾಗಿ ತನ್ನದೇ ಆದ ಭವ್ಯ ಪರಂಪರೆಯನ್ನೊಳಗೊಂಡ ಶೂನ್ಯ ಸಿಂಹಾಸನವನ್ನೇರಿದವರಲ್ಲಿ ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರು ಇಪ್ಪತ್ತನಾಲ್ಕನೆಯವರು.

ಜನನ, ಬಾಲ್ಯ, ವಿದ್ಯಾಭ್ಯಾಸ :

ಗದುಗಿನ ಕೊಪ್ಪಳದ ಹತ್ತಿರ ಬಿನ್ನಾಳವೆಂಬ ಗ್ರಾಮವಿದೆ. ಈ ಊರಿನ ಹಿರೇಮಠದ ಗುರುಗಳಾಗಿದ್ದವರು ಶ್ರೀ ಚನ್ನಬಸವಯ್ಯ. ಇವರ ಪತ್ನಿಯೇ ಬೋರಾಂಬೆ (ಭ್ರಮರಾಂಬೆ). ಈ ದಂಪತಿಗಳ ಪುಣ್ಯದ ಪ್ರತಿಫಲವೆಂಬಂತೆ ಜಗದೋದ್ಧಾರಕನಾದ ಮಹಾ ಪುರುಷನು ಶ್ರಾವಣ ಶುದ್ಧ ಪೌರ್ಣಿಮೆ ಗುರುವಾರ ದಿನಾಂಕ 27-8-1874 ರಂದು ಜನ್ಮತಾಳಿದನು. ವೀರಶೈವ ಸಮಾಜದ ಅಜ್ಞಾನವೆಂಬ ಅಂಧಕಾರವನ್ನು ಹೋಗಲಾಡಿಸುವ ಈ ಮಗುವಿಗೆ ತಂದೆತಾಯಿಗಳು ಚನ್ನವೀರದೇವನೆಂಬ ಹೆಸರಿಟ್ಟರು.

ಶುಕ್ಲಪಕ್ಷದ ಚಂದ್ರನಂತೆ ತನ್ನ ಬಾಲಲೀಲೆಗಳಿಂದ ಮಾತಾಪಿತೃಗಳ ಮಮತೆಯ ಕಂದನಾಗಿ ಚನ್ನವೀರದೇವನು ಬೆಳೆಯುತ್ತಾ ಬಂದನು. ಆರು ವರ್ಷಗಳು ತುಂಬಿದ ತಮ್ಮ ಮಗನಿಗೆ ಓಂಕಾರ ಪೂರ್ವಕವಾಗಿ ಅಕ್ಷರಾಭ್ಯಾಸವನ್ನು ಆರಂಭಿಸಿ ಬಿನ್ನಾಳದ ಬಸವೇಶ್ವರ ದೇವಸ್ಥಾನದ ಶಾಲೆಗೆ ಸೇರಿಸಿದರು. ಅಲ್ಲಿನ ಅಭ್ಯಾಸವನ್ನು ಮುಗಿಸಿ ಅರಿಕೆರೆ ಎಂಬಲ್ಲಿ ಕೆಲವು ದಿವಸಗಳವರೆಗೆ ವಿದ್ಯಾಭ್ಯಾಸ ಮುಂದುವರೆಯಿತು. ಎಂಟು ವರ್ಷಗಳು ತುಂಬಿದ ಚನ್ನವೀರದೇವರನ್ನು ತಮ್ಮ ಹರಕೆಯಂತೆ ಆ ಜಂಗಮ ದಂಪತಿಗಳು ಗದುಗಿನ ತೋಂಟದಾರ್ಯರ ಮಠಕ್ಕೆ ಕರೆದುಕೊಂಡು ಬಂದು ಡಂಬಳದ ಶ್ರೀ ಮೃತ್ಯುಂಜಯ ತೋಂಟದಾರ್ಯ ಸ್ವಾಮಿಗಳ ಸನ್ನಿಧಿಗೆ ಒಪ್ಪಿಸಿದರು.

ಗದುಗಿನ ಹತ್ತಿರವಿರುವ ಹಂಪಸಾಗರದಲ್ಲಿ ಚನ್ನವೀರದೇವರ ಪ್ರಾಥಮಿಕ ವಿದ್ಯಾಭ್ಯಾಸ ನಡೆಯಿತು. ಅನಂತರ ಗದುಗಿನ ಸಂಸ್ಕೃತ ಪಾಠಶಾಲೆಯಲ್ಲಿ ನೀಲಕಂಠಶಾಸ್ತ್ರಿಗಳ ಮಾರ್ಗದರ್ಶನದಲ್ಲಿ ವಿದ್ಯಾಭ್ಯಾಸ ಮುಂದುವರೆದು ತಮ್ಮ ಮೇಧಾಶಕ್ತಿ, ಪಾಂಡಿತ್ಯ, ಪ್ರತಿಭೆ, ಗಳಿಂದ ಸಂಸ್ಕೃತದಲ್ಲಿ ನಿಷ್ಣಾತರೆಂದು ಪ್ರಖ್ಯಾತರಾದರು.

ಅಖಂಡ ಭಾರತದಲ್ಲಿಯೆ ಸಂಸ್ಕೃತ ವಿದ್ಯೆಗೆ ಪ್ರಖ್ಯಾತವಾದ ಕ್ಷೇತ್ರವೆಂದರೆ ಕಾಶಿ. ಪ್ರೌಢ ವಿದ್ಯಾಭ್ಯಾಸವನ್ನು ಕಾಶಿಯಲ್ಲಿ ಮುಂದುವರೆಸಬೇಕೆಂಬ ತಮ್ಮ ಸಂಕಲ್ಪವನ್ನು ಗದುಗಿನ ಮಾನ್ವಿ ರುದ್ರಮ್ಮನವರಲ್ಲಿ ತಿಳಿಸಿದಾಗ ಆ ಮಹಾ ತಾಯಿ ಸಂತೋಷದಿಂದ ಪ್ರಯಾಣಕ್ಕೆ ಬೇಕಾಗುವ ಖರ್ಚನ್ನು ಒದಗಿಸಿಕೊಟ್ಟರು. ಕಾಶಿಯನ್ನು ತಲುಪಿದ ಅನಂತರ ವಿಶ್ವಾರಾಧ್ಯ ಪೀಠಾಧೀಶರಾದ ಶ್ರೀ ರಾಜೇಶ್ವರ ಸ್ವಾಮಿಗಳ ಮಠದಲ್ಲಿದ್ದು ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಿದರು. ಕೊಡುಗೈ ದೊರೆಯಾದ ವಿದ್ಯಾಪ್ರೇಮಿ ಶ್ರೀ ವಾರದ ಮಲ್ಲಪ್ಪನವರು ಶ್ರೀ ಚನ್ನವೀರದೇವರಿಗೆ ಕಾಶಿಯ ವಿದ್ಯಾಭ್ಯಾಸಕ್ಕೆ ಬೇಕಾದ ಧನ ಸಹಾಯ ಮಾಡುತ್ತಾ ಬಂದರು.

ಶ್ರೀ ಚನ್ನವೀರದೇವರು ಭಟ್ಟಾಚಾರ್ಯರಲ್ಲಿ ವ್ಯಾಕರಣವನ್ನೂ, ತಾರಾಚರಣರಲ್ಲಿ ತರ್ಕ ಶಾಸ್ತ್ರವನ್ನೂ ಅಭ್ಯಾಸ ಮಾಡುತ್ತಾ ತಮ್ಮ ಸ್ಮರಣಶಕ್ತಿ, ಮೇಧಾಶಕ್ತಿ ಮತ್ತು ವಾಗ್ವೈಖರಿಗಳಿಂದ ಗುರುಗಳ ಪ್ರೀತಿಗೆ ಪಾತ್ರರಾದರು. ಉನ್ನತ ಮಟ್ಟದ ಪರೀಕ್ಷೆಯಲ್ಲಿ ತಮ್ಮ ಶಿಷ್ಯ ಉತ್ತೀರ್ಣನಾದದ್ದನ್ನು ಕೇಳಿ ಸಂತೋಷಗೊಂಡು "ಜಯದೇವ"ನೆಂಬ ಪ್ರಶಸ್ತಿಯನ್ನಿತ್ತು ಲೋಕವಿಖ್ಯಾತನಾಗಿ ಬಾಳೆಂದು ಹರಸಿದರು.

ಲೋಕಮಾನ್ಯ ಬಾಲಗಂಗಾಧರ ತಿಲಕರು ಜಂಗಮವಾಡಿ ಮಠಕ್ಕೆ ಭೇಟಿ ಕೊಟ್ಟು, ವಿದ್ಯಾರ್ಥಿಗಳನ್ನು ಕುರಿತು ಕೆಲವು ಮಾತುಗಳನ್ನಾಡಿದ ಅನಂತರ, ಅವರಲ್ಲಿ ಅಗ್ರಗಣ್ಯರಾಗಿದ್ದ ಚನ್ನವೀರದೇವರ ವಿದ್ಯಾ ವೈಭವವನ್ನೂ, ಮುಖದಲ್ಲಿನ ಅದ್ವಿತೀಯ ತೇಜಸ್ಸನ್ನು ಕಂಡು ಇವರು ಲೋಕೋತ್ತರ ಪುರುಷರೂ, ವೀರಶೈವ ಸಮಾಜದ ಮಕುಟ ಮಣಿಗಳೂ ಆಗುವರೆಂದು ಹೇಳಿದರು.

ಅಥಣಿಯ ಶ್ರೀ ಶಿವಯೋಗಿಗಳ ಭವಿಷ್ಯವಾಣಿ :

ಶ್ರೀ ಚನ್ನವೀರದೇವರು ಕಾಶಿಯಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ "ಜಯದೇವ" ಎಂಬ ಪ್ರಶಸ್ತಿಯನ್ನು ಪಡೆದು, ಸರ್ವ ಸಮರ್ಥರಾಗಿ ಸ್ವಸ್ಥಾನದ ಕಡೆಗೆ ಹಿಂತಿರುಗಿದರು. ಈ ಸಂದರ್ಭದಲ್ಲಿ ಬೆಳಗಾವಿ

ಜಿಲ್ಲೆಯ ಸವದತ್ತಿಯಲ್ಲಿ ಮೂರು ತಿಂಗಳುಗಳವರೆಗೆ ಬಸವಪುರಾಣದ ಪ್ರವಚನ ನಡೆದು, ಸಮಾಪ್ತಿಯ ಏರ್ಪಾಡು ಅತ್ಯಂತ ವೈಭವದಿಂದ ನಡೆದಿತ್ತು. ಈ ಮಂಗಳ ಕಾರ್ಯಕ್ಕೆ ಅಥಣಿ ಶ್ರೀ ಮುರುಘೇಂದ್ರ ಶಿವಯೋಗಿಗಳು, ಹುಬ್ಬಳ್ಳಿ ಶ್ರೀ ಜಗದ್ಗುರು ಗಂಗಾಧರ ಸ್ವಾಮಿಗಳು, ಹಾನಗಲ್ ಕುಮಾರ ಸ್ವಾಮಿಗಳು, ಸೊಲ್ಲಾಪುರದ ಕಿರೀಟಮಠದ ನಿಜಗುಣ ಶಿವಯೋಗಿಗಳು ಇನ್ನೂ ಮೊದಲಾದ ಹರಗುರು ಚರಮೂರ್ತಿಗಳು ಆಗಮಿಸಿದ್ದರು. ಈ ಮಹೋತ್ಸವಕ್ಕೆ ಆಮಂತ್ರಿತರಾದ ಶ್ರೀ ಚನ್ನವೀರದೇವರು ಸಭಾಮಂಟಪಕ್ಕೆ ಆಗಮಿಸುತ್ತಿದ್ದಂತೆಯೆ ಎಲ್ಲರ ಮನಸ್ಸನ್ನು ಸೆಳೆಯುವ ಚಮತ್ಕಾರವೊಂದು ನಡೆಯಿತು. ಶ್ರೀ ಶಿವಯೋಗಿಗಳು ತಮ್ಮ ಸ್ಥಾನವನ್ನು ಬದಲಾಯಿಸಿ, ಚನ್ನವೀರದೇವರ ಕಡೆ ನೇರ ದೃಷ್ಟಿಯನ್ನು ಬೀರಿ, ಅವರ ಕಡೆ ಕೈಮಾಡಿ ತೋರಿಸುತ್ತಾ ತಮ್ಮ ಹತ್ತಿರವಿದ್ದ ಬೀಳೂರಪ್ಪನವರನ್ನು ಕುರಿತು ಬರುತ್ತಿರುವ ಭಾವಿ ಜಗದ್ಗುರುಗಳಿಗೆ ನಮಸ್ಕಾರ ಮಾಡಿರೆಂದು ಅಪ್ಪಣೆ ಕೊಡಿಸಿದರು. ಇಡೀ ಸಭೆ ಅತ್ಯಾಶ್ಚರ್ಯದಿಂದ ಅವರ ಕಡೆಗೆ ನೋಡಿತು. ನೇರವಾಗಿ ಬಂದು ಶ್ರೀ ಶಿವಯೋಗಿಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಆಸನಕ್ಕಾಗಿ ನೋಡುತ್ತಿದ್ದಾಗ ತಮ್ಮ ಪಕ್ಕದಲ್ಲಿಯೇ ಕುಳಿತುಕೊಳ್ಳಬೇಕೆಂಬ ಅವರ ಅಪ್ಪಣೆಗೆ ಶ್ರೀ ಚನ್ನವೀರದೇವರು ಸಂಕೋಚಪಟ್ಟುಕೊಂಡರು. ಕೊನೆಗೆ ಅವರು ಮಹಾಗುರುವಿನ ಅಪ್ಪಣೆಗೆ ತಲೆಬಾಗಲೇಬೇಕಾಯಿತು. ಕಾಂತಿಯುಕ್ತ ಮುಖದಿಂದ ಹೊಮ್ಮುತ್ತಿದ್ದ ಶಿವಪ್ರಭೆಯನ್ನು ಕಂಡ ಶ್ರೀ ಶಿವಯೋಗಿಗಳು ಇವರು ಸ್ವಲ್ಪ ದಿವಸಗಳಲ್ಲಿಯೆ ವೀರಶೈವ ಧರ್ಮ ಸಾಮ್ರಾಜ್ಯದ ಚಕ್ರವರ್ತಿಗಳಾಗಿ,ಜಗದ್ಗುರುಗಳಾಗಿ,ವಿಭೂತಿ ಪುರುಷರಾಗುವರೆಂದು ನುಡಿದರು.

ಶೂನ್ಯಸಿಂಹಾಸನಾಧಿಪತಿ :

ಮಹಾತ್ಮರ ಭವಿಷ್ಯದ್ವಾಣಿಯ ಶಕ್ತಿ ಸಾಮಾನ್ಯವೆ ?

ಚಿತ್ರದುರ್ಗ ಬೃಹನ್ಮಠದ ಶ್ರೀ ಜಗದ್ಗುರು ಮುಪ್ಪಿನೇಂದ್ರ ಮಹಾಸ್ವಾಮಿಗಳು ಬ್ಯಾಡಗಿಯಲ್ಲಿ ಲಿಂಗೈಕ್ಯರಾದರು. ಬರಿದಾದ ಆ ಜಗದ್ಗುರು ಪೀಠವನ್ನಲಂಕರಿಸಲು ತಪೋನಿಷ್ಠರು, ವೈರಾಗ್ಯಶಾಲಿಗಳು, ವಿದ್ವಾಂಸರು ಆದವರೆ ಬೇಕಾಗಿದ್ದರು.

ದೇಶದ ನಾನಾ ಕಡೆಗಳಿಂದ ಹರಗುರುಚರಮೂರ್ತಿಗಳು, ಮಹಾಪೀಠದ ಭಕ್ತ ಶಿರೋಮಣಿಗಳು ಚಿತ್ರದುರ್ಗಕ್ಕೆ ಆಗಮಿಸಿದರು. ಪೀಠಕ್ಕೆ ಜಗದ್ಗುರುಗಳನ್ನು ಹೇಗೆ ಆರಿಸಬೇಕು ? ಬೃಹನ್ಮಠದಲ್ಲಿ ಕೂಡಿದ್ದ ಸಮಸ್ತ ಭಕ್ತ ಮಾಹೇಶ್ವರರ ಒಪ್ಪಿಗೆಯ ಪ್ರಕಾರ ಶ್ರೀ ಜಗದ್ಗುರುಗಳನ್ನು ಆರಿಸಬೇಕಾಗಿತ್ತು. ಶ್ರೀ ಹಾನಗಲ್ ಕುಮಾರ ಸ್ವಾಮಿಗಳ ಪರವಾಗಿ ಕೆಲವರು, ಶ್ರೀ ಚನ್ನವೀರದೇವರ ಪರವಾಗಿ ವಾರದ ಮಲ್ಲಪ್ಪ ಮೊದಲಾದವರು ವಾದಿಸತೊಡಗಿದರು. ತೀವ್ರ ಭಿನ್ನಾಭಿಪ್ರಾಯವುಳ್ಳ ಈ ಎರಡು ಪಂಗಡಗಳು ಸಂಧಾನಕ್ಕೆ ಬಾರದೆ ಸರ್ವಾನುಮತದ ಆಯ್ಕೆ ಸಾಧ್ಯವಾಗಲಿಲ್ಲ. ಚುನಾವಣೆ ಅನಿವಾರ್ಯವಾಯಿತು.

1903 ನೇ ಇಸವಿ ನವಂಬರ್ ಒಂದನೇ ತಾರೀಖು ಬೆಳಿಗ್ಗೆ ಒಂಬತ್ತು ಘಂಟೆಗೆ ಚುನಾವಣೆ ನಡೆಯಿತು. ಶ್ರೀ ಹಾನಗಲ್ ಕುಮಾರ ಸ್ವಾಮಿಗಳು ಮತ್ತು ಶ್ರೀ ಚನ್ನವೀರದೇವರು ಸ್ಪರ್ಧಿಗಳು. ಶ್ರೀ ಕುಮಾರಸ್ವಾಮಿಗಳು ಸ್ಥಳದಲ್ಲಿಯೇ ಹಾಜರಿದ್ದರು. ಶ್ರೀ ಚನ್ನವೀರ ದೇವರ ಪರವಾಗಿ ಶ್ರೀ ವಾರದ ಮಲ್ಲಪ್ಪನವರು ಹೆಸರನ್ನು ಸೂಚಿಸಿದರು. ಚುನಾವಣೆ ನಡೆದು ವಿಜಯಶ್ರೀಯು ಶ್ರೀ ಚನ್ನವೀರದೇವರ ಕೊರಳಲ್ಲಿ ಮಾಲೆ ಹಾಕಿತು. ಇವರ ಜಯದಿಂದ ಹರಗುರು ಚರಮೂರ್ತಿಗಳು, ವಾರದ ಮಲ್ಲಪ್ಪನವರು ಮೊದಲಾದ ಭಕ್ತ ಸಮೂಹ ಸಂತೋಷ ಸಾಗರದಲ್ಲಿ ಮುಳುಗಿದರು. ಬ್ಯಾಡಗಿಯಲ್ಲಿದ್ದ ಶ್ರೀ ಚನ್ನವೀರದೇವರಿಗೆ ತಂತಿಯ ಮುಖಾಂತರ ಕೂಡಲೇ ಹೊರಟು ಒರಬೇಕೆಂದು ತಿಳಿಸಲಾಯಿತು.

ನೂತನ ಜಗದ್ಗುರುಗಳ ಪಟ್ಟಾಧಿಕಾರ ಮಹೋತ್ಸವಕ್ಕೆ ಸಿದ್ಧತೆಗಳು ಅತ್ಯಂತ ಭರದಿಂದ ಆಗತೊಡಗಿದವು. ದೇಶದ ನಾನಾ ಭಾಗಗಳಿಂದ ಹರಗುರು ಚರಮೂರ್ತಿಗಳು ಮತ್ತು ಭಕ್ತ ಮಹಾಜನಗಳು ನೆರೆಯತೊಡಗಿದರು.

ಶಾಲಿವಾಹನ ಶಕ 1825ನೇ ಶೋಭನಕೃತುನಾಮ ಸಂವತ್ಸರ ಕಾರ್ತೀಕ ಶುದ್ಧ 13ನೆಯ ದಿವಸ (ದಿನಾಂಕ 3—11—1903) ಶ್ರೀ ಚನ್ನವೀರ ದೇವರಿಗೆ ನಿರಾಭಾರಿ ಚರಪಟ್ಟಾಧಿಕಾರ ದೀಕ್ಷೆಯು ಕೊಡಲ್ಪಟ್ಟಿತು. ಇದು ಪಟ್ಟಾಭಿಷೇಕದ ಪೂರ್ವಾರ್ಧ. ಇದರ ಉತ್ತರಾರ್ಧವಾಗಿ ಬಹಿರಂಗದಲ್ಲಿ ಮಹಾಪೀಠದ ಸಿಂಹಾಸನಾರೋಹಣ ಮತ್ತು ಉತ್ಸವಗಳು ನಡೆಯಕೇಕು. ಆದರೆ ಸರ್ಕಾರದವರು ಚುನಾವಣೆಯ ಫಲಿತಾಂಶವನ್ನು ಒಪ್ಪಿಕೊಂಡು ಅಪ್ಪಣೆಕೊಡುವುದು ತಡವಾದದ್ದರಿಂದ ಸಿಂಹಾಸನಾರೋಹಣ ಐದನೆಯ ತಾರೀಖು ಗುರುವಾರಕ್ಕೆ ಹೋಯಿತು. ಶ್ರೀ ಮ ದ ಲ್ಲ ಮ ಪ್ರಭುವು ಬಸವಾದಿ ಪ್ರ ಮ ಥ ರ ಆಗ್ರಹದ ಮೇರೆಗೆ ಸಿಂಹಾಸನವನ್ನೇರಿದಂತೆ, ಈ ಪೀಠದ ಪ ರ ಂ ಪ ರೆ ಯ ಸಂಜ್ಞೆಗಳಾದ ಮುದ್ರೆಯುಂಗುರ ಮತ್ತು ಶಿಖಾ-ಶೈಲಗಳನ್ನು ಧರಿಸಿ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು ಎಂಬ ನಾಮಧೇಯದಿಂದ ಸಿಂಹಾಸನಾರೋಹಣ ಮಾಡಿದರು. ಹರಗುರು ಚರಮೂರ್ತಿಗಳು, ಭಕ್ತಾದಿಗಳು ಪೀಠದ ಪದ್ಧತಿಗನುಸಾರವಾಗಿ ಕಪ್ಪಕಾಣಿಕೆಗಳನ್ನರ್ಪಿಸಿದರು. ಪಟ್ಟಾಭಿಷಿಕ್ತರಾದ ಶ್ರೀ ಜಗದ್ಗುರುಗಳು ತಾವು ಮಾಡಲಿರುವ ವೀರಶೈವ ಸಮಾಜೋದ್ಧಾರದ ಬಗ್ಗೆ ಭಾಷಣದ ಮೂಲಕ ಅಪ್ಪಣೆ ಕೊಡಿಸಿ ಅಲ್ಲಿ ನೆರೆದಿದ್ದ ಅಸಂಖ್ಯಾತ ಶಿಷ್ಯಸಮೂಹವನ್ನು ಸಂತೋಷಗೊಳಿಸಿದರು. ಆ ದಿನವೇ ಸಾಯಂಕಾಲ ಮಹಾಸ್ವಾಮಿಗಳ ಪಲ್ಲಕ್ಕಿ ಮಹೋತ್ಸವವು ಮಂಗಳವಾದ್ಯ ಮತ್ತು ಭಕ್ತಾದಿಗಳ ಜಯಘೋಷಗಳೊಡನೆ ತಳಿರು ತೋರಣಗಳಿಂದ ಅಲಂಕೃತವಾಗಿದ್ದ ರಾಜಬೀದಿಗಳಲ್ಲಿ ನೆರವೇರಿತು.


ಸಾಮಾಜಿಕ, ಧಾರ್ಮಿಕ ಮತ್ತು ವಿದ್ಯಾಪ್ರಸಾರ ಕಾರ್ಯಗಳು:

ಶ್ರೀ ಜಗದ್ಗುರು ಜಯದೇವ ಸ್ವಾಮಿಗಳ ನಿರ್ಮಲ ಮನಸ್ಸಿನ ಪ್ರಭಾವಕ್ಕೊಳಗಾಗಿ ವೀರಶೈವರಲ್ಲದೆ ಬೇರೆಯವರೂ ಬೃಹನ್ಮಠದ ಭಕ್ತರಾದರು. ಇವರ ತಪಸ್ಸಾಮರ್ಥ್ಯವು ಜನಕೋಟಿಯನ್ನು ಆಕರ್ಷಿಸಿದ್ದರಿಂದ ಚಿನ್ಮೂಲಾದ್ರಿಯ ಬೃಹನ್ಮಠದ ಬಗ್ಗೆ ಭಕ್ತಿ ವಿಶ್ವಾಸಗಳು ಬೆಳೆಯತೊಡಗಿದವು. ವೀರಶೈವ ಸಮಾಜದಲ್ಲಿರುವ ಜಡತ್ವ

ವನ್ನು ಹೋಗಲಾಡಿಸಿ, ಭಕ್ತರಲ್ಲಿ ಸಮತೆ ಮತ್ತು ಭಕ್ತಿಭಾವಗಳು ನೆಲೆಗೊಳ್ಳುವಂತೆ ಮಾಡಬೇಕೆಂದು ಮನದಲ್ಲಿ ನಿಶ್ಚಯಿಸಿ ಅದಕ್ಕೆ ಕಾರ್ಯಪ್ರವೃತ್ತರಾದರು.

ಶ್ರೀ ಜಗದ್ಗುರುಗಳು ಮಹಾಪೀಠವನ್ನಲಂಕರಿಸಿದ ಮೇಲೆ ಸಮಾಜದ ಉನ್ನತಿಗಾಗಿ ದೇಶಪರ್ಯಟನೆಯನ್ನು ಕೈಗೊಂಡರು. ಆಗ ಹೊಸದಾಗಿ ಊರನ್ನು ಪ್ರವೇಶಿಸುವಾಗ ಮಹಾಸಂಸ್ಥಾನದ ಬಿರುದಾವಳಿಗಳೊಂದಿಗೆ ಅಡ್ಡಪಲ್ಲಕ್ಕಿ ಮಹೋತ್ಸವವು ಅತ್ಯಂತ ವಿಜೃಂಭಣೆಯಿಂದ ನಡೆಯುತ್ತಿದ್ದಿತು. ಕೆಲವು ಕಡೆಗಳಲ್ಲಿ ಪರ ಮತೀಯರು ಇವರ ಬಿರುದುಗಳು ಮೆರೆಯಬಾರದೆಂದೂ, ಇಂತಹ ಕಡೆಗಳಲ್ಲಿ ಪಲ್ಲಕ್ಕಿ ಹೋಗಬಾರದೆಂದೂ, ಕೆಲವು ಸ್ಥಳಗಳಲ್ಲಿ ವಾದ್ಯಗಳನ್ನು ನಿಲ್ಲಿಸಬೇಕೆಂದೂ ಗಲಭೆಯನ್ನೆಬ್ಬಿಸಿ ಉತ್ಸವಕ್ಕೆ ಅಡ್ಡಿಯನ್ನುಂಟು ಮಾಡುತ್ತಿದ್ದರು. ಆಗ ಮಹಾ ಸಂಸ್ಥಾನದ ಹಕ್ಕನ್ನು ಸರ್ಕಾರದ ಗಮನಕ್ಕೆ ತಂದು ಉತ್ಸವವು ಯಾವ ಆತಂಕವಿಲ್ಲದೆ ಸಾಂಗವಾಗಿ ನೆರವೇರಿಸಲಾಗುತ್ತಿತ್ತು.

ಒಮ್ಮೆ ತುಮಕೂರಿಗೆ ಸೇರಿದ ದೊಡ್ಡಗುಣಿ ಎಂಬ ಗ್ರಾಮದ ಪರ ಮತೀಯರು ಮಹಾ ಸನ್ನಿಧಿಯ ಬಿರುದಾವಳಿಗಳಿಂದ ಕೂಡಿದ ಉತ್ಸವಕ್ಕೆ ಅಡ್ಡಿ ಮಾಡಿದಾಗ, ಮಹಾಸಂಸ್ಥಾನಕ್ಕೆ ಮಕರತೋರಣ, ನಂದೀಧ್ವಜದಲ್ಲಿಯ ವ್ಯಾಸನ ತೋಳು, ಪಂಚ ದೀವಟಿಗೆ, ಚಂದ್ರ ವಾದ್ಯ, ಸೂರ್ಯವಾದ್ಯ ಮುಂತಾದ 72 ಬಿರುದುಗಳು ಸಹಿತ ಉತ್ಸವ ನಡೆಯುವುದಕ್ಕೆ ಸರ್ಕಾರದಿಂದ ದೊರೆತಿದ್ದ ಹಿಂದಿನ ದಾಖಲೆಯನ್ನು ತೋರಿಸಿ ಉತ್ಸವವನ್ನು ನೆರವೇರಿಸಿದರು. ಇಷ್ಟೇ ಅಲ್ಲದೆ ಶೃಂಗೇರಿ ಮಠಕ್ಕೆ ಇರುವ ಸಕಲ ಮರ್ಯಾದೆಯು ಚಿನ್ಮೂಲಾದ್ರಿ ಬೃಹನ್ಮಠಕ್ಕೆ ಇರುವ ಬಗ್ಗೆ ಮೈಸೂರು ದೊರೆಗಳಿಂದ ದೊರೆತ ಸನದು ಈ ಕೆಳಕಂಡಂತೆ ಇದೆ.



"ಯುವ ಸಂವತ್ಸರದ ಪುಷ್ಯ ಶು ೧೩ ಸ್ಥಿರವಾರದಲ್ಲು ಶ್ರೀಮತು|| ಅರಮನೆ ಶೀಮೆಗಳ ಅಮಿಲ್ ಕಿಲ್ಲೆದಾರರಿಗೆ ಬರಸಿ ಕಳಿಸಿದ ನಿರೂಪ ಆದಾಗಿ ಚಿನ್ಮೂಲಾದ್ರಿ ಪ್ರಭು ಶೂನ್ಯಸಿಂಹಾಸನ ಮಠದ ಮುರಗಾ ರಾಜೇಂದ್ರ ಸ್ವಾಮಿಗಳು ತಮ್ಮ ಸಕಲವಿನಿಯೋಗಸಹಿತವಾಗಿ ಮಾಮೂಲ್ ಪ್ರಕಾರ ತಮ್ಮ ಶಿಷ್ಯರಲ್ಲಿ ಹೋಗುವಲ್ಲಿ ಬರುವಲ್ಲಿ ಶೃಂಗೇರಿ ಮಠಕ್ಕೆ ಸಲ್ಲತಕ್ಕ ಮಾಮೂಲ್ ಸಕಲ ವಿನಿಯೋಗ ಯಾವುದು ಇಥೆಯೋ ಅದೇ ಮೇರೆಗೆ ಈವರೆಗೂ ಇಥೆಯಷ್ಟೇ; ಅದಕ್ಕೆ ಕೆಲವರು ತುಂಟರು ಹರಕತ್ತು ಮಾಡುವಂತವರ ಮಾತು ಕೇಳಿಕೊಂಡು ಶಿಪಾರತಿನಿಂದ ತಂಟೆ ಮಾಡಬೆ ಮಾಮೂಲ್ ಪ್ರಕಾರಿ ಸಂಚಾರ ಮಾಡುವಲ್ಲಿ ಹರಕತ್ ಮಾಡದಂತೆ ತಾಕೀತು ಮಾಡು ವದು. ತಾರೀಖು ೧೩ ನೇ ಮಾಹೇ ಜನೆವರಿ ಸನ್ ೧೮೧೬ ನೇ ಇಸ್ವಿ ಬಿಸ್ತು ಪ್ರಸನ್ನಯ್ಯ ಮುನಷಿ ಹುಜೂರ".

ಸಹಿ—ಶ್ರೀಕೃಷ್ಣ ಅಂತ ಕನ್ನಡದಲ್ಲಿ ಯಿದೆ.

ಶ್ರೀ ಸನ್ನಿಧಿಯು ಭಕ್ತರ ಉದ್ಧಾರಕ್ಕಾಗಿ ಕೊಟ್ಟೂರು, ಉಜ್ಜಯಿನಿ, ರಾಣೆಬೆನ್ನೂರು, ಬ್ಯಾಡಗಿ, ದಾವಣಗೆರೆ, ಧಾರವಾಡ, ಬೆಳಗಾವಿ, ಪೂನಾ, ಹೈದರಾಬಾದ್, ಸೊಲ್ಲಾಪುರ, ಸಾಂಗಲಿ, ಜತ್ತ, ಮೈಸೂರು, ಬೆಂಗಳೂರು ಮೊದಲಾದ ಕಡೆಗಳಲ್ಲಿ ದಯಮಾಡಿಸಿ ಸಮಾಜೋನ್ನತಿಗಾಗಿ ತಮ್ಮ ಜೀವಿತ ಕಾಲವನ್ನೇ ಮುಡುಪಾಗಿಟ್ಟರು. ಶ್ರೀ ಸನ್ನಿಧಿ ಹೋದ ಕಡೆಗಳಲ್ಲೆಲ್ಲಾ ಸಂಸ್ಥಾನದ ರಾಜ ಮರ್ಯಾದೆಯಿಂದಲೂ, ಸಕಲ ಬಿರುದಾವಳಿಗಳಿಂದಲೂ ಅಡ್ಡಪಲ್ಲಕ್ಕಿ ಮಹೋತ್ಸವಗಳು ಅತ್ಯಂತ ವೈಭವದಿಂದ ನಡೆದುವು. ಸಾಂಗಲಿ, ಜತ್ತ, ಜಮಖಂಡಿ, ಮಿರಜ, ಜೌಂಧ, ಮೈಸೂರು ಮೊದಲಾದ ರಾಜರುಗಳು ಇವರಿಗೆ ಅಭೂತಪೂರ್ವ ಸನ್ಮಾನ ಮಾಡಿದರು.

ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯ ನಂತರ ಭಾರತದಲ್ಲಿ ಸ್ಥಾಪಿತವಾದ ಎರಡನೆಯ ಮಹಾಸಂಸ್ಥೆಯೆಂದರೆ ವೀರಶೈವ ಮಹಾ ಸಭೆ. ಕಾರಣಾಂತರದಿಂದ ಈ ಸಭೆಯು ನಿಂತುಹೋಗಿತ್ತು. 1915 ರಲ್ಲಿ ಧಾರವಾಡ ಹೊನ್ನಾಪುರ ಮಠದ ಗದಿಗಯ್ಯನವರು ಹೊರಡಿಸುತ್ತಿದ್ದ "ಚಂದ್ರೋದಯ" ಪತ್ರಿಕೆಯಲ್ಲಿ ವೀರಶೈವ ಮಹಾ ಸಭೆ ತಪ್ಪದೆ ನಡೆಯಬೇಕಾದ ಆವಶ್ಯಕತೆಯನ್ನು ಕುರಿತು ಬರೆದ ಲೇಖನವು ಸ್ವಾಮಿಗಳ ಚಿತ್ತಕ್ಕೆ ಬಂದಿತು. ಶ್ರೀ ಜಗದ್ಗುರುಗಳ ಅಪ್ಪಣೆಯಂತೆ ದಾವಣಗೆರೆಯಲ್ಲಿ ವೀರಶೈವ ಮಹಾಸಭೆಯು 1917 ರಲ್ಲಿ ಸಮಾವೇಶಗೊಂಡಿತು. ಈ ಮಹಾ ಸಭೆಯು ತಪ್ಪದೆ ನಡೆಯಲು ಅನುಕೂಲವಾಗುವಂತೆ ಶ್ರೀ ಸನ್ನಿಧಿಯ ಪ್ರೇರಣೆಯಿಂದ 63 ಸಾವಿರ ರೂಪಾಯಿಗಳ "ಚಿರಸ್ಥಾಯಿ ನಿಧಿ" ಸ್ಥಾಪಿತವಾಯಿತು.

ಶ್ರೀ ಜಗದ್ಗುರುಗಳು ತಮ್ಮ ಸಂಚಾರ ಕಾಲದಲ್ಲಿ ಅನೇಕ ವಿರಕ್ತ ಮಠಗಳು ಶೋಚನೀಯ ಪರಿಸ್ಥಿತಿಯಲ್ಲಿರುವುದನ್ನು ನೋಡಿ ಅವುಗಳನ್ನು ಸುವ್ಯವಸ್ಥಿತಗೊಳಿಸಲು ನಿಶ್ಚಯಿಸಿದರು. ಮಠಾಧಿಪತಿಗಳಿಗೆ ಸನ್ಮಾರ್ಗದಲ್ಲಿ ನಡೆಯುವಂತೆ ಬೋಧಿಸಿದರು. ದಾವಣಗೆರೆ ಶಾಖಾ ಮಠ, ಧಾರವಾಡದ ಮುರುಘಾ ಮಠ, ಬೆಂಗಳೂರಿನ ಸರ್ಪಭೂಷಣ ಮಠ, ಕೊಲ್ಲಾಪುರದ ಬಾಸಾ ಮಠ, ಅಥಣಿಯ ಗಚ್ಚಿನ ಮಠ ಮತ್ತು ಇನ್ನೂ ಅನೇಕ ಸ್ಥಳಗಳಲ್ಲಿರುವ ವಿರಕ್ತ ಮಠಗಳು ಶ್ರೀ ಜಗದ್ಗುರುಗಳ ಮಾರ್ಗದರ್ಶನದಿಂದ ಮಹೋನ್ನತಿಯನ್ನು ಹೊಂದಿವೆ.

ಶ್ರೀ ಜಯದೇವ ಮಹಾಸ್ವಾಮಿಗಳು ಮಾಡಿದ ಅನೇಕ ಕಾರ್ಯಗಳಲ್ಲಿ ವಿದ್ಯಾ ಪ್ರಸಾರಕ್ಕೆ ಮಾಡಿದ ಸಹಾಯವು ಅತ್ಯಮೋಘವಾದದ್ದು. ವಿದ್ಯೆ ಸಮಾಜದಲ್ಲಿರುವ ಅಜ್ಞಾನವೆಂಬ ಅಂಧಕಾರ

ವನ್ನು ಹೋಗಲಾಡಿಸುವ ಮಹಾ ಚೈತನ್ಯ. ಸಮಾಜದ ಸರ್ವ ತೋಮುಖ ಅಭಿವೃದ್ಧಿಗೆ ಇದೇ ಮೂಲಾಧಾರ. ವೀರಶೈವ ಸಮಾಜವು ಅಭಿವೃದ್ಧಿಗೊಳ್ಳಬೇಕಾದರೆ ವಿದ್ಯೆಯ ಪ್ರಸಾರದಿಂದ ಮಾತ್ರ ಸಾಧ್ಯವೆಂಬುದನ್ನು ಸ್ವಾಮಿಗಳು ಅರಿತುಕೊಂಡರು. ತಮ್ಮ ಸಂಚಾರ ಕಾಲದಲ್ಲಿ ಭಕ್ತರಿಂದ ಸಂಗ್ರಹವಾದ ಹಣವನ್ನು ಕೇವಲ ಮಠದ ಪ್ರತಿಷ್ಠೆಗಾಗಲಿ, ಮಠದ ಪರಿವಾರದ ಜನರಿಗಾಗಲಿ ವ್ಯಯ ಮಾಡದೆ ವೀರಶೈವ ಮತ್ತು ಅನ್ಯ ಮತೀಯರ ವಿದ್ಯಾಭಿವೃದ್ಧಿಗೆ, ಅನಾಥರಿಗೆ ಮತ್ತು ಇತರ ಸಮಾಜಾಭಿವೃದ್ಧಿ ಕಾರ್ಯಗಳಿಗೆ ದಾನ ಮಾಡಿ, ಸಕಲ ಜನಗಳ ಕೃತಜ್ಞತೆಗೆ ಪಾತ್ರರಾದರು. ಆಂಧ್ರ ವಿಶ್ವ ವಿದ್ಯಾನಿಲಯದ ಉಪಕುಲಪತಿಗಳಾಗಿದ್ದ ಶ್ರೀ ಸಿ. ಆರ್. ರೆಡ್ಡಿಯವರು ಶ್ರೀ ಜಗದ್ಗುರುಗಳ ವಿಶ್ವ ವಿಶಾಲ ಭಾವನೆನ್ನು ಈ ರೀತಿ ಪ್ರಶಂಸಿಸಿದ್ದಾರೆ : " He impressed me as a real Jagadguru, one who made no distinction in his benefactions between the different castes and creeds and treated all alike in a spirit of world-wide love and charity"

ಮೈಸೂರು ವಿಶ್ವವಿದ್ಯಾನಿಲಯದ ತತ್ವಶಾಸ್ತ್ರದ ಪ್ರಾಧ್ಯಾಪಕ ರಾಗಿದ್ದ ಶ್ರೀ ಎ. ಆರ್. ವಾಡಿಯಾ ಅವರು ಸ್ವಾಮೀಜಿ ವಿದ್ಯಾ ಪ್ರಸಾರಕ್ಕೆ ಮಾಡಿದ ಸಹಾಯವನ್ನು ಕುರಿತು ಈ ರೀತಿ ಹೇಳಿದ್ದಾರೆ: "On various occasions I have congradulated the Veerasaiva community on the remarkable progress it has been able to achieve in education, thanks mainly to the very enlightened policy followed by the revered heads of the Veeerasaiva mutts, and among those none occupies a more honoured place than the Mahaswami of Chitradurga. I am personally aware of the many students whom he has helped with generous scholarships".

ಅಂದಿನ ಕಾಲದ ವಿದ್ಯಾರ್ಥಿಗಳ ಊಟ ವಸತಿಗಳಿಗೆ ಯಾವ ಸೌಕರ್ಯವೂ ಇರಲಿಲ್ಲ. ಆಂತೆಯೇ ಸ್ವಾಮೀಜಿಯವರು ರಾಷ್ಟ್ರದ ನಾನಾ ಕಡೆಗಳಲ್ಲಿ ಅನೇಕ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿ ಅವು ಸುಗಮವಾಗಿ ನಡೆದುಕೊಂಡು ಹೋಗುವ ಏರ್ಪಾಡು ಮಾಡಿದರು. ಶ್ರೀ ಸನ್ನಿಧಿ ಸ್ಥಾಪಿಸಿದ ವಿದ್ಯಾರ್ಥಿ ನಿಲಯಗಳಲ್ಲಿ ಅಭ್ಯಾಸ ಮಾಡಿದ ಅನೇಕ ಮಹನೀಯರುಗಳು ಈಗ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಖ್ಯಾತಿಯನ್ನು ಪಡೆದವರಾಗಿದ್ದಾರೆ. ಮೈಸೂರಿನ ರಿಟೈರ್ಡ್ ಕೌನ್ಸಿಲರ್‌ರವರಾದ ಶ್ರೀ ಕೆ. ಚಾಂಡಿಯವರು ಈ ರೀತಿ ಅಭಿಪ್ರಾಯ ಪಟ್ಟಿದ್ದಾರೆ: "During his regime, His Holiness has succeeded in establishing several schools and hostels and has given vast sums for the uplifts of the depressed classes."

ಶ್ರೀ ಜಗದ್ಗುರುಗಳಿಂದ ಸ್ಥಾಪಿತವಾದ ವಿದ್ಯಾರ್ಥಿ ನಿಲಯಗಳು ಮತ್ತು ಧನ ಸಹಾಯವನ್ನು ಪಡೆದ ಸಂಸ್ಥೆಗಳು ಹೇರಳವಾಗಿವೆ. ಚಿತ್ರದುರ್ಗ, ದಾವಣಗೆರೆ, ತುಮಕೂರು, ಬೆಂಗಳೂರು, ಕಾಶಿ, ಸಾಂಗಲಿ ಮುಂತಾದ ಕಡೆಗಳಲ್ಲಿ ಶ್ರೀ ಜಯದೇವ ವಿದ್ಯಾರ್ಥಿ ನಿಲಯಗಳಿವೆ. ಸೊಲ್ಲಾಪುರದ ಸಂಸ್ಕೃತ ಪಾಠಶಾಲೆ, ಧಾರವಾಡದ ಕರ್ನಾಟಕ ಕಾಲೇಜು, ಸಾತಾರೆಯ ಅಂಜುಮನ್ ಇಸ್ಲಾಂ ಫಂಡ್, ಚಿತ್ರದುರ್ಗದ ಶ್ರೀ ಕೃಷ್ಣರಾಜೇಂದ್ರ ಜಿಲ್ಲಾ ಲೈಬ್ರರಿ, ತಿಪಟೂರಿನ ವೀರಶೈವಾನಂದಾಶ್ರಮ, ಮೈಸೂರಿನ ರೋಗ ಪರಿಹಾರ ಪ್ರಯೋಗಶಾಲೆ (Pathological Laboratory) ಮತ್ತು ಇತರ ಕೆಲವು ಸಂಘ ಸಂಸ್ಥೆಗಳಿಗೆ ಸ್ವಾಮಿಗಳು ಉದಾರ ಧನ ಸಹಾಯ ಮಾಡಿದ್ದಾರೆ. ವೀರಶೈವ ಮತ್ತು ವೀರಶೈವೇತರ ವಿದ್ಯಾರ್ಥಿಗಳ ವಿದ್ಯಾಭಿವೃದ್ಧಿಗಾಗಿ 50 ಲಕ್ಷ ರೂಪಾಯಿಗಳಿಗೂ ಹೆಚ್ಚಿನ ಹಣವನ್ನು ಶ್ರೀ ಸನ್ನಿಧಿಯವರು ಅನುಗ್ರಹಿಸಿದ್ದಾರೆ.

ಅಸ್ಪೃಶ್ಯೋದ್ಧಾರ :

ಹಿಂದೆ ಚಿತ್ರದುರ್ಗದಲ್ಲಿ ಆದಿಕರ್ನಾಟಕರ ಸಭೆ ನಡೆಯಿತು. ಅವರನ್ನು ಕುರಿತು ಸಹಾನುಭೂತಿಪರವಾದ ಭಾಷಣಗಳಾದವು. ಸಭೆ ಮುಗಿದಮೇಲೆ ಅವರಿಗೆ ನೀರನ್ನು ಕುಡಿಯುವುದಕ್ಕೆ ನಲ್ಲಿಯ ಹತ್ತಿರ ಬಿಡಲಿಲ್ಲ. ಎಂತಹ ವಿಪರ್ಯಾಸ ! ಹಸಿವು, ಬಾಯಾರಿಕೆಗಳಿಂದ ಅವರು ಬೃಹನ್ಮಠದ ಮಹಾಸ್ವಾಮಿಗಳ ಸನ್ನಿಧಿಗೆ ಬಂದರು. ಜಗದ್ಗುರುಗಳು ಮಠದ ಹೊರಭಾಗದಲ್ಲಿದ್ದ ಬೇವಿನ ಮರದ ಕೆಳಗೆ ನಿಂತಿದ್ದರು. ಅಲ್ಲಿಗೆ ಬಂದ ಆದಿಕರ್ನಾಟಕರು ತಮಗೊದಗಿದ ಕಷ್ಟವನ್ನು ವಿವರಿಸಿ, ತಮ್ಮನ್ನು ಅನುಗ್ರಹಿಸಿ ಉದ್ಧಾರ ಮಾಡಬೇಕೆಂದು ಬೇಡಿಕೊಂಡರು. ಆಗ ಕನಿಕರದಿಂದ ಸ್ವಾಮಿಗಳು ಅವರನ್ನು ಕುರಿತು "ನಿಮಗೆ ಚಾಂಡಾಳರೆನ್ನುವ ಶಬ್ದವು ನಿಮ್ಮ ಕೃತಿಯಿಂದ ಬಂದಿರುತ್ತದೇ ಹೊರತು ಬೇರೊಂದು ಕಾರಣದಿಂದಲ್ಲ. ಕಾರಣ ಸ್ಪೃಶ್ಯರೆಂದೆನಿಸಿಕೊಳ್ಳಲಿಚ್ಛಿಸುವ ನೀವು ದೈಹಿಕ, ಮಾನಸಿಕ, ವ್ಯಾವಹಾರಿಕ ಪಾವಿತ್ರ್ಯವನ್ನು ಕಾಯ್ದುಕೊಳ್ಳಲು ಪ್ರಯತ್ನಿಸಿರಿ. ಹೊಲಸು ಪದಾರ್ಥಗಳನ್ನು, ಗೋಮಾಂಸ, ಮದ್ಯ ಮೊದಲಾದ ನಿಷಿದ್ಧ ವಸ್ತುಗಳನ್ನು ಸೇವಿಸುವುದನ್ನು ಬಿಡಿರಿ. ದಿನಾಲು ಸ್ನಾನ ಮಾಡಿರಿ. ಒಮ್ಮೆಯಾದರೂ ಸ್ನಾನ ಮಾಡಿರಿ." ಎಂದು ಬೋಧಿಸಿದರು. ಅಲ್ಲದೆ ಅವರಿಗೆ ಅನ್ನ ನೀರುಗಳ ವ್ಯವಸ್ಥೆ ಮಾಡಿದರು. ಅವರಿಗೆ ಸನ್ನಿಧಿಯ ಕಾರ್ಯದಿಂದ ಸಂತೋಷವಾಗಿ ಎಲ್ಲರೂ ಕೈಮುಗಿದು ದಡ್ಡರಾದ ತಮಗೆ ಎಚ್ಚರಿಕೆಯುಂಟಾಯಿತೆಂದು ಇನ್ನು ಮುಂದೆ ಸ್ವಾಮಿಗಳು ಅಪ್ಪಣೆ ಕೊಡಿಸಿದಂತೆ ನಡೆದುಕೊಳ್ಳುವುದಾಗಿ ಹೇಳಿ ಸಾಷ್ಟಾಂಗ ನಮಸ್ಕಾರ ಮಾಡಿ ಹೊರಟುಹೋದರು.

ಮಹಾಸ್ವಾಮಿಗಳ ಬೋಧನೆ ಅವರ ಮೇಲೆ ಪ್ರಭಾವವನ್ನು ಬೀರಿತು. ನಿಷಿದ್ಧ ವಸ್ತುಗಳನ್ನು ತೊರೆದರು. ಚಿತ್ರದುರ್ಗದ ಹತ್ತಿರ ವಿರುಪಸಿದ್ದಪ್ಪನಹಳ್ಳಿ ಗ್ರಾಮದ ದೇವಿ ಜಾತ್ರೆಯಲ್ಲಿ ನಡೆಯುತ್ತಿದ್ದ ಕುರಿ, ಕೋಣ ಕಡಿಯುವುದನ್ನು ನಿಲ್ಲಿಸಿದರು. ಜಗದ್ಗುರುಗಳಿಗೆ ಈ ಜನರಲ್ಲಿ ಇಂತಹ ಕ್ರಾಂತಿಯಾದುದನ್ನು ಕಂಡು ಆನಂದವಾಯಿತು. ಶ್ರೀ ಜಗದ್ಗುರುಗಳು ಅಸ್ಪೃಶ್ಯರ ಉದ್ಧಾರದ ಬಗ್ಗೆ ಅನ್ಯರಂತೆ

ಮಾತಿನ ಮುಖಾಂತರ ಹೇಳಿ ಸುಮ್ಮನಾಗದೆ ಕಾರ್ಯ ರೂಪಕ್ಕೆ ತಂದ ವಿಶಾಲ ಮನೋಭಾವದವರು.

ವಿಶ್ವ ವಿಭೂತಿಗಳ ಸಮಾಗಮ :

ಸತ್ಯ, ಅಹಿಂಸೆ ಮತ್ತು ಪ್ರೇಮಗಳ ಮೂರ್ತಿ ಸ್ವರೂಪವೇ ಮಹಾತ್ಮ ಗಾಂಧೀಜಿ. ಗಾಂಧೀಜಿಯವರು ಅಹಿಂಸೆ, ಸತ್ಯ, ಖಾದಿಗಳ ಪ್ರಚಾರ ಮಾಡುತ್ತಾ 1934 ರಲ್ಲಿ ಕರ್ನಾಟಕದ ಸಂಚಾರ ಕೈಗೊಂಡಿದ್ದಾಗ ಹಾವೇರಿಗೆ ಆಗಮಿಸಿದರು. ಆಗ ಶ್ರೀ ಜಯದೇವ ಜಗದ್ಗುಗಳವರು ಹಾವೇರಿಯಲ್ಲಿಯೇ ಇದ್ದರು. ವಿಶ್ವ ವಿಭೂತಿಗಳು ಒಂದೆಡೆಗೆ ಸೇರುವ ಯೋಗ ಒದಗಿ ಬಂದದ್ದು ನಾಡಿನ ಪುಣ್ಯ ವಿಶೇಷವೆಂದೇ ಹೇಳಬೇಕು.

ದೇಶೋದ್ಧಾರಕ್ಕಾಗಿ ಸರ್ವಸಂಗ ಪರಿತ್ಯಾಗಮಾಡಿದ ಮಹಾತ್ಮ ಗಾಂಧೀಜಿಯವರ, ಧರ್ಮೋದ್ಧಾರಕ್ಕಾಗಿ ಅವತರಿಸಿದ ಶ್ರೀ ಜಗದ್ಗುರುಗಳವರ ಸಮಾಗಮ ದೃಶ್ಯ ವರ್ಣನಾತೀತ. ಶ್ರೀ ಜಗದ್ಗುರುಗಳು ಗಾಂಧೀಜಿಯವರ ಯೋಗಕ್ಷೇಮವನ್ನು ವಿಚಾರಿಸಿ ಅವರ ದೇಶಸೇವೆಯ ಬಗ್ಗೆ ಅಭಿನಂದಿಸಿದರು. ಮಹಾತ್ಮಾಜಿಯವರು ತಲೆ ಬಾಗಿ ನಮಸ್ಕರಿಸಿ ಎಲ್ಲದಕ್ಕೂ ತಮ್ಮಗಳ ಅನುಗ್ರಹವೆ ಕಾರಣವೆಂದು ವಿನಮ್ರವಾಗಿ ನುಡಿದರು. ಅನಂತರ ಭಾರತದ ಉದ್ಧಾರಕ್ಕೆ ಖಾದಿ ಧಾರಣೆ, ಅಸ್ಪೃಶ್ಯತಾ ನಿವಾರಣೆ ಮತ್ತು ಸತ್ಯ ಅಹಿಂಸೆಗಳ ಆವಶ್ಯಕತೆಯನ್ನು ಹೇಳಿದರು. ಆಗ ಜಗದ್ಗುಗಳು ಅಸ್ಪೃಶ್ಯತಾನಿವಾರಣೆಯನ್ನು ಕುರಿತು ಅಸ್ಪೃಶ್ಯರಲ್ಲಿರುವ ಹೀನಗುಣಗಳನ್ನು ಹೋಗಲಾಡಿಸಿ, ಅವರಲ್ಲಿ ಸದ್ಗುಣ, ಶಿವಭಕ್ತಿ ಸಂಸ್ಕಾರಗಳು ಹುಟ್ಟುವಂತೆ ಜಾಗೃತಗೊಳಿಸಬೇಕೆಂದು ಹೇಳಿದರು. 800 ವರ್ಷಗಳ ಹಿಂದೆಯೆ ಬಸವಣ್ಣನವರು ಅಸ್ಪೃಶ್ಯರ ಉದ್ಧಾರ ಮಾಡಿದ್ದನ್ನು ಸ್ವಾಮಿಗಳು ತಿಳಿಸಿದರು. ಮಹಾತ್ಮ ಗಾಂಧೀಜಿಯವರು ಶ್ರೀ ಜಗದ್ಗುರುಗಳ ಪರಿಪಕ್ವ ವಿಚಾರಧಾರೆಯನ್ನು ಸಂತೋಷದಿಂದ ಕೇಳಿ ಅವರ ದರ್ಶನದಿಂದ ಕೃತಾರ್ಥರಾದರು.

ಷಟ್‌ಸ್ಥಲ ಚಕ್ರವರ್ತಿ ಶ್ರೀ ಜಗದ್ಗುರುಗಳು ಮತ್ತು ರಾಜರ್ಷಿ ನಾಲ್ವಡಿ ಕೃಷ್ಣರಾಜ ಭೂಪಾಲರು :

ಮೈಸೂರರಸರು ಹಿಂದಿನಿಂದಲೂ ಈ ಬೃಹನ್ಮಠಕ್ಕೆ ನಡೆದುಕೊಳ್ಳುತ್ತಾ ಬಂದಿದ್ದಾರೆ. 7ನೇ ಪಟ್ಟಾಧಿಕಾರಿಗಳಾದ ಶ್ರೀ ಕಟ್ಟಿಗೆಹಳ್ಳಿ ಸ್ವಾಮಿಗಳು, 8 ನೆಯವರಾದ ಮುರುಘರಾಜೇಂದ್ರ ಸ್ವಾಮಿಗಳು, 18 ನೆಯರಾದ ಶ್ರೀ ಸಣ್ಣಜರಹದ ರಾಜೋಟಿ ಸ್ವಾಮಿಗಳು ಮೈಸೂರಿಗೆ ದಯಮಾಡಿಸಿ ಅಲ್ಲಿನ ದೊರೆಗಳಿಂದ ರಾಜಮನ್ನಣೆ ಹೊಂದಿದ್ದಾರೆ.

ದಿನಾಂಕ 14—9—1937 ರಂದು ಚಿತ್ರದುರ್ಗದ ಬೃಹನ್ಮಠದಲ್ಲಿ ಎಲ್ಲಿಲ್ಲದ ಸಡಗರ, ಸಂಭ್ರಮ. ತಳಿರು ತೋರಣಗಳಿಂದ ಅಲಂಕೃತವಾಗಿದ್ದ ಬೃಹನ್ಮಠವು ಭಕ್ತಾದಿಗಳಿಂದ ತುಂಬಿಹೋಗಿತ್ತು. ಇಷ್ಟಕ್ಕೆಲ್ಲ ಕಾರಣ ಮೈಸೂರಿನ ದೊರೆಗಳಾದ ಶ್ರೀ ನಾಲ್ವಡಿ ಕೃಷ್ಣರಾಜೇಂದ್ರರು ಮಹಾ ಸನ್ನಿಧಿಯ ದರ್ಶನಾರ್ಥವಾಗಿ ಬೃಹನ್ಮಠಕ್ಕೆ ಆಗಮಿಸುವವರಿದ್ದರು.

ಬೆಳಿಗ್ಗೆ 9-15 ಕ್ಕೆ ಶ್ರೀಮನ್ಮಹಾರಾಜರು, ದಿವಾನ್ ಮಿರ್ಜಾ ಸಾಹೇಬರ ಜೊತೆಗೆ ಮಠಕ್ಕೆ ಆಗಮಿಸಿದರು. ಅವರನ್ನು ಅತ್ಯಂತ ವೈಭವದಿಂದ ಮಹಾಸ್ವಾಮಿಗಳು ಚರಮೂರ್ತಿಗಳೊಡನೆ ಸ್ವಾಗತಿಸಿದರು. ಕರ್ತೃ ಗದ್ದುಗೆಯ ದರ್ಶನ, ಮಂಗಳಾರತಿಯ ನಂತರ ಮಹಾರಾಜರು ಶ್ರೀ ಜಗದ್ಗುರುಗಳೊಂದಿಗೆ ಜಯದೇವ ಮಹಲಿಗೆ ದಯಮಾಡಿಸಿ ಉಚಿತಾಸನಗಳಲ್ಲಿ ಮಂಡಿಸಿದರು. ಮಹಾರಾಜರು ಫಲಪುಷ್ಪಾದಿ ಕಾಣಿಕೆಗಳನ್ನು ಅರ್ಪಿಸಿ ಶ್ರೀ ಜಗದ್ಗುರುಗಳ ಪಾದಕ್ಕೆ ನಮಸ್ಕರಿಸಿದರು. ಶ್ರೀ ಜಗದ್ಗುರುಗಳು ಮಹಾರಾಜರಿಗೆ ಬಂಗಾರದ ಜರಿಮಾಲೆಯನ್ನು ಹಾಕಿ, ಆಶೀರ್ವಾದಪೂರ್ವಕವಾಗಿ ಜರಿ ಶಲ್ಯ, ಪೇಟ, ಬಿಳೀ ರೇಷ್ಮೆ ಬಟ್ಟೆಯ ಮೇಲೆ ಮುದ್ರಿಸಿದ ಬಿಲ್ಲತ್ತು, ವಿಭೂತಿ ಗಟ್ಟಿ, ಗೌರೀಶಂಕರ, ಜಪಮಾಲೆ, ಸ್ಪಟಿಕಲಿಂಗ ಮುಂತಾದುವುಗಳನ್ನು ಅರ್ಪಿಸಲು ಮಹಾರಾಜರು ಭಕ್ತಿಭಾವಗಳಿಂದ ಸ್ವೀಕರಿಸಿದರು.

ಮಹಾರಾಜರು ಹೊರದೇಶಕ್ಕೆ ಹೋಗಿ ಬಂದದ್ದು ಮತ್ತು ಮಿರ್ಜಾ ಸಾಹೇಬರ ರಾಜಭಕ್ತಿ ಇವುಗಳನ್ನು ಜಗದ್ಗುರುಗಳು ಪ್ರಸ್ತಾಪ ಮಾಡಿದರು. ಅನಂತರ ಬಸವಣ್ಣ ಮತ್ತು ಶಿವಶರಣರು ಹೇಳಿದ ವಚನಗಳು ಸರಳವಾಗಿದ್ದರೂ ಹೇಗೆ ವೇದಾಗಮಗಳ ಸಾರವನ್ನೊಳಗೊಂಡಿವೆ ಎಂಬುದನ್ನು ವಿವರಿಸಿದರು. ಮಹಾರಾಜರು "ಜಗದ್ಗುರು ಮಹಾಸ್ವಾಮಿಗಳೆ, ತಾವು ಶಿಕ್ಷಣ ಪ್ರಸಾರಕ್ಕಾಗಿ ಹಾಗು ಇತರ ಮಹತ್ಕಾರ್ಯಗಳಿಗೆ ಶ್ರಮವಹಿಸಿ ಮಾಡಿರುವ ಕೆಲಸಗಳು ನಮ್ಮ ಮೈಸೂರು ಸಂಸ್ಥಾನಕ್ಕೆ ಕೀರ್ತಿ ಗೌರವಗಳನ್ನು ತರತಕ್ಕವುಗಳಾಗಿವೆ" ಎಂದು ಪ್ರಶಂಸಿಸಿದರು. ಶ್ರೀ ಜಗದ್ಗುರುಗಳೊಂದಿಗೆ ಮಠದ ಕೆಲವು ಭಾಗಗಳನ್ನು ನೋಡಿ ಮಹಾರಾಜರು ತಮ್ಮ ಪರಿವಾರದೊಂದಿಗೆ ಹೊರಟರು.

ನಾಡು ನುಡಿಗಳ ಪ್ರೇಮ :

ಕನ್ನಡ ನಾಡು, ನುಡಿ, ಸಂಸ್ಕೃತಿಗಳ ಬಗ್ಗೆ ಶ್ರೀ ಜಗದ್ಗುರುಗಳು ಅತ್ಯಂತ ಅಭಿಮಾನವುಳ್ಳವರಾಗಿದ್ದರು. ಹರಿದು ಹಂಚಿ ಹೋಗಿದ್ದ ಕನ್ನಡ ಪ್ರದೇಶಗಳು ಒಂದುಗೂಡಿ ಅಖಂಡ ಕರ್ನಾಟಕವಾಗಬೇಕೆಂದು ಅವರ ಹೆಬ್ಬಯಕೆಯಾಗಿದ್ದಿತು. ಅದ್ದರಿಂದಲೇ ಅಖಿಲ ಕರ್ನಾಟಕ ಏಳನೆಯ ಸಮ್ಮೇಳನದ ಪ್ರಾರಂಭೋತ್ಸವವನ್ನು ಶ್ರೀ ಜಗದ್ಗುರುಗಳು ಮಾಡಲು ಒಪ್ಪಿಕೊಂಡರು. ಆ ಸಮ್ಮೇಳನದ ಉದ್ಘಾಟನಾ ಭಾಷಣ ಮಾಡುತ್ತಾ, "ಕರ್ನಾಟಕ ಏಕೀಕರಣದ ಕಾರ್ಯವು ಕನ್ನಡಿಗರಿಗೆ ಮಹತ್ವದ್ದಾಗಿರುತ್ತದೆ. ಕನ್ನಡ ನಾಡಿನ ಇತಿಹಾಸವು ಎಷ್ಟು ಉಜ್ವಲವಾಗಿದೆಯೋ ಅಷ್ಟೇ ಪ್ರಾಚೀನವೂ ಆಗಿರುತ್ತದೆ" ಎಂದು ತಿಳಿಸಿ ಕನ್ನಡಿಗರ ಸಂಸ್ಕೃತಿ, ಸಾಹಿತ್ಯ ಇವುಗಳ ಬಗ್ಗೆ ಪ್ರಸ್ತಾಪ ಮಾಡಿ ತಮ್ಮ ಭಾಷಣವನ್ನು ಮುಂದು-ವರೆಸುತ್ತಾ "ಕನ್ನಡಿಗರೆಲ್ಲರೂ ಒಂದೇ ಎಂಬುವ ಭಾವನೆಯನ್ನು

ತಾಳಬೇಕು. ನಮ್ಮ ಕುಲವು ಕನ್ನಡ ಕುಲವು. ನಮ್ಮ ಸಂಸ್ಕೃತಿಯು ಕನ್ನಡ........ಕರ್ನಾಟಕ ಏಕೀಕರಣಕ್ಕೆ ನಮ್ಮ ಸಂಸ್ಥಾನದ ಸಂಪೂರ್ಣ ಸಹಾನುಭೂತಿಯುಂಟು" ಎಂದು ಅಪ್ಪಣೆ ಕೊಡಿಸಿದರು. ಶ್ರೀ ಜಗದ್ಗುರುಗಳ ಆಶೀರ್ವಾದದ ಫಲದಿಂದ ಇಂದು ಕರ್ನಾಟಕದ ಏಕೀಕರಣವಾಗಿದ್ದರೂ ಅವರು ತಮ್ಮ ಭಾಷಣದಲ್ಲಿ ಅನುಗ್ರಹಿಸಿದ ಮಾತುಗಳು ಕನ್ನಡಿಗರಿಗೆ ಮಾರ್ಗದರ್ಶಕವಾಗಿವೆ.

ಆತ್ಮ ಪರಮಾತ್ಮರ ಸಮ್ಮಿಲನ :

ಶ್ರೀ ಜಗದ್ಗುರುಗಳವರಿಗೆ ವಯಸ್ಸಾಗುತ್ತಾ ಬಂದಿತು. 1942 ನೆಯ ಇಸವಿ ಬೃಹನ್ಮಠದಲ್ಲಿ ಮಹಾಜನರ ಎದುರಿಗೆ ಶ್ರೀ ಜಯದೇವ ಜಗದ್ಗುರುಗಳು ಮುಳಗುಂದದ ಶ್ರೀ ಶಿವಲಿಂಗದೇವರನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ಗೊತ್ತುಮಾಡಿದರು. ಅವರು ಕಾಶಿಯಲ್ಲಿ ವೇದಾಧ್ಯಯನ ಮಾಡಿ, ಪಾಂಡಿತ್ಯವನ್ನು ಗಳಿಸಿಕೊಂಡು ಹಿಂದಿರುಗಿದರು. 1949 ನೆಯ ಇಸವಿ ಶ್ರೀ ಶಿವಲಿಂಗದೇವರು ಶ್ರೀ ಜಗದ್ಗುರು ಜಯವಿಭವ ಮುರುಘರಾಜೇಂದ್ರ ಮಹಾಸ್ವಾಮಿಗಳು ಎಂಬ ನಾಮಧೇಯದಿಂದ ಶೂನ್ಯಸಿಂಹಾಸನವನ್ನೇರಿದರು.

ಶ್ರೀ ಜಯದೇವ ಜಗದ್ಗುರುಗಳ ಸಮಾಧಿ ದಾವಣಗೆರೆಯಲ್ಲಿ ಆಗಬೇಕೆಂದು ಆ ಪಟ್ಟಣದ ಭಕ್ತರ ಪ್ರಾರ್ಥನೆಯನ್ನು ಉಭಯ ಜಗದ್ಗುರುಗಳು ಒಪ್ಪಿಕೊಂಡರು. ಮಹಾಸನ್ನಿಧಿಯವರೇ ತಮ್ಮ ಸಮಾಧಿಗೆ ಸ್ಥಳವನ್ನು ಚುನಾಯಿಸಿ, ಅದನ್ನು ಹೇಗೆ ಕಟ್ಟಬೇಕೆಂಬ ಸಲಹೆ ಕೊಟ್ಟರು. ತಾವು ಶಿವನಲ್ಲಿ ಬೆರೆಯುವ ಕಾಲವನ್ನು ಮೂರು ತಿಂಗಳ ಮುಂಚೆಯೇ ಬ್ಯಾಡಗಿಯಲ್ಲಿ ಭಕ್ತರ ಎದುರಿಗೆ ಅಪ್ಪಣೆ ಕೊಡಿಸಿದರು. 1956 ನೇ ಇಸವಿ ಭಾದ್ರಪದ ಬಹುಳ ಚತುರ್ದಶಿ ಸೋಮವಾರ ಬೆಳಗಿನ ಜಾವ ಮಹಾ ಸನ್ನಿಧಿಯ ಆತ್ಮ ಪರಮಾತ್ಮನಲ್ಲಿ ಲೀನವಾಯಿತು. ಎಲ್ಲೆಲ್ಲಿಯೂ ನೀರವತೆ ! ಇಡೀ ಪ್ರಕೃತಿಯೆ ಮಹಾಪುರುಷನಿಗೆ ಮೌನದಿಂದ ತನ್ನ ಅಂತಿಮ ಶ್ರದ್ಧಾಂಜಲಿಯನ್ನು ಭಕ್ತಿಪೂರ್ವಕವಾಗಿ ಅರ್ಪಿಸಿತು.

ಮಂಗಳವಾರ ಬೆಳಿಗ್ಗೆ ಶ್ರೀ ಜಗದ್ಗುರುಗಳ ಕಳೇಬರದ ಉತ್ಸವವನ್ನು ಚಿತ್ರದುರ್ಗದಲ್ಲಿ ನೆರವೇರಿಸಿ ದಾವಣಗೆರೆಗೆ ತರಲಾಯಿತು. ಈ ವಿಷಯ ದೇಶಾದ್ಯಂತ ಹರಡಿ ಭಕ್ತಾದಿಗಳು ಶ್ರೀ ಜಗದ್ಗುರುಗಳ ಅಂತಿಮ ದರ್ಶನಕ್ಕೆ ನಾನಾ ಕಡೆಗಳಿಂದ ಬರತೊಡಗಿದರು. ಶ್ರೀ ಜಗದ್ಗುರುಗಳ ಕಳೇಬರವನ್ನು ಪಲ್ಲಕ್ಕಿಯಲ್ಲಿಟ್ಟು, ಉತ್ಸವದಿಂದ ಶಿವಯೋಗಾಶ್ರಮಕ್ಕೆ ತೆಗೆದುಕೊಂಡು ಹೋಗಿ, ವಿಧ್ಯುಕ್ತ ರೀತಿಯಲ್ಲಿ ಅಂತ್ಯ ಸಂಸ್ಕಾರ ಮಾಡಲಾಯಿತು.

ಅಖಂಡವಾಗಿ 53 ವರ್ಷಗಳವರೆಗೆ ಮಹಾಪೀಠವನ್ನು ಬೆಳಗಿ, ತಮ್ಮ ಪ್ರಭೆಯಿಂದ ವೀರಶೈವ ಸಮಾಜದ ಅಂಧಕಾರವನ್ನು ಕಳೆದು, ಅದರ ಸರ್ವತೋಮುಖವಾದ ಮುನ್ನಡೆಗೆ ನಾಂದಿ ಹಾಡಿದವರು ಶ್ರೀ ಜಯದೇವ ಜಗದ್ಗುರುಗಳು. ವೈಜ್ಞಾನಿಕ ದೃಷ್ಟಿ, ವಿಶ್ವವೈಶಾಲ್ಯ, ಅನನ್ಯ ಅಸಾಧಾರಣ ದೈವ ಭಕ್ತಿ, ನಿಷ್ಕಳಂಕ ಶೀಲ ಸ್ವಭಾವ ಮುಂತಾದುವು ಮಹಾ ಸನ್ನಿಧಿಯ ಮೇರುಗುಣಗಳು. " ಶ್ರೀ ಜಗದ್ಗುರುಗಳ ಜೀವನ ಭವ್ಯವಾದುದು; ಸಾಧನೆ ಅಗಾಧವಾದುದು; ತಪಸ್ಸು ಅದ್ವಿತೀಯವಾದುದು " ಎಂದು ಶ್ರೀ ಎಸ್. ನಿಜಲಿಂಗಪ್ಪನವರು ಹೇಳಿದ್ದಾರೆ. ಭಾರತದ ಉಪಾಧ್ಯಕ್ಷರಾಗಿರುವ ಮಾನ್ಯ ಶ್ರೀ ಬಿ. ಡಿ. ಜತ್ತಿಯವರು "ಶ್ರೀಗಳವರು ಯುಗಪುರುಷರು........ ಅವರ ಜೀವನಾವಧಿಯಲ್ಲಿ ಕೇವಲ ವೀರಶೈವ ಜನಾಂಗಕ್ಕೆ ಸಹಾಯ ಮಾಡಲಿಲ್ಲ. ಅವರು ಸರ್ವ ಸಮಾಜದವರಿಗೂ ಅಭಯ ಹಸ್ತವನ್ನು ನೀಡಿದ್ದಾರೆ" ಎಂದು ವಿಶ್ವವಿಭೂತಿಯಾದ ಶ್ರೀ ಜಯದೇವ ಜಗದ್ಗುರುಗಳ ಬಗ್ಗೆ ಹೇಳಿರುವ ಮಾತುಗಳನ್ನು ಈ ಸಂದರ್ಭದಲ್ಲಿ ನೆನೆಯುವುದು ಸೂಕ್ತ.

[illegible] :

1) ಶ್ರೀ ಜಯದೇವ ಲೀಲೆ
2) ಶ್ರೀ ಮುರುಘರಾಜೇಂದ್ರ ವಿಜಯ
3) ಶ್ರೀ ಜಗದ್ಗುರು ಜಯದೇವ ದಿಗ್ವಿಜಯ



ನಾನು ಕಂಡ ಜಗದ್ಗುರು ಜಯದೇವ ಮಹಾಸ್ವಾಮಿಗಳವರು

ಲೇಖಕರು :
ಡಾ॥ ಎಂ. ಸಿದ್ಧಲಿಂಗಯ್ಯ, ಎಂ.ಎ.,ಬಿ.ಟಿ.,
ಪಿ.ಎಚ್.ಡಿ.,
ಮೈಸೂರು.

ಮಹಾ ತಪಸ್ವಿಗಳೂ, ವಿಶ್ವಪ್ರೇಮಿಗಳೂ, ಭಕ್ತಾಧೀನರೂ, ಧೀನಬಂಧುಗಳೂ, ಸಮಾಜೋದ್ಧಾರಕರೂ ಆಗಿದ್ದ ಮಹಾಸ್ವಾಮಿಗಳವರ ದಿವ್ಯ ಸಂದರ್ಶನ ಮತ್ತು ಆಶೀರ್ವಾದ ಕೃಪೆ ನಾನಿನ್ನೂ ಚಿಕ್ಕ ವಯಸ್ಸಿನ ಬಾಲಕನಾಗಿದ್ದಾಗಲೇ ದೊರೆತಿದ್ದುದು ನನ್ನ ಭಾಗ್ಯೋದಯ. ನಾನು 1909 ರಲ್ಲಿ ಆಗತಾನೇ ಇಂಗ್ಲೀಷ್ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಮುಂದಿನ ಅಭ್ಯಾಸಕ್ಕೆ ಅನ್ನ ವಸತಿಗಳ ಸಹಾಯಕ್ಕಾಗಿ ಶ್ರೀ ಗುರು ಸನ್ನಿಧಿಯಲ್ಲಿ ನನ್ನ ತಂದೆಯವರೊಂದಿಗೆ ಗುಬ್ಬಿ ಮೊಕ್ಕಾಂನಲ್ಲಿ ಪ್ರಾರ್ಥನೆ ಸಲ್ಲಿಸಲಾಯಿತು. ಅದೇನು ನನ್ನ ಪುಣ್ಯವೋ, ಶ್ರೀ ಜಗದ್ಗುರುಗಳವರು ನನ್ನ ಮೇಲೆ ಕರುಣಾಕಟಾಕ್ಷ ಬೀರಿದರು. ಅನ್ನ ವಸತಿಗಳ ಏರ್ಪಾಡಿಗೆ ಬೆಂಗಳೂರಿಗೆ ಹೋಗಿ ಸರ್ ಕೆ. ಪಿ. ಪುಟ್ಟಣ್ಣಸೆಟ್ಟರವರು ಮತ್ತು ಗುಬ್ಬಿ ತೋಟದಪ್ಪನವರನ್ನು ನೋಡಬೇಕೆಂದೂ ಉಳಿದ ಖರ್ಚುಗಳಿಗಾಗಿ ಧನ ಸಹಾಯ ಮಾಡುವುದಾಗಿಯೂ ಅಪ್ಪಣೆ ದಯಪಾಲಿಸಿದರು. ಅದರಂತೆ ಮಹಾಸ್ವಾಮಿಯವರು ನಾನು ಪದವೀಧರನಾಗುವವರೆಗೂ ಬಹಳ ಉದಾರ ಸಹಾಯ ಮಾಡಿದರು. ಅಷ್ಟು ಮಾತ್ರವೇ ಅಲ್ಲ, ನನಗೆ ರಜ ದೊರೆತಾಗಲೆಲ್ಲ ಮಹಾ ಸ್ವಾಮಿಯವರ ಕ್ಯಾಂಪಿಗೆ ಬರಮಾಡಿಕೊಂಡು ವಾರಗಟ್ಟಲೆ ತಮ್ಮ ಕೃಪಾಶ್ರಯದಲ್ಲಿಟ್ಟುಕೊಂಡಿದ್ದು ಸಂದರ್ಶನಾಶೀರ್ವಾದಗಳನ್ನು ಪ್ರತ್ಯಕ್ಷವಾಗಿ ದಯಪಾಲಿಸುತ್ತಿದ್ದುದನ್ನು ನಾನು ಯಾವಜ್ಜೀವವೂ ಮರೆಯಲಾರೆನು. ಸಂಜೆಯ ವೇಳೆ ಮೇನಾದಲ್ಲಿ ಸವಾರಿಯು ಗಾಳಿ ಸಂಚಾರ ಹೊರಡುವಾಗಲೆಲ್ಲ ನಾನು ಜತೆಯಲ್ಲಿ ಹೊರಟು ಮಹಾ ಪಾದದೊಡನೆ ಅತ್ಯಂತ ಪ್ರೇಮದ ಸಂಪರ್ಕ ಪಡೆಯುತ್ತಿದ್ದುದು ನನ್ನ ಜೀವನದ ಮೇಲೆ ಎಂತಹ ಪರಿಣಾಮವುಂಟುಮಾಡಿತೆಂಬುದನ್ನು ನಾನು ಉಲ್ಲೇಖಿಸಲು ಪ್ರಾರಂಭಿಸಿದರೆ ನನಗೆ ರೋಮಾಂಚನವಾಗುತ್ತದೆ.

ನಾನು ರಜಾ ಕಾಲದಲ್ಲಿ ನಮ್ಮೂರು ಕೊರಟಗೆರೆಯಲ್ಲಿ ನನ್ನ ತಂದೆ ತಾಯಿಯರೊಂದಿಗೆ ಇರುವಾಗ ಆ ಊರಿನಲ್ಲಿ ಮಹಾಸ್ವಾಮಿಯವರ ಕ್ಯಾಂಪು ಏರ್ಪಟ್ಟಿತು. ನಮ್ಮ ಮನೆ ರಸ್ತೆಯ ಪಕ್ಕದಲ್ಲೇ ಇದ್ದು ಒಂದು ದಿನ ಸಾಯಂಕಾಲ ಮಹಾಸ್ವಾಮಿಯವರು ಮೇನಾದಲ್ಲಿ ಸಂಚಾರ ಹೊರಟಿದ್ದಾಗ ನಾನು ನಮ್ಮ ಮನೆ ಹತ್ತಿರ ಮಹಾಸ್ವಾಮಿಯವರನ್ನು ಸಂಧಿಸಿ ಮನೆಗೆ ದಯಮಾಡಿಸಬೇಕೆಂದು ಅರಿಕೆ ಮಾಡಿಕೊಂಡೆನು. ಇನ್ನೂ ಹುಡುಗತನ, ಯಾವುದೊಂದೂ ಆಲೋಚಿಸದಲೇ ಈ ರೀತಿ ಅರಿಕೆ ಮಾಡಿಕೊಂಡಾಗ ಮಹಾಸ್ವಾಮಿಯವರು ಆ ಕ್ಷಣವೇ ಮೇನಾದವರನ್ನು ನಿಲ್ಲಿಸಿ, ಮೇನಾದಿಂದ ಇಳಿದು ನಮ್ಮ ಮನೆಗೆ ದಯಮಾಡಿಸಿದುದು ನನ್ನ ತಂದೆ ತಾಯಿಯವರಿಗೆ ದಿಗ್ಭ್ರಮೆಯಾಗುವಂತೆ ಅತಿ ಆನಂದ. ಧೂಳಿಕಾ ಮುಹೂರ್ತ, ಮಹಾಸ್ವಾಮಿಯವರ ಪಾದಧೂಳಿಯ ಆಶಾಕಾಂಕ್ಷೆಗಳು ನಮಗೆ ಮೂಡಿ ಬಂದು ಮಹಾ ಪಾದಗಳ ಪಾದಾರ್ಚನೆ ಬೇಡಲು ಅದಕ್ಕೆ ಅತ್ಯಂತ ಸಂತೋಷದ ಒಪ್ಪಿಗೆ ದೊರೆಯಿತು" ನಾನೆಲ್ಲಿ ! ಮಹಾಸ್ವಾಮಿ, ಜಗದ್ಗುರುಗಳವರ ಅತ್ಯುನ್ನತ ಶ್ರೇಷ್ಠ ಸ್ಥಾನವೆಲ್ಲಿ ! ಇಂತಹ ಅನುಭವ ಎಷ್ಟು ಅಸಾಧಾರಣವೆನ್ನುವುದನ್ನು ಈಗ ನೆನಸಿಕೊಂಡರೆ ಉಂಟಾಗುವ ಹರ್ಷ ಆನಂದದ ಪರಿಮಿತಿ ಹೇಳಲು ಸಾಧ್ಯವಿಲ್ಲ.

ಮಹಾಸ್ವಾಮಿಯವರ ದಿಟ್ಟತನ, ದಿಟ್ಟ ಮನಸ್ಸು, ದಿಟ್ಟ ಪ್ರತಿಜ್ಞೆಗಳು ಅಸದಳ. ಯಾರೂ ಏನೇ ಹೇಳಿದರೂ ತಮ್ಮದೇ ಆದ ಒಂದು ಸಂಕಲ್ಪ ನೆರವೇರಿದ ಹೊರ್ತು ಬೇರೆ ಮಾರ್ಗವೇ ಇಲ್ಲವೆಂಬತ್ತಿತ್ತು. ಒಮ್ಮೆ ಗುಬ್ಬಿ ತಾಲ್ಲೂಕ್ ಕ್ಯಾಂಪಿನಲ್ಲಿರುವಾಗ ಮಹಾಸ್ವಾಮಿಯವರ ಉತ್ಸವಾದಿಗಳಿಗೆ ಏನೋ ಅಡ್ಡಿ ಆತಂಕಗಳುಂಟಾದವು. ನಾನಿನ್ನೂ ಬಾಲಕನಾಗಿದ್ದುದರಿಂದ ವಿಷಯಗಳು ನನಗೆ ತಿಳಿಯವು. ಆದರೆ ಇಷ್ಟು ಮಾತ್ರ ಇಡೀ ರಾಜ್ಯದಲ್ಲೇ ಎಲ್ಲ ಜನರಿಗೂ ಗೊತ್ತು. ದೊಡ್ಡಗುಣಿ ಎಂಬ ಸ್ಥಳದಲ್ಲಿ ತಿಂಗಳಾನುಗಟ್ಲೆ ಮಹಾಸ್ವಾಮಿಯವರ ಕ್ಯಾಂಪು, ಅಲ್ಲಿಯೇ ನಿತ್ಯಪೂಜೆ, ಅದು ಅವರಿಗೆ ಆಗ ತಪೋ ಭೂಮಿಯೇ ಆಯಿತು. ಅವರ ಸಂಕಲ್ಪ ನೆರವೇರಿತು. ಆಮೇಲೆ ಅಲ್ಲಿಂದ ಮುಂದೆ ಸವಾರಿ ದಯಮಾಡಿಸಿದರು. ಹೀಗೆಯೇ ಇದೇ ರೀತಿಯ ಅನುಭವ ಒಮ್ಮೆ ಸಿದ್ಧಗಂಗೆಯಲ್ಲಿಯೂ ಮತ್ತೊಮ್ಮೆ ಶಿವಗಂಗೆ ಸಮೀಪದಲ್ಲಿ ಕಂಬಾಳಿನಲ್ಲಿಯೂ ಆದಾಗ ನಾನು ಮಹಾಸ್ವಾಮಿಯವರ ಕ್ಯಾಂಪಿನಲ್ಲಿ ಕೆಲಕಾಲ ಇದ್ದುದೂ ನನ್ನ ಪೂರ್ವ ಪುಣ್ಯವೇ ಸರಿ.

ಭಕ್ತಾದಿಗಳೊಡನೆ ವ್ಯವಹರಿಸುವಾಗ ಶ್ರೀ ಮಹಾಸ್ವಾಮಿಗಳವರ ವ್ಯವಹಾರ ಜ್ಞಾನ ಮತ್ತು ದಿಟ್ಟತನ ಇವುಗಳನ್ನು ನಾನು ಕಣ್ಣಾರೆ ಕಂಡು ಕಿವಿಯಾರೆ ಕೇಳುತ್ತಿರುವಾಗ ಇಂತಹ ದೃಶ್ಯಗಳೂ ಸನ್ನಿವೇಶಗಳೂ ನನ್ನ ಮೇಲೆ ಉಂಟು ಮಾಡಿದ ಪರಿಣಾಮವೂ ಅತಿಶಯವಾದುದೇ !

ಆಯಾಯ ಸ್ಥಳಗಳಲ್ಲಿ "ಕಾಣಿಕೆ ವಸೂಲಿ" ಕಾರ್ಯವು ಎಷ್ಟು ಚಾಕಚಕ್ಯತೆಯಿಂದ ನಡೆಯುತ್ತಿದ್ದಿತೋ ಅದಕ್ಕಿಂತಲೂ ಮಿಗಿಲು ವಂತೆ ಆಯಾಯ ಕ್ಯಾಂಪುಗಳನ್ನು ಬಿಟ್ಟು ಮುಂದಿನ ಕ್ಯಾಂಪಿಗೆ ಪ್ರಯಾಣ ಬೆಳಸುವಾಗ ವಸೂಲಾದ ಹಣದಲ್ಲಿ ಬಹುತೇಕ ಭಾಗ ಆಯಾಯ ಸ್ಥಳಗಳ ಭಕ್ತಾದಿಗಳ, ಸರ್ವ ಜನರ ಮತ್ತು ಮುಂದಿನ

ಹಿಂದುಳಿದವರ ವಿದ್ಯಾರ್ಥಿಗಳ ಪುರೋಭಿವೃದ್ಧಿಗಾಗಿಯೇ ಮೀಸಲಾಗಿ ತೆರೆಯಲ್ಪಟ್ಟು, ಅಲ್ಲಿ ವಿದ್ಯಾರ್ಥಿ ನಿಲಯಗಳು ಏರ್ಪಡಿಸಲ್ಪಡುತ್ತಿದ್ದುದು ಬೇರೆಂದೂ ಕಾಣದ ಒಂದು ವೈಶಿಷ್ಟ್ಯ. ಮಹಾಸ್ವಾಮಿಗಳವರ ಹೃದಯದಲ್ಲಿ ವಿದ್ಯಾರ್ಥಿಗಳೆಂದರೆ ಎಂತಹ ಸದ್ಭಾವಗಳು ಅಂಕುರಿಸುತ್ತಿದ್ದವೆಂಬುದನ್ನು ಇದರಿಂದ ಊಹಿಸಬಹುದು.

ಮಹಾಸ್ವಾಮಿಯವರ ಕೃಪೆ, ಆಶೀರ್ವಾದ ಎಲ್ಲವನ್ನು ಮನದಣಿಯ ಅನುಭವಿಸಿ, ಪದವೀಧರನಾಗಿ ಶಿವಮೊಗ್ಗ ಹೈಸ್ಕೂಲಿನಲ್ಲಿ ವಿಜ್ಞಾನ ಬೋಧಕನಾಗಿ ಕೆಲಸಮಾಡುತ್ತಿರುವಾಗ ಮಹಾಸ್ವಾಮಿಯವರ ಕ್ಯಾಂಪು ಶಿವಮೊಗ್ಗೆಗೆ ದಯಮಾಡಿಸಿತು. ಅಲ್ಲಿ ನನ್ನ ಕುಟುಂಬದೊಂದಿಗೆ ನನ್ನ ಕೈಲಾದ ಸೇವೆ ಅರ್ಪಿಸಿದಾಗ ಮಹಾಸ್ವಾಮಿಯವರು ತೋರಿದ ಕರುಣೆ ಹಿಂದಿನ ಎಲ್ಲಕ್ಕಿಂತಲೂ ಮೀರಿದುದು. ಮಹಾಸ್ವಾಮಿಯವರು ಏಕಾಂತದಲ್ಲಿರುವಾಗ ನನ್ನನ್ನು ಒಮ್ಮೆ ಹತ್ತಿರ ಕರೆದರು. ಅವರಿಗೆ ಸಾಮುದ್ರಿಕದಲ್ಲಿ ಅಸಾಧಾರಣಕಾಂಕ್ಷೆ. ನನಗೆ ಅವರ ದರ್ಶನ ದೊರೆತಾಗಲೆಲ್ಲ "ಎಲ್ಲಿ ಕೈ ಕೊಡು" ಎಂದು ಹೇಳಿ ನನ್ನ ಹಸ್ತವನ್ನೇ ಹಿಡಿದು ನೋಡುತ್ತಿದ್ದಾಗಲೆಲ್ಲ ನನಗೆ ನಿಜವಾಗಿಯೂ ರೋಮಾಂಚನವೇ ಆಗುತ್ತಿತ್ತು. ಈ ಕ್ಷಣಕ್ಕೂ ನನ್ನ ಕಣ್ಣಿಗೆ ಕಟ್ಟಿದಂತೆ ಜ್ಞಾಪಕ ಬರುತ್ತದೆ. ಬೆಂಗಳೂರು ಧಾರ್ವಾಡ ಇನ್ನು ಮುಂತಾದ ಕಡೆಗಳಲ್ಲಿ ನಾನು ದರ್ಶನ ಪಡೆದಾಗಲೆಲ್ಲ ಇದೇ ರೀತಿಯ ಅನುಭವ. ಆದರೆ ಶಿವಮೊಗ್ಗೆಯಲ್ಲಿ ಆದ ಅನುಭವ ನನ್ನ ಜೀವನದಲ್ಲಿ "ಸಾಕ್ಷಾತ್ ಈಶ್ವರಾನುಗ್ರಹ"ವೆಂದೇ ಧೈರ್ಯವಾಗಿಯೂ, ಹೆಮ್ಮೆಯಿಂದಲೂ ಹೇಳಬಯಸುತ್ತೇನೆ.

ಮತ್ತೊಮ್ಮೆ ಹತ್ತಿರ ಕರೆದು ಆಶೀರ್ವದಿಸಿದರು. ತಾವು ಬಹಳ ದಿನ ಉಪಯೋಗಿಸಿದ್ದ "ಪಾದುಕೆ" ಒಂದು ಜೊತೆ, ನನ್ನ ಕೈಗೆ ಆಶೀರ್ವದಿಸಿ ಕೊಟ್ಟು ಇವುಗಳನ್ನು ಸದಾ ಪೂಜಿಸಿಕೊಂಡಿರು ಎಂದು ಆಶೀರ್ವದಿಸಿ, ''ಲೌಕಿಕ ವ್ಯವಹಾರವನ್ನು ಅಷ್ಟಾಗಿ ಮನಸ್ಸಿಗೆ ತೆಗೆದುಕೊಳ್ಳಬೇಡ. ನುಡಿದಂತೆ ನಡೆಯುವುದನ್ನು ಆದಷ್ಟು ಕಲಿ, ದೇವರು ನಿನಗೆ ಒಳ್ಳೆಯದು ಮಾಡಲಿ.'' ಎಂದು ಮಾತ್ರ ಅಪ್ಪಣೆ ಕೊಡಿಸಿದರು. ಮೈ ಜುಂ ಎಂದಿತು. ಆನಂದಬಾಷ್ಪಗಳು ಕಣ್ಣಲ್ಲಿ ಸುರಿದವು. ಮಹಾಸನ್ನಿಧಿಯಿಂದ ಹೊರ ಹೊಮ್ಮಲು ಮನಸ್ಸು ಬರಲಿಲ್ಲ ! ಆದರೇನು ! ಪ್ರಪಂಚ ! ವ್ಯವಹಾರ ! ಆದರೂ ಮಹಾ ಸ್ವಾಮಿಯವರ ಮಹಾಪಾದ ಧ್ಯಾನವೇ ನನ್ನ ಜೀವನದ ಗುಟ್ಟು ! ಹಾಗೂ ಎಡೆಯೂರು ಶ್ರೀ ಸಿದ್ಧಲಿಂಗೇಶ್ವರನ ಮಹಾ ಪಾದಧ್ಯಾನ, ಇವಲ್ಲದೆ ಜೀವನದಲ್ಲಿ ಮತ್ತಾವುದಕ್ಕೂ ಬೆಲೆಯಿಲ್ಲವೆಂದು ನಾನು ಅರಿತು ಆದಷ್ಟು ನನ್ನ ಜೀವನವನ್ನು ನಡೆಸಿಕೊಂಡು ಹೋಗುತ್ತಿದ್ದೇನೆ.

ಕಡೆಯದಾಗಿ ಮತ್ತೊಂದು ಅರಿಕೆ :

ಶ್ರೀ ಶ್ರೀ ಜಗದ್ಗುರು ಜಯವಿಭವ ಮಹಾಸ್ವಾಮಿಗಳವರ ದರ್ಶನಾಶೀರ್ವಾದಗಳನ್ನು ನಾನು ಹಿಂದೆ ಒಮ್ಮೆ ಪಡೆದಿದ್ದು ಈಗ ಶ್ರೀ ಶ್ರೀ ಜಗದ್ಗುರು ಮಲ್ಲಿಕಾರ್ಜುನ ಮಹಾಸ್ವಾಮಿಗಳವರ ದರ್ಶನಾಶೀರ್ವಾದಗಳನ್ನು ಪಡೆಯಬೇಕೆಂಬ ಅತ್ಯಂತ ಕಾತುರತೆಯುಳ್ಳವನಾಗಿರಲು, ಅಂತಹ ಸದವಕಾಶವು ನನಗೆ ಬೆಂಗಳೂರಿನಲ್ಲಿ ಜೂನ್ 14, 1975 ರಂದು ನಮ್ಮ ಶ್ರೀ ಶ್ರೀ ಕೊಳಲ ಮಠ ಸಂಸ್ಥಾನದ ಶಾಂತವೀರ ಮಹಾಸ್ವಾಮಿಗಳವರ ಸಮ್ಮುಖದಲ್ಲಿ ದೊರೆತುದು ನಿಜವಾಗಿಯೂ ನನ್ನ ಭಾಗ್ಯ.

ಆ ಸನ್ನಿವೇಶದಲ್ಲಿ ನನ್ನ ಬಾಲ್ಯಾವಸ್ಥೆಯಲ್ಲಿ ಶ್ರೀ ಶ್ರೀ ಜಯದೇವ ಮಹಾಸ್ವಾಮಿಗಳವರ ಕೃಪಾಕಟಾಕ್ಷ ಮತ್ತು ಆಶೀರ್ವಾದ ಅನುಭವಗಳನ್ನು ಶ್ರೀ ಶ್ರೀ ಜಗದ್ಗುರು ಮಲ್ಲಿಕಾರ್ಜುನ ಮಹಾಸ್ವಾಮಿಗಳವರಲ್ಲಿ ಅರಿಕೆ ಮಾಡಿಕೊಂಡಾಗ, "ಹಾಗಿದ್ದಲ್ಲಿ ನೀವು ಒಂದು ಪುಟ್ಟ ಲೇಖನವನ್ನು ನಿಮ್ಮ ಅನುಭವಗಳನ್ನು ಬರೆಯಿರಿ'' ಎಂದು ಮಹಾಸ್ವಾಮಿಯವರು ಅಪ್ಪಣೆ ಮಾಡಿದರು. ಇಂತಹ ಸದವಕಾಶ ನನಗೆ ದೊರೆತುದೂ ಶ್ರೀ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಯವರ ಕೃಪೆಯಿಂದಾಗಿ. ಶ್ರೀ ಮಹಾಸ್ವಾಮಿಯವರ ದಿವ್ಯ ಪಾದಾರವಿಂದಗಳಲ್ಲಿ ನನ್ನ ಹೃತ್ಪೂರ್ವಕ ತ್ರಿಕಾಲ ಶಿರಸಾಷ್ಟಾಂಗ ಬಿನ್ನಹಗಳನ್ನು ಅತ್ಯಂತ ಭಕ್ತಿಯಿಂದ ಅರಿಕೆ ಮಾಡುತ್ತೇನೆ.

ತಂದೆ ನೀನೇ ! ತಾಯಿ ನೀನೇ !
ಬಂಧು ನೀನೇ ! ಬಳಗ ನೀನೇ !
ನೀನಲ್ಲದೆ ಮತ್ತಾರೂ ಇಲ್ಲಯ್ಯಾ !
ಎನಗೆ ನಿಮ್ಮ ನೆನಹಾದಾಗಲೇ ಉದಯ !
ಎನಗೆ ನಿಮ್ಮ ನೆನಹವೇ ಜೀವನ !
ಎನಗೆ ನಿಮ್ಮ ನೆನಹವೇ ಪ್ರಾಣ, ಕಾಣಾ ತಂದೆ, ಸ್ವಾಮಿ !
ಎನ್ನ ಹೃದಯದಲ್ಲಿ ನಿಮ್ಮ ಚರಣ ದಂಡಿಗೆಯನೊತ್ತಯ್ಯಾ !
ಮಹಾ ಗುರುವೇ !

ಎಂದು ಹೃತ್ಪೂರ್ವಕ ಪ್ರಾರ್ಥನೆ ಸಲ್ಲಿಸುತ್ತಿರುತ್ತೇನೆ.



ಸೋಮವಾರ ಪೇಟೆಯಲ್ಲಿ ಶ್ರೀ ಜಯದೇವ ಜಗದ್ಗುರು ಮಹಾಸನ್ನಿಧಿಯವರು

ಶ್ರೀ ಜಯದೇವ ಜಗದ್ಗುರು ಸನ್ನಿಧಾನದಲ್ಲಿ ನಡೆದ ಕೆಲವು ಪ್ರಸಂಗಗಳು (ಸವಿ ನೆನಪು)

ಲೇಖಕರು ;
ಪ್ರವಚನಪ್ರವೀಣ **ಟಿ. ಎನ್. ಚನ್ನಪ್ಪ,**
ಬೆಂಗಳೂರು–೯

ಶ್ರೀಮದಲ್ಲಮ ಪ್ರಭು ಪರಂಪರಾಗತ ಶ್ರೀ ಶೂನ್ಯಸಿಂಹಾಸನಾಧ್ಯಕ್ಷರಾದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರನ್ನು ನಾನು ಮೊದಲು ಸಂದರ್ಶಿಸಿದ್ದು ತಿಪಟೂರಿನಲ್ಲಿ, ವೀರಶೈವಾಶ್ರಮದಲ್ಲಿ. ವೀರಶೈವಾಶ್ರಮದ ಕಟ್ಟಡವು ಆಗತಾನೆ ಕಟ್ಟಿ ಮುಗಿದಿತ್ತು ಅಥವಾ ಮುಗಿಯುವುದರಲ್ಲಿತ್ತು. ವಿದ್ಯಾರ್ಥಿ ನಿಲಯವು ಇನ್ನೂ ಪ್ರಾರಂಭವಾಗಿರಲಿಲ್ಲ. ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಲು ಆ ಊರಿನ ಮುಖಂಡರೊಡನೆ ಆಲೋಚಿಸಿ, ಕಾರ್ಯಾರಂಭ ಮಾಡಬೇಕೆಂಬ ಉದ್ದೇಶದಿಂದಲೇ ಆಗ ಅಲ್ಲಿಗೆ ಜಗದ್ಗುರುಗಳ ಸವಾರಿ ಖಾಸಗಿಯಾಗಿ ದಯಮಾಡಿಸಿತ್ತೆಂದು ತೋರುತ್ತದೆ. ಆ ಹಿಂದೆ ತಿಪಟೂರಿನಲ್ಲಿ ಸ್ವಾಮಿಯ ಉತ್ಸವವು ನಡೆದು ಅಲ್ಲಿ ಮೊಕ್ಕಾಂ ಮಾಡಿದ್ದಾಗ ಅಲ್ಲಿನ ಸುಪ್ರಸಿದ್ಧ ಶ್ರೀಮಂತ ವೇ|| ಗುರುಪಾದಪ್ಪ (ಶ್ರೀ ಜೆ. ಕೆ. ಮಲ್ಲಪ್ಪನವರ ತಂದೆ) ನವರನ್ನು ಪ್ರೋತ್ಸಾಹಿಸಿ ಈ ಕಟ್ಟಡಕ್ಕಾಗಿ ಅವರಿಂದ 25 ಸಾವಿರ ರೂಪಾಯಿಗಳನ್ನು ಕೊಡಿಸಿದ್ದಲ್ಲದೆ ತಾವೂ ಸಹ ಸಹಾಯ ಧನವನ್ನು ನೀಡಿದ್ದರು. ಪ್ರಕೃತ ಆ ಕಟ್ಟಡವು ಎದ್ದು ನಿಂತು ಪ್ರಸಾದ ನಿಲಯದ ಏರ್ಪಾಡಿಗಾಗಿ ಹಾತೊರೆಯುತ್ತಿತ್ತು.

ಅದು ಯಾವ ಇಸವಿ ಎಂಬುದು ನನಗೀಗ ಜ್ಞಾಪಕವಿಲ್ಲ. ಆಗ ನನಗೆ 15 ವರ್ಷ ಇರಬಹುದು (ಈಗ ನನಗೆ 80 ವರ್ಷ) ಅಷ್ಟು. ಹೊತ್ತಿಗಾಗಲೇ, 1903ರಲ್ಲಿ ಜಗದ್ಗುರು ಪೀಠಕ್ಕೆ ಪಟ್ಟಾಭಿಷಿಕ್ತರಾಗಿದ್ದ ಮಹಾಸ್ವಾಮಿಗಳು ಆಗ ಬೃಹನ್ಮಠಕ್ಕಿದ್ದ ಸಾಲ ಸೋಲಗಳನ್ನು ತೀರಿಸಿ, ನೌಕರ ವರ್ಗವನ್ನು ಹತೋಟಿಗೆ ತೆಗೆದುಕೊಂಡು, ವ್ಯವಸ್ಥಿತವಾದ ಸುಸ್ಥಿತಿಯನ್ನು ಸಾಧಿಸಿಕೊಂಡಿದ್ದರೆನ್ನಬಹುದು. ಅಷ್ಟೇ ಅಲ್ಲ, ಚಿತ್ರದುರ್ಗದ ಸುತ್ತಮುತ್ತಣ ಗ್ರಾಮಗಳಲ್ಲಿ ಪ್ರಾರಂಭ ಮಾಡಿದ ಮೊಕ್ಕಾಂ ಕಾರ್ಯಕ್ರಮವನ್ನು ಮುಂದುವರಿಸಿ, ದೂರ ದೂರದ ಪಟ್ಟಣಗಳಲ್ಲಿ ಸಂಸ್ಥಾನದ ಬಿರುದು ಬಾವಲಿಗಳೊಡನೆ ಮೊಕ್ಕಾಂ ಮಾಡಲು ಸಾಮರ್ಥ್ಯವನ್ನು ಪಡೆದಿದ್ದರು. ಇಂತಹ ಒಂದು ಮೊಕ್ಕಾಂ ವೀರಶೈವ ಜನಸಂಖ್ಯೆ ಹೆಚ್ಚಾಗಿದ್ದ ತಿಪಟೂರಿನಲ್ಲಿ ಆಗಿದ್ದಾಗಲೇ ಈ ವೀರಶೈವಾಶ್ರಮದ ಕಟ್ಟಡಕ್ಕೆ ಅಸ್ತಿಭಾರವಾದುದು.

ಜಗದ್ಗುರು ಮಹಾಸ್ವಾಮಿಗಳು ಪಟ್ಟಾಭಿಷಿಕ್ತರಾದ ನಂತರ ಬೃಹನ್ಮಠದ ಸ್ಥಿತಿಗತಿಗಳ ಬಗೆಗೆ ಯೋಚನಾಕ್ರಾಂತರಾಗಿ ಪವಡಿಸಿದ್ದಾಗ, ಕರ್ತೃಗಳು ಪ್ರತ್ಯಕ್ಷರಾಗಿ "ಸುತ್ತುಕಟ್ಟು" ಎಂದು ಅಪ್ಪಣೆ ಮಾಡಿದ ಹಾಗೆ ಆಯಿತಂತೆ! ಅದರಂತೆ ಸ್ವಾಮಿಯು ಇಷ್ಟು ಹೊತ್ತಿಗಾಗಲೇ "ಸುತ್ತು"ವುದಕ್ಕೆ ಪ್ರಾರಂಭಿಸಿ, ಅದರಲ್ಲಿ ಯಶಸ್ವಿಗಳೇ ಆಗಿದ್ದರು. "ಕಟ್ಟು"ವುದಕ್ಕೆ ಅವರು ಪ್ರಾರಂಭಿಸಿದ್ದು ತಿಪಟೂರಿನಲ್ಲಿಯೇ, ಅದೇ ಈಗಲೂ ಅಲ್ಲಿ ರಾರಾಜಿಸುತ್ತಿರುವ ವೀರಶೈವಾಶ್ರಮ–ಎಂದು ನನ್ನ ನಂಬುಗೆ.

ನಾನು ತಿಪಟೂರಿಗೆ ಹೋಗಿದ್ದುದು ಜಗದ್ಗುರುಗಳ ದರ್ಶನಕ್ಕಾಗಿಯೇ. ಆಗ ಅಲ್ಲಿ ನಮ್ಮ ತಾತ—ಮತಾಮಹ—ದಿವಂಗತ ಷಾಪ್ ಬಸಪ್ಪನವರು ಇದ್ದರು. ಅವರು ಸ್ವಾಮಿಗಳ ದರ್ಶನಕ್ಕಾಗಿ ಬರಬೇಕೆಂದು ನಮ್ಮ ತಂದೆಯವರಿಗೆ ಪತ್ರ ಬರೆದಿದ್ದರು. ನಮ್ಮ ತಂದೆಯವರು ನನ್ನನ್ನು ನನ್ನ ಅಣ್ಣ[ಈಗಿನ ರಿಟೈರ್ಡ್ ಹೈಕೋರ್ಟಿನ ಜಡ್ಜ್, 'ವೇದಾಂತ ವಿದ್ಯಾ ವಾಚಸ್ಪತಿ', ಟಿ. ಎನ್. ಮಲ್ಲಪ್ಪ] ನವರನ್ನು ತಿಪಟೂರಿಗೆ ಕಳುಹಿಸಿಕೊಟ್ಟರು. ನಮ್ಮ ಅಣ್ಣನವರು ನನಗಿಂತ ಕೇವಲ ಎರಡು ವರ್ಷ ಹಿರಿಯರಾಗಿದ್ದರೂ, ಆ ವಯಸ್ಸಿಗಾಗಲೇ ಕಂದ, ವೃತ್ತಗಳನ್ನು ರಚಿಸಬಲ್ಲ ಕವಿತಾ ಶಕ್ತಿಯನ್ನು ಗಳಿಸಿಕೊಂಡಿದ್ದಾರಾದ್ದರಿಂದ ಶ್ರೀ ಜಯದೇವ ಜಗದ್ಗುರುಗಳ ವಿಷಯವಾಗಿ ಒಂಬತ್ತು ಪದ್ಯಗಳನ್ನು ರಚಿಸಿ, ಅದರಲ್ಲೊಂದು ಪ್ರತಿಗೆ ಕಟ್ಟು ಹಾಕಿಸಿ, ತೆಗೆದುಕೊಂಡು ಬಂದಿದ್ದರು.

ವೀರಶೈವಾಶ್ರಮದಲ್ಲಿ ತಂಗಿದ್ದ ಮಹಾಸ್ವಾಮಿಗಳ ದರ್ಶನ ಮಾಡಲು ನಾವಿಬ್ಬರು ನಮ್ಮ ಚಿಕ್ಕಪ್ಪನವರಾದ ಮಾಗಡಿ ಲಾಯರು ನಂಜಪ್ಪನವರ ಜೊತೆಯಲ್ಲಿ ಹೋದೆವು. ಆ ಕಾಲದಲ್ಲಿ ಜಗದ್ಗುರುಗಳನ್ನು ಅಷ್ಟು ಸುಲಭವಾಗಿ ಕಾಣಲು ಆಗುತ್ತಿರಲಿಲ್ಲ. ಅಪ್ಪಣೆಯನ್ನು ಪಡೆದೇ ಒಳಗೆ ಹೋಗಬೇಕಾಗಿತ್ತು. ಪೋಷಾಕು ಧರಿಸಿದ ಇಬ್ಬರು ಕೋಲುಗಾರರು ಬಾಗಿಲಿನಲ್ಲಿ ನಿಂತಿರುತ್ತಿದ್ದರು. ಅಲ್ಲದೇ ಸಂಸ್ಥಾನದ ಏಜಂಟರೋ, ಅವರ ಪ್ರತಿನಿಧಿಯೋ ಇರುತ್ತಿದ್ದರು. ನಾವುಗಳು ಹೋದೊಡನೆ ಆಗಿನ ಏಜೆಂಟ್ ಲಿಂಗಪ್ಪನವರು ನಮ್ಮ ಚಿಕ್ಕಪ್ಪ‡ ಲಾಯರ್ ನಂಜುಂಡಪ್ಪನವರನ್ನು ಸ್ವಾಗತಿಸಿ ನಮ್ಮನ್ನು ಒಳಕ್ಕೆ ಕರೆದರು.

ಅಲ್ಲಿ ಆಗ ನಾನು ನೋಡಿದ ದೃಶ್ಯವನ್ನು ಎಂದೂ ಮರೆಯಲು ಸಾಧ್ಯವಿಲ್ಲ. ಆ ದೃಶ್ಯವು ಸುಮಾರು ಅರವತ್ತೈದು ವರ್ಷಗಳ ನಂತರ ಇಂದು ನನ್ನ ತಲೆಯಲ್ಲಿ ಅಚ್ಚೊತ್ತಿದಂತಿದೆ. ಮಹಾಸ್ವಾಮಿಗಳವರು ಉನ್ನತಾಸನದ ಮೇಲೆ ಮಂಡಿಸಿದ್ದರು. ಎದುರಿನಲ್ಲಿ ಹತ್ತೆಂಟು ಮಂದಿ ವೀರಶೈವ ಪ್ರಮುಖರಲ್ಲಿ ಗುರುಪಾದಪ್ಪನವರು, ಷಾಪ್ ಬಸಪ್ಪನವರು (ನಮ್ಮ ತಾತ), ದೇಶಮುದ್ರೆ ಶಂಕರಪ್ಪ (ಕೈ|| ಡಿ. ಎಸ್. ಮಲ್ಲಪ್ಪನವರ ತಂದೆ) ನವರು, ಪಲ್ಲಾಗಟ್ಟಿ ಚಿನ್ನವೀರಪ್ಪನವರು (ಕೈ|| ಪಲ್ಲಾಗಟ್ಟಿ ಅಡಿವಪ್ಪನವರ ತಂದೆ) ಇವರೇ

‡ಮಾಗಡಿ ಲಾಯರ್ ನಂಜುಂಡಪ್ಪನವರು ಶಿವಾಧೀನರಾಗುವವರೆಗೂ ಸ್ವಾಮಿಗಳವರ ಮೆಚ್ಚಿನ ಶಿಷ್ಯರಾಗಿ ಸೇವೆಯನ್ನು ಸಲ್ಲಿಸಿದರು. ಜಗದ್ಗುರುಗಳವರ ಅತ್ಯಾಪ್ತ ವರ್ಗದಲ್ಲಿ ಅವರೊಬ್ಬರಾಗಿದ್ದರು.

ಮೊದಲಾದವರು ಕುಳಿತಿದ್ದರು. ಪ್ರಾಯಃ ವೀರಶೈವಾಶ್ರಮದಲ್ಲಿ ವಿದ್ಯಾರ್ಥಿಗಳಿಗಾಗಿ ಪ್ರಸಾದ ನಿಲಯಗಳನ್ನು ಪ್ರಾರಂಭಿಸುವ ವಿಚಾರವನ್ನು ಕುರಿತು ಆಲೋಚಿಸುವುದಕ್ಕಾಗಿ ಅವರೆಲ್ಲರೂ ನೆರೆದಿದ್ದರೆಂದು ಕಾಣುತ್ತದೆ. ನಮ್ಮ ಚಿಕ್ಕಪ್ಪನವರು ಒಳಗೆ ಹೋಗುತ್ತಲೇ ಸ್ವಾಮಿಗಳಿಗೆ ದೀರ್ಘದಂಡ ನಮಸ್ಕಾರವನ್ನು ಮಾಡಿದರು. ನಾವೂ ನಮಸ್ಕಾರವನ್ನು ಮಾಡಿ ಎದ್ದೆವು.

ಎದ್ದು, ಜಗದ್ಗುರು ಮಹಾಸ್ವಾಮಿಗಳನ್ನು ನಾನು ನೋಡಿದೆ. ನೋಡಿದೆ ಎನ್ನುವುದಕ್ಕಿಂತ ಆ ಮುಖದ ಮೇಲಣ ದಿವ್ಯ ಪ್ರಭೆಯು ಕಣ್ತುಂಬ ಅವರನ್ನು ನೋಡಲು ಅವಕಾಶ ಕೊಡಲಿಲ್ಲವೆನ್ನುವುದೇ ಸರಿ. ದಿವ್ಯ ಭವ್ಯ ಮನೋಹರಮೂರ್ತಿ! ಕಳಾಯುಕ್ತವಾದ ಕಣ್ಣುಗಳು, ವಿರಳವಾಗಿ ಕೂದಲು ಬೆಳೆದ, ಬಿಲ್ಲಿನಂತೆ ಬಾಗಿದ್ದ ಹುಬ್ಬುಗಳು, ವಿಶಾಲವಾದ ಹಣೆ, ಎಳೆಗೆಂಪಿನ ಕನ್ನಡಿಯಂತೆ ಹೊಳೆಯುವ ಕಪೋಲಗಳು, ಮಾಟವಾದ ಮೂಗು, ಅಗಲವಲ್ಲದ ಚಿಕ್ಕ ಬಾಯಿ, ಆರಿಸಿದ ಆಣಿಮುತ್ತುಗಳನ್ನು ಕಲಾವಂತ ಶಿಲ್ಪಿಯು ತರವರಿತು ಜೋಡಿಸಿದ್ದರೆ ಹೇಗೆ ಇರಬೇಕೋ ಹಾಗಿದ್ದ ರದನ ಪಂಕ್ತಿ, ಮುದ್ದಾದ ಗಲ್ಲ — ಇವೆಲ್ಲವುಗಳಿಂದಲೂ ಕೂಡಿದ ಘನಗಂಭೀರಯುಕ್ತವಾದ ಮುಖವು ಮನೋಹರವಾಗಿದ್ದುದು ನಿಜವಾದರೂ, ನೋಡಿದ ಕೂಡಲೇ ಎಂತಹವನನ್ನು ತಲೆಬಾಗಿಸುವಂತೆ ಮಾಡುವ ದಿವ್ಯ ತೇಜಸ್ಸು-ಓಜಸ್ಸುಗಳಿಂದ ಕಳಾಯುಕ್ತವಾಗಿ ರಾರಾಜಿಸುತ್ತಿದ್ದಿತು. ಈ ದಿವ್ಯಕ್ಕೂ ಅವರ ವೇಷಭೂಷಣಗಳು ತೃಪ್ತಿಯನ್ನು ಕೊಟ್ಟದ್ದವು. ಸಾಮಾನ್ಯಕ್ಕಿಂತಲೂ ಸ್ವಲ್ಪ ಎತ್ತರವಾದ, ಸ್ಥೂಲವಾದರೂ ಪುಷ್ಟವಾದ ಸ್ವಲ್ಪ ಎತ್ತರವೇ ಎನ್ನಬಹುದಾದ ದೇಹಕ್ಕೆ ಧರಿಸಿದ್ದ ಎಣಗಾವಿ ಬಣ್ಣದ ಕಫನಿ, ಹೆಗಲಮೇಲಿನ ಕಾವಿಯ ಸಣ್ಣ ವಸ್ತ್ರ, ಕೊರಳಲ್ಲಿ ಧರಿಸಿದ್ದ ಗೌಳ ರುದ್ರಾಕ್ಷಿಗಳ ಸರ, ಚರಣ ಕಮಲಗಳಿಂದು ವರ್ಣಿಸಲು ಸಂಪೂರ್ಣ ಅರ್ಹತೆಯನ್ನು ಪಡೆದಿದ್ದ ಪಾದಗಳಲ್ಲಿ ಮೆಟ್ಟಿದ್ದ ಮರದ ಆವುಗೆಗಳು, ಆ ವಿಶಾಲವಾದ ಹಣೆಯಲ್ಲಿ ಅತಿಯೂ ಅಲ್ಲದೆ, ಕಡಿಮೆಯೂ ಅಲ್ಲದೆ ಇರುವಷ್ಟು ಪರಿಮಾಣದಲ್ಲಿ ಧರಿಸಿದ ಮೂರೆಳೆಯ ವಿಭೂತಿ, ಆ ದೇಹಕ್ಕೂ ಆ ಮುಖಕ್ಕೂ ತಮ್ಮ ಆಶ್ರಮಕ್ಕೂ ಸ್ಥಾನಮಾನಗಳಿಗೂ ಸರಿಯೆಂದೆನಿಸುವ**ವಿಶಿಷ್ಟ ರೀತಿಯಲ್ಲಿ ಕಟ್ಟಿದ ಮಂಡೆಯ ವಸ್ತ್ರ, ಇದೆಲ್ಲವೂ ನಿಜವಾದ ಶೋಭೆಯನ್ನು ಕೊಟ್ಟದ್ದವು. ಒಟ್ಟಿನಲ್ಲಿ ಆ ದಿವ್ಯ ಮೂರ್ತಿಯನ್ನು ಕಂಡ ಕೂಡಲೇ ನಾನು, ಆ ಎಳೆಯ ವಯಸ್ಸಿನ ನಾನು ಮಂತ್ರಮುಗ್ಧನಾಗಿ ಹೋದೆ.

ನಮ್ಮ ಚಿಕ್ಕಪ್ಪ, ನಂಜುಂಡಪ್ಪನವರು ಒಳಗೆ ಬರುತ್ತಲೇ ಜಗದ್ಗುರುಗಳು "ಬನ್ನಿ ನಂಜುಂಡಪ್ಪನವರೇ" ಎಂದು ಸ್ವಾಗತಿಸಿ, "ಯಾರು ಈ ಹುಡುಗರು ?" ಎಂದು ಕೇಳಿದರು. "ಇವರಿಬ್ಬರೂ ನಮ್ಮ ಅಣ್ಣನ ಮಕ್ಕಳು" ಎಂದು ಅವರು ಉತ್ತರ ಕೊಟ್ಟರು. ಕೂಡಲೇ ಸ್ವಾಮಿಗಳು ನಮ್ಮಿಬ್ಬರನ್ನು ಕುರಿತು "ಯಾವ ತರಗತಿಯಲ್ಲಿ ಓದುತ್ತಿದ್ದೀರಿ ?" ಎಂದು ಕೇಳಿದಾಗ, ನಾವು ಓದುತ್ತಿದ್ದ ತರಗತಿಗಳನ್ನು ತಿಳಿಸಿದೆವು. ಆ ಕೂಡಲೇ ನಂಜುಂಡಪ್ಪನವರು ನನ್ನ ಅಣ್ಣನವರ ಕೈಯಲ್ಲಿದ್ದ ಪದ್ಯಗಳ ಪಟವನ್ನು ತೋರಿಸುತ್ತಾ "ಈ ಹುಡುಗನು ಸ್ವಾಮಿಯ ಸ್ತೋತ್ರ ಪದ್ಯಗಳನ್ನು ಬರೆದು ತಂದಿದ್ದಾನೆ" ಎಂದು ಹೇಳಿದಾಗ, ಸ್ವಾಮಿಯು "ಪದ್ಯಗಳನ್ನು ಬರೆದಿದ್ದಾನೆಯೇ!" ಎಂದು ಆಶ್ಚರ್ಯವನ್ನು ಸೂಚಿಸುತ್ತಾ "ಓದಯ್ಯಾ, ನೋಡೋಣ" ಎಂದು ಅಪ್ಪಣೆ ಕೊಡಿಸಿದರು. ನಂಜುಂಡಪ್ಪನವರು ನನ್ನ ಕಡೆ ಕೈ ತೋರಿಸುತ್ತಾ "ಈ ಹುಡುಗ ಓದುತ್ತಾನೆ" ಎಂದು ಹೇಳುತ್ತಾ ಆ ಪಟವನ್ನು ನನ್ನ ಕೈಗೆ ಕೊಟ್ಟರು. ಈ ಮೊದಲೇ ನಾಲ್ಕಾರುಸಾರಿ ಓದಿಕೊಂಡಿದ್ದ ಆ ಪದ್ಯಗಳನ್ನು ಆಗ ನನಗೆ ತೋರಿದಂತೆ, ಆದರೂ ಎಡರದೆ ತೊಡರದೆ ರಾಗವಾಗಿ ಓದಿದೆ. ಸ್ವಾಮಿಗೆ ತುಂಬಾ ಸಂತೋಷವಾಗಿ "ಅಣ್ಣನ ಕವಿತೆ ಚೆನ್ನಾಗಿದೆ, ತಮ್ಮನ ಗಮಕ ಚೆನ್ನಾಗಿದೆ" ಎಂದು ಹೇಳುತ್ತಿದ್ದಂತೆ, ನಮ್ಮ ಚಿಕ್ಕಪ್ಪನವರ ಸಲಹೆಯಂತೆ ಆ ಪಟವನ್ನು ಸನ್ನಿಧಾನಕ್ಕೆ ಎರಡು ಕೈಗಳಲ್ಲೂ ಒಪ್ಪಿಸಿ ನಮಸ್ಕರಿಸಿದೆ. ಸ್ವಾಮಿಗಳು ಅಲ್ಲಿದ್ದ ಏಜೆಂಟರನ್ನು ಕರೆದು ಆ ಪಟವನ್ನು ಗೋಡೆಗೆ ತೂಗು ಹಾಕುವಂತೆ ಅಪ್ಪಣೆ ಮಾಡಿದರು. ಅದು ಬಹಳ ಕಾಲ ಅಲ್ಲಿಯೇ ತೂಗಾಡುತ್ತಿದ್ದುದನ್ನು ನಾನು ಕಂಡಿದ್ದೆ. ಈಗ ಅದು ಅಲ್ಲಿ ಇದೆಯೋ ಇಲ್ಲವೋ ನನಗೆ ತಿಳಿಯದು. ಇದಾದನಂತರ ಸ್ವಾಮಿಯ ಅಪ್ಪಣೆಯಂತೆ, ಅಲ್ಲಿ ಕುಳಿತಿದ್ದವರ ಜತೆಗೆ ನಾವುಗಳು ಕುಳಿತೆವು. ಸ್ವಾಮಿಗಳು ಆ ಪ್ರಮುಖರೊಡನೆ ಸಮಾಲೋಚನೆಯನ್ನು ಪ್ರಾರಂಭಿಸಿದರು ಅಥವಾ ಮುಂದುವರಿಸಿದರು.

ಬೆಂಗಳೂರಿನಲ್ಲಿ ಉತ್ಸವಕ್ಕೆ ಅಡ್ಡಿ ಪರಿಹಾರ :

ಅನಂತರ ನನಗೆ ಮಹಾಸ್ವಾಮಿಗಳವರ ದರ್ಶನ ಲಾಭ ದೊರೆತದ್ದು ಬೆಂಗಳೂರಿನಲ್ಲಿ. ಅವರ ಉತ್ಸವ, ಬಿರುದು-ಬಾವಲಿಗಳೊಡನೆ ಬೆಂಗಳೂರಿನಲ್ಲಿ ಮೊದಲು ನಡೆದಾಗ, ಜಯದೇವ ವಿದ್ಯಾರ್ಥಿ ನಿಲಯದ ಶಂಕುಸ್ಥಾಪನೆಯು ಆಗಿನ ಯುವರಾಜರಾದ ಶ್ರೀ ಕಂಠೀರವ ನರಸಿಂಹರಾಜ ಒಡೆಯರವರಿಂದ ನಡೆದಾಗ ಪ್ರಾಯಃ 1919 ನೆಯ ಇಸವಿಯಲ್ಲಿ. ಮಹಾಸ್ವಾಮಿಯವರ ಈ ಬೆಂಗಳೂರಿನ ಉತ್ಸವವು ಸ್ಮರಣೀಯವಾದುದು-ಚಿರಸ್ಮರಣೀಯವೆಂದರೂ ಸಲ್ಲುವುದು. ಏಕೆಂದರೆ ಈ ಉತ್ಸಾಹವು ನಡೆದದ್ದು ಗುರು–ವಿರಕ್ತರ ಭಿನ್ನಾಭಿಪ್ರಾಯಗಳ ಚಳುವಳಿಯನ್ನು ಉಲ್ಬಣಗೊಳಿಸಿದ ಬೀರೂರು ವೀರಶೈವ ಮಹಾ ಸಭೆಯು ನಡೆದ ತರುಣದಲ್ಲಿ. ಅದಕ್ಕಿಂತಲೂ ಮಿಗಿಲಾಗಿ, ಆಗ ಈಗಿನಂತೆ ಭಿನ್ನ ಭಿನ್ನ ಜಾತಿ-ಮತಗಳಲ್ಲಿ **ಸಹಜ** ಭಾವವು ಮೂಡಿರಲಿಲ್ಲ. ಚಿನ್ಮೂಲಾದ್ರಿ ಬೃಹನ್ಮಠ ಸಂಸ್ಥಾನದ ಉಚ್ಛ್ರಾಯ ಸ್ಥಿತಿಯನ್ನು ಸಂಸ್ಥಾನದ ಸ್ವಾಮಿಗಳು ತಮ್ಮ ಉತ್ಸವಗಳಲ್ಲಿ ಬಿರುದು-ಬಾವಲಿಗಳ ಉಪಯೋಗ ಮಾಡುವುದನ್ನು ಸಹಿಸದ ಹಲವಾರು-ಬ್ರಾಹ್ಮಣರಿದ್ದ ಕಾಲವದು. (ಈಚೆಗೆ ಇಂತಹ ಸಂಕುಚಿತ ಭಾವನೆಗಳು ಎಲ್ಲ ಮತೀಯರುಗಳಲ್ಲಿಯೂ ನಾಶವಾಗಿ ಸೌಹಾರ್ದತೆಯು ಮೂಡಿರುವುದು ಜನತೆಯ ಪುಣ್ಯ ವಿಶೇಷ).

**ಶ್ರೀ ಜಯದೇವ ಜಗದ್ಗುರುಗಳ ಶಿರೋಭೂಷಣದಲ್ಲಿ ಹಳೆಯ ಮೈಸೂರಿನ ರುಮಾಲಿನ ಗಾಂಭೀರ್ಯವೂ, ಉತ್ತರ ದೇಶದ ಕಟ್ಟಿನ ಸೊಗಸೂ ಕೂಡಿ, ತನ್ನದೇ ಆದ ಒಂದು ವಿಶಿಷ್ಟ ರೀತಿಯಲ್ಲಿ ಆಗಲೇ ಇಡೀ ಕರ್ನಾಟಕವನ್ನು ಒಂದುಗೂಡಿಸುವ ಕಟ್ಟಾಗಿ ಇದ್ದಿತು.

ಬೆಂಗಳೂರು ನಗರದ ವೀರಶೈವ ಪ್ರಮುಖರ ಭಿನ್ನಹವನ್ನು ಮನ್ನಿಸಿ ಜಗದ್ಗುರು ಮಹಾಸ್ವಾಮಿಗಳು ಗೊತ್ತಾದ ದಿವಸ ತಮ್ಮ ಸಂಸ್ಥಾನದ "ಸಲ್ತನ್ ಸಹಿತವಾಗಿ ದಯಮಾಡಿಸಿದರು. ಕೈ॥ ಧರ್ಮ ಪ್ರವರ್ತಕ ಗುಬ್ಬಿ ತೋಟದಪ್ಪನವರ ಛತ್ರವು ಅವರ ಬಿಡಾರದ ಸ್ಥಳವಾಗಿದ್ದಿತು. ಬೆಂಗಳೂರಿನಲ್ಲಿ ನಡೆಯುವ ಈ ಉತ್ಸವವು ಬಹಳ ಪ್ರಮುಖವಾದುದೆಂಬ ಭಾವನೆಯಿಂದ ಆಗಿನ ಮೈಸೂರು ಸಂಸ್ಥಾನದ ಎಲ್ಲ ಕಡೆಗಳಿಂದಲೂ ವೀರಶೈವರು ತಂಡೋಪತಂಡವಾಗಿ ನೆರೆದಿದ್ದರಲ್ಲದೆ ಹುಬ್ಬಳ್ಳಿ, ಧಾರವಾಡ ಪ್ರಾಂತದಿಂದಲೂ, ನೈಜಾಂ ಪ್ರಾಂತದಿಂದಲೂ, ಬಳ್ಳಾರಿ ಮೊದಲಾದ ಕಡೆಗಳಿಂದಲೂ ಲಕ್ಷಾಂತರವೆನ್ನುವಷ್ಟು ಭಕ್ತಾದಿಗಳು ಬಂದು ಕೂಡಿದ್ದರು. ಇವರೆಲ್ಲರಿಗೂ ಬೆಂಗಳೂರಿನ ನಾಗರೀಕರು ದುಬಾರಿ ವೆಚ್ಚದಿಂದ ಊಟೋಪಚಾರ ವಸತಿಗಳಿಗೆ ಏರ್ಪಾಟು ಮಾಡಿದ್ದರಲ್ಲದೆ, ನಗರದ ಮುಖ್ಯ ರಾಜಬೀದಿಗಳಲ್ಲಿ ವಿಧವಿಧವಾದ ಚಪ್ಪರಗಳನ್ನು, ಕಮಾನುಗಳನ್ನು ಹಾಕಿಸಿ ರಾಜಬೀದಿಗಳ ಇಕ್ಕೆಲಗಳಲ್ಲಿ ಅಸಂಖ್ಯಾತ ಬಾಳೆ ಕಂಬಗಳನ್ನು ನಿಲ್ಲಿಸಿ ವೈಭವದಿಂದ ಅಲಂಕರಿಸಿದ್ದರು.

ಉತ್ಸವದ ದಿನ ಸೂರ್ಯೋದಯದ ನಂತರ 9ಘಂಟೆಗೆ ಉತ್ಸವವು ಹೊರಡಲು ಗೊತ್ತಾಗಿದ್ದಿತು. ಆನೆ, ಕುದುರೆ, ಒಂಟೆ, ಬಿರುದು ಬಾವಲಿಗಳು, ಪಲ್ಲಕ್ಕಿ ಎಲ್ಲವೂ ಸಿದ್ಧವಾಗಿ ವಾದ್ಯಗಳು ಭೋರ್ಗರೆಯುತ್ತಿದ್ದುವು. ಆದರೆ ಜಿಲ್ಲಾಧಿಕಾರಿಗಳಿಂದ ಲೈಸೆನ್ಸ್ ಬರಲೇ ಇಲ್ಲ-ಎನ್ನುವಷ್ಟರಲ್ಲಿ 9 ಘಂಟೆಗೆ ಸರಿಯಾಗಿ ಅದೂ ಬಂತು. ಜಗದ್ಗುರುಗಳು ಅದನ್ನು ಓದಿಸಿ ನೋಡಿದೊಡನೆ ಅದರಲ್ಲಿ ನೆಟ್ಟಿದ್ದ ವಿಷದ ಮುಳ್ಳು ಅವರಿಗೆ ಕಂಡಿತು. "ಉತ್ಸವದ ಜತೆಗೆ ಬರುವ ಮ್ಯಾಜಿಸ್ಟ್ರೇಟರ ಸಲಹೆಯಂತೆ ಉತ್ಸವವು ನಡೆಯಬೇಕು"—ಎಂದಿದ್ದ ಷರಾ ಬರವಣಿಗೆಯೇ ಆ ಮುಳ್ಳು.[1] ಆ ಷರಾ ಸಂಸ್ಥಾನದ ಘನತೆಗೆ ಅಗೌರವ ತರತಕ್ಕದ್ದೆಂದು, ತುಂಬಾ ಅಪಾಯಕಾರಿಯೆಂದು, ಆದಕಾರಣ ಲೈಸೆನ್ಸ್ ನಿರ್ಬಂಧರಹಿತವಾಗಿರುವಂತೆ ಮಾಡಿಸಿಕೊಂಡು ಬಂದ ಹೊರತು ಉತ್ಸವವು ಹೊರಡಲು ಆಗುವುದಿಲ್ಲವೆಂದೂ ಜಗದ್ಗುರುಗಳು ಮಹಾಜನರಿಗೆ ಖಚಿತವಾಗಿ ಅಪ್ಪಣೆಯ ನೀಡಿದರು. ಈ ಕಾರಣದಿಂದ ಆ ದಿವಸ ಉತ್ಸವವೇ ನಿಂತು ಹೋಯಿತು........ ತುಂಬಾ ಖೇದಕ್ಕೊಳಗಾದ ಮುಖಂಡರು ಸರ್ಕಾರಕ್ಕೆ ಜಗದ್ಗುರು ಮಠದ ಹಿಂದಿನ ದಾಖಲೆಗಳನ್ನು ಹಾಜರುಪಡಿಸಿ ಆ ದಿನ ಸಾಯಂಕಾಲದೊಳಗಾಗಿ ಆ ಲೈಸೆನ್ಸಿನಲ್ಲಿದ್ದ ಷರಾವನ್ನು ರದ್ದುಪಡಿಸಿಕೊಂಡು ಬಂದರು. ಮರುದಿವಸ ಉತ್ಸವವು ತುಂಬಾ ವೈಭವದಿಂದ ನೆರವೇರಿತು. ಅನಂತರ ಹಲವು ದಿನಗಳವರೆವಿಗೆ ಸ್ವಾಮಿಯ ಮೊಕ್ಕಾಂ ಸ್ಥಳದಲ್ಲಿ ಪ್ರತಿನಿತ್ಯ ಪುರಾಣ ಪ್ರವಚನಗಳು ನಡೆಯುತ್ತಿದ್ದುವಲ್ಲದೆ ಸ್ವಾಮಿಯನ್ನು ಅನೇಕ ಮಂದಿ ಭಕ್ತರು ತಮ್ಮ ಮನೆಗೆ ಆಹ್ವಾನಿಸಿ, ಪಾದಪೂಜೆ, ಸಮಾರಾಧನೆಯನ್ನು ಮಾಡಿ, ಶಕ್ತಿ ಮೀರಿ ಕಾಣಿಕೆಯನ್ನು ಕೊಟ್ಟು ಧನ್ಯರಾದರು.

ಶ್ರೀ ಜಯದೇವ ವಿದ್ಯಾರ್ಥಿ ನಿಲಯದ ನಿವೇಶನದ ಕಥೆ:

ಬೆಂಗಳೂರಿನ ಉತ್ಸವವು ಮತ್ತೊಂದು ಕಾರಣಕ್ಕಾಗಿ ಸ್ಮರಣೀಯವಾಗಿದೆ: ಶ್ರೀ ಜಯದೇವ ವಿದ್ಯಾರ್ಥಿ ನಿಲಯದ ಶಂಕುಸ್ಥಾಪನೆ ಮತ್ತು ಆಸಂಬಂಧವಾದ ವ್ಯವಹಾರದಲ್ಲಿ ಉಂಟಾದ ದುಷ್ಪರಿಣಾಮ. ಆಗಿನ ಮೈಸೂರು ಸಂಸ್ಥಾನದ ಮುಖ್ಯ ನಗರವಾದ ಬೆಂಗಳೂರಿನಲ್ಲಿ ಪ್ರವಾಸವನ್ನು ಮುಗಿಸುವ ಮುಂಚೆ ಒಂದು ದಿವಸ ಮುಖಂಡರನ್ನು ಕರೆಸಿಕೊಂಡು ಇಲ್ಲಿ ವಿದ್ಯಾರ್ಥಿ ನಿಲಯವನ್ನು ಕಟ್ಟಿಸುವ ಆವಶ್ಯಕತೆಯನ್ನು ತಿಳಿಸಿ, ಅದಕ್ಕಾಗಿ ತಾವು 25-30 ಸಾವಿರ ರೂಪಾಯಿ[2]ಗಳನ್ನು ಕೊಡಲು ಸಿದ್ಧರೆಂದು, ಆ ಕಟ್ಟಡಕ್ಕೆ ಬೇಕಾಗುವ ಉಳಿದ ಹಣವನ್ನು ಭಕ್ತಾದಿಗಳಿಂದ ಚಂದಾ ರೂಪವಾಗಿ ಸಂಗ್ರಹಿಸಬೇಕೆಂದು ಅಪ್ಪಣೆ ಮಾಡಿದರು. ಎಲ್ಲರೂ ಸಂತೋಷದಿಂದ ಒಪ್ಪಿಕೊಂಡು ಕಾರ್ಯೋನ್ಮುಖರಾಗಿ ಈಗ ಆ ನಿಲಯವು ಸ್ಥಾಪನೆಯಾಗಿರುವ ನಿವೇಶನವನ್ನು ಸರಕಾರದಿಂದ ಪಡೆದುದೂ ಆಯಿತು. ಶ್ರೀಮನ್ಮಹಾರಾಜರಿಂದಲೋ, ಯುವರಾಜರಿಂದಲೋ ಕಟ್ಟಡದ ಶಂಕುಸ್ಥಾಪನೆಯನ್ನು ಮಾಡಿಸಲು ಪ್ರಯತ್ನ ನಡೆಯುತ್ತಿದ್ದಾಗ ಹಠಾತ್ತಾಗಿ ಅಡ್ಡಿ ಬಂದಿತು. ಆ ನಿವೇಶನವನ್ನು ಕೊಡಲಾಗುವುದಿಲ್ಲವೆಂದೂ, ಬೇರೆ ನಿವೇಶನವನ್ನು ಚುನಾಯಿಸಿ ಬರೆದುಕೊಂಡಲ್ಲಿ ಆಲೋಚಿಸಲಾಗುವುದೆಂದೂ ಜಿಲ್ಲಾಧಿಕಾರಿಗಳಿಂದ ಬಂದ ಪತ್ರವೇ ಆ ಆತಂಕ.

ಆ ನಿವೇಶನವು ಎಲ್ಲ ರೀತಿಗಳಿಂದಲೂ ವಿದ್ಯಾರ್ಥಿ ನಿಲಯಕ್ಕೆ ತಕ್ಕುದಾಗಿದೆಯೆಂದೂ, ಮಂಜೂರಾಗಿದ್ದ ನಿವೇಶನವನ್ನು ಕಿತ್ತುಕೊಂಡಿರುವುದು ಸಂಸ್ಥಾನದ ಗೌರವಕ್ಕೆ ಕುಂದೆಂದು ಸರ್ಕಾರದ ಘನತೆಗೂ ಅದು ಉಚಿತವಲ್ಲವೆಂದು ಸ್ವಾಮಿಗಳು ಅಭಿಪ್ರಾಯಪಟ್ಟು, ಆ ನಿವೇಶನವನ್ನೇ ತಿರುಗಿ ಪಡೆಯಲು ಸರ್ವ ಪ್ರಯತ್ನಗಳನ್ನು ಮಾಡಬೇಕೆಂದು ದಿವಾನ್ ಬಹದ್ದೂರು ರಾಜ ಸಭಾಭೂಷಣ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರವರನ್ನು ಕರೆಯಿಸಿ ತಿಳಿಸಿದರು. ಸರ್ ಶೆಟ್ಟರ್ ಇದು ಸಾಧ್ಯವಾಗದೆಂದು ವಿದ್ಯಾರ್ಥಿನಿಲಯವನ್ನು ಎಲ್ಲಿ ಕಟ್ಟಿಸಿದರೆ ಏನು? ಎಂದು ನಿರುತ್ಸಾಹವನ್ನು ತೋರಿದರು. ಈ ವಿಚಾರವು ಆಗ ಬ್ರಾಹ್ಮಣೇತರ ಹಿಂದುಳಿದ ವರ್ಗಗಳ ಚಳುವಳಿಯ ಬೀಜವನ್ನು ಮೈಸೂರಿನಲ್ಲಿ ಬಿತ್ತಿ, ಆಗಿನ ದಿವಾನರಾದ ಸರ್ ಆಲ್ಬಿಯನ್ ಬ್ಯಾನರ್ಜಿಯವರ ಮತ್ತು ಯುವರಾಜ ಶ್ರೀ ಕಂಠೀರವ ನರಸಿಂಹರಾಜ ಒಡೆಯರವರ ಆದರ, ವಿಶ್ವಾಸಗಳಿಗೆ ಪಾತ್ರರಾಗಿದ್ದ ಎಂ. ಬಸವಯ್ಯನವರಿಗೆ ತಿಳಿದು, ಅವರು ಆ ಬಗೆಗೆ ಪ್ರಯತ್ನ ನಡೆಸಿ, ಆ ಕಾರ್ಯವನು

[1] ಚಿಕ್ಕಪೇಟೆಯಲ್ಲಿ ಬ್ರಾಹ್ಮಣರ ಒಂದು ಮಠವಿದೆ. ಅದಿರುವುದು ಒಂದು ಸಂಧಿಯಲ್ಲಿ. ಅದರ ತಲೆ ಬಾಗಿಲು ಆ ಸಂದಿಗೇ ಇದೆ. ಚಿಕ್ಕಪೇಟೆಯ ರಸ್ತೆಯ ಕಡೆಗೆ ಇರುವುದು ಆ ಮಠದ ಪಕ್ಕ, ಅಲ್ಲಿಯೂ ಅಂಗಡಿಗಳನ್ನು ಕಟ್ಟಿದ್ದಾರೆ. ಆ ಬಳಿಗೆ ಜಗದ್ಗುರುಗಳ ಉತ್ಸವವು ಬಂದಾಗ, ಸ್ವಾಮಿಗಳು ಪಲ್ಲಕ್ಕಿಯಿಂದ ಇಳಿದುಹೋಗಬೇಕೆಂದು, ಹಾಗೆ ಮಾಡದೆ ಇದ್ದರೆ ಕೆಲವು ಮಂದಿ ಆ ಮಠದ ಭಕ್ತರು ರಸ್ತೆಯಲ್ಲಿ ಅಡ್ಡಡ್ಡವಾಗಿ ಮಲಗಿ ಉತ್ಸವವನ್ನು ಮುಂದೆ ಬಿಡುವುದಿಲ್ಲವೆಂದೂ ಆಗ ಪುಕಾರು ಹುಟ್ಟಿತು.

[2] ಆಗಿನ 25-30 ಸಾವಿರ ರೂಪಾಯಿಗಳು ಈಗಿನ ಲಕ್ಷಾಂತರ ಹಣದಬೆಲೆ ಬಾಳುತ್ತಿದ್ದವು. ಆಗ ಒಂದು ರೂಪಾಯಿ, ಒಂದು ರೂಪಾಯಿಯ ಬೆಲೆಯನ್ನೇ ಉಳ್ಳದಾಗಿತ್ತು. ಈಗಿನಂತೆ 17-18 ಪೈಸೆ ಬೆಲೆಯಲ್ಲ.

[illegible]ಸಿಕೊಂಡು ಬಂದರು. ವಿದ್ಯಾರ್ಥಿ ನಿಲಯಕ್ಕೆ ಮೊದಲು ಯಾವ ನಿವೇಶನ [illegible] (ಈಗ [illegible] ಕಟ್ಟ[illegible]) ಖಾಯಂಗೊಳಿಸಲಾಗಿದೆ, ಎಂಬ ಜಿಲ್ಲಾಧಿಕಾರಿಗಳ ಹುಕುಂ ಅನ್ನು ಕೈಲಿ ತೆಗೆದುಕೊಂಡೇ ಅವರು ಸ್ವಾಮಿಯ ಸನ್ನಿಧಿಗೆ ಬಂದರು. ಅಷ್ಟರಲ್ಲಿ ಸ್ವಾಮಿಗಳೇ ಕರೆಸಿಕೊಂಡಿದ್ದ ಸರ್ ಶೆಟ್ಟರೂ ಸಹಾ ಸ್ವಾಮಿಯ ಸನ್ನಿಧಿಗೆ ಬಂದು ವಿಷಯವನ್ನು ಮಾತ[illegible]ರು. "ಈ ಕೆಲಸ ಸಾಧ್ಯವಾಗತಕ್ಕದ್ದಲ್ಲ" ಎಂದು ಶೆಟ್ಟರು ಹೇಳುವವರೆವಿಗೂ ಬಸವಯ್ಯನವರು ಸುಮ್ಮನಿದ್ದು ಜಿಲ್ಲಾಧಿಕಾರಿಗಳ ಆ ಹುಕುಂ ಅನ್ನು ಶೆಟ್ಟರ ಕೈಗೆ ಕೊಟ್ಟರು. ಇದು ಶೆಟ್ಟರಿಗೆ ಮುಖಭಂಗವಾದಂತಾಯಿತು. ಇದು ತುಂಬಾ ಸ್ವಾರಸ್ಯವಾದ ವಿಚಾರ.

ಜಯದೇವ ವಿದ್ಯಾರ್ಥಿ ನಿಲಯದ ಶಂಕುಸ್ಥಾಪನೆಯ ಕಥೆ:

ಶ್ರೀ ಜಯದೇವ ವಿದ್ಯಾರ್ಥಿ ನಿಲಯದ ಶಂಕುಸ್ಥಾಪನೆಯು ಮೈಸೂರಿನ ಯುವರಾಜರಾದ ಶ್ರೀ ಕಂಠೀರವ ನರಸಿಂಹರಾಜ ಒಡೆಯರಿಂದ ಮಾಡಿಸಬೇಕೆಂದು ಜಗದ್ಗುರು ಸ್ವಾಮಿಗಳವರು ಮಹಾಜನರೊಡನೆ ಸಮಾಲೋಚನೆ ಮಾಡಿ ನಿರ್ಣಯ ಮಾಡಿದರು. ಎಂದಿನಂತೆ ಶ್ರೀ ಶೆಟ್ಟರು ಯುವರಾಜರಿಗೆ ಆಹ್ವಾನವಿತ್ತಾಗ ಏನು ಕಾರಣದಿಂದಲೋ ಏನೋ, ಅವರು ಒಪ್ಪಿಕೊಳ್ಳಲಿಲ್ಲ. ಸ್ವಾಮಿಗಳಿಗೂ, ಮಹಾಜನರಿಗೂ ಇದರಿಂದ ತುಂಬಾ ನಿರಾಶೆಯುಂಟಾಯಿತು. ಆಗ ಮಹಾಸ್ವಾಮಿಗಳು ಮೈಸೂರಿನ ವಿದ್ಯಾಧಿಕಾರಿಗಳಾಗಿದ್ದ ಸುಪ್ರಸಿದ್ಧ ಸಿ. ಆರ್. ರೆಡ್ಡಿಯವರನ್ನು, ಬಸವಯ್ಯನವರನ್ನು ತಮ್ಮ ಬಳಿಗೆ ಕರೆಸಿಕೊಂಡು ಸಮಾಲೋಚನೆ ಮಾಡಿದರು. ಅವರಿಬ್ಬರೂ ಯುವ-ರಾಜರಲ್ಲಿಗೆ ಹೋಗಿ ಶಂಕುಸ್ಥಾಪನಾ ಕಾರ್ಯಕ್ಕೆ ಅವರನ್ನು ಒಪ್ಪಿಸಿಕೊಂಡು ಬಂದರು. ಅದು ಸ್ವಾಮಿಗಳಿಗೂ ಭಕ್ತರಿಗೂ ತುಂಬಾ ಆನಂದವನ್ನುಂಟು ಮಾಡಿತು.

ಜಯದೇವ ವಿದ್ಯಾರ್ಥಿ ನಿಲಯದ ಶಂಕುಸ್ಥಾಪನೆಯು ಜಗದ್ಗುರುಗಳ ಸಮ್ಮುಖದಲ್ಲಿ ಶ್ರೀಮದ್ಯುವರಾಜರಿಂದ ಬಹು ವಿಜೃಂಭಣೆಯಿಂದ ನಡೆಯಿತು. ಆ ಸಮಾರಂಭದಲ್ಲಿ ನಾನು ಇದ್ದೆ. ಬೆಂಗಳೂರಿನ ನಾಗರೀಕರಲ್ಲದೆ ಇಡೀ ಕರ್ನಾಟಕದ ಬೇರೆ ಬೇರೆ ಸ್ಥಳಗಳ ಬೇರೆ ಬೇರೆ ವೀರಶೈವ ದೊಡ್ಡ ಮನುಷ್ಯರುಗಳು ಆ ಸಮಾರಂಭಕ್ಕೆ ಬಂದಿದ್ದರು. ಅಂದು ಅವರುಗಳ ಆನಂದಾತಿಶಯವನ್ನು ವರ್ಣಿಸಲಳವಲ್ಲ. ಈ ಸಂದರ್ಭದಲ್ಲಿ ಯುವರಾಜರು ತಮ್ಮ ಭಾಷಣದಲ್ಲಿ ಮಹಾಸ್ವಾಮಿಗಳ ಬಗೆಗೆ "ಜಗದ್ಗುರು" ಎಂಬ ಶಬ್ದವನ್ನು ಉಪಯೋಗಿಸಿದುದು (ಅದುವರೆಗೆ ರಾಜಮನೆತನದ ಆಗಿನ ವ್ಯಕ್ತಿಗಳಾರು ಮುರುಘಾಮಠದ ಬಗ್ಗೆ ಆ ಶಬ್ದವನ್ನು ಉಪಯೋಗಿಸಿರಲಿಲ್ಲ) ಭಕ್ತಾದಿಗಳ ಆನಂದವನ್ನು ಎಲ್ಲೆ ಮೀರಿಸಿತ್ತು.

ಶಿವಗಂಗಾ ಕ್ಷೇತ್ರ ಪ್ರವಾಸ:

ಜಗದ್ಗುರು ಮಹಾಸ್ವಾಮಿಗಳವರ ಶಿವಗಂಗಾ ಪ್ರವಾಸವು ಉಲ್ಲೇಖನೀಯವಾದುದು. ಅದು ದೊಡ್ಡಗುಣಿ ಪ್ರವಾಸವಷ್ಟೇ ಮುಖ್ಯವಾದುದು ಎನ್ನಬಹುದು.

ಶಿವಗಂಗೆಯು ಬೆಂಗಳೂರಿಗೂ ತುಮಕೂರಿಗೂ ಮಧ್ಯೆ ಕಕುದ್ಗಿರಿ ಕ್ಷೇತ್ರವೆಂದು ಪ್ರಸಿದ್ಧವಾದ ಒಂದು ಗ್ರಾಮ. ಆಗ ಅಲ್ಲಿಯೂ ಆಸು ಪಾಸು ಗ್ರಾಮಗಳಲ್ಲೂ ಹಲವು ಮಂದಿ ವೀರಶೈವ ಗಣ್ಯ ವ್ಯಕ್ತಿಗಳಿದ್ದರು. ಶಿವಗಂಗೆಯಲ್ಲಿರುವ ಶ್ರೀ ರೇಣುಕಾಚಾರ್ಯ ಪರಂಪರೆಗೆ ಸೇರಿದ ಉಪಾಚಾರ್ಯ ಪೀಠದ ಪ್ರಭಾವಶಾಲಿಗಳಾದ ಸ್ವಾಮಿಗಳು, ಶಿವಗಂಗೆಯ ಸಾಹುಕಾರ ಲಿಂಗಣ್ಣನವರು (ಪ್ರೊ. ಸಿದ್ದಪ್ಪನವರ ತಾತ), ಹೊನ್ನೇನಹಳ್ಳಿ ಗ್ರಾಮದ ಪಟೇಲ್ ಹೊನ್ನಶೆಟ್ಟಪ್ಪನವರು (ಶ್ರೀ ಎಚ್. ಆರ್. ಮಹಾಂತಯ್ಯನವರ ತಾತ), ಆಗ ಬಾಣವಾಡಿಯಲ್ಲಿ ಇದ್ದ ಮಾಗಡಿ ಲಾಯರ್ ನಂಜುಂಡಪ್ಪನವರು (ನಮ್ಮ ಚಿಕ್ಕಪ್ಪ) ಮೊದಲಾದವರು ಇವರೆಲ್ಲರೂ ಸೇರಿ ಗ್ರಾಮಸ್ಥರೊಡನೆ ಆಲೋಚಿಸಿ, ಜಗದ್ಗುರು ಮಹಾಸ್ವಾಮಿಗಳನ್ನು ಶಿವಗಂಗೆಗೆ ಕರೆಸಿಕೊಳ್ಳುವ ಏರ್ಪಾಡು ಮಾಡಿದ್ದರು. ಉತ್ಸವದ ದಿವಸವೂ ಗೊತ್ತಾಯಿತು. ಸ್ವಾಮಿಯು ಸಂಸ್ಥಾನದ 'ಸಲ್ತನ್' ಸಹಿತ ಮೇನಾದಲ್ಲಿ ದಯಮಾಡಿಸುತ್ತಿರುವಾಗ, ಶಿವಗಂಗೆಗೆ 5-6 ಮೈಲು ದೂರದಲ್ಲಿರುವ ಕಂಬಾಳು ಎಂಬ ಗ್ರಾಮದ ಬಳಿ ಒಂದು ಅಶುಭ ವರ್ತಮಾನವು ಬಂದಿತು: ಯಥಾಪ್ರಕಾರ ಉತ್ಸವಕ್ಕೆ ತಕರಾರು, ಅಡ್ಡಿ. ಶಿವಗಂಗೆಯಲ್ಲಿರುವ ಶೃಂಗೇರಿ ಪೀಠಕ್ಕೆ ಸೇರಿದ ಮಠದ ಬಳಿ ನಮ್ಮ ಜಗದ್ಗುರುಗಳವರ ಉತ್ಸವ ಜರುಗುವುದಾದರೆ ಸ್ವಾಮಿ ಪಲ್ಲಕ್ಕಿಯಿಂದ ಇಳಿದು ನಡೆದು ಹೋಗಬೇಕು-ಎಂಬುದೇ ಆ ತಕರಾರು. ಮಹಾಸ್ವಾಮಿಗಳು ಇದನ್ನು ಕೇಳಿದ ಕೂಡಲೇ ಎಲ್ಲಿದ್ದರೋ ಅಲ್ಲಿಯೇ-ಕಂಬಾಳು ಗ್ರಾಮದಲ್ಲಿಯೇ ನಿಂತು ಬಿಟ್ಟರು-ಆನೆ-ಕುದುರೆ-ಒಂಟೆ ಇತ್ಯಾದಿಗಳ ಮತ್ತು ದೊಡ್ಡ ಪರಿವಾರದ ಸಹಿತ. ಏಕೆಂದರೆ ತಕರಾರುಗಳು, ಅಡ್ಡಿಗಳೂ ಬಗೆಹರಿದ ಹೊರತು ಮುಂದಕ್ಕೆ ಹೆಜ್ಜೆ ಇಡುವುದು ಅವರ ಜಾತಕಕ್ಕೆ ಬಂದದ್ದಾಗಿರಲಿಲ್ಲ.

ಕಂಬಾಳಿನಲ್ಲಿ ಒಂದು ಮಠವಿದೆ–ಚಿಕ್ಕಮಠ- ಆಗ ಅದು ಉತ್ತಮ ಸ್ಥಿತಿಯಲ್ಲಿ ಇರಲಿಲ್ಲ [ಈಗ ಚನ್ನಾಗಿದೆಯೆಂದು ಕೇಳಿದ್ದೇನೆ]. ಸ್ವಾಮಿ ಆ ಮಠದಲ್ಲಿಯೇ ತಿಂಗಳುಗಟ್ಟಲೆ ಇರಬೇಕಾಯಿತು. ಮುಂದೆ ಆ ತಕರಾರನ್ನು ಬಗೆಹರಿಸಿಕೊಂಡು, ಶಿವಗಂಗೆಯಲ್ಲಿ ಉತ್ಸವವನ್ನು ಮುಗಿಸಿಕೊಂಡು ಭಕ್ತರಿಗೆ ಆನಂದವನ್ನುಂಟು ಮಾಡಿದರು.

ಗರ್ಭಿಣಿಗೆ ಒಂದು ಸೇರು ಮಗುವಿಗೆ ಮತ್ತೊಂದು ಸೇರು:

ಈ ಕಂಬಾಳು ಮಠದಲ್ಲಿ ಇದ್ದಾಗ ನಡೆದ ಒಂದು ಪ್ರಕರಣವನ್ನು ಹೇಳದಿರಲು ಆಗುವುದಿಲ್ಲ: ಸ್ವಾಮಿ ಅಲ್ಲಿ ಮೊಕ್ಕಾಂ ಮಾಡಿದ್ದಾಗ ಪದ್ಧತಿಯಂತೆ ಪ್ರತಿನಿತ್ಯ ಸಂಸ್ಥಾನದ ದೊಡ್ಡ ಪರಿವಾರಕ್ಕೂ ಬಂದು ಹೋಗುವ ಅತಿಥಿಗಳಿಗೂ, ಆಗಂತುಕರಿಗೂ ದೊಡ್ಡದಾಗಿ ಎಂದಿನಂತೆ ದಾಸೋಹ ನಡೆಯುತ್ತಿದ್ದಿತು. ಅದಕ್ಕಾಗಿ ಅಕ್ಕಿ, ರಾಗಿ ಮುಂತಾದ ಧಾನ್ಯಗಳು ಹೇರಳವಾಗಿ ಬರುತ್ತಿದ್ದವು. ಆ ಧಾನ್ಯಗಳನ್ನು ಶುದ್ಧಿ ಮಾಡಿಕೊಡಲು ಅನೇಕ ಹಳ್ಳಿ ಹೆಂಗಸರು ಕೂಲಿಗಾಗಿ ಬರುತ್ತಿದ್ದರು. ಒಂದು ದಿವಸ ಅಕ್ಕಿಯನ್ನು ಶುದ್ಧೀಕರಿಸು(ಮಾಡು)ತ್ತಿದ್ದ ಓರ್ವ ಗರ್ಭಿಣಿ ಹೆಂಗಸು ತಾನು ಮಾಡುತ್ತಿದ್ದ ಅಕ್ಕಿಯಲ್ಲಿ ಒಂದು ಸೇರಿನಷ್ಟು ಅಕ್ಕಿಯನ್ನು ಕದ್ದು ತನ್ನ ಸೀರೆಯ ನೆರಿಗೆಯಲ್ಲಿ

ಬಚ್ಚಿಟ್ಟುಕೊಂಡಿದ್ದಳು. ಇದನ್ನು ಕಂಡ ಸಂಸ್ಥಾನದ ನೌಕರನು ಆಕೆಯನ್ನು ದಂಡಿಸುತ್ತಿದ್ದುದು ಸ್ವಾಮಿಗಳವರ ಗಮನಕ್ಕೆ ಬಂದಿತು. ಅಷ್ಟರಲ್ಲಿ ಸ್ವಾಮಿಯ ದರ್ಶನಕ್ಕೆ ಬಂದ ಲಾಯರ್ ನಂಜುಂಡಪ್ಪನವರನ್ನು ಕುರಿತು ಸ್ವಾಮಿಗಳವರು "ಲಾಯರೇ, ಅದೇನೋ ವಿಚಾರ ಮಾಡಿ" ಎಂದು ಅಪ್ಪಣೆ ಮಾಡಿ, ಸಾಯಂಕಾಲ ಸಮೀಪಿಸುತ್ತಿದ್ದುದರಿಂದ ಸಂಚಾರಕ್ಕೆ ಹೊರಟು ಹೋದರು. ಲಾಯರು ಆಕೆಯನ್ನು ವಿಚಾರಣೆ ಮಾಡುವಾಗ್ಗೆ, ಆಕೆ ಗಡಗಡನೆ ನಡಗುತ್ತ ಕದ್ದಿದ್ದ ಅಕ್ಕಿಯನ್ನು ಸುರಿದು, "ಸ್ವಾಮೀ, ನಾನು ಕದ್ದಿದ್ದು ನಿಜ. ನಾನು ಬಸಿರಿ, ಬಡವೆ, ಅಕ್ಕಿಯನ್ನು ತಿಂದು ಎಷ್ಟೋ ದಿನಗಳಾಯ್ತು, ಅಕ್ಕಿಯ ಸೇವಿಗೆಯನ್ನು ತಿನ್ನಬೇಕೆಂಬ ಬಯಕೆಯಿಂದ ಕದ್ದುಬಿಟ್ಟೆ. ಅಕ್ಕಿಯನ್ನು ತೆಗೆದುಕೊಳ್ಳಿ, ನನಗೆ ಕೊಡಬೇಕಾದ ಈ ದಿನದ ಕೂಲಿ (ಆಗ ಹೆಣ್ಣಾಳಿಗೆ ಕೂಲಿ 2 ಆಣೆ, ಈಗಿನ 12 ಪೈಸೆ) ಯನ್ನು ಕೊಡಬೇಡಿ" ಎಂದು ಮುಂತಾಗಿ ಅಂಗಲಾಚಿಕೊಂಡಳು. ಲಾಯರ್ ನಂಜುಂಡಯ್ಯನವರು ಆ ಗರ್ಭಿಣಿಯ ಬಗ್ಗೆ ಕನಿಕರಪಟ್ಟು, ಆಕೆಗೆ ಆ ಒಂದು ಸೇರು ಅಕ್ಕಿಯನ್ನು ಕೊಟ್ಟು, ಕೂಲಿ 2 ಆಣೆಯನ್ನು ಕೊಟ್ಟು "ಪುನಃ ಇಂತಹ ಕೆಲಸವನ್ನು ಮಾಡಬೇಡ" ಎಂದು ಹೆದರಿಸಿ ಕಳಿಸುವುದರಲ್ಲಿದ್ದರು.

ಅಷ್ಟರಲ್ಲಿ ಜಗದ್ಗುರುಗಳು ಸಂಚಾರವನ್ನು ಮುಗಿಸಿಕೊಂಡು ಬಂದವರೇ ನಂಜುಂಡಪ್ಪನವರನ್ನು ಕೇಳಿದರು.

"ಆ ಕಳ್ಳಿಗೆ ಏನು ಶಿಕ್ಷೆಯನ್ನು ವಿಧಿಸಿದಿರಿ ?"

"ಸ್ವಾಮಿ ಒಪ್ಪುವಂತಹ ಶಿಕ್ಷೆಯನ್ನೇ ವಿಧಿಸಿದ್ದೇನೆ ! ಈಕೆ ಹುಟ್ಟುಗಳ್ಳಿಯಲ್ಲ. ಬಡವೆ, ಗರ್ಭಿಣಿ. ಅಕ್ಕಿಯನ್ನು ತಿಂದು ಬಹಳ ದಿನಗಳಾಗಿದ್ದವಂತೆ. ಅಕ್ಕಿಯ ಸೇವಗಿಯನ್ನು ತಿನ್ನಬೇಕೆಂಬ ಬಯಕೆಯಿಂದ ಈ ಅಕ್ಕಿಯನ್ನು ಕದ್ದಳಂತೆ. ಅಕ್ಕಿಯನ್ನು ಸುರಿದು ತನ್ನ ಕೂಲಿ 2 ಆಣೆಯನ್ನು ಹಿಡಿದುಕೊಂಡು ಬಿಟ್ಟು ಬಿಡಿ ಎನ್ನುತ್ತಾಳೆ".

"ಆದ್ದರಿಂದ ಏನು ಮಾಡಿದಿರಿ ?"

"ಆದ್ದರಿಂದ ಆಕೆಗೆ ಆ ಅಕ್ಕಿಯನ್ನು ಕೊಟ್ಟು, ಆಕೆಯ ಎರಡಾಣೆಯ ಕೂಲಿಯನ್ನು ಕೊಟ್ಟು ಕಳಿಸುವುದರಲ್ಲಿದ್ದೇನೆ".

"ಯಾವ ನ್ಯಾಯಾರೀ ಇದು ?"

"ಏನೋ ಹೋಗಲಿ ಬುದ್ಧಿ; ಬಡವೆ, ಗರ್ಭಿಣಿ !"

"ಅದೇ ಕಾರಣದಿಂದ ನೀವು ಮಾಡಿರುವ ತೀರ್ಮಾನ ತಪ್ಪು !"

"ಸ್ವಾಮಿ ಚಿತ್ತ. ಹೇಗೆ ಅಪ್ಪಣೆಯಾದರೆ ಹಾಗೆ ಮಾಡೋದಾಗುತ್ತೆ"

"ನೀವು ಕೂಲಿ ಕೊಟ್ಟದ್ದು ಸರಿಹೋಯ್ತು. ಆದರೆ ಒಂದು ಸೇರು ಅಕ್ಕಿ ಕೊಟ್ಟದ್ದು ತಪ್ಪು".

"ಆಯ್ತು, ಹಿಂದಕ್ಕೆ ತೆಗೆದುಕೊಳ್ಳುತ್ತೇನೆ"

"ಹಿಂದಕ್ಕೆ ತೆಗೆದುಕೊಳ್ಳುವುದಲ್ಲರೀ........(ಮುಗುಳ್ನಗುವಿನೊಡನೆ) ಇನ್ನೊಂದು ಸೇರು ಅಕ್ಕಿಯನ್ನು ಕೊಡಬೇಕು !"

"ಏಕೆ ?"

"ಆಕೆಗೊಂದು ಸೇರು, ಆಕೆಯ ಹೊಟ್ಟೆಯಲ್ಲಿರುವ ಮಗುವಿಗೆ ಒಂದು ಸೇರು !"

ಹಾಗೆಯೇ ಮಾಡಿ ಆ ಕೂಲಿಯಾಳನ್ನು ಕಳಿಸಲಾಯಿತು.

ಬೃಹನ್ಮಠಕ್ಕೆ ಶ್ರೀಮನ್ಮಹಾರಾಜರ ಆಗಮನ :

ಚಿತ್ರದುರ್ಗ ಜಗದ್ಗುರು ಮಠದ ಚರಿತ್ರೆಯಲ್ಲಿ 1937 ನೆಯ ಇಸವಿಯು ಬಹಳ ಮುಖ್ಯವಾದುದು. ಆ ವರ್ಷದಲ್ಲಿ ಮೈಸೂರಿನ ಶ್ರೀಮನ್ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರವರು ಜಗದ್ಗುರುರವರ ಮಠಕ್ಕೆ ದಯಮಾಡಿಸಿದ್ದರು. ಮತ್ತು ಶ್ರೀ ಜಗದ್ಗುರುಗಳೂ ಸಹ ಮೈಸೂರಿಗೂ, ಮೈಸೂರು ಅರಮನೆಗೂ ದಯಮಾಡಿಸಿದ್ದರು.

ಮಹಾರಾಜರು ಚಿತ್ರದುರ್ಗಕ್ಕೆ ದಯಮಾಡಿಸಿದ್ದಾಗ ಕರ್ನಾಟಕದ ನಾನಾ ಭಾಗಗಳಿಂದ 30–40 ಸಾವಿರ ಭಕ್ತಾದಿಗಳು ನೆರೆದಿದ್ದರು. ಬೆಂಗಳೂರಿನ ಪ್ರಮುಖರೂ ಹಲವು ಜನ ಅಲ್ಲಿಗೆ ಈ ಹಿಂದಿನ ದಿನವೇ ಹೋಗಿದ್ದೆವು–ಅವರಲ್ಲಿ ನಾನೂ ಒಬ್ಬ............ಆ ದಿನವೇ ಮಹಾಸ್ವಾಮಿಗಳು ನನ್ನನ್ನು ಕರೆಸಿಕೊಂಡು ಮರುದಿವಸದ ಕಾರ್ಯಕ್ರಮದ ಬಗೆಗೆ ಸ್ವಲ್ಪ ಆಪ್ತಾಲೋಚನೆಯನ್ನು ನಡೆಸಿದರು.

ರೇಷ್ಮೆ-ಜರತಾರಿಯ ಕಫನಿ ಮತ್ತು ಮುಂಡೆವಸ್ತ್ರ :

ಈ ಸಂದರ್ಭದಲ್ಲಿ ನಡೆದ ಒಂದು ವಿಚಾರವನ್ನು ಮಹಾಪೀಠದ ಭಕ್ತಾದಿಗಳ ಗಮನಕ್ಕೆ ತರಬೇಕಾಗಿದೆ: ಸಂಸ್ಥಾನ ಮಠಕ್ಕೆ ಮಹಾರಾಜರು ದಯಮಾಡಿಸುವ ಸಂದರ್ಭದಲ್ಲಿ ಪೀಠಾಧಿಪತಿಗಳಿಗೆ ಪೀಠದ ಔನ್ನತ್ಯಕ್ಕೆ ತಕ್ಕುದಾದ ಉಡುಗೆ-ತೊಡಿಗೆಗಳು ಇರಬೇಕೆಂಬ ಅಭಿಪ್ರಾಯದಿಂದ ಪೀಠದ ಅವಿಚ್ಛನ್ನ ಭಕ್ತರಾಗಿದ್ದ ಜಿಗಟೇರಿ ಮುರಿಗೆಪ್ಪನವರು ಕಾವಿ ಬಣ್ಣದ ಸೊಗಸಾದ ರೇಷ್ಮೆಯ (ಸ್ವಲ್ಪ ಜರತಾರಿ ಕೆಲಸವೂ ಮಾಡಲ್ಪಟ್ಟದ್ದಿತೆಂದು ನನಗೆ ಜ್ಞಾಪಕವಿದೆ) ಕಫನಿ ಮತ್ತು ಮಂಡೆ ವಸ್ತ್ರ ಇತ್ಯಾದಿಗಳನ್ನು ತಂದು, ಅವುಗಳನ್ನು ಸ್ವಾಮಿ ಧರಿಸಬೇಕೆಂದು ದೀರ್ಘದಂಡ ಹಾಕಿ ಬೇಡಿಕೊಂಡರು. ಸ್ವಾಮಿಗಳು-"ಅದು ಸರಿಯಲ್ಲ, ಈಗ ಅಂಥವುಗಳನ್ನು ಧರಿಸಬಾರದು" ಎಂದು ಮುರಿಗೆಪ್ಪನವರಿಗೆ ಸಮಾಧಾನ ಹೇಳಿದರು. ಮುರಿಗೆಪ್ಪನವರು ಮಹಾರಾಜರಿಗೆ ಉಚಿತವಾದ ಉಡಿಗೆ-ತೊಡಿಗೆಗಳು ಮಹಾಸ್ವಾಮಿಯವರಿಗೂ ಇರಬೇಕೆಂದು ಭಕ್ತ್ಯುದ್ರೇಕದಿಂದ ಅಂಗಲಾಚುತ್ತಿದ್ದರು. ಮಹಾಸ್ವಾಮಿಗಳು "ಚನ್ನಪ್ಪನವರನ್ನು ಕೇಳಿ, ಹೇಳುತ್ತಾರೆ" ಎಂದು ನನ್ನ ಕಡೆ ತೋರಿಸಿದರು. ನಾನು, ಮಹಾಸ್ವಾಮಿಗಳ ಅಭಿಪ್ರಾಯವೇ ಸರಿಯೆಂದೂ, ಆ ಸಂದರ್ಭದಲ್ಲಿ ಹೆಚ್ಚು ಬೆಲೆಯ, ಅದರಲ್ಲು ಹೊಸ ಬಟ್ಟೆಗಳನ್ನು ಧರಿಸುವುದು ಸೂಕ್ತವಲ್ಲವೆಂದೂ ಮುರಿಗೆಪ್ಪನವರಿಗೆ ಸಮಾಧಾನ ಹೇಳಿದೆ.

ಹಳೆಯ ಖಾದಿ ಕಪನಿ :

ಜಗದ್ಗುರುಗಳು ದಿನನಿತ್ಯದಂತೆ ಖಾದಿಯ ಹಳೆಯದೂ ಅಲ್ಲದ ಹೊಸದೂ ಅಲ್ಲದ ಒಂದು ಕಾವಿಯ ಕಪನಿಯನ್ನು ಧರಿಸಿದ್ದರು. ಪ್ರತಿನಿತ್ಯವೂ ಒಗೆಯಲ್ಪಡುತ್ತಿದ್ದ ಆ ಕಪನಿಯ ತೋಳುಗಳ ಕೊನೆಯಲ್ಲಿ ದಾರಗಳು ಬಿಟ್ಟುಕೊಂಡು ಮುಂದು ಚಾಚಿಕೊಂಡಿದ್ದವು. ಅದನ್ನು ಮುರಿಗೆಪ್ಪನವರು ತೋರಿಸಿ,ಆ ಹಳೆಯ ಕಪನಿಯನ್ನಾದರೂ ಬದಲಾಯಿಸಬೇಕೆಂದು ಅಭಿಪ್ರಾಯಪಟ್ಟರು. ಆಗ ನಾನು ಹೇಳಿದೆ, "ಈಗಿರುವುದು ಸರಿಯಾಗಿದೆ, ಹೇಳಿ ಮಾಡಿಸಿದಂತಿದೆ. ಇದರ ಗಾಂಭೀರ್ಯ, ಘನತೆ, ಯೋಗ್ಯತೆಗಳು ಹೊಸ ತೊಡಿಗೆಗೆ ಬರುವುದಿಲ್ಲ. ಮಹಾರಾಜರು ಬಂದು ಹೋಗುವ ಸಮಯವಾದರು ಲೌಕಿಕರು ಪೋಷಾಕುಗಳನ್ನು ಬದಲಾಯಿಸಿಕೊಳ್ಳಬಹುದೇ ಹೊರತು, ಗುರುಗಳು—ಅದರಲ್ಲೂ ಜಗದ್ಗುರುಗಳು ದಿನನಿತ್ಯದಂತೆಯೇ ಇರಬೇಕು. ಮೇಲಾಗಿ ಶ್ರೀಕೃಷ್ಣರಾಜರು ಬಹಳ ಸೂಕ್ಷ್ಮಮತಿಗಳು, ಇವುಗಳನ್ನೆಲ್ಲ ಅವರು ಗಮನಿಸಿದರೂ ಹೆಚ್ಚಲ್ಲ. ತೋಳು ಕೊನೆಗಳಿಂದ ದಾರಗಳು ಬರುವಂತೆ ನಾವೇ ಮಾಡಬೇಕಾಗಿದ್ದಿತು; ಅವೇ ತಾವಾಗಿ ಬಂದಿವೆ; ಸುಮ್ಮನಿರಿ" ಎಂದು ಹೇಳಿದೆ. ಮಹಾಸ್ವಾಮಿಗಳು ಮುಗುಳ್ನಗೆಗೂಡಿದರು. ಅಷ್ಟರಲ್ಲಿಯೇ ಮಹಾರಾಜರ ಸವಾರಿ ಬರುತ್ತಿದೆಯೆಂಬ ವರ್ತಮಾನ ಬಂತು. ಎಲ್ಲರೂ ಹೊರಗೆ ಬಂದೆವು.

ಆನೆಬಾಗಿಲಿನಲ್ಲಿ ನಿಂತಿದ್ದ ಮಹಾಸ್ವಾಮಿಗಳವರ ಬಳಿಗೆ ಮಹಾರಾಜರು ಬಂದೊಡನೆಯೇ ಸ್ವಾಮಿಗಳೂ, ರಾಜರೂ ಒಟ್ಟಿಗೆ ಮಠದ ಒಳಗಡೆಗೆ ದಯಮಾಡಿಸಿ, ಕರ್ತೃಗದ್ದಿಗೆಯ ಬಳಿ ಮಂಗಳಾರತಿಯಾದ ನಂತರ ಮಹಡಿಯನ್ನು ಹತ್ತಿ "ಹಾಲ್" ನೊಳಕ್ಕೆ ಇಬ್ಬರೇ ಹೋದರು. ಅಲ್ಲಿ ಇಬ್ಬರಿಗೂ ಏರ್ಪಡಿಸಿದ್ದ ಉಚಿತಾಸನಗಳ ಮೇಲೆ ಇಬ್ಬರೂ ಮಂಡಿಸಿ ಸ್ವಲ್ಪ ಹೊತ್ತು ಮಾತನಾಡಿದ ಮೇಲೆ ಅವರಿಗೆ ಇವರೂ, ಇವರಿಗೆ ಅವರೂ ಸಂದರ್ಭೋಚಿತವಾದ ಮಾನಮರ್ಯಾದೆಗಳನ್ನೂ ಉಡುಗರೆಗಳನ್ನೂ ಸಮರ್ಪಿಸಿದರು.ಇದಾದ ನಂತರ ಮಹಾಸ್ವಾಮಿಯವರು ಮಹಾರಾಜರನ್ನು ಬೀಳ್ಕೊಟ್ಟರು.

ಮೈಸೂರು ಪ್ರವಾಸ :

ಶ್ರೀಮಠಕ್ಕೆ ಮಹಾರಾಜರು ದಯಮಾಡಿಸಿದ್ದಾಗ ಮಹಾಸ್ವಾಮಿಗಳವರು ಅವರ ಇಷ್ಟಪ್ರಕಾರ ಉಪಯೋಗಿಸುವುದಕ್ಕಾಗಿ 10,000 ರೂಪಾಯಿಗಳನ್ನು ದಯಪಾಲಿಸಿದ್ದರು. ಇದಲ್ಲದೆ ಆ ಹಿಂದೆಯೇ ಆಗ ದಿವಾನ್ ಪದವಿಯಲ್ಲಿದ್ದ ಸರ್ ಮಿರ್ಜಾ ಸಾಹೇಬರ ವಶಕ್ಕೆ 40,000 ರೂಪಾಯಿಗಳನ್ನು ದಯಪಾಲಿಸಿದ್ದರು. ಈ ಹಣದಿಂದ ಮೈಸೂರಿನಲ್ಲಿ "ರೋಗ ನಿಧಾನ ಚಿಕಿತ್ಸಾಲಯ"ವನ್ನು ಕಟ್ಟಿಸತಕ್ಕದ್ದೆಂದು ತೀರ್ಮಾನ ಮಾಡಿ, ಆ ಕಟ್ಟಡದ ಶಂಕುಸ್ಥಾಪನೆಯನ್ನು ಚಿತ್ರದುರ್ಗದ ಜಗದ್ಗುರುಗಳ ಸಮ್ಮುಖದಲ್ಲಿ ಶ್ರೀಮನ್ಮಹಾರಾಜರಿಂದ ಹಾಕಿಸತಕ್ಕದ್ದೆಂದು ಮಹಾರಾಜಾ ಸರ್ಕಾರವು ನಿರ್ಣಯ ಮಾಡಿ, ಮೈಸೂರಿಗೆ ದಯಮಾಡಿಸುವಂತೆ ಮಹಾಸ್ವಾಮಿಯವರಿಗೆ ಆಹ್ವಾನ ಕೊಟ್ಟಿತು. (ಇದಲ್ಲದೆ ಮೈಸೂರು ನಾಗರಿಕರ ಆಹ್ವಾನವು ಹಲವು ಕಾಲದಿಂದ ಇದ್ದೇ ಇತ್ತು.) ಆ ಸಮಯದಲ್ಲಿ ಮಹಾಸ್ವಾಮಿಯವರು [illegible] ಇದ್ದರು. ಈ ವರ್ತಮಾನವು ತಿಳಿದಕೂಡಲೆ ಅವರು ಶ್ರೀಮಠಕ್ಕೆ ದಯಮಾಡಿಸಿ, ಮೈಸೂರಿಗೆ ಹೊರಡಲು ಅವಶ್ಯಕವಾದ ಏರ್ಪಾಡುಗಳಿಗೆ ಗಮನ ಕೊಡುತ್ತಿದ್ದರು. ಆ ಸಂದರ್ಭದಲ್ಲಿ ನನ್ನನ್ನು ದುರ್ಗಕ್ಕೆ ಕರೆಸಿಕೊಂಡು, ನಾನು ಮೈಸೂರಿಗೆ ಬರಬೇಕೆಂದೂ, ಬಂದವನು ಆ ಪ್ರವಾಸ ಮುಗಿಯುವವರೆಗೆ ಅಲ್ಲಿಯೇ ಇರಬೇಕೆಂದೂ, ಅಪ್ಪಣೆ ಮಾಡಿದರು. ಎದುರು ಹೇಳಲು ಸಾಧ್ಯವಿಲ್ಲದೆ ಒಪ್ಪಿಕೊಂಡೆ.

ಮೈಸೂರಿನಲ್ಲಿ 'ಶೇಷಾದ್ರಿ ಹೌಸ್'ನಲ್ಲಿ ಜಗದ್ಗುರುಗಳ ಮತ್ತು ಅವರ ಪರಿವಾರದ ಬಿಡಾರವು ಏರ್ಪಟ್ಟಿತ್ತು. ಮೊದಲೇ ಗೊತ್ತಾಗಿದ್ದ ಉತ್ಸವದ ದಿನದ ಹಿಂದಿನ ದಿವಸ ಸಂಸ್ಥಾನದ ಬಿರುದು-ಬಾವಲಿಗಳನ್ನು ಸಿದ್ಧಪಡಿಸಿಕೊಳ್ಳುವ ಏರ್ಪಾಡು ತ್ವರೆಯಿಂದ ನಡೆಯುತ್ತಿತ್ತು. ಆದರೆ ಆ ದಿನ ಸಾಯಂಕಾಲದವರೆಗೆ ನೋಡಿದರೂ ಶ್ರೀ ಮಠದ ಆನೆಗಳು ಬರಲೇ ಇಲ್ಲ. ಈ ಬಗೆಗೆ ಗಾಬರಿಯಾಗಿ ಆನೆಯನ್ನು ಹೊಡೆದುಕೊಂಡು ಬರುವ ರಸ್ತೆಯಲ್ಲಿ 15-20 ಮೈಲಿಗಳವರೆಗೆ ಮೋಟಾರ್ ಕಾರನ್ನು ಕಳಿಸಿ ನೋಡಿಸಲಾಯಿತು. ಆನೆಯ ಸುಳಿವೇ ಇಲ್ಲ. ಉತ್ಸವದಲ್ಲಿ ಮುಂದೆ ಆನೆಯಿಲ್ಲವಾದರೆ ಶೋಭೆಯೆಲ್ಲಿ? ಮುಂದೆ ಏನು ಮಾಡಬೇಕೆಂಬ ಆಲೋಚನೆಯುಂಟಾಯಿತು.

ಮೈಸೂರಿನ ಕಾರ್ಯಕ್ರಮಕ್ಕೆ ಮುಂದಾಳುಗಳಾಗಿದ್ದವರು, ಸುಪ್ರಸಿದ್ಧ ಮೈಸೂರು ಸ್ಟಾರ್ ಪತ್ರಿಕೆಯ ಸಂಪಾದಕರಾದ ವಿರುಪಾಕ್ಷಯ್ಯನವರು, ಅವರ ಸ್ನೇಹಿತರಾದ ನಿಟ್ರ ಬಸಪ್ಪನವರು, ಬಿ. ಎಸ್. ಪುಟ್ಟಸ್ವಾಮಿಯವರು ಮೊದಲಾದವರು. ಇವರಲ್ಲಿ ಪುಟ್ಟಸ್ವಾಮಿಯವರು ಆಗಿನ ಜಿಲ್ಲಾ ಬೋರ್ಡು (ಆಗ ಮಂಡ್ಯ ಮತ್ತು ಮೈಸೂರು ಈ ಎರಡು ಜಿಲ್ಲೆಗಳೂ ಮೈಸೂರು ಜಿಲ್ಲೆಗೆ ಸೇರಿದ್ದವು) ಅಧ್ಯಕ್ಷರಾಗಿ ಅನೇಕ ವರ್ಷಗಳಿಂದ ಇದ್ದು ಆ ಜಿಲ್ಲೆಯಲ್ಲಿ ತುಂಬಾ ಜನಾನುರಾಗಿಗಳಾಗಿಯೂ, ಸರ್ಕಾರ ಮತ್ತು ಅರಮನೆಗಳ ಪ್ರೀತಿಪಾತ್ರರಾಗಿಯೂ ಇದ್ದರು. ಜಿಲ್ಲಾ ಬೋರ್ಡುಗಳಿಗೆ ಸಂಬಂಧಪಟ್ಟಂತೆ "ಲೋಕಲ್ ಸೆಲ್ಫ್ ಗೌರ್ಮೆಂಟ್ ಜರ್ನಲ್" ಎಂಬ ಪತ್ರಿಕೆಗೆ ಸಂಪಾದಕನಾಗಿದ್ದ ನಾನು ಅವರಿಗೆ ಸ್ನೇಹಿತನಾಗಿದ್ದೆ. ಅವರು, ಜಗದ್ಗುರುಗಳ ಸವಾರಿ ಮೈಸೂರಿಗೆ ದಯಮಾಡಿಸಿದ ವಿಚಾರದಲ್ಲಿ ತುಂಬಾ ಉತ್ಸುಕರಾಗಿದ್ದು ಮೊದಮೊದಲು ಬಹಳ ಮುತುವರ್ಜಿಯಿಂದ ಕೆಲಸ ಮಾಡಿದರು. ನಾನೂ ಅವರ ಜತೆಗೆ ಸೇರಿಕೊಂಡೆ.

ಉತ್ಸವದ ಆನೆ ಬರಲೇ ಇಲ್ಲ :

ಮೇಲೆ ಕಂಡಂತೆ ಜಗದ್ಗುರುಗಳ ಆನೆ ಸಕಾಲಕ್ಕೆ ಬರದೆಹೋದುದು ನನಗೂ ಪುಟ್ಟಸ್ವಾಮಿಯವರಿಗೂ ತುಂಬಾ ಯೋಚನೆಗಿಟ್ಟುಕೊಂಡಿತು. ಅವರ ಬ್ರಾಹ್ಮಣ ಲಾಯರ್ ಸ್ನೇಹಿತರೊಬ್ಬರು ಅಗ್ಗ ಸ್ವಲ್ಪ ಕಾಲದ ಹಿಂದೆ ಸನ್ಯಾಸವನ್ನು ಸ್ವೀಕರಿಸಿ ಒಂದು ಮಠಕ್ಕೆ ಸ್ವಾಮಿಗಳಾಗಿದ್ದರಂತೆ. ಮೈಸೂರಿಗೆ ಕೇವಲ 15-20 ಮೈಲಿ ದೂರದಲ್ಲಿದ್ದ ಆ ಮಠದಲ್ಲಿ ಆನೆ ಇದೆ, ಹೋಗಿ ಕೇಳಿದರೆ ಕಳಿಸಿಕೊಟ್ಟಾರಲ್ಲವೆ ?–ಎಂದು ನನ್ನೊಡನೆ ಆಲೋಚನೆ ಮಾಡಿದರು, ಪುಟ್ಟಸ್ವಾಮಿಯವರು. ಪ್ರಯತ್ನಿಸೋಣವೆಂದು ಇಬ್ಬರೂ ಆಲೋಚಿಸಿ, ಆ ಮಠಕ್ಕೆ

ರಾತ್ರಿ 11–12 ಗಂಟೆ ಸುಮಾರಿಗೆ ಹೋಗಿ, ಆ ಸ್ವಾಮಿಗಳನ್ನು ಕೇಳುವಲ್ಲಿ ಅವರು ''ದೊಡ್ಡ ಸ್ವಾಮಿಗಳನ್ನು ಕೇಳಬೇಕು'' ಎಂದು ಹೇಳಿದರು. ದೊಡ್ಡ ಸ್ವಾಮಿಗಳಾದರೋ ''ಕಳಿಸಿಕೊಡಬಹುದಿತ್ತು, ಆದರೆ ಒಂದು ಮಠದವರು ಇನ್ನೊಂದು ಮಠದವರಿಗೆ ಬಿರುದಾವಳಿಗಳಲ್ಲಿ ಯಾವುದಾದರೊಂದನ್ನು ಕಳಿಸಿಕೊಟ್ಟರೆ ಅದಕ್ಕೆ ಬೇರೆ ಅರ್ಥವಾಗುತ್ತೆ'' ಎಂದು ಮುಂತಾಗಿ ಹೇಳಿ, ನಿರಾಕರಿಸಿದರು.

ಒಂದು ಆನೆಗೆ ಬದಲು ನೂರು ನಂದೀ ಧ್ವಜ :

ಆನೆಯಿಲ್ಲದೆಯೇ ಜಗದ್ಗುರುಗಳ ಉತ್ಸವವು ಭರ್ತಿಯಾಗಿರುವಂತೆ ಮಾಡಲು ಪುಟ್ಟಸ್ವಾಮಿಯವರು ಆ ನಡು ರಾತ್ರಿಯಲ್ಲಿಯೇ ಒಂದು ಯೋಜನೆಯನ್ನು ತೆಗೆದರು. ಅದೇನೆಂದರೆ: ಬೆಳಕುಹರಿಯುವುದರೊಳಗಾಗಿ ಮೈಸೂರಿನಲ್ಲಿ ಒಂದು ನೂರು ನಂದೀ ಧ್ವಜಗಳು ಕೂಡುವಂತೆ ಮಾಡುವುದು........ ಸರಿ, ಕಾರಿನಲ್ಲಿ ಕುಳಿತದ್ದೇ ಹೊರಟೆವು. ಪುಟ್ಟಸ್ವಾಮಿಯವರು ಅನುಸ್ಯೂತವಾಗಿ ಅನೇಕ ವರ್ಷಗಳ ಕಾಲ ಜಿಲ್ಲಾ ಬೋರ್ಡು ಅಧ್ಯಕ್ಷರಾಗಿದ್ದುದರಿಂದ ಅವರಿಗೆ ಆ ಸುತ್ತುಮುತ್ತಣ ಹಳ್ಳಿಗಳೂ, ಆಯಾ ಹಳ್ಳಿಯ ಪ್ರಮುಖರೂ ಚೆನ್ನಾಗಿ ತಿಳಿದಿದ್ದರು. ಪ್ರತಿಯೊಂದು ಹಳ್ಳಿಯಲ್ಲಿಯೂ ಪ್ರಮುಖರನ್ನು ಎಬ್ಬಿಸಿ, ಆ ಊರಿನ ನಂದೀ ಧ್ವಜಗಳನ್ನೂ, ಅವುಗಳನ್ನು ಕುಣಿಸುವ ತರುಣರನ್ನೂ ಕರೆದುಕೊಂಡು ಶೇಷಾದ್ರಿ ಹೌಸಿನ ಬಳಿಗೆ ಬೆಳಿಗ್ಗೆ 7-30 ಗಂಟೆಯೊಳಗಾಗಿ ಬರಬೇಕೆಂದು ತಿಳಿಸಲಾಯಿತು. ಹೀಗೆ 15-20 ಹಳ್ಳಿಗಳಿಗೆ ಹೋಗಿ ಖಚಿತಮಾಡಿಕೊಂಡು ನಾವಿಬ್ಬರೂ ಬೆಳಿಗ್ಗೆ 6 ಗಂಟೆಯ ಹೊತ್ತಿಗೆ ಮೈಸೂರಿಗೆ ಬಂದು, ಮುಂದಿನ ಏರ್ಪಾಡಿನ ಕಡೆಗೆ ಗಮನ ಕೊಟ್ಟೆವು.

ಅರಮನೆಯ ಆನೆ ಬಂದವು :

ಪುಟ್ಟಸ್ವಾಮಿಯವರ ಕಾರ್ಯಕ್ರಮದಂತೆ ಜಗದ್ಗುರುಗಳ ಉತ್ಸವದ ಹೊತ್ತಿಗೆ ನೂರಾರು ನಂದೀ ಧ್ವಜಗಳು ಬಂದು, ಉತ್ಸವದಲ್ಲಿ ಭಾಗವಹಿಸಿದವು. ಆದರೆ ಅದು ಆನೆಗಳಿಗೆ ಬದಲಾಗಿ ಅಲ್ಲ, ಆನೆಗಳ ಜತೆಗೆ !........ ಜಗದ್ಗುರುಗಳ ಆನೆಗಳು ಸಕಾಲಕ್ಕೆ ಬರುವಂತಿಲ್ಲವೆಂಬುದು ಅರಮನೆಗೆ ತಿಳಿದು ಶ್ರೀಮನ್ಮಹಾರಾಜರವರೇ ಭಕ್ತಿವಿಶ್ವಾಸಗಳಿಂದ ಆನೆ-ಕುದುರೆ-ಒಂಟೆಗಳನ್ನು ಉತ್ಸವದ ಹೊತ್ತಿಗೆ ಸರಿಯಾಗಿ ಕಳಿಸಿಕೊಟ್ಟರು. ಉತ್ಸವವು 'ನಭೂತೋ ನ ಭವಿಷ್ಯತಿ' ಎನ್ನುವಷ್ಟು ಮಟ್ಟಿಗೆ ವೈಭವದಿಂದ ನೆರವೇರಿತು.

ಮಹಾರಾಜರಿಂದ ಚಿಕಿತ್ಸಾಲಯದ ಶಂಕುಸ್ಥಾಪನೆ :

ಈ ಹಿಂದೆ ತಿಳಿಸಿದಂತೆ ಜಗದ್ಗುರುಗಳು ಕೊಟ್ಟಿದ್ದ ದೇಣಿಗೆಯಿಂದ ಮೈಸೂರಿನಲ್ಲಿ ರೋಗ ನಿಧಾನ ಚಿಕಿತ್ಸಾಲಯವನ್ನು ಕಟ್ಟಿಸಬೇಕೆಂದೂ, ಅದರ ಶಂಕುಸ್ಥಾಪನೆಯನ್ನು ಮಹಾರಾಜರು ಮಾಡಬೇಕೆಂದೂ ತೀರ್ಮಾನವಾಗಿದ್ದಿತಷ್ಟೆ. ಆ ಸಮಾರಂಭಕ್ಕೆ ಜಗದ್ಗುರುಗಳವರು ದಯಮಾಡಿಸಬೇಕೆಂಬ ಆಹ್ವಾನವನ್ನು ಮನ್ನಿಸಿಯೇ ಜಗದ್ಗುರುಗಳು ಮೈಸೂರಿಗೆ ಮುಖ್ಯವಾಗಿ ದಯಮಾಡಿಸಿದ್ದದ್ದು. ಶಂಕುಸ್ಥಾಪನಾ ಸಮಾರಂಭದ ಚಪ್ಪರವು ಮನೋಹರವಾಗಿಯೂ, ಸಾಕಾದಷ್ಟು ವಿಶಾಲವಾಗಿಯೂ ಇದ್ದಿತು. ಏಕೆಂದರೆ ಅಲ್ಲಿ ನೆರೆಯತಕ್ಕವರು ಮೈಸೂರಿನ ನಾಗರೀಕರು ಮಾತ್ರವಲ್ಲ, ಆ ಮಹಾ ಗುರು ಮತ್ತು ಮಹಾರಾಜರ ಸಮಾಗಮವನ್ನು ಕಣ್ಣಲ್ಲಿ ಕಂಡು ಧನ್ಯರಾಗಬೇಕೆಂದು ಕರ್ನಾಟಕದ ನಾನಾ ಕಡೆಗಳಿಂದ ಬಂದಿದ್ದ ಭಕ್ತಾದಿಗಳಿಗೂ ಆ ಚಪ್ಪರದಲ್ಲಿ ಸ್ಥಳ ಬೇಕಾಗಿದ್ದಿತು.

ಆ ಚಪ್ಪರದಲ್ಲಿ ಮಹಾರಾಜರೂ ಮಹಾಸ್ವಾಮಿಗಳೂ ಎಷ್ಟು ಹೊತ್ತಿಗೆ, ಎಲ್ಲಿ, ಹೇಗೆ ಕೂಡಬೇಕೆಂಬುದು ಮೊದಲೇ ನಿರ್ಧಾರವಾಗಿದ್ದಿತು. ಆ ಚಪ್ಪರಕ್ಕೆ ಎರಡು ಬಾಗಿಲುಗಳು—ಒಂದು ಪೂರ್ವಕ್ಕೆ, ಒಂದು ಪಶ್ಚಿಮಕ್ಕೆ. ನಿರ್ದಿಷ್ಟವಾದ ಕಾಲಕ್ಕೆ ಸರಿಯಾಗಿ ಮಹಾರಾಜರು ಒಂದು ಬಾಗಿಲಿನಿಂದಲೂ, ಮಹಾಸ್ವಾಮಿಗಳವರು ಎದುರು ಬಾಗಿಲಿನಿಂದ ಪ್ರೇಕ್ಷಕರ ನಡುವೆ ತೆರವುಮಾಡಿದ್ದ ದಾರಿಯಲ್ಲಿ ಬಂದು, ಮಧ್ಯೆ ಒಬ್ಬರನ್ನೊಬ್ಬರು ಎದುರುಗೊಂಡು, ಜತೆಯಲ್ಲಿಯೇ ನಡೆದು ತಮ್ಮ ತಮ್ಮ ಆಸನಗಳಲ್ಲಿ ಮಂಡಿಸುವುದು. ಆಮೇಲೆ ಕಾರ್ಯಕ್ರಮ ಪ್ರಾರಂಭ. ಇದೇ ಆ ಏರ್ಪಾಡು. ಆದರೆ ವಾಸ್ತವಾಂಶ ಹಾಗೆ ನಡೆಯಲಿಲ್ಲ !

ಇದಕ್ಕೆ ಕಾರಣವೇನೆಂದರೆ : ಚಪ್ಪರದಲ್ಲಿ ಜಗದ್ಗುರುಗಳ ಆಸನವು ಮಹಾರಾಜರ ಆಸನದ ಪಕ್ಕದಲ್ಲಿಲ್ಲದೆ, ಕೆಳಗಡೆ ಎದುರಿನಲ್ಲಿ ಹಾಕಲ್ಪಟ್ಟಿದ್ದಿತು. ಇದನ್ನು ಅಲ್ಲಿಗೆ ಮುಂದಾಗಿ ಹೋಗಿ ನೋಡಿಕೊಂಡು ಬಂದಿದ್ದ ಕೆಲ ಮಂದಿ ಉತ್ತರ ದೇಶದ ಭಕ್ತರು ಆ ಬಗೆಗೆ ತುಂಬಾ ಅಸಮಧಾನಪಟ್ಟುಕೊಂಡು ಅದು ಅರಮನೆಯ ನೌಕರರ ಚಮತ್ಕಾರವೆಂದೂ ಮಹಾಸ್ವಾಮಿಗಳವರು ಅಲ್ಲಿಗೆ ಹೋಗಲೇಕೂಡದೆಂದೂ ಅಡ್ಡಿ ಮಾಡಿದರು. ಅದು ಸಾಧುವಲ್ಲವೆಂದೂ, ಅದರಿಂದ ದುಷ್ಪರಿಣಾಮವುಂಟಾಗುತ್ತೆಂದೂ ಸ್ವಾಮಿಗಳು ಅವರಿಗೆ ತಿಳಿಯ ಹೇಳಿದುದು ಅವರಿಗೆ ಸಾಕಾಗಲಿಲ್ಲ. ಆಗ ಮೈಸೂರು ಸ್ಟಾರ್ ವಿರೂಪಾಕ್ಷಯ್ಯನವರನ್ನೂ, ನಿಟ್ರ ಬಸಪ್ಪನವರನ್ನೂ, ನನ್ನನ್ನೂ ಅವರುಗಳಿಗೆ ಸಮಾಧಾನ ಹೇಳಲು ಬಿಟ್ಟು, ಸ್ವಾಮಿಗಳವರು ಸಮಾರಂಭಕ್ಕೆ ಹೊರಡಲು ಸಿದ್ಧರಾಗಲು ತೊಡಗಿದರು. ಇದರಿಂದ ಸ್ವಾಮಿಗಳ ಮೇನವು ಶೇಷಾದ್ರಿ ಹೌಸಿನಿಂದ ಹೊರಡುವುದೇ ಸ್ವಲ್ಪ ನಿಧಾನವಾಯಿತು. ಮೇಲಾಗಿ ಚಪ್ಪರಕ್ಕೆ ಹೋಗುವ ದಾರಿಯೂ ಸ್ವಲ್ಪ ತಪ್ಪಿತು. ಮೇನಾದ ಜತೆಯಲ್ಲಿಯೇ ಇದ್ದ ನಾನು ಬೋಯಿಗಳನ್ನು ಓಡಿಸಿಕೊಂಡು ನಾನೂ ಓಡಿದೆ. ಆದರೂ ಚಪ್ಪರದ ಬಳಿಗೆ ಮೇನಾ ಮುಟ್ಟುವಷ್ಟು ಹೊತ್ತಿಗೆ ಎರಡು ನಿಮಿಷ ಕಾಲ ಮೀರಿತ್ತು.

ಮುರುಘೇಶನ ಕೈವಾಡನೇ ಸರಿ !

ಇಷ್ಟರಲ್ಲಿ ಮಹಾರಾಜರು ಕಾಲಕ್ಕೆ ಸರಿಯಾಗಿ-ಅವರು ಎರಡು ನಿಮಿಷ ಮುಂದಾಗಿ ಬಂದರೆಂದು ಹಲವರ ಹೇಳಿಕೆ—ಬಂದು ಅವರ ಆಸನದಲ್ಲಿ ಮಂಡಿಸಿಬಿಟ್ಟಿದ್ದರು, ಮಾತ್ರವಲ್ಲ; ಸ್ವಾಗತ ಪದ್ಯಮಾಲಿಕೆಯ ಪಠಣವು ಮುಗಿದು, ಮಹಾರಾಜರಿಗೆ ಒಪ್ಪಿಸತಕ್ಕ ವಿಜ್ಞಾಪನಾ ಪತ್ರದ ಪಠಣ ನಡೆಯುತ್ತಿತ್ತು. ಆಗ ಜಗದ್ಗುರುಗಳು ತಮಗೆ ಗೊತ್ತಾಗಿದ್ದ ಬಾಗಿಲಿನ ಮುಖಾಂತರ ಚಪ್ಪರವನ್ನು ಪ್ರವೇಶಿಸಿದರು. ಅವರನ್ನು ಕಂಡ ಸಭಾಸದರು ಸಂತೋಷದಿಂದ ದಿಗ್ಗನೆ ನಿಂತು "ಜಯ ನಮಃ ಪಾರ್ವತೀ ಪತಯೇ" ಎಂದು ಘೋಷಣೆ ಮಾಡಿದರು.

ಜನರ ಜತೆಗೆ ಮಹಾರಾಜರೂ ಎದ್ದು ನಿಂತು ಎರಡು ಕೈಗಳನ್ನು ಜೋಡಿಸಿ ಜಗದ್ಗುರುಗಳಿಗೆ ವಂದನಾರ್ಪಣೆ ಮಾಡಿದರು. ಸಮಾರಂಭವು ಸಕ್ರಮವಾಗಿ ಮುಗಿಯಿತು.

ಶಿವರಾತ್ರಿ ಪೂಜೆ :

ಜಗದ್ಗುರುಗಳನ್ನು ಮಹಾರಾಜರು ಅರಮನೆಗೆ ಕರೆಸಿಕೊಂಡು ಪೂಜಾನಂತರ ತೀರ್ಥಪ್ರಸಾದಗಳನ್ನು ಪಡೆದುಕೊಳ್ಳುವುದು ಪದ್ಧತಿ. ಶ್ರೀ ಜಯದೇವ ಜಗದ್ಗುರುಗಳು ಅಲ್ಲಿಗೆ ದಯಮಾಡಿಸಿದ್ದಾಗ ಶಿವರಾತ್ರಿಯ ಹಬ್ಬವು ಬೇರೆ ಬಂದಿದ್ದಿತು. ಆ ಶಿವರಾತ್ರಿ ಪೂಜೆಗೆ ಅರಮನೆಯಿಂದ ಜಗದ್ಗುರುಗಳಿಗೆ ಆಹ್ವಾನವು ಬಂದಿತು. ಈ ಆಹ್ವಾನವನ್ನು ಅಂಗೀಕರಿಸತಕ್ಕದ್ದೇ ಹೇಗೆ ?–ಎಂಬ ಪ್ರಶ್ನೆಯು ಬಂದಿತು. ಕಾರಣವೇನೆಂದರೆ : ಈ ಹಿಂದೆ ಅರಮನೆಗೆ ಪೂಜೆಗಾಗಿ ದಯಮಾಡಿಸಿದ್ದ ವೀರಶೈವ ಜಗದ್ಗುರುಗಳ ಶಿವಪೂಜೆ ನಡೆದಾಗ ಮುಚ್ಚುಮರೆ ಇರಲಿಲ್ಲ. ಸ್ವಾಮಿಗಳು ಅರಮನೆಯ ಒಂದು 'ಹಾಲ್'ನಲ್ಲಿ ಕುಳಿತು ಲಿಂಗಪೂಜೆ ಮಾಡುತ್ತಿದ್ದಾಗ, ಆ 'ಹಾಲ್'ನ ಮೇಲಣ ಅಂತಸ್ತಿನ 'ಬಾಲ್ಕನಿ'ಯಲ್ಲಿ ಅರಮನೆಯ ಮಹಿಳೆಯರೂ, ಅವರ ಪರಿವಾರದ ಜನರೂ ಆ ಪೂಜಾ ವೈಭವವನ್ನು ನೋಡಲು ತುಂಬಿಕೊಂಡಿದ್ದರು ಮತ್ತು ಗೊತ್ತಾದ ಕಾಲಕ್ಕೆ ಸರಿಯಾಗಿ ಮಹಾರಾಜರೂ ಯುವರಾಜರೂ ಪೂಜಾ ಗೃಹಕ್ಕೆ ಬಂದಾಗ ಸ್ವಾಮಿಗಳು ಎದ್ದು ಅವರನ್ನು ಇದಿರ್ಗೊಂಡು ಕರೆದುತಂದು ತೀರ್ಥಪ್ರಸಾದಗಳನ್ನು ಕೊಟ್ಟರು—ಎಂದು ವರ್ತಮಾನವಿದ್ದಿತು. ಹೀಗೆ ವೀರಶೈವೇತರರ ಎದುರಿನಲ್ಲಿ ಲಿಂಗಪೂಜೆ ಮಾಡುವುದು ಇತ್ಯಾದಿ ಪ್ರಕರಣಗಳು ಉಚಿತವಲ್ಲವೆಂದು ಹಲವಾರು ಭಕ್ತಾದಿಗಳ ಅಭಿಪ್ರಾಯವಿತ್ತು. ಆ ಬಗೆಗೆ ಜಗದ್ಗುರುಗಳು ತಮ್ಮ ಆಪ್ತೇಷ್ಟರೊಡನೆ (ನಾನೂ ಸೇರಿ) ಸಮಾಲೋಚನೆಯನ್ನು ನಡೆಸಿ, ಒಂದು ನಿರ್ಧಾರಕ್ಕೆ ಬಂದರು. ಶಿವರಾತ್ರಿಯ ದಿನ ಇಡೀ ಕರ್ನಾಟಕದಿಂದ ಪೂಜೆಗೋಸ್ಕರ ಭಕ್ತಾದಿಗಳು ಬಹು ಸಂಖ್ಯೆಯಲ್ಲಿ ಬರುವುದರಿಂದ ಆ ದಿವಸ ಅರಮನೆಯಲ್ಲಿ ಪೂಜೆಯ ಏರ್ಪಾಡು ಸರಿಯಾಗುವುದಿಲ್ಲವೆಂದೂ, ಆದರೆ ಶಿವರಾತ್ರಿ ಪೂಜೆಯ ತೀರ್ಥ ಪ್ರಸಾದಗಳನ್ನು ಅರಮನೆಗೆ ಕಳಿಸಿಕೊಡಲಾಗುವುದೆಂದೂ ತಿಳಿಸಲಾಯಿತು. ಆ ಕೂಡಲೆ ಅರಮನೆಯಿಂದ ಶಿವರಾತ್ರಿ ಪಾರಣೆಗೋಸ್ಕರ ರವೆ, ಸಕ್ಕರೆ, ಬೆಲ್ಲ, ದ್ರಾಕ್ಷಿ, ಬಾದಾಮಿ, ತುಪ್ಪ ಮೊದಲಾಗಿ ಎಲ್ಲಾ ಸಾಮಾನುಗಳೂ ಮಹಾಸ್ವಾಮಿಯವರ ಬಿಡಾರಕ್ಕೆ ಯಥೇಚ್ಛವಾಗಿ ಬಂದು ಮುಟ್ಟಿದವು.

ಶಿವರಾತ್ರಿ ಪೂಜೆಯ ಬೆಳಕುಹರಿಯುವವರೆಗೂ, ಬಂದಿದ್ದ ಭಕ್ತಸಮೂಹ ಸಹಿತ ವೈಭವಯುಕ್ತವಾಗಿ ನಡೆದು, ಪಾರಣೆಯು ಪುಷ್ಕಳವಾಗಿ ಆಚರಿಸಲ್ಪಟ್ಟಿತು. ಅಲ್ಲದೆ ಅರಮನೆಗೆ ತೀರ್ಥಪ್ರಸಾದಗಳನ್ನು ಪಡೆದುಕೊಂಡು, ಆಗ ಬೆಂಗಳೂರು ಶ್ರೀ ಸರ್ಪಭೂಷಣ ಮಠದ ಅಧ್ಯಕ್ಷರಾಗಿದ್ದ ಶ್ರೀಮನ್ನಿರಂಜನ ಪ್ರ॥ ಮಹಾದೇವ ಸ್ವಾಮಿಗಳವರೊಡನೆ ನನ್ನನ್ನು ಜತೆಮಾಡಿ ಕಳಿಸಿಕೊಡಲಾಯಿತು.

ಅರಮನೆಗೆ ಜಗದ್ಗುರುಗಳ ಸವಾರಿ :

ಆ ಮುಂದೆ ಕೆಲವು ದಿನಗಳ ಮಹಾರಾಜಾ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್‌ರವರು ಜಗದ್ಗುರುಗಳನ್ನು ಅರಮನೆಗೆ ಬಿಜಯಂಗಯ್ಸಿಕೊಂಡಿದ್ದರು. ಸ್ವಾಮಿಗಳು ರಾಜೋಚಿತವಾದ ಖಿಲ್ಲತ್ತುಗಳನ್ನೂ ಭಸ್ಮ ರುದ್ರಾಕ್ಷಾದಿಗಳನ್ನೂ ತೆಗೆಯಿಸಿಕೊಂಡು ಮೇಲೆ ಕಂಡ ಪ್ರ॥ ಮಹಾದೇವಸ್ವಾಮಿಗಳ ಸಹಿತವಾಗಿ ದಯಮಾಡಿಸಿದರು. ಅರಮನೆಯ ಬಳಿ ರಾಜೋಚಿತವಾದ ಸ್ವಾಗತವೂ, ಒಳಗಡೆ ಯಥೋಚಿತವಾದ ಗೌರವವೂ ದೊರೆತವು. ಮಹಾಸ್ವಾಮಿಗಳೂ ಮಹಾರಾಜರೂ ಸ್ವಲ್ಪ ಕಾಲ ಸಂಭಾಷಣೆಯನ್ನು ನಡೆಸಿದಮೇಲೆ, ಪರಸ್ಪರ ಖಿಲ್ಲತ್ತುಗಳ ಸಮರ್ಪಣೆಯು ನಡೆಯಿತು. ಅನಂತರ ಮಹಾರಾಜರು ಜಗದ್ಗುರುಗಳನ್ನು ತುಂಬಾ ಭಕ್ತಿ ವಿಶ್ವಾಸಗಳಿಂದ ಬೀಳ್ಕೊಟ್ಟರು.

ಇಷ್ಟು ಹೊತ್ತಿಗೆ ಜಗದ್ಗುರು ಸವಾರಿಯು ಮೈಸೂರಿಗೆ ಬಂದು ಒಂದು-ಒಂದೂವರೆ ತಿಂಗಳಾಗಿತ್ತು. ಆದರೂ ಭಕ್ತಾದಿಗಳ ಬಿನ್ನಹಗಳು ಒಂದರಮೇಲೊಂದು ಬರುತ್ತಿದ್ದವು. ಅಲ್ಲದೆ ಆ ಸುತ್ತುಮುತ್ತಣ ಗ್ರಾಮಗಳ ಮತ್ತು ತಾಲ್ಲೂಕು ಸ್ಥಳಗಳ ಭಕ್ತಾದಿಗಳಿಂದ ತಮ್ಮ ಊರುಗಳಿಗೆ ಉತ್ಸವಕ್ಕಾಗಿ ದಯಮಾಡಿಸಬೇಕೆಂದು ಬಿನ್ನಹಗಳು ಅನೇಕವಾಗಿ ಬರುತ್ತಿದ್ದವು. ಆದರೆ ಮಹಾಸ್ವಾಮಿಗಳವರಿಗೆ ಬೃಹನ್ಮಠದಲ್ಲಿ ಅವಶ್ಯಕವಾದ ಕಾರ್ಯಭಾರವಿದ್ದುದರಿಂದ, ಆ ಪ್ರವಾಸವನ್ನು ಮುಗಿಸಿ ಹಿಂದಿರುಗಿದರು. ಅವರೆಗೂ ಸ್ವಾಮಿಯ ಜತೆಯಲ್ಲಿಯೇ ಇದ್ದ ನಾನು ಬೆಂಗಳೂರಿಗೆ (ಮನೆಗೆ) ಹಿಂದಿರುಗಿದೆನು.

ಕುಂಭಕೋಣದ ಪ್ರವಾಸ :

ಜಯದೇವ ಜಗದ್ಗುರುಗಳವರು ಬಿರುದುಬಾವಲಿಗಳೊಡನೆ ಕೈಗೊಂಡ ಅನೇಕಾನೇಕ ಪ್ರವಾಸಗಳಲ್ಲಿ ಕುಂಭಕೋಣದ ಪ್ರವಾಸವೇ ಕಟ್ಟಕಡೆಯದೆಂದು ನನ್ನ ಭಾವನೆ. ಈ ಪ್ರವಾಸದಲ್ಲಿ ನಡೆದ ಮಹಿಮಾಯುತವಾದ ವಿಶೇಷವನ್ನು ತಿಳಿಸದಿರಲು ಸಾಧ್ಯವಿಲ್ಲ.

ಕುಂಭಕೋಣದಲ್ಲಿ ಕನ್ನಡಿಗರು ಅತಿ ವಿರಳ; ಆದರೆ ವೀರಶೈವರಿದ್ದಾರೆ.ಅವರೆಲ್ಲರೂ ಆಚಾರಸ್ಥರು.ಅವರು ತಮ್ಮನ್ನು'ಅಯ್ಯರ್' ಗಳೆಂದು ಕರೆದುಕೊಳ್ಳುತ್ತಾರೆ. ಸಾಮಾನ್ಯವಾಗಿ ಅವರದು ಉಪಾಧ್ಯಾಯ ವೃತ್ತಿ. ಕುಂಭಕೋಣದಲ್ಲಿ ಅವರದೊಂದು ಮಠವಿದೆ. ಬಹಳ ದೊಡ್ಡ ಮಠ. ಅದರ ಹೆಸರೇ 'ಪೆರಿಯ ಮಠ'. ಆ ಮಠದ ಆವರಣ ಬಹಳ ದೊಡ್ಡದು ಮತ್ತು ತುಂಬಾ ಬೆಲೆಬಾಳತಕ್ಕದ್ದು;ಇದಲ್ಲದೆ ಆ ಮಠಕ್ಕೆ ನೂರಾರು ಎಕರೆ ತುಂಬಾ ಫಲವತ್ತಾದ ತರೀ ಜಮೀನು ಇದೆ. ಆ ಮಠವು ಘನತೆಯಲ್ಲಿ ಬಹಳ ದೊಡ್ಡದು-ಜಗದ್ಗುರು ಮಠ.

ಈಗ 35–40 ವರ್ಷಗಳ ಹಿಂದೆ ಆ ಮಠಕ್ಕೆ ಬಹುಕಾಲದಿಂದ ಅಧಿಕಾರಿಯೇ ಇಲ್ಲದೆ, ಮಠದ ಸ್ವತ್ತೆಲ್ಲವೂ ಅನ್ಯಕ್ರಾಂತವಾಗಿದ್ದಿತು. ಈ ಮಠಕ್ಕೆ ಒಬ್ಬ ಸ್ವಾಮಿಯನ್ನು ನೇಮಿಸಿ ಅದರ ಸ್ವತ್ತೆಲ್ಲವೂ ಅದಕ್ಕೆ ಸೇರುವಂತೆ ಮಾಡಿ, ಅದನ್ನು ಅಭಿವೃದ್ಧಿಗೆ ತರಬೇಕೆಂಬ ಅಭಿಲಾಷೆಯಿಂದ ಆ ಪ್ರಾಂತದ ಕುಮಾರ ವೀರ ಅಯ್ಯರ್ ಎಂಬ ವೀರಶೈವ ದೊಡ್ಡ ಮನುಷ್ಯ ಬೆಂಗಳೂರಿಗೆ ಬಂದು ಕೈ॥ ಅಡ್ವೊಕೇಟ್ ಜಿ. ಸಿ. ವೀರಪ್ಪನವರೇ ಮೊದಲಾದವರನ್ನು ಆಶ್ರಯಿಸಿದರು. ಇಲ್ಲಿನ ದೊಡ್ಡ ಮನುಷ್ಯರಲ್ಲಿ ಸಮಾಲೋಚನೆಗಳು ನಡೆದು, ಕಡೆಗೆ ಆ ವಿಷಯವು ಜಯದೇವ ಜಗದ್ಗುರುಗಳ

ಸನ್ನಿಧಾನವನ್ನು ಮುಟ್ಟಿತು. ಜಗದ್ಗುರುಗಳವರು ಆ ಕುಂಭಕೋಣದ ಮಠಕ್ಕೆ ಕೊಡಗಿನ ಸೋಮವಾರ ಪೇಟೆಯ ಮಠದಲ್ಲಿ ಮೂರ್ತಿಗಳಾಗಿದ್ದ ಶ್ರೀ॥ ಪ್ರ॥ ಶಾಂತದೇವರನ್ನು ಗುರುಗಳನ್ನಾಗಿ ನಿಯಮಿಸಿ ಕಳಿಸಿಕೊಟ್ಟರು. ಈ ಗುರುಗಳು ಆ ಮಠದ ಉದ್ಧಾರಕ್ಕಾಗಿ ಕಷ್ಟಪಟ್ಟು ಕೆಲಸ ಮಾಡುತ್ತಿದ್ದರು.

ಪೆರಿಯ ಮಠದ ಘನತೆ ಗೌರವಗಳನ್ನು ಹೆಚ್ಚಿಸುವುದಕ್ಕಾಗಿಯೂ, ಪ್ರ॥ ಶಾಂತವೀರಸ್ವಾಮಿಗಳ ಮತ್ತು ತಮ್ಮ ಕೈಬಲಪಡಿಸಿಕೊಳ್ಳುವುದಕ್ಕಾಗಿಯೂ ಕುಮಾರ ವೀರಯ್ಯರು ಚಿತ್ರದುರ್ಗದ ಜಗದ್ಗುರುಗಳನ್ನು ಕುಂಭಕೋಣಕ್ಕೆ ಬರಮಾಡಿಕೊಂಡು ಅವರ ಉತ್ಸವವನ್ನು ವೈಭವದಿಂದ ಮಾಡಿಸಬೇಕೆಂದು ಆಲೋಚಿಸಿ, ಜಗದ್ಗುರುಗಳಲ್ಲಿಗೆ ಹೋಗಿ ಬಿನ್ನೈಸಿಕೊಂಡರು. ಚಿತ್ರದುರ್ಗದಿಂದ ಕುಂಭಕೋಣವು ಬಹಳ ದೂರವಾಪುದರಿಂದ ಆನೆ ಕುದುರೆಗಳನ್ನೂ, ಮೇನಾ-ಪಲ್ಲಕ್ಕಿ ಮೊದಲಾದಗಳನ್ನೂ ಅಲ್ಲಿಗೆ ಸಾಗಿಸುವುದು ಸಾಧ್ಯವಾಗುವುದಿಲ್ಲವೆಂಬ ಕಾರಣದ ಮೇಲೆ ಜಗದ್ಗುರುಗಳವರು ಅದು ಆಗದ ಕೆಲಸವೆಂದು ಕುಮಾರ ವೀರಯ್ಯರಿಗೆ ತಿಳಿಸಿಬಿಟ್ಟರು. ಆ ಮೇಲೆ ಕುಮಾರ ವೀರಯ್ಯರು ಬೆಂಗಳೂರಿಗೆ ಬಂದು ಆ ಸಂಬಂಧವಾಗಿ ಜಸ್ಟಿಸ್ ಪರಮಶಿವಯ್ಯನವರೇ ಮೊದಲಾದವರೊಡನೆ ಆಲೋಚಿಸಿದರು. ಅವರು ಟಿ. ಎಸ್. ಚನ್ನಪ್ಪನವರನ್ನು ಕರೆದುಕೊಂಡು ಹೋದಲ್ಲಿ, ಅವರು ಸ್ವಾಮಿಗಳನ್ನು ಒಪ್ಪಿಸಲು ಸಾಧ್ಯ ಎಂದು ಹೇಳಿದ್ದರ ಮೇಲೆ ಅವರು ನನ್ನನ್ನು ಕಪಿಮುಷ್ಟಿಯಿಂದ ಹಿಡಿದರು. ಈ ಕಾರಣದಿಂದ ನಾನು ಬೃಹನ್ಮಠಕ್ಕೆ ಹೋಗಲೇ ಬೇಕಾಯಿತು; ಹೋಗಿ ಅಲ್ಲಿ 2–3 ದಿವಸ ಇದ್ದದ್ದೂ ಆಯಿತು. ಕುಂಭಕೋಣದ ಪ್ರವಾಸಕ್ಕೆ ಸ್ವಾಮಿಗಳನ್ನು ಒಪ್ಪಿಸುವ ಸಂದರ್ಭದಲ್ಲಿ, ಅವರು "ನಾವು ಮಠವನ್ನು ಬಿಟ್ಟಂದಿನಿಂದ ಪುನಃ ಮಠವನ್ನು ಸೇರುವವರೆಗೂ ನೀವು ನಮ್ಮ ಜತೆಯಲ್ಲಿಯೇ ಇರುವುದಾಗಿ ನಮಸ್ಕಾರ ಮಾಡುವುದಾದರೆ, ಈ ಪ್ರವಾಸಕ್ಕೆ ಒಪ್ಪಿಕೊಳ್ಳುತ್ತೇವೆ" ಎಂದು ಅಪ್ಪಣೆ ಮಾಡಿದರು. ಆಗಬಹುದೆಂದು ನಾನು ದೀರ್ಘದಂಡ ಹಾಕಿದೆ. ಕುಂಭಕೋಣದ ಕಾರ್ಯಕ್ರಮ ನಿಗದಿಯಾಯಿತು; ಅಲ್ಲದೆ ಉತ್ಸವದ ಮಾರನೆಯ ದಿವಸದಿಂದ ವೀರಶೈವ ಮಹಾಸಭೆಯು ನಡೆಯತಕ್ಕುದೆಂದೂ ನಿರ್ಣಯವಾಯಿತು.

ಬೃಹನ್ಮಠದಿಂದ ಬಿರುದು ಬಾವಲಿಗಳೆಲ್ಲವೂ ಸಕಾಲದಲ್ಲಿ ಕುಂಭಕೋಣಕ್ಕೆ ಬಂದು ಮುಟ್ಟಿದುವು. ಮಹಾಸ್ವಾಮಿಗಳೂ ದಯಮಾಡಿಸಿ, ಕುಂಭಕೋಣಕ್ಕೆ 15-20 ಮೈಲಿ ದೂರದಲ್ಲಿರುವ ತಂಜಾವೂರಿನಲ್ಲಿ ಮಿತ ಪರಿವಾರದೊಡನೆ ದಿವಾನ್ ಶೇಷಾದ್ರೈಯರ್‌ರವರ ಮನೆಯ ಕಟ್ಟಡದಲ್ಲಿ ಆ ಹಿಂದಿನ ರಾತ್ರಿ ಬಿಡಾರ ಮಾಡಿದರು. ಬೆಂಗಳೂರಿನಿಂದ ನಾನೂ ಮತ್ತು ಇಲ್ಲಿನ ಹಲವು ಮಂದಿ ಪ್ರಮುಖರೂ ಮುಂದಾಗಿ ಹೋಗಿ ಕುಂಭಕೋಣದಲ್ಲಿ ಇದ್ದೆವು. ಮಹಾಸ್ವಾಮಿಗಳ ಜತೆಯಲ್ಲಿ ಬಂದಿದ್ದ ವಟುಗಳೂ, ಮೂರ್ತಿಗಳೂ ಕುಂಭಕೋಣಕ್ಕೆ ಬಂದು ಮಠದ ಸ್ವಾಮಿ ಪ್ರ॥ ಶಾಂತವೀರಸ್ವಾಮಿಗಳೊಡನೆ ಸಂತೋಷವಾಗಿ ಮಾತನಾಡುತ್ತಿದ್ದರು. ಆ ಸಂದರ್ಭದಲ್ಲಿ ಬೆಂಗಳೂರಿನ ಒಬ್ಬ ವಟುವು ಪೆರಿಯ ಮಠದ ಶಾಂತವೀರಸ್ವಾಮಿಗಳನ್ನು ಹೆಸರು ಹಿಡಿದು ಕೂಗಿ ಹಾಸ್ಯವಾಗಿ ಮಾತನಾಡುತ್ತಿದ್ದುದನ್ನು ಕೇಳಿದ ಕುಮಾರ ವೀರ ಅಯ್ಯರು, "ಇವರೂ ಸಹ ಜಗದ್ಗುರುಗಳು, ಅವರೊಡನೆ ಹೀಗೆಲ್ಲಾ ಮಾತನಾಡಕೂಡದು, ಹಾಗೆ ಮಾಡಿದರೆ ಪರಿಣಾಮ ನೆಟ್ಟಗಾಗುವುದಿಲ್ಲ" ಎಂದು ಮುಂತಾಗಿ ಹೇಳುತ್ತಾ ತುಂಬಾ ಕೋಪಗೊಂಡರಂತೆ. ಅವರುಗಳು ಹೇಳಿದ ಶಾಂತಿ ಸಮಾಧಾನಗಳಿಂದ ಯಾವ ಪ್ರಯೋಜನವೂ ಆಗಲಿಲ್ಲ.

ನನ್ನ ಶ್ರಮ ಸಾರ್ಥಕವಾಗಲಿಲ್ಲ :

ಇದಾದ ಸ್ವಲ್ಪ ಹೊತ್ತಿನಮೇಲೆ ಒಂದು ಗಾಳಿ ವರ್ತಮಾನವು ಹುಟ್ಟಿತು. ಮರುದಿವಸ ಜಗದ್ಗುರುಗಳು ಉತ್ಸವಾನಂತರ ಸಭೆಗೆ ದಯಮಾಡಿಸಿದಾಗ ಪ್ರ॥ ಶಾಂತವೀರಸ್ವಾಮಿಗಳಾಗಲೀ, ಅಗ ಅಲ್ಲಿಗೆ ದಯಮಾಡಿಸಿದ್ದ ಮೂಲಂ ಎಂಬ ಸ್ಥಳದ ಮಠದ ಸ್ವಾಮಿಗಳಾಗಲೀ ಅವರಿಗೆ ಜನಗಳ ಎದುರಿನಲ್ಲಿ ದೀರ್ಘದಂಡ ನಮಸ್ಕಾರ ಮಾಡುವುದಿಲ್ಲ–ಎಂಬುದೇ ಆ ಗಾಳಿ ಸಮಾಚಾರ. ಇದು ನನ್ನ ಕಿವಿಗೆ ಬಿದ್ದ ಕೂಡಲೆ ಕುಮಾರ ವೀರಯ್ಯರನ್ನು ಕಂಡು ಬೇಕಾದಷ್ಟು ಮಾತನಾಡಿದೆ. ಒಟ್ಟಿನಲ್ಲಿ ಅವರ ವಾದವಿಷ್ಟೇ:- "ನಮ್ಮದೂ ಜಗದ್ಗುರು ಮಠ. ಈ ಮಠದ ಜಗದ್ಗುರುಗಳು ಇನ್ನೊಬ್ಬರಿಗೆ ಬಹಿರಂಗದಲ್ಲಿ ನಮಸ್ಕಾರ ಮಾಡಿದರೆ ಈ ಮಠದ ಘನತೆಗೆ ಕುಂದುಂಟಾಗುತ್ತದೆ." ಅದಕ್ಕೆ ನಾನು ಹೇಳಿದೆ: "ನಿಮ್ಮ ಸ್ವಾಮಿಗಳು ನಮ್ಮ ಜಗದ್ಗುರುಗಳವರಿಂದ ನಿಯಮಿಸಲ್ಪಟ್ಟವರು ಮತ್ತು ಅವರ ಶಿಷ್ಯವರ್ಗಕ್ಕೆ ಸೇರಿದವರು." ಇದಕ್ಕೆ ಕುಮಾರ ವೀರಯ್ಯರು ಹೇಳಿದರು: "ಗುರು-ಶಿಷ್ಯ ಸಂಬಂಧದ ವಿಚಾರ ಅಂತರಂಗಕ್ಕೆ ಸೇರಿದ್ದು. ಅವರು-ಇವರು ಅಂತರಂಗದಲ್ಲಿ ಸೇರಿದಾಗ ಏನು ಬೇಕಾದರೂ ಮಾಡಿಕೊಳ್ಳಲಿ: ಬಹಿರಂಗದಲ್ಲಿ ನಮಸ್ಕಾರ ಹಾಕಲು ನಾನು ಅವಕಾಶ ಕೊಡುವುದಿಲ್ಲ". ಒಟ್ಟಿನಲ್ಲಿ ನನ್ನ ಶ್ರಮ ಸಾರ್ಥಕವಾಗಲಿಲ್ಲ.

ಕೂಡಲೇ ಈ ವರ್ತಮಾನವನ್ನು ಜಗದ್ಗುರುಗಳಿಗೆ ಮುಟ್ಟಿಸುವುದು ನನ್ನ ಕರ್ತವ್ಯವೆಂದು ರಾತ್ರಿ 10-11 ಗಂಟೆಯ ಸಮಯದಲ್ಲಿ ತಂಜಾವೂರಿಗೆ ಓಡಿದೆ. ಸ್ವಾಮಿಗಳಲ್ಲಿ ಅರಿಕೆ ಮಾಡಿಕೊಂಡೆ. ಅವರೂ ಅಪ್ರತಿಭರಾದರು; ಕೆಲವು ಸಲಹೆಗಳನ್ನು ಕೊಟ್ಟರು. ಅಲ್ಲಿಂದ ಕೂಡಲೆ ಕುಂಭಕೋಣಕ್ಕೆ ಹಿಂದಿರುಗಿ ನನ್ನ ವಿಶ್ವಾಸಿಗಳಾದ ಬೆಂಗಳೂರಿನ ಯಂ. ನಾಗಪ್ಪ, ಅಕ್ಕಿಪೇಟೆ ಬಸಟಪ್ಪ, ಗೊಲ್ಲಹಳ್ಳಿ ರುದ್ರಪ್ಪ, ಬಾಣಾವಾರದ ಹುಚ್ಚಪ್ಪ ಮೊದಲಾದವರನ್ನು ಕೂಡಿಕೊಂಡು ಕುಮಾರ ವೀರಯ್ಯರನ್ನು ಮಠದ ಮುಂದಿನ ಕುಂಭಕೋಣದ ಕೋಳದ ಬಳಿಗೆ ಕರೆದುತಂದು ಕುಳ್ಳಿರಿಸಿಕೊಂಡು ಎಲ್ಲರೂ ವಿಧವಿಧವಾಗಿ ನಯ-ವಿನಯ, ಭಯ-ಭಕ್ತಿ, ಶಾಪ-ತಾಪ, ನ್ಯಾಯ-ನಿಗದಿ ಎಲ್ಲವನ್ನೂ ಉಪಯೋಗಿಸಿ ಮಾತನಾಡಿದೆವು. ಅಯ್ಯರು ಜಗ್ಗಲಿಲ್ಲ.

ಪುನಃ ತಂಜಾವೂರಿಗೆ ಓಡಿದೆ. ಮಹಾಸ್ವಾಮಿಗಳಲ್ಲಿ ಇದ್ದ ವಿಷಯವನ್ನು ಅರಿಕೆ ಮಾಡಿಕೊಂಡು, ಕುಂಭಕೋಣಕ್ಕೆ ದಯಮಾಡಿಸುವುದನ್ನೇ ನಿಲ್ಲಿಸುವುದು ಒಳ್ಳೆಯದಲ್ಲವೇ?-ಎಂಬ ಪ್ರಶ್ನೆಯನ್ನು ಅವರ ಮುಂದಿಟ್ಟೆ. ದೀರ್ಘಾಲೋಚನೆಯಲ್ಲಿ ಮಗ್ನರಾಗಿದ್ದ ಸ್ವಾಮಿಗಳು ತಲೆಯನ್ನು ಅಲ್ಲಾಡಿಸಿದರು. ನಾನು ಹೇಳಿದೆ: " ಈ ಪ್ರವಾಸಕ್ಕೆ

ಪಾಪಿಯಾದ ನಾನು ಕಾರಣನಾಗಿದ್ದೇನೆ. ಮುಂದೆ ಏನು ತೊಂದರೆ ಯಾಗುತ್ತದೋ, ಏನೋ ? ನನ್ನ ಬಗೆಗೆ ಸ್ವಾಮಿ ನೊಂದು ಕೊಂಡರೆ ಸಂಸಾರಿಯಾದ ನಾನು ಸುಟ್ಟುಹೋಗುತ್ತೇನೆ". ಸ್ವಾಮಿ ಗಳವರು ಆ ರಾತ್ರಿ ಒಂದು ನಿಮಿಷವೂ ನಿದ್ದೆಯಿಲ್ಲದೆ ತುಂಬಾ ಆಲೋಚನಾಪರರಾಗಿ ಆ ಬಿಡಾರದ 'ಹಾಲ್'ನಲ್ಲಿ ಶತಪಥ ತಿರುಗು ತ್ತಿದ್ದರಾದರೂ, "ನೀವು ಹೋಗಿ, ಇನ್ನೂ ಪ್ರಯತ್ನ ಮಾಡಿ, ಮುರುಘೇಶನಿದ್ದಾನೆ" ಎಂದು ನನಗೆ ಧೈರ್ಯ ಹೇಳಿ ಕಳಿಸಿಕೊಟ್ಟರು.

ಕುಂಭಕೋಣಕ್ಕೆ ಕಾರ್‌ನಲ್ಲಿ ಹಿಂದಿರುಗುತ್ತಾ ದಾರಿಯಲ್ಲಿ ಏನೋ ಒಂದು ಆಲೋಚನೆ ಹೊಳೆಯಿತು. ಬಂದವನೇ ಕುಂಭ ಕೋಣದಲ್ಲಿ ಮಲಗಿದ್ದ ತಿಪಟೂರು ವಿರೂಪಾಕ್ಷಶಾಸ್ತ್ರಿಗಳನ್ನು ಎಬ್ಬಿಸಿ, ಅವರೊಡನೆ ಆಲೋಚಿಸಿದೆ. ಒಂದು ಕಾರ್ಯಕ್ರಮವನ್ನು ನಿರ್ಧರಿಸಿಕೊಂಡೆವು. ಆ ಕಾರ್ಯಕ್ರಮವನ್ನು ಸನ್ನಿಧಿಯಲ್ಲಿ ಅರಿಕೆ ಮಾಡಿಕೊಳ್ಳಲಿಕ್ಕಾಗಿ ರಾತ್ರಿ 4 ಘಂಟೆಯ ಸಮಯದಲ್ಲಿ ಪುನಃ ತಂಜಾವೂರಿಗೆ ಹೋಗಿ, ಆ ಯೋಜನೆಯನ್ನು ತಿಳಿಸಿ, ಪ್ರಾತಃಕಾಲ 7-30 ಘಂಟೆಯ ಸಮಯಕ್ಕೆ ಸರಿಯಾಗಿ ತಂಜಾವೂರು–ಕುಂಭ ಕೋಣದ ಗಡಿಯಲ್ಲಿ ಹಲವಾರು ಪ್ರಮುಖರೊಡನೆ ನಾನು ಕಾದಿರು ವುದಾಗಿಯೂ, ಸ್ವಾಮಿ ಅಷ್ಟುಹೊತ್ತಿಗೆ ಅಲ್ಲಿಗೆ ದಯಮಾಡಿಸಿದರೆ ನಾವು ಸ್ವಾಗತವನ್ನು ನೀಡಿ, ಪುರಪ್ರವೇಶ ಮಾಡಿಸುವುದಾಗಿಯೂ ಅರಿಕೆ ಮಾಡಿಕೊಂಡು ಬೇಗನೆ ಕುಂಭಕೋಣಕ್ಕೆ ಹಿಂದಿರುಗಿದೆ.

ಜಗದ್ಗುರುಗಳ ಪುರ ಪ್ರವೇಶ :

ಕುಂಭಕೋಣದಲ್ಲಿ, ಪ್ರಾತಃಕಾಲವಾದ ಮೇಲೆ ಜಗದ್ಗುರು ಗಳನ್ನು ಇದಿರ್ಗೊಳ್ಳಲು ಹೆಚ್ಚು ಜನರನ್ನು ಕೂಡಿಹಾಕಲು ಸಾಧ್ಯ ವಾಗಲಿಲ್ಲ. ಬೆಂಗಳೂರಿನವರು ಮಾತ್ರ ಅವಸರಪಟ್ಟುಕೊಂಡು ಹೋದೆವು. ಅಷ್ಟರಲ್ಲಿ ನಾನು ಗುರುತು ಹೇಳಿದ್ದ ಸ್ಥಳದಲ್ಲಿ ಸ್ವಾಮಿ ಅದೇಕೋ ನಿಲ್ಲದೆ ಮುಂದಕ್ಕೆ ಬಂದುಬಿಟ್ಟಿದ್ದರು; ಪುರಪ್ರವೇಶವಾಗಿ ಹೋಗಿತ್ತು; ಆದರೂ ಉತ್ಸವ ಹೊರಡುವ ಸ್ಥಳ ಇನ್ನೂ ದೂರವೇ ಇತ್ತು. ನಾವುಗಳು ಹೋಗುತ್ತಾ ಎದುರಿಗೆ ಸ್ವಾಮಿಯ ವಾಹನವು ಬರುತ್ತಿರುವುದನ್ನು ನೋಡಿ ಗಾಬರಿಗೊಂಡು ನಿಂತು ಕಾರನ್ನು ನಿಲ್ಲಿಸ ಬೇಕೆಂದು ಸನ್ನೆಮಾಡಿದೆವು. ಕಾರು ನಿಂತಿತು. ಆಗ ನಡೆದ ಒಂದು ಮಹಿಮಾತಿಶಯವು ನನ್ನನ್ನು ಇಂದೂ ಮುಗ್ಧಗೊಳಿಸುತ್ತಿದೆ.

ಕಾರು ನಿಂತಕೂಡಲೆ ನಾವಿದ್ದಷ್ಟೇ ಜನ ಜಯಘೋಷವನ್ನು ಮಾಡಿದೆವು. ನಮ್ಮಲ್ಲಿ ಹಿರಿಯರಾದ ಯಂ. ನಾಗಪ್ಪನವರು ಕಾರಿ ನಲ್ಲಿ ಮಂಡಿಸಿದ್ದ ಮಹಾಸ್ವಾಮಿಗಳಿಗೆ ಹಾರ-ತುರಾಯಿಗಳನ್ನು ಅರ್ಪಿ ಸಿದರು. ಅಷ್ಟರಲ್ಲಿ [illegible] ಒಬ್ಬ ಮುತ್ತೈದೆಯು ಮಡಿಯುಟ್ಟು ಹಣೆಗೆ ವಿಭೂತಿಯನ್ನೂ, ಮೇಲೆ ಕುಂಕುಮವನ್ನೂ ಧರಿಸಿ, ಮಂಗಳದ್ರವ್ಯಗಳನ್ನೂ ಹಣ್ಣು-ಕಾಯಿ-ಹೂಗಳನ್ನೂ ಇಟ್ಟಿದ್ದ ಬೆಳ್ಳಿಯ ತಟ್ಟೆಯನ್ನು ಕೈಲಿ ಹಿಡಿದುಕೊಂಡು ಬಂದವಳೇ ಸ್ವಾಮಿ ಗಳವರನ್ನು ನೋಡುತ್ತಾ ನಿಂತುಕೊಂಡಳು. ಕಾರಿನ ಪಕ್ಕದಲ್ಲಿ ನಿಂತಿದ್ದ ನಾನು ತಟ್ಟೆಯ ಕಡೆಗೆ ಕೈಚಾಚಿದೆ, ಸ್ವಾಮಿಗಳಿಂದ ಆಶೀ ರ್ವಾದ ಮಾಡಿಸಿಕೊಳ್ಳುವದಕ್ಕಾಗಿ ತಂದಿರಬೇಕೆಂಬ ಭಾವನೆಯಿಂದ.

ಆಕೆಯಾದರೂ ಮುಗ್ಧಳಾಗಿ ಆ ತಟ್ಟೆಯನ್ನು ನನ್ನ ಕೈಗೆ ಕೊಟ್ಟಳು. ನಾನು ಆ ತಟ್ಟೆಯನ್ನು ಸ್ವಾಮಿಗಳ ಎದುರಿಗೆ ಹಿಡಿದೆ. ಸ್ವಾಮಿಗಳು ಅದನ್ನು ತಮ್ಮ ಬಲ ಹಸ್ತದಿಂದ ಮುಟ್ಟಿ ಆಶೀರ್ವದಿಸಿದರು. ಆ ತಟ್ಟೆಯನ್ನು ನಾನು ಆ ಮುತ್ತೈದೆಯ ಕೈಗೆ ಕೊಟ್ಟೆ. ಇದಾಗು ವಷ್ಟರಲ್ಲಿ ಇನ್ನೊಬ್ಬ ಮುತ್ತೈದೆ ಫಲ-ಪುಷ್ಪಗಳ ತಟ್ಟೆಯನ್ನು ತಾನಾಗಿ ನನ್ನ ಕೈಗೆ ಕೊಟ್ಟಳು. ಆಮೇಲೆ ಮತ್ತೊಬ್ಬಳು, ಇನ್ನೊ ಬ್ಬಳು, ಹೀಗೆ ನೂರಾರು ತಟ್ಟೆಗಳು ಒಂದಾದ ಮೇಲೆ ಒಂದರಂತೆ ನನ್ನ ಕೈಗೆ ಬಂದು, ಸ್ವಾಮಿಗಳ ಆಶೀರ್ವಾದವನ್ನು ಪಡೆದು ಹಿಂದಿರು ಗಿಸಲ್ಪಟ್ಟವು. ಇದಕ್ಕೆ ಹಿಡಿದ ಕಾಲವು ಸ್ವಲ್ಪವೇನಲ್ಲ, ಸುಮಾರು ಒಂದು ಘಂಟೆಯಾದರೂ ಹಿಡಿದಿರಬಹುದು. ಇಷ್ಟಾಗುವ ಹೊತ್ತಿಗೆ ಮಠದಿಂದ ಭಕ್ತಾದಿಗಳು ನೂರಾರು ಮಂದಿ ಅಲ್ಲಿಗೆ ಬಂದು ಕೂಡಿ ಕೊಂಡರಲ್ಲದೆ, ಊರಿನ ಆ ಭಾಗದ ಹೆಣ್ಣು ಗಂಡುಗಳನೇಕರು ಬಂದು ನೆರೆದಿದ್ದರು. ಜಗದ್ಗುರುಗಳಿಗೆ ಸಾವಿರಾರು ಮಂದಿಯಿಂದ ಸ್ವಾಗತವು ದೊರೆಯುವಂತಾಗಿ ಕಾರು ನಿಧಾನವಾಗಿ ಮುಂದೆ ಸಾಗಿ, ಸ್ವಾಮಿ ಪಲ್ಲಕ್ಕಿಯನ್ನು ಏರಬೇಕಾಗಿದ್ದ ಸ್ಥಳಕ್ಕೆ ಮುಟ್ಟಿತು.

ಶ್ರೀ ಮುರುಘೇಶನ ಮಹಿಮೆ :

ಸ್ವಾಮಿಯನ್ನು ಇದಿರ್ಗೊಳ್ಳಲು ನಾವುಗಳು ನಿಂತಿದ್ದ ಸ್ಥಳ ವನ್ನು ನಮಗೆ ಆರಿಸಿಕೊಟ್ಟದ್ದು ಶ್ರೀ ಮುರುಘೇಶನ ಮಹಿಮೆ ಯೆಂದೇ ನನ್ನ ಭಾವನೆ. ಏಕೆಂದರೆ ನಾವುಗಳು ಅಕಸ್ಮಾತ್ತಾಗಿ ನಿಂತ ಆ ಸ್ಥಳವು ಒಂದು ವಿಘ್ನೇಶ್ವರನ ಗುಡಿಯ ಎದುರು ಭಾಗ. ಆ ಗುಡಿಯ ಮುಂದೆ ರಸ್ತೆಯ ಅಗಲಕ್ಕೆ ಪೂರ್ತಿಯಾಗಿ, ಸುಮಾರು 500-600 ಅಡಿಗಳ ಉದ್ದ ಸೊಗಸಾದ ಚಪ್ಪರವನ್ನು ಹಾಕಿದ್ದಿತು. ಏಕೆ ? ನಾನು ಅನಂತರ ವಿಚಾರ ಮಾಡಿದ್ದರಲ್ಲಿ ತಿಳಿದದ್ದೇನಂದರೆ: ಆ ಚಪ್ಪರದ ಕೆಳಗಡೆ ಅಗ್ಗೆ ಒಂದು ತಿಂಗಳಿನಿಂದ ಆ ಪ್ರಾಂತದ ಒಬ್ಬ ಘನ ವಿದ್ವಾಂಸನಿಂದ ಕಥಾಕಾಲಕ್ಷೇಪವು ನಡೆಯುತ್ತಿತ್ತು. ಕಟ್ಟ ಕಡೆಯ ದಿನವಾದ ಆ ದಿವಸ ಶ್ರೋತೃಗಳು ವಿಘ್ನೇಶ್ವರನ ಪೂಜೆ ಯನ್ನು ಮಾಡಿಸಬೇಕೆಂದು ದಾಸರು ತಿಳಿಸಿದ್ದರು. ಅವರ ಬುದ್ಧಿ ವಾದದಂತೆ ಅನೇಕ ಮಂದಿ ಹೆಂಗಸರೂ, ಗಂಡಸರೂ ಮಡಿಯುಟ್ಟು ಮಂಗಳದ್ರವ್ಯಗಳನ್ನೂ, ಹಣ್ಣು-ಕಾಯಿಗಳನ್ನು ತುಂಬಿದ ತಟ್ಟೆ ಗಳನ್ನೂ ತೆಗೆದುಕೊಂಡು ಗಣೇಶನ ಪೂಜೆಗಾಗಿ ಬಂದರು. ಆದರೆ ಮೊದಲನೆಯ ತಟ್ಟೆಯು ಸ್ವಾಮಿಗಳ ಆಶೀರ್ವಾದಕ್ಕೆ ಪಾತ್ರವಾದು ದನ್ನು ಕಂಡು, ಎರಡನೆಯದೂ, ಮೂರನೆಯದೂ............ನೂರನೆ ಯದೂ ಅದನ್ನೇ ಅನುಸರಿಸಿದವು. ಈ ವಿಷಯವು ನನಗೆ ತಿಳಿದುದು ಆ ದಿವಸ ರಾತ್ರಿ—ಉತ್ಸವವೂ ಸಭಾ ಕಾರ್ಯವೂ ಸಂಪೂರ್ಣವಾಗಿ ಮುಗಿದುಹೋದ ಮೇಲೆ.ಈ ವಿಚಾರವನ್ನು ಅನೇಕ ವರ್ಷಗಳ ಕಾಲ ನಾನು ಸ್ವಾಮಿಗಳಿಗೂ ತಿಳಿಸಿರಲಿಲ್ಲ.

ಹೀಗೆ ಕುಂಭಕೋಣದ ವಿಘ್ನೇಶ್ವರನು ಅಲ್ಪಸಂಖ್ಯೆಯವರಾಗಿದ್ದ ನಮ್ಮಗಳನ್ನೂ, ಜಗದ್ಗುರುಗಳನ್ನೂ ಅಪ್ರಾರ್ಥಿತವಾಗಿ ತನ್ನ ಎದು ರಿಗೆ ಅಲಂಕಾರಯುಕ್ತವಾದ ಚಪ್ಪರದಲ್ಲಿ ನಿಲ್ಲಿಸಿಕೊಂಡು, ತನಗಾಗಿ ಬಂದ ಫಲ-ಪುಷ್ಪಗಳನ್ನು ಸ್ವಾಮಿಗಳ ಕಡೆಗೆ ತಿರುಗಿಸಿ,ಒಂದು-ಒಂದೂ

ವರೆ ಘಂಟೆಯ ಕಾಲ ನಿಧಾನ ಮಾಡಿದುದು ತುಂಬಾ ಸಹಾಯಕರ ವಾಯಿತು: ಒಂದನೆಯದು, ಜಗದ್ಗುರುಗಳವರ ಸ್ವಾಗತಕ್ಕೆ ಸಾವಿರಾರು ಜನರು ನೆರೆಯಲು ಅವಕಾಶ ದೊರೆಯಿತು. ಎರಡನೆಯದು ಬಹಳ ಮುಖ್ಯವಾದುದು. ಏನೆಂದರೆ: ಉತ್ಸವಕ್ಕಾಗಿ ಬೃಹನ್ಮಠ ದಿಂದ ಲಾರಿಯ ಮೇಲೆ ಸ್ವಲ್ಪ ಮುಂದಾಗಿಯೇ ಬಂದಿದ್ದ ಪಾಲಕಿ ಯನ್ನು ಅಲಂಕರಿಸುವುದಕ್ಕೋಸ್ಕರ ಉತ್ಸವದ ಪ್ರಾತಃಕಾಲ ತೆಗೆದು (ಮುಚ್ಚಿದ್ದ ಗವುಸನ್ನು ತೆಗೆದು) ನೋಡುವಲ್ಲಿ ಪಾಲಕಿಯ ಮೇಲ್ಭಾಗದ ಮರದ ಕೊಂಬು ಮುರಿದು ಹೋಗಿದ್ದುದು ಕಂಡು ಬಂದಿತು. ಅದನ್ನು ಸರಿಪಡಿಸಲು ಕೆಲಸಗಾರರನ್ನು ಕೂಡಲೇ ನಿಯಮಿಸ ಲಾಯಿತು. ಅದು ಅಷ್ಟು ಬೇಗನೆ ಮುಗಿಯುವ ಕೆಲಸವಾಗಿರಲಿಲ್ಲ. ಆದ್ದರಿಂದ ಸ್ವಾಮಿಗಳು ಮುಂದಾಗಿಯೇ ಆ ಸ್ಥಳಕ್ಕೆ ಹೋಗಿದ್ದರೆ, ಅವರು ಕಾದು ಕುಳಿತಿರಬೇಕಾಗುತ್ತಿತ್ತು. ಹಾಗಾಗಿದ್ದಿದ್ದರೆ ಚೆನ್ನಾಗಿರುತ್ತಿರಲಿಲ್ಲ. ಗಣೇಶ ಗುಡಿಯ ಬಳಿ ತಡವಾದುದರಿಂದ ಸ್ವಾಮಿ ದಯಮಾಡಿಸುವ ಹೊತ್ತಿಗೆ ಪಾಲಕಿಯು ಸರಿಹೋಗಿ ಅದರ ಅಲಂಕಾರವೂ ಮುಗಿದಿತ್ತು.

ಉತ್ಸವದ ಪ್ರಾರಂಭ:

ಪಾಲಕಿ ಉತ್ಸವವು ಕೂಡಲೆ ಪ್ರಾರಂಭವಾಗಿ ಕುಂಭಕೋಣದ ರಾಜಬೀದಿಗಳನ್ನು ಹಾದು ಪೆರಿಯ ಮಠದ ಹತ್ತಿರಕ್ಕೆ ಬರುತ್ತಿತ್ತು. ಪಲ್ಲಕ್ಕಿಯು ಮಠಕ್ಕೆ ಅನತಿ ದೂರದಲ್ಲಿರುವಾಗ ನಾನು ಸ್ವಾಮಿಗಳಲ್ಲಿ ಅರಿಕೆ ಮಾಡಿಕೊಂಡೆ: ಮಠದಲ್ಲಿ ಸ್ವಾಮಿಗಳವರ ಆಸನಗಳ ವ್ಯವಸ್ಥೆಯು ಹೇಗೆ ಮಾಡಲ್ಪಟ್ಟಿದೆ ಎಂಬುದನ್ನೂ, ವಿರೂಪಾಕ್ಷಶಾಸ್ತ್ರಿಗಳಲ್ಲಿ ನಾನು ಮಾಡಿದ್ದ ಯೋಜನೆಯು ಹೇಗಾಗಿದೆಯೆಂಬುದನ್ನೂ ನೋಡಿಕೊಂಡು ಐದು ನಿಮಿಷಗಳಲ್ಲಿ ಹಿಂದಿರುಗುತ್ತೇನೆಂದೂ, ಆ ವರೆಗೆ ಪಲ್ಲಕ್ಕಿ ಮುಂದುವರಿಯಕೂಡದೆಂದೂ ಸಹ ಅರಿಕೆ ಮಾಡಿಕೊಂಡು ಮಠಕ್ಕೆ ಓಡಿದೆ. ಮಠದಲ್ಲಿ ಸ್ವಾಮಿಗಳವರ ಆಸನದ ವ್ಯವಸ್ಥೆ ತೃಪ್ತಿಕರವಾಗಿರಲಿಲ್ಲ. ಅದನ್ನು ಸರಿಪಡಿಸುವ ಜವಾಬ್ದಾರಿಯನ್ನು ಜಿ.ಸಿ. ವೀರಪ್ಪನವರಿಗೆ ವಹಿಸಿ, ವಿರೂಪಾಕ್ಷ ಶಾಸ್ತ್ರಿಗಳಿಗೆ ಎಚ್ಚರಿಕೆ ಕೊಟ್ಟು ಉತ್ಸವದ ಬಳಿಗೆ ಬಹು ಬೇಗ ಬಂದೆ. ಅತ್ಯುಗ್ರವಾದ ಮಧ್ಯಾಹ್ನದ ಬಿಸಿಲಿನಲ್ಲಿ ಸ್ವಾಮಿ ಪಲ್ಲಕ್ಕಿಯಲ್ಲಿ ಕುಳಿತಿದ್ದಾರಲ್ಲಾ- ಎಂದು ನೋಡುವಲ್ಲಿ ಆ ಪಲ್ಲಕ್ಕಿ ನಿಂತಿದ್ದ ಸ್ಥಳದಲ್ಲಿ ಒಂದು ಜಾಲಿ ಮರವು ಸ್ವಾಮಿಗಳಿಗೆ ನೆರಳನ್ನು ನೀಡಿತ್ತು. (ಅದೂ ಸಹಾ ಮುರುಘೇಶನ ಮಹಿಮೆಯೆಂದೇ ನನ್ನ ಭಾವನೆ. ಏಕೆಂದರೆ ಇಡೀ ಕುಂಭಕೋಣದ ರಸ್ತೆಗಳಲ್ಲಿ ಪ್ರಾಯಃ ಮರಗಳೇ ಇಲ್ಲ).

ಸ್ವಾಮಿಗಳ ಪಲ್ಲಕ್ಕಿ ಮಠದ ಆವರಣದ ಬಳಿಗೆ ಬಂದಿತು. ಜನಸಂದಣಿ ಹೇರಳವಾಗಿತ್ತು. ವಿರೂಪಾಕ್ಷಶಾಸ್ತ್ರಿಗಳು ಮುಂದೆ ವೇದ ಘೋಷ ಮಾಡುತ್ತಾ ಹಿಂದೆ ಪೆರಿಯ ಮಠದ ಪ್ರ|| ಶಾಂತವೀರಸ್ವಾಮಿಗಳನ್ನೂ ಅವರ ಹಿಂದೆ ಅಲ್ಲಿನ ಮೂಲಂ ಮಠದ ಸ್ವಾಮಿಗಳನ್ನೂ ಕರೆದುಕೊಂಡು ಜನಸಂದಣಿಯಲ್ಲಿ ದಾರಿ ಮಾಡಿಕೊಂಡು ಬರುತ್ತಿದ್ದರು. ಅವರ ಹೆಜ್ಜೆಯ ವೇಗ ಮೊದಲೇ ಆಲೋಚಿಸಲ್ಪಟ್ಟಿದ್ದಂತೆ ಒಂದು ತೂಕದಲ್ಲಿತ್ತು. ಜಗದ್ಗುರುಗಳ ಪಲ್ಲಕ್ಕಿಯು ಕೆಳಕ್ಕಿಳಿಯುವುದೂ, ಪ್ರ|| ಶಾಂತವೀರಸ್ವಾಮಿಗಳು ಅದರ ಬಳಿಯನ್ನು ಸೇರುವುದೂ ಒಂದೇ ಆಯಿತು. ಪ್ರ|| ಶಾಂತವೀರ ಸ್ವಾಮಿಗಳಿಗೆ ಜಗದ್ಗುರುಗಳ ದರ್ಶನ ವಾಗುತ್ತಲೇ ನೆಲದ ಮೇಲೆ ಉದ್ದಕ್ಕೆ ಅಡ್ಡಬಿದ್ದರು. ಅವರ ಹಿಂದೆ ಮೂಲಂ ಸ್ವಾಮಿಗಳೂ ಅಡ್ಡಬಿದ್ದರು. ಪ್ರ|| ಶಾಂತವೀರಸ್ವಾಮಿಗಳು ಎದ್ದವರೇ ಪಲ್ಲಕ್ಕಿಯಲ್ಲಿ ಮಂಡಿಸಿದ್ದ ಜಗದ್ಗುರುಗಳಿಗೆ ಹಸ್ತ ಲಾಘವವನ್ನು ಕೊಟ್ಟು ಕರೆದುಕೊಂಡು ಹೋಗಿ ಅವರ ಸಿಂಹಾಸನದ ಮೇಲೆ ಕುಳ್ಳಿರಿಸಿದರು. ಅನಂತರ ಜಗದ್ಗುರುಗಳವರ ಅಪ್ಪಣೆಯ ಪ್ರಕಾರ ಸಿಂಹಾಸನದ ಇಕ್ಕೆಲಗಳಲ್ಲಿಯೂ ಏರ್ಪಡಿಸಿದ್ದ ಆಸನಗಳ ಮೇಲೆ ಇಬ್ಬರು ಸ್ವಾಮಿಗಳೂ ಕುಳಿತುಕೊಂಡರು. ಮಧ್ಯಾಹ್ನ ಊಟದ ಹೊತ್ತು ಮೀರಿದ್ದರಿಂದ ಆಗಿನ ಸಭಾ ಕಾರ್ಯವು ಬೇಗನೆ ಮುಗಿಯಿತು. ಅಲ್ಲಿಂದಾಚೆಗೆ ಎಲ್ಲ ಕಾರ್ಯಗಳೂ ಸುಗಮವಾಗಿ ನಡೆದುವು.

ಜಗದ್ಗುರುಗಳು ಕುಂಭಕೋಣದಲ್ಲಿ ಹೆಚ್ಚಿಗೆ ದಿನಗಳು ಇರಲಾಗಲಿಲ್ಲ. ಆ ಊರಿನ ಬಿಸಿಲಿನ ತಾಪದಿಂದ ಸ್ವಾಮಿಗಳ ಮೈಮೇಲೆ ನೀರುಗುಳ್ಳೆಗಳು (ಸುಟ್ಟರೆ ಆಗುವ ನೀರು ಗುಳ್ಳೆಗಳಂತೆ) ಆದುವು. ಕುಂಭಕೋಣವನ್ನು ಬಿಟ್ಟು ಬೃಹನ್ಮಠದ ಕಡೆ ಹೊರಟವರು ಮಧ್ಯೆ ದಾರಿಯಲ್ಲಿ ಖಾಸಗಿಯಾಗಿ ಬೆಂಗಳೂರಿನಲ್ಲಿ ಮೊಕ್ಕಾಂ ಮಾಡಿದರು.

ಬೆಂಗಳೂರಿನಲ್ಲಿ ಖಾಸಗಿ ಮೊಕ್ಕಾಂ :

ಬೆಂಗಳೂರಿನಲ್ಲಿ ಭಕ್ತಾದಿಗಳ ಆಗ್ರಹಪೂರ್ವಕವಾದ ಪ್ರಾರ್ಥನೆಯಿಂದ ಸ್ವಾಮಿಗಳ ಮೊಕ್ಕಾಂ ತಿಂಗಳುಗಟ್ಲೆ ಎಳೆಯಿತು. ಶ್ರೀ ಜಯದೇವ ವಿದ್ಯಾರ್ಥಿ ನಿಲಯದಲ್ಲಿ ದೊಡ್ಡ ದೊಡ್ಡ ಸ್ವಮತ–ಪರಮತ ವಿದ್ವಾಂಸರುಗಳಿಂದ ಭಾಷಣ-ಪುರಾಣ-ಕೀರ್ತನೆ-ಸಂಗೀತ ಇತ್ಯಾದಿಗಳು ನಡೆದುವು. ಈ ಸಂದರ್ಭದಲ್ಲಿ ದಿವಾನ್ ಸರ್ ಮಿರ್ಜಾರವರನ್ನು ತಮ್ಮ ಬಳಿಗೆ ಕರೆಸಿಕೊಂಡಿದ್ದರು. ಸರ್ ಮಿರ್ಜಾರವರಿಗೆ ಸ್ವಾಮಿಯ ವಿಚಾರದಲ್ಲಿ ತುಂಬಾ ಗೌರವ-ವಿಶ್ವಾಸಗಳಿದ್ದವು.ಅವರು ಸ್ವಾಮಿಯವರೊಡನೆ ಮಾತನಾಡುತ್ತಾ "ತಾವು ಪ್ರತಿವರ್ಷ 3 ತಿಂಗಳು ಬೆಂಗಳೂರಿನಲ್ಲಿ ಮೊಕ್ಕಾಂ ಮಾಡಿ, ಈ ನಗರಾಭಿವೃದ್ಧಿಯ ಬಗೆಗೆ ನಾವು ಮಾಡುವ ಕಾರ್ಯಗಳ ವಿಷಯದಲ್ಲಿ ತಿಳಿವಳಿಕೆಯನ್ನು ಕೊಡಬೇಕು'' ಎಂದು ಮುಂತಾಗಿ ತಿಳಿಸಿದರು. ಜಗದ್ಗುರುಗಳು ಈ ಸಂದರ್ಭವನ್ನು ಉಪಯೋಗಿಸಿಕೊಂಡು, "ನೀವು ಇಲ್ಲಿ ಸೂಕ್ತವಾದ ಒಂದು ನಿವೇಶನವನ್ನು ಕೊಟ್ಟರೆ,ನಾವು ಇಲ್ಲಿಯೇ ಒಂದು ಮಠವನ್ನು ಕಟ್ಟಿ,ಅರ್ಧವರ್ಷ ಇಲ್ಲಿಯೂ, ಅರ್ಧ ವರ್ಷ ಚಿತ್ರದುರ್ಗದ ಮಠದಲ್ಲಿಯೂ ಇರುತ್ತೇವೆ" ಎಂದರು. ದಿವಾನರು ಆಗಬಹುದೆಂದು, ಕೊಡಬಹುದಾದ ನಿವೇಶನಗಳನ್ನು ನಿರ್ದಿಷ್ಟವಾಗಿ ತಿಳಿಸಿದರು........ ಆದರೆ ಆ ಕಾರ್ಯವು ಕೈಗೂಡುವವರೆಗೆ ಸ್ವಾಮಿಗಳು ಇಲ್ಲಿ ನಿಲ್ಲಲಾಗಲಿಲ್ಲ. ಏಕೆ ? ಆ ವಿಚಾರವು ಈ ಲೇಖನವನ್ನು ಮತ್ತಷ್ಟು ಬೆಳೆಸುವುದೆಂಬ ಭಯದಿಂದ, ಅದನ್ನು ವಿರಮಿಸಲಾಗಿದೆ.

ಮಹಾಸ್ವಾಮಿಗಳು ಬೆಂಗಳೂರಿನಿಂದ ಬೃಹನ್ಮಠಕ್ಕೆ ಹೊರಟರು. ನಾನು ದೀರ್ಘದಂಡ ನಮಸ್ಕಾರವನ್ನು ಹಾಕಿ, ಅವರ ಅಪ್ಪಣೆಯನ್ನು ಪಡೆದು ಮನೆಗೆ ಹೋದೆ.

ದಾವಣಗೆರೆಯ ಪ್ರವಚನದಲ್ಲಿ ಸ್ವಾಮಿ :

ಬೆಂಗಳೂರಲ್ಲಿ ಸ್ವಾಮಿಯ ಮೊಕ್ಕಾಂ ಇದ್ದಾಗ ಒಂದೆರಡು ದಿನಗಳ ಸಭೆಯಲ್ಲಿ ನಾನು ಷಡಕ್ಷರದೇವರ ರಾಜಶೇಖರವಿಳಾಸದಲ್ಲಿ ಒಂದು ಪ್ರಸಂಗದ ಪ್ರವಚನ(ಪುರಾಣ)ವನ್ನು ಹೇಳಿದ್ದೆ. ಅದು ನಿಜವಾಗಿ ಚೆನ್ನಾಗಿದ್ದುದರಿಂದಲೋ ಅಥವಾ ಮಹಾಸ್ವಾಮಿಗಳಿಗೆ ನನ್ನ ಮೇಲಿದ್ದ ಪ್ರೀತಿ ವಿಶ್ವಾಸಗಳಿಂದಲೋ, ಆ ಪ್ರವಚನವು ಮನಸ್ಸಿಗೆ ಹಿಡಿಸಿತ್ತೆಂದು ಕಾಣುತ್ತದೆ. 1948 ನೆಯ ಇಸವಿಯ ಶ್ರಾವಣ ಮಾಸದಲ್ಲಿ ದಾವಣಗೆರೆಯ ವಿರಕ್ತ ಮಠದಲ್ಲಿ ನನ್ನಿಂದ ಪ್ರವಚನವನ್ನು ಇಡಿಸಬೇಕೆಂದು ಅಲ್ಲಿನ ಭಕ್ತಾದಿಗಳಿಗೆ ಸ್ವಾಮಿ ಅಪ್ಪಣೆ ಮಾಡಿದಂತೆ ದಾವಣಗೆರೆಯವರು ನನಗೆ ಬರೆದು ಮತ್ತು ಪ್ರತ್ಯಕ್ಷ ನನ್ನಲ್ಲಿಗೆ ಬಂದು ಪ್ರವಚನದ ಬಗ್ಗೆ ಕೇಳಿದರು. "ಜಗದ್ಗುರುಗಳು ಪ್ರವಚನ ಕಾಲದಲ್ಲಿ ದಾವಣಗೆರೆಯಲ್ಲಿ ಇರುವುದಾದರೆ ಇದಕ್ಕೆ ಒಪ್ಪಿಕೊಳ್ಳುತ್ತೇನೆ" ಎಂದು ನಾನು ಹೇಳಿದೆ. ಸ್ವಾಮಿ ಒಪ್ಪಿಕೊಂಡೇ ಇದ್ದಾರೆ– ಎಂದು ಅವರು ತಿಳಿಸಿದರು.

ದಾವಣಗೆರೆಯ ವಿರಕ್ತ ಮಠದಲ್ಲಿ ರಾಜಶೇಖರವಿಳಾಸ ಪ್ರವಚನವು ಆ ಶ್ರಾವಣ ಮಾಸದಲ್ಲಿ ನನ್ನಿಂದ ಜಗದ್ಗುರು ಮಹಾಸ್ವಾಮಿಗಳ ನೇತೃತ್ವದಲ್ಲಿ ನಡೆಯಿತು. ಬಹಳ ಚೆನ್ನಾಗಿ ನಡೆಯಿತು. ಪ್ರವಚನದ ಮೊದಲ ದಿನ 50-60 ಮಂದಿ ಶ್ರೋತೃಗಳಿದ್ದು, ದಿನನಿತ್ಯ ಹೆಚ್ಚುತ್ತಾ ಹೋಗಿ, ಸಾವಿರಾರು ಮಂದಿ ಸ್ತ್ರೀ ಪುರುಷರು ಸೇರುತ್ತಿದ್ದರು. ಪ್ರತಿನಿತ್ಯ ನನ್ನ ಪ್ರವಚನಾನಂತರ ಜಗದ್ಗುರುಗಳವರ ಆಶೀರ್ವಚನವಿರುತ್ತಿತ್ತು. ಇದೇ, ನನ್ನ ಪ್ರವಚನದ ವೈಖರಿಗಿಂತಲೂ ಭಕ್ತಾದಿಗಳನ್ನು ಆಕರ್ಷಿಸುತ್ತಲಿದ್ದಿತು. ಪ್ರವಚನವಾದರೂ 'ನ ಭೂತೋ ನ ಭವಿಷ್ಯತಿ' ಎನ್ನುವಷ್ಟು ಚೆನ್ನಾಗಿ ಆಗುತ್ತಿದೆಯೆಂದು ಶ್ರೋತೃಗಳ ಅಭಿಪ್ರಾಯವಾಗಿತ್ತು. ನನಗೆ ಅಲ್ಲಿ ಚಿನ್ನದ ಪದಕಗಳೂ, 'ಪ್ರವಚನ ಪ್ರವೀಣ' ಎಂಬ ಪ್ರಶಸ್ತಿಯೂ ದೊರೆತವು. ನನಗೆ ಆಗ ಉಂಟಾದ ಮತ್ತು ಈಗಲೂ ಆಗುತ್ತಿರುವ ದೊಡ್ಡ ಸಂತೋಷವಾವುದೆಂದರೆ: ಪ್ರವಚನದ ಕಡೆಯ ದಿವಸ ನನ್ನ ಪ್ರೇಮಪಾತ್ರವಾದ ರಾಜಶೇಖರವಿಳಾಸ ಗ್ರಂಥವನ್ನು ಆನೆಯ ಮೇಲಿಡಿಸಿ ವೈಭವದಿಂದ ಮೆರವಣಿಗೆಯನ್ನು ಮಾಡಿಸಿದೆ. ಮಹಾಸ್ವಾಮಿಯ ಸನ್ನಿಧಿಯಲ್ಲಿ ಅಭೂತಪೂರ್ವವಾದ ಆನಂದದಿಂದ ಕಾಲ ಕಳೆವ ಪುಣ್ಯ ನನಗೆ ಆಗ ಲಭ್ಯವಾಗಿತ್ತು.

ಜಗದ್ಗುರು ಜಯದೇವ ಮಹಾಸ್ವಾಮಿಗಳ ವಜ್ರಮಹೋತ್ಸವ ಮತ್ತು ಜಗದ್ಗುರು ಜಯವಿಭವ ಮಹಾಸ್ವಾಮಿಗಳ ಪಟ್ಟಾಭಿಷೇಕ ಮಹೋತ್ಸವಕ್ಕೂ ನಾನು ಸಂಸಾರ ಸಹಿತ ಹೋಗಿದ್ದೆನು. ಆದರೆ ಆ ಮಹತ್ಕಾರ್ಯದಲ್ಲಿ ನಾನು ಯಾವ ಹೆಚ್ಚುವರಿ ಸೇವೆಯನ್ನೂ ಸಲ್ಲಿಸಲಿಲ್ಲ.

ಮಹಾಸ್ವಾಮಿಗಳನ್ನು ನಾನು ಕಟ್ಟ ಕಡೆಯಲ್ಲಿ ದರ್ಶನ ಮಾಡಿದ್ದು ದಾವಣಗೆರೆಯಲ್ಲಿಯೇ- ಅವರು ಲಿಂಗದೊಳಗಾದ ಮೇಲೆ. ಮಹಾಸ್ವಾಮಿಯ ಲಿಂಗಶರೀರವು ಸಮಾಧಿಸ್ಥವಾದ ಮೇಲೆ, ದುಗುಡದಿಂದ ಕೂಡಿದ ಹೃದಯದೊಡನೆ ಸಮಾಧಿಗೆ ದೀರ್ಘದಂಡ ನಮಸ್ಕಾರವನ್ನು ಮಾಡಿ, ಊರಿಗೆ ಹಿಂದಿರುಗಿದೆನು.

ಸನ್ನಿಧಿಯ ಸೇವೆಯಲ್ಲಿ ನಾನಿದ್ದ ಇಂತಹ ಪ್ರಕರಣಗಳು ಅನೇಕವಿವೆ. ಅವುಗಳೆಲ್ಲವನ್ನೂ ಬರೆಯುತ್ತಾ ಹೋದರೆ ಈಗಾಗಲೇ ದೀರ್ಘವಾಗಿರುವ ಲೇಖನವು ಇನ್ನೂ ಬೆಳೆಯುವುದು. ಆದ್ದರಿಂದ ಈ ಲೇಖನವನ್ನು ಇಲ್ಲಿಗೆ ನಿಲ್ಲಿಸಿದ್ದೇನೆ.

"ಜಯ ಜಗದ್ಗುರು ಜಯದೇವ"

ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತು ಶ್ರೀ ಬೃಹನ್ಮಠ ಸಂಬಂಧ

— **ಲಕ್ಷ್ಮಣ್ ತೆಲಗಾವಿ,** ಎಂ.ಎ.,
ಸಂಶೋಧಕ, ಇತಿಹಾಸ ವಿಭಾಗ,
ಮಾನಸಗಂಗೋತ್ರಿ,
ಮೈಸೂರು-6.

ಹದಿನೇಳನೆಯ ಶತಮಾನದ ಕಡೆಯ ದಶಕದಲ್ಲಿ ಅಥವಾ ಹದಿನೆಂಟನೆಯ ಶತಮಾನದ ಮೊದಲ ದಶಕದಲ್ಲಿ ಚಿತ್ರದುರ್ಗದಲ್ಲಿ ಶ್ರೀ ಬೃಹನ್ಮಠವು ಸ್ಥಾಪನೆಗೊಂಡಿತು. ಈ ಪೀಠದ ಸ್ಥಾಪನೆಗೆ ಮೂಲ ಕಾರಣಕರ್ತರು ಶ್ರೀ ಮುರಿಗೇಂದ್ರ ರಾಜೇಂದ್ರರು (1640–1710); ಶೂನ್ಯಸಿಂಹಾಸನ ಪರಂಪರೆಯಲ್ಲಿ ಎಂಟನೆಯ ಪೀಠಾಧಿಕಾರಿಗಳಾಗಿದ್ದವರು. 1689 ರಿಂದ 1720 ರ ವರೆಗೆ ಚಿತ್ರದುರ್ಗ ಸಂಸ್ಥಾನದ ಅರಸನಾಗಿ ಆಳ್ವಿಕೆ ನಡೆಸಿದ ಬಿಚ್ಚುಕತ್ತಿ ಭರಮಣ್ಣ ನಾಯಕನು ಶ್ರೀ ಮುರಿಗೇಂದ್ರರ ಕೃಪಾಶೀರ್ವಾದಕ್ಕೆ ಪಾತ್ರನಾಗಿ ಅವರಿಗಾಗಿ ಮಠವನ್ನು ನಿರ್ಮಿಸಿಕೊಟ್ಟ; ಅವರ ಅಚ್ಚುಮೆಚ್ಚಿನ ಭಕ್ತನಾದ. ಅಂದಿನಿಂದ ಅರಮನೆ-ಗುರುಮನೆಗಳ ನಡುವಣ ಬಾಂಧವ್ಯ ಪ್ರಾರಂಭವಾಯಿತು. ಭರಮಣ್ಣನಾಯಕನ ತರುವಾಯ ಬಂದ ಅರಸರುಗಳೂ ಈ ಪೀಠದ ಜಗದ್ಗುರುಗಳೊಂದಿಗೆ ಗೌರವಾದರಗಳಿಂದ ವರ್ತಿಸಿದರು. ಕೆಲವೊಮ್ಮೆ ಅರಮನೆ–ಗುರುಮನೆಗಳ ನಡುವೆ ವಿರಸ ಮೂಡುತ್ತಿದ್ದರೆ, ಇನ್ನೊಮ್ಮೆ ಎಂದಿನಂತೆ ಗಾಢ ಸಂಬಂಧ ನೆಲೆಗೊಳ್ಳುತ್ತಿತ್ತು.

ಚಿತ್ರದುರ್ಗದ ಪಾಳೆಯಗಾರರೇ ಅಲ್ಲದೆ, ಅಂದಿನ ಇನ್ನಿತರ ಸಂಸ್ಥಾನಗಳವರೂ ಸಹ ಶ್ರೀ ಬೃಹನ್ಮಠದೊಂದಿಗೆ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು. ಮಠಕ್ಕೆ ಮತ್ತು ಜಗದ್ಗುರುಗಳವರಿಗೆ ಅವರು ನೀಡಿರುವ ವಸ್ತುಗಳು, ಸನ್ನದು(ನಿರೂಪ)ಗಳನ್ನು ನಾವೀಗಲೂ ನೋಡಬಹುದು. ಮಠಕ್ಕೆ ರಾಜರು, ಅಧಿಕಾರಸ್ಥರು ನೀಡಿದ ಆಶ್ರಯ, ತೋರಿದ ಗೌರವಾದರಗಳಿಗಿಂತಲೂ ಜನಸಾಮಾನ್ಯರು ನೀಡಿದ ಗೌರವಾದರ ಇತ್ಯಾದಿಗಳು ಹೆಚ್ಚಿನ ಮಹತ್ವವನ್ನು ಪಡೆದಿವೆ. ಆಳುತ್ತಿದ್ದವರು ಕಾಲಕಾಲಕ್ಕೆ ವ್ಯಕ್ತಪಡಿಸುತ್ತಿದ್ದ ಭಕ್ತ್ಯಾತಿಶಯಗಳನ್ನು ಉಲ್ಲೇಖಿಸಿಗೊಂಡಿರುವ ಪತ್ರಗಳು, ನಿರೂಪಗಳು ಸಹಸ್ರ ಸಂಖ್ಯೆಯಲ್ಲಿವೆ. (ಇವುಗಳನ್ನು ಕ್ರಮಬದ್ಧವಾಗಿ ಅಭ್ಯಸಿಸಿ ಪ್ರಕಟಿಸುವ ಕಾರ್ಯದ ಅಗತ್ಯ ಇಂದು ಬಹಳವಾಗಿದೆ. ಇತಿಹಾಸಕ್ಕೆ ಇವುಗಳಿಂದ ವಿಶೇಷ ಪ್ರಯೋಜನವುಂಟು). ಹೀಗೆ ಸುಮಾರು ಮುನ್ನೂರು ವರುಷಗಳಿಂದ ಬೃಹತ್ ಆಗಿ ಬೆಳೆದು ಬಂದಿರುವ ಶ್ರೀ ಬೃಹನ್ಮಠದ ಇತಿಹಾಸ ರಚನೆಯ ಕಾರ್ಯ ಅಗಾಧವಾದುದೂ, ವಿಶಿಷ್ಟವಾದುದೂ ಆಗಿದೆಯೆಂಬುದು ಖಚಿತ. ಈ ದೃಷ್ಟಿಯಲ್ಲಿ ಇತರ ಸಂಸ್ಥಾನಗಳೊಡನೆ, ಮಠಗಳೊಡನೆ ಶ್ರೀ ಬೃಹನ್ಮಠ ಹೊಂದಿದ್ದ ಯಾವುದೇ ವಿಧದ ಸಂಬಂಧಗಳನ್ನು ಗುರುತಿಸುವುದರ ಅವಶ್ಯಕತೆ ಇರುವುದೂ ವ್ಯಕ್ತಪಡುತ್ತದೆ. ಇದರಿಂದ ಶ್ರೀ ಬೃಹನ್ಮಠದ ಘನತೆ ಮಾತ್ರವೇ ಹೆಚ್ಚದೆ, ಕರ್ನಾಟಕದ ಮಠ–ಮಾನ್ಯಗಳ ಐತಿಹಾಸಿಕ ಅಧ್ಯಯನದಲ್ಲಿ ತಪ್ಪಿ ಹೋಗಿರಬಹುದಾದ ಕೊಂಡಿಗಳನ್ನು ಬೆಸೆಯಲೂ ಸಾಧ್ಯವಾಗುತ್ತದೆ.

ಹಿನ್ನೆಲೆ : ಸುಮಾರು ಇನ್ನೂರಾ ಹನ್ನೊಂದು ವರ್ಷಗಳ ಕಾಲ ವೈಭವದಿಂದ, ಕ್ಷಾತ್ರತೇಜದಿಂದ ಮೆರೆದ ಚಿತ್ರದುರ್ಗ ಸಂಸ್ಥಾನವು 1779ರ ಪ್ರಾರಂಭದಲ್ಲಿ ಶ್ರೀರಂಗಪಟ್ಟಣದ ನವಾಬ ಹೈದರಾಲಿ ಖಾನನ ವಶಕ್ಕೆ ಬಂದಿತು. ಲಂಚಕೋರ ಮರಾಠ ಸರದಾರರು ಸಮಯಕ್ಕೆ ಸರಿಯಾಗಿ ಮದಕರಿನಾಯಕನಿಗೆ ಸಹಾಯ ಒದಗಿಸದೇ ಹೋದುದರಿಂದಲೂ, ಚಿತ್ರದುರ್ಗದ ಕೋಟೆಯಲ್ಲಿದ್ದ ಮುಸ್ಲಿಂ ಯೋಧರು ಯುದ್ಧ ಸಮಯದಲ್ಲಿ ಹೈದರಾಲಿಯ ಪರ ವಹಿಸಿದುದರಿಂದಲೂ ಚಿತ್ರದುರ್ಗ ಸಂಸ್ಥಾನ ಪತನಗೊಂಡಿತು; ಇತಿಹಾಸದ ಪುಟಗಳಲ್ಲಿ ಸೇರಿಹೋಯಿತು. 1799ರಲ್ಲಿ ಬ್ರಿಟಿಷರೊಡನೆ ನಡೆದ ಹೋರಾಟದಲ್ಲಿ ಶ್ರೀರಂಗಪಟ್ಟಣದಲ್ಲಿ ಹೈದರಾಲಿಯ ಮಗ ಟಿಪ್ಪು (ಜೂನ್ 30ರಂದು) ಮರಣ ಹೊಂದುವ ತನಕ, ಇಪ್ಪತ್ತು ವರುಷಗಳ ಕಾಲ ಚಿತ್ರದುರ್ಗ ಪ್ರಾಂತದ ಮೇಲೆ ಹೈದರ್ ಮತ್ತು ಟಿಪ್ಪು ಈರ್ವರೂ ತಮ್ಮ ಬಲ ಸ್ಥಾಪಿಸಿದ್ದರು. ಇಲ್ಲಿನ ಬೆಟ್ಟದ ಮೇಲಿನ ಕೋಟೆಯನ್ನು ಇಂಗ್ಲಿಷ್ ಸೆರೆಯಾಳುಗಳನ್ನು ಬಂಧಿಸಿಡಲು ಉಪಯೋಗಿಸುತ್ತಿದ್ದರು. ಶ್ರೀರಂಗಪಟ್ಟಣವನ್ನು ಇಂಗ್ಲಿಷರು ಕೈವಶ ಮಾಡಿಕೊಂಡ ಮೇಲೆ ಅದೇ ವರ್ಷ ಕರ್ನಲ್ ಜೇಮ್ಸ್ ಡಾಲ್ರಿಂಪಲ್ ಎಂಬ ಸೇನಾಧಿಪತಿಯನ್ನು ಚಿತ್ರದುರ್ಗದ ವಿರುದ್ಧ ಕಳುಹಿಸಿಕೊಟ್ಟರು. ಜುಲೈ 6 ರಂದು ಅನಾಯಾಸವಾಗಿ ಚಿತ್ರದುರ್ಗ ಅವನ ವಶಕ್ಕೆ ಬಂದಿತು. ಅನಂತರ ಇಲ್ಲಿನ ಕೋಟೆಯಲ್ಲಿ ಇಂಗ್ಲಿಷರ ವಿರುದ್ಧ ನಡೆಯುತ್ತಿದ್ದ ಎಲ್ಲ ಕಾರ್ಯಾಚರಣೆಗಳೂ ತಣ್ಣಗಾದವು.

ವಿಜಯನಗರ ಪತನಾನಂತರ ಕರ್ನಾಟಕದಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಮೈಸೂರು ಒಡೆಯರರ ಪ್ರಭುತ್ವವು ಹೈದರಾಲಿಯ ಸೈನಿಕ ಕಾರ್ಯಾಚರಣೆಯಿಂದ ಮೂಲೆಗುಂಪಾಗಿದ್ದು, 1761 ರಿಂದ 1782 ರವರೆಗೆ ಅವನ ಅಧೀನದಲ್ಲಿಯೂ, 1782 ರಿಂದ 1799 ರ ವರೆಗೆ ಆತನ ಮಗ ಟಿಪ್ಪುಸುಲ್ತಾನನ ಅಧೀನದಲ್ಲಿಯೂ, ಒಟ್ಟು 38 ವರುಷಗಳ ಕಾಲ ಇದ್ದಿತು; ಶ್ರೀರಂಗಪಟ್ಟಣ ರಾಜಧಾನಿಯಾಗಿದ್ದಿತು. 1799 ರಲ್ಲಿ ಸಂಭವಿಸಿದ ಟಿಪ್ಪುವಿನ ಮರಣದ ತರುವಾಯವೇ ಇಂಗ್ಲಿಷರ ಪ್ರಯತ್ನದ ಫಲವಾಗಿ ಮೈಸೂರಿನ ಒಡೆತನವು ಎಂದಿನಂತೆ ಒಡೆಯರರ ವಂಶದವರಿಗೆ ಸೇರಿತು. ಇಂಗ್ಲಿಷರಿಗೂ, ಮೈಸೂರಿನ ಮಾತೃಶ್ರೀ ಲಕ್ಷ್ಮಮ್ಮಣ್ಣಿಯವರಿಗೂ ನಡೆದ ಕರಾರಿನ ಪ್ರಕಾರ ಮೈಸೂರು ಸಂಸ್ಥಾನದ ಎಲ್ಲೆಗಳನ್ನು ಪುನರ್ವಿಂಗಡಿಸಲಾಯಿತು. ಆ ಪ್ರಕಾರ ಮೈಸೂರು ಸಂಸ್ಥಾನದ ಉತ್ತರಕ್ಕೆ ದಕ್ಷಿಣ ಮಹಾರಾಷ್ಟ್ರ

ಸೀಮೆ ಮತ್ತು ಬಳ್ಳಾರಿ ಜಿಲ್ಲೆ; ಪೂರ್ವಕ್ಕೆ ಕರ್ನೂಲ್, ಕಡಪ, ಚಿತ್ತೂರು ಜಿಲ್ಲೆಗಳು; ದಕ್ಷಿಣಕ್ಕೆ ಶಾಲ್ಯ, ಕೊಯಮತ್ತೂರು ಜಿಲ್ಲೆಗಳು; ಪಶ್ಚಿಮಕ್ಕೆ ಕೊಡಗು, ಕನ್ನಡ ಜಿಲ್ಲೆ ಇವುಗಳ ನಡುವೆ ಉತ್ತರ ದಕ್ಷಿಣ ಸುಮಾರು 230 ಮೈಲಿ, ಪೂರ್ವ ಪಶ್ಚಿಮ 190 ಮೈಲಿ ಈ ಪ್ರಾಂತವನ್ನೊಳಗೊಂಡ ಪ್ರದೇಶವು ಮೈಸೂರು ದೊರೆಗಳ ರಾಜ್ಯವೆಂದು ನಿಷ್ಕರ್ಷೆಯಾಯಿತು. ಈ ಎಲ್ಲಾ ಸೀಮೆಗಳಿಂದ ರಾಜ್ಯಕ್ಕೆ ಬರಬಹುದಾಗಿದ್ದ ಹುಟ್ಟುವಳಿ ಸುಮಾರು 13, 74, 076 ಕಂಠೀರಾಯಿ ವರಹಗಳು. 1799 ಜೂನ್ 30ರಂದು ಮುಮ್ಮಡಿ ಕೃಷ್ಣರಾಜ ಒಡೆಯರರನ್ನು ಮೈಸೂರು ಸಿಂಹಾಸನದ ಒಡೆಯರನ್ನಾಗಿ ಮಾಡಲಾಯಿತು. ಅಂದಿನಿಂದ ಮೈಸೂರು ಪ್ರಾಂತದಲ್ಲಿ ಇನ್ನೊಮ್ಮೆ ಒಡೆಯರರ ಆಡಳಿತ ಮೊದಲಿಟ್ಟಿತಲ್ಲದೆ, ಸಂಸ್ಥಾನದ ರಾಜಧಾನಿ ಮೈಸೂರು ನಗರವೇ ಆಯಿತು; ತನ್ನ ಹಿಂದಿನ ಭವ್ಯತೆಯನ್ನು, ಪ್ರಾಮುಖ್ಯತೆಯನ್ನು ಮತ್ತೆ ಪಡೆಯಿತು.

ಮುಮ್ಮಡಿ ಕೃಷ್ಣರಾಜ ಒಡೆಯರರು (1799 ರಿಂದ 1868):

ಮುಮ್ಮಡಿ ಕೃಷ್ಣರಾಜ ಒಡೆಯರವರು ಚಾಮರಾಜ ಒಡೆಯರರ ಪುತ್ರರಾಗಿ 1792 ರಲ್ಲಿ ಜನಿಸಿದರು. ಚಾಮರಾಜ ಒಡೆಯರರು ಇಮ್ಮಡಿ ಕೃಷ್ಣರಾಜ ಒಡೆಯರರ ಸಪತ್ನೀ ಪುತ್ರರು. ಚಾಮರಾಜರನ್ನು ಇಮ್ಮಡಿ ಕೃಷ್ಣರಾಜ ಒಡೆಯರರ ಪಟ್ಟದರಸಿ (ಬೆಟ್ಟದ ಕೋಟೆ ಮನೆತನದ ಕತ್ತಿ ಗೋಪಾಲರಾಜೇ ಅರಸಿನವರ ಪುತ್ರಿ) ಮಹಾರಾಣಿ ಲಕ್ಷ್ಮಮ್ಮಣ್ಣಿಯವರು ದತ್ತುಪುತ್ರನನ್ನಾಗಿ ಸ್ವೀಕರಿಸಿದರು. ತಮ್ಮ ಬುದ್ಧಿ ಚಾತುರ್ಯ, ಮುಂದಾಲೋಚನೆ ಇತ್ಯಾದಿಗಳಿಂದ ಟಿಪ್ಪು ಸುಲ್ತಾನನ ವಿರುದ್ಧ ಇಂಗ್ಲಿಷರೊಡನೆ ಸಂಬಂಧ ಬೆಳೆಸಿದ ಲಕ್ಷ್ಮಮ್ಮಣ್ಣಿಯವರು, ತಮ್ಮ ಕಾರ್ಯದಲ್ಲಿ ಸಫಲರಾಗಿ ಹಿಂದಿನಂತೆಯೇ ಮೈಸೂರು ಸಂಸ್ಥಾನದ ಆಡಳಿತ ಸೂತ್ರವು ಒಡೆಯರರ ಕೈಗೆ ಬರುವಂತೆ ಮಾಡಿದರು. ಆದರೆ ತಾವು ದತ್ತು ಸ್ವೀಕರಿಸಿದ್ದ ಚಾಮರಾಜ ಒಡೆಯರರು ಮೃತರಾಗಲು ಅವರ ಪುತ್ರ ಮುಮ್ಮಡಿ ಕೃಷ್ಣರಾಜರನ್ನು ಪ್ರೀತಿಯಿಂದ ಸಾಕಿ, ಸಲಹಿ ಅನಂತರ ಅವರನ್ನು ಸಿಂಹಾಸನದ ಮೇಲೆ ಕೂರಿಸಲು ಕಾರಣರಾದರು.

ಸಿಂಹಾಸನವನ್ನು ಪರಿಗ್ರಹಿಸುವ ವೇಳೆಗೆ ಮುಮ್ಮಡಿ ಕೃಷ್ಣರಾಜ ಒಡೆಯರರಿಗೆ ಐದು ವರ್ಷ ವಯಸ್ಸಾಗಿತ್ತು. ಭಾರತದ ಅಂದಿನ ಗೌರ್ನರ್ ಜನರಲ್ ಆಗಿದ್ದ ಮಾರ್ಕಿಸ್ ವೆಲ್ಲೆಸ್ಲಿಯು (1789–1805) ತನ್ನ ತಮ್ಮ ಕರ್ನಲ್ ಅರ್ಥರ್ ವೆಲ್ಲೆಸ್ಲಿಯನ್ನು ಮೈಸೂರು ಸಂಸ್ಥಾನದಲ್ಲಿ ಇರಿಸಲ್ಪಟ್ಟಿದ್ದ ಇಂಗ್ಲಿಷ್ ಸೇನೆಯ ಮುಖ್ಯಾಧಿಪತಿಯನ್ನಾಗಿ ನೇಮಿಸಿದ. ಕರ್ನಲ್ ಬ್ಯಾರಿ ಕ್ಲೋಸ್ ಎಂಬ ದಳಪತಿಯನ್ನು ಆಸ್ಥಾನದಲ್ಲಿ ತಮ್ಮ ಕಡೆಯ ರೆಸಿಡೆಂಟನನ್ನಾಗಿ ನೇಮಿಸಲಾಯಿತು. ಈ ಹಿಂದೆ ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಕೈಕೆಳಗೆ ದಿವಾನರಾಗಿ ಕೆಲಸ ಮಾಡಿದ್ದ ಪೂರ್ಣಯ್ಯನವರನ್ನು ಸಂಸ್ಥಾನದ ದಿವಾನರನ್ನಾಗಿ ನೇಮಕ ಮಾಡಲಾಯಿತು.

1811 ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರರು ರೆಸಿಡೆಂಟರ ಅನುಮತಿಯೊಡನೆ ಖುದ್ದು ರಾಜ್ಯಭಾರ ವಹಿಸಿದರು. ಆ ವರುಷವೇ ಪೂರ್ಣಯ್ಯನವರನ್ನು ದಿವಾನಗಿರಿಯಿಂದ ನಿವೃತ್ತಿಗೊಳಿಸಲಾಯಿತು. ಮರು ವರುಷವೆ (1812 ಮಾರ್ಚ್ ತಿಂಗಳಲ್ಲಿ) ಪೂರ್ಣಯ್ಯನವರು ಮೃತರಾದರು.

ತಮ್ಮ ಖುದ್ದು ರಾಜ್ಯಭಾರದಲ್ಲಿ ಕೃಷ್ಣರಾಜ ಒಡೆಯರರು 18 ಕಛೇರಿಗಳನ್ನೂ (ಉದಾ: ದಿವಾನ್ ಕಛೇರಿ, ತೋಷೀಖಾನೆ, ಫಿರ್ಯಾದು ಕಛೇರಿ, ಜಿಲ್ಲಾ ಕಛೇರಿ,ಇತ್ಯಾದಿ), 125 ಗಡಿ(ತಾಲ್ಲೂಕು)ಗಳನ್ನೂ, ಅವುಗಳ ವಿಚಾರಣೆಗಳಿಗೋಸ್ಕರ 6 ಫೌಜುದಾರಿ (ತುಕಡಿ)ಗಳನ್ನೂ ಸ್ಥಾಪಿಸಿದರು.[1] ಉದಾಹರಣೆಗೆ, ಚಿತ್ರದುರ್ಗದ ತುಕಡಿಯು ತನಗೆ ಸೇರಿದ ಚಿತ್ರದುರ್ಗ, ಹಿರಿಯೂರು, ಅಣಜಿ, ದಾವಣಗೆರೆ, ಹೊಳಲ್ಕೆರೆ, ಹೊಸದುರ್ಗ, ಮಾಯಕೊಂಡ, ಕಣಕುಪ್ಪೆ, ಬಿಳಿಚೋಡು, ಮತ್ತೋಡು, ತಳಕು, ದೊಡ್ಡೇರಿ, ಮೊಳಕಾಲ್ಮುರು—ಒಟ್ಟು 13 ತಾಲ್ಲೂಕುಗಳ ಮೇಲೆ ಗಮನ ಹರಿಸಬೇಕಾಗಿದ್ದಿತು. ಪ್ರತಿ ತಾಲ್ಲೂಕಿಗೂ ಒಬ್ಬ ಸುಬೇದಾರ, ಒಬ್ಬ ಪೇಷ್ಕಾರ, ಇಬ್ಬರು ಶಿರಸ್ತೆದಾರರು ಮತ್ತು ಗುಮಾಸ್ತೆ, ಮುನ್ಷೀ ಹೀಗೆ ಹಲವಾರು ಅಧಿಕಾರಿಗಳನ್ನು ನೇಮಿಸಲಾಯಿತು. ಇವರೇ ಅಲ್ಲದೆ ಲೆಕ್ಕದವರು, ಓಲೆಕಾರರು, ಕಿಲ್ಲೆದಾರರು, ಠಾಣಾದಾರರು, ಗೌಡರು, ಶ್ಯಾನುಭೋಗರು, ಶೇಕದಾರರು, ಫೌಜುದಾರರು, ಶಿರಸ್ತೆದಾರರು ಮೊದಲಾದವರಿರುತ್ತಿದ್ದರು.

ಸಂಸ್ಥಾನದ ಆಡಳಿತ ಹಾಗೂ ಅಭಿವೃದ್ಧಿ ಕಾರ್ಯಗಳಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರರು ಅಪಾರ ಆಸಕ್ತಿ ವಹಿಸಿದರು. ಸಂಸ್ಥಾನದಲ್ಲಿ ಪ್ರವಾಸ ಕೈಗೊಂಡು ಪ್ರಜೆಗಳ ಸ್ಥಿತಿಗತಿಗಳನ್ನು ಕಂಡುಕೊಂಡರು. ನ್ಯಾಯ ವಿಮರ್ಶೆ, ರಕ್ಷಣಾ ವ್ಯವಸ್ಥೆ, ವಿದ್ಯಾ ಪ್ರಚಾರ ಕಾರ್ಯಗಳಿಗೆ ಇವರಿಂದ ಉತ್ತೇಜನ ದೊರೆಯಿತು.

ಮೈಸೂರು ಸಂಸ್ಥಾನದ ಆಡಳಿತದಲ್ಲಿ 1831 ರಲ್ಲಿ ಕೊಂಚ ಮಾರ್ಪಾಡಾಯಿತು. 1331 ರಿಂದ 1868 ರ ವರೆಗೂ ಸಂಸ್ಥಾನದ ಆಡಳಿತವು ಕೆಲವು ಕಾರಣಗಳಿಂದಾಗಿ ತಾತ್ಕಾಲಿಕವಾಗಿ ಬ್ರಿಟಿಷ್ ಕಮಿಷನ್ನಿನ ವಶಕ್ಕೆ ವರ್ಗಾಯಿಸಲಾಯಿತು. ಸಂಸ್ಥಾನದ ಆಡಳಿತವನ್ನು ನೋಡಿಕೊಳ್ಳುವುದಕ್ಕೋಸ್ಕರ ಜ್ಯೂನಿಯರ್ ಕಮಿಷನರ್ ಸಿ. ಎಮ್. ಲಷಿಂಗ್‌ಟನ್ ಮತ್ತು ಸೀನಿಯರ್ ಕಮಿಷನರ್ ಜಾನ್ ಬ್ರಿಗ್ಸ್ ಎಂಬ ಅಧಿಕಾರಿಗಳನ್ನು ನೇಮಕ ಮಾಡಲಾಯಿತು. ಮುಮ್ಮಡಿ ಕೃಷ್ಣರಾಜ ಒಡೆಯರರು ತಮ್ಮ ಅಧಿಕಾರವನ್ನು ಈ ಅವಧಿ

[1] ತುಕಡಿಗಳು :
1. ಅಷ್ಟಗ್ರಾಮದ ತುಕಡಿ (ತಾಲ್ಲೂಕುಗಳ ಸಂಖ್ಯೆ 28);
2. ಬೆಂಗಳೂರು ತುಕಡಿ (ತಾ. ಸಂ. 28);
3. ಚಿತ್ರದುರ್ಗದ ತುಕಡಿ (ತಾ. ಸಂ. 13);
4. ಮಂಜರಾಬಾದ್ ತುಕಡಿ (ತಾ. ಸಂ. 13);
5. ನಗರದ ತುಕಡಿ (ತಾ. ಸಂ. 24);
6. ಮದ್ದಗಿರಿ ತುಕಡಿ (ತಾ. ಸಂ. 19).

ಯಲ್ಲಿ ಕಮಿಷನ್ನಿಗೆ ವಹಿಸಿಕೊಟ್ಟಿದ್ದರು. ಪೂರ್ಣಯ್ಯನವರ ಕಾಲದಿಂದ ಸಂಸ್ಥಾನದ ದಿವಾನರಾಗಿ ಕೃಷ್ಣರಾಜ ಒಡೆಯರರ ಕೈಕೆಳಗೆ ಸೇವೆ ಸಲ್ಲಿಸಿದ ದಿವಾನರುಗಳಲ್ಲಿ ಒಂಬತ್ತನೆಯವರಾದ ವೆಂಕಟೇ ಅರಸು (ವೆಂಕಟರಮಣಯ್ಯ: 1827 ರಿಂದ 1831) ಅವರೂ ಸಹ ತಮ್ಮ ದಿವಾನಗಿರಿಯನ್ನು ತ್ಯಜಿಸಬೇಕಾಯಿತು.

ಮುಮ್ಮಡಿ ಕೃಷ್ಣರಾಜ ಒಡೆಯರರಿಗೆ ಸಂತಾನವಿಲ್ಲದ್ದರಿಂದ 1865 ರಲ್ಲಿ ತಮ್ಮ ಸಮೀಪ ಬಂಧುಗಳಿಂದ ಹುಡುಗನೊಬ್ಬನನ್ನು ದತ್ತು ತೆಗೆದುಕೊಂಡು, ಆ ಬಾಲಕನಿಗೆ ಚಾಮರಾಜ ಒಡೆಯರರೆಂದು ನಾಮಕರಣ ಮಾಡಿದರು. ಈ ಬಾಲಕನೇ ಮುಂದೆ ಹತ್ತನೆಯ ಚಾಮರಾಜ ಒಡೆಯರ್ ಎಂಬ ಹೆಸರಿನಿಂದ 1881 ರಿಂದ 1894 ರ ವರೆಗೆ ಸಂಸ್ಥಾನವನ್ನಾಳಿದುದು. 1868 ಮಾರ್ಚ್ 27 ರಂದು ಅನಾರೋಗ್ಯದ ದೆಸೆಯಿಂದ ಮುಮ್ಮಡಿ ಕೃಷ್ಣರಾಜ ಒಡೆಯರರು ತಮ್ಮ ಅರಮನೆಯಲ್ಲಿ (ರಾತ್ರಿ 11 ಘಂಟೆಯ ಸುಮಾರಿಗೆ) ಕಡೆಯುಸಿರೆಳೆದರು. ಅವರ ಮರಣದಿಂದ ಸಂಸ್ಥಾನದ ಪ್ರಜೆಗಳು ಮಾತ್ರವಲ್ಲದೆ ದೇಶಾದ್ಯಂತ ಜನರು ತಮ್ಮ ಸಂತಾಪ ವ್ಯಕ್ತಪಡಿಸಿದರು.

ಸ್ವತಃ ವಿದ್ಯಾಪ್ರೇಮಿಗಳೂ, ಪಂಡಿತರೂ, ಹಲವಾರು ಭಾಷೆಗಳಲ್ಲಿ ನುರಿತವರೂ, ಕಲಾಸಕ್ತರೂ ಆಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರರು ಸಂಸ್ಥಾನದ ಆಡಳಿತ ಕಾರ್ಯದಲ್ಲಿ ಅಪಾರ ಆಸಕ್ತಿ ವಹಿಸಿದಂತೆಯೇ ಧರ್ಮಕಾರ್ಯಗಳಲ್ಲಿಯೂ ವಹಿಸಿದರು. ಇವರ ಕಾಲದಲ್ಲಿ ನಿರ್ಮಾಣಗೊಂಡ ಗುಡಿ, ಗೋಪುರ, ತಟಾಕ, ಕಾಲುವೆ, ಸೇತುವೆ, ಮಂಟಪ, ಛತ್ರ, ಧರ್ಮಶಾಲೆಗಳಿಗೆ ಲೆಕ್ಕವಿಲ್ಲ. ಜೀರ್ಣೋದ್ಧಾರಗೊಂಡ ಮಂದಿರ, ಕೆರೆ-ಕಾಲುವೆಗಳಿಗೂ ಮಿತಿಯಿಲ್ಲ. ಅಗ್ರಹಾರಗಳನ್ನು ಕಟ್ಟಿಸಿ ದಾನಗಳನ್ನು ಕೊಟ್ಟರು. ಶೃಂಗೇರಿ ಮಠ, ಅಹೋಬಲ ಮಠ, ತೋತಾದ್ರಿ ಮಠ, ವ್ಯಾಸರಾಯ ಮಠ, ಉತ್ತರಾದಿ ಮಠ, ಕೂಡಲೀ ಮಠ, ಪುಷ್ಪಗಿರಿ ಮಠ, ಶಿವಗಂಗೆ ಮಠ, ಆವನೀ ಮಠಗಳಿಗೇ ಅಲ್ಲದೆ, ಉಡುಪಿಯ ಎಂಟು ಮಠಗಳಿಗೂ ಸಹ ಗ್ರಾಮ, ಭೂಮಿ, ವರ್ಷಾಸನ ಇವೇ ಮೊದಲಾದವುಗಳನ್ನು ಕೊಟ್ಟು ನಿಷ್ಕರ್ಷೆ ಮಾಡಿದರು. ತಮ್ಮ ಆಡಳಿತಾವಧಿಯಲ್ಲಿ ಚಿತ್ರದುರ್ಗದ ಶ್ರೀ ಬೃಹನ್ಮಠಕ್ಕೆ ಕೊಟ್ಟಿರುವ ನಿರೂಪ, ರಹದಾರಿ ಪತ್ರಗಳಿಂದಲೂ ಅವರು ಮಠದ ಬಗ್ಗೆ ಹೊಂದಿದ್ದ ಗೌರವಾದರಗಳು ವ್ಯಕ್ತಪಡುತ್ತವೆ.

ಮುಮ್ಮಡಿ ಕೃಷ್ಣರಾಜ ಒಡೆಯರರು ಮತ್ತು ಶ್ರೀ ಬೃಹನ್ಮಠ:

ಹಿಂದೆಯೇ ತಿಳಿಸಿರುವಂತೆ ಶ್ರೀ ಬೃಹನ್ಮಠವು ಹಲವಾರು ಸಂಸ್ಥಾನಗಳ ಮತ್ತು ಮಠಗಳ ಗೌರವಕ್ಕೆ ಪಾತ್ರವಾಗಿದ್ದಿತು. ಮುಮ್ಮಡಿ ಕೃಷ್ಣರಾಜ ಒಡೆಯರರು ಮೈಸೂರು ಸಂಸ್ಥಾನದ ಅರಸರಾದ ನಂತರ ಮಠದೊಂದಿಗೆ ತಮ್ಮ ಸಂಪರ್ಕವನ್ನಿರಿಸಿಕೊಂಡರಲ್ಲದೆ ಜಗದ್ಗುರುಗಳವರನ್ನು ಪೂಜ್ಯ ಭಾವದಿಂದ ಕಾಣಲಾರಂಭಿಸಿದರು. ಅವರು ಮಠಕ್ಕೆ ಕೊಟ್ಟಿರುವ ನಿರೂಪ ಇತ್ಯಾದಿಗಳಲ್ಲಿ ಈ ಮನೋಭಾವ ವ್ಯಕ್ತಪಟ್ಟಿದೆ.

ತಮ್ಮ ಆಡಳಿತಾವಧಿಯಲ್ಲಿ ಮುಮ್ಮಡಿ ಕೃಷ್ಣರಾಜರು ಮತ್ತು ಅವರ ಅಧಿಕಾರಸ್ತರು ಸುಮಾರು 60 ನಿರೂಪಗಳನ್ನು ಮಠಕ್ಕೆ ಸಂಬಂಧಿಸಿದಂತೆ ಕೊಟ್ಟಿದ್ದಾರೆ.[2] ಪ್ರತಿಯೊಂದು ನಿರೂಪವೂ ಶ್ರೀ ಬೃಹನ್ಮಠದ ಹಿರಿಮೆಯನ್ನು ಸಾರುವ ಮತ್ತು ಮುಮ್ಮಡಿ ಕೃಷ್ಣರಾಜರವರ ಭಕ್ತಿಯನ್ನು ತೋರುವ ಸಾಧನಗಳಾಗಿವೆ. ಎಲ್ಲಕ್ಕೂ ಮುಖ್ಯವಾಗಿ ಈ ಲೇಖನಗಳಿಂದ ಅವರ ಕಾಲದ ಆಡಳಿತ ಪದ್ಧತಿಯ ಬಗ್ಗೆ, ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗಳ ಬಗ್ಗೆ ತಿಳಿಯಲು ಸಾಧ್ಯವಾಗುತ್ತದೆ.

ನಿರೂಪಗಳಲ್ಲಿ ಶ್ರೀ ಬೃಹನ್ಮಠದ ಜಗದ್ಗುರುಗಳವರಿಗೆ ಅನೂಚಾನವಾಗಿ ಬಂದ ಬಿರುದು ಬಾವಲಿಗಳು, ಚಿತ್ರದುರ್ಗದಲ್ಲಿ ಆಗ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದವರು, ಮಠಕ್ಕೆ ಮಾಸಿಕ ಹಾಗೂ ವಾರ್ಷಿಕ ಕಾಣಿಕೆ (ಧನಸಹಾಯ)ಗಳನ್ನು ಸರ್ಕಾರ ಪೂರೈಸುತ್ತಿದ್ದುದು, ಅರಮನೆ ಸೀಮೆ ಗಡಿಗಳಿಂದ ಹಿಂದಿನಿಂದಲೂ ಮಠಕ್ಕೆ ದವಸವನ್ನು ಒದಗಿಸುತ್ತಿದ್ದ ಸಂಪ್ರದಾಯ, ಅರಮನೆ-ಗುರುಮನೆಗಳ ನಡುವಣ ಮಧುರ ಬಾಂಧವ್ಯ ಹಾಗೂ ಸ್ವಾಮಿಗಳ ಪರವಾಗಿ ಕಾರ್ಯ ನಿರ್ವಹಿಸುತ್ತಿದ್ದ ಚರಮೂರ್ತಿಗಳು, ಮಠದ ಕೀರ್ತಿ- ಗೌರವಗಳನ್ನು ಕಂಡು, ಕರುಬಿ ಇತರ ಮಠಗಳವರು ವ್ಯಕ್ತಪಡಿಸುತ್ತಿದ್ದ ಅಸಹನೆ, ದ್ವೇಷ ಇತ್ಯಾದಿಗಳು ಮತ್ತು ಅಂತಹವುಗಳನ್ನು ಖಂಡಿಸಿ ಮಠದ ಪರವಾಗಿ ಸರ್ಕಾರದಿಂದ ಹೊರಡುತ್ತಿದ್ದ ಆಜ್ಞೆ, ವಿರಕ್ತ ಮಠಗಳವರು ಸ್ವತಂತ್ರವಾಗಿ ವರ್ತಿಸಲು ಪ್ರಯತ್ನಿಸುತ್ತಿದ್ದುದು, ಮಠಕ್ಕೆ ಮಾತ್ರವಲ್ಲದೆ ಅದರ ಆಶ್ರಯದಲ್ಲಿದ್ದ ದೇವಾಲಯಗಳಿಗೂ ವೆಚ್ಚ ನಿರ್ವಹಣೆಯನ್ನು ಸರ್ಕಾರ ಕೈಗೊಳ್ಳುತ್ತಿದ್ದುದು, ಪೂರ್ವದಲ್ಲಿ ಮಠಕ್ಕೆ ನಡೆಯುತ್ತಿದ್ದ ಕೆಲವು ಗ್ರಾಮಗಳ (ಇನಾಂ ಗ್ರಾಮಗಳ) ವಿವರಗಳು, ಸ್ವಾಮಿಗಳಿಗೆ ಧರ್ಮ, ಮತಗಳ ಬಗ್ಗೆ ಇದ್ದ ನಿರ್ಣಯಾಧಿಕಾರ— ಹೀಗೆ ನೂರಾರು ವಿಷಯಗಳನ್ನು ವ್ಯಕ್ತಪಡಿಸಲಾಗಿದೆ. ವ್ಯವಸ್ಥಿತವಾದ ಅಧ್ಯಯನದಿಂದ ಇವುಗಳನ್ನು ಸ್ಪಷ್ಟವಾಗಿ ಅರಿತುಕೊಳ್ಳಲು ಮತ್ತು ಖಚಿತವಾಗಿ ನಿರೂಪಿಸಲು ಸಾಧ್ಯವಾಗುತ್ತದೆ. ನಿರೂಪಗಳನ್ನು ಕಾಲಾನುಕ್ರಮಣಿಕೆಯ ಪ್ರಕಾರ ಜೋಡಿಸದೆ ಹೋದಲ್ಲಿ ನಿರ್ದಿಷ್ಟ ವಿಷಯಗಳನ್ನು ತಿಳಿಸುವ ನಿರೂಪಗಳ ಏರುಪೇರಿನಿಂದಾಗಿ ಅಭ್ಯಾಸಿಗಳಿಗೆ ತೊಡಕುಂಟಾಗುತ್ತದೆ.

ಶ್ರೀ ಬೃಹನ್ಮಠಕ್ಕೆ ಮುಮ್ಮಡಿ ಕೃಷ್ಣರಾಜ ಒಡೆಯರರು ನೀಡಿರುವ ನಿರೂಪಗಳಲ್ಲಿ 1815ರಲ್ಲಿ ಕೊಟ್ಟ ಎರಡು ನಿರೂಪಗಳು ಮೊದಲನೆಯವು.[3] ಮೊದಲನೆಯ ನಿರೂಪವು ಶ್ರೀ ಬೃಹನ್ಮಠದ ಖರ್ಚಿಗೆ ಸರ್ಕಾರದಿಂದ ಸಂದಾಯವಾದ ಹಣವನ್ನು ಕುರಿತು ಮಠಕ್ಕೆ ತಿಳಿವಳಿಕೆ ನೀಡಿ ಬರೆಯಲಾಗಿದೆ. ನಿರೂಪದಲ್ಲಿ, ಶ್ರೀ ಬೃಹನ್ಮಠಕ್ಕೆ (....ಶ್ರೀಮನ್ಮಹಾ ನಿರಂಜನ ಮುರುಘರಾಜೇಂದ್ರ ಸ್ವಾಮಿಗಳವರ ಮಠಕ್ಕೆ)ಸರ್ಕಾರದಿಂದ ಧನ ಸಹಾಯ ಮಂಜೂರಾಗಬೇಕೆಂದು ಗವಿ

[2] ಈ ಎಲ್ಲಾ ನಿರೂಪಗಳೂ ಶ್ರೀ ಬೃಹನ್ಮಠದ ರಹದಾರಿ ಪತ್ರಗಳು ಎಂಬ ಪುಸ್ತಕದಲ್ಲಿ ಪ್ರಕಟಗೊಂಡಿವೆ.

[3] ರಹದಾರಿ ಪತ್ರಗಳು, ನಿರೂಪಗಳು (25-9-1815), ಪು.31,46

ಮಠದ ಚರಂತಿಗಳು ಮಾಡಿಕೊಂಡ ಬಿನ್ನಹದ ಮೇರೆಗೆ, ಮಠಕ್ಕೆ ತಿಂಗಳು ಒಂದಕ್ಕೆ 30 ಕಂಠೀರಾಯಿ ವರಹಗಳಂತೆ ವರುಷ ಒಂದಕ್ಕೆ ಒಟ್ಟು 360 ವರಹಗಳನ್ನು ಒಪ್ಪಿಸಿಕೊಡುವಂತೆ ಆಜ್ಞಾಪಿಸಲಾಗಿದೆ. ತಿಂಗಳಿಗೊಮ್ಮೆಯಾಗಲಿ ಅಥವಾ ಎಲ್ಲಾ ವರಹಗಳನ್ನೂ ವರುಷಕ್ಕೊಮ್ಮೆಯಾಗಲಿ ಮಠಕ್ಕೆ ಕೊಡುವಂತೆ ನಿರೂಪದ ಮೂಲಕ ನಿರ್ದೇಶಿಸಲಾಗಿದೆ. ನಿರೂಪದಲ್ಲಿ ಕಡೆಯ ನಾಲ್ಕು ಸಾಲುಗಳನ್ನು ಸ್ವತಃ ಮುಮ್ಮಡಿ ಕೃಷ್ಣರಾಜ ಒಡೆಯರವರೇ ಬರೆದಿದ್ದು, 'ಶ್ರೀಕೃಷ್ಣ' ಎಂಬ ಅಂಕಿತವನ್ನಾಕಿರುವರು.

ಈ ನಿರೂಪವು ಶ್ರೀ ಬೃಹನ್ಮಠವನ್ನು ಕೃಷ್ಣರಾಜ ಒಡೆಯರವರು ಪೋಷಿಸುತ್ತಿದ್ದರೆಂಬುದಕ್ಕೆ ಆಧಾರವಾಗಿದೆ. ಎಷ್ಟು ಕಾಲದಿಂದ ಮಠವನ್ನು ಪೋಷಿಸಲಾಗುತ್ತಿದ್ದಿತೆಂಬುದಕ್ಕೆ ದಾಖಲೆ ಇಲ್ಲ. ಆದರೆ ರಾಜಾಶ್ರಯ ಮಾತ್ರ ಹಿಂದಿನಿಂದಲೂ ಇದ್ದು, ಕೃಷ್ಣರಾಜ ಒಡೆಯರರು ಅದನ್ನು ಮುಂದುವರೆಸಿಕೊಂಡು ಬಂದರೆಂದು ಹೇಳಬಹುದು.

ಎರಡನೆಯ ನಿರೂಪವು, ಕೇವಲ ರಾಜಾಶ್ರಯದಿಂದಲ್ಲದೆ ಸೀಮೆಗಡಿಗಳ ಗ್ರಾಮಗಳಿಂದ ಪೂರ್ವದಿಂದಲೂ ಮಠಕ್ಕೆ ನಡೆದು ಬರುತ್ತಿದ್ದ ದಾಸೋಹದ ಬಗ್ಗೆ ಬೆಳಕು ಚೆಲ್ಲುತ್ತದೆ; ಜನಸಾಮಾನ್ಯರ ಸಹಕಾರದ ಮೇಲೆಯೇ ಮಠಮಾನ್ಯಗಳು ಬೆಳೆದುಬಂದುವೆಂಬುದನ್ನು ಸ್ಪಷ್ಟಪಡಿಸುತ್ತದೆ. ಈ ಹಿಂದೆಯೇ ತಿಳಿಸಿರುವಂತೆ, ಮುಮ್ಮಡಿ ಕೃಷ್ಣರಾಜ ಒಡೆಯರರು ಮೈಸೂರು ಸಂಸ್ಥಾನದ ಅರಸರಾಗಿ ನೇಮಕಗೊಳ್ಳುವ ವೇಳೆಗೆ ಸಂಸ್ಥಾನವನ್ನು 125 ಗಡಿ (ತಾಲ್ಲೂಕು)ಗಳನ್ನಾಗಿ ವಿಂಗಡಿಸಿದ್ದರು.

ಚಿತ್ರದುರ್ಗ ತುಕಡಿಯನ್ನು 13 ತಾಲ್ಲೂಕುಗಳನ್ನಾಗಿ ವಿಭಾಗಿಸಲಾಯಿತು. ಈ ಎರಡನೆಯ ನಿರೂಪದಲ್ಲಿ ಚಿತ್ರದುರ್ಗದ ಎಲ್ಲಾ (ಹದಿಮೂರು) ತಾಲ್ಲೂಕುಗಳ ಅಮಿಲ ಕಿಲ್ಲೆದಾರರಿಗೆ ನಿರೂಪ ಬರೆಯಿಸಿ ಕಳುಹಿಸಿದ್ದು, ಈ ತಾಲ್ಲೂಕುಗಳಿಂದ ಚಿತ್ರದುರ್ಗದ ಶ್ರೀ ನಿರಂಜನ ಮುರಿಗಾರಾಜೇಂದ್ರ ಮಠಕ್ಕೆ ದಾಸೋಹಕ್ಕೋಸ್ಕರ ಸಂವತ್ಸರ ಒಂದಕ್ಕೆ ಐದು ಸೇರು ದವಸವನ್ನು ಕೊಡುವಂತೆ ವ್ಯವಸ್ಥೆ ಮಾಡಲು ಆಜ್ಞೆ ಮಾಡಲಾಗಿದ್ದು, ಆ ದವಸವನ್ನು ಮಠಕ್ಕೆ ಸಾಗಿಸುವಾಗ ಸುಂಕವನ್ನು ವಸೂಲು ಮಾಡಕೂಡದೆಂತಲೂ ತಿಳಿಸಲಾಗಿದೆ. ನಿರೂಪದ ಕಡೆಯಲ್ಲಿ 'ಶ್ರೀಕೃಷ್ಣ' ಎಂಬ ಅಂಕಿತವಿದೆ.

1816ರಲ್ಲಿ ಕೊಡಲಾದ ನಿರೂಪವು ಮಠಗಳ ನಡುವಣ ಭೇದ ಭಾವಗಳನ್ನು ವ್ಯಕ್ತಪಡಿಸುವ ಸಾಧನವಾಗಿದೆ.[4] ಶ್ರೀ ಬೃಹನ್ಮಠದ ಸ್ವಾಮಿಗಳು (ಆಗ ಪೀಠಾಧಿಕಾರಿಗಳಾಗಿದ್ದವರು ನೈಘಂಟಿನ ಸಿದ್ಧ[illegible]ಸನ ಸ್ವಾಮಿಗಳು, ಪರಂಪರೆಯಲ್ಲಿ ಹದಿನೇಳನೆಯವರು; ಕಾಲ: ಸು. 1800–1820) ತಮ್ಮ ಭಕ್ತಜನ ಸಹಿತವಾಗಿ ಸಂಚಾರ ಕೈಗೊಂಡಲ್ಲಿ ಶೃಂಗೇರಿ ಮಠಕ್ಕೆ ಸಂಬಂಧಿಸಿದ ಕೆಲವರು ಅವರಿಗೆ ತೊಂದರೆ ಕೊಡಲು ಪ್ರಯತ್ನಿಸಿದ್ದು,[5] ಅದನ್ನು ತಡೆಗಟ್ಟುವಂತೆ ಸೀಮೆಗಡಿಗಳ ಅಮಿಲ್ ಕಿಲ್ಲೆದಾರರಿಗೆ ಇದರಲ್ಲಿ ಸೂಚನೆ ನೀಡಲಾಗಿದೆ; 'ಶ್ರೀಕೃಷ್ಣ' ಎಂದು ಸಹಿ ಮಾಡಲಾಗಿದೆ.

ಅದೇ ವರ್ಷ ಫೆಬ್ರವರಿಯಿಂದ ಏಪ್ರಿಲ್ ತಿಂಗಳುಗಳ ಅವಧಿಯಲ್ಲಿ ಕೊಟ್ಟಿರುವ ನಿರೂಪಗಳ ಸಂಖ್ಯೆ ಹನ್ನೆರಡು.[6] ಶ್ರೀ ಬೃಹನ್ಮಠದ ಜಗದ್ಗುರುಗಳವರು ತಮ್ಮ ಸಕಲ ವಿನಿಯೋಗ ಸಹಿತ ಮಾಮೂಲು ಪ್ರಕಾರ ಸಂಚಾರ ಕೈಗೊಂಡಾಗ ಇತರ ಮಠಗಳವರು ಅವರ ಸಂಚಾರ ಕಾರ್ಯಕ್ಕೆ ಅಡ್ಡಿಪಡಿಸದಂತೆ ನೋಡಿಕೊಳ್ಳಬೇಕೆಂದು ಗಡಿನಾಡುಗಳ ನಾಡಗೌಡರು, ಶ್ಯಾನುಭೋಗರು, ಗೌಡರುಗಳಿಗೆ ಈ ನಿರೂಪಗಳಲ್ಲಿ ಎಚ್ಚರಿಸಲಾಗಿದೆ. ಸ್ವಾಮಿಗಳು ಸಂಚಾರ ಕೈಗೊಂಡ ಪ್ರದೇಶಗಳು ಈ ನಿರೂಪಗಳಲ್ಲಿ ಉಕ್ತಗೊಂಡಿವೆ. ಚಿತ್ರದುರ್ಗ ಮಠದ ಗುರುಗಳು ಮತ್ತು ಅವರು ಪ್ರದರ್ಶಿಸುತ್ತಿದ್ದ ಬಿರುದುಗಳ ಬಗ್ಗೆ ಇತರ ಮಠಗಳವರಲ್ಲಿ ಇದ್ದ ದ್ವೇಷಾಸೂಯೆಗಳೂ ಇವುಗಳಿಂದ ವ್ಯಕ್ತಪಡುತ್ತವೆ. ನಿರೂಪಗಳು ತಿಳಿಸುವಂತೆ, ಸ್ವಾಮಿಗಳು ಕಣಕುಪ್ಪೆ ತಾಲ್ಲೂಕಿನ ಜಗಲೂರು, ಮುದಕದಹಳ್ಳಿ, ಮಲ್ಲನಹೊಳೆ, ನಿಜಗೂರು, ಹಳುವದಂಡಿ; ದಾವಣಗೆರೆ ತಾಲ್ಲೂಕಿನ ಬೇತೂರು, ಅವರಗೆರೆ, ಹೊನ್ನೂರು, ಆನಗೋಡು, ಹದಡಿ; ಹೊಳಲ್ಕೆರೆ ತಾಲ್ಲೂಕಿನ ಗ್ರಾಮಗಳು; ಹೊಸದುರ್ಗ ತಾಲ್ಲೂಕಿನ ಗ್ರಾಮಗಳು (ಚಿತ್ರದುರ್ಗ ತುಕಡಿ); ಹರಿಹರ ತಾಲ್ಲೂಕಿನ ಗ್ರಾಮಗಳು (ನಗರ ತುಕಡಿ), ಯಕ್ಕದ ತಾಲ್ಲೂಕಿನ ಗ್ರಾಮಗಳು (ತುಕಡಿ?); ಬಾಣಾವಾರ ತಾಲ್ಲೂಕಿನ ಗ್ರಾಮಗಳು (ಮಂಜರಾಬಾದು ತುಕಡಿ); ಹರಪನಹಳ್ಳಿ ತಾಲ್ಲೂಕಿನ ಗ್ರಾಮಗಳು (ತುಕಡಿ ?); ಕನ್ನಂಬಾಡಿ ತಾಲ್ಲೂಕಿನ ಗ್ರಾಮಗಳು (ತುಕಡಿ ?); ಅತ್ತಿಗುಪ್ಪೆ ತಾಲ್ಲೂಕು, ಕಿಕ್ಕೇರಿ ತಾಲ್ಲೂಕು ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳ ಗ್ರಾಮಗಳು (ಅಷ್ಟ ಗ್ರಾಮದ ತುಕಡಿ) ಇಷ್ಟು ಗ್ರಾಮಗಳಲ್ಲಿ ಪ್ರವಾಸ ಕೈಗೊಂಡಿದ್ದರು. ಗ್ರಾಮಾನು ಗ್ರಾಮಗಳ ಎಲ್ಲಾ ಶ್ಯಾನುಭೋಗ, ಗೌಡರೂ ಸ್ವಾಮಿಗಳನ್ನು ಸ್ವಾಗತಿಸಿ, ಗೌರವಿಸಿ, ಅವರಿಗೆ ತೊಂದರೆಯಾಗದಂತೆ ಕಳುಹಿಸಿಕೊಡಬೇಕೆಂಬುದೇ ಈ ಮೇಲಿನ ನಿರೂಪಗಳ ಸಾರ.

---

4 ಅದೇ, ನಿರೂಪ (13–1–1816), ಪು. 3

5 ಇದು ಅಂದಿನ ಸಮಾಜದ ವಿಷಮ ಪರಿಸ್ಥಿತಿಯನ್ನು ಪ್ರತಿಫಲನಗೊಳಿಸುತ್ತದೆಯಲ್ಲದೆ, ಇಂದಿನ ವಿಚಾರ ಸರಣಿಗೆ ಅನ್ವಯಿಸುವುದಿಲ್ಲ.

6
1. ರಹದಾರಿ ಪತ್ರಗಳು, ನಿರೂಪ (17–2–1816), ಪು. 18
2. ,, ,, (22–2–1816), ಪು. 19
3. ,, ,, (25–2–1816), ಪು. 20
4. ,, ,, (9–4–1816), ಪು. 21
5. ,, ,, (10–4–1816), ಪು. 22
6. ,, ,, (11–4–1816), ಪು. 23
7. ,, ,, (12–4–1816), ಪು. 24
8. ,, ,, (13–4–1816), ಪು. 23
9. ,, ,, (17–4–1816), ಪು. 26
10. ,, ,, (17–4–1816), ಪು. 28
11. ,, ,, (17–4–1816), ಪು. 29
12. ,, ,, (20–4–1816), ಪು. 27

ಅದೇ ವರುಷ ಜೂನ್ ತಿಂಗಳಲ್ಲಿ ಕೊಟ್ಟಿರುವ ನಿರೂಪದಲ್ಲಿ[7], ಶ್ರೀ ಬೃಹನ್ಮಠಕ್ಕೆ ಆ ವರೆವಿಗೂ ತಿಂಗಳಿಗೆ 30 ಕಂಠೀರಾಯಿ ವರಹಗಳನ್ನು (ವರುಷಕ್ಕೆ 360) ವೆಚ್ಚಕ್ಕೆ ನೀಡುತ್ತಿದ್ದು, ಅದು ಸಾಲದೆಂದು ತಿಳಿದುದರಿಂದ ತಿಂಗಳಿಗೆ 120 ಕಂಠೀರಾಯಿ ವರಹಗಳನ್ನು ಅಂದರೆ ವರುಷಕ್ಕೆ ಒಟ್ಟು 1440 ವರಹಗಳನ್ನು ಮಠಕ್ಕೆ ಕೊಡುವಂತೆ ಅಜ್ಞಾಪಿಸಲಾಗಿದೆ. ಮುಮ್ಮಡಿ ಕೃಷ್ಣರಾಜ ಒಡೆಯರವರೇ ಆರು ಪಂಙ್ತಿಗಳನ್ನು ಬರೆದು ಕಡೆಯಲ್ಲಿ 'ಶ್ರೀಕೃಷ್ಣ' ಎಂದು ಅಂಕಿತವನ್ನಾಕಿರುವರು. ನಿರೂಪದ ಮೇಲ್ಭಾಗದಲ್ಲಿ ಫಾರಸೀ ಅಕ್ಷರದಲ್ಲಿ ಬರೆಯಲಾಗಿದೆ.

ಅದೇ ತಿಂಗಳಿನಲ್ಲಿ ಕೊಟ್ಟ ಎರಡು ನಿರೂಪಗಳಲ್ಲಿ[8] ಶ್ರೀಬೃಹನ್ಮಠಕ್ಕೆ ಚಿತ್ರದುರ್ಗ ಸೀಮೆಯ ವರ್ತಕರು ಮತ್ತು ಜನಸಾಮಾನ್ಯರು (ಭಕ್ತರು) ಸಹಾಯ ಮಾಡುತ್ತಿದ್ದ ಬಗ್ಗೆ ಉಲ್ಲೇಖವಿದೆ. 'ಶ್ರೀಕೃಷ್ಣ' ಎಂಬ ಅಂಕಿತವನ್ನು ಹೊಂದಿರುವ ಈ ನಿರೂಪಗಳಲ್ಲಿ, ವರ್ತಕರು ಮುಂತಾದವರು ಮಠಕ್ಕೆ ಕೊಡುವ ಕಾಣಿಕೆ ಇತ್ಯಾದಿಗಳಿಗೆ ಸರ್ಕಾರದ ಅಮಿಲ ಕಿಲ್ಲೆದಾರರು ಯಾವ ರೀತಿ ಯಲ್ಲೂ ಅಡ್ಡಿ ಮಾಡಕೂಡದೆಂದು ತಿಳಿಸಲಾಗಿದೆ. ಇನ್ನೊಂದು ನಿರೂಪದಲ್ಲಿ ದಾಸೋಹದ ಬಗ್ಗೆ ಮಠದ ಕಡೆಯವರು ಗ್ರಾಮಾಂತರಗಳಿಂದ ಭಿಕ್ಷಾ ಮಾಡಿಕೊಂಡ ದವಸವನ್ನು ಮಠಕ್ಕೆ ತರುವಲ್ಲಿ ಅಮಿಲ ಕಿಲ್ಲೆದಾರರು ಸುಂಕವನ್ನು ತೆಗೆದುಕೊಳ್ಳಕೂಡದೆಂದು ಸೂಚಿಸಲಾಗಿದೆ.

ಅದೇ ತಿಂಗಳಿನಲ್ಲಿ ಕೊಟ್ಟಿರುವ ನಿರೂಪವು [9] ಶ್ರೀ ಬೃಹನ್ಮಠದ ಪರಂಪರೆಯನ್ನೂ, ಜಗದ್ಗುರುಗಳವರಿಗೆ ಅನೂಚಾನವಾಗಿ ಬಂದ ಬಿರುದು ಬಾವಲಿಗಳನ್ನೂ, ಅರಮನೆ-ಗುರುಮನೆಗಳ ನಡುವಣ ಸಂಬಂಧವನ್ನೂ, ಮುಮ್ಮಡಿ ಕೃಷ್ಣರಾಜ ಒಡೆಯರರು ಸ್ವಾಮಿಗಳ ಬಗ್ಗೆ ಇರಿಸಿಕೊಂಡಿದ್ದ ಪೂಜ್ಯಭಾವವನ್ನೂ, ಸ್ವಾಮಿಗಳ ಪರವಾಗಿ ಕಾರ್ಯ ನಿರ್ವಹಿಸುತ್ತಿದ್ದ ಖಾಸಾ ಚರಮೂರ್ತಿಗಳ ಬಗ್ಗೆಯೂ ವಿವರಣೆ ನೀಡುವಂತಹುದಾಗಿದೆ. ಸ್ವಾಮಿಗಳು ದಾಸೋಹದ ವಪ್ಪತ್ತಿನ ಚರಮೂರ್ತಿ ನೀಲಕಂಠಪ್ಪ ಮತ್ತು ಕೂಡಲಿ ಚರಮೂರ್ತಿ ಸೋಮಶೇಖರಶಾಸ್ತ್ರಿ ಈ ಇಬ್ಬರೊಡನೆ ಮುಮ್ಮಡಿ ಕೃಷ್ಣರಾಜ ಒಡೆಯರರಿಗೆ ಆಶೀರ್ವಾದ ಪತ್ರಿಕೆ, ಫಲ ಮಂತಾಕ್ಷತೆ, ಛತ್ರ ಚಾಮರ, ಪಾಲಕೀವಸ್ತ್ರ ಇವೇ ಮೊದಲಾದುವುಗಳನ್ನು ಕೊಟ್ಟು ಕಳುಹಿಸಿದಾಗ ಅವುಗಳನ್ನು ಅವರು ಭಕ್ತಿಯಿಂದ ಸ್ವೀಕರಿಸಿ, ಅದಕ್ಕೆ ಬದಲಾಗಿ ವಜ್ರ, ಮುತ್ತು, ಬೆಲೆ ಬಾಳುವ ವಸ್ತ್ರಗಳನ್ನಲ್ಲದೆ, ಒಂದು ಸಾವಿರ ಕಂಠೀರಾಯಿ ವರಹದ ಥೈಲಿ, ಛತ್ರಿ, ಪಾಲಕೀಗಳನ್ನೂ, ಆನೆ ಕುದುರೆ ಒಂಟೆಗಳನ್ನೂ ಅರಮನೆ ಊಳಿಗದ ಮಾದಯ್ಯ, ವಿರಕ್ತ ದೇಶಿಕೇಂದ್ರರು, ಗವಿಮಠದ ಅರುಣಾಚಲದ ಸಿದ್ಧಲಿಂಗಪ್ಪ, ರಾಮಲಿಂಗಯ್ಯ ಇವರೊಡನೆ ಕಳುಹಿಸಿ ಕೊಡುತ್ತಾರೆ. ಸಂಗಡ ರಹದಾರಿ ನಿರೂಪಗಳನ್ನೂ, ಬಿನ್ನಹ ಪತ್ರವನ್ನೂ ಕೊಟ್ಟು ಕಳುಹಿಸುತ್ತಾರೆ. 'ಮನಶಿನಲ್ಲಿ ಚೆನ್ನಾಗಿ ಅಂಗೀಕರಿಸಿ ಶೀಘ್ರದಲ್ಲಿ ಮೈಸೂರಿಗೆ ದಯಮಾಡಿಸುವ ಬಗ್ಗೆ ಮುಂಚಿತವಾಗಿ ಲೇಖನಗೊಳಿಸಿ ಕಳುಹಿಸಿ ಕೊಡುವಂತೆ ಮಾಡಿಸಬೇಕು' ಎಂದು ಎರಡೆರಡು ಬಾರಿ ಪ್ರಾರ್ಥಿಸುತ್ತಾರೆ; 'ತಾವು ದಯಮಾಡಿಸಿದಲ್ಲಿ ಮನಸ್ಸಿನ ಸಂತೋಷದಂತೆ ನಡೆದುಕೊಳ್ಳಲಾದೀತು' ಎಂತಲೂ ಸೂಚಿಸುತ್ತಾರೆ. ಮುಮ್ಮಡಿ ಕೃಷ್ಣರಾಜರು ಸ್ವಾಮಿಗಳ ಹಿರಿಮೆಯನ್ನರಿತು ಅವರನ್ನು ಮೈಸೂರಿಗೆ ಆಹ್ವಾನಿಸಲು ಬಯಸಿದ್ದರೆಂದು ಈ ನಿರೂಪದಿಂದ ಗೊತ್ತಾಗುತ್ತದೆ. ನಿರೂಪದ ಕಡೆಯಲ್ಲಿ 'ಶ್ರೀಕೃಷ್ಣ' ಎಂದು ಸಹಿ ಮಾಡಿರುವರು.

ಅದೇ ತಿಂಗಳಿನಲ್ಲಿ ಕೊಟ್ಟಿರುವ ಇನ್ನೊಂದು ನಿರೂಪವು[10] ಚಿತ್ರದುರ್ಗದ ಸೀಮೆಗಡಿಗಳ ಅಮಿಲ ಕಿಲ್ಲೆದಾರರಿಗೆ ಕೊಟ್ಟಿರುವುದಾಗಿದೆ. ಮೈಸೂರಿನಿಂದ ಚಿತ್ರದುರ್ಗಕ್ಕೆ ಹೋಗುವಲ್ಲಿ ಮತ್ತು ಚಿತ್ರದುರ್ಗದಿಂದ ಮೈಸೂರಿಗೆ ಹಿಂತಿರುಗಿ ಬರುವಲ್ಲಿ ಆನೆ, ಒಂಟೆ, ಕುದುರೆಗಳಿಗೆ ಆಯಾ ತಾಲ್ಲೂಕುಗಳ ಅಮಿಲ ಕಿಲ್ಲೆದಾರರು ತಿಂಡಿ, ಮೇವು ಇತ್ಯಾದಿಗಳನ್ನು ಒದಗಿಸುವಂತೆ, ಆ ಬಗ್ಗೆ ರಸೀದಿ ತೆಗೆದುಕೊಳ್ಳುವಂತೆ ಅದರಲ್ಲಿ ನಿರ್ದೇಶಿಸಲಾಗಿದೆ. ಮೈಸೂರಿನಿಂದ ಚಿತ್ರದುರ್ಗದ ಶ್ರೀ ಬೃಹನ್ಮಠಕ್ಕೆ ಯಾರನ್ನು ಕರೆತರಲಾಯಿತೆಂಬುದಕ್ಕೆ ಈ ನಿರೂಪದಲ್ಲಿ ವಿವರವಿಲ್ಲ. ಬಹುಶಃ ಜಗದ್ಗುರುಗಳ ಪರವಾಗಿ ಮಠದ ಚರಮೂರ್ತಿ ನೀಲಕಂಠ ದೇಶಿಕೇಂದ್ರರು ಮುಮ್ಮಡಿ ಕೃಷ್ಣರಾಜರನ್ನು ಸಂದರ್ಶಿಸಲು ಮೈಸೂರಿಗೆ ಹೋದಂತೆ ತೋರುತ್ತದೆ. ಏಕೆಂದರೆ 16 ಆಗಸ್ಟ್ 1816 ರ ನಿರೂಪವೊಂದರಲ್ಲಿ ನೀಲಕಂಠ ದೇಶಿಕೇಂದ್ರರು ಮೈಸೂರಿನಿಂದ ಚಿತ್ರದುರ್ಗಕ್ಕೆ ಹಿಂತಿರುಗುವ ಬಗ್ಗೆ ವಿವರವಿದೆ. ಜೂನ್ ತಿಂಗಳಲ್ಲಿ ಕೊಟ್ಟ ಈ ಮೇಲ್ಕಂಡ ನಿರೂಪದಲ್ಲಿ ಆನೆ, ಒಂಟೆ, ಕುದುರೆ ಇವುಗಳಿಗೆ ನೀಡುತ್ತಿದ್ದ ಆಹಾರ, ಆನೆಗಳಿಗೆ ಇಟ್ಟಿದ್ದ ಚಿತ್ರವತಿ, ಸುಲೋಚನ ಎಂಬ ಹೆಸರುಗಳು, ಈ ಪ್ರಾಣಿಗಳನ್ನು ಸಲಹುತ್ತಿದ್ದ ರೀತಿ ಇವೇ ಮೊದಲಾದ ಸಂಗತಿಗಳು ತಿಳಿಯುತ್ತವೆ. ನಿರೂಪದ ಕಡೆಯಲ್ಲಿ ಶ್ರೀ ಕೃಷ್ಣ' ಎಂದು ಬರೆಯಲಾಗಿದೆ.

ಮೇಲೆಯೇ ತಿಳಿಸಿದಂತೆ ಚಿತ್ರದುರ್ಗದ ಅಮಿಲ ಕಿಲ್ಲೆದಾರರಿಗೆ ಬರೆದು ಕಳುಹಿಸಿದ ನಿರೂಪದಲ್ಲಿ[11] ಮೈಸೂರಿನಿಂದ ಶ್ರೀ ಬೃಹನ್ಮಠದ ಚರಮೂರ್ತಿ ನೀಲಕಂಠ ದೇಶಿಕೇಂದ್ರರು ಚಿತ್ರದುರ್ಗಕ್ಕೆ ಹಿಂತಿರುಗುವ ಬಗ್ಗೆ ತಿಳಿಸಲಾಗಿದೆ. ದೇಶಿಕೇಂದ್ರರ ಜೊತೆ ಪ್ರಯಾಣ ಮಾಡುವ ಜನರೊಂದಿಗಿರುವ ಎತ್ತು, ಕುದುರೆಗಳ ಮೇವಿಗೆ ಹುಲ್ಲು, ಹುರುಳಿ ಒದಗಿಸಿ ಕೊಡುವಂತೆ ಮತ್ತು ರಸೀದಿ ತೆಗೆದುಕೊಳ್ಳುವಂತೆ ಅಮಿಲ ಕಿಲ್ಲೆದಾರರಿಗೆ ಸೂಚಿಸಲಾಗಿದೆ. 'ಶ್ರೀಕೃಷ್ಣ' ಎಂದು ಸಹಿ ಮಾಡಲಾಗಿದೆ. ಯಾವ ಕಾರಣಕ್ಕೋಸ್ಕರ ಈ ಚರಮೂರ್ತಿಗಳು ಮೈಸೂರಿಗೆ ಹೊರಟರು ಮತ್ತು ಎಷ್ಟು ದಿವಸ ಅಲ್ಲಿದ್ದರೆಂಬುದಕ್ಕೆ ಆಧಾರವಿಲ್ಲ. ಜಗದ್ಗುರುಗಳ ಮುಖವಾಣಿಯನ್ನು ಮುಮ್ಮಡಿ ಕೃಷ್ಣರಾಜ ಒಡೆಯರರಿಗೆ ತಿಳಿಸುವುದಕ್ಕೋಸ್ಕರ ಆಗಾಗ್ಗೆ ಚರಮೂರ್ತಿಗಳು ಮೈಸೂರಿಗೆ ಪ್ರಯಾಣ ಬೆಳೆಸುತ್ತಿದ್ದರೆಂಬುದಾಗಿ ಭಾವಿಸಬಹುದು.

[7] ಅದೇ, ನಿರೂಪ (21–7–1816), ಪು. 32
[8] ಅದೇ, ನಿರೂಪಗಳು (22–7–1816), ಪು. 46
[9] ಅದೇ, ನಿರೂಪ (26–7–1816), ಪು. 2
[10] ಅದೇ, ನಿರೂಪ (28–7–1816), ಪು. 47
[11] ಅದೇ, ನಿರೂಪ (16-8–1816), ಪು. 47

ಅದೇ ವರುಷ ಸೆಪ್ಟೆಂಬರ್‌ನಲ್ಲಿ ಕೊಟ್ಟಿರುವ ನಿರೂಪವು[12] ಮುಮ್ಮಡಿ ಕೃಷ್ಣರಾಜ ಒಡೆಯರರು ಕೊಟ್ಟಿರುವ ನಿರೂಪಗಳಲ್ಲಿ ಮುಖ್ಯವಾದುದೆಂದು ಪರಿಗಣಿಸಬಹುದು. ಏಕೆಂದರೆ ಮೊದಲನೆಯದಾಗಿ, ಶ್ರೀ ಬೃಹನ್ಮಠದ ಜಗದ್ಗುರುಗಳವರು ಪೂರ್ವದಿಂದಲೂ ಪ್ರದರ್ಶಿಸಿಕೊಂಡು ಬರುತ್ತಿದ್ದ ಬಿರುದು ಬಾವಲಿಗಳ ಬಗ್ಗೆ ಈ ನಿರೂಪ ವಿವರಣೆ ನೀಡುತ್ತದೆ; ಎರಡನೆಯದಾಗಿ, ಜಗದ್ಗುರುಗಳವರು ಮೈಸೂರಿಗೆ ದಯಮಾಡಿಸುವರೆಂದು ಮುಮ್ಮಡಿ ಕೃಷ್ಣರಾಜ ಒಡೆಯರರು ಅಮಿಲ ಕಿಲ್ಲೆದಾರರಿಗೆ ಮೊದಲೇ ನಿರೂಪ ಬರೆಯಿಸುತ್ತಾರೆ. ಈ ವೇಳೆಗೆ ಶ್ರೀ ಬೃಹನ್ಮಠದ ಗುರುಗಳಾಗಿದ್ದವರು ನೈಘಂಟಿನ ಸಿದ್ಧಬಸವಸ್ವಾಮಿಗಳೆಂದು ಈ ನಿರೂಪಣೆಯೇ ಹೇಳಿದೆ. ಸುಮಾರು 1800 ರಿಂದ 1820 ರ ವರೆಗೂ ಇವರು ಪೀಠಾಧಿಕಾರಿಗಳಾಗಿದ್ದರು. 26—7—1816ರಲ್ಲಿ ಕೊಟ್ಟಿರುವ ನಿರೂಪದಲ್ಲಿ ಜಗದ್ಗುರುಗಳವರು ಮೈಸೂರಿಗೆ ಆಗಮಿಸಬೇಕೆಂದು ಮುಮ್ಮಡಿ ಕೃಷ್ಣರಾಜ ಒಡೆಯರರು ಆಹ್ವಾನ ನೀಡಿದುದುಂಟು. ಸ್ವಾಮಿಗಳು ಅದಕ್ಕೆ ಏನು ಉತ್ತರ ಬರೆದರೆಂಬುದಕ್ಕೆ ಉಲ್ಲೇಖವಿಲ್ಲ. ಸ್ವಾಮಿಗಳು ಮೈಸೂರಿಗೆ ಪ್ರವಾಸ ಕೈಗೊಂಡಿದ್ದರೆಂಬುದಕ್ಕೆ ಮಹಾದೇವನು ರಚಿಸಿದ 'ಮಹಾಲಿಂಗೇಂದ್ರ ವಿಜಯ'ದಲ್ಲಿಯೂ ಆಧಾರವಿಲ್ಲ. ಆದರೆ 10—2—1817 ರ ನಿರೂಪವು ಸ್ವಾಮಿಗಳು ಮೈಸೂರಿಗೆ ಆಗಮಿಸಿದ ಬಗ್ಗೆ ತಿಳಿಸುತ್ತದೆ. (ಈ ಬಗ್ಗೆ ಮುಂದೆ ಚರ್ಚಿಸಲಾಗುವುದು). ಏನೇ ಆದರೂ, ಜಗದ್ಗುರುಗಳವರು ಮೈಸೂರಿಗೆ ಆಗಮಿಸುವುದರಿಂದ ಅವರ ಅಡ್ಡಪಾಲಕೀ ಸವಾರಿ ಮುಂದೆ ಪ್ರದರ್ಶಿಸುವ ಎಲ್ಲಾ ಬಿರುದು ಬಾವಲಿಗಳ (ಎಪ್ಪತ್ತೆರಡು ?) ವಿವರಗಳನ್ನು ನೀಡಿ, ಆ ಬಗ್ಗೆ ಯಾರೂ ಅಡ್ಡಿಪಡಿಸದಂತೆ ಕ್ರಮ ಕೈಗೊಳ್ಳಬೇಕೆಂದು ಮುಮ್ಮಡಿ ಕೃಷ್ಣರಾಜ ಒಡೆಯರರು ಅಮಿಲ ಕಿಲ್ಲೆದಾರರಿಗೆ ಅಜ್ಞಾಪಿಸುತ್ತಾರೆ. ಅಡ್ಡಪಾಲಕೀ ಸವಾರಿ ಮುಂದೆ ಪ್ರದರ್ಶಿಸಬಹುದಾದ ಬಿರುದುಗಳನ್ನು ನಿರೂಪದಲ್ಲಿ ಈ ರೀತಿ ಪ್ರಸ್ತಾಪಿಸಲಾಗಿದೆ: ಮಕರ ತೋರಣ 1, ನಂದಿಧ್ವಜದಲ್ಲಿ ವ್ಯಾಸರ ತೋಳು 1, ಪಂಚ ದೀವಟಿಗೆ 2, ಮೊಹರ್‌ಚಾಲು 2, ವೇಟು ಪಾವಡ 2, ಕುದುರೆ ಮೇಲಣ ಡಂಕಾ (ನಗಾರಿ) 2, ಕಾವಿ ನಿಶಾನಿ 2, ಮಾಯಿ ಮರತಾಬು 1, ಚಂದ್ರವಾದ್ಯ 2, ಉಡಕವಾದ್ಯ 2, ಚಾಮರ 2, ಹಸರು ಕೆಂಪು ಹಳದಿ ಅಪ್ತಾಗಿರಿ 2, ಗಂಡುಗೊಡಲಿ 2, ಚಂದ್ರಗಾವಿ ಉಡಾಸು 2, ಬಿಚ್ಚು ಫಿರಂಗಿ 2, ರವಡು 2, ತಲೆಗೆ ಕಟ್ಟಿ ಬಾರಿಸುವ ಚಂದ್ರವಾದ್ಯ 2, ತಲೆಗೆ ಕಟ್ಟಿ ಬಾರಿಸುವ ಸೂರ್ಯವಾದ್ಯ 2, ಹಗಲು ದೀವಟಿಗೆ 2, ಜಾಗಟೆ 2, ಶಂಖು 2, ಕಾವಿ ಝಂಡ್ಯ 2, ಪಟಾಪಟಿ ಝಾಂಡ್ಯ 2, ಬೆಳ್ಳಿ ಕಟ್ಟಿಗೆ 50, ಹಸರು ಕಟ್ಟಿಗೆ 50. ನಿರೂಪದ ಕಡೆಯಲ್ಲಿ 'ಶ್ರೀಕೃಷ್ಣ' ಎಂದು ಸಹಿ ಮಾಡಿರುವರು. ನಿರೂಪದ ಮೇಲ್ಭಾಗದಲ್ಲಿ 'ಶ್ರೀ ಚಾಮರಾಜೇಂದ್ರ ವಡೆಯರರ ತನುಜ ಶ್ರೀ ಕೃಷ್ಣರಾಜ ವಡೆಯರ್' ಎಂಬ ಮುದ್ರೆಯಿರುವುದು.

ಆ ವರುಷ ನವೆಂಬರ್‌ನಲ್ಲಿ ಕೊಟ್ಟಿರುವ ನಿರೂಪವನ್ನು ಚಿತ್ರದುರ್ಗದ ಫೌಜುದಾರನಾಗಿದ್ದ ಖತ್ತರಾಮಜೀ ಪಂತ್ ಎಂಬುವವನಿಗೆ[13] ಸರ್ಕಾರದ ಕಾರ್ಯದರ್ಶಿ ಸಿ. ವೆಂಕಟರಾಯರು ಬರೆದಿದ್ದಾರೆ. ಶ್ರೀ ಬೃಹನ್ಮಠದ ಅಧೀನದಲ್ಲಿದ್ದ ಯಡಿಯೂರಿನ ಶ್ರೀ ತೋಂಟದ ಸಿದ್ಧಲಿಂಗೇಶ್ವರಸ್ವಾಮಿ ಗದ್ದಿಗೆಯನ್ನು ಪೂಜೆ ಮಾಡುವ ಯಡಿಯೂರೈಯ್ಯ ಮುಂತಾದವರು ಮಠಕ್ಕೆ ಒಪ್ಪಿಸಬೇಕಾಗಿದ್ದ, ಪೂರ್ವದಿಂದಲೂ ನಡೆದು ಬಂದಿದ್ದ ದೀಪಾರಾಧನೆ ಕಾಣಿಕೆ, ಮಂಡೆಕಾಣಿಕೆ, ಗುರುಕಾಣಿಕೆಗಳನ್ನು ಒಪ್ಪಿಸದೆ ಮನಸ್ಸು ಬಂದಂತೆ ವರ್ತಿಸುತ್ತಿದ್ದುದರಿಂದ ಚರಮೂರ್ತಿ ವೆಪ್ಪತ್ತಿನ ನೀಲಕಂಠರು ಮುಮ್ಮಡಿ ಕೃಷ್ಣರಾಜ ಒಡೆಯರರಲ್ಲಿ ಅರಿಕೆ ಮಾಡಿಕೊಂಡ ಬಗ್ಗೆ, ಯಡಿಯೂರೈಯ್ಯ ಮತ್ತಿತರರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮತ್ತು ಮಠಕ್ಕೆ ಸರಿಯಾಗಿ ನಡೆದುಕೊಳ್ಳಲು ತಿಳಿಸುವಂತೆ ಅದರಲ್ಲಿ ತಿಳಿಸಲಾಗಿದೆ. ಶ್ರೀ ಬೃಹನ್ಮಠದ ವಿರುದ್ಧ ವರ್ತಿಸುವ ಶಿಸ್ತುಗೇಡಿಗಳನ್ನು ಪಳಗಿಸುವುದರಲ್ಲಿ ಮುಮ್ಮಡಿ ಕೃಷ್ಣರಾಜರು ವಹಿಸಿದ್ದ ಆಸಕ್ತಿ ಇದರಲ್ಲಿ ವ್ಯಕ್ತಪಡುತ್ತದೆ.

ನವೆಂಬರ್ ತಿಂಗಳಿನಲ್ಲೆ ಕೊಟ್ಟ ಇನ್ನೊಂದು ನಿರೂಪದಲ್ಲಿ[14] ಪೂರ್ವದಿಂದಲೂ ಶ್ರೀ ಬೃಹನ್ಮಠಕ್ಕೆ ನಡೆದು ಬರುತ್ತಿದ್ದ ಕುರುಬರಹಟ್ಟಿ, ಮಲ್ಲನಕಟ್ಟೆ, ಹಪ್ಲು, ಜೋಳಘಟ್ಟ, ಶಿದ್ದವ್ವನಹಳ್ಳಿ, ಸಾದರಹಳ್ಳಿ, ಅಯ್ಯನಹಳ್ಳಿ, ಪೊರಕೆರೆದೇವರಪುರ, ಅಜ್ಜಪ್ಪನಹಳ್ಳಿ ಇವೇ ಮೊದಲಾದ ಇನಾಂ ಗ್ರಾಮುಗಳಲ್ಲಿ ಹುಟ್ಟುವಳಿಯಿಲ್ಲದ ಕಾರಣ ಮಠದಲ್ಲಿ ಪೂಜೆ, ಗಣಾರಾಧನೆ ಮೊದಲಾದವುಗಳಿಗೆ ತೊಂದರೆಯಾಗಿರುವುದೆಂದು ಮಠದವರು ಮುಮ್ಮಡಿ ಕೃಷ್ಣರಾಜ ಒಡೆಯರರಿಗೆ ಅರಿಕೆ ಮಾಡಿಕೊಂಡ ಮೇರೆಗೆ, ಆ ಎಲ್ಲಾ ಗ್ರಾಮುಗಳನ್ನೂ ಸರ್ಕಾರ ತನ್ನ ಅಧೀನ ಮಾಡಿಕೊಂಡು ಅದರ ಬದಲಾಗಿ ತಿಂಗಳಿಗೆ 120 ವರಹಗಳಂತೆ ವರುಷಕ್ಕೆ ಒಟ್ಟು 1440 ಕಂಠೀರಾಯಿ ವರಹಗಳನ್ನು ಮಠಕ್ಕೆ ಒಪ್ಪಿಸುವಂತೆ ಮತ್ತು ಪೂಜೆ, ಗಣಾರಾಧನೆ ಇವುಗಳಿಗೆ ಸಹಾಯ ಮಾಡುವಂತೆ ಅವರಿಂದ ಅಪ್ಪಣೆಯಾದ ಪ್ರಕಾರ, ಸರ್ಕಾರದ ಕಾರ್ಯದರ್ಶಿ ಸಿ. ವೆಂಕಟರಾಯರು ಚಿತ್ರದುರ್ಗ ತಾಲ್ಲೂಕು ಅಮಲ್ದಾರ್ ಶಾಮರಾಯರಿಗೆ ಈ ಮೇಲ್ಕಂಡ ಸಂಗತಿಯನ್ನು ಲೇಖಗೊಳಿಸಿ, ಅಂತೆಯೇ ನಡೆಯುವಂತೆ ಸೂಚಿಸುತ್ತಾರೆ; 'ಈ ಸನ್ನದಿನ ನಕಲು ದಪ್ತರ ದಾಖಲೆ ಮಾಡಿಕ್ಕೊಂಡು ಅಸಲು ಸನ್ನದು ಮಠಕ್ಕೆ ವಪ್ಪಿಸತಕ್ಕದ್ದು' ಎಂದು ಆಜ್ಞಾಪಿಸುತ್ತಾರೆ.

1817ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರರು ಸುಮಾರು ಇಪ್ಪತ್ತು ನಿರೂಪಗಳನ್ನು ನೀಡಿದ್ದಾರೆ. ಚಿತ್ರದುರ್ಗದ ಜಗದ್ಗುರುಗಳವರು ಮೈಸೂರಿಗೆ ದಯಮಾಡಿಸಿದ ವಿಚಾರವಾಗಿ ಈ ಅವಧಿಯಲ್ಲಿ ನೀಡಿದ ನಿರೂಪಗಳಲ್ಲಿ ಮಾಹಿತಿ ದೊರಕುತ್ತದೆ. ಇಲ್ಲಿ ಕಂಡು ಬರುವ ಒಂದು ತೊಡಕಿನ ಸಂಗತಿಯೆಂದರೆ, ಶ್ರೀ ಬೃಹನ್ಮಠದ ಹದಿನೇಳನೆಯ ಪೀಠಾಧಿಕಾರಿಗಳಾಗಿ ನೈಘಂಟಿನ ಸಿದ್ಧಬಸವ ಸ್ವಾಮಿಗಳೂ(1800-1820), ಹದಿನೆಂಟನೆಯ ಗುರುಗಳಾಗಿ ಸಣ್ಣ ಬರಹದ ರಾಚವಟೇ ಸ್ವಾಮಿಗಳೂ (1820-1830)ಶೂನ್ಯಸಿಂಹಾಸನವನ್ನೇರಿದರೆಂದು 'ಮಹಾಲಿಂಗೇಂದ್ರ ವಿಜಯ'ದಲ್ಲಿ ಹೇಳಿದೆ. ಆದರೆ

[12]ಅದೇ, ನಿರೂಪ, (29-9-1816), ಪು. 4 [13]ಅದೇ, ನಿರೂಪ (14-11-1816), ಪು. 35 [14]ಅದೇ, ನಿರೂಪ (14-11-1816) ಪು. 37

ನಿರೂಪ ಕೊಟ್ಟ ಕಾಲಕ್ಕೆ (1817) ಇವರೀರ್ವರಲ್ಲಿ ಮೈಸೂರಿಗೆ ಹೋದವರು ಯಾರಿರಬಹುದೆಂಬ ಬಗ್ಗೆ ಜಿಜ್ಞಾಸೆ ಮೂಡುತ್ತದೆ. ಏಕೆಂದರೆ 'ಮಹಾಲಿಂಗೇಂದ್ರ ವಿಜಯ'ದಲ್ಲಿ ಸಿದ್ಧಬಸವಸ್ವಾಮಿಗಳು ಮೈಸೂರಿಗೆ ಹೋದರೆಂಬುದಕ್ಕೆ ಉಲ್ಲೇಖವಿಲ್ಲ. ರಾಚವಟೇ ಸ್ವಾಮಿಗಳನ್ನು ಮುಮ್ಮಡಿ ಕೃಷ್ಣರಾಜ ಒಡೆಯರರು ಮೈಸೂರಿಗೆ ಆಹ್ವಾನಿಸಿ ಸತ್ಕರಿಸಿದರೆಂದು ಮಹಾದೇವನು ಬರೆಯುತ್ತಾನೆ. ತನ್ನ ಕೃತಿಯಲ್ಲಿ ಅವನು ಮಾಡಿರಬಹುದಾದ ಕಾಲವ್ಯತ್ಯಾಸದಿಂದ ಇಂಥಾ ಕೆಲವು ಸಮಸ್ಯೆಗಳು ಉದ್ಭವಿಸುತ್ತವೆಂದು ಭಾವಿಸಬೇಕಾಗುತ್ತದೆ. ಅಂದರೆ 1817ರಲ್ಲಿ ರಾಚವಟೇ ಸ್ವಾಮಿಗಳು ಮೈಸೂರಿಗೆ ಹೋದರೇ ವಿನಾ, ನೈಘಂಟಿನ ಸಿದ್ಧಬಸವಸ್ವಾಮಿಗಳಲ್ಲವೆಂದು ಹೇಳಬಹುದು.

1817 ರಲ್ಲಿ ಕೊಟ್ಟಿರುವ ನಿರೂಪಗಳಲ್ಲಿ ಮೊದಲನೆಯದನ್ನು ಜನವರಿ ತಿಂಗಳಲ್ಲಿ ಬರೆಯಲಾಗಿದೆ.[15] ಸ್ವಾಮಿಗಳು ಮೈಸೂರಿಗೆ ತೆರಳುವ ಬಗ್ಗೆ ಮುಂಚಿತವಾಗಿ ದಿವಸವನ್ನು ಗೊತ್ತುಮಾಡುವುದಕ್ಕಾಗಿ ಈ ಲೇಖನ ನೀಡಲಾಗಿದೆ. ಇನ್ನೊಂದು ಲೇಖನದಲ್ಲಿ[16] ಸ್ವಾಮಿಗಳು ದಿನಾಂಕ 1-2-1817 ರಲ್ಲಿ ಅತ್ತಿಗುಪ್ಪೆ ಮಜಲನ್ನು ತಲುಪಿ ಅಲ್ಲಿನ ಸಿದ್ಧಗವಿಯಲ್ಲಿ ಇದ್ದು, ಅನಂತರ ಕನ್ನಂಬಾಡಿ ಮಾರ್ಗವಾಗಿ ಮೈಸೂರಿಗೆ ಬರುವರೆಂದು ತಿಳಿದಿದ್ದು,ಅಪ್ಪಣೆಯಾಗುವವರೆಗೂ ಅಲ್ಲಿಯೇ ಇದ್ದು ಗಣಾರಾಧನೆ ಇತ್ಯಾದಿಗಳನ್ನು ನಡೆಸುತ್ತಿರುವಂತೆ ಅವರನ್ನು ಪ್ರಾರ್ಥಿಸಲಾಗಿದೆ.

ಸ್ವಾಮಿಗಳು ಮೈಸೂರನ್ನು ತಲುಪಿದುದು ಮತ್ತು ಅಲ್ಲಿ ನಡೆದ ಅಡ್ಡಪಾಲಕೀ ಉತ್ಸವ ಇತ್ಯಾದಿಗಳ ಬಗ್ಗೆ 'ಮಹಾಲಿಂಗೇಂದ್ರ ವಿಜಯ'ವು ಹೇಳುತ್ತದೆ. ಈ ಭಾಗದ ವಿವರಣೆಯನ್ನರಿಯುವಲ್ಲಿ ಆ ಗ್ರಂಥವೇ ನಮಗೆ ಏಕೈಕ ಆಧಾರ. ಆದರೆ ಸ್ವಾಮಿಗಳನ್ನು ಮುಮ್ಮಡಿ ಕೃಷ್ಣರಾಜ ಒಡೆಯರರೂ ಮತ್ತು ಅವರ ಎಲ್ಲಾ ಅಧಿಕಾರಸ್ತರು ಬರಮಾಡಿಕೊಂಡ ಬಗ್ಗೆ ಈ ಕೆಳಗೆ ಕಂಡ ನಿರೂಪವು ನಮಗೆ ಅತ್ಯಧಿಕ ಆಧಾರ ನೀಡುತ್ತದೆಯೆನ್ನಬಹುದು.

1817 ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರರು ಕೊಟ್ಟಿರುವ ನಿರೂಪಗಳಲ್ಲಿ ಫೆಬ್ರುವರಿಯಲ್ಲಿ ಕೊಟ್ಟಿರುವ ಈ ನಿರೂಪ[17] ಮುಖ್ಯವಾದುವುಗಳಲ್ಲೊಂದು. ಮೈಸೂರಿಗೆ ಚಿತ್ರದುರ್ಗದ ಜಗದ್ಗುರುಗಳು ಆಗಮಿಸಿದಾಗ ಅವರನ್ನು ಹೇಗೆ ಸ್ವಾಗತಿಸಬೇಕು, ಸತ್ಕರಿಸಬೇಕು ಇತ್ಯಾದಿ ವಿವರಗಳನ್ನೊಳಗೊಂಡಿದೆ ಈ ನಿರೂಪ. ಸರ್ಕಾರದ ಕಾರ್ಯದರ್ಶಿ ಸಿ. ವೆಂಕಟರಾಯರು ಹುಜೂರು ಬಕ್ಷೀ ಸಿದ್ಧರಾಜಯ್ಯನವರಿಗೆ ಇದನ್ನು ಬರೆದು, ಇದರ ನಕಲನ್ನು ದಪ್ತರದಲ್ಲಿಟ್ಟುಕೊಂಡು ಮೂಲ ಪ್ರತಿಯನ್ನು ಮಠಕ್ಕೆ ಒಪ್ಪಿಸುವಂತೆ ತಿಳಿಸುತ್ತಾರೆ. ನಿರೂಪದಲ್ಲಿ, ಚಿತ್ರದುರ್ಗದ ಶ್ರೀಮನ್ ನಿರಂಜನ ಮುರುಗರಾಜೇಂದ್ರ ಸ್ವಾಮಿಗಳು 12 ನೇ ತಾರೀಖು ಗುರುವಾರದಂದು ಮೈಸೂರಿಗೆ ಬಂದಾಗ ಎಲ್ಲಾ ಅರಸುಗಳು, ಅಹಲ್ಯೆಕಾರರು, ವರ್ತಕರು, ಸೇನೆ ಮತ್ತು ಅಠವಣೆ ಕಂದಾಚಾರ ಮುಂತಾದವರೆಲ್ಲರೂ ಆನೆ, ಬೆಳ್ಳಿಯ ನಗಾರಿ, ನಿಶಾನಿ, ಆನೆ ಅಂಬಾರಿ, ಬೆಳ್ಳಿ ಭಾಲೇ, ಬಾಜ-ಬಜಂತ್ರಿ ಮೊದಲಾದುವುಗಳೊಂದಿಗೆ ಮುಂಚಿತವಾಗಿ ಹೊರಟು ಬೊಪ್ಪನಹಳ್ಳಿ ಕೆರೆ ಬಳಿ ಕಾದಿದ್ದು, ಗುರುಗಳು ಬಂದಕೂಡಲೇ ಹೂವು ಹಣ್ಣು ಇತ್ಯಾದಿಗಳನ್ನು ಅರ್ಪಿಸಿ, ಅವರ ಬಿರುದಾವಳಿಗಳೊಡನೆ ಅರಮನೆಯ ಖಾಸ್ ಚಮೂಲುತೊಟ್ಟಿಯಲ್ಲಿ (ಅರಮನೆಯ ಒಂದು ಭಾಗ) ಇಳಿಸುವಂತೆಯೂ, ಗುರುಗಳು ಕೋಟೆ ಬಾಗಿಲಿಗೆ ಬಂದಾಗ ಮಾಮೂಲಿನಂತೆ ಹನ್ನೊಂದು ತೋಪುಗಳನ್ನು ಉಡಾಯಿಸತಕ್ಕದೆಂದು ಬಾರ್ ಕಛೇರಿ ಬಕ್ಷೀ ಹಿಮ್ಮತ್ ಯಾರ್‌ಖಾನರಿಗೆ ಆಜ್ಞೆ ಮಾಡಬೇಕೆಂತಲೂ, ಶ್ರೀಗಳವರು ಚಮೂಲು ತೊಟ್ಟಿಯಲ್ಲಿ ಆಗಮಿಸಿದ ಕೂಡಲೇ ಪದ್ಧತಿಯಂತೆ 'ಧೂಳುಪಾದಪೂಜೆ ಭಿಕ್ಷಕ್ಕೆ' ಐದು ನೂರು ವರಹಗಳನ್ನು ಒಪ್ಪಿಸಬೇಕೆಂತಲೂ, ಶ್ರೀಗಳವರು ಮೈಸೂರಿನಲ್ಲಿ ಇರುವವರೆಗೂ ಪ್ರತಿ ದಿವಸವೂ ಗಣಾರಾಧನೆ ನಡೆಸುವ ಸಲುವಾಗಿ 1500 ಜನಕ್ಕೆ ದಾಸೋಹ ಏರ್ಪಡಿಸಬೇಕೆಂತಲೂ ನಿರ್ದೇಶಿಸುತ್ತಾರೆ. ಬಹುಶಃ ಈ ಒಂದು ನಿರೂಪದಿಂದಲೇ ಜಗದ್ಗುರುಗಳವರಿಗೆ ಮುಮ್ಮಡಿ ಕೃಷ್ಣರಾಜ ಒಡೆಯರರು ಸಲ್ಲಿಸಿದ ಗೌರವಾದರಗಳು ಮತ್ತು ಗುರುಗಳ ಹಿರಿಮೆ ಇತ್ಯಾದಿಗಳು ವ್ಯಕ್ತಪಡುತ್ತವೆ. ಸ್ವಾಮಿಗಳಿಗೆ ದೊರೆತ ರಾಜ ಮರ್ಯಾದೆಯ ದ್ಯೋತಕವೆನಿಸಿದೆ ಈ ನಿರೂಪ.

ಸಣ್ಣ ಬರಹದ ರಾಚವಟೇ ಸ್ವಾಮಿಗಳು* : ಈ ಜಗದ್ಗುರುಗಳವರು ಭಕ್ತಜನರ ಮನಸ್ಸನ್ನು ಸೂರೆಗೊಂಡವರು. ಇವರು ಶ್ರೀ ಬೃಹನ್ಮಠವನ್ನು ಜೀರ್ಣೋದ್ಧಾರ ಮಾಡಿ ಒಂದು ಆಕರ್ಷಕ ರೂಪವನ್ನು ತಂದುಕೊಟ್ಟರು. ಮುಮ್ಮಡಿ ಕೃಷ್ಣರಾಜ ಒಡೆಯರರು ಈ ಸ್ವಾಮಿಗಳ ಕೀರ್ತಿಯನ್ನರಿತು, ಮೈಸೂರಿನಲ್ಲಿ ಇವರ ಅಡ್ಡಪಾಲಕೀ ಉತ್ಸವ ಏರ್ಪಡಿಸಬೇಕೆಂಬ ಉದ್ದೇಶದಿಂದ ಚಿತ್ರದುರ್ಗಕ್ಕೆ ಸೈನ್ಯ ಸಹಿತ ರತ್ನಖಚಿತ ಮೇನೆಯನ್ನೂ, ಬಿನ್ನಹಪತ್ರವನ್ನೂ ಕಳುಹಿಸಿ ಕೊಡುವರು. ಜಗದ್ಗುರುಗಳವರು ಜಂಗಮರು, ಭಕ್ತರು, ಪಂಡಿತರು, ಗಾಯಕರು, ವಂದಿಮಾಗಧರು, ಬಗೆಬಗೆಯ ಊಳಿಗದವರು, ಆನೆ, ಒಂಟೆ, ಕುದುರೆ, ಕಾಲಾಳು, ಎಪ್ಪತ್ತೆರಡು ಬಿರುದುಗಳನ್ನು ಹೊತ್ತವರು–ಹೀಗೆ ಪರಿವಾರದೊಡನೆ, ಕೊಂಬು ಕಹಳೆಗಳ ಆರ್ಭಟಗಳೊಡನೆ ಮೈಸೂರಿನಭಿಮುಖವಾಗಿ ಹೊರಟಾಗ, ಹಾದಿಯಲ್ಲಿ ಸಜ್ಜಾಗಿದ್ದ ಸರ್ಕಾರಕ್ಕೆ ಸಂಬಂಧಿಸಿದ ನೂರಿಪ್ಪತ್ತು ಗಡಿಯವರು ಅವರ ಪಾದಪೂಜೆ ಮಾಡಿ ಬೀಳ್ಕೊಡುತ್ತಿದ್ದರು. ಮೇಲಿನ ನಿರೂಪವು ತಿಳಿಸುವಂತೆ, ಜಗದ್ಗುರುಗಳವರು ಮೈಸೂರನ್ನು ತಲುಪುತ್ತಿದ್ದಂತೆಯೇ ಮುಮ್ಮಡಿ ಕೃಷ್ಣರಾಜ ಒಡೆಯರರು ಅವರನ್ನು ಇದಿರುಗೊಳ್ಳಲು ಸಕಲ ವ್ಯವಸ್ಥೆಯನ್ನೂ ಮಾಡಿದರು. ಸ್ವಾಮಿಗಳು ಮೈಸೂರು ಪಟ್ಟಣ ಸೇರುವ ವೇಳೆಗೆ ಕತ್ತಲಾದುದರಿಂದ ಹಚ್ಚಿದ ಸಾವಿರಾರು ಪಂಜುಗಳ ಬೆಳಕಿನಲ್ಲಿ ಅವರ ಮೆರವಣಿಗೆಯಾಯಿತು. ಮಾರನೆಯ ದಿವಸ ಪಾದಪೂಜೆಯಾಗಿ, ಮುಮ್ಮಡಿ ಕೃಷ್ಣರಾಜ

14 ಅದೇ, ನಿರೂಪ (14—11—1816), ಪು. 37

15 ಅದೇ, ನಿರೂಪ (23-1-1817), ಪು. 45

16 ಅದೇ, ನಿರೂಪ (1-2-1817), ಪು. 45

17 ಅದೇ, ನಿರೂಪ (10-2-1817), ಪು. 30

* ಇವರಿಗೆ ಸಂಬಂಧಿಸಿದ ಸಂಗತಿಯನು 'ಮಹಾದೇವನ ಮಹಾಲಿಂಗೇಂದ್ರ ವಿಜಯ'ದಲ್ಲಿರುವಂತೆ ಇಲ್ಲಿ ಸಂಗ್ರಹಿಸಲಾಗಿದೆ.

ಒಡೆಯರರು ಅತ್ಯಂತ ಆನಂದಭರಿತರಾದರು. ಒಟ್ಟು ನೂರು ತಿಂಗಳು ಗಳ ಕಾಲ ಸ್ವಾಮಿಗಳು ಮೈಸೂರಿನಲ್ಲಿದ್ದರು. ಅವರಿದ್ದಷ್ಟು ಕಾಲವೂ ನಿತ್ಯ ದಾಸೋಹ ನಡೆಯುತ್ತಿದ್ದಿತು ಅಲ್ಲಿ. ಒಟ್ಟಿನಲ್ಲಿ ಚಿರಕಾಲ ಮನಸ್ಸಿನಲ್ಲುಳಿಯಬಹುದಾದ ಉತ್ಸವ ಅದಾಗಿದ್ದಿತೆನ್ನಬಹುದು.

ಸ್ವಾಮಿಗಳು ಮೈಸೂರಿನಿಂದ ಚಿತ್ರದುರ್ಗಕ್ಕೆ ಹಿಂತಿರುಗುವ ಸಮಯದಲ್ಲಿ ನಿರ್ವಹಿಸಬೇಕಾದ ಕರ್ತವ್ಯಗಳ ಬಗ್ಗೆ ತಾಲ್ಲೂಕು ಹೋಬಳಿಗಳ ಶೇಕದಾರರು, ಶ್ಯಾನುಭೋಗರು, ಗೌಡರು ಮುಂತಾದ ವರಿಗೆ ಆಯಾ ತಾಲ್ಲೂಕು ಸುಬೇದಾರರುಗಳು ನೀಡಿರುವ ತಿಳಿವಳಿಕೆ ನಿರೂಪಗಳಲ್ಲಿ ಇದೆ. ಆ ಬಗ್ಗೆ ಒಟ್ಟು ಹನ್ನೊಂದು ನಿರೂಪಗಳನ್ನು ಕೊಡಲಾಗಿದೆ.[18] ಚಿತ್ರದುರ್ಗ ತಾಲ್ಲೂಕು ಹೋಬಳಿ, ತಳಕು ತಾಲ್ಲೂಕು ಹೋಬಳಿ, ಮೊಳಕಾಲ್ಮುರು ತಾಲ್ಲೂಕು ಹೋಬಳಿ, ದೊಡ್ಡೇರಿ ತಾಲ್ಲೂಕು ಹೋಬಳಿ, ಹಾರನಹಳ್ಳಿ ತಾಲ್ಲೂಕು ಹೋಬಳಿ, ಬಾಣಾವಾರದ ತಾಲ್ಲೂಕು ಹೋಬಳಿ,ಕಿಕ್ಕೇರಿ ತಾಲ್ಲೂಕು ಹೋಬಳಿ, ಬೂಕಿನಕೆರೆ ತಾಲ್ಲೂಕು ಹೋಬಳಿ,ಹೊಳಲ್ಕೆರೆ ತಾಲ್ಲೂಕು ಹೋಬಳಿ, ಅಣಜಿ ತಾಲ್ಲೂಕು ಹೋಬಳಿ, ಬಿಳಿಚೋಡು ತಾಲ್ಲೂಕು ಹೋಬಳಿ ಗಳಲ್ಲಿ ಸ್ವಾಮಿಗಳು ಬಂದಲ್ಲಿ ಶೆಟ್ಟಿ ವರ್ತಕರು ಮುಂತಾದವರು ಬಾಜಾ-ಬಜಂತ್ರಿಗಳೊಡನೆ ಸ್ವಾಮಿಗಳನ್ನು ಸ್ವಾಗತಿಸಬೇಕೆಂತಲೂ, ಅವರಿಗೆ ಹಣ್ಣು,ಹೂವು ಮೊದಲಾದವುಗಳನ್ನು ಒಪ್ಪಿಸಿ ಗೌರವದಿಂದ ಬೀಳ್ಕೊಡಬೇಕೆಂತಲೂ, ಸ್ವಾಮಿಗಳ ಅಡ್ಡಪಾಲಕೀ ಉತ್ಸವದ ಮುಂದೆ ಪ್ರದರ್ಶಿಸುವ ಬಿರುದು ಲಾಂಛನಗಳಿಗೆ ಯಾರಾದರೂ ಅಡ್ಡಿ ಪಡಿಸಿದರೆ ಅವರ ಬಗ್ಗೆ ಕ್ರಮ ಕೈಗೊಳ್ಳುವುದೆಂತಲೂ ನಿರೂಪಗಳಲ್ಲಿ ಸೂಚಿಸಲಾಗಿದೆ.

ಅದೇ ವರುಷ ಮಾರ್ಚಿ ತಿಂಗಳಲ್ಲಿ ನೀಡಿರುವ ಮೂರು ನಿರೂ-ಪಗಳಲ್ಲಿ[19] ಮೊದಲನೆಯದು, ಶ್ರೀ ಬೃಹನ್ಮಠಕ್ಕೆ ಸೇರಿದ (ಚಿತ್ರ-ದುರ್ಗದಲ್ಲಿರುವ) ಮಹೇಶ್ವರ, ಜೋಳೇಶ್ವರ, ಬೇಡರ ಕನ್ನೇಶ್ವರ, ಗಂಗಾಧರೇಶ್ವರ,ಗುಂಡಲ ಬಸವೇಶ್ವರ ಮತ್ತು ಮುರುಡು ಬಸವೇಶ್ವರ ದೇವಸ್ಥಾನಗಳಿಗೆ ಪೂರ್ವದಂತೆ ನಂದಾದೀಪ, ಯಡೆ ಮುಂತಾದವು ಗಳಿಗೆ ವ್ಯವಸ್ಥೆಯಾಗಬೇಕೆಂದು ಕೇಳಿದ್ದಕ್ಕೆ, ಆ ಎಲ್ಲಾ ದೇವಾಲಯ ಗಳಿಗೂ ವರುಷ ಒಂದಕ್ಕೆ ಒಟ್ಟು ಅರವತ್ತು ವರಹಗಳನ್ನು ಕೊಟ್ಟಿರುವೆಂತಲೂ. ಆ ದೇವಾಲಯಗಳಿಗೆ ನಂದಾದೀಪ, ಆರಾಧನೆ, ಪೂಜಾ ಉತ್ಸವಾದಿಗಳ ಬಗ್ಗೆ ತಿಳಿಸುತ್ತಿರಬೇಕೆಂತಲೂ ಹೇಳುತ್ತದೆ; ಎರಡನೆ ಯದು, ಕೆಲವು ಮಠಗಳವರ (ಉಜ್ಜಯಿನಿ, ಬಾಳೆಹಳ್ಳಿ, ಶ್ರೀಶೈಲ) ಬೆಂಬಲ ಪಡೆದು ಹೊಸಹಳ್ಳಿ ವಿದ್ವಾನ್ಸಯ್ಯ ಎಂಬುವನು ರೆಡ್ಡಿಗಳಿಗೆ ಲಿಂಗಧಾರಣೆ ಮಾಡಿಸುತ್ತಿದ್ದುದು ಗಮನಕ್ಕೆ ಬಂದು ಅದನ್ನು ವಿರೋಧಿಸಿ, ಅಂತಹ ಪದ್ಧತಿಯನ್ನು ಅನುಷ್ಠಾನಕ್ಕೆ ತಂದ ಅವನಿಗೆ ಶ್ರೀ ಬೃಹನ್ಮಠದ ಸ್ವಾಮಿಗಳು ಬಹಿಷ್ಕಾರ ಹಾಕಿದುದರಿಂದ, ಅಂತಹ ಬಹಿಷ್ಕೃತ ವ್ಯಕ್ತಿಗಳ ಬಗ್ಗೆ ಗಡಿನಾಡಿನ ಅಮಿಲ ಕಿಲ್ಲೆದಾರರು 'ಬಂದೋಬಸ್ತು' ಮಾಡಬೇಕೆಂದು ಸೂಚಿಸಿ ಮುಮ್ಮಡಿ ಕೃಷ್ಣರಾಜ ಒಡೆಯರರು ತಮ್ಮ ಸ್ವಹಸ್ತಾಕ್ಷರದಿಂದ ಕೊಟ್ಟ ನಿರೂಪಗಳಲ್ಲಿ; ಮೂರನೆಯದು, ಚಿತ್ರದುರ್ಗ ಪೇಟೆ ಕೊತ್ವಾಲ ಅಬ್ದುಲ್ ಮಹ್ಮದ್ ಎಂಬುವನು ಪುಂಡಾಟ ನಡೆಸಿದುದರಿಂದ, ಅವನ ಬದಲಾಗಿ ಮುರಿಗಾ ರಾಜೇಂದ್ರ ಸ್ವಾಮಿಗಳ ಮಠದ ಕಡೆಯ ಷೇಕ್ ಮದಾರ ನನ್ನು ಕೊತ್ವಾಲನನ್ನಾಗಿ ನೇಮಿಸಲಾಗಿದೆಯೆಂದು ಸರ್ಕಾರದ ಕಾರ್ಯದರ್ಶಿ ಎಂ.ಎಲ್. ಕೃಷ್ಣರಾಯರು ಚಿತ್ರದುರ್ಗದ ಅಮಿಲನಿಗೆ ಬರೆದು ತಿಳಿಸುತ್ತಾರೆ.

ಅದೇ ವರುಷ ನವೆಂಬರ್‌ನಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯ ರವರು ಕೊಟ್ಟಿರುವ ನಿರೂಪವು[20] ಮೈಸೂರಿನಿಂದ ಚಿತ್ರದುರ್ಗದ ಮಠಕ್ಕೆ ಸೋಮಶೇಖರ ಶಾಸ್ತ್ರಿಗಳೆಂಬುವರು ಹೋಗಿ ಬರುವ ಬಗ್ಗೆ ಹೇಳುತ್ತದೆ. ಅದೇ ತಿಂಗಳಿನಲ್ಲಿ ಕೊಟ್ಟ ಇನ್ನೊಂದು ನಿರೂಪವು[21] ಚಿತ್ರದುರ್ಗ ಶ್ರೀ ಬೃಹನ್ಮಠದ ಸೋಮಶೇಖರಯ್ಯ(ಶಾಸ್ತ್ರಿ ?)ನವರ ಜೊತೆಯಲ್ಲಿ ಮೈಸೂರಿನಿಂದ ಹೋಗಿ ಬರುವವರೊಂದಿಗೆ ಪಹರೆ ಬಾರಿನವರನ್ನು ಕೊಟ್ಟು ಓಲೇಕಾರರನ್ನು ವಾಪಾಸು ಕರೆಯಿಸಿ ಕೊಳ್ಳುವುದೆಂದು ಕಾರ್ಯದರ್ಶಿ ಎಂ. ಎಲ್. ಕೃಷ್ಣರಾಯರು ಸಮ್ಮು ಖದ ಗುರಿಕಾರ ಬಾಳರಾಜೈಯ್ಯನವರಿಗೆ ಬರೆಯುತ್ತಾರೆ.

1820 ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರರು ಒಂದೇ ಒಂದು ನಿರೂಪವನ್ನು ಕೊಟ್ಟಿದ್ದಾರೆ ಶ್ರೀ ಬೃಹನ್ಮಠಕ್ಕೆ. ಆ ನಿರೂ ಪವು[22] ಮಠದ ಮಹತ್ವದ ದೃಷ್ಟಿಯಿಂದ ಅತ್ಯುಪಯುಕ್ತ ದಾಖಲೆ ಯೆನಿಸುತ್ತದೆ. ಸೀಮೆ ಗಡಿಗಳ ಫೌಜುದಾರ್, ಅಮಲ್‌ದಾರ್, ಕಿಲ್ಲೇದಾರ್ ಮುಂತಾದವರಿಗೆ ಇದನ್ನು ಕಳುಹಿಸಿ ಕೊಡಲಾಗಿದ್ದು, ಶ್ರೀ ಬೃಹನ್ಮಠದ ಜಗದ್ಗುರುಗಳವರಿಗೆ ಹಿಂದಿನಿಂದಲೂ ಬಂದಿದ್ದ ಧರ್ಮನಿರ್ಣಯಾಧಿಕಾರದ ಬಗ್ಗೆ ಇದು ಸಾರುತ್ತದೆ. ಯಾವುದೋ ಕಾರಣಕ್ಕಾಗಿ ಬಾಣಾವಾರದ ಹಾಲದಕಟ್ಟೆ ನಂಜಾ ಎಂಬುವನಿಗೆ ಚಿತ್ರದುರ್ಗದ ಜಗದ್ಗುರುಗಳವರು ಬಹಿಷ್ಕಾರ ಹಾಕಿದ್ದು, ಬಾಳೆಹಳ್ಳಿ ಮಠದವರು ಅದನ್ನು ವಿರೋಧಿಸಿ ನಂಜನಿಗೆ 'ಶುದ್ಧ ಪತ್ರಿಕೆ'ಯನ್ನು

[18] 1. ರಹದಾರಿ ಪತ್ರಗಳು, ನಿರೂಪ (5–3–1817), ಪು. 14
2. ,, ,, (10–3–1817), ಪು. 13
3. ,, ,, (14–3–1817), ಪು. 12
4. ,, ,, (15–3–1817), ಪು. 11
5. ,, ,, (16–4–1817), ಪು. 7
6. ,, ,, (21–4–1817), ಪು. 15
7. ,, ,, (3–5–1817), ಪು. 16
8. ,, ,, (3–5–1817), ಪು. 17
9. ,, ,, (14–6–1817), ಪು. 8
10. ,, ,, (3–7–1817), ಪು. 9
11. ,, ,, (3–7–1817), ಪು. 10

[19] ಅದೇ, ನಿರೂಪಗಳು (2—3—1817), 42, 48

[20] ಅದೇ, ನಿರೂಪ (11—11—1817), ಪು. 47

[21] ಅದೇ, ನಿರೂಪ (18—11—1817), ಪು. 51

[22] ಅದೇ, ನಿರೂಪ (4—10—1820), ಪು. 33

ಕೊಟ್ಟಿದ್ದರಿಂದ ಅಲ್ಲಿನ ಜನಗಳಲ್ಲಿ ಬೇಸರ ಮೂಡಿದೆಯೆಂತಲೂ, ಶ್ರೀ ಬೃಹನ್ಮಠಕ್ಕೆ ಅಗೌರವವುಂಟಾಗಿದೆಯೆಂತಲೂ ಚಿತ್ರದುರ್ಗ ಮಠದ ಚರಂತಿ ಜಡೆ ಸಿದ್ಧರಾಮಪ್ಪನವರು ಕೃಷ್ಣರಾಜ ಒಡೆಯರರಲ್ಲಿ ಅರಿಕೆ ಮಾಡಿಕೊಂಡ ಪ್ರಕಾರ ಈ ಕಟ್ಟಳೆಯನ್ನು ಮಾಡಲಾಯಿತೆಂದು ನಿರೂಪವು ಸಾರುತ್ತದೆ. ಅದು ಮುಂದುವರೆದು, ಬಾಳೆಹಳ್ಳಿ, ಉಜ್ಜಯಿನಿ, ಪರ್ವತ(ಶ್ರೀಶೈಲ)ಈ ಮೂರು ಪೀಠಗಳವರು ಬಹಿಷ್ಕಾರ ಹಾಕುವಲ್ಲಿ, ಶುದ್ಧ ಪತ್ರಿಕೆ ಕೊಡುವಲ್ಲಿ ಶ್ರೀ ಮುರಿಗಾ ರಾಜೇಂದ್ರ ಸ್ವಾಮಿಗಳ ಅಪ್ಪಣೆಯನ್ನು ಮೀರಿ ನಡೆಯದಂತೆ ಪೂರ್ವದಿಂದಲೂ ಬಂದಿದ್ದು, ಬಾಳೆಹಳ್ಳಿ ಮಠದವರು ಶುದ್ಧ ಪತ್ರಿಕೆ ಕೊಡುವುದಕ್ಕೆ ಯಾವ ಹಕ್ಕು ಇಲ್ಲವೆಂತಲೂ, ಆ ತಾಲ್ಲೂಕಿನ ಹರದೊ ಇಲಾಖೆ(?) ಯವರು ವಿಚಾರಣೆಯಿಂದ ಅದನ್ನು ವಜಾ ಮಾಡಿ ಶ್ರೀ ಬೃಹನ್ಮಠದ ಜಗದ್ಗುರುಗಳವರ ಬಹಿಷ್ಕಾರದಂತೆ ನಡೆಯಬೇಕೆಂತಲೂ, 'ಅರಮನೆ ಶೀಮೆ ಗಡಿಗಳಲ್ಲಿ ಇರತಕ್ಕ ಷಡುಸ್ಥಳ, ಗುರುಸ್ಥಳ, ಮಠ ಮಹಂತು, ಆರಾಧ್ಯ ಅಯ್ಯಗಳು, ಅಷ್ಟಾವರ್ಣ ಪಂಚಾಚಾರಯುಕ್ತರಾದ ಶಿವಭಕ್ತರು ಮುಂತಾದ ದರೋಬಸ್ತು ಶಿವಾಚಾರ, ದರ್ಶನಾಚಾರ ಮುಂತಾದ ಜನಗಳಲ್ಲಿ ತಪ್ಪು ನೆಪ್ಪು, ಆಚಾರ, ವ್ಯವಹಾರ, ಬಹಿಷ್ಕಾರ ಮುಂತಾದ ಹರಯೇಕ (ಪ್ರತಿಯೊಂದು) ಬಾಬುಗಳು ವಿಚಾರಣೆಯಿಂದ ಕಾಣಿಕೆ ಕಪ್ಪ ತೆಗೆದುಕೊಳ್ಳುವುದರಲ್ಲಿ ಲೇಶವೂ ಅಡ್ಡಿ ಮಾಡದಂತೆ ಎಲ್ಲಾ ಜನಗಳಿಗೂ ಖೂಬ ತಗಯೂದು ಇಡಿಸುವುದು' ಎಂತಲೂ, ಇನ್ನೊಮ್ಮೆ ಈ ಬಗೆಯ ದೂರು ಬಂದಲ್ಲಿ ಸಂಬಂಧಿಸಿದವರನ್ನು ಶಿಕ್ಷೆಗೆ ಗುರಿಮಾಡಲಾಗುವುದೆಂತಲೂ ತಿಳಿಸುತ್ತದೆ§. ಕಡೆಯಲ್ಲಿ 'ಶ್ರೀ ಕೃಷ್ಣ' ಎಂದು ಇದೆ.

1822 ರಲ್ಲಿ ಶ್ರೀ ಬೃಹನ್ಮಠಕ್ಕೆ ಮೂರು ನಿರೂಪಗಳನ್ನು ಕೊಡಲಾಗಿದೆ. ಅವುಗಳಲ್ಲಿ ಫೆಬ್ರವರಿ ತಿಂಗಳಲ್ಲಿ ಕೊಟ್ಟ ನಿರೂಪವು[23] ಶ್ರೀ ಬೃಹನ್ಮಠದ ಪೀಠಾಧಿಕಾರಿಗಳ ಇತಿಹಾಸದ ದೃಷ್ಟಿಯಿಂದ ಹೊಸ ಸಂಗತಿಯನ್ನು ಪ್ರಸ್ತಾಪಿಸುತ್ತದೆ. ಈಗಾಗಲೇ ಗಮನಕ್ಕೆ ಬಂದಿರುವಂತೆ ಶ್ರೀ ಬೃಹನ್ಮಠ ಮತ್ತು ಇತರ ಮಠಗಳ ನಡುವೆ ಹಿಂದಿನಿಂದಲೂ ಕೆಲವು ಕಾರಣಗಳಿಂದಾಗಿ ಒಮ್ಮತವಿಲ್ಲದಿದ್ದು, ಕೆಲವೊಮ್ಮೆ ಅದು ವಿಷಮಸ್ಥಿತಿಯನ್ನು ಮುಟ್ಟುತ್ತಿದ್ದಿತೆಂದು ತೋರುತ್ತದೆ. ಅಂತೆಯೇ ಈ ಮೇಲಿನ ನಿರೂಪವು ಇಂತಹ ಒಂದು ಘಟನೆಯ ಬಗ್ಗೆ ಬೆಳಕು ಚೆಲ್ಲುತ್ತದೆ. ಅದು ಹೇಳುವಂತೆ, 'ಮುರುಗಿ ಮಠದ ಶಿಷ್ಯರಾದ ಉಜ್ಜನಿ ಪೀಠದವರು ತಿರುಗಿ ಬಿದ್ದು' ಮಠಕ್ಕೆ ಸೇರಬೇಕಾದ ಕಾಣಿಕೆ ಕಪ್ಪ ಇತ್ಯಾದಿಗಳನ್ನು ಸಂಗ್ರಹಿಸುತ್ತಾ ಗುರುಗಳಿಗೂ ತೊಂದರೆ ಕೊಡುತ್ತಿದ್ದುದರಿಂದ ಜಗದ್ಗುರುಗಳವರು ಗುಂಟೂರಿಗೆ ಹೊರಟುಹೋದರು. ಅದನ್ನು ಕಂಡು ಪೇಟೆಯ ಶೆಟ್ಟಿ ವರ್ತಕರೆಲ್ಲರೂ ತಾವೂ ಸ್ವಾಮಿಗಳೊಂದಿಗೆ ಹೊರಟು ಹೋಗುವೆವೆಂದು ಹಠಹಿಡಿದರು, ಉಜ್ಜಯಿನಿ ಪೀಠದ ಕಡೆಯವರು ಹುಜೂರನ್ನು(ಮುಮ್ಮಡಿ ಕೃಷ್ಣರಾಜ ಒಡೆಯರರನ್ನು) ಕಾಣಬಯಸಿ ಪತ್ರ ಬರೆದಿದ್ದರಿಂದ ಅವರನ್ನು ಕಾಣಲು ಮೈಸೂರಿಗೆ ಬರುವಂತೆ ಸೂಚಿಸಿ ಚಿತ್ರದುರ್ಗ ಕಸಬಾ ತಾಲ್ಲೂಕು ಅಮಿಲ ಲಕ್ಷ್ಮೀ ನಾರಾಯಣಯ್ಯನಿಗೆ ಚಿತ್ರದುರ್ಗದ ಫೌಜುದಾರ್ ಕೃಷ್ಣರಾಯರ ಮೂಲಕ ಕಳುಹಿಸಿದ ನಿರೂಪದಲ್ಲಿ ಸರ್ಕಾರದ ಕಾರ್ಯದರ್ಶಿ ಸಿ. ವೆಂಕಟರಾಯರು ಸೂಚಿಸುತ್ತಾರೆ. ಅಲ್ಲದೆ ಪೇಟೆ ಶೆಟ್ಟಿ ವರ್ತಕರು ಮುಂತಾದವರು ಊರಿಗೆ ಹಿಂತಿರುಗಿ ಎಂದಿನಂತೆ ತಮ್ಮ ಕೆಲಸ ಕಾರ್ಯಗಳಲ್ಲಿ ಮಗ್ನರಾಗುವಂತೆ ಮಾಡಬೇಕೆಂದೂ ಅವರಿಗೆ ನಿರೂಪದಲ್ಲಿ ನಿರ್ದೇಶಿಸುತ್ತಾರೆ.

ಅದೇ ತಿಂಗಳಿನಲ್ಲಿ ಕೊಟ್ಟ ಇನ್ನೊಂದು ನಿರೂಪವೂ ಸಹ ಮೇಲಿನ ನಿರೂಪದಲ್ಲಿ ಪ್ರಸ್ತಾಪಿಸಿದ ಸಂಗತಿಯನ್ನೇ ಸ್ಪಷ್ಟಪಡಿಸುತ್ತದೆ.[24] ಸ್ವಾಮಿಗಳು ಚಿತ್ರದುರ್ಗವನ್ನು ತೊರೆದು ಗುಂಟೂರಿಗೆ ಹೋದ ಬಗ್ಗೆ ಅಮಿಲ ಲಕ್ಷ್ಮಿನಾರಾಣಯ್ಯನು ಬರೆದ ಪತ್ರಕ್ಕೆ ಉತ್ತರವಾಗಿ ಕಾರ್ಯದರ್ಶಿ ಸಿ. ವೆಂಕಟರಾಯರು ಚಿತ್ರದುರ್ಗದ ಫೌಜುದಾರ್ ಕೃಷ್ಣರಾಯರಿಗೆ ಈ ಮೇಲ್ಕಂಡ ನಿರೂಪ ಬರೆದು, ಖುದ್ದಾಗಿ ಶ್ರೀಯವರನ್ನು ಕಂಡು ಸಮಾಧಾನಪಡಿಸಿ ಮಠಕ್ಕೆ ವಾಪಾಸು ಕರೆತರಬೇಕೆಂದೂ, ಎಂದಿನಂತೆ ಮಠದಲ್ಲಿ ಗಣಾರಾಧನೆ ಮಾಡಿಕೊಂಡು ಇರುವಂತೆ ಪ್ರಾರ್ಥಿಸಬೇಕೆಂದೂ ಸೂಚಿಸುತ್ತಾರೆ. ಆದರೆ ಈ ಸಂಗತಿಗಳು 'ಮಹಾಲಿಂಗೇಂದ್ರ ವಿಜಯ'ದಲ್ಲಿ ಉಲ್ಲೇಖವಿಲ್ಲ. ಈ ಬಗ್ಗೆ ಹೊಸ ಆಧಾರಗಳನ್ನು ಹುಡುಕಬೇಕು.

ಅದೇ ವರುಷ ಮೇ ತಿಂಗಳಲ್ಲಿ ಶ್ರೀ ಬೃಹನ್ಮಠದ ಪರವಾಗಿ ಸವಾರ್ ಕಛೇರಿ ಬಕ್ಷೀ ಭೀಮರಾಯರಿಗೆ ಸರ್ಕಾರದ ಕಾರ್ಯದರ್ಶಿಯವರು ನಿರೂಪವೊಂದನ್ನು ಬರೆದು,[25] ಸ್ವಾಮಿಗಳು ಸವಾರಿ ಹೊರಡಲು ಕುದುರೆಗಳು ಇಲ್ಲದಿದ್ದು ಸಂಸ್ಥಾನದಿಂದ ಬಿರಾದಾರಿ ಕುದುರೆಗಳನ್ನು ತಕ್ಷಣವೇ ಕಳುಹಿಸಿಕೊಡುವಂತೆ ಆಜ್ಞೆಮಾಡುತ್ತಾರೆ.

1827ರಲ್ಲಿ ಎರಡು ನಿರೂಪಗಳನ್ನು ಮಾತ್ರ ಶ್ರೀ ಬೃಹನ್ಮಠಕ್ಕೆ ಕೊಟ್ಟಂತೆ ತೋರುತ್ತದೆ. ಅವುಗಳಲ್ಲಿ ಮೊದಲನೆಯದನ್ನು ಫೆಬ್ರವರಿ ತಿಂಗಳಲ್ಲಿ ಕೊಡಲಾಗಿದೆ[26]. ಈ ನಿರೂಪವು ಶ್ರೀ ಬೃಹನ್ಮಠದ ಆಶ್ರಯದಲ್ಲಿದ್ದ ವಿರಕ್ತ ಮಠಗಳವರು ಮೂಲ ಮಠದಿಂದ ಪ್ರತ್ಯೇಕಗೊಂಡು ಸ್ವತಂತ್ರರಾಗಲು ಪ್ರಯತ್ನಿಸಿದ ಬಗ್ಗೆ ಬೆಳಕು ಹಾಯಿಸುತ್ತದೆ. ಶ್ರೀ ಬೃಹನ್ಮಠ ಮತ್ತು ವಿರಕ್ತ ಮಠಗಳ ನಡುವೆ ಆಗಾಗ್ಗೆ ಕಾಣಿಸಿಕೊಳ್ಳುತ್ತಿದ್ದ ಒಡಕಿನ ವಿಚಾರದಲ್ಲಿ ಇದು ನಮ್ಮ ಗಮನ ಸೆಳೆಯುತ್ತದೆ. ನಿರೂಪ ಹೇಳುವಂತೆ, ಶ್ರೀ ಬೃಹನ್ಮಠಕ್ಕೆ ಸಲ್ಲತಕ್ಕ ದೀಪಾರಾಧನೆ ಕಾಣಿಕೆ, ಗುರು ಕಾಣಿಕೆ, ತಪ್ಪು ನೆಪ್ಪು ಬಹಿಷ್ಕಾರ ಕಾಣಿಕೆ ಮೊದಲಾದ ಸೇವಾ ಹಣವನ್ನು ಕೊಡದೆ ವಿರಕ್ತ ಮಠಗಳಲ್ಲಿ ಕೆಲವರು ಸ್ವತಂತ್ರವಾಗಿ ವರ್ತಿಸುತ್ತಿರುವರೆಂದು ಕೊಡಗಿನ ಕೂಡಲಿ

§ ಇದು ಅಂದಿಗೆ ಸಂಬಂಧಿಸಿದ ಸಂಗತಿಯೆಂದು ತಿಳಿಯಬೇಕು.

23 ರಹದಾರಿ ಪತ್ರಗಳು, ನಿರೂಪ (21—2—1822), ಪು. 34

24 ಅದೇ, ನಿರೂಪ (21—2—1822), ಪು. 35

25 ಅದೇ, ನಿರೂಪ (27—5—1822), ಪು. 44

26 ಅದೇ, ನಿರೂಪ (8—2—1827), ಪು. 36

ಚರಮೂರ್ತಿ ಸೋಮಶೇಖರ ಶಾಸ್ತ್ರಿಗಳು ಮುಮ್ಮಡಿ ಕೃಷ್ಣರಾಜ ಒಡೆಯರರಲ್ಲಿ ಕಾಗದ, ಪತ್ರ,ಲಿಖ್ಯ ಸಹಿತ ಬಿನ್ನಹ ಮಾಡಿಕೊಂಡಲ್ಲಿ, ಇಂತಹ ಬೇಜವಾಬ್ದಾರಿ ಕೆಲಸ ನಡೆಯುವುದಕ್ಕೆ ಇನ್ನು ಮುಂದೆ ತಕಾರಾಂ ಆಸ್ಪದವಿಲ್ಲವೆಂತಲೂ, ಶ್ರೀ ಬೃಹನ್ಮಠಕ್ಕೆ ಹಿಂದಿನಂತೆಯೇ ಕಾಣಿಕೆಗಳನ್ನು ಒಪ್ಪಿಸಿ ಗೌರವದಿಂದ ನಡೆಸಿಕೊಳ್ಳುವಂತೆಯೂ, ಅಪ್ಪಣೆ ಮೀರಿ ನಡೆದುದಾದರೆ ಅಂತಹವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದೆಂತಲೂ, ಮುಮ್ಮಡಿ ಕೃಷ್ಣರಾಜರು ಆಜ್ಞೆ ನೀಡಿದ ಬಗ್ಗೆ ಸರ್ಕಾರದ ಕಾರ್ಯದರ್ಶಿ ಸಿ. ವೆಂಕಟರಾಯರು ತಮ್ಮ ನಿರೂಪದಲ್ಲಿ ವ್ಯಕ್ತಪಡಿಸಿರುವರು.

ಅದೇ ತಿಂಗಳಿನಲ್ಲಿ ಕೊಟ್ಟ ಇನ್ನೊಂದು ನಿರೂಪವು[27] ಮುಮ್ಮಡಿ ಕೃಷ್ಣರಾಜ ಒಡೆಯರರಿಂದ ಜಗದ್ಗುರುಗಳವರಿಗೆ ಕಾಣಿಕೆಯಾಗಿ ಅರ್ಪಿಸಲಾದ ಮ್ಯಾನ, ಪಾಲಕೀ, ಶ್ವೇತ ಛತ್ರಿ ಇವುಗಳಿಗೆ ಜೋಡಿಸಿದ್ದ ವಸ್ತುಗಳ ಮೇಲೆ ಮಾಡಿದ್ದ ಬಂಗಾರದ ಮುಲಾಮು ಕೆಟ್ಟು ಹೋಗಿವೆಯೆಂದು ತಿಳಿದುಕೊಂಡ ಮೇರೆಗೆ,ಅವುಗಳ ಬದಲಾಗಿ ಮುಲಾಮು ಮಾಡಿದ ಬೇರೆ ವಸ್ತುಗಳನ್ನು ಗುರಿಕಾರ ಮಾದಯ್ಯನೆಂಬುವನ ಸಂಗಡ ಕಳುಹಿಸಲಾಗಿದೆಯೆಂದು ತಿಳಿಸುತ್ತದೆ. ಸರ್ಕಾರದ ಕಾರ್ಯದರ್ಶಿ ಬಿ. ನರಸಿಂಹ ಐಯ್ಯಂಗಾರ್ ಎಂಬುವರು ಕಡೆಯಲ್ಲಿ ಸಹಿ ಮಾಡಿರುವರು.

1828ರ ಒಂದೇ ಒಂದು ನಿರೂಪ ಶ್ರೀ ಬೃಹನ್ಮಠದ ಸಂಗ್ರಹದಲ್ಲಿರುವುದು ಗಮನಕ್ಕೆ ಬರುತ್ತದೆ. ಆಗಸ್ಟ್ ತಿಂಗಳಿನಲ್ಲಿ ಕೊಡಲಾದ ಈ ನಿರೂಪವು[28] ಮುಮ್ಮಡಿ ಕೃಷ್ಣರಾಜ ಒಡೆಯರರ 'ಶ್ರೀಕೃಷ್ಣ' ಎಂಬ ಅಂಕಿತವನ್ನೊಳಗೊಂಡಿದೆ. ಚಿತ್ರದುರ್ಗದ ಮಠದಿಂದ ಜಗದ್ಗುರುಗಳವರ ಮುಖವಾಣಿಯನ್ನು ತೆಗೆದುಕೊಂಡು ಮೈಸೂರಿಗೆ ಬರುವ ಚರಮೂರ್ತಿಗಳಿಗೆ ಆಯಾ ಗಡಿಗಳಲ್ಲಿರುವ ಅಮಲದಾರರು, ಕಿಲ್ಲೆದಾರರು ಬೇಕಾದ ವಸ್ತುಗಳನ್ನು ಒದಗಿಸಿ ಕೊಟ್ಟು, ಸಂಗಡ ನಾಲ್ಕು ಜನ ವಾಲೇಕಾರರನ್ನು ಕೊಟ್ಟು ಕಳುಹಿಸಬೇಕೆಂದು ಈ ನಿರೂಪದಲ್ಲಿ ಆಜ್ಞಾಪಿಸಲಾಗಿದೆ.

1831 ಮತ್ತು 1835 ರಲ್ಲಿ ಕೊಡಲ್ಪಟ್ಟ ನಿರೂಪಗಳೆರಡೂ[29] ಶ್ರೀ ಬೃಹನ್ಮಠದ ಇತಿಹಾಸದ ಬಗ್ಗೆ ಬೆಳಕು ಚೆಲ್ಲುವ ಸಾಧನಗಳಲ್ಲಿ ಮುಖ್ಯವಾದುವುಗಳಾಗಿವೆ; ಶ್ರೀ ಬೃಹನ್ಮಠದ ಪೀಠಾಧಿಕಾರಿಗಳ ನೇಮಕದ ಘಟನೆಯ ಬಗ್ಗೆ ಇವು ವಿವರ ನೀಡುತ್ತವೆ. 'ಮಹಾದೇವನ ಮಹಾಲಿಂಗೇಂದ್ರ ವಿಜಯ' ಹೇಳುವಂತೆ, ಸಂಸ್ಥಾನದ ಹದಿನೆಂಟನೆಯ ಪೀಠಾಧಿಕಾರಿಗಳಾದ ಸಣ್ಣಬರಹದ ರಾಚವಟೇ ಸ್ವಾಮಿಗಳು 1830ರಲ್ಲಿ ಶಿವೈಕ್ಯರಾದರು. ಅವರನಂತರ ಯಾರಿಗೆ ಪಟ್ಟವಾಗಬೇಕೆಂಬುದರ ಬಗ್ಗೆ ರಾಚವಟೇ ಸ್ವಾಮಿಗಳು ಯಾರ ಹೆಸರನ್ನೂ ಸೂಚಿಸಿರಲಿಲ್ಲ. ಆದ್ದರಿಂದ ಪಟ್ಟಾಧಿಕಾರ ತೀವ್ರ ವಿವಾದಾಸ್ಪದ ಸಂಗತಿಯಾಯಿತು. ಈ ಬಿಕ್ಕಟ್ಟಿನ ಸಂದರ್ಭದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರರು ತಮ್ಮಲ್ಲಿದ್ದ ಗುರುಬಸವಲಿಂಗನೆಂಬ ಜಂಗಮರಿಯನ್ನು ಚಿತ್ರದುರ್ಗದ ಶೂನ್ಯಸಿಂಹಾಸನದ ಗುರುವಾಗಲು ಕಳುಹಿಸಿ ಕೊಟ್ಟರು; ಆ ಬಗ್ಗೆ ಆಜ್ಞೆ ಹೊರಡಿಸಿದರು; ಸಂಗಡ ಸ್ವಲ್ಪ ಸೈನ್ಯವನ್ನೂ ಕಳುಹಿಸಿದರು. ಇದು ಮಠದ ಅಭಿಮಾನಿಗಳನ್ನು ಕೆರಳಿಸಿತು. ಜನಾಭಿಪ್ರಾಯಕ್ಕೆ ಬೆಲೆಯೇ ವಿನಾ ರಾಜಾಜ್ಞೆಗೆ ಅಲ್ಲವೆಂದು ಪ್ರತಿಭಟಿಸಿದರು. ಪೂರ್ವದಿಂದಲೂ ಬಂದಿದ್ದ ಸಂಪ್ರದಾಯದಂತೆ ಪೀಠಾಧಿಕಾರಿಯನ್ನು ಚುನಯಿಸುವ ಪದ್ಧತಿಯೆ ಸರಿಯಾದುದೆಂದರು. ಹಾಗಾಗಿ ಶ್ರೀ ಬೃಹನ್ಮಠದ ಪರವಾಗಿ ಒಂದು ಬಣ, ಮೈಸೂರರಸರ ಪರವಾಗಿ ಇನ್ನೊಂದು ಬಣ ಹುಟ್ಟಿಕೊಂಡವು. ಪರ–ವಿರೋಧ ಗಳೆರಡೂ ಕೆಲಸ ಮಾಡಲಾರಂಭಿಸಿದುದನ್ನು ಕೆಲವರು ಸದುಪಯೋಗಕ್ಕೂ, ಮತ್ತೆ ಕೆಲವರು ದುರುಪಯೋಗಕ್ಕೂ ಬಳಸಿಕೊಳ್ಳಲು ಪ್ರಯತ್ನಿಸಿದರು. 1830 ರಿಂದ 1833 ರ ವರೆಗೆ ಒಟ್ಟು ಮೂರು ವರ್ಷಗಳ ಕಾಲ ಇಂತಹ ವಾತಾವರಣ ಶ್ರೀ ಬೃಹನ್ಮಠದಲ್ಲಿ ನೆಲೆಗೊಂಡಿತ್ತು. ಕಡೆಗೆ ಗುರುಬಸವಲಿಂಗನು ಶೂನ್ಯಸಿಂಹಾಸನ ಏರಲು ಅರ್ಹನಲ್ಲ, ಅದನ್ನು ತಪ್ಪಿಸಬೇಕೆಂಬ ದೂರು ಬ್ರಿಟಿಷ್ ಸಾಮ್ರಾಜ್ಞಿ ವಿಕ್ಟೋರಿಯಾಳವರೆಗೂ ಹೋಯಿತು. ಜನತೆಯ ಅಭೀಷ್ಟವನ್ನು ಪುರಸ್ಕರಿಸಿದ ರಾಣಿ, ಗುರುಬಸವಲಿಂಗನು ಜಗದ್ಗುರುವಾಗಲು ಯೋಗ್ಯನಲ್ಲವೆಂಬ ಮಾತನ್ನು ಪುಷ್ಟೀಕರಿಸಿ ಅಂತೆಯೇ ಆಜ್ಞೆ ಹೊರಡಿಸಿದಳು. ಈ ಕಾರ್ಯದಲ್ಲಿ ವಿಘ್ನಗಳು ಎದುರಾದರೆ ಅವುಗಳನ್ನು ನಿವಾರಿಸಲು ಸೇನೆಯನ್ನೂ ಕಳುಹಿಸಿಕೊಟ್ಟಳು. ಹೀಗೆ ಮುಮ್ಮಡಿ ಕೃಷ್ಣರಾಜ ಒಡೆಯರರು ಮಾಡಿದ ಪ್ರಯತ್ನಗಳೆಲ್ಲ ನಿಷ್ಫಲವಾದವು. ತಮಗೆ ಒಪ್ಪಿದ ಗುರುವನ್ನು ಆರಿಸಿಕೊಳ್ಳಲು ಜನತೆಗೆ ಸ್ವಾತಂತ್ರ್ಯ ದೊರಕಿದಂತಾಯಿತು. ಎಲ್ಲರ ಇಚ್ಛೆಯಂತೆ ಸಾವಳಿಗೆ ಗುರುಶಾಂತ ಸ್ವಾಮಿಗಳು(19ನೆಯ ಪಟ್ಟ; ಕಾಲ ಸು. 1833-1840)ಜಗದ್ಗುರುಗಳಾಗಿ ಆರಿಸಲ್ಪಟ್ಟರು; ಶ್ರೀ ಬೃಹನ್ಮಠದ ಬೆಳಕಾಗಿ ಬಂದರು.

ಈ ಸಂದರ್ಭದಲ್ಲಿ ಮೈಸೂರು ಸಂಸ್ಥಾನದಲ್ಲಿ ಆದ ಕೆಲವು ಬದಲಾವಣೆಗಳು ನಮ್ಮ ಗಮನ ಸೆಳೆಯುತ್ತವೆ. 1831ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರರ ಮೇಲೆ ಕೆಲವರು ಕೆಲವು ಗುರುತರವಾದ ಆಪಾದನೆಗಳನ್ನು ಮಾಡಿದುದರ ಪರಿಣಾಮವಾಗಿ ಬ್ರಿಟಿಷ್ ಸರ್ಕಾರವೇ ಸಂಸ್ಥಾನದ ಆಡಳಿತವನ್ನು ವಹಿಸಿಕೊಂಡಿತು. ಹಿಂದೆಯೇ ತಿಳಿಸಿರುವಂತೆ ಮೈಸೂರಿನಲ್ಲಿ 'ಬ್ರಿಟಿಷ್ ಕಮಿಷನ್' ಸ್ಥಾಪಿತವಾಯಿತು; ಇಬ್ಬರು (ಇಂಗ್ಲಿಷ್) ಕಮಿಷನರುಗಳು ನೇಮಕಗೊಂಡರು; ದಿವಾನಗಿರಿ ರದ್ದಾಯಿತು. ಮುಮ್ಮಡಿ ಕೃಷ್ಣರಾಜ ಒಡೆಯರರು ಜೀವಂತರಿರುವವರೆಗೂ ಅಧಿಕಾರ ಕೈಗೆ ಬರಲಿಲ್ಲ. ಅವರ ದತ್ತು ಪುತ್ರ (ಹತ್ತನೇ) ಚಾಮರಾಜ ಒಡೆಯರರ ಕಾಲದಲ್ಲಿ(1881 ರಿಂದ) ಸಂಸ್ಥಾನದ ಆಡಳಿತವು ಪುನಃ ಒಡೆಯರರ ಅಧೀನಕ್ಕೆ ಬಂದಿತು.

[27] ಅದೇ, ನಿರೂಪ (19—2—1827), ಪು. 38

[28] ಅದೇ, ನಿರೂಪ (15—8—1828), ಪು. 45

[29] ಅದೇ, ನಿರೂಪಗಳು (12–10–1831 ಮತ್ತು 1–9–1835) ಪು. 43, 52

1831ರಲ್ಲಿ ನೀಡಿದ ನಿರೂಪ (12–10–1831) ಈ ಮೇಲಿನ ಸಂಗತಿಗಳಿಗನುಗುಣವಾಗಿದೆ. ಸರ್ಕಾರದ ಕಾರ್ಯದರ್ಶಿ ಸಿ. ವೆಂಕಟರಾಯರು ಚಿತ್ರದುರ್ಗದ ಫೌಜುದಾರ್ ವೆಂಕಟರಾಯರಿಗೆ ಈ ನಿರೂಪವನ್ನು ಬರೆದಿರುವರು. ಫೌಜುದಾರ್ ವೆಂಕಟರಾಯರು ಚಿತ್ರದುರ್ಗ ಬೃಹನ್ಮಠದಲ್ಲಿನ ಸ್ಥಿತಿಯ ಬಗ್ಗೆ ಲೇಖನ ಬರೆದುದಕ್ಕೆ ಉತ್ತರವಾಗಿ ಕಾರ್ಯದರ್ಶಿಗಳು ಬರೆದ ಈ ನಿರೂಪದಲ್ಲಿ '......ಶ್ರೀ ಮನ್ನಿರಂಜನ ಮುರುಗಾ ರಾಜೇಂದ್ರ ಸ್ವಾಮಿಗಳವರು ಈಗ್ಯೆ ಕೆಲವು ದಿವಸಕ್ಕೆ ಮುಂಚೆ ಶಿವಾಧೀನವನ್ನು ಹೊಂದಿದರು. ಈಚೆಗೆ ಯಾರಿಗೂ ಪಟ್ಟ ಮಾಡಲಿಲ್ಲ. ಕುಂಪಣೀ ಶೀಮೆಯಲ್ಲಿ ಮಾಡಿ ಕೊಳ್ಳುವುದೇ ಶಿವಾಯಿ ಈ ಸ್ಥಳದಲ್ಲಿ ಯಾರಿಗೂ ಮಾಡುವದಿಲ್ಲ....' ಎಂದು ಪ್ರಸ್ತಾಪಿಸಿದ್ದಾರೆ. 'ಕುಂಪಣೀ ಶೀಮೆಯಲ್ಲಿ' ಎಂಬ ಮಾತಿನಿಂದ ಆಗಾಗಲೇ 'ಗುರುಬಸವನ ಪ್ರಕರಣ' ಮುಗಿದು ಹೋದಂತೆ ವ್ಯಕ್ತಪಡುತ್ತದೆ. ನಿರೂಪ ಮುಂದುವರೆದು, 'ಪೂರ್ವಾರಭ್ಯ ನಡೆದು ಬಂದ ಮೇರೆ ಎಲ್ಲಾ ಜನಗಳು ಮಠದಲ್ಲಿ ಸೇರಿ ಯೋಗ್ಯರಾಗಿ ಇರುವವರನ್ನು ಗೊತ್ತುಮಾಡಿ ಆ ಬಗ್ಯೆ ಹುಜೂರಿಗೆ ಅರಿಕೆ ಮಾಡಿ.....' ಎಂಬ ಮುಂತಾದ ಮಾತುಗಳಿಂದ ಚರಂತರಿಗೆ, ಸಾರ್ವಜನಿಕರಿಗೆ (ಭಕ್ತರಿಗೆ) ತಮಗೆ ಯೋಗ್ಯರಾಗಿ ಕಂಡು ಬಂದಂಥವರನ್ನು ಗುರುಗಳನ್ನಾಗಿ ಆಯ್ಕೆ ಮಾಡುವ ಸ್ವಾತಂತ್ರ್ಯ ಕೊಟ್ಟಂತೆ ಗೊತ್ತಾಗುತ್ತದೆ.

ಈ ಮೇಲಿನ ನಿರೂಪದಲ್ಲಿ ಬಳಸಲಾದ 'ಕುಂಪಣೀ ಶೀಮೆಯಲ್ಲಿ' ಎಂಬ ಮಾತನ್ನು ಮತ್ತಷ್ಟು ಪರಿಶೀಲಿಸುವುದಾದರೆ, ಈ ನಿರೂಪವನ್ನು ಕೊಡುವ ವೇಳೆಗೆ (ಅಕ್ಟೋಬರ್ 12) ಮೈಸೂರು ಸಂಸ್ಥಾನದ ಆಡಳಿತ ಬ್ರಿಟಿಷ್ ಕಮಿಷನ್ನಿನ ಕೈಯಲ್ಲಿತ್ತು. ಈ ಹಿಂದೆ ಉಲ್ಲೇಖಿಸಿರುವ ಇಂಗ್ಲಿಷ್ ಅಧಿಕಾರಿ ಜ್ಯೂನಿಯರ್ ಕಮಿಷನರ್ ಸಿ. ಎಂ. ಲಷಿಂಗ್‌ಟನ್ ಆಗಾಗಲೇ ಅಧಿಕಾರ ವಹಿಸಿಕೊಂಡಿದ್ದ; 4–10–1831 ರಿಂದ ಅವನ ಆಡಳಿತಾವಧಿ ಪ್ರಾರಂಭಗೊಂಡಿತ್ತು. ಆದ್ದರಿಂದ ಮುಮ್ಮಡಿ ಕೃಷ್ಣರಾಜ ಒಡೆಯರರು ಆ ವೇಳೆಗೆ ಅಧಿಕಾರವನ್ನು ಕಳೆದು ಕೊಂಡಿದ್ದು, ಶ್ರೀ ಬೃಹನ್ಮಠದ ಗುರುಗಳನ್ನು ನೇಮಿಸುವ ಕಾರ್ಯದಲ್ಲಿ ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸದೆ ಅವರಿಗೆ ಅನ್ಯ ಮಾರ್ಗವಿರಲಿಲ್ಲವೆಂದು ತೋರುತ್ತದೆ. ಎಲ್ಲಾ ಆಡಳಿತವೂ ಇಂಗ್ಲಿಷರ ಅಧೀನದಲ್ಲಿದ್ದುದರಿಂದ ಮಠದ ಗುರುಗಳ ನೇಮಕದ ಸಂಗತಿ 'ಕುಂಪಣಿ ಶೀಮೆ'ಗೆ ಸೇರಿದ್ದಿತೆಂಬ ಮಾತನ್ನು ನಾವಿಲ್ಲಿ ಒಪ್ಪಿಕೊಳ್ಳಬಹುದು.

1835 ಸೆಪ್ಟೆಂಬರ್ 1 ರಂದು ನೀಡಿರುವ ನಿರೂಪವು ಬ್ರಿಟಿಷ್ ಕಮಿಷನ್ನಿನಿಂದ ಕೊಡಲ್ಪಟ್ಟಿರುವುದಾಗಿದೆ. ನಿರೂಪದ ಮೇಲ್ಭಾಗದಲ್ಲಿ 'ಮೈಸೂರು ಥೊರೆಗಳ ಶೀಮೆಯ ರಾಜ್ಯಭಾರದ ಕಮಿಷ್ನರ್' ಎಂಬ ಮುದ್ರೆಯನ್ನು ಹಾಕಲಾಗಿದೆ. ಕಮಿಷನ್ನಿನ ಪರ ಕ್ಲಾರ್ಕ್ (ಗುಮಾಸ್ತೆ) ಒಬ್ಬನು ನಿರೂಪಕ್ಕೆ ಸಹಿ ಹಾಕಿದ್ದಾನೆ. ನಿರೂಪದಲ್ಲಿ ಮುರುಗಿ ಮಠಕ್ಕೆ ಸೇರಿದ ಎಲ್ಲಾ ಚರಂತಿಗಳು, ಶೆಟ್ಟಿ ವರ್ತಕರು (77 ಜನ ಚರಂತಿಗಳು, ಮುಖ್ಯರೆನಿಸಿದ 65 ಜನ ವರ್ತಕರು) ಬರೆದು ಕಳುಹಿಸಿದ ಪತ್ರದ ಅನುಗುಣವಾಗಿ 'ಮಠದಲ್ಲಿ ಖಾಲಿಯಾಗಿರುವ ಲಿಂಗಾಯಿತರ ಗುರುಪಟ್ಟಕ್ಕೆ ಮತ್ತೊಬ್ಬರು ಯೋಗ್ಯರಾಪವರನ್ನ ನೇಮಿಸತಕ್ಕದ್ದು' ಎಂತಲೂ, ಚರಂತರೆಲ್ಲರೂ ಸೇರಿ ಆಯ್ಕೆ ಮಾಡಬೇಕಾದ ಕಾರ್ಯ ಇವಾಗಿರುವುದರಿಂದ ಅವರು ಆಯ್ಕೆ ಮಾಡಿದ ವ್ಯಕ್ತಿಯನ್ನು ಸ್ವಾಮಿಗಳಾಗಿ ಪಟ್ಟಾಭಿಷೇಕ ಮಾಡಿಸುವಂತೆಯೂ, ಮಾಮೂಲಾಗಿ ನಡೆಯುವ ಉತ್ಸವಗಳಿಗೆ ವ್ಯವಸ್ಥೆ ಮಾಡುವಂತೆಯೂ ಚಿತ್ರದುರ್ಗದ ಅಮಲ್ದಾರರಿಗೆ ತಿಳಿಸಲಾಗಿದೆ. ಈ ನಿರೂಪವನ್ನು ಕೊಟ್ಟ ಸಮಯದಲ್ಲಿ ಶ್ರೀ ಬೃಹನ್ಮಠದ ಪೀಠಾಧಿಕಾರಿಗಳಾಗಿ ಸಾವಳಿಗೆ ಗುರುಶಾಂತಸ್ವಾಮಿಗಳಿದ್ದರು. 'ಮಹಾಲಿಂಗೇಂದ್ರ ವಿಜಯ' ಈ ಬಗ್ಗೆ ಹೇಳುತ್ತದೆ. 1833 ರಲ್ಲಿ ಅವರು ಪೀಠಾಧಿಕಾರಿಗಳಾಗಿದ್ದು, 1835 ರಲ್ಲಿ ಪೀಠಾಧಿಕಾರಿಗಳ ನೇಮಕ ಮಾಡುವ ಬಗ್ಗೆ ಈ ಮೇಲ್ಕಂಡ ನಿರೂಪ ತಿಳಿಸುತ್ತದೆ. ಇಲ್ಲಿ ಸ್ವಲ್ಪ ಕಾಲ ವ್ಯತ್ಯಾಸವಾದಂತೆ ತೋರುತ್ತದೆ. 1835 ರಲ್ಲಿ ಗುರುಶಾಂತ ಸ್ವಾಮಿಗಳು ಪಟ್ಟಕ್ಕೆ ಬಂದರೆಂದು ತೋರುತ್ತದೆಯಲ್ಲದೆ, ಮಹಾದೇವ ತನ್ನ ಗ್ರಂಥದಲ್ಲಿ ತಿಳಿಸಿದಂತೆ 1833 ರಲ್ಲಿ ಅಲ್ಲ.

1867 ರಲ್ಲಿ ಕೊಟ್ಟ ಒಂದು ನಿರೂಪವು,[30] ಸ್ವಾಮಿಗಳು ಅಡ್ಡಪಾಲಕೀ ಉತ್ಸವದ ಸಮಯದಲ್ಲಿ ಪ್ರದರ್ಶಿಸಬೇಕಾದ ಬಿರುದು ಬಾವಲಿಗಳನ್ನು ನಿಷೇಧಿಸಿ ಡೆಪ್ಯೂಟಿ ಸೂಪರಿನ್‌ಟೆಂಡೆಂಟ್ ಮಿ। ಕೋಲ್ ಎಂಬುವರು ಕೊಟ್ಟ ಅಪ್ಪಣೆಯನ್ನು ರದ್ದುಪಡಿಸಿ ಕಮಿಷನರ್ ಸರ್ಕಾರದ ಕಾರ್ಯದರ್ಶಿ ಕ್ಯಾಂಪ್ ಬೆಲ್ ಅವರು (ಕ್ಯಾಂಪ್, ಬೆಂಗಳೂರು–ಇಲ್ಲಿಂದ) ಕೊಟ್ಟ ಒಪ್ಪಿಗೆಯನ್ನು ಒಳಗೊಂಡಿದೆ.

ಕಡೆಯದಾಗಿ 1869 ಸೆಪ್ಟೆಂಬರ್‌ನಲ್ಲಿ ಬೆಂಗಳೂರಿನ ಹೆಡ್ ಮುನ್ಷೀ ರಂಗರಾವ್ ಎಂಬುವರುಸೀಮೆ ಗಡಿಗಳ ಅಮಲ್ದಾರರು ಕಿಲ್ಲೆದಾರರು ಠಾಣೆದಾರರು ಮುಂತಾದವರಿಗೆ ಬರೆದ ನಿರೂಪದಲ್ಲಿ,[31] ಶ್ರೀ ಬೃಹನ್ಮಠದ ಜಗದ್ಗುರುಗಳವರು ಶಿಷ್ಯಾರ್ಜನೆಗಾಗಿ ಸಂಚಾರ ಕೈಗೊಳ್ಳುವುದರಿಂದ ಅವರು ತಮ್ಮ ಮಾಮೂಲು ಬಿರುದುಗಳ ಸಹಿತವಾಗಿ ಹೊರಟು ಗಡಿಗಳಲ್ಲಿ ಬಂದಾಗ ಅವರಿಗೆ ಗೌರವ ತೋರಿ, ಬೇರೆಯವರಿಂದ ತೊಂದರೆಯಿಲ್ಲದಂತೆ ನೋಡಿಕೊಳ್ಳಬೇಕೆಂದು ಸೂಚಿಸಲಾಗಿದೆ.

* * *

ಮುಮ್ಮಡಿ ಕೃಷ್ಣರಾಜ ಒಡೆಯರರು 27—3—1868 ರಲ್ಲಿ ಇಹಲೋಕ ತ್ಯಜಿಸಿದರು. ತಮ್ಮ ಜೀವಿತಾವಧಿಯಲ್ಲಿ ಇತರ ಮಠಗಳಿಗೆ ನೀಡಿದ ಪುರಸ್ಕಾರ, ಗೌರವಗಳನ್ನೇ ಶ್ರೀ ಬೃಹನ್ಮಠಕ್ಕೂ ನೀಡಿದರೆಂಬುದನ್ನು ಮೇಲೆ ನಿರೂಪಿಸಿದ ನಿರೂಪ ಇತ್ಯಾದಿಗಳಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಸಂಸ್ಥಾನದ ಅರಸುವಾಗಿ ರಾಜ್ಯಪಾಲನೆಯ ಜೊತೆ ಧರ್ಮಪಾಲನೆಯನ್ನೂ ಮಾಡಬೇಕೆಂಬ, ಪೂರ್ವದಿಂದಲೂ, ಬಂದ ತತ್ವವನ್ನು ಅಕ್ಷರಶಃ ಅನುಷ್ಠಾನಕ್ಕೆ ತಂದದು ಅವರ ವಿಶಿಷ್ಟ ಸ್ವಭಾವವೆನ್ನಬೇಕು. ಮೈಸೂರು ಸಂಸ್ಥಾನದಲ್ಲಿ ಬ್ರಿಟಿಷ್ ಕಮಿಷನ್ನಿನ ಆಡಳಿತ ಜಾರಿಗೆ ಬರುವ ಹಿನ್ನೆಲೆಯಲ್ಲಿ

30 ಅದೇ, ನಿರೂಪ (19–11–1867), ಪು. 55

31 ಅದೇ, ನಿರೂಪ (20—9—1869), ಪು.

[illegible] ಒಂದಾಗಿದ್ದಿತು. ಇದರಿಂದಲೂ ಮುಮ್ಮಡಿ ಕೃಷ್ಣರಾಜ ಒಡೆಯರರ [illegible] ಶ್ರೀ [illegible] ಮುಮ್ಮಡಿ ಕೃಷ್ಣರಾಜ ಒಡೆಯರರ [illegible]*

---

*ಈ ಲೇಖನ ರಚನೆಯಲ್ಲಿ ಹಲವು ವಿಧವಾಗಿ ಸಹಾಯ ಮಾಡಿದ ಶ್ರೀ [illegible], ಶಾಸನ ಸಹಾಯಕರುಗಳು, ಎಪಿಗ್ರಾಫಿಯಾ ಕರ್ನಾಟಕ ಸಂಪುಟಗಳ [illegible] ಕನ್ನಡ [illegible]—ಇವರುಗಳಿಗೆ ಕೃತಜ್ಞತೆಗಳನ್ನರ್ಪಿಸುತ್ತೇನೆ.

ಗ್ರಂಥ ಋಣ :

1. ಶ್ರೀ ಮನ್ಮಹಾರಾಜರವರ ವಂಶಾವಳಿ (ಸಂಪುಟ 2)
2. ಮಹಾದೇವನ ಮಹಾಲಿಂಗೇಂದ್ರ ವಿಜಯ
   ಸಂ. ಡಾ|| ಎಲ್. ಬಸವರಾಜು
3. Mysore Gazetteer (Vol. II, Part IV)
   Ed. C. Hayavadana Rao
4. Chitradurga District Gazetteer
   Ed. B. N. Sri Sathyan

ಜನಪದ ಗೀತೆ

*****

ನೋಡ ಬೇಕ್ರಿ ಸಂಸ್ಥಾನ
ರೂಢಿಯೊಳಗೆ ದೊಡ್ಡ ಸಿಂಹಾಸನ.
ನಾಡಿಗೆ ಒಡೆಯೋ ರಾಜಮುರಿಗೇಂದ್ರ
ಮೂರ್ತ ಮಾಡೋದೊಂದು ಗಳಿಗ್ಯಾಗೆ.

ಮುರಿಗೆಸ್ವಾಮಿಯೆಂಬ ದೊಡ್ಡವರು,
ಸ್ವಾಮಿ ಗುರುಮಠಕೆ ಬೇಕಾದವರು
ಆನೆಗಂಬಾರಿ ಡಂಕುನಿಸಾರಿ
ದುರುಗಕೋಗಿ ಕಾಳೆಯನಿಡಿಸಿದರು.

ಚಿತ್ರಕಲ್ಲು ದುರ್ಗದೊಳಗೆ
ಸ್ವಾಮಿ ಭರ್ಜರಿ ಮಾರ್ನಾಮಿ ದಸರ್ಯಾಗೆ,
ರತ್ನ ಕೆತ್ತಿಸಿದ ಸಿಂಹಾಸನದ ಮ್ಯಾಲೆ
ಮೂರ್ತ ಮಾಡೊದೊಂದು ಗಳಿಗ್ಯಾಗೆ.

ಸಂಗ್ರಹ :

ಟಿ. ಈ. ವೀರಭದ್ರಯ್ಯ, ಚಿತ್ರದುರ್ಗ.

ಚುಟುಕು

* * * * *

ಅಖಿಲ ಭಾರತ ವೀರಶೈವ ಮಹಾ ಸಭೆಯನ್ನು ಸ್ಥಾಪಿಸಬೇಕೆಂದು ನಿರ್ಣಯವಾದದ್ದು [illegible] (ಮುಂದೆ ಜಗದ್ಗುರು ಜಯದೇವ ಸ್ವಾಮಿಗಳು) ಅಧ್ಯಕ್ಷತೆಯಲ್ಲಿ–1903 ರಲ್ಲಿ, [illegible]. ವೀರಶೈವ ಮಹಾ ಸಭೆಯ [illegible] ಫಂಡ್ ಸ್ಥಾಪಿಸಿದ್ದು ಜಗದ್ಗುರು ಜಯದೇವ ಮಹಾಸ್ವಾಮಿಗಳ ನೇತೃತ್ವದಲ್ಲಿ ನಡೆದ [illegible] ವೀರಶೈವ ಮಹಾಸಭೆಯಲ್ಲಿ–1917 ರಲ್ಲಿ, ದಾವಣಗೆರೆಯಲ್ಲಿ. ಆಗ ಅಲ್ಲಿ ಈ ನಿಧಿಗೆ [illegible] ರೂಪಾಯಿಗಳು [illegible]. ಈಗ ಅದು ಲಕ್ಷಾಂತರ ರೂಪಾಯಿಗಳಷ್ಟಾಗಿದೆ.

—ಟಿ. ಎಸ್. ಚನ್ನಪ್ಪ, ಬೆಂಗಳೂರು.



ಚಿತ್ರದುರ್ಗದ ಗೌರ್ನ್ಮೆಂಟ್ ಆಸ್ಪತ್ರೆಯಲ್ಲಿರುವ ಮಕ್ಕಳ ವಾರ್ಡ್.



ಕರ್ತೃ ಗದ್ದುಗೆಯಲ್ಲಿ ರುದ್ರಾಭಿಷೇಕ



ಚಿತ್ರದುರ್ಗದ ಗೌರ್ನಮೆಂಟ್ ಕಾಲೇಜಿನ ಆವರಣದಲ್ಲಿರುವ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಕ್ರೀಡಾರಂಗ



ಮೈಸೂರಿನಲ್ಲಿರುವ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪೆಥಾಲಜಿ ಲ್ಯಾಬೊರೇಟರಿ



ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ವಿದ್ಯಾರ್ಥಿ ನಿಲಯ, ಚಿತ್ರದುರ್ಗ



ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ವಿದ್ಯಾರ್ಥಿ ನಿಲಯ, ಬೆಂಗಳೂರು



ಚಿತ್ರದುರ್ಗದಲ್ಲಿರುವ ಶ್ರೀ ಜಗದ್ಗುರು ಮುರುಘರಾಜೇಂದ್ರ ಆರ್ಟ್ಸ್, ಸೈನ್ಸ್ ಮತ್ತು ಕಾಮರ್ಸ್ ಕಾಲೇಜ್



ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ವಿದ್ಯಾರ್ಥಿ ನಿಲಯ
ತುಮಕೂರು

ಯುಗ ಪ್ರವರ್ತಕ-ಜಯದೇವ ಜಗದ್ಗುರು

ಲೇಖಕರು :
ಪಂಡಿತರತ್ನಂ, ಪದ್ಮಶ್ರೀ ಡಾ|| **ಬಿ. ಶಿವಮೂರ್ತಿ ಶಾಸ್ತ್ರೀ,**
ಬೆಂಗಳೂರು–೧೦.

ಯಾವುದೇ ಒಂದು ದೇಶದ ಅಥವಾ ಸಮಾಜದ ಆಗು ಹೋಗುಗಳು ಆ ಸಮಾಜದ ಪ್ರಮುಖ ಮಹನೀಯರನ್ನು ಅವಲಂಬಿಸಿರುತ್ತವೆ. ಈ ಮಾತು ದಕ್ಷಿಣ ಭಾರತದಲ್ಲಿ ಪ್ರಮುಖವೆಂದೆನಿಸಿರುವ ವೀರಶೈವ ಸಮಾಜಕ್ಕೂ ಅನ್ವಯಿಸುತ್ತದೆ. ಲಿಂಗವಂತ ಸಮಾಜಕ್ಕೆ ಸುಮಾರು ಒಂದು ಸಾವಿರ ವರ್ಷಗಳಷ್ಟು ಸುಸ್ಪಷ್ಟವಾದ ಇತಿಹಾಸವಿದೆ. ಧಾರ್ಮಿಕ, ದಾರ್ಶನಿಕ, ವಾಙ್ಮಯಾತ್ಮಕ, ರಾಜಕೀಯ, ಶೈಕ್ಷಣಿಕ, ಸಾಂಸ್ಕೃತಿಕ ಮೊದಲಾದ ಎಲ್ಲಾ ವಿಚಾರಗಳಿಂದಲೂ, ಲಿಂಗವಂತ ಸಮಾಜವು ಪರಿಪೂರ್ಣವೆನಿಸಿದೆ. ಹಿಂದಿನ ವಿಚಾರಗಳನ್ನೆಲ್ಲಾ ಬಿಟ್ಟು, ಇತ್ತೀಚಿನ ಪರಿಸ್ಥಿತಿಯನ್ನು ಪರಿಶೀಲಿಸಿದರೆ ಹತ್ತೊಂಬತ್ತನೆಯ ಶತಮಾನದ ಉತ್ತರ ಭಾಗ, ಇಪ್ಪತ್ತನೆಯ ಶತಮಾನದ ಪೂರ್ವ ಭಾಗದಲ್ಲಿ ಲಿಂಗವಂತ ಸಮಾಜದಲ್ಲಿ ಹೊಸ ಚೈತನ್ಯವುಂಟಾದುದನ್ನು ನಾವು ಕಾಣಬಹುದು.

ಈ ಬಗೆಯ ಹೊಸ ಚೈತನ್ಯಕ್ಕೆ ಈ ಕಾಲದಲ್ಲಿ ಲಿಂಗವಂತರಲ್ಲಿ ಹುಟ್ಟಿದ ಕೆಲವು ಮಂದಿ ಮಹಾ ಪುರುಷರು ಕಾರಣರೆಂದು ಹೇಳಬಹುದು. ಉತ್ತರ ಕರ್ಣಾಟಕದಲ್ಲಿ ಶಿರಸಂಗಿ ಲಿಂಗರಾಜರೂ, ರಾಜಾ ಲಕುಮನಗೌಡರೂ, ವಾರದ ಮಲ್ಲಪ್ಪನವರೂ, ಗಂಗಾಧರ ಮಡಿವಾಳೇಶ್ವರರೂ, ಡೆಪ್ಯುಟಿ ಚನ್ನಬಸಪ್ಪನವರೂ, ಗುರುಶಿದ್ದಪ್ಪ ಗಿಳಗಂಚಿಯವರೂ, ಅರಟಾಳು ರುದ್ರಗೌಡರೂ, ಶಿವಶರಣ ವೀರಯ್ಯನವರೂ; ಮೈಸೂರು ರಾಜ್ಯದ ಕಡೆ-ಸರ್, ಕೆ.ಪಿ. ಪುಟ್ಟಣ್ಣ ಶೆಟ್ಟರೂ, ವ್ಯಾಕರಣದ ಬಿ. ಮಲ್ಲಪ್ಪನವರೂ, ಅಭಿನವ ಕಾಳಿದಾಸ ಬಸವಪ್ಪ ಶಾಸ್ತ್ರಿಗಳೂ, ಗುರಿಕಾರ್ ಮರಿಮಲ್ಲಪ್ಪನವರೂ, ರಾವ್ ಬಹದ್ದೂರ್ ಗುಬ್ಬಿ ತೋಟದಪ್ಪನವರೂ, ರಾವ್ ಬಹದ್ದೂರ್ ಎಲಿ ಮಲ್ಲಪ್ಪ ಶೆಟ್ಟರೂ, ಯಜಮಾನ್ ವೀರಸಂಗಪ್ಪನವರೂ, ಕರ್ಣಾಟಕ ಭಾಷಾರತ್ನಂ ಪಿ. ಆರ್. ಕರಿಬಸವಶಾಸ್ತ್ರಿಗಳೂ, ಆಸ್ಥಾನ ವಿದ್ವಾನ್ ಎನ್. ಆರ್. ಕರಿಬಸವ ಶಾಸ್ತ್ರಿಗಳೂ, ದಿವಾನ್ ಬಹದ್ದೂರ್ ಪಿ. ಮಹದೇವಯ್ಯನವರೂ, ಹಿಂದುಳಿದವರ ಹಿತಚಿಂತಕ ಎಂ. ಬಸವಯ್ಯನವರೂ, ಬಳ್ಳಾರಿ ಕಡೆ ಸಕ್ಕರೆ ಕರಡಪ್ಪನವರೂ; ಮಲೆನಾಡಿನ ಕಡೆ ಧರ್ಮಪ್ರಕಾಶ ಎ. ಚಂದ್ರೇಗೌಡರೂ; ಮದರಾಸಿನ ಕಡೆ ಗುರುಬಸವ ಕಂಪನಿಯ ನಾಗಪ್ಪಶೆಟ್ಟರೂ; ಮಠಾಧಿಪತಿಗಳಲ್ಲಿ ಶ್ರೀ ಜಯದೇವ ಜಗದ್ಗುರುಗಳೂ, ಹಾನಗಲ್ ಕುಮಾರ ಸ್ವಾಮಿಗಳೂ ಮೊದಲಾದವರು ಇದ್ದರೆಂದು ಹೇಳಬಹುದು.

ನಮ್ಮ ಕಥಾನಾಯಕರಾದ ಜಯದೇವ ಜಗದ್ಗುರುಗಳು ರಾಯಚೂರು ಜಿಲ್ಲಾ, ಕೊಪ್ಪಳ ತಾಲ್ಲೂಕು, ಬಿನ್ನಾಳು ಗ್ರಾಮದವರು. ಇವರ ತಂದೆ ಮಾಹೇಶ್ವರ ಮನೆತನಕ್ಕೆ ಸೇರಿದ ಚನ್ನಬಸವಯ್ಯನವರು. ಅವರ ಧರ್ಮಪತ್ನಿ ಭ್ರಮರಾಂಬಿಕೆ ಅಮ್ಮನವರು. ಈ ಪುಣ್ಯ ದಂಪತಿಗಳಿಗೆ ದಿನಾಂಕ 27–8–1874 ರಲ್ಲಿ ಒಂದು ಗಂಡು ಶಿಶು ಜನನವಾಯಿತು. ಶಿಶುವಿಗೆ ಜಾತಕರ್ಮಾದಿಗಳನ್ನು ಮಾಡಿಸಿದ ನಂತರ ಚನ್ನವೀರದೇವರು ಎಂದು ನಾಮಕರಣವಾಯಿತು. ಶಿಶುವಿನ ಜಾತಕವನ್ನು ಕೇಳಲಾಗಿ ಜ್ಯೋತಿಷ್ಕರು " ಇವನು ಮಹಾಪುರುಷನಾಗುತ್ತಾನೆ, ಲೋಕೋದ್ಧಾರಕನೆನಿಸುತ್ತಾನೆ, ಕರ್ಣಾಟಕಕ್ಕೆ ಕೀರ್ತಿ ತರುವ ಮಗನಾಗುತ್ತಾನೆ. ಗ್ರಹಗಳ ಬಲವನ್ನು ನೋಡಿದರೆ ಈತನು ವೈರಾಗ್ಯ ಸಂಪನ್ನನೂ, ಪರೋಪಕಾರಿಯೂ, ದೀರ್ಘಾಯುಷ್ಯವುಳ್ಳವನೂ ಆಗುತ್ತಾನೆ. ಈತನ ಜನನದಿಂದ ನಿಮ್ಮ ಮನೆತನವು ಪವಿತ್ರವಾಯಿತು" ಎಂದು ಜೋಯಿಸರು ಹೇಳಿದರು.

ಚನ್ನವೀರದೇವರ ವಿದ್ಯಾಭ್ಯಾಸವು ಮೊದಲು ಹಂಪಸಾಗರದ ಕವಲೂರು ಸಿದ್ದಪ್ಪಯ್ಯನವರಲ್ಲೂ, ಅನಂತರ ಕಂದಗಲ್ಲು ಪರ್ವತ ಶಾಸ್ತ್ರಿಗಳಲ್ಲೂ ನಡೆಯಿತು. ಆಮೇಲೆ ಗದಗಿನ ಜಗದ್ಗುರು ಶ್ರೀ ತೋಂಟದಾರ್ಯರ ಮಠದಲ್ಲಿ ಪಂಡಿತ ನೀಲಕಂಠಶಾಸ್ತ್ರಿಗಳ ಬಳಿ ಕೆಲ ಕಾಲ ಅಭ್ಯಾಸ ನಡೆಯಿತು. ಇವನ ಚಟುವಟಿಕೆಯು ಗದಗಿನ ಜಗದ್ಗುರು ತೋಂಟದಾರ್ಯಸ್ವಾಮಿಗಳನ್ನು ಹರ್ಷಗೊಳಿಸಿತು. ಇವನು ಬುದ್ಧಿವಂತನಾದುದಷ್ಟೇ ಅಲ್ಲ; ಸದ್ಗುಣ ಸಂಪನ್ನನೆನಿಸಿದನು. ಶಿವಾನುಭವದಲ್ಲಿ ಈತನಿಗೆ ಕ್ರಮ ಕ್ರಮದಿಂದ ಅಭಿಮಾನ ಬೆಳೆಯತೊಡಗಿತು. ಅಷ್ಟು ಹೊತ್ತಿಗೆ ಚನ್ನವೀರದೇವನು ಸಿದ್ಧಾಂತ ಕೌಮುದಿಯನ್ನು ಮುಗಿಸಿದ್ದನು. ಆಗ ಗದಗಿನ ಮಠಾಧಿಪತಿಗಳು ಇವನನ್ನು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಕಾಶಿಗೆ ಕಳುಹಿಸಲು ಪ್ರಯತ್ನಿಸಿದರು. ಗದಗಿನ ಕೆಲವು ಉದಾರಿಗಳ ಸಹಾಯದಿಂದ ವಿದ್ಯಾಕೇಂದ್ರವೆನಿಸಿದ ವಾರಣಾಸಿ ಕ್ಷೇತ್ರಕ್ಕೆ ಚನ್ನವೀರದೇವನು ಬಂದನು. ಅಲ್ಲಿ ಹನ್ನೆರಡನೆಯ ಶತಮಾನದ ಶರಣ ಕಲಿಕೇತ ಬ್ರಹ್ಮಯ್ಯನಿಂದ ಸ್ಥಾಪಿಸಲ್ಪಟ್ಟ ಜಂಗಮವಾಡಿ ಎಂಬ ಮಠಕ್ಕೆ ಬಂದು ಸೇರಿದನು. ಆಗ ಆ ಜಂಗಮವಾಡಿ ಮಠಕ್ಕೆ ಶ್ರೀ ಜಗದ್ಗುರು ರಾಜೇಶ್ವರಸ್ವಾಮಿಗಳು ಅಧ್ಯಕ್ಷರಾಗಿದ್ದರು. ಈ ಮಠವು ಕಾಶಿ ವಿಶ್ವಾರಾಧ್ಯ ಪೀಠವೆಂದು ಪ್ರಸಿದ್ಧವಾಗಿದೆ.

ಪ್ರಕೃತ ಚನ್ನವೀರದೇವರು ಕಾಶಿ ಜಂಗಮವಾಡಿ ಮಠದಲ್ಲಿ ಬಿಡಾರ ಮಾಡಿ ಕಾಶಿಯ ಕ್ವೀನ್ಸ್ ಕಾಲೇಜಿಗೆ ಸೇರಿ ಭಟ್ಟಾಚಾರ್ಯ, ತಾರಾಚರಣ ಪಂಡಿತರಲ್ಲಿ ತಮ್ಮ ಸಂಸ್ಕೃತ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಆ ಕಾಲದಲ್ಲಿ ವೀರಶೈವ ಧರ್ಮಕ್ಕೆ ಆಧಾರ ಭೂತಗಳಾದ ಶಿವಾಗಮಗಳನ್ನು ಚೆನ್ನಾಗಿ ಅಭ್ಯಾಸ ಮಾಡಿದರು.

ಆಗ ಕಾಶಿಗೆ ಬಂದು ಹೋಗುತ್ತಿದ್ದ ಪ್ರಮುಖ ಭಾರತೀಯರನ್ನು ಜಂಗಮವಾಡಿ ಮಠಕ್ಕೆ ಆಹ್ವಾನಿಸಿ, ಅವರನ್ನು ಸತ್ಕರಿಸಿ ಗೌರವಿಸುತ್ತಿದ್ದರು. ಇಂತಹವರಲ್ಲಿ ಕೀರ್ತಿಶೇಷ ಲೋಕಮಾನ್ಯ ತಿಲಕರೂ, ಮೈಸೂರು ಚಾಮರಾಜ ಒಡೆಯರೂ ಮುಖ್ಯರು. ಶ್ರೀ ರಾಜೇಂದ್ರ ಮಹಾಸ್ವಾಮಿಗಳು ಇದೇ ಕಾಲದಲ್ಲಿ 'ಲಿಂಗಧಾರಣ ಚಂದ್ರಿಕೆ'ಯೆಂಬ ವೀರಶೈವ ಧರ್ಮಗ್ರಂಥಕ್ಕೆ ಮಹಾಮಹೋಪಾಧ್ಯಾಯ ಶಿವಕುಮಾರ ಶರ್ಮರಿಂದ ವ್ಯಾಖ್ಯಾನ ಬರೆಸಿ ಪ್ರಕಟಿಸಿದರು. ಹೀಗೆ ಚನ್ನವೀರ ದೇವರು ನಡೆಸುವ ಚಟುವಟಿಕೆಗಳು ಶ್ರೀ ಜಗದ್ಗುರು ರಾಜೇಂದ್ರ ಸ್ವಾಮಿಗಳನ್ನು ಬಹಳವಾಗಿ ಆಕರ್ಷಿಸಿದವು. ಕಾಶಿಯಲ್ಲಿ ಚನ್ನವೀರ ದೇವರು ಓದುತ್ತಿರುವಾಗ ಸೊಲ್ಲಾಪುರದ ಕೊಡುಗೈ ದೊರೆ ವಾರದ ಮಲ್ಲಪ್ಪನವರು ಆಗಾಗ ಧನಸಹಾಯ ಮಾಡುತ್ತಿದ್ದರು.

ಕಾಶಿಯಲ್ಲಿ ಇವರ ಅಗಾಧ ಪಾಂಡಿತ್ಯವನ್ನು ನೋಡಿ ಅಲ್ಲಿಯ ವಿದ್ವಾಂಸರು ಇವರನ್ನು ಜಯದೇವ ಪಂಡಿತ ಎಂಬ ಶುಭನಾಮದಿಂದ ಕರೆದರು. ಇವರ ಕೀರ್ತಿ ಕರ್ನಾಟಕದ ತುಂಬ ಪಸರಿಸಿತು.

ಈ ಸಂದರ್ಭದಲ್ಲಿ ಕರ್ನಾಟಕದ ಸವದತ್ತಿ ಗ್ರಾಮದಲ್ಲಿ 1903 ರಲ್ಲಿ ವೈಭವದಿಂದ ಬಸವ ಪುರಾಣದ ಸಮಾಪ್ತಿಯ ಮಂಗಳಕಾರ್ಯವು ನಡೆಯಿತು. ಆ ಸಮಾರಂಭಕ್ಕೆ ಅಥಣಿ ಶಿವಯೋಗಿಗಳು, ಹಾನಗಲ್ ಕುಮಾರಸ್ವಾಮಿಗಳು, ಬೀಳಗಿ ಮಹಾಸ್ವಾಮಿಗಳು, ಬಿದರಿ ಕುಮಾರಸ್ವಾಮಿಗಳು, ಕಿತ್ತೂರು ರೇವಣಸಿದ್ದಯ್ಯನವರು ಮೊದಲಾದ ಪ್ರಮುಖರು ಆಹ್ವಾನಿತರಾಗಿದ್ದರು. ಆ ಸಂದರ್ಭದಲ್ಲಿ ನಡೆದ ಸಭೆಗೆ ಕಾಶಿಯಿಂದ ಜಯದೇವ ಪಂಡಿತರನ್ನು ಆಹ್ವಾನಿಸಲಾಗಿದ್ದಿತು. ಇವರು ಸಭೆಗೆ ಬಂದ ಕೂಡಲೇ ಸಭಾಧ್ಯಕ್ಷರಾಗಿದ್ದ ಅಥಣಿ ಶಿವಯೋಗಿಗಳು ತಮ್ಮ ಪಕ್ಕದಲ್ಲಿ ಸ್ಥಳವನ್ನು ಮಾಡಿ, ತೇಜೋಮೂರ್ತಿಗಳಾದ ಶ್ರೀ ಜಯದೇವ ಪಂಡಿತರನ್ನು ಮಮತೆಯಿಂದ ಬರಮಾಡಿಕೊಂಡು "ಭಾವೀ ಜಗದ್ಗುರುಗಳೇ ಆಗಮಿಸಿರಿ; ಈ ಪಕ್ಕದ ಪೀಠವನ್ನು ಅಲಂಕರಿಸಿ. ನೀವು ಈ ಸಭೆಗೆ ಬಂದುದು ಈ ಮಹಾಸಭೆಯನ್ನು ಪರಿಪೂರ್ಣಗೊಳಿಸಿತು" ಎಂದು ಅಪ್ಪಣೆ ಕೊಡಿಸಿದರು. ಶಿವಯೋಗಿಗಳ ಈ ಉದ್ಗಾರವನ್ನು ಕೇಳಿ ಸಭಿಕರೆಲ್ಲರೂ ಚಕಿತರಾದರು. ಎಲ್ಲರ ಕಣ್ಣುಗಳೂ ಜಯದೇವ ಪಂಡಿತರ ಕಡೆಗೆ ತಿರುಗಿದವು. ಆ ಪುರಾಣ ಸಮಾಪ್ತಿಯಾದ ಮೇಲೆ ಶ್ರೀ ಹಾನಗಲ್ ಸ್ವಾಮಿಗಳವರ ಸಲಹೆಯಂತೆ ಲಿಂಗವಂತ ಸಮಾಜದ ಅಭಿವೃದ್ಧಿಗಾಗಿ ಅಖಿಲ ಭಾರತ ವೀರಶೈವ ಮಹಾಸಭೆಯನ್ನು ಸ್ಥಾಪಿಸಬೇಕೆಂದು ಮುಖಂಡರು ತೀರ್ಮಾನಿಸಿದರು. ಈ ತೀರ್ಮಾನದಲ್ಲಿ ಜಯದೇವ ಪಂಡಿತರೂ ಭಾಗಿಗಳಾಗಿದ್ದರು. ಅನಂತರ ಅವರು ಅಲ್ಲಿಂದ ಕಾಶಿ ಕ್ಷೇತ್ರಕ್ಕೆ ಹಿಂತಿರುಗಿದರು. ಅದೇ ವರ್ಷ (1903) ಧಾರವಾಡದಲ್ಲಿ ಹಾನಗಲ್ ಕುಮಾರಸ್ವಾಮಿಗಳು, ಶಿರಸಂಗಿ ಲಿಂಗರಾಜರು ಮತ್ತು ವಾರದ ಮಲ್ಲಪ್ಪನವರು ಇವರ ನೇತೃತ್ವದಲ್ಲಿ ವೀರಶೈವ ಮಹಾಸಭೆಯು ಪ್ರಾರಂಭವಾಯಿತು. 1904ರಲ್ಲಿ ಧಾರವಾಡದಲ್ಲಿ, 1905 ರಲ್ಲಿ ಬೆಂಗಳೂರಿನಲ್ಲಿ ಶಿರಸಂಗಿ ಲಿಂಗರಾಜರ ಅಧ್ಯಕ್ಷತೆಯಲ್ಲಿ ಮಹಾಸಭೆಯ ಅಧಿವೇಶನಗಳು ನಡೆದವು. ಕಳೆದ ವರ್ಷ ಬೆಂಗಳೂರಿನಲ್ಲಿ ಮಹಾಸಭೆಯ 19ನೆಯ ಅಧಿವೇಶನವು ನಡೆಯಿತು. ಈಗ ಅದರ ಕಾರ್ಯಾಲಯವು ಬೆಂಗಳೂರಿನಲ್ಲಿದೆ.

ಶ್ರೀ ಜಯದೇವ ಪಂಡಿತರು "ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಸ್ವಾಮಿ"ಗಳೆಂಬ ಶುಭನಾಮದಿಂದ ಚಿತ್ರದುರ್ಗದ ಪೀಠಕ್ಕೆ 1903ರಲ್ಲಿ ಅಧ್ಯಕ್ಷರಾಗಿ ಅಧಿಕಾರವನ್ನು ವಹಿಸಿಕೊಂಡರು. 1956 ರ ಪರ್ಯಂತವಾಗಿ ಜಗದ್ಗುರು ಪೀಠವನ್ನು ಅಲಂಕರಿಸಿ, ಸುಮಾರು 53 ವರ್ಷಗಳ ಕಾಲ ಕರ್ನಾಟಕ ರಾಜ್ಯಕ್ಕೂ, ವೀರಶೈವ ಸಮಾಜಕ್ಕೂ ಮರೆಯಲಾಗದ ಮಹೋಪಕಾರಗಳನ್ನು ಮಾಡಿದರು.

ಅವರ ಜೀವಮಾನ ಕಾಲದಲ್ಲಿ ತಮ್ಮ ಶ್ರೀಮಠವನ್ನು ಅತ್ಯಂತ ವೈಭವಪೂರ್ಣವಾಗಿ ಬೆಳಗಿಸಿದರು. ಸಾಂಗಲಿ, ಕೊಲ್ಲಾಪುರ, ಮೈಸೂರು ಮಹಾರಾಜರುಗಳಿಂದ ಪೂಜೆಯನ್ನು ಕೈಗೊಂಡರು. ಚಿತ್ರದುರ್ಗ, ದಾವಣಗೆರೆ, ಅರಸೀಕೆರೆ, ತಿಪಟೂರು, ತುಮಕೂರು, ಬೆಂಗಳೂರು, ಧಾರವಾಡ, ಸಾಂಗಲಿ, ಹಂಸಬಾವಿ, ಕಾಶಿ ಕ್ಷೇತ್ರ, ನೆಲಮಂಗಲ ಮೊದಲಾದ ಕಡೆ ವೀರಶೈವ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದರು. ಅವರ ಜೀವಮಾನದಲ್ಲಿ ಸುಮಾರು 50ಲಕ್ಷ ರೂಪಾಯಿಗಳನ್ನು ವಿದ್ಯಾದಾನಕ್ಕಾಗಿ ವಿನಿಯೋಗಿಸಿದರು. ಧಾರವಾಡದ ಮುರುಘಾ ಮಠ, ಬೆಂಗಳೂರಿನ ಸರ್ಪಭೂಷಣ ಮಠ, ಬೆಟ್ಟದಪುರದ ವಿರಕ್ತ ಮಠ, ಸೋಮವಾರಪೇಟೆಯ ಮುರುಘಾ ಮಠ, ಮಹಲಿಂಗಪುರದ ಮಠ, ನವಿಲುಗುಂದದ ಗವಿಯ ಮಠ, ಬ್ಯಾಡಗಿ ವಿರಕ್ತ ಮಠ, ಅಥಣಿ ಗಚ್ಚಿನ ಮಠ, ತಮಿಳು ನಾಡಿನ ಕುಂಭಕೋಣ ಮಠ ಮೊದಲಾದುವುಗಳನ್ನು ಜೀರ್ಣೋದ್ಧಾರಗೊಳಿಸಿದರು. 1917ರಲ್ಲಿ ದಾವಣಗೆರೆಯಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭೆಯ ಕಾಲದಲ್ಲಿ ಚಿರಸ್ಥಾಯಿ ನಿಧಿಯನ್ನು ಸ್ಥಾಪಿಸಿ ಮಹಾಸಭೆಯು ಶಾಶ್ವತವಾಗಿ ನಡೆಯುವಂತೆ ಮಾಡಿದರು. 1940ರಲ್ಲಿ ನಡೆದ ಕುಂಭಕೋಣಂನ ವೀರಶೈವ ಮಹಾಸಭೆಯನ್ನು ಉದ್ಘಾಟಿಸಿ ಆಶೀರ್ವದಿಸಿದರು. ಧಾರವಾಡದಲ್ಲಿ ನಡೆದ ಕರ್ನಾಟಕ ಏಕೀಕರಣ ಸಮ್ಮೇಳನವನ್ನು(1927) ಪ್ರಾರಂಭಗೊಳಿಸಿ ಅನುಗ್ರಹಿಸಿದರು. 1919ರಲ್ಲಿ ಬೆಂಗಳೂರಿನಲ್ಲಿ ಇರುವ ಶ್ರೀ ಜಗದ್ಗುರು ಜಯದೇವ ವಿದ್ಯಾರ್ಥಿ ನಿಲಯವನ್ನು ಕೀರ್ತಿಶೇಷ ಮೈಸೂರು ಯುವರಾಜರಿಂದ ಪ್ರತಿಷ್ಠಾಪನೆಗೊಳಿಸಿದರು. 1937ರಲ್ಲಿ ಮೈಸೂರಿನಲ್ಲಿ ದಿವಾನರಾದ, ಸರ್ ಮಿರ್ಜಾ ಇಸ್ಮಾಯಿಲ್ ಸಾಹೇಬರ ಕೋರಿಕೆಯಂತೆ "ರೋಗನಿಧಾನ ಪರಿಶೀಲನಾ ಮಂದಿರ"ವನ್ನು (Pathological Laboratory) ಸ್ಥಾಪಿಸಿದರು. ಅದಕ್ಕೆ ಮೈಸೂರಿನ ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜೇಂದ್ರ ಒಡೆಯರವರಿಂದ ಶಂಕುಸ್ಥಾಪನೆಯನ್ನು ನೆರವೇರಿಸಿದರು. ಬೆಟ್ಟದಪುರದ ತಪೋಧನರಾದ ಶ್ರೀ ಚಿಕ್ಕವೀರ ದೇಶಿಕೇಂದ್ರರನ್ನು ಪ್ರೋತ್ಸಾಹಿಸಿ ಮೈಸೂರಿನಲ್ಲಿ ಒಂದು ವೀರಶೈವ ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸುವಂತೆ ಮಾಡಿದರು. ಧಾರವಾಡ ಮುರಘಾಮಠದ ವಿದ್ಯಾರ್ಥಿ ನಿಲಯಕ್ಕೆ ಉದಾರವಾಗಿ ಧನಸಹಾಯ ಮಾಡಿದರು. ಉಳವಿಯ ಶ್ರೀ ಚನ್ನಬಸವೇಶ್ವರ ದೇವಾಲಯವನ್ನೂ, ಅಲ್ಲಿ ನಡೆಯುವ ಜಾತ್ರೆಯನ್ನೂ ವ್ಯವಸ್ಥೆಗೊಳಿಸಿದರು. ಅಥಣಿಯ ಶ್ರೀ ಶಿವಯೋಗಿಗಳ ಮಠ, ಮುಳುಗುಂದದ ಬಾಲಲೀಲಾ ಮಹಾಂತಸ್ವಾಮಿಗಳ ಮಠ, ಇವುಗಳನ್ನು ಪ್ರೋತ್ಸಾಹಿಸಿ ಅಭಿವೃದ್ಧಿಪಡಿಸಿದರು. ಕೊಲ್ಲಾಪುರದಲ್ಲಿ ಲಕ್ಷಗಟ್ಟಲೆ ಹಣವನ್ನು ಖರ್ಚುಮಾಡಿ, ಜಗದ್ಗುರು ಮುರುಘಾ ಮಠವನ್ನು ಕಟ್ಟಿಸಿ ಅಲ್ಲಿ ವೀರಶೈವ ವಿದ್ಯಾರ್ಥಿ ನಿಲಯ

ವನ್ನು ಸ್ಥಾಪಿಸಿದರು. ಒಟ್ಟಿನಲ್ಲಿ ಕರ್ನಾಟಕ, ಮಹಾರಾಷ್ಟ್ರ,ಆಂಧ್ರ, ತಮಿಳುನಾಡು ಪ್ರದೇಶಗಳಲ್ಲಿ ಸಂಚರಿಸಿ ಶ್ರೀ ಜಯದೇವ ಜಗದ್ಗುರುಗಳು ವೀರಶೈವ ಸಮಾಜಕ್ಕೂ, ಹಿಂದೂ ಧರ್ಮಕ್ಕೂ ಮಹೋಪಕಾರ ಮಾಡಿದರು. ಮಹಾತ್ಮಾ ಗಾಂಧೀಯವರು ಕರ್ನಾಟಕಕ್ಕೆ ಆಗಮಿಸಿದಾಗ ಶ್ರೀ ಜಗದ್ಗುರುಗಳು ಮಹಾತ್ಮಾ ಗಾಂಧೀಯವರನ್ನು 1934 ರಲ್ಲಿ ಹಾವೇರಿ ಮಠಕ್ಕೆ ಆಹ್ವಾನಿಸಿ ಅವರೊಡನೆ ಹರಿಜನೋದ್ಧಾರ ಸಮಸ್ಯೆಯನ್ನು ಕುರಿತು ಚರ್ಚಿಸಿದರು. ಶ್ರೀ ಬಸವೇಶ್ವರರು ಅಸ್ಪೃಶ್ಯೋದ್ಧಾರ ಮಾಡಿದ ವಿಧಾನಗಳನ್ನು ಗಾಂಧೀಜಿಯವರಿಗೆ ತಿಳಿಸಿದರು. ಹರಿಜನರು ಉದ್ಧಾರವಾಗುವುದು ಮುಖ್ಯವೇ ಹೊರತು, ಉತ್ತಮರು ಹರಿಜನರ ಮಟ್ಟಕ್ಕೆ ಇಳಿಯುವುದು ಸಾಧುವಲ್ಲ ಎಂಬುದು ಜಗದ್ಗುರುಗಳ ಅಭಿಪ್ರಾಯವಾಗಿತ್ತು. ಮುಖ್ಯವಾಗಿ ವಿದೇಶಗಳಲ್ಲಿ ವಿದ್ಯಾರ್ಜನೆಗಾಗಿ ಹೋಗುವ ವಿದ್ಯಾರ್ಥಿಗಳಿಗೆ ಉದಾರವಾಗಿ ಧನ ಸಹಾಯ ಮಾಡಿದರು.

ಶ್ರೀ ಜಗದ್ಗುರು ಜಯದೇವ ಮಹಾಸ್ವಾಮಿಗಳು 1949ರಲ್ಲಿ ವಿದ್ಯಾವಿನಯ ಸಂಪನ್ನರೂ,ಶಮದಮಾದಿ ಸದ್ಗುಣ ಪರಿಪೂರ್ಣರೂ, ನಿರ್ಮಲ ಚರಿತರೂ ಎನಿಸಿದ ಜಯವಿಭವ ಸ್ವಾಮಿಗಳಿಗೆ ತಮ್ಮ ಉತ್ತರಾಧಿಕಾರವನ್ನು ವಹಿಸಿಕೊಟ್ಟರು. ಈ ಸಮಾರಂಭಕ್ಕೆ ದಿವಾನರಾದ ಸರ್. ರಾಮಸ್ವಾಮಿ ಮೊದಲಿಯಾರ್, ಶ್ರೇಷ್ಠ ನ್ಯಾಯಾಧೀಶ ದಿವಾನ್ ಬಹದ್ದೂರ್ ಪಿ. ಮಹದೇವಯ್ಯನವರೂ, ಕರ್ನಾಟಕದ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಎಸ್. ನಿಜಲಿಂಗಪ್ಪನವರು ಮೊದಲಾದ ಪ್ರಮುಖರು ಆಗಮಿಸಿದ್ದರು. ದೇಶ ವಿದೇಶಗಳಿಂದ ಲಕ್ಷಗಟ್ಟಲೆ ಭಕ್ತಮಂಡಲಿಯವರು ಆಗಮಿಸಿದ್ದರು. ಶ್ರೀ ಜಗದ್ಗುರು ಜಯವಿಭವ ಮಹಾಸ್ವಾಮಿಗಳು ಸ್ವಲ್ಪ ಕಾಲ ಆಳಿ ಬಾಳಿದರೂ ಗುರುವಿಗೆ ತಕ್ಕ ಶಿಷ್ಯ ಎನಿಸಿಕೊಂಡರು. ಇವರ ಮನಸ್ಸು ಶರತ್ಕಾಲದ ಆಕಾಶದಂತೆ ನಿರ್ಮಲವಾಗಿತ್ತು. ಬಲ್ಲವರು ಇವರನ್ನು ಅಜಾತ ಶತೃಗಳೆಂದು ಕರೆದುದುಂಟು.

ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು ಹಿಮಾಲಯದಂತೆ ಮಹೋನ್ನತರೂ, ಶಾಂತ ಸಾಗರದಂತೆ ವಿಸ್ತಾರ ಜೀವನವುಳ್ಳವರೂ, ಗಂಗಾ ನದಿಯಂತೆ ನಿರ್ಮಲ ಚರಿತ್ರರೂ, ಬೃಹಸ್ಪತಿಯಂತೆ ಮಹಾ ಮೇಧಾವಿಗಳೂ, ಶಂಕರಾಚಾರ್ಯರಂತೆ ದಿವ್ಯ ಜ್ಞಾನಿಗಳೂ, ಅರವಿಂದರಂತೆ ಪೂರ್ಣಯೋಗಿಗಳೂ, ಮಹಾತ್ಮಾ ಗಾಂಧೀಯವರಂತೆ ಯುಗಪುರುಷರೂ, ಅಲ್ಲಮ ಪ್ರಭುವಂತೆ ವೈರಾಗ್ಯ ಸಂಪನ್ನರೂ, ಬಸವಣ್ಣನವರಂತೆ ಉದಾರ ಚರಿತರೂ, ಭೀಮಸೇನನಂತೆ ಧೈರ್ಯಸ್ಥೈರ್ಯವುಳ್ಳವರೂ, ಸ್ವಾಮಿ ವಿವೇಕಾನಂದರಂತೆ ದೇಶಾಭಿಮಾನಿಗಳೂ ಆಗಿದ್ದರು.

ಪೂಜ್ಯ ಜಗದ್ಗುರುಗಳು ದೂರದೃಷ್ಟಿಯುಳ್ಳ ಮಹಾ ಮುತ್ಸದ್ದಿಗಳು. ಒಂದು ಕೆಲಸವನ್ನು ಹಿಡಿದರೆ ಎಷ್ಟೇ ಕಷ್ಟವೊದಗಿದರೂ ಅದನ್ನು ಪೂರ್ಣಗೊಳಿಸತಕ್ಕವರು. ಯಾರನ್ನಾದರೂ ನೋಡಿದರೆ ಅವರ ಇಂಗಿತವನ್ನು ಕೂಡಲೇ ತಿಳಿದುಕೊಳ್ಳುವ ಸೂಕ್ಷ್ಮಬುದ್ಧಿಯುಳ್ಳವರೂ ಆಗಿದ್ದರು. ಅವರ ಜ್ಞಾಪಕ ಶಕ್ತಿಯು ಅಪಾರವಾದುದು. ಅವರ ಬ್ರಹ್ಮಚರ್ಯವು ಆಚಾರ್ಯ ಭೀಷ್ಮರನ್ನು ಮೀರಿಸತಕ್ಕದ್ದು. ಅವರು ಅಜಾನುಬಾಹುಗಳಾಗಿದ್ದರು. ಅವರಿಗೆ ಆಯುರ್ವೇದದಲ್ಲಿ ಪೂರ್ಣ ನಂಬಿಗೆಯಿತ್ತು. ಅವರು ಅನೇಕ ರೋಗಗಳಿಗೆ ಉಪವಾಸವು ದಿವ್ಯ ಔಷಧವೆಂದು ಹೇಳುತ್ತಿದ್ದರು. ಉಪವಾಸದಲ್ಲಿ ಅವರಿಗೆ ತುಂಬಾ ನಂಬಿಕೆಯಿದ್ದಿತು. "ಲಂಘನಂ ಪರಮೌಷಧಂ" ಎಂದು ಅವರು ಮೇಲಿಂದ ಮೇಲೆ ಹೇಳುತ್ತಿದ್ದರು. ಆದ್ದರಿಂದಲೇ ಅವರು ಎಂಭತ್ತೆರಡು ವರ್ಷಗಳ ಕಾಲ ಸುದೀರ್ಘವಾಗಿ ಬಾಳಿ ಬದುಕಿದರು. ಅವರಿಗೆ ವಿದ್ವಾಂಸರ ಮೇಲೆ ತುಂಬಾ ಅಭಿಮಾನವಿದ್ದಿತು. ಕವಿಪಂಡಿತರಿಗೆ ಹಾಗೂ ಕಲಾವಿದರಿಗೆ ಸದಾ ಉದಾರಾಶ್ರಯ ಕೊಡುತ್ತಿದ್ದರು. ಬಡವರ ಬಗ್ಗೆ ಅವರಿಗೆ ಅಪಾರವಾದ ಅನುಕಂಪನವಿತ್ತು. ಹರಿಜನೋದ್ಧಾರದ ಬಗ್ಗೆ ತುಂಬಾ ಆಸಕ್ತಿಯಿತ್ತು. ಚಿತ್ರದುರ್ಗದ ಬೃಹನ್ಮಠದ ಕರ್ತೃ ಗದ್ದುಗೆಗೆ ಸಂದರ್ಶನಕ್ಕಾಗಿ ಮೊಟ್ಟ ಮೊದಲು ಹರಿಜನರನ್ನು ಬಿಟ್ಟುಕೊಟ್ಟ ಕೀರ್ತಿ ಅವರಿಗೆ ಮಾತ್ರ ಸಲ್ಲತಕ್ಕದ್ದಾಗಿದೆ. ಅವರ ಶಿವಪೂಜಾ ನಿಷ್ಠೆಯು ಅಸದೃಶವಾದುದು. ಅವರು ಶಿವಯೋಗ ಶಾಸ್ತ್ರದಲ್ಲಿ ಬಲ್ಲಿದರು. ಕನ್ನಡ, ಸಂಸ್ಕೃತ, ಹಿಂದಿ ಮತ್ತು ಮರಾಠಿ ಭಾಷೆಗಳಲ್ಲಿ ತುಂಬಾ ಪಾಂಡಿತ್ಯವಿತ್ತು. ಕಾಶಿಯಲ್ಲಿ ತರ್ಕ ಮತ್ತು ವ್ಯಾಕರಣ ಶಾಸ್ತ್ರಗಳಲ್ಲಿ ತುಂಬಾ ಪಾಂಡಿತ್ಯ ಗಳಿಸಿದ್ದರು. ವಾದದಲ್ಲಿ ಅವರನ್ನು ಸೋಲಿಸಲು ಯಾರಿಗೂ ಸಾಧ್ಯವಾಗುತ್ತಿರಲಿಲ್ಲ. ತಮ್ಮ ಅಭಿಪ್ರಾಯವು ತಪ್ಪೆಂದು ಮನವರಿಕೆಯಾದರೆ ಅದನ್ನು ಬದಲಾಯಿಸಿಕೊಳ್ಳುವಷ್ಟು ಉದಾರ ಮನಸ್ಕರೂ ಆಗಿದ್ದರು. ಒಟ್ಟಿನಲ್ಲಿ ಅವರ ವೈಜ್ಞಾನಿಕ ದೃಷ್ಟಿ, ವಿಶಾಲವಾದ ಮನೋಧರ್ಮ ಇವುಗಳಿಂದ ಅವರು ವಸುದೇವ ಕುಟುಂಬಿಗಳಾಗಿದ್ದರು. ಜಾತಿ, ಮತ, ಪಂಥಗಳನ್ನು ಮೀರಿದ ಮಹಾಮಾನವ ಅಥವಾ ದೇವತಾ ವರ್ಗದ ಮಾನವ ಎನಿಸಿಕೊಂಡಿದ್ದರು. ಅವರ ಆವಿರ್ಭಾವದಿಂದ ವೀರಶೈವ ಧರ್ಮವು ಪ್ರಕಾಶಗೊಂಡಿತು. ಕರ್ನಾಟಕವು ಕಳೆಗೊಂಡಿತು. ಭಾರತಕ್ಕೆ ಭಾಗ್ಯೋದಯವಾಯಿತು.

ಎಂತಹ ಮಹನೀಯರಾದರೂ ಪಂಚಭೂತಾತ್ಮಕವಾದ ಈ ಪ್ರಪಂಚದಲ್ಲಿ ಭೌತಿಕ ದೇಹವನ್ನು ಧರಿಸಿದ ಮೇಲೆ ಒಂದು ದಿನ ಲೀನವಾಗಲೇಬೇಕು. ಜನನವು ಮರಣವನ್ನು ಒಡಗೊಂಡೇ ಬರುತ್ತದೆ. "ಜಾತಸ್ಯ ಮರಣಂ ಧೃವಂ" ಎಂಬ ವಾಕ್ಯವು ಈ ಅರ್ಥವನ್ನೇ ಹೇಳುತ್ತದೆ. ಹುಟ್ಟಿದ ಸೂರ್ಯ ಮುಳುಗಲೇಬೇಕು. ಅಂತೆಯೇ ಜನಿಸಿದ ಮಾನವನು ಸಾಯಲೇಬೇಕು. ಇದು ಪ್ರಕೃತಿ ನಿಯಮ. ಈ ವಿಧಿಯನ್ನು ಮೀರಲು ಯಾರಿಗೂ ಸಾಧ್ಯವಿಲ್ಲ. ಒಂಭತ್ತು ರಂಧ್ರಗಳಿಂದ ಕೂಡಿದ ಘಟ ಎಂಬ ಗಡಿಗೆಯಲ್ಲಿ ಜೀವನ ಎಂಬ ನೀರು ಹಲವಾರು ವರ್ಷ ಇರುವುದು ಆಶ್ಚರ್ಯವೇ ಹೊರತು, ಹೋಗುವುದು ಆಶ್ಚರ್ಯವಲ್ಲ ಎಂದು ವಿಶ್ವಕವಿ ತಿರುವಳ್ಳವರ್ ಹೇಳಿದ್ದಾನೆ. ಈ ತತ್ವದಂತೆ ವಜ್ರಕಾಯರಾದ ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ದೇಹವು ಮರಣಕ್ಕೆ ತುತ್ತಾಗಲೇಬೇಕಾಯಿತು. ಘಟಾಕಾಶವು ಮಹಾಕಾಶದಲ್ಲಿ ಸೇರಿತು. ಜಯದೇವ ಜಗದ್ಗುರುಗಳು ಲಿಂಗೈಕ್ಯರಾದರು. (1956).

ಪೂಜ್ಯ ಶ್ರೀಗಳವರ ಸಂಕಲ್ಪದಂತೆ ಅವರ ಭೌತಿಕ ದೇಹವನ್ನು ಅವರಿಗೆ ಅತ್ಯಂತ ಪ್ರಿಯವಾದ ದಾವಣಗೆರೆಯ ಶಿವಯೋಗ ಮಂದಿರದ ಪಕ್ಕದಲ್ಲಿ ವಿಧ್ಯುಕ್ತವಾಗಿ ಸಮಾಧಿ ಮಾಡಲಾಗಿದೆ. ಆ ಸಮಾಧಿಗೆ ಪ್ರತಿದಿನವೂ ಭಕ್ತಾದಿಗಳಿಂದ ಪೂಜೆ ಪುರಸ್ಕಾರಗಳು ಸಲ್ಲುತ್ತಿವೆ. ಆ ಶಿವಯೋಗಿಯ ಸಮಾಧಿಯ ದೆಸೆಯಿಂದ ದಾವಣಗೆರೆಯು ಒಂದು ಸುಕ್ಷೇತ್ರವಾಗಿದೆ.


ಈಗ ಚಿತ್ರದುರ್ಗದ ಚಿನ್ಮೂಲಾದ್ರಿ ಶೂನ್ಯಸಿಂಹಾಸನ ಪೀಠಕ್ಕೆ ಶ್ರೀ ಜಗದ್ಗುರು ಜಯವಿಭವ ಮಹಾಸ್ವಾಮಿಗಳ ಅನಂತರ ಮಹಾ ವಿದ್ವಾಂಸರೂ, ಶಿವಪೂಜಾ ಸಂಪನ್ನರೂ, ವಿದ್ಯಾಭಿಮಾನಿಗಳೂ ಎನಿಸಿರುವ ಶ್ರೀಮನ್ನಿರಂಜನ ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳವರು ಅಧ್ಯಕ್ಷರಾಗಿದ್ದಾರೆ. ಇವರು ಈ ಪೀಠಕ್ಕೆ 26 ನೆಯವರಾಗಿದ್ದಾರೆ. ಇವರು ತಮ್ಮ ಅಪಾರವಾದ ಗುರುಭಕ್ತಿಯಿಂದ ಶ್ರೀ ಜಯದೇವ ಜಗದ್ಗುರುಗಳವರ ಶತಮಾನೋತ್ಸವವನ್ನು ಸರ್ವಾಂಗ ಸುಂದರವಾಗಿ ನಡೆಸಲು ಏರ್ಪಡಿಸಿರುವುದು ನಿಜಕ್ಕೂ ಶ್ಲಾಘ್ಯವಾದುದು.

ಸಾವಿಲ್ಲದ ಕೇಡಿಲ್ಲದ ಚೆಲುವಂಗಾನೊಲಿದನವ್ವ !
ಎಡೆಯಿಲ್ಲದ ತಡೆಯಿಲ್ಲದ ತೆಱಹಿಲ್ಲದ ಕುಱುಹಿಲ್ಲದ
ಚೆಲುವಂಗಾನೊಲಿದೆನವ್ವ.
ಭವವಿಲ್ಲದ ಭಯವಿಲ್ಲದ ಚೆಲುವಂಗಾನೊಲಿದೆ !
ಕುಲಸೀಮೆಯಿಲ್ಲದ ನಿಸ್ಸೀಮ ಚೆಲುವಂಗಾನೊಲಿದೆ !
ಇದು ಕಾರಣ ಚೆನ್ನಮಲ್ಲಿಕಾರ್ಜುನ ಚೆಲುವ ಗಂಡನೆನಗೆ.
ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು ತಾಯೆ.

—ಮಹದೇವಿಯಕ್ಕ



ಶ್ರೀ ಬೃಹನ್ಮಠದ ಮಹಾದ್ವಾರ (ಒಳಗಿನದು)



ಶ್ರೀ ಬೃಹನ್ಮಠದಲ್ಲಿ ಸಮಾಧಿ ಮಂದಿರದಲ್ಲಿರುವ ಶ್ರೀ ರಾಚೋಟಿ ಸ್ವಾಮಿಗಳವರ ಗದ್ದುಗೆ



ಶ್ರೀ ಬೃಹನ್ಮಠದಲ್ಲಿ ಸಮಾಧಿ ಮಂದಿರದಲ್ಲಿರುವ ಶ್ರೀ ಜಯವಿಭವ ಸ್ವಾಮಿಗಳವರ ಗದ್ದುಗೆ



ಚಿದಾರಣ್ಯದ ಆವರಣದಲ್ಲಿರುವ ಚಿನ್ಮೂಲಾದ್ರಿಯ ಪ್ರಾಚೀನ ಮಠದ ಅವಶೇಷ
ಚಿತ್ರದುರ್ಗ



ಶ್ರೀ ಬೃಹನ್ಮಠದ ರಾಜಾಂಗಣದಲ್ಲಿ ಹೈಸ್ಕೂಲ್ ವಿದ್ಯಾರ್ಥಿಗಳು





ಅಕ್ಕಮಹಾದೇವಿ ಸಮಾಜ
ಚಿತ್ರದುರ್ಗ



ಶ್ರೀ ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ ಇಂಡಿಯನ್ ಮೆಡಿಕಲ್ ಅಸೋಸಿಯೇಷನ್
ಚಿತ್ರದುರ್ಗ

ಶ್ರೀ ಜಯವಿಭವ ಜಗದ್ಗುರುಗಳು

ಲೇಖಕರು :
ಬಸವೇಶ್ವರ ಶಿವಪ್ಪ ತುಪ್ಪದ,
ಗದಗ.

ಬ್ರಹ್ಮನು ಪ್ರಪಂಚವನ್ನು ನಿರ್ಮಾಣ ಮಾಡಿ ಅದರಲ್ಲಿ ಭೂ, ಜಲ, ವಾಯು ಜೀವಿಗಳನ್ನು ಹುಟ್ಟಿಸಿದರೂ ಆತನಿಗೆ ತೃಪ್ತಿಯಾಗಲಿಲ್ಲ. ಆದರೆ ತನ್ನನ್ನು ಅರಿಯುವ ಮನುಷ್ಯನನ್ನು ಸೃಷ್ಟಿಸಿದ ಮೇಲೆ ತೃಪ್ತಿಯಾಯಿತಂತೆ. ಅದರಂತೆ ಗೃಹಸ್ಥರಿಗೂ ತಮ್ಮನ್ನೇ ಹೋಲುವ ಒಂದು ಮಗುವಾದಾಗಲೇ ಜೀವನವು ಸುಖಶಾಂತಿಯಿಂದ ಮುಂದೆ ಸಾಗುವುದು ಸ್ವಾಭಾವಿಕ. *"The best in the world is our own make."* ಆದರಂತೆ ಶ್ರೀ ಜಯದೇವ ಜಗದ್ಗುರುಗಳು ತಮ್ಮ ಪರಮ ಪವಿತ್ರ ಜೀವನದಿಂದ ಸಮಾಜವನ್ನು ಬೆಳಗಿ ಪ್ರತಿಯೊಬ್ಬರ ಹೃದಯ ಮಂದಿರದಲ್ಲಿ ತಾವು ವಿರಾಜಮಾನರಾಗಿದ್ದರೂ, ತಮ್ಮಂತೆ ಶೂನ್ಯಸಿಂಹಾಸನದ ಗೌರವವನ್ನು ಕಾಪಾಡಿಕೊಂಡು ಹೋಗುವ ಒಂದು ಮಹಾ ಶಕ್ತಿಯನ್ನು ತಾವೇ ಕಂಡುಹಿಡಿದು, ಪೋಷಿಸಿ, ಬೆಳೆಯಿಸಿ, ಸಂಸ್ಕರಿಸಿ, ತಮ್ಮತನವನ್ನೇ ಧಾರೆಯೆರೆದು ತಮ್ಮ ಪ್ರತಿಬಿಂಬವನ್ನೇ ನೋಡುವಂತಾದಮೇಲೆಯೇ ಅವರಿಗೆ ನಿಜವಾದ ಶಾಂತಿ, ತೃಪ್ತಿ. ಆ ಮಹಾ ಶಕ್ತಿಯೇ ಶ್ರೀ ಜಯವಿಭವ ಮುರುಘರಾಜೇಂದ್ರ ಪ್ರಭುಗಳವರು.

ಜೀವನದಿಂದ ಜನ್ಮವೃತ್ತಾಂತವನ್ನು ಹೇಳುವುದು ಪೌರಾಣಿಕ ಶೈಲಿ. ವಸ್ತುಸ್ಥಿತಿಯನ್ನು ಸಹಜವಾಗಿ ಹೇಳುವುದು ಐತಿಹಾಸಿಕ ಶೈಲಿ. ಐತಿಹಾಸಿಕ ವ್ಯಕ್ತಿಗಳಾದ ಶ್ರೀ ಜಯವಿಭವ ಪ್ರಭುಗಳು ಪಾವಿತ್ರ್ಯಮಯ, ತಾತ್ವಿಕ ಜೀವನ ಪ್ರಭೆಯಿಂದ ಪೌರಾಣಿಕ ವರ್ಣನೆಗೆ ಯಾವ ರೀತಿಯಿಂದಲೂ ಕಡಿಮೆಯಿರಲಿಲ್ಲ. ಪ್ರಪಂಚದಲ್ಲಿ ಸಾಮಾನ್ಯವಾಗಿ ಅನೇಕ ಜಡ ಪದಾರ್ಥಗಳು ಹುಟ್ಟುವಂತೆಯೇ ಕನಕ ರತ್ನಾದಿಗಳೂ ಅಲ್ಲಲ್ಲೇ ಹುಟ್ಟುತ್ತಲೇ ಇರುತ್ತವೆ. ಆದರೆ ಅಂತಹ ವಿಶೇಷಗಳನ್ನು ಶೋಧಿಸಿ ಕಂಡುಹಿಡಿದು ಅವುಗಳ ಸರಿಯಾದ ಉಪಯೋಗ ಮಾಡಿಕೊಳ್ಳುವುದು ಮಾತ್ರ ಮನುಷ್ಯನ ಸಫಲತೆ. ಅನಾದಿಕಾಲದಿಂದ ಅನೇಕ ತಪಸ್ವಿಗಳು ಸಂಕಲ್ಪದಿಂದ ಹುಟ್ಟಿದವರಾರೂ ಇಲ್ಲ. ಅವರೆಲ್ಲರೂ ಹುಟ್ಟಿದ ಮೇಲೆಯೇ ಸಂಕಲ್ಪ ಮಾಡಿದವರು. ಸತ್ಯಸಂಕಲ್ಪ ಸಾಧನೆಯಿಂದಲೇ ಅವರೆಲ್ಲರೂ ಋಷಿಗಳಾದವರು. ಆದರೆ ಶ್ರೀ ಜಯವಿಭವ ಪ್ರಭುಗಳು ಹುಟ್ಟಿನಿಂದಲೇ ಪರಿಮಳವನ್ನು ಪಡೆದುಕೊಂಡು ಬಂದವರು. ಇವರನ್ನು ಧರಿಸಿದ ಗರ್ಭವೂ ಪವಿತ್ರ. ಎತ್ತಿ ಆಡಿಸಿದ ಕರಗಳೂ ಪವಿತ್ರ. ಸಂಸ್ಕರಿಸಿದ ದೃಷ್ಟಿಯೂ ಪವಿತ್ರ. ಹೀಗೆ ಪವಿತ್ರವಾಗಿಯೇ ಹುಟ್ಟಿ ಬೆಳೆದ ಇವರು ಮುಕುಟಮಣಿಯಾಗದೇ ಇನ್ನೇನಾದಾರು ? ಶ್ರೇಷ್ಠತೆಯಲ್ಲಿ ಯಾವುದು ಶ್ರೇಷ್ಠವೋ ಅದೇ ಆದರು. ಅದೆಲ್ಲ ಭಕ್ತರ ಭಾಗ್ಯವೆಂದು ಹೇಳಿದರೆ ನಮ್ಮ ಭಕ್ತಿಗೆ ಮೆರಗು.

ಚಿತ್ರದುರ್ಗದ ಅನೇಕ ಶಾಖಾ ಮಠಗಳಲ್ಲಿ ಒಂದಾದ ಗದಗ ತಾಲ್ಲೂಕು ಕಲ್ಲು ಮುಳುಗುಂದದ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳವರ ಮಠದ ಪೀಠಾಧಿಕಾರಿಗಳಾಗಿದ್ದ ಶ್ರೀ ಬಸವಲಿಂಗ ಸ್ವಾಮಿಗಳವರ ಪೂರ್ವಾಶ್ರಮದ ಅಣ್ಣನ ಮಕ್ಕಳೇ ಈ ಜಯವಿಭವ ಸ್ವಾಮಿಗಳು. ಇವರ ತಂದೆ, ತಾಯಿಯವರ ಹೆಸರು ಹಿರಿಯ ಮಠದ ಸಿದ್ದಯ್ಯನವರು ಮತ್ತು ಫಕೀರವ್ವನವರು. ಶ್ರೀಗಳು ಶ್ರೀ ಶಕ 1834 ನೆಯ ಪರಿಧಾವಿ ಸಂವತ್ಸರ ಜೇಷ್ಠ ಶುದ್ಧ ಗುರುವಾರ ತಾರೀಖು 23–5–1912 ನೇ ಇಸವಿ ಸಾಯಂಕಾಲ ಮಘಾ ನಕ್ಷತ್ರ ಸಿಂಹರಾಶಿಯ ಶುಭಾಂಶದಲ್ಲಿ ಜನಿಸಿದರು. ಇವರು ಜನಿಸಿದ್ದು ನವಿಲುಗುಂದ ತಾಲ್ಲೂಕು ಬಲ್ಲರವಾಡ (ಭಂಡಿವಾಡ) ಗ್ರಾಮದಲ್ಲಿ. ಅಲ್ಲಿಂದ ಕೆಲವು ತಿಂಗಳಮೇಲೆ ಮುಳುಗುಂದಕ್ಕೆ ಸಮೀಪವಾಗಿ ಯಳವತ್ತಿಗೆ ಬಂದರು. ಮಗುವಿಗೆ ಇಟ್ಟ ಹೆಸರು ಶಿವಲಿಂಗಯ್ಯ ಎಂದು. ಇವರು 3-4 ವರ್ಷದವರಿರುವಾಗ್ಗೆ ಮುಳುಗುಂದಕ್ಕೆ ಶ್ರೀ ಬಸವಲಿಂಗ ಸ್ವಾಮಿಗಳವರ ದರ್ಶನಕ್ಕೆ ಒಂದು ಸಾರಿ ಬಂದಾಗ್ಗೆ, ಶ್ರೀಗಳು ಇವರನ್ನು ತಮ್ಮ ಮಠಕ್ಕೆ ಮರಿ ಬಿಡಲು ಇವರ ತಾಯಿ-ತಂದೆಯರನ್ನು ಬೇಡಿದರು. ಈ ಶಿವಲಿಂಗಯ್ಯನಿಗೆ ಇಬ್ಬರು ಅಣ್ಣಂದಿರಿದ್ದರೂ ಇವರನ್ನೇ ಬೇಡಿದ್ದು ವಿಶೇಷವು. ಹಾಗೆ ಬೇಡಿ ಒಪ್ಪಿಸಿಕೊಂಡೂ ಬಿಟ್ಟರು. ಶಿವಲಿಂಗಯ್ಯ ಶಿವಲಿಂಗಮರಿಯಾದರು. ಇವರನ್ನು ಮರಿಬಿಟ್ಟ ವರ್ಷೋಪ್ಪೊತ್ತಿನಲ್ಲಿ ಶ್ರೀ ಬಸವಲಿಂಗಸ್ವಾಮಿಗಳು ತಮ್ಮ ದೇಹಾವಸಾನವನ್ನು ಕಂಡು ಶಿವಲಿಂಗಮರಿಗೆ ಜಂಗಮ ಲಾಂಛನವನ್ನು ತೊಡಿಸಿ ಕಣ್ತುಂಬ ನೋಡಿ, ಮರಿಯನ್ನು ಮರಿದೇವರನ್ನಾಗಿ ಮಾಡಿ ತಮ್ಮ ಚಿತ್ಕೃಪಾಕಟಾಕ್ಷವನ್ನು ಸಂಪೂರ್ಣವಾಗಿ ನೀಡಿ, ನಿರಂಜನ ಜಂಗಮ ಶಕ್ತಿಯನ್ನು ಅಣುರೂಪವಾಗಿ ಅಂದೇ ಬಿಂಬಿಸಿ ತಾವು ನಿರ್ವಯಲಾದರು. ಆ ಚಿದಾನಂದ ಶಕ್ತಿಯ ಪ್ರಭಾವವೇ ಅವರ ಶ್ರೇಯೋಭಿವೃದ್ಧಿಗೆ ನಿರಂತರ ಕಾರಣವಾಗಿದ್ದಿತಲ್ಲದೆ, ನಡೆ-ನುಡಿಯಲ್ಲಿಯೂ, ದೇಹಕಾಂತಿಯಲ್ಲಿಯೂ ಹೊನಲು ಹೊನಲಾಗಿ ಹರಿಯುತ್ತಿತ್ತು.

ರತ್ನದ ಪರೀಕ್ಷೆಯು ರತ್ನಪಡಿ ವ್ಯಾಪಾರಿಗಲ್ಲದೇ ಸಾಮಾನ್ಯ ವರ್ತಕನಿಗಾಗದು. ನಂತರದಲ್ಲಿ ಶಿವಲಿಂಗಮರಿ ದೇವರನ್ನು ಗುರುತಿಸಿದವರು ಧಾರವಾಡದ ಶ್ರೀ ಮೃತ್ಯುಂಜಯ ಸ್ವಾಮಿಗಳು. ಇವರ ವಿದ್ಯಾಭ್ಯಾಸಕ್ಕಿಂತ ಮೊದಲು ತಪಸ್ವಿಗಳ ಕೃಪಾಶೀರ್ವಾದ, ಯೋಗ್ಯ ಸಂಸ್ಕಾರವನ್ನು ಕೊಡಿಸುವುದರ ಸಲುವಾಗಿ ಇವರನ್ನು ಅಥಣಿಯ ಗಚ್ಚಿನ ಮಠಕ್ಕೆ ಶ್ರೀ ಶಿವಯೋಗಿಗಳಲ್ಲಿಗೆ ಕರೆದೊಯ್ದರು. ಅಲ್ಲಿ ಕಾಶಿಯ ಸಂಸ್ಕೃತ ಪಂಡಿತರಾದ ಸಂಪಿಗೆಯ ಸಿದ್ಧಲಿಂಗ ಶಾಸ್ತ್ರಿಗಳು

ನಂತರ ಶ್ರೀ ಗುಡಿಗೇರಿ ಬಸವಲಿಂಗ ಶಾಸ್ತ್ರಿಗಳವರಿಂದ ವಿದ್ಯಾಭ್ಯಾಸ ಮಾಡಿಸುತ್ತಿದ್ದರು. ಶ್ರೀ ಶಿವಯೋಗಿ ಪುಂಗವರು ಶಿವಲಿಂಗದೇವರ ಆಗಿನ ಬಾಲ್ಯ ಸಹಜ ಆಟಗಳನ್ನು ನೋಡಿ ಹರ್ಷಭರಿತರಾಗುತ್ತಿದ್ದರು. ಮುಳುಗುಂದದ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳವರ ಸ್ಥಾನದಲ್ಲಿ ಆಡಿ, ಅವರ ಪದ–ಪದ್ಯಗಳನ್ನು ತಮ್ಮ ಮಧುರ ಕಂಠದಿಂದ ಹಾಡಿ ಶಿವಲಿಂಗದೇವರು ಶ್ರೀ ಶಿವಯೋಗಿಗಳನ್ನು ತೃಪ್ತಿಪಡಿಸುತ್ತಿದ್ದ ಇವರ ಮುಗ್ಧ ಭಕ್ತಿಯನ್ನೂ ಸಿದ್ಧ ಶಕ್ತಿಯನ್ನೂ ಅರಿತು, ಶ್ರೀ ಶಿವಯೋಗಿಗಳು ಈ ಬಾಲಲೀಲೆಯಲ್ಲಿ ಮೈಮರೆತು ತಾವೂ ಲೀಲಾ ವಿನೋದ ಪ್ರಿಯರಾಗುತ್ತಿದ್ದರು. ಶ್ರೀ ಶಿವಯೋಗಿಗಳು ಇವರನ್ನು ಶಿವಲಿಂಗಮರಿಯೆಂದು ಸಂಬೋಧಿಸದೇ 'ಲೀಲಾ' ಎಂದು ಬಹು ಪ್ರಿಯವಾಗಿ ಕರೆಯುತ್ತಿದ್ದರು. ಶ್ರೀ ಶಿವಯೋಗಿಗಳು ಸ್ನಾನದ ಮನೆಯಿಂದ ತೇವದ ಹೆಜ್ಜೆ ಇಡುತ್ತಾ ಪೂಜಾಗೃಹವನ್ನು ಪ್ರವೇಶಿಸುವಾಗ್ಗೆ ಆ ಹೆಜ್ಜೆಗಳಲ್ಲಿಯೇ ಹಿಂದೆ ಹಿಂದೆ ಚಿಪ್ಪಳಗಾಲಿನಿಂದ ಆಟವಾಡುತ್ತಾ ಹಿಂಬಾಲಿಸುವುದನ್ನು ನೋಡುವದೊಂದು ಆಗಿನ ಭಕ್ತರ ಪುಣ್ಯ ವಿಶೇಷ. ಎಳೆತನದಲ್ಲಿ ಶ್ರೀ ಶಿವಯೋಗಿಗಳ ಹೆಜ್ಜೆಯಲ್ಲಿಯೇ ತಮ್ಮ ಪುಟ್ಟ ಪುಟ್ಟ ಹೆಜ್ಜೆಗಳನ್ನು ಮೂಡಿಸಿದ ಶ್ರೀ ಜಯವಿಭವರು, ಅಂದೇ ಪ್ರತಿಜ್ಞೆ ಮಾಡಿದಂತೆ ಕೊನೆಯವರೆಗೂ ಅದೇ ಕಠಿಣವಾದ ವಿರತಿ ಮಾರ್ಗದಲ್ಲಿ ನಿಷ್ಠೆಯಿಂದ, ಶುದ್ಧಿಯಿಂದ, ಸ್ಥೈರ್ಯದಿಂದ ಲೀಲಾಜಾಲವಾಗಿ ಆಯಾಸವಿಲ್ಲದೇ ಹಸನ್ಮುಖಿಗಳಾಗಿ ನಡೆದು ತೋರಿ ಮಹಾಂತರಾದರು. ಮಹಾತ್ಮರು ನೋಟಕ್ಕೆ ಶೀತಲವಾಗಿ ಕಂಡರೂ ಜಾಗೃತ ಚೈತನ್ಯಾಗ್ನಿ ಕುಂಡ ಎಂಬುದು ಪ್ರತ್ಯಕ್ಷ ನಿದರ್ಶನ. ಅಗ್ನಿಯ ಯಾವ ಭಾಗವನ್ನು ಮುಟ್ಟಿದರೂ ಅದು ಅಗ್ನಿಯೇ. ಮಹಾತ್ಮರ ಯಾವ ಇಂದ್ರಿಯ ಸ್ಪರ್ಶವಾದರೂ ಅದು ಪವಿತ್ರವೇ. ಅದಕ್ಕೇನೇ ಅವರಿಗೆ ಮನಸ್ಸು, ನಡೆ, ನುಡಿ, ನೋಟ, ಕೈಗಳೆಂಬ ಪಂಚಪರುಷಸಿದ್ಧಿಗಳು ಜಾಗೃತವಾಗಿರುತ್ತವೆ. ಆ ಭಾಗ್ಯವು ಕೇವಲ ಕೆಲವರಿಗೆ ಮೀಸಲು. ಅಂಥವರ ಲಾಭವೂ ಸಹ ದೊರೆಯುವುದು ವಿರಳ. ಸ್ವತಃ ಕನಕ ಕಾಂತಿಕಾಯರೂ, ಸುಂದರವಾದ ಮುದ್ದು ನಗುಮುಖವುಳ್ಳವರೂ, ಸವಿನುಡಿಯ ಅವರ ಶ್ರೀ ಶೋಭೆಗೆ ಶಿವಯೋಗಿಗಳವರ ಕೃಪಾಶೀರ್ವಾದದ ವಜ್ರಲೇಪನದ ಮೆರಗು ಬಂದಿತ್ತು.

ಹೀಗೆ ಶ್ರೀ ಶಿವಲಿಂಗ ಮರಿದೇವರು ಶ್ರೀ ಶಿವಯೋಗಿಗಳವರ ಕಣ್ಮಣಿಯಾಗಿಯೇ ಬೆಳೆಯುತ್ತಿರುವಾಗ್ಗೆ ಆಕಸ್ಮಿಕವಾಗಿ ಶ್ರೀ ಶಿವಯೋಗಿಗಳು ಸನ್ 1921ರಲ್ಲಿ ಲಿಂಗೈಕ್ಯರಾದ ಮೇಲೆ ಅಥಣಿ ಗಚ್ಚಿನ ಮಠದ ಅಧಿಕಾರಿಗಳಾಗಿದ್ದ ಶ್ರೀ ಸಿದ್ಧಲಿಂಗಸ್ವಾಮಿಗಳು ಶ್ರೀಶಿವಲಿಂಗ ಮರಿದೇವರನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ಮಾಡಿಕೊಂಡರು. ಅವರ ಅಥಣಿಯಲ್ಲಿ ಆ ಕಾಲಕ್ಕೆ ಪ್ರೌಢ ಶಿಕ್ಷಣವಿಲ್ಲದ ಮೂಲಕ ಇವರಿಗೆ ಹೆಚ್ಚಿನ ವಿದ್ಯಾಭ್ಯಾಸವನ್ನು ಕೊಡಿಸುವುದರ ಸಲುವಾಗಿ ಶ್ರೀ ಮೃತ್ಯುಂಜಯ ಸ್ವಾಮಿಗಳು ಧಾರವಾಡಕ್ಕೆ ತಮ್ಮ ಮುರುಘಾಮಠಕ್ಕೆ ಕರೆದುಕೊಂಡು ಬಂದರು. ಅಲ್ಲಿ ಆ ವೇಳೆಯಲ್ಲಿ ಸಂಸ್ಕೃತ ಪಂಡಿತರಾಗಿದ್ದು- ಮುಂದೆ ಬೆಂಗಳೂರು ಸರ್ಪಭೂಷಣ ಮಠದ ಪೀಠವನ್ನಲಂಕರಿಸಿದವರೂ,ಅಖಿಲ ಭಾರತ ಶಿವಾನುಭವ ಸಂಸ್ಥೆಯ ಅಧ್ಯಕ್ಷರೂ, ಅಭಿನವ ಅಲ್ಲಮ ಪ್ರಭುವೆಂಬ ಬಿರುದಾಂಕಿತರಾಗಿದ್ದವರೂ ಆದ- ಶ್ರೀ ಮಹಾದೇವ ಸ್ವಾಮಿಗಳವರಿಂದ ಸಂಸ್ಕೃತ ಅಧ್ಯಯನ ಮಾಡಿಸುತ್ತಿದ್ದರು.

ಮೊದಲಿನಿಂದಲೂ ಶ್ರೀ ಶಿವಲಿಂಗ ಮರಿದೇವರ ಪಾದಲೀಲೆಗಳನ್ನೂ,ಹಸ್ತವಿನ್ಯಾಸವನ್ನೂ, ಗಂಭೀರ ನಡಿಗೆಯನ್ನೂ, ಹಿತ-ಮಿತವಾದ ನುಡಿಯ ವೈಖರಿಯನ್ನೂ ಸೂಕ್ಷ್ಮದೃಷ್ಟಿಯಿಂದ ಪರೀಕ್ಷಿಸುತ್ತಿದ್ದ ಶ್ರೀ ಜಯದೇವ ಪ್ರಭುಗಳು ಅವರ ಉತ್ಕರ್ಷವನ್ನು ಬಯಸಿ, ಅವರನ್ನು ಇನ್ನೂ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಸನ್ 1928 ರಲ್ಲಿ ವಿಭವ ಸಂವತ್ಸರದಲ್ಲಿ ಶ್ರೀ ಕ್ಷೇತ್ರ ಕಾಶಿಗೆ ।ಪಂ। ಗುಡಗೇರಿ ಬಸವಲಿಂಗಶಾಸ್ತ್ರಿಗಳನ್ನು ಜೊತೆ ಮಾಡಿ ಕಳುಹಿಸಿಕೊಟ್ಟರು. 'ವಿಭವ'ನಾಮ ಸಂವತ್ಸರದಲ್ಲಿ ಇವರನ್ನು ಕಾಶಿಗೆ ಕಳುಹಿಸಿಕೊಟ್ಟ ನೆನಹಿಗೆ ಶಿವಲಿಂಗ ದೇವರಿಗೆ 'ಜಯವಿಭವ'ರೆಂದೂ ನಾಮಕರಣ ಮಾಡಿದರು. ಮುಂದೆ ಅದೇ ಹೆಸರು ಸ್ಥಿರವಾಯಿತು. ಶ್ರೀ ಜಗದ್ಗುರು ಜಯದೇವ ಮಹಾಸ್ವಾಮಿಗಳು ಶ್ರೀ ಜಯವಿಭವರ ಮೇಲೆ ಬಹು ಆಶೆ ಆಕಾಂಕ್ಷೆಗಳನ್ನು ಇಟ್ಟುಕೊಂಡಿದ್ದರು. ಅದನ್ನೆಲ್ಲಾ ಅವರು ಯಾದೊಡನೆಯೂ ಆಡದೆ ಕೃತಿಯಲ್ಲಿಯೇ ತೋರಿಸುತ್ತಿದ್ದರು. ಕಾಶಿಯಲ್ಲಿ ಅವರಿಗೆ ಅಭ್ಯಾಸಕ್ಕೆ ಯಾವ ತೊಂದರೆಯಾಗದಂತೆ ಉತ್ತಮ ಸಂಸ್ಕಾರವುಳ್ಳ ಸಹಪಾಠಿಗಳನ್ನು ಜೊತೆ ಮಾಡಿ ತಮ್ಮ ಸ್ವಂತ ಜಯದೇವ ವಾಡಿ ಎಂಬ ಫ್ರೀ ಬೋರ್ಡಿಂಗಿನಲ್ಲಿಟ್ಟು ಮೇಲ್ವಿಚಾರಣೆಗೆ ಕೊಲ್ಲಾಪುರದ ಖಾಸಾಮಠದ ಶ್ರೀ ಗುರುಶಾಂತ ಸ್ವಾಮಿಗಳನ್ನು ಆಗಾಗ್ಗೆ ಕಳುಹಿಸುತ್ತಿದ್ದರು.

ಶ್ರೀಗಳವರ ಶರೀರವು ಯೋಗ ಶರೀರವೂ ಹೌದು; ಭೋಗ ಶರೀರವೂ ಹೌದು. ವಿದ್ಯಾರ್ಥಿ ದೆಸೆಯಲ್ಲಿರಬೇಕಾದ ಬ್ರಹ್ಮಚರ್ಯ, ಸತ್ಯ, ಅಧ್ಯಯನ ನಿಷ್ಠೆ, ಶ್ರಮಜೀವನ, ಹಸನ್ಮುಖ, ಕರಣಗಳ ಪಾವಿತ್ರ್ಯ ಮುಂತಾದ ಪ್ರಸನ್ನಶಕ್ತಿಗಳು ಅವರಿಗೆ ದೈವದತ್ತವಾಗಿ, ಸಹಜವಾಗಿ ಮೈಗೂಡಿದ್ದವು. ಈ ಶಕ್ತಿಗಳ ಪ್ರಾಪ್ತಿಗೆ ಯಾವುದೇ ಸಾಧನೆಯಿಂದ ಪ್ರಯಾಸಗೊಂಡವರಲ್ಲ. ಅವರು ಜನ್ಮತಃ ಯೋಗಿಗಳು. ಶಿವಯೋಗಾಂಕುರ ಶಕ್ತಿಯುಳ್ಳವರು. ತ್ಯಾಗವು ಅವರನ್ನು ಅವಲಂಬಿಸಿ ಪವಿತ್ರವಾಗಿತ್ತು. ಭೋಗವೂ ಅಷ್ಟೇ. ಸತ್ವಯುತ ಸಮತೂಕದ ಸಾತ್ವಿಕಾಹಾರ ವಿಹಾರಾದಿಗಳಿಂದ ಅವರ ಭೋಗ ಶರೀರವು ಯೋಗ ಶರೀರವಾಗಿಯೇ ಹೊಳೆಯುತ್ತಿತ್ತು. ತೋರಿಕೆಗೆ ಹೊರಮುಖದ ಆ ಹೊಂಬಣ್ಣ ಶರೀರವು ಸ್ಪರ್ಶಕ್ಕೆ ಲೋಹದಂತೆ ಕಠಿಣವಾಗಿತ್ತು. ಮಹಾತ್ಮರ ಲಕ್ಷಣವೇ ಅಂಥಾದ್ದು. ಶರೀರವು ಒರಟಾಗಿರಬೇಕು, ಮನಸ್ಸು ಸೂಕ್ಷ್ಮವಾಗಿರಬೇಕು.

ಶ್ರೀಗಳು ತಮಗೆ ಹಿತೋಕ್ತಿಗಳನ್ನು ಆಡುವವರ ಮೇಲೆ ಅತೀ ಪ್ರೀತಿಯುಳ್ಳವರು. ಇವರ ಭವಿಷ್ಯಜ್ಜೀವನ ಪ್ರಕಾಶಕ್ಕೆ ಮೂಲದಿಂದ ಸಂಸ್ಕಾರವಿತ್ತವರುಗಳಲ್ಲಿ ಶ್ರೀ ನಾಗಭೂಷಣ ಶಾಸ್ತ್ರಿಗಳೂ ಒಬ್ಬರು. ಶ್ರೀ ಜಯದೇವ ವಾಡಿಯಲ್ಲಿಯ ಬೋರ್ಡಿಂಗ್ ಮನೆಯ ನಾಂದಿ ಉತ್ಸವಕ್ಕೆ ಪೂರ್ಣಕುಂಭದೊಡನೆ ಮೊದಲು ಪ್ರವೇಶ ಮಾಡಲು ಶ್ರೀ ಶಾಸ್ತ್ರಿಗಳವರ ಹೆಸರನ್ನು ಸೂಚನೆ ಮಾಡಿದವರೂ

ಈ ಜಯವಿಭವರೇ. ಅದಕ್ಕೆ ಕಾರಣವೂ ಇತ್ತು. ಮದುವೆಯಾದವರು ಕುಂಭದೊಡನೆ ಪ್ರವೇಶ ಮಾಡುವುದು ಮಂಗಲಕರವೆಂದು ನಡೆದು ಬಂದ ಪದ್ಧತಿ. ಆಗಿದ್ದ ವಿದ್ಯಾರ್ಥಿಗಳಲ್ಲಿ ಮದುವೆಯಾಗಿದ್ದವರು ಶ್ರೀ ಶಾಸ್ತ್ರಿಗಳೊಬ್ಬರೇ. ಬೋರ್ಡಿಂಗ್ ಆರಂಭವಾದ ಮೊದಲನೇ ಶ್ರಾವಣದಲ್ಲಿ 'ಸಿದ್ಧಾಂತ ಶಿಖಾಮಣಿ'ಯನ್ನು ಪ್ರವಚನ ಮಾಡಲಿಕ್ಕೆ ಶ್ರೀ ಶಾಸ್ತ್ರಿಗಳವರಿಗೆ ವಿನಂತಿ ಮಾಡಿಕೊಂಡವರೂ ಶ್ರೀ ಜಯವಿಭವರೇ.

ವಿದ್ಯಾರ್ಥಿದೆಸೆಯೊಂದು ಜೀವನದ ಮಹಾ ಪವಿತ್ರ ಕಾಲ. ಪ್ರತಿ ಮಾನವನು ತನ್ನ ಜೀವನಾಂತ್ಯದವರೆಗೂ ತಾತ್ವಿಕ ವಿದ್ಯಾರ್ಥಿಯಾಗಿದ್ದರೂ ತನ್ನ ಹುಟ್ಟಿನ ಐದು ವರ್ಷಗಳಿಂದ ಸುಮಾರು ಇಪ್ಪತ್ತು-ಇಪ್ಪತ್ತೈದು ವರ್ಷಗಳವರೆಗೆ ಬ್ರಹ್ಮಚರ್ಯೆಯ ಕಟ್ಟುನಿಟ್ಟಾದ ಪಾಲನೆಯಿಂದ ಪವಿತ್ರ ಸಂಸ್ಕಾರ, ಸುಬದ್ಧ ನಿಯಮ, ಪ್ರಶಾಂತಚಿತ್ತ, ವಿನಮ್ರ ಭಾವನೆ ಮುಂತಾದ ಸುದ್ಗುಣಗಳಿಂದ ಯಾವುದೇ ವಿದ್ಯೆಯನ್ನು ಪಡೆಯುವುದಕ್ಕೆ ಅತಿ ಮಹತ್ವದ ದಿನಗಳು. ಈ ಗುಣಗಳಿಲ್ಲದ ವಿದ್ಯಾರ್ಥಿಯು ವಿದ್ಯಾರ್ಥಿಯೇ ಅಲ್ಲ. ನಿಯಮ-ಶೀಲವಿಲ್ಲದ ಯಾವುದೇ ಆಶ್ರಮಿಯು ಗೊತ್ತುಗುರಿಯಿಲ್ಲದೆ ಕಿತ್ತ ಗಾಳಿಪಟದಂತೆ ಹಾರುವ ಚಂಚಲಚಿತ್ತನು. ಮಲಗುವವರೆಗೂ, ಸಾಯುವವರೆಗೂ ಜ್ಞಾನಾರ್ಜನೆಯನ್ನು ಮಾಡಬೇಕೆಂದು ಶಾಸ್ತ್ರವಿಧಿಯು. ಶ್ರೀ ಜಯವಿಭವರು ಆರೋಗ್ಯಕಾಮರು, ಸರ್ವಾಂಗ ಸುಂದರರೂ, ಆಕರ್ಷಕ ವದನರಾಗಿದ್ದಂತೆ ಸದ್ಗುಣಗಳ ಖಣಿಯೂ ಆಗಿದ್ದರು. ಮುಂದೆ ವಹಿಸಬೇಕಾದ ಶ್ರೀ ಮುರುಘೇಂದ್ರ ಜಗದ್ಗುರು ಪೀಠದ ಗೌರವವನ್ನು ಕಾಪಾಡುವ ಹೊಣೆಗಾರಿಕೆಯ ಉತ್ತಮ ಜಂಗಮ ಸಸಿಯಾಗಿದ್ದರು. 'ತತ್ವವ ಹಿಡಿದವರಿಗೆ ತೊತ್ತಾಗಿ ನಡೆವೆನು' ಎಂಬ ಬಸವಣ್ಣನವರ ವಚನದಂತೆ, ಇನ್ನೊಬ್ಬರಿಗೆ ಉಪದೇಶ ನೀಡದೆ, ನಿಲಯದಲ್ಲಿದ್ದ ಎಲ್ಲಾ ಸಹಪಾಠಿಗಳ ಯೋಗಕ್ಷೇಮವನ್ನು ಸ್ವತಃ ವಿಚಾರಿಸುತ್ತಿದ್ದರು. ಈ ಸೇವಾ ಬುದ್ಧಿಯನ್ನು ಅಥಣಿಯಲ್ಲಿಯೇ ಮಹಾ ತಪಸ್ವಿ ಶ್ರೀ ಶಿವಯೋಗಿಗಳಲ್ಲಿಯೇ ಪಡೆದು ಬಂದಿದ್ದರು. ಅದರೊಡನೆ ಸಹಜ ಹಾಸ್ಯವೂ ಬೆಳೆದು ಬಂದಿತ್ತು.

ಅಥಣಿಯಲ್ಲಿರುವಾಗ್ಗೆ ಅತಿಥಿ ಸೇವೆ ಸದಾ ಇವರದೇ. ಪಾಠಶಾಲೆಗೆ ಪರಸ್ಥಳದಿಂದ ಬಂದ ಅನಾಥರಿಗೆ ತಾವು ಹೊದೆಯುವ ಕಂಬಳಿ, ಹಾಸಿಗೆಗಳನ್ನು ಕೊಟ್ಟು ಬರೀ ಚಾಪೆಯ ಮೇಲೆ ತೊಟ್ಟ ಕಫನಿಯಲ್ಲಿ ಎಷ್ಟೋ ವೇಳೆ ಮಲಗುತ್ತಿದ್ದರು. ಪ್ರಸಾದ ವಿತರಣೆಯಲ್ಲಿಯೂ ಅಷ್ಟೇ. ಎಲ್ಲರ ಪ್ರಸಾದವಾದ ಮೇಲೆಯೇ ಇವರದು. ಒಂದುಸಾರಿ, ಅಥಣಿಯ ಮಠದಲ್ಲಿ ಸೇವೆಯಲ್ಲಿದ್ದ ಅಡಿವಪ್ಪ ಮಾಸ್ತರರು ಊಟಕ್ಕೆ ಕುಳಿತಾಗ್ಗೆ ಇನ್ನೂ ಸ್ವಲ್ಪ ಅನ್ನವಿದ್ದರೆ ನೀಡಿರೆಂದು ಸಹಜವಾಗಿ ಕೇಳಿದರು. ಅದೇ ನೀಡಿಕೊಂಡು ಕುಳಿತ ಶಿವಲಿಂಗ ಮರಿದೇವರು ತಮ್ಮ ಗಂಗಾಳವನ್ನೆ ಅವರಿಗೆ ಸಲ್ಲಿಸಿ ತಮಗೆ ಜಾಸ್ತಿಯಾಗಿದೆ ಕೊಳ್ಳಿರೆಂದು ಅವರಿಗೆ ನೀಡಿ ಉಪಚಾರ ಮಾಡಿದರು. ಮಠದಲ್ಲಿ ಆಗ್ಗೆ ಅನ್ನ ಮುಗಿದಿತ್ತು.

ಮನುಷ್ಯರಂತೆ ಪ್ರಾಣಿಗಳಲ್ಲಿಯೂ ಇವರಿಗೆ ಭೂತದಯೆ ತುಂಬಿತ್ತು. ಒಂದುಸಾರಿ ಮಠದಿಂದ ಗುಂಡಕ್ಕೆ ಹೋಗುವ ಸಮಯದಲ್ಲಿ ಸಿದ್ಧೇಶ್ವರ ದೇವಾಲಯದ ಮುಂದೆ ಒಂದು ಸಣ್ಣ ಆಕಳಕರುವು ನಿಶ್ಚೇಷ್ಟಿತವಾಗಿ ಬಿದ್ದದ್ದನ್ನು ನೋಡಿ ತಮ್ಮ ಕೈಯಲ್ಲಿದ್ದ ನೀರನ್ನು ಅದಕ್ಕೆ ಸುರುವಿ ಮೈಮೇಲಿ ಕೈಯಾಡಿಸಿ ತಿಕ್ಕಿ ಎಳೆ ಹುಲ್ಲನ್ನು ಬಾಯಲ್ಲಿಟ್ಟು ತಿನ್ನಿಸಿ ತಾನಾಗಿಯೇ ಎದ್ದ ಮೇಲೆಯೇ ಮುಂದೆ ಹೋದರು. ಪ್ರಾಣಿಗಳಲ್ಲಿ ಅಂತಃಕರಣವಿದ್ದರೂ, ಪರುಷಹಸ್ತದಿಂದ ಉಪಚರಿಸುವ ಕ್ರಿಯೆಯು ಶ್ರೇಷ್ಠವು. ತ್ರೈಕರಣ ಪಾವಿತ್ರ್ಯವೆಂದರೆ ಇದೆ. ಕಾಯ, ವಾಚಾ, ಮನಸ್ಸಿನಿಂದ ಎಲ್ಲಾ ಕಾರ್ಯಗಳಲ್ಲಿ ಮಗ್ನರಾಗುವುದೇ, 'ಸಂಗಚ್ಛಧ್ವಂ, ಸಂವದಧ್ವಂ, ಸಂವೋಮನಾಂಸಿಜಾನತಾಂ.' ಈ ಪಾಠವನ್ನು ಪ್ರವಚನದಿಂದ ಕಲಿಯದೆ ಹುಟ್ಟಿನಿಂದಲೇ ಬೆಳೆಸಿಕೊಂಡು ಮಹಾತ್ಮನ ಸಂಸರ್ಗದಲ್ಲಿ ಸಿದ್ಧಿಯನ್ನು ಪಡೆದಿದ್ದರು. ಭೂತಗಳ ಸಂಚಾರವೂ ಕೂಡ ಇವರಿಗೆ ತಿಳಿದಿತ್ತೆಂದರೆ ಆಶ್ಚರ್ಯವಾಗದಿರದು. ಗವಿಮಠದಲ್ಲಿ ಕೆಲವು ಮೂರ್ತಿಗಳೊಂದಿಗೆ ವಾಸಮಾಡಿಕೊಂಡಿರುವಾಗ್ಗೆ ರಾತ್ರಿ ಭೂತಗಳ ಸಂಚಾರ ಇವರೊಬ್ಬರಿಗೆ ಕಾಣುತ್ತಿತ್ತು. ಆದರೆ ಇದರಿಂದ ಇವರಿಗೆ ಭಯವೇ ಇದ್ದಿಲ್ಲ. ರಾತ್ರಿ ನಡೆದ ಭೂತ ವಿಷಯವನ್ನೆಲ್ಲಾ ಪಕ್ಕದವರಿಗೆ ಆಶ್ಚರ್ಯಕರವಾಗಿ ಹೇಳುತ್ತಿದ್ದರು.

ಎರಡು ದೊಡ್ಡ ಗುಣಗಳಿಂದ ಶಿವಲಿಂಗದೇವರು ಚಿಕ್ಕತನದಲ್ಲಿಯೇ ಒಪ್ಪಿದ್ದರು. ಹರ್ಷಾತಿರೇಕದಲ್ಲಿ ಮನಸನುಕ್ಕಿಸದೆ, ಕಟ್ಟಿದ ಜಲಾಶಯದಿಂದ ತೂಬಿನಲ್ಲಿ ಹರಿಯುವ ಪ್ರವಾಹದಂತೆ, ಶಿವನ ಕೆಂಜಡೆಯಿಂದ ಪುಟಿಯುವ ಗಂಗಾ ಸಲಿಲದಂತೆ ಗಂಭೀರವಾಗಿ ನಕ್ಕು ತಣಿಸುವುದೊಂದು. ಅಳಲು ದುಗುಡಗಳಿಂದ ನೊಂದು, ನುಂಗುವಷ್ಟು ನುಂಗಿ ಮಿಕ್ಕಿದ್ದನ್ನು ಯಾರಿಗೂ ಕಾಣದ ಸ್ಥಳದಲ್ಲಿ ತಾವೊಬ್ಬರೇ ಯಾವುದೋ ಒಂದು ವಿಕೃತ ರೂಪದಿಂದ ಬಿಟ್ಟು ಬರುತ್ತಿದ್ದರು. ಹಾಗಾದದ್ದು ಬಹಳ ವಿರಳ. ಎಲ್ಲೋ ಒಂದೆರಡು ಪ್ರಸಂಗಗಳು. ಇದು ಇನ್ನೊಂದು.

ಶಿವಲಿಂಗದೇವರು ಜಯವಿಭವರಾಗಿದ್ದು ಶ್ರೀ ಜಯದೇವ ಪ್ರಭುವರ್ಯರಿಂದ ವಿಭವ ಸಂವತ್ಸರದಲ್ಲಿ ಇವರನ್ನು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಕಾಶಿಗೆ ಸಂಸ್ಕೃತ ಮತ್ತು ಇಂಗ್ಲೀಷ್ ಕಲಿಯಲಿಕ್ಕೆ ಕಳುಹಿಸಿದರು. ಭರತಖಂಡದಲ್ಲಿ ಸಂಸ್ಕೃತ ವಿದ್ಯೆಯು ಪರಿಪೂರ್ಣವಾಗುವುದು ಶ್ರೀಕ್ಷೇತ್ರ ಕಾಶಿಯಲ್ಲಿಯೇ. ಜೈನ ಮತ್ತು ಬೌದ್ಧರ ಕಾಲಕ್ಕೆ ಬಹುವಾಗಿ ಪ್ರಸಿದ್ಧವಾಗಿದ್ದ ನಲಂದಾ-ತಕ್ಷಶಿಲಾ ವಿಶ್ವವಿದ್ಯಾಲಯಗಳು ಈಗ ನಾಮಾವಶೇಷವಾಗಿದ್ದರೂ ವಾರಣಾಶಿ ವಿಶ್ವವಿದ್ಯಾಲಯವು ಮಾತ್ರ ಇನ್ನೂವರೆಗೂ ತನ್ನ ಕೀರ್ತಿಯನ್ನು ಕಾಯ್ದುಕೊಂಡು ಬಂದಿರುವುದು. ವಾರಣಾಶಿಯು ಕೇವಲ ವಿದ್ಯೆಯಿಂದಲ್ಲದೆ, ಭೂಮಿ, ಗಂಗಾ ನದಿ ಮತ್ತು ವಿಶ್ವನಾಥನ ದೇವಸ್ಥಾನದ ಪಾವಿತ್ರ್ಯದಿಂದಲೂ ಈಗಲೂ ಪ್ರಸಿದ್ಧವಾಗಿದೆ. ಗಂಗಾ ನದಿಯನ್ನೂ, ವಿಶ್ವನಾಥನನ್ನೂ ಕೊಂಡಾಡದ ಕವಿಯೇ ಇಲ್ಲ. ಅಂಥ ಸ್ಥಾನದಲ್ಲಿ ಶ್ರೀ ಜಯದೇವರು ತಾವು ಅಭ್ಯಾಸ ಮಾಡಿ 'ಜಯದೇವ'ರೆಂಬ ಬಿರುದು ಪಡೆದರಲ್ಲದೆ ಮುಂದೆ ಅನೇಕ ವಿದ್ಯಾರ್ಥಿಗಳ ಸಲುವಾಗಿ ಅದೇ ಕಾಶಿಯಲ್ಲಿ ಸನ್ 1927–28 ರಲ್ಲಿ ರೇವಡಿತಲಾಬ ಎಂಬ ಓಣಿಯಲ್ಲಿ ಒಂದು ಇಮಾರತಿಯನ್ನು ಖರೀದಿ ಮಾಡಿದರು. ಅದೇ ನಿಲಯ

ದಲ್ಲಿ ಶ್ರೀ ಜಯವಿಭವರು ಇದ್ದು ಅಭ್ಯಾಸ ಮಾಡುತ್ತಾ ಉಳಿದ ವಿದ್ಯಾರ್ಥಿಗಳ ಯೋಗಕ್ಷೇಮವನ್ನು ನೋಡಿಕೊಂಡು ಎಲ್ಲ ವಿದ್ಯಾರ್ಥಿಗಳ ಪ್ರೀತಿಗೆ ಪಾತ್ರರಾದರು.

ಶ್ರೀ ಜಯದೇವ ಜಗದ್ಗುರುಗಳ ಕಾರ್ಯಗಳ ರಾಶಿ, ಅವರ ಕಾಲ, ಆ ಕಾಲದ ಪರಿಸ್ಥಿತಿ ಮುಂತಾದ ವಿಷಯಗಳ ಬಗ್ಗೆ ಶ್ರೀ ಜಯದೇವ ದಿಗ್ವಿಜಯದಲ್ಲಿ ಸವಿಸ್ತಾರವಾಗಿ ಬಂದಿದೆ. ಅಂತಹ ಮಹಿಮನ ಸರ್ವೋತ್ಕೃಷ್ಟ ಗುಣಸಿಂಧುವಿನಲ್ಲಡಗಿದ್ದ ರತ್ನರಾಶಿಯೇ ಶ್ರೀ ಜಯವಿಭವರು. ಹರಿಹರ ಕವಿಯು ಶ್ರೀ ಬಸವರಾಜದೇವರ ರಗಳೆಯಲ್ಲಿ 'ಸಂಪತ್ತಿನಲ್ಲಿ ಇನಿತು ಕೊಡೆ ಕುಬೇರನಾದಂ, ತೇಜದಲಿ ಇನಿತು ಕೊಡೆ ಸೂರ್ಯನಾದಂ'–ಮುಂತಾಗಿ ಶಿವನ ಹೆಚ್ಚುಗೆಯನ್ನು ಹೇಳುವಂತೆ, ಶ್ರೀ ಜಯದೇವರ ಪಾಂಡಿತ್ಯದ ಅಖಂಡ ಮೂರ್ತಿಯಾಗಿ, ಕಾರ್ಯದಕ್ಷತೆಯ ಪ್ರತ್ಯಕ್ಷ ನಾಯಕನಾಗಿ, ಶಿವಯೋಗದ ದಿವ್ಯ ಪ್ರಭೆಯಾಗಿ, ಅಂತಃಕರಣದ ರಸಾಮೃತವಾಹಿನಿಯಾಗಿ, ರೂಪದಲ್ಲಿ, ನಡೆ-ನುಡಿಯಲ್ಲಿ, ಹರುಷ ತುಂಬಿದ ನಗೆಯಲ್ಲಿ, ಗಂಭೀರ ಯುಕ್ತ ಸುವಿನೋದ ವಾಣಿಯಲ್ಲಿ, ಆಹಾರ-ವಿಹಾರದಲ್ಲಿ ಒಂದಿನಿತೂ ಕಡಿಮೆಯಾಗದಂತೆ ಜಯದೇವರ ಬಾಲ್ಯಜೀವನವೇ ಪುನಃ ಮೈದಾಳಿದಂತೆ ಒಪ್ಪಿದವರು ಶ್ರೀ ಜಯವಿಭವರು. ನಾಮರೂಪಗಳಲ್ಲಿದ್ದವನನ್ನು ಸಹಸ್ರಾರು ಪುಣ್ಯನಾಮಗಳಿಂದ ಕರೆಯುವಂತೆ ಕಾಲಾತೀತನನ್ನು ಕಾಲಾವಧಿಗೆ ಸಿಲುಕಿಸಬೇಕಾಯಿತು. ಇದೊಂದು ಒಗಟು. ಶೂನ್ಯಪೀಠದ ಪ್ರಭಾವ ಪುಂಜರಂಜನೆಗೆ ಮನಸೋಲದೇ ಪರಿವ್ರಾಜಕ ಸನ್ಯಾಸಿಯಂತೆ ನಿರ್ಲಿಪ್ತರಾಗಿ, ಅಂತರಂಗದಲ್ಲಿ ತ್ಯಾಗಿಯಾಗಿ, ಬಹಿರಂಗದಲ್ಲಿ ಸಾಮಾನ್ಯನಾಗಿ, ಆಡಳಿತದಲ್ಲಿ ಸಮರ್ಥನಾಗಿ ಜೀವನ ನಡೆಸಿದ ಮಹಾಮುನಿ ಶ್ರೇಷ್ಠನು. ಯುದ್ಧ ನಿಧಿಗೆ ಸರ್ಕಾರವು ಧನವನ್ನು ಕೇಳಿದ್ದೇ ತಡ ಹತ್ತು ಸಾವಿರ ರೂಪಾಯಿಗಳನ್ನು, ಭಂಗಾರದ ಆಭರಣಗಳನ್ನು ತಂದು ಮುಂದಿಟ್ಟರು. ಶ್ರೀ ಜಯವಿಭವರದು ಎಂತಹ ರಾಷ್ಟ್ರಪ್ರೇಮ !

ಶ್ರೀ ಜಯದೇವರು ಮತ್ತು ಶ್ರೀ ಜಯವಿಭವರಿಗೆ ಎಷ್ಟು ಸಾಮ್ಯವಿತ್ತೆಂದರೆ ಸನ್ 1937 ರಲ್ಲಿ ಬೃಹನ್ಮಠಕ್ಕೆ ಮೈಸೂರು ಮಹಾರಾಜರು ದಯಮಾಡಿಸುವ ಕಾಲದಲ್ಲಿ, ಬೆಳಿಗ್ಗೆ ಶ್ರೀ ಜಯದೇವರು ಸ್ನಾನ ಪೂರೈಸಿ ಮಹಾರಾಜರನ್ನು ಸ್ವಾಗತ ಮಾಡಲಿಕ್ಕೆ ಹೊರಡುವ ಪೂರ್ವದಲ್ಲಿ ತಾವು ಎಂತಹ ಬಟ್ಟೆಯನ್ನು ಧರಿಸಬೇಕೆಂದು ಸಮಸ್ಯೆ. ಆ ವೇಳೆಗೆ ನನಗೆ ನೆನಪಿನಲ್ಲಿದ್ದದು-ಬೆಂಗಳೂರು ಸರ್ಪಭೂಷಣ ಮಠದ ಮಹದೇವಸ್ವಾಮಿಗಳು, ಸುಂಕೇನಹಳ್ಳಿ ನಿಜಗುಣದೇವರು, ಹೆಬ್ಬಾಳದ ಈಶ್ವರದೇವರು, ದಾವಣಗೆರೆಯ ಯಜಮಾನ್ ಮೋತಿ ದೊಡ್ಡಪ್ಪನವರು, ಕೋಗುಂಡಿ ಹಾಲಪ್ಪ ಮೇಷ್ಟರು ಇನ್ನು ಮುಂತಾದ ಕೆಲವು ಹರಗುರು ಭಕ್ತಸಮುದಾಯ–ಸ್ವಾಮಿಗೆ ರೇಷ್ಮೆ ಕಪನಿ, ರೇಷ್ಮೆ ಪೇಟ, ಜರಿಯ ಶಲ್ಯೆ ಧರಿಸಬೇಕೆಂದು ಕೆಲವರ ಅಪೇಕ್ಷೆ. ಆದರೆ ಸ್ವಾಮಿಗೆ ಏಕೋ ಸಂಕೋಚ, ಸಮ್ಮತಿ ಸೂಚಿಸಲಿಲ್ಲ. ಹತ್ತಿರವೇ ಇದ್ದ ನನ್ನ ಕಡೆ ನೋಡಿ "ಬಸವಣ್ಣೀ,ನೀ ಹೇಳಪಾ" ಎಂದು ನಗುಮುಖದಿಂದ ಕೇಳಿದರು. ನಾನು 'ನಿತ್ಯದ ಮಡಿಬಟ್ಟೆಗಳೇ ಯೋಗ್ಯ'ವೆಂದು ಹೇಳಿದೆ. "ಹಾಂ, ಸರಿ" ಎಂದು ಹರುಷ ತುಂಬಿದ ಸೌಮ್ಯ ನಗೆಯಿಂದ ಕೈಯಲ್ಲಿ ಸಾದಾ ಬೆತ್ತವನ್ನು ಹಿಡಿದು ಹೊರಟೇಬಿಟ್ಟರು. ಇಲ್ಲಿ ಒಂದು ಮಾತು, ಮಹಾರಾಜರು ಬಂದುಹೋದ ಮೇಲೆ, ಮಧ್ಯಾಹ್ನ ಪೂಜಾನಂತರ ವಿಶ್ರಾಂತಿಯನ್ನು ತೆಗೆದುಕೊಳ್ಳುವಾಗ್ಗೆ ಬಳಿಯಲ್ಲಿಯೇ ಇದ್ದ ನನ್ನನ್ನು ನೋಡಿ 'ಮಹಾರಾಜರ ಪೇಟ ಯಾವ ಬಣ್ಣದಿತ್ತು ?' ನಾನು ಅವಕ್ಕಾದೆ. ತೀರ ಹತ್ತಿರದಲ್ಲಿದ್ದರೂ ಮಹಾರಾಜರ ಮುಖವನ್ನು ನೋಡಿದೆನಾಗಲೀ ಅವರ ವೇಷಭೂಷಣಗಳ ಕಡೆಗೆ ಲಕ್ಷ್ಯ ಕೊಟ್ಟದ್ದಿಲ್ಲ. ಸ್ವಾಮಿಗಳು ನಕ್ಕು ಪವಡಿಸಿದರು. ಈ ರೀತಿಯ ಸುವಿನೋದಗೋಷ್ಠಿಯಲ್ಲಿ ಶ್ರೀ ಜಯವಿಭವರೇನು ಕಡಿಮೆಯಿದ್ದಿಲ್ಲ. ಬೆಂಗಳೂರಲ್ಲಿ ಸನ್ 1960 ರಲ್ಲಿ ಶ್ರೀ ಜಯವಿಭವರ ಅಡ್ಡಪಲ್ಲಕ್ಕಿ ಉತ್ಸವದ ಕಾಲಕ್ಕೆ ಶ್ರೀಗಳನ್ನು ಮೈಸೂರು ಬ್ಯಾಂಕಿನ ಹತ್ತಿರ ಬೆಂಗಳೂರು ಮೇಯರರು ಶ್ರೀ ಗಂಧದ ಹಾರದಿಂದ ಸ್ವಾಗತ ಮಾಡಿ (ಆ ಹಾರವು ನನ್ನ ಹತ್ತಿರ ಇನ್ನೂ ಇದೆ) ಸ್ವಾಮಿಗೆ ಸೂಕ್ಷ್ಮವಾಗಿ ಪಲ್ಲಕ್ಕಿಯಲ್ಲಿ ಕುಳಿತುಕೊಳ್ಳುವುದಕ್ಕೆ ಶೋಭಾಯಮಾನವಾಗಿ ಬೇರೆ ರೇಷ್ಮೆ ಪಗ್ಗೆರೆ ಬಟ್ಟೆಗಳನ್ನು ಧರಿಸುವದಿದ್ದರೆ ಪ್ರತ್ಯೇಕ ವ್ಯವಸ್ಥೆ ಮಾಡುತ್ತೇವೆಂದು ಕೇಳಲಾಗಿ, 'ಮಠದಲ್ಲಿ ಇದಕ್ಕಿಂತಲೂ ಸಾದಾ ಬಟ್ಟೆ ಇದ್ದಿಲ್ಲ. ಇದ್ದರೆ ಅವನ್ನೆ ತೊಡುತ್ತಿದ್ದೆವು' ಎಂದು ನಗುಮೊಗದಿಂದ ಹೇಳಿ ತಮ್ಮ ಸರಳತೆಯನ್ನು ವ್ಯಕ್ತಪಡಿಸಿದರು. ನಂತರ ಸಾಯಂಕಾಲ ಸರ್ಪಭೂಷಣ ಮಠದಲ್ಲಿಯ ಬಸವಸದನದಲ್ಲಿ ದರ್ಶನಕ್ಕೆ ಹೋದಾಗ್ಗೆ ಮಾತಿನ ಪ್ರಸಂಗದಲ್ಲಿ ಪುನಃ ವೇಷದ ಬಗ್ಗೆ ತಾವೆ ಅಪ್ಪಣೆ ಕೊಡಿಸಿದರು. ಸ್ವಾಮಿ ವೇಷದಿಂದ ಮೆರೆಯುವನೇ ? ವೈರಾಗ್ಯವೇ ಆತನಿಗೆ ಭೂಷಣ ! ಆತ್ಮೀಯ ಭಾವ, ಮೃದು ವಚನ ಇವು ಸ್ವಾಮಿಯ ಲಕ್ಷಣ ಮುಂತಾಗಿ ತಂತಿಯ ನಾದದಂತಹ ಕಂಠ ಮಾಧುರ್ಯದಿಂದ ಹೊಮ್ಮಿದ ಆ ಶಬ್ದಗಳು,ಆ ಕಣ್ಣುಗಳ ಮಾರ್ಮಿಕ ನೋಟ, ಗಜಸುಂಡದಂತಹ ಹಸ್ತವಿನ್ಯಾಸ, ಅವುಗಳನ್ನು ಬಣ್ಣಿಸುವುದಕ್ಕೆ ನನ್ನ ಶಕ್ತಿ ಸಾಲದು.

ಶ್ರೀ ಜಯವಿಭವ ಸ್ವಾಮಿಗಳು ಸಃ 1949 ರಲ್ಲಿ ಚಿತ್ರದುರ್ಗ ಬೃಹನ್ಮಠದ ಶ್ರೀ ಜಯದೇವ ಸ್ವಾಮಿಗಳವರ ಉತ್ತರಾಧಿಕಾರ ಪೀಠವನ್ನೇರಿದರೂ, ಅವರಿಗೆ ಪಡಿನೆಳಲಾಗಿ, ಪ್ರತಿಬಿಂಬವಾಗಿ ನಡೆದುಕೊಂಡರೇ ವಿನಹ ಸರ್ವ ಸ್ವತಂತ್ರ ಹಕ್ಕಿನಿಂದ, ಅಧಿಕಾರದರ್ಪವನ್ನು ಎಂದಿಗೂ ತೋರಿಸಿಲ್ಲ. ಗುರು–ಶಿಷ್ಯರ ಪ್ರೇಮ ಭಾವವನ್ನು ಕಂಡವರೇ ಧನ್ಯರು ಉತ್ಸವ ಪ್ರಿಯರಾಗಿದ್ದ ಶ್ರೀ ಜಯದೇವರಂತೆಯೇ ಇವರಿಗೂ ಅನೇಕ ಕಡೆಗೆ ವೈಭವದ ಉತ್ಸವಗಳಾದವು. ಗುರುಗಳೊಡನೆ ಹೆಚ್ಚಾಗಿ ಮಾತನಾಡುವ ಸಂಪರ್ಕವಿಟ್ಟುಕೊಳ್ಳದಿದ್ದರೂ ಅಂತಃಕರಣಕ್ಕೆ ಎಲ್ಲವೂ ವಿದಿತವಾಗುತ್ತಿತ್ತು. ದಾವಣಗೆರೆಯಲ್ಲಿ ಶ್ರೀ ಜಯದೇವರು ಶ್ರೀ ಶಿವಯೋಗಾಶ್ರಮದಲ್ಲಿ ತಮ್ಮ ಯೋಗ ಸಮಾಧಿಯನ್ನು ತೆಗೆಸುವುದಕ್ಕೋಸ್ಕರ ತಮ್ಮ ಪಾದದ ಅಳತೆಯನ್ನು ಕೊಡುವಾಗ್ಗೆ ಶ್ರೀ ಜಯವಿಭವರಿಗೆ ಎಲ್ಲಿಲ್ಲದ ದುಃಖ ಒತ್ತರಿಸಿತು. ಶ್ರೀ ಮೃತ್ಯುಂಜಯಪ್ಪಗಳು ಅವರ ಪರಿವಾರದವರು ಉಳಿದ ಸದ್ಭಕ್ತರೆಲ್ಲಾ ಈ ಪ್ರಸಂಗದಲ್ಲಿ ರೋಮಪುಲಕಿತರಾದರು.

ಈವರೆಗೂ ಎಲ್ಲಾ ಸಭೆ ಸಮ್ಮೇಳನಗಳಲ್ಲಿ ಶ್ರೀ ಜಯದೇವ ಪ್ರಭುಗಳು ಮಹಾಧ್ಯಕ್ಷರಾಗಿದ್ದ ತಮ್ಮ ಸಂಪ್ರದಾಯವನ್ನು

ಶ್ರೀ ಜಯವಿಭವರು ಬಂದ ಮೇಲೆ ಸಡಿಲಿಸಿದರು. ಹಂಸಬಾವಿಯಲ್ಲಿ ಒಂದು ಸಾರಿ ಗಮಕ ಕಲಾನಿಧಿ ಶ್ರೀ ಜೋಳದ ರಾಶಿ ದೊಡ್ಡನಗೌಡರಿಗೆ ಶ್ರೀ ಜಯದೇವರು ಉಪಸಂಹಾರ ಭಾಷಣ ಮಾಡುತ್ತಿರುವಾಗ್ಗೆ ಸಂತೋಷ ಉಕ್ಕಿ ' ನೀವು ಜೋಳದ ರಾಶಿಯಲ್ಲ; ಮುತ್ತಿನರಾಶಿ ' ಎಂದು ಹೇಳಿದ ಮೇಲೆ ಶ್ರೀ ಜಯವಿಭವರು ನಂತರದ ಭಾಷಣದಲ್ಲಿ 'ಮುತ್ತಿನ ರಾಶಿ ಯಾತಕ್ಕೆ ಬರುತ್ತದೆ? ಜೀವನಕ್ಕೆ ಜೋಳದ ರಾಶಿಯೇ ಬೇಕು. ಕಾರಣ, ಹೀಗಿರುವುದೇ ಲೇಸೆಂ'ದು ಶ್ರೀ ಗೌಡರಿಗೆ ಬನಾರಸಿ ಜರದ ಉಪ್ಪರಣಿಯೊಂದನ್ನು ದಯಪಾಲಿಸಿರುತ್ತಾರೆ. ಹೀಗೆ ಒಬ್ಬರಿಗೊಬ್ಬರು ಅನ್ಯೋನ್ಯವಾಗಿ ತಮ್ಮ ಪ್ರಸಾದವಾಣಿಯಿಂದ ಪರಿಸರವನ್ನು ಮೋದಗೊಳಿಸುತ್ತಿದ್ದರು.

ಇವರ ಕಾಲಕ್ಕೆ ಶ್ರೀ ಮುಳುಗುಂದದ ಬಾಲಲೀಲಾ ಮಹಾಂತ ಶಿವಯೋಗಿಗಳವರ ಶತಮಾನೋತ್ಸವ ಆಚರಿಸಲ್ಪಟ್ಟದ್ದು ಒಂದು ಅವಿಸ್ಮರಣೀಯ ಘಟನೆ. ತಾವು ಚಿಕ್ಕಂದಿನಲ್ಲಿ ಆಡಿ ಬೆಳೆದ ಮಠದಲ್ಲಿ, ಆ ಪುಣ್ಯವಂತನ ಪದ್ಯಗಳನ್ನು ಸುಮಧುರ ಕಂಠದಿಂದ ಹಾಡಿ ಆತನ ಲೀಲೆಗಳನ್ನು ಸರ್ವಾಂಗದಲ್ಲಿ ತುಂಬಿಕೊಂಡು ಆತನೇ ತಾನಾಗಿ ಅವತರಿಸಿ ಈಗ ಆತನ ಒಂದು ನೂರನೇ ಉತ್ಸವವನ್ನು, ಮೈಸೂರು ಮಹಾರಾಜರ ಸಮಕ್ಷಮದಲ್ಲಿ ಆಚರಿಸಿದ್ದು ಮಹತ್ವದ ಘಟನೆ. ಆ ಸವಿನೆನಹಿನ 'ವೈರಾಗ್ಯದಲರು' ಇಂದಿಗೂ ಸದ್ಭಕ್ತಿ ಗಾಳಿಯನ್ನು ಬೀಸುತ್ತಿದೆ.

ಶ್ರೀಗಳವರು ಪಟ್ಟಾಭಿಷೇಕದ ನಂತರ ಕೇವಲ ಉತ್ಸವ ಮೂರ್ತಿಯಾಗಿ, ಭಕ್ತರ ಕಾಣಿಕೆಗಾಗಿ ಆಸೆ ಮಾಡದೆ, ತಮ್ಮ ಒಡೆತನದಲ್ಲಿದ್ದ ಭೂಮಿ, ತೋಟಗಳನ್ನು ಸುಧಾರಿಸಿ ಆಹಾರ ಧಾನ್ಯವನ್ನು ಹೆಚ್ಚಿಸಿಕೊಂಡರು. ಕೊಡಗಿನ ಕಾಫಿ ತೋಟವೊಂದರಿಂದಲೇ ವರ್ಷಂಪ್ರತಿ ಸುಮಾರು ಎರಡು ಲಕ್ಷ ರೂಪಾಯಿಗಳಷ್ಟು ಉತ್ಪನ್ನವಾಗಬಹುದು. ಅದೆಲ್ಲಾ ನಿಯೋಜಿತ ಕಾರ್ಯಗಳಿಗೆ ವೆಚ್ಚವಾಗುತ್ತಲಿದೆ. ಆಗ ಬೆಂಗಳೂರು ಸರ್ಪಭೂಷಣ ಮಠಕ್ಕೆ ಉತ್ತರಾಧಿಕಾರಿಯಾಗಿ ಶಿರಿಯಾಳು ಕೊಪ್ಪದ ಶ್ರೀ ಶಿವಕುಮಾರ ಸ್ವಾಮಿಗಳು, ಎಂ. ಎ., ಇವರನ್ನು ಬಹಳ ಮುತುವರ್ಜಿಯಿಂದ ಮಾಡಿದರು. ಶ್ರೀ ಜಗದ್ಗುರು ಜಯವಿಭವರು ಮತ್ತು ಶ್ರೀ ಶಿವಕುಮಾರ ಸ್ವಾಮಿಗಳು ಕಾಶಿಯಲ್ಲಿ ಕೂಡಿಯೇ ಅಭ್ಯಾಸ ಮಾಡಿದವರು. ಅಲ್ಲದೆ ಅತಿ ಸ್ನೇಹಿಗಳೂ, ಆತ್ಮೀಯರೂ ಆಗಿದ್ದವರು. ಕಾಶಿಯಲ್ಲಿ ಹಿಂದೂ, ಮುಸ್ಲಿಂ ದಂಗೆಯಲ್ಲಿ ಶ್ರೀ ಜಗದ್ಗುರುಗಳ ಮೈ ಮೇಲೆ ಮುಸ್ಲಿಮರು ಆಸಿಡ್ ಉಗ್ಗುವ ವೇಳೆಯಲ್ಲಿ ಶ್ರೀ ಶಿವಕುಮಾರ ದೇವರು ಶ್ರೀ ಜಗದ್ಗುರುಗಳನ್ನು ಪೂರ್ತಿ ತಬ್ಬಿಕೊಂಡು ಆ ಪ್ರಸಂಗವನ್ನು ತಮ್ಮ ಮೇಲೆ ತಂದುಕೊಂಡು, ತಾವು ಸುಟ್ಟುಕೊಂಡು ಜಗದ್ಗುರುಗಳನ್ನು ಕುತ್ತಿನಿಂದ ಪಾರುಮಾಡಿದರು. ಇಂತಹ ಪರಮ ಸ್ನೇಹಿತರೂ, ಬುದ್ಧಿವಂತರೂ, ಪಂಡಿತರೂ, ವ್ಯವಹಾರ ಕುಶಲರೂ, ಕರ್ತವ್ಯ ದಕ್ಷರೂ ಆದ ಶ್ರೀ ಶಿವಕುಮಾರ ಸ್ವಾಮಿಗಳವರನ್ನು ಬೆಂಗಳೂರಿಗೆ ತಂದು ಅವರಿಂದ ಸಮಾಜಕ್ಕೆ ಅನೇಕ ಕಾರ್ಯಗಳನ್ನು ಮಾಡಿಸುವ ಯೋಚನೆಯಲ್ಲಿದ್ದರು. ಅಲ್ಲದೆ ಗಾಂಧೀನಗರದಲ್ಲಿ ತಿಪ್ಪಸೆಟ್ಟಿ ಮಠವೊಂದು ಇವರ ವಶದಲ್ಲಿಯೇ ಇದ್ದು, ಅಲ್ಲಿ ಒಂದು ಪ್ರಿಂಟಿಂಗ್ ಪ್ರೆಸ್ ಹಾಕಿ ಗ್ರಂಥ ಪ್ರಕಟನೆಯ ಕಾರ್ಯವನ್ನು ಶ್ರೀ ಶಿವಕುಮಾರಸ್ವಾಮಿಗಳಿಗೇ ಒಪ್ಪಿಸಬೇಕೆಂದು ಮಾಡಿದ್ದರು.

ಧಾರ್ಮಿಕ, ಸಾಮಾಜಿಕ, ತಾತ್ವಿಕಮೂರ್ತಿಗಳಾಗಿದ್ದ ಶ್ರೀಗಳು ಹಮ್ಮಿಕೊಂಡಿದ್ದ ಕಾರ್ಯಗಳ ಪಟ್ಟಿಯು ಮಠಗಳಿಗೆ ಕೈಪಿಡಿಯಾಗಬಹುದಿತ್ತು. ಅದರಲ್ಲಿಯ ಕೆಲವು ಅಂಶಗಳನ್ನು ಈಗಿನ ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳವರು ನಡೆಯಿಸಿ ಕೊಡುತ್ತಿದ್ದಾರೆ. ಪ್ರಸಂಗಾನುಸಾರವಾಗಿ ಅಲ್ಲಲ್ಲಿ ಜರುಗಿದ ಶ್ರೀ ಜಯವಿಭವ ಮಹಾಸ್ವಾಮಿಗಳವರ ಅಡ್ಡಪಲ್ಲಕ್ಕಿ ಮತ್ತು ದಸರ ಮಹೋತ್ಸವ ಮುಂತಾದ ಅನೇಕ ಸಂದರ್ಭಗಳಲ್ಲಿ ಸದ್ಭಕ್ತರು ನೀಡಿದ ಬಿನ್ನವತ್ತಳೆಗಳಿಗೆ ಪ್ರತ್ಯುತ್ತರವಾಗಿ ಶ್ರೀಗಳ ವೀರತೇಜದ ಸಹಜ ಸುಧಾ ಶೈಲಿಯ ಆಶೀರ್ವಚನಗಳು ಇಂದಿಗೂ ಪ್ರಕಾಶಮಾನವಾಗಿ ಶೋಭಿಸುತ್ತಿವೆ. ಒಟ್ಟಾರೆ, ಶ್ರೀಗಳು ಮರೆಯದ, ಮರೆಯಾಗದ ಮಹಾನುಭಾವರು. ಕಲಾ ತಪಸ್ವಿಗಳಾದ ಇವರ ಬೃಹಜ್ಜೀ-ವನವು ಸಾಂಕೇತಿಕ ಬಿಂದುವಾಗಿದ್ದರೂ, ನಾದ ಮಾಧುರ್ಯವು ಸ್ವೇಚ್ಛೆಯಿಂದ ಎಲ್ಲೆಡೆಗೆ ಪಸರಿಸಿತ್ತು. ಮಹಾಮತಿಯ ಮಥಿ-ತಾರ್ಥವು ಅಲ್ಪಮತಿಗಳಿಗೆ ಯಾವಾಗಲೂ ಒಂದು ಒಡೆಯದ ಒಗಟು.

ಬೆಳಗಿನ ಐದರಿಂದ ಪ್ರಾರಂಭವಾದ ಅವರ ದೈನಂದಿನ ಕಾರ್ಯಕ್ರಮಗಳು ನೋಡಲು ಸಾಮಾನ್ಯವೆನಿಸುತ್ತಿದ್ದರೂ, ಆಚರಣೆಯಲ್ಲಿ ಕಠಿಣವಾಗಿದ್ದವು. ಕಾಯವು ವಜ್ರದಂತೆ ಇದ್ದರೂ ಮನಸ್ಸು ಕೋಮಲವಾಗಿತ್ತು. ವಾಣಿಯು ಮಂಜುಳ ಮನೋಹರವಾಗಿತ್ತು. ವೇದವೇ ನಾದವಾದಂತಿದ್ದ ಆ ರುದ್ರಘೋಷದ ಪೂಜಾ ವಿಧಾನದಲ್ಲಿಯ ತಲ್ಲೀನತೆಯಲ್ಲಿ ಪಾಲುಗೊಂಡ ಪುಣ್ಯವಂತನೇ ರಸಿಕನು. ಆ ಸರಸಾನುಭವ ಸಂವೇದ್ಯನೆ ಸದ್ಭಕ್ತನು, ಚಿತ್ಪ್ರಾಜ್ಞನು. ಶ್ರೀ ಜಯದೇವ–ಜಯವಿಭವರು, ಆಯುಃ ಪರಿಮಿತಿಯಿಲ್ಲದ ಬ್ರಹ್ಮನ ಅವಳಿ ಮಕ್ಕಳಂತೆ ಒಪ್ಪುತ್ತಿದ್ದರು. ಬಿಂಬ–ಪ್ರತಿಬಿಂಬವಾಗಿದ್ದರಿಂದಲೇ, ಬಿಂಬದಂತಿದ್ದ ಶ್ರೀ ಜಯದೇವರೇ ಕಾಣದಂತಾದರೆ, ಪ್ರತಿಬಿಂಬಕ್ಕೆ ತಾಣವೇ? ಕಾಲಾವಕಾಶವಿಲ್ಲದೆ ರೆಪ್ಪೆಬಡಿಯುವಷ್ಟರಲ್ಲಿಯೇ ಕಾಲವಶರಾದರು.

ಜಯಾ ಜಯದೇವ

ಡಾ॥ ಡಿ. ಎಸ್. ಕರ್ಕಿ, ಎಂ.ಎ., ಪಿ.ಹೆಚ್.ಡಿ.,
ಹುಬ್ಬಳ್ಳಿ

ದೃಷ್ಟಿಗೆ ಹೊಳೆಯುತ ತಟ್ಟನೆ ಮನ ಹಿಡಿ
ವಂತಹ ಮುಖ ಲಕ್ಷಣ ಬಿಂಬ
ನೋಡಿದ ಚಣ 'ಜಯ' ಎಂಬುವ ಸೂಚನೆ
ಹೊಳೆದ ಸ್ಮರಣ ಇಂದಿಗು ಕಿರಣ

ಗದುಗಿನ ತೋಂಟದ ಮಠದಿ, ಕಾಶಿಯಲಿ
ಸಾಧನೆಯಾಯಿತು ತ್ವರಿತದಲಿ
ಸದ್ವಿದ್ಯೆಯು ಕೂಡಿರೆ ಸಚ್ಚಿತ್ತಕೆ
ತಾನಾಯಿತು ಸಿದ್ಧಿಗೆ ದಾರಿ

ಜಯದೇವರ ಮೊದಲಿನ ಹೆಸರದು ತಾ
'ಚೆನ್ನವೀರ' ಮೊದಲೇ ಚೆನ್ನ
ದುರ್ಗ ಜಗದ್ಗುರು ಪೀಠ ಪ್ರಶಸ್ತಿ :
'ಶ್ರೀ ಜಯದೇವ' ನೈಜವಲ !

ತುಂಗಭದ್ರೆಯ ಉತ್ತರದೆಡೆಯಿಂ
ತೆಂಕಣ ಪೀಠಕೆ ಹೊಸ ಪಯಣ
ಚಿತ್ರದುರ್ಗಕೈದಿರೆ ಜಯದೇವರ
ನಿಲವು ಗೆಲವು ತಳೆದವು ಕಿರಣ

ಸತ್ವದ ಹಾಗೆಯೆ ಶೀಲವು ಬಂಧುರ
ಅದರಂತೆಯೆ ಬುದ್ಧಿಯ ಬೆಳಕು
ಚಿತ್ರದುರ್ಗದಿಂದಾ ಅಮೋಘ ಪ್ರಭೆ
ಹರಡಿತು ನಾಡಿನೊಳೆಲ್ಲಲ್ಲೂ

ಶಿಕ್ಷಣ ಸಂಸ್ಕೃತಿಗಳ ಬೆಳವಣಿಗೆಗೆ
ಸ್ಫೂರ್ತಿಯ ಸೆಲೆಯಾಯಿತು ಪೀಠ
ಜಯದೇವರ ವ್ಯಕ್ತಿತ್ವದಿ ಸಾಜದಿ
ಹೊಗರೇರಿತು, ಜಗದ್ಗುರು ಪೀಠ

ಘನ ವ್ಯಕ್ತಿತ್ವಕೆ ಸಮುಚಿತ ಸಂಜ್ಞೆಯು
ಜಗದ್ಗುರು ಶ್ರೀ ಜಯದೇವಾ
ಚಿತ್ರದುರ್ಗ "ಜಯದೇವ ಜಯ ಜಯಾ"
ಎಂಬ ನಾದ ನಿನದಿಸಿದೆ ನಿಜ.

ದೃಷ್ಟಿಗೆ ತಟ್ಟನೆ ಹೊಳೆಯುತ ಮನ ಹಿಡಿ–
ವಂಥ ಲಕ್ಷಣದ ಮುಖ ಬಿಂಬ
ನೆನೆದರೆ 'ಜಯದೇವರ' ಘನವಾದಾ
ವ್ಯಕ್ತಿತ್ವದ ಕಿರಣವೆ ಕಿರಣ.



ಬೆಂಗಳೂರು ಶ್ರೀ ಜಯದೇವ ನಿಲಯದಲ್ಲಿ ಶ್ರೀ ಜಗದ್ಗುರು ಮಹಾ ಸನ್ನಿಧಿಯವರು
ಮತ್ತು ಮೈಸೂರು ಶ್ರೀಮನ್ಮಹಾರಾಜರವರು

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು

ಶ್ರೀ ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳವರ

ಅನುಗ್ರಹ ಭಾಷಣ, ವಿಜಯದಶಮಿಯ ಶುಭಸಂದೇಶ

ಹಾಗೂ

ಸೂ ಳ್ನು ಡಿ ಗ ಳು

ಸಂಗ್ರಾಹಕರು:

ಚ. ಸುಂದರೇಶನ್, ಎಂ. ಎ.,
ಸರ್ಕಾರಿ ಆರ್ಟ್ಸ್ ಕಾಲೇಜ್,
ಚಿತ್ರದುರ್ಗ

ಸಂಗ್ರಾಹಕರ ನುಡಿ :

ಇಂದು ಚಿನ್ಮೂಲಾದ್ರಿ ಬೃಹನ್ಮಠದ ಶೂನ್ಯ ಪೀಠಾಧಿಪತಿಗಳಾಗಿ ವಿರಾಜಿಸುತ್ತಿರುವ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳವರ ದಿವ್ಯ ವ್ಯಕ್ತಿತ್ವವನ್ನು ಮನಗಂಡಾಗ, ನಮ್ಮ ಕನ್ನಡನಾಡು, ಅದರಲ್ಲಿಯೂ ಚಿತ್ರದುರ್ಗದ ಜನತೆ ಅದೆಷ್ಟು ಕೃತಾರ್ಥರೋ ಎಂದು ನನಗನಿಸುತ್ತದೆ.

ಶ್ರೀ ಪೀಠ ಪರಂಪರೆಗೆ ಅನುಗುಣವಾಗಿ ಸುಜ್ಞಾನ-ಸತ್ಕ್ರಿಯೆಗಳ ಸಮರಸ ಸಿದ್ಧಿಯ ಫಲವಾಗಿ ಶ್ರೀಗಳವರ ವ್ಯಕ್ತಿತ್ವ ಘನ ಗಂಭೀರವಾದುದಾಗಿದೆ. ಪೂಜ್ಯ ಶ್ರೀಗಳವರ ಕಾರುಣ್ಯಲಹರಿ ನಾಡಿನ ಸರ್ವತೋಮುಖವಾದ ಪ್ರಗತಿ-ಜಾಗೃತಿಗೆ ಕಾರಣವಾಗಿದೆ. ಸಾಹಿತ್ಯಪ್ರಪಂಚಕ್ಕೂ ಹೊಸ ಬೆಳಕನ್ನು ಶ್ರೀಗಳವರು ಕರುಣಿಸಿದ್ದಾರೆ; ಉತ್ತಮ ಸಾಹಿತಿಗಳನ್ನು ಪರಿಪೋಷಿಸುತ್ತಿದ್ದಾರೆ.

ಶ್ರೀ ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳವರ ನಿಲವು ಪರಮ ಗಂಭೀರ. ಅವರ ವಾಣಿ ಪರಮಾತ್ಮನೇ ನುಡಿಸುವ ವಾಣಿ. ಹೃದಯ ವಾಣಿಯನ್ನು ಆಧರಿಸಿ ಬಾಳು-ಎಂಬುದಕ್ಕೆ ಸಾಕ್ಷಿಯಾಗಿ ಹೊಮ್ಮಿ ಚಿಮ್ಮಿ ಬರುವ ಪ್ರೌಢವೂ ಪ್ರಸನ್ನವೂ ಆದ ಶಿವಮಯ ವಾಣಿ. ಚೈತನ್ಯವನ್ನು ಪಡಿಮಿಡಿಯುವ, ದೇಶದ ಉನ್ನತಿಗೆ ಅಗತ್ಯವಾದ ಬೆಳಕಿನ ಇಂತಹ ಸೂಕ್ತಿಗಳನ್ನು ಗಾಳಿಗೆ ಹಾರಿಸಿ ಬಿಟ್ಟರೆ, ಅಥವಾ ಸದ್ಭಕ್ತರು ಕೇಳಿ ಆನಂದಪಟ್ಟು ಮರೆತುಬಿಟ್ಟರೆ ನಾಡಿಗೆ ಆಗುವ ನಷ್ಟ ಅಷ್ಟಿಷ್ಟಲ್ಲ. 'ವಾಕ್ಯಂ ರಸಾತ್ಮಕಂ ಕಾವ್ಯಂ'-ಎಂದಿದ್ದಾನೆ ಲಾಕ್ಷಣಿಕ ವಿಶ್ವನಾಥ. ಸ್ವಾನುಭವದ ಅಭಿವ್ಯಕ್ತಿಯ ಮೌಲ್ಯ ಘನವಾದ ಕಲಾಕೃತಿಯಷ್ಟೇ ಹಿರಿದು.

ವಿದ್ವತ್ಪೂರ್ಣವು ರಸಾತ್ಮಕವೂ ಆದ ಪೂಜ್ಯಶ್ರೀಗಳವರ ದಿವ್ಯ ವಾಣಿಯನ್ನು ಬರಹದ ಮೂಲಕ ಹಿಡಿದಿಡುವ ಹೊಂಗೆಲಸ ಮತ್ತು ಗ್ರಂಥರೂಪದಲ್ಲಿ ಅದನ್ನು ಪ್ರಕಾಶಗೊಳಿಸುವ ಸತ್ಕಾಯಕ ಇನ್ನು ಆಗಬೇಕಾಗಿದೆ. ಈ ದಿಶೆಯಲ್ಲಿ ಇದೊಂದು ನನ್ನ ನಮ್ರ ಪ್ರಯತ್ನ.

ಪ್ರಕೃತ, ಪೂಜ್ಯಶ್ರೀ ಜಗಜಗದ್ಗುರುಗಳವರ ಅನುಗ್ರಹ ಭಾಷಣ, ಸಂದೇಶ ಹಾಗೂ ಸೊಳ್ನುಡಿಗಳನ್ನು ಶ್ರದ್ಧಾಭಕ್ತಿಯಿಂದ ಯಥಾರ್ಥವಾಗಿ ಸಂಗ್ರಹಿಸಿ ಸಾರಸದ್ಭಕ್ತರ ಜೀವನದ ಸಫಲತೆಗೆಗಾಗಿ ನಿರೂಪಿಸಿದ್ದೇನೆ.

—ಚ. ಸುಂದರೇಶನ್

೧

ಶ್ರೀ ವಿನಾಯಕ*

ಗಣಪತಿ ತತ್ತ್ವ ಬಹಳ ದೊಡ್ಡದು. ವಿವೇಕ, ವಿಚಾರ, ಪ್ರಕಾಶಗಳ ದಿವ್ಯಮೂರ್ತಿಯೇ ವಿನಾಯಕ. ಆತನ ಮುಂಡ ಮಾನವನದು; ರುಂಡ ಪ್ರಾಣಿಯದು. ಪ್ರಕೃತಿಯೊಡನೆ ಮಾನವ ಹೇಗೆ ಬಾಳಬೇಕು ಎಂಬುದರ ಪಾಠವನ್ನು ಗಣಪತಿಯ ನಿಲವು ಕಾಣಿಸುತ್ತಿದೆ. ದಿವ್ಯ ಭಾವಗಳ ಸುಂದರ ಸಂಯೋಜನೆ, ಸಮನ್ವಯ ದೃಷ್ಟಿಯನ್ನು ಗಣಪತಿಯ ವಿಷಯದಲ್ಲಿ ತಿಳಿಯಬಹುದು.

ಗಣಪತಿಯಿಂದ ಮಾನವನು ಏನು ಸ್ಫೂರ್ತಿಯನ್ನು ಪಡೆಯಬೇಕು ? ಎಂತಹ ಬೆಳಕನ್ನು ಕಾಣಬೇಕು ? ಯಾವ ಬಗೆಯ ವಿವೇಕವನ್ನು ಗಳಿಸಬೇಕು ?– ಈ ಸಂಬಂಧದಲ್ಲಿ ಶಾಸ್ತ್ರ ಸಾಕಷ್ಟಿದೆ; ಜಟಿಲವಾದ ವಿಷಯಗಳೂ ತಿಳಿಯಬೇಕಾದುದೂ ಇವೆ. ವಿಶೇಷ ವಿಷಯಗಳ ಪ್ರಸ್ತಾಪಕ್ಕೆ ಈಗ ಸಮಯವಿಲ್ಲ. ಮುಖ್ಯವಾಗಿ ಗಣಪತಿಯ ಉಪಾಸನೆಯ ಸಂದರ್ಭದಲ್ಲಿ ತಿಳಿಯಬೇಕಾದ ವಿಷಯಗಳು ಹಲವಿವೆ. ಗಣಪತಿ ಏನಾಗಿದ್ದಾನೆ ? ಆತನಿಂದ ಏನನ್ನು ನಾವು ಕಲಿತುಕೊಳ್ಳಬೇಕು ? ಕಾಲ-ಧರ್ಮಕ್ಕೆ ತಕ್ಕಂತೆ ಗಣಪತಿಯ ಅರ್ಥ ಮಾಡುತ್ತಾರೆ. ಶಿವಗಣದ ಅಧಿದೇವತೆ, ಈ ಕಾಲದ ದೃಷ್ಟಿಯಿಂದ ಗಣರಾಜ್ಯದ ಅಧಿದೇವತೆ, ವಿನಾಯಕ–ವಿಶೇಷ ನಾಯಕ ಪ್ರಜಾಕೋಟಿಯ ಅಧಿಪತಿ; ಅಧಿದೈವ—ಏನೆಲ್ಲ ಅರ್ಥವಾಗುತ್ತದೆ.

ವಿನಾಯಕನ ಹಬ್ಬ : ಇದೊಂದು ರಾಷ್ಟ್ರೀಯ ಉತ್ಸವ; ರಾಷ್ಟ್ರೀಯ ಪರ್ವ. ಜಾತಿ, ಮತ, ಕುಲ, ಕೋಮು—ಯಾವ ಭಿನ್ನತೆಗಳೂ ಇಲ್ಲದೆ ಈ ರಾಷ್ಟ್ರೀಯ ದೇವತೆಯನ್ನು ನಾವು ಆರಾಧಿಸುತ್ತೇವೆ. ಎಲ್ಲ ಜಾತಿ ಮತಗಳಿಗೆ ಸಂಬಂಧಿಸಿದ ದೇವರು ಗಣಪತಿ. ವಿವೇಕ, ವಿಚಾರ, ಪ್ರಕಾಶ — ಯಾವ ಜಾತಿಯ ಜನತೆಗೆ ಬೇಡ ! ಎಲ್ಲ ಜಾತಿಗೂ ಇವು ಬೇಕು. ಈ ಅರ್ಥದಲ್ಲಿ ಗಣಪತಿಯ ಉಪಾಸನೆ, ಸನ್ನಿಧಾನ, ಪೂಜೆ ಮಹತ್ವದ್ದಾಗಿ ತೋರುತ್ತದೆ. ಗಣೇಶನ ಆರಾಧನೆ—ಆ ಮಹಿಮನ ವ್ಯಕ್ತಿತ್ವವನ್ನು ಜನ ಜೀವನದಲ್ಲಿ ಅಳವಡಿಸಿಕೊಳ್ಳುವುದೇ ಆಗಿದೆ. ಏಕತೆಯ, ಸಂಘಟನೆಯ ಪಾಠವನ್ನು ಗಣಪತಿಯ ಹಬ್ಬದಿಂದ ನಾವು ತಿಳಿದುಕೊಳ್ಳಬೇಕಾಗಿದೆ.

ಕಲೆಗಾಗಿ ಕಲೆ ಎಂಬಂತೆ ವಿನಾಯಕನ ಹಬ್ಬವನ್ನು ವರ್ಷಂಪ್ರತಿ ಆಚರಿಸಬೇಕೆಂದು, ಹಬ್ಬಕ್ಕಾಗಿ ಹಬ್ಬವನ್ನು ಆಚರಿಸುವವರೂ ಇದ್ದಾರೆ. ಇದು ರೂಢಿಯ ಪ್ರಾಧಾನ್ಯವೆನಿಸೀತು. ಗಣಪತಿಯ ಉತ್ಸವದ ಆಚರಣೆಯಲ್ಲಿ ಅರ್ಥವತ್ತಾದ ವಿಚಾರಗಳಿವೆ. ನೀತಿ, ಧರ್ಮ, ತತ್ತ್ವ ವಿಚಾರಗಳು ತುಂಬಿವೆ. ಇಂತಹ ಜೀವನಕ್ಕೆ ಆವಶ್ಯಕವಾದ ದಿವ್ಯ ತತ್ತ್ವಗಳನ್ನು ಮನಸ್ಸಿಗೆ ತಂದುಕೊಳ್ಳುವ ಉದ್ದೇಶದಿಂದ, ಅಚ್ಚುಕಟ್ಟಾಗಿ ಈ ಜ್ಞಾನವನ್ನು ತಿಳಿಯಲು ನಾವು ಆಚರಿಸಬೇಕು.

ಗಣಪತಿಯ ಬಗ್ಗೆ ಎಷ್ಟೋ ಪೌರಾಣಿಕ ಆಖ್ಯಾನಗಳಿವೆ. ಒಂದು ವಿಷಯ ಸ್ಮರಿಸುವುದಾದರೆ ಮಹಾಭಾರತವನ್ನು ಬರೆದ ವೇದವ್ಯಾಸರು, ಗಣಪತಿಯನ್ನು ಲಿಪಿಕಾರನನ್ನಾಗಿ ಮಾಡಿಕೊಂಡು ವಿರಚಿಸಿದ ಸನ್ನಿವೇಶ. ಮಹಾಭಾರತ-ಬುದ್ಧಿ ಸಿದ್ಧಿಗೆ ಮಾನವತೆಗೆ ಮಹಾಭಾಂಡಾರದಂತಿರುವ ಕೃತಿ. ಇದರಲ್ಲಿ ಏನೆಲ್ಲವೂ ಇದೆ. ಇದೊಂದು ಜನತೆಯ ನಿಧಿ ನಿಧಾನ. ಶ್ಲೋಕಗಳನ್ನು ನಿರಂತರವಾಗಿ ನೀವು ತಿಳಿಸಬೇಕೆಂದು ಗಣಪತಿಯು ಹೇಳಿದಾಗ, ನಾನು ಹೇಳಿದ ಶ್ಲೋಕಗಳನ್ನು ಅರ್ಥಮಾಡಿಕೊಂಡು ಉಕ್ತ ಲೇಖನ ಕಾರ್ಯ ಮಾಡು ಎಂದು ತಿಳಿಸಿದ ವೇದವ್ಯಾಸರ ಮಾತನ್ನು ಈ ದಿನದ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಮನನ ಮಾಡಬೇಕು. ಈಗ ಗುರುಗಳು ಪಾಠ ಹೇಳುತ್ತಾರೆ. ಗುರುಗಳು ಹೇಳುವ ಪಾಠವನ್ನು ಅರ್ಥಮಾಡಿಕೊಂಡು ಅದನ್ನು ಯಥಾರ್ಥವಾಗಿ ಎಷ್ಟು ಮಂದಿ ವಿದ್ಯಾರ್ಥಿಗಳು ಬರೆದುಕೊಳ್ಳುತ್ತಾರೋ ತಿಳಿಯದು ! ವ್ಯಾಸಂಗ ಜೀವನ ಸಾರ್ಥಕವಾಗಬೇಕಾದರೆ ಗುರು ನೀಡುವ ಜ್ಞಾನವನ್ನು ನೈಜವಾಗಿ ಅರ್ಥ ಮಾಡಿಕೊಳ್ಳಬೇಕು. ಪರಿಭಾವಿಸಿ ಓದಬೇಕು; ಬರೆದುಕೊಳ್ಳಬೇಕು. ಆಗಲೇ ಅಧ್ಯಯನ ಜೀವನದ ಸಫಲತೆ.

ವ್ಯಾಸಂಗಿಗಳಿಗೆ ಮಾತ್ರವಲ್ಲ, ಎಲ್ಲ ಸಂದರ್ಭದಲ್ಲೂ ಮೊದಲು ಗಣಪತಿಯ ಪೂಜೆಯನ್ನು ಮಾಡುವ ಸಂಪ್ರದಾಯ ನಮ್ಮಲ್ಲಿದೆ. ಗಣಪತಿ ಆಧ್ಯಾತ್ಮದ ಅಧಿದೇವತೆ. ವಿನಾಯಕನ ವ್ಯಕ್ತಿತ್ವ- ವಿಚಾರಗಳ ಬೆಳಕಿನಲ್ಲಿ ನಮ್ಮ ಜೀವನವನ್ನು ತಿದ್ದಿ ತೀಡಿಕೊಳ್ಳಬೇಕು; ಪರಿಷ್ಕಾರಗೊಳಿಸಿಕೊಳ್ಳಬೇಕು; ಶುದ್ಧೀಕರಣ ಮಾಡಿಕೊಳ್ಳಬೇಕು; ಪ್ರಕಾಶ ಪಡೆಯಬೇಕು. ಆಧ್ಯಾತ್ಮಿಕ ಭಾವದ ಸೌಂದರ್ಯ ಹಾಗೂ ಸಮನ್ವಯ ದೃಷ್ಟಿಯನ್ನು ಗಣಪತಿಯಲ್ಲಿ ನಾವು ಕಾಣಬಹುದು.

ಇಂದು ಬಡತನ ಎಲ್ಲೆಲ್ಲೂ ನೆಲಸಿದೆ. ಬದುಕಲು ದಿಕ್ಕು ತೋಚದಾಗಿದೆ. ಜನರು ಕಂಗೆಟ್ಟಿದ್ದಾರೆ. ದಿಕ್ಕುಗೆಟ್ಟು ಕುಳಿತಿರುವ ಇಂತಹ ಸನ್ನಿವೇಶದಲ್ಲಿ ಮಹಾಸಿದ್ಧಿ ವಿನಾಯಕನ ಅನುಗ್ರಹ, ಪೂಜೆ ಅತ್ಯಗತ್ಯವಾಗಿದೆ. ಶ್ರೀ ಮುರುಘೇಶ ಬೇರೆಯಲ್ಲ, ವಿನಾಯಕ ಬೇರೆ ಅಲ್ಲ. ಎರಡೂ ಆಧ್ಯಾತ್ಮ ಶಕ್ತಿಗಳೇ !

ಆತ್ಮಶಕ್ತಿಯ ಕಡೆಗೆ ಇಂದು ಒಲವಿಲ್ಲವಾಗಿದೆ; ಆತ್ಮಬಲವಿಲ್ಲದ ಕಾರಣ ಜೀವನದಲ್ಲಿ ಸ್ಥೈರ್ಯವಿಲ್ಲವಾಗಿದೆ. ಇಂದು ಆತ್ಮಶಕ್ತಿಯ ಬದಲಾಗಿ ಅಧಿಕಾರ, ದುಡ್ಡು ಬಂದು ನೆಲಸಿದೆ. ಧರ್ಮ, ದೈವ, ತತ್ತ್ವ ಇಂದು ಯಾರಿಗೂ ಬೇಡವಾಗಿದೆ. ಇಂತಹ ವಿಷಮ ಸನ್ನಿವೇಶದಲ್ಲಿ ಶ್ರೀ ವಿನಾಯಕನ ಸಂಸ್ಮರಣೆ ಶ್ರೇಷ್ಠ ಔಷಧವಾಗಿದೆ. ವಿನಾಯಕನ ಹಬ್ಬದ ಆಚರಣೆ ಎಂದರೆ ಮಾನವತೆಯ ಚೆಲುವಿನ ಪಾಠ.

*20–9–1974 ರಂದು ಚಿತ್ರದುರ್ಗದ ರಂಗಯ್ಯನ ಬಾಗಿಲ ಬಳಿ ಏರ್ಪಡಿಸಿದ್ದ ಶ್ರೀ ವಿನಾಯಕನ ಮಹೋತ್ಸವದಲ್ಲಿ ಪರಮ ಪೂಜ್ಯ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳವರು ನೀಡಿದ ಅನುಗ್ರಹ ಭಾಷಣದ ಯಥಾರ್ಥ ರೂಪ. [ವೇಳೆ ರಾತ್ರಿ 9–30 ರಿಂದ 9–45 ರವರೆಗೆ]

ಶ್ರೀ ವಿನಾಯಕನ ಮಹೋತ್ಸವ ಸಕಲರಿಗೂ ಸನ್ಮತಿಯನ್ನು ನೀಡಲಿ. ಸನ್ಮಂಗಲಗಳನ್ನು ಉಂಟು ಮಾಡಲಿ. ನವೀನ ಉತ್ಸಾಹ, ಪ್ರಚೋದನೆ, ದಿವ್ಯಪ್ರೇರಣೆಯನ್ನು ನಮ್ಮೆಲ್ಲರ ಜೀವನಕ್ಕೆ ಕರುಣಿಸಲಿ ಎಂದು ಈ ಸಂದರ್ಭದಲ್ಲಿ ಹಾರೈಸುತ್ತೇವೆ.

೨

ವಿಜಯದಶಮಿಯ ಶುಭ ಸಂದೇಶ

"ಸ್ಥೂಲ ಕಂಥೆ, ಸೂಕ್ಷ್ಮ ಟೊಪ್ಪರ, ಸತ್ಯ ದಂಡ, ಶಾಂತಿ ಭಸಿತ, ಸುಚಿತ್ತ ಮಣಿ, ತತ್ತ್ವ ಕರ್ಪೂರ, ವೈರಾಗ್ಯ ಹಾವುಗೆ, ಮನದೃಢವೇ ಕೌಪೀನ, ಆಚಾರವೇ ಕಂಕಣ, ಕ್ಷಮೆ—ದಮೆಯೆ ಕರ್ಣಕುಂಡಲ — ಇಂತಿವೆರಸಿ ಸುಳಿವನು ಜಗತ್ಪಾವನವ ಮಾಡಲೆಂದು, ತನ್ನ ಒಲುಮೆಯ ಶರಣರಿಗೆ ನಿಜಸುಖವನೀಯಲೆಂದು — ಕಲಿದೇವಾ, ನಿಮ್ಮ ಶರಣ ಪ್ರಭುದೇವರ ಶ್ರೀ ಪಾದವ ಕಂಡು, ಅರ್ಚಿಸಿ, ಪೂಜಿಸಿ ನಿಶ್ಚಿಂತನಾದೆನು"

— ಮಾಚಿದೇವರು.

ಶ್ರೀಮಚ್ಚಿನ್ಮೂಲಾದ್ರಿ ಬೃಹನ್ಮಠ ಮಹಾಪೀಠದ ವಿಜಯದಶಮಿ ಮಹೋತ್ಸವವು ಧರ್ಮ, ತತ್ತ್ವ, ಸಂಸ್ಕೃತಿ ಪ್ರಸಾರದ ಸಂಕೇತೋತ್ಸವವಾಗಿ, ತುಂಬ ಸಂಭ್ರಮದಿಂದ ಅನೂಚಾನವಾಗಿ ನಡೆಯುತ್ತ ಬಂದಿರುವುದು ಸರ್ವಶ್ರುತವಿದೆ.

ಸಮಸ್ತ ಮಂಗಲ ಕಾರ್ಯಗಳಿಗೆ ಪ್ರಶಸ್ತವೆಂದು ಪ್ರಖ್ಯಾತವಾಗಿರುವ ವಿಜಯದಶಮಿಯ ಪವಿತ್ರ ಪರ್ವವು, ಅತ್ಯಂತ ಅರ್ಥಪೂರ್ಣವೂ ಉಪದೇಶಪ್ರದವೂ ಆಗಿದೆ. ಈ ಪರ್ವದ ಅಂತರಾರ್ಥವನ್ನು ಪರಿಶೀಲಿಸಿದಾಗ ಪ್ರತಿಯೊಬ್ಬ ವ್ಯಕ್ತಿಯು ತನ್ನ ಆತ್ಮಶಕ್ತಿಯನ್ನು, ಪರಮಾತ್ಮ ಶಕ್ತಿಯ ಉಪಾಸನೆಯ ಮೂಲಕ ಉತ್ಥಾನಗೊಳಿಸಿ, ಸಂಕುಚಿತ ವಿಚಾರಗಳನ್ನು, ಸ್ವಾರ್ಥ—ಸ್ವಪ್ರತಿಷ್ಠೆಗಳನು ಕಳೆದು, ಸೀಮೋಲ್ಲಂಘನೆಯನ್ನು ಮಾಡಿ, ದುಷ್ಟದಾನವ ಶಕ್ತಿಗಳ ಮೇಲೆ ದಿಗ್ವಿಜಯವನ್ನು ಗಳಿಸಿ,ಪೂರ್ಣ ಸ್ವಾತಂತ್ರ್ಯದ ದಿವ್ಯಾನಂದವನ್ನು ಸವಿಯಬೇಕು ಎಂಬುದು ವಿದಿತವಾಗುವುದು. ಈ ತತ್ತ್ವವನ್ನು ತಿಳಿದು ಅಂತಹ ಉಪಾಸನೆಯಲ್ಲಿ ನಿರತನಾಗುವ ವ್ಯಕ್ತಿಯು, ಎಂತಹ ಕಷ್ಟ—ನಿಷ್ಠುರಗಳಲ್ಲಿಯೂ ಅಂಜದೆ, ಅಳುಕದೆ, ತನ್ನ ಕರ್ತವ್ಯವನ್ನು ನಿರ್ವಹಿಸುವನು. ತನ್ನ ಉದ್ದೇಶವನ್ನು ಸಾಧಿಸುವನು. ಜೀವನ ರಂಗ ಹಾಗೂ ರಣರಂಗ ಎರಡನ್ನೂ ವಿಜಯದ ಹಾದಿಯಲ್ಲಿ ಕೊಂಡೊಯ್ಯುವ ಭೌತಿಕ ಮತ್ತು ನೈತಿಕ ಶಕ್ತಿಗಳಿಗೆ ಆಧಾರವಾಗಿ ಆಧ್ಯಾತ್ಮ ಶಕ್ತಿಯ ಆವಶ್ಯಕತೆಯನ್ನು ಬೋಧಿಸುತ್ತಿದೆ ವಿಜಯದಶಮಿಯ ಮಹಾಪರ್ವ !

ಈ ಪರ್ವದ ಇನ್ನೊಂದು ವೈಶಿಷ್ಟ್ಯವೆಂದರೆ ಶಮೀ ಪ್ರದಾನದ ಶಿಷ್ಟಾಚಾರ. ವಿಜಯದೇವತೆಯ ಪ್ರತೀಕವೆಂದು ಭಾವಿಸಲ್ಪಟ್ಟಿರುವ ಶಮೀವೃಕ್ಷವು ಯಜ್ಞ ಕಾರ್ಯದಲ್ಲಿ ಎಲೆ—ಎಸಳುಗಳನ್ನು ಒದಗಿಸುವ ಪವಿತ್ರ ವೃಕ್ಷವಾಗಿದೆ. ಬನ್ನಿಯು ಬಂಗಾರವಾಗಲು ಅದರ ಉಪಯುಕ್ತತೆ,ಉತ್ಕೃಷ್ಟತೆ ಮೊದಲಾದ ಹಲವು ಕಾರಣಗಳು ಗ್ರಂಥಗಳಲ್ಲಿ ಉಕ್ತವಾಗಿವೆ. ಅವುಗಳಿಂದಾಗಿ ಶಮಿಯ ಮಹತಿಯು ಸಿದ್ಧವಾಗಿದ್ದು, ಅದನ್ನು ಪಾಪ-ತಾಪಗಳ ಉಪಶಾಂತಿಗಾಗಿಯೂ, ಸುಖ-ಶಾಂತಿಗಳ ಸಂಪಾದನೆಗಾಗಿಯೂ ಶ್ರದ್ಧೆಯಿಂದ ಸ್ವೀಕರಿಸುವ ಪದ್ಧತಿಯು ಬಳಕೆಯಲ್ಲಿ ಬಂದಿದೆ.

ವಿಜಯದಶಮಿಯ ಈ ಪರ್ವ ಕಾಲದಲ್ಲಿ, ಸರ್ವರೂ ಶ್ರೀ ಗುರು ಮುರುಘೇಶನ ಆಶೀರ್ವಾದದಿಂದ ಉತ್ಸಾಹ-ಉತ್ಸುಕತೆಗಳನ್ನು ಅಳವಡಿಸಿಕೊಂಡು, ದೇಶದ ಯೋಗ-ಕ್ಷೇಮದ ದೃಷ್ಟಿಯಿಂದ ಉದ್ಯೋಗಶೀಲರಾಗಿ ಮುಂದುವರಿಯಬೇಕೆಂದು ಹಾರೈಸಲಾಗಿದೆ.

೩

ಸೂಳ್ನುಡಿಗಳು

ಶರಣರ ವಚನಗಳಲ್ಲಿ ದಿವ್ಯ ದರ್ಶನವಿದೆ. ಔಷಧದಲ್ಲಿ ವೈದ್ಯರಿರುವಂತೆ ವಚನಗಳಲ್ಲಿ ಶರಣರು ಇರುವರು.

++

ಬೆಡಗಿನ ವಚನಗಳು ಶರಣರ ವಿಶಿಷ್ಟ ಪರಂಪರೆಯ ಸಾಹಿತ್ಯ. ವಚನಗಳು ಅವರಿವರ ಕೈಗೆ ಸಿಕ್ಕಿ ಅಪಾರ್ಥವಾಗದಿರಲಿ, ಅಯೋಗ್ಯರಿಗೆ ವಚನಗಳು ಸಿಗದಿರಲಿ ಎಂಬ ಉದ್ದೇಶದಿಂದಲೇ ಶರಣರು ಬೆಡಗಿನ ಶೈಲಿಯಲ್ಲಿ ವಚನಗಳನ್ನು ಸೃಷ್ಟಿಸಿರುವರು. ಶರಣರು ಈ ದೃಷ್ಟಿಯಿಂದ ತುಂಬಾ ಶಾಣೆ ಇದ್ದಾರೆ.

ಅಯೋಗ್ಯರಿಗೆ, ಸಂಸ್ಕಾರವಿಲ್ಲದವರಿಗೆ ಪವಿತ್ರವಾದ ವಚನಗಳು ಸಿಕ್ಕಬಾರದು ಎಂಬುದು ಶರಣರ ಉದ್ದೇಶ. ಇದು ಬಹಳ ಒಳ್ಳೆಯದಿದೆ. ಈ ಕಾಲದಲ್ಲಂತೂ ವಚನಗಳಿಗೆ ಅರ್ಥವಿವರಣೆಯನ್ನು ಕೊಡುತ್ತಿರುವ ರೀತಿಯನ್ನು ನೋಡಿದರೆ ಈ ಸತ್ಯ ಹೊರಪಡುತ್ತದೆ.

++

ಭಕ್ತಿಯಲ್ಲಿ ಬಾಹ್ಯಭಕ್ತಿ, ಅನನ್ಯ ಭಕ್ತಿ ಎಂದು ಬಗೆಗಳಿವೆ. ಬಾಹ್ಯ ಭಕ್ತಿ ಪ್ರದರ್ಶನ ಭಕ್ತಿ. ಅನನ್ಯ ಭಕ್ತಿ ಏಕಾಂತ ಚಿಂತನೆಗೆ ಸಾರ್ಥಕವಾದ ಭಕ್ತಿ. ಏಕದೇವತಾ ನಿಷ್ಠೆ, ಏಕಾಂತ ಚಿಂತನ, ಮನನಗಳಿಗೆ ಪ್ರಕೃತಿಯ ಸಂಪರ್ಕ ಅಗತ್ಯ.

ಆತ್ಮಚಿಂತನೆಗೆ, ಮಾನವತೆಯ ಹಿತಾರ್ಥದ ಚಿಂತನೆಗೆ, ಲೋಕೋದ್ಧಾರದ ಚಿಂತನೆಗೆ ನಿಸರ್ಗದ ನಿಕಟ ಸಂಪರ್ಕ ಅವಶ್ಯವಿದೆ.

++

ಇಂದು ಶಿವತತ್ತ್ವ, ಆಚಾರ, ಧರ್ಮಗಳಿಗಿಂತ ದ್ವೇಷ — ದೂಷಣೆಗಳೇ ಹೆಚ್ಚಾಗಿವೆ. 'ನಾನತ್ವ'—ಎಂಬುದು ಎಂದು ಧರ್ಮ

ಕ್ಷೇತ್ರದಲ್ಲಿ ಪ್ರವೇಶಿಸಿತೋ ಅಂದಿನಿಂದಲೇ ಧರ್ಮಕ್ಷೇತ್ರ ಕುರುಕ್ಷೇತ್ರ ವಾಗಬಲ್ಲಿತು. ನಿಜಾಚರಣೆ, ಪರಿಶುದ್ಧ ಜೀವನದತ್ತ ಧರ್ಮಪೀಠಗಳು ಜಾಗೃತಿ ತಾಳಬೇಕು.

⁂

ಮಾರ್ಗಕ್ರಿಯೆ, ಮೀರಿದ ಕ್ರಿಯೆ ವೀರಶೈವ ಧರ್ಮಕ್ಕೆ ಸಂಬಂಧಿಸಿದವು. ಸನ್ಮನವೆ ಮಾರ್ಗಕ್ರಿಯೆ; ಉನ್ಮನವೆ ಮೀರಿದ ಕ್ರಿಯೆ. ಉನ್ಮನವನ್ನೇ ಈ ಪ್ರಪೂರ್ಣ ಅವಸ್ಥೆಯನ್ನೇ ಪೂರ್ಣದೃಷ್ಟಿ, ಪರಿಪೂರ್ಣ ದೃಷ್ಟಿ, ಅಖಂಡ ದೃಷ್ಟಿ, ದೃಷ್ಟಿಯ ಪರಿಪಾಕ, ಉನ್ಮನ ಸ್ಥಿತಿ ಎಂದೆನ್ನುವುದು. ಉನ್ಮನ ಸ್ಥಿತಿಯನ್ನು ಸಂಪಾದಿಸುವುದೇ ಮಾನವತೆಯ ಚರಮ ಪರಮವಿಕಾಸ; ಆಧ್ಯಾತ್ಮದ ಶಿಖರ.

⁂

ವಾಸನೆಗೆ ಅನುಗುಣವಾದುದು ದೇಹ. ಆದರೆ ಬಸವಾದಿ ಪ್ರಮಥರು ಚಿತ್ಪಿಂಡವನ್ನೇ ಧರಿಸಿ ಬಂದವರು. ವಾಸನೆಗೆ ಅನುಸರಿಸಿ ಬರುವ ವ್ಯಕ್ತಿಗಳಿಂದ ಪ್ರಯೋಜನವಿಲ್ಲ. ಪೂರ್ವಜನ್ಮದ ವಾಸನೆ, ಪುನರ್ಜನ್ಮದ ವಾಸನೆ—ಯಾವುದೇ ರೀತಿಯ ವಾಸನೆಯಾಗಿರಬಹುದು.

ಕೈಲಾಸದಲ್ಲಿರುವ ಪಿಂಡಗಳು ಸುಜ್ಞಾನ ಪಿಂಡಗಳು, ಚಿತ್ಪಿಂಡಗಳು, ಪಾವನಪಿಂಡಗಳು; ವಾಸನಾಪಿಂಡಗಳಿಗೆ ಕೈಲಾಸದಲ್ಲಿ ಎಡೆಯಿಲ್ಲ. ಕೈಲಾಸದ ಯಾವ ಮೂಲ ಚೈತನ್ಯ, ಪರಾಶಕ್ತಿ, ಚಿತ್ಪಿಂಡ ಯಾರಲ್ಲಿ ಇಳಿದು ಬರುತ್ತದೋ ಅವರೇ ಅವತಾರ ಪುರುಷರು. ಅವರು ಕೈಲಾಸದಿಂದ ಇಳಿದು ಬಂದರು ಎಂದರೆ ಅದು ಅರ್ಥಃಪಾತವಲ್ಲ. ಅವತಾರವೆಂದೇ ಭಾವಿಸಬೇಕು.

⁂

ಆತ್ಮದ ವಿಸ್ತಾರವೇ ಪರಮಾತ್ಮ. ಆತ್ಮ ಪರಮನಾದಾಗ ಪರಮಾತ್ಮ. ಪರಮಾತ್ಮನನ್ನು ಕಾಣಬೇಕೆಂದರೆ ಪ್ರಪಂಚ ಶೂನ್ಯವಾಗಬೇಕು; ಪ್ರಳಯವಾಗಬೇಕು – ಎಂದರ್ಥವಲ್ಲ. ಪ್ರಪಂಚವಿದ್ದೇ ಇರುತ್ತದೆ. ಪ್ರಪಂಚವನ್ನು ಪರಮಾರ್ಥವಾಗಿ ಕಾಣಬೇಕು. ಅದೇ ಶೂನ್ಯ.

⁂

ಭವರೋಗದ ಔಷಧಿಗಳು ವಚನಗಳು; ಶ್ರೇಷ್ಠ ಧನ್ವಂತರಿ ಶ್ರೀ ತೋಂಟದ ಸಿದ್ಧಲಿಂಗೇಶ್ವರರು.

⁂

ದೇಹ–ಮನ–ಆತ್ಮ ಇವುಗಳ ಅರಿವಿನ ಇರವಿನ ಜ್ಞಾನ ಅಗತ್ಯ. ಮಾನವ ಪಶುಮಾನವನಾಗಬಾರದು; ಮಾನವ ಪಶುವಾಗಬಾರದು. ಮಹಾಮಾನವನಾಗಬೇಕು. ದೇವಮಾನವನಾಗಬೇಕು ಎಂಬುದು ಶಿವಶರಣರ ಸಂಕಲ್ಪ; ಸಂದೇಶ.§

"ನಿಷ್ಠೆಯಿಂದ ಲಿಂಗವ ಪೂಜಿಸಿ ಮತ್ತೊಂದು ಪಥವನರಿಯದ ಶರಣರು ಸರ್ಪನ ಹೆಡೆಯ ಮಾಣಿಕದಂತಿರ್ಪರು''

— ಶರಣರ ಮಾರ್ಗ ಲಿಂಗಮಾರ್ಗ. ಅವರದು ಲಿಂಗಾಚರಣೆ; ನಿಜಾಚರಣೆ. ಲಿಂಗಗತಪ್ರಾಣರಾದ ಶರಣರು ಹೇಗೆ ಇರುತ್ತಾರೆ ಎಂಬ ಸಂಗತಿ ಮೇಲಣ ವಚನದಲ್ಲಿ ಬಂದಿದೆ.

ಸರ್ಪನ ಹೆಡೆಯಲ್ಲಿ ಮಾಣಿಕ್ಯವಿರುವುದನ್ನು ಯಾರು ಕಂಡಿದ್ದಾರೆ ? ಇದೊಂದು ಕವಿ ಪ್ರಸಿದ್ಧಿ ಅಷ್ಟೆ ! ಅಂದರೆ ಸರ್ಪ ವಿಷ ಜಂತು. ಇದರ ಮಸ್ತಕದಲ್ಲಿಯೇ ಮಾಣಿಕ್ಯವಿದೆ. ರತ್ನಗಳಲ್ಲೆಲ್ಲಾ ಶ್ರೇಷ್ಠವಾದುದು ಮಾಣಿಕ್ಯ. ಶರಣನು ವಿಷಜಂತುವಿನ ಸಂಪರ್ಕದಲ್ಲಿದ್ದರೂ ಮಾಣಿಕ್ಯವಾಗಿರುತ್ತಾನೆ. ಎಲ್ಲರಿಗೂ ಬೆಳಕಾಗಿರುತ್ತಾನೆ. ಪ್ರಪಂಚದಲ್ಲಿದ್ದರೂ ಪರಮಾರ್ಥವಾಗಿರುತ್ತಾನೆ.

ಬ್ರಾಹ್ಮಣನೆಂದರೆ ಬ್ರಹ್ಮಜ್ಞಾನಿ; ತತ್ತ್ವಜ್ಞಾನಿ. ಈಗ ಜಾತಿ ವಿಚಾರ ಹಬ್ಬಿದೆ. ಎಲ್ಲಿಲ್ಲದಷ್ಟು ಹಬ್ಬಿದೆ. ಆಕ್ರಮಣ, ಆಕ್ರೋಶ ನಡೆದಿದೆ—ಇದೇನು ಹೊಸದಲ್ಲ. ಈ ಸಮಸ್ಯೆಗೆ ಎಂದೋ ಬಸವಾದಿ ಪ್ರಮಥರು ಜಾತಿಗಳ ಶುದ್ಧೀಕರಣ, ನಿರ್ಮಲೀಕರಣ ಮಾಡಿದ್ದಾರೆ. ನಿರ್ಮೂಲ ಮಾಡುವ ವಿಧಾನ ತಿಳಿಸಿದ್ದಾರೆ. ಭವಿ–ಭಕ್ತ ಎಂದು ಎರಡೇ ರೀತಿಯ ವರ್ಗೀಕರಣ ಮಾಡಿ ಈ ಸಮಸ್ಯೆಯನ್ನು ಪರಿಹರಿಸಿದ್ದಾರೆ. ಒಂದು ಕೆಡುಕು; ಮತ್ತೊಂದು ಒಳಿತು. ಜಾತಿ ನಿರಸನ ಕ್ರಮವಿದು!

ಜಾತಿ ಜ್ಯೋತಿಯತ್ತ ಬರಬೇಕು. 'ಜಾತಿಹೀನನ ಮನೆಯ ಜ್ಯೋತಿ ತಾ ಹೀನವೇ !' –ಎಂಬ ಸರ್ವಜ್ಞನ ವಚನ ಮನನಾರ್ಹ.

ವಿಜ್ಞಾನ ಪ್ರಧಾನ ವಿದ್ಯೆ. ಇದೀಗ ನೀತಿಹೀನ, ಧರ್ಮ–ತತ್ತ್ವಹೀನ ವಿದ್ಯೆಯಾಗಲು ಪರಿಣಮಿಸಿದೆ. ನಮಗೆ ಬೇಕಾದದ್ದು ಸಂಸ್ಕೃತಿ ಪ್ರಧಾನ ವಿದ್ಯೆ.

ಮಾನವನಾಗಿ ಹುಟ್ಟುವುದು ಕಷ್ಟ; ಮನುಷ್ಯನಾಗಿ ಬದುಕುವುದು ಬಲು ಕಷ್ಟ. ಸದ್ಧರ್ಮ ಶ್ರವಣ ಕಷ್ಟ; ಬುದ್ಧನಾಗುವುದು ಕಡು ಕಷ್ಟ.

ಧರ್ಮಶ್ರವಣದ ಉದ್ದೇಶ ತ್ರಿಕರಣ ಶುದ್ಧಿ.ꜱ

§14-1–1971 ರಂದು ಚಿತ್ರದುರ್ಗದ ಶ್ರೀ ನೀಲಕಂಠೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಶಿವಯೋಗಿವರೇಣ್ಯರು ಶ್ರೀ ಸಿದ್ಧಲಿಂಗೇಶ್ವರರ ಪಂಚ ಶತಮಾನೋತ್ಸವದ ಭವ್ಯ ಸಮಾರಂಭದಲ್ಲ ಪೂಜ್ಯ ಜಗದ್ಗುರುಗಳವರು ಕರುಣಿಸಿದ ಭಾಷಣದಿಂದ ಆಯ್ದ ರತ್ನ ಸೂಕ್ತಿಗಳಿವು.

ꜱ28—8—1973 ರಂದು ಚಿತ್ರದುರ್ಗದ ಶ್ರೀ ನೀಲಕಂಠೇಶ್ವರ ಸ್ವಾಮಿಯ ದೇವಸ್ಥಾನದಲ್ಲಿ ಜರುಗಿದ ಶ್ರೀ ಬಾಲಲೀಲಾ ಮಹಂತ ಶಿವಯೋಗಿಗಳವರ ಪುರಾಣ ಪ್ರವಚನದ ಸಮಾರೋಪ ಸಮಾರಂಭದಲ್ಲಿ ಪೂಜ್ಯ ಜಗದ್ಗುರುಗಳವರು ಅನುಗ್ರಹಿಸಿದ ಭಾಷಣದಿಂದ ಆಯ್ದ ನುಡಿಮುತ್ತುಗಳಿವು.

ಹಾಸ್ಯ ಶ್ರೇಷ್ಠ ರಸ. 'ರಸೋ ವೈ ಸಃ'— ಎಂದರು ನಮ್ಮ ಹಿರಿಯರು. ಮತ್ತೊಬ್ಬರನ್ನು ನೋಯಿಸುವುದು ಹಾಸ್ಯದ ಗುರಿಯಲ್ಲ. ಹಾಸ್ಯ ಗಂಭೀರವಾಗಿರಬೇಕು; ಬೋಧ ಪ್ರದವಾಗಿರಬೇಕು; ಉಪದೇಶ ಪ್ರದವಾಗಿರಬೇಕು; ಮಾರ್ಮಿಕವಾಗಿ ನೀತಿಜ್ಞಾನವನ್ನು ನೀಡುವುದಾಗಬೇಕು; ಪ್ರಾಸಾದಿಕ ದೃಷ್ಟಿಯಿರಬೇಕು.

*

ಸತ್ಯದ ವಿಶ್ವರೂಪದರ್ಶನವನ್ನು ಸಾಹಿತ್ಯ ಉಂಟುಮಾಡುವುದಾಗಬೇಕು. ಶೀಲ ಸೌಭಾಗ್ಯವನ್ನು ನೀಡುವ ಸಾಹಿತ್ಯವೇ ಶಾಶ್ವತ ಸಾಹಿತ್ಯ. ಚಮತ್ಕಾರಜನ್ಯವಾದುದು, ಗುದು ಗುದಿ ಹುಟ್ಟಿಸುವುದು, ಕೆರಳಿಸುವುದು, ಇಂದ್ರಿಯಗಳನ್ನು ಪ್ರಚೋದಿಸುವುದು ಒಳ್ಳೆಯ ಸಾಹಿತ್ಯವಲ್ಲ. ಒಗ್ಗರಣೆಯು ರುಚಿಯಾಗಿರುತ್ತದೆ, ನಿಜ. ಆದರೆ ಅದು ಆರೋಗ್ಯಪ್ರದವಲ್ಲ. ಶರಣರ ವಚನ 'ಅಧರಕ್ಕೆ ಕಹಿ, ಉದರಕ್ಕೆ ಸಿಹಿ'.

*

ಶಕ್ತಿ ಸಾಧನೆ, ಸಂಪಾದನೆಯಿಂದಲೇ ಇಂದಿನ ಮಾನವತೆಯ ಅಭ್ಯುದಯ. ಶಕ್ತಿ ಪೂಜೆಯ ಮೂಲೋದ್ದೇಶವೂ ಇದೇ ಆಗಿದೆ. ಆ ದುರ್ಗಾಶಕ್ತಿ, ಭಗವತಿ, ಪರಮೇಶ್ವರಿ ಈ ವಿಜಯದಶಮಿಯಲ್ಲಿ ಭಾರತೀಯ ಸಂಸ್ಕೃತಿಯ ಉದಾತ್ತ ಮೌಲ್ಯಗಳನ್ನು ಪುನರುಜ್ಜೀವನಗೊಳಿಸಲಿ.[×]

ಶಾಸ್ತ್ರೀಯ ಸಂಗೀತ ಇಂದು ಶೂನ್ಯವಾಗುತ್ತಿದೆ. ಸಂಗೀತ ಶತ್ರುವಿನಂಥ ಸಂಗೀತ ರಚನೆಗಳು ಹುಟ್ಟಿಕೊಂಡಿವೆ. ಇನ್ನು ಮುಂದೆ ಏನಾಗುವುದೋ !

×

ತ್ಯಾಗರಾಜರು ಸಂಗೀತದ ಪರಮಾಚಾರ್ಯರು. ಭಾವ, ತಾಳ, ಲಯ, ರಾಗ, ರಾಗಿಣಿ–ಏನೆಲ್ಲವೂ ಇವೆ ಇವರ ರಚನೆಗಳಲ್ಲಿ !

×

ಶುಂಠರಿಗೆ, ಸಂಗೀತದ ಗಂಧವೇ ಇಲ್ಲದವರಿಗೆ ಸಂತೋಷದ ಪರಮಾವಧಿ ಸಾಧ್ಯವೇ !

×

ಸಂಗೀತ ಸಂತೋಷದ ಸಾಧನ. ಸಂತೋಷಪಡಲು ಸಂಗೀತದ ಶಾಸ್ತ್ರಜ್ಞರೇ ಆಗಬೇಕೆಂದು ನಿಯಮವೇನೂ ಇಲ್ಲ.

×

ಭಕ್ತಿಯ ಅಭಿವ್ಯಕ್ತಿಯಾಗಿದೆ ತ್ಯಾಗರಾಜರ ಸಂಗೀತ. ಹಮ್ಮ್ರ ಬಿಮ್ಮುಗಳಿಲ್ಲದೆ ನಾದಬ್ರಹ್ಮಾನುಸಂಧಾನಮಾಡಿದ್ದಾರೆ ತ್ಯಾಗರಾಜರು. ಪ್ರತಿಯೊಬ್ಬರೂ ಈ ತೆರನಾದ ಕಲೆಯತ್ತ ಲಕ್ಷ್ಯವಿಡಬೇಕು.

×

ಶ್ರೀ ನಿಜಗುಣ ಶಿವಯೋಗಿಗಳವರು ಕನ್ನಡ ಸಾಹಿತ್ಯದಲ್ಲಿ ರಾಗ,ತಾಳ ನಿರ್ದೇಶ ಮಾಡಿ ಶ್ರೇಷ್ಠ ಸಾಹಿತ್ಯವನ್ನು ನಮಗೆ ಕೊಟ್ಟಿರುತ್ತಾರೆ. ಅವರೂ ಸಹ ವಾಗ್ಗೇಯಕಾರರು; ಶ್ರೇಷ್ಠ ದಾರ್ಶನಿಕರು; ತತ್ವ ನಿಷ್ಣಾತರು. ನಿಜಗುಣರ ಕೈವಲ್ಯಪದ್ಧತಿಯನ್ನು ಓದಿನೋಡಬೇಕು. ಎಷ್ಟು ರಾಗಗಳು ! ಎಷ್ಟು ತಾಳಗಳು !

ಕನ್ನಡ ಸಾಹಿತ್ಯದಲ್ಲಿ ಸಂಗೀತದ ಸಂಪರ್ಕ ಪಡೆದಿರುವ ಸಾಹಿತ್ಯವನ್ನು ಶಿವಶರಣರೂ ಸೃಷ್ಟಿಸಿದ್ದಾರೆ. ಈ ದೃಷ್ಟಿಯಿಂದ ಶ್ರೀ ಘನಮಠ ಶಿವಯೋಗಿಗಳವರ ಭಕ್ತಿಗೀತೆಗಳನ್ನು ನಾವು ನೆನೆಯಬೇಕು. ಇಂಥ ದಾರ್ಶನಿಕರ ಹಾಡುಗಳನ್ನು ಹಾಡುವ ಪದ್ಧತಿಯೇ ಈಗ ಇಲ್ಲವಾಗಿದೆ. ಇದು ಶೋಚನೀಯ ಸಂಗತಿ.

×

ಜನತೆಯ ರುಚಿ–ಅಭಿರುಚಿಗೆ ಸ್ವಾತಂತ್ರ್ಯವಿದೆ, ಸರಿ. ಆದರೆ ಇಂದು ಪುರಂದರರ ಸಮಾಚಾರ ಏನಾಗಿದೆ ? ತ್ಯಾಗರಾಜರನ್ನೇ ಜನ ತ್ಯಾಗಮಾಡ್ತಾ ಇದ್ದಾರೆ ! ಏನಿದು ಕಾಲವೈಚಿತ್ರ್ಯ ! ಪುರಂದರರ ಕೀರ್ತನಗಳ ಬಗೆಗೂ ಸರಿಯಾದ ರೀತಿಯಲ್ಲಿ ಸಂಶೋಧನೆ ಆಗಬೇಕು. ಅವರ ಸಾಹಿತ್ಯವನ್ನು ಚೆನ್ನಾಗಿ ಅಭ್ಯಾಸಮಾಡಬೇಕು.

×

ಕೇವಲ ಅಲಂಕಾರವೇ ಸಾಹಿತ್ಯವಲ್ಲ. ಕೇವಲ ಕಲ್ಪನೆಯೇ ಸಾಹಿತ್ಯವಲ್ಲ. ಮಾನವತೆಗೆ ಉಪಯುಕ್ತವಾಗುವಂಥದು ಸಾಹಿತ್ಯ. ಶಾಶ್ವತ ಸತ್ಯ ಸೌಂದರ್ಯ, ತತ್ವ ಸಾಕ್ಷಾತ್ಕಾರಕ್ಕೆ ಸಾಧನವಾದುದೇ ನಿಜವಾದ ಸಾಹಿತ್ಯ.

ಜನತೆಯ ಪಾಪ–ತಾಪಗಳನ್ನು ಪರಿಹರಿಸುವ ಸಾಹಿತ್ಯವೇ ಶಾಶ್ವತ ಸಾಹಿತ್ಯ. ಈ ತೆರನಾದ ಸಾಹಿತ್ಯವನ್ನು ಅಭ್ಯಾಸಮಾಡಬೇಕು. ಆ ಎತ್ತರಕ್ಕೆ ನಾವು ಏರಬೇಕು. ನಮ್ಮ ಹತ್ತಿರಕ್ಕೆ ಅಂಥ ಸಾಹಿತ್ಯವನ್ನು ತಂದುಕೊಳ್ಳಬೇಕು; ನಿಲುಕಿಸಿಕೊಳ್ಳಬೇಕು. ಇದರಲ್ಲಿದೆ ಸಾರಸ್ವತ ಉಪಾಸನೆಯ ಹಿರಿಮೆ.[†]

×

ಪ್ರಭಾವ ವಿಶೇಷದಿಂದ ಪ್ರದೇಶ ಕ್ಷೇತ್ರವಾಗುತ್ತದೆ. ಕಲ್ಯಾಣ ಕ್ಷೇತ್ರದಲ್ಲಿ ಶಿವಾನುಭವ ನಡೆಯತಕ್ಕದ್ದೇ; ನಡೆಯಲೇಬೇಕು.

[×] 5–10–1973 ರಂದು ಇದೇ ಮೇಲ್ಕಂಡ ದೇವಸ್ಥಾನದಲ್ಲಿ ನೆರವೇರಿದ ವಿಜಯದಶಮಿ ಮಹೋತ್ಸವದಲ್ಲಿ ಪೂಜ್ಯ ಶ್ರೀಗಳವರು ಕರುಣಿಸಿದ ಭಾಷಣದ ರಸಸೂಕ್ತಿಗಳಿವು.

[†] 10–2–1975 ರಂದು ಚಿತ್ರದುರ್ಗದ ಪುರಭವನದಲ್ಲಿ ಏರ್ಪಡಿಸಿದ್ದ ಶ್ರೀ ಪುರಂದರದಾಸರು, ಶ್ರೀ ತ್ಯಾಗರಾಜರ ಪುಣ್ಯಸಂಸ್ಮರಣೆಯ ವಿಶೇಷ ಕಾರ್ಯಕ್ರಮದಲ್ಲಿ ಅಧ್ಯಕ್ಷ ಸ್ಥಾನದಿಂದ ಪೂಜ್ಯ ಶ್ರೀ ಜಗದ್ಗುರುಗಳವರು ಅನುಗ್ರಹಿಸಿದ ಭಾಷಣದಿಂದ ಆಯ್ದ ಅಮೃತ ವಾಣಿಗಳು.

ಮೂರ್ತಿಗಳೆಂದರೆ ಯಾರು ? ಅವರು ಸಮಾಜದ ಮಕ್ಕಳು. ತಮ್ಮ ಮಕ್ಕಳು ದೊಡ್ಡವರಾಗಿ ಮುಂದೆ ಬಂದಾಗ ತಾಯ್ತಂದೆಯರು ಹಿಗ್ಗುವುದಿಲ್ಲವೇ ! ಅಂತೆಯೇ ಸ್ವಾಮಿ ಕರ್ತೃತ್ವಶಾಲಿಯಾದ ಮೂರ್ತಿಯಾಗುವಂತೆ ಮಾಡುವ ಕೆಲಸ ಸಮಾಜದ್ದಾಗಿದೆ. ಮೂರ್ತಿಗಳಿಗೆ ಪೋಷಣೆ ಕೊಡುವಂಥ ಸಮಾಜ ಅಗತ್ಯ. ಮೂರ್ತಿ-ಸಮಾಜ ಇವರ ಸಾಮರಸ್ಯ ಇಂದು ಆಗಬೇಕಾಗಿದೆ.

○ ○ ○

ವೀರಶೈವರು ತಮ್ಮ ದರ್ಶನಕ್ಕೆ 'ಶಿವಾನುಭವ' ಎಂದು ಹೆಸರಿಟ್ಟಿದ್ದಾರೆ. ಶಕ್ತಿವಿಶಿಷ್ಟಾದ್ವೈತ, ಶಿವಾದ್ವೈತ – ಎಂದೆಲ್ಲ ಹೆಸರುಗಳಿವೆ, ಅದಿರಲಿ. ವೀರಶೈವ ಧರ್ಮ ವ್ಯಕ್ತಿಪ್ರಧಾನವಾದ ಧರ್ಮವಲ್ಲ, ಲೌಕಿಕ ಪ್ರಧಾನವಾದ ಧರ್ಮವಲ್ಲ, ಗ್ರಂಥಪ್ರಧಾನವಾದ ಧರ್ಮವಲ್ಲ. ಇದು ಅನುಭವ ಪ್ರಧಾನವಾದ ಧರ್ಮ.

ವಿಶ್ವಾಸದ ಆಧಾರದ ಮೇಲೆ ನಿಂತ ಅನುಭವ, ವಿಚಾರದ ಆಧಾರದ ಮೇಲೆ ನಿಂತ ಅನುಭವವಲ್ಲ. ಅನುಭವದ ಸ್ಥಾನ ಹೃದಯ; ದೇವರು ಇರುವ ಸ್ಥಾನ ಹೃದಯ; ಆ ಹೃದಯದಲ್ಲೇ ಅನುಭವವಿರುವುದು. ಯಾರಿಗೆ ಆ ಅನುಭವವಿಲ್ಲವೋ ಅವರಿಗೆ ಬ್ರಹ್ಮಾನಂದವಿಲ್ಲ.

○ ○ ○

ಅನುಭವ ಭಕ್ತಿಯೇ ಎತ್ತರದ್ದು. ಅದನ್ನು ಮೀರಿದ ಭಕ್ತಿಯಿಲ್ಲ. ಆನಂದಭಕ್ತಿ, ಸಮರಸಭಕ್ತಿ ಇವೆಯೆಲ್ಲಾ ಎಂದರೆ ಅವೆಲ್ಲಾ ಪರ್ಯಾಯನಾಮಗಳೇ ಎಂದೆನ್ನಬಹುದು. ಅನುಭವ, ಆನಂದ, ಸಮರಸ ಎಲ್ಲವೂ ಒಂದೇ. ಅನುಭವದಿಂದಲೇ ಆನಂದ; ಸಮರಸ. ಅನುಭವ ಭಕ್ತಿ ಜ್ಞಾನೋತ್ತರ ಭಕ್ತಿಯಿದು. ಅನುಭವದಲ್ಲಿ ಶ್ರದ್ಧೆ, ನಿಷ್ಠೆ, ಅವಧಾನ ಸಮಸ್ತ ಜೀವನವಿದೆ.

○ ○ ○

ಈಗ ಕಾಲ ಪರಿಸ್ಥಿತಿ ವಿಪರೀತವಾಗಿದೆ. ಮಾತಿನ ಮಂಥನವೇ ಅನುಭವವಲ್ಲ; ಎಲ್ಲಿ ಆಚಾರವಿಲ್ಲವೋ ಅಲ್ಲಿ ಅನುಭವವಿಲ್ಲ. ವಿಚಾರದ ವಿವೇಚನೆಯೇ ಅನುಭವವಲ್ಲ; ಅರಿವಿನ ಆಚರಣೆಯ ಪರಿಣಾಮವಾಗಿ ಅನುಭವ ಮೂಡಿಬರುತ್ತದೆ. ಅನುಭವವಿಲ್ಲದವರಿಗೆ ಆನಂದವಿಲ್ಲ. ಅನುಭವವೇ ಜೀವನದ ಸತ್ಯ; ಸತ್ವ.

"ಸತ್ಯದ ಸಂಗದಿಂದ ಅಸತ್ಯದ ಕೇಡು
ಶರಣರ ಅನುಭವದಿಂದ ಭವದ ಕೇಡು"

— ಶರಣರ ವಚನ.

○ ○ ○

ಭವವೆಂದರೆ ಸಂಸಾರ; ಭವವೆಂದರೆ ದೇಹ; ಭವವೆಂದರೆ ಬ್ರಹ್ಮಾಂಡ; ಭವವೆಂದರೆ ಪಿಂಡಾಂಡ. ಈ ಪಿಂಡಾಂಡ–ಬ್ರಹ್ಮಾಂಡಗಳ ಪರಿಷ್ಕಾರ, ಅನುಭವ ಶಿವಾನುಭವದಿಂದಲೇ ನಮಗೆ ಲಭ್ಯವಾಗುವುದು.‡

‡17–4–1974 ರಂದು ರಾತ್ರಿ 9-35 ರ ಹೊತ್ತಿನಲ್ಲಿ ಬೆಂಗಳೂರಿನ ಶ್ರೀ ಶ್ರೀ ನಿಜಗುಣರ ಕಲ್ಯಾಣ ಕ್ಷೇತ್ರದ ಪ್ರಾರಂಭೋತ್ಸವದಲ್ಲಿ ಪೂಜ್ಯ ಶ್ರೀ ಜಗದ್ಗುರುಗಳವರು ಕರುಣಿಸಿದ ಬೋಧಾಮೃತ.

ಶ್ರೀ ಜಯದೇವ ಜಗದ್ಗುರುಗಳನ್ನು ನೆನೆದು

ರಚನೆ:
ಗಂಗಪ್ಪ ನಾಲಿ, ಹುಬ್ಬಳ್ಳಿ

೧

ಅಲ್ಲಮ ಪ್ರಭುವು ಯಾರಂತೆ ಇದ್ದಿರಬಹುದು ? –
ಎಂಬುದರ ಕಲ್ಪನೆಯ ಕೊಡುವಂಥ ರೂಪ !
ವೇದಾಗಮಾದಿಗಳ ಶಿವಶರಣ ವಚನಗಳ
ಜ್ಞಾನ ಪ್ರಕಾಶ ಬೆಳಗಿದ ದಿವ್ಯ ದೀಪ !

೨

ಚಿತ್ರದುರ್ಗದ ಬೃಹನ್ಮಠದ ಇತಿಹಾಸದಲಿ
ಚಿನ್ನದಿಂ ಬರೆದಿಹುದು ನಿಮ್ಮ ಹಿರಿಬಾಳು
ಲೋಕ ಕಲ್ಯಾಣಕ್ಕೆ ಅವತರಿಸಿ ಬಂದಂಥ
ಜಯದೇವ ಶ್ರೀ ಗುರುವೆ ನೀವು ಕರುಣಾಳು

೩

ನಿಮ್ಮ ಕರುಣೆಯ ಉದಯ ವೀರಶೈವಾಭ್ಯುದಯ
ನಿಮ್ಮ ನಡೆ ನುಡಿ ಜಗಕೆ ಕಂಗಳೆನಿಸಿದುವು
ಭಕ್ತಿ ಜ್ಞಾನ ಕ್ರಿಯೆಗಳೆಂಬ ರತ್ನತ್ರಯವು
ನಿಮ್ಮ ಕರತಲದಮಲಕಂಗಳೆನಿಸಿದುವು

೪

ನಿಮ್ಮ ಚಿನ್ಮಲಾದ್ರಿ ಶಿಖರದಿಂ ಪುಟಿದೆದ್ದ
ಚೇತನದ ಪೀಯೂಷ ರಸಪಾನದಿಂದ
ನವಚೇತನಂಗೊಂಡು ನವ ದರ್ಶನಂ ಕಂಡು
ಮುಂದುವರಿಯಿತು ನಾಡು ನವ ಸ್ಫೂರ್ತಿಯಿಂದ

೫

ನುಡಿದನಿತನೆಲ್ಲವನು ನಡೆಗೊಳಿಸುವದ್ಭುತವು
ನಿಮ್ಮ ವ್ಯಕ್ತಿತ್ವದಲಿ ಕಾಂಬ ಆಧಿಕ್ಯ
ಜಯದಲ್ಲಿ ದೇವತ್ವ ತುಂಬಿ ಬರೆ "ಜಯದೇವ"
ಎಂಬ ಹೆಸರಿಗೆ ಬಂತು ತರ್ಕ ಸಾರ್ಥಕ್ಯ

೬

ನಿಮ್ಮ ಪ್ರೇರಕ ಶಕ್ತಿಯಿಂದ ಸ್ಫುರಣಂಗೊಂಡು
ಮೃತ್ಯುಂಜಯಪ್ಪಗಳ ಬಲವು ನೂರ್ಮಡಿಸಿ
ವಿದ್ಯಾರ್ಥಿ ನಿಲಯ ಶಿವಶರಣಾನುಭವ ನಿಲಯ
ಮೈದುಂಬಿ ಕಂಗೊಳಿಸುತಿಹವು ದಾಂಗುಡಿಸಿ

೭

ಬೆಳಕಿನಿಂದಲೆ ಬಂದು ಬೆಳಕಾಗಿಯೇ ಬೆಳೆದು
ಬೆಳಕನ್ನೆ ಬಿತ್ತಿ ಬೆಳೆಸಿದ ಮಹಾಪುರುಷ
ಬೆಳೆವ ಬಯಕೆಯ ಮೊಳೆಸಿ ಬೆಳಕಿನಮೃತವನುಣಿಸಿ
ಬೆಳಗಿದುದು ನಿಮ್ಮ ದಿವ್ಯಾತ್ಮ ಪ್ರಕಾಶ

ಶಿವ-ವರವೆ !

—ಈಶ್ವರ ಸಣಕಲ್ಲ

೧

ಲೋಕೋಪಕಾರ – ಲೋಕೋದ್ಧಾರಕ-ಕರಗಳಲಿ
ಆಧ್ಯಾತ್ಮದನುಭಾವವ ಸುದುಂಬಿ ನರಗಳಲಿ
ವಿದ್ಯಾಪ್ರಚಾರ ಕಾರ್ಯವೆ ಶರೀರಂದಳೆದು
ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು
ಜಯದೇವ ಮುರುಘರಾಜೇಂದ್ರ-ಸುಮಹಾಸ್ವಾಮಿ
ವಿದ್ಯಾರ್ಥಿ ನಿಲಯಗಳ ನಿರ್ಮಿಸುತೆ ನಿಷ್ಕಾಮಿ
ಈ ಸಮಾಜದ ರೋಗ–ರುಜಿನಗಳ ನೆರೆ ಕಳೆದು
ಬೆಳಗಿದರು ಸತ್ ತಪೋ ದೀಪ್ತಿಯಲಿ ಕಲ್ಪತರು !

ಮಾನವತೆ-ಸಮತೆಗಳ ಭದ್ರ ತಳಹದಿಯಲ್ಲಿ
ಸ್ತ್ರೀ-ಪುರುಷರ ಸಮತೆಯನಸ್ಪೃಶ್ಯತಾಂತರವ
ಮೇಲ್ಕೀಳು ಭಾವನೆಯನಜ್ಞಾನ–ಬೆಂತರವ
ತೊಲಗಿಸುತೆ, ಸದ್ಧರ್ಮ–ಸಂಸ್ಕೃತಿಯ ಸೊದೆಯಲ್ಲಿ
ಮನುಕುಲವ ಮೀಯಿಸಲು ಯತ್ನಿಸಿದ ನಿಸ್ವಾರ್ಥಿ !
ದೇಶ ಸೇವೆಯೊಳೀಶನನು ಕಂಡ ಪರಮಾರ್ಥಿ !

೨

ಬಸವಾದಿ ಪ್ರಮಥರಾ ದಿವ್ಯತತ್ತ್ವಂಗಳನು
ನೆರೆಯೋದಿಯಳವಡಿಸುತಾತ್ಮ-ಜೀವನದಲ್ಲಿ
ದೆಸೆದೆಸೆಗೆ ದಿವ್ಯತತ್ತ್ವಗಳ ಪಸರಿಸುತೆ
ನುಡಿದಂತೆ ನಡೆಯುತಲಿ, ನಡೆಯೆ ನುಡಿಯಾಗುತಲಿ
ಧರ್ಮ-ಮೂಲವದಪ್ಪ ದಯೆಯ ಕಿರಣಂಗಳನು
ದೀನ–ದುಃಖಿತ ದರಿದ್ರಾರ್ತ ಜೀವನದಲ್ಲಿ
ಹರಡಿಯಾಸರೆಯಾಗಿ ಚೇತನೆಯ ಕುಸುರಿಸುತೆ
ಬಾಳ ಬೆಳಗಿದರಹಹ ! ಶಿವನ ಗುಡಿಯಾಗುತಲಿ !

ವ್ಯಕ್ತಿ-ಸ್ವಾತಂತ್ರ್ಯ-ಪಥದಲಿ ಪ್ರಗತಿ ರಥವಿರಿಸಿ
ಸರ್ವಧರ್ಮಂಗಳ ಸಮನ್ವಯದ ಜೊತೆ-ಜೊತೆಗೆ
ಅವುಗಳ ಸಮಾನತೆಯ, ಸಕಲ-ಜನ-ಸನ್ಮತಿಗೆ
ಯೊಪ್ಪುವೊಲು ಬೋಧಿಸುತೆ, ಶಾಶ್ವತಂ ಶೃಂಗರಿಸಿ
ಲೋಕ-ಪೃತ್ಪೀಠಗಳ, ಮೆರೆದಿಹ ಜಗದ್ಗುರುವೆ !
ತ್ವತ್ಪೂಜ್ಯ ಪದಯುಗಕೆ, ಓಂ ನಮೋ, ಶಿವ–ವರವೆ !

ಜಯದೇವ ಲೀಲೆಯಲ್ಲಿ ಶ್ರೀ ಜಯದೇವರು

ಫಾಲದೊಳ್ ಭೂತಿಯು ಶಿವಾಕ್ಷಿಯ
ಮಾಲೆ ಕಂಠದೊಳೊಪ್ಪೆ ದೇಹದ
ಮೇಲೆ ತಿಳಿಗಾವಿಯ ಸುನಿರ್ಮಲವಸನವೆಸೆಯುತಿರೆ
ಸಾಲುಗೊಂಡುರೆ ಬಳಸಿರುವ ಸುಮ
ಮಾಲೆಯಿಂ ಕಂಗೊಳಿಸುತಿರುವಾ
ಪಾಲಿಕೆಯ ಮಧ್ಯದೊಳು ಮಂಡಿಸಿದಾ ಗುರೂತ್ತಮನಾ ||

ಭೇರಿ ಜಾಗಟೆ ಗಂಟೆ ತಾಳ ತು
ತೂರಿ ನೌಬತ ಚೌಗಡಂಗಳ
ಭೂರಿರವವೆಣ್ದೆಸೆಯನಡರಲು ತತ್ಸಮಯದಲ್ಲಿ
ವೀರವಿರತಾಗ್ರೇಸರಾನತ
ಚಾರುಚರಣಾಂಭೋಜವಿಮಳಾ
ಕಾರಜಯದೇವಪ್ರಭುವು ರುದ್ರವನು ಪರಿಸುತ್ತೆ ||

ಲಿಂಗಗತಚಿತ್ ಕಳೆಯ ಜಾನಿಸು
ತಂಗಲಿಂಗೈಕತ್ವ ಜನಿತೋ
ತ್ತುಂಗಸುಖದಿಂ ಮೈಮರೆತ ತಜ್ಜಂಗಮೋತ್ತಮನಾ
ಮಂಗಳದ ಲಿಂಗಾಂಗಯೋಗದ
ಭಂಗಿಯಂ ಕಂಡಖಿಳಭಕ್ತಮ
ನಂಗಳೀಸಾಡಿದವು ಭಕ್ತಿಯ ರಸದ ಕಡಲೊಳಗೆ ||

ಚಲಿಸದಿರೆ ಲಿಂಗದೊಳು ದಿಟ್ಟಿಯು
ಚಲಿಸದಾ ದಿಟ್ಟಿಯೊಳು ಮನವುಂ
ಚಲಿಸದಿರ್ಪುದು ನಿಶ್ಚಲದ ಮನದಲ್ಲಿ ಭಾವಮದು
ಚಲನಮಿಲ್ಲದೆ ನಿಲ್ವುದಿನ್ನವು
ಗಳೊಳಗಿಷ್ಟ ಪ್ರಾಣ ಭಾವಂ
ಗಳ ಪೆಸರ ಲಿಂಗಗಳ ಕಳೆ ತುಂಬುತ್ತೆ ಬೆಳಗುವುದು ||

—ಪಂಡಿತ ಏಳುಬೆಂಚೆ ನಾಗೇಶ ಶಾಸ್ತ್ರಿಗಳು

ಜನಪದ ಗೀತೆ

ಸಂಗ್ರಹಿಸಿದವರು :
ಚನ್ನಬಸವದೇವರು, ಚಿತ್ರದುರ್ಗ.

ನೋಡಿರಯ್ಯ ಶರಣು ಮಾಡಿರಯ್ಯ ||ಪ||

ತೆಂಗಿನಮರಕೆ ನೋಡ ತಂಗಾಳಿ ಬೀಸಿದಾಂಗ
ಜಂಗೀಗೆ ಮುತ್ತ ಬಿಗಿದಾಂಗ । ಮುರಿಗೆಸ್ವಾಮಿ ।
ಜಂಗಾಮರೊಳಗೆ ಜಗದೊಡೆಯ ||೧||

ಮಾವಿನಮರಕೆ ನೋಡ ಮಾಗಾಳಿ ಬೀಸಿದಾಂಗ
ಲ್ಯಾವಣಕೆ ಮುತ್ತ ಬಿಗಿದಾಂಗ । ಮುರಿಗೆಸ್ವಾಮಿ ।
ಜಂಗಾಮರೊಳಗೆ ಜಗದೊಡೆಯ ||೨||

ಮುತ್ತೆ ಮುತ್ತೆಂಬೇವು ಮುತ್ತೆಲ್ಲಿ ಮಾರ್ಯಾವೆ
ಮುತ್ತೆ ಹೊಳಲ್ಕೆರೆ ಬಯಲಾಗೆ । ಮುರಿಗೆಸ್ವಾಮಿ ।
ಮುತ್ತಿನಾಂಗೈದಾನೆ ಶಿವಶರಣ ||೩||

ಕಟ್ಯಾಗೆ ಬರುವವನು ಶೆಟ್ಟಿ ಯೆಂಬೂತಲಿದ್ದೆ
ಶೆಟ್ಟಿಲ್ಲ ಕಾಣ ಶಿವಶರಣ । ಮುರಿಗೆಸ್ವಾಮಿ ।
ಗಂಟು ಉಗಿಸುತಾನೆ ಜಡಿಗಾಳ ||೪||

ಕೆರೆಯಾಗೆ ಬರುವವನು ಮಡಿವಾಳನೆಂಬುತಿದ್ದೆ
ಮಡಿವಾಳನಲ್ಲ ಶಿವಶರಣ । ಮುರಿಗೆಸ್ವಾಮಿ ।
ಮಡಿಮಾಡುತಾನಾ ಜಡಿಗಾಳ ||೫||

ಹಳದಾಗೆ ನೀರಿಲ್ಲ ಹಗಲಾನೆ ಕಲ್ಲಿಲ್ಲ
ಛಳಿ ಛಳಿ ಕಾಯ್ವ ಬಿಸಿಲಿಲ್ಲ । ಮುರಿಗೆಸ್ವಾಮಿ ॥
ಕಾವಿಧೋತರವ ಒಣಗಿಲ್ಲ ||೬||

ಆಕಾಶದಗ್ಗವಣಿ ಭೂಲೋಕವುಜ್ಜನಗುಂಡಿ
ಸಿಡಿಲು ಮಿಂಚವರ ಶಿವಗಂಟೆ । ಮುರಿಗೆಸ್ವಾಮಿ ।
ಶಿವಪೂಜೆ ಮಾಡುವಾಗ ಅಂಬಾರದ ಗಂಟೆ ಗಣಲೆಂದು||೭||

ಅಡ್ಡಾನ ಪಲ್ಲಕ್ಕಿ ದೊಡ್ಡ ನಂದೀಕೋಲು
ದೊಡ್ಡವರು ಮುರಿಗ್ಯೆನ ಮೆರವಣಿಗೆ । ಆಗಲುವಾಗ ।
ಬೀಸಾರ ಬೆಳ್ಳೀಚವುಲಾವ ||೮||

ಅಂಬಾರಲ್ಲಾಡುತಾವೆ ಗೊಂಡೆ ಚೆಲ್ಲಾಡುತಾವೆ
ಬಂಗಾರದಲಿಂಗ ಹೊಳವುತಾವೆ । ಮುರಿಗೆಸ್ವಾಮಿ ।
ಬನ್ನೀಯ ಮುಡಿದು ಬರುತಾರ ||೯||

ಬೆಳದಿಂಗಳು ಬೆಳಕೀಲಿ ಬೆಳ್ಳಿ ಪಾಲಿಕೀಲಿ
ಘಲ್ಲು ಘಲ್ಲೆಂಬ ಸವಮ್ಯಾಳ । ಮುರಿಗೆಸ್ವಾಮಿ ।
ನಿಲ್ಲದಲೆ ಮಠವಾ ಹೋಗುತಾರ ||೧೦||

ಕಂತೆ ವದ್ದೂಕೊಂಡು ಚಿಂತೆ [ಲಾಲೀಸರೆ]
ಪಂಚೇಳು ಮಂತ್ರಾವ ಜಪಿಸೋರೆ । ಮುರಿಗೆಸ್ವಾಮಿ ।
ಸರವತ್ತಲಿ ಸದರವ ಏರ್ಯಾರ ||೧೧||

ಕಾವಿಯ ವದ್ದೂಕೊಂಡು ಸರಿಯ [ಲಾಲೀಸರೆ]
ಅರವತ್ತು ಮಂತ್ರಾವ ಜಪಿಸೋರೆ । ಮುರಿಗೆಸ್ವಾಮಿ ।
ಸಪತ್ತಿಲಿ ಸದರಾವ ಇಳಿದಾರೆ ||೧೨||

ಹಸುರು ಉತ್ತದವರು ಕುಸುಲು ಕೆಂಜಡೆಯಾರು
ಶಶಿಧರ ನಮ್ಮ ಗುರುಸ್ವಾಮಿ । ಮುರಿಗೆಸ್ವಾಮಿ ।
ಹಸುರೆಲೆ ಬಂದಾವೆ ಸದರೀಗೆ ||೧೩||

ಮಾವುನಣ್ಣು ನೇರಳೆಗೊಂಚಲು
ಮಾಲೆ ಬಂದಾವೆ ಗುರುಮಠಕೆ । ಮುರಿಗೆಸ್ವಾಮಿ ।
ಸಾಲಿ ಮಂಚಾವ ಇಳಿಗುರುವೆ ||೧೪||

ಬಿಚ್ಚುಕತ್ತಿ ಭರಮಣ್ಣನಾಯಕ ಮತ್ತು ಶ್ರೀ ಬೃಹನ್ಮಠ

ಲೇಖಕ:
ಟಿ. ಎಜ್. ಗಂಡುಗಲಿ,
ಚಿತ್ರದುರ್ಗ.

ಕರ್ನಾಟಕದ ಇತಿಹಾಸದಲ್ಲಿ ಚಿತ್ರದುರ್ಗ ಸಂಸ್ಥಾನವು ದೇದೀಪ್ಯಮಾನವಾದುದು. ರಕ್ಕಸತಂಗಡಿಯ ಕಾಳಗದ ಘಾತಾನಂತರ ನಾಲ್ಕು ಭಾಗಗಳಾಗಿ ಒಡೆದ ಅಖಂಡ ಕರ್ನಾಟಕದ ಒಂದು ಭಾಗವೆಂದರೆ ಚಿತ್ರದುರ್ಗ ಸಂಸ್ಥಾನ. ವಾಲ್ಮೀಕಿ ವಂಶೋದ್ಭವನಾದ ಮತ್ತಿ ತಿಮ್ಮಣ್ಣನಾಯಕನು ಈ ಸಂಸ್ಥಾನದ ಮೊದಲ ದೊರೆ. ಇವನು ಚಿತ್ರದುರ್ಗದ ಅರಸನಾದದ್ದು 1568 ರಲ್ಲಿ. ಇವನ ನಂತರ ಓಬಣ್ಣನಾಯಕ, ಕಸ್ತೂರಿ ರಂಗಪ್ಪನಾಯಕ, ಗಡ್ಡದ ಮದಕರಿನಾಯಕ, ಓಬಣ್ಣನಾಯಕ, ಚಿಕ್ಕ ಓಬಣ್ಣನಾಯಕ, ಚಿಕ್ಕಣ್ಣನಾಯಕ, ಮದಕರಿನಾಯಕ ಮೊದಲಾದವರು ಪರಶತೃಧಲ್ಲಣರಾಗಿ ರಾಜ್ಯಭಾರ ಮಾಡಿದರು. ಇವರು ಮಹಾ ಪರಾಕ್ರಮಿಗಳು; ಧುರಧೀರ ಧುರಂಧರರು; ಗುರುಮನೆ, ದೇವಸ್ಥಾನಗಳನ್ನು ಕಟ್ಟಿಸಿದ ಪರಮ ದೈವಭಕ್ತರು; ಸರ್ವಧರ್ಮ ಸಮನ್ವಯಾಚಾರ್ಯರು.

ಚಿತ್ರದುರ್ಗ ಸಂಸ್ಥಾನದ ಹನ್ನೆರಡನೆಯ ದೊರೆಯೂ, ಸಂಸ್ಥಾನವನ್ನಾಳಿದ ಅರಸರುಗಳಲ್ಲೆಲ್ಲಾ ಪ್ರಸಿದ್ಧನೂ, ಮಹಾಭಕ್ತ ಶಿರೋಮಣಿಯೂ, ಧೀರನೂ ಆಗಿದ್ದ ಬಿಚ್ಚುಕತ್ತಿ ಭರಮಣ್ಣನಾಯಕನು (1689-1720) ಪಟ್ಟಕ್ಕೆ ಬರುವ ಮುನ್ನ ಚಿತ್ರದುರ್ಗದಲ್ಲಿ ದಳವಾಯಿ ಮುದ್ದಣ್ಣನ ಹಾವಳಿ ಪ್ರಾರಂಭವಾಗಿತ್ತು. ಇವನೂ, ಇವನ ತಮ್ಮಂದಿರೂ ಚಿತ್ರದುರ್ಗದಲ್ಲಿ ಮಾರಣ ಯಾಗ ಮಾಡಿ ಸರ್ವಾಧಿಕಾರಿಗಳಾಗಿದ್ದರು.

ಈ ಮೊದಲು ಚಿತ್ರದುರ್ಗವನ್ನಾಳಿದ ಚಿಕ್ಕಣ್ಣನಾಯಕರ ಸಹೋದರ ಚಿಕ್ಕ ಮದಕರಿನಾಯಕರ ಮಗ ಬಿಚ್ಚುಕತ್ತಿ ಭರಮಣ್ಣನಾಯಕನು ನಿಜವಾದ ಉತ್ತರಾಧಿಕಾರಿಯಾಗಿದ್ದರೂ, ದಳವಾಯಿ ಮುದ್ದಣ್ಣನು ತನ್ನ ಕೈಗೊಂಬೆಯಾಗಿದ್ದ ಇವನ ತಮ್ಮ ದೊಣ್ಣೆ ರಂಗಪ್ಪನಾಯಕನಿಗೆ ಪಟ್ಟ ಕಟ್ಟಿ, ಉಳಿದ ರಾಜವಂಶೀಕರನ್ನೂ, ದೇಶಭಕ್ತರನ್ನೂ, ರಾಜನಿಷ್ಠ ದಳವಾಯಿಗಳನ್ನೂ ಕುತಂತ್ರದಿಂದ ನಾಶಮಾಡಲು ಪ್ರಯತ್ನಿಸಿದನು. ದಿಕ್ಕುತೋಚದ ಬಿಚ್ಚುಕತ್ತಿ ಭರಮಣ್ಣನಾಯಕನು ತಲೆಮರೆಸಿಕೊಂಡು ವೇಷಾಂತರದಿಂದ ಅರಣ್ಯ ಸೇರಬೇಕಾಯಿತು. ಬಿಳಿಚೋಡಿನಲ್ಲಿ ಅವನು ತಲೆಮರೆಸಿಕೊಂಡಿದ್ದ ಸಮಯದಲ್ಲಿ ನಡೆದ ಘಟನೆಯನ್ನು ಇಲ್ಲಿ ಉಲ್ಲೇಖಿಸುವುದು ಉಚಿತವಾಗಿ ತೋರುತ್ತದೆ.

ಒಂದು ದಿನ (ಶುಕ್ಲ ಸಂವತ್ಸರದ ಜ್ಯೇಷ್ಠ ಶುದ್ಧ ಪ್ರಥಮ ಏಕಾದಶಿಯಂದು) ಅರಣ್ಯದಲ್ಲಿ ಪಶುಪಾಲಕನಂತೆ ಅಲೆಯುತ್ತಿದ್ದ ಬಿಚ್ಚುಕತ್ತಿ ಭರಮಣ್ಣನಿಗೆ ತಮಿಳು ನಾಡಿನ ಕಡೆಯಿಂದ ಬಂದ ಶಿವಯೋಗಿಗಳೊಬ್ಬರ (ಮುರುರ್ಘ ರಾಜೇಂದ್ರ > ಮುರುಘರಾಜೇಂದ್ರ*) ದರ್ಶನ ಆಕಸ್ಮಿಕವಾಗಿ ಆಯಿತು. (ತಮಿಳಿನಲ್ಲಿ ಮುರುಘನ್ ಎಂದರೆ ಷಣ್ಮುಖ, ಕುಮಾರಸ್ವಾಮಿ ಎಂದರ್ಥ). ಭರಮಣ್ಣನಾಯಕನು ತನ್ನ ಸಹಜ ಸ್ವಭಾವದಿಂದ ಕಾಷಾಯವಸ್ತ್ರಧಾರಿಗಳಾದ ಶಿವಯೋಗಿಗಳಿಗೆ ದೀರ್ಘದಂಡ ನಮಸ್ಕಾರ ಮಾಡಿ ತನ್ನ ದುರ್ವಿಧಿಯ ಬಗ್ಗೆ ಅವರಲ್ಲಿ ಅರಿಕೆ ಮಾಡಿಕೊಂಡನು. ಮುರುಘರಾಜೇಂದ್ರ ಶಿವಯೋಗಿಗಳು ಭರಮಣ್ಣನಿಗೆ, 'ರಾಜ ಲಕ್ಷಣಗಳಿರುವ ನೀನು ಒಂದು ದಿನ ರಾಜನಾಗುವುದು ಖಚಿತ' ಎಂದು ಹರಸಿದರು. ಭರಮಣ್ಣನು ಭಕ್ತಿಯಿಂದ 'ಹಾಗಾದರೆ, ತಮ್ಮದು ಕುಳಿತಪಟ್ಟ; ನನ್ನದು ನಿಂತ ಪಟ್ಟ' ಎಂದನು ವಿನಮ್ರ ಭಾವದಿಂದ.

ಬಿಚ್ಚುಕತ್ತಿ ಭರಮಣ್ಣನಾಯಕನ ಸ್ಥಿತಿಯನ್ನರಿತುಕೊಂಡ ಮುರುಘರಾಜೇಂದ್ರ ಸ್ವಾಮಿಗಳು ಚಿತ್ರದುರ್ಗಕ್ಕೆ ಬಂದು, ದಳವಾಯಿ ಮುದ್ದಣ್ಣನ ಧರ್ಮಪತ್ನಿ (ಮಹಾ ಶಿವಭಕ್ತ ಗುರುಶಾಂತಪ್ಪನ ಪುತ್ರಿ) ಸಾಧ್ವಿ ಮಲ್ಲಮ್ಮನ ಮೂಲಕ ಮುದ್ದಣ್ಣನಿಗೆ ಹಿತೋಪದೇಶ ಮಾಡಿಸಿದರು. ಯಾವುದೂ ಫಲಕಾರಿಯಾಗದಿದ್ದಾಗ, ದಳವಾಯಿ ಮುದ್ದಣ್ಣನ ವಿರುದ್ಧ ದಂಗೆಯೆದ್ದವರಲ್ಲಿ ಮುಖ್ಯರೆನಿಸಿದ ಅಗ್ನಿಕನ್ಯೆ ಗಿರಿಜ, ದಳವಾಯಿ ಭರಮಣ್ಣನಾಯಕ ಮೊದಲಾದವರಿಗೆ ಮುಂದೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ತಿಳಿಸಿ ತಮ್ಮ ಪ್ರವಾಸವನ್ನು ಮುಂದುವರೆಸಿದರು.

ಸ್ವಾಮಿಗಳು ದೇಶಾಂತರ ಹೊರಟು ಹೋದ ನಂತರ ಚಿತ್ರದುರ್ಗದಲ್ಲಿ ಕ್ರಾಂತಿಕಾರರು ತಮ್ಮ ಚಟುವಟಿಕೆಗಳನ್ನು ತೀವ್ರಗೊಳಿಸಿದರು. ಮುದ್ದಣ್ಣನ ದುರಾಡಳಿತದ ವಿರುದ್ಧ ದಳವಾಯಿ ಭರಮಣ್ಣನಾಯಕನ ನಾಯಕತ್ವದಲ್ಲಿ ಜರುಗಿದ ಕ್ರಾಂತಿಯು ಯಶಸ್ವಿಗೊಂಡು, ಮುದ್ದಣ್ಣ ಮತ್ತು ಅವನ ದುಷ್ಟ ತಮ್ಮಂದಿರೆಲ್ಲರೂ ಸೆರೆಸಿಕ್ಕು ಹತರಾದರು. ದಳವಾಯಿ ಮುದ್ದಣ್ಣ ಮತ್ತು ಅವನ ಸಹೋದರರ ಅಂತಿಮ ಯಾತ್ರೆಯ ನಂತರ, 1689 ರಲ್ಲಿ ಕ್ರಾಂತಿಕಾರರು ಬಿಚ್ಚುಕತ್ತಿ ಭರಮಣ್ಣನಾಯಕನಿಗೆ ಪಟ್ಟ ಕಟ್ಟಿದರು.

*ಎಂಟನೆಯ ಪೀಠಾಧಿಕಾರಿಗಳು; ಕಾಲ ಸು. 1640–1710.

ಚಿತ್ರದುರ್ಗದ ಬೆಟ್ಟದ ಮೇಲೆ ಇಂದು ನಾವು ನೋಡುವ ಶ್ರೀ ಸಂಪಿಗೆ ಸಿದ್ಧೇಶ್ವರ ದೇವಾಲಯದ ಮುಂದಿರುವ ವಿಶಾಲವಾದ ಕಟ್ಟಡವು ಬಿಚ್ಚುಕತ್ತಿ ಭರಮಣ್ಣನಾಯಕನು ಮುರುಘರಾಜೇಂದ್ರರಿಗೆ ಆಗ ಕಟ್ಟಿಸಿಕೊಟ್ಟ ಮಠವಲ್ಲದೆ ಬೇರೆ ಅಲ್ಲ. ಸ್ವಾಮಿಗಳು ತಮ್ಮ ಪ್ರವಾಸ ಮುಗಿಸಿಕೊಂಡು ಚಿತ್ರದುರ್ಗಕ್ಕೆ ಹಿಂತಿರುಗಿ ಬಂದ ನಂತರ, ಭರಮಣ್ಣನಾಯಕನು ಬೆಟ್ಟದ ಮೇಲೆ ಇರುವ ಸೌಂದರ್ಯಕ್ಕಾಗಿ 360 ಅಂಕಣದ ಈ ಶಿಲಾಮಯ ಮಠವನ್ನು ಕಟ್ಟಿಸಿ, ಶ್ವೇತಛತ್ರಿ,ಚಾಮರ ಮೊದಲಾದ ಬಿರುದಾವಳಿಗಳನ್ನೂ, ರಾಜಮುದ್ರೆಯನ್ನೂ, ಅರಮನೆ ಒಡ್ಡೋಲಗ ಮತ್ತು ಬೊಕ್ಕಸದ ಬೀಗದ ಕೈಗಳನ್ನೂ ಸ್ವಾಮಿಗಳ ವಶಕ್ಕೆ ನೀಡಿ ತನ್ನ ಗೌರವ ತೋರಿದನು. ಸ್ವಾಮಿಗಳು ಅವುಗಳನ್ನು ಮತ್ತೆ ನಾಯಕನಿಗೆ ಹಿಂತಿರುಗಿಸಿ, ದೇವರ ಪ್ರತಿನಿಧಿಯಾಗಿ ಧರ್ಮದಿಂದ ರಾಜ್ಯಭಾರ ಮಾಡೆಂದು ಆಶೀರ್ವದಿಸಿದರು. ಅಂದಿನಿಂದ ಚಿನ್ಮೂಲಾದ್ರಿ ಬೃಹನ್ಮಠದ ಮುರುಘರಾಜೇಂದ್ರ ಸ್ವಾಮಿಗಳವರು ಚಿತ್ರದುರ್ಗ ಪಾಳೆಯಗಾರರಿಗೆ ರಾಜಗುರುಗಳೆನಿಸಿದರು. 1703 ರ ಸುಮಾರಿನಲ್ಲಿ ಯುದ್ಧದ ಸಿದ್ಧತೆಯ ಪ್ರಯುಕ್ತ ಬೆಟ್ಟದಲ್ಲಿ ಗಲಭೆ ಹೆಚ್ಚಾಗಿ, ಪೂಜ,ಗಣಾರಾಧನೆಗಳನ್ನು ಶಾಂತಿಯಿಂದ ಮುಂದುವರೆಸಿಕೊಂಡು ಹೋಗಲು ಧಕ್ಕೆಯಾದುದರಿಂದ ಸ್ವಾಮಿಗಳಿಗಾಗಿ ಕೋಟೆ ಹೊರಗಡೆ ಮತ್ತೊಂದು ಮಠವನ್ನೂ, ಯೋಗ ಸಮಾಧಿಯನ್ನೂ ನಾಯಕನು ಕಟ್ಟಿಸಿಕೊಟ್ಟನು.

ಹೊಳೆಹೊನ್ನೂರು ಯುದ್ಧ, ಅಣಜಿ ಮುತ್ತಿಗೆ, ಮರಾಠರ ಹಾವಳಿ, ರಾಯದುರ್ಗದ ಯುದ್ಧ ಮೊದಲಾದ ಎಲ್ಲಾ ಸಮಯಗಳಲ್ಲಿಯೂ ಸ್ವಾಮಿಗಳ ಆಶೀರ್ವಾದ ಪಡೆದು, ಅವರ ಸಲಹೆಯಂತೆ ಬಿಚ್ಚುಕತ್ತಿ ಭರಮಣ್ಣನಾಯಕನು ನಡೆದುಕೊಳ್ಳುತ್ತಿದ್ದನು.

ಮುರುಘರಾಜೇಂದ್ರ ಸ್ವಾಮಿಗಳು 1710 ರಲ್ಲಿ ಗುರುಸಿದ್ಧ ಸ್ವಾಮಿಗಳನ್ನು ಬಿಚ್ಚುಕತ್ತಿ ಭರಮಣ್ಣನಾಯಕನ ಸಮಕ್ಷಮ ಉತ್ತರಾಧಿಕಾರಿಗಳಾಗಿ ನಿಯಮಿಸಿ, ಮೊದಲೇ ನಿಶ್ಚಯಿಸಿದ್ದಂತೆ ಜೀವಂತ ಯೋಗ ಸಮಾಧಿಯನ್ನು ಪ್ರವೇಶಿಸಿದರು.

ಮುರುಘರಾಜೇಂದ್ರ ಸ್ವಾಮಿಗಳವರಿಂದ ಈ ಹಿಂದೆ ಹರಪನಹಳ್ಳಿಗೆ ಕಳುಹಿಸಲ್ಪಟ್ಟಿದ್ದ ಚೇಲಾಳು ಚರಮೂರ್ತಿಯವರು, ಗುರುಸಿದ್ಧಸ್ವಾಮಿಗಳಿಗೆ ದೊರೆತ ಅಧಿಕಾರದಿಂದ ಅಸೂಯೆಪಟ್ಟು, ಸ್ವಾಮಿಗಳ ವಿರುದ್ಧ ಪಿತೂರಿ ಮಾಡಿದರು. ಇದರಿಂದ ಮನನೊಂದ ಬಿಚ್ಚುಕತ್ತಿ ಭರಮಣ್ಣನಾಯಕನು ಗುರುವಾಜ್ಞೆ ಮೀರಿದ ಚರಮೂರ್ತಿಗಳಿಗೆ ಸಂಸ್ಥಾನದಿಂದಲೇ ಬಹಿಷ್ಕರಿಸಿದನು.

1720ರಲ್ಲಿ ಬಿಚ್ಚುಕತ್ತಿ ಭರಮಣ್ಣನಾಯಕನು ಕಾಲವಾಗಲು, ಆತನ ಮಗ ಹಿರೇ ಮದಕರಿನಾಯಕನಿಗೆ ಪಟ್ಟಾಭಿಷೇಕವಾಯಿತು. 1725 ರಲ್ಲಿ ಗುರುಸಿದ್ಧ ಸ್ವಾಮಿಗಳು ಸ್ವಾದಿಯ ಚನ್ನಬಸವಸ್ವಾಮಿಗಳನ್ನು ಬೃಹನ್ಮಠದ ಮುಂದಿನ ಅಧಿಕಾರಿಯೆಂದು ತಿಳಿಸಿ ಶಿವಾಧೀನರಾದರು.

ಹೀಗೆ ಚಿತ್ರದುರ್ಗದ ಸಂಸ್ಥಾನ ಮತ್ತು ಬೃಹನ್ಮಠಗಳ ನಡುವೆ ಸಂಬಂಧ ನೆಲೆಗೊಂಡಿತ್ತಲ್ಲದೆ,ಅದು ಬಿಚ್ಚುಕತ್ತಿ ಭರಮಣ್ಣನಾಯಕನ ತರುವಾಯ ಬಂದ ಹಿರೇ ಮದಕರಿನಾಯಕ, ಇಮ್ಮಡಿ ಕಸ್ತೂರಿ ರಂಗಪ್ಪನಾಯಕ, ಕಡೆಯ ಮದಕರಿ ನಾಯಕರುಗಳ ಕಾಲದಲ್ಲಿ ಮುಂದುವರೆದುಕೊಂಡೂ ಬಂದಿತ್ತು. 1779 ರಲ್ಲಿ ಚಿತ್ರದುರ್ಗವು ಹೈದರಾಲೀಖಾನನ ವಶವಾಗುವವರೆಗೂ ಬೃಹನ್ಮಠದ ಜಗದ್ಗುರುಗಳವರು ಚಿತ್ರದುರ್ಗ ಪಾಳೆಯಗಾರರ ಆಡಳಿತ ವಿಚಾರದಲ್ಲಿ ಹಾಗೂ ಧಾರ್ಮಿಕ ಕಾರ್ಯಗಳಲ್ಲಿ ಪ್ರಧಾನ ಗುರುಗಳಾಗಿದ್ದರು; ರಾಜಗುರುಗಳಾಗಿದ್ದರು. ಸ್ವಾಮಿಗಳು ವ್ಯಕ್ತಪಡಿಸಿದ ಸಂದರ್ಭೋಚಿತವಾದ ಬುದ್ಧಿವಾದಗಳಿಗೆ ಕಿವಿಗೊಡದ ಕಡೆಯ ಮದಕರಿನಾಯಕನು ತಾನು ಮಾತ್ರವೇ ನಾಶವಾಗದೆ, ತನ್ನೊಂದಿಗೆ ಇಡೀ ಸಂಸ್ಥಾನವೇ ನಾಶಗೊಳ್ಳಲು ಆಸ್ಪದ ಮಾಡಿಕೊಟ್ಟನು. ಏನೇ ಆದರೂ, ಚಿತ್ರದುರ್ಗದ ಪಾಳೆಯಗಾರರು ಬೃಹನ್ಮಠದ ನಿಕಟ ಸಂಬಂಧ ಸ್ಥಾಪನೆಗೆ ಕಾರಣರಾಗಿ, ಒಂದು ಮಹತ್ಕಾರ್ಯದಲ್ಲಿ ಪಾಲ್ಗೊಂಡ ಕೀರ್ತಿಗೆ ಭಾಜನರಾಗಿದ್ದಾರೆ; ಅರಮನೆ–ಗುರುಮನೆಗಳ ನಡುವಣ ಸಂಬಂಧವು ಬೆಳೆದು ಬರಲು ಸಹಾಯಕರಾಗಿದ್ದಾರೆ. ಈ ಘಟನೆ ಚಿತ್ರದುರ್ಗ ಪಾಳೆಯಗಾರರ ಇತಿಹಾಸ ಮತ್ತು ಬೃಹನ್ಮಠದ ಇತಿಹಾಸಗಳ ದೃಷ್ಟಿಯಿಂದ ಒಂದು ಮಹತ್ವದ ಮೈಲಿಗಲ್ಲಾಗುಳಿದಿದೆಯೆಂದರೆ ಉತ್ಪ್ರೇಕ್ಷೆಯೇನಲ್ಲ.

—o—

ನಾನು ಕಂಡ ಜಗದ್ಗುರು

ರಚನೆ:
ತಾಳ್ಯದ ಬಾಗಾಳಿ ಚಂದ್ರಪ್ಪ, ಬಿ.ಎ.,ಬಿ.ಎಡ್.,
ಬಾಲಕಿಯರ ಸರ್ಕಾರಿ ಜ್ಯೂ|| ಕಾಲೇಜ್,
ಚಿತ್ರದುರ್ಗ.

ಶ್ರೀ ಜಗದ್ಗುರು ಮಲ್ಲಿಕಾರ್ಜುನ ಮುರುಘೇಶಾ
ನಿಮ್ಮ ಪಡೆದ ನಾಡು ಧನ್ಯ
ನಿಮ್ಮ ಪಡೆದ ಜನತೆ ಧನ್ಯ
ನಿಮ್ಮ ಪಡೆದ ಶೂನ್ಯಸಿಂಹಾಸನ ಧನ್ಯ
ನಿಮ್ಮ ಪಡೆದ ಚಿನ್ಮೂಲಾದ್ರಿ ಭೂಮಿ ಧನ್ಯ
ನಿಮ್ಮ ದುಡಿಮೆಯಿಂದ ಮಠವು ಧನ್ಯ

ನಿಮ್ಮ ಪಡೆದ ಹರಗುರು ಚರಮೂರ್ತಿಗಳು ಧನ್ಯ.
ರಾಜ ಗುರು ಶ್ರೇಷ್ಠರಾಗಿರುವಿರಲ್ಲಾ
ನೀವು ವಿರಮಿಸಿದ ದಿನಗಳಿಲ್ಲಾ
ದಿನವಿಡೀ ಹೊಲಗದ್ದೆಯ ಸುತ್ತಿರುವಿರಲ್ಲಾ
ಹಗಲಿರುಳು ದುಡಿದು ಹಣ್ಣಾಗಿರುವಿರಲ್ಲಾ
ಸಕಲರಿಗೆ ಲೇಸನೇ ಬಯಸಿರುವಿರಲ್ಲಾ

ತ್ರಿವಿಧ ದಾಸೋಹಮೂರ್ತಿಯಾಗಿರುವಿರಲ್ಲಾ
ಜನತೆಯನು ಉದ್ಧರಿಸಲು ತಪಗೈದಿರುವಿರಲ್ಲಾ
ದುಡಿಮೆಯತ್ತ ಜನತೆಯನು ನಡೆಸಿರುವಿರಲ್ಲಾ
ಅದಕೆ ತಾವೇ ಆದರ್ಶವಾಗಿರುವಿರಲ್ಲಾ
ನಾಳಿನದನು ಇಂದೇ ಮಾಡೆಂದಿರುವಿರಲ್ಲಾ
ಕಂದಾಚಾರಗಳನು ಕಡೆಗಣಿಸಿರುವಿರಲ್ಲಾ

ಜ್ಞಾನ ದಾಸೋಹವನಿಟ್ಟಿರುವಿರಲ್ಲಾ
ಕಾಲ ಮಹಿಮೆಯನರಿತು ನಡೆದಿರುವಿರಲ್ಲಾ
ಸರಳತೆಗೆ ಆದರ್ಶವಾಗಿರುವಿರಲ್ಲಾ
ಸಂಸ್ಕೃತದಲಿ ಪಾಂಡಿತ್ಯ ಗಳಿಸಿರುವಿರಲ್ಲಾ
ಕಾಯಕದ ಮಹತ್ವವ ತಿಳಿಸಿರುವಿರಲ್ಲಾ
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರೆಂದಿರುವಿರಲ್ಲಾ

ಅಧರ್ಮ, ಅನ್ಯಾಯ, ಅಶಿಸ್ತನು ಕಂಡು
ಸಿಂಹದಂತೆ ಗುಡಿಗಿರುವಿರಲ್ಲಾ.
ಬಡವ ಬಲ್ಲಿದರೆಂಬ ಭೇದವಿಲ್ಲ ನಿಮಗೆ
ಕಾಯಕದ ಪೂಜೆಗೈಯುವ ಚಿಂತೆ ನಿಮಗೆ
ಪರಂಪರೆಯನುಳಿಸಿ, ಬೆಳೆಸುವ ಚಿಂತೆ ನಿಮಗೆ
ಭಕ್ತರೊಳು ಭ್ರಾತೃ ಭಾವನೆ ಬೆಳೆಸುವ ಚಿಂತೆ ನಿಮಗೆ

ದೇಶವನು ಉಳಿಸಿ ಬೆಳೆಸುವ ಚಿಂತೆ ನಿಮಗೆ
ಇದಕಾಗಿ ನೀವು ಗೈಯ್ಯದ ತಪವಿಲ್ಲ.
ಆಸೇತು ಹಿಮಾಚಲ ಮಠದ ಕೀರ್ತಿಯನು ಮೆರೆಸಿರುವಿರಲ್ಲಾ
ನಿಮಗೆ ರಾಜಕೀಯದ ಸೋಂಕಿಲ್ಲವಲ್ಲಾ
ಹರಿಜನರಿಗಿತ್ತಿರುವಿರಿ ಆಶ್ರಯವನೆಲ್ಲಾ
ಹಿಂದುಳಿದವರಿಗೆ ನೀಡಿರುವಿರಿ ಮಾರ್ಗದರ್ಶನವನೆಲ್ಲಾ

ಗುಣಕೆ ಮಾತ್ಸರ್ಯ ಬೇಡ ಎಂದಿರುವಿರಲ್ಲಾ
ಎಲ್ಲರೊಳಗೂ ಒಳಿತನೇ ಕಂಡಿರುವಿರಲ್ಲಾ
ಬಲ್ಲಿದರಿಗೆ ದಾನ ಧರ್ಮವ ಮಾಡಲು ತಿಳಿಸಿರುವಿರಲ್ಲಾ
ಭಕ್ತರಿಗೆ ಅತಿ ಆಸೆ ಗತಿಗೇಡು ಎಂದಿರುವಿರಲ್ಲಾ
ನೆಮ್ಮದಿಯ ಜೀವನದ ಮಾರ್ಗವನು ತಿಳಿಸಿರುವಿರಲ್ಲಾ
ಜನತೆಯ ಆಡಳಿತಕೆ ಮನ್ನಣೆಯನಿತ್ತಿರುವಿರಲ್ಲಾ

ಸರ್ವಧರ್ಮದ ತತ್ವವ ನುಡಿದಿರುವಿರಲ್ಲಾ
ಅದಕೇ ನೆನೆಯುತಿಹರು ನಾಸ್ತಿಕರು ಎಲ್ಲಾ
ನಡೆಯುವೆವು ನೀವು ನಡೆಸಿದಂತೆ ಎಲ್ಲಾ
ನುಡಿಯುವೆವು ನೀವು ನುಡಿಸಿದಂತೆ ಎಲ್ಲಾ
ಇದಕೆ ನೀವೇ ಸಾಕ್ಷಿ ಎಂದಿಹೆವು ಎಲ್ಲಾ
ನಿಮ್ಮ ಕೃಪೆಯು ಅನವರತ ಇರಲೆಂದು ಬೇಡುವೆವು ಎಲ್ಲಾ

ಪ್ರಾರ್ಥನೆ

ದರುಶನವೀಯೋ ಶ್ರೀ ಮುರುಘೇಶಾ
ಹರುಷವ ತಾರೋ ಶ್ರೀ ಮುರುಘೇಶಾ ॥
ನಿನ್ನನು ನೆನೆಯುತಲಿದ್ದರೆ ಹರಿವುದು
ಈ ಭವ ಬಂಧನ ಪಾಶಾ ॥

ನಿನ್ನಯ ಪಾವನ ಧೂಳಿಯು ಸೋಂಕಿದ
ಮಾತ್ರವೆ ಕಾಣುವೆ ನಿಜ ಕೈಲಾಸ ॥
ದರುಶನವೀಯೋ ಶ್ರೀ ಮುರುಘೇಶಾ
ಹರುಷವ ತಾರೋ ಶ್ರೀ ಮುರುಘೇಶಾ ॥
ಶ್ರೀ ಮುರುಘೇಶಾ.... ಶ್ರೀ ಮುರುಘೇಶಾ....

—ತಾಳ್ಯದ ಬಾಗೂಳಿ ಚಂದ್ರಪ್ಪ



ಸಾಹಿತ್ಯ ಸಂಪುಟ

ವಚನಕಾರರ ವಿಚಾರ ಕ್ರಾಂತಿ

ಲೇಖಕರು:
ಡಾ॥ ಜಿ. ಎಸ್. ಶಿವರುದ್ರಪ್ಪ, ಎಂ.ಎ.,ಪಿ.ಎಚ್.ಡಿ.,
ನಿರ್ದೇಶಕರು, ಕನ್ನಡ ಅಧ್ಯಯನ ಕೇಂದ್ರ,
ಬೆಂಗಳೂರು ವಿಶ್ವವಿದ್ಯಾನಿಲಯ,
ಬೆಂಗಳೂರು

ಯಾವ ಯಾವ ಜಡ್ಡುಗಟ್ಟಿದ ಕಾಲಗಳಲ್ಲಿ, ಸೂಕ್ಷ್ಮ ಸಂವೇದನೆ ಉಳ್ಳವರೂ ವಿಚಾರವಂತರೂ ಆದ ಕೆಲವೇ ಕೆಲವು ಜನ, ತಮ್ಮ ಸುತ್ತಣ ಪರಿಸ್ಥಿತಿಯನ್ನೂ ಮತ್ತು ಅದನ್ನು ನಿಯಂತ್ರಿಸಿಕೊಂಡು ಬಂದ ರೂಢಿಗತವಾದ ವ್ಯವಸ್ಥೆ ಹಾಗೂ ಸಂಪ್ರದಾಯಗಳನ್ನು ಪ್ರಶ್ನಿಸಲು ತೊಡಗುತ್ತಾರೋ, ಪ್ರತಿಭಟಿಸಲು ತೊಡಗುತ್ತಾರೋ ಅಂತಹ ಕಾಲಗಳನ್ನು ಸಂಕ್ರಮಣ ಕಾಲಗಳೆಂದು ಕರೆಯಬಹುದು. ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನ ಇಂತಹ ಒಂದು ಸಂಕ್ರಮಣ ಕಾಲ. ಈ ಸಂಕ್ರಮಣದ ಮುಖ್ಯ ಪ್ರೇರಣೆ ವೀರಶೈವ ಧರ್ಮ ; ಅದರ ಪರಿಣಾಮ ಒಂದು ಧಾರ್ಮಿಕ, ಸಾಮಾಜಿಕ, ಸಾಹಿತ್ಯಕ ವಿಚಾರ ಕ್ರಾಂತಿ.

ಈ ಕ್ರಾಂತಿಯಲ್ಲಿ ರಭಸ, ಆವೇಶ, ಪ್ರತಿ ಪಕ್ಷಗಳ ದಮನ ಮನೋಭಾವ, ಸ್ವಮತ ಪ್ರತಿಷ್ಠೆ, ವಿಡಂಬನೆ ಇತ್ಯಾದಿಗಳು ಇರುವುದು ತೀರಾ ಸಹಜ. ಆದರೆ, ಈ ಕ್ರಾಂತಿಗೆ, ಅತ್ಯಂತ ಅಗತ್ಯವಾದ ವಿಚಾರ ಮೂಲವಾದ ವಿಮರ್ಶನ ಪ್ರಜ್ಞೆಯೊಂದು ವಿಶೇಷಪ್ರಮಾಣದಲ್ಲಿ ಹಿನ್ನೆಲೆಯಾಗಿತ್ತೆಂಬ ಅಂಶವನ್ನು, ಇಂದು ನಾವು ಮರೆಯಬಾರದು.

ವಚನಕಾರರು ಅಥವಾ ಶಿವಶರಣರು ಮೂಲತಹ ನಿಷ್ಠುರ ವಿಮರ್ಶಕರು. ಪರಂಪರೆಯನ್ನು ಕುರಿತು, ಧರ್ಮವನ್ನು ಕುರಿತು, ದೇವರನ್ನು ಕುರಿತು, ತಮ್ಮ ಸುತ್ತಣ ಸಾಮಾಜಿಕ ಪರಿಸರವನ್ನು ಕುರಿತು, ಎಲ್ಲಕ್ಕೂ ಮಿಗಿಲಾಗಿ ತಮ್ಮನ್ನೇ ಕುರಿತು ವಿಮರ್ಶೆ ಮಾಡಿದವರು. ಈ ವಿಮರ್ಶೆ ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿ ಕೂಡ ನಡೆದಂತೆ ತೋರುತ್ತದೆ. ಶರಣರೆಲ್ಲರೂ ಶಿವಾನುಭವ ಗೋಷ್ಠಿಗಳಲ್ಲಿ ಕುಳಿತು ಚರ್ಚೆ ಮಾಡುತ್ತಿದ್ದರೆಂಬ ಸಂಗತಿ ಈ ಮಾತಿಗೆ ನಿದರ್ಶನವಾಗಿದೆ.

ಹೀಗೆ ಕೂತು ವಿಚಾರ ಮಾಡಿದವರು ಪಂಡಿತರಲ್ಲ; ಉತ್ತಮ ಜಾತಿಯಲ್ಲಿ ಹುಟ್ಟಿದರೆ ಮಾತ್ರ ವಿಚಾರ ಮಾಡುವ ಸಾಮರ್ಥ್ಯವಿರುತ್ತದೆ ಎಂಬ ಭ್ರಮೆಗೆ ಒಳಗಾದವರಲ್ಲ; ತಮ್ಮ ವೈಚಾರಿಕತೆಯಿಂದ ತಾವೆಂತಹ ಕ್ರಾಂತಿಯನ್ನು ಮಾಡುತ್ತಿದ್ದೇವೆ ಎನ್ನುವುದನ್ನೂ ಬಲ್ಲವರಲ್ಲ; ಅಂತಹ ಸಾಮಾನ್ಯ ಜನ, ಗಂಡೆನ್ನದೆ, ಹೆಣ್ಣೆನ್ನದೆ, ಆ ಜಾತಿ ಈ ಜಾತಿ ಎನ್ನದೆ, ಬಸವಣ್ಣನವರ ವ್ಯಕ್ತಿ ಕೇಂದ್ರದಲ್ಲಿ ಸಂಘಟಿತವಾಗಿ 'ತಮಂಧ ಘನ'ವಾದ ಅಂದಿನ ಆವರಣದಲ್ಲಿ ಒಂದು ವಿಚಾರದ ದೀಪಾವಳಿಯನ್ನೇ ತೆರೆದರು.

ವಚನಕಾರರ ವೈಚಾರಿಕತೆಯಲ್ಲಿ ಬಹು ಮುಖ್ಯವಾದ ಸಂಗತಿ ಎಂದರೆ, ಪರಂಪರಾಗತವಾದ ವೈಚಾರಿಕತೆಯ ಹಿನ್ನೆಲೆಯಾಗಿದ್ದ ವೇದಶಾಸ್ತ್ರ ಆಗಮಗಳನ್ನು ನಿರಾಕರಿಸಿದ್ದು. ಶತ ಶತಮಾನಗಳಿಂದ ಜೈನ ಹಾಗೂ ಬೌದ್ಧ ಧರ್ಮಗಳನ್ನು ಬಿಟ್ಟರೆ, ಈ ದೇಶದಲ್ಲಿ ಹಿಂದೂ ಧರ್ಮದ ಆಚಾರ್ಯರುಗಳು ಮಾಡಿದ ಕೆಲಸವೆಂದರೆ, ಆವೇ ವೇದೋಪನಿಷದಾದಿಗಳಿಗೆ ಕಾಲ ಕಾಲಕ್ಕೆ ಭಾಷ್ಯವನ್ನು ಬರೆದದ್ದು. ಪ್ರತಿಯೊಂದಕ್ಕೂ ವೇದ ಪ್ರಾಮಾಣ್ಯವನ್ನೆ ಎತ್ತಿ ಹಿಡಿಯುವ ಈ ಆಚಾರ್ಯರುಗಳಿಂದ, ಅಂತಹ ಮೂಲಭೂತವಾದ, ಕ್ರಾಂತಿಯೇನೂ ಆಗದೆ ಹೋದುದಕ್ಕೆ, ಇದೇ ಮುಖ್ಯ ಕಾರಣವೆನ್ನಬಹುದು. ಸ್ವತಂತ್ರವಾದ ವಿಚಾರಶಕ್ತಿಯನ್ನು ಬೆಳಸಿಕೊಳ್ಳುವವರು, ಮಾಡುವ ಮೊದಲ ಕೆಲಸವೆಂದರೆ, ಯಾವ ವೈಚಾರಿಕ ಸಿದ್ಧ ಸಂಪ್ರದಾಯದಲ್ಲಿ ನಿಂತು, ಅದುವರೆಗೂ ಎಲ್ಲರೂ ಯೋಚನೆಮಾಡುತ್ತಾ ಬಂದಿದ್ದಾರೋ, ಅದನ್ನು, ಅದರ ಪ್ರಭಾವವನ್ನು, ನಿರಾಕರಿಸಿ ತಮ್ಮದೆ ಆದ ನೆಲೆಯಲ್ಲಿ ನಿಲ್ಲುವುದು. ಯಾಕೆಂದರೆ ನಿಜವಾದ ವೈಚಾರಿಕತೆ, ಇಂತಹ ಪೂರ್ವಸಿದ್ಧವಾದ ನಿಯಂತ್ರಣಕ್ಕೆ ಒಳಗಾದರೆ, ಅದು ವಿಚಾರವಂತಿಕೆ ಎಂದು ಅನ್ನಿಸಿಕೊಳ್ಳಲಾರದು. ಆದರೆ, ಹೀಗೆ ನಿರಾಕರಿಸುವಾಗ ಅಂಥವರಿಗೆ, ತಮಗೆ ಹಿಂದಿನ ವಿಚಾರ ಪರಂಪರೆಯ ಅರಿವಿರಬಾರದು ಎಂದಲ್ಲ: ಅದರ ಬಗ್ಗೆ ಗೌರವವಿರುವುದಿಲ್ಲ ಎಂದೂ ಅಲ್ಲ. ಕೇವಲ ತಿರಸ್ಕಾರದ ಮನೋಧರ್ಮದಿಂದ ಯಾರೂ ವಿಚಾರವಾದಿಗಳೆನ್ನಿಸಿಕೊಳ್ಳುವುದಿಲ್ಲ. ವಚನಕಾರರಿಗೆ, ಹಿಂದಿನ ವೇದ ಶಾಸ್ತ್ರ ಪುರಾಣಗಳ ಪರಿಚಯ ತಕ್ಕಮಟ್ಟಿಗೆ ಇತ್ತು; ಮತ್ತು ಅದು ಈ ದೇಶದ ಸಾಮಾಜಿಕ ಜೀವನದಲ್ಲಿ ತಂದ ಏರುಪೇರುಗಳೇನು, ಅದರ ದೋಷಗಳು ಇತಿಮಿತಿಗಳು ಏನು ಎಂಬುದನ್ನು ಬಲ್ಲವರಾಗಿದ್ದರು. ಆದುದರಿಂದಲೇ ವಿಚಾರ ಪೂರ್ವಕವಾಗಿ ಅವುಗಳನ್ನು ನಿರಾಕರಿಸಿದರು. ಮತ್ತು ವೇದ, ಶಾಸ್ತ್ರಗಳ ಮಾತಿಗಿಂತ, ತಮ್ಮ ಸ್ವಂತ ಅನುಭವಕ್ಕೆ, ತಮ್ಮ ಸುತ್ತಣ ಪರಿಸರದಲ್ಲಿ ಏನು ಅನುಭವಕ್ಕೆ ಬರುತ್ತದೋ, ಆ ಸ್ವಾನುಭವವೇ ಎಲ್ಲದಕ್ಕಿಂತ ಮಿಗಿಲಾದದ್ದು ಎಂಬುದನ್ನು ಕಂಡುಕೊಂಡರು. ಆದುದರಿಂದಲೇ —

> ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ,
> ತರ್ಕದ ಬೆನ್ನ ಬಾರನೆತ್ತುವೆ, ಆಗಮದಮೂಗಕೊಯ್ಯುವೆ
> ನೋಡಯ್ಯ

ಎಂದು ಬಸವಣ್ಣನವರು ಸವಾಲುಹಾಕಿದರು.

> ವೇದ ಶಾಸ್ತ್ರ ಪುರಾಣಾಗಮಗಳೆಂಬ
> ಕೊಟ್ಟಣವ ಕುಟ್ಟುತ್ತಾ ನುಚ್ಚುತೌಡು ಕಾಣಿರೋ,

ಎಂದು ಅಕ್ಕಮಹಾದೇವಿ, ಅವುಗಳ ನಿರರ್ಥಕತೆಯನ್ನು ಘೋಷಿಸಿದಳು. "ವೇದವನೋದಿದರೇನು, ಶಾಸ್ತ್ರವ ಕೇಳಿದರೇನು"-ಎಂಬುದೇ ಈ ವಚನಕಾರರ ಮುಖ್ಯ ಧೋರಣೆಯಾಯಿತು. ವೇದೋಕ್ತವಾದ ಹಿಂದೂ ಧರ್ಮ, ತನ್ನ ವರ್ಣ ವ್ಯವಸ್ಥೆಯಿಂದ ವ್ಯಕ್ತಿಗಳಲ್ಲಿ ಶ್ರೇಷ್ಠ ಕನಿಷ್ಠರೆಂಬ ತಾರತಮ್ಯವನ್ನು ಕಲ್ಪಿಸುತ್ತಾ, ಯಜ್ಞ ಯಾಗಾದಿಗಳಿಂದ ಪ್ರಾಣಿ ವಧೆಯನ್ನು ಸಮರ್ಥಿಸುತ್ತಾ, 'ಸರ್ವಂ ಖಲ್ವಿದಂ ಬ್ರಹ್ಮ' – ಎಂದು ಉದ್‌ಘೋಷಿಸುವುದು ಎಷ್ಟು ವಿಲಕ್ಷಣ ಎಂದು ವಚನಕಾರರಿಗೆ ತೋರಿರಬಹುದು. ಅಲ್ಲದೆ ವ್ಯಕ್ತಿಯ ಆಧ್ಯಾತ್ಮಿಕಾನುಭವ ಎನ್ನುವುದು, ವೈಯಕ್ತಿಕ ಸಾಧನೆಯಿಂದ, ಶ್ರದ್ಧೆ–ನಿಷ್ಠೆ–ಸ್ವಾತ್ಮ ಪರಿಶೀಲನೆಗಳಿಂದ ಲಭಿಸತಕ್ಕದ್ದೆ ಹೊರತು ವೇದ-ಶಾಸ್ತ್ರಗಳ ಪಠನದಿಂದ, ಪರಂಪರಾಗತವಾದ ವಿಚಾರಗಳನ್ನು ನಂಬಿಕೆಗಳನ್ನು ಒಪ್ಪಿಕೊಳ್ಳುವುದರಿಂದ ಬರುವುದಲ್ಲ ಎನ್ನುವುದನ್ನು ಇವರು ಕಂಡುಕೊಂಡರು. 'ಅನುಭಾವ' ಅಥವಾ ಆಧ್ಯಾತ್ಮಿಕ ಅನುಭವ ಎನ್ನುವುದು 'ಅಂತರಂಗದ ರತ್ನ ಕಾಣಿರೋ' ಎಂದು ವಚನಕಾರರು ಹೇಳಿದ್ದು ಇದೇ ಅರ್ಥದಲ್ಲಿಯೇ.

ಸನ್ಯಾಸ, ತಪಸ್ಸು ಇವುಗಳೇ ಆಧ್ಯಾತ್ಮಿಕ ಸಾಧನೆಗೆ ಇರುವ ದಾರಿ ಎಂಬ ಪರಂಪರಾಗತವಾದ ಭಾವನೆಯನ್ನು ಶಿವಶರಣರು ಪುನರ್ ವಿಮರ್ಶೆಮಾಡಿ, ಅವುಗಳ ಅರ್ಥವನ್ನು ಪರಿಷ್ಕಾರಮಾಡಿದ್ದು, ಈ ವೈಚಾರಿಕತೆಯ ಇನ್ನೊಂದು ನಿದರ್ಶನ. 'ಸನ್ಯಾಸ' ಎಂದರೆ, ಹೆಂಡತಿ ಮಕ್ಕಳನ್ನು ತೊರೆದು, ಕಾಡಿಗೆ ಹೋಗಿ, ಗೆಡ್ಡೆಗೆಣಸುಗಳನ್ನು ತಿಂದು, ಒಮ್ಮೊಮ್ಮೆ ಅದೂ ಇಲ್ಲದೆ ಶರೀರವನ್ನು ದಂಡಿಸುವುದು ಎಂಬ ಭಾವನೆ, ಮುಖ್ಯವಾಗಿ ಬೌದ್ಧ ಹಾಗೂ ಜೈನ ಧರ್ಮಗಳಿಂದಾಗಿ ಪ್ರಚಲಿತವಾಗಿತ್ತು. ಜೈನರು ತಪಸ್ಸಿನ ಹೆಸರಿನಲ್ಲಿ, ಮಾಡಿಕೊಳ್ಳುವ ಕೇಶಲುಂಛನ, ಪರೀಷಹಗಳಜಯ-ಇತ್ಯಾದಿಗಳಿಂದ ಸನ್ಯಾಸವೆಂದರೆ, ಸಾಮಾನ್ಯರಲ್ಲಿ ಒಂದು ರೀತಿಯ ಭಯವೇ ಹುಟ್ಟಿಕೊಂಡಿದ್ದರೆ ಆಶ್ಚರ್ಯವಿಲ್ಲ. ವಚನಕಾರರ ಪ್ರಕಾರ ಸನ್ಯಾಸ ಎನ್ನುವುದು, ಸಂಸಾರಕ್ಕೆ ವಿರುದ್ಧವಾದುದಲ್ಲ, ಮತ್ತು ಕಾಡಿಗೆ ಹೋಗಿ ದೇಹ ದಂಡನೆ ಮಾಡಿಕೊಳ್ಳುವುದೂ ಅಲ್ಲ. ಅದು ಒಂದು ಚಿತ್ತದ ಸಮಾಧಾನ ಸ್ಥಿತಿಯನ್ನು ಸಾಧಿಸುವ ವಿಧಾನ. ಅದಕ್ಕೆ ಕಾಡಿಗೆ ಓಡಬೇಕಾಗಿಲ್ಲ –

ಮಠವೇಕೋ ಪರ್ವತವೇಕೋ
ಜನವೇಕೋ, ನಿರ್ಜನವೇಕೋ
ಚಿತ್ತಸಮಾಧಾನ ಉಳ್ಳ ಶರಣಂಗೆ ?

ಎನ್ನುವುದು ಈ ವೈಚಾರಿಕತೆಯ ಪ್ರಶ್ನೆ. ತಪಸ್ಸಿನ ಹೆಸರಿನಲ್ಲಿ ದೇಹ ದಂಡನೆ ಮಾಡುವವರನ್ನು ಕುರಿತು 'ಹುತ್ತವ ಬಡಿದಡೆ ಹಾವು ಸಾಯಬಲ್ಲುದೆ ಅಯ್ಯ ?' ಎಂದು ಬಸವಣ್ಣನವರು ಕೇಳುತ್ತಾರೆ. ದೇಹ ದಂಡನೆ ಎಂಬುದು ಕೇವಲ ಹುತ್ತವನ್ನು ಬಡಿಯುವ ವ್ಯರ್ಥ ಪ್ರಯತ್ನ; ಒಳಗಿನ ವಿಷ ತುಂಬಿಕೊಂಡ ಹಾವು ಇದ್ದ ಹಾಗೆ ಇರುತ್ತದೆ. ಆದುದರಿಂದ ಇದ್ದಲ್ಲೇ ಇದ್ದು ಮನಸ್ಸನ್ನು ಹದಗೊಳಿಸುವುದೇ ನಿಜವಾದ ಸನ್ಯಾಸ, ಆಧ್ಯಾತ್ಮಿಕ ಸಾಧನೆ. ಇದಕ್ಕಾಗಿ ಸಂಸಾರವನ್ನಾಗಲಿ, ಗೃಹಸ್ಥ ಧರ್ಮವನ್ನಾಗಲೀ ಬಿಡಬೇಕಾಗಿಲ್ಲ, ದೇವರ ದಾಸಿಮಯ್ಯ ಹೇಳುತ್ತಾನೆ, "ಸತಿ-ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ" ಎಂದು. " ಹಾವಿನ ಬಾಯ ಹಲ್ಲ ಕಳೆದು ಹಾವ ನಾಡಿಸಬಲ್ಲಡೆ, ಹಾವಿನ ಸಂಗವೇ ಲೇಸು ಕಂಡಯ್ಯ ! " ಎನುತ್ತಾಳೆ ಅಕ್ಕಮಹಾದೇವಿ. ಈ ಸಂಸಾರವೆಂಬುದು ಹಾವು ನಿಜ. ಆದರೆ, ಕಳೆಯಬೇಕಾದದ್ದು ಹಾವನ್ನಲ್ಲ; ಅದರ ಹಲ್ಲನ್ನು. ಈ ಹಾವಿನ ಬಾಯ ಹಲ್ಲನ್ನು ತೆಗೆದು, ಬೇಕಾದ ಹಾಗೆ ಅದರ ಜತೆ ಇರಬಹುದು. ಸಂಸಾರದಲ್ಲಿನ, ಸ್ವಾರ್ಥ-ಮೋಹಗಳ ಹಲ್ಲನ್ನು ತೆಗೆಯುವ, ಅದನ್ನು ಪಳಗಿಸುವ ಕೌಶಲವೇ ನಿಜವಾದ ತಪಸ್ಸು. ಹೀಗೆ ಸಂಸಾರವನ್ನೂ, ಸನ್ಯಾಸವನ್ನೂ, ಸಾಹಿತ್ಯವನ್ನೂ ಸಮನ್ವಯಗೊಳಿಸುವ ಈ ವೈಚಾರಿಕತೆಯಲ್ಲಿ ಇನ್ನೊಂದು ಮುಖ್ಯವಾದ ಮಾತೆಂದರೆ, ಸ್ತ್ರೀಯರು ತಪಸ್ಸಿಗೆ ವಿಘ್ನಕಾರಿಯರಲ್ಲ, ಮತ್ತು ಅವರಿಗೆ ಆಧ್ಯಾತ್ಮಿಕ ಸಾಧನೆಯಲ್ಲಿ ಗಂಡಸಿಗಿರುವಷ್ಟೇ ಸ್ವಾತಂತ್ರ್ಯವಿದೆ ಎನ್ನುವುದು. ವೈದಿಕ, ಜೈನ, ಬೌದ್ಧ ಮತಗಳು ಸ್ತ್ರೀಯರು ಪುರುಷರಷ್ಟೇ ಸಮಾನ ಎಂದು ಒಪ್ಪುವುದಿಲ್ಲ. ವೈದಿಕ ಧರ್ಮದ ಪ್ರಕಾರ ಸ್ತ್ರೀಯರಿಗೆ ವೇದಾಧಿಕಾರವಿಲ್ಲ; ಅವರಂತೆ ಜನ್ನಿವಾರವನ್ನು ಧರಿಸುವ ಹಕ್ಕಿಲ್ಲ. ಬೌದ್ಧ ಧರ್ಮವಂತೂ ಮೊದ ಮೊದಲು ಸ್ತ್ರೀಯರಿಗೆ ಪ್ರವೇಶವನ್ನೇ ನಿರಾಕರಿಸಿತು; ಜೈನ ಧರ್ಮದ ಪ್ರಕಾರ ಸ್ತ್ರೀ ಮೋಕ್ಷಕ್ಕೆ ಅರ್ಹಳಲ್ಲ; ಒಂದು ವೇಳೆ ಮೋಕ್ಷವನ್ನು ಪಡೆಯಬೇಕಾದರೆ ಆಕೆ ಮುಂದಿನ ಭವಗಳಲ್ಲಿ ಗಂಡಾಗಿ ಹುಟ್ಟಬೇಕು. ಸ್ತ್ರೀಯರನ್ನು ಕುರಿತ 'ವಿಚಾರ' ಹೀಗಿರುವಾಗ, ವಚನಕಾರರು ಈ ಭಾವನೆಯನ್ನು ವಿಮರ್ಶಿಸಿ ಇದು ಎಷ್ಟು ಅಸಂಬದ್ಧವೆನ್ನುವುದನ್ನು ಎತ್ತಿತೋರಿಸಿದರು. ಗಂಡಿಗೂ ಹೆಣ್ಣಿಗೂ ಇರುವ ವ್ಯತ್ಯಾಸ ಯಾವುದು ? –

ಮೊಲೆ ಮುಡಿಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವಾತ್ಮನು, ಗಂಡೂ ಅಲ್ಲ,
ಹೆಣ್ಣೂ ಅಲ್ಲ ಕಾಣಾ ರಾಮನಾಥ.

ಎನ್ನುತ್ತಾನೆ ದೇವರ ದಾಸಿಮಯ್ಯ. ಈ ವಿಚಾರ ಅತ್ಯಂತ ತಾರ್ಕಿಕವೂ, ಪಕ್ಷಪಾತರಹಿತವೂ ಆಗಿದೆ. ಹೆಣ್ಣು ಎಂದರೆ, ತಪಸ್ಸಿಗೆ ವಿರೋಧಿ, ಮಾಯೆ, ಮೋಹ ಇತ್ಯಾದಿ ಅಪಸ್ವರಗಳು ಪಾರಂಪರಿಕವಾಗಿ ಬಂದವುಗಳು. ಮಾಯೆ ಎಂದರೆ ಹೆಣ್ಣು ಎಂಬುದು ಎಂಥ ಅಸಂಬದ್ಧ,

ಹೆಣ್ಣು ಮಾಯೆಯೆಂಬರು, ಹೊನ್ನು ಮಾಯೆ ಎಂಬರು,
ಮಣ್ಣು ಮಾಯೆ ಎಂಬರು;
ಹೆಣ್ಣು ಮಾಯೆ ಅಲ್ಲ, ಹೊನ್ನು ಮಾಯೆ ಅಲ್ಲ,
ಮಣ್ಣು ಮಾಯೆ ಅಲ್ಲ.
ಮನದ ಮುಂದಣ ಆಸೆಯೆ ಮಾಯೆ ಕಾಣಾ
ಗುಹೇಶ್ವರ !

ಎನ್ನುತ್ತಾರೆ ಅಲ್ಲಮ ಪ್ರಭುಗಳು. 'ಮಾಯೆ' ಎಂಬ ಮಾತು ಬಂದಾಗಲೆಲ್ಲ, ಹಿಂದಿನ ಎಲ್ಲಾ ಧರ್ಮಗಳೂ ಹೆಣ್ಣನ್ನೇ ಮುಖ್ಯವಾಗಿ

ಹೇಳುತ್ತಾ ಬಂದಿವೆ. ಆದರೆ, ಗಂಡಿಗೆ ಹೆಣ್ಣು ಮಾಯೆ ಎನ್ನುವುದಾದರೆ, ಹೆಣ್ಣಿಗೂ, ಗಂಡು ಯಾಕೆ ಮಾಯೆ ಅಲ್ಲ? ಈ ಒಂದು ಮಾತನ್ನು ದಿಟ್ಟತನದಿಂದ ಹೇಳಿದವಳು ಅಕ್ಕಮಹಾದೇವಿ ಒಬ್ಬಳೇ,-

'ಗಂಡಿಂಗೆ ಹೆಣ್ಣಾಗಿ ಕಾಡಿತ್ತು ಮಾಯೆ,
ಹೆಣ್ಣಿಂಗೆ ಗಂಡಾಗಿ ಕಾಡಿತ್ತು ಮಾಯೆ'

ಎಂಬ ಮಾತಿನಲ್ಲಿ ಪ್ರತಿಭಟನೆಯ ಧ್ವನಿ ಕೇಳಿಸದಿದ್ದರೂ, ಪ್ರತಿಭಟನೆಯ ವಿಚಾರ ಮಾತ್ರ ಸ್ಫುಟವಾಗಿದೆ. ಉಪನಿಷತ್ ಕಾಲದಲ್ಲಿದ್ದು, ಅನಂತರ ಕಳೆದುಕೊಂಡ ಸ್ಥಾನಮಾನಗಳನ್ನು ಮತ್ತೆ ಸ್ತ್ರೀಯರಿಗೆ ದೊರಕಿಸಿಕೊಟ್ಟದ್ದು ವಚನಕಾರರ ವಿಚಾರ ಕ್ರಾಂತಿ. ವಚನಕಾರರಿಂದಾಗಿ, ಸ್ತ್ರೀಗೆ ಧಾರ್ಮಿಕ ಸ್ವಾತಂತ್ರ್ಯ ಲಭಿಸಿತು; ಸರಿಸಮಾನವಾಗಿ ಗೋಷ್ಠಿಗಳಲ್ಲಿ ಕೂತು ವಿಚಾರ ವಿನಿಮಯ ಮಾಡುವ ಸಮಾನತೆ ಲಭಿಸಿತು.

ದೇವರನ್ನು ಕುರಿತ ಕಲ್ಪನೆಯ ಬಗೆಗೂ ವಚನಕಾರರ ವಿಚಾರಗಳು ಪರಂಪರೆಯಿಂದ ಭಿನ್ನವಾಗಿವೆ. ವೇದೋಪನಿಷತ್ತುಗಳ ದೇವರ ವಿರಾಟ್ ಕಲ್ಪನೆ, ಪುರಾಣ ಆಗಮಗಳ ಕಾಲದಲ್ಲಿ ಅವತಾರ ಕಲ್ಪನೆಗಳಿಂದ ರಂಜಕವೂ, ಪರಿಮಿತವೂ ಆದ ಸ್ಥಿತಿಗೆ ಇಳಿಯಿತು. ಅಸಂಖ್ಯ ದೇವರುಗಳೂ ಅವುಗಳ ಲೀಲೆಗಳನ್ನು ಕುರಿತ ಪುರಾಣಗಳೂ, ಅನೇಕ ಜಾತಿ-ಮತ-ಪಂಥಗಳ ಮತ್ತು ಅರ್ಥವಿಲ್ಲದ ಆಚಾರ-ವಿಚಾರಗಳ ಹುಟ್ಟಿಗೆ ಮತ್ತು ದೇವಸ್ಥಾನಗಳ ನಿರ್ಮಾಣಕ್ಕೆ ಕಾರಣವಾಯಿತು. ದೇವಸ್ಥಾನಗಳ ನಿರ್ಮಾಣ ಪುಣ್ಯ ಸಂಪಾದನೆಯ ಅಥವಾ ಸ್ವರ್ಗಸುಖ ಪ್ರಾಪ್ತಿಯ ಸಾಧನವೆಂದು ಉಳ್ಳವರನ್ನು ಶಾಸ್ತ್ರಗಳು ನಂಬಿಸಿದವು. ದೇವಸ್ಥಾನಗಳು ಉಚ್ಚ ವರ್ಗದ ಪುರೋಹಿತರ ಸ್ವತ್ತುಗಳಾಗಿ, ಭಕ್ತಾದಿಗಳನ್ನು ಸುಲಿಯುವ ತಂತ್ರಗಳಾದವು. ಇಂತಹ ಹಿನ್ನೆಲೆಯಲ್ಲಿ, ದೇವರು, ದೇವಸ್ಥಾನಗಳನ್ನು ಕುರಿತು ವಚನಕಾರರು ನಡೆಯಿಸಿದ ವಿಚಾರ ಗಮನಾರ್ಹವಾಗಿದೆ. ಮೊದಲನೆಯ ವಿಚಾರವೆಂದರೆ, ದೇವಸ್ಥಾನಗಳನ್ನು ನಿರಾಕರಿಸುವುದು. ಹಾಗೆ ಮಾಡುವುದರಿಂದ, ಪುರೋಹಿತ ವರ್ಗದವರು ದೇವಸ್ಥಾನದ ನೆಪದಲ್ಲಿ ಧರ್ಮದ ಹೆಸರಿನಲ್ಲಿ ಜನರನ್ನು ಶೋಷಿಸುವುದನ್ನು ತಪ್ಪಿಸುವುದರ ಜೊತೆಗೆ, ದೇವಸ್ಥಾನಗಳು, ಕೆಲವರಿಗೆ ಪ್ರವೇಶವನ್ನು ದೊರಕಿಸುವ ಇನ್ನು ಕೆಲವರಿಗೆ ಹೀನ ಕುಲದವರೆಂಬ ಕಾರಣದಿಂದ, ಪ್ರವೇಶವನ್ನು ನಿರಾಕರಿಸುವ ತರ-ತಮ ಭಾವಗಳನ್ನೆ ತೊಡೆದು ಹಾಕುವುದೂ ದುಸಾಧ್ಯವಾಗುತ್ತದೆ-ಎಂದು ಯೋಚಿಸಿದರು.ಎರಡನೆಯದಾಗಿ ದೇವರ ಕಲ್ಪನೆಯನ್ನೆ ಬದಲಾಯಿಸಿದರು. ದೇವರೆಂದರೆ, ವಚನಕಾರರ ಪ್ರಕಾರ, ಪುರಾಣೋಕ್ತವಾದ ವರ್ಣರಂಜಿತವಾದ ಮೂರ್ತಿ ಅಲ್ಲ; ಅವರ ಪ್ರಕಾರ ಅದೊಂದು, ನಿರಾಕಾರಕ್ಕೆ ಸಮೀಪವಾದ ಸಂಕೇತ. ಅದನ್ನೆ ಅವರು 'ಲಿಂಗ'ವೆಂದು ಕರೆದರು. ಅದನ್ನು ವ್ಯಕ್ತಿ ಶರೀರದ ಮೇಲೆ ಧರಿಸಬೇಕು ಎಂದರು. ಅಂಗದ ಮೇಲೆ ಇರುವ ಈ ಲಿಂಗವೇ, ದೇವರ ಒಂದು ಸಾಂಕೇತಿಕ ರೂಪ ಎಂದು ಹೇಳುವುದರ ಮೂಲಕ ಭಕ್ತನಿಗೆ ಬಹಿರಂಗದ ದೇವಸ್ಥಾನಕ್ಕೆ ಹೋಗಬೇಕಾದ ಅಗತ್ಯವಿಲ್ಲದಂತೆ ಮಾಡಿದರು; ಈ ಲಿಂಗ ಇರುವ ಸ್ಥಳವೇ ದೇವಾಲಯ, ಅಂದರೆ ಭಕ್ತನಾದವನ 'ದೇಹವೇ ದೇಗುಲ' ಎಂಬ ಹೊಸ ಕಲ್ಪನೆಯನ್ನು ಕೊಟ್ಟರು,

ಉಳ್ಳವರು ಶಿವಾಲಯವ ಮಾಡುವರು
ನಾನೇನ ಮಾಡುವೆನು ಬಡವನಯ್ಯಾ
ಎನ್ನ ಕಾಲೇ ಕಂಭ, ದೇಹವೇ ದೇಗುಲ
ಶಿರವೇ ಹೊನ್ನಕಳಸವಯ್ಯಾ

ಎನ್ನುವ ಬಸವಣ್ಣನವರ ವಚನ ಈ ವೈಚಾರಿಕತೆಗೆ ನಿದರ್ಶನವಾಗಿದೆ. ದೇವರ ಕಲ್ಪನೆ ಐತಿಹಾಸಿಕವಾಗಿ, ನಿಸರ್ಗದಿಂದ ದೇಗುಲಕ್ಕೆ ಬಂದದ್ದು, ದೇಗುಲದಿಂದ ವ್ಯಕ್ತಿಯ ದೇಹಕ್ಕೆ ಸ್ಥಳಾಂತರಿತವಾದದ್ದು, ದೇವಸ್ಥಾನದ ಬದಲು ದೇಹವೇ ದೇಗುಲವಾದದ್ದು ತೀರಾ ಮಹತ್ವದ ಬದಲಾವಣೆ. ಇದರಿಂದ, ದೇವರು ಎನ್ನುವುದು ನಮ್ಮಿಂದಾಚೆಯದಲ್ಲ, ಅದು ನಮ್ಮ ಒಳಗಿನದು ಎನ್ನುವ ತಿಳಿವಳಿಕೆ ಹೊಸರೀತಿಯದಾಗಿದೆ. ದೇವಸ್ಥಾನಗಳನ್ನು ಕುರಿತ ಪ್ರತಿಭಟನೆ ವಚನಕಾರರ ಕಾಲದಲ್ಲಿ ಎದ್ದುಕಾಣುವಂಥದ್ದು,

ಕಟ್ಟಿದ ಲಿಂಗವ ಬಿಟ್ಟು, ಬೆಟ್ಟದ ಲಿಂಗಕ್ಕೆ ಹೋಗಿ
ಹೊಟ್ಟೆಯಡಿಯಾಗಿ ಬೀಳುವ, ಲೊಟ್ಟೆ ಮೂಗನ ಕಂಡರೆ
ಮೆಟ್ಟಿದ್ದ ಎಡಪಾದರಕ್ಷೆಯ ತಕ್ಕೊಂಡು
ಲಟಲಟನೆ ಹೊಡೆ ಎಂದ ಅಂಬಿಗರ ಚೌಡಯ್ಯ;

* * * *

ಹತ್ತು ಮತ್ತರಡ ಭೂಮಿ, ಬತ್ತದ ಹಯನು
ನಂದಾದೀವಿಗೆಯ ಮಾಡಿದೆನೆಂಬರ
ಮುಖವ ನೋಡಲಾಗದು,
ಅವರ ನುಡಿಯ ಕೇಳಲಾಗದು.

ಈ ಎರಡು ವಚನಗಳ ಧೋರಣೆಯನ್ನು ನೋಡಬೇಕು. ಮೊದಲನೆಯದು ದೇವಸ್ಥಾನಕ್ಕೆ ಹೋಗುವವರನ್ನು ಕುರಿತ ಪ್ರತಿಭಟನೆಯಾದರೆ, ಎರಡನೆಯದು, ದೇವಸ್ಥಾನಕ್ಕಾಗಿ ದಾನದತ್ತಿಗಳನ್ನು ಬಿಡುವ ಶ್ರೀಮಂತರನ್ನು ಕುರಿತ ಪ್ರತಿಭಟನೆಯಾಗಿದೆ. ಈ ಪ್ರತಿಭಟನೆಯ ಅಂಶ ವಚನಕಾರರ ವೈಚಾರಿಕತೆಯ ಪ್ರಧಾನವಾದ ಲಕ್ಷಣವಾಗಿದೆ.

ವಚನಕಾರರ ವಿಚಾರ ಕ್ರಾಂತಿಯ ಮತ್ತೊಂದು ಅಂಶವೆಂದರೆ, ಇಹ-ಪರಗಳನ್ನು ಕುರಿತ ಪರಂಪರಾಗತವಾದ ಭಾವನೆಯನ್ನು ಚಿಕಿತ್ಸೆಗೆ ಗುರಿಪಡಿಸಿದ್ದು: ಈ ದೇಶದ ರೂಢಿಗತವಾದ ನಂಬಿಕೆ ಯಾವುದೋ ಒಂದು ಘಟ್ಟದಲ್ಲಿ ಈ ಬದುಕನ್ನು ಇಹ ಮತ್ತು ಪರ ಎಂದು ವಿಭಾಗಿಸಿ, ಇಲ್ಲದ ಗೊಂದಲವನ್ನು ತಂದಿತು ಎಂದು ನಮ್ಮ ಅಭಿಪ್ರಾಯ. 'ಇಹಲೋಕದ ಕರ್ಮಗಳನ್ನು ಮಾಡುತ್ತಲೇ ನೂರು ವರ್ಷಗಳ ಕಾಲ ಬದುಕೋಣ', 'ನೂರು ಶರದ್ ಋತುಗಳನ್ನು ನೋಡೋಣ' ಎಂಬ ಉಪನಿಷತ್‌ಕಾಲದ ಜೀವನ ಪ್ರೀತಿ, ಬರಬರುತ್ತಾ, ಈ ಲೋಕವನ್ನು ತಿರಸ್ಕರಿಸುವ, ಸ್ವರ್ಗವನ್ನು ಬಯಸುವ ಒಂದು ಪ್ರವೃತ್ತಿಯಾಗಿ, ಇಹದ ಬದುಕನ್ನು ದ್ವಂದ್ವದ ಗೊಂದಲಕ್ಕೆ ಸಿಕ್ಕಿಸಿತು. ಇದು ಎಷ್ಟು ದೂರಾ ಬಂತೆಂದರೆ, 'ಇಹ'ದ ಬದುಕೇ

ನಿದ್ದರೂ ಅನಿಷ್ಟ, ಅಶಾಶ್ವತ, ಪರವೆಂಬುದೇ ಮನುಷ್ಯನ ಬದುಕಿನ ಗುರಿ; ಇಹದ ಸಮಸ್ತವೂ, ಆ 'ಪರ'ಕ್ಕಾಗಿ ಮಾಡಿಕೊಳ್ಳುವ ಪೂರ್ವ ಸಿದ್ಧತೆ, ಎಂಬ ಜೀವನ ವಿಮುಖ ಧೋರಣೆಯಾಯಿತು. ಇದರಿಂದ ಜೀವನ ಪ್ರೀತಿಯು ನಷ್ಟವಾಗಿ, ಇಹದ ಜೀವನ ಎಂಬುದು ನಿಕೃಷ್ಟ ವಾಯಿತು. ಈ ಭಾವನೆಯನ್ನು ಬೌದ್ಧ, ಜೈನ ಧರ್ಮಗಳೂ ತಕ್ಕಷ್ಟು ಪುಷ್ಟಿಗೊಳಿಸಿವೆ ಎಂಬುದರಲ್ಲಿ ಸಂಶಯವಿಲ್ಲ. 'ಅಲ್ಲಿಹುದು ನಮ್ಮ ಮನೆ,ಇಲ್ಲಿ ಬಂದೆ ಸುಮ್ಮನೆ', 'ಮನುಜ ಶರೀರವಿದೇನು ಸುಖ', 'ನಾ ಮಾಡಿದ ಕರ್ಮ ಬಲವಂತವಾದರೆ ನೀ ಮಾಡುವುದೇನೋ ಹರಿಯೆ' – ಎಂಬ ವೈಷ್ಣವ ಕೀರ್ತನೆಗಳಲ್ಲೂ ಈ ಭಾವನೆ ಮುಂದು ವರಿದಿದೆ. ವಚನಕಾರರು, ಈ ಭಾವನೆಯನ್ನು ನಿರಾಕರಿಸಿ 'ಇಹ–ಪರ' ಗಳ ಸಮನ್ವಯವನ್ನು ಸಾಧಿಸಿದರು. ಪರದ ನಿರಾಕರಣೆ ಮಾಡದೆ ಇಹವನ್ನು ಒಪ್ಪಿಕೊಳ್ಳುವ ಧೋರಣೆಯನ್ನು ರೂಪಿಸಿದ್ದು ಇವರ ವಿಶೇಷತೆ,

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ
ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ
(ಬಸವಣ್ಣ)

ಎನ್ನುವುದೇ ಈ ವಿಚಾರ. ಈ ಮರ್ತ್ಯ ಎನ್ನುವುದು ಕರ್ತಾರನ ಟಂಕ ಸಾಲೆ, ಇದರಲ್ಲಿ ತಯಾರಾಗುವ ಜೀವನಾಣ್ಯ ಮೊದಲು ಇಲ್ಲಿ ಸಲ್ಲು ವಂತಿರಬೇಕು; ಹಾಗಾದರೆ ಅದು ಅಲ್ಲೂ (ಪರದಲ್ಲೂ) ಸಲ್ಲುತ್ತದೆ. ಈ ಬದುಕಿನ ಅನಿವಾರ್ಯತೆ, ಅದರಿಂದ ಜೀವನಕ್ಕೆ ಪ್ರಾಪ್ತವಾಗುವ ಬೆಲೆಯನ್ನು ಹೇಳಿದ್ದಷ್ಟೆ ಅಲ್ಲ, ಬದುಕಿನ ಬಗ್ಗೆ ವೀರಭಾವನನ್ನು ತಾಳಬೇಕೆಂಬುದನ್ನು ಹೇಳಿದರು.

ಕೊಟ್ಟೆ ಕುದುರೆಯನೇರಲರಿಯದೆ
ಮತ್ತೊಂದ ಬಯಸುವವರು
ವೀರರೂ ಅಲ್ಲ, ಧೀರರೂ ಅಲ್ಲ
(ಪ್ರಭುದೇವ)

ಎಂಬ ವಚನದಲ್ಲಿ ಅದನ್ನು ಗುರುತಿಸಬಹುದು. ಇಹದ ಜೀವನ ಎಂಬುದು ಒಂದು 'ಕೊಟ್ಟೆ ಕುದುರೆ', ಇದನ್ನು ಏರಿ ಸವಾರಿ ಮಾಡ ಬೇಕು. ಹಾಗೆ ಮಾಡದೆ ತಪ್ಪಿಸಿಕೊಳ್ಳುವವರು 'ವೀರರೂ ಅಲ್ಲ, ಧೀರರೂ ಅಲ್ಲ'. ಇದು ಇಹದ ಬದುಕನ್ನು ಒಂದು ಸವಾಲಿನಂತೆ ಒಪ್ಪಿಕೊಳ್ಳಬೇಕಾದ ರೀತಿ. ಹಾಗೆಯೆ ಬರುವ ಸುಖ–ದುಃಖಗಳನ್ನು ಪೂರ್ವ ಜನ್ಮದ ಪುಣ್ಯ ಹಾಗೂ ಪಾಪಗಳ ಪರಿಣಾಮವೆಂದು ಒಪ್ಪಿ ಕೊಳ್ಳುವುದೂ ತೀರಾ ದುರ್ಬಲವಾದ ಮನೋಧರ್ಮ.ಇದಾವುದನ್ನೂ ಯೋಚಿಸದೆ, ಇದ್ದದ್ದನ್ನು ಇದ್ದಂತೆಯೆ ಒಪ್ಪಿಕೊಳ್ಳಬೇಕು; ಬಸವಣ್ಣ ನವರು ಒಂದೆಡೆ,

ಸುಖ ಬಂದರೆ ಪುಣ್ಯದ ಫಲ ಎನ್ನೆನು;
ದುಃಖ ಬಂದರೆ ಪಾಪದ ಫಲ ಎನ್ನೆನು.
ನೀ ಮಾಡಿದೊಡೆ ಆಯಿತ್ತು ಎನ್ನೆನು.
ಸಂಸಾರದ ಸವೆಯೆ ಬಳಸುವೆನು

ಎನ್ನುತ್ತಾರೆ. ಸಂಸಾರವನ್ನು, ಅದು ಇದ್ದಂತೆಯೆ, ಸವೆಯುವಂತೆ ಬಳಸುತ್ತೇನೆ, ಒಂದು ತ್ರೊಟ್ಟು ಬಿಡದೆ ಹೀರುತ್ತೇನೆ ಎನ್ನುತ್ತಾರೆ. ಈ ಕೆಲವು ಮಾತುಗಳಲ್ಲಿ ವಚನಕಾರರು ಲೋಕವನ್ನು ಒಪ್ಪಿಕೊಳ್ಳುವ ಈ ದೃಷ್ಟಿ ಭಾರತೀಯ ತಾತ್ವಿಕ ಇತಿಹಾಸದಲ್ಲಿ ಅಪೂರ್ವವಾದ ಒಂದು ನಿಲುವು ಅನ್ನಿಸುತ್ತದೆ.

ಇದು 'ಇಹ'ದ ಮಾತಾಯಿತು. 'ಪರ' ಎಂದೊಡನೆಯೇ ಈ ದೇಶದ ಜನಮನದಲ್ಲಿ ತೆರೆಯುವ ಚಿತ್ರಗಳು, ವಿಚಿತ್ರ–ಸ್ವರ್ಗ, ನರಕ, ಕಾಮಧೇನು, ಕಲ್ಪವೃಕ್ಷ, ಅಪ್ಸರೆಯರು ಇತ್ಯಾದಿ. ಆದರೆ ವಚನ ಕಾರರು ದೇವಲೋಕ, ಸ್ವರ್ಗ, ನರಕಗಳನ್ನು ಕುರಿತು ಜನರಲ್ಲಿ ಪ್ರಚಲಿತವಾದ ನಂಬಿಕೆಗಳನ್ನು ತಲೆಕೆಳಗೆ ಮಾಡಿದರು; ಅಷ್ಟೇ ಅಲ್ಲ ಅವುಗಳ ಅರ್ಥವನ್ನು ಬೇರೊಂದು ರೀತಿ ವಿವರಿಸಿದರು. ಬಸವಣ್ಣ ನವರು,

' ಅಯ್ಯಾ ಎಂದರೆ ಸ್ವರ್ಗ
ಎಲವೋ ಎಂದರೆ ನರಕ '

ಎಂಬ ಎರಡು ಮಾತಿನಲ್ಲಿ ಅದನ್ನು ವ್ಯಾಖ್ಯಾನಿಸಿದ್ದಾರೆ. ಅವರ ಪ್ರಕಾರ ಸ್ವರ್ಗ ಎನ್ನುವುದು ಸತ್ತ ಮೇಲೆ ದೊರೆಯುವ ಒಂದು ಸ್ಥಿತಿ ಅಲ್ಲ; ನರಕವೂ ಅಷ್ಟೆ. ನಾವು ಎಂದೂ ಕಾಣದೆ ಇರುವ ಆ ಲೋಕ ಗಳ ಬಗ್ಗೆ ಕಲ್ಪನೆ ಕಟ್ಟಿಕೊಳ್ಳುವ ಬದಲು, ಅವೆರಡೂ ನಮ್ಮ ವಾಸ್ತವವಾದ ಬದುಕಿನಲ್ಲೇ ಇವೆ–ಎಂದು ಹೇಳಿದರು. 'ಅಯ್ಯಾ ಎಂದರೆ ಸ್ವರ್ಗ': ನಮ್ಮ ಸುತ್ತಣ ಜನರೊಂದಿಗೆ ಮಾತನಾಡುವಾಗ, ವ್ಯವಹರಿಸುವಾಗ, ಅವರನ್ನು ಗೌರವದಿಂದ, ವಿಶ್ವಾಸದಿಂದ ಅಯ್ಯಾ ಎಂದು ಕರೆದರೆ ಅದೇ ಸ್ವರ್ಗ. ಅದರ ಬದಲು 'ಎಲವೋ' ಎಂದು ಒರಟುತನದಿಂದ, ಮರ್ಯಾದೆ ಕೊಡದೆ ವ್ಯವಹರಿಸಿದರೆ ಅದೇ ನರಕ. ವಿಶ್ವಾಸದ, ಗೌರವದ ಮಾತು ಜನದೊಂದಿಗೆ ಆತ್ಮೀಯತೆ ಯನ್ನು ಹುಟ್ಟಿಸುತ್ತದೆ; ಅವರ ಸಂತೋಷವನ್ನು ವರ್ಧಿಸುತ್ತದೆ. ಪರ ಸ್ಪರ ವ್ಯವಹಾರ ಸುಖದಿಂದ ಕೂಡಿರುತ್ತದೆ. ಸುತ್ತಣ ಜನದೊಂದಿಗೆ ಈ ರೀತಿ ಸಂತೋಷದಿಂದ ಇರುವುದಾದರೆ, ಅದಕ್ಕಿಂತ ಬೇರೆಯ 'ಸ್ವರ್ಗ' ಉಂಟೆ ? ಹಾಗೆಯೆ 'ಎಲವೊ' ಎಂದು ಒರಟು ಮಾತನಾಡಿ, ತನ್ನ ಸುತ್ತಣವರಲ್ಲಿ ತಿರಸ್ಕಾರ,ಅಸೂಯೆ, ಘರ್ಷಣೆಗಳನ್ನು ಹೆಚ್ಚಿಸಿ ಇರುವ ಬದುಕನ್ನು ಬಗ್ಗಡ ಮಾಡಿಕೊಂಡರೆ, ಅದಕ್ಕಿಂತ ಬೇರೆಯ 'ನರಕ' ಉಂಟೆ ? ಸ್ವರ್ಗ-ನರಕಗಳೆರಡೂ ನಾವೇ ನಮ್ಮ ನಡವಳಿಕೆ ಯಿಂದ ನಿರ್ಮಿಸಿಕೊಳ್ಳಬಹುದಾದ 'ಲೌಕಿಕ' ಸ್ಥಿತಿಗಳೇ ಹೊರತು ಬೇರೆ ಅಲ್ಲ. ನಮಗೆ ತೋರುವ ಮಟ್ಟಿಗೆ, ಸ್ವರ್ಗ–ನರಕಗಳ ಬಗೆಗೆ ಬಸವಣ್ಣನವರು ಕೊಟ್ಟಂತಹ ಹೊಸ ಸೂತ್ರವನ್ನು ಯಾರೂ ಕೊಟ್ಟಿಲ್ಲ. ಸಾಮಾನ್ಯ ಜನದೊಂದಿಗೆ ವ್ಯವಹರಿಸಬೇಕಾದ ಬಸವಣ್ಣ ನವರು, 'ಪುರೋಹಿತ'ರಂತೆ, ಸ್ವರ್ಗ-ನರಕಗಳನ್ನು ಕುರಿತ ಅವರ ನಂಬಿಕೆಗಳನ್ನು ತಮ್ಮ ಬಂಡವಾಳವನ್ನಾಗಿ ಮಾಡಿಕೊಳ್ಳದೆ, ಅವು ಗಳನ್ನು ಕುರಿತು, ಹೊಸ ತರ್ಕಸಮ್ಮತವಾದ ಅರ್ಥವನ್ನು ಹಚ್ಚಿದ್ದು ಅವರ ವೈಚಾರಿಕತೆಗೆ ಸೊಗಸಾದ ನಿದರ್ಶನವಾಗಿದೆ. ದೇವಸ್ಥಾನ ನಿರ್ಮಾಣ, ಯಜ್ಞ ಯಾಗಾದಿಗಳ ಆಚರಣೆ ಇವುಗಳಿಂದ ಸ್ವರ್ಗ

ಪ್ರಾಪ್ತಿಯಾಗುತ್ತದೆ, ಎಂದು ಶಾಸ್ತ್ರಗಳ ಸಹಾಯದಿಂದ ನಂಬಿಸಿ, ಜನರನ್ನು ಸುಲಿಗೆ ಮಾಡುವ 'ಪುರೋಹಿತಷಾಹಿ'ಯ ತಂತ್ರಗಳನ್ನು ವಿಫಲಗೊಳಿಸಬೇಕಾದರೆ, ದೇವರ ಹಾಗೂ ಸ್ವರ್ಗ-ನರಕಗಳ ಕಲ್ಪನೆಯನೆ ಜನಮನದಲ್ಲಿ ಮಾರ್ಪಡಿಸುವ ಅಗತ್ಯ ವಿಶೇಷವಾಗಿತ್ತು. ಆ ಕಾರ್ಯವನ್ನು ತಮ್ಮ ಹೊಸ ವಿಚಾರ ಕ್ರಾಂತಿಯಿಂದ, ವಚನಕಾರರು ನೋಡಲು ಪ್ರಯತ್ನಪಟ್ಟರು.

ಸ್ತ್ರೀಪುರುಷರ ನಡುವಣ ಭೇದವನ್ನು ಕುರಿತು, ವಚನಕಾರರು ಪ್ರತಿಭಟಿಸಿ ಸ್ತ್ರೀಯರಿಗೆ ಪುರುಷರೊಂದಿಗೆ ಆಧ್ಯಾತ್ಮಿಕ, ಸಾಮಾಜಿಕ ಸಮಾನತೆಯನ್ನು ತಂದುಕೊಟ್ಟದ್ದಲ್ಲದೆ, ಸಾಮಾಜಿಕವಾದ ಅಸಮಾನತೆಗಳನ್ನು ಕುರಿತು ಅವರು ತೋರಿದ ಪ್ರತಿಭಟನೆಯೂ ಗಮನಿಸಬೇಕಾದದ್ದು. ವೈದಿಕ ಪರಂಪರೆಯ ವರ್ಣ ವ್ಯವಸ್ಥೆಯಿಂದಾಗಿ, ಉತ್ತಮ ಜಾತಿ, ಅಧಮ ಜಾತಿ ಎಂಬ ಅತಾರ್ಕಿಕವಾದ ಅಸಮಾನತೆ ಸಮಾಜದಲ್ಲಿದ್ದುದನ್ನು ಕಂಡ ವಚನಕಾರರು, ತಾವು ಪ್ರವರ್ತನಗೊಳಿಸಿದ ಹೊಸ ಧರ್ಮದೊಳಕ್ಕೆ ಎಲ್ಲರನ್ನೂ ಕರೆದುಕೊಂಡು, ಸಮಾನತೆಯನ್ನು ಸ್ಥಾಪಿಸಲು ಪ್ರಯತ್ನಿಸಿದ್ದು ವಿಶೇಷದ ಸಂಗತಿ. 'ವಿಪ್ರ ಮೊದಲು, ಅಂತ್ಯಜ ಕಡೆಯಾಗಿ ಶಿವಭಕ್ತರೆಲ್ಲರನೂ ಒಂದೇ ಎಂಬೆ' ಎಂದ ಬಸವಣ್ಣನವರ ಮಾತು ಇದಕ್ಕೆ ಒಳ್ಳೆಯ ಉದಾಹರಣೆಯಾಗಿದೆ. ಅಂಬಿಗರ ಚೌಡಯ್ಯ, ಮಾದಾರ ಚೆನ್ನಯ್ಯ, ನುಲಿಯ ಚಂದಯ್ಯ-ಇತ್ಯಾದಿ ಶಿವಶರಣರ ಹೆಸರುಗಳನ್ನು ನೋಡಿದರೆ ಸಾಕು, ಅವರು ಯಾವಯಾವ ವೃತ್ತಿಯವರು ಮತ್ತು ಅಂದಿನ ಸಮಾಜದ ಯಾವಯಾವ ಸ್ತರಗಳಿಂದ ಅವರು ಬಂದಿರಬಹುದೆಂಬುದನ್ನು ಗುರುತಿಸಬಹುದು. 'ಶಿವಭಕ್ತರೆಲ್ಲರನೂ ಒಂದೇ ಎಂಬೆ' ಎಂಬ ಮಾತು, ಸಮಾನತೆಯನ್ನು ಸ್ಥಾಪಿಸುವ ಉದ್ದೇಶಕ್ಕೆ ವಿರೋಧಿಯಾಗಿಲ್ಲವೆ, ಸಮಾನರೆಂದು ಎಣಿಸಬೇಕಾದರೆ, ಅವರು 'ಶಿವಭಕ್ತ'ರಾಗಿರಬೇಕು ಎಂಬ ನಿಯಮವನವೇತಕ್ಕೆ-ಎಂದು ಇಂದಿನ ಉಗ್ರ ವಿಚಾರವಾದಿಗಳು ಹೇಳಬಹುದು. ಆದರೆ ಹನ್ನೆರಡನೆಯ ಶತಮಾನದಷ್ಟು ಹಿಂದೆ, ವಿವಿಧ ಮತ-ಧರ್ಮಗಳವರನ್ನು, ಯಾವುದೋ ಒಂದು ಮಿತಿಯಲ್ಲಿ ಕಲೆ ಹಾಕಿ, ಸಮಾನತೆಯನ್ನು ಆಚರಿಸಿ ತೋರಿಸಿದ್ದು ಮಹತ್ವದ ವಿಚಾರವಾಗಿದೆ-ಎಂಬುದನ್ನು ಮರೆಯಬಾರದು. ಇದಕ್ಕಿಂತ ಮಿಗಿಲಾಗಿ 'ಹೊಲೆತನ'ದ ಪ್ರಶ್ನೆಯನ್ನು ಬಿಡಿಸಿದ್ದು ವಚನಕಾರರ ಮಹತ್ಸಾಧನೆಗಳಲ್ಲಿ ಒಂದು. 'ಹೊಲೆಯ' ಎಂಬುದು, ಸಾಮಾಜಿಕವಾಗಿ ಅತ್ಯಂತ ಕೀಳು ವರ್ಗ-ಎಂದು ಪರಂಪರೆ ನಡೆಸಿಕೊಂಡು ಬಂದಿತ್ತು. ಬಸವಣ್ಣನವರಂಥ ವಚನಕಾರರಿಂದಾಗಿ, ಅಷ್ಟು ಹಿಂದೆಯೇ ಅವರಿಗೂ ಈ ಧರ್ಮದೊಳಕ್ಕೆ ಪ್ರವೇಶ ದೊರೆತು ಎಲ್ಲರೊಂದಿಗೂ ಸರಿಸಮಾನವಾಗಿ ಬದುಕುವ ಅವಕಾಶ ಅವರಿಗೆ ದೊರೆಯಿತು. 'ಹೊಲೆಯ'ಎನ್ನುವುದು ಒಂದು ಮನಃಸ್ಥಿತಿಯೇ ಹೊರತು, ಅದೊಂದು ಜಾತಿ ಅಲ್ಲ—ಎನ್ನುವುದೇ ಇವರ ವಿಚಾರ,

> ಕೊಲ್ಲುವವನೇ ಮಾದಿಗ
> ಹೊಲಸು ತಿಂಬವನೇ ಹೊಲೆಯ
> ....
> ಸಕಲ ಜೀವಾತ್ಮರಿಗೆ ಲೇಸನೇ ಬಯಸುವ
> ಕೂಡಲ ಸಂಗನ ಶರಣರೇ ಕುಲಜರು

ಎನ್ನುವುದು ಹೊಸ ಘೋಷಣೆ. ಹಿಂಸೆಯ, ಹೊಲಸಿನ ಮನೋಭಾವ ಹಾಗೂ ವೃತ್ತಿಯಿಂದ ಒಬ್ಬ ಕೀಳಾಗುತ್ತಾನೆಯೇ ಹೊರತು, ಅವನ ಹುಟ್ಟಿನಿಂದ ಅಲ್ಲ. 'ಸಕಲ ಜೀವಾತ್ಮರಿಗೆ ಲೇಸನೆ ಬಯಸುವ' ಉದಾರತೆ ಹಾಗೂ ಉದಾತ್ತ ನಡವಳಿಕೆಯುಳ್ಳವನೇ ನಿಜವಾದ 'ಕುಲಜ'ನ ಲಕ್ಷಣ. ಈ ಹೊಸ ವಿಚಾರ ಪರಂಪರಾಗತವಾದ ಜಾತಿಯ ಕಲ್ಪನೆಯನ್ನು ವಿರೋಧಿಸುತ್ತದೆ. ವಚನಕಾರರು, ಸಂಕ್ರಮಣ ಕಾಲದ ಸಮಾಜದಲ್ಲಿನ ಮೇಲು-ಕೀಳುಗಳನ್ನು ಉಗ್ರವಾಗಿ ಖಂಡಿಸಿ, ಸಾಧ್ಯವಾದಷ್ಟು ಸಮಾನತೆಯನ್ನು ನೆಲೆಗೊಳಿಸಲು ಹೇಗೆ ಪ್ರಯತ್ನಪಟ್ಟರೆಂಬುದನ್ನು ಅನೇಕ ವಚನಗಳು ಸ್ಪಷ್ಟಪಡಿಸುತ್ತವೆ.

'ಸಮಾನತೆ'ಗೆ ಇರುವ ಇನ್ನೊಂದು ಆತಂಕ 'ವೃತ್ತಿ'ಯದು ಎಂಬುದನ್ನು ವಚನಕಾರರು ಗುರುತಿಸಿದರು. ಅವನವನು ಅನುಸರಿಸುವ ವೃತ್ತಿಗಳೂ ಕೂಡಾ, ಹಿಂದಿನಿಂದ ಅವನವನ 'ಜಾತಿ'ಗೆ ಅಥವಾ ಸಮಾಜದಲ್ಲಿ ಆ ಜಾತಿಗೆ ಇದ್ದ ಸ್ಥಾನಕ್ಕೆ ಸಂಕೇತಗಳಾಗಿ ಪರಿಗಣಿತವಾಗಿದ್ದವು. ಆದುದರಿಂದ 'ವೃತ್ತಿ'ಯ ಮೇಲೆ ನಿಂತ 'ಮೇಲು-ಕೀಳು'ಗಳ ಭಾವನೆಯನ್ನು ಮಾರ್ಪಡಿಸದ ಹೊರತು, ಅವರೆಲ್ಲರೂ ಒಂದು ಸಮಾಜದವರು ಮತ್ತು ಸಮಾನರು ಎಂಬುದನ್ನು ರೂಢಿಸಲು ಸಾಧ್ಯವಾಗುವುದಿಲ್ಲ. ಇದಕ್ಕೆ ಇರುವ ದಾರಿ ಎಂದರೆ, 'ವೃತ್ತಿ'ಗಳೆಲ್ಲವೂ ಪೂಜ್ಯ, ಅವುಗಳಲ್ಲಿ ಯಾವ ವೃತ್ತಿಯೂ ಮೇಲಾದುದಲ್ಲ. ಯಾವ ವೃತ್ತಿಯೂ ಕೀಳಾದುದಲ್ಲ ಎಂದು ಪರಿಗಣಿಸುವುದು. ಆದುದರಿಂದ ವಚನಕಾರರು 'ಕಾಯಕ' ಎಂಬ ತತ್ವವೊಂದನ್ನು ಬೋಧಿಸಿದರು. ಕಾಯಕ ಎಂದರೆ ದೈಹಿಕ ಶ್ರಮ ಅಥವಾ ದುಡಿಮೆ ಎಂದು ಸಾಧಾರಣವಾದ ಅರ್ಥ. ಆದರೆ ವಚನಕಾರರ ಪ್ರಕಾರ 'ಕಾಯಕ' ಎಂದರೆ ಕೇವಲ ದುಡಿಮೆ ಅಥವಾ ದೈಹಿಕ ಶ್ರಮ ಅಲ್ಲ, ಪೂಜ್ಯ ಭಾವನೆಯಿಂದ, ಇದು ದೇವರ ಸೇವೆ ಎನ್ನುವ ಮನೋಧರ್ಮದಿಂದ ಮಾಡುವ ಕೆಲಸ ಎಂದು ಅರ್ಥ. ಇದು 'ಪೂಜ್ಯ' ಭಾವನೆಯಿಂದ ಮಾಡುವ ಕಾರ್ಯವಾದುದರಿಂದ, ಯಾರು ಯಾವ ಕೆಲಸವನ್ನು ಮಾಡಿದರೂ, ಅದನ್ನು ಒಂದೇ ಉದ್ದೇಶದಿಂದ ಮಾಡುವ ಕಾರಣ, ವೃತ್ತಿಗಳ ತರ-ತಮ ಭಾವನೆ ತಾನಾಗಿಯೇ ಹೋಗುತ್ತದೆ. 'ಕಾಯಕವೇ ಕೈಲಾಸ' ಎಂಬ ವಚನಕಾರರ ಮಾತು ಇದನ್ನೆ ಸ್ಪಷ್ಟಪಡಿಸುತ್ತದೆ. ಇದು ಕೆಲಸಮಾಡುವವರಿಗೆ ಇರಬೇಕಾದ ಒಂದು ಆಧ್ಯಾತ್ಮಿಕವಾದ ಚಿತ್ತಭಿತ್ತಿ. ಇನ್ನು ಸಾಮಾಜಿಕವಾಗಿ ಇದನ್ನು ರೂಢಿಸಬೇಕಾದರೆ, ಪ್ರತಿಯೊಬ್ಬರೂ, ಮತ್ತೊಬ್ಬರ 'ಕಾಯಕ' ಯಾವುದು ಎಂದು ಕೇಳಬಾರದು; ಅವನವನು ಅವನವನ ಸ್ಥಾನದಲ್ಲಿ ಮಾಡುವ ಕೆಲಸ ಮಾನ್ಯವಾದದ್ದು ಎಂದು ಭಾವಿಸಬೇಕು. ಮತ್ತೊಂದು ಅಂಶವೆಂದರೆ ಯಾವುದೇ ಸಮಾಜದಲ್ಲಿ ಸಮಾನತೆಯನ್ನು ತರಬೇಕಾದರೆ, ಕೆಲವರು ಬೆವರು ಸುರಿಸಿ ದುಡಿಯುವ,ಮತ್ತೆ ಕೆಲವರು ಏನೂ ಕೆಲಸ ಮಾಡದೆ ಕೂತು ಉಣ್ಣುವ ಪರಿಸ್ಥಿತಿ ಇರಬಾರದು. ಅವನು ಸನ್ಯಾಸಿಯೇ ಆಗಲಿ, ಸಂಸಾರಿಯೇ ಆಗಲಿ ಎಲ್ಲರೂ ದುಡಿದೇ ಬದುಕಬೇಕು – ಇದು ಕಾಯಕ ಎನ್ನುವ ಮಾತಿನ ಹಿಂದಿರುವ ಸಾಮಾಜಿಕ ತತ್ವ. ಈ ತತ್ವವನ್ನು ತಿಳಿಸುವ ಅನೇಕ ವಚನಗಳೂ, ಕೆಲವು ವಚನಕಾರರನ್ನು ಕುರಿತ ಪ್ರಸಂಗಗಳೂ ಇವೆ.

ಈ ಹಿನ್ನಲೆಯನ್ನು ನಿರ್ಮಿಸಿತು ವಚನಕಾರರ ವಿಚಾರಕ್ರಾಂತಿ. ಧರ್ಮವೆಂದರೆ ಬದುಕಿಗೆ ಇಳಿಯಲಾರದ, ಆದರ್ಶಗಳ, ಆಚಾರಗಳ, ನಂಬಿಕೆಗಳ ಒಂದು ಕಂತೆ – ಎಂದು ವಚನಕಾರರು ಭಾವಿಸಲಿಲ್ಲ. ಧ್ಯಾನ–ಪೂಜೆ–ಪ್ರಾರ್ಥನೆಗಳು ಇರುವುದು ವ್ಯಕ್ತಿಯ ಅಂತರಂಗವನ್ನು ಪರಿಶುದ್ಧಗೊಳಿಸಲು ಮತ್ತು ಮೃದುಗೊಳಿಸಲು. ಈ ಅಂತರಂಗ, ಬಹಿರಂಗದ ನಡವಳಿಕೆಗಳಲ್ಲಿಯೂ ಪ್ರಕಟವಾಗದಿದ್ದರೆ, ಆ ಅಂತರಂಗದ ಆಧ್ಯಾತ್ಮಿಕ ಸ್ಥಿತಿಗೆ ಏನೂ ಅರ್ಥವಿಲ್ಲ. ಹಾಗೆ ನೋಡಿದರೆ, ವ್ಯಕ್ತಿಯ ಬಹಿರಂಗದ ನಡವಳಿಕೆಯೇ ನಿಜವಾದ ತಪಸ್ಸಾಗಬೇಕು—

ಮೃದು ವಚನವೇ ಸಕಲ ಜಪಂಗಳಯ್ಯ
ಮೃದು ವಚನವೇ ಸಕಲ ತಪಂಗಳಯ್ಯ
ಸದು ವಿನಯವೇ ಸದಾಶಿವನ ಒಲುಮೆಯಯ್ಯ

ಎಂಬ ಬಸವಣ್ಣನವರ ಮಾತು, ಈ ವೈಚಾರಿಕತೆಯಿಂದ ಸಿದ್ಧವಾಗಬೇಕಾದ ಸಂಸ್ಕೃತಿಯನ್ನು ವಿವರಿಸುತ್ತದೆ. ಅಂತರಂಗ ಬಹಿರಂಗಗಳ ಆತ್ಮ ಸಂಗವನ್ನು ಸ್ಥಾಪಿಸುವ ಈ ಸಮನ್ವಯ ದೃಷ್ಟಿಯು ವಚನಕಾರರ ವೈಚಾರಿಕತೆಯ ಕೊಡುಗೆ.

ವಿಶ್ವಸಾಹಿತ್ಯಕ್ಕೆ ವಚನಸಾಹಿತ್ಯದ ಕಾಣಿಕೆ

ಲೇಖಕರು:
ಡಾ॥ ರಂ. ಶ್ರೀ. ಮುಗಳಿ, ಎಂ.ಎ., ಪಿ.ಹೆಚ್.ಡಿ.,
ಬೆಂಗಳೂರು

ವಚನ ಸಾಹಿತ್ಯವು ವಿಶ್ವ ಸಾಹಿತ್ಯಕ್ಕೆ ತನ್ನದೇ ಆದ ಕಾಣಿಕೆಯನ್ನು ಸಲ್ಲಿಸಿದೆ ಎಂಬ ಹೆಮ್ಮೆಯ ಮಾತನ್ನು ನಾವು ಈವರೆಗೆ ಹೇಳುತ್ತ ಬಂದಿದ್ದೇವೆ. ಸ್ವಲ್ಪಮಟ್ಟಿಗೆ ವಿಶ್ವಸಾಹಿತ್ಯದಲ್ಲಿಯ ಕೆಲವು ನಿದರ್ಶನಗಳನ್ನು ಹೋಲಿಕೆಗಾಗಿ ಎತ್ತಿ ತೋರಿಸ್ದೇವೆ. ಆದರೆ ಈ ವಿಷಯದ ಕೂಲಂಕಷವಾದ ಮತ್ತು ಆಳವಾದ ಅಧ್ಯಯನವು ಇನ್ನೂ ನಡೆದಿಲ್ಲ. ಇದು ಸುಲಭಸಾಧ್ಯವೂ ಅಲ್ಲ. ವಿಶ್ವಸಾಹಿತ್ಯ ಎಂದು ಹೇಳುವಾಗ ಕನ್ನಡವಲ್ಲದ ಇತರ ಭಾರತೀಯ ಮತ್ತು ಜಾಗತಿಕ ಸಾಹಿತ್ಯದಲ್ಲಿ ವಚನಸಾಹಿತ್ಯಕ್ಕೆ ಸದೃಶವಾದ ಎಲ್ಲ ಎತ್ತರದ ಬರವಣಿಗೆಯನ್ನು ಗಣನೆಗೆ ತೆಗೆದುಕೊಂಡು ಅಧ್ಯಯನಕ್ಕೆ ತೊಡಗಬೇಕಾಗುತ್ತದೆ. ಅದರ ವ್ಯಾಪ್ತಿ ಎಷ್ಟು ಹೆಚ್ಚಿನದು ಎಂಬುದನ್ನು ನೆನೆದರೆ ಯಾವೊಬ್ಬ ವ್ಯಕ್ತಿಯೂ ತನ್ನ ಪರಿಮಿತಿಯಲ್ಲಿ ಇದನ್ನು ಕೈಗೊಂಡು ಕೊನೆಗಾಣಿಸಲಾರನು ಎಂದು ತೋರಿದರೆ ತಪ್ಪಿಲ್ಲ. ಆದರೆ ಅನೇಕ ಸಲ ಕನ್ನಡದಲ್ಲಿ ಮಾತ್ರವಲ್ಲ ಬೇರೆ ಭಾಷೆಗಳಲ್ಲಿ ಕೂಡ ವಿಶ್ವಸಾಹಿತ್ಯದೊಡನೆ ಹೋಲಿಸಿ ಬೇರೆ ಬೇರೆ ಸಂದರ್ಭಗಳಲ್ಲಿ ಆಳವಾದ ಅಧ್ಯಯನವಿಲ್ಲದೆ ಹೆಮ್ಮೆಯ ಹೇಳಿಕೆಗಳನ್ನು ಸಾರುತ್ತಿರುವ ವಾಡಿಕೆಯುಂಟು.

ವಚನಸಾಹಿತ್ಯದ ಮಟ್ಟಿಗೆ ಹೋಲಿಕೆಗಾಗಿ ಜಾಗತಿಕವಾಙ್ಮಯದಲ್ಲಿಯ ಅನುಭಾವ ಪ್ರಧಾನವಾದ ಎತ್ತರದ ಬರವಣಿಗೆಯನ್ನು ಆಯ್ದುಕೊಂಡು ಅನುವಾದ ರೂಪದಲ್ಲಿಯಾದರೂ ಅದನ್ನೋದಿ ಮನನಿಸಿ ವಿವರದಲ್ಲಿ ಹಿಂಜಿ ನೋಡುವುದು ಅವಶ್ಯ. ಇದಕ್ಕಾಗಿ ಒಬ್ಬೊಬ್ಬ ಅಧ್ಯಯನಕಾರರು ಒಂದೊಂದು ಕೃತಿಯನ್ನು ಆಯ್ದುಕೊಂಡು ತುಲನಾತ್ಮಕ ವಿವೇಚನೆಯನ್ನು ಕೈಗೊಳ್ಳುವುದು ಒಳ್ಳೆಯದು. ವಿಶೇಷತಃ ಭಾರತೀಯ ಅನುಭಾವಸಾಹಿತ್ಯ, ಭಿನ್ನ ಭಿನ್ನ ಮತಧರ್ಮಗಳ ಪವಿತ್ರ ಗ್ರಂಥಗಳು, ಜಾಗತಿಕ ಅನುಭಾವಿಗಳ ಉಕ್ತಿಕೋಶ ಇವನ್ನು ಪರಿಶೀಲಿಸಬೇಕಾಗುತ್ತದೆ. ಆದರಲ್ಲಿಯೂ *The Holy Bible, Meditations of Marcus Auralius, Imitation of Christ by Kempes* ಇಂಥ ಗ್ರಂಥಗಳೊಡನೆ ವಚನಸಾಹಿತ್ಯವನ್ನು ಹೋಲಿಸಿ ಸಾಮ್ಯ ಭೇದಗಳನ್ನು ಸಹೃದಯ ಮನೋಧರ್ಮದಿಂದ ನಿರ್ವಿಕಾರವಾಗಿ ಕಂಡುಹಿಡಿಯಬೇಕಾಗುತ್ತದೆ.

ಈ ವ್ಯಾಪಕವಾದ ಅಧ್ಯಯನಕ್ಕೆ ಒಂದು ತಿವಿತವನ್ನು ಒದಗಿಸುವ ದೃಷ್ಟಿಯಿಂದ ಬೈಬಲ್ ಗ್ರಂಥದಿಂದ ಕೆಲವು ನಿದರ್ಶನಗಳನ್ನು ಕೊಟ್ಟು ವಚನಸಾಹಿತ್ಯದೊಂದಿಗೆ ಹೋಲಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಬೈಬಲ್ ಗ್ರಂಥವನ್ನು ನಾವು ಅದರ ಇಂಗ್ಲಿಷ್ ಅನುವಾದ ರೂಪದಲ್ಲಿ ಮಾತ್ರ ಓದಬಲ್ಲವರು. ಅದರಲ್ಲಿಯೂ ಪಾಠಾಂತರಗಳಿವೆ, ಆವೃತ್ತಿಗಳಿವೆ. ಅದೆಲ್ಲದರ ಚರ್ಚೆ ಇಲ್ಲಿ ಪ್ರಸ್ತುತವಲ್ಲ. ಅದರ ಒಂದು ಪ್ರಮಾಣಿತ ಆವೃತ್ತಿಯನ್ನು ನಮ್ಮ ಅಧ್ಯಯನಕ್ಕಾಗಿ ನಾವು ಇಟ್ಟುಕೊಳ್ಳಬಹುದು. ಅದರಲ್ಲಿ ಪ್ರಮುಖವಾಗಿ *The Old Testament and The New Testament* ಎಂಬ ಎರಡು ವಿಭಾಗಗಳಿವೆ. ಪ್ರತಿಯೊಂದು ವಿಭಾಗದಲ್ಲಿ ಉಪವಿಭಾಗಗಳಿದ್ದು ಅವುಗಳಲ್ಲಿ ಒಂದೇ ಬಗೆಯ ನಿರೂಪಣೆಯಿಲ್ಲ. ಸೃಷ್ಟಿರಚನೆ, ಚರಿತ್ರೆ, ಕ್ರಿಸ್ತ ಜನನ ಮತ್ತು ಪವಾಡಗಳು, ಬೋಧನೆಗಳು, ರೂಪಕ ಕಥೆಗಳು, ಹಾಡುಗಳು ಹೀಗೆ ವಿಷಯಗಳಲ್ಲಿ ವೈವಿಧ್ಯವಿರುವುದಲ್ಲದೆ ಬರವಣಿಗೆಯ ರೀತಿಯಲ್ಲಿಯೂ ವೈವಿಧ್ಯವಿರುತ್ತದೆ. ಆದರೆ ಸಾಮಾನ್ಯವಾಗಿ ಒಂದು ಅತ್ಯಂತ ಸರಳವಾದ ಮತ್ತು ನೇರವಾದ ಆದರೂ ಪರಿಣಾಮಕಾರಕವಾದ ಶೈಲಿ ಅದರಲ್ಲಿ ಕಂಡುಬರುತ್ತದೆ. ಆದರಿಂದ ಬೈಬಲ್ಲಿಗೇ ವಿಶಿಷ್ಟವಾದ ಇಂಗ್ಲಿಷ್ ಶೈಲಿಯಿರುವುದೆಂದು ಹೇಳಿರುವುದುಂಟು. ಈ ಬಗೆಗೆ ಸಲ್ಲುವ ಶ್ರೇಯಸ್ಸು ಅದರ ಅನುವಾದಕರ ಪಾಲಿನದು ಎನ್ನಬಹುದಾದರೂ ಮೂಲದಲ್ಲಿಯ ನಿರೂಪಣಪದ್ಧತಿಯನ್ನು ಅವರು ಅನುಸರಿಸಿರುವುದರಿಂದ ಮೂಲಕ್ಕೆ ಮುಖ್ಯವಾದ ಶ್ರೇಯಸ್ಸು ಸಲ್ಲಬೇಕು.

ಮೂಲ ತತ್ವಜ್ಞಾನ, ಸಾಧ್ಯಸಾಧನ ಪ್ರಣಾಲಿ, ಆಚಾರಧರ್ಮ, ಸೃಷ್ಟಿ ರಚನಾಕ್ರಮ, ಸಾಮಾಜಿಕ ದೃಷ್ಟಿಕೋನ ಈ ಮುಂತಾದ ಅಂಶಗಳಲ್ಲಿ ವಚನಸಾಹಿತ್ಯಕ್ಕೆ ಪ್ರೇರಕವಾದ ವೀರಶೈವ ದರ್ಶನಕ್ಕೂ, ಬೈಬಲ್ ಗ್ರಂಥಕ್ಕೆ ಪ್ರೇರಕವಾದ ಕ್ರಿಶ್ಚನ್ ದರ್ಶನಕ್ಕೂ ಸುಸ್ಪಷ್ಟ ವ್ಯತ್ಯಾಸಗಳಿರುತ್ತವೆ. ಇಷ್ಟಾದರೂ ಎರಡರಲ್ಲಿಯೂ ವಿಶ್ವಧರ್ಮದ ಬೇರುಗಳಿದ್ದ ಕಾರಣ ಸಮಾನವಾದ ಕೆಲವಂಶಗಳು ಕಂಡುಬರುತ್ತವೆ. ವಿಶೇಷವಾಗಿ ಪರಿಭಾಷೆ ಬೇರೆಬೇರೆಯಾದರೂ ಭಕ್ತಿಮಾರ್ಗದ ಮೂಲಸೂತ್ರಗಳು ಎರಡರಲ್ಲಿಯೂ ಇವೆ. ಅಹಿಂಸಾ ಪ್ರಧಾನವಾದ ಸರ್ವ ಭೂತ ದಯೆ ಎರಡಕ್ಕೂ ಸಮಾನವಾಗಿದೆ. ಎರಡರಲ್ಲಿಯೂ ನೈತಿಕ ನಿಷ್ಠೆಯ ಮೇಲೆ ಅವಧಾರಣೆಯಿದೆ. ಇದರಿಂದ ಭಿನ್ನ ಭಿನ್ನ ಕಾಲ ದೇಶಕ್ಕೆ ಸಂಬಂಧಪಟ್ಟುವಾದರೂ ವಚನ ಸಾಹಿತ್ಯ ಮತ್ತು ಬೈಬಲ್ ಗ್ರಂಥಗಳ ಆಶಯದಲ್ಲಿ ಅಲ್ಲಲ್ಲಿ ಸಾಮ್ಯ ಕಂಡುಬರುತ್ತದೆ. ಆದರೆ ಸಾಮ್ಯವಿಲ್ಲದೆ ಇರುವ ಆಶಯವೇ ಹೆಚ್ಚೆಂದರೆ ತಪ್ಪಲ್ಲ. ಅದರಂತೆ ಅಭಿವ್ಯಕ್ತಿಯ ತಂತ್ರ ಮತ್ತು ಶೈಲಿಗಳಲ್ಲಿ ಕೆಲವು ಕಡೆಗೆ ಸಾಮ್ಯ ಕಂಡುಬಂದರೂ ಸಾಮ್ಯವಿಲ್ಲದೆ ಇರುವ ರಚನೆಯೇ

ಹೆಚ್ಚು. ಉದಾಹರಣೆಗೆ ಕೆಲವು ಅವತರಣಿಕೆಗಳನ್ನು ತೌಲನಿಕವಾಗಿ ಪರೀಕ್ಷಿಸಬಹುದು. ಬೈಬಲ್ಲಿನ *Genesis* ಎಂಬ ವಿಭಾಗ ಸೃಷ್ಟಿ ರಚನೆಯ ಕ್ರಮವನ್ನು ಕುರಿತದ್ದು. ಅದರ ಪ್ರಾರಂಭ ಹೀಗಿದೆ : '*In the beginning God created the heaven and the earth. The earth was without form and voil, and darkness was upon the face of the deep; and the Spirit of God was moving over the face of the waters And God said, 'Let there be light'; and there was light. And God saw that the light was good; and God separated the light from the darkness. God called the light Day, and the darkness he called Night. And there was evening and there was morning, one day'*. ಇದರ ಜೊತೆಗೆ ಸೃಷ್ಟಿಯ ರಚನಾಕ್ರಮವನ್ನು ವರ್ಣಿಸಿರುವ ಕೆಳಗಿನ ಕೆಲವು ವಚನಗಳನ್ನು ಇರಿಸಿ ನೋಡಬಹುದು : 'ಅನಾದಿಯ ಮಗನು ಆದಿ. ಆದಿಯ ಮಗನತೀತ. ಅತೀತನ ಮಗನು ಆಕಾಶ. ಆಕಾಶನ ಮಗನು ವಾಯು. ವಾಯುವಿನ ಮಗನಗ್ನಿ. ಅಗ್ನಿಯ ಮಗ ಪೃಥ್ವಿ. ಪೃಥ್ವಿಯಿಂದ ಸಕಲ ಜೀವರೆಲ್ಲರೂ ಉದ್ಭವ ಗೊಹೇಶ್ವರಾ . . . ನೀವು ನಿಮ್ಮ ಸ್ವಲೀಲೆಯಿಂದೆ ಜಗದ ಲೀಲಾವೈಭವಂಗಳ ನಟಿಸಬೇಕೆಂದು ನಿಮ್ಮಲ್ಲಿ ನೆನಹು ದೋರಲು, ಆ ನೆನಹು ನಿರ್ಧರಿಸಿ ಚಿತ್ತೆನಿಸಿತ್ತು. ಆ ಚಿತ್ತಿನಿಂದೆ ಚಿನ್ನಾದ ಚಿದ್ಬಿಂದು ಚಿತ್ಕಳೆಗಳೊಗೆದವು. ಆ ಚಿನ್ನಾದ ಚಿದ್ಬಿಂದು ಚಿತ್ಕಳೆ ಆ ಮೂಲ ಚಿತ್ತು ಸಹಜವಾಗಿ ಗಟ್ಟಿಗೊಂಡು ಅಖಂಡ ಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತ್ತು.ಆ ಮಹಾಲಿಂಗವೇ ಪಂಚಮುಖವ್ನೈದಿಹ ಸದಾಶಿವನೆಂದೆನಿಸಿತ್ತು. ಆ ಸದಾಶಿವನಿಂದೆ ಬ್ರಹ್ಮ ವಿಷ್ಣು ರುದ್ರರೆಂಬ ತ್ರೈಮೂರ್ತಿಗಳುದಯಿಸಿದರು. ಆ ತ್ರೈಮೂರ್ತಿಗಳಿಂದ ಸ್ವರ್ಗ ಮರ್ತ್ಯ ಪಾತಾಳಂಗಳೆಂಬ ತ್ರೈಲೋಕಂಗಳು ಜನಿಸಿದುವು. ಆ ತ್ರೈಲೋಕಂಗಳ ಮಧ್ಯದಲ್ಲಿ ಸಚರಾಚರ ಹೆಣ್ಣು ಗಂಡು ನಾಮರೂಪುಕ್ರಿಯಾದಿ ಸಕಲವಿಸ್ತಾರವಾಯಿತ್ತು. ಇಂತಿವೆಲ್ಲವೂ ನಿಮ್ಮ ನೆನಹುಮಾತ್ರದಿಂದಾದವಯ್ಯಾ ಅಖಂಡೇಶ್ವರಾ,

'ಮಣಿಗಳ ಸೂತ್ರದಂತೆ ತ್ರಿಣಯನ ನೀನಿಪ್ಪೆಯಯ್ಯಾ. ಎಣಿಸುವಡೆ ತನು ಭಿನ್ನ, ಆತ್ಮನೊಬ್ಬನೇ. ಅಣುರೇಣು ಮಧ್ಯದಲ್ಲಿ ಗುಣಾತೀತ ನೀನೆಂದು ಮಣಿಪ್ರತ್ಯೈಸಯ್ಯಾ ರಾಮನಾಥಾ'.


ಈ ಎರಡೂ ಬಗೆಯ ಸೃಷ್ಟಿ ರಚನಾ ಕ್ರಮದಲ್ಲಿ ಹೋಲಿಕೆಯ ಅಂಶ ಕಡಿಮೆ. ದೇವರು ಭೂವ್ಯ್ಯಾಕಾಶಗಳನ್ನು ಮೊದಲು ಸೃಷ್ಟಿಸಿ ಜ್ಯೋತಿ, ಜಲ ಮುಂತಾದುವು, ಪ್ರಾಣಿ ವರ್ಗ, ಮನುಷ್ಯ ಜಾತಿ ಇವಕ್ಕೆಲ್ಲ ಹುಟ್ಟು ಹಾಕಿ ಏಳು ದಿನದಲ್ಲಿ ತನ್ನ ಸೃಷ್ಟಿ ಕಾರ್ಯವನ್ನು ಮುಗಿಸಿದನೆಂದು ಬೈಬಲ್ಲಿನಲ್ಲಿದ್ದರೆ, ಅನಾದಿ ಮೂಲ ತತ್ವದಿಂದ ಒಂದೊಂದಾಗಿ ತತ್‌ಕ್ಷಣ ಪಂಚಭೂತಾತ್ಮಕ ಸೃಷ್ಟಿಯಾಯಿತೆಂದೂ ತನ್ನ ಸೃಷ್ಟಿಯಲ್ಲಿ ಈಶ್ವರನು ಸರ್ವವ್ಯಾಪಿಯಾಗಿರುವನೆಂದೂ ವಚನ ಸಾಹಿತ್ಯದಲ್ಲಿ ಹೇಳಿದೆ. ಎರಡರ ನಿರೂಪಣೆಯಲ್ಲಿಯೂ ಸಹಜ ಸರಳತೆಯಿದೆ, ಅದಕ್ಕೆ ಅನುಗುಣವಾದ ಗದ್ಯ ಲಯವಿದೆ. ಆದರೆ ಬೈಬಲ್ಲಿಗಿಂತ ವಚನಗಳಲ್ಲಿ ಭಾವ ಗೀತಾತ್ಮಕ ಅಂಶ ಹೆಚ್ಚಿರುತ್ತದೆ, ಅನುಭಾವದ ಅಮೂರ್ತತೆ ಮತ್ತು ಗಾಢತೆಗಳು ಹೆಚ್ಚಿರುತ್ತವೆ. ಎರಡರಲ್ಲಿಯ ಪ್ರಮುಖ ವ್ಯತ್ಯಾಸಗಳನ್ನು ಅಭಿವ್ಯಕ್ತಿಯ ಈ ವಿಶೇಷದಲ್ಲಿ ಅರಿತುಕೊಳ್ಳಬೇಕು. ಇದು ವಚನಗಳನ್ನು ಆಳವಾಗಿ ಪರಿಶೀಲಿಸಿ ಬೈಬಲ್ಲಿನ ಉಕ್ತಿಗಳೊಡನೆ ಹೋಲಿಸಿದಾಗ ನಮ್ಮ ಅವಗಾಹನೆಗೆ ಬರುವ ಅಂಶ. ಆದರೆ ಇದರಿಂದ ಎಲ್ಲ ವಚನಗಳೂ ಭಾವಗೀತೆಯ ಅಥವಾ ಅನುಭಾವದ ಉತ್ಕಟ ಲಕ್ಷಣಗಳನ್ನು ಹೊಂದಿರುತ್ತವೆ ಎಂದಾಗಲಿ ಬೈಬಲ್ಲಿನ ಎಲ್ಲ ಉಕ್ತಿಗಳು ಭಾವನಾಂಶದಿಂದ ಅಲಿಪ್ತವೂ ಗಾಢವಾದ ಅನುಭಾವರಹಿತವೂ ಆಗಿರುತ್ತವೆ ಎಂದಾಗಲಿ ತಿಳಿಯಬಾರದು.

ಎರಡೂ ಬಹುಮಟ್ಟಿಗೆ ಸಮಾನ ಆಶಯದ ಹಾಗೂ ಸರಳ ಮತ್ತು ನೇರವಾದ ನಿರೂಪಣೆಯ ವಿಷಯದಲ್ಲಿ ಎಷ್ಟು ಸಮಾನವಾಗಿರುತ್ತವೆ ಎಂಬುದನ್ನು ಒಂದೆರಡು ಉದಾಹರಣೆಗಳಿಂದ ತಿಳಿದುಕೊಳ್ಳಬಹುದು. ಬೈಬಲ್ಲಿನಲ್ಲಿ *Ten Commandments* ಅಥವಾ ಹತ್ತು ಆದೇಶಗಳು ಬಹುಮುಖ್ಯವಾದ ಜೀವನ ನೀತಿಯನ್ನು ಬೋಧಿಸುತ್ತವೆ. *Exodus* ಎಂಬ ವಿಭಾಗದಲ್ಲಿ ಬಂದಿರುವ ಅವುಗಳಲ್ಲಿ ಕೆಲವು ಹೀಗಿರುತ್ತವೆ : '*You shall have no other gods before me. You shall not make for yourself a graven image, or any likeness of any thing that is in heaven above, or that is in the earth beneath or that is in the water under the earth; you shall not bow down to them or serve them . . . you shall not kill. You shall not commit adultery. You shall not steal. You shall not bear false witness against your neighbour.*' ಈ ಆದೇಶೋಕ್ತಿಗಳೊಡನೆ ಕೆಳಗಿನ ವಚನಗಳನ್ನು ಹೋಲಿಸಿ ನೋಡಬೇಕು: 'ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ. ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ. ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ. ಛಲಬೇಕು ಶರಣಂಗೆ ಲಿಂಗಜಂಗಮ ಒಂದೆ ಎಂಬ. ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ. ಛಲವಿಲ್ಲದವರ ಮೆಚ್ಚ ನಮ್ಮ ಕೂಡಲಸಂಗಮದೇವ.... ಕಳಬೇಡ, ಕೊಲಬೇಡ; ಹುಸಿಯ ನುಡಿಯಲು ಬೇಡ; ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ; ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ. ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲಸಂಗಮದೇವರ ನೊಲಿಸುವ ಪರಿ. '

ಕ್ರೈಸ್ತನು ಜನರನ್ನು ಕುರಿತು ಅಂದು ಮಾಡಿದ ಬೋಧನೆಯಲ್ಲಿ ಸರಳ ಸೌಂದರ್ಯವಿರುವಂತೆ ಸಹಜವಾದ ಸಾದೃಶಲಕ್ಷ್ಮಿಯೂ ಇರುತ್ತದೆ. ಇದಕ್ಕೆ ಕೆಳಗಿನ ಅವತರಣಿಕೆಗಳನ್ನು ಗಮನಿಸಬಹುದು : '*Blessed are the poor in spirit, for theirs is the kingdom of heaven Blessed are those who*

mourn, for they shall be comforted . . . Blessed are the pure in heart, for they shall see God . . . you are the salt of the earth, but if salt has lost its taste, how shall its saltness be restored? It is no longer good for anything except to be thrown under foot by men. You are the light of the world. A city set on a hill cannot be hid. Nor do men light a lamp and put it under a bushel, but on a stand, and it gives light to all in the house.' ವಚನಸಾಹಿತ್ಯದಲ್ಲಿಯೂ ಇದೇರೀತಿಯಾಗಿ ಆದರೆ ಇದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಉಪಮೆ–ಉತ್ಪ್ರೇಕ್ಷೆ–ರೂಪಕಗಳನ್ನು ಸಹಜಸ್ಫೂರ್ತವಾದ ಅಭಿವ್ಯಕ್ತಿಯಲ್ಲಿ ಕಾಣುತ್ತೇವೆ. 'ಕಪ್ಪೆ ಸರ್ಪನ ನೆಳಲಲ್ಲಿ ಇಪ್ಪಂತೆ ಎನಗಾಯಿತಯ್ಯಾ .... ನಾನಾವರ್ಣದ ಸಂಸಾರ ಹಾವಾಡಿಗನ ಸ್ನೇಹದಂತೆ. ಸಂಸಾರವೆಂಬ ಬಲೆಯಲ್ಲಿ, ಸಿಲುಕಿದೆನಯ್ಯಾ . . . ಎನ್ನವರೆನ್ನ ಹೊಗಳಿ ಹೊಗಳಿ ಎನ್ನ ಹೊನ್ನಶೂಲಕ್ಕಿಕ್ಕಿದರಯ್ಯಾ....'

ಜೊತೆಗೆ ವಚನಗಳಲ್ಲಿ ಭಾವಗೀತೆಯ ಸ್ವಯಂಪೂರ್ಣ ನಿರ್ಮಿತಿಗಳು ಹೇರಳವಾಗಿವೆ — ಉದಾ : 'ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ಮೂರುತಿ ತುಂಬಿ, ಮನದಲ್ಲಿ ನಿಮ್ಮ ನೆನಹು ತುಂಬಿ, ಕಿವಿಯಲ್ಲಿ ಕೀರುತಿ ತುಂಬಿ, ಕೂಡಲಸಂಗಮದೇವಾ, ನಿಮ್ಮ ಚರಣಕಮಲದಲಾನು ತುಂಬಿ.' ಇದಲ್ಲದೆ ಒಂದು ಬಗೆಯ ದೀಪಕಾಲಂಕಾರವು ಕೆಲವು ವಚನಗಳಲ್ಲಿ ನಿಚ್ಚಳವಾಗಿದೆ: 'ಕರಿಘನ, ಅಂಕುಶ ಕಿರಿದೆನ್ನಬಹುದೇ? ಬಾರದಯ್ಯಾ. ಗಿರಿಘನ, ವಜ್ರ ಕಿರಿದೆನ್ನಬಹುದೇ? ಬಾರದಯ್ಯಾ. ತಮಂಧ ಘನ, ನಿಮ್ಮ ನೆನೆವ ಮನ ಕಿರಿದೆನ್ನಬಹುದೇ? ಬಾರದಯ್ಯಾ ಕೂಡಲಸಂಗಮದೇವಾ'. ಈ ಎಲ್ಲ ನಿದರ್ಶನಗಳನ್ನು ಪರಿಕಿಸಿ ನೋಡಿದರೆ ಬೈಬಲ್ಲಿಗೂ ವಚನಸಾಹಿತ್ಯಕ್ಕೂ ಇರುವ ಸಾಮ್ಯಭೇದಗಳು ತಿಳಿದುಬರುತ್ತವೆ. ಎರಡರಲ್ಲಿಯೂ ಪ್ರವಾದಿಯ, ಅನುಭಾವಿಯ ಮತ್ತು ಭಕ್ತನ ಅಂತಃಸ್ಫೂರ್ತ ವಾಣಿಯ ಸಹಜತೆಯಿದೆ. ಆದರೆ ವಚನಸಾಹಿತ್ಯದಲ್ಲಿ ಭಾವಗೀತೆಯ ಮೂಲಸತ್ವ ಆಶಯ–ಅಭಿವ್ಯಕ್ತಿ ಎರಡರಲ್ಲಿಯೂ ಪ್ರಮುಖವಾಗಿ ಕಂಡುಬರುತ್ತದೆ, ಅನುಭಾವದ ಆಳ–ಅಗಲಗಳು ಸರಳತೆಯ ಜಡಗಿನಲ್ಲಿ, ಬೆಡಗಿನ ಜಟಿಲತೆಯಲ್ಲಿ ಮೈದಾಳಿರುತ್ತವೆ. ಅಂತೇ ವಚನಗಳು ನಡುಗನ್ನಡ ಶೈಲಿಯ ಅನುಭಾವಗದ್ಯದಲ್ಲಿ ಉಸುರಿದ ಆಧ್ಯಾತ್ಮಿಕ ಭಾವಗೀತೆಗಳು ಎಂಬುದಾಗಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನಾವು ಹೇಳಿದ ಮಾತಿನಲ್ಲಿ ಅವುಗಳ ವೈಶಿಷ್ಟ್ಯವಿದೆ. ಬೈಬಲ್ ಗ್ರಂಥದೊಡನೆ ಸ್ವಲ್ಪಮಟ್ಟಿಗೆ ಮಾಡಿದ ಹೋಲಿಕೆಯಿಂದಲೂ ಇದಕ್ಕೆ ಸಮರ್ಥನೆ ದೊರೆಯುತ್ತದೆ. ವಿಶ್ವಸಾಹಿತ್ಯಕ್ಕೆ ಆಶಯ – ರೂಪ ಇವೆರಡರಲ್ಲಿಯೂ ವಚನಸಾಹಿತ್ಯದ ಕಾಣಿಕೆ ಹಿರಿದೆಂಬುದರ ಅರಿವಾಗುತ್ತದೆ.



ಅರಿವಿನ ಮಾರಿ ತಂದೆ

ಲೇಖಕರು :
ಸಿದ್ದಯ್ಯ ಪುರಾಣಿಕ, ಐ.ಎ.ಎಸ್.,
ಬೆಂಗಳೂರು

ಅರಿವಿನ ಮಾರಿ ತಂದೆಗಳ ವಚನಗಳು ನನ್ನನ್ನು ಅನೇಕ ವರ್ಷಗಳ ಹಿಂದೆಯೇ ಆಕರ್ಷಿಸಿವೆಯಾದರೂ ಅವರ ಬಗ್ಗೆ ಬರೆಯಲಾಗಿರಲಿಲ್ಲ. ಇದಕ್ಕೆ ಅವರ ಜೀವನದ ವಿವರಗಳು ಉಪಲಬ್ಧವಾಗದಿದ್ದುದೇ ಮುಖ್ಯ ಕಾರಣ. ಎಷ್ಟು ಪ್ರಯತ್ನಿಸಿದರೂ ಇಂದಿಗೂ ಆ ವಿವರಗಳು ದೊರಕದೇ ಹೋದುದು ನಿರಾಶೆಯನ್ನುಂಟುಮಾಡಿದೆ–ಯಾದರೂ ಹತಾಶನಾಗಬೇಕಾಗಿಲ್ಲ. ನನಗಾಗಿ ಪ್ರೊ. ಎಂ. ಎಂ. ಕಲಬುರಗಿಯವರೂ, ಕನ್ನಡ ನಿಘಂಟಿನ ಸಂಪಾದಕರಾದ ಶ್ರೀ ಶಾಂತವೀರಯ್ಯನವರೂ ವಿವರಗಳನ್ನು ದೊರಕಿಸಲು ವಿಶ್ವಪ್ರಯತ್ನ ಮಾಡಿದರೂ ಅವರಿಗೂ ದೊರಕದ ಕಾರಣ ಅವುಗಳಿಲ್ಲದೆಯೇ ಈ ಲೇಖನವನ್ನು ಬರೆಯಬೇಕಾಗಿ ಬಂದಿದೆ. ಉಪಾಯವಿಲ್ಲ ! ಮುಂದೆ ಎಂದಾದರೂ ದೊರಕಿದಾಗ ಮತ್ತೊಮ್ಮೆ ಬರೆಯಬಹುದಲ್ಲ !

ಒಂದು ವಿಷಯ ಮಾತ್ರ ನಿರ್ವಿವಾದವಾದುದು: ಅರಿವಿನ ಮಾರಿ ತಂದೆಗಳು ಬಸವಣ್ಣನವರ ಸಮಕಾಲೀನರು; ಅಂದಿನ ಶ್ರೇಷ್ಠ ವಚನಕಾರರಲ್ಲಿ ಒಬ್ಬರು; ಹಿರಿಯ ಅರಿವಿನ ದೊರೆಗಳಲ್ಲಿ, ಅತ್ಯುನ್ನತ ಅನುಭಾವಿಗಳಲ್ಲಿ ಒಬ್ಬರು; ಮತ್ತು ಬಾನೆತ್ತರಕ್ಕೆ ಬೆಳೆದ ವ್ಯಕ್ತಿತ್ವಶಾಲಿಗಳಲ್ಲಿ ಒಬ್ಬರು. ಬಸವಣ್ಣನವರ ವಚನಗಳಲ್ಲಿ ಉಲ್ಲೇಖಿತವಾಗುವ ಗೌರವವನ್ನು ಪಡೆದ ಶರಣರಲ್ಲಿ 'ಮಾರಿ ತಂದೆ'ಯವರೂ ಒಬ್ಬರು. ಆದರೆ ಇವರು ಯಾವ 'ಮಾರಿ ತಂದೆ'ಯೆಂಬುದು ನಿರ್ಧರಿತವಾಗಿಲ್ಲ. ಇದುವರೆಗೆ ತಿಳಿದು ಬಂದಿರುವಂತೆ ಎಂಟು ಜನ ಮಾರಿ ತಂದೆಯವರು ಆಗಿಹೋಗಿದ್ದಾರೆ. ಕಂಭದ ಮಾರಿ ತಂದೆ, ಸತ್ತಿಗೆಯ ಕಾಯಕದ ಮಾರಿ ತಂದೆ, ಕನ್ನದ ಮಾರಿ ತಂದೆ, ಕೂಗಿನ ಮಾರಿ ತಂದೆ, ನಗೆಯ ಮಾರಿ ತಂದೆ, ಅರಿವಿನ ಮಾರಿ ತಂದೆ, ಮನಸಂದ ಮಾರಿ ತಂದೆ, ಗಾವುದಿ ಮಾರಿ ತಂದೆಯರು. ಇವರಲ್ಲಿ ಹೆಚ್ಚಿನವರು ಬಸವಣ್ಣನವರ ಸಮಕಾಲೀನರಿರುವುದರಿಂದ ಬಸವಣ್ಣನವರ ವಚನಗಳಲ್ಲಿ ಉಲ್ಲೇಖಿತರಾದ ಮಾರಿ ತಂದೆಗಳು ಯಾರಿರಬಹುದೆಂಬುದು ಊಹೆಯ ವಿಷಯವಾಗಿಯೇ ಉಳಿಯುತ್ತದೆ. ಆದರೆ ಅರಿವಿನ ಮಾರಿ ತಂದೆಗಳ ವಚನಗಳಲ್ಲಿ ಮೂಡಿನಿಂತಿರುವ ಅವರ ಮೂರ್ತಸ್ವರೂಪವನ್ನು ಗ್ರಹಿಸಿದಾಗ ಈ ಗೌರವ ಅವರಿಗೇ ಸಂದಿರಬೇಕೆಂಬ ಸಂದೇಹ ತಲೆದೋರುತ್ತದೆ. ಸಂಖ್ಯೆಯಲ್ಲಿಯೂ, ಸ್ವಂತಿಕೆಯಲ್ಲಿಯೂ, ಸ್ವಾನುಭಾವದಲ್ಲಿಯೂ, ಸಾಹಿತ್ಯಕತೆಯಲ್ಲಿಯೂ ಗಣನೀಯವಾದ ವಚನಗಳನ್ನು ರಚಿಸಿರುವ ಇವರ ಬಗ್ಗೆ ಬಸವಣ್ಣನವರಿಗೂ ಅಭಿಮಾನವೆನಿಸಿದ್ದರೆ ಆಶ್ಚರ್ಯವೇನಿಲ್ಲ.

ಅವರ ವಚನಗಳಲ್ಲಿಯೇ ಅವರ ವ್ಯಕ್ತಿತ್ವದ ಪರಿಚಯ ಪಡೆಯಬೇಕೆನ್ನುವವರಿಗೆ ಅವರ ಈ ವಚನ ತುಂಬ ಪ್ರಯೋಜನಕಾರಿಯೆನಿಸುತ್ತದೆ:

"ಕೆಯಿ ಬೆಳೆವಲ್ಲಿ ಸದೆಗೆ ಮುನಿವರಲ್ಲದೆ ಬೆಳೆಗೆ
ಮುನಿವರುಂಟೆ, ಅಯ್ಯಾ ?
ಅರಿದಂಗವ ತಾಳಿದವರಲ್ಲಿ ಮೆಜವೆಗೆ ಮುನಿವರಲ್ಲದೆ
ಅರಿವಿಗೆ ಮುನಿವರುಂಟೆ ಅಯ್ಯಾ ?
ಕೊಲ್ಲಿ ಆವಿಂಗೆ ಕಾಲ ಕಟ್ಟುವರಲ್ಲದೆ
ಮೊಲೆಯ ಕಟ್ಟಿದರುಂಟೆ ಅಯ್ಯಾ ?
ಗುರುವಾದಡೂ ಆಗಲಿ, ಲಿಂಗವಾದಡೂ ಆಗಲಿ,
ಜಂಗಮವಾದಡೂ ಆಗಲಿ—
ಅರಿವಿಂಗೆ ಶರಣು ಮರವಿಂಗೆ ಮಥನವ
ಮಾಡಿದಲ್ಲದೆ ಇರೆ !
ಇದು ನೀವು ಕೊಟ್ಟ ಅರಿವಿನ ಮಾರನ ಇರವು
ಸದಾಶಿವ ಮೂರ್ತಿಲಿಂಗದ ಬರವು !

ಅರಿವು ಎಲ್ಲಿದ್ದರೂ ಅದಕ್ಕೆ ಶರಣೆಂದು, ಮರವು ಎಲ್ಲಿದ್ದರೂ ಅದನ್ನು ಮಥಿಸಿ, ಮರವು ಮುಸುಕಿದವರಿಗೆ ಮುನಿಯದೆ ಅವರ ಮರವಿಗೆ ಮಾತ್ರ ಮುನಿದು, ಸುತ್ತಲೂ ಅರಿವಿನ ಪರಿಮಳವನ್ನು ಹರಡಲು ಹೆಣಗಿದ ಅರಿವಿನ ಮಾರಿ ತಂದೆಯರು ಶರಣಸಂಕುಳದಲ್ಲಿ ಮನ್ನಣೆಯ ಸ್ಥಾನವನ್ನು ಪಡೆದಿರಲು ಸಾಕು.

ನಿಜಗುಣ ಶಿವಯೋಗಿಗಳ ಕೃತಿಗಳಲ್ಲಿ 'ನಿಜ'ಎಂಬ ಪದ ಪದೇ ಪದೇ ಬಳಕೆಯಾಗಿರುವಂತೆ ಅರಿವಿನ ಮಾರಿ ತಂದೆಗಳ ವಚನಗಳಲ್ಲಿ 'ಅರಿವು' ಎಂಬ ಪದ ಪುನಃ ಪುನಃ ಬಳಕೆಗೊಂಡಿದೆ. ಏಕೆ ? ಅವರ ಇನ್ನೊಂದು ವಚನದಲ್ಲಿ ಇದಕ್ಕೆ ಸಮರ್ಥನೆ ಸಿಕ್ಕುತ್ತದೆ :

"ಸಿದ್ಧರಸ ಲೇಸೆಂದಡೆ ತಾನಿದ್ದ ಕುಡುಕೆ ಹೇಮವಾದುದಿಲ್ಲ !
ಲೋಹಕ್ಕಲ್ಲದೆ ವೇಧಿಸುವುದಿಲ್ಲ,
ವಸ್ತು ಸರ್ವಮಯದಲ್ಲಿ ಸಂಪೂರ್ಣವಾಗಿದ್ದಡೇನು-
ತನ್ನ ಅರಿವವರ ಹೃದಯದಲ್ಲಿಯಲ್ಲದೆ ಇರ, ಸದಾಶಿವ
ಮೂರ್ತಿಲಿಂಗವು"

ಲೋಹವನ್ನು ಸುವರ್ಣವನ್ನಾಗಿ ಪರಿವರ್ತಿಸುವ ಸಿದ್ಧರಸ ತಾನಿದ್ದ ಕುಡುಕೆಯನ್ನೇ ಚಿನ್ನವನ್ನಾಗಿ ಮಾರ್ಪಡಿಸಲರಿಯದು. ಈ ಒಡಲೆಂಬ ಮಡಕೆಯಲ್ಲಿಯೂ ಆ ಸರ್ವಮಯನಿದ್ದಾನೆ ಸಿದ್ಧರಸದಂತೆ; ಆದರೆ ಅವನನ್ನು ಅರಿವವರ ಹೃದಯದಲ್ಲಿ ಮಾತ್ರ ಅವನಿರುವುದು, ಅರಿಯದವರಲ್ಲಿ ಇರಲೊಲ್ಲ, ಇರುವುದಿಲ್ಲ! ಆದುದರಿಂದಲೇ ಅರಿವಿಗೆ ಆದ್ಯತೆ ಅರಿವಿನ ಮಾರಿ ತಂದೆಗಳ ವಚನಗಳಲ್ಲಿ, 'ಅರಿದಡೆ ತಾ, ಮರೆದಡೆ ಜಗವಾಯಿತ್ತು', ಎಂದು ಇನ್ನೊಂದು ವಚನದಲ್ಲಿ

ಉಸಿರಿದ್ದಾರೆ ಅವರು; " ಅರಿದಲ್ಲಿ ಮಲಕ್ಕೆ ಹೊರಗಿನ, ಮರೆದಲ್ಲಿ ಮಲಕ್ಕೆ ಒಳಗು " ಎಂದು ಸಾರಿದ್ದಾರೆ ಅವರು.

ಅರಿವು ಅತ್ಯಗತ್ಯವಾದರೂ 'ಅರಿವುದಕ್ಕೊಂದು ಕುರುಹು ಬೇಕು' ಎಂಬುದು ಅರಿವಿನ ಮಾರಿ ತಂದೆಗಳ ನಿಲವು; 'ಅಳಿವ ಕಾಯವುಳ್ಳನ್ನಕ್ಕ ಅರಿವಿಂಗೆ ಕುಱುಹು ಇರಬೇಕು' ಎಂಬುದು ಅವರ ಸುವರ್ಣ ಸೂತ್ರ. ಏಕೆ ?

"ಪಂಚತತ್ವದಲ್ಲಿದ್ದು ಪರತತ್ತ್ವವನರಿಯಬೇಕು". ಇದು ಗುರಿ. ಇದಕ್ಕೆ ದಾರಿ ?

ಅದಕ್ಕೆ ದೃಷ್ಟ:

"ಪಶುವಿನ ಹೊಟ್ಟೆಯಲ್ಲಿ ಕಱುವಿದ್ದಡೆ ಕಱೆವುದಕ್ಕೆ ಮನೋಹರವುಂಟೆ ? ಅದು ಭಿನ್ನ ಭಾವವಾಗಿ ಇದಿರಿಟ್ಟು ಉಂಡಲ್ಲದೆ ಮೊಲೆ ತೊರೆಯವು. ಆ ತೆರನನಱಿದಲ್ಲಿ ಅರಿವುದಕ್ಕೊಂದು ಕುಱುಹು ಬೇಕು......"

ಸಮೀಚೀನ, ಸುಂದರ ದೃಷ್ಟಾಂತ; ಸಯುಕ್ತಿಕ, ಸಮಂಜಸ ಸಿದ್ಧಾಂತ ! ಇನ್ನೂ ಬೇಕೆ ?

"ಬಲ್ಲಿದ ವೀರನೆಂದಡೂ ಅಲಗಿನ ಮೊನೆಯಿಲ್ಲದೆ ಗೆಲಬಹುದೆ?
ಆ ಅಜೀವ ಚಿತ್ತ ಕುರುಹಿನ ಘಟದಲ್ಲಿದ್ದು ಅರಿವು
ತಿದ್ದಿ ಹಿತಾದ ಕಾರಣ
ಇದನರಿತು ಆತ್ಮವಾದವೆಂದು ಎನಲಿಲ್ಲ.
ಸದಾಶಿವಮೂರ್ತಿ ಲಿಂಗವನಱಿವುದಕ್ಕೆ ಇದಿರಿಟ್ಟು
ಕಳಿದುಳಿಯಬೇಕು !"

ಶರಣರ ಅನುಭಾವ ಕೇವಲ ಆತ್ಮವಾದವಲ್ಲ; ಅದು 'ಇದಿರಿಟ್ಟು ಕಳಿದುಳಿವ' ವಿಧಾನ;

'ಕುರುಹುವಿಡಿದು ಕುರುಹುಗೆಡುವ' ಪರಿಜ್ಞಾನ. ಕುರುಹುವಿಡಿಯದೆ ಕುರುಹುಗೆಡುವುದಾಗದು :

"ಗಂಧವನೊಳಕೊಂಡ ಕುಸುಮವ ಕೊಯ್ಯಬಹುದಲ್ಲದೆ
ಗಂಧವನೊಳಕೊಂಡ ವಾಯುವ ಕೊಯ್ಯಬಹುದೆ ?
ಘಟವನೊಳಕೊಂಡಿದ್ದಾತ್ಮನನರಿಯಬಹುದೆ,
ಆತ್ಮನನೊಳಕೊಂಡಿದ್ದ ಘಟವನರಿಯಬಹುದಲ್ಲದೆ ?
ವಸ್ತು ಅಂಗವಾದಲ್ಲಿ ಅರಿಯಬಹುದಲ್ಲದೆ
ಲಿಂಗವಸ್ತುವಾದಲ್ಲಿ ಹಿಂಗಿ ಅರಿವ ಠಾವಿನ್ನಾವುದು ?
ಕುಸುಮಕ್ಕೆ ಕಡೆ–ನಡು–ಮೊದಲಲ್ಲದೆ
ಗಂಧಕ್ಕೆ ಕಡೆ–ನಡು–ಮೊದಲುಂಟೆ ?
ಅರಿವುದಕ್ಕೆ, ಅಱುಹಿಸಿ ಕೊಂಬುದಕ್ಕೆ,ಕುಱುಹನರಿತಲ್ಲಿಯೆ
ಸದಾಶಿವಮೂರ್ತಿ ಲಿಂಗವೆಂಬ ರೂಪು ನಿಂದಿತ್ತು".

ಇನ್ನೂ ಸಾಲದೆ ? ಇನ್ನೂ ಬೇಕೆ ? ಕೇಳಿ :

"ವಾಯು ಬಯಲೆಂದಡೆ ತಿರುಗುವ ಆಲವಟ್ಟದಲ್ಲಿ ಸಿಕ್ಕಿ
ಕುಱುಹುಗೊಂಬುತಿದ್ದಿತ್ತು.
ಇಂತೀ ಕುರುಹಿಲ್ಲದೆ ಅಱುವ ಪರಿಯನ್ನೆಂತೊ ?"

ಕುರುಹುವಿಡಿಯಬೇಕು; ಆದರೆ ಕುರುಹಿನಲ್ಲಿಯೇ ಉಳಿಯಬಾರದು; 'ಕುರಿತ ಕುಱುಹಿನ ಮಱೆಯಲ್ಲಿ ಅರಿವು' ನಿಲ್ಲಬೇಕು, ಅರಿವ ದೊರಕಿಸಿ ಮರವೆಯ ಗೆಲ್ಲಬೇಕು. ಇಲ್ಲದಿರೆ :

"ಹರಿವ ಸಕಟಂಗೆ ಕಡೆಗೀಲು ತಡೆಯಾದಲ್ಲಿ ಆ ಗಾಲಿ
ಅಡಿಯಿಡಬಲ್ಲುದೆ ?
ಕುಱುಹಿನ ಮೂರ್ತಿಯಲ್ಲಿ ಅರಿವು ಒಡಗೂಡದಿರೆ
ಆ ಜ್ಞಾನ ಹಿಂದ ಮಱೆದು ಮುಂದಕ್ಕಡಿಯಿಡಲಿಲ್ಲ...."

ಆದುದರಿಂದ, " ತಡಿಯಲ್ಲಿ ನಿಂದು ಮಡುವಿನಲ್ಲಿದ್ದ ಹಱುಗೋಲಕ್ಕೆ ಅಡಿಯಿಟ್ಟು ಅದುವೊಡಗೂಡಿ ಎಯ್ದುವಂತೆ,

ಕುಱುಹಿನ ತಡಿ, ಮಱವೆಯ ಮಡು, ಮಾಡುವವರ್ತ್ಥಕ
ಹಱುಗೋಲಾಗಿ
ಅರಿಕೆ ಅಂಬಿಗನಾಗಿ ಸಂಸಾರ ಸಾಗರವ ದಾಂಟಿ,
ಆ ತಡಿಯ ಮಱೆಯಲದೆ ನಿಜನೆಮ್ಮುಗೆಯ ಕಳೆಬೆಳಗು
ಬೆಳಗುತ್ತದೆ ಸದಾಶಿವಮೂರ್ತಿ ಲಿಂಗದಲ್ಲಿ."

ಕುರುಹು ತಡಿ ಮಾತ್ರ ; ಮರವೆಯ ಮಡುವನ್ನು ಮಾಡುವ ವರ್ತ್ಥಕದ ಹರಿಗೋಲಿನಲ್ಲಿ ದಾಟಬೇಕು; ಇದಕ್ಕೆ ಅರಿವೆ ಅಂಬಿಗನಾಗಬೇಕು. ಸಂಸಾರ ಸಾಗರಕ್ಕೆ ಸಂಬಂಧಿಸಿದಂತೆ ರೂಪುಗೊಂಡಿರುವ ಈ ರೂಪಕದಲ್ಲಿ 'ಅರಿವೆ ಗುರು' ಎಂಬ ಸೂತ್ರ 'ಅರಿವೆ ಅಂಬಿಗ'ವಾಗಿ ಅರ್ಥಪುಷ್ಟಿಯನ್ನು ಪಡೆದಿದೆ.

ಕ್ರಿಯಾಜ್ಞಾನ ಸಾಮರಸ್ಯದಲ್ಲಿ ವಿಶ್ವಾಸವಿರಲಿಲ್ಲವೆ ಅರಿವಿನ ಮಾರಿತಂದೆಗಳಿಗೆ ? ಅರಿವನೊಂದನೆ ನಂಬಿದ್ದರೆ ಅವರು ? ಇಲ್ಲ, ಅರಿವುಕ್ರಿಯೆಗಳೆರಡರಲ್ಲಿಯೂ ವಿಶ್ವಾಸ ಅವರಿಗೆ. ಆದರೆ ಅರಿವಿನಿಂದ ಸ್ಫೂರ್ತವಾದ, ಪ್ರಚೋದಿತವಾದ ಕ್ರಿಯೆ ಶ್ರೇಷ್ಠವೆಂಬುದು ಅವರ ಅಭಿಮತ.

"ಹಾಲು ಬತ್ತಿದ ಹಸುವಿಂಗೆ ಕಱುವ ಬಿಟ್ಟಡೆ
ಒದೆವುದಲ್ಲದೆ ಉಣಲೀಸುವುದೆ ?
ಅಱಿವು ನಷ್ಟವಾದವ ಕ್ರೀಯ ಬಲ್ಲನೆ ?
ಕ್ರೀಯೆಂಬುದು ಹಸು, ಅಱಿವೆಂಬುದೆ ಹಾಲು,
ಬಯಕೆಯೆಂಬುದೆ ಕರು.
ಇಂತೀ ತ್ರಿವಿಧವನಱಿದಲ್ಲಿ ಸದಾಶಿವಮೂರ್ತಿ
ಲಿಂಗವು ತಾನೆ !"

ಅರಿವಿಲ್ಲದ ಕ್ರಿಯೆ ಹಾಲಿಲ್ಲದ ಹಸು; ಅದಕ್ಕೆ ಬಯಕೆಯ ಕರುವನ್ನು ಬಿಟ್ಟರೆ ಸಿಕ್ಕುವುದು ಒದೆ, ಹಾಲಲ್ಲ ! ಆದುದರಿಂದ ಅರಿವು, ಅರಿವಿನಿಂದ ಪ್ರೇರಿತವಾದ ಕ್ರಿಯೆ - ಇವೆರಡು ಅತ್ಯಗತ್ಯ ಇಷ್ಟಪೂರ್ತಿಗೆ.

ಈ ಪರಿಯ ವೈಚಾರಿಕತೆಯಿಂದ ಓತಪ್ರೋತವಾಗಿರುವ ಅರಿವಿನ ಮೂರಿ ತಂಡೆಗಳ ವಚನಗಳಲ್ಲಿ ಅನೇಕ ಸುಂದರ ಸಾಮತಿಗಳೂ, ಸಾರೋಕ್ತಿಗಳೂ, ವಾಕ್ಯ ಮಾಣಿಕ್ಯಗಳೂ ಸೂರೆಯಾಗಿರುವುದು ಸಹಜವೇ.

"ಆತ್ಮಂಗೆ ಅರಿವು ಸೂಜಿಯ ಮೊನೆಯಂತೆ, ಕುಱುಹು ಹಿಂಗಿಯ ದ್ವಾರದಂತೆ"

"ಉದಕ ನಿಂದಲ್ಲಿ ಪ್ರತಿಬಿಂಬ ನಿಶ್ಚಯವಾಯಿತ್ತು."

"ಕಲ್ಲು ಕಲ್ಲು ತಾಕಿದಲ್ಲಿ ಕಿಚ್ಚಿನ ಕಿಡಿಯಲ್ಲದೆ, ಹೆಂಟೆ ಶಿಲೆ ಹೋರಿದಲ್ಲಿ ಉಂಟೆ ?"

"ಕಸುಗಾಯಲ್ಲಿ ಹಣ್ಣಿನ ರಸವನಱಿಸಿದರುಂಟೆ ಅಯ್ಯಾ"

"ಬಯಲಱಿಯದ ಜಗವುಂಟೆ ? ವಾಯುವಱಿಯದ ಗಂಧವುಂಟೆ ? ಅಪ್ಪುವಱಿತ ಸಕಲ ಜೀತನವುಂಟೆ ?"

"ಕಾಮಧೇನುವೆಂದಡೆ ಇಹುದಕ್ಕೆ ನೆಲೆಬೇಕು, ಕಲ್ಪತರುವೆಂದಡೆ ಹುಟ್ಟುವುದಕ್ಕೆ ಭೂಮಿ ಬೇಕು"

"ಕುರುಡನ ಕೈಯ್ಯಲ್ಲಿ ಕೂಳ ಕಲಸಿ ಪ್ರತಿ ಕುರುಡಂಗೆ ಊಡಿಸಿದಂತಾಯಿತ್ತು."

"ಮಾಡಿದಲ್ಲಿ ಕೂಡಿದ ಕಾರಣ ವೀರಶೈವವೆಂಬ ಹೆಸರಾಯಿತ್ತು."

"ಕಾಯಕ್ಕೆ ಕರ್ಮ ಗುರುವಾಗಬೇಕು; ಜೀವಕ್ಕೆ ಮೋಕ್ಷ ಗುರುವಾಗಬೇಕು."

"ಸದ್ಭಾವ ಗುರುವಾಗಬೇಕು, ನಿರ್ಮಲಾತ್ಮಕ ಶಿಷ್ಯನಾಗಬೇಕು."

"ಓಗರ ಹಸಿಯಿತ್ತೆಂದು ಉಂಬವರಿಲ್ಲ, ನೀರು ಬಾಯಾಱಿತ್ತೆಂದು ಕುಡಿವರಿಲ್ಲ."

"ಆರೇನಾದಡೂ ಆಗಲಿ, ಭಕ್ತಂಗೆ ಸತ್ಯವೆ ನಿತ್ಯದ ಬೆಳಗು."

"ಕೈ ಕಲಸಿ ಬಾಯಿ ಉಂಡಲ್ಲಿ ಅದಾವ ಹಂಗೆಂದೆನಬಹುದು ?"

"ಮುಳ್ಳಿಗೆ ಮೊನೆಯ, ಎಳ್ಳಿಗೆ ಎಣ್ಣೆಯ ತಂದಿರಿಸಿದವರುಂಟೆ ಅಯ್ಯಾ ?"

"ನಡೆವ ಚರಣ ಗುರುಮಾರ್ಗವಾಗಿ, ಕೊಡುವ ಕರ ಚರಮಾರ್ಗವಾಗಿ, ಕೊಂಬ ಜಿಹ್ವೆ ಲಿಂಗದ ಒಡಲಾಗಿ"

"ಜುಂಡ ಫಳದಂತೆ ಹೊಜಗಳ ಬೀಱುಬು, ಒಳಗಳ ಮಧುಸಾರದಂತಿರಬೇಕು."

"ಮುಳ್ಳು ತಾಗಿದಡೆ ಮುಳ್ಳಿನ ಮೊನೆಯಿಂದ ಕಳೆವಂತೆ ತನ್ನಯ ಮಱವೆಯ ತನ್ನ ಅಱಿವಿನಿಂದ ಅಱಿದು...."

"ಸುವರ್ಣ ಒಂದು, ಆಭರಣ ಹಲವಾದಂತೆ"

"ಬ್ರಹ್ಮ ಸೋರೆಯಾಗಿ, ವಿಷ್ಣು ದಂಡವಾಗಿ, ಶ್ರುತಿನಾದ ವಸ್ತುವಾಗಿ ತೋಱುತ್ತಿದೆ...."

"ನೀತಿ ಲಿಂಗವಾಗಿ, ಸದ್ಗುಣ ಕಳೆಯಾಗಿ, ತೋಱುವ ಬೆಳಗು ವಸ್ತುವಾಗಿ"

"ಏನನರಿತು ನುಡಿದಡೂ ಕುಲಛಲ ಮಲಂ ನಾಸ್ತಿಯಾಗಿರಬೇಕು."

"ಪಾದಪ ಗುರುಭಾವ, ಶಾಖೆ ಚರಭಾವ, ಲಿಂಗ ಫಲಭಾವ"

"ಸ್ಥೂಲದಲ್ಲಿ ಸಿಕ್ಕಿ, ಸೂಕ್ಷ್ಮದಲ್ಲಿ ಕಂಡು, ಕಾರಣದಲ್ಲಿ ಅಱಿವುದು."

"ಅಱಿವನಱಿವರನಱಿ"

ಒಟ್ಟನಲ್ಲಿ ಅರಿವಿನ ಮೂರಿತಂಡೆಗಳು ಮರೆಯಲಾಗದ ಮಹಾನುಭಾವರು.

ಆಧ್ಯಾತ್ಮ ಕವಯತ್ರಿ

ಲೇಖಕಿ:
ಕಮಲಾ ಹಂಪನಾ, ಎಂ.ಎ.,
ಮಹಾರಾಣಿಯವರ ಕಾಲೇಜು, ಬೆಂಗಳೂರು

ಕರ್ನಾಟಕದ ನಂದನವನದಲ್ಲಿ ಸೌರಭ ಸೂಸಿ ಅರಳಿ ನಿಂತ ಆಧ್ಯಾತ್ಮ ಮಂದಾರ ಪುಷ್ಪ ಮಹದೇವಿಯಕ್ಕ. ಉಡುತಡಿಯ ವಸುಂಧರೆಯಲ್ಲಿ ಮೊಳಕೆಯೊಡೆದ ಕಲ್ಪವೃಕ್ಷ. ಭಕ್ತಿಯ ಅರ್ಣವದಲ್ಲಿ ತೇಲಿ ಬಂದ ಶುಕ್ತಿಕೆ. ಸೌಜನ್ಯ–ಸಂಸ್ಕೃತಿಗಳ ಮಾವಿಗೆ ಹಬ್ಬಿ ನಿಂತ ಮಲ್ಲಿಗೆ.

ಜೀವನದ ರೀತಿಯಿಂದ ಅಕ್ಕಮಹಾದೇವಿ ವೀರ ವಿರಕ್ತೆ, ಬೋಧನೆಯಿಂದ ತತ್ವಜ್ಞಾನಿ, ವಿಚಾರ ಸರಣಿಯಿಂದ ಕ್ರಾಂತಿಕಾರಿ, ವಚನಗಳಿಂದ ಹಿರಿಯ ಸಾಹಿತಿ. ಚೆನ್ನಮಲ್ಲಿಕಾರ್ಜುನನ ಚೆಲುವರಸಿಯ ಬದುಕೇ ಒಂದು ಮಹಾ ಕಾವ್ಯ. ಆಕೆಯ ಒಂದೊಂದು ವಚನವೂ ಒಂದೊಂದು ಭಾವದ ಬಿಂದು. ಸಂಸ್ಕಾರಗೊಂಡ ಚೇತನ ಆಕೆಯದು. ಸಂಸ್ಕೃತಿಯ ಹಾಲುಗಲ್ಲಿನಲ್ಲಿ ಕಡೆದ ಅಮೃತ ಪುತ್ಥಳಿ ಅಕ್ಕ. ಆಕೆಯಲ್ಲಿ ಕಾಣಬಹುದಾದ ದೃಢನಿರ್ಧಾರ, ವೀರ ವೈರಾಗ್ಯ, ನಿಶ್ಚಲ ಭಕ್ತಿ, ಧರ್ಮಶ್ರದ್ಧೆ, ಕಷ್ಟ ಸಹಿಷ್ಣುತೆ, ಗುರುಹಿರಿಯರಲ್ಲಿ ಭಕ್ತಿ-ಈ ಒಂದೊಂದು ಸದ್ಗುಣಗಳೂ ಆಕೆಯ ವ್ಯಕ್ತಿತ್ವಕ್ಕೆ ಹೆಚ್ಚಿನ ಮಹತ್ವವನ್ನುಂಟು ಮಾಡಿವೆ.

ಅಕ್ಕಮಹಾದೇವಿ ಚಿಕ್ಕಂದಿನಿಂದಲೂ ಪರಶಿವನೇ ಪರದೈವವೆಂದು ಆರಾಧಿಸುತ್ತಾ ಆತನೇ ತನಗೆ ಪತಿಯಾಗಬೇಕೆಂದು ಬಯಸಿ ನಿಶ್ಚಯಿಸಿಕೊಂಡ ಹೆಣ್ಣು ಅವಳು. ಪ್ರಾಪ್ತವಯಸ್ಕಳಾಗಿ, ನವ ಯೌವನೆ, ಸೌಂದರ್ಯದ ನೆಲೆವೀಡಾಗಿ ಬೆಳೆದ ಅವಳ ಮೋಹಕ ರೂಪಕ್ಕೆ ಮಾರು ಹೋಗದವರಾರು ? ಚೆಲುವಿನ ರೂಪದ ಅವಳನ್ನು ಮೋಹಿಸಿದವರೆಷ್ಟು ಮಂದಿಯೋ ! ಹೆತ್ತ ಅಬ್ಬೆ–ಅಯ್ಯಗಳಿಗೆ ಮಗಳ ಮದುವೆಯ ಚಿಂತೆ ಆವರಿಸಿತು. ಅದೇ ವೇಳೆಗೆ ಆ ಊರಿನ ದೊರೆಯಾದ ಕೌಶಿಕ ಒಂದು ದಿವಸ ವೈಹಾಳಿಯಿಂದ ಹಿಂದಿರುಗುತ್ತಾ ಪುಟಕ್ಕಿಕ್ಕಿದ ಅಪರಂಜಿಯಂತಿದ್ದ ಅಕ್ಕಮಹಾದೇವಿಯನ್ನು ನೋಡಿದ. ಒಡನೆಯೇ ಆ ರಾಜನನ್ನು ಕಾಮಂ ಚಲಂ ಮಾಡಿದಂ. ಆಕೆಯೊಡನೆ ಮದುವೆ ನಿಲಬಯಸಿದ ರಾಜ. ಪ್ರೇಮ ಭಿಕ್ಷೆಗೆ ಸಿದ್ಧನಾದ. ಆದರೆ ಅಕ್ಕನಿಂದ ದೊರೆತ ಉತ್ತರ ನಿರಾಶೆಯ ಕಾರ್ಮೋಡವನ್ನು ಕವಿಯಿತು. ಶಿವನನ್ನು ಒಲಿದ ಅಕ್ಕನ ಜೀವನಕ್ಕೆ ಯಾವ ಹಂಗೂ ಇಲ್ಲದಾಯಿತು. ಕೆಚ್ಚೆದೆಯ ಸ್ಪಷ್ಟ ನಿರ್ಧಾರ ಅವಳಿಂದ ಹೊರಹೊಮ್ಮಿತು.

ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗಾನೊಲಿದೆ
ಎಡೆ ಇಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ
ಚೆಲುವಂಗಾನೊಲಿದೆ
ಎಲೆ ಅವ್ವಾ ನೀನು ಕೇಳಾ ತಾಯೆ ।
ಭವವಿಲ್ಲದ, ಭಯವಿಲ್ಲದ ನಿರ್ಭಯ ಚೆಲುವಂಗೆ ಒಲಿದೆ ನಾನು
ಕುಲಸೀಮವಿಲ್ಲದ ನಿಸ್ಸೀಮ ಚೆಲುವಂಗೆ ನಾನೊಲಿದೆ
ಇದು ಕಾರಣ ಚೆನ್ನಮಲ್ಲಿಕಾರ್ಜುನ ಚೆಲುವ ಗಂಡ ನನಗೆ
ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕ

ಲೌಕಿಕ ದೃಷ್ಟಿಯಿಂದ ಮದುವೆಯಾಗಬೇಕೆಂದು ಮಹಾದೇವಿಯಕ್ಕ ಪರಿತಪಿಸಲಿಲ್ಲ. ಆಕೆಯದು ಪಾರಮಾರ್ಥಿಕ ದೃಷ್ಟಿ.

ಸುಸಂಸ್ಕೃತ ಚೇತನ ನಿರಂತರ ಒಳ್ಳೆಯದನ್ನೇ ಬಯಸುವುದು. ಇದು ಮೊದಲ ಮೆಟ್ಟಿಲಾದರೆ, ಅದನ್ನು ಸಾಧಿಸುವುದು ಎರಡನೆಯ ಮಜಲು, ಅದನ್ನು ಪಡೆಯುವುದು ಅಂತಿಮ ಗುರಿಯಾಗಿ ನಿಲ್ಲುತ್ತದೆ. ಆ ಸಾಧನೆಗೆ ಸವಾಲಾಗಿ ಹಿಮಾಲಯ ಸದೃಶ ಕಷ್ಟಪರಂಪರೆಗಳು ನಿಂತರೂ, ಆ ಹಿರಿಯ ಚೇತನ ತಲೆ ಬಾಗುವುದಿಲ್ಲ. ಅಕ್ಕ ಈ ಶ್ರೇಣಿಯಲ್ಲಿ ನಿಂತವಳು. ತನ್ನ ನಿರ್ಧಾರಕ್ಕೆ ಚಂಚಲತೆಯ ಸೋಂಕು ತಾಕದಂತೆ ಎಚ್ಚರ ವಹಿಸಿದಳು. ತನ್ನ ಅಂತರಾತ್ಮ ಅರಿಸಿದ ಶಿವನನ್ನೇ ತನ್ನ ಪತಿಯನ್ನಾಗಿ ಪಡೆಯುತ್ತೇನೆ ಎನ್ನುವ ನಿರ್ಧಾರ ದೃಢವಾಗ ತೊಡಗಿತು. ಈ ನಿರ್ಧಾರ ಅಕ್ಕನನ್ನು ಗರಗಸದ ಇರಿತಕ್ಕೆ ಒಳಗು ಮಾಡಿತು. ಅಕ್ಕನ ಬಯಕೆಯಾದರೋ ಅಸೀಮವಾದುದು. 'ಭೂಮೈತ್ಸುಖಂ, ನಅಲ್ಪೇ ಸುಖಮಸ್ತಿ', ಬಯಸುವುದು ಜೀವಿಯ ಲಕ್ಷಣ. ಆದರೆ ಅಲ್ಪವಾದುದನ್ನು ಬಯಸದೆ ಹಿರಿದಾದುದನ್ನೇ ಬಯಸುವುದು ಸುಸಂಸ್ಕೃತಳಾದ ಅಕ್ಕನಿಗೆ ಮಾತ್ರ ಸಾಧ್ಯ. ಕಿರಿದಾದ ಬಯಕೆಯನ್ನು ನಿರಾಕರಿಸಿ, ಹಿರಿದಾದ ಸಿದ್ಧಿಗೆ ಆಹ್ವಾನವಿತ್ತಳು. ಇದು ಖಚಿತವಾದಂತೆ ಕಷ್ಟಗಳ ಕಲ್ಲುಮಳೆ ಸುರಿಯಲಾರಂಭಿಸಿತು.

ರಾಮಾಯಣದಲ್ಲಿ ತುಂಬು ಗರ್ಭಿಣಿಯಾದ ಸೀತಾದೇವಿಯನ್ನು ಪ್ರಜೆಗಳ ಹಿತಕ್ಕಾಗಿ ತ್ಯಾಗ ಮಾಡಿದ ಶ್ರೀರಾಮನ ನಿರ್ಧಾರದಂತೆ ಅಚಲವಾದುದು ಅಕ್ಕನ ನಿರ್ಧಾರ. ತನ್ನ ಆಧ್ಯಾತ್ಮದ ಈ ಗುರಿಸಾಧನೆಗೆ ವಿಘ್ನವನ್ನೂ, ವಿಪತ್ತನ್ನೂ ತಂದೊಡ್ಡುವ ಲೌಕಿಕದ ಅನೇಕ ಅಮೂಲ್ಯ ವಸ್ತುಗಳನ್ನು ಆಕೆ ತ್ಯಾಗ ಮಾಡಬೇಕಾಯಿತು. ಲೌಕಿಕದ ಆಸೆ ಆಮಿಷಗಳು ಆಕೆಯ ದಿಟ್ಟತನದ ಹೆಜ್ಜೆಗೆ ಹಂತ [illegible] ತಡೆಗಳು. ಸಂಸಾರ ಬಂಧನ ತನ್ನ ಗುರಿಗೆ ಅಡ್ಡಿಯಾಗಿದೆ [illegible]ದನ್ನು ತಿಳಿದ ವೀರ ವಿರಕ್ತೆ ಅಕ್ಕಮಹಾದೇವಿ ಅದಕ್ಕೆ ಸೆಟೆದು ನಿಂತಳು. ನಿಂತ ನಿಲುವಿನಲ್ಲಿ ಎಲ್ಲವನ್ನು ತೊರೆದು, ಕಡೆಗೆ ಮೈ ಮೇಲಿನ ಅರಿವೆಯ ಹಂಗಿಗೂ ಜಲಾಂಜಲಿಯಿತ್ತು ಹೊರಟಳು.

ಯೌವನ ಜಾರಿ ವೃದ್ಧಾಪ್ಯ ತೋರಿದ ಮೇಲೆ, 'ಊರು ಹೋಗು, ಕಾಡು ಬಾ' ಎಂದಾಗ ಸಂಸಾರದಲ್ಲಿ ವಿರಕ್ತಿ ಹೊಂದಿ,

ಕಾವಿಧರಿಸಿ ಕಾಡಿಗೆ ಹೋಗುವುದು ಹೆಚ್ಚಿನದಲ್ಲ. ಏರುಜವ್ವನದ ಹೊಸ್ತಿಲಿನಲ್ಲಿ ನಿಂತಿದ್ದು ಭೋಗದ ಅರಮನೆಯ ಬಾಗಿಲು ತೆರೆದಿದ್ದು, 'ನನ್ನನ್ನು ಅನುಭವಿಸು ಬಾ, ಬಾ,' ಎಂದು ಆಹ್ವಾನಿಸುತ್ತಿದ್ದಾಗ ಅದರಿಂದ ವಿಮುಖರಾಗಿ ಹೊರಡುವುದು ಸುಲಭದ ಮಾತಲ್ಲ. ಆ ವಯಸ್ಸಿನಲ್ಲಿ ದೇಹದ ಒಂದೊಂದು ಅಂಗಾಂಗಗಳೂ, ರಕ್ತದ ಒಂದೊಂದು ಕಣಗಳೂ ವಿಷಯಲೋಲುಪತೆಗೆ, ಭೋಗದ ಸುಖಕ್ಕೆ ಬಯಸುವುದು ಸಹಜ. ಅದು ಪ್ರಕೃತಿ ಸಹಜ ಧರ್ಮವೂ ಹೌದು. ಆದರೆ ಅಂಥ ಸಮಯದಲ್ಲಿ ಭೋಗಕ್ಕೆ ವಿಮುಖರಾಗಿ, ಯೋಗದ ಕಡೆಗೆ ಮುಖಮಾಡುವುದು ಸಂಯಮಶೀಲೆ ಅಕ್ಕಮಹಾದೇವಿ ಯಂಥವರಿಗೆ ಮಾತ್ರ ಸಾಧ್ಯ. ಜೀವನದಲ್ಲಿ ಎಲ್ಲ ರೀತಿಯ ಆಸೆ-ಆಕಾಂಕ್ಷೆಗಳೂ, ಬಯಕೆಯ ಬೀಜಗಳೂ ಬತ್ತಿಹೋದ ಮೇಲೆ ಬದುಕಿನಲ್ಲಿ ಯಾವ ಆಸಕ್ತಿಯೂ ಉಳಿಯದೆ ಇದ್ದಾಗ, ಭಗವಂತ ನನ್ನು ಬಾ ಎಂದು ಕರೆಯುವುದರಲ್ಲಿ ಅರ್ಥವಿಲ್ಲ. ಇಂಥವರನ್ನು ಕಂಡೇ ಭಕ್ತಿ ಭಂಡಾರಿ ಬಸವಣ್ಣನವರು ತಮ್ಮ ಒಂದು ವಚನದಲ್ಲಿ ಹೀಗೆ ಹೇಳಿದರು :

ನೆರೆ ಕೆನ್ನೆಗೆ, ತೆರೆಗಲ್ಲಕೆ, ಶರೀರ ಗೂಡು ಹೋಗದ ಮುನ್ನ
ಹಲ್ಲು ಹೋಗಿ ಬೆನ್ನು ಬಾಗಿ ಅನ್ಯರಿಗೆ ಹಂಗಾಗದ ಮುನ್ನ
ಕಾಲಮೇಲೆ ಕೈಯನೂರಿ ಕೋಲು ಹಿಡಿಯದ ಮುನ್ನ
ಮುಪ್ಪಿಂದ ಒಪ್ಪವಳಿಯದ ಮುನ್ನ
ಮೃತ್ಯು ಮುಟ್ಟದ ಮುನ್ನ
ಪೂಜಿಸು ನಮ್ಮ ಕೂಡಲಸಂಗಮದೇವನ.

ಸುತ್ತಮುತ್ತ ಬಯಕೆಗಳು ಬಳಸಿರುವಾಗ, ಅನುಭವಿಸುವ ಅವಕಾಶ ವಿರುವಾಗ ಅವೆಲ್ಲವನ್ನೂ ಒತ್ತಟ್ಟಿಗಿಟ್ಟು ಶಿವನನ್ನು ಅರ್ಚಿಸು ಎಂದು ಉಪದೇಶಿಸಿದರೆ ಅದನ್ನು ಸಾರ್ಥಕಗೊಳಿಸಿದ ಹಿರಿಮೆ ಅಕ್ಕನದು. ಅಕ್ಕನ ವೀರ ವೈರಾಗ್ಯ ಎಂಥ ಎಂಟೆದೆಯ ಕೆಚ್ಚೆದೆಯ ಗಂಡನ್ನೂ ನಡುಗಿಸುವಂಥಾದ್ದಾಗಿದೆ.

ಅಕ್ಕನೇನೋ ಎಲ್ಲವನ್ನೂ ತೊರೆದಳು. ಆದರೆ ಅರಿಷಡ್ವರ್ಗ ಗಳು ಅಷ್ಟು ಸುಲಭದಲ್ಲಿ ಆಕೆಯನ್ನು ತೊರೆಯಲು ಸಾಧ್ಯವೇ ? ಬಿಟ್ಟೆನೆಂದರೆ ಬಿಡದೀಮಾಯೆ ! ಆಂತರಿಕ ಚಿಂತಕರು ಇವರಾದರೆ ಬಾಹ್ಯ ಚಿಂತಕರಿಗೇನು ಕಡಿಮೆಯೇ ? ಅವರ ದೃಷ್ಟಿಯಲ್ಲಿ ಸ್ಫುರ ದ್ರೂಪಿಯಾದ ಕೌಶಿಕ, ಮೇಲಾಗಿ ರಾಜ, ಆಸ್ತಿವಂತ,ಗುಣವಂತ, ಅಧಿಕಾರಸ್ಥ ಎಲ್ಲಕ್ಕಿಂತಲೂ ಮಿಗಿಲಾಗಿ ಅಕ್ಕನನ್ನು ಒಲವೆರಸಿಯಾಗಿ ಬಯಸಿದ ರಸಿಕರಾಜ. ಉಳಿದವರ ಪಾಲಿಗೆ ಇದು ಅಪೂರ್ವ ಅದೃಷ್ಟವಾದರೆ ಅಕ್ಕನ ಪಾಲಿಗೆ ಇದೊಂದು ದುರದೃಷ್ಟ. ಆಕೆ ನೊಂದು ನುಡಿದಳು :

ಎರದ ಮುಳ್ಳಿನಂತೆ ಪರಗಂಡರೆನಗವ್ವಾ
ಸೋಂಕಲಮ್ಮೆ, ಸುಳಿಯಲಮ್ಮೆ
ನಂಬಿನಚ್ಚಿ ಮಾತನಾಡಲಮ್ಮೆನವ್ವಾ
ಚೆನ್ನಮಲ್ಲಿಕಾರ್ಜುನನಲ್ಲದೆ ಉಳಿದ ಗಂಡರ ಉರದಲ್ಲಿ
ಮುಳ್ಳುಂಟೆಂದು ನಾನಪ್ಪಲಮ್ಮೆನವ್ವಾ.

ಆಕೆಯ ಹಿತಚಿಂತಕರು ಅಕ್ಕನನ್ನು ಅಷ್ಟಕ್ಕೇ ಬಿಡುವರೆ ? ಅವರು ಅಕ್ಕನನ್ನು ಕೇಳಿರಬಹುದು 'ನಿನ್ನ ಊಟವೆಲ್ಲಿ ? ನಿನ್ನ ಶಯನ ವೆಲ್ಲಿ ? ಒಬ್ಬಂಟಿಗಳಾದ ನಿನ್ನ ಪಾಡು ಏನೆಂದು ? ಅಕ್ಕನ ಉತ್ತರ ಸದಾ ಸಿದ್ಧವಾದುದೇ ! ಸಂತಸದಿಂದಲೇ ಉತ್ತರಕೊಟ್ಟಿದ್ದಾಳೆ, ತಾನು ನಡೆಯುವ ದುರ್ಗಮದಾರಿಗೂ, ಮಾರ್ಗ ಕಂಡಿದ್ದಾಳೆ, ಆ ಕಾಣ್ಕೆ ಆವಳಿಂದ ಹೀಗೆ ನುಡಿಸಿತು:

"ಹಸಿವಾದಡೆ ಭಿಕ್ಷಾನ್ನಗಳುಂಟು
ತೃಷೆಯಾದೊಡೆ ಕೆರೆಹಳ್ಳ ಬಾವಿಗಳುಂಟು,
ಶಯನಕ್ಕೆ ಹಾಳು ದೇಗುಲಗಳುಂಟು
ಚೆನ್ನಮಲ್ಲಿಕಾರ್ಜುನಯ್ಯ ಆತ್ಮ ಸಂಗಾತಕ್ಕೆ ನೀನೆನಗುಂಟು".

ಆತ್ಮ ಸಂಗಡಿಗನಾಗಿ ಚೆನ್ನಮಲ್ಲಿಕಾರ್ಜುನನು ಇರಬೇಕಾದರೆ ಅಕ್ಕನಿಗೆ ಅರಕೆಯಾದರೂ ಏನು ? ಹೀಗೆ ಹಾಡಿದ ಆಕೆಯ ವೈರಾಗ್ಯ ಮುಂದೆ ಇನ್ನೂ ಹೆಚ್ಚಿನ ದಿಟ್ಟತನದ ಹೆಜ್ಜೆ ಇಡುತ್ತದೆ. ಹಸಿದಾಗ ಭಿಕ್ಷಾನ್ನ ದೊರೆತರೆ ಸರಿ, ಇಲ್ಲದಿದ್ದರೆ ? ಬಾಯಾರಿದಾಗ ಕೆರೆಹಳ್ಳ ಬಾವಿಗಳು ಸಿಕ್ಕಿದರೆ ಒಳ್ಳೆಯದೆ, ಅವುಗಳು ಸಿಕ್ಕದಿದ್ದರೆ ? ಮಲಗಬೇಕು ಎನಿಸಿದಾಗ ಹಾಳುದೇಗುಲ ಕಣ್ಣಿಗೆ ಬಿದ್ದರೆ ಆಯಿತು, ಕಾಣದಿದ್ದರೆ ? ಆದ್ದರಿಂದ ಅಕ್ಕ ಕೈಗೊಂಡ ದಾರಿ ಅಷ್ಟು ಸುಲಭ ದಲ್ಲ. ಇನ್ನು ದುರ್ಭರವಾದುದು. ಆದರೆ ಆಕೆ ಅದಕ್ಕೆ ಅಂಜಿದಳೇ? ಮನಸ್ಸನ್ನು ವಜ್ರದಂತೆ ಕಠಿನ ಮಾಡಿಕೊಂಡಳು, ತನಗೆ ತಾನೇ ಕಷ್ಟ ಪರಂಪರೆಗಳನ್ನು ಆಹ್ವಾನಿಸಿ, ದೇಹಕ್ಕೂ ಹಾಗೂ ಮನಸ್ಸಿಗೂ ಆ ನೋವನ್ನು ಒಗ್ಗಿಸಿಕೊಂಡಳು. ಆಗ ಅವಳ ಮನೋಭಾವ ಹೀಗೆ ವ್ಯಕ್ತವಾಯಿತು:

ಮನೆಮನೆದಪ್ಪದೆ ಕೈಯೊಡ್ಡಿ ಬೇಡುವಂತೆ ಮಾಡಯ್ಯ
ಬೇಡಿದರೆ ಇಕ್ಕದಂತೆ ಮಾಡಯ್ಯ
ಇಕ್ಕಿದರೆ ನೆಲಕ್ಕೆ ಬೀಳುವಂತೆ ಮಾಡಯ್ಯ
ನೆಲಕ್ಕೆ ಬಿದ್ದರೆ ನಾನೆತ್ತಿಕೊಂಬುದಕೆ ಮುನ್ನವೆ
ಶುನಿ ಎತ್ತಿಕೊಂಬಂತೆ ಮಾಡಾ । ಚೆನ್ನಮಲ್ಲಿಕಾರ್ಜುನಯ್ಯ.

ಅಕ್ಕ ತನ್ನ ಆತ್ಮಕ್ಕೆ ಭದ್ರವಾದ ವಜ್ರಕವಚವನ್ನೇ ತೊಡಿ-ಸಿದಳು. ಮಹಾದೇವಿ ಕಷ್ಟಗಳನ್ನು ಆಹ್ವಾನಿಸಿದ ರೀತಿ ಒಂದು ತೆರ ನಾದರೆ, ಭಗವಂತ ಭಕ್ತರನ್ನು ಪರಿಕಿಸುವ ವಿಧಾನ ಮತ್ತೂ ಕಠಿನ ವಲ್ಲವೇ ? ಇದು ಜ್ಞಾನ ಜ್ಯೋತಿ ಅಕ್ಕನಿಗೆ ಅರಿಯದೆ ? ತನ ಪ್ರಾಣವನ್ನೇ ಪಣವೊಡ್ಡಿ ತನ್ನ ಸಾಧನೆಗೆ ತೊಡಗುತ್ತಾಳೆ.

ಕಿಡಿ ಕಿಡಿ ಕೆದರಿದರೆ ಹಸಿವು ತೃಷೆ ಅಡಗಿತೆಂದಳು, ಮುಗಿಲು ಹರಿದು ಬಿದ್ದರೆ ಮಜ್ಜನಕ್ಕೆರೆದರೆಂದಳು, ಗಿರಿ ಮೇಲೆ ಬಿದ್ದರೆ ಪುಷ್ಪ ಬಿದ್ದಿತೆಂದಳು, ಶಿರ ಹರಿದು ಬಿದ್ದರೆ ಚೆನ್ನಮಲ್ಲಿಕಾರ್ಜುನನಿಗೆ ಪ್ರಾಣ ಆರ್ಪಿತವಾಯಿತೆಂದಳು. ಅಕ್ಕನ ಸಾಣೆ ಹಿಡಿದ ಆತ್ಮಸಂಸ್ಕಾರಕ್ಕೆ ದ್ಯೋತಕಗಳಾಗಿವೆ ಈ ನುಡಿಗಳು !

ಅಕ್ಕ ತನಗೆ ಶಿವನಲ್ಲಿ ಇದ್ದ ನಿಶ್ಚಲ ಭಕ್ತಿಯಿಂದ ಆತನನ್ನು ತನ್ನ [illegible]ವನಾಗಿ, [illegible] ತನ್ನ ಪತಿಯಾಗಿ [illegible]

ಶಿವನನ್ನು ಪತಿಯಾಗಿ ಕಂಡ ಅಕ್ಕನ ಅನುಭಾವದ ಗೀತೆಗಳು ಶೃಂಗಾರಮಯವಾದುವು.ಕಾಳಿದಾಸನ ವಿಕ್ರಮೋರ್ವಶೀಯ, ಮೇಘ ದೂತಗಳಲ್ಲಿ ಕಾಣುವ ವಿಪ್ರಲಂಭ ಶೃಂಗಾರಕ್ಕೆ ಹೆಗಲೆಣೆಯಾಗಿ ನಿಲ್ಲುವ ಶೃಂಗಾರರಸ ಅಕ್ಕನ ವಚನಗಳಲ್ಲಿ ಮಡುಗಟ್ಟಿ ನಿಂತಿದೆ. ಇತರ ವಚನಕಾರರಲ್ಲಿ ಬಹುತೇಕಮಂದಿ ಧರ್ಮದ ಉಪದೇಶಕ್ಕಾಗಿ, ಜ್ಞಾನದ ಅರಿವಿಗಾಗಿ, ವಚನಗಳನ್ನು ಸೃಷ್ಟಿಸಿದರು, ಹಾಡಿದರು. ಆದರೆ ಸಹಜ ಕವಯಿತ್ರಿಯಾದ ಹಿರಿಯ ಸಾಹಿತಿ ಅಕ್ಕನಿಗೆ ಆತ್ಮದ ಅನುಭಾವವೇ ಕಾವ್ಯಧಾರೆಯಾಗಿ ಹೊರಸೂಸಿತು. ತತ್ವ, ಧರ್ಮ, ಉಪದೇಶ– ಈ ವಿಚಾರಗಳಿಂದ ಕೂಡಿದ ವಚನಗಳ ರಚನೆ ಅಕ್ಕನಿಂದ ಆಗಿಲ್ಲವೆಂದಲ್ಲ. ಆದರೆ ಈಕೆಯ ವಚನಗಳಲ್ಲಿ ಆಧ್ಯಾತ್ಮದ ಜೊತೆಗೆ ಶೃಂಗಾರ ಹಿತಮಿತವಾಗಿ ಮಿಳಿತವಾಗಿದೆ. ಆಧ್ಯಾತ್ಮ, ಶೃಂಗಾರದ ಲೇಪವನ್ನು ಪಡೆದಿವೆ. ಈ ಅಪೂರ್ವಸಂಗಮ, ಆಧ್ಯಾತ್ಮ–ಶೃಂಗಾರಗಳ ಸಾಮರಸ್ಯ, ಅಕ್ಕನ ಕಾವ್ಯಗುಣಕ್ಕೆ ಹೆಚ್ಚಿನ ಮೆರಗನ್ನು ಕೊಟ್ಟಿದೆ; ಮೃದು, ಮಧುರ ಕೋಮಲ ಪ್ರಣಾಲಿಕೆಯಲ್ಲಿ ಅಕ್ಕನ ತೀವ್ರ ಭಾವನೆಗಳು ಹರಿದಿವೆ. ಆಕೆಯ ವಚನಗಳು ಕೇಳುವವರ ಕಿವಿಗೆ ಇಂಪು, ಭಕ್ತರ ಮನಸ್ಸಿಗೆ ತಂಪು

> ಗಿರಿಯಲ್ಲದೆ ಹುಲು ಮೊರಡಿಯಲ್ಲಾಡುವುದೇ ನವಿಲು
> ಕೊಳನಲ್ಲದೆ ಕಿರುವಳ್ಳಕ್ಕೆಳಸುವುದೆ ಹಂಸೆ
> ಮಾಮರ ತಳಿತಲ್ಲದೆ ಸ್ವರಗೈವುದೆ ಕೋಗಿಲೆ
> ಪರಿಮಳವಿಲ್ಲದ ಪುಷ್ಪಕ್ಕೆಳಸುವುದೆ ಭ್ರಮರ
> ಎನ್ನದೇವ ಚನ್ನಮಲ್ಲಿಕಾರ್ಜುನನಲ್ಲದೆ ಅನ್ಯಕ್ಕೆಳಸುವುದೇ
> ಎನ್ನಮನ ಕೇಳಿರೇ ಕೆಳದಿಯರಾ !

ಚೆನ್ನಮಲ್ಲಿಕಾರ್ಜುನನಲ್ಲಿರುವ ಅಕ್ಕನ ಅನನ್ಯ ಪ್ರೀತಿಯ ಕುರುಹುಗಳು ನೂರಾರು ರೀತಿಯಿಂದ ಹೊರಹೊಮ್ಮಿವೆ. ಈ ದೃಷ್ಟಿಯಿಂದ ಸಮೀಕ್ಷಿಸಿದರೆ ಆಕೆಯ ಒಂದೊಂದು ವಚನವೂ ಒಂದೊಂದು ಸುಂದರ ಭಾವಗೀತೆಯಾಗಿದೆ. ತನ್ನ ನೋವು–ನಲಿವಿನ ಅಭಿವ್ಯಕ್ತಿ ಮನಮೆಚ್ಚುವಂತಿದೆ.

> ಬಂಜೆ ಬೇನೆಯನರಿಯಳು
> ಮಲತಾಯಿ ಮುದ್ದಬಲ್ಲಳೇ
> ನೊಂದನೋವ ನೋಯದವರೆತ್ತ ಬಲ್ಲರು
> ಚೆನ್ನಮಲ್ಲಿಕಾರ್ಜುನ ನೀನಿರಿದ ಅಲಗು ಒಡಲಲ್ಲಿ
> ಮುರಿದು ಹೊರಳುವವಳ ನೀವೆತ್ತ ಬಲ್ಲಿರೆ ಎಲೆ ತಾಯಿಗಳಿರಾ?

ಈ ಮಾನಸಿಕ ಯಾತನೆಗೆ ಇದಕ್ಕಿಂತ ಸುಮೆರ್ಪಕ ಹೋಲಿಕೆ ಇನ್ನೆಲ್ಲಿಯದು ? ಹೇಳುವ ಸತ್ಯವನ್ನು ಸ್ಪಷ್ಟವಾಗಿ ಹೇಳಿದರೂ ಅದರಲ್ಲಿ ಕಾಣುವ ಮೃದುತ್ವ ಗಮನಾರ್ಹವಾದುದು. ಸತ್ಯವನ್ನು ನುಡಿದರೂ ಪ್ರಿಯವಾಗಿ ನುಡಿಯುವುದು ಸುಸಂಸ್ಕೃತನ ಲಕ್ಷಣ. ಸತ್ಯಂಬ್ರೂಯಾತ್, ಸತ್ಯಂ ಪ್ರಿಯಂ ಬ್ರೂಯಾತ್, ಸತ್ಯಂ ಅಪ್ರಿಯಂ ನಬ್ರೂಯತ್ ಎಂದು ಆರ್ಯರ ವಾಣಿ ಸುಸಂಸ್ಕೃತ ಲಕ್ಷಣವನ್ನು ಕುರಿತು ಹೇಳಿದೆ. ಈ ಹೇಳಿಕೆ ಅಕ್ಕನಿಗೆ ಅನ್ವರ್ಥವಾಗಿದೆ. 'ತನ್ನ ಪತಿ ಶಿವ, ಇದರ ಬಗ್ಗೆ ಯಾರೂ ಏನೂ ಟೀಕೆ ಮಾಡಬೇಕಾದುದಿಲ್ಲ. ಯಾರ ಉಪದೇಶದ ಅಗತ್ಯವೂ ತನಗಿಲ್ಲ' ಎಂದು ಹೇಳುವ ಸತ್ಯವನ್ನು ಅಕ್ಕ ಕಟುವಾಗಿ ನುಡಿಯಬಹುದಿತ್ತು. ಆದರೆ ಅಕ್ಕನದು ಸುಸಂಸ್ಕೃತ ಚೇತನ. ಆದ್ದರಿಂದ ಆಕೆ ಹಾಗೆ ಹೇಳಲು ಬರುವಂತಿಲ್ಲ. ಸತ್ಯವನ್ನೇ ಪ್ರಿಯವಾಗಿ ಮಧುರವಾಗಿ ಯಾರ ಮನಸ್ಸಿಗೂ ನೋವಾಗದಂತೆ ಹೇಳಿದ್ದಾಳೆ.

ಚೆನ್ನಮಲ್ಲಿಕಾರ್ಜುನನ ಒಲವಿನ ಅಲಗು ಒಡಲಲ್ಲಿ ಮುರಿದು ನರಳುತ್ತಿರುವ ಅಕ್ಕ ಹಗಲು ನಾಲ್ಕು ಜಾವ ಚೆನ್ನಮಲ್ಲಿಕಾರ್ಜುನನ ಧ್ಯಾನದಲ್ಲಿದ್ದಾಳೆ. ಇರುಳು ನಾಲ್ಕು ಜಾವ ವಿಕಳಾವಸ್ಥೆಯಲ್ಲಿದ್ದಾಳೆ, ಹಗಲು–ಇರುಳು ಆತನ ಕಳವಳದಲ್ಲಿ ಮರೆದೊರಗಿದ್ದಾಳೆ, ಆತನ ಒಲುಮೆ ನಟ್ಟು ಹಸಿವೆ, ತೃಷೆ, ನಿದ್ರೆಯ ಮರೆತಿದ್ದಾಳೆ. 'ಜಗತ್ ಸರ್ವಂ ಮಲ್ಲಿಕಾರ್ಜುನ ಮಯಂ' ಆಗಿದೆ ಆಕೆಗೆ.

ಈ ಒಲವಿನ ಹಿಂಸೆಗೆ ಆಕೆ ಹೆದರುವಳೆ ? ಅವಳಲ್ಲಿ ಪ್ರಾರಂಭದಲ್ಲಿ ಮೂಡಿದ್ದ ಆರ್ತಧ್ವನಿ ಮರೆಯಾಗತೊಡಗಿದಂತೆ ಕೆಚ್ಚಿನ, ಆತ್ಮವಿಶ್ವಾಸದ ನುಡಿ ಕೇಳಿಬರುತ್ತದೆ. ಶಿವ ಪರೀಕ್ಷೆಯ ಒರೆಗಲ್ಲಿಗೆ ಸಿದ್ಧಳಾಗುತ್ತಾಳೆ.

> ಚಂದನವ ಕಡಿದು ಕೊರೆದು ತೇಯ್ದಡೆ, ನೊಂದೆನೆಂದು
> ಕಂಪ ಬಿಟ್ಟಿತೆ
> ತಂದು ಸುವರ್ಣವ ಕಡಿದು ಒರೆದೊಡೆ ಕಳಂಕವ ಹಿಡಿದಿತ್ತೆ
> ಸಂದು ಸಂದು ಕಡಿದು ಕಬ್ಬು ಗಾಣದಲಿ ಸಿಕ್ಕಿ ಅರೆದೊಡೆ
> ಬೆಂದು
> ಸಕ್ಕರೆಯಾಗಿ ನೊಂದೆನೆಂದು ಸವಿಯ ಬಿಟ್ಟಿತೆ
> ನಾ ಹಿಂದೆ ಮಾಡಿದ ಹೀನಂಗಳೆಲ್ಲವ ತಂದು ಮುಂದಿಳುಹಲು
> ನಿಮಗೆ ಹಾನಿಯೆ ?
> ಎನ್ನದೇವ ಚೆನ್ನಮಲ್ಲಿಕಾರ್ಜುನಯ್ಯ, ನೀನು ಕೊಂದಡೆಯೂ
> ನಾನು ಶರಣೆಂಬುದ ಮಾಣೆ

ತನ್ನ ಅಚಲ ಬಲವನ್ನು ಸ್ಪಷ್ಟಪಡಿಸಿದಳು ಶಿವನಿಗೆ ಅಕ್ಕ. ತಾನು ಶಿವನನ್ನು ಒಲಿದಿದ್ದಾಳೆ. ಆದರೆ ಶಿವ ತನ್ನನ್ನು ಒಲಿದಿದ್ದಾನೋ ಇಲ್ಲವೋ ? ತಿಳಿಯದು. ಹಾಗೆಂದು ಅಕ್ಕನ ಒಲವಿನ ಒರತೆ ಬತ್ತೀತೆ ? ಅದು ನಿರಂತರ ಪುಟಿಯುವ ಸೆಲೆ. ಆಕೆಯ ಪಂಚೇಂದ್ರಿಯಗಳೂ ಪಂಚಾನನನನ್ನೇ ಹಮ್ಮಿ ನಿಂತಿವೆ:

> ಅಯ್ಯಾ ನೀ ಕೇಳಿದರೆ ಕೇಳು ಕೇಳದಿರ್ದಡೆ ಮಾಣು
> ನಾನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯಾ
> ಅಯ್ಯಾ ನೀ ಒಲಿದರೆ ಒಲಿ ಒಲಿಯದಿರ್ದಡೆ ಮಾಣು
> ನಾನಿನ್ನ ಪೂಜಿಸಿದಲ್ಲದೆ ಸೈರಿಸಲಾರೆನಯ್ಯಾ
> ಅಯ್ಯಾ, ನೀ ಮೆಚ್ಚಿದರೆ ಮೆಚ್ಚು ಮೆಚ್ಚದಿರ್ದಡೆ ಮಾಣು
> ನಾನಿನ್ನನಪ್ಪಿದಲ್ಲದೆ ಸೈರಿಸಲಾರೆನಯ್ಯಾ
> ಅಯ್ಯಾ ನೀ ನೋಡಿದಡೆ ನೋಡು ನೋಡದಿರ್ದಡೆ ಮಾಣು
> ನಾನಿನ್ನ ನೋಡಿ ಹಾರೈಸಿದಲ್ಲದೆ ಸೈರಿಸಲಾರೆನಯ್ಯಾ

ಚೆನ್ನಮಲ್ಲಿಕಾರ್ಜುನಯ್ಯಾ, ನಾ ನಿಮ್ಮ ಪೂಜಿಸಿ
ಹರುಷದೊಳೋಲಾಡುವೆನಯ್ಯಾ.

ಅಕ್ಕನ ಇಂಥ ಆತ್ಮಸಂಸ್ಕಾರಕ್ಕೆ ಶರಣರ ಸಂಗವೂ ಸಹಾಯ ಮಾಡಿತು. 'ಸತ್ಯಂವದ, ಧರ್ಮಂಚರ' ಇದು ಅಕ್ಕನ ನುಡಿ-ನಡೆ. ಅಕ್ಕ ಸತ್ಯದ ಭಾನು ಎನ್ನುವುದನ್ನು ನಾವು ಆಗಲೇ ನೋಡಿದೆವು. ಆಕೆ ನುಡಿದಂತೆ ನಡೆದಳು. ಅಂಥವರನ್ನೇ ಕಾಣಬಯಸಿದಳು. ಅಂಥವರ ದರ್ಶನ ಒಂದು ಸೌಭಾಗ್ಯವೇ ಸರಿ ಎಂದು ತಿಳಿದಳು:

ತನು ಶುದ್ಧ, ಮನ ಶುದ್ಧ, ಭಾವಶುದ್ಧರಾದವರನೆನಗೊಮ್ಮೆ
ತೋರಾ
ನಡೆಯೆಲ್ಲ ಸದಾಚಾರ, ನುಡಿಯೆಲ್ಲ ಶಿವಾಗಮ,
ನಿತ್ಯ ಶುದ್ಧರಾದವರನೆನಗೊಮ್ಮೆ ತೋರಾ
ಕತ್ತಲೆಯ ಮೆಟ್ಟಿ ತಲೆವೆಳಗಾಗಿ ಹೊರಗೊಳಗೊಂದಾಗಿನಿಂದ
ನಿಮ್ಮ ಶರಣರನೆನಗೊಮ್ಮೆ ತೋರಾ ಚೆನ್ನಮಲ್ಲಿಕಾರ್ಜುನಾ

ಸದಾಚಾರದ ನಡಿಗೆ, ಶಿವಾಗಮನದ ನುಡಿ ಅಕ್ಕನದು. ಗುರುಹಿರಿಯರಲ್ಲಿ ಭಕ್ತಿ, ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುವುದು ಸನ್ಮಾರ್ಗಿಗಳ ರೀತಿ. ಅದನ್ನು ಅಕ್ಕ ತನ್ನ ಜೀವನದಲ್ಲಿ ಬಹುಮಟ್ಟಿಗೆ ಅನುಸರಿಸಿದ್ದಾಳೆ. ನಮ್ಮ ಸಂಸ್ಕೃತಿ ನಮ್ಮ ಹಿರಿಯರಿಂದ ನಮಗೆ ಹರಿದು ಬರುವ ಒಂದು ಪವಿತ್ರ ನದಿ, ಅವರಿಂದ ಪಡೆದ ಒಂದು ವಿಶಿಷ್ಟ ವರ. ಹಿರಿಯರನ್ನು ಅರ್ಥ ಮಾಡಿಕೊಳ್ಳದೆ ಅವರಲ್ಲಿರುವ ಒಳ್ಳೆಯ ಗುಣಗಳನ್ನು ಕಾಣದೆ ನಮ್ಮ ಸಂಸ್ಕೃತಿಯನ್ನು ನಾವು ಉಳಿಸಿಕೊಳ್ಳಲು ಸಾಧ್ಯವಿಲ್ಲ, ಎಂದೇ ಅಕ್ಕ ಹೀಗೆ ನುಡಿದಿದ್ದಾಳೆ:

ಬಸವಣ್ಣನ ಮನೆಯ ಮಗಳಾಗಿ ಬದುಕಿದೆನಾಗಿ
ತನ್ನ ಕರುಣ ಭಕ್ತಿ ಪ್ರಸಾದವ ಕೊಟ್ಟನು
ಚೆನ್ನಬಸವಣ್ಣನ ತೊತ್ತಿನ ಮಗಳಾದ ಕಾರಣ
ಒಕ್ಕ ಪ್ರಸಾದವ ಕೊಟ್ಟನು
ಪ್ರಭುದೇವರ ತೊತ್ತಿನ, ತೊತ್ತಿನ ಮಯಿದೊತ್ತಿನ ಮಗಳಾದ
ಕಾರಣ ಜ್ಞಾನ ಪ್ರಸಾದವ ಕೊಟ್ಟನು
ಸಿದ್ಧರಾಮಯ್ಯನ ಶಿಶು ಮಗಳಾದ ಕಾರಣ
ಪ್ರಾಣ ಪ್ರಸಾದವ ಸಿದ್ಧಿಸಿಕೊಟ್ಟನು
ಮಡಿವಾಳಯ್ಯನ ಮನೆ ಮಗಳಾದ ಕಾರಣ
ನಿರ್ಮಳ ಪ್ರಸಾದವ ನಿಶ್ಚಯಿಸಿಕೊಟ್ಟನು
ಇಂತೀ ಅಸಂಖ್ಯಾತ ಗಣಂಗಳೆಲ್ಲರೂ ತಮ್ಮ ಕರುಣದ
ಕಂದನೆಂದು ತಲೆದಡವಿದ ಕಾರಣ
ಚೆನ್ನಮಲ್ಲಿಕಾರ್ಜುನಯ್ಯನ ಶ್ರೀ ಪಾದಕ್ಕೆ ಯೋಗ್ಯಳಾದೆನು

ಅಕ್ಕ ಇವರೆಲ್ಲರ ಅಭಯ ಹಸ್ತದ ಆಶ್ರಯದಲ್ಲಿ ಹಿರಿದಾಗಿ ಬೆಳೆದಳು.

ಸುಸಂಸ್ಕೃತ ಜೀವ ಕಷ್ಟ ಬಂದಾಗ ಕುಗ್ಗದೆ, ಸುಖ ಬಂದಾಗ ಹಿಗ್ಗದೆ, ಹೊಗಳಿದಾಗ ಹಿಗ್ಗದೆ, ತೆಗಳಿದಾಗ ದುಃಖಿಸದೆ ಶಾಂತ ಚಿತ್ತದಿಂದಿರುತ್ತದೆ. ಪ್ರಪಂಚದ ಪ್ರವಾಹದಲ್ಲಿ ಇವೆಲ್ಲವೂ ಒಂದನ್ನು ಒಂದು ಅಟ್ಟಿ ಬರುವ ಅಲೆಗಳು. ಅದನ್ನು ಅಕ್ಕ ತನ್ನ ಜೀವನದ ಅನುಭವದಿಂದ ಅರ್ಥ ಮಾಡಿಕೊಂಡಿದ್ದಾಳೆ, ಪಾಠ ಕಲಿತಿದ್ದಾಳೆ. ಕಷ್ಟ–ಸುಖಗಳ ಕುಲುಮೆಯಲ್ಲಿ ಬೆಂದು ಅಕ್ಕ ಅಪರಂಜಿಯಾದಳು. ಅನುಭವ ಅವಳಿಗೆ ಹೆಚ್ಚಿನ ಪಾಠ ಕಲಿಸಿತು: ಹೀಗೆ ಹಾಡಿಸಿತು:

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದಡೆಂತಯ್ಯ
ಸಮುದ್ರದ ತಡಿಯೊಳಗೊಂದು ಮನೆಯ ಮಾಡಿ
ನೊರೆ ತೆರೆಗಳಿಗಂಜಿದಡೆಂತಯ್ಯಾ
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕೆ ನಾಚಿದಡೆಂತಯ್ಯ
ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯ
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿ–ನಿಂದೆಗಳು
ಬಂದಡೆ ಮನದಲಿ ಕೋಪವ ತಾಳದೆ
ಸಮಾಧಾನಿಯಾಗಿರಬೇಕು

ಕಲ್ಯಾಣದಲ್ಲಿ ಶೂನ್ಯಸಿಂಹಾಸನಾಧೀಶ್ವರ ಅಲ್ಲಮ ಪ್ರಭುವಿನ ಅಗ್ನಿ ಪರೀಕ್ಷೆಯಲ್ಲಿ ಅಕ್ಕನ ವಿಜಯದ ವೈಜಂತಿ ಹಾರಾಡಿತು. ಶಿವ ಶರಣರು ಅಕ್ಕ ಕಂಡ ಮಲ್ಲಿಕಾರ್ಜುನನೊಡನೆ ಆಕೆಯ ವಿವಾಹವನ್ನು ಏರ್ಪಡಿಸಿದರು:

ಪಚ್ಚೆಯ ನೆಲಗಟ್ಟು, ಕನಕದ ತೋರಣ, ವಜ್ರದ ಕಂಭ, ಪವಳದ ಚಪ್ಪರವಿಕ್ಕಿ, ಕಂಕಣ ಕೈದಾರ ಕಟ್ಟಿ, ಸ್ಥಿರಸೇಸೆಯನ್ನಿಟ್ಟು ಚೆನ್ನಮಲ್ಲಿಕಾರ್ಜುನನೆಂಬ ಗಂಡಿಗೆ ಮದುವೆ ಮಾಡಿದರು.

ಶ್ರೀಶೈಲದ ಕದಳೀ ವನದಲ್ಲಿ ನೆಲಸಿರುವ ಚೆಲುವ ಚೆನ್ನಿಗನನ್ನು ಕೂಡಲು ಅಕ್ಕ ಶಿವಶರಣರ ಅಪ್ಪಣೆ ಪಡೆದು 'ನಿಮ್ಮ ಮಂಡೆಗೆ ಹುವ್ವ ತರುವೆನಲ್ಲದೆ ಹುಲ್ಲ ತಾರೆನು' ಎಂದು ನುಡಿದು ಅವರಿಂದ ಬೀಳ್ಕೊಡುಗೆ ತೆಗೆದುಕೊಂಡಳು. ಶ್ರೀಶೈಲ ಆಕೆಯನ್ನು ಆತುರದಿಂದ ಸ್ವಾಗತಿಸುತ್ತಿತ್ತು. ಉತ್ಸಾಹ ಮೇರೆ ಮೀರಿತು, ಅಕ್ಕ ಮನದನ್ನನ ಓಲೆಯನ್ನು ಒಯ್ಯುತ್ತಿದ್ದಾಳೆ. ಸಕಲಾಚರ ಜಗತ್ತು ಅದಕ್ಕೆ ಆಗ ಸ್ತಬ್ಧ ಆಗಲೇಬೇಕು. ಅದು ಅಕ್ಕನ ಆಜ್ಞೆ. ಆ ಓಲೆಯನ್ನು ಒಯ್ಯುವ ಅಕ್ಕನ ಆನಂದಕ್ಕೆ ಪ್ರಕೃತಿ ಯಾವ ಅಡೆತಡೆಯನ್ನೂ ಉಂಟುಮಾಡಬಾರದು; ಅದು ಚೆನ್ನಮಲ್ಲಿಕಾರ್ಜುನನಿಗೆ ಸಲ್ಲಬೇಕಾದ ಅವಸರದ ಓಲೆ; ಅದಕ್ಕೆಂದೇ ಅಕ್ಕನ ಕಟ್ಟಾಣತಿ:

ಹಸಿವೇ ನಿಲ್ಲು ನಿಲ್ಲು, ತೃಷೆಯೇ ನಿಲ್ಲು ನಿಲ್ಲು
ನಿದ್ರೆಯೇ ನಿಲ್ಲು ನಿಲ್ಲು, ಕಾಮವೇ ನಿಲ್ಲು ನಿಲ್ಲು
ಕ್ರೋಧವೇ ನಿಲ್ಲು ನಿಲ್ಲು, ಮೋಹವೇ ನಿಲ್ಲು ನಿಲ್ಲು,

ಲೋಭವೇ ನಿಲ್ಲು ನಿಲ್ಲು, ಮದವೇ ನಿಲ್ಲು ನಿಲ್ಲು,
ಮಚ್ಚರವೇ ನಿಲ್ಲು ನಿಲ್ಲು, ಸಚರಾಚರವೇ ನಿಲ್ಲು ನಿಲ್ಲು
ನಾನು ಚೆನ್ನಮಲ್ಲಿಕಾರ್ಜುನ ದೇವರ ಒಲವಿನ ಓಲೆಯ-
ನೊಯ್ಯುತ್ತಲಿದ್ದೇನೆ

ಅರಿಷಡ್ವರ್ಗವೇ ಏಕೆ? ಇಡೀ ಜಗತ್ತೇ ಆಕೆಯ ಆಣತಿಯನ್ನು ಪರಿಪಾಲಿಸಿ, ಅವಳ ಕಾರ್ಯಕ್ಕೆ ಸಹಕಾರಿಯಾಗಿ ನಿಂತಿತು. ಶ್ರೀಶೈಲ ಪ್ರವೇಶವೂ ಆಯಿತು, ಕದಳೀವನ ದರ್ಶನವೂ ಆಯಿತು. ಚೆನ್ನ ಮಲ್ಲಿಕಾರ್ಜುನ ತನ್ನ ಒಲವರನೆಯನ್ನು ಕರುಣದಿಂ ತೆಗೆದು ಬಿಗಿಯಪ್ಪಿದನು. ಅವನ ಹೃದಯಕಮಲದಲ್ಲಿ ಅಕ್ಕ ಅಡಗಿದಳು. ಚೆನ್ನಮಲ್ಲಿಕಾರ್ಜುನನ ಲಿಂಗದಲ್ಲಿ ಘನಲಿಂಗೈಕ್ಯಳಾದ ಬಳಿಕ ಅಕ್ಕ ಮಹಾದೇವಿ ಮೌನಿಯಾದಳು; ಕರಿಗೊರಲನಲ್ಲಿ ಕರಗಿ ಕರ್ಪೂರವಾದಳು.

ಅಕ್ಕಮಹಾದೇವಿಯ ಕಾವ್ಯಶಕ್ತಿಯ, ಭಕ್ತಿತೀವ್ರತೆಯ ಆಧ್ಯಾತ್ಮದ ಸೊಬಗಿನ ಸೊಗಸನ್ನು ಕಂಡ ಚಿಕ್ಕದಣಾಯಕ ಚೆನ್ನಬಸವಣ್ಣ ಹೀಗೆ ಹಾಡಿದರು :

ಆದ್ಯರ ಅರವತ್ತು ವಚನಕ್ಕೆ ದಣಾಯಕರ ಇಪ್ಪತ್ತು ವಚನ
ದಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ
ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣಗಳ ಐದು ವಚನ
ಅಜಗಣ್ಣಗಳ ಐದು ವಚನಕ್ಕೆ ಕೂಡಲ ಚೆನ್ನಸಂಗಯ್ಯನಲ್ಲಿ
ಮಹಾದೇವಿಯಕ್ಕಗಳ ಒಂದು ವಚನ ನಿರ್ವಚನ
ಕಾಣಾ ಸಿದ್ಧರಾಮ !

ಅಕ್ಕನ ಬದುಕೇ ಒಂದು ಬೃಹತ್ ಸಂಪುಟ. ಆಕೆಯ ಒಂದೊಂದು ವಚನವೂ ಅದರಲ್ಲಿನ ಒಂದೊಂದು ಗರಿ. ಅಡುಸುಡಿ-ಯಲ್ಲಿ ಅಕ್ಕ ಆಧ್ಯಾತ್ಮಕ್ಕೆ ಪಟ್ಟ ಕಟ್ಟಿದಳು. ದೇವಭಾಷೆ ಜನಭಾಷೆಯಾಗದೆ ಉಳಿದಾಗ, ಜನಭಾಷೆಯನ್ನೇ ದೇವಭಾಷೆಯನ್ನಾಗಿಸಿದಳು. ಮೇಲಿನ ಚೆನ್ನಬಸವಣ್ಣನವರ ವಚನ ಅಕ್ಕನ ಹಿರಿಯ ಸಮಗ್ರ ವ್ಯಕ್ತಿತ್ವಕ್ಕೆ ಹಿಡಿದ ಮಣಿ ದರ್ಪಣವಾಗಿದೆ. ಆಕೆಯ ಪುನೀತ ವಚನಗಂಗೆಯಲ್ಲಿ ಮಿಂದು ನಾವೂ ಧನ್ಯರಾಗೋಣ.

ಲೇಖಕರು :
ವೀರೇಶ ವಾಲಿ

ಅಕ್ಕನ ಜೀವನ ದರ್ಶನ

ಕನ್ನಡ ಸಾಹಿತ್ಯದಲ್ಲಿ ಮಹಾದೇವಿಯಕ್ಕಗೆ ಒಂದು ವಿಶಿಷ್ಟ ಸ್ಥಾನವಿದೆ. ಅಕ್ಕ ತನ್ನ ಅನುಭಾವ, ವೈರಾಗ್ಯ, ಭಕ್ತಿಯಿಂದ ಮಹಾದೇವಿಯಾಗಿ ಮೆರೆದು ಮಹಿಳಾರತ್ನವಾಗಿದ್ದಾಳೆ. "ಅವಳ ನಿಲವು ಗೌರೀಶಂಕರ ಶಿಖರದೆತ್ತರ, ಅವಳ ವ್ಯಕ್ತಿತ್ವ ಸಾಗರದ ಆಳ, ಸಾಗರದ ಗಾಂಭೀರ್ಯ" (ಜ.ಚ.ನಿ) ಅವಳ ವಚನಗಳು ಅಂತರ್ಜೀವನದ ಮಹಾಕಾವ್ಯ. ಗದ್ಯ ಪದ್ಯಗಳೆರಡರ ಮಾಧ್ಯಮಿಕ ಶೈಲಿಯ ವಚನ ರಚನೆಗೆ ರುಚಿರತೆಯನ್ನು ಚೆಲುವೆ ಚೇತನವನ್ನು ತಂದ ಕೀರ್ತಿ ಅಕ್ಕನದು. ಅದಕ್ಕೇ ಅವಳ ವಚನಗಳನ್ನು ಕುರಿತು,

> ಆದ್ಯರ ಅರವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ
> ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ
> ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ
> ಅಜಗಣ್ಣನ ಐದು ವಚನಕ್ಕೆ ಕೂಡಲ ಚೆನ್ನಸಂಗಯ್ಯನಲ್ಲಿ
> ಮಹಾದೇವಿಯಕ್ಕಗಳ ಒಂದು ವಚನ 'ನಿರ್ವಚನ'
> ಕಾಣಾ ಸಿದ್ಧರಾಮಯ್ಯ !

ಇಲ್ಲಿ "ನಿರ್ವಚನವೆಂದರೆ ಸಾರರೂಪ ಪ್ರತಿಪಾದನೆ. ಆದ್ಯರು 60 ವಚನಗಳಲ್ಲಿ ಪ್ರತಿಪಾದಿಸಿದುದನ್ನು ಬಸವಣ್ಣನವರು 20 ವಚನಗಳಲ್ಲಿ ಸಂಗ್ರಹಿಸಿ ರಸಘಟ್ಟಿಯಾಗಿ ಅಭಿವ್ಯಕ್ತಗೊಳಿಸಿ, ವಚನ ನಿರೂಪಣೆಯಲ್ಲಿ ಒಂದು ಹೊಸ ಸಂಪ್ರದಾಯವನ್ನು ಪ್ರಕರ್ಷವಾಗಿ ಪ್ರವರ್ತಿಸಿದರು.... ಅದೇ ಮಾರ್ಗದಲ್ಲಿ ಮತ್ತಷ್ಟು ಸಿದ್ಧಿಯನ್ನು ಗಳಿಸಿದವರೆಂದರೆ ಅಜಗಣ್ಣ ಮತ್ತು ಉಡುತಡಿಯ ಮಹಾದೇವಿಯಕ್ಕಗಳು" (ಡಾ. ಎಲ್. ಬಸವರಾಜು) ಹೀಗೆ ಅಕ್ಕನ ವಚನಗಳ ಮಹತ್ವವನ್ನರಿಯಬಹುದು. ಶಿವಶರಣೆ, ಅನುಭಾವಿಯಾಗಿ ಮೆರೆದ ಅಕ್ಕನ ಕಾವ್ಯಸಿದ್ಧಿಯೂ ಅಷ್ಟೇ ಮಹತ್ವವಾದುದು. ಇವಳ ಆದರ್ಶ ಜೀವನದ ದರ್ಶನ ನಮಗೆ ಹಲವಾರು ಕೃತಿಗಳಿಂದ ದೊರಕುತ್ತದೆ. ಅವುಗಳಲ್ಲಿ ಮುಖ್ಯವಾದುವೆಂದರೆ,

1) ಹರಿಹರನ 'ಮಹದೇವಿಯಕ್ಕನ ರಗಳೆ'
2) ಚಾಮರಸನ 'ಪ್ರಭುಲಿಂಗಲೀಲೆ'
3) ಚೆನ್ನಬಸವಾಂಕನ 'ಮಹಾದೇವಿಯಕ್ಕನ ಪುರಾಣ'
4) ನಾಲ್ಕು ಶೂನ್ಯ ಸಂಪಾದನೆಗಳು.

ಇವುಗಳ ಜೊತೆಗೆ ಇತ್ತೀಚೆಗೆ ಪ್ರಕಟವಾದ ಡಾ|| ಜ.ಚ.ನಿ. ಯವರ 'ಮಹಾದೇವಿ' ಎಂಬ ಕೃತಿಯೂ ಗಮನಾರ್ಹವಾದುದು. ಇಲ್ಲಿ ನಾವು ಅಕ್ಕಮಹಾದೇವಿಯ ಜೀವನವನ್ನು ಕುರಿತು ಹೊಸ ವಿಷಯಗಳನ್ನು ನೋಡಬಹುದು. ಈ ಎಲ್ಲ ಗ್ರಂಥಗಳ ಜೊತೆಗೆ ಸ್ವತಃ ಅಕ್ಕನ ವಚನಗಳೇ ಅವಳ ಜೀವನಪಾವಿತ್ರ್ಯವನ್ನು ತೋರಿಸುತ್ತವೆ. ಆ ವಚನಗಳಲ್ಲಿ ಕೆಲವು ತತ್ವವಚನಗಳೂ, ಶಾಸ್ತ್ರವಚನಗಳೂ, ಬೆಡಗಿನ ವಚನಗಳೂ ಇವೆ. "ಅವು ಅನುಭಾವಿಯ ಹೃದಯಾಂತರಾಳದಿಂದ ಹೊರಸೂಸಿದ ಭಕ್ತಿವಚನಗಳು, ವಿಶ್ವಧರ್ಮ ವಚನಗಳು". ಈ ವಚನಗಳಲ್ಲಿ ಮೂಡಿಬಂದ ಅವಳ ವ್ಯಕ್ತಿತ್ವದರ್ಶನ ಮಾಡುವ ಮೊದಲು ಅಕ್ಕನ ಜೀವನ ಚರಿತ್ರೆಯನ್ನು ನೋಡುವುದು ಅವಶ್ಯ. ಮೇಲೆ ಹೇಳಿದ ಎಲ್ಲ ಕೃತಿಕಾರರು ಅಕ್ಕನ ಜೀವನವನ್ನು ಕುರಿತು ವಿವೇಚಿಸಿದ್ದರೂ ಅಲ್ಲಲ್ಲಿ ಕೆಲವೊಂದು ಮಾರ್ಪಾಡುಗಳನ್ನು ಮಾಡಿಕೊಂಡಿದ್ದಾರೆ. (ಈ ಮಾರ್ಪಾಡುಗಳು ವಿಶೇಷವಾಗಿ ಅಕ್ಕನ ಜನನ, ವಿವಾಹ, ಸಂಸಾರತ್ಯಾಗ, ಅನುಭವ ಮಂಟಪ ಪ್ರವೇಶ ಮುಂತಾದುವನ್ನು ಕುರಿತು) ಇವೆಲ್ಲವುಗಳ ವಿಷಯ ಸಂಗ್ರಹ ಇಲ್ಲಿ ಅಸಾಧ್ಯ. ಆದಕ್ಕೆ ಅಕ್ಕನ ವಚನಗಳ ಆಧಾರದ ಮೇಲೆಯೇ ಅವಳ ಜೀವನವನ್ನು ಚಿತ್ರಿಸಿದ ಚಾಮರಸನ ಪ್ರಭುಲಿಂಗ ಲೀಲೆಯಲ್ಲಿ ನಿರೂಪಿತವಾದ ಕಥೆಯನ್ನು ಇಲ್ಲಿ ಹೀಗೆ ಸಂಗ್ರಹಿಸಬಹುದು.

ಉಡುತಡಿ ಎಂಬ ಪಟ್ಟಣವಲ್ಲಿ ವೀರಶೈವ ಭಕ್ತರಾದ ನಿರ್ಮಳನ ಪತ್ನಿ ಸುಮತಿಯ 'ಗರ್ಭಶುಕ್ತಿ'ಯಲ್ಲಿ ಮಹಾದೇವಿ ಮುತ್ತುದಯಿಸಿದಂತೆ ಉದಯಿಸಿದಳು. ಹುಟ್ಟಿದ ಮಗಳಿಗೆ ಶಿವಯೋಗ ರಾಜ್ಯ ಪಟ್ಟಗಟ್ಟುವಂತೆ ನೊಸಲಲ್ಲಿ ವಿಭೂತಿಯಿಟ್ಟರು. ಭವಭಯ ಸೋಂಕು ಮುಟ್ಟದಂತೆ ರಕ್ಷೆಯೋಪಾದಿಯಲ್ಲಿ ಲಿಂಗವನ್ನು ಕಂಠದಲ್ಲಿ ಕಟ್ಟಿದರು. ಪರಮಾತ್ಮನ ಸ್ಥಾನವನ್ನು ಮುಟ್ಟಿ ತೋರಿಸುವಂತೆ ಮಸ್ತಕದಲ್ಲಿ ಹಸ್ತವನ್ನಿರಿಸಿ ಪಂಚಾಕ್ಷರಿಯನ್ನು ಕಿವಿಯಲ್ಲಿ ಉಪದೇಶಿಸಿದರು.ತನುವಿನಲ್ಲಿ ಮಹತ್ತರವಾದ ದೇವತಾ ಕಳೆಯಿದ್ದ ಮೂಲಕ ಮಹದೇವಿ ಎಂಬ ಹೆಸರಿಟ್ಟರು. ಭಕ್ತಿಯ ಬಳ್ಳಿಯಂತೆ ಬೆಳೆದಳು. ಪುಟವಿಕ್ಕಿದ ಮಿಸುನಿನಂತೆ ಮೈಕಾಂತಿ ಹೆಚ್ಚುತ್ತಿತ್ತು. ಶಿವಲಿಂಗ ನಿಷ್ಠೆ ಬೆಳೆದಂತೆ ಸೌಂದರ್ಯ ವೃದ್ಧಿಯಾಯಿತು. ಕಾಮಬಾಣವನ್ನು ಧಿಕ್ಕರಿಸುವಂತೆ ಭರದಿಂದ ಬೆಳೆದಳು. ಹೀಗಿರುವಾಗ ಒಂದು ದಿನ ಆ ಪಟ್ಟಣದ ಅರಸನಾದ ಕೌಶಿಕನು ವೈಹಾಳಿಯಿಂದ ಬರುವಾಗ ಸಂಭ್ರಮದ ವೈಹಾಳಿಯನ್ನು ನೋಡುತ್ತ ನಿಂತ ಮಹಾದೇವಿಯನ್ನು ಕಂಡ ಅವನು ಕಾಮಬಾಣದಿಂದ ಕಂಗೆಟ್ಟು ಕಳವಳಿಸಿದನು. 'ಕನ್ಯೆ ಇವಳಾರವಳು' ಕೇಳಿ ಬನ್ನಿರೋ ಎಂದು ತನ್ನ ಚರರನ್ನು ಕಳಿಸುತ್ತಾನೆ. ತಂದೆ ತಾಯಿಗಳು ನೃಪಕುಲದವನಿಗೆ ಕೊಡುವುದಿಲ್ಲೆಂದರು. 'ತಾಯಮಾರಿ ತೊತ್ತಕೊಂಬ ಈ ದಾಯವನು ಸುಡು' ಎಂದು ತಿರಸ್ಕರಿಸಿದರು. 'ಆಕೆಯನು ಕೇಳುವದು, ಆಕೆ ತಾನಹುದೆಂದಳಾದರೆ ನಾವಾಗಳೆತ್ತವರು' ಎಂದು ಸರ್ವಭಾರವನ್ನು ಮಹಾದೇವಿಯ ಮೇಲೆ ಹೋರಿಸುತ್ತಾರೆ. ಮಹಾದೇವಿ ಜನಪನ ಅಳುಪಿಗೆ ಹರುವ ಮಾಡುವೆನೆಂದು ಜಾಣ ಮಾತನ್ನೇ ಆಡುತ್ತಾಳೆ : "ನಾನೆ ಬೇಕಾಗಿ

ಡರ್ೊಡೆ ಅವನು ಆನೇನ ಹೇಳಿದ ಮಾಡಲಿ....ಆ ನರೇಂದ್ರನೇ ಬಂದು ಮನೋನುರಾಗವ ಸಲಿಸುವಂತಿರೆ" ಶಪಥವನು ಮಾಡಬೇಕೆಂದು ತಿಳಿಸುತ್ತಾಳೆ. ಕಾಮಕ್ಕೆ ಕಣ್ಣಿಲ್ಲವಂತೆ, ಕಾಸಿ ಕರಗಿದ ಲೋಹದಂತೆ ಘಾಸಿಯಾಗುತ್ತ ಧಾವಿಸಿ ಬಂದ ಕೌಶಿಕ "ಲಲನೆ ಕೇಳೌ, ನಿನ್ನ ಬಯಕೆಯ ಸಲಿಸುವೆನು ಮೊದಲಲ್ಲಿ ಬಳಿಕಾನೊಲಿಸಿಕೊಂಬೆನು" ಎಂದು ಬಡಬಡಿಸುತ್ತ ಆಣೆ ಮಾಡುತ್ತಾನೆ. ಗುರು–ಲಿಂಗ–ಜಂಗಮ ಪೂಜೆಗೆ ವಿಘ್ನವಾಗಿ ನಡೆದರೆ ಬಿಟ್ಟು ಹೋಗುತ್ತೇನೆಂಬ ಕರಾರಿನಿಂದ ಅರಮನೆಯನ್ನು ಸೇರುತ್ತಾಳೆ. ಏಕಾಂತದಲ್ಲಿ ಅರಸನು ಅವಳನ್ನು ನುಡಿಸಿದರೆ "ನೀನು ಶಿವಭಕ್ತನಾದೊಡೆ ಕೂಡುವೆನು ನಿನ್ನ, ನೀನು ಭವಿಯಾಗಿರ್ದೊಡೊಲ್ಲೆನು " ಎಂದು ನಿಷ್ಠುರವಾಗಿ ಹೇಳಿದಾಗ ಅರಸನ ಸುಮಾನ ಹೋಗಿ ದುಮಾನವಾಯಿತು. " ನಮಗೆ ಶಿವ ಭಕ್ತಿಯನು ಮಾಡುವ ಸಮಯವಳವಡದು" ಎಂದು ರಾಜನುತ್ತರಿಸುವಾಗ "ನಮಗೆ ನಿಮ್ಮಯ ಸಂಗವಳವಡದು" ಎಂದು ಕಡ್ಡಿ ಮುರಿದಂತೆ ಹೇಳಿ ತೊಟ್ಟ ಬಟ್ಟೆ ಬರೆಗಳನ್ನು ಬಿಸುಟು ಹೊರಟಳು. ಇದನ್ನು ನೋಡಿದ ಅರಸ ಇವಳಿಗೆ ಭೂತ ಹೊಡೆಯಿತೇ, ಪಿತ್ತದ ಧಾತು ಹೆಚ್ಚಿತೇ ಎಂದು ಬೆಕ್ಕಸ ಬೆರಗಾಗಿ ನೋಡಿದನು. ತಂದೆ–ತಾಯ್ಗಳು, ನೆಂಟರಿಷ್ಟರು, ಬಂಧು–ಬಳಗ, ಅಕ್ಕ–ತಂಗಿಯರೆಂಬ ಬಾಂಧವ್ಯದ ಹಂಗನ್ನು ಹರಿದು ನಿರ್ಜರವಾದ ಕಾಡು, ಆಳವಾದ ಮಡು, ಭೀಕರ ಗಿರಿ ಗಹ್ವರವೆನ್ನದೆ ಸರ್ಜನ ನಿರ್ಜನವೆನ್ನದೆ ಎಲ್ಲೆಡೆಯಲ್ಲಿ ಹಾಡುತ್ತ ಪ್ರಭುವನ್ನರಸುತ್ತಾ ಸಾಗಿದಳು. ಇನ್ನು ನಾವು ಮಹದೇವಿಯಕ್ಕನನ್ನು ಕಾಣುವುದು ಅನುಭವ ಮಂಟಪದಲ್ಲಿ. ಶೂನ್ಯ ಸಿಂಹಾಸನಾಧಿಕಾರಿ ವೈರಾಗ್ಯನಿಧಿ ಅಲ್ಲಮಪ್ರಭು, ಭಕ್ತಿ ಭಂಡಾರಿ ಬಸವಣ್ಣ, ಕರ್ಮಯೋಗಿ ಸಿದ್ಧರಾಮ, ಜ್ಞಾನನಿಧಿ ಚನ್ನಬಸವಣ್ಣ ಮುಂತಾದ ಮಹಂತರ, ಅನುಭಾವಿಗಳ ಆ ಮಂಟಪಕ್ಕೆ ಕಾಲಿಟ್ಟ ಅವಳು ಅಗ್ನಿಪರೀಕ್ಷೆಗೊಳಗಾಗಬೇಕಾಯಿತು. ಪ್ರಶ್ನೋತ್ತರಗಳು ನಡೆದವು.

ಪ್ರಭು: " ಬತ್ತಲೆಯ ಬಗೆಗೊಂಡು ಹೆಂಗೂಸಿತ್ತಲೇತಕೆ ಬಂದೆ, ಕಾಮದ ಕತ್ತಲೆಯ ಕಳೆಯದೆ ವೃಥಾ ವೈರಾಗ್ಯ ವೇಷದಲಿ ಹತ್ತಿರಿದ್ದರೆ ನಮ್ಮ ಶರಣರು ಚಿತ್ತದಲಿ ಕೆರಳುವರು".

ಮಹಾದೇವಿ: "ಜಗಭರಿತಗೊಲಿದವಳಿಗೆ ಉಡಿಗೆಯ ತೊಗಲವೇತಕೆ? ತನು—ಮನಗಳನು ಅಗಲದೀಶಂಗಿತ್ತೆನಗಿ ಸತಿ ಕಾಮವೆಂದೆಂಬ ಬಗೆ ಅದೇತಕೆ. ಎನ್ನ ಕಂಡರೆ ಭುಗಿಲಿಡಲದೇಕಯ್ಯ"

ಪ್ರಭು: " ಕಾಣಿಸುತ ನೀನಿದ್ದು ಕಾಣಬಾರದ ಶಿವನನೊಲಿಸುವ ಜಾಣತನವೆಂತವ್ವ"?

ಮಹಾದೇವಿ: " ರೂಪುವಿಡಿದಿರ್ದಲ್ಲದೆಂದು ನಿರೂಪ ಬೆರಸುವ ಭೇದ ವರಿವೊಡೆ ರೂಪಿನೊಳಗೆ ನಿರೂಪು, ನಿರೂಪಿನೊಳು ರೂಪು, ಈ ಪರಿಯಿಂದ ವ್ಯಾಪಿಸಿಹ ನಾನಾ ರೂಪವನು ನೆಲೆಗೊಂಡೆನು."

ಪ್ರಭು: " ಹಾಲಿನೊಳೆ ನೆರೆ ತುಪ್ಪವಿಪ್ಪುದ ಹೇಳಿದರದರಿಯದು, ರೂಪವಿಲ್ಲದ ಮಹಿಮನಲ್ಲಿ ಸಮ್ಮೇಳ ನಿನಗೆಂತಾದುದು"

ಮಹಾದೇವಿ: " ಶಿವಸಂಗವೇ ಸರ್ವಸ್ವವೆಂದು ನಂಬಿದ ನನಗೆ ಅದು ದೂರ ದೂರವೆಂದು ನೀನು ಹೆದರಿಸಿದರೆ ಆರು ಕರುಣಿಸುವರೋ, ಆರು ಗತಿ ಮತಿ" ಎಂದು ಪ್ರಾರ್ಥಿಸಿದಳು.

ನಂತರ ಬಸವಣ್ಣನೇ ತನ್ನಅರಿವು, ಚನ್ನಬಸವಣ್ಣ ಗುರು, ಲಿಂಗವೇ ನೀನು (ಪ್ರಭು) ಜಂಗಮವೇ ಎನಗೆ ರಾಮಯ್ಯ, ಎನ್ನ ತನುವೇ ಮಡಿವಳನು, ನಿನ್ನ ದಾಸರದಾಸಿ ಎಂದು ಬಿನ್ನವಿಸಿದಾಗ ಅವಳ ಭಕ್ತಿಯ ಹಿರಿಮೆಯನ್ನು ಚರಿತ್ರೆಯ ಪಾವಿತ್ರ್ಯವನ್ನು ಕಂಡು ಮೆಚ್ಚಿದ ಪ್ರಭು ತನುಮನೋವಾಯುಗಳ ಸಂಚವನು ಅನಲಿನಲಿ ಸುಟ್ಟುಜೀವಪರಮರನು ಅನುಗೊಳಿಸುವ ನಿರ್ವಯಲಾಗುವ ಉಪದೇಶವನ್ನು ಮಾಡುತ್ತಾನೆ. ಬಳಿಕ ಶರಣರ ಚರಣವನು ಬೀಳ್ಕೊಂಡು ಕಾಯದ ಕದಳಿಯನ್ನು ಸೇರಿ ತನ್ನ ಸಿರಿಗಿರಿಯ ಶಿಖರದ ಸಿದ್ಧಪೀಠದಲ್ಲಿ ಗುಹೇಶ್ವರನನ್ನು ಅರ್ಚಿಸುತ್ತ ಅಚಲ ಪದವಿಯನ್ನು ಪಡೆದಳು. ಇದು ಮಹಾದೇವಿಯಕ್ಕ ತನ್ನ ಬಾಳು ಬದುಕುಗಳಲ್ಲಿ ತನಗಿರುವ ಗುರಿಯನ್ನು ಸೇರಲು ಮಾಡಿದ ಸಾಧನೆ, ಸಿದ್ಧತೆ, ತಾನು ಬಳಸಿಬಂದ ಹೊಲಬು, ಕಂಡ ಭಾವತೀವ್ರತೆ, ತಳೆದ ನಿಷ್ಠೆ, ತೋರಿದ ತ್ಯಾಗ, ಏರಿದ ಎತ್ತರ.

ಇದು ಆದರ್ಶ ಜೀವನ. "ಈ ಆದರ್ಶ ಜೀವನ ವ್ಯಕ್ತಿನಿಷ್ಠ ಮಾತ್ರವಲ್ಲ, ಆದರ್ಶ ವ್ಯಕ್ತಿತ್ವ ವಿಶ್ವಘಟಕವಾದುದು. ಅಕ್ಕನದು ಅರಿದು ಅನುಭವಿಸದ ಅಳಲು ಆಪಾರ. ಬರೀ ಅರುವು ಅಪೂರ್ಣ. ಅನುಭವಾನಂದಗಳಿಂದ ವಂಚಿತ, ಘನದರ್ಶನಕ್ಕೆ ಅಸಮರ್ಥ. ಬರೀ ಭಿನ್ನ ಜ್ಞಾನದಿಂದ ಮನದ ವಿರಕ್ತಿ ಉಳಿಯದು, ಶರೀರ ಸತ್ವ ನಿಲ್ಲದು. ತನುವಿಡಿದು ಕರ್ಮ ಕಾಡಿದು, ಮನವಿಡಿದು ಮಾಯೆ ಕಾಡಿತು. ಗುರುದೇವನ ಕರುಣೆಯಾದ ಬಳಿಕ ಕಾಯ ಕರ್ಮಗಳು ಕಳಚಿದವು" (–ಜ.ಚ.ನಿ.). ಇದು ಅಕ್ಕನ ವ್ಯಕ್ತಿತ್ವ ದರ್ಶನ, ವೀರಶೈವದ ತತ್ವದರ್ಶನ.

ವಚನಗಳಲ್ಲಿ ಅಕ್ಕನ ವ್ಯಕ್ತಿತ್ವ ಬಂದ ಬಗೆಯನ್ನು ನೋಡಬಹುದು. "ವೈಯಕ್ತಿಕ ಮನೋಭಾವ, ಅಂತರಂಗದ ಹೋರಾಟ, ಧರ್ಮಬೋಧೆ, ಹೃದಯದಿಂದ ಹೊರಟು ನೇರವಾಗಿ ಹೃದಯವನ್ನು ಮುಟ್ಟುವ ಸರಳ ಶೈಲಿ – ಇವು ವಚನ ಸಾಹಿತ್ಯದಲ್ಲಿರುವುದರಿಂದ ಆ ಸಾಹಿತ್ಯ ಜೀವಕಳೆಯಿಂದ ತುಂಬಿದೆ" (–ಎಂ. ಆರ್. ಶ್ರೀ.) ಹಾಗಯೆ ಭಾವಾತೀತವಾದ ಬಾಳಬಗೆಯನ್ನು ಭಾವಭಾಷೆಗಳಿಗೆ ತಂದ ಕೀರ್ತಿ ಅಕ್ಕನದು. ಪರಿಣಾಮಕಾರಿಯಾದ ಪ್ರಾಸಾಧಿಕ ಪ್ರವಾಹ ಅಕ್ಕನ ಸಾಹಿತ್ಯ. ಅದು ವಚನ ಸಾಹಿತ್ಯ ಸೌಧದ ಹೊಂಗಳಸ. ಮಹಾದೇವಿಯಕ್ಕ ತನ್ನ ಅನುಭಾವ ಕಾವ್ಯವನ್ನು ಕಾವ್ಯವನ್ನಾಗಿಸಿದಳು. "ಅಕ್ಕನ ವಚನಕ್ಕೂ, ಅಕ್ಕನ ಜೀವನಕ್ಕೂ ಅಭಿನ್ನ ಭಾವವಿದೆ. ಅವಳ ವಚನ ಅವಳ ಜೀವನದ ದರ್ಶನವಾಗಿದೆ" (ಜ.ಚ.ನಿ.).

ವಿವಾಹದ ಪ್ರಸ್ತಾಪ ಬಂದಾಗ ಅಕ್ಕ ತನ್ನ ಆಂತರಿಕ ವಿವಾಹವನ್ನು ವಚನದಲ್ಲಿ ಪ್ರತಿಮಾ ರೂಪದಲ್ಲಿ ಚಿತ್ರಿಸಿದ್ದನ್ನು ಇಲ್ಲಿ ನೋಡಬಹುದು :

ಗುರುವೆ ತೆತ್ತಿಗನಾದ, ಲಿಂಗವೆ ಮದುವಣಿಗನಾದ
ಆನು ಮದುವಳಿಗೆಯಾದನು
ವಸುಧೆಯ ಭಕ್ತರೆಲ್ಲರು ನಿಬ್ಬಣಿಗರಾದರು
ಕೊಟ್ಟರು ಸಾದೃಶ್ಯವಪ್ಪ ವರನ ನೋಡಿ
ಇದು ಕಾರಣ ಚನ್ನಮಲ್ಲಿಕಾರ್ಜುನನೆ ಗಂಡನೆನಗೆ''

ಇದು ಒಂದು ಅರ್ಥದಲ್ಲಿ ಅಕ್ಕನ ಅಂತರ್ಜೀವನದ ಮಹಾಕಾವ್ಯ. "ವಿಶ್ವನಿಯತಿಯೇ ವ್ಯಕ್ತಿನಿಯತಿ, ವಿಶ್ವ ವ್ಯಕ್ತಿಯಾಗಿ ಪರಿಣಾಮ ಗೊಂಡಿದೆ. ವಿಶ್ವ ಜೀವನವನ್ನು ನೋಡಿದಾಗ ವಿಶ್ವದ ಬೆನ್ನ ಹಿಂದೆ ಅಸತೆ ಇದ್ದಿತು". ಅಂತೆಯೇ ಆತ್ಮನಿಗೆ ಈ ಪ್ರಪಂಚ ಸುತ್ತಿದೆ.

"ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ
ಪ್ರಾಣಕ್ಕೆ ಮನವಾಗಿ ಕಾಡಿತ್ತು ಮಾಯೆ
ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ
ಚನ್ನಮಲ್ಲಿಕಾರ್ಜುನಾ, ನೀನೊಡ್ಡಿದ ಮಾಯೆಯನಾರೂ
ಗೆಲಬಾರದು"

ಈ ಮುಂದಿನ ವಚನ ಮಹಾದೇವಿಯಲ್ಲಾದ 'ಶಕ್ತಿವಿಕಾಸ'ವನ್ನು ತೋರಿಸುತ್ತದೆ.

"ಕಾಮಾರಿಯ ಗೆಲಿದೆನು ಬಸವಾ ನಿಮ್ಮ ದಯೆಯಿಂದ
ಸೋಮಧರನ ಹಿಡಿತಪ್ಪೆನು ಬಸವಾ ನಿಮ್ಮ ಕೃಪೆಯಿಂದ
ನಾಮದಲ್ಲಿ ಹೆಂಗೂಸೆಂಬ ಹೆಸರಾದಡೇನು ?
ಭಾವಿಸಲು ಗಂಡುರೂಪು
ಬಸವಾ ನಿಮ್ಮ ದಯದಿಂದ ಅತಿಕಾಮಿ ಮಲ್ಲಿಕಾರ್ಜುನಂಗೆ
ತೊಡರಿಕ್ಕಿ ಎರಡುವರಿಯದೆ ಕೂಡಿದೆನು ಬಸವಾ ನಿಮ್ಮ
ಕೃಪೆಯಿಂದ"

ಇಲ್ಲಿ ಅಕ್ಕ ಪರಾಶಕ್ತಿಯಾಗಿ ಆಡಿದ್ದಾಳೆ. ಚಿಚ್ಛಕ್ತಿಯಾಗಿ ಕೂಡಿದ್ದಾಳೆ. ಹೀಗೆಯೇ ಅಕ್ಕನ ವಚನಗಳನ್ನು ಅವಲೋಕಿಸುತ್ತ ಹೋದರೆ ಅಲ್ಲಿ ಗುರು–ಲಿಂಗ–ಜಂಗಮ ಭಕ್ತಿ, ವೈರಾಗ್ಯ, ಬಸವ ಸ್ತುತಿ, ಶರಣರ ಸ್ತುತಿ, ಶಿವನ ಹಂಬಲ, ಸತಿ-ಪತಿ ಭಾವ, ಹೀಗೆ ಹಲವು ಹತ್ತೆಂಟು ವಿಷಯಗಳು ಸಿಗುತ್ತವೆ. ಎಂ. ಆರ್. ಶ್ರೀ. ಅವರ ಮಾತುಗಳಲ್ಲಿ ಹೇಳಬೇಕೆಂದರೆ " ಆಕೆಯಲ್ಲಿ ಲೋಕಾನುಭವ ಜ್ಞಾನ ಅಂತರಂಗದ ಅನುಭಾವಜ್ಞಾನ ಬಹಳ ಸೊಗಸಾಗಿ ಮಿಳಿತವಾಗಿವೆ. ಬಸವಣ್ಣಾದಿಗಳಲ್ಲಿ ಕಂಡುಬಾರದ ಅಪೂರ್ವ ಭಾವಗಳು ಕೆಲವು ಆಕೆಯ ಪ್ರತಿಭೆಯಲ್ಲಿ ಮಿಂಚುವವು".

ಕೊನೆಯಲ್ಲಿ ಮಹದೇವಿಯಕ್ಕನನ್ನು ಮನಮೆಚ್ಚಿ ಕೊಂಡಾಡಿದ ಶರಣರ ಕೆಲವು ಉಕ್ತಿಗಳನ್ನು (ವಚನ) ಗಮನಿಸಬಹುದು.

ಮಡಿವಾಳ ಮಾಚಯ್ಯ: ಕಾಮಿಯಾಗಿ ನಿಃಕಾಮಿಯಾದಳು,
ಸೀಮೆಯಲಿರ್ದು ನಿಸ್ಸೀಮೆಯಾದಳು,
ಭವಿಯ ಸಂಗವ ತೊರೆದು ಭವಬಾಧೆಯ ಹರಿದಳು,
....

ಚನ್ನಬಸವಣ್ಣ: ....ಅಸುವರಿದು ಘನವ
ಬೆರಸಿ ಹಿರಿದು ಕಿರಿದೆಂಬ ಭೇದವ ಮರೆದು,
ಕೂಡಲ ಚೆನ್ನ
ಸಂಗಯ್ಯನಲ್ಲಿ ಬೆರಸಿ ಬೇರಿಲ್ಲದಿಪ್ಪ ಹಿರಿಯತನ
ನಮ್ಮ
ಮಹದೇವಿಯಕ್ಕಂಗಾಯಿತ್ತು.

ಬಸವಣ್ಣ: ....ಕೂಡಲ ಸಂಗಮದೇವಯ್ಯ
ಎನ್ನ ಹೆತ್ತ ತಾಯಿ ಮಹದೇವಿಯಕ್ಕನ ನಿಲವ
ನೋಡಯ್ಯ ಪ್ರಭುವೆ !

ಪ್ರಭುದೇವ: ....ಬಂದ ಕಥನದಲ್ಲಿ ಬಂದು ಹಿಂಗಿದೆಯಲ್ಲ
ಅಕ್ಕಾ ! ಗುಹೇಶ್ವರ ಲಿಂಗದಲ್ಲಿ ಉಭಯನಾಸ್ತಿ
ಮನವಳಿದೆ ಎನ್ನಕ್ಕಾ !
...........ಅಂತರಂಗದ ಪ್ರಭೆ ಬಹಿರಂಗವೆಲ್ಲ
ತಾನೆಯಾಗೆ
ಗುಹೇಶ್ವರ ಲಿಂಗದಲ್ಲಿ ಸಂದಿಲ್ಲದಿಪ್ಪ
ಮಹದೇವಿಯಕ್ಕನ
ಶ್ರೀಪಾದಕ್ಕೆ ನಮೋ ನಮೋ ಎಂಬೆನು........

ವಚನಸಾಹಿತ್ಯ ವಿಶ್ವ ಸಾಹಿತ್ಯಕ್ಕೆ ನೀಡಿದ ಕೊಡುಗೆ

ಲೇಖಕರು :
ಪು ತಿ. ನರಸಿಂಹಾಚಾರ್,
ಮೈಸೂರು.

ವಚನ ಸಾಹಿತ್ಯ ವಿಶ್ವ ಸಾಹಿತ್ಯಕ್ಕೆ ನೀಡಿದ ಕಾಣಿಕೆಯೇನು ? ಬೈಬಲ್ಲು ಇಂಗ್ಲೀಷ್ ಸಾಹಿತ್ಯಕ್ಕೆ ಏನು ನೀಡಿತು, ಭಗವದ್ಗೀತೆ ಮತ್ತು ಉಪನಿಷತ್ತುಗಳು ಸಂಸ್ಕಾರಕ್ಕೆ ಏನು ನೀಡಿದವು, ಧರ್ಮಪದ ಪಾಲಿ ಭಾಷೆಗೆ, ಕುರಾನು ಅರಬಿಕ್ಕಿಗೆ ? ಅದೇ ವಚನ ಸಾಹಿತ್ಯ ಕನ್ನಡಕ್ಕೆ ನೀಡಿದ ಕೊಡುಗೆ; ಮೇಲೆ ಹೇಳಿದ ಧರ್ಮ ಗ್ರಂಥಗಳು ವಿಶ್ವಸಾಹಿತ್ಯದಲ್ಲಿ ಪರಿಗಣಿತವಾದರೆ ವಚನಗಳು ಆಗಬೇಕು. ವಚನಗಳು ಮಾನವ ಸಮಾಜಕ್ಕೆ ಕೊಟ್ಟ ಕೊಡುಗೆ–ಶರಣರ ಮನೋಧರ್ಮ, ಅತೀಂದ್ರಿಯಾನುಭವಗಳಿಗೆ ಪರಿಣಿತ ವಾಕ್ ಮಾಧ್ಯಮ, ಇಡೀ ನಾಡಿನಲ್ಲಿ ಆಧ್ಯಾತ್ಮಿಕ ಭಾವಪ್ರಸರಣ. ಸಾಮಾನ್ಯ ಮನುಷ್ಯನಿಗೂ ಆತ್ಮಾನಂದ ಪ್ರತೀತಿಯನ್ನು ತರುವ ವಾಕ್ ಸಾಧನಗಳು ವಚನಗಳು.

ಮನುಷ್ಯ ಮುಖ್ಯವಾಗಿ ಎರಡು ಸ್ಥಿತಿಗಳಿಗೆ ಆಸೆಪಡುತ್ತಾನೆ : ಒಂದು ಐಹಿಕ ಸುಖ. ಎರಡನೆಯದು ಆಧ್ಯಾತ್ಮಿಕ ಆನಂದ. ಒಂದರ ಒಲವು ಕಡಿಮೆಯಾಗುತ್ತಾ ಆಗುತ್ತಾ ಮತ್ತೊಂದರಕಾಂಕ್ಷೆ ಹೆಚ್ಚುತ್ತಾ ಹೋಗುತ್ತಿದ್ದಂತೆ ಆತನ ವೈಯಕ್ತಿಕ ಉತ್ತಮಿಕೆಯೂ ಹೆಚ್ಚುತ್ತಾ ಹೋಗುತ್ತದೆ. ಅದಕ್ಕೆಯೇ ನಾವು ಭೋಗಿಗಿಂತ ಯೋಗಿ ಶ್ರೇಷ್ಠ ಎನ್ನುವುದು. ಆ ಒಬ್ಬನದಕ್ಕಿಂತ ಈ ಒಬ್ಬನ ಆನಂದಾಕರತೆ ಹೆಚ್ಚು. ಅದರಿಂದಾಗಿ ಒಂದು ಧರ್ಮ ಸಂಯಮಿತವಾದ ಅರ್ಥ ಕಾಮಗಳಿಂದ ಲಭಿಸತಕ್ಕದ್ದು, ಮತ್ತೊಂದು ವೈರಾಗ್ಯ ಮೂಲವಾದ ಸಾಧನೆಯಿಂದ. ಸ್ವಾರ್ಥರಹಿತರೂ ಭವ ಭೋಗವಿರಕ್ತರೂ ಆನಂದ ಪಂಥರೂ ಆದ ಮಹಾತ್ಮರ ಪರಿಪಕ್ವ ಹೃದಯದಿಂದ ಮೂಡಿಬರುವ ಮಾತುಗಳಲ್ಲಿ, ಅವುಗಳ ಹೂರಣವಾಗಿ, ನಮಗೆ ಒಳ್ಳೆ ಆತ್ಮಪೋಷಕ ದ್ರವ್ಯ ಸಿಕ್ಕುತ್ತದೆ. ನಾದದೊಳಗಿನ ಬಿಂದುಗಳವು, ಭವಿಗಳನ್ನು ಕ್ಷಣಕಾಲವಾದರೂ ಆನಂದದಿಂದ ಸೇಚಿಸುವ ಅಮೃತ ಬಿಂದುಗಳು. ವಚನಗಳೂ ಅವನ್ನು ಹನಿಸುತ್ತವೆ. ಆದುದರಿಂದ ಅವು ಎಲ್ಲ ಮಾನವರಿಗೂ ಬೇಕಾದವು. ವಿಶ್ವದಲ್ಲಿ ಅತಿ ಶ್ರೇಷ್ಠವೆಂದು ಪರಿಗಣಿತವಾದ ಸಾಹಿತ್ಯ ಖಂಡಗಳನ್ನು ಓದುತ್ತಾ ಈ ವೀರಶೈವ ಶರಣರ ವಚನಗಳನ್ನು ಕೈಗೆತ್ತಿಕೊಂಡು ಓದಲಾರಂಭಿಸಿದರೆ, ಮನಸ್ಸು ಕೆಳಗಿಳಿದಂತೆ ಭಾಸವಾಗದು. ವಿಶ್ವಭಾರತಿ ಈ ವಚನಗಳಲ್ಲೂ ಒಂದಪೂರ್ವವಾದ ವಿಭವವನ್ನು ಮೆರಸುತ್ತಿದ್ದಾಳೆ. ವಿಶ್ವಸಾಹಿತ್ಯಕ್ಕೆ ಈ ವಚನಗಳ ಕೊಡುಗೆಯಾವುದೆಂದರೆ ಒಂದು ವಿಶಿಷ್ಟ ಆಧ್ಯಾತ್ಮಿಕಾನುಭವದ ವೈಭವ ವಿಲಾಸಗಳು.

ಪ್ರಾಯೇಣ ವಚನಗಳಲ್ಲಿ ವಿರಕ್ತರಾದ ಯೋಗಿಗಳ ಹಾಗು ಭಕ್ತರ ಮಾತುಗಳು, ವೀರಶೈವ ಸಮಯ ನಿಷ್ಠೆಯನ್ನು ಎತ್ತಿ ಹಿಡಿಯುವ ವಚನಗಳೂ ಸಾಕಷ್ಟಿವೆ, ಜತೆಗೆ ಬೆಡಗಿನ ವಚನಗಳೂ ಉಂಟು. ಮೊದಲನೆಯವು ಅನ್ಯಮತೀಯರನ್ನು ಅಷ್ಟಾಗಿ ಆಕರ್ಷಿಸವು. ಎರಡನೆಯವುಗಳಿಂದಲೂ ಸಾಹಿತ್ಯ ರಸಿಕರಿಗೆ ಅಷ್ಟಾಗಿ ಪ್ರಯೋಜನವಿಲ್ಲ. "ರೀತಿರಾತ್ಮಕಾವ್ಯಾಸ್ಯ", "ವಾಕ್ಯಂ ರಸಾತ್ಮಕಂ ಕಾವ್ಯಂ", ಇವೆರಡು ಲಕ್ಷಣಗಳನ್ನು ಹಿಡಿದುಕೊಂಡು ನಾವು ವಚನ ಸಾಹಿತ್ಯವನ್ನು ಪ್ರವೇಶಿಸಿದಾಗ ನಮಗೆ ದೇವಗಂಗೆಯ ತೀರದಲ್ಲಿನ ನಂದನವನದಲ್ಲಿ ವಿಹರಿಸುವ ಅನುಭವವಾಗುತ್ತದೆ.

ಒಂದು ವಾಕ್ಯ ಖಂಡಕ್ಕೆ ಕಾವ್ಯತ್ವವನ್ನು ಕೊಡುವ 'ರೀತಿ'ಯ ರಹಸ್ಯವೇನು ? ಇದು ಪ್ರಶ್ನೆ. ಒಬ್ಬ ವಿಶಿಷ್ಟ ವ್ಯಕ್ತಿಯ ವಿಶಿಷ್ಟಾನುಭವಕ್ಕೆ ವಿಶದವೂ ಸಂಕ್ಷಿಪ್ತವೂ ಆದರೆ ಪರಿಪೂರ್ಣವೂ ಆದ ಮಾತುಗಳು ಒದಗಿಬಂದು ವಾಕ್ಯ ಸರಣಿಯಲ್ಲಿ ಮೆರೆಯುತ್ತವೋ ಆ ಹೇಳಿಕೆಯೇ ಅದರ ರೀತಿ. ಬೇರೆ ಮಾತುಗಳಲ್ಲಿ ಬೇರೆ ವಿಧದಲ್ಲಿ ಅದರ ಹುರುಳನ್ನು ಹೇಳಿದರೆ ಈ ಸೊಗಸು ಕೆಡುತ್ತದೆ. ಈ ಸೊಗಸೇ ಅದರ ಆತ್ಮ– ವಿಶಿಷ್ಟಾನುಭವದ ವಿಶದವೂ ಸಂಕ್ಷಿಪ್ತವೂ ಪರಿಪೂರ್ಣವೂ ಆದ ಹೇಳಿಕೆ. ಈ ವಚನವನ್ನು ನೋಡಿ :

"ಹರಿವ ನದಿಗೆ ಮೈಯೆಲ್ಲ ಕಾಲು; ಉರಿಯುವ ಕಿಚ್ಚಿಗೆ
ಮೈಯೆಲ್ಲ ಬಾಯಿ;
ಬೀಸುವ ಗಾಳಿಗೆ ಮೈಯೆಲ್ಲ ಕೈ. ಇದು ಕಾರಣ, ಗೊಹೇಶ್ವರ, ನಿಮ್ಮ ಶರಣಂಗೆ ಸರ್ವಾಂಗವೆಲ್ಲ ಲಿಂಗಮಯವಯ್ಯಾ".

ಹಾಗೂ ಇದನ್ನು ನೋಡಿ :

"ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ ?
ಹೊಸ್ತಿಲಲ್ಲಿ ಹುಲ್ಲು
ಹುಟ್ಟಿ, ಮನೆಯೊಳಗೆ ರಜ ತುಂಬಿ, ಮನೆಯೊಳಗೆ
ಮನೆಯೊಡೆಯ
ನಿದ್ದಾನೋ ಇಲ್ಲವೋ ? ತನುವಿನೊಳಗೆ ಹುಸಿ ತುಂಬಿ,
ಮನದೊಳಗೆ
ವಿಷಯ ತುಂಬಿ, ಮನೆಯೊಳಗೆ ಮನೆಯೊಡಯನಿಲ್ಲ,
ಕೂಡಲ ಸಂಗಮ ದೇವ."

ಮತ್ತೊಂದು ಬೆರಗು ಮೂಡಿಸುವ ವಚನವನ್ನು ನೋಡಿ :

"ಎನ್ನೊಡಲಾದರೆ ಎನ್ನಿಚ್ಚೆಯಲ್ಲಿರದೆ ? ನಿನ್ನೊಡಲಾದರೆ
ನಿನ್ನಿಚ್ಚೆಯಲ್ಲಿರದೆ ?

ಅದು ಎನ್ನೊಡಲೂ ಅಲ್ಲ, ನಿನ್ನೊಡಲೂ ಅಲ್ಲ : ಅದು
ನೀ ಮಾಡಿದ ಜಗದ
ಬಿನ್ನಾಣದೊಡಲು ಕಾಣಾ ರಾಮನಾಥಾ."

ಈ ಮೂರು ವಚನಗಳೂ ಮಾನವ ದೇಹವನ್ನು ಕುರಿತವು. ಮೊದಲನೆಯದು ಯೋಗಿಯ ಮಾತು. ಆನಂದಿಯಾದವನ ಸರ್ವಾಂಗವೂ ಚೈತನ್ಯಮಯ ಎಂಬುದು ಆಶಯ. ಎರಡನೆಯದು ಅರಿಷಡ್ವರ್ಗಕ್ಕೊಳಗಾದ ಅಶಿಸ್ತಿನ ಜೀವನವನ್ನು ಕುರಿತು ಸಾಧಕನಾದ ಭಕ್ತನ ಆರ್ದ್ರ ಹೃದಯದ ಕನಿಕರದ ಮಾತು. ಮೂರನೆಯದು ಈ ಶರೀರವನ್ನು ಇದರ ಕ್ರಿಯೆಗಳನ್ನು ನೋಡಿ ಕೌತುಕಪಡುವ ದಾರ್ಶನಿಕ ವೇದಾಂತಿಯ ಮಾತು––ಮೂರೂ ಅದ್ವಿತೀಯವಾಗಿವೆ; ಆಲೋಚಿಸಿದಷ್ಟು ಸಾರವತ್ತಾಗುತ್ತವೆ, ಅವುಗಳ ಧ್ವನಿವಿಸ್ತಾರ ದೊಡ್ಡದು. ಹೇಳುವ ರೀತಿ ಆಕರ್ಷಕ, ಮೋಹಕ. ಇಂಥ ವಚನಗಳನ್ನು ಅವರವರ ಅಭಿರುಚಿಗೆ ತಕ್ಕಂತೆ ಉದಹರಿಸಬಹುದು. ಇವುಗಳ ವೈಶದ್ಯ ಆಳವಾದ ತಿಳಿನೀರಿನ ಮಡುವಿನ ವೈಶದ್ಯ, ಅಲ್ಪತೇ–ಯದ್ದಲ್ಲ; ಈ ಸಂಕ್ಷಿಪ್ತತೆ ಧೀಶಕ್ತಿಯ ಸಾಂದ್ರತೆಯಿಂದ ಭಾವದ ತೀವ್ರತೆಯಿಂದ ಉಂಟಾದುದು, ಬುದ್ಧಿ ಅಲ್ಲಗಳೆಯುವಂಥದಲ್ಲ, ಅದರ ಬಲ್ಲತನವನ್ನು ಪರೀಕ್ಷಿಸುವಂಥದು; ಇದನ್ನು ಇದಕ್ಕಿಂತ ಚೆನ್ನಾಗಿ ಹೇಳಲು ಅಸಾಧ್ಯ ಎಂಬ ಪರಿತುಷ್ಟ ಭಾವ ಉದಿಸುವುದರಿಂದ ಅದು ಪೂರ್ಣ. ಎರಡನೆಯ ವಚನದಲ್ಲಿ ವಾಕ್ಯಗಳು ಪುನರುಕ್ತವಾಗಿವೆ. ಇದರಿಂದ ಸಂಕ್ಷಿಪ್ತತೆಗೆ ಭಂಗ ಬರುವುದಿಲ್ಲವೇ, ಎಂದರೆ ಇಲ್ಲ; ಅದರಿಂದ ಅರ್ಥದ ಆಳ ಹೆಚ್ಚುತ್ತದೆ. ಮತ್ತು ವಾಚ್ಯವಾಗಿ ಮುಗಿಯುವ ಕೊನೆಯ ವಾಕ್ಯ ದಾರುಣವಾದ ನಿರ್ವೇದವನ್ನು ವ್ಯಂಜಿಸುವುದರಿಂದ ಅದೂ ರಂಜನೀಯ. ವಚನಗಳು ಸೂತ್ರಗಳಲ್ಲ; ರಸವಾಕ್ಯಗಳು. ಇವು ಕನ್ನಡ ಭಾಷೆಯ ಕೋಡುಗಳು.

ವಚನಗಳು––"ವಾಕ್ಯಂ ರಸಾತ್ಮಕಂ ಕಾವ್ಯಂ" ಎಂಬ ಲಕ್ಷಣಕ್ಕೂ ಬಹುವಾಗಿ ಒಪ್ಪುತ್ತವೆ. ಏಕೆಂದರೆ ಅವು ಕೃಪಣರ ಮಾತಲ್ಲ, ವಿಪುಲಾನುಭವಿಗಳ ಮಾತು, ಭವದಲ್ಲಿ ತೇಲಿ ಮುಳುಗಿ ಪಾರಾಗುವ ಹವಣಿಕೆಯಲ್ಲಿರುವ ಮುಮುಕ್ಷುಗಳ ಮಾತು. ಕೆಲವು ಸಿದ್ಧರು ಸಾಧಕರಿಗೆ ಹೇಳುವಂತಿವೆ. ಕೆಲವು ತಮ್ಮ ಪರಮೋದ್ದಿಷ್ಟವಾದ ವೈಭವವನ್ನು ಕುರಿತಂತಿವೆ. ಆಲಂಕಾರಿಕರ ಅಷ್ಟರಸಗಳ ಮಡುಗಳಿವು. ಮತ್ತೆ ಕೆಲವು ಶ್ರೇಯೋ ಮಾರ್ಗದಲ್ಲಿ ನಡೆಯುತ್ತಿರುವ ಪಾಂಥರ ಪರಸ್ಪರ ಸಂಭಾಷಣೆಯಂತಿವೆ, ಮತ್ತೆ ಕೆಲವು ಸ್ವಾತ್ಮಾನಂದಯೋಗಸ್ಥಿತಿಯನ್ನು ವರ್ಣಿಸುವಂತಿವೆ. ಇನ್ನೂ ಕೆಲವು ಯೋಗಕ್ಷೇಮ ವಲಯದಲ್ಲಿ ತಾಪತ್ರಯಗಳಿಂದ ಪೀಡಿತರಾಗಿ ಪರಿತಪಿಸುತ್ತಿರುವ ಸಂಸಾರಿಗಳನ್ನು ಕುರಿತ, ಕೆಲವು ವೇಳೆ ಗಡುಸಾದರೂ, ಅನುಕಂಪಯುಕ್ತವಾದ ಮಾತುಗಳನ್ನೊಳಗೊಂಡಿವೆ. ಇವುಗಳಲ್ಲಿ ನೀತಿ ಬೋಧೆ, ಧರ್ಮ ಬೋಧೆ ಮತ್ತು ಮಾರ್ಗ ಬೋಧೆಯ ವಚನಗಳೂ ಇಲ್ಲದಿಲ್ಲ. ಇವು ತುಂಬ ಉಪಯುಕ್ತಗಳಾದರೂ, ಅಲೌಕಿಕವಾದ ರಸಾಸ್ವಾದನಕ್ಕೆ ಆಸೆಪಡುವ ನಮ್ಮಂಥವರನ್ನು ಅವು ಹೆಚ್ಚು ಹೊತ್ತು ಹಿಡಿದು ನಿಲ್ಲಿಸಲಾರವು. " ದಯೆಯೇ ಧರ್ಮದ ಮೂಲವಯ್ಯ" "ಕಳಬೇಡ, ಕೊಲಬೇಡ, ಹುಸಿಯನಾಡಲು ಬೇಡ" ಮುಂತಾದವು ಸಜ್ಜೀವನಕ್ಕೆ ಅತ್ಯವಶ್ಯಕವಾಗಿ ಬೇಕಾಗುವ ಉಪದೇಶಗಳು, ನಿಜ. ಇಂಥವು ಎಲ್ಲಾ ಧರ್ಮಗಳಲ್ಲೂ ಕಂಡು ಬರುತ್ತವೆ. ವಿಶ್ವಸಾಹಿತ್ಯಕ್ಕೆ ವಚನಗಳ ವಿಶಿಷ್ಟವಾದ ತೊಡಿಗೆಗಳಿವು ಎನ್ನಿಸಿಕೊಳ್ಳಬಹುದಾದ ವಚನಗಳ ಲಕ್ಷಣವೇ ಬೇರೆ. ಆಧ್ಯಾತ್ಮಿಕಾನಂದಾನುಭೂತಿಯನ್ನು ಸೂಸುವ ವಿಶಿಷ್ಟ ರೀತಿಯ ವಚನಗಳೀಗ ನಮ್ಮ ಲಕ್ಷ್ಯ, ತನ್ನನ್ನು ಈ ಜಗತ್ತನ್ನು ತಮ್ಮಿಬ್ಬರ ಸಂಬಂಧದಿಂದ ಸಂಜನಿಸುವ ಈಶ್ವರ ಕಲ್ಪನೆಯನ್ನು ಕುರಿತ ಬೆರಗುಪಡಿಸುವ ಮಾತುಗಳು. ಈ ಮಾತುಗಳಲ್ಲಿ ಇಡೀ ಮಹಾ ವ್ಯಕ್ತಿಯ ಸಾರಸರ್ವಸ್ವವೇ ನಮ್ಮ ಅಂತಃಕರಣಕ್ಕೆ ತಟ್ಟಿ ನಮಗೆ ಆತ್ಮವೃದ್ಧಿಯನ್ನು ತಂದು ಆನಂದಿಗಳನ್ನಾಗಿ ಮಾಡುತ್ತವೆ. ಇಂಥ ಮಾತುಗಳು ವಿಶ್ವಸಾಹಿತ್ಯದಲ್ಲೇ ಅಪರೂಪ; ಏಕೆಂದರೆ ಲೋಕದಲ್ಲಿ ಮಹಾತ್ಮರೂ ಬಹಳವಾಗಿಲ್ಲ. ಆದುದರಿಂದ ಈ ಬಗೆಯಲ್ಲಿ ಕೆಲವು ನಮ್ಮನ್ನು ಶುಚಿಗೊಳಿಸಿ ನಮ್ಮಲ್ಲೇ ಮಡುಗೊಳಿಸುತ್ತವೆ—ಬಸವಣ್ಣನವರು, ಅಕ್ಕಮಹಾದೇವಿ ಮುಂತಾದ ಮಹಾ ಭಕ್ತರ ವಚನಗಳು ಇವಕ್ಕೆ ನಿದರ್ಶನ—ಮತ್ತೆ ಕೆಲವು ಅಣಿಗೊಂಡ ನಮ್ಮನ್ನು ನಮ್ಮಿಂದ ಬಿಡಿಸಿ ಎತ್ತಲೇ ತುಯ್ದೆಸೆದು ಬಿಡುತ್ತವೆ. ಅಲ್ಲಮಪ್ರಭು, ದೇವರದಾಸಿಮಯ್ಯ ಮುಂತಾದವರ ಮಾತುಗಳು ಇದಕ್ಕೆ ನಿದರ್ಶನ. ಅವ್ರ ವಚನಗಳೆಲ್ಲ ಅಲೌಕಿಕರ ಸ್ವಾನುಭವದಿಂದ ಉದಿಸಿದ ಸೂಕ್ತಿಗಳು. ಈ ವಿರಕ್ತಿ ನಿರಾಶೆಯ ದುರ್ಬಲ ಹೃದಯದಿಂದ ಹುಟ್ಟಿದುದಲ್ಲ. ವಚನಕಾರರೆಲ್ಲಿ ಮಹಾ ಆಶಾವಾದಿಗಳು, ಮಹಾ ಧೈರ್ಯವಂತರು. ಸಮಾಜದಲ್ಲ ಪ್ರೇಮಾನಂದ ಪ್ರಸರಣವೇ ಇವರ ಗುರಿ. ಅಲ್ಲಮಪ್ರಭುವಿನಂಥವರ ವಚನಗಳು ಬಹು ರಾಗರಂಜಿತವಾಗಿದ್ದರೂ, ಸೂರ್ಯನ ಬೆಳಗಿನ ಬಿಸಿಲಿನಂತೆ, ನೀರಾಗರಂಜನೆಯುಳ್ಳವು. ಈ ವಚನವನ್ನು ನೋಡಿ.

"ಪರ ಚಿಂತೆಯನಗೇಕಯ್ಯ ? ನಮ್ಮ ಚಿಂತೆ ನಮಗೆ ಸಾಲದೆ ?
ಕೂಡಲ ಸಂಗಯ್ಯ ಒಲಿದಾನೇ ? ಒಲಿಯನೋ ಎಂಬ ಚಿಂತೆ
ಹಾಸಲುಂಟು ಹೊದೆಯಲುಂಟು !"

"ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯ
ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯ.
ಕೂಡಲ ಸಂಗಮದೇವಾ, ನಿಮ್ಮ ಮನೆಯ ಮಗನೆನಿಸಯ್ಯಾ."

('ಆಳ್ವಾರು'ಗಳ ನುಡಿಗಳಂತಿವೆಯಲ್ಲವೆ ಇವು ? ಅವರ ಭಕ್ತಿಗೀತೆಗಳನ್ನು ಇಂಥ ವಚನಗಳನ್ನು ಒಂದರ ಪಕ್ಕದಲ್ಲಿ ಒಂದನ್ನಿರಿಸಿ ಯಾರಾದರೂ ಪಂಡಿತ ರಸಿಕರು ನೋಡಬಹುದಲ್ಲವೇ ?)

"ಎನ್ನ ತನುವಿನ ಮರೆಯಲ್ಲಿರ್ದ ಚಿನುಮಯನ ಅರಸುವ ಬನ್ನಿರೇ.
ಎನ್ನ ಮನದ ಮರೆಯಲ್ಲಿರ್ದ ಮಹಾಘನ ವಸ್ತುವ ಹುಡುಕುವ
ಬನ್ನಿರೇ
ಎನ್ನ ಪ್ರಾಣದ ಮರೆಯಲ್ಲಿರ್ದ ಪರಬ್ರಹ್ಮನೆಂಬ ಅಖಂಡೇಶ್ವರನ
ನೋಡುವ ಬನ್ನಿರೇ"

"ನಿಮ್ಮಲ್ಲಿ ನೀವು ತಿಳಿದು ನೋಡಿರೆ ! ಅನ್ಯವಿಲ್ಲ
ಕಾಣಿರಣ್ಣ ! ಅರಿವು ನಿಮ್ಮಲ್ಲಿಯೇ ತದ್ಗತವಾಗಿಯದೆ !
ಅನ್ಯ ಭಾವವ ನೆನೆಯದೆ, ತನ್ನೊಳಗೆ ತಾನೆಚ್ಚರಬಲ್ಲಡೆ
ತನ್ನಲ್ಲಿಯ ತನ್ಮಯ ಗೊಹೇಶ್ವರ ಲಿಂಗವು"

"ಎನ್ನನಾನರಿಯದಂದು ನೀನೆಲ್ಲಿರ್ದೆ ಹೇಳಯ್ಯ,
ಬನ್ನದೊಳಗಣ ಬಣ್ಣದಂತೆ, ಎನ್ನೊಳಗಿರ್ದೆಯಯ್ಯ,
ಎನ್ನೊಳಗೆ ಇರ್ದು ಮೈದೋರದ ಭೇದವ ನಿಮ್ಮಲ್ಲಿ
ಕಂಡೆನು ಕಾಣಾ ಚೆನ್ನಮಲ್ಲಿಕಾರ್ಜುನ ".

(ವಿಶಿಷ್ಟಾದ್ವೈತಿಗಳು ತಮ್ಮ ಸಿದ್ಧಾಂತವನ್ನು ಇದಕ್ಕಿಂತ ಚೆನ್ನಾಗಿ ಹೇಳಬಲ್ಲರೇ ?)

"ನಾದ ಮುನ್ನವೋ? ಬಿಂದು ಮುನ್ನವೋ? ಜೀವ ಮುನ್ನವೋ
ಕಾಯ ಮುನ್ನವೋ ? ಜೀವ ಕಾಯಗಳ ಕುಳಸ್ಥಳಂಗಳ
ಬಲ್ಲವರು ನೀವು ಹೇಳಿರೇ? ಗುಹೇಶ್ವರಾ, ನೀನು
ಮುನ್ನವೋ, ನಾನು ಮುನ್ನವೋ, ಬಲ್ಲವರು ನೀವು ಹೇಳಿರೇ?"

ಈ ಧೀರ ಪ್ರಶ್ನೆಗೆ ಉತ್ತರ ಹೇಳುವುದು ಕಷ್ಟ. ವಚನಗಳು ಮನುಷ್ಯ ವರ್ಗದ ಮೇಲೆ ಹಾಕುವ ಹೊಣೆ ಬಹಳ ದೊಡ್ಡದು. ದೇವರು ಎಂಬ ಭಾವನೆ ಮಾನವನ ಸ್ವಮಥನದಿಂದ ಉದ್ಧೃತವಾದ ಪರಮ ಮೌಲ್ಯ ಎನ್ನುತ್ತವೆ ಅವು. ಆರ್ತರ ಮತ್ತು ಅರ್ಥಾರ್ಥಿಗಳ ಭಕ್ತಿಯನ್ನೂ ದೈವಾಗಮಗಳ ಆಡಂಬರದ ಹೊರ ತೋರಿಕೆಗಳನ್ನೂ ನೋಡಿ ನಗುತ್ತವೆ. ಜ್ಞಾನ ವೈರಾಗ್ಯಶಾಲಿಗಳಿಂದ ಭಕ್ತಿ ಸಾಧ್ಯವೇ ಹೊರತು ಮಿಕ್ಕವರಿಗಲ್ಲ ಎನ್ನುತ್ತವೆ. ಸಾಧಕ ತನ್ನ ಅಂತಶ್ಶ್ರೀತದಿಂದ ಪರಮಾತ್ಮನನ್ನು ಉದ್ಧರಿಸಬೇಕೇ ಹೊರತು ಬೇರೆ ಮಾರ್ಗವಿಲ್ಲ ಆತ್ಮಾನಂದಿಯಾಗುವುದಕ್ಕೆ ಎನ್ನುತ್ತವೆ. ಈ ಸತತಾಧ್ಯವಸಾಯವೆ ಸಾಧನೆ; ಇದು ಮುಖ್ಯವಾಗಿ ಯೋಗಮಾರ್ಗದ್ದು. ಸಾಕ್ಷಾತ್ಕಾರದ ಹಂಬಲವೇ ಭಕ್ತಿ. ಶಿವಶರಣರಿಗೆ ಮನುಷ್ಯ ದೇಹದ ಮೇಲೆ ಜಿಗುಪ್ಸೆಯಿಲ್ಲ. ಅದರ ಮೇಲೆ ಸಲ್ಲದ ಅಭಿಮಾನವನ್ನು ತಳೆದು ಅಲ್ಲೆ ನಿಲ್ಲಬಾರದು ಎಂಬುದರಷ್ಟರಮಟ್ಟಿಗೆ ಕೆಲವು ವಚನಗಳಲ್ಲಿ ಅದರ ಹೇಯತೆ ವರ್ಣಿತವಾಗಿದೆ. ಆದರೆ ಮುಮುಕ್ಷುವಿಗೆ ಪ್ರಥಮ ಸೋಪಾನವಾದ ವಿರಕ್ತಿಯನ್ನು ಹುಟ್ಟಿಸುವುದಕ್ಕೆ ಮಾತ್ರ ಅದರ ಹೇಯತಾ ಜ್ಞಾನ. ಶಿವಸಾಕ್ಷಾತ್ಕಾರದಲ್ಲಿ ಅದರ ಪ್ರಾಮುಖ್ಯ ಪ್ರಾಶಸ್ತ್ಯಗಳು ಅಧಿಕ. "ದೇಹವೇ ಪಿಂಡಿಗೆ, ಜೀವವೇ ಲಿಂಗ, ಗುಹೇಶ್ವರಾ", ಗುಹೇಶ್ವರನೆಂಬ ಅತ್ಮನುಳ್ಳಕ್ಕರ ಭಕ್ತಿ ಮಾಡಬೇಕು," "ಕಲ್ಲೊಳಗಣ ಕಿಚ್ಚು ರಿಯಬಲ್ಲುದೇ, ಬೀಜದೊಳಗಣ ವೃಕ್ಷ ಉಲಿಯ ಬಲ್ಲುದೇ, ತೋರಲಿಲ್ಲಾಗಿ, ಬೀರಲಿಲ್ಲಾರಿಗೆಯು, ಗುಹೇಶ್ವರ, ನಿಮ್ಮ ನಿಲುವಿನನುಭಾವ ಸುಖಿಬಲ್ಲ", "ಭಕ್ತರ ಭಾವದಲ್ಲಿಪ್ಪನಲ್ಲದೆ ಮತ್ತೆಲ್ಲಿಯೂ ಇಲ್ಲ ಗುಹೇಶ್ವರ." ದೇವರ ವಿಷಯದಲ್ಲಿ ಇದು ತುಂಬಾ ಧೀರ ನಿಲವು. ಗಾಢವಾದ ಚಿಂತನೆಯ ಕೆಚ್ಚು ಇಲ್ಲಿದ್ದು ಕಾಣುತ್ತದೆ, ಹಾಗೂ ಮೇಲೆ ಉದಹರಿಸಿದ ಶರಣರ ವಚನಗಳಲ್ಲಿ. ಜ್ಞಾನಿಯ ಈ ವಚನವನ್ನು ಪರಿಭಾವಿಸಿ, ಎಷ್ಟು ಆಶ್ಚರ್ಯಕರ :

"ಅರಸಿ ಅರಸಿ ಹಾ ಹಾ ಎನ್ನುತಿದ್ದೆನು. ಬೆದಕಿ ಬೆದಕಿ
ಬೆದ ಬೆದ ಬೇವುತಿದ್ದೆನು. ಗೊಹೇಶ್ವರ, ಕಣ್ಣ
ಮೊದಲಲ್ಲಿದ್ದವನ ಕಾಣೆನು."

ಅದ್ವೈತ ವೇದಾಂತ ತತ್ವವನ್ನು ಅನುರಣಿಸುವಂತೆ ತೋರುವ ಈ ಮತ್ತೊಂದು ವಚನವನ್ನು ನೋಡಿ :

"ನಾನೆಂಬುದು ಅಹಂಕಾರ, ನೀನೆಂಬುದು ಮಾಯೆ;
ನಾನು ನೀನೆಂಬ ಉಭಯವಳಿದರೆ ನಾನೆಂಬುವನೂ ನೇನೆಂಬವನೂ
ನೀನೇ ಅಯ್ಯಾ, ಭೇದವೆಲ್ಲಿಯದೋ ಮಹಾಲಿಂಗ ಗುರು
ಶಿವ ಸಿದ್ಧೇಶ್ವರ ಪ್ರಭುವೇ." –

ಅದ್ವೈತದ ಸಾರವನ್ನು ಇದಕ್ಕಿಂತ ಚನ್ನಾಗಿ ಹೇಳುವುದು ಕಷ್ಟ. ಈ ವಚನಗಳನ್ನು ಓದುತ್ತಾ ಓದುತ್ತಾ ಹೋದರೆ ನಮ್ಮ ಬೆರಗು ಹಬ್ಬುತ್ತಲೇ ಹೋಗುತ್ತದೆ. ಯಾವುದನ್ನು ಎತ್ತಿ ಹೇಳೋಣ ಯಾವುದನ್ನು ಬಿಡೋಣ.

"ಅಪರಿಮಿತದ ಕತ್ತಲೆಯೊಳಗೆ ವಿಪರೀತದ
ಬೆಳಗನಿಕ್ಕಿದವರಾರೋ ? ಬೆಳಗೂ ಅದೆ, ಕತ್ತಲೆಯೂ
ಅದೆ ! ಇದೇನು ಚೋದ್ಯವೋ ? ಒಂದಕ್ಕೊಂದಂಜದು.
ಆನೆಯೂ ಸಿಂಹವೂ ಒಂದಾಗಿ ಉಂಬುದ ಕಂಡು
ಬೆರಗಾದೆನು ಕಾಣಾ, ಗುಹೇಶ್ವರಾ !"

ಮನಸ್ಸನ್ನು ಎತ್ತಲೋ ಬೀಸೊಗೆಯುವ ಮಾತು, ಮಹಾನುಭಾವನ ಮಾತು. "ಇದೇನು ಚೋದ್ಯವೋ ಒಂದಕ್ಕೊಂದಂಜದು." ಆಕಾಶದ ಮಹಾ ತನುಸ್ಸಿನಲ್ಲಿ ಲಕ್ಷೋಪಲಕ್ಷ ಜ್ಯೋತಿಃ ಖಂಡಗಳು ಹಾಯಾಗಿ ಯಾವ ವೈರವೂ ಇಲ್ಲದೆ ತೇಲುತ್ತಿವೆ. ಮನುಷ್ಯನ ಬಾಳುವೆಯಲ್ಲೂ ಅಷ್ಟೆ.

ಸಾಮಾನ್ಯರ ಮನಸ್ಸಿನಿಂದ ಇಂಥ ಮಾತುಗಳು ಮೂಡಿಬರುವುದು ದುರ್ಲಭ.

"ಉಲಿಗರ ಮಾತು ಉಲಿಗರ ತೋಟಿ ಎತ್ತ ? ಲಿಂಗಾನುಭಾವದ
ರಹಸ್ಯದ ವಾಕ್ಯವೆತ್ತ ? ಸಂತೆಯೊಳಗೆ ಸಮಾಧಿಯುಂಟೆ ಮರುಳೆ ?
ಲಿಂಗಾನುಭಾವದ ಮಹಾನುಭಾವ ಸದ್ಭಕ್ತ ವಿರಕ್ತ
ವೀರಮಾಹೇಶ್ವರರೆಂಬ
ಶಿವಯುತರಿಗಲ್ಲದೆ, ಹೊರವೇಶದಲ್ಲಿ ನಾಮ ರೂಪುಕ್ರಿಯೆವಿಡಿದು,
ವಾಗ್ಬ್ರಹ್ಮಿಗಳೆನಿಸುವ ವಾಚಾಳಕರಿಗೆಲ್ಲಿಯದೋ? ಅದೆಂತೋ ?
ಅದೆತ್ತಣ ಸುದ್ದಿಯೋ ಕೂಡಲ ಚೆನ್ನಸಂಗಮದೇವಾ ?"

ಆದರೆ ಜ್ಞಾನ ಭಕ್ತಿ ವೈರಾಗ್ಯಗಳು ನಾವು ಬಯಸಿದಾಗ ಹುಟ್ಟುವಂಥದಲ್ಲ. ಅನೇಕ ಜನ್ಮಗಳ ಸಂಸ್ಕಾರಗಳನ್ನು ಪಡೆದು ಪಕ್ವವಾದ ಚೇತನಕ್ಕೆ ಅದು ಲಭ್ಯ. ಅದಕ್ಕೆ ಕಾಯಬೇಕು, ಪಳಗಬೇಕು. ಸಮಾಜವೂ ಅಂಥ ಜೀವಕ್ಕೆ ಅನುವುಗೊಡಬೇಕು. ಬುದ್ಧಿ ಜಾಗ್ರತವಾದಾಗ ಹೃದಯ ತೆಪ್ಪಗಿರುತ್ತದೆ; ಹೃದಯ ಎಚ್ಚೆತ್ತಿರುವಾಗ

ಬುದ್ಧಿ ಮಂದವಾಗಿ ಬಿದ್ದಿರುತ್ತದೆ. ಎರಡೂ ಜಾಗ್ರತವಾಗಿರುವ ಕಾಲ ಮಾನವ ಚರಿತ್ರೆಯಲ್ಲಿ ಎಲ್ಲೋ ಅಲ್ಪಕಾಲದಲ್ಲಿ ಮಾತ್ರ.

"ಸಣ್ಣ ನನೆಯೊಳಗಣ ಪರಿಮಳವ ಪೊರಸೂಸಿ
ಇದಿರಿಂಗರುಹಿಸ
ಬಲ್ಲುದೇ ವಾಯು ? ಕೊಡಗೂಸಿನೊಳಗಣ
ಮೊಲೆ ಮುಡಿಯ, ಹಡೆದ
ತಾಯಿ ತಂದೆಗಳೆಂದರೆ ಕಾಣಿಸಿ ಕೊಡಬಲ್ಲರೇ ಕಾಂಬವರ
ಕಣ್ಣಿಂಗೆ
ಪಕ್ವಕ್ಕಲ್ಲದೆ ಪರಿಣಾಮ ಕಾಣಿಸದು ರಾಮನಾಥ".

ಅಹುದು, ನಿಜ, "ಪಕ್ವಕ್ಕಲ್ಲದೆ ಪರಿಣಾಮ ಕಾಣಿಸದು. ಜ್ಞಾನಾನಂದ ಪ್ರೇಮಗಳು ಮಾನವ ಸಮಾಜದಲ್ಲಿ ಹರಡಿ ನೆಲೆಗೊಳ್ಳಲು ಕಾಲ ಇನ್ನೂ ಪಕ್ವವಾಗಿಲ್ಲ. ಆನಂದವನ್ನೇ ಮೂರ್ತೀಕರಿಸುವ ದೈವಭಾವವನ್ನು ಮನುಷ್ಯ ತನ್ನ ಆತ್ಮ ಕೌಶಲದಿಂದ ನಿರ್ಮಿಸಿದರೆ ಉಂಟು, ಇಲ್ಲದಿದ್ದರೆ ಇಲ್ಲ. ದೈವಭಾವದ ಮತ್ತೊಂದು ಹೆಸರು ನನ್ನ ಮಟ್ಟಿಗೆ ಸತ್ಯ ಅಲ್ಲ. ಪ್ರೇಮ, ಸತ್ಯ ಎಂದರೇನೋ ಅದು ನನಗೆ ಗೊತ್ತಿಲ್ಲದ ಮಾತು, ಯಾವುದು ಸುಳ್ಳೋ ಯಾವುದು ದಿಟವೋ ದೇವರೇ ಬಲ್ಲ. ಆದರೆ ಪ್ರೇಮ, ಸದ್ಭಾವನೆ, ಸಹಾನುಭೂತಿ, ಮಾನವ ಜೀವದ ಪಾವಿತ್ರ್ಯ ಅನರ್ಘ್ಯತೆ—ಇದು ಅಮೂರ್ತವೋ ಅನುಭವಕ್ಕೆ ಮೀರಿದುದೂ ಆದ ಮಾತಲ್ಲ. ಎಲ್ಲ ಸಿದ್ಧರ ಮತ್ತು ಸತ್ಪುರುಷರ ಮಾತು ಇದನ್ನು ಸಾರುತ್ತವೆ; ಶರಣರ ಅನೇಕ ವಚನಗಳು ನಮ್ಮ ಕನ್ನಡದಲ್ಲಿ ಅದ್ವಿತೀಯವಾಗಿವೆ.

ಈ ವಚನಗಳ ಭಾಷೆ ಸಾಮಾನ್ಯರು ಆಡುವ ಮಾತಲ್ಲ. ಹಾಗೆನ್ನುವುದು ಒಂದು ನೂತನ ಭ್ರಮೆ. ಅದು ಜ್ಞಾನಿಗಳ ಪ್ರೌಢೋಕ್ತಿ. ವಾಕ್ ಚತುರರ ಮಾತು; ಬಲ್ಲವರ ನುಡಿ. ಇತ್ತೀಚೆಗೆ ಆಡು ಮಾತಿನ ಲಯ ಧೋರಣೆ ಸರಳತೆ ಮುಂತಾದ ಮಾತುಗಳು ಸಾಹಿತ್ಯ ಲೋಕದಲ್ಲಿ ಎಸೆದಾಡುತ್ತಿವೆ. ಎಲ್ಲ ಭಾಷೆಗಳೂ ಆಡು ಮಾತುಗಳಿಂದಲೇ ರೂಪುಗೊಳ್ಳುತ್ತವೆ. ಮೂರ್ತವಾಗಲೆಳಿಸುವ ಭಾವದ ಆಂತರಿಕ ಊರ್ಜೆಯ ಸ್ವರೂಪವನ್ನು ದ್ಯೋತಿಸುತ್ತವೆ— ಗದ್ಯದ ಲಯ ಮತ್ತು ಪದ್ಯ ಛಂದೋ ರೂಪಗಳು. ಮನದಂತೆ ಮಾತುಗಳು. ಜೀವಿಗಳೆಲ್ಲವೂ ಆಯಾ ಜೀವಶಕ್ತಿಯ ಛಂದೋರೂಪಗಳಲ್ಲವೇ ? ನಮ್ಮ ಆತ್ಮ ದ್ರವ್ಯವಾಗಲೆಳಸುವ ನೈಜಾನುಭವವುಳ್ಳವರ ಮನಸ್ಸು ಹಾಗೆಯೇ ತನಗುಚಿತವೆನಿಸುವ ಸಮೀಚೀನವಾದ ಮಾತಿನ ರೂಪಗಳನ್ನು ಕಳೆದು ನಮ್ಮ ಅಂತಃಕರಣದಲ್ಲಿ ಮೈಗರೆಯುತ್ತದೆ. ಶರಣರ ವಚನಗಳನ್ನು ಭಾವ ಗದ್ಯಗಳೆಂದು ಕರೆಯಬಹುದು. ಇವುಗಳನ್ನು ರಾಗಗಳಲ್ಲಿ ಅಳವಡಿಸಿ ತಾಳ ಲಯಗಳಿಗೆ ಸರಿಯಾಗಿ ಹಾಡಲೂಬಹುದು. ಈ ರೂಪದಲ್ಲಿ ಅವುಗಳ ವಸ್ತುವಿಗೆ ಪ್ರಾಧಾನ್ಯ ಸಿಕ್ಕಿ ಸಾಮಾನ್ಯರ ಬುದ್ಧಿಗೂ ಅವು ಇಳಿಯುವ ಹದವನ್ನು ಪಡೆಯುತ್ತವೆ. ಗದ್ಯದ ಹರಿವಿನಲ್ಲಿ ಅವುಗಳ ರೀತಿಯ ಹೊಳಪು ಪ್ರಖರ. ಛಂದಸ್ಸಿನ ಕಳಕಳಿಗೆ ಸಿಕ್ಕದಷ್ಟು ಅವುಗಳ ಚೆಲುವು ಅಧಿಕ. ಕಲೆಯ ಎಚ್ಚರದಿಂದ ಹೆಣೆದ ವಚನಗಳು ಸಹೃದಯರಲ್ಲಿ ಕಳೆಗುಂದುತ್ತವೆ.

ಉದಾಹರಣೆಗೆ: "ತಿಳಿದ ತಿಳಿಗೊಳದ ತಳಿತ ತಾವರೆಯರಳ ತಂಡುಲದ ರುಚಿಯ ಕಳಹಂಸೆ, ಸುಧಾಕಿರಣನಿಂ ಬೆಳಗಿದ ಬೆಳದಿಂಗಳ ರುಚಿಯ ಚಕೋರ ಬಯಸುವಂತೆ,ಕಾರ್ಗಾಲ ಮುಂಬನಿಯ ಸುಖವ ಚಾದಗೆ ಬಯಸುವಂತೆ, ಆನು ನಿಮ್ಮ ಶರಣರ ಬರವ ಹಾರಿ ಹಾರಿ ಹಂಬಲಿಸುತ್ತಿದ್ದೇನೆ, ಕರುಣಿಸಯ್ಯಾ ! ಎಲೆ ಸೌರಾಷ್ಟ್ರ ಸೋಮೇಶ್ವರ, ನಿಮ್ಮ ಧರ್ಮ, ನಿಮ್ಮ ಧರ್ಮ". ಇಲ್ಲಿ ಮನಸ್ಸು ಮಾತಿನ ಕಲೆಗೆ ಅಧೀನವಾಯಿತು. ಇದಕ್ಕಿದಿರಾಗಿ ಈ ವಚನವನ್ನು ಇಟ್ಟು ನೋಡಿದರೆ, ಮನದ ಮೇಲ್ಮೆ ಹೆಚ್ಚೋ, ಕಲೆಯ ಮೇಲ್ಮೆ ಹೆಚ್ಚೋ ನಮಗೇ ವಿಶದವಾಗುತ್ತದೆ.

"ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ. ಅಂಬುಜಕೆ
ಭಾನುವಿನುದಯದ ಚಿಂತೆ. ಭ್ರಮರಂಗೆ ಪರಿಮಳದ ಬಂಡುಂಬ
ಚಿಂತೆ.
ಎನಗೆ ನಮ್ಮ ಕೂಡಲ ಸಂಗಮದೇವರ ನೆನೆವುದೆ ಚಿಂತೆ".

ಇದರಲ್ಲಿ ಕಲೆಗೆ ಕೊರತೆಯಿಲ್ಲ. ಆದರೆ ಮನದ ಹೊಳವೋ ಅದರ ಕಾಂತಿಯೋ— ಸಾಮಾನ್ಯರಿಗೆ ಎಟುಕದ್ದು. ಲೌಕಿಕರ ಭಾಷೆಯೇ ಬೇರೆ, ಅಲೌಕಿಕಾನುಭವಗಳನ್ನು ಕುರಿತಾಡುವವರ ಭಾಷೆಯೇ ಬೇರೆ, ರೀತಿಯೂ ಬೇರೆ. ಅಲ್ಲಮಾದಿ ಶರಣರ ವಚನಗಳು ನೇರ, ಸರಳ. ಅವು ಗಹನತತ್ತ್ವಾಲೋಚನೆಯ ಸಂಪಾದಕಗಳು, ಸ್ವತಂತ್ರಾಲೋಚನೆಗಳ ಪ್ರತೀಕಗಳು. ತೀವ್ರ ನೈಜ ಸಂವೇದನೆಗಳಿಂದ ತೇಜೋವಂತವಾದವು. ಅವುಗಳಲ್ಲಿನ ಅಲಂಕಾರಗಳು ಭಾವದ ಸಹಜ ಸೌಭಾಗ್ಯವನ್ನು ಪ್ರದರ್ಶಿಸುವಂಥವು. ಯಾವುದೋ ಒಂದು ಪ್ರಾಂತದ ಅಥವಾ ಬುಡಕಟ್ಟಿನ ಮಾತು ಡಾಂಟೆ ಕವಿಯಿಂದ ಭಾಷಾ ಪದವಿ ಸೇರಿತಂತೆ; ಹಾಗೆಯೇ ಷೇಕ್ಸಪಿಯರು ಇಂಗ್ಲೀಷ್ ಭಾಷೆಯ ದೀಪಕನಾದ. ಅದೇರೀತಿಯಲ್ಲಿ ಆದಿ ವಚನಕಾರರು ಕನ್ನಡ ಭಾಷೆಯನ್ನು ಉನ್ನತಿಗೇರಿಸಿದರು. ಈ ಭಾಷೆಯಲ್ಲಿ ಅಚ್ಚಗನ್ನಡದ ಸೊಗಡಿದೆ, ಮಣ್ಣಿನ ವಾಸನೆಯಿದೆ, ನೆಲದ ಮೊದಲ ಮಳೆಗೆಸೂಸುವ ಕಂಪಿದೆ. ಕನ್ನಡ ಮಾತು ಅಲ್ಲಮನಲ್ಲಿ ಕಾರ್ಮೋಡದಲ್ಲಾಡುವ ಮಿಂಚು, ಬಸವಣ್ಣನವರಲ್ಲಿ ರಥಾರತಿಯ ಸ್ವರ್ಣದೀಪಶಿಖೆ, ಅಕ್ಕ ಮಹಾದೇವಿಯಲ್ಲಿ ಮಾಣಿಕ್ಯ ರತ್ನ ಕಾಂತಿ. ಇವನ್ನು ಓದುತ್ತಾ ಓದುತ್ತಾ ಮನಸ್ಸು ಅರಳುತ್ತದೆ, ಒಂದು ಶ್ರೀಮಂತಿಕೆಯ ಅನುಭವವನ್ನು ಹೃದಯ ಪಡೆಯುತ್ತದೆ.

ಆದರೆ ವಿಶ್ವ ಸಾಹಿತ್ಯಕ್ಕೆ ಸೇರಬಹುದಾದ ಸ್ವಯಂಜ್ಯೋತಿಯುಳ್ಳ ವಚನಗಳನ್ನು ಸಹೃದಯರು ಬಹು ಎಚ್ಚರಿಕೆಯಿಂದ ಆಯಬೇಕು. ವಚನಗಳ ರೀತಿ ಸರಳವಾದುದರಿಂದ ಅವನ್ನು ಅನುಕರಿಸುವುದು ಸುಲಭ. ಅವು ಭಾವ ಗದ್ಯವೆಂಬ ಒಂದು ಹೊಸ ಪ್ರಕಾರವನ್ನೇ ಹುಟ್ಟಿ ಹಾಕಿವೆ. ವಚನಗಳನ್ನು ಬರೆಯುವುದು ಒಂದು ಶಿಷ್ಟಾಚಾರವೇ ಪ್ರಾಯಶಃ ಆಗಿದೆಯೇನೋ. ಈಗಿನ ನಮ್ಮ ಕವಿಗಳ ಲೌಕಿಕೋಕ್ತಿಗಳೆಲ್ಲ ವಚನಗಳ ಸಂಪ್ರದಾಯದಲ್ಲೇ ಸಾಗುತ್ತಿರುವಂತೆ ತೋರುತ್ತವೆ. ಬಸವಣ್ಣನವರ ಕಾಲದಲ್ಲೇ ಅಷ್ಟು ಅನುಭವಿ

ಗಳಲ್ಲದೆ ಸಾಮಾನ್ಯರು ವಚನ ರಚನೆಗೆ ಕೈಹಾಕಿ ಅವರ ಎಚ್ಚರಿಕೆಗೆ ಪಾತ್ರರಾಗಿದ್ದಾರೆ. "ನುಡಿದರೆ ಮುತ್ತಿನ ಹಾರದಂತಿರಬೇಕು" ಎಂಬಂಥ ಲಕ್ಷಣ ವಾಕ್ಯಗಳು ಅವರಿಂದ ಹೊರಮೂಡಿವೆ.

"ಕೆರೆಹಳ್ಳ ಬಾವಿಗಳು ಮೈದೆಗೆದರೆ ಗುಳ್ಳೆ ಗೊರಜೆ ಚಿಪ್ಪುಗಳು ಕಾಣಬಹುದು. ವಾರಿಧಿ ಮೈದೆಗೆದರೆ ರತ್ನಂಗಳು ಕಾಣಬಹುದು. ಕೂಡಲ ಸಂಗನ ಶರಣರು ಮನದೆರೆದು ಮಾತನಾಡಿದರೆ ಲಿಂಗವೇ ಕಾಣಬಹುದು". ವಿಶ್ವಕ್ಕೆ ಬೇಕಾದುದು ಸಾಂತಪ್ರಾಜ್ಞರ, ಜ್ಞಾನಿಗಳ ಪ್ರೇಮಿಷ್ಟರ ವಚನ ರತ್ನಗಳು, ಅವರೇ ಭಕ್ತರಾದಾಗ ನುಡಿವ ಪರಮಾರ್ಥ ತತ್ವಾನುಭವದ ರಸಾನಂದದ ಮಾತುಗಳು.

ಕನ್ನಡದ ಶರಣ ವಚನಗಳಲ್ಲಿ ಇಂಥ ಮಾತುಗಳಿಗೆ ಕೊರೆಯಿಲ್ಲದಿರುವುದು ನಮ್ಮ ಸೌಭಾಗ್ಯ. ಶುದ್ಧ ಜೀವ ತನ್ನ ಪರಮೋಚ್ಚಸ್ತರದಲ್ಲಿ ಪಡುವ ಅನುಭೂತಿಗಳಿಂದಲ್ಲವೇ ನಾಡಿನ ಆತ್ಮಸಂಪದ ಬೆಳೆಯುವುದು. ಈ ಆತ್ಮಸಂಪದವೆಂದರೆ ಆ ನಾಡಿನ ಜ್ಞಾನಾನಂದಾಕರತೆಯ ಸಂಪತ್ತಲ್ಲದೆ ಮತ್ತೇನು ? ಅರಿಷಡ್ವರ್ಗದ ಜೂಳು ತುಂಬಿಕೊಂಡಾಗ ಈ ಆಕರತೆ ಕುಗ್ಗುತ್ತದೆಯಲ್ಲವೇ ? ಶುದ್ಧ ಮಾನಸರ, ಸ್ವತಂತ್ರ ಚಿಂತಕರ, ಸ್ವಾನುಭೂತಿಯಿಂದಲೇ ಪರಮಾತ್ಮನನ್ನು ಅಳೆಯುವ ಶಾಂತರೂ ತೇಜಸ್ವಿಗಳೂ ಆದ ಪರಮಯೋಗಿಗಳ ಮಾತು ನಮ್ಮನ್ನು ಕಾಪಾಡಲಿ. "ಸ್ವಾನುಭೂತ್ಯೇಕಮಾನಾಯ ನಮಃ ಶಾಂತಾಯ ತೇಜಸೇ"

ವಚನಕಾರರ ಸಮಾಜದರ್ಶನ*

ಡಾ॥ ಎಂ. ಚಿದಾನಂದಮೂರ್ತಿ,
ಪ್ರಾಧ್ಯಾಪಕ,
ಕನ್ನಡ ಅಧ್ಯಯನಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು-56

ಯಾವುದಾದರೂ ರೀತಿಯ ಪರಸ್ಪರ ಸಂಬಂಧವಿರುವ ವ್ಯಕ್ತಿಗಳ ಗುಂಪು ಸಮಾಜವೆನ್ನಿಸಿಕೊಳ್ಳುತ್ತದೆ. ಒಂದು ಸಮಾಜದ ಅಂಗಗಳಾಗಿರುವ ವ್ಯಕ್ತಿಗಳ, ಗುಂಪುಗಳ ಸ್ಥಾನ ಮತ್ತು ಪರಸ್ಪರ ಸಂಬಂಧಗಳ ರೀತಿ ನೀತಿಗಳು, ಸಂಸ್ಥೆಗಳು ಹುಟ್ಟಿಕೊಳ್ಳುವ ಅಂತೆಯೇ ನಿರ್ನಾಮವಾಗುವ ಬಗೆ, ಇತ್ಯಾದಿಗಳನ್ನು ಕುರಿತು ವಿವೇಚಿಸುವುದು ಸಮಾಜ ಶಾಸ್ತ್ರ (Sociology). ಸಮಾಜ ದರ್ಶನವು (Social Philosophy). ಸಮಾಜ ಶಾಸ್ತ್ರದ ಒಂದು ಭಾಗವಾಗಿದೆ. ಸಮಾಜ ದರ್ಶನವು, ಅದರ ಮಿತಾರ್ಥದಲ್ಲಿ, ಮನುಷ್ಯ ವರ್ಗದ ಸಾಮಾಜಿಕ ಏಕತೆಯನ್ನು ಗಮನದಲ್ಲಿಟ್ಟುಕೊಂಡು, ಆ ಏಕತೆಯ ಹಿನ್ನೆಲೆಯಲ್ಲಿ ಮನುಷ್ಯ ಜೀವನದ ವಿಶಿಷ್ಟ ಭಾಗಗಳನ್ನು ವ್ಯಾಖ್ಯಾನಿಸಲು ಪ್ರಯತ್ನಿಸುತ್ತದೆ. ಎಂದರೆ ಅದು ಮೌಲ್ಯಗಳನ್ನು, ಜೀವನದ ಗುರಿ ಆದರ್ಶಗಳನ್ನು ಅವು ಹಿಂದೆ ಇದ್ದಂತೆ, ಈಗ ಇರುವಂತೆ ಅಥವಾ ವಾಸ್ತವವಾಗಿ ಇರಬೇಕಾಗಿದ್ದಂತೆ ವಿವೇಚಿಸುವುದು ಮಾತ್ರವಲ್ಲದೆ ಅವುಗಳ ಅರ್ಥ, ಸಾರ್ಥಕ್ಯಗಳನ್ನೂ ಕುರಿತು ವಿಚಾರ ಮಾಡುತ್ತದೆ.[1]

ಸಮಾಜ ದರ್ಶನ ಎಂಬ ಮಾತನ್ನು ಮೇಲಿನಂತೆ ಸ್ಥೂಲವಾಗಿ ವಿವರಿಸಬಹುದಾದರೂ ಅದು ಮನಶ್ಶಾಸ್ತ್ರ, ಅರ್ಥಶಾಸ್ತ್ರ, ಸಾಹಿತ್ಯ, ಮತ, ಶಿಕ್ಷಣಶಾಸ್ತ್ರ, ದರ್ಶನ ಮುಂತಾದ ಎಲ್ಲ ಸಾಮಾಜಿಕ ವಿಷಯಗಳ ಜೊತೆಯೂ ಸಂಪರ್ಕವನ್ನು ಪಡೆದಿರುತ್ತದೆ.

ಈ ಪ್ರಬಂಧದಲ್ಲಿ ನಾನು ಮುಖ್ಯವಾಗಿ ಹನ್ನೆರಡನೆಯ ಶತಮಾನದ ವಚನಕಾರರ ಸಮಾಜ ದರ್ಶನವನ್ನು ಇಡಿಯಾಗಿ ವೀಕ್ಷಿಸಿ, ಒಟ್ಟು ಹಿಂದೂ ಸಮಾಜ ದರ್ಶನದ ಹಿನ್ನೆಲೆಯಲ್ಲಿ ಅದರ ರೂಪುರೇಷೆಗಳನ್ನು ವಿವೇಚಿಸಬೇಕೆಂದಿದ್ದೇನೆ. ಈ ನನ್ನ ವಿವೇಚನೆ ಸಮಗ್ರವಾಗಿರಬಲ್ಲುದೆಂಬ ವಿಶ್ವಾಸದ ಭ್ರಾಂತಿಯೂ ನನಗಿಲ್ಲ. ಅದು ಸಮಗ್ರವಾಗಬೇಕಾದರೆ ಅನೇಕ ವರ್ಷಗಳ ಶ್ರಮಪೂರ್ಣ ಅಭ್ಯಾಸ ಬೇಕು ಎಂಬುದರ ಸ್ಪಷ್ಟ ಕಲ್ಪನೆ ಮಾತ್ರ ನನಗಿದೆ. ಜೊತೆಗೆ, ಇಲ್ಲಿ ಯಾವುದಾದರೂ ಹೊಸ ಸಂಗತಿಗಳನ್ನು ಹೇಳಿದ್ದೇನೆ ಎಂದೂ ಅಂದುಕೊಂಡಿಲ್ಲ; ಹಾಗೆ ನೋಡಿದರೆ, ಹೊಸ ಸಂಗತಿಗಳ್ನು ಹೇಳಲುಬೇಕಾಗಿಲ್ಲ. ಆದರೆ ಒಟ್ಟು ನೋಟದಲ್ಲಿ, ಅಲ್ಲಲ್ಲಿ ಕೊಟ್ಟಿರುವ ಕೆಲವು ವ್ಯಾಖ್ಯಾನಗಳಲ್ಲಿ ಹೊಸತನವಿದ್ದರೂ ಇರಬಹುದು. ನನ್ನ ದೃಷ್ಟಿಗಿಂತ ಬೇರೆಯಾದ ದೃಷ್ಟಿಯನ್ನು, ನನ್ನ ಅಭಿಪ್ರಾಯಕ್ಕಿಂತ ಭಿನ್ನವಾದ ಅಭಿಪ್ರಾಯವನ್ನು ಈ ನನ್ನ ಪ್ರಬಂಧ ಪ್ರಚೋದಿಸಿದರೂ ಆಶ್ಚರ್ಯವಿಲ್ಲ.

ವಚನಕಾರರ ಸಮಾಜದರ್ಶನವನ್ನರಿಯಲು ಸಹಾಯ ಪಡೆಯಬಹುದಾದ ಸಾಮಗ್ರಿ ವಿಪುಲ ಮತ್ತು ಜೀವಂತ. ಹಿಂದೂ ಸಮಾಜ ದರ್ಶನದ ಬಗ್ಗೆ ಬರೆಯುವವರು ಸಾಮಾನ್ಯವಾಗಿ ವೇದಗಳು, ಧರ್ಮಶಾಸ್ತ್ರಗಳು, ಇತಿಹಾಸ ಪುರಾಣಗಳು, ಅರ್ಥಶಾಸ್ತ್ರ ಗ್ರಂಥಗಳನ್ನು ಅವಲಂಬಿಸುತ್ತಾರೆ. ಅಂತಹ ಬರವಣಿಗೆ ವಾಸ್ತವ ಸಂಗತಿಯನ್ನು ಎಷ್ಟರಮಟ್ಟಿಗೆ ಪ್ರತಿಬಿಂಬಿಸುತ್ತದೆಯೋ ಬಹಳ ಸಂದೇಹಾಸ್ಪದ. ಆದರೆ, ನಮ್ಮಂತೆಯೇ ಬದುಕಿ ಬಾಳಿದ ಬೇರೆ ಬೇರೆ ವರ್ಗದ, ಸಂಸ್ಕಾರದ, ಅನುಭವದ ನೂರಾರು ಜನರ ಆಲೋಚನೆ ಅನುಭವಗಳನ್ನು, ಜೀವನ ದೃಷ್ಟಿಯನ್ನು ನಿರೂಪಿಸುವ ವಿಪುಲ ವಚನ ವಾಙ್ಮಯದಂತಹ ಮತ್ತೊಂದು ವಾಙ್ಮಯ ಭಾರತದಲ್ಲಿ ಮತ್ತೊಂದಿಲ್ಲ. ಈ ವಚನ ವಾಙ್ಮಯವು ವಚನಕಾರರ ಸಮಾಜದರ್ಶನವನ್ನರಿಯಲು ಬಹು ಸೊಗಸಾದ ಆಕರವಾಗಿದೆ.

ವಚನಕಾರರಲ್ಲಿ ಯಾರನ್ನೇ ತೆಗೆದುಕೊಂಡರೂ, ಅವರೆಲ್ಲರಲ್ಲಿ ಎದ್ದು ಕಾಣುವ ಅಂಶವೆಂದರೆ ಅವರ ಸಮಾಜಪ್ರಜ್ಞೆ, ಇದರಲ್ಲಿ ತರತಮಗಳಿರಬಹುದು. ಉದಾಹರಣೆಗೆ, ಅಲ್ಲಮನಿಗಿಂತ ಬಸವಣ್ಣನವರಲ್ಲಿ ಅದು ಹೆಚ್ಚಾಗಿ ಕಾಣಬಹುದು. ಅಕ್ಕಮಹಾದೇವಿಯಲ್ಲಿ ತನ್ನ ಅಂತರಂಗದ ತೊಳಲಾಟವೇ ಪ್ರಮುಖವಾಗಿ, ತನ್ನ ಸುತ್ತಮುತ್ತಣ ಸಮಾಜದ ಬಗ್ಗೆ ಅಂತಹ ಹೆಚ್ಚಿನ ಕಳಕಳಿ ಕಾಣದಿರಬಹುದು. ಆದರೆ ಇದು ಕೇವಲ ತರತಮದ ಪ್ರಶ್ನೆ ಮಾತ್ರ. ವಚನಕಾರರು ತಮ್ಮ ಸುತ್ತಮುತ್ತ ಇದ್ದ ಸಮಾಜದ ಮಧ್ಯೆ, ಅದರೊಡನೆ

---

*ಕರ್ನಾಟಕ ವಿಶ್ವವಿದ್ಯಾಲಯ ಏರ್ಪಡಿಸಿದ್ದ ತೋಂಟದ ಸಿದ್ಧಲಿಂಗ ಯತಿಗಳ ಕುರಿತಾದ ವಿಚಾರ ಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧ.

[1] *"Social Philosophy, in particular, conentrates its attention on the social unity of mankind, and seeks to interpret the significanes of the special aspects of human life with reference to that unity. It thus means mainly the effort to study values, ends, ideals not primarily what exists or has existed or may be expected to exist, but rather the meaning and worth of these modes of existence"*
(J. S. Mackanzie: Outlines of social philosophy, 1952, p. 14.)

ತಮಗಿರುವ ಸಂಬಂಧದ ಬಗ್ಗೆ ಮತ್ತು ಅದರ ವಿಷಯವಾಗಿ ತಮಗಿರುವ ಜವಾಬ್ದಾರಿಯ ಬಗ್ಗೆ ಅರಿವಿಟ್ಟುಕೊಂಡು ಬದುಕಿದರು. ಅನೇಕ ವಚನಗಳಲ್ಲಿ ನಮಗೆ ಒಳ್ಳೆಯ ಸಮಾಜ ಮೀಮಾಂಸೆಯೂ ದೊರಕುತ್ತದೆ. ಇಂತಹ ಮೀಮಾಂಸೆ ಸಾಧ್ಯವಾಗುವುದು ಒಬ್ಬ ವ್ಯಕ್ತಿ ತನ್ನ ಸುತ್ತಮುತ್ತಣ ಸಾಮಾಜಿಕ ಜೀವನದಲ್ಲಿ ಸಂಪೂರ್ಣ ಮಗ್ನವಾಗಿ ಅದರ ಒಳಿತು ಕೆಡಕುಗಳಲ್ಲಿ ಯಾಂತ್ರಿಕವಾಗಿ ಪಾಲುಗಾರನಾಗಿದ್ದಾಗ ಅಲ್ಲ. ಅದರ ಮಧ್ಯೆ ಇದ್ದೂ, ಅದರಿಂದ ಮೇಲೆದ್ದು ಅಥವಾ ಅದರಿಂದ ತನ್ನನ್ನು ತಾನು ಬಿಡಿಸಿಕೊಂಡು ನೋಡಿದಾಗ ಒಟ್ಟು ಸಮಾಜದ ಒಂದು ವಸ್ತುನಿಷ್ಠ ಚಿತ್ರ ದೊರಕುತ್ತದೆ. ಆಗ ಮಾತ್ರ ಸಮಾಜದ ಬಗ್ಗೆ ಸರಿಯಾದ ರೀತಿಯಲ್ಲಿ ವಿಚಾರ ಮಾಡಲು ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಬಸವ, ಸಿದ್ಧರಾಮ, ಅಲ್ಲಮ ಮುಂತಾದವರು ಒಳ್ಳೆಯ ಸಮಾಜದಾರ್ಶನಿಕ (*Social Philosophers*) ರಾಗಿದ್ದಾರೆ.

ಹಿಂದೂ ಸಮಾಜದ ಒಂದು ಮುಖ್ಯ ವೈಲಕ್ಷಣ್ಯವೆಂದರೆ ಅದರ ಬಿಗಿ ಅಥವಾ ಸೆಡೆತ (*Rigidity*) ಅಥವಾ ಸಂಪ್ರದಾಯ ಪ್ರಿಯತೆ. ಅದರ ಇತಿಹಾಸದಲ್ಲಿ ಬದಲಾವಣೆಗಳಾಗಿಲ್ಲವೆಂದಲ್ಲ. ಆದರೆ ಯಾವುದೇ ತೀವ್ರವಾದ ಬದಲಾವಣೆಯನ್ನೂ ಅದು ಆ ಕ್ಷಣಕ್ಕೆ ತಿರಸ್ಕರಿಸುತ್ತದೆ.

ಯಾವುದೇ ವ್ಯವಸ್ಥೆ, ಪದ್ಧತಿ ಅಥವಾ ಸಾಮಾಜಿಕ ಸಂಸ್ಥೆ (*Social Institution*) ಒಳ್ಳೆಯ ಉದ್ದೇಶದಿಂದಲೇ ಆರಂಭವಾಗಿರಬಹುದು. ಆದರೆ ಅವು ಕಾಲಕ್ರಮೇಣ ತಮ್ಮ ಸತ್ವವನ್ನು ಕಳೆದುಕೊಂಡು ಅರ್ಥಹೀನವಾದಾಗಲೂ ಅವುಗಳನ್ನೇ ಬಲವಾಗಿ ಆಶ್ರಯಿಸುವುದು ಯಾವುದೇ ಸಂಪ್ರದಾಯಬದ್ಧ ಸಮಾಜದ ದುರ್ದೈವವೆನ್ನಬಹುದು. ಹಿಂದೂ ಸಮಾಜದಲ್ಲಿಯೂ ಇಂತಹ ದುರಂತವನ್ನು ಗುರುತಿಸಬಹುದು.

ಉದಾಹರಣೆಗೆ 'ಪುರುಷಾರ್ಥ[2]'ಗಳ ವಿಷಯವನ್ನೇ ನೋಡಬಹುದು. ಧರ್ಮ, ಅರ್ಥ, ಕಾಮ, ಮತ್ತು ಮೋಕ್ಷ ಈ ಮೌಲ್ಯಗಳು ಮನುಷ್ಯನ ವೈಯಕ್ತಿಕ–ಸಾಮಾಜಿಕ, ಇಹ–ಪರ ಜೀವನಗಳಿಗೆ ಒಳ್ಳೆಯ ಸಾಮರಸ್ಯವನ್ನು ಕಲ್ಪಿಸುತ್ತವೆ. ಅವನ ಪ್ರವೃತ್ತಿಯ ಯಾವುದೇ ಅಂಗವನ್ನೂ ಆ ಕಲ್ಪನೆ ಅಲಕ್ಷಿಸುವುದಿಲ್ಲ. ಮನುಷ್ಯನ ಯಾವುದೇ ಕಾರ್ಯಕ್ಕೂ 'ಧರ್ಮ' ಹಿನ್ನಲೆಯಾಗಿರಬೇಕು; ಅವನ ಎಲ್ಲ ಕಾರ್ಯಗಳ ಗಂತವ್ಯ ಮೋಕ್ಷವಾಗಿರಬೇಕು; ಇವೆರಡರ ಮಧ್ಯೆ ಅರ್ಥ, ಕಾಮಗಳಿವೆ. ಪಾರಲೌಕಿಕವಾದ ಮೋಕ್ಷವನ್ನು ಎತ್ತಿ ಹೇಳುವಲ್ಲಿ, ಲೌಕಿಕವಾಗಿ ವ್ಯಕ್ತಿ ಅಪೇಕ್ಷಿಸಬಹುದಾದ ಮತ್ತು ಅವನ ಚಿತ್ತವು ಹಣ್ಣಾಗಲು ಅತ್ಯವಶ್ಯವಾದ ಭೋಗವನ್ನು ಹೇಳುವುದನ್ನು ಮರೆತಿಲ್ಲ. ಆದರೆ, ಇವುಗಳಲ್ಲಿ ಮೋಕ್ಷವೊಂದೇ ಮುಖ್ಯ ಎಂಬ ಪಾಕ್ಷಿಕವಾದ ಒತ್ತು ಬಂದಾಗ ಮಾತ್ರ ಮೌಲ್ಯ ಕಲ್ಪನೆ ಏರುಪೇರಾಗುತ್ತದೆ. ಮನುಷ್ಯನಿಗೆ ಲೌಕಿಕ ವಿಷಯದಲ್ಲಿ ಅನಾಸಕ್ತಿಯನ್ನೋ ಜುಗುಪ್ಸೆಯನ್ನೋ ಬೆಳಸಿಕೊಳ್ಳಲು ಬೋಧಿಸಿದರೆ, ಇನ್ನೊಂದು ಕಡೆ ಕಾಮ ಅವನ ಮನಸ್ಸನ್ನು ಎಳೆಯುತ್ತದೆ. ಈ ದ್ವಂದ್ವದಲ್ಲಿ ಸಿಲುಕಿದ ಮನುಷ್ಯನ ವ್ಯಕ್ತಿತ್ವ ಸರ್ವಾಂಗೀಣವಾಗಿ ಬೆಳೆಯದೆ ಹರಿದು ಹೋಳಾಗುತ್ತದೆ.

ಅಥವಾ ಆಶ್ರಮದ ಕಲ್ಪನೆಯನ್ನೇ ತೆಗೆದುಕೊಳ್ಳಬಹುದು. ಇಲ್ಲಿಯೂ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸ ಎಂಬಲ್ಲಿ ಸನ್ಯಾಸವೆಂಬುದು ಮನುಷ್ಯ ಜೀವನದ ನಾಲ್ಕನೆಯ ಮತ್ತು ಕೊನೆಯ ಮೆಟ್ಟಲಾಗಿ ಬರುತ್ತದೆ. ಈ ನಾಲ್ಕು ಮೆಟ್ಟಲುಗಳನ್ನು ಮನುಷ್ಯ ಪ್ರಜ್ಞಾಪೂರ್ವಕವಾಗಿ ಏರುವನೆಂದಲ್ಲ. ಬಹುಕಾಲ ಬದುಕುವ ಪ್ರತಿಯೊಬ್ಬ ವ್ಯಕ್ತಿಯೂ ಒಂದಲ್ಲ ಒಂದು ರೀತಿಯಲ್ಲಿ ಈ ನಾಲ್ಕು ಅವಸ್ಥೆಗಳಲ್ಲಿ ಬದುಕುತ್ತಾನೆ. ಆದರೆ ಒಂದೇ ಬಾರಿಗೆ ಸನ್ಯಾಸವನ್ನು ಅವಲಂಬಿಸುವ ವ್ಯಕ್ತಿ, ಕೆಳಗಿನ ಮೆಟ್ಟಲುಗಳನ್ನು ಹತ್ತದೆಯೇ ಮೇಲಿನ ಮೆಟ್ಟಲಿಗೆ ಹಾರುವ ಪ್ರಯತ್ನವನ್ನು ಮಾಡಿದಂತಾಗುತ್ತದೆ. ಅದು ಪ್ರಾಯಶಃ ಎಲ್ಲರಿಗೂ ಸಾಧ್ಯವಲ್ಲದ ಮಾತು.

ಹಿಂದೂ ಧರ್ಮದ ವರ್ಣವ್ಯವಸ್ಥೆ ಯಾವಾಗ, ಹೇಗೆ ಆರಂಭವಾಯಿತೆಂದು ಹೇಳುವುದು ಕಷ್ಟ. ಋಗ್ವೇದದ ಕಾಲದಿಂದಲೇ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳನ್ನು ಗುರುತಿಸಬಹುದು. ಮೊದ ಮೊದಲು ಆಯಾ ವರ್ಣದ ಕರ್ತವ್ಯಗಳು ನಿರ್ದಿಷ್ಟವಾಗಿದ್ದುವು. ಇದು ಎಷ್ಟು ದಿವಸ ಸರಿಯಾಗಿ ನಡೆಯಿತೋ ತಿಳಿಯದು. ಪ್ರತಿಯೊಂದು ಕಾಲದಲ್ಲೂ ಪ್ರತಿಯೊಂದು ಸಮಾಜದಲ್ಲೂ ಇಂತಹ ವರ್ಗೀಕರಣವಿರುತ್ತದೆ. ಹದಿನೆಂಟನೇ ಶತಮಾನದ ಯುರೋಪಿಯನ್ ಇತಿಹಾಸದಲ್ಲಿ ಬರುವ '*Estates*' ಎಂಬುವು (*Clergy, Nobiliiy, Merchants and Commons*) ಭಾರತದ ನಾಲ್ಕು ವರ್ಣಗಳನ್ನು ಹೋಲುತ್ತವೆ. ಆದರೆ, ಆಯಾ ವರ್ಣದಲ್ಲಿ ಹುಟ್ಟಿದವರು ಆಯಾ ವೃತ್ತಿಯನ್ನೇ ಅವಲಂಬಿಸಬೇಕೆಂಬ ಕಡ್ಡಾಯ ಬಂದಾಗ, ಒಂದು ವರ್ಣ ತನ್ನ ಪಾವಿತ್ರ್ಯವನ್ನು ಉಳಿಸಿಕೊಳ್ಳಲೋ ಶ್ರೇಷ್ಠತೆಯನ್ನು ಸ್ಥಾಪಿಸಿಕೊಳ್ಳಲೋ ಪ್ರಯತ್ನ ಮಾಡಿದಾಗಲಾಗಲಿ ತೊಂದರೆಗಳು ಉದ್ಭವಿಸುತ್ತವೆ. ಮೇಲಿನ ವರ್ಣಗಳಲ್ಲಿ ಆಯಾ ವರ್ಣದವರು ತಮ್ಮದಲ್ಲದ ವೃತ್ತಿಯನ್ನು ಅವಲಂಬಿಸಬೇಕಾದಾಗ, ತಮಗಿಂತ ಕೆಳಗಿನ ವೃತ್ತಿಯನ್ನು ಮಾತ್ರ ಅವಲಂಬಿಸಬಹುದಿತ್ತು : ಇದರಿಂದಾಗಿ ಬ್ರಾಹ್ಮಣ ಕ್ಷತ್ರಿಯನ ವೃತ್ತಿಯನ್ನು ಕ್ಷತ್ರಿಯ ವೈಶ್ಯನ ವೃತ್ತಿಯನ್ನು ಅವಲಂಬಿಸಬಹುದು. ಆದರೆ ಶೂದ್ರನ ವೃತ್ತಿಯನ್ನು ಮಾತ್ರ ವೈಶ್ಯ ಅವಲಂಬಿಸುವಂತಿಲ್ಲ. ಶೂದ್ರನಿಗಂತೂ ಬೇರೆ ಅವಕಾಶಗಳಿಲ್ಲ. ಮದುವೆಗಳೂ ಅಷ್ಟೇ. ಇಲ್ಲಿ ಬಹುಶಃ ವೈಶ್ಯ ಶೂದ್ರನ ಮನೆಯಲ್ಲಿ ಮದುವೆಯಾಗಬಹುದು. ಇಲ್ಲೆಲ್ಲಾ ಪ್ರತಿಷ್ಠಿತ ವರ್ಗದ (*Privilaged class*) ಬ್ರಾಹ್ಮಣ ತನ್ನ ವಿಶಿಷ್ಟ ಸ್ಥಾನಮಾನಗಳನ್ನು ಕಾಪಾಡಿಕೊಳ್ಳುವುದರಲ್ಲಿ, ತನ್ನ ಶುದ್ಧಿಯನ್ನು

[2] ಪುರುಷಾರ್ಥ ಎನ್ನುವುದು ಇಂಗ್ಲಿಷಿನ *Value* ಎನ್ನುವ ಪದಕ್ಕೆ ಸಮಾನವಾದ ಅರ್ಥವನ್ನು ಹೊಂದಿದೆ.

(*Purity*) ಉಳಿಸಿಕೊಳ್ಳುವುದಕ್ಕಾಗಿ ಮಾಡಿದ ಸತತ ಪ್ರಯತ್ನಗಳು ನಮಗೆ ಎದ್ದು ಕಾಣುತ್ತವೆ.

ವೇದದ ಕಾಲದಲ್ಲೇ ಬೇರೆ ಬೇರೆ ವೃತ್ತಿಗಳನ್ನವಲಂಬಿಸಿದ್ದ ಜನರಿದ್ದರೆಂದು ಗೊತ್ತಾಗುತ್ತದೆ. ಆಯಾ ವೃತ್ತಿಯ ಜನರು ತಮ್ಮ ವೃತ್ತಿಯಲ್ಲೇ ಮುಂದುವರಿದದ್ದು—ಆಯಾ ವೃತ್ತಿಯಲ್ಲಿ ವಿಶೇಷ ಕೌಶಲ ಸಂಪಾದಿಸಲು (*specialize*) ಇದು ಅಗತ್ಯವೂ ಹೌದು-, ಬೇರೆ ಬೇರೆ ವರ್ಣದವರು ಅಂತರ್ವಿವಾಹವಾದದ್ದು, ಇವೆಲ್ಲ 'ಜಾತಿ' ಗಳ ನಿರ್ಮಾಣಕ್ಕೆ ಎಡೆಗೊಟ್ಟವು. 'ಜಾತಿ' (*caste*) ಎಂಬುದನ್ನು ಕೇತ್ಕರ್ ಎರಡು ಲಕ್ಷಣಗಳಿಂದ ಹೀಗೆ ವಿವರಿಸುತ್ತಾರೆ : (1) ಜಾತಿ ಎಂಬುದು ಒಂದು ಸಾಮಾಜಿಕ ಗುಂಪು. ಆ ಗುಂಪಿನಲ್ಲಿ ಹುಟ್ಟಿದ ಜನರೆಲ್ಲರೂ ಆ ಜಾತಿಯ ಜನರೆನ್ನಿಸಿಕೊಳ್ಳುತ್ತಾರೆ; (2) ಒಂದು ಜಾತಿಯ ಜನ ತಮ್ಮ ಗುಂಪಿನಿಂದ ಹೊರಗಿರುವ ಗುಂಪಿನಲ್ಲಿ ಮದುವೆ ಮಾಡಿಕೊಳ್ಳಬಾರದು ಎಂಬ ನಿಯಮಕ್ಕೆ ಎಂದೂ ಭಂಗ ತರಕೂಡದು.[3] ಜಾತಿಗಳಲ್ಲಿ ಮತ್ತೆ ಉಪಜಾತಿಗಳಿವೆ. ಎಷ್ಟೋ ಜಾತಿಗಳಲ್ಲಿ ಹದಿನೈದು ಸಂಸಾರಗಳಿಗಿಂತ ಹೊರಗೆ ಮದುವೆಯಾಗದಷ್ಟು ನಿರ್ಬಂಧಗಳಿರುವ ಉದಾಹರಣೆಗಳೂ ಉಂಟು.[4] ಹೀಗೆ ಒಬ್ಬ ವ್ಯಕ್ತಿಯ ಜಾತಿ ಹುಟ್ಟನಿಂದ ನಿರ್ಣಿತವಾಗುತ್ತದೆ. ಅವನು ಆ ಜಾತಿಯ ವೃತ್ತಿಯಲ್ಲೇ ಎಂದೆಂದಿಗೂ ಮುಂದುವರಿಯಬೇಕು. ಮತ್ತೆ ಜಾತಿಗಳಲ್ಲಿ (ಮತ್ತು ಉಪಜಾತಿಗಳಲ್ಲಿ) ಮೇಲು ಕೀಳುಗಳೂ ಉಂಟು.

ಹೀಗೆ, ವರ್ಣ ವ್ಯವಸ್ಥೆಯಿಂದ ಬ್ರಾಹ್ಮಣನಿಗೆ ಸಮಾಜದಲ್ಲಿ ಗೌರವದ ಸ್ಥಾನ, ಶೂದ್ರನಿಗೆ ಕೊನೆಯ ಸ್ಥಾನ, ಶೂದ್ರನಿಗಿಂತ ಕೆಳಗೆ ಹೊಲೆಯ ಅಥವಾ ಅನಾಮಿಕ; ಅಂತೂ ವರ್ಣದಲ್ಲೇ ಮತ್ತೆ ಜಾತಿ, ಉಪಜಾತಿಗಳು—ಇದೆಲ್ಲವೂ ಒಟ್ಟು ಹಿಂದೂ ಸಮಾಜವು ಮೇಲು ಕೀಳುಗಳಾಗಿ ಒಡೆಯಲು ಕಾರಣವಾಯಿತು. ಆಶ್ರಮ ವ್ಯವಸ್ಥೆಯಲ್ಲಿ ಸನ್ಯಾಸಕ್ಕೆ ಅನಗತ್ಯವಾದ ಪ್ರಾಶಸ್ತ್ಯವೂ ಪುರುಷಾರ್ಥಗಳಲ್ಲಿ ಆಲೋಚನೆಯ ಮಟ್ಟದಲ್ಲಾದರೂ ಮೋಕ್ಷಕ್ಕೆ ಪ್ರಾಧಾನ್ಯವೂ ಉಳಿದವುಗಳ ಬಗ್ಗೆ ಉಪೇಕ್ಷೆಯೂ ಕಾಣಿಸಿಕೊಂಡಿತು. 'ಧರ್ಮ'ಎನ್ನುವುದು ಅರ್ಥಹೀನವಾದ ವಿಧಿ-ಆಚರಣೆಗಳ(*rituals*) ಮೊತ್ತ ಎಂಬ ಕಲ್ಪನೆ ಪ್ರಬಲವಾಯಿತು.

ಇವೆಲ್ಲವೂ ನೂರಾರು ವರ್ಷಗಳಿಂದ ಬೆಳೆದುಕೊಂಡು ಬಂದು ಹಿಂದೂಗಳು ಒಂದು ರೀತಿಯ ಜಡಸಮಾಜವಾಗಿ ಪರಿಣಮಿಸಿದರು. ಸಮಾಜಶಾಸ್ತ್ರಜ್ಞರು 'ಸ್ಥಿರಸಮಾಜ' (*Static Society*) ಮತ್ತು 'ಸ್ಥಿತ್ಯಂತರ ಸಮಾಜ' (*Changing Society*) ಎಂಬುವನ್ನು ಗುರುತಿಸುತ್ತಾರೆ. ಸ್ಥಿರ ಸಮಾಜದಲ್ಲಿ ಕಾನೂನಿಗೆ ಬೆಲೆ, ಸಂಪ್ರದಾಯದ ವಿಷಯದಲ್ಲಿ ಗೌರವ, ಪರಂಪರಾಗತವಾಗಿ ಒಪ್ಪಿಕೊಂಡು ಬಂದಿರುವ ಮೌಲ್ಯಗಳ ಬಗ್ಗೆ ವಿಶ್ವಾಸ, ಶಾಂತಿ ಸಮೃದ್ಧಿಗಳು ನೆಲಸಿರುತ್ತವೆ. ಕಲೆಗಳು ವೃದ್ಧಿಯಾಗುವುದು ಈ ಕಾಲದಲ್ಲೇ ಎಂದೂ ಹೇಳುತ್ತಾರೆ. ಪಂಪನ ಕಾಲದ ಕರ್ಣಾಟಕದಲ್ಲಿ ಅಂತಹ ಸಮಾಜವೊಂದನ್ನು ಗುರುತಿಸಬಹುದೆಂದು ಕಾಣುತ್ತದೆ. ಆದರೆ ಬಸವಣ್ಣನವರಿಗೆ ಹಿನ್ನಲೆಯಾಗಿದ್ದ ಸಮಾಜ ಅಂತಹುದಲ್ಲ. ನೆಲೆಯಾಗಿ ನಿಂತ, ಆದರೆ ಜೀವ ವಿಹೀನವಾಗಿದ್ದ ಜಡ ಸಮಾಜ ಅದು. ಹನ್ನೊಂದನೇ ಶತಮಾನ ಯಾವುದೇ ಉತ್ತಮ ಸಾಹಿತ್ಯ ಕೃತಿಯನ್ನು ಕೊಡಲು ಅಸಮರ್ಥವಾಯಿತು ಎಂಬುದನ್ನು ನೆನೆದಾಗ ಇದು ಸ್ಪಷ್ಟವಾಗುತ್ತದೆ.

ವಚನಕಾರರ ಸಮಾಜದರ್ಶನ ರೂಪಿತವಾದದ್ದು ಒಟ್ಟು ಇಂತಹ ಹಿನ್ನಲೆಯಲ್ಲಿ. ಆದರ ಸಮಾಜದರ್ಶನದ ಕೆಲವು ಲಕ್ಷಣಗಳು ಹೀಗಿವೆ.

1) ಸಮಾಜ ಹಿಂದಿನಂತೆ ನಡೆದುಕೊಂಡು ಬಂದ ರೀತಿಯಲ್ಲೇ ಇರಬೇಕಾಗಿಲ್ಲ. ವ್ಯತ್ಯಾಸ ಜೀವಂತಿಕೆಯ ಗುರುತು. ತರ್ಕಿಸುವುದು, ಪ್ರಶ್ನಿಸುವುದು ಮನುಷ್ಯನಿಗೆ ಮಾತ್ರ ಮೀಸಲಾದ ಶಕ್ತಿಗಳು. ಮನುಷ್ಯ ಅವುಗಳ ಸಂಪೂರ್ಣ ಉಪಯೋಗವನ್ನು ಪಡೆಯಬೇಕು.

2) ಮನುಷ್ಯ ಸಮಾಜ ಒಂದೇ. ಇದರಲ್ಲಿ ಎಲ್ಲ ಮತ, ವರ್ಗದವರು ಮಾತ್ರವೇ ಅಲ್ಲ, ಗಂಡು ಹೆಣ್ಣುಗಳೂ ಸೇರಿವೆ. ಹುಟ್ಟನಿಂದ 'ಜಾತಿ'ಯನ್ನು ನಿರ್ಣಯಿಸುವುದು ಕೃತಕ ಮತ್ತು ಅವಿವೇಕ.

3) ಮತ (*Religion*) ಮನುಷ್ಯನ ಮುಖ್ಯ ಪ್ರವೃತ್ತಿಗಳಲ್ಲಿ ಒಂದು. ಆದರೆ ಅದು ವ್ಯವಹಾರದಲ್ಲಿ, ನಡೆ ನುಡಿಯಲ್ಲಿ ಪ್ರಕಟವಾಗದಿದ್ದರೆ ಅಂತಹುದು ವ್ಯರ್ಥವಾದುದು. (ಈಚಿನ ಒಬ್ಬ ವ್ಯಾಖ್ಯಾನಕಾರ ಬಸವ ಮುಂತಾದವರ ಬರಹಗಳನ್ನು 'ನಡೆದು ನುಡಿದ ವಚನಗಳು' ಎಂದು ಕರೆದಿರುವುದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು)

4) ಶಿವಪಾರಮ್ಯ, ಶಿವನಲ್ಲಿ ಭಕ್ತಿ, ಶಿವಭಕ್ತರ ಬಗ್ಗೆ ಗೌರವ, ಕೆಲವು ಲಾಛನಗಳ ಧಾರಣೆ ಇವು ಆದರ ಮತದ ಕೆಲವು ಮುಖ್ಯ ಅಂಶಗಳು. ಇವುಗಳನ್ನು ಒಪ್ಪಿಕೊಂಡವರೆಲ್ಲರೂ ಸಮಾನರು, ಎಲ್ಲ ವಿಧಗಳಲ್ಲಿಯೂ.

5) ಪರ ಎಷ್ಟು ಮುಖ್ಯವೋ ಇಹವೂ ಅಷ್ಟೇ ಮುಖ್ಯ. ಈ ಲೋಕದಲ್ಲಿ ಧರ್ಮವಿರುದ್ಧವಾದ ಅರ್ಥ, ಕಾಮಗಳು ಭಕ್ತಿಸಾಧನೆಗೆ ವಿರೋಧವಾಗುವುದಿಲ್ಲವಷ್ಟೇ ಅಲ್ಲ, ಸಹಕಾರಿಗಳೂ ಆಗಬಲ್ಲುವು.

6) ಸನ್ಯಾಸ ಅತ್ಯಗತ್ಯವಾದುದೇನೂ ಅಲ್ಲ. ಗೃಹಸ್ಥ ತನ್ನ ಸಂಸಾರ ಜೀವನದಲ್ಲೇ ಭಕ್ತಿಯನ್ನು ಆಶ್ರಯಿಸಿ ಶಿವನ ಕೃಪೆಯನ್ನು ಸಂಪಾದಿಸಬಹುದು. ಜೀವನ ಅವ್ಯಾಹತವಾದುದು. ಅದು ಮುಂದೆ ಸಾಗುವಂತೆ ಮಾಡುವುದೇ ಮನುಷ್ಯನಿಗೆ ಸಹಜವಾದ ಕ್ರಿಯೆ.

7) ದೇವಸ್ಥಾನ ನಿರ್ಮಾಣ, ತೀರ್ಥಯಾತ್ರೆ ಇವು ಶ್ರೀಮಂತರಿಂದ ಸಾಧ್ಯ; ಬಡವರಿಗೆ ಅಸಾಧ್ಯ. ಭಕ್ತಿಗೆ ಇವು ಅನಗತ್ಯ. ದೇಹದ ಮೇಲೆಯೇ ಲಿಂಗವಿರುವಾಗ ದೇಹವೇ ದೇವಸ್ಥಾನ

---

[3] *Quoted by Hutton in "Caste in India" p. 48*

[4] ಅದೇ

ವಾಗುತ್ತದೆ, ತೀರ್ಥಕ್ಷೇತ್ರವಾಗುತ್ತದೆ (ಉಳಿದ ಅನೇಕ ಮತಗಳು ದೇಹವನ್ನು ತುಚ್ಛವೆಂದು ಭಾವಿಸುವಂತೆ ಬೋಧಿಸಿದ್ದ ಕಾಲದಲ್ಲಿ ಮಾನವದೇಹಕ್ಕೆ ಒಂದು ಬೆಲೆಯನ್ನು ಕಲ್ಪಿಸಿದ್ದು ವಚನಕಾರರ ಹಿರಿಮೆಯೆಂದೇ ಹೇಳಬೇಕು).

8) ವಚನಕಾರರ ಸಮಾಜ ದರ್ಶನದ ಸಾರಸರ್ವಸ್ವವೆಂದರೆ ಅವರ 'ಕಾಯಕ'ದ ಕಲ್ಪನೆ. ಮೇಲೆ ಹೇಳಿದ ಎಲ್ಲಾ ಲಕ್ಷಣಗಳು ಪರಸ್ಪರ ಮಿಳಿತವಾಗಿ ಅರ್ಥಪೂರ್ಣವಾಗುವುದು ಮತ್ತು ಸಾಮರಸ್ಯವನ್ನು ಪಡೆಯುವುದು ಕಾಯಕದಲ್ಲಿ. ಸಾಮಾಜಿಕವಾಗಿ ವ್ಯಕ್ತಿಯ ಜವಾಬ್ದಾರಿಯನ್ನೂ ವೈಯುಕ್ತಿಕವಾದ ಅವನ ನಿಗೂಢ ಆಧ್ಯಾತ್ಮಿಕ ತುಡಿತವನ್ನೂ ಒಂದಾಗಿ ಬೆಸೆಯುವ ವಿಧಾನವೇ ಕಾಯಕ.

ಇವುಗಳಲ್ಲಿ ಒಂದೊಂದೂ ಆ ಕಾಲದ ಸಂಪ್ರದಾಯಕ್ಕೆ ಭಿನ್ನ, ವಿರೋಧ ಎಂಬುದನ್ನು ಗುರುತಿಸಬಹುದು. ಈ ಸಮಾಜ ದರ್ಶನ ರೂಪಿತವಾದದ್ದು ಯಾರಿಂದ? —ಬಸವಣ್ಣನವರಿಂದ ಎಂಬುದು ಸಾಮಾನ್ಯವಾಗಿ ಬರುವ ಉತ್ತರ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಜನ್ಮತಃ ಬ್ರಾಹ್ಮಣನಾದ ಬಸವಣ್ಣನವರಿಂದಲೇ ಬ್ರಾಹ್ಮಣ್ಯಕ್ಕೆ, ಸಂಪ್ರದಾಯ ಪ್ರಿಯತೆಗೆ ವಿರೋಧ ಬಂದದ್ದು. ಆ ಕಾಲದ ಸಾಮಾಜಿಕ ಆಂದೋಲನದ ಪ್ರತೀಕ ಬಸವಣ್ಣನವರು.

ಸಮಾಜ ಶಾಸ್ತ್ರಜ್ಞರು ಸಾಮಾಜಿಕ ಬದಲಾವಣೆಯಲ್ಲಿ *(Social change)* ಬುದ್ಧಿ ಜೀವಿಯ *(intellect)* ಪಾತ್ರವನ್ನು ಗುರುತಿಸಿದ್ದಾರೆ. ಸಾಮಾಜಿಕ ಬದಲಾವಣೆಯಲ್ಲಿ ಅವನು ನಾಯಕನಾದರೂ ಆ ಬದಲಾವಣೆಗೆ ಅವನೇ ಕಾರಣನೇ? ಇಲ್ಲಿ ಗಮನಿಸಬೇಕಾದ ಸಂಗತಿಗಳು ಎರಡು. ಒಂದು—ನಾಯಕನ ವಂಶಪಾರಂಪರ್ಯ *(heridity)* ಮತ್ತು ಅವನಲ್ಲಿ ಅಂತರ್ಗತವಾಗಿರುವ ಶಕ್ತಿಗಳು; ಎರಡು—ಅವನ ಕಾಲದ ಪರಿಸ್ಥಿತಿ. ಇವೆರಡರಲ್ಲಿ ಸಾಮಾಜಿಕ ಬದಲಾವಣೆಗೆ 'ಕಾಲ'ವೇ ಮುಖ್ಯ ಕಾರಣವೆಂದು ಹೇಳುತ್ತಾರೆ. ಇದು ಒಂದು ರೀತಿಯಲ್ಲಿ ನಿಜವೇ. ಬಸವ ಸಾವಿರಾರು ವರ್ಷಗಳ ಬೌದ್ಧಿಕ ಪರಂಪರೆಯಿರುವ ಬ್ರಾಹ್ಮಣ ವರ್ಗದಲ್ಲಿ ಹುಟ್ಟಿದ ವ್ಯಕ್ತಿ. ಮತ್ತು ತಾನೇ ಸ್ವತಃ ಪ್ರತಿಭಾಶಾಲಿಯೂ ಸೂಕ್ಷ್ಮಸಂವೇದನ ಶೀಲಮತಿವಂತನೂ, ಕ್ರಾಂತಿಮನೋಭಾವದವನೂ ಆಗಿದ್ದ. ಅವನು ಏನೇ ಆಗಿದ್ದರೂ, ಅವನನ್ನು ಒಪ್ಪಿಕೊಂಡು ಅನುಸರಿಸಿದ ಜನ ಅವನಿಗೆ ದೊರಕದಿದ್ದರೆ ಏನೂ ಮಾಡಲಾಗುತ್ತಿರಲಿಲ್ಲ. ಬಸವನಿಗಿಂತ ಹಿಂದೆಯೇ ದೇವರದಾಸಿಮಯ್ಯನಲ್ಲಿ ಸಮಾಜದ ಕೊರತೆಗಳ ಬಗ್ಗೆ ತೀವ್ರ ಅಸಮಾಧಾನ, ವಿರೋಧಗಳು ಕಂಡು ಬಂದಿದ್ದುವು. ಎಂದರೆ, ಸಮಾಜ ರಚನೆಯ ಬಗ್ಗೆ ಒಟ್ಟು ಜನಸಮೂಹದಲ್ಲಿ ಅಸಮಾಧಾನ ಮೂಡಿದ್ದು, ಅದು ಕ್ರಮೇಣ ಹೆಚ್ಚಾಗುತ್ತಾ ಬಂದಿತ್ತೆಂದು ಕಾಣುತ್ತದೆ. ಮೇಲುವರ್ಗದ ಕೆಲವೇ ಜನರ ಸ್ವಾರ್ಥ ಸಾಧನೆಗಾಗಿ ತಮ್ಮ ಸುಖ ಬಲಿಯಾಗುತ್ತಿದ್ದ ಸನ್ನಿವೇಶದಿಂದ ಬಿಡುಗಡೆ ಹೊಂದುವ ಹಂಬಲ ಜನತೆಯಲ್ಲಿ ಬಸವನಿಗಿಂತ ಮೊದಲೇ ಇದ್ದಿತ್ತೆಂದು ಹೇಳಬೇಕಾಗುತ್ತದೆ. ಹೀಗಿಲ್ಲದಿದ್ದರೆ ಆರೆಂಟು ವರ್ಷಗಳಲ್ಲಿ ಬಸವ ಮತ್ತು ಅವನ ಸಹಚರರು ಅಷ್ಟೊಂದು ಸಂಖ್ಯೆಯ ಜನರನ್ನು ಕೂಡಿಸಿಕೊಂಡು ಒಂದು ಸಾಮಾಜಿಕ ಆಂದೋಲನವನ್ನು ಮಾಡಲು ಸಾಧ್ಯವಾಗುತ್ತಿರಲಿಲ್ಲ.

ಸಮಾಜದರ್ಶನಕ್ಕೆ ಎರಡು ಮುಖಗಳಿವೆ : ಸಮಾಜದ ಬಗೆ ವಿಚಾರ ನಡಸುವುದು ಒಂದು; ಇನ್ನೊಂದು –ಅದನ್ನು ತಿದ್ದುವ ವಿಧಾನವನ್ನು ಕುರಿತು ನಿರ್ಣಯಿಸುವುದು, ಎರಡನೆಯದು ಸಮಾಜ ದರ್ಶನದ ವ್ಯಾವಹಾರಿಕ ಪ್ರಯೋಜನ.

ಸಮಾಜವನ್ನು ತಿದ್ದುವುದೆಂದರೆ ಸಮಾಜದ ಜನ ಒಪ್ಪಿಕೊಂಡು ಬಂದಿರುವ ಹಳಸಿದ ಮೌಲ್ಯಗಳ ಸ್ಥಾನದಲ್ಲಿ ಹೊಸ ಮೌಲ್ಯಗಳನ್ನು ಪ್ರತಿಷ್ಠಾಪಿಸುವುದೆಂದರ್ಥ. ಮೌಲ್ಯಗಳ ಬದಲಾವಣೆ ಎಂದರೆ ದೃಷ್ಟಿ ವ್ಯತ್ಯಾಸವೇ, ಒಟ್ಟು ಜೀವನವನ್ನು ನೋಡುವುದರಲ್ಲಿ ಕಂಡುಬರುವ ಹೊಸತನವೇ ಆಗಿದೆ. ಸಾಮಾಜಿಕ ವ್ಯತ್ಯಾಸವೆಂದರೆ ಸಂಸ್ಥೆಗಳ, ರೂಢಿಗಳ (*Norms*) ನಿರ್ಮಾಣ, ನಾಶ ಅಥವಾ ಪರಿವರ್ತನೆ. ಇಂತಹ ವ್ಯತ್ಯಾಸವನ್ನು ಸಾಮಾನ್ಯವಾಗಿ ಸ್ವಂತ ಹಿತಾಸಕ್ತಿಯುಳ್ಳ ಜನರು ಬಯಸುವುದಿಲ್ಲ. ಆದರೆ ನೋವು ಅನುಭವಿಸಿ ಸಾಕಾಗಿರುವ ಜನಸಾಮಾನ್ಯರು ಅದನ್ನು ಬಯಸುತ್ತಾರೆ. ಈ ಬಯಕೆ ಅವರಲ್ಲಿ ಸುಪ್ತವಾಗಿರುತ್ತದೆ. ಅದರ ಬುದ್ಧಿ, ಭಾವಗಳಿಗೆ ಹಿಡಿಸುವಂತೆ ಯಾರಾದರೂ ಬೋಧಿಸಿದಾಗ, ಅವರು ಎಚ್ಚರಗೊಳ್ಳುತ್ತಾರೆ; ತಮ್ಮ ಬಗ್ಗೆ ತಾವೇ ಅರಿವನ್ನು ಹೊಂದುತ್ತಾರೆ; ಅವರಿಗೆ ಒಂದು ರೀತಿಯ ಸ್ವದರ್ಶನವಾಗುತ್ತದೆ. ಸಾಮಾಜಿಕ ವ್ಯತ್ಯಾಸವೊಂದು ನಡೆಯಲು ಇವರೇ ಕಾರಣ; ಅದಕ್ಕೆ ಇವರೇ ಮೂಲ, ಪ್ರಚೋದನೆ ಮತ್ತು ಫಲ ಇವರಿಂದ ನಡೆಯುವ ವ್ಯತ್ಯಾಸಕ್ಕೆ ನಾಯಕ ಅಥವಾ ನಾಯಕರು ಮಾಧ್ಯಮರಾಗುತ್ತಾರೆ. ಈ ದೃಷ್ಟಿಯಿಂದ, ಹನ್ನೆರಡನೇ ಶತಮಾನದ ಕರ್ನಾಟಕದಲ್ಲಿ ನಡೆದ ಸಾಮಾಜಿಕ ವ್ಯತ್ಯಾಸಕ್ಕೆ ಬಸವ, ಸಿದ್ಧರಾಮ ಮುಂತಾದವರು ಮಾಧ್ಯಮರಾದರು ಎಂದು ಭಾವಿಸಬೇಕಾಗುತ್ತದೆ.

ಸಾಮಾನ್ಯ ಜನರಿಗೆ ಅರ್ಥವಾಗುವಂತೆ ಹೇಳಬೇಕಾದರೆ ಮೊದಲು ಅವರನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಅವರ ಆರ್ಥಿಕ ಸಮಸ್ಯೆಗಳು, ಕುಲ–ಜಾತಿಗಳ ಸಮಸ್ಯೆ, ಸಂಸಾರದ ಸಂಬಂಧಗಳು ಮತ್ತು ಹೆಣ್ಣು–ಗಂಡಿನ ಪ್ರಶ್ನೆ, ಅವರಿಗೂ ಮತಕ್ಕೂ ಇರುವ ಸಂಬಂಧ ಇತ್ಯಾದಿಗಳನ್ನು ವಚನಕಾರರು ಅರ್ಥಮಾಡಿದ್ದರು. ಅವರಿಗೆ ಬೋಧಿಸಲು ವಚನಕಾರರು ಅವರ ಮನೆಮಾತಾದ ಕನ್ನಡವನ್ನೇ ಅಲ್ಲದೆ ಆ ಜನರಲ್ಲಿ ಬಳಕೆಯಾಗುತ್ತಿದ್ದ ನುಡಿಗಟ್ಟುಗಳನ್ನು ಶಬ್ದ ಚಿತ್ರಗಳನ್ನು ಬಳಸಿದರು. ಬಸವ ಮುಂತಾದವರ ಮನೆಗಳಲ್ಲಿ ನಡೆಯುತ್ತಿದ್ದ ವಿಚಾರಗೋಷ್ಠಿಗಳಲ್ಲಿ ಸಾಮಾನ್ಯರೂ ಕ್ರಿಯಾತ್ಮಕವಾಗಿ ಭಾಗವಹಿಸುತ್ತಿದ್ದರು. ಇದರಿಂದ ಅವರ ಮೈ ಚಳಿ ಬಿಟ್ಟುಹೋಯಿತು. — ತಾವು ಕನಿಷ್ಟರು, ಕೆಲಸಕ್ಕೆ ಬಾರದವರು ಎಂಬ ಕಿಂಕರ ಮನೋಭಾವ ಮರೆಯಾಯಿತು. ಅವರಲ್ಲಿನ ಮನುಷ್ಯತ್ವವನ್ನು ಗುರುತಿಸಿದ್ದು, ಅದರ ಔನ್ನತ್ಯವನ್ನು ಅವರಿಗೆ ಅರ್ಥಮಾಡಿಕೊಟ್ಟದ್ದು ಆ ಅಂದೋಲನದ ನಾಯಕರ ಸಾಧನೆಗಳಲ್ಲೊಂದು. ಜನಸಾಮಾನ್ಯರು ತಮ್ಮಲ್ಲಿ ನಿಕ್ಷಿಪ್ತವಾಗಿರುವ ಶಕ್ತಿ ಸಾಮರ್ಥ್ಯಗಳನ್ನು ಗುರುತಿಸಿಕೊಂಡು ತಮ್ಮನ್ನು ತಾವು ಒಂದು

ಹೊಸ ಬೆಳಕಿನಲ್ಲಿ ಕಂಡುಕೊಂಡರು. ವೀರಶೈವ ನಾಯಕರು ಎಸಗಿದ ಈ ಸಾಮೂಹಿಕ ಮಾನಸಿಕ ಪರಿವರ್ತನೆ ಒಂದು ಅಪೂರ್ವ ಸಂಗತಿಯಾಗಿದೆ.

ಶಿವನನ್ನು ಮತ್ತು ವೀರಶೈವ ಮತವನ್ನು ಒಪ್ಪಿಕೊಂಡ ಮೇಲೆ ಎಲ್ಲರೂ ಸಮಾನರು ಎಂಬ ಸಂಗತಿ ಅವರ ಅಳುಕನ್ನು ನಿವಾರಿಸಿತು. ದೇಹದ ಮೇಲಿನ ಶಿವಲಿಂಗ ತಮ್ಮಲ್ಲೇ ಶಿವ ಇದ್ದಾನೆ ಎಂಬ ಧೈರ್ಯವನ್ನು ತಂದುಕೊಟ್ಟಿತು. ಇದು ಆತ್ಮವಿಶ್ವಾಸಕ್ಕೆ ದಾರಿಯಾಯಿತು. ಒಬ್ಬ ವ್ಯಕ್ತಿ ಸಮಾಜ ಇಷ್ಟಪಡದಿರುವ ಏನಾದರೂ ಹೊಸದನ್ನು ಮಾಡಲು ಅಳುಕಬಹುದು. ಆದರೆ ಸಮೂಹದಲ್ಲಿದ್ದಾಗ ಅವನಿಗೆ ಎಲ್ಲಿಲ್ಲದ ಧೈರ್ಯ.

ಹಿಂದೂ ಸಮಾಜದಲ್ಲಿ ' ಮತ ' *(religion)* ಅತ್ಯಂತ ಪ್ರಮುಖವಾದ ಸಂಗತಿ. ಪಾಶ್ಚಾತ್ಯ ಸಮಾಜಶಾಸ್ತ್ರಜ್ಞರು ಸಮಾಜವನ್ನು ಮನುಷ್ಯನ ಮೂಲಕ ನೋಡುತ್ತಾರೆ. ಮನು, ಕೌಟಿಲ್ಯ ಮುಂತಾದ ಪ್ರಾಚೀನ ಸಮಾಜ ಶಾಸ್ತ್ರಜ್ಞರು ಸಮಾಜವನ್ನು ಮನುಷ್ಯನ ಆತ್ಯಂತಿಕ ವಾಸ್ತವತೆಯ ಮೂಲಕ ನೋಡುತ್ತಾರೆ. ಇದಕ್ಕೆ ಕಾರಣ ಒಬ್ಬ ಭಾರತೀಯನ ಜೀವನದ ಎಲ್ಲ ಘಟ್ಟಗಳಲ್ಲಿಯೂ ಮತ ಓತಪ್ರೋತವಾಗಿ ಬೆರೆತಿರುವುದು. ಬಸವಣ್ಣನವರಾಗಲೀ ಅವರ ಸಹೋದ್ಯೋಗಿಗಳಾಗಲಿ ಮನುಷ್ಯನನ್ನು ಆ ದೃಷ್ಟಿಯಿಂದಲೇ ನೋಡಿದರು. ಅವರೆಲ್ಲರೂ ಸಾಧಕರೂ ಆಗಿದ್ದು, ಮನುಷ್ಯನ ಎಲ್ಲ ಚಟುವಟಿಕೆಗಳ ಗುರಿ ಶಿವಸಾಕ್ಷಾತ್ಕಾರ ಎಂಬುದನ್ನು ಪ್ರಬಲವಾಗಿ ನಂಬಿದ್ದರು. ಹೀಗಾಗಿ ಅವರಲ್ಲಿ ಮತಪ್ರಸಾರ, ಸಾಮಾಜಿಕ ಬದಲಾವಣೆಗಳು ಒಂದರೊಡನೊಂದು ಹೆಣೆದುಕೊಂಡಿರುವುದನ್ನು ಗುರುತಿಸಬಹುದು. ಆದರೂ, ಇವೆರಡರಲ್ಲಿ ನನಗೆ ಪ್ರಧಾನವಾಗಿ ಎದ್ದು ಕಾಣುವುದೆಂದರೆ ಸಾಮಾಜಿಕ ಬದಲಾವಣೆಯೇ.

ಇದಕ್ಕೆ ಕಾರಣ, 'ಮತ'ದ ಬಗ್ಗೆ ಬಸವಣ್ಣ ಮಾಡಿದ್ದರಲ್ಲಿ ಪ್ರಾಯಶಃ ಹೊಸದೇನೂ ಅಷ್ಟಾಗಿ ಇಲ್ಲ. ಶಿವಪಾರಮ್ಯ, ಲಿಂಗಧಾರಣೆ, ಭಸ್ಮ, ರುದ್ರಾಕ್ಷಿ ಮುಂತಾದ ಇತರ ಲಾಂಛನಗಳ ಧಾರಣೆ, ಮೋಕ್ಷದ ಕಲ್ಪನೆ, ಭಕ್ತಿಯ ಶ್ರೇಷ್ಠತ್ವ ಇವು ಅವರಿಗಿಂತ ಹಿಂದಿನಿಂದಲೇ ಬಂದಂಥವಾಗಿವೆ. ಆದರೆ ಸಾಮಾಜಿಕವಾಗಿ ಅವರು ಮಾಡಿದ್ದರಲ್ಲಿ ಒಂದೊಂದೂ ಆ ಕಾಲಕ್ಕೆ ಹೊಸತು. ಈ ದೃಷ್ಟಿಯಿಂದ ಬಸವ ಮತ್ತು ಅವನ ನಿಕಟವರ್ತಿಗಳನ್ನು 'ಸಮಾಜದಾರ್ಶನಿಕ' *[social philosophers]* ರೆಂದು ಭಾವಿಸಬಹುದು.

ಅವರ ಸಮಾಜದರ್ಶನ ತಾತ್ವಿಕವಾಗಿ ಎಷ್ಟೇ ದೊಡ್ಡದಿದ್ದರೂ, ಅದರ ವ್ಯಾವಹಾರಿಕ ಪ್ರಯೋಜನವಾದ ಸಾಮಾಜಿಕ ವ್ಯತ್ಯಾಸ ನಿಜವಾಗಿ ನಡೆಯಿತೇ ಎಂಬ ಪ್ರಶ್ನೆ ಏಳುತ್ತದೆ. ಅದಕ್ಕೆ ಉತ್ತರ–ಹೌದು.

ಸಮಾಜಶಾಸ್ತ್ರಜ್ಞರು 'ಸ್ಥಿತ್ಯಂತರ ಸಮಾಜ'ದ *(Changing Society)* ಕೆಲವು ಲಕ್ಷಣಗಳನ್ನು ಗುರುತಿಸುತ್ತಾರೆ. ಅಲ್ಲಿ ಹಳೆಯದೆಲ್ಲದರ ಬಗ್ಗೆ ಅಶ್ರದ್ಧೆ; ಕಾನೂನಿನ ಬಗ್ಗೆ ತಿರಸ್ಕಾರ; ಸಮಾಜದಲ್ಲಿ ಮಾನಸಿಕವಾದ ಅಶಾಂತಿ, ಉದ್ರೇಕ; ಹೊಸದರ ಬಗ್ಗೆ ಅಭಿಮಾನ ಮಾತ್ರವಲ್ಲದೆ, ಹೊಸತನ ಎಲ್ಲದರಲ್ಲೂ ಸಾಧ್ಯವೆಂಬ ನಂಬಿಕೆ; ಯುವಕರಿಗೆ ಪ್ರಾಧಾನ್ಯ; ಸಭ್ಯವಲ್ಲದ ಶಿಷ್ಟಾಚಾರಗಳು *(Bad manners)*, ತತ್ವಶಾಸ್ತ್ರಕ್ಕೆ ಕೇವಲ ಆಲೋಚನೆಯ ಜೀಲೆಯಲ್ಲ, ವ್ಯವಹಾರಕ್ಕೂ ಇದು ಇಳಿಯಬೇಕೆಂಬ ವಾದ; ವ್ಯಕ್ತಿ ಸ್ವಾತಂತ್ರ್ಯ, ಆಲೋಚನಾ ಸ್ವಾತಂತ್ರ್ಯಗಳಿಗೆ ಮಹತ್ವ; ಕಟ್ಟುನಿಟ್ಟಾದ ವರ್ಗಗಳ ಮಧ್ಯದ ಅಡ್ಡಿಗಳು ಹೋಗಬೇಕೆಂಬ ಕೂಗು ಇವು ಕೆಲವು ಲಕ್ಷಣಗಳು. ಒಟ್ಟಿನ ಮೇಲೆ ಅಂತಹ ಸಮಾಜದಲ್ಲಿ ಸಂಸ್ಕೃತಿಯ ಬೇರೆ ಬೇರೆ ಅಂಗಗಳ ಮಧ್ಯೆ ಸಾಮರಸ್ಯವಿರದೆ ತಿಕ್ಕಾಟಗಳು ನಡೆಯುತ್ತವೆ. ಕಲೆಗಳ ಬೆಳವಣಿಗೆಗೆ ಅಂತಹ ಸಮಾಜದ ಸ್ಥಿತಿ ಪ್ರೋತ್ಸಾಹದಾಯಕವಾಗಿರುವುದಿಲ್ಲ.

ಈ ಲಕ್ಷಣಗಳಲ್ಲಿ ಎಲ್ಲವನ್ನಲ್ಲದಿದ್ದರೂ ಅನೇಕವನ್ನಾದರೂ ಹನ್ನೆರಡನೆಯ ಶತಮಾನದ ಆ ಆಂದೋಲನದಲ್ಲಿ ಗುರುತಿಸಬಹುದು. ಬಸವಣ್ಣನವರಲ್ಲಿ ರಾಜರ ಬಗ್ಗೆ ತಿರಸ್ಕಾರದ ನುಡಿಗಳಿರುವುದನ್ನು ಈ ಹಿನ್ನಲೆಯಲ್ಲಿ ನೋಡಬೇಕು. ತನ್ನನ್ನು ಯಾರಾದರೂ ಮುಟ್ಟಿದರೆ ಶಿಕ್ಷೆಯಾದೀತೆಂದು ಕೂಗುತ್ತ ಮಡಿವಾಳ ಮಾಚಯ್ಯ ರಾಜಬೀದಿಯಲ್ಲಿ ಓಡಾಡುತ್ತಿದ್ದ ಸಂಗತಿಯನ್ನಾಗಲಿ, ಅಂಬಿಗರ ಚೌಡಯ್ಯನ ವಚನಗಳಲ್ಲಿ ಕಂಡುಬರುವ ಒರಟುತನ ಮತ್ತು ಆತ್ಮವಿಶ್ವಾಸಗಳನ್ನಾಗಲಿ ಮತ್ತೆ ಇದೇ ಹಿನ್ನಲೆಯಲ್ಲಿ ನೋಡಬೇಕು. ಸಂಬೋಳಿನಾಗಿದೇವ ಹಿಂದಿನ ಹರಿಜನರಂತೆ ರಾಜಬೀದಿಯಲ್ಲಿ ಓಡಾಡುವಾಗ 'ಸಂಬೋಳಿ ಸಂಬೋಳಿ' ಎಂದು ಕೂಗುವುದನ್ನು ನಿಲ್ಲಿಸಿಬಿಟ್ಟಿದ್ದ. ಇದೊಂದು ಮಹಾಪರಾಧವೆಂಬಂತೆ ಸಂಪ್ರದಾಯ ಪ್ರಿಯರು ಬಿಜ್ಜಳನಲ್ಲಿ ಚಾಡಿ ಹೇಳುತ್ತಾರೆ. ಮಾಚಿದೇವ, ಚೌಡಯ್ಯ, ನಾಗಿದೇವರು ಸಮಾಜದ ಬಹು ಕೆಳವರ್ಗಕ್ಕೆ ಸೇರಿದವರಾದರೂ, ಹಳೆಯದನ್ನು ಪ್ರತಿಭಟಿಸುವ, ಹೊಸತನ್ನು ಸಾಧಿಸುವ ಛಲ ಅವರಲ್ಲಿ ಎದ್ದು ಕಾಣುತ್ತದೆ.

ಆರಂಭದಲ್ಲಿ ಬ್ರಾಹ್ಮಣ, ಹರಿಜನರಾಗಿದ್ದು ಆಮೇಲೆ ವೀರಶೈವರಾದ ಎರಡು ಸಂಸಾರಗಳ ಮಧ್ಯೆ ವಿವಾಹ ಏರ್ಪಾಟಾದ ಸಂಗತಿ ಪ್ರಾಚೀನ ಭಾರತದ ಸಾಮಾಜಿಕ ಇತಿಹಾಸದಲ್ಲೇ ಅತ್ಯಪೂರ್ವ ಘಟನೆ. ಸಮಾಜ ಆ ವಿವಾಹವನ್ನು ಒಪ್ಪಿಕೊಂಡದ್ದು, ಮತ್ತು ಅದನ್ನು ನೆರವೇರಿಸುವುದರ ಬಗ್ಗೆ ಉತ್ಸಾಹ ತೋರಿದ್ದು ಆಶ್ಚರ್ಯಕರ ಸಂಗತಿ. ಅಂತಹ ವಿದ್ಯಾವಂತರಲ್ಲದ ಜನರೂ ಕೂಡ, ಜೊತೆಗೆ ಸ್ತ್ರೀಯರೂ ವಾಙ್ಮಯ ರಚನೆಗೆ ಕೈಹಾಕಿದ್ದು ಭಾರತದ ಇತಿಹಾಸದಲ್ಲಿ ಒಂದು ಉಜ್ವಲವಾದ ಅಧ್ಯಾಯ. ವಾಙ್ಮಯ ರಚನೆಯು ಒಂದು ಸಾಮೂಹಿಕ ಚಳವಳಿಯಾಗಿ ಪರಿಣಮಿಸಿತು.

ತತ್ವವು ಕೇವಲ ಆಲೋಚನೆಯಾಗಿ ಮಾತ್ರವೇ ಅಲ್ಲದೆ, ದೈನಂದಿನ ಆಚರಣೆಯ ವಸ್ತುವೂ ಆಗಿರಬೇಕೆಂಬ ಘೋಷ ಹೆಚ್ಚು ಕಡಮೆ ಎಲ್ಲ ವಚನಕಾರರಲ್ಲಿಯೂ ಮೊಳಗಿದೆ. ಜೊತೆಗೆ, ಆ ಕಾಲದ ಜನರು ನಿರ್ಭಯವಾಗಿ ಪ್ರಶ್ನಿಸುವ ಮನೋಭಾವವನ್ನು ಬೆಳೆಸಿಕೊಂಡದ್ದನ್ನು ನಾವು ಗುರುತಿಸಬಹುದು. ಅನುಭವ ಗೋಷ್ಠಿಗಳಲ್ಲಿ ನಡೆಯುತ್ತಿದ್ದ ಚರ್ಚೆಗಳಲ್ಲಿ ವ್ಯಕ್ತಿಯ ಆಲೋಚನೆಗೆ ಮಹತ್ವವಿರುತ್ತಿದ್ದಿತು. ಪಾದರಕ್ಷೆ ಹೊಲೆಯುವ ವ್ಯಕ್ತಿ ರಾಜ್ಯದ ಭಂಡಾರಿಯ

ಜೊತೆಗೆ ಕುಳಿತು ಚರ್ಚಿಸುವ, ಟೀಕಿಸುವ, ಮನಬಿಚ್ಚಿ ಮಾತನಾಡುವ ಸಂಗತಿ ಸಾಮಾನ್ಯವಾದುದಲ್ಲ. ಸಾಮಾನ್ಯ ಜನರನ್ನೂ ಸಾಮಾಜಿಕ ಆಂದೋಲನದಲ್ಲಿ ಭಾಗಿಗಳನ್ನಾಗಿ ಮಾಡಲು ಇದರಿಂದ ಸಾಧ್ಯ-ವಾಯಿತು. ಅನೇಕ ವಚನಕಾರರ ವಚನಗಳಲ್ಲಿ ಮೂಡಿರುವ ತಮ್ಮತನದ ಅರಿವು ಆಶ್ಚರ್ಯಕರವಾದುದು. ವಚನ ವಾಙ್ಮಯವನ್ನು ಸಾಹಿತ್ಯ ಎಂದು ಕೆಲವರು, ಶಾಸ್ತ್ರ ಎಂದು ಕೆಲವರು ಭಾವಿಸುತ್ತಾರೆ. ಇವೆರಡು ದೃಷ್ಟಿಗಳನ್ನೂ ನಿರಾಕರಿಸಬೇಕಾಗಿಲ್ಲ. ಏಕೆಂದರೆ ಎರಡೂ (ಆಂಶಿಕ) ಸತ್ಯಗಳೇ. ವಚನ ವಾಙ್ಮಯವನ್ನು ಇನ್ನೊಂದು ದೃಷ್ಟಿಯಿಂದಲೂ ನೋಡಬಹುದು. ಅದು ವಚನಕಾರರ ಸಮಾಜ ದರ್ಶನದ ಕೈಗನ್ನಡಿಯೂ ಹೌದು. ಹನ್ನೆರಡನೆಯ ಶತಮಾನದ ಕರ್ನಾಟಕವು ಬೇರೆ ಬೇರೆ ಕೃತಿಕಾರರಿಂದ ಬರೆಯಿಸಿಕೊಂಡ ಜೀವನ ಚರಿತ್ರೆಯೂ ಹೌದು.

ಬಸವ ಮುಂತಾದವರು ನಿರ್ಮಿಸಲು ಅಥವ ಪ್ರಚಾರಮಾಡಲು ಪ್ರಯತ್ನಿಸಿದ್ದು ಒಂದು ಮತವನ್ನೇ ಎಂದಿಟ್ಟುಕೊಂಡರೂ, ಅದಕ್ಕಿಂತ ಹೆಚ್ಚಾಗಿ ಅವರು ಒಂದು ಸಮಾಜ ದರ್ಶನವನ್ನು ರೂಪಿಸಲು ಹೆಣಗಿದರು ಎಂದು ಭಾವಿಸುವುದು ಹೆಚ್ಚು ಉಚಿತವಾದುದು. 'ಮತ' (religion) ಎನ್ನುವ ಮಾತು ವ್ಯಕ್ತಿಯ ಶ್ರದ್ಧೆ, ನಂಬಿಕೆಯನ್ನು ಮಾತ್ರ ಅಪೇಕ್ಷಿಸುತ್ತದೆ; ವ್ಯಕ್ತಿ ಅದನ್ನು ಸುಮ್ಮನೆ ಒಪ್ಪಿಕೊಳ್ಳಬೇಕು, ಆಚರಿಸಬೇಕು ಅಷ್ಟೆ. 'ಸಮಾಜ ದರ್ಶನ' (social philosophy) ಎಂಬಲ್ಲಿ ಆಲೋಚನಾ ಸ್ವಾತಂತ್ರ್ಯ ಉಂಟು; ವ್ಯಕ್ತಿಯ ಕಾಣಿಕೆಗೆ ಅವಕಾಶ ಉಂಟು. ನನಗೆ ಅನೇಕ ಸಾರಿ ಅನ್ನಿಸಿರುವಂತೆ, ಬಸವಣ್ಣನವರ ಕಾಲದಲ್ಲಿ ಮುಖ್ಯವಾಗಿ ಸಮಾಜ ದರ್ಶನವಾಗಿದ್ದದ್ದು, ಮುಂದೆ, ಅವರ ಕಾಲಾನಂತರ ಇತರ ಮತಗಳಂತೆಯೇ ವೀರಶೈವವೂ ಕೂಡ ಜಡತ್ವವನ್ನು(rigidity) ಪಡೆದುಕೊಂಡು ಒಂದು 'ಮತ'ವಾಗಿ ಪ್ರಸಾರವಾಯಿತು. ಅವರ ಕಾಲದ ನಂತರ ಮತದ ಅನುಯಾಯಿಗಳ ಸಂಖ್ಯೆ ಬೆಳೆಯಿತು. ಆದರೆ ಆಲೋಚನೆ ಬೆಳೆಯಲಿಲ್ಲ. ವಚನಕಾರರ ನಂತರ ವೀರಶೈವ ಸಾಹಿತ್ಯ ವಿಪುಲವಾಗಿ ಬೆಳೆಯಿತು, ನಿಜ. ಆದರೆ ಚೌಡಯ್ಯ, ಮಾಚಯ್ಯನಂತಹ ಸಾಮಾನ್ಯರಾಗಲಿ, ಅಕ್ಕಮಹಾದೇವಿಯಂತಹ ಸ್ತ್ರೀಯರಾಗಲಿ ಯಾರೂ ಕೃತಿ ರಚನೆಗೆ ಕೈಹಾಕಲಿಲ್ಲ. ಇದಕ್ಕೆ ಕಾರಣ ಸ್ಪಷ್ಟವಾಗಿದೆ. ಈಚಿನ ಸಾಹಿತ್ಯದಲ್ಲೂ (ಹದಿನಾರನೆಯ ಶತಮಾನದ ವಚನ ಸಾಹಿತ್ಯ) ಆ ಹಿಂದಿನ ವಚನಗಳ ಹೊಸತನ, ಮಿರುಗು ಇದೆಯೇ ಎಂಬುದೂ ಸಂದೇಹಾಸ್ಪದ. ಒಂದು ಜೀವಂತ ವಸ್ತು ಶಾಶ್ವತವಾಗಿ ಉಳಿಯಬೇಕಾದರೆ ಅದು ಜಡವಸ್ತುವಿನ ಮಧ್ಯೆ 'ಪಳಿಯುಳಿಕೆ' (fossil) ಆಗಿ ಪರಿಣಮಿಸಬೇಕಾಗುತ್ತದೆ. ಸಮಾಜ ದರ್ಶನವೂ ಕೂಡ ಹೀಗೆ ಉಳಿಯಬೇಕಾದರೆ ಅದಕ್ಕೆ ಮತದ ಚೌಕಟ್ಟು, ಆಶ್ರಯ ಬೇಕಾಗಬಹುದೇನೋ ? ಆದರೆ ಎಷ್ಟೇ ಆಗಲಿ 'fossil' ಎಂಬುದು ಮೂಲ ವಸ್ತುವಿನ ಹೊರ ಆಕಾರವನ್ನು ಮಾತ್ರ ಉಳಿಸಿಕೊಡಬಲ್ಲುದು !

ವಚನಕಾರರ ಸಮಾಜ ದರ್ಶನ ಮೂಲತಃ ಹೊಸತು; ಸ್ವಭಾವತಃ ಪ್ರಚೋದನಕಾರಿಯಾದುದು ಮತ್ತು ಒಟ್ಟು ದೃಷ್ಟಿಯಲ್ಲಿ ಆಧುನಿಕವಾದುದು. ಅದು ತನ್ನ ಒಟ್ಟರ್ಥದಲ್ಲಿ ಇಂದಿಗೂ ಆಚರಣೆಗೆ ಯೋಗ್ಯವಾಗಿದೆ. ಒಂದು ಕಾಲದ ಸಮಾಜ ದರ್ಶನಕ್ಕೆ ಅಧ್ಯಯನ ಮೌಲ್ಯವಲ್ಲದೆ ಈ ಕಾಲಕ್ಕೂ ಏನಾದರೂ ನೀಡಬಲ್ಲುದೇ ಎಂಬುದೂ ಮುಖ್ಯವಾಗುತ್ತದೆ. ಸಮಕಾಲೀನ ಕಾಲಕ್ಕೂ ಕೊಡಬಹುದಾದ ಸಂದೇಶ ಅದರಲ್ಲಿದ್ದರೆ ಅದರ ಬೆಲೆ ಹೆಚ್ಚುತ್ತದೆ. ವಚನಕಾರರ ಸಮಾಜ ದರ್ಶನಕ್ಕೆ ಅಂತಹ ಬೆಲೆ ಇದೆ. ಭಾರತೀಯ ಸಮಾಜ ದರ್ಶನದ ಇತಿಹಾಸದಲ್ಲಿ ವಚನಕಾರರ ಸಮಾಜದರ್ಶನವು ಗೌರವದ ಉಲ್ಲೇಖವನ್ನು ಪಡೆಯಬೇಕಾಗಿದೆ.

ವಚನ ಸಾಹಿತ್ಯದಲ್ಲಿ ಸರ್ವಧರ್ಮ ಸಮನ್ವಯ

ಲೇಖಕರು:
ಡಾ|| ಎಸ್. ಸುಬ್ರಹ್ಮಣ್ಯನ್, ಎಂ.ಎ.,ಪಿ.ಎಚ್.ಡಿ.,
ಮಹಾರಾಣಿ ಕಾಲೇಜು,
ಬೆಂಗಳೂರು

ಎಲ್ಲ ಯುಗಗಳಲ್ಲಿಯೂ ಎಲ್ಲ ದೇಶಗಳಲ್ಲಿಯೂ ಮನುಷ್ಯ ಸ್ವಭಾವ ಒಂದೇ ಬಗೆ. ಪ್ರಾಚೀನ ಐತಿಹಾಸಿಕ ದಾಖಲೆಗಳನ್ನು ನೋಡಿ, ಆಯಾ ಕಾಲದ ಜನಜೀವನ ಕ್ರಮವನ್ನು ಪ್ರತಿಬಿಂಬಿಸುವ ಇತಿಹಾಸ ಪುರಾಣ ಮಹಾಕಾವ್ಯಾದಿಗಳನ್ನು ನೋಡಿ, ಸಮಕಾಲೀನ ಪರಿಸ್ಥಿತಿಯಲ್ಲೂ ಜನಜೀವನವನ್ನು ಅಳೆದು ನೋಡಿ ಆ ಮಾತಿನ ಸತ್ಯತೆ ಅರಿವಾಗುತ್ತದೆ. ಎಲ್ಲ ಸಂದರ್ಭಗಳಲ್ಲೂ ಅತ್ಯಂತ ಪ್ರಗತಿ ಹೊಂದಿದ ಸುಸಂಸ್ಕೃತ ವಿಚಾರಶೀಲ ಧರ್ಮವಂತ ಮಾನವನೂ ಇದ್ದಾನೆ. ಜೊತೆಜೊತೆಯಲ್ಲೇ ಅತಿ ಹಿಂದುಳಿದ ಅಸಂಸ್ಕೃತ ಅವಿಚಾರೀ ಅಧರ್ಮಿಷ್ಠ ಮಾನವನೂ ಇದ್ದಾನೆ. ಸಮಾಜದಲ್ಲಿ ಧಾರ್ಮಿಕ ಶ್ರದ್ಧೆಯುಳ್ಳ ವಿಚಾರಶೀಲ ಜನರ ಸಂಖ್ಯೆ ಹೆಚ್ಚಿದಂತೆ ಇಡೀ ಸಮಾಜದ ಮೇಲೆ ಸತ್ಪ್ರಭಾವವುಂಟಾಗಿ ಸಮಾಜ ಏಳಿಗೆಯನ್ನು ಪಡೆದು ಸುಖಶಾಂತಿಗಳಿಂದ ನಲಿದಾಡುತ್ತದೆ. ಅಧರ್ಮವಂತ ಅವಿಚಾರಿಗಳೇ ಹೆಚ್ಚಾದಾಗ ಸಮಾಜ ಅವನತಿಯನ್ನು ಹೊಂದಿ ಕಷ್ಟಕಾರ್ಪಣ್ಯದಿಂದ ಬಳಲುತ್ತದೆ.

ಮನುಷ್ಯನ ಗುರಿ ವಿಚಾರಶೀಲನಾಗಿ ಸ್ವಂತ ಅನುಭವದಿಂದ ಸಂಸ್ಕಾರ ಪಡೆದು ಧರ್ಮಶ್ರದ್ಧೆಯನ್ನು ಹೊಂದಿ ಮುಂದುವರಿಯುವುದು. ಅವಿಚಾರವಂತನಾಗಿಯೇ ಇದ್ದು ಅಸಂಸ್ಕೃತನಾಗಿ ಉಳಿದರೆ ಅವನಲ್ಲಿ ಧಾರ್ಮಿಕ ಭಾವನೆಯೇ ಸುಳಿಯದು. ಅವನು ಪ್ರಗತಿಗೆ ವಿಮುಖನಾಗಿ ಉಳಿಯುತ್ತಾನೆ. ಕರುಣಾಮಯಿಗಳಾಗಿ 'ಅನ್ಯರ ದುಃಖಕ್ಕೆ ಅಳುವ' ವಿಶ್ವಕುಟುಂಬಿಗಳು ಆಗಾಗ್ಗೆ ಅಂಥವರನ್ನು ಎಚ್ಚರಿಸಿ ವಿಚಾರಶೀಲರನ್ನಾಗಿ ಮಾಡಬೇಕಾಗುತ್ತದೆ, ಅವರಲ್ಲಿ ಧರ್ಮ ಶ್ರದ್ಧೆಯನ್ನು ಮೂಡಿಸಬೇಕಾಗುತ್ತದೆ. ಆಗ ಅಂಥವರು ಪ್ರಗತಿಗೆ ಅಭಿಮುಖರಾಗುತ್ತಾರೆ.

ಒಂದು ಸಸಿಯನ್ನು ಹುಟ್ಟುಹಾಕಿ ಬೆಳಸುವಾಗ, ದನಕರುಗಳು ಮೇದುಕೊಂಡು ಹೋಗದಿರುವಂತೆ ರಕ್ಷಿಸಲು ಅದರ ಸುತ್ತಲೂ ಕಡ್ಡಿಗಳನ್ನು ನೆಟ್ಟು ಬೇಲಿ ನಿರ್ಮಿಸುವುದು ವಾಡಿಕೆ. ಆ ಕಡ್ಡಿಗಳೇ ಚಿಗುರೊಡೆದು ಗಿಡಕ್ಕೆಂದು ಹಾಕಿದ ಗೊಬ್ಬರದ ಸಾರವನ್ನೆಲ್ಲ ಹೀರಿ ಸೊಂಪಾಗಿ ಬೆಳೆದು ಮೂಲ ಸಸ್ಯವನ್ನೇ ಕೃಶವಾಗಿಸಿ ನಾಶಪಡಿಸಿದರೆ ಹೇಗೋ, ಹಾಗೆಯೇ ಅರ್ಥವನ್ನು ಕಳೆದುಕೊಂಡ ಬಾಹ್ಯಾಚರಣೆಗಳೇ ಪ್ರಮುಖವಾಗಿ ಮಹಾಪುರುಷರಿಂದ ಉಪದಿಷ್ಟವಾದ ಮೂಲ ತತ್ವಗಳೇ ಮರೆಯಾಗುತ್ತವೆ. ಆ ತತ್ವಗಳು ಚರ್ವಿತಚರ್ವಣವಾಗಿ ಅತಿ ಪರಿಚಯದಿಂದ ಅವಜ್ಞತೆಗೆ ಕಾರಣವಾಗುತ್ತವೆ. ಆ ತತ್ವಗಳಿಗೆ ಮತ್ತೆ ಬೆಲೆ ಬರಬೇಕಾದರೆ ಅವು ಮತ್ತೆ ಹೊಸ ರೂಪು ತಳೆದು ಬರಬೇಕು.

Old wine put into new bott!es – ಹೊಸ ಸೀಸೆಗಳಿಗೆ ತುಂಬಿಸಿದ ಹಳೆ ಮದ್ಯ – ಎಂಬುದೊಂದು ನಾಣ್ನುಡಿ. ಮದ್ಯ ಹಳೆಯದೇ ಆದರೂ ಹೊಸ ಸೀಸೆಗೆ ಹಾಕಿದಾಗ ಅದಕ್ಕೆ ಹೊಸ ಬೆಲೆ ಬರುತ್ತದೆ. ಅಂತೆಯೇ ಹೊಸ ಹೊಸ ಧರ್ಮಪ್ರಸಾರಕ ಬಂದು ಹೊಸ ಹೊಸ ಮಾತುಗಳಲ್ಲಿ ಅವೇ ತತ್ವಗಳನ್ನುಪದೇಶಮಾಡಿದಾಗ ಜನಸಾಮಾನ್ಯಕ್ಕೆ ಅದು ಆಪ್ಯಾಯಮಾನವಾಗುತ್ತದೆ.

ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು
ಹೊಸ ಯುಕ್ತಿ ಹಳೆ ತತ್ವಗಳೊಡಗೂಡೆ ಧರ್ಮ !
(– ಡಿ.ವಿ.ಜಿ.)

ಬೇರು ಹಳೆಯದಾಗಿ ಆಳಕ್ಕೆ ಇಳಿದು ಸರ್ವತೋಮುಖವಾಗಿ ಪ್ರಸರಿಸಿರಬೇಕು. ಆಗ ನೆಲದ ಮೇಲೆ ಎತ್ತರವಾಗಿ ಬೆಳೆದು ನಿಂತ ಸುದೃಢವಾಗಿ ಚೆನ್ನಾಗಿ ಪೋಷಣೆಯನ್ನು ಪಡೆಯುತ್ತದೆ. ಆದರೆ ಹಣ್ಣೆಲೆಗಳೆಲ್ಲ ಉದುರಿ ಚಿಗುರುಗಳು ಮಾತ್ರ ಹೊಸಹೊಸದಾಗಿ ಬರುತ್ತಿರಬೇಕು. ಹೊಸ ಹೊಸತನ್ನು ಬಯಸುವುದೇ ಮಾನವ ಸ್ವಭಾವ. ತತ್ವ ಹಳೆಯದಾದರೂ ಹೊಸಯುಕ್ತಿ ಬೇಕು.

ದೆಬ್ಬೆ ಕಟ್ಟಿರುವವರೆಗೇ ನಾಯಿಯ ಬಾಲ ನೆಟ್ಟಗಿರುವುದು, ದೆಬ್ಬೆ ಬಿಚ್ಚಿದೊಡನೆ ಅದು ಎಂದಿನಂತೆ ಡೊಂಕೇ ! ಅಂತೆಯೇ ಮನುಷ್ಯನ ಪ್ರಕೃತಿ. ಮಹಾತ್ಮನೊಬ್ಬ ಬಂದು ದಯಾರ್ದ್ರ ಹೃದಯದಿಂದ ಬೋಧಿಸಿ ಜನರನ್ನು ಸನ್ಮಾರ್ಗಕ್ಕೆ ಹಚ್ಚಿದಾಗ ಜನ ಅವನನ್ನೇ ಹಿಂಬಾಲಿಸುತ್ತಾರೆ. ಅವನು ತೋರಿದ ಮಾರ್ಗದಲ್ಲಿ ಶ್ರದ್ಧೆಯಿಂದ ನಡೆಯುತ್ತಾರೆ. ಆದರೆ ಅವನು ಕಣ್ಮರೆಯಾದೊಡನೆ ಬರಬರುತ್ತಾ ಅವನನ್ನೂ ಅವನ ಉಪದೇಶಗಳನ್ನೂ ಮರೆತುಬಿಡುತ್ತಾರೆ. "ಸಂಭವಾಮಿ ಯುಗೇ ಯುಗೇ"ಎಂದು ಅಂತಹ ಮಹನೀಯ ಮತ್ತೆ ಮತ್ತೆ ಹುಟ್ಟುತ್ತಲೇ ಇರಬೇಕು, ಜನರ ಮನಸ್ಸಿಗೆ ದೆಬ್ಬೆ ಕಟ್ಟುತ್ತಲೇ ಇರಬೇಕು. ಪರಂಪರೆಯಾಗಿ ಆ ಕೆಲಸ ಪ್ರಪಂಚದಲ್ಲಿ ನಡೆಯುತ್ತ ಬಂದಿದೆ. ಒಂದು ಕಡೆ ವೈದಿಕ ಋಷಿಗಳು, ಅನಂತರ ಬುದ್ಧ, ಮಹಾವೀರ, ಇನ್ನೊಂದು ಕಡೆ ಯೇಸುಕ್ರಿಸ್ತ, ಜರತುಷ್ಟ್ರ, ಮಹಮ್ಮದ, ಇನ್ನೊಂದು ಕಡೆ ಕನ್‌ಫ್ಯೂಶಿಯಸ್, ಮತ್ತೊಂದು ಕಡೆ ಶಂಕರ, ರಾಮಾನುಜ, ಮಧ್ವ, ಬಸವಣ್ಣ, ರಾಮಕೃಷ್ಣ, ಗಾಂಧಿ ಹೀಗೇ

ಒಂದು ಕಡೆಯಾದ ಮೇಲೆ ಒಂದು ಕಡೆ, ಒಬ್ಬರಾದ ಮೇಲೆ ಒಬ್ಬರು ಮಾನವೋದ್ಧಾರಕ್ಕಾಗಿ ಧರ್ಮಪ್ರದೀಪಕರಾಗಿ ಬಂದು ಹೋಗಿದ್ದಾರೆ.

ಪ್ರಕೃತ, ಕನ್ನಡನಾಡಿನಲ್ಲಿ ವಚನಕಾರರು ಪ್ರಚುರಪಡಿಸಿದ ವಿಶ್ವಮಾನ್ಯವಾದ ಧರ್ಮವನ್ನು ಕುರಿತು ಇಲ್ಲಿ ವಿವೇಚಿಸೋಣ.

ಮನುಷ್ಯ ತಾನೂ ಚೆನ್ನಾಗಿದ್ದು ಸುತ್ತಿನ ಸಮಾಜವನ್ನೂ ಹೇಗೆ ಚೆನ್ನಾಗಿಟ್ಟಾನು ? ತಾನು ಉತ್ತಮ ಮನುಷ್ಯನಾಗಿ, ದೇವ ಮಾನವನಾಗಿ, ಕಡೆಗೆ ದೇವನೇ ಆಗಿ ಅವನು ಹೇಗೆ ವಿಕಾಸಪಡೆ ದಾನು ? ಅವನು ಅನುಸರಿಸಬೇಕಾದ ಜೀವನ ತತ್ವಗಳಾವುವು ? ಅವನ ನಡೆನುಡಿ ಹೇಗಿರಬೇಕು ? ಎಂಬುದನ್ನು ಕುರಿತು ವಚನ ಕಾರರು ತಿಳಿಗನ್ನಡದಲ್ಲಿ ನೇರವಾಗಿ ಹೃದಯವನ್ನು ಮುಟ್ಟುವಂತಹ ಸ್ಪಷ್ಟವಾದ ನುಡಿಗಳಲ್ಲಿ ತಿಳಿಯಪಡಿಸಿದ್ದಾರೆ. ಸೋಜಿಗದ ಸಂಗತಿ ಯೆಂದರೆ ಪ್ರಪಂಚದ ಯಾವುದೇ ಜನಾಂಗದ, ಯಾವುದೇ ಧರ್ಮದ ಅಂತರ್ಯದಲ್ಲಿರುವ ಹೂರಣ ವಚನಕಾರರ ವಿಚಾರಧಾರೆಯಲ್ಲಿ ಮೂಡಿದೆಯೆಂಬುದು. ಆ ದೃಷ್ಟಿಯಿಂದ, ವಚನಕಾರರು, ಒಂದು ಬಗೆಯಲ್ಲಿ, ಸರ್ವಧರ್ಮಸಮನ್ವಯವನ್ನೇ ಸಾಧಿಸಿದ್ದಾರೆನ್ನಬಹುದು. ಹಾಗಾಗಿ ವಚನಗಳಲ್ಲಿ ಪ್ರತಿಪಾದಿತವಾಗಿರುವ ಧರ್ಮ ಸಾರ್ವಕಾಲಿ ಕವಾಗಿ ಸಾರ್ವತ್ರಿಕವಾಗಿ ಉಳಿಯುವಂಥದು.

ಆರ್ಷೇಯ ವೈದಿಕ ಧರ್ಮದಲ್ಲಿ ಧಾರ್ಮಿಕ ನೈತಿಕ ತತ್ವಗಳನ್ನು ಸರಳವಾದ ಎರಡೇ ಮಾತುಗಳಲ್ಲಿ ಅಳವಡಿಸಿದ್ದಾರೆ– **'ಯಮ'** ಮತ್ತು **'ನಿಯಮ'** ಎಂದು. ಅಹಿಂಸೆ, ಸತ್ಯ, ಅಸ್ತೇಯ, ಅಪರಿ ಗ್ರಹ ಇವು 'ಯಮ'. ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯ, ಈಶ್ವರಪ್ರಣಿಧಾನ ಇವು 'ನಿಯಮ'.

ಯಾವ ಅಹಿಂಸೆ ಸತ್ಯ ಆದಿ ಐದು ತತ್ವಗಳನ್ನು 'ಯಮ'ಎಂದು ಕರೆದರೋ ಅವನ್ನೇ ಜೈನಧರ್ಮೀಯರು 'ಪಂಚ ಅಣುವ್ರತಗಳು' ಎಂದು ಕರೆದರು. ಅವುಗಳಲ್ಲಿ ಒಂದೊಂದೂ ಅಣುಮಾತ್ರವೆಂಬಂತೆ ಸರಳವಾಗಿ ಕಂಡುಬರುವುದಾದರೂ, ಅಣುವಿನಲ್ಲಿ ಬ್ರಹ್ಮಾಂಡಶಕ್ತಿ ಹುದುಗಿರುವಂತೆ ಒಂದೊಂದು ಅಣುವ್ರತವೂ ಅಗಾಧ ಮಹತ್ವ ವನ್ನುಳ್ಳದಾಗಿದೆ.

ನಮ್ಮ ಕಾಲದ ಗಾಂಧೀಜಿಯವರು ಅನುಷ್ಠಾನ ಮಾಡಿ ಜನ ರಿಗೆ ಬೋಧಿಸಿದ ತತ್ವಗಳೂ ಅವೇ.

ಒಂದಲ್ಲ ಒಂದು ಬಗೆಯಲ್ಲಿ ಆ ತತ್ವಗಳೇ ಜಗತ್ತಿನ ಎಲ್ಲ ಧರ್ಮಗಳ ಅಸ್ತಿಭಾರ.

ಅಹಿಂಸೆ ಎಂದರೇನು ? ಮನಸ್ಸಿನಲ್ಲಾಗಲಿ ಮಾತಿನಲ್ಲಾಗಲಿ ಕ್ರಿಯೆಯಲ್ಲಾಗಲಿ ಇತರರಿಗೆ ನೋವನ್ನುಂಟುಮಾಡದಿರುವುದು. ಎಲ್ಲರನ್ನೂ ಸಹೋದರರಂತೆ ಪ್ರೀತಿಸುವುದು, ಶತ್ರುಗಳನ್ನೂ ಪ್ರಿಯ ರನ್ನಾಗಿ ಕಾಣುವುದು. ಪ್ರಾಣಿಗಳಲ್ಲಿ ದಯೆಯನ್ನು ತೋರುವುದು. ಕಂಡವರ ಕಷ್ಟಕ್ಕಾಗಿ ಮರುಗುವುದು.

"ಮಾ ಹಿಂಸ್ಯಾತ್ ಸರ್ವಭೂತಾನಿ" ಎಂಬುದು ವೇದದ ಆದೇಶ.

"ಅಹಿಂಸಾ ಪರಮೋ ಧರ್ಮಃ" ಎಂದು ಜೈನ ಧರ್ಮ ತಲೆ ಬರಹವನ್ನು ಹಚ್ಚಿಕೊಂಡಿತು. "ಜೀವ ದಯೆ ಜೈನ ಧರ್ಮಂ" ಎಂದು ಕವಿಗಳುಗ್ಗಡಿಸಿದರು.

"ಆನೃಶಂಸ್ಯಂ ಪರೊ ಧರ್ಮಃ ಪರಮಾರ್ಥಾಚ್ಚ ಮೇ ಮತಂ" ಎಂದು ವ್ಯಾಸಮಹರ್ಷಿ ನಿರೂಪಿಸಿದ. ಆನೃಶಂಸ್ಯವೆಂದರೆ ದಯೆ, ಮರುಕ. ಅದಕ್ಕಿಂತಲೂ ಮಿಗಿಲಾದ ಧರ್ಮ ಬೇರೊಂದಿಲ್ಲ ವೆಂದು.

ಯೇಸುಕ್ರಿಸ್ತ ಹೇಳಿದ—ನಾವೆಲ್ಲ ದೇವರ ಮಕ್ಕಳು. ಎಲ್ಲರೂ ಪರಸ್ಪರ ಪ್ರೀತಿಯಿಂದಿರಬೇಕು. ಯಾರನ್ನೂ ದ್ವೇಷಿಸಬಾರದು. ಶತ್ರು ವನ್ನೂ ಪ್ರೀತಿಸಬೇಕು. ಯಾರಾದರೂ ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆಯನ್ನು ತೋರಿಸು. ಉತ್ತರೀಯವನ್ನು ಸೆಳೆದು ಕೊಂಡರೆ ನಿನ್ನ ಅಂಗಿಯನ್ನೂ ಕಳಚಿಕೊಡು.

ಬುದ್ಧ ಉಪದೇಶಿಸಿದುದೂ ಅದೇ —

"ನ ಹಿ ವೈರೇಣ ವೈರಾಣಿ ಶಾಮ್ಯಂತೀಹ ಕದಾಚನ
ಅವೈರೇಣ ಹಿ ಶಾಮ್ಯಂತಿ ಏಷ ಧರ್ಮಃ ಸನಾತನಃ"

ವೈರದಿಂದ ವೈರಗಳು ನಾಶವಾಗಲಾರವು. ಅವೈರದಿಂದಲೇ ಅಂದರೆ ಪ್ರೀತಿಯಿಂದಲೇ ಅದು ಶಮನವಾಗಬೇಕು. ಇದೇ ಹಿಂದಿನಿಂದ ನಡೆದುಬಂದ ಧರ್ಮ.

ಕಲ್ಲಿನಿಂದ ಹೊಡೆದವನನ್ನು ಹೂವಿನಿಂದ ಪೂಜಿಸು ಎಂದರು ವೈಷ್ಣವ ಪಂಥದವರು. ತುಲಸೀದಾಸ ಹೀಗೆ ಹೇಳಿದ

ತುಲಸೀ ಸಂತ ಸುಅಂಬ ತರು ಫೂಲಿ ಫಲಹಿ ಪರಹೇತ್
ಇತತೇ ಯೇ ಪಾಹನ ಹನತ್ ಉತತೇ ವೇ ಫಲ ದೇತ್

ಸತ್ಪುರುಷರು ಮಾವಿನ ಮರದಂತಿರಬೇಕು: ಕೆಳಗಿನಿಂದ ಕಲ್ಲುಹೊಡೆ ದವನಿಗೆ ಅದು ಮೇಲಿನಿಂದ ಹಣ್ಣು ಕೊಡುತ್ತದೆ !

"ವಿಷವನುಣಿಸಿದವಗೆ ಷಡ್ರಸವನುಣಿಸಲು ಬೇಕು
ಅಸೂಯೆಪಡುವವನ ಪೋಷಿಸಲು ಬೇಕು
ಹುಸಿದು ಮನೆಕೊಂಬುವನ ಹಾಡಿಹರಸಲುಬೇಕು
ಧರ್ಮವೇ ಜಯವೆಂಬ ದಿವ್ಯಮಂತ್ರ
ಮರ್ಮವನು ತಿಳಿದು ಆಚರಿಸಲೋ ಮನುಜಾ"

ಎಂದು ಪುರಂದರದಾಸರು ಹಾಡಿದರು.

ಅದನ್ನೇ ಇನ್ನೊಂದು ರೀತಿಯಿಂದ ವೇದ ಸಾರಿತು

ಯಸ್ಮಿನ್ ಸರ್ವಾಣಿ ಭೂತಾನಿ ಆತ್ಮೈವಾಭೂದ್ವಿಜಾನತಃ
ತತ್ರ ಕೋ ಮೋಹಃ ಕಃ ಶೋಕ ಏಕತ್ವಮನುಪಶ್ಯತಃ

ಎಲ್ಲ ಪ್ರಾಣಿಗಳೂ ತನ್ನಂತೆಯೇ ಎಂದು ತನ್ನನ್ನು ಎಲ್ಲರೊಡನೆ ಏಕೀಭವಿಸಿಕೊಂಡು ಯಾರು ನೋಡುತ್ತಾರೋ ಅಂಥವರಿಗೆ ಮೋಹವೆಲ್ಲಿಯದು, ಶೋಕವೆಲ್ಲಿಯದು ?

ಮಹಾಭಾರತದಲ್ಲಿ ವ್ಯಾಸ ಹೇಳಿದ

ಶ್ರೂಯತಾಂ ಧರ್ಮಸರ್ವಸ್ವಂ ಶ್ರುತ್ವಾ ಚೈವಾವಧಾರ್ಯತಾಂ
ಆತ್ಮನಃ ಪ್ರತಿಕೂಲಾನಿ ಪರೇಷಾಂ ನ ಸಮಾಚರೇತ್

ಇದೇ ನೋಡಿರಿ ಧರ್ಮಸರ್ವಸ್ವ. ಆಲಿಸಿರಿ, ಆಲಿಸಿ ಧೃಢಮಾಡಿಕೊಳ್ಳಿರಿ. ನಿಮಗೆ ಪ್ರತಿಕೂಲವಾದದ್ದು ಯಾವುದೋ ಅದನ್ನು ನೀವು ಇತರರಿಗೂ ಮಾಡಬೇಡಿ.

ಭಗವದ್ಗೀತೆಯಲ್ಲಿ ಬರುವ ಮಾತೂ ಹಾಗೆಯೇ

ಆತ್ಮೌಪಮ್ಯೇನ ಸರ್ವತ್ರ ಸಮಂ ಪಶ್ಯತಿ ಯೋऽರ್ಜುನ
ಸುಖಂ ವಾ ಯದಿ ವಾ ದುಃಖಂ ಸ ಯೋಗೀ ಪರಮೋ ಮತಃ

ಎಲೈ ಅರ್ಜುನ, ಸುಖವಾಗಲಿ ದುಃಖವಾಗಲಿ, ಎಲ್ಲ ಸಂದರ್ಭಗಳಲ್ಲಿಯೂ ಎಲ್ಲರನ್ನೂ ತನ್ನಂತೆಯೇ ಎಂದು ಯಾರು ಪರಿಗಣಿಸುತ್ತಾರೋ ಅಂಥವನೇ ಮಹಾಯೋಗಿ.

ಆ ಕಡೆ ಯೇಸುಕ್ರಿಸ್ತನೂ ಅದೇ ಮಾತನ್ನೇ ಹೇಳಿದ — ಇತರರು ನಿನ್ನ ವಿಷಯದಲ್ಲಿ ಹೇಗೆ ನಡೆಯಬೇಕೆಂದು ಬಯಸುವೆಯೋ ಅಂತೆಯೇ ನೀನು ಇತರರಿಗೆ ಮಾಡು.

"ತನ್ನಂತೆ ಪರರ ಬಗೆದಂದು ಕೈಲಾಸ ಬಿನ್ನಾಣವಕ್ಕು" ಎಂದ ಸರ್ವಜ್ಞ.

ಆದ್ದರಿಂದ ದಯೆಯೆನ್ನುವುದೇ ಎಲ್ಲ ಧರ್ಮಗಳಲ್ಲೂ ಅಂತರ್ಗತವಾಗಿದೆಯೆಂಬುದು ವಿದಿತವಾಗುತ್ತದೆ.

ದಯಾ ಧರ್ಮ ಕಾ ಮೂಲ್ ಹೈ ಪಾಪ ಮೂಲ್ ಅಭಿಮಾನ್
ತುಲಸೀ ದಯಾ ಕಭೀ ನ ಛಾಡಿಯೇ ಜಬಲಗ್ ಘಟ್ ಮೇ ಪ್ರಾಣ್

ದಯೆಯೇ ಧರ್ಮದ ಮೂಲ. ಅಭಿಮಾನವು ಪಾಪಕ್ಕೆ ಮೂಲ. ಶರೀರದಲ್ಲಿ ಪ್ರಾಣವಿರುವವರೆಗೆ ದಯೆಯನ್ನು ಬಿಡಬೇಡ.

ಹೀಗೆ ಎಲ್ಲ ಧರ್ಮಗಳ ಧ್ವನಿಯೂ ಒಂದೇ. ಇವೆಲ್ಲದರ ಸಮನ್ವಯವೋ ಎಂಬಂತೆ ಬಸವಣ್ಣನವರ ಈ ಸರಳವಾದ ವಚನ ಬರುತ್ತದೆ. ಅದು ಎಷ್ಟು ಸರಳವಾಗಿದೆಯೋ ಅಷ್ಟೇ ಸಾರಭೂತವಾಗಿದೆ:

ದಯವಿಲ್ಲದ ಧರ್ಮವದಾವುದಯ್ಯಾ
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯು
ದಯವೇ ಧರ್ಮದ ಮೂಲವಯ್ಯಾ
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ

ದಯೆಯೇ ಮೂಲಭೂತವಾದ ಅಂಶ. ಅದಿಲ್ಲದಿದ್ದರೆ ಅದು ಧರ್ಮವೇ ಅಲ್ಲ.

ಇತರ ವಚನಕಾರರ ನುಡಿಗಳನ್ನೂ ನೋಡಿ

"ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ ಹಲವು ಪ್ರಾಣಿಯ ಕೊಂದು ನಲಿನಲಿದಾಡುವ. ತನ್ನ ಮನೆಯಲೊಂದು ಶಿಶು ಸತ್ತಡೆ ಅದಕ್ಕೆ ಮರಗುವಂತೆ ಅವನೇಕೆ ಮರುಗನು ? ಜಾಲಗಾರನ ದುಃಖ ಜಗಕ್ಕೆಲ್ಲ ನಗೆಗೆಡೆ, ಇದು ಕಾರಣ ಚನ್ನಮಲ್ಲಿಕಾರ್ಜುನಯ್ಯನ ಭಕ್ತನಾಗಿರ್ದು ಜೀವಹಿಂಸೆಯ ಮಾಡುವ ಮಾದಿಗರನೇನೆಂಬೆನಯ್ಯ ?"—ಎನ್ನುತ್ತಾಳೆ ಅಕ್ಕಮಹಾದೇವಿ.

"ಮಾರಿಯ ಪೂಜಿಸಿ, ಮಸಣಕ್ಕೆ ಹೋಗಿ, ಗೋರಿಗೊಳಿಸಿ ಕುರಿಯ ಕೊರಳನೆ ಕೊಯಿದುಂಬ ಕ್ರೂರಕರ್ಮಿಗಳನವರ ಶಿವಭಕ್ತರೆನ್ನಬಹುದೆ? ಆರಯ್ಯದೆ ಅವರ ಮನೆಯಲುಂಡ ಭಕ್ತನು ಅಘೋರ ನರಕಕ್ಕಿಳಿವ ಕಾಣಾ ರಾಮನಾಥಾ" ಎಂದ ದೇವರದಾಸಿಮಯ್ಯ.

"ಇರಿವುದು ಕಡಿವುದು ಕೊಲುವುದು ಮಲದೇಹಿಗಳಿಗಲ್ಲದೆ ನಿರ್ಮಲದೇಹಿಗಳಿಗುಂಟೆ ?........... ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ" ಎಂದ ಘಟ್ಟಿವಾಳಯ್ಯ.

ಎಲ್ಲರನ್ನೂ ಪ್ರೀತಿಯಿಂದ ಕಾಣಬೇಕೆಂದುಪದೇಶಿಸುವ ಸಂದರ್ಭದಲ್ಲಿ ಬಸವಣ್ಣನವರು "ಏನಿ ಬಂದಿರಿ, ಹದುಳವಿದ್ದಿರೆ ? ಎಂದರೆ ನಿಮ್ಮ ಮೈಸಿರಿ ಹಾರಿಹೋಹುದೆ ? ಕುಳ್ಳಿರೆಂದರೆ ನೆಲ ಕುಳಿಹೋಹುದೆ ? ಒಡನೆ ನುಡಿದರೆ ಶಿರ ಹೊಟ್ಟೆಯೊಡೆವುದೆ ? ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದಡೆ ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ ಕೂಡಲ ಸಂಗಮದೇವನು ?" ಎಂದು ಕೇಳುತ್ತಾರೆ.

'ಅಯ್ಯಾ' ಎಂದಡೆ ಸ್ವರ್ಗ, 'ಎಲವೋ' ಎಂದಡೆ ನರಕ !

ಶತ್ರುವನ್ನೂ ಪ್ರೀತಿಸುವ ಬುದ್ಧಿ ವಚನಕಾರರದು. ಸಿದ್ಧರಾಮ ಹೇಳುತ್ತಾನೆ—"ಆರೇನೆಂದರೂ ಓರಂತಿಪ್ಪುದೇ ಸಮತೆ, ಆರು ಜರಿದರೂ ಅವರೆನ್ನ ಮನದ ಕಾಳಿಕೆಯ ಕಳೆದರೆಂಬುದೇ ಸಮತೆ........., ಕಪಿಲಸಿದ್ಧ ಮಲ್ಲಿಕಾರ್ಜುನ....."

ಬಸವಣ್ಣನವರೂ ಎಂದರು " ಹೊಯಿದವರೆನ್ನ ಹೊರೆದವರೆಂಬೆನು ಬಯಿದವರೆನ್ನ ಬಂಧುಗಳೆಂಬೆನು, ನಿಂದಿಸಿದವರೆನ್ನ ತಾಯಿ ತಂದೆಗಳೆಂಬೆ, ಆಳಿಗೊಂಡವರು ಆಳ್ದರೆಂಬೆ, ಜರಿದವರೆನ್ನ ಜನ್ಮಬಂಧುಗಳೆಂಬೆ, ಕೊಂಡಾಡಿದವರೆನ್ನ ಹೊನ್ನಶೂಲದಲಿಕ್ಕಿದವರು ಕೂಡಲ ಸಂಗಮದೇವಾ !"

ಸತ್ಯ: ನಡೆ, ನುಡಿ ಆಲೋಚನೆಗಳಲ್ಲಿ ಸುಳ್ಳು ಬೆರೆಯಬಾರದು. ನಡೆಯಾಗಲಿ ನುಡಿಯಾಗಲಿ ಆಲೋಚನೆಯಾಗಲಿ ನೇರವಾದುದೂ ಉತ್ತಮವಾದುದೂ ವಿರೋಧವಿಲ್ಲದುದೂ ಆಗಿದ್ದು ಮೂರರಲ್ಲಿಯೂ ಹೊಂದಾಣಿಕೆ ಇರಬೇಕು.

'ಸತ್ಯವೇ ದೇವರು' ಎಂದರು ಮಹಾತ್ಮರು.

' ಹರನೆಂಬುದೇ ಸತ್ಯ, ಸತ್ಯವೆಂಬುದೇ ಹರನು '— ಎಂದು ಸಿದ್ಧಾಂತಿಸಿದ ರಾಘವಾಂಕ.

ಬಸವಣ್ಣನವರು ಹೇಳಿದರು "ದಿಟವೆ ನುಡಿವುದು, ನುಡಿದಂತೆ ನಡೆವುದು. ಹುಸಿಯ ನಡೆದು ತಪ್ಪುವ ಪ್ರಪಂಚಿಯನೊಲ್ಲ ಕೂಡಲ ಸಂಗಮದೇವ"

" ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ, ಹಿಡಿದಿರ್ಪ ಲಿಂಗವು ಘಟಸರ್ಪನಂತೆ ! ನುಡಿಯಲುಬಾರದು, ನಡೆಯಲು ಬಾರದು. ಲಿಂಗದೇವನೆ ದಿವ್ಯವೊ ಅಯ್ಯಾ ! ಬಡವನ ಕೋಪ ಅವುಡಿಗೆ ಮೃತ್ಯುವಾದಂತೆ ಕಡೆದಾಂಟದು ಕಾಣಾ ಕೂಡಲ ಸಂಗಮ ದೇವಾ "

ಒಮ್ಮೆ ತಮ್ಮನ್ನೇ ವಿಮರ್ಶೆ ಮಾಡಿಕೊಂಡು ನುಡಿಯುತ್ತಾರೆ— "ಎನ್ನ ನಡೆಯೊಂದು ಪರಿ. ಎನ್ನ ನುಡಿಯೊಂದು ಪರಿ. ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯಾ. ನುಡಿಗೆ ತಕ್ಕ ನಡೆಯ ಕಂಡಡೆ ಕೂಡಲ ಸಂಗಮದೇವನೊಳಗಿರ್ಪನಯ್ಯಾ"

ತೋಂಟದ ಸಿದ್ಧಲಿಂಗ ಯತಿಯ ಮಾತಿದು—" ಸತ್ಯದಲ್ಲಿ ನಡೆವುದು ಶೀಲ. ಸತ್ಯದಲ್ಲಿ ನುಡಿವುದು ಶೀಲ. ಸಜ್ಜನ ಸದಾಚಾರದಲ್ಲಿ ವರ್ತಿಸಿ ಸತ್ಯವನರಿವುದೇ ಶೀಲ ಕಾಣಿರೋ ಮಹಾಲಿಂಗ ಗುರು ಸಿದ್ಧೇಶ್ವರ ಪ್ರಭುವೇ"

ಇನ್ನೊಮ್ಮೆ ಬಸವಣ್ಣನವರು ಎನ್ನುತ್ತಾರೆ—"ಹಾವಿನ ಬಾಯ ಕಪ್ಪೆ ಹಸಿದು ಹಾರುವ ನೊಣಕ್ಕೆ ಆಸೆ ಮಾಡುವಂತೆ, ಶೂಲವನೇರುವ ಕಳ್ಳ ಹಾಲು ತುಪ್ಪವ ಕುಡಿದು ಮೇಲೇಸು ಕಾಲ ಬದುಕುವನೋ ? ಕೆಡೆವೊಡಲ ನೆಚ್ಚಿ, ಕಡು ಹುಸಿಯನೆ ಹುಸಿದು ಒಡಲ ಹೊರೆವವರ ಕೂಡಲ ಸಂಗಮ ದೇವನೊಲ್ಲ ಕಾಣಿರಣ್ಣಾ"

ಅಸ್ತೇಯ: ಕಳ್ಳತನ ಮಾಡದಿರುವುದು. ಇತರರ ವಸ್ತುವಿಗೆ ಆಸೆಪಡದಿರುವುದು. ಸಲ್ಲದುದನ್ನು ಬಯಸದಿರುವುದು.

"ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ, ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ" ಎಂಬಲ್ಲಿ ಬಸವಣ್ಣನವರು ಮೇಲಿನ ಮೂರೂ ತತ್ವಗಳನ್ನು ಅಳವಡಿಸಿದ್ದಾರೆ.

ಬ್ರಹ್ಮಚರ್ಯ: ದೈಹಿಕವಾಗಿ ಮಾನಸಿಕವಾಗಿ ಮತ್ತು ಮಾತಿನಲ್ಲಿ ಅನಾಚಾರವೆಸಗದೆ ಸಂಯಮದಿಂದಿರುವುದು. ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದು. ಮನಸ್ಸನ್ನು ನಿಗ್ರಹಿಸುವುದು. ಪರವನಿತೆಗೆ ಆಸೆಪಡದಿರುವುದು. ಅಂತರಂಗಶುದ್ಧಿಯನ್ನು ಸಾಧಿಸುವುದು.

ಮನೋನಿಗ್ರಹ ಎಲ್ಲಕ್ಕಿಂತ ಮುಖ್ಯವಾದುದು. ಅದು ಸಾಧಿತವಾದರೆ ಉಳಿದೆಲ್ಲ ತಾನಾಗಿಯೇ ಅದರೊಡನೆ ಸಾಧಿತವಾಗುತ್ತದೆ.

"ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ!"

ಮನವೆಂಬ ಮರ್ಕಟನು ತನುವೆಂಬ ವೃಕ್ಷವನೇರಿ ಇಂದ್ರಿಯಂಗಳೆಂಬ ಶಾಖೆ ಶಾಖೆಗೆ ಹಾರಿ, ವಿಷಯಗಳೆಂಬ ಹಣ್ಣು ಫಲಂಗಳ ಗ್ರಹಿಸಿ, ಭವದತ್ತ ಮುಖ ಮಾಡಿ ಹೋಗುತ್ತಿದೆ ನೋಡಾ. ಈ ಮನವೆಂಬ ಮರ್ಕಟನ ನಿಮ್ಮ ನೆನವೆಂಬ ಪಾಶದಲ್ಲಿ ಕಟ್ಟಿ ಎನ್ನನುಳಿಹಿಕೊಳ್ಳಾ ಅಖಂಡೇಶ್ವರಾ—ಎಂದು ಬೇಡುತ್ತಾನೆ ಷಣ್ಮುಖಸ್ವಾಮಿ.

ಬಸವಣ್ಣನವರು ಹೀಗೆ ಹಂಬಲಿಸಿದರು—

"ಮರವನೇರಿದ ಮರ್ಕಟನಂತೆ ಹಲವು ಕೊಂಬೆಗೆ ಹಾಯುತ್ತಲಿದ್ದೇನೆ. ಬೆಂದ ಮನವ ನಾನೆಂತು ನಂಬುವೆನಯ್ಯಾ ? ಎಂತು ನಚ್ಚುವೆನಯ್ಯಾ ? ಎನ್ನ ತಂದೆ ಕೂಡಲ ಸಂಗಮದೇವನಲ್ಲಿಗೆ ಹೋಗಲೀಯದಯ್ಯಾ.

"ಬೆಲ್ಲವ ತಿಂದ ಕೋಡಗನಂತೆ ಸಿಹಿಯ ನೆನೆಯದಿರಾ ಮನವೇ. ಕಬ್ಬು ತಿಂದ ನರಿಯಂತೆ ಹಿಂದಕ್ಕೆಳಸದಿರಾ ಮನವೇ. ಗಗನವಡರಿದ ಕಾಗೆಯಂತೆ ದೆಸೆದೆಸೆಗೆ ಹಂಬಲಿಸದಿರಾ ಮನವೇ. ಕೂಡಲ ಸಂಗನ ಶರಣರ ಕಂಡು ಲಿಂಗವೆಂದು ನಂಬು ಮನವೇ".

"ಕುಧರವನೇಸು ತೊಳೆದರೆಯೂ ಕೆಸರು ಮಾಬುದೆ ? ಎನ್ನ ಕಾಯದಲುಳ್ಳ ಅವಗುಣಂಗಳ ಕಳೆದು ಕೃಪೆಯ ಮಾಡಯ್ಯ. ಕಂಬಳಿಯಲ್ಲಿ ಕಣಕವ ನಾದಿದಂತೆ ಕಾಣಿರೆ ಎನ್ನ ಮನ, ಕೂಡಲ ಸಂಗಮದೇವ, ನಿಮಗೆ ಶರಣೆಂದು ಶುದ್ಧ ಕಾಣಯ್ಯ".

"ಕೊಲ್ಲೆನಯ್ಯಾ ಪ್ರಾಣಿಗಳ, ಮೆಲ್ಲೆನಯ್ಯಾ ಬಾಯಿಚ್ಚೆಗೆ, ಒಲ್ಲೆನಯ್ಯಾ ಪರಸತಿಯರ ಸಂಗವ, ಬಲ್ಲೆನಯ್ಯಾ ಮುಂದೆ ತೊಡಕುಂಟೆಂಬುದ ! ಬಳ್ಳದ ಬಾಯಂತೆ ಒಂದೇ ಮನವ ಮಾಡಿ ನಿಲ್ಲೆಂದು ನಿಲ್ಲಿಸಯ್ಯಾ ಕೂಡಲ ಸಂಗಮದೇವಾ".

ಹೊನ್ನು ಹೆಣ್ಣುಗಳು ಮನಸ್ಸನ್ನು ಕೆಡಿಸುವ ಪ್ರಬಲ ಶತ್ರುಗಳು. ಆದುದರಿಂದ "ಹರಿವ ಹಾವಿಂಗಂಜೆ, ಉರಿವ ನಾಲಿಗೆಗಂಜೆ, ಸುರಗಿಯ ಮೊನೆಗಂಜೆ ! ಒಂದಕ್ಕಂಜುವೆ, ಒಂದಕ್ಕಳುಕುವೆ; ಪರಸ್ತ್ರೀ ಪರಧನವೆಂಬೀ ಜೂಬಿಗಂಜುವೆ ! ಮುನ್ನಂಜದ ರಾವಣನೇ ವಿಧಿಯಾದ ? ಅಂಜುವೆನಯ್ಯಾ ಕೂಡಲ ಸಂಗಮದೇವಾ " ಎಂದರು.

" ಮೊಲೆ ಮುಡಿ ಮುದ್ದು ಮುಖದ ಅಸಿಯ ನಡುವಿನವಳ ಕಂಡಡೆ ನಾನು ಮನಸೊಳಗಳು ಕದಿಪ್ಪೆನೆ ಅಯ್ಯ ? ತನುವಿನ ಮೇಲೆ ಬ್ರಹ್ಮಚರ್ಯತ್ವವಳವಟ್ಟರೇನು, ಮನದ ಮೇಲೆ ಬ್ರಹ್ಮಚರ್ಯತ್ವವಳವಡದನ್ನಕ್ಕ ? ಸಕಳೇಶ್ವರ ದೇವನೇನರ್ಧನಾರಿಯಲ್ಲವೆ ? ಎನ್ನುತ್ತಾನೆ ಸಂಕಳೇಶ ಮಾದರಸ.

"ಬ್ರಹ್ಮದ ಮಾತನಾಡಿ ಕನ್ನೆಯರ ಕಾಲದೆಸೆಯಲ್ಲಿ ಕುಳಿತಲ್ಲಿ ಪರಬೊಮ್ಮದ ಮಾತು ಅಲ್ಲಿ ನಿಂದಿತ್ತೆಂದನಂಬಿಗ ಚೌಡಯ್ಯ" !

"ಶಿವಪೂಜೆ ಎತ್ತ, ವಿಷಯದ ಸವಿ ಎತ್ತ ? ಆ ವಿಷಯದ ಸವಿ ತಲೆಗೇರಿ, ಶಿವಪೂಜೆಯ ಬಿಟ್ಟು ವೇಶಿಯರ ಎಂಜಲ ಹೇಸದೆ ತಿಂಬ ದ್ರೋಹಿಗಳನೇನೆಂಬೆ ರಾಮನಾಥಾ" ಎಂದು ಕೇಳುತ್ತಾನೆ ದೇವರದಾಸಿಮಯ್ಯ.

ಬ್ರಹ್ಮಚರ್ಯಕ್ಕೆ ಸಂಬಂಧವಾದ ಮದ್ದೆಂದರೆ ಬಸವಣ್ಣನವರು ಹೇಳುವಂತೆ "ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ನಿಮ್ಮ ಮೂರುತಿ ತುಂಬಿ, ಮನದಲ್ಲಿ ನಿಮ್ಮ ನೆನಹು ತುಂಬಿ, ಕಿವಿಯಲ್ಲಿ ನಿಮ್ಮ ಕೀರುತಿ ತುಂಬಿ, ಕೂಡಲ ಸಂಗಮದೇವಾ, ನಿಮ್ಮ ಚರಣ ಕಮಲದಲಾನು ತುಂಬಿ !"

ಅಪರಿಗ್ರಹ: ತನ್ನ ಬದುಕಿಗೆ ಅತ್ಯವಶ್ಯವಾಗಿ ಎಷ್ಟು ಬೇಕೋ ಅಷ್ಟನ್ನಲ್ಲದೆ ಹೆಚ್ಚೇನನ್ನೂ ಇತರರಿಂದ ಪಡೆಯಲೂಬಾರದು ತನ್ನಲ್ಲಿ ಉಳಿಸಿಕೊಳ್ಳಲೂಬಾರದು.

"ಮಾಡಿ ನೀಡಿ ಲಿಂಗವ ಪೂಜಿಸಿಹೆವೆಂಬರು, ನೀವೆಲ್ಲ ಕೇಳಿರಣ್ಣಾ ! ಹಾಗದ ಕೆರಹ ಹೊರಗೆ ಕಳೆದು ದೇಗುಲಕ್ಕೆ ಹೋಗಿ ನಮಸ್ಕಾರ ಮಾಡುವನಂತೆ, ತನ್ನ ಕೆರಹಿನ ಧ್ಯಾನವಲ್ಲದೆ ದೇವರ ಧ್ಯಾನವಿಲ್ಲ ! ಧನವನಿರಿಸದಿರಾ, ಇರಿಸಿದರೆ ಭವ ಬಪ್ಪುದು ತಪ್ಪದು. ಕೂಡಲ ಸಂಗನ ಶರಣರಿಗೆ ಸವೆಸಲೇಬೇಕು."

"ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ, ಇಂದಿಂಗೆ ನಾಳಿಂಗೆ ಬೇಕೆಂದೆನಾದರೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ. ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ ಕೂಡಲ ಸಂಗಮದೇವಾ"- ಎಂದರು ಬಸವಣ್ಣನವರು.

ಇನ್ನು ವೈದಿಕರು ಹೇಳುವ "ನಿಯಮ"ಗಳಲ್ಲಿ ದೇಹ ಮನಸ್ಸುಗಳ ಸ್ವಚ್ಛತೆ ಪರಿಶುದ್ಧತೆಗಳೇ **ಶೌಚ,** ದುರಾಶೆಯಿಲ್ಲದೆ ಇದ್ದುದರಲ್ಲಿ ತೃಪ್ತಿ ಪ್ರಸನ್ನತೆಯನ್ನು ಹೊಂದಿರುವುದೇ **ಸಂತೋಷ,** ಸೇವೆ, ಮನಸ್ಸು ಮಾತುಗಳ ಸಂಯಮವೇ ತಪಸ್ಸು, ಪವಿತ್ರ ಗ್ರಂಥಗಳ ಅಧ್ಯಯನ, ಜಪ ತಪ, ಪ್ರಾರ್ಥನೆ ಇತ್ಯಾದಿಗಳೇ **ಸ್ವಾಧ್ಯಾಯ,** ಕರ್ಮಫಲವನ್ನು ಮಾತ್ರವಲ್ಲದೆ ತನ್ನನ್ನೇ ಈಶ್ವರನಿಗೆ ಶರಣಾಗಿಸುವುದೇ **ಈಶ್ವರಪ್ರಣಿಧಾನ** ಇವುಗಳೆಲ್ಲ ವಚನಕಾರರು ಅನುಷ್ಠಾನ ಮಾಡಿದ ಅನಿವಾರ್ಯ ಅಂಗಗಳು. ಅವನ್ನು ಕುರಿತ ವಚನಗಳನ್ನು ಎಷ್ಟಾದರೂ ಉದಾಹರಿಸಬಹುದು.

ಈ ಮೇಲಿನ ಹತ್ತು ತತ್ವಗಳೂ ವಿಶ್ವದ ಎಲ್ಲ ಧರ್ಮಗಳಿಗೂ ಅಡಿಪಾಯ. ಆ ತತ್ತ್ವಗಳನ್ನು ವೀರಶೈವ ಧರ್ಮ ತನ್ನ ಉಡಿಯಲ್ಲಿ ಹಾಕಿಕೊಂಡಿದೆಯೆಂಬುದಷ್ಟೇ ಅಲ್ಲ. ಆ ಧರ್ಮ ಈ ಧರ್ಮ, ಆ ದೇವರು ಈ ದೇವರು, ಆ ಜಾತಿ ಈ ಜಾತಿ ಎಂಬ ಭೇದಭಾವವಿಲ್ಲದೆ 'ಸರ್ವೇ ಜನಾಃ ಸುಖಿನೋ ಭವನ್ತು' ಎಂಬಂತೆ ಸರ್ವೋದಯವನ್ನು ಸಾಧಿಸಿರುವುದು ಅದರ ವೈಶಿಷ್ಟ್ಯ.

ಪರಮ ಪತಿವ್ರತೆಗೆ ಗಂಡನೊಬ್ಬ. ಅಂತೆಯೇ ದೇವನೊಬ್ಬ ನಾಮ ಹಲವು !

"ಜಲವೆನಲೇನು ನೀರೆನಲೇನು ?
ಸಂಸ್ಕೃತವೇನು ಕನ್ನಡವೇನು ?
ಬಾಯಾರಿದ ಮಾನವ ತಾ ಕುಡಿಯಲು
ತೃಷ್ಣೆಯು ನಿಲ್ಲುವುದಿಲ್ಲೇನು ?

ಎಲ್ಲ ನದಿಗಳೂ ಕಡಲಿಗೆ ಕೊನೆಗೆ
ಎಲ್ಲ ದಾರಿಗಳು ಒಂದೇ ಮನೆಗೆ"

(ಕುವೆಂಪು)

"ನೆಲನೊಂದೇ ಹೊಲಗೇರಿ, ಶಿವಾಲಯಕ್ಕೆ. ಜಲವೊಂದೇ ಶೌಚಾಚಮನಕ್ಕೆ. ಕುಲವೊಂದೇ ತನ್ನ ತಾನರಿದವಂಗೆ. ಫಲವೊಂದೇ ದರ್ಶನ ಮುಕ್ತಿಗೆ. ನಿಲವು ಒಂದೇ ಕೂಡಲ ಸಂಗಮದೇವಾ ನಿಮ್ಮನರಿದಂಗೆ.

"ಊರೊಳಗಣ ಬಯಲು, ಊರ ಹೊರಗಣ ಬಯಲು ಎಂದುಂಟೇ ? ಊರೊಳಗಣ ಬ್ರಾಹ್ಮಣ ಬಯಲು, ಊರ ಹೊರಗೆ ಹೊಲೆ ಬಯಲು ಎಂದುಂಟೇ ? ಎಲ್ಲಿ ನೋಡಿದೊಡೆ ಬಯಲೊಂದೆ ಭಿತ್ತಿಯಿಂದ ಒಳಹೊರಗೆಂಬ ನಾಮವೈಸೆ. ಎಲ್ಲಿ ನೋಡಿದಡೆ ಕರೆದಡೆ 'ಓ'ಎಂಬಾತನೇ ಬೀಡಾಡಿ!"

ಕ್ರಾಂತಿ ಪಥದ ಮೂಲ ಮಂತ್ರಗಳು

ಲೇಖಕರು:
ಮಲ್ಲಿಕಾರ್ಜುನ ಶಿ. ಲಕ್ಕೆ
ಕಲಬುರ್ಗಿ

ಒಳ್ಳೆಯ ಗುಣಗಳು ಯಾರಲ್ಲಿಯೆ ಇರಲಿ–ಅಂಥವರು ಒಂದು ದೇಶದ, ಒಂದು ಜನಾಂಗದ ವ್ಯಕ್ತಿಯಲ್ಲ; ಅವರು ಲೋಕ ವಂದ್ಯರು. ಮಾನವ ಕುಲಕೋಟಿಯೆಲ್ಲ ಶಿರಬಾಗಿ ನಮಿಸುವ ಮಹಾತ್ಮರು. ಅಂಥ ಜಾಗತಿಕ ಅನರ್ಘ್ಯ ರತ್ನಗಳಲ್ಲಿ ಮಹಾತ್ಮಾ ಬಸವಣ್ಣನವರೂ ಒಬ್ಬರು. ಹನ್ನೆರಡನೆಯ ಶತಮಾನದಲ್ಲಿ ಕನ್ನಡ ನಾಡಿನಲ್ಲಿ ಬಾಳಿಬೆಳಗಿದವರು.

ಬಸವಣ್ಣನವರು ಭಕ್ತಿಭಾಂಡಾರಿಗಳು. ಬಾಹ್ಯಾಡಂಬರಕ್ಕೆ ಸೇರದ 'ಅಂತರಂಗ ಶುದ್ಧಿಯೆ ಬಹಿರಂಗಶುದ್ಧಿ'ಯೆಂದು ಸಾರುವ ಪರಿಶುದ್ಧ ಹೃದಯಿಗಳು. 'ಅಯ್ಯಾ ಎಂದೊಡೆ ಸ್ವರ್ಗ, ಎಲವೋ ಎಂದೊಡೆ ನರಕ' ಎನ್ನುವ ಸುಸಂಸ್ಕೃತ ಮಾನವರು. 'ಇವನಾರವ ಇವನಾರವನೆಂದೆನಿಸದ ಇವ ತನ್ನ ಮನೆಯ ಮಗ' ಎನ್ನುವ ವಿಶಾಲ ಹೃದಯಿಗಳು. ಲೋಕದ ಡೊಂಕ ತಿದ್ದುವ ಮೊದಲು ತನ್ನ ಡೊಂಕ ತಿದ್ದಿಕೊಂಡ ಆತ್ಮಪರಿಶೋಧಕರು. ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಅಹಿಂಸಾ ವಾದಿಗಳು. ಧನಕ್ಕೆ ಬೆಲೆ ಕೊಡದೆ ಗುಣಕ್ಕೆ ಬೆಲೆ ಕೊಡುವ ಗುಣಾಢ್ಯರು. ಇಂತಹ ಘನಮನ ಸಂಪನ್ನರೆನಿಸಿದ, ಮಹಾವ್ಯಕ್ತಿತ್ವದ ಬಸವಣ್ಣನವರು ಪ್ರಪಂಚದಲ್ಲಿದ್ದೂ ಪಾರಮಾರ್ಥಿಕ ಜೀವನ ಸಾಗಿಸಿದ ಮಹಿಮಾವಂತರು. ಆಧ್ಯಾತ್ಮಿಕ ಜಗತ್ತಿನಲ್ಲಿ ತಾವೇ ಸತಿಯಾಗಿ ಸಂಗಯ್ಯನನ್ನು ಪತಿಯನ್ನಾಗಿ ಅರಸಿ, ಪೂಜಿಸಿ, ಪ್ರಾರ್ಥಿಸಿ ಲಿಂಗಾಂಗ ಸಾಮರಸ್ಯದ ಸಿದ್ಧಿಯನ್ನು ಪಡೆದ ವೀರಶೈವ ಧರ್ಮದ ಮಹಾ ಪುರುಷರು. ಸಮಾಜದಲ್ಲಿ ಬೇರು ಬಿಟ್ಟಿದ್ದ ಹಳೆಯ ಕೊಳೆಯನ್ನೆಲ್ಲಾ ಸಲೀಲವಾಗಿ ಹೊರಹಾಕಿ, ಕಿತ್ತೆಸೆದು ಹೊಸ ಸಮಾಜ ಕಟ್ಟಿದ ಕ್ರಾಂತಿ ಪುರುಷರು. ಆ ಕ್ರಾಂತಿಗೆ ಅವರು ಕೈಕೊಂಡ ಸ್ತ್ರೀಸ್ವಾತಂತ್ರ್ಯ, ಕಾಯಕ ತತ್ತ್ವ ಹಾಗೂ ಅನುಭವ ಮಂಟಪಗಳು ಮೂಲ ಮಂತ್ರಗಳಾಗಿದ್ದವು.

ಸ್ತ್ರೀ ಸ್ವಾತಂತ್ರ್ಯ :

ಸಮಾಜದ ಸರ್ವತೋಮುಖವಾದ ಏಳ್ಗೆಯಾಗಬೇಕಾದರೆ ಮಗುವಿಗೆ ಮೊದಲ ಗುರುವಾಗುವ ಸ್ತ್ರೀಗೆ ಒಳ್ಳೆಯ ಶಿಕ್ಷಣ ಸಂಸ್ಕಾರ ಮೂಡಿಬರಬೇಕು. ಅಂದಾಗ ಮಕ್ಕಳಿಗೆ ಯೋಗ್ಯ ಶಿಕ್ಷಣ, ಮಾರ್ಗದರ್ಶನ ದೊರಕಬಲ್ಲದು. ಅದನ್ನರಿತು ಬಸವಣ್ಣನವರು ಅಂದು ಸ್ತ್ರೀಗಿದ್ದ ದಾಸ್ಯಶೃಂಖಲೆಯನ್ನು ಬಿಡಿಸಿ ಸ್ತ್ರೀಯರಿಗೂ ಪಾರಮಾರ್ಥಿಕ ಜ್ಞಾನ ದೊರಕುವಂತೆ ಏರ್ಪಾಟುಮಾಡಿ ಸುಸಂಸ್ಕೃತ ಸಮಾಜ ರಚನೆಗೆ ಕಾರಣೀಭೂತರಾದರು- 'ಪರಸ್ತ್ರೀಯರನ್ನು ಮಹಾದೇವಿ' ಎಂದು ಕಂಡ ಅವರ ನಿಲವಂತೂ ಬಸವಣ್ಣನವರು ಸ್ತ್ರೀಲೋಕಕ್ಕೆ ನೀಡಿದ ಮಹೋನ್ನತ ಕೊಡುಗೆಯಾಗಿದೆ. ಸ್ತ್ರೀಯರೆಂದರೆ ಕೇವಲ ಭೋಗ್ಯವಸ್ತುವಲ್ಲ, ಅವರೂ ನಮ್ಮಂತೆ ಸ್ವತಂತ್ರರು, ಧೀರರು, ಧೀಮಂತರು ಎಂದು ಬಗೆದು ಅವರಿಗೆ ಧಾರ್ಮಿಕ ಸ್ವಾತಂತ್ರ್ಯ ನೀಡಿ ಸಮಾಜದಲ್ಲಿ ಅವರಿಗೂ ಸಮಾನ ಸ್ಥಾನ ಕಲ್ಪಿಸಿಕೊಟ್ಟರು. ತಾವು ಸ್ಥಾಪಿಸಿದ ಶಿವಾನುಭವ ಮಂಟಪದಲ್ಲಿ ಅವರಿಗೂ ಪ್ರವೇಶ ನೀಡಿ ಆಧ್ಯಾತ್ಮಿಕ ಸಾಧನೆಗೆ ದಾರಿ ತೋರಿಸಿಕೊಟ್ಟರು. ಅಂದು ಆ ಮಾರ್ಗದಲ್ಲಿ ನಡೆದು ಶಿವಯೋಗಿಣಿಯರಾಗಿ, ಲಿಂಗಾಂಗ ಸಾಮರಸ್ಯದ ಸಿದ್ಧಿಯನ್ನು ಸವಿದವರಲ್ಲಿ ಮಹಾದೇವಿಯಕ್ಕ, ಲಕ್ಕಮ್ಮ, ಲಿಂಗಮ್ಮ, ನೀಲಮ್ಮ, ನಾಗಮ್ಮ, ಮೊದಲಾದವರು ಪ್ರಮುಖರಾದವರು. ಅವರೂ ಶರಣರಂತೆ ಶಿವಾನುಭಾವಿಗಳು. ಅವರ ಈ ಸಾಧನೆ, ಸಾಧನೆಯಲ್ಲಿದ್ದಾಗಿನ ಅವರ ಅನುಭವ–ಅವರ ನುಡಿಮುತ್ತುಗಳಲ್ಲಿ ಹಾಸುಹೊಕ್ಕಾಗಿದೆ.

ಗಂಡು ಮತ್ತು ಹೆಣ್ಣು ಇವೆರಡೂ ಸಮಾಜದ ಎರಡು ಗಾಲಿಗಳು. ಅವೆರಡೂ ಗಾಲಿಗಳು ಸಮವಾಗಿದ್ದು, ಗಟ್ಟಿಮುಟ್ಟಾಗಿದ್ದರೆ ಮಾತ್ರ ಅಂಥ ಸಮಾಜ ಭದ್ರಸಮಾಜವಾಗುವುದು. ಇದನ್ನರಿತ ಬಸವಣ್ಣನವರು ಸ್ತ್ರೀಯರಿಗಿದ್ದ ಕೇವಲ ಅಡಿಗೆಮನೆಯಸ್ವಾತಂತ್ರ್ಯದ ವ್ಯಾಪ್ತಿಯನ್ನು ಜೀವನದ ಬಹು ಮಹತ್ವದ ಕಾರ್ಯ ಕ್ಷೇತ್ರಕ್ಕೆ ಹಬ್ಬಿಸಿದರು. ಇಂದು ಜೀವನದ ವಿವಿಧ ರಂಗಗಳಲ್ಲೆಲ್ಲಾ ಆವಳಿಗೀಗ ಸಮಾನ ಹಕ್ಕು ಇದ್ದುದನ್ನು ಕಾಣಬಹುದಾಗಿದೆ. ಅಲ್ಲೆಲ್ಲ ಅವಳಿಗೆ ಯಶಸ್ಸು ದೊರೆಯಬೇಕಾದರೆ ಅವಳು ತನ್ನ ಸ್ತ್ರೀ ಧರ್ಮಕ್ಕೆ ಕಲಂಕ ಹಚ್ಚಿಕೊಳ್ಳಬಾರದು. ಅಂದಾಗ ಅಂಥ ಸ್ತ್ರೀ ಸಾಹಸದ ಕಿಡಿಯಾಗಿ, ತಾಳ್ಮೆಯ ಮೂರ್ತಿಯಾಗಿ, ಸಾತ್ವಿಕ ರೂಪದ ಸುಂದರಿಯಾಗಿ ಕಂಗೊಳಿಸಬಹುದು. ಅಂಥ ವ್ಯಕ್ತಿತ್ವ ನಿರ್ಮಿಸಿಕೊಳ್ಳುವುದಕ್ಕೆ ಪುರುಷ ಸಮಾಜವೂ ಸಹಕಾರ ನೀಡಬೇಕಾದುದು ಅವರ ಧರ್ಮ. ಅಂದಾಗ ಸ್ತ್ರೀಯರ ಉನ್ನತಿಯೆ ರಾಷ್ಟ್ರದ ಉನ್ನತಿ ಎಂಬ ಉಕ್ತಿ–ಸಿದ್ಧಿಯನ್ನು ಪಡೆಯಬಲ್ಲದು. ಅಂತರರಾಷ್ಟ್ರೀಯ ಮಹಿಳಾ ವರ್ಷದ ಈ ಶುಭ ಪ್ರಸಂಗದಲ್ಲಿ ನಮ್ಮ ಸಹೋದರಿಯರಿಗೆಲ್ಲ ಸಚ್ಚಾರಿತ್ರ ವುಳ್ಳವರಾಗಿ ಬಾಳುವ ಶಕ್ತಿಯನ್ನು ಪರಮಾತ್ಮ ದಯಪಾಲಿಸಲೆಂದು ಪ್ರಾರ್ಥಿಸಿಕೊಳ್ಳಬೇಕಾದುದು ಯಥಾ ಯೋಗ್ಯವಾದುದು.

ಹಾಗೆಯೆ ಪುರುಷರೂ ಕೂಡ ಶೀಲವಂತರಾಗಬೇಕು. ಬಸವಣ್ಣನವರು ನಡೆದ, ನುಡಿದ ದಾರಿ ನಮಗೂ ದಾರಿದೀಪವಾಗಬೇಕು. 'ಪರವಧುವನು ಮಹಾದೇವಿ ಎಂದು ಕಾಣುವ', 'ಪರಸ್ತ್ರೀ ಪರಧನವೆಂಬ ಜೂಬಿಂಗಂಜುವ', 'ಪರಸ್ತ್ರೀಯರ ಬೇಟಕ್ಕೆಳಸದ', 'ತುಡುಗುಣಿತನದಲ್ಲಿ ಪರವಧುವ ನೋಡದ' ಪರಿಶುದ್ಧ ಮನಸ್ಸು ಗಂಡಿನದಾಗಬೇಕು. ಅಂದಾಗ ಹೆಣ್ಣಿಗೆ ಮತ್ತು ಸಮಾಜಕ್ಕೆ ನೆಮ್ಮದಿ. ಬಸವಣ್ಣನವರು ಅಂದು ಇಂತಹ ಕ್ರಾಂತಿಯ ಕಹಳೆಯನ್ನೂದಿದರಿಂದಲೆ–ಸ್ತ್ರೀ ಪುರುಷರಲ್ಲಿ ಸದ್ಭಾವನೆ ಬೆಳೆದು ಸಮಾಜ ಉತ್ಕರ್ಷ

ಹೊಂದಿದ್ದನ್ನು ಅರಿಯಬಹುದಾಗಿದೆ. 'ಪರವಧುವ ಬಿಟ್ಟಾಗವೆ ಗುರುವಿನ ಇರವು ಸಾಧ್ಯ' 'ಪರಧನ ಬಿಟ್ಟಾಗವೆ ಲಿಂಗದ ಇರವು' ಎಂಬ ನುಡಿಮುತ್ತನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಸಿದ್ಧರಾಮ ಶಿವಯೋಗಿಗಳು ಸಾರಿದಂತೆ – 'ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ, ಹೆಣ್ಣು ಪ್ರತ್ಯಕ್ಷ ಕಪಿಲ ಸಿದ್ಧಮಲ್ಲಿಕಾರ್ಜುನ' ಎಂಬುದನ್ನು ಈಗಲೂ ಅರಿತು ಹೆಣ್ಣಿಗೆ ಗೌರವ ಸಲ್ಲಿಸುವ ಭಾವನೆ ಗಂಡಿಗೆ ಮೂಡಿಬರಬೇಕು.

ಕಾಯಕ ತತ್ತ್ವ:

ಸದೃಢಕಾಯದ ಮನುಷ್ಯನು ಒಂದಿಲ್ಲ ಒಂದು ಕಾಯಕ ಮಾಡಲೇಬೇಕು. ಪ್ರಪಂಚದಲ್ಲಿ ಹುಟ್ಟಿ ಬಂದ ಮೇಲೆ ವಯಸ್ಸಿಗೆ ಬಂದಾಗಲಂತೂ ತನ್ನ ಹಾಗೂ ತನ್ನವರ ಹೊಟ್ಟೆ ಹೊರೆಯುವುದಕ್ಕಾಗಿ ಆತ ಉದ್ಯೋಗವೊಂದನ್ನು ಕೈಗೊಳ್ಳಲೇಬೇಕು. ಅದು–ಕಾಯಕ ತತ್ತ್ವಕ್ಕೆ ಅಂಟಿಕೊಂಡಿದ್ದಿರಬೇಕು. ಅಂದರೆ ಸತ್ಯ, ಶುದ್ಧ, ನಿಸ್ವಾರ್ಥಪರ ಉದ್ಯೋಗ ಆದಾಗಿರಬೇಕು. ಇಂತಹ ಉದ್ಯೋಗವೆ ಬಸವಣ್ಣನವರು ಸಾರಿದ ಕಾಯಕ.

ಸ್ವಂತ ಉದ್ಯೋಗವಿಲ್ಲದೆ ಉಪಜೀವಿಸುವುದಾಗಲಿ ಅಥವಾ ಪರರಿಂದ ಬೇಡಿ ತಿನ್ನುವುದಾಗಲಿ ಮಹಾಪಾಪವೆಂದು ಪರಿಗಣಿಸಿದ ಬಸವಣ್ಣನವರು ಪ್ರತಿಯೊಬ್ಬರಿಗೂ, ಸದಾಚಾರದ ಸದ್ವರ್ತನೆಯ ಉದ್ಯೋಗ ಅಂದರೆ ಕಾಯಕ ಅವಶ್ಯ ಎಂದು ಸಾರಿ ಅದನ್ನು ಕಾರ್ಯರೂಪದಲ್ಲಿ ತರುವಂತೆ ಮಾಡಿದರು. ಜನ ಸ್ವಾಗತಿಸಿ, ಪ್ರಾಮಾಣಿಕತನಕ್ಕೆ ಕುರುಹಾದ ದುಡಿದುಣ್ಣುವ ಕಾಯಕತತ್ತ್ವವನ್ನು ಪರಿಪಾಲಿಸಹತ್ತಿದರು. ಆದರಿಂದಾಗಿ ಜನತೆಯ ಆಲಸ್ಯ ಮಾಯವಾಯಿತು. 'ಉದ್ಯೋಗಂ ಪುರುಷಸ್ಯ ಲಕ್ಷಣಂ' ಎಂದಂತೆ ಕಾರ್ಯತತ್ಪರರಾದ ಜನರಿಂದ ನಾಡೆಲ್ಲ ತುಂಬಿದುದರಿಂದ ನಿರುದ್ಯೋಗ ಸಮಸ್ಯೆ ತಲೆಯೆತ್ತಲಿಲ್ಲ. ಪ್ರತಿಯೊಬ್ಬರೂ ಉದ್ಯೋಗಶೀಲರಾದುದರಿಂದ ರಾಜ್ಯದ ಬೊಕ್ಕಸವೂ ತುಂಬಿತು. ನಾಡ ಸಂಪತ್ತು ಹೆಚ್ಚಿತು. ಇದರಿಂದ ಬಸವಣ್ಣನವರಿಗೆ ಹೆಚ್ಚಿನ ಶಕ್ತಿ ಬಂದಂತಾಗಿ ನಿಮ್ಮ ಸೊಮ್ಮು ನಿಮಗೆ ಸಲ್ಲಿಸುವೆನೆಂದಂದು ಜನತೆಯ ಉದ್ಧಾರಕ್ಕಾಗಿ ನಡುಕಟ್ಟಿ ನಿಂತರು. 'ಹೊಲೆ ಹೊಲೆಯರ ಮನೆಯ ಹೊಕ್ಕು. ದಡೆಯೂ ಸಲೆಕೈಕೂಲಿಯ ಮಾಡಿಯಾದಡೆಯೂ ನಿಮ್ಮ ನಿಲವಿಂಗೆ ಕುದಿವೆನಲ್ಲದೆ ಎನ್ನ ಒಡಲವಸರಕ್ಕೆ ಕುದಿದೆನಾದಡೆ ತಲೆದಂಡ ! ಕೂಡಲ ಸಂಗಮದೇವಾ ' ಎಂದು ಸಾರಿದರು. 'ಗುರುವಾದರೂ ಕಾಯಕದಿಂದವೆ ಜೀವನ್ಮುಕ್ತಿ', 'ಲಿಂಗವಾದರೂ ಕಾಯಕದಿಂದವೆ ತನ್ನ ವೇಷದ ಪಾಶ ಹರಿವುದು ' ಎಂದೆಲ್ಲ ಶರಣರೂ ಸಾರಿದರು. 'ನಾನಾವ ಕರ್ಮಂಗಳ ಮಾಡಿದಡೆಯು ಆ ಕರ್ಮಫಲ ಭೋಗವ ನೀ ಕೊಡುವೆ ಎಂಬುದ ನಾನು ಬಲ್ಲೆನು' ಎಂದ ಬಸವಣ್ಣನವರು— ಕೂಡಲ ಸಂಗನ ಆಣೆಯಿಟ್ಟು ' ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದು ಶ್ರೀಯ ಮಾಡೆನು' ಎಂದರು. ಹಾಗೆಯೇ ಒಕ್ಕಲುತನ ಸುಧಾರಣೆ ಮಾಡಿ ನೀರಾವರಿ ಯೋಜನೆಗಳನ್ನು ಕೈಕೊಂಡು ಬೊಕ್ಕಸಕ್ಕೆ ಬಂದ ಹಣವನ್ನು ಈ ಯೋಜನೆಯಲ್ಲಿ ವಿನಿಯೋಗಿಸಹತ್ತಿದರು. ಜನತೆ ಸಂತುಷ್ಟವಾಗಿ ಇನ್ನೂ ದುಡಿಯಹತ್ತಿತು.

ಪ್ರಾಮಾಣಿಕತನದಿಂದ ಪರಮ ಐಶ್ವರ್ಯವಂತರಾಗಿ ದೇಶದ ಅಭಿವೃದ್ಧಿಗೆ ಒಕ್ಕೊರಲಿನಿಂದ ಕಾಯಕನಿರತರಾದರು.

ಈ ಕಾಯಕ ನಿರತ ವ್ಯಕ್ತಿಗಳಲ್ಲಿ ಮೇಲು-ಕೀಳುಗಳಿಲ್ಲ. ಜಾತಿಭೇದಗಳಿಲ್ಲ, ಬಡವ-ಶ್ರೀಮಂತರೆಂಬ ಭಿನ್ನಭಾವವಿಲ್ಲ. ಎಲ್ಲರೂ ಸರಿಸಮಾನರು. ಪಾದರಕ್ಷೆಗಳನ್ನು ತಯಾರಿಸುವ ಚಮ್ಮಗಾರ ಕಾಯಕ ನಿರತನಾದಲ್ಲಿ ಅಂತಹ ಭಕ್ತ ಶಿವಭಕ್ತ, ಉಚ್ಛ ಕುಲದವನು ಎಂದು ಬಸವಣ್ಣನವರು ಸಾರಿದರು. ಸಾರಿದುದಷ್ಟೇ ಅಲ್ಲ-ಅದನ್ನು ಕಾರ್ಯರೂಪಕ್ಕೂ ತಂದು ನಿಲ್ಲಿಸಿದರು. ಶಿವಭಕ್ತರೆಲ್ಲರದೊಂದು ಕುಲ ಎಂದಂದು ಅವರಲ್ಲಿ ರಕ್ತಸಂಬಂಧಕ್ಕೂ ಎಡೆಮಾಡಿಕೊಟ್ಟರು. 'ಕಾಗೆ ವ್ಯಷ್ಟಿಸುವ ಹೊಂಗಳಶವಾಗುವುದಕ್ಕಿಂತ ಒಡೆಯರು ಮೆಟ್ಟುವ ಚಮ್ಮಾವುಗೆಯಾಗುವುದು ಲೇಸೆಂದು' ಹಾಡಿ ಹರಸಿದರು. 'ಕೊಲುವವನೆ ಮಾದಿಗ ಹೊಲಸು ತಿಂಬುವವನೇ ಹೊಲೆಯ' ಎಂದರು. 'ದಯವಿಲ್ಲದ ಧರ್ಮವದೇವುದಯ್ಯಾ' ಎಂದುದು 'ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ' ಎಂದು ಸಂದೇಶ ನೀಡಿದರು.ಅಸ್ಪೃಶ್ಯರನ್ನೂ ಶಿವಭಕ್ತರನ್ನಾಗಿ ಸಂಸ್ಕರಿಸಿದರು. ಕೀಳು ಕಾಯಕದವ ಹೊಲೆಯನಲ್ಲ, ಕೊಲ್ಲುವವ, ಹೊಲಸು ತಿಂಬುವವ ಹೊಲೆಯ ಎಂದರು. ಇದನ್ನರಿತ, ಸಂಪ್ರದಾಯದ ಕೊಳೆಯಲ್ಲಿ ಹೊರಳಾಡುವ ಸನಾತನಿಗಳು ಸಿಡಿದೆದ್ದರು. ತತ್ತ್ವ ತಿಳಿಯದೆ ಏನೇನೋ ಕುಟಿಲ ಕಾರಸ್ಥಾನ ನಡೆಸಿ-ಬಿಜ್ಜಳನ ಕಿವಿಯೂದಿದರು. ನೊಂದ ಬಸವಣ್ಣ-ಇನ್ನಿಲ್ಲವಾದರು. ಈ ಕೊಳೆ ಪೂರ್ಣ ಕಿತ್ತುಹೋಗದೆ ರಕ್ತಗತವಾಗಿ ಇಂದಿನವರೆಗೂ ಉಳಿದುಬಂದಿದೆ. ಮಹಾತ್ಮಾ ಗಾಂಧೀಜಿಯವರೂ ಕೂಡ ಆ ಉದ್ಧಾರವನ್ನೇ ಮುಂದುವರಿಸಿ ಹೆಣಗಿದರೂ ಇನ್ನೂ ಇಲ್ಲವೆಂದಿಲ್ಲ. ಇದೆ. ಮೇಲು-ಕೀಳುಗಳ ಅಂತರ ಹೆಚ್ಚಿದೆ, ಜಾತಿಗಳನ್ನು ನೋಡಿಯೆ ಮೊಳ ಹಾಕುವದು ಎಂದಿನಂತೆಯೆ ನಡೆದಿದೆ. ಬಡವರು-ಬಡವರಾಗಹತ್ತಿ, ಶ್ರೀಮಂತರೆ-ಇನ್ನೂ ಶ್ರೀಮಂತರಾಗುತ್ತಿದ್ದಾರೆ. ಅಧಿಕಾರ ದಾಹವಂತೂ ಅತ್ತೆಗೊಂದು ಕಾಲವಾದರೆ ಸೊಸೆಗೊಂದು–ಎನ್ನುವ ರೀತಿಯಲ್ಲಿ ಸ್ಪರ್ಧೆಗಿಳಿದಿದೆ. ಇದಕ್ಕೆ ಪರಿಹಾರೋಪಾಯವೆಂದರೆ-ದುಡಿದುಣ್ಣುವ ಕಾಯಕ ಧರ್ಮವನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಹೋಗುವುದೊಂದೇ ಎಂದು ಹೇಳಬೇಕು.

ದುಡಿಯಲು ಸಿದ್ಧರಾದ ಪ್ರಾಮಾಣಿಕ, ನಿಷ್ಠಾವಂತ ಜನತೆಗೆ ಸಮಾಜವಾಗಲಿ, ಸರಕಾರವಾಗಲಿ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ನಿಸ್ವಾರ್ಥಪರ ಸೇವೆ – ತಲೆಯೆತ್ತಬೇಕು. ಅಂಥ ಕಾಯಕ ಧೀರರಿಗೆ – ಸರಕಾರವಾಗಲಿ, ಸಮಾಜವಾಗಲಿ ಪ್ರಶಸ್ತಿಗಳನ್ನಿತ್ತು ಗೌರವಿಸಬೇಕು. ಅಂದಾಗ ದೇಶದ ಜನತೆಗೆ ಕೈತುಂಬ ಸಂಬಳ, ಮೈತುಂಬ ಬಟ್ಟೆ, ಹೊಟ್ಟೆ ತುಂಬ ಹಿಟ್ಟು ಸಿಕ್ಕೀತು.

ಕಾಯಕ ತತ್ವದಲ್ಲಿ ದಾಸೋಹಂಭಾವವೂ ಅಳವಟ್ಟಿದೆ. 'ಕಾಯಕದ ಪರಿಶ್ರಮದಿಂದ ಬಂದ ದ್ರವ್ಯದಲ್ಲಿ ಚಿತ್ತನಿಚ್ಛಂದವಾಗದಿರಬೇಕು'. ಸ್ವಾರ್ಥಕ್ಕೆ ಬಲಿಬಿದ್ದು ಸಂಗ್ರಹಬುದ್ಧಿ ಉಂಟಾಗಬಾರದು. ಸಂಗ್ರಹವಾದದ್ದು ಬಳಕೆಯಾದಲ್ಲಿ ಹಳಸಿದ ಅನ್ನ ತಿಂದು ವಾಂತಿ ಮಾಡಿಕೊಂಡಂತೆ. ಹಾಗಾಗಬಾರದೆಂದೇ ಅಂದಂದಿನ ಹಣ –

ಅಂದಂದಿನ ದಾಸೋಹಕ್ಕೆ ಸವೆಯಬೇಕೆಂದು ಹೇಳಿದರು. ತಾನು ಗಳಿಸಿದ ಹಣ ತನ್ನದಲ್ಲ, ಅದು ಸರ್ವರದು, ಸಮಾಜದ್ದು ಎನ್ನುವ ಸಮತಾಭಾವ-ಮೂಡಿ ಜನತೆಗಾಗಿ,ಜಂಗಮ ದಾಸೋಹಕ್ಕಾಗಿ ಅದು ವಿನಿಯೋಗವಾಗಬೇಕೆಂದು ದಾಸೋಹ ಮಾರ್ಗವನ್ನು ಹಾಕಿ ಕೊಟ್ಟರು. ಇದರಿಂದ ಜನತೆಯ ದಾಸ ತಾನು ಎಂದು ಶಿವನ ದಾಸನೂ ತಾನಾಗುವ ಗುರಿಯನ್ನು ಮುಟ್ಟುವ ಸಿದ್ಧಾಂತ ಈ ದಾಸೋಹ ಮಾರ್ಗದಲ್ಲಿ ಅಡಕವಾಗಿದೆ. ಅಂತೆಯೆ ಶಿವಾರ್ಪಿತ ಭಾವ, ಸಮರ್ಪಣ ಭಾವವನ್ನು ಶರಣರು ಮೆರೆದು ಉದಾತ್ತ ಧ್ಯೇಯವಾದಿಗಳೆನಿಸಿದರು.

ಧರ್ಮತತ್ಪರರಾಗಿ ನಡೆದು, ಅರ್ಥಕಾಮನೆಗಳನ್ನೆಲ್ಲಾ ಸಂಪಾದಿಸುವುದು ಗೋಳುಮುಂಡೆಯ ಕೀರ್ತಿಗಲ್ಲ, ಪರಮಪುರುಷಾರ್ಥವೆನಿಸಿದ ಮುಕ್ತಿ ಸಂಪಾದನೆಗಾಗಿ. ಮಾಯಾ ಬಂಧನದಿಂದ ಬಿಡುಗಡೆ ಹೊಂದಿದಾಗ ನಿಜ ಜ್ಞಾನೋದಯವಾಗಿ ತಾನೇ ತಾನಾಗುವ ಮಹಾ ಸಾಧನೆಗಾಗಿ ಕಾಯಕ ತತ್ತ್ವ, ಅದರ ಜೊತೆಗೇ ಬರುವ ದಾಸೋಹ ಮಾರ್ಗ ಇವು ವೀರಶೈವ ಧರ್ಮದ ಮಹಾನುಭಾವರಿಗೆ ಮಹಾನೆಲಗಟ್ಟಾಗಿ ನಿಂತಿವೆ. ಇದ್ದವರು ಇದ್ದಾಗ ದಾನಧರ್ಮ ಮಾಡುವ, ಇಲ್ಲದವರಿಗೆ ಉಣಬಡಿಸುವ ಧರ್ಮ–ದಾಸೋಹ ಮಾರ್ಗ ನಮ್ಮಲ್ಲಿ ಬೆಳೆದು ಬರಬೇಕು. ಹಾಗೆಯೆ ಸಹಕಾರ, ಸಪ್ರೇಮ, ಸಮತಾಭಾವ ಇವೆಲ್ಲ ಅಳವಡಬೇಕು. ಇಂತಹ ತತ್ವಗಳ ತಳಹದಿಯ ಮೇಲೆ ಅಂದು ಬಸವಣ್ಣನವರು ಸಮಾಜ ಕಟ್ಟಲು ಹೋದದ್ದು. ಅವರು ಯೋಜಿಸಿದ ತತ್ವಗಳನ್ನು, ಮಾರ್ಗಗಳನ್ನು, ಇಂದು ಅಲ್ಲೋಲ ಕಲ್ಲೋಲವಾಗಿರುವ ನಮ್ಮ ಸಮಾಜ ಆಚರಣೆಯಲ್ಲಿ ತಂದಲ್ಲಿ ಸುಭದ್ರ ಸಮಾಜ ರೂಪುತಾಳುವುದರಲ್ಲಿ ಸಂದೇಹವಿಲ್ಲ.

ಅನುಭವ ಮಂಟಪ :

ಸ್ತ್ರೀ ಸ್ವಾತಂತ್ರ್ಯದಿಂದ ಸಮಾಜದಲ್ಲಿ ಸಮತೋಲವನ್ನು ಕಾಯ್ದುಕೊಂಡು ಹೋಗುವಲ್ಲೂ, ಕಾಯಕ ತತ್ವ ನಾಡಿನ ಆರ್ಥಿಕ ಸಂಪತ್ತನ್ನು ಹೆಚ್ಚಿಸುವಲ್ಲೂ ಸಹಾಯ ನೀಡಿದರೆ ವ್ಯಕ್ತಿಯ ಅಂತರಂಗ ಶುದ್ಧಿಗಾಗಿ, ಆತ್ಮಸಾಧನೆಗಾಗಿ ಅತ್ಯವಶ್ಯವಾಗಿ ಬೇಕಾದದ್ದು-ತತ್ವದ ತಿಳುವಳಿಕೆ; ಆ ತತ್ತ್ವದ ಆಚರಣೆ. ಅಂದರೆ ಶಿವಯೋಗ ಸಾಧನೆ. ಅಂಥ ಸಾಧನೆಯ ಗುರಿಯನ್ನಿಟ್ಟುಕೊಂಡು ಬಸವಣ್ಣನವರು ಅಂದು ಹನ್ನೆರಡನೆಯ ಶತಮಾನದಲ್ಲಿ—ಶಿವಾನುಭವ ಚರ್ಚೆಗೆ ಮೀಸಲಾದ ಸಂಸ್ಥೆಯೊಂದನ್ನು ಕಟ್ಟಿದರು. ಅದುವೆ ಅನುಭವ ಮಂಟಪವೆನಿಸಿತು. ಜನ ನೀತಿವಂತರಾಗಲು, ಸುಸಂಸ್ಕೃತರಾಗಲು ಬೇಕಾದ ಕೇಂದ್ರ ಸ್ಥಳ ಈ ಅನುಭವ ಮಂಟಪವಾಯ್ತು.

ಹಾಳು ಹರಟೆಗೆ ಆಸ್ಪದವೀಯದೆ ಶಿವಭಕ್ತರೆಲ್ಲರೂ ಒಂದು ಕಡೆ ಸೇರಿ ದಿನನಿತ್ಯದ ಪ್ರಾಪಂಚಿಕ ಆಗುಹೋಗುಗಳ ಜೊತೆಗೆ ತಾತ್ವಿಕ ವಿವೇಚನೆಯನ್ನೂ ಈ ಅನುಭವ ಮಂಟಪದಲ್ಲಿ ನಡೆಸಲಾಗುತ್ತಿತ್ತು. ತತ್ತ್ವ ಕೇವಲ ಸಿದ್ಧಾಂತ ಅಥವಾ ಶಾಸ್ತ್ರವಷ್ಟೇ ಅಲ್ಲ-ಅದು ಜೀವನಕ್ಕಾಗಿ, ಜೀವನದ ನೆಮ್ಮದಿಗಾಗಿ, ನಿರವಯಲ ಸಮಾಧಿಗಾಗಿ ಎಂದು ಚರ್ಚೆಗಿಳಿಯುತ್ತಿತ್ತು. ಅನೇಕ ಶರಣರು ತಮ್ಮ ತಮ್ಮ ಜೀವನದಲ್ಲಿ ಕಂಡುಂಡ ವಿವಿಧ ಸಮಸ್ಯೆಗಳನ್ನು ಬಿಚ್ಚು ಮನಸ್ಸಿನಿಂದ ಚರ್ಚಿಸುತ್ತಿದ್ದರು. ಅಲ್ಲಿದರಿಂದ ಒಬ್ಬರಿಗೊಬ್ಬರು ಪರಿಹಾರ ಮಾರ್ಗ ಕಂಡುಕೊಳ್ಳುತ್ತಿದ್ದರು. ಅದುವೆ ಶಿವಾನುಭವ ಗೋಷ್ಠಿಯಾಗಿ ಶಿವಶರಣರ ಆಧ್ಯಾತ್ಮ ಜೀವನದ ಪ್ರಯೋಗಶಾಲೆಯೆನಿಸುತ್ತಿತ್ತು. ಇಲ್ಲಿ ಹೊರಬಂದ ನುಡಿಗಳೆ ಅಮೃತ ನುಡಿಗಳಾದವು. ಅವೇ ವಚನಗಳು. ಅವುಗಳನ್ನು ಜನ ಅರಿತು, ಅಳವಡಿಸಿಕೊಂಡು ನೀತಿವಂತರಾದರು; ಸದಾಚಾರಿಗಳಾದರು.

ಅನುಭವ ಮಂಟಪ ಅಂದಿನ ಶಿವಭಕ್ತರಿಗೆಲ್ಲ ಶಿವಾನುಭವ ಮಂಟಪ ಎನಿಸಿದಂತೆ ಲೌಕಿಕ ಜಗತ್ತಿನ ಪಾರ್ಲಿಮೆಂಟೂ ಅದು ಆಗಿತ್ತು. ಅಂತಹ ಮಂಟಪದ ಅಧ್ಯಕ್ಷರು ಅಲ್ಲಮಪ್ರಭುವಾಗಿದ್ದರು. ಕಾರ್ಯನಿರ್ವಾಹಕರು ಚೆನ್ನಬಸವಣ್ಣನವರು. ಈ ಅನುಭವ ಮಂಟಪದಲ್ಲಿ ಭಾಗಿಗಳು ಅಸಂಖ್ಯಾತ ಶಿವಶರಣ-ಶರಣೆಯರು. ಪ್ರಮುಖರಾದವರೆಂದರೆ: ಮಡಿವಾಳ ಮಾಚಿದೇವ, ಶಿವಯೋಗಿ ಸಿದ್ಧರಾಮ, ಮೋಳಿಗೆ ಮಾರಯ್ಯ, ಆಯ್ದಕ್ಕಿ ಮಾರಯ್ಯ, ನುಲಿಯ ಚಂದಯ್ಯ ಮೊದಲಾದವರು. ತಮ್ಮ ತಮ್ಮ ಕಾಯಕ ಧರ್ಮ ಸಂದ ಮೇಲೆ ಪ್ರತಿನಿತ್ಯವೂ ಶಿವಶರಣರು ಭಾಗವಹಿಸುತ್ತಿದ್ದರು. ಇದರ ಫಲವಾಗಿ ತನ್ನ ತಾನಾರೆಂದು ತಿಳಿವ ಮಾರ್ಗ ಜನತೆ ಕಂಡುಕೊಂಡಿತು. ಒಳ್ಳೆಯದರ ಬೆಲೆ ಕಟ್ಟಿ ಗೌರವಿಸುವ ಯೋಗ್ಯತೆಯನ್ನು ಸಮಾಜ ಕಂಡುಕೊಂಡಿತು. ಇದಕ್ಕೆಲ್ಲ ಕೇಂದ್ರ ವ್ಯಕ್ತಿ ಜಗಜ್ಯೋತಿ ಬಸವಣ್ಣನವರು. ಕಾಯಕ ಧರ್ಮದಿಂದ ನಡೆಯಲು ಹಚ್ಚಿ ಜನತೆಯ ಹೊಟ್ಟೆ ತುಂಬಿಸಿದ ಇವರು ಅನುಭವ ಮಂಟಪದಂತಹ ತತ್ತ್ವ ಚಿಂತನೆಯ ಕೇಂದ್ರ ಸ್ಥಾಪಿಸಿ ಜನತೆಯ ನೆತ್ತಿಯನ್ನೂ ತುಂಬಿಸಿದರು. ಒಳ್ಳೆಯದನ್ನು ಅರಿತು ಆಚರಣೆಯಲ್ಲಿ ತಂದುದರಿಂದ ನಡೆ, ನುಡಿಗಳೊಂದಾದುದರಿಂದ ಜ್ಞಾನ ಕ್ರಿಯೆಗಳ ಸುಂದರ ಸಮನ್ವಯ ಸಾಧಿಸಿದುದರಿಂದ ಧರ್ಮಜ್ಯೋತಿ ಹೊತ್ತಿತು. 'ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು,ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು ತೊಳಗಿ ಬೆಳಗುತ್ತಿರ್ದುದಯ್ಯ ಶಿವನ ಪ್ರಕಾಶ ! ಆ ಬೆಳಗಿನೊಳಗೆ ಒಪ್ಪುತಿರ್ದರಯ್ಯ ಅಸಂಖ್ಯಾತ ಭಕ್ತಮಹಾಂಗಣಗಳು ! ಶಿವಭಕ್ತರಿರ್ದ ಕ್ಷೇತ್ರ ಅವಿಮುಕ್ತ ಕ್ಷೇತ್ರವೆಂಬುದು ಹುಸಿಯೆ ? ಗುಹೇಶ್ವರ ಲಿಂಗದಲ್ಲಿ ಎನ್ನ ಪರಮಾರಾಧ್ಯ ಸಂಗನ ಬಸವಣ್ಣನ ಕಂಡು ಬದುಕಿದೆ ಕಾಣಾ ಸಿದ್ಧರಾಮಯ್ಯ' ಎಂದು ಅಲ್ಲಮಪ್ರಭುದೇವರು ಬಸವಣ್ಣನವರನ್ನು ಕುರಿತು ಹಾಡಿದ್ದು ಅತಿಶಯೋಕ್ತಿಯೇನಲ್ಲ. ಶಿವಶರಣರೆಲ್ಲರೂ ಬಸವಣ್ಣನವರ ಮಹಾಚಾರಿತ್ರ್ಯಕ್ಕೆ ಶಿರಬಾಗಿದರು. ಭಕ್ತಿಯ ತನಿರಸವು ನಾಡಿನಲ್ಲೆಲ್ಲ ಹರಿಯಿತು. ಬೇಕಾದವರು ಬೇಕಾದಷ್ಟು ತುಂಬಿಕೊಂಡರು. ಬಸವಣ್ಣನವರ ಕ್ರಾಂತಿಪಥದ ಮೂಲ ಮಂತ್ರಗಳಿಂದ ಕಲ್ಯಾಣ ಕೈಲಾಸವಾಯ್ತು.

ನೀತಿಗೆ ಕೊರತೆ, ಶೀಲಕ್ಕೆ ಭಂಗ, ಅನ್ನ ನೀರಿಗೆ ಬರಗಾಲ, ವಿಚಾರಕ್ಕೆ ಪರಾವಲಂಬನ – ಇಂತಹ ಪರಿಸ್ಥಿತಿಯಲ್ಲಿ ನಮಗೆ ಬೇಕಾದದ್ದು ಪ್ರಾಮಾಣಿಕತನ. ನಮ್ಮ ದೇಶದಲ್ಲಿ ಸಾಕಷ್ಟು ಭೂಮಿ ಇದೆ. ನದಿ–ಸಮುದ್ರಗಳಿವೆ. ದವಸ–ಧಾನ್ಯಗಳಿವೆ. ನೀತಿ–ನಿಯಮ

ಗಳೂ ಇವೆ. ಆದರೆ ಇಲ್ಲದ್ದು ಪ್ರಾಮಾಣಿಕತನವೊಂದು; ಆಲಸ್ಯ ಇನ್ನೊಂದು; ಪರಾವಲಂಬನೆ ಮಗುದೊಂದು. ಜೀವನದ ನೆಮ್ಮದಿಗೆಂದು ಇದ್ದ ಬಹು ಬೆಲೆಯ ಮೌಲ್ಯಗಳಾದ ದಯೆ, ಸಮಾನತೆ, ಗುರುಹಿರಿಯರಲ್ಲಿ ಗೌರವಭಾವನೆ, ಸತ್ಯ, ಅಹಿಂಸೆ ಇವುಗಳ ಅಭಾವದಿಂದಾಗಿ ನಮ್ಮ ವ್ಯಕ್ತಿತ್ವ ನಿರ್ಮಿಸಿಕೊಳ್ಳಲಾರದೆ ಕೇವಲ ದೇಹ, ದೇಹದ ಹೊರಗಿನ ವೇಷ–ಭೂಷಣಗಳನ್ನು ಗಳಿಸಿಕೊಂಡು ಮನುಷ್ಯ ಆಕಾರ ತಾಳಿದ್ದೇವೆ–ಅಷ್ಟೆ. ಒಳಗೊಂದು ಹೊರಗೊಂದು ಮುಖಗಳನ್ನು ಸೃಷ್ಟಿಸಿಕೊಂಡು ಹೊತ್ತು ಬಂದತ್ತ ಬೇಕಾದವರ ಕಾಲೂ ಹಿಡಿಯುತ್ತ ಹೊರಟಿದ್ದೇವೆ. ಹೀಗೆಯೇ ಮುಂದುವರಿದರೆ ಭಾವೀ ಚರಿತ್ರೆಯ ಗತಿಯೇನು ?

ದೇಶದ ಉಜ್ವಲ ಭವಿಷ್ಯಕ್ಕಾಗಿ, ಉದ್ಧಾರಕ್ಕಾಗಿ ಮನುಕುಲದ ಏಳ್ಗೆಗಾಗಿ ನಮಗಿಂದು ಸುಸಂಸ್ಕೃತ ಹೃದಯಿಗಳನ್ನಾಗಿ ಪರಿವರ್ತಿಸುವ, ಶೀಲಸಂಪನ್ನರಾಗುವ ಸದಾಚಾರ, ಸದ್ವರ್ತನೆಗಿಳಿಸುವ, ಪ್ರಾಮಾಣಿಕರನ್ನಾಗಿಡುವ, ಮಹೋನ್ನತ ವ್ಯಕ್ತಿತ್ವ ರೂಪಿಸಿಕೊಳ್ಳುವ – ಅನುಭವಮಂಟಪದಂಥ ಪ್ರಯೋಗಶಾಲೆಗಳೂ, ಕಾಯಕ ಧರ್ಮದ ತತ್ವಗಳೂ, ಆಧ್ಯಾತ್ಮದೈಸಿರಿಯ ರಾಜತೇಜದ ಕೆಚ್ಚೂ ಬೇಕಾದವುಗಳು. ಇಂತಹ ತರಬೇತಿ ಪಡೆದು ಪುನೀತರಾದ, ಸುಸಂಸ್ಕೃತ ವ್ಯಕ್ತಿಗಳೆ ರಾಷ್ಟ್ರದ ನೈಜ ಪ್ರಜೆಗಳು ಎನ್ನುವ ಮುದ್ರೆ ಮೂಡಿಬರಬೇಕು. ನಮ್ಮ ಸಮಾಜದ, ದೇಶದ ಯಾವುದೇ ಸ್ಥಾನದಲ್ಲಿದ್ದ ಅಧಿಕಾರಿಗೆ, ಜವಾಬ್ದಾರಿ ವ್ಯಕ್ತಿಗೆ ಇದು ಅನ್ವಯವಾಗಬೇಕು. ಅಂದಾಗ ಪ್ರಜಾಪ್ರಭುತ್ವದ ಮೇಲೆ ನಿಂತಿರುವ ನಮ್ಮ ರಾಷ್ಟ್ರ ಸರ್ವತೋಮುಖವಾಗಿ ಅಭಿವೃದ್ಧಿಗೊಳ್ಳುವುದರಲ್ಲಿ ಸಂಶಯವಿಲ್ಲ.

ಸುಂದರ ವ್ಯಕ್ತಿತ್ವ ರೂಪಿಸಿಕೊಳ್ಳುವುದಕ್ಕಾಗಿ–ಅಂದಂದಿಗೆ ಹಲವಾರು ಸಂಸ್ಥೆಗಳು-ಮಠಗಳು ಹುಟ್ಟಿಕೊಂಡು ಬಂದಿವೆ. ಅವು, ತಮ್ಮ ಉದ್ದೇಶ ಸಾಧನೆಯಲ್ಲಿ ಈಗಲೂ ಮುಂದುವರಿದರೆ, ಸರಕಾರ ಮತ್ತು ಸಮಾಜವಾಗಲಿ ಆ ದಿಸೆಯಲ್ಲಿ ಆ ಸಂಘ–ಸಂಸ್ಥೆಗಳಿಗೆ ಪ್ರೋತ್ಸಾಹಿಸಿದರೆ ದೇಶ ಸಮೃದ್ಧಿಯ ಬೀಡಾಗುವುದು. ಬಸವಣ್ಣನವರು ಹಾಕಿಕೊಟ್ಟ ಕ್ರಾಂತಿಪಥದ ಮೂರು ಮೂಲ ಮಂತ್ರಗಳನ್ನು ನಾಡವರು ಅರಿತು, ಆಚರಣೆಯಲ್ಲಿ ತಂದದ್ದಾದರೆ ನಾಡು ಮತ್ತೊಮ್ಮೆ ಪುಣ್ಯದ ಬೀಡಾಗುವುದು.

ಅನುಭವ ಮಂಟಪದಲ್ಲಿ

ಲೇಖಕರು:
ಪ್ರೊ. ಸಂ. ಶಿ. ಭೂಸನೂರಮಠ, ಎಂ.ಎ.,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ.

12ನೆಯ ಶತಮಾನದ ಕಲ್ಯಾಣ–ಬಸವಣ್ಣನ ಕಲ್ಯಾಣ; ಅಭಿನವ ಕೈಲಾಸವೆನಿಸುವ ಕಲ್ಯಾಣ. 'ಭಕ್ತಿ ಭಾಂಡಾರಿಯಾದ ಸಂಗನ ಬಸವಣ್ಣನ', ಮರ್ತ್ಯಕ್ಕೆ ಮಹವ ತಂದ 'ಶ್ರೀ ಗುರು ಬಸವ ಲಿಂಗನ' ದಿವ್ಯ ಜೀವನದಿಂದ ಆಕರ್ಷಿತರಾಗಿ, ಭಾರತದ ನಾನಾ ಭಾಗದಿಂದ ಬಂದು ನೆಲಸಿದ ಅಸಂಖ್ಯಾತ ಶರಣಮಹಾಗಣಂಗಳ ಕಲ್ಯಾಣ. ಅಲ್ಲಮಪ್ರಭುದೇವರು ಈ ಮಹಾಕಲ್ಯಾಣವನ್ನು, ಶರಣ ಗಣಂಗಳನ್ನು ಕಂಡರು ಹೀಗೆ: ಕಲ್ಯಾಣವೆ ಒಂದು ಪಣತಿ; ಭಕ್ತಿ ರಸವೆ ಎಣ್ಣೆ; ಆಚಾರವೆ ಬತ್ತಿ; ಈ ಬತ್ತಿಗೆ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಿದರೆ ಲಿಂಗದ ಬೆಳಗು ಪ್ರಜ್ವಲಿಸಿತು; ತೊಳಗಿ ಬೆಳಗಿದರು ಅಸಂಖ್ಯಾತ ಶರಣರು. ನಮೋ ನಮೋ ಎಂದರು ಪ್ರಭುದೇವರು.

ಬಸವಣ್ಣ ತಂದ ಈ ಹೊಸ ಬೆಳಗಿನಲ್ಲಿ, ಮಾನವನ ಅರಿವಿನ ಕಣ್ಣನ್ನು ಯುಗ ಯುಗಾಂತರದಿಂದ ಕತ್ತಲಿಸಿದ್ದ ಕತ್ತಲೆ, ಜಾತಿ ವರ್ಣ ಆಶ್ರಮ, ಹೆಣ್ಣು ಗಂಡು ಮರ್ತ್ಯ ಲೋಕ, ದೇವಲೋಕ, ಅದ್ವೈತ, ಸಂನ್ಯಾಸ, ದ್ವೈತ ಶಾಶ್ವತಭೇದ, ಸ್ವರ್ಗ ನರಕ, ನಾನು ಭಕ್ತ ನೀನು ದೇವರು, ನಿಯಮ ಉಪವಾಸ, ಜಪ ತಪ ಮುಂತಾದ ಅರಿವು ಮರವೆಯ ಮಬ್ಬುಗತ್ತಲೆ, 'ತನ್ನ ತಾನರಿದ' ಅರಿವಿನ ಬೆಳಗಿನಲ್ಲಿ ಹರಿಯಿತು. ಬೆಳಗಿತು ಸುಜ್ಞಾನ, ನಡೆಯಿತು ಶಿವಾಚಾರ; ಹಾಡಿತು ಪೂಜೆ; ಕುಣಿಯಿತು ಭಕ್ತಿ. ಪ್ರತಿನಿತ್ಯ ಕಾಯಕ, ನಿರಂತರ ದಾಸೋಹ; ದುಡಿದುದೆಲ್ಲ ಅರ್ಪಣ, ಪಡೆದುದೆಲ್ಲ ದಿವ್ಯಪ್ರಸಾದ. ಇವೆಲ್ಲಕ್ಕೆ ಮೂಲಾಧಾರವಾದ ಸ್ವಾನುಭಾವದಿಂದ ಮಾನವಕೋಟಿ ದೇವಕೋಟಿಯ ಕಡೆ, ಮಾನವನ 'ನಾನು' ಲಿಂಗವೆ ತಾನಾದ ಲಿಂಗದ, 'ತಾನಿ'ನತ್ತ ಪ್ರಯಾಣ ನಡೆಸಿತು.

ಸು. 800 ವರ್ಷಗಳ ಹಿಂದಿನ ಬಸವಣ್ಣನ ಈ ಕಲ್ಯಾಣ ಪಟ್ಟಣದಲ್ಲಿ ಶರಣರು ಅನುಭಾವ ಗೋಷ್ಠಿ ಮಾಡುತ್ತಿದ್ದರೆಂಬುದು ಇತಿಹಾಸ; ನಿಸ್ಸಂಶಯವಾದ ಸಂಗತಿ. 'ವಿಚಾರ ಗೋಷ್ಠಿ', 'ಪ್ರಕಾಶಗೋಷ್ಠಿ' ಮುಂತಾದ ಹೆಸರಿನಿಂದಲೂ ಇಂತಹ 'ಶರಣರ ಸಂಗ' ಗೋಷ್ಠಿಗಳನ್ನು ಕರೆದುದುಂಟು. ಬಸವಣ್ಣ, ಚೆನ್ನಬಸವಣ್ಣ, ಸಿದ್ಧರಾಮಯ್ಯ, ಅಲ್ಲಮಪ್ರಭುದೇವರು, ಮಡಿವಾಳ ಮಾಚಯ್ಯ, ಹಡಪದಪ್ಪಣ್ಣ, ಆಯ್ದಕ್ಕಿ ಮಾರಯ್ಯ, ನುಲಿಯ ಚಂದಯ್ಯ, ನೀಲಮ್ಮ, ಮಹದೇವಿಯಕ್ಕ, ಲಕ್ಕಮ್ಮ– ಮುಂತಾದ ಶರಣ ಶರಣೆಯರು ಒಂಡೆಡೆ ಕೂಡಿ, ತಮ್ಮ ತಮ್ಮ ಅರಿವಿನ ಅನುಭಾವವನ್ನು ಶರಣರ ಮುಂದಿರಿಸಿ, ಚರ್ಚೆ ಮಾಡಿ, ವಿವೇಕಿಸಿ ನೋಡಿ, ತಾವು ಕಂಡ ಅನುಭಾವದ ತಪ್ಪುತಡಿಯನ್ನು ತಿದ್ದಿಕೊಂಡು, ಕುಂದು ಕೊರತೆಗಳನ್ನು ಪೂರೈಸಿಕೊಂಡು, ತಮ್ಮ ಜೀವನವನ್ನು ಮತ್ತಷ್ಟು ದಿವ್ಯಕ್ಕೆ ಹದ ಮಾಡಿಕೊಳ್ಳುತ್ತಿದ್ದರು. ಇಂಥ ಗೋಷ್ಠಿಗಳಲ್ಲಿ ಅನುಭಾವ ಸ್ವಾತಂತ್ರ್ಯಕ್ಕೆ, ಬುದ್ಧಿ ವಿಚಾರ ಸ್ವಾತಂತ್ರ್ಯಕ್ಕೆ, ಯಾರಿಂದ ಯಾರಿಗೂ ಅಡೆ ತಡೆ ಇದ್ದಿರಲಿಲ್ಲ. ಹಿರಿಯ ಕಿರಿಯ, ಹೆಣ್ಣು ಗಂಡು, ಕಾಯಕ ವೃತ್ತಿ—ಮುಂತಾದ ಭೇದಕ್ಕೆ ಆಸ್ಪದ ಮೊದಲೇ ಇಲ್ಲ, ಇಲ್ಲಿ. ಎಲ್ಲರೂ ಸರಿಸಮಾನವಾಗಿ ಕುಳಿತು ನಡೆಸಿದ ಶರಣರ ಗೋಷ್ಠಿ ಇವು. ಮತ್ತೆ, ಇಲ್ಲಿ, ಶರಣರ ಗೋಷ್ಠಿಯಲ್ಲಿ ಮಾನವ ಜೀವನಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳು ಬೇರೆ ಬೇರೆ ಶರಣರ ಅನುಭಾವದ ಬೆಳಗಿನಲ್ಲಿ ವಿಚಾರಕ್ಕೆ ಒಳಗಾಗಿ, ಪರಿಶುದ್ಧ ರೂಪದಲ್ಲಿ ಹೊರಗೆ ಬಂದು, ಪ್ರಮಾಣವೆನಿಸಿಕೊಳ್ಳುತ್ತಿದ್ದವು. ಭಕ್ತರ ಮಠದಲ್ಲಿ, ಶರಣರ ಶಿವಪೂಜಾಮಂದಿರ, ಶಿವಯೋಗ ಮಾಡುವ ಗುಹೆಗಳಲ್ಲಿ, ಏಕಾಂತ ಸಮಾಧಿಸ್ಥಾನದಲ್ಲಿ ನಡೆಯುತ್ತಿದ್ದ ಇಂಥ ಸಂಗೋಷ್ಠಿಗಳ ಒಂದು ಮಹಾಕೂಟವೇ 'ಅನುಭವ ಮಂಟಪ'. ಈ ಮಹಾಸಂಸ್ಥೆಯ ಐತಿಹಾಸಿಕತೆಯ ಬಗ್ಗೆ ಪಂಡಿತರಲ್ಲಿ ವಾದ ವಿವಾದ ಇನ್ನೂ ನಡೆದಿದೆ. ನಡೆಯಲಿ; ನಡೆಯಬೇಕು.

'ಅನುಭವ' ಅಥವಾ 'ಅನುಭಾವ' ಎಂಬ ಶಬ್ದಗಳು ಪರ್ಯಾಯ ಪದಗಳೆಂದು ಹೇಳಬಹುದು. 'ಅನುಭಾವ'ಅಂದರೇನು? ಬಸವಣ್ಣನವರು ಹೇಳುವಂತೆ ಅರಿವಿನ ತೃಪ್ತಿಗೆ ಅನುಭಾವವೇ ಆಶ್ರಯ. ಏನು ಇದ್ದರೂ, ಏನು ಕೊಟ್ಟರೂ, ಏನು ಹೇಳಿದರೂ, ಏನು ಕಲಿತು ಏನು ಕೇಳಿದರೂ – ಎಂದೂ ತೃಪ್ತಿಯಾಗದ ಮಾನವನ ಅರಿವಿಗೆ ಸಂತೃಪ್ತಿಯನ್ನು ನೀಡುವ ಆತ್ಮವಿದ್ಯೆಯೆ ಅನುಭಾವ. ಸ್ವಸ್ವರೂಪದರ್ಶನ, ಸ್ವಯಂಜ್ಞಾನ, ಸ್ವಯಂಜ್ಯೋತಿ, ಸ್ವಯಾನಂದ, ನಿಜ ನಿರಾಳ, ಸಹಜ ಸುಮ್ಮಾನವೇ ಅನುಭಾವ. ಈ ನಿಜ ನಿರಾಳ ತಾನಾಗಿ ನಿಂದ ನಿಲವೇ ಸ್ವಾನುಭಾವ. ತನ್ನೊಳಗೆ ಮಲಗಿ, ಬೈತಿಟ್ಟ ನಿಧಾನದಂತಿರುವ ತನ್ನ ಪಾತಾಳ ಆಕಾಶವನ್ನು ಬಗಿದು ನೋಡುವ ಅರಿವಿನ ಮೂಲ ಬೆಳಗಾದ ಅಖಂಡಿತ ಇರವು ತಾನೆಂದು ಅನುಭವಿಸುವುದೇ ಅನುಭಾವ. ಇಂಥ

'ಅನುಭಾವದಿಂದ ಹುಟ್ಟಿತ್ತು ಲಿಂಗ
ಅನುಭಾವದಿಂದ ಹುಟ್ಟಿತ್ತು ಜಂಗಮ.
ಅನುಭಾವದಿಂದ ಹುಟ್ಟಿತ್ತು ಪ್ರಸಾದ.
ಅನುಭಾವದನುವಿನಲ್ಲಿ ಗೊಹೇಶ್ವರಲಿಂಗವನುಪಮಸುಖಿ'

ಶರಣ ಧರ್ಮ, ಶರಣ ದರ್ಶನ, ಶರಣರು ಹೇಳುವ ಶಿವಾದ್ವೈತಭಕ್ತಿ, ಸಮ್ಯಗ್‌ಜ್ಞಾನ, ಸದಾಚಾರ, ಷಟ್‌ಸ್ಥಲಸಿದ್ಧಾಂತ, ಏಕೋತ್ತರ ಶತಸ್ಥಲ, ಕಾಯಕ ದಾಸೋಹ, ಪ್ರಸಾದ – ಮುಂತಾದುವೆಲ್ಲ

'ಅನುಭಾವ'ದ ಮೂಲಾಧಾರದ ಮೇಲೆಯೆ ಬೆಳೆದು ನಿಂತಿವೆ ಎಂದು ಹೇಳಿದರೆ ಸತ್ಯಕ್ಕೆ ಬಹು ಸಮೀಪ ನಾವು.

ಮುಗಿಲ ಮರೆಯ ಮಿಂಚು ಹೊಳೆವಂತೆ, ದೇಹದ ಮರೆಯಲ್ಲಿ ಅವಿತುಕೊಂಡಿರುವ ಜ್ಯೋತಿರ್ಲಿಂಗ ಮಿಂಚಬಹುದು ನನ್ನಲ್ಲಿ, ನಿಮ್ಮಲ್ಲಿ, ಎಲ್ಲರಲ್ಲಿ. ಮತ್ತು ಮಿಂಚು ಮಿಂಚು ಹಳಚಿ, ದೇಹವೆಲ್ಲ ಸುಟ್ಟು, ಉರಿವ ಬೆಳಗಾಗಬಹುದು. ಶರಣರ 'ಪ್ರಕಾಶ ಗೋಷ್ಠಿ' ಯಲ್ಲಿ ನಿಜದ ಬೆಳಗು ಎಚ್ಚರವಾಗುವ ವಿಧಾನವನ್ನು ನೋಡಿ :

'ಮರ ಮರ ಮಥನಿಸಿ ಕಿಚ್ಚು ಹುಟ್ಟಿ,
ಸುತ್ತಣ ತರುಮರಾದಿಗಳ ಸುಡಲಾಯಿತ್ತು.
ಆತ್ಮವಾತ್ಮ ಮಥನಿಸಿ ಅನುಭಾವ ಹುಟ್ಟಿ,
ತನುಗುಣಾದಿಗಳ ಸುಡಲಾಯಿತ್ತು.
ನಿಮ್ಮ ಮಹಾನುಭಾವಿಗಳ ಅನುಭಾವವ ತೋರಿ,
ಎನ್ನೊಡಲನುಳುಹಿಕೊಳ್ಳಾ ಚೆನ್ನಮಲ್ಲಿಕಾರ್ಜುನಾ,

ಇದು ಅನುಭಾವ. ಅನುಭಾವ ಗೋಷ್ಠಿಯಲ್ಲಿ, ಅನುಭವ ಮಂಟಪದಲ್ಲಿ ಅನುಭಾವ ಮಾಡಿ, ತಂತಮ್ಮ ಮಾನವ್ಯವನ್ನು ತೊಳೆದು, ಮರೆಯಲ್ಲಿದ್ದ ಮಹಾದೇವನನ್ನು ಕಂಡರು ಶರಣರು. ಮಹಾದೇವನನ್ನು ಉಂಡರು, ಉಟ್ಟರು, ನಡೆದರು ಶರಣರು.

ಶರಣರು ಅನುಭಾವ ಮಾಡುವಲ್ಲಿ, ಶರಣರಿಗೆ ಮಾರ್ಗವಾದ ಭಕ್ತಿ, ಜ್ಞಾನ, ಯೋಗ, ಆಚಾರ ಕಾಯಕ ದಾಸೋಹ ಮುಂತಾದ ವಿಷಯ ವಿಚಾರಗಳು ಗೋಷ್ಠಿಯ ಅನುಭಾವದ ಮೂಸೆಯಲ್ಲಿ ಸಿಕ್ಕು, ಚೊಕ್ಕ ಚಿನ್ನವಾಗಿ ಕಾಂತಿಯಾಗುತ್ತವೆ. ಅನುಭಾವದಲ್ಲಿದ್ದ ಅವಲೋಪ, ಸಂಶಯ ವಿಪರೀತ ತಪ್ಪುಮಬ್ಬುಗಳೆಲ್ಲ ಕರಗಿ ಮಾಯವಾಗುತ್ತವೆ.

ಅನುಭವ ಮಂಟಪದಲ್ಲಿ ನಡೆದ ಒಂದು ಅದ್ಭುತ ಸನ್ನಿವೇಶವನ್ನು ನೋಡಿ : ಅಸಂಖ್ಯಾತ ಶರಣರಿದ್ದ ಕಲ್ಯಾಣದಲ್ಲಿ ನುಲಿಯ ಚಂದಯ್ಯ ಒಬ್ಬ ಮಹಾಶರಣ; ಒಂದು ಮಹಾಬೆಳಗು. ಗುರುಭಕ್ತಿ, ಲಿಂಗಭಕ್ತಿಯನ್ನು ಮೀರಿದ ಪರಮಪದ ಜಂಗಮದಾಸೋಹ –ಎಂಬ ವಜ್ರನಿಷ್ಠೆಯಲ್ಲಿದ್ದ ಚಂದಯ್ಯ. ಸತ್ಯ ಶುದ್ಧ ಕಾಯಕಮಾಡಿ ದಾಸೋಹದಲ್ಲಿ ನಿರತನಾಗಿದ್ದ ಚಂದಯ್ಯ, ಒಂದು ದಿನ ತನ್ನ ನುಲಿಯ ಕಾಯಕಕ್ಕೆ ಬೇಕಾದ ಹೊಡಕೆಯ ಹುಲ್ಲು ಕೊಯ್ದು, ಹೊರೆ ಕಟ್ಟುವ ಕಾಲದಲ್ಲಿ ಈತನ ಇಷ್ಟಲಿಂಗ 'ನಿಮಿತ್ತ' ಪೂರ್ವಕವಾಗಿ ಸರಿದು ಜಲದಲ್ಲಿ ಬಿದ್ದಿತು. ಇಷ್ಟಲಿಂಗ ಕಳೆದರೆ ಪ್ರಾಣವನ್ನಾದರೂ ಬಿಡಬೇಕೆಂಬ ವೀರವ್ರತ ವೀರಶೈವರದು. ಆದರೂ ತನ್ನ ಜಂಗಮದಾಸೋಹಕ್ಕೆ ಅಡ್ಡಿಮಾಡಿದ ಲಿಂಗದ ವರ್ತನೆ ಸರಿಯಲ್ಲ – 'ಏಕೆ ಸರಿದು ಹೋಗಬೇಕು ?' ಎಂದು ಲಿಂಗಯ್ಯನನ್ನು ಬಿಟ್ಟು, ಹೊರೆ ಹೊತ್ತು, ಮುಂದೆ ನಡೆದ ನುಲಿಯ ಚಂದಯ್ಯ. ಲಿಂಗಯ್ಯ, ಭಕ್ತನ ನಿಷ್ಠೆಗೆ ಮೆಚ್ಚಿ, ತನ್ನನ್ನು 'ಕರಕೋ' ಎಂದು ಪುರುಷಾಕಾರ ಧರಿಸಿ ಹಂಬಲಿಸಿತು. ಒಪ್ಪಲಿಲ್ಲ ಚಂದಯ್ಯ. ಲಿಂಗದೇವನೂ ಜಂಗಮದಾಸೋಹಕ್ಕೆ ಕಾಯಕಷ್ಟ ಮಾಡಲು ಒಪ್ಪಿದರೆ ತನ್ನೊಡನೆ ಬರಲಿ ಎಂದು ಮಡಿವಳ ಕಾಯಕದಲ್ಲಿ ನಿರತನಾಗಿದ್ದ ಮಾಚಯ್ಯನ ಹೊಣೆ ಕೊಂಡು, ತನ್ನ ಮಠಕ್ಕೆ ಬರುತ್ತಾನೆ ಚಂದಯ್ಯ. ಆಮೇಲೆ 'ಆ ಲಿಂಗದ ಕಯ್ಯಲ್ಲಿ ಕಾಯಕವ ಮಾಡಿಸಿ, ಆ ಕಣ್ಣಿಯಂ ಮಾರಿ ಹಾಗವ ಕೊಂಡು ಬಾರೆಂದು ಕಳುಹಲು' —ಬಸವಣ್ಣನಿಗೆ ಕಣ್ಣಿಯನ್ನು ಮಾರಿ ಒಂದು ಸಾವಿರ ಹೊನ್ನನ್ನು ಲಿಂಗಯ್ಯ ತಂದರೆ, ಸಿಡಿದೆದ್ದ ಚಂದಯ್ಯ : 'ಇದೆಲ್ಲಿಂದ ತಂದೆಯಯ್ಯಾ ? ಕಳವಿಂದ ತಂದೆಯೋ ?' ಎಂದು ನುಡಿದು, ಒಂದು ಹಾಗದ ಕಿಮ್ಮತ್ತಿನ ಕಣ್ಣಿಗೆ ಸಾವಿರ ಹೊನ್ನ ತಂದ ಲಿಂಗಭಕ್ತನನ್ನು ಮಠ ಬಿಟ್ಟು ಹೊರಗೆ ಹೊರಡಿಸಿದ. ಮತ್ತೆ ಮಡಿವಾಳ ಮಾಚಯ್ಯ ಎಷ್ಟು ಹೇಳಿದರೂ ಲಿಂಗವನ್ನು ಕರಕೊಳ್ಳಲು ಒಪ್ಪದಾದ ಚಂದಯ್ಯ. ಮೂವರೂ ಕೂಡಿ ಬರುತ್ತಾರೆ ಶರಣರು ಸಂಗದಲ್ಲಿದ್ದು ಗೋಷ್ಠಿ ನಡೆಸಿದ್ದ ಅನುಭವ ಮಂಟಪಕ್ಕೆ. ಇಲ್ಲಿಯೂ ಅದೇ ವಾದ ಚಂದಯ್ಯನದು. :

1) ಭಕ್ತನ ಅಂಗವನ್ನು ಬಿಟ್ಟು ಅಗಲಲಾಗದು –ಎಂಬ ಗುರುವಾಜ್ಞೆಯನ್ನು ಮೀರಿ ಏಕೆ ಜಲದಲ್ಲಿ ಜಾರಿ ಬೀಳಬೇಕು ಲಿಂಗ ?

2) ಗುರುವಾದರೂ ಕಾಯಕ ಮಾಡಬೇಕು. ಲಿಂಗವಾದರೂ ಕಾಯಕ ಮಾಡಬೇಕು. ಜಂಗಮವಾದರೂ ಕಾಯಕಷ್ಟ ಮಾಡಿ ಜಂಗಮದಾಸೋಹ ಮಾಡಬೇಕು. ಆಲಸಿಯಾಗಿ ಭಕ್ತನ ಎದೆಯ ಮೇಲೆ, ತಲೆಯಮೇಲೆ ಕೂಡುವ ಅಧಿಕಾರವೆಲ್ಲಿಂದ ಬಂತು ಲಿಂಗಕ್ಕೆ? ಎಲ್ಲಿಂದ ಬಂತು ಗುರು ಜಂಗಮಕ್ಕೆ ?

3) ಕಾಯಕ ಸತ್ಯ ಶುದ್ಧ ಕಾಯಕವಾಗಿರಬೇಕು. ಹಾಗದ ಕಣ್ಣಿಯನ್ನು ಸಾವಿರ ಹೊನ್ನಿಗೆ ಮಾರಬೇಕೆ ? ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು ಲಿಂಗಕ್ಕರ್ಪಿತವಲ್ಲದೆ, ದುರಾಶೆಯಿಂದ ಬಂದದು ಅನರ್ಪಿತ.

4) ಸತ್ಯಶುದ್ಧ ಕಾಯಕ ಮಾಡಿ ಜಂಗಮದಾಸೋಹದಲ್ಲಿದ್ದರೆ, ಗುರು ಮತ್ತು ಲಿಂಗ ಅಲ್ಲಿಯೇ ಅಡಕವಾಗಲಿಲ್ಲವೇ? ಮತ್ತೇಕೆ ಬೇಕು ಗುರು ? ಮತ್ತೇಕೆ ಧರಿಸಿಕೊಳ್ಳಬೇಕು ಎದೆಯ ಮೇಲೆ ಇಷ್ಟಲಿಂಗವನ್ನು ?

ನುಲಿಯ ಚಂದಯ್ಯನ ಈ ಭಾವ, ಈ ಅರಿವು, ಈ ಅನುಭಾವವನ್ನು ತಿದ್ದುವುದು ಮಾಚಯ್ಯನಿಂದಾಗಲಿಲ್ಲ; ಅಲ್ಲಮಪ್ರಭುದೇವನಿಂದಾಗಲಿಲ್ಲ. ಬಸವಣ್ಣ ತನ್ನ ಅನುಭಾವದ ಅಭಿಪ್ರಾಯವನ್ನು ಹೇಳಲು ಹಿಂದೆಗೆದ. ಕೊನೆಗೆ ಅಂತಿಮ ನಿರ್ಣಯವನ್ನು, 'ಅನುಭವ ಮಂಟಪ'ದ ಶರಣರ ಗೋಷ್ಠಿಯ ಮುಂದೆ ಇರಿಸಿ, 'ಅಂಗದ ಮೇಲೆ ಲಿಂಗ ಬೇಕು'ಎಂಬ ಗಂಭೀರ ಸತ್ಯವನ್ನು ಸಾರುತ್ತಾನೆ ಚೆನ್ನಬಸವಣ್ಣ :

'....ಅಂಗತ್ರಯದಲ್ಲಿ ಲಿಂಗತ್ರಯ ಸಂಬಂಧವಾದಲ್ಲಿ ಜಂಗಮದಾಸೋಹ.
ಜಂಗಮದಾಸೋಹವಿಲ್ಲದಡೆ, ಲಿಂಗತೃಪ್ತಿ ಇಲ್ಲ
ಅಂಗದಮೇಲೆ ಲಿಂಗವಿಲ್ಲದಿರ್ದಡೆ, ಆ ಜಂಗಮ ಸೇವೆಯ ಕೈಕೊಳ್ಳ.

ಅದು ಕಾರಣ ಒಂದ ಬಿಟ್ಟು ಒಂದರಲ್ಲಿ ನಿಂದರೆ
ಅಂಗವಿಲ್ಲದ ಆತ್ಮನಂತೆ, ಶಕ್ತಿಯಿಲ್ಲದ ಶಿವನಂತೆ, ದೀಪವಿಲ್ಲದ
ಪ್ರಕಾಶದಂತೆ.'

ಚಂದಯ್ಯ ಒಪ್ಪಿದ, ಒಪ್ಪಿ ತನ್ನ ಇಷ್ಟಲಿಂಗವನ್ನು ಕೊಂಡ:

ಚೆನ್ನಬಸವಣ್ಣನ ಕರುಣ ಇಂತು ಮಾಡಲಾಗಿ,
ನಾನು ನಿಮ್ಮ ಪಾದವ ಬೆರೆದು ಬೇರಿಲ್ಲದೆ
ನಿಜವನೈದಿದೆ ಚೆನ್ನಬಸವಣ್ಣಾ
ಚಂದೇಶ್ವರಲಿಂಗದಲ್ಲಿ ಶರಣರ
ಸಮ್ಯಗಜ್ಞಾನವೆನಗಾಯಿತಯ್ಯಾ ಪ್ರಭುವೆ.

ಶಿವಗಣಪ್ರಸಾದಿ ಮಹಾದೇವಯ್ಯಗಳ ಮೂಲ 'ಶೂನ್ಯ ಸಂಪಾದನೆ' 15 ನೆಯ ಶತಮಾನದಲ್ಲಿ ಹುಟ್ಟಿದ ಮೇಲೆ, ಆ ಮಹಾ ಗ್ರಂಥದ 4 ರೂಪಾಂತರಗಳು (*Versions*) ಕೆಂಚವೀರಣ್ಣೊಡೆಯ, ಗುಮ್ಮಳಾಪುರದ ಸಿದ್ಧಲಿಂಗದೇವ, ಗೂಳೂರು ಸಿದ್ಧವೀರಣ್ಣೊಡೆಯ ಮುಂತಾದವರಿಂದ ನಿರ್ಮಾಣವಾದ ಸಂಗತಿ ಸಾಹಿತ್ಯ ಪ್ರಸಿದ್ಧ. ಈ ನಾಲ್ಕು ಗ್ರಂಥಗಳ ನಿರ್ಮಾಣಕ್ಕೆ ಪ್ರಾಣ ಜೀವಾಳವಾಗಿದೆ– ಸಿದ್ಧ-ರಾಮಯ್ಯನಿಗೆ ಚೆನ್ನಬಸವಣ್ಣ ಇಷ್ಟಲಿಂಗ ದೀಕ್ಷಾ ಕ್ರಮವನ್ನು ಬೋಧಿಸಿ, ಇಷ್ಟಲಿಂಗವನ್ನು ಅಂಗದ ಮೇಲೆ ಸಾಹಿತ್ಯ ಮಾಡಿದ ಪ್ರಸಂಗ. 'ಶೂನ್ಯಸಂಪಾದನೆ'ಯಲ್ಲಿ ಮಹಾಪೂರವಾಗಿ ಬರುವ ಸಿದ್ಧರಾಮಯ್ಯನ 'ಗುರುಕರಣ'ದ ಮತ್ತೊಂದು ಮಹಾ ಪ್ರಸಂಗ, ಅನುಭವ ಮಂಟಪದಲ್ಲಿಯೆ ನಡೆದ ಸ್ವಾರಸ್ಯಕರವಾದ ಅನುಭಾವ ಗೋಷ್ಠಿಯನ್ನು ಪರಿಶೀಲಿಸಿ ನೋಡಿ :

ಸೊನ್ನಲಿಗೆಯಲ್ಲಿ ಕೆರೆ ಬಾವಿ, ಅರವೆ ಅರವಟಗೆ, ಗುಡಿಗೋ–ಪುರಗಳನ್ನು ಲೋಕ ಕಲ್ಯಾಣಕ್ಕಾಗಿ ಕಟ್ಟಿಸುತ್ತಿದ್ದ ಸಿದ್ಧರಾಮಯ್ಯ ಕರ್ಮಯೋಗಿ. ಅಲ್ಲಮ ಪ್ರಭುದೇವರು ಸೊನ್ನಲಾಪುರಕ್ಕೆ ಬಂದು, ಕೇವಲ ಲೋಕ ಕಲ್ಯಾಣ ಕಾರ್ಯದಲ್ಲಿ ನಿರತವಾದ ರಾಮಯ್ಯನ ಜೀವನದ ಅಪೂರ್ಣತೆಯನ್ನು ಹಲವು ಬಗೆಯಾಗಿ ಬಿಚ್ಚಿಡುತ್ತಾನೆ :

'ಕಲ್ಲ ಮನೆಯ ಮಾಡಿ, ಕಲ್ಲ ದೇವರ ಮಾಡಿ,
ಆ ಕಲ್ಲು ಕಲ್ಲ ಮೇಲೆ ಕೆಡೆದರೆ ದೇವರೆತ್ತ ಹೋದರೋ ?
ಲಿಂಗಪ್ರತಿಷ್ಠೆ ಮಾಡಿದವರಿಗೆ,
ನಾಯಕ ನರಕ ಗೊಹೇಶ್ವರಾ!,

ಹೀಗೆ ದೇವರ ಗುಡಿಯ ಸ್ಥಾವರಲಿಂಗದ ಭಂಗುರವನ್ನು ತೋರಿಸಿ, ಸಿದ್ಧನ ಕೆರೆಯ ಕಡೆ ಹೊರಳಿ ಹೇಳುತ್ತಾನೆ :

ಕೆರೆಯ ಕಟ್ಟಿಸುವ ಒಡ್ಡನ ಪ್ರತಾಪವನೇನೆಂಬೆನಯ್ಯಾ ?
ನೆಲನನಗಿದು ಜಲವ ತೆಗೆದಿಹೆನೆಂಬ ಬಳಲಿಕೆಯ ನೋಡಾ !

ಮತ್ತೆ ಮತ್ತೆ ವಿಡಂಬಿಸುತ್ತಾನೆ ! ಒಡ್ಡರಾಮಯ್ಯನನ್ನು :

'ಒಳಗ ತೊಳೆದು ಜಲವ ತುಂಬಲರಿಯದ ಅರೆಮರುಳ'ನೆಂದು;
'ಜಲದ ಸಂಗನ ತೊಳೆಯಲರಿಯದೆ ಜಲವ ಬಯಸುವ' ನಿವನೆಂಥ
ಗುರು, ಎಂಥ ಯೋಗಿ ಎಂದು. ಇದೋ ತಾನು ಕಟ್ಟಿದ ಕೆರೆ,
ಒಡ್ಡು, ಕಟ್ಟೆ,

ಸೋಪಾನಗಳ ಅದ್ಭುತವನ್ನು ತನ್ನ ಒಳಹೊರಗೆ ತೆರೆದು ತೋರಿಸುತ್ತಾನೆ ಪ್ರಭುದೇವ :

ತನುವೆಂಬ ಏರಿಗೆ ಮನವೆಂಬ ಕಟ್ಟೆ; ಆಚಾರವೆಂಬ ಸೋಪಾನ;
ಪರಮಾನಂದವೆಂಬ ಜಲವ ತುಂಬಿ
ಕೆರೆಯ ಕಟ್ಟ ಬಲ್ಲವರನಾರನೂ ಕಾಣೆ.
ನಾನು ಕಟ್ಟಿದ ಕೆರೆ ಸ್ಥಿರವಾಯ್ತು ಗೊಹೇಶ್ವರಾ, ನಿಮ್ಮಾಣೆ.

ತಮ್ಮ ಗುರುನಿಂದೆಯನ್ನು ಸೈರಿಸದ ಒಡ್ಡರು, ಗುಡ್ಡರು ಸಿದ್ಧನಲ್ಲಿಗೆ ಬಂದು ದೂರಿಕೊಂಡು ಮೊರೆಯಿಡಲು, ಸಿದ್ಧರಾಮಯ್ಯ ರೌದ್ರಾವತಾರದಲ್ಲಿ ಪ್ರಭುವಿದ್ದ ಕಡೆ ಬಂದು, ಆತನ ಮಹೋನ್ನತವಾದ ಘನ ಮಹಿಮೆಯನ್ನು ಅನುಭವಿಸಿ, ಕಂಡು ಅನನ್ಯ ಭಕ್ತಿಯಿಂದ ಶಕಣಾಗತನಾಗುತ್ತಾನೆ ಪ್ರಭುದೇವರಿಗೆ. ಏಕಾಂತಸಮಾಧಿ ಸ್ಥಾನದಲ್ಲಿ ಇವರಿಬ್ಬರ ಅನುಭಾವಗೋಷ್ಠಿ ನಡೆದು, ಪ್ರಭುದೇವರ ಕರಸ್ಥಲದ ಲಿಂಗದ ಕಡೆ ಲಕ್ಷ್ಯ ಹೋಗುತ್ತದೆ ಸಿದ್ಧರಾಮಯ್ಯನದು. ಇದೇನು ? ಇದೇಕೆ ? ಇದರ ಸ್ವರೂಪವೇನು ? –ಎಂದು ಕೇಳಿದ ಸಿದ್ಧರಾಮಯ್ಯನಿಗೆ 'ಪುಣ್ಯಕಾಲ' ಒದಗಿ ಬಂದಿದೆ ಎಂದು ತಿಳಿದು, ಪ್ರಭುದೇವರು ಕರಸ್ಥಲದ ಇಷ್ಟಲಿಂಗದ 'ಅನು'ವ ಕಲ್ಯಾಣದ ಬಸವಣ್ಣ ಬಲ್ಲ. ನಡೆಯಾ ಸಿದ್ಧರಾಮಯ್ಯಾ –ಎಂದು ಹೇಳಿ, ಅಂಗದ ಮೇಲೆ ಲಿಂಗವಿಲ್ಲದ ರಾಮಯ್ಯನೊಡನೆ ಕಲ್ಯಾಣಕ್ಕೆ ಬರುತ್ತಾನೆ ಅಲ್ಲಮ ಪ್ರಭುದೇವ.

ಕಲ್ಯಾಣದ ಬಸವಣ್ಣನ ಮಹಾಮನೆಯ ದ್ವಾರವಟ್ಟದ ಮುಂದೆ ನಿಂತಿದ್ದಾರೆ ಪ್ರಭುದೇವ ಮತ್ತು ಸಿದ್ಧರಾಮಯ್ಯ. ಲಿಂಗಾರ್ಚನೆಯನ್ನು ಬಿಟ್ಟೇಳಲೊಲ್ಲದೆ, ಬಂದ ಜಂಗಮವನ್ನು ಕರೆತರಲು ಬಸವಣ್ಣ ಹಡಪದ ಅಪ್ಪಣ್ಣನನ್ನು ಅಟ್ಟದರೆ, ಪ್ರಭುವಿಗೆ ಮುನಿಸು, ಆಶ್ಚರ್ಯ ! 'ಕಾಯ ಭಕ್ತ, ಪ್ರಾಣ ಜಂಗಮ' – ಎಂದ ಬಸವಣ್ಣನ ಭಾಷೆಗೆ ಹೊದ್ದಿತ್ತು ಲೋಪ ಜಂಗಮಲಿಂಗವೆ ನಡೆದು ಮನೆಗೆ ಬಂದಿರಲು, ಮತ್ತೇತರ ಲಿಂಗಾರ್ಚನೆ ? ಲಿಂಗಾರ್ಚನೆಯ ಮಾಡುವೆನಯ್ಯಾ ಜಂಗಮವೆನ್ನ ಮಠಕ್ಕೆ ಬರಬೇಕೆಂದಿದ್ದ ಬಸವಣ್ಣನೆತ್ತ ? ಅಘ್ಘಾಟಿಕೆಯಲ್ಲಿ ಜಂಗಮವನ್ನು ಕರೆ ಕಳಿಸುವ ಈ ಬಸವಣ್ಣನೆತ್ತ ?

ಬಸವಣ್ಣನ ಈ ವರ್ತನೆಯನ್ನು ಅಲ್ಲಗಳೆದ ಚೆನ್ನಬಸವಣ್ಣ, ಬಸವಣ್ಣ, ಕಿನ್ನರಿ ಬ್ರಹ್ಮಯ್ಯ,ಮಡಿವಾಳಯ್ಯ, ಅಪ್ಪಣ್ಣನವರನ್ನೊಡಗೊಂಡು ಬಂದು, ಪ್ರಭುವಿನ ಮುಂದೆ ಅಣ್ಣನ ವರ್ತನೆಯ ಅಚಾತುರ್ಯವನ್ನು ತಂದು ಇಳುಹುತ್ತಾರೆ. ಭಕ್ತಿಯ ಸುಸೂಕ್ಷ್ಮದ ಬಗ್ಗೆ ನಡೆಯುತ್ತದೆ ಚರ್ಚೆ, ಪ್ರಸಂಗ, ಶರಣರ ಗೋಷ್ಠಿ. ಪ್ರಭುದೇವರ ಮುನಿಸು ತಿಳುಹಿ, ಸಿದ್ಧರಾಮಯ್ಯನೊಡನೆ ಅವರನ್ನು ಮಹಾಮನೆಯ ಒಳಗೆ ಸರ್ವಸಂಭ್ರಮದಿಂದ ಬಿಜಯಂಗೈಸಿಕೊಂಡು ಬರುತ್ತಾರೆ ಕಲ್ಯಾಣದ ಶರಣರು.

ಬಸವಣ್ಣ, ಚೆನ್ನಬಸವಣ್ಣ, ಮೋಳಿಗೆಯ ಮಾರಯ್ಯ, ಮಡಿವಾಳ ಮಾಚಯ್ಯ, ರಾಯಸದ ಮಂಚಣ್ಣ, ಕಿನ್ನರಿಬ್ರಹ್ಮಯ್ಯ, ಮೆರೆಮಿಂಡದೇವ, ಉರಿಲಿಂಗಪೆದ್ದಣ್ಣ, ದಾಸಿಮಯ್ಯ, ಅಮುಗಿ

ದೇವಯ್ಯ, ತೆಲುಗು ಜೊಮ್ಮಣ್ಣ, ಡಕ್ಕೆಯ ಬೊಮ್ಮಣ್ಣ, ಹಡಪದ ಅಪ್ಪಣ್ಣ –ಮುಂತಾದ ಅಸಂಖ್ಯಾತ ಶರಣರು ನೆರೆದಿದ್ದಾರೆ ಅನುಭವ ಮಂಟಪದಲ್ಲಿ ಅಥವಾ ಅನುಭಾವಗೋಷ್ಠಿಯಲ್ಲಿ. ಸೊನ್ನಲಿಗೆಯಿಂದ ಕರೆತಂದ ಶಿವಯೋಗಿ ಸಿದ್ಧರಾಮಯ್ಯನ ಅಂಗದ ಮೇಲೆ ಲಿಂಗವಿಲ್ಲ. ಇಂಥ ಸಿದ್ಧರಾಮಯ್ಯನನ್ನು ಕರೆತಂದುದಕ್ಕೆ ಒಳಗೊಳಗೇ ಶರಣ ರಿಗೆಲ್ಲ ಮುನಿಸು ನಡೆಯುತ್ತದೆ ಇಷ್ಟಲಿಂಗದ ಆವಶ್ಯಕತೆಯನ್ನು ಕುರಿತ ಮಥನಸಂಪರ್ಕಗೋಷ್ಠಿ.

ಪ್ರಭುದೇವರ ದೃಷ್ಟಿಯಲ್ಲಿ ಸಿದ್ಧರಾಮಯ್ಯ ಕಾಣುತ್ತಾರೆ ಹೀಗೆ:

ಪರಮಯೋಗಿ, ಶುದ್ಧ ಸಾತ್ವಿಕಯೋಗಿ, ಸಚ್ಚಿದಾನಂದಯೋಗಿ,
ನಿತ್ಯಪರಿಪೂರ್ಣಯೋಗಿ, ಶಿವಯೋಗಾಮೃತ
ಸೇವ್ಯಸಂತುಷ್ಟಯೋಗಿ,
ಪರಮಾನಂದಯೋಗಿ, ಸಕಲಕರಣ ಮರಣ ರಹಿತ ಯೋಗಿ,
ಸರ್ವೇಂದ್ರಿಯಸುಖ ನಿರ್ಮೂಲಯೋಗಿ, ಸಂಸಾರವನದಾವಾನಲ
ಯೋಗಿ,
ಮಾಯಾಹರಯೋಗಿ, ಮಾಯಾಮದದೂರಯೋಗಿ,
ನಿರ್ಗುಣಯೋಗಿ, ನಿರಂಜನಯೋಗಿ, ಸಕಲನಿಷ್ಕಲತತ್ವಶಿರೋರತ್ನ
ಯೋಗಿ,
ಅಖಂಡ ಪರಿಪೂರ್ಣಯೋಗಿ, ಅಪ್ರಮಾಣಗುಣಭರಿತಯೋಗಿ,
ಅಪ್ರತರ್ಕ್ಯ ಚಾರಿತ್ರಯೋಗಿ, ಅಸಾಧ್ಯಸಾಧಕಯೋಗಿ,
ಅಭೇದ್ಯ ಭೇದಕಯೋಗಿ, ಸುಜ್ಞಾನ ಪ್ರಭಾಮಯ ಯೋಗಿ,
ಮಹಾಜ್ಞಾನೈಕ್ಯ ಚೈತನ್ಯಯೋಗಿ,
ಕಾಯಗುಣಧರ್ಮಕರ್ಮಸಂಹಾರಯೋಗಿ,
ಬ್ರಹ್ಮಾಂಡಸಂದೋಹ ಸಂಭೂತ ಕಾರಣಯೋಗಿ,
ನಿರವಯ ನಿರ್ಲೇಪನಿಃಪಾಪಯೋಗಿ,
ಇಹಲೋಕ ಪರಲೋಕಗತಿರಹಿತ ಯೋಗಿ.

ಕೆರೆ ದೇಗುಲ ಕಟ್ಟಿಸುತ್ತಿದ್ದ ಕರ್ಮಯೋಗಿಯ ಮರೆಯಲ್ಲಿ –'ನೆಲದ ಮರೆಯ ನಿಧಾನದಂತೆ', 'ಮೇಘದ ಮರೆಯ ಮಿಂಚಿನಂತೆ', -ಎಂಥ ಅದ್ಭುತಮಹಾಯೋಗಿ, ಅಖಂಡ ಇರವು, ಅಖಂಡ ಮಹಾಜ್ಞಾನ ಚೈತನ್ಯ, ಅಖಂಡ ಪರಮಾನಂದ, ಅಖಂಡ ಪ್ರಭಾಮಯ ನಿತ್ಯ ಪರಿಪೂರ್ಣ ತಾನಾಗಿ ಪ್ರಜ್ವಲಿಸುತ್ತಿದೆ ! –ಅನಂತ ಬ್ರಹ್ಮಾಂಡ ಸಂದೋಹದ ಸಂಭೂತಿಗೆ ತಾನೆ ಮೂಲ ಕಾರಣವಾಗಿ .

ಇಂಥ ಮಹಾಸಿದ್ಧನಿಗೆ, ತನುವಿಲ್ಲ, ಮನವಿಲ್ಲ, ಜ್ಞಾನವಿಲ್ಲ ಬುದ್ಧಿಯಿಲ್ಲ—ಎಲ್ಲ ಏಕಾರ್ಥವಾಗಿ, ಒಂದಾಗಿ ನಿಂದ ಈ ಯೋಗ ಮೂರ್ತಿಗೆ, ಈ ನಿರವಯಕ್ಕೆ ಲಿಂಗಧಾರಣ ಮಾಡಬೇಕು—ಯಾವ ಅಂಗದ ಮೇಲೆ ? ಎಲ್ಲಿದೆ ಕಾಯ ? ಎಲ್ಲಿದೆ ಪ್ರಾಣ ? ಭಾವ ಎಲ್ಲಿದೆ ? ಸುಜ್ಞಾನ, ಮಹಾಜ್ಞಾನದಲ್ಲಿ ಸುಪ್ಪ ಸಿದ್ಧನಿಗೆ ಮತ್ತೆ ಇಷ್ಟಲಿಂಗದ ದಂದುಗವೆ ? ಹೇಳುತ್ತಾನೆ ಅಲ್ಲಮಲಿಂಗದೇವ:

ನಿಮ್ಮನರಿದ ಶರಣಂಗೆ ಶಿವಪೂಜೆಯ ಮಾಡುವ
ದಂದುಗವೇಕೋ ?
ಒಲುಮೆಯ ಕುಟಕ್ಕೆ ಹಾಸಿನ ಹಂಗೇಕೋ ?
ಬೇಟದ ಮರುಳಿಂಗೆ ಲಜ್ಜೆ ಮುನ್ನೇಕೊ ?
ನಿಮುಸುನಿಯ ಚಿನ್ನಕ್ಕೆ ಒರೆಗಲ್ಲ ಹಂಗೇಕೊ ?
ಗೊಹೇಶ್ವರಲಿಂಗವು ಪ್ರಾಣವಾಗಿಪ್ಪ ಸಿದ್ಧರಾಮಯ್ಯಂಗೆ
ಕುರುಡು ಮುನ್ನೇಕೊ ?

—ಎಂದು ಚೆನ್ನಬಸಣ್ಣ ಮುಂತಾದ ಶರಣರ ಆಕ್ಷೇಪವನ್ನು ದೂರಮಾಡುವ ಪ್ರಭುದೇವರು ಮತ್ತೆ ಹೇಳುತ್ತಾರೆ: ಸಿದ್ಧರಾಮಯ್ಯ ಆಕಾಶವನ್ನೇ ಅಡರಬಲ್ಲ; ಸಮುದ್ರವನ್ನೇ ದಾಟಬಲ್ಲ; ಮಾನವ ಸೀಮೆಯನ್ನು ಮೀರಿ ನಿಸ್ಸೀಮ ಲಿಂಗವಾಗಿರುವ ರಾಮಯ್ಯನಿಗೆ ಅಷ್ಟಗೋಲ ಹಂಗೇಕೆ ? ಕುರುಹಿನ ಲಿಂಗವೇಕೆ ? ಸೀಮೆಯ ಲಿಂಗದ ಗೊಡವೆ ಏಕೆ ?

ಪ್ರತಿಭಟಿಸುತ್ತಾನೆ ಚೆನ್ನಬಸವಣ್ಣ :

ಅಂಗದ ಮೇಲೆ ಲಿಂಗವಿಲ್ಲದನ್ನಕ್ಕರ,
ಪ್ರಾಣದಲ್ಲಿ ಲಿಂಗಪರಿಣಾಮವನ್ನೈದುವ ಪರಿ ಎಂತಯ್ಯಾ ?
ಅಂಗತ್ರಯವುಳ್ಳವರು ಲಿಂಗತ್ರಯ ಸಂಪನ್ನರಾಗಬೇಕು
ಒಂದಂಗ ವಿರಹಿತರಾಗಿಪ್ಪವರುಂಟೆ ?
ಕಂಗಳ ನೋಟಕಿಂಬಾವುದು ಹೇಳಾ ?

ಶಿವಯೋಗ !—ಎಂಥ ಶಿವಯೋಗ ? ಭಾವಾಂಗಕ್ಕೆ ಶಿವನಲ್ಲಿ ಯೋಗವಾಗಿ, ಭಾವಕ್ಕೆ ಲಿಂಗಧಾರಣವಾಗಿ, ಭಾವ ಲಿಂಗವಂತ ವಾದರೆ ಮುಗಿಯಿತೆ ಶಿವಯೋಗ ? ಮನ—ಪ್ರಾಣದ ಲಿಂಗಕ್ಕೆ ಶಿವನಲ್ಲಿ ಯೋಗವಾಗಿ, ಪ್ರಾಣ ಲಿಂಗವಂತವಾದರೆ, ಪೂರ್ಣವಾಯಿತೆ ಶಿವಯೋಗ ? ತ್ಯಾಗಾಂಗವೆನಿಸುವ ದೇಹದ ಗತಿ ಏನು ? ದೇಹವೂ ಶಿವನಲ್ಲಿ ಯೋಗವಾಗಿ, ದೇಹಕ್ಕೆ ಲಿಂಗಧಾರಣವಾಗಿ, ದೇಹ ಲಿಂಗ ವಂತವಾಗಬಾರದೆ ? ಪ್ರಾಣ, ಭಾವಕ್ಕೆ ಲಿಂಗಪೂಜೆ, ಲಿಂಗಭಕ್ತಿ, ಲಿಂಗಾರ್ಪಣ, ಲಿಂಗಪ್ರಸಾದ, ಲಿಂಗಾನಂದದ ಸಂಪತ್ತಿ ಇದ್ದಂತೆ, ಕಾಯಕ್ಕೆ ಈ ಸಂಪತ್ತು ಬೇಡವೇ ? ಮತ್ತು ಕಾಯಕ್ಕೆ ಈ ಲಿಂಗ ಸಂಪದದ ಐಶ್ವರ್ಯ, ಲಿಂಗ ಭೋಗೋಪಭೋಗ, ಈ ಲಿಂಗಾ—ನಂದದ ಪರಮ ಪರಿಣಾಮವಿಲ್ಲದೆ, ಕಾಯಕ್ಕೆ ಲಿಂಗದ ಊಟವಿಲ್ಲ ದಿದ್ದರೆ, ಪ್ರಾಣನ ಹಸಿವಿಗೆ ರುಚಿಯ ತೃಪ್ತಿ, ಭಾವದ ಹಸಿವಿಗೆ ರಸದ ತೃಪ್ತಿ ದೊರೆಕೊಂಬುದೆಂತು ? ಶಿವಾಂತರಿಕ್ಷಕ್ಕೆ ಲಿಂಗಾಕಾಶದ ಎತ್ತರಕ್ಕೆ ಏರಬಹುದು; ಅಲ್ಲಿ ಹಾರಾಡಬಹುದು. ಆದರೆ ಎತ್ತರಕ್ಕೆ ಏರಿ ಹಾರಾಡುವ ಅಂತರಿಕ್ಷ ಆಕಾಶದ ಉದ್ಯಾಣಲೀಲೆ ಎಷ್ಟು ಕಾಲ? ಕೆಳಗೆ, ಭೂಮಿಗೆ ಇಳಿದು ಬರಲೇ ಬೇಕಲ್ಲವೆ ? ನೆಲದ ಮೇಲೆ ಇರಲೇ ಬೇಕಲ್ಲವೆ ? ಉಂಡು ಉಟ್ಟು ಸುಖಿಸಿ ಭೋಗಿಸಿ ನೆಲ ದೊಡನೆ ಸಮರಸವಾಗಿ ಬಾಳಲೇಬೇಕಲ್ಲವೇ ? ಮತ್ತು ಏರುವ ಶಕ್ತಿ, ಹಾರುವ ಬಲ ರೆಕ್ಕೆಗೆ ಬಂದಿತೆಲ್ಲಿಂದ ? ಕಾಯದ ಆಶ್ರಯ, ದೇಹದ ಆಧಾರವಿಲ್ಲದೆ, ಕಾಯದ ಯಾವ ಸಂಬಂಧವು ಇಲ್ಲದೆ, ಪ್ರಾಣ ಪ್ರಾಣಿಸ ಬಲ್ಲುದೆ ? ಮನ ಚಲಿಸಬಲ್ಲುದೆ ? ಭಾವ ಭಾವಿಸ ಬಲ್ಲುದೆ ? ನೆಲವನ್ನು ಬಿಟ್ಟು, ಆಕಾಶ, ಅಂತರಿಕ್ಷಕ್ಕೆ ಏರಿ, ಎತ್ತರ ದಲ್ಲಿ ಹಾರಾಡುವದಕ್ಕಿಂತ ನೆಲದ ಮೇಲೆ ಕಾಲೂರಿ ನಿಂದು, ಆಕಾಶ-ದೆತ್ತರಕ್ಕೆ ಬೆಳೆದು ನಿಂತರೆ ಹೇಗೆ ?

ಮತ್ತೆ, ನೆಲದಿಂದ ಅಂತರಿಕ್ಷಕ್ಕೆ, ಅಂತರಿಕ್ಷದಿಂದ ಆಕಾಶಕ್ಕೆ ಏರಬೇಕು; ಮತ್ತೆ ನೆಲವನ್ನು ಅಂತರಿಕ್ಷಕ್ಕೆ, ಅಂತರಿಕ್ಷವನ್ನು ಆಕಾಶಕ್ಕೆ ಯೋಗಿಸಿ, ಪೂರ್ಣಯೋಗಿಸಿ, ಶಿವಯೋಗದ ಪರಿಪೂರ್ಣ ಸಮೃದ್ಧಿಯನ್ನು ಬೆಳೆಯಬೇಕು; ಉಣಬೇಕು; ಪರಿಣಾಮಿಸಬೇಕು. ಪ್ರಾಣದ ಅಥವಾ ಮನದ ಕಣ್ಣ ಮುಂದೆ ಸದಾ ಪ್ರಾಣಲಿಂಗ ಪ್ರಜ್ವಲಿಸಿ ತೋರುವಂತೆ, ಭಾವದ ಕಣ್ಣ ಮುಂದೆ ಭಾವಲಿಂಗ ನಿತ್ಯಾನಂದದ ಚಿದಾಕಾಶವಾಗಿ ಇರುವಂತೆ, ಕಾಯದ ಕಣ್ಣಮುಂದೆ ಲಿಂಗದೇವ ಸದಾ ನಿಂದಿರಬೇಕು; ಕಾಯದ ಕಣ್ಣಿಗೆ ಪರವಸ್ತು **ಸಾಕ್ಷಾತ್** ಕಾಣಬೇಕು. ಭಾವಲಿಂಗ ಇಳಿದು ಪ್ರಾಣಕ್ಕೆ ವೇಧಿಸಿ, ಪ್ರಾಣ ಲಿಂಗವಾದಂತೆ, ಪ್ರಾಣಲಿಂಗ ಕಣ್ಣಿಗೆ ಇಳಿದು ಕಣ್ಣಿಗೆ ಕಾಣಬೇಕೆಂದು, ಕಣ್ಣಿನ ಲಿಂಗ ಕರಸ್ಥಲಕ್ಕೆ ಇಳಿಯಬೇಕು. ಅಂದರೆ ಭಾವಕ್ಕೆ ಭಾವದ ತೃಪ್ತಿ; ಪ್ರಾಣಕ್ಕೆ ಪ್ರಾಣದ ತೃಪ್ತಿ; ಕಾಯಕ್ಕೆ ಕಾಯದ ತೃಪ್ತಿ.

ಚೆನ್ನಬಸವಣ್ಣನ ಈ ಅನುಭಾವವನ್ನು, ಕಾಯದ ಕಣ್ಣು ನೋಡ ಬಲ್ಲ, ಕರಸ್ಥಲದ ಪರಂಜ್ಯೋತಿಯಾದ ಇಷ್ಟಲಿಂಗದ ಆವಶ್ಯಕತೆಯನ್ನು, ನೆಲದ ಕುಲ-ಜಾತಿಯ ಮಾನವನಿಗೆ ಆತನ ನಿಜ ಸ್ವರೂಪದ ಮುಖವನ್ನು ಕಣ್ಣಿಗೆ ಕಾಣಿಸುವ ಕರಸ್ಥಲದ ದರ್ಪಣವಾದ ಅಂಗೈಯ ಲಿಂಗದ ಅನಿವಾರ್ಯವಾದ 'ಬೇಕೇ ಬೇಕ'ನ್ನು ಅಮುಗಿದೇವಯ್ಯ ಅನುಮೋದಿಸುತ್ತಾನೆ. ಅಷ್ಟೇ ಅಲ್ಲ –ಶಿವಯೋಗಿ ಇರಲಿ ಮತ್ತೆಂಥ ಅನುಭಾವಿಯೇ ಇರಲಿ –ಕರಸ್ಥಲದ ಪರಬ್ರಹ್ಮವೆನಿಸುವ ಇಷ್ಟಲಿಂಗದ ಇನ್ನೂ ಗಂಭೀರವಾದ ರಹಸ್ಯವನ್ನು ಶರಣರ ಮುಂದೆ,ಪ್ರಭುದೇವ ಸಿದ್ಧರಾಮಯ್ಯಗಳ ಮುಂದೆ ಬಿಚ್ಚಿ ಇಡುತ್ತಾನೆ:

ಜ್ಞಾನದಲ್ಲಿ ಅರಿದರೇನಯ್ಯಾ,ಸತ್ ಕ್ರೀಯನಾಚರಿಸದನ್ನಕ್ಕರ?
ನೆನೆದ ಮಾತ್ರದಲ್ಲಿ ಕಾಬುದೆ, ಕಾರ್ಯದಲ್ಲಲ್ಲದೆ ?
ಕುರುಡ ಕಾಣ ಪಥವ; ಹೆಳವ ನಡೆಯಲರಿಯ.
ಒಂದಿಲ್ಲದಿದ್ದರೆ ಒಂದಾಗದು.
ಜ್ಞಾನವಿಲ್ಲದ ಕ್ರೀ ಜಡನು; ಕ್ರೀಯಿಲ್ಲದ ಜ್ಞಾನ ಭ್ರಾಂತು.
ಇದು ಕಾರಣ ಸಿದ್ಧಸೋಮನಾಥನಲ್ಲಿ ಎರಡೂ ಬೇಕು.

ಅಂತರಂಗದ ಪ್ರಾಣ—ಭಾವಲಿಂಗ, ಜ್ಞಾನಲಿಂಗ—ಅರಿವು ಲಿಂಗ ಬೇಕು. ಆದರೆ ? ಅರಿವು–ಲಿಂಗ ಒಳಗೆ ಬೆಳಗು–ಬಯಲಾಗಿ ನಿಂತರೂ ಅದು ಬಹಿರಂಗದ ಕಾಯಕ್ಕೆ ಇಳಿದು, ಕೈ ಕಾಲು ಕಣ್ಣು ಕಿವಿಯಲ್ಲಿ ಹರಿದು ನಡೆದಾಡುವ ಸಾಮರ್ಥ್ಯ ಆ ಅರಿವಿಗೆ ಇಲ್ಲದಿದ್ದರೆ ? 'ಮನಸ್ಸಿನೊಳಗೆ ಮಂಡಿಗೆ ಮಾಡಿಕೊಂಡರೆ, ಗೋಧಿಯ ಲೆಕ್ಕ ಕೊಡುವವರಾರು ?' ಮನದ ಅರಿವು ಕಾಶಿಯ ವಿಶ್ವನಾಥನನ್ನು ಕಾಣಬಹುದು. ಆದರೆ ವಿಶ್ವನಾಥ ಕಂಡನೆ ? ಕಾಲು ನಡೆದು ಕಾಶಿಗೆ ಹೋದರೆ, ವಿಶ್ವನಾಥನ ಕಣ್ಣಾರೆ ದರ್ಶನ; ಅಲ್ಲವೆ ? ಅಥವಾ ಕಾಲಿಗೆ ನಡೆದು ಹೋಗುವ ಮನಸ್ಸಿದೆ, ಬಲವಿದೆ. ಇದ್ದರೇನು ? ನಡೆವ ಹಾದಿಯನ್ನು ನೋಡ ಬಲ್ಲ ಕಣ್ಣು ಇರಲೇಬೇಕಲ್ಲವೆ ? ಕಣ್ಣು ಬೇಕು; ಕಾಲು ಬೇಕು. ಜ್ಞಾನಲಿಂಗ ಬೇಕು; ಜ್ಞಾನವನ್ನು ಆಚಾರವಾಗಿ ನಡೆಯ ಬಲ್ಲ ಆಚಾರಲಿಂಗ ಬೇಕು. ಇಂಥ ಅಂತರ್ ಜ್ಯೋತಿಯಾದ ಜ್ಞಾನ ಮತ್ತು ಬಹಿರಂಗದ ಕ್ರಿಯಾಪ್ರಕಾಶ— ಎರಡೂ ಒಂದಾಗಿ, ಸಂದು ಬಿರುಕಿಲ್ಲದೆ ಇರುವ ' ಜ್ಞಾನಕ್ರಿಯಾ ಪ್ರಕಾಶವೆ' ಇಷ್ಟಲಿಂಗ. ಅದು 'ದೃಷ್ಟ' ಲಿಂಗ. ಅದೇ ಕ್ರಿಯಾ ಲಿಂಗ, ಅದೇ ಆಚಾರಲಿಂಗ.

ಶರಣರೆಲ್ಲರ ಏಕೈಕ ಅನುಭವದ ಅಭಿಮತಕ್ಕೆ ಆನಂದದಿಂದ ತಲೆಬಾಗಿದ ಸಿದ್ಧರಾಮಯ್ಯ. ತನ್ನ ಅಪೂರ್ಣ ಯೋಗಕ್ಕೆ ತಾನೇ ಬೆರಗಾಗಿ ಬೆಡಗುಗೊಂಡ. ಅಲ್ಲಮಪ್ರಭುದೇವರೂ ಅಂಗದ ಮೇಲೆ ಲಿಂಗ ಸಾಹಿತ್ಯವಾಗಿರಬೇಕೆಂದು ಒಪ್ಪಿ, ಸಿದ್ಧರಾಮಯ್ಯನಿಗೆ ಲಿಂಗ ದೀಕ್ಷೆಯನ್ನು ಕರುಣಿಸಬೇಕೆಂದು ನಿರೂಪ ಕೊಡುತ್ತಾರೆ ಚೆನ್ನ–ಬಸವಣ್ಣನಿಗೆ :

ರತ್ನದೀಪ್ತಿಯಾದಡೇನು ? ಬಂಧಿಸಿದ ಕುಂದಣದಲ್ಲಿಯೆ
ಸಂದಿರಬೇಕು.
ಸ್ವಾದುರಸದ ರುಚಿಯನೀವ ಫಲವೆಂದಡೇನು,
ವೃಕ್ಷವಿಲ್ಲದನ್ನಕ್ಕರ ?
ಚಿತ್ರಸೌಂದರ್ಯ ನೋಟಕ್ಕೆ ಸುಖವೆಂದಡೇನು,
ಪಟ ಮುಖ್ಯ ಸ್ಥಾನವಿಲ್ಲದನ್ನಕ್ಕರ ?
ಅಂಜನಸಿದ್ಧಿಯ ನಿಧಾನವ ಕಂಡಡೇನು, ಸಾಧನಕ್ರೀಯಿಂದ
ಸಾಧ್ಯವ ಮಾಡಿಕೊಳ್ಳದನ್ನಕ್ಕರ ?

ಇದು ಕಾರಣ, ಕಾಯದ ಕರಸ್ಥಲಕ್ಕೆ
ಇಷ್ಟಲಿಂಗಸಾಹಿತ್ಯವಿಲ್ಲದಿದ್ದರೆ,
ನಿರವಯವಾದ ಜ್ಞಾನಯೋಗದ ಕೂಟ ಸಾಧ್ಯವಾಗದು.
ಇದು ಕಾರಣ ಕ್ರಿಯಾಲಿಂಗ ಸಂಬಂಧವೆ ಭಕ್ತಂಗೆ ಮತವು.
ಇದೇ ದೇಹ ಶೌಚವು.

ನಮ್ಮ ಗೊಹೇಶ್ವರನ ಶರಣರ ಮನ ಒಪ್ಪುವಂತೆ
ಸಿದ್ಧರಾಮಯ್ಯಂಗೆ ಲಿಂಗಸಾಹಿತ್ಯವ ಮಾಡಾ
ಚೆನ್ನಬಸವಣ್ಣಾ.

ಚೆನ್ನಬಸವಣ್ಣ ಸಿದ್ಧರಾಮಯ್ಯನಿಗೆ ಲಿಂಗದೀಕ್ಷೆಯನ್ನಿತ್ತ ವಿವರ, ಶರಣರ ಅನುಭಾವ, ಅವರ ಜ್ಞಾನ, ಅವರ ಆಚಾರ, ಮತ್ತಿನ್ನೂ ಕೆಲವೊಂದು ಗಂಭೀರ ರಹಸ್ಯವನ್ನು ಬಯಲಿಗೆ ತರುತ್ತವೆ.

ಸಿದ್ಧರಾಮಯ್ಯನ ಅಂಗದ ಮೇಲೆ ಲಿಂಗ ಸಾಹಿತ್ಯ ಆಯಿತು. ಚೆನ್ನಬಸವಣ್ಣನ ಕೃಪೆಯಿಂದ ಷಡುಸ್ಥಲಕ್ಕೆ ಅಧಿಕಾರಿಯಾದ ರಾಮಯ್ಯ ಆನಂದವಾಗಿ ಉಕ್ಕುತ್ತಾನೆ:

ಹೆಸರಿಡಬಾರದ ಲಿಂಗವ ಹೆಸರಿಟ್ಟು ಎನ್ನ ಕರಸ್ಥಲಕ್ಕೆ ತಂದು,
ಕರತಳಾಮಳಕದಂತೆ ಮಾಡಿ, ಎನ್ನ ಕರಸ್ಥಲಕ್ಕೆ
ಕ್ರಿಯಾ ಲಿಂಗವ ಕೊಟ್ಟ ಶ್ರೀ ಗುರು ಚೆನ್ನಬಸವಣ್ಣ.
ಕಪಿಲ ಸಿದ್ಧಮಲ್ಲಿನಾಥನ ಕೈಯಲ್ಲಿ ಪಿಡಿದೆನು.

ಮತ್ತೇನು ಬೇಕು ಸಿದ್ಧನಿಗೆ ? ಮತ್ತೇನು ಬೇಕು ಮಾನವ ಕುಲದ ಶರಣಸಂತತಿಗೆ ? ಇಂಥ ಮಿಣುಕು, ಮಿನುಗು ದೀಪಗಳನ್ನು ಹಿಡಿದು, 800 ವರ್ಷಗಳ ಕಾಲಾಂತರವನ್ನು ಭೇದಿಸಿ, ಕಲ್ಯಾಣದ 'ಅನುಭವ ಮಂಟಪ'ವನ್ನು ಕಾಣುವುದು ಕಷ್ಟ. ಅನುಭಾವ ಗೋಷ್ಠಿ ಮಾಡಿ,ಸುತ್ತ ಮುತ್ತಣ ಅಸಂಖ್ಯಾತರ ಅನುಭವಕ್ಕೆ ಸತ್ಯ ಪ್ರಕಾಶವನ್ನು ನೀಡಿದ ಅನುಭಾವದ ಸಂಗೋಷ್ಠಿಗಳ ಮಾತನ್ನು ಕೇಳುವುದು ಕಠಕಷ್ಟ. ಆದರೂ ಕಾಣಬಹುದು, ಕೇಳಬಹುದು— ಅರಿವಿನ ಬೆಳಗು ಒಳಗೆ ಉರಿದೆದ್ದರೆ.

ಶೂನ್ಯ ಸಂಪಾದನೆ

ಲೇಖಕರು :
ಪ್ರೊ. ಸ. ಸ. ಮಾಳವಾಡ, ಎಂ.ಎ.,
ಧಾರವಾಡ

ಶೂನ್ಯ ಸಂಪಾದನೆಯು ಕನ್ನಡದ ಉದ್ಗ್ರಂಥ. ವೀರಶೈವ ಸಿದ್ಧಾಂತದ ಪವಿತ್ರ, ಪ್ರಕಾಶಮಯ ಪಠ್ಯಗ್ರಂಥ. ವಿಶ್ವದ ಅನುಭಾವ ಸಾಹಿತ್ಯದಲ್ಲಿ ಹಿರಿಯ ಸ್ಥಾನಕ್ಕೆ ಅರ್ಹವಾದ ಕೃತಿಯದು. ಮಾನವ ಕುಲಕೋಟಿಯ ಕಲ್ಯಾಣವು ಅದರ ಗಮ್ಯ. ಈ ದಿಶೆಯಲ್ಲಿ ಅದು ಗಂಭೀರ ಮೌಲಿಕ ಗ್ರಂಥವಾಗಿದೆ.

'ಶೂನ್ಯ ಸಂಪಾದನೆ' — ಈ ಪದದ ಅರ್ಥ ವಿವರಣೆಯನ್ನು ನಾವು ಮೊದಲು ಪರಿಶೀಲಿಸೋಣ :

1) 'ಶೂನ್ಯ' ಎಂದರೆ 'ಇಲ್ಲ' – ಇದು ಒಂದು ಸಾಮಾನ್ಯ ಅರ್ಥ.

2) 'ಇಲ್ಲವೆಂಬುದು ಉಂಟು ನೋಡಾ' ಎಂಬ ವಚನವನ್ನು ಆಧರಿಸಿದ ಇನ್ನೊಂದು ಅರ್ಥ ಈ ಪದಕ್ಕೆ ಇದೆ. ಶೂನ್ಯವೆಂದರೆ ಎಲ್ಲವನ್ನು ಒಳಗೊಳ್ಳುವ 'ಬಯಲು' ಎಂದು ಆ ಅರ್ಥ.

3) ಗಣಿತ ಶಾಸ್ತ್ರದಲ್ಲಿ O (ಶೂನ್ಯ, ಪೂಜಿ) = ! ಏನೂ ಇಲ್ಲ !! ಅಮಿತ –ಹೀಗೆ ಎರಡು ಬಗೆಯ ಕಲ್ಪನೆಯಿದೆ.

4) 'ಪರಿಪೂರ್ಣತೆ' ಎಂಬುದು ಶೂನ್ಯ ಪದಕ್ಕೆ ನಾಲ್ಕನೆಯ ಅರ್ಥವಾಗಿದೆ. ಈ ಬಗೆಯ ಪರಿಪೂರ್ಣತೆಯನ್ನು ಕುರಿತು ಶ್ರೀ ಅರವಿಂದರು ಹೀಗೆ ಹೇಳಿದ್ದಾರೆ :

A perfect perfection comes only by living in the supreme and the whole divine.

ಈ ದೃಷ್ಟಿಯಿಂದ ಶೂನ್ಯದ ಬಾಳೆಂದರೆ ದೈವೀಜೀವನ.

5) ವೀರಶೈವ ಸಿದ್ಧಾಂತದಲ್ಲಿ ಸೃಷ್ಟಿ ನಿರ್ಮಾಣ ಕ್ರಮದಲ್ಲಿ ಪ್ರಥಮ ಅವಸ್ಥೆಯನ್ನು 'ಶೂನ್ಯಲಿಂಗ' ಎಂದು ಕರೆಯಲಾಗಿದೆ. ಹೀಗೆ ಶೂನ್ಯವು ಸೃಷ್ಟಿಯ ಪೂರ್ವದ ಅವಸ್ಥೆಯನ್ನು ಸೂಚಿಸುತ್ತಿದೆ. ಇದನ್ನು ಶ್ರೀ ಅರವಿಂದರು 'ಸಾವಿತ್ರಿ' ಕಾವ್ಯದಲ್ಲಿ

It was the hour before Gods awake

....

A fathomless zero occupied the world

ಎಂಬುದಾಗಿ ವರ್ಣಿಸಿದ್ದಾರೆ. ಸೃಷ್ಟಿಯು ಆವಿಷ್ಕಾರ ಪಡೆ (*Manifest*) ಯದ ಮುನ್ನ ಇದ್ದ ಸ್ವರೂಪವದು. "ಸಕಲಚರಾಚರಂಗಳ ಸುಳಿವು ಇಲ್ಲದ" ಸ್ಥಿತಿಯೆಂದು ವಚನಶಾಸ್ತ್ರ ಹೇಳುತ್ತಿದೆ.

ಚಿತ್‌ಶಕ್ತಿಯ ಸಂಚಲನದಿಂದ ಸೃಷ್ಟಿಯು ರೂಪುಗೊಂಡಿತು :

'Then something in the inscrutable darkness stirred'

-Savitri.

ಆಗ ಸಕಲ ಚರಾಚರಂಗಳ ಸುಳಿವು ಆರಂಭವಾಯಿತು. ಹೀಗೆ 'ಶೂನ್ಯ'ವು ಸೃಷ್ಟಿ ನಿರ್ಮಾಣ ಪೂರ್ವದ ಸ್ವರೂಪ.

6) ವಚನ ಸಾಹಿತ್ಯದಲ್ಲಿ ಕಂಡುಬರುವ ವಿವೇಚನೆಯಂತೆ 'ಶೂನ್ಯ'ವು 'ಅಂತರಂಗ ಜೀವನದ ಸತ್ವಸಾರ'.

7) ಶೂನ್ಯವನ್ನು *Cosmic transcendental conciousness*, 'ವಿಶ್ವಂಭರ, ವಿಶ್ವಾತೀತ ಪ್ರಜ್ಞೆ' ಎಂದೂ ಅರ್ಥಯಿಸಬಹುದು.

ಇನ್ನು ನಾವು 'ಸಂಪಾದನೆ' ಪದದ ಅರ್ಥವನ್ನು ಗಮನಿಸಬೇಕು :

1) 'ಸಂಪಾದನೆ' ಪದವನ್ನು ಸಾಮಾನ್ಯವಾಗಿ 'ಗಳಿಸುವುದು' ಎಂಬ ಅರ್ಥದಲ್ಲಿ ಬಳಸಲಾಗುತ್ತಿದೆ.

2) ಗ್ರಂಥ ವಿಷಯಕವಾಗಿ ಸಂಕಲನ ಮಾಡುವುದು, ಚೆದುರಿ ಹೋದುದನ್ನು ಒಂದೆಡೆ ಸಂಗ್ರಹಿಸುವುದು, ಪರಿಷ್ಕರಿಸುವುದು –ಎಂಬ ಅರ್ಥವಿದೆ.

3) ಸಂದರ್ಭ ಸೂಚನೆಯೊಂದಿಗೆ ಕಲ್ಪಕತೆಯೊಂದಿಗೆ ಸಂವಾದದ ರೀತಿಯಲ್ಲಿ ವಚನಗಳನ್ನು ಹೊಂದಿಸುವುದು. ಈ ಅರ್ಥವು ವಚನಸಾಹಿತ್ಯದಲ್ಲಿ ರೂಢವಾಗಿದೆ.

4) 'ಶೂನ್ಯ ಸಂಪಾದನೆ' ಗ್ರಂಥದಲ್ಲಿ 'ಉಪದೇಶ', ಎಂಬ ಅರ್ಥದಲ್ಲಿ ಈ ಪದವನ್ನು ಉಪಯೋಗಿಸಿದೆ.

5) 'ಅನುಭಾವ' ಎಂಬ ವಿಶೇಷ ಅರ್ಥದಲ್ಲಿಯೂ ಈ ಪದವನ್ನು ಉಪಯೋಗಿಸಿದ್ದುಂಟು. ಅನುಭಾವವೆಂದರೆ 'ಅದೇ' ತಾನಾಗುವುದು. 'ಅದೇ' ಎಂಬುದು ಪರಮಾತ್ಮ ಸೂಚಕವಾಗಿದೆ.

ಶೂನ್ಯ ಮತ್ತು ಸಂಪಾದನೆ ಇವೆರಡೂ ಪದಗಳನ್ನು ಸೇರಿಸಿ ಶಿವಶರಣರು ಇಟ್ಟುಕೊಂಡ ವಿಶೇಷ ಅರ್ಥವೆಂದರೆ, ಸೃಷ್ಟಿಪೂರ್ವದ ಅವಸ್ಥೆಯನ್ನು ಪಡೆಯುವ, ಪರಮಾತ್ಮನೇ ಆಗುವ ಪಥವಾಗಿದೆ. ಈ ದಿಸೆಯ ದಿವ್ಯ ಜ್ಞಾನವನ್ನು ಪ್ರಭುದೇವನು ಶರಣರಿಗೆ ಬೋಧಿಸಿದ. ಆ ಬೋಧೆಯನ್ನೊಳಗೊಂಡ ಗ್ರಂಥ 'ಶೂನ್ಯಸಂಪಾದನೆ'. ಆ ಗ್ರಂಥದ ಬಗೆಗೆ ನಾನೀಗ ಪ್ರಸ್ತಾಪಿಸುತ್ತೇನೆ.

ನಾನಿಲ್ಲಿ ಪ್ರಸ್ತಾಪಿಸುತ್ತಿರುವುದು 15 ನೆಯ ಶತಮಾನದ ಗೂಳೂರು ಸಿದ್ಧವೀರಣ್ಣೊಡೆಯರ ಕೃತಿ. ಈ 'ಶೂನ್ಯಸಂಪಾದನೆ' ಯಲ್ಲಿ (ಡಾ|| ಹಳಕಟ್ಟಿ ಆವೃತ್ತಿ: 1930) ಒಟ್ಟು 22 ಅಧ್ಯಾಯ ಗಳಿವೆ. ಮೊದಲನೆಯ 'ಪೀಠಿಕಾ ಪ್ರಕರಣ', 2ನೆಯ 'ಗುರುಕರುಣ', 11ನೆಯ 'ಸಿದ್ಧರಾಮಯ್ಯನ ಗುರುಕರುಣ', 12ನೆಯ 'ಪ್ರಭುದೇವರ ಪೂಜಾಸ್ತುತಿ', 22ನೆಯ ' ಎಲ್ಲ ಗಣಂಗಳ ನಿರ್ವಯಲ ಸಮಾಧಿ' ಎಂಬ ಐದನ್ನುಳಿದು ಇತರ 17 ಅಧ್ಯಾಯಗಳನ್ನು 'ಸಂಪಾದನೆ' ಎಂದು ಕರೆಯಲಾಗಿದೆ. ಇಲ್ಲಿ 'ಸಂಪಾದನೆ' ಎಂದರೆ 'ಉಪದೇಶ' ಎಂದು ಭಾವಿಸಬೇಕು 12 ಜನ ಪ್ರಮುಖ ಶಿವಶರಣರ ದೈವೀ ಜೀವನ ಪಥದ ವಿವೇಚನೆಯು ಇಲ್ಲಿದೆ. ಆ ಶರಣ ರೆಂದರೆ, 1) ಪ್ರಭುದೇವ 2) ಮುಕ್ತಾಯಕ್ಕ 3) ಸಿದ್ಧ ರಾಮ 4) ಮರುಳ ಶಂಕರದೇವ 5) ಬಸವಣ್ಣ 6) ಚೆನ್ನ ಬಸವಣ್ಣ 7) ಮಡಿವಾಳ ಮಾಚಿದೇವ 8) ಆಯ್ದಕ್ಕಿ ಮಾರಯ್ಯ 9) ಮೋಳಿಗೆಯ ಮಾರಯ್ಯ 10) ನುಲಿಯ ಚಂದಯ್ಯ 11) ಘಟ್ಟಿ ವಾಳಯ್ಯ 12) ಅಕ್ಕಮಹಾದೇವಿ. ಇವರನ್ನು ಕುರಿತು 12 ಪ್ರಮುಖ ಸನ್ನಿವೇಶಗಳಿವೆ. ಆಯೆಲ್ಲ ಸನ್ನಿವೇಶಗಳನ್ನು ಸಮ ನ್ವಯಿಸುವ ಕೇಂದ್ರವ್ಯಕ್ತಿ ಪ್ರಭುದೇವ. ಆತನು ಶಿವಾನುಭವ ಗೋಷ್ಠಿಯ ಅಧ್ಯಕ್ಷ. 'ಶೂನ್ಯಸಂಪಾದನೆ'ಯ ಪಥವನ್ನು ಬೋಧಿ ಸುವವನು ಆತನೇ. ಆದರೆ ಆ ಬೋಧೆ ಏಕನಲಿಕೆಯಿಂದ ಹರಿದು ಬಂದುದಲ್ಲ. ಸಂಬಂಧಿಸಿದ ಶರಣರು ವಿಚಾರ ವಿನಿಮಯ ಮಾಡುತ್ತಾರೆ. ತಮ್ಮ ನಿಲುಮೆಯನ್ನು ಪ್ರಸ್ತಾಪಿಸುತ್ತಾರೆ. ಕೆಲ ವರು ತೀವ್ರವಾದ ವಾದಕ್ಕೆ ತೊಡಗುತ್ತಾರೆ. ವಿಚಾರ ಮಂಥನದ ನಂತರ ಪ್ರಭುದೇವನು ಆ ವಾದಗಳನ್ನು ಸಮನ್ವಯಿಸುತ್ತಾನೆ. ತನ್ನ ಬೋಧೆಯನ್ನು ಒದಗಿಸುತ್ತಾನೆ. ಇಲ್ಲವೆ ಸಂಬಂಧಪಟ್ಟ ಶರಣರ ನಿಲುಮೆಯನ್ನು ಒಪ್ಪಿಕೊಳ್ಳುತ್ತಾನೆ. ಕೆಲವು ಸಲ ಖಂಡಿಸುತ್ತಾನೆ. ವಿಶಿಷ್ಟ ಶರಣರ ನಿಲುಮೆಯನ್ನು ತಾನು ಒಪ್ಪುವಾಗಲೂ ಇತರರಿಗೆ ಮನವರಿಕೆಯಾಗಲೆಂಬ ದೃಷ್ಟಿಯಿಂದ ಕಟುವೆನಿಸುವ ಪ್ರಶ್ನೆ ಕೇಳು ತ್ತಾನೆ. ಕೆಲವು ಶರಣರನ್ನು ತೀಕ್ಷ್ಣವಾದ ಪರೀಕ್ಷೆಗೆ ಒಡ್ಡಿ ಆ ಪರೀಕ್ಷೆಯ ನಂತರ ಅವರನ್ನು ಮೆಚ್ಚಿಕೊಳ್ಳುತ್ತಾನೆ. ಅವರಿಗೆ 'ನಮೋ ನಮೋ' ಎಂದು ಹೇಳುತ್ತಾನೆ. ಬೆಳಕನ್ನು ಕಂಡುಕೊಳ್ಳುವ ಈ ಕ್ರಮದಲ್ಲಿ ಪ್ರಜಾಪ್ರಭುತ್ವದ ಮಾದರಿಯಿದೆ. ಏಕಮುಖವಾದ ಗುರಿಯಿದೆ.

ಇಲ್ಲಿ ಬರುವ ಪ್ರಮುಖ ಸನ್ನಿವೇಶಗಳಿಗೆ ಸಂಬಂಧಿಸಿದಂತೆ– 1) ಅನಿಮಿಷಯ್ಯ 2) ಗೊಗ್ಗಯ್ಯ 3) ಅಜಗಣ್ಣ 4) ಲಕ್ಕಮ್ಮ 5) ಮಹಾದೇವಮ್ಮ 6) ಗೋರಕ್ಷ—ಇವರ ವಿಷಯವೂ ನಿರೂಪಿತ ವಾಗಿದೆ.

ಪ್ರಭುದೇವ ರಂಗಸ್ಥಲದ ಮಧ್ಯದಲ್ಲಿ ಇದ್ದಾನೆ. ಅನಿಮಿ ಷಯ್ಯ ರಂಗಸ್ಥಲದ ಹಿನ್ನೆಲೆಯಲ್ಲಿದ್ದಾನೆ. ಆತನ ಲಿಂಗವನ್ನು ಪ್ರಭುದೇವ ಪಡೆಯುತ್ತಾನೆ. ಅಜಗಣ್ಣ ಮರಣ ಹೊಂದಿದ್ದಾನೆ. ಗೊಗ್ಗಯ್ಯನದು ಮೌನದ ಪಾತ್ರ. ಗೋರಕ್ಷನದು ಅಹಂಕಾರದ್ದು. ಇನ್ನುಳಿದ ಇಬ್ಬರು ಶರಣೆಯರು ತಮ್ಮ ಪತಿಗಳೊಂದಿಗೆ ರಂಗಸ್ಥಲದ ಮೇಲೆ ಕಾಣಿಸಿಕೊಳ್ಳುತ್ತಾರೆ. ಗಂಡಂದಿರಿಗೆ ಅಧ್ಯಾತ್ಮ ಪಥದಲ್ಲಿ ಸ್ಫೂರ್ತಿಯನ್ನು, ಮಾರ್ಗದರ್ಶನವನ್ನು ಒದಗಿಸುವ ಪಾತ್ರ ಅವರ ದಾಗಿದೆ.

ಶೂನ್ಯಸಂಪಾದನೆಯಲ್ಲಿ ಚಿತ್ರಿತವಾದ ಮಹತ್ವಪೂರ್ಣ ಸನ್ನಿ ವೇಶಗಳು ಹೀಗಿವೆ:

1. ಗೊಗ್ಗಯ್ಯ ಮುಗ್ಧತನದಿಂದ ಕೃಷಿ ಕಾಯಕದಲ್ಲಿ ನಿರತ ನಾಗಿದ್ದ. ಆತನಿಗೆ ಪ್ರಭುದೇವ 'ತನುವ ತೋಂಟವ ಮಾಡಿ ಮನವ ಗುದ್ದಲಿ ಮಾಡಿ....ಭ್ರಾಂತಿನ ಬೇರ ಒಡೆದು ಬ್ರಹ್ಮಬೀಜವ ಬಿತ್ತಿ... ಸಮತೆ ಸೈರಣೆಯೆಂಬ ಬೇಲಿಯನಿಕ್ಕಿ......ತೋಂಟದಲ್ಲಿ ಸಸಿಯ ಸಲಹು'ವ ಶಿವಾನುಭವದ ಕ್ರಮವನ್ನು ಬೋಧಿಸಿದ.

2. ಪ್ರಭುದೇವ ಅನಿಮಿಷಯ್ಯನ ಲಿಂಗ ಪಡೆದಾಗ ಆತನು ಬಯಲಾದ. ಆಗ " ಗುರುಶಿಷ್ಯ ಭಾವದಲ್ಲಿ ಅಭೇದ್ಯವೆಂದರಿದ ಪ್ರಭುದೇವರು. ತಮ್ಮಂತರಂಗದ ಬೋಧಾಮೂರ್ತಿಯನು ಆ ಶ್ರೀ ಗುರುವೆಂದರಿದು ನಿಶ್ಚಯಿಸಿ"ದ. ತಾನು ಕಂಡುಕೊಂಡ ಈ ಬೋಧೆ ಯನ್ನು ಪ್ರಸಾರ ಮಾಡಲು ಮುಂದೆ ಸಾಗಿದ. ಆಗ ಮುಕ್ತಾಯಕ್ಕ ನನ್ನು ಸಂಧಿಸಿದ.

ಮುಕ್ತಾಯಕ್ಕನ ಅಣ್ಣ ಅಜಗಣ್ಣ ಆದೇ ಮರಣಹೊಂದಿದ್ದ. ಶವ ಆಕೆಯ ಬಳಿಯಲ್ಲಿಯೇ ಇತ್ತು. ಮುಕ್ತಾಯಕ್ಕ ವಿಲಾಪಕ್ಕೆ ತೊಡಗಿದ್ದಳು. ಅಣ್ಣ ಅಜಗಣ್ಣ ತನ್ನ ಅಧ್ಯಾತ್ಮ ಪಥದ ಗುರುವೂ ಆಗಿದ್ದುದರಿಂದ ಗುರುವನ್ನು ಕಳೆದುಕೊಂಡೆನೆಂಬ ದುಃಖಕ್ಕೆ,ಮರಪೆಗೆ ಆಕೆ ಒಳಗಾಗಿದ್ದಳು. ತನಗೆ ಗುರು ಇನ್ನೆಲ್ಲಿ ? ಎಂಬುದು ಆಕೆಯ ದುಃಖಕ್ಕೆ ಕಾರಣ. ಈ ಪ್ರಶ್ನೆಗೆ ಉತ್ತರವನ್ನು ಪ್ರಭುದೇವ ಈಗ ತಾನೇ ಕಂಡುಕೊಂಡಿದ್ದ. 'ಅರಿವಿನೊಳಗಣ ಮರಹಿ'ಗೆ ಒಳಗಾದ ಮುಕ್ತಾಯಕ್ಕನಿಗೆ ಅದನ್ನು ವಿವೇಚಿಸಿದ. ಈ ಸಂದರ್ಭದ ವಾದದಲ್ಲಿ ಪ್ರಭುದೇವನನ್ನು ಬೆರಗುಗೊಳಿಸುವ ಹಿರಿಮೆ ಮುಕ್ತಾಯಕ್ಕನ ದಾಗಿದೆ. ಪ್ರಭುದೇವ 'ಎರಡಿಲ್ಲದ ಐಕ್ಯಂಗೆ ಒಳಹೊರಗಿಲ್ಲ ನೋಡಾ ! ಗುಹೇಶ್ವರನ ಶರಣ ಅಜಗಣ್ಣಂಗೆ' ಎಂದು ಹೇಳಿ ಮುಕ್ತಾಯಕ್ಕ ನನ್ನು ಸಾಂತ್ವನಗೊಳಿಸಿದ. ಕೊನೆಗೆ 'ನಿನಗೆ ನೀನು ಗುರು' ಎಂಬು ದನ್ನು ಮನವರಿಕೆ ಮಾಡಿಕೊಟ್ಟ.

ಸಂದರ್ಭಕ್ಕೆ ತಕ್ಕಂತೆ ಅವರವರ ಸ್ವಭಾವಕ್ಕೆ ಅನುಗುಣವಾಗು ವಂತೆ ಸಮಾಧಾನವನ್ನು ಬೋಧೆಯನ್ನು ಒದಗಿಸುವ ದೃಷ್ಟಿಯಿಂದ ಪ್ರಭುದೇವ ಸಂಚಾರ ಕೈಗೊಂಡ.

3. ಸೊನ್ನಲಿಗೆಯಲ್ಲಿ ಸಿದ್ಧರಾಮು ಕೆರೆ-ಗುಡಿ ಕಟ್ಟಿಸುವ, ಲಿಂಗ ಸ್ಥಾಪಿಸುವ ಸಂಭ್ರಮದಲ್ಲಿದ್ದ. ಕರ್ಮಯೋಗಿ ಸಿದ್ಧರಾಮ ನಿಗೆ ಪ್ರಭುದೇವ ಇಷ್ಟಲಿಂಗದ 'ಕುರುಹುವಿಡಿದು ಕುರುಹುಗೆಡುವ' ಶಿವಾನುಭವ ಮಾರ್ಗದ ಆವಶ್ಯಕತೆಯನ್ನು ಮನವರಿಕೆ ಮಾಡಿಕೊಡ ಬೇಕಾಗಿತ್ತು. ಅಂತೆಯೆ ಆತನನ್ನು ಕಲ್ಯಾಣದಲ್ಲಿ ಬಸವಣ್ಣ ಸ್ಥಾಪಿ ಸಿದ ಶಿವಾನುಭವ ಮಂಟಪಕ್ಕೆ ಕರೆದುಕೊಂಡು ಬಂದ.

4. ಪ್ರಭುದೇವ ಸಿದ್ಧರಾಮರು ಕಲ್ಯಾಣದಲ್ಲಿ ಬಸವಣ್ಣನ ಮಹಾಮನೆಗೆ ಬರುತ್ತಾರೆ. ಆಗ ಬಸವಣ್ಣ ಒಳಗೆ ಇಷ್ಟಲಿಂಗ ಪೂಜೆಯಲ್ಲಿ ತನ್ಮಯನಾಗಿದ್ದ. ಬಸವಣ್ಣ ಶರಣಶಿರೋಮಣಿ. ಭಕ್ತಿಸಾಮ್ರಾಜ್ಯದ ಚಕ್ರವರ್ತಿ. ಅಂತಹವನ ನಿಲುವೆಯಲ್ಲಿಯೂ 'ಮಾಟಕೂಟದ ಭ್ರಮೆ'ಯ ಕೊಂಚ—ಲೇಪವಿದ್ದಂತೆ—ಪ್ರಭುದೇವ ನಿಗೆ ತೋರಿತು. ಅದನ್ನು ತೊಡೆದು ಹಾಕಲು ಆತನೊಂದಿಗೆ ಬಹಳ ನಿಷ್ಠುರವಾಗಿ ವರ್ತಿಸಿದ. ಅಂತಹ ತನ್ನ ನಿಷ್ಠುರತೆಯನ್ನು ಪ್ರಭುದೇವ ಸಮರ್ಥಿಸಿಕೊಂಡದ್ದು ಹೀಗೆ:

> ಸೂಳೆ ಹಲಬರನುರುಳಿದಳೆಂದು ನಿಂದಿಸುವರಿಲ್ಲ ಕೇಳಾ !
> ಪತಿವ್ರತೆ ತನ್ನ ಪುರುಷನಲ್ಲದೆ ಮತ್ತೊಬ್ಬನ ಮುಖವ
> ನೋಡಿದರೆ, ಅವಳು ಚಾಂಡಾಲಿ ಎಂಬುದು ಲೋಕವೆಲ್ಲವು
> ಕೀರ್ತಿವಾರ್ತೆಗೆ ಮಾಡುವ ಭಕ್ತ ತಪ್ಪಿದರೆ, ಅದ ಮನಕ್ಕೆ. ತರಲಿಲ್ಲ
> ಸಜ್ಜನ ಸದ್ಭಕ್ತಿಯನೆಡಹಿದರೆ ಅದ ಸೈರಿಸಬಾರದು ನೋಡಾ
> ನಮ್ಮ ಗುಹೇಶ್ವರ ಲಿಂಗಕ್ಕೆ ಆದಿಯಿಂದತ್ತ ನೀನೇ ಭಕ್ತನಾದ ಕಾರಣ
> ಮನನೊಂದಿತ್ತು ಕಾಣಾ ಸಂಗನ ಬಸವಣ್ಣಾ.

ಬಸವಣ್ಣನ ಹಿರಿಮೆಯನ್ನು ಪ್ರಭುದೇವ ಕೊಂಡಾಡಿದ ಸಂದರ್ಭಗಳೂ ಶೂನ್ಯಸಂಪಾದನೆಯಲ್ಲಿವೆ.

5. ಚೆನ್ನಬಸವಣ್ಣ ಮಹಾಜ್ಞಾನಿ. ಷಟ್ಸ್ಥಲ ಚಕ್ರವರ್ತಿ. ಅವನನ್ನು ಪ್ರಭುದೇವ ತುಂಬ ಶ್ಲಾಘಿಸುತ್ತಾನೆ. ಆದರೆ ತನಗೆ ನಿಜದ ಅರಿವು ಬಸವಣ್ಣನಿಂದ ಸಾಧ್ಯವಾಯಿತೆಂದು ಚೆನ್ನಬಸವಣ್ಣ ಹೇಳಿ ಆತನನ್ನು ಸ್ತುತಿಸುತ್ತಾನೆ. ಬಸವಣ್ಣನು ತನಗೆ ಗುರುವಿನ ಗುರುವೆಂದು ಪ್ರಭುದೇವ ಭಾವಿಸುತ್ತಾನೆ. (ಏಕೆಂದರೆ ಪ್ರಭುದೇವ ನಿಗೆ ಲಿಂಗ ದೊರೆತುದು ಅನಿಮಿಷಯ್ಯನಿಂದ. ಅನಿಮಿಷಯ್ಯನಿಗೆ ಲಿಂಗವನ್ನು ಕೊಟ್ಟವನು ಬಸವಣ್ಣನೆಂಬ ಕಲ್ಪನೆಯಿದೆ.) 'ಬಸವಣ್ಣ ನೆನ್ನ ಅಂತರಂಗದೊಳಗೆ' ಎಂದು ಒಮ್ಮೆ ಹೇಳುವ ಪ್ರಭುದೇವ ಇನ್ನೊಮ್ಮೆ 'ಬಸವಣ್ಣ ನಿನ್ನಂತರಂಗದೊಳಗೆ ಬೆಳಗುತ್ತೈದಾನೆ'ಎಂದೂ ಹೇಳುತ್ತಾನೆ. ಬಸವಣ್ಣ – ಚೆನ್ನಬಸವಣ್ಣ – ಪ್ರಭುದೇವರ ಪರಸ್ಪರ ಸಂಬಂಧವು ಅಪೂರ್ವವಾದುದಾಗಿದೆ. ಅವರ ಘನತೆಯೂ ಅಂತೆಯೆ. ಪ್ರಭುದೇವನ ಹೊಗಳಿಕೆಗೆ ಚೆನ್ನಬಸವಣ್ಣನ ಉತ್ತರ ಹೀಗಿದೆ :

'ಎನಗಿಲ್ಲದ ಘನವನೇರಿಸಿ ನುಡಿದರೆ ಅದು ನಿಮ್ಮ ಲೀಲೆ. ನಾನದ ಬೇಕೆನ್ನೆ, ಬೇಡವೆನ್ನೆ'.

6. ಶಿವಾನುಭವಮಂಟಪದಲ್ಲಿ ಶಂಕರದೇವ ಮರುಳನಂತೆ ಕಂಡುಬರುತ್ತಿದ್ದ. ಆತನದು ಗುಪ್ತಭಕ್ತಿ. ಆತನ ಬಗೆಗೆ ಶರಣರು ಅಲಕ್ಷ್ಯ ತೋರುತ್ತಿದ್ದರು. ಆತನ ಅಂತರಂಗದ ಭಕ್ತಿಯು ಬಸವಣ್ಣನಿಗೂ ಆದರ್ಶವಾಗುವಂತಹದೆಂಬುದನ್ನು ಪ್ರಭುದೇವ ಸ್ಪಷ್ಟಪಡಿಸಿದ. ಲೋಕದ ಕಣ್ಣಿಗೆ ಮರುಳಾಗಿ ಕಂಡರೂ ಶಂಕರದೇವ 'ಸಹಜನಿತ್ಯ ಅಭೇದ ಶರಣ'; ಪರಿಪೂರ್ಣ ಅರಿವಿನಲ್ಲಿ ಅವಿರಳವಾಗಿ ಚೇತನ.

7. ಶಿವಾನುಭವ ಮಂಟಪದ ಪ್ರಮುಖ ಶರಣರಲ್ಲಿ ಮಡಿವಾಳ ಮಾಚಿದೇವನೊಬ್ಬ. ಆತನು 'ಮನದ ಮೈಲಿಗೆಯ ಕಳೆದು ಶುದ್ಧ'ನಾದವ. ಇತರರನ್ನೂ ಶುದ್ಧ ಮಾಡುವವ. ನಿರ್ಭಯ ನಿರ್ದಾಕ್ಷಿಣ್ಯ ಸ್ವಭಾವದ ಹೋರಾಟಗಾರ.

> ತನುವಿನಲ್ಲಿ ಹೊರೆಯಿಲ್ಲ, ಮನದಲ್ಲಿ ವ್ಯಾಕುಳವಿಲ್ಲ
> ಭಾವದಲ್ಲಿ ಬಯಕೆಯಿಲ್ಲ, ಅರಿವಿನಲ್ಲಿ ವಿಚಾರವಿಲ್ಲ
> ನಿರ್ಲೇಪ ಸಂಗದಲಿ ಬಿಚ್ಚಿ ಬೇರಾಗಲಿಲ್ಲ.

ಮಡಿವಾಳ ಮಾಚಿದೇವನು ಬಸವಣ್ಣ–ಚೆನ್ನಬಸವಣ್ಣ–ಪ್ರಭುದೇವರ ಸ್ತುತಿಗೂ ಪಾತ್ರನಾದ ಶರಣ.

ಇಂತಹ ಶರಣರ ಮೆರವಣಿಗೆ ಶೂನ್ಯಸಂಪಾದನೆಯಲ್ಲಿದೆ.

8. ಒಮ್ಮೆ ಪ್ರಭುದೇವ ಶಿವಾನುಭವ ಗೋಷ್ಠಿಯಲ್ಲಿ 'ಮಾಡುವ ಮಾಟದಿಂದ ಬೇರೊಂದ ಅರಿಯಬೇಕು' ಎಂದು ಪ್ರಸ್ತಾಪಿಸುತ್ತಾನೆ. ಹಾಗೆ 'ಅರಿಯಬೇಕು' ಎಂಬ ಉತ್ಸಾಹದಲ್ಲಿ ಅಕ್ಕಿ ಆಯ್ದು ತರುವ ಕಾಯಕ ಕೈಗೊಂಡಿದ್ದ ಮಾರಯ್ಯ ತಾನು 'ಮಾಡುವ ಮಾಟ'(ಕಾಯಕ)ವನ್ನು ಮರೆತು ಶಿವಾನುಭವ ಮಂಟಪದಲ್ಲಿ ಉಳಿಯುತ್ತಾನೆ. ಆಗ ಆತನ ಪತ್ನಿ ಲಕ್ಕಮ್ಮ ಆತನನ್ನು ಎಚ್ಚರಿಸುತ್ತಾಳೆ. ಮರವೆಯಲ್ಲಿ ಮಾರಯ್ಯ ಹೆಚ್ಚಿನ ಅಕ್ಕಿ ತಂದಾಗ ಲಕ್ಕಮ್ಮ 'ಈಸಕ್ಕಿಯ ಆಸೆ ನಿಮಗೇಕೆ' ಎಂದು ಕೇಳಿ ಕಾಯಕತತ್ವದ ಸೂಕ್ಷ್ಮವನ್ನು ತಿಳಿಸುತ್ತಾಳೆ. ಮುಂದೆ 'ದಾಸೋಹವೆಂಬ ಸೇವೆಯ ಬಿಟ್ಟು ಕೈಲಾಸವೆಂಬ ಆಸೆ ಬೇಡ' ಎಂದು ಪತಿಗೆ ಬೋಧಿಸುತ್ತಾಳೆ.

ಶರಣರ ಗಮ್ಯ ಶೂನ್ಯಸಂಪಾದನೆ, ಕೈಲಾಸವಲ್ಲ. ದಾಸೋಹ ಶೂನ್ಯಸಂಪಾದನೆಯ ಒಂದು ಸಾಧನ.

9. ನೋಳಿಗೆಯ ಮಾರಯ್ಯ, ಆತನ ಪತ್ನಿ ಮಹಾದೇವಿಯರು ಶಿವಾನುಭವ ಪಡೆಯಲೆಂದು ಅರಸೊತ್ತಿಗೆಯನ್ನು ತೊರೆದು ಕಲ್ಯಾಣಕ್ಕೆ ಬಂದವರು. ಅಲ್ಲಿ ಬಡತನದಲ್ಲಿ ಬಾಳು ಸಾಗಿಸುತ್ತಿದ್ದರು. 'ಮನೆ ನೋಡಾ ಬಡವರು' ಆದರೆ 'ಮನನೋಡಾ ಸಂಪನ್ನರು'.ಇವರ ಬಡತನದ ಬಾಳನ್ನು ಕಂಡು ಒಮ್ಮೆ ಬಸವಣ್ಣನಿಗೆ ಕನಿಕರವೆನಿಸಿತು. ಅವರ ಮನೆಯಲ್ಲಿ ಅವರರಿಯದಂತೆ ಹೊನ್ನು ಬಿಟ್ಟು ಹೋಗುತ್ತಾನೆ ಬಸವಣ್ಣ. ಆದರೆ ಈ ದಂಪತಿಗಳು *Gold lovers* ಆಗಿರಲಿಲ್ಲ, *God lovers* ಆಗಿದ್ದರು. ಅವರು ಬಸವಣ್ಣ ಬಿಟ್ಟು ಹೋದ ಹೊನ್ನನ್ನು ಮರಳಿ ಕಳಿಸಿದರು. ತಮ್ಮ ಬಗೆಗೆ ಇಂತಹ ಕನಿಕರ ಬೇಡವೆಂದು ಬಸವಣ್ಣನಿಗೆ ಹೇಳಿದರು. ಮುಂದೆ ನೋಳಿಗೆಯ್ಯನಲ್ಲಿ ಶಿವನಲ್ಲಿ ಏಕಸ್ಥನಾಗುವ ಹಂಬಲ ತಲೆದೋರುತ್ತಿದೆ. ಆಗ ಪತ್ನಿ ಮಹಾದೇವಿ,

"ಅದೇತಕ್ಕಯ್ಯಾ ಶಿವನೊಳಗೆ ಕೂಟಸ್ಥನಾದಹೆನೆಂಬ ಹಲುದಾಟ ? ಮುನ್ನ ನೀನಾರೆಂದಿದ್ದೆ ಹೇಳಾ ? .... ಹೊರಗೆ ಕೂಡಿಹೆನೆಂಬುದು ನಿಮ್ಮ ಅರಿವಿಂಗೆ ಹಾನಿ"

ಎಂದು ಎಚ್ಚರಿಸುತ್ತಾಳೆ. ಶಿವನೊಳಗೆ ಕೂಟಸ್ಥನಾಗಿರುವ ಪ್ರಜ್ಞೆ ಶರಣನಲ್ಲಿ ಸದಾ ಜಾಗೃತವಾಗಿರಬೇಕು. ಅದು ಬಾಳಿನ ಕೊನೆಯಲ್ಲಿ ತಲೆದೋರುವ ಆಶೆಯಲ್ಲ. ಶಿವಾನುಭವದ ನಿಲವು ಮಹಾದೇವಿಯ ಈ ನುಡಿಯಲ್ಲಿ ಮೂಡಿಬಂದಿದೆ. ಆಗ ಮೋಳಿಗೆಯ್ಯ ತನ್ನ ಪತ್ನಿಯನ್ನು 'ಎನ್ನ ಮುತ್ತ್ಯಾಂಗನೆ' ಎಂದು ಕರೆಯುತ್ತಾನೆ.

10. ನುಲಿಯ ಚಂದಯ್ಯನ ಸಂಪಾದನೆಯಲ್ಲಿ 'ಇಷ್ಟಲಿಂಗ ಹೆಚ್ಚೋ, ಕಾಯಕ ಹೆಚ್ಚೋ', ಎಂಬ ಸೂಕ್ಷ್ಮ ವಿಷಯದ ಬಗೆಗೆ ಸಂವಾದವಿದೆ. ತನ್ನ ಕಾಯಕದತ್ತ ಗಮನವಿರಿಸಿದ ನುಲಿಯ ಚಂದಯ್ಯನ ಇಷ್ಟಲಿಂಗ ದಾರಿಯಲ್ಲಿ ಜಾರಿ ಬೀಳುತ್ತದೆ. ಅದನ್ನು ಹಾಗೆಯೇ ಬಿಟ್ಟು ಚಂದಯ್ಯ ಶಿವಾನುಭವಮಂಟಪಕ್ಕೆ ಬಂದ ಪ್ರಸಂಗವದು. ಶಿವಾನುಭವಮಂಟಪದಲ್ಲಿ ಆ ಬಗೆಗೆ ಸಂವಾದ ನಡೆಯುತ್ತಿದೆ. ಅದರಿಂದಾಗಿ ಲಿಂಗ-ಜಂಗಮ-ದಾಸೋಹಗಳ ಬಗೆಗೆ ಪ್ರಕಾಶಮಯ ಸಿದ್ಧಾಂತ ಹೊರಹೊಮ್ಮಿ ಬರುತ್ತಿದೆ :

ಲಿಂಗವೆಂದರೆ ದೇಹದ ಎಲ್ಲ ಚಲನೆಗಳಿಗೆ ಕಾರಣವಾಗುವ ಚೈತನ್ಯ.
ಅಂತರಂಗದ ಸುಜ್ಞಾನವೆ ಜಂಗಮ.
ಇಷ್ಟಲಿಂಗದ ನಿಜವೇ ದಾಸೋಹ.

11. "ಒಂದು ದಿನಂ ಬಸವರಾಜ ದೇವರ ಗೃಹದ ಬಾಗಿಲಲ್ಲಿ (ಭೋಜನಕ್ಕಾಗಿ) ಹೊಗುವ ಹೊರ ಹೊರಡುವ ಜಂಗಮ ಸಮೂಹಮಂ ಕಂಡು ಇವರು ಉಪಾಧಿಯಿಂ ಶರೀರಪೋಷಣರಲ್ಲದೆ ಜ್ಞಾನ ಜಂಗಮಸ್ಥಲಕ್ಕೆ ಸಲ್ಲರೆಂದು" ಘಟ್ಟಿವಾಳಯ್ಯ ವಿಡಂಬಿಸುತ್ತಾನೆ. ಆತನು ಜಂಗಮರನ್ನು ನಿಷ್ಠುರವಾದ ಸತ್ಯಕ್ಕೆ ಒರೆಹಚ್ಚುವ ಧೀರ :

ಹೊನ್ನು, ಹೆಣ್ಣು ಮಣ್ಣಿಂಗೆ ಹೊಡೆದಾಡುವನ್ನಬರ ಅವರು ಹಿರಿಯರೆಂತಪ್ಪರೋ
ಲೇಸವ ಮರೆದು ಕಷ್ಟಕ್ಕೆ ಕಡಿದಾಡುವ ಭಾಷೆಹೀನರ
ಕಂಡು ನಾಚಿಗೆಯಾಯಿತ್ತು.

— ಈ ನುಡಿಗಳಿಂದ ನೊಂದ ಜಂಗಮರು ಪ್ರಭುದೇವನ ಮೊರೆವೊಕ್ಕರು. ಆಗ ಪ್ರಭುದೇವ 'ಅರಿವ ಬಲ್ಲನೆಂದು ಬಿರುನುಡಿಯ ನುಡಿವರೇ;' ಎಂದು ಘಟ್ಟಿವಾಳಯ್ಯನಿಗೆ ಕೇಳಿದ. ಅವನ ಉತ್ತರ ಹೀಗೆ :

ಚಿನ್ನವ ಕೊಂಬಲ್ಲಿ ಅದರ ಬಣ್ಣವಕೊಂಡು ಬಣ್ಣದ ವಾಸಿಯ
ಕುರುಹಿಟ್ಟು,
ಅದು ತನಗೆ ಚೆನ್ನಾದಡೆ ಕೊಂಬ; ಅಲ್ಲದೊಡಲ್ಲ. ಇದಕ್ಕೆ ಗೆಲ್ಲ
ಸೋಲವೇಕೆ ?

ಆತನು ಮುಂದೆ 'ಘನಲಿಂಗದ ನಿಜ'ವನ್ನು ತೋರಿಸಿಕೊಟ್ಟ. ಬಸವನ ಮನೆಗೆ (ಭೋಜನಕ್ಕಾಗಿ) ಹೋದ ವ್ರತಗೇಡಿಗಳನ್ನು ಕುರಿತು 'ಆ ಘನಲಿಂಗ ಉಳ್ಳನಕ್ಕ ನಾ ಜಂಗಮ, ನೀವು ಜಂಗುಳಿಗಳು' ಎಂದು ಹೇಳಿದ. ಶರಣರು 'ಘಟ್ಟಿವಾಳಯ್ಯ ನಿರಂತರ ಸಹಜ; ಶಂಕೆಯಿಲ್ಲದ ಮಹಿಮ' ಎಂದು ಕೊಂಡಾಡಿದರು.

12. ಮುಕ್ತಾಯಕ್ಕನಂತೆ ವಾದದ ಜಾಣ್ಮೆಯಲ್ಲಿ ಪ್ರಭುದೇವನನ್ನು ಬೆರಗುಗೊಳಿಸಿದಾಕೆ ಅಕ್ಕಮಹಾದೇವಿ. ಆಕೆಯ ನಿಲುಮೆ ಉನ್ನತ, ವ್ಯಕ್ತಿತ್ವ ಘನದಾದುದು. ಪ್ರಭುದೇವನ ಪ್ರಚಂಡ ವಾದವನ್ನು, ಕಠಿಣವಾದ ಪರೀಕ್ಷೆಯನ್ನು ಸಹಜ ಧೀರತೆಯಿಂದ ಆಕೆ ಎದುರಿಸಿದಳು. ಆಕೆಯ ವಿರಕ್ತಿ, ಅನುಭಾವಗಳು ಉನ್ನತ ಮಟ್ಟದವೆಂಬುದನ್ನು ಶೂನ್ಯ ಸಂಪಾದನೆ ಚಿತ್ರಿಸಿದೆ. ಅಕ್ಕಮಹಾದೇವಿ,

ತನುಗುಣವಳಿದ ಲಿಂಗಸಂಗಿ
ಮನಗುಣವಳಿದ ಅರಿವು (ಜ್ಞಾನ) ಸಂಗಿ
ಭವಗುಣವಳಿದ ಬೆಳಕು (ಪ್ರಕಾಶ) ಸಂಗಿ

ಶಿವಾನುಭವದಿಂದ ಭವದ ಭಂಗವ ಗೆಲಿದವಳು. 'ಶೂನ್ಯ ಸಂಪಾದನೆ'ಯ ತಿರುಳನ್ನೇ ಆಕೆ ಅಳವಡಿಸಿಕೊಂಡಂತಿದೆ.

ಈ ಬಗೆಯ ಉಜ್ವಲ ಚಿತ್ರಗಳು ಶೂನ್ಯ ಸಂಪಾದನೆಯಲ್ಲಿವೆ. ಹಲವಾರು ಸೂಕ್ಷ್ಮ ವಿಷಯಗಳನ್ನು ಕುರಿತು ಸಂವಾದಗಳು ಅಲ್ಲಿ ಬಂದಿವೆ:

ಕಳೆದುಕೊಂಡ ಅಣ್ಣನಿಗಾಗಿ ಅಳಬೇಕೇ ? ಕೂಡದೆ ? ಗುರು ಕಣ್ಮರೆಯಾದಾಗ ಮಾರ್ಗದರ್ಶನ ಹೇಗೆ ? (ಅಜಗಣ್ಣ-ಮುಕ್ತಾಯಕ್ಕ). ಕೆರೆ ಗುಡಿ ಕಟ್ಟಿಸುವ ಕಾರ್ಯದಲ್ಲಿ ನಿರತನಾಗುವುದು ಸರಿಯಲ್ಲವೇ ? (ಸಿದ್ಧರಾಮ). ಹೊರಗೆ ಜಂಗಮ ಬಂದಾಗ ಒಳಗೆ ಲಿಂಗ ಪೂಜೆಯ ತಲ್ಲೀನತೆಯಲ್ಲಿ ಇರಕೂಡದೇ ? (ಬಸವಣ್ಣ). ಬಸವಣ್ಣನಂತೆ ಸಂಸಾರಿಯಾಗಬೇಕೇ ? ಇಲ್ಲವೆ ಚೆನ್ನಬಸವಣ್ಣನಂತೆ ಸರ್ವಸಂಗಪರಿತ್ಯಾಗಿಯಾಗಬೇಕೇ ? ನಿಜವನರಿವದನು ಮರುಳನೇ ? (ಮರುಳಶಂಕರದೇವ). ನಿಜದ ಅರಿವಿಗಾಗಿ ಮಾಡುವ ಕಾಯಕ ತೊರೆಯಬೇಕೇ ? (ಮಾರಯ್ಯ). ಶಿವನೊಳಗೆ ಏಕಸ್ಥನಾಗಬೇಕೆಂಬ ಆಶೆಯಿರಕೂಡದೇ ? (ಮೋಳಿಗೆಯ್ಯ). ಜಂಗಮದ ಲಾಂಛನವನ್ನು ಮಾತ್ರ ಮನ್ನಿಸಬೇಕೇ ? (ಘಟ್ಟಿವಾಳಯ್ಯ). ಲೋಕದ ಗಂಡನನ್ನು ತೊರೆಯಬೇಕೆ ? (ಅಕ್ಕಮಹಾದೇವಿ) ಈ ಬಗೆಯ ಪ್ರಶ್ನೆಗಳನ್ನು ಕುರಿತು ಶೂನ್ಯ ಸಂಪಾದನೆ ಬೆಳಕು ಬೀರುತ್ತಿದೆ.

ಶೂನ್ಯ ಸಂಪಾದನೆಯ ಕೊನೆಯ ಅಧ್ಯಾಯದಲ್ಲಿ ಶಿವಶರಣರೆಲ್ಲ ಬಯಲಿನೊಳಗೆ ಬಯಲಾಗಿ ಹೋದರೆಂದು ಹೇಳಿದೆ. ಹಾಗಿದ್ದರೆ ಬಯಲು ಆಗುವುದೆಂದರೇನು ?

ನಮ್ಮ ಹೊರಗೆ ಮೇಲೆ ಸುತ್ತಲೂ ಬಯಲು ವ್ಯಾಪಿಸಿದೆ. ಆ ಬಯಲಿನೊಂದಿಗೆ ನಮ್ಮ ಅಂತರಂಗದ ಅರಿವಿನ ಬಯಲು ಒಂದಾಗಬೇಕು. ಇದನ್ನೇ ಶಿವಶರಣರು ಬಯಲಾಗುವುದು, ಎಂದಿದ್ದಾರೆ. ಚಿದಾಕಾಶವನ್ನು, ಚಿತ್‌ಪ್ರಕಾಶವನ್ನು, ಚಿದಾನಂದವನ್ನು ಪಡೆಯುವ ಸ್ಥಿತಿಯದು. ಲಿಂಗದ ಬೆಳಕಿನಲ್ಲಿ ಮನದ ವಿಕಾರವನ್ನು ಅಳಿದಾಗ ಆ ಸ್ಥಿತಿ ಸಾಧ್ಯವಾಗುತ್ತದೆ. ಆಗ ನಮ್ಮ ಬಾಳಿನ ಭ್ರಾಂತಿ ಕಳೆದ ನಿಶ್ಚಿಂತ ನಿರಾಳಪದ ನಮ್ಮದಾಗುತ್ತದೆ. ನಾವು ದೇಹಭಾವದಿಂದ ಕೂಡಿರುವಾಗ ಕಳವಳಕ್ಕೆ ಒಳಗಾಗುತ್ತೇವೆ. ಸಂಪೂರ್ಣವಾಗಿ ಲಿಂಗಭಾವವನ್ನು ಅಳವಡಿಸಿಕೊಂಡಾಗ ಸರ್ವಾಂತರಯಾಮಿ ಪ್ರಜೆ

ನಮ್ಮದಾಗುತ್ತಿವೆ. ಸರ್ವಶಕ್ತಿ ಸಂಪನ್ನತೆ, ಅಖಂಡಾನಂದಗಳನ್ನು ಪಡೆಯುತ್ತೇವೆ. ಇಂತಹ ಅವಸ್ಥೆ ಪಡೆಯುವುದನ್ನೇ ಶೂನ್ಯಸಂಪಾದನೆಯಲ್ಲಿ ಬಯಲಾಗುವುದು, ಹಿಂದು ಹೇಳಿದೆ. ಶುದ್ಧ *(Purification)*, ಸಿದ್ಧಿ *(Perfection)*, ಮುಕ್ತಿ *(Liberation)*, ಭುಕ್ತಿ *(Delight)* ಇವುಗಳನ್ನು ಪಡೆದ 'ಪುರುಷೋತ್ತಮ' ಅವಸ್ಥೆಯದು.

Eekhart ಎಂಬ ಅನುಭಾವಿಯ ಉಕ್ತಿಯೊಂದು ಹೀಗಿದೆ :

As long as I am this or that or have this or that I am not all things and I have not all things. Become pure till you neither are nor have either this or that, then you are omnipotent and being neither this nor that, are all things. –ಅದು ಇದು ಆಗಿರುವುದು ಇಲ್ಲವೆ ಪಡೆಯುವುದು ಅಪೂರ್ಣತೆ. ಸಮಗ್ರ ಪರಿಶುದ್ಧಿಯಿಂದ ಎಲ್ಲವೂ ಆದಾಗ ಎಲ್ಲವನ್ನೂ ಪಡೆದಾಗ ಸರ್ವಶಕ್ತಿ ಸಂಪನ್ನತೆ ಮತ್ತು ಪರಿಪೂರ್ಣತೆ.

ಈ ಉಕ್ತಿಯು 'ಬಯಲಾಗು' ಪದದ ವ್ಯಾಖ್ಯೆಯಿದ್ದಂತಿದೆ. ಶ್ರೀ ಅರವಿಂದರು ಬಳಸುವ ಸಮಗ್ರತೆ *[integrality]* ಎಂಬ ಪದಕ್ಕೂ ಈ ಅರ್ಥಬೋಧೆಯಿದೆ.

ಪ್ರಭುದೇವ ಶೂನ್ಯಸಿಂಹಾಸನವನ್ನು ಏರಿದ, ಎಂದಿದೆ. ಶೂನ್ಯ ಸಿಂಹಾಸನವೆಂದರೇನು ? ಅದು ಶಿವಾನುಭವ ಮಂಟಪದಲ್ಲಿ ಪ್ರಭುದೇವನ ಪೀಠ. ಅದು 'ನಿಶ್ಚಿಂತ ಪದ'. ಪ್ರಸ್ತುತ ವಿವೇಚನೆಯಲ್ಲಿ ಅದನ್ನು ಪ್ರಭುದೇವನು ಶೂನ್ಯ ತತ್ತ್ವವನ್ನು ಬೋಧಿಸಿದ ಪೀಠವೆಂದು ಇಟ್ಟುಕೊಳ್ಳಬೇಕು.

ಹಾಗಿದ್ದರೆ ಶೂನ್ಯ ತತ್ತ್ವವೆಂದರೇನು ? ಅದು ಬೌದ್ಧರ ನಿರ್ವಾಣವೇ ? ನಿರ್ವಾಣ ಪದವನ್ನು ಕುರಿತ ಸಾಮಾನ್ಯ ಗ್ರಹಿಕೆ ತಪ್ಪಾದುದಾಗಿದೆ. ಅಂತೆಯೆ ನಾವೀಗ ಶ್ರೀ ಅರವಿಂದರು ಅರ್ಥಯಿಸುವ ಬಗೆಯಲ್ಲಿ ಅದನ್ನು ಅರಿತುಕೊಳ್ಳಬೇಕು:

Nirwan means the extinction of the ego in the higher spiritual, inner self, that which is for ever timeless, spaceless not bound by the chain of cause and effect and the changes of the world-mutations, self blissful, self illumined and for ever of peace..

It is a passage into the true unifying consciousness....................uplifting to supra cosmic existence. — ನಿರ್ವಾಣವೆಂದರೆ ಮಾನವೀಯ ಅಹಂಕಾರ ಶೂನ್ಯವಾಗುವುದು. ಮಾನವ ಪ್ರಜ್ಞೆಯು ಉನ್ನತ ಆಧ್ಯಾತ್ಮಿಕ, ಆಂತರಿಕ–ಚೈತನ್ಯದಲ್ಲಿ ಲಯವಾಗುವುದು. ಅಂತಹ ಚೈತನ್ಯವು ದೇಶಕಾಲಾತೀತವಾದುದು. ಕಾರ್ಯ-ಕಾರಣಗಳ ಶೃಂಖಲೆಗೆ ಬದ್ಧವಾಗದಂತಹದು. ಅದು ಸ್ವಾನಂದ ಸ್ವಪ್ರಕಾಶ ಪ್ರಶಾಂತಮಯವಾದುದು........ಪ್ರಕೃತಿಯ ಬದಲಾವಣೆಗೆ ಒಳಗಾಗದ, ಅಖಂಡತೆಯನ್ನುಂಟು ಮಾಡುವ ಪ್ರಜ್ಞೆಯತ್ತ ಏರಿದ ಅವಸ್ಥೆಯದು.

ನಿರ್ವಾಣ ಪದವನ್ನು ಕುರಿತ ಶ್ರೀ ಅರವಿಂದರ ಈ ಅರ್ಥವಿವರಣೆಯು ಶೂನ್ಯತತ್ವವೆಂದರೇನೆಂಬುದನ್ನು ಸ್ಪಷ್ಟಪಡಿಸುವಂತಿದೆ. ಶೂನ್ಯಸಂಪಾದನೆಯ ಕಲ್ಪನೆಯನ್ನು ಬಹುವಾಗಿ ಮೆಚ್ಚಿಕೊಂಡ ಗುರುದೇವ ಡಾ. ರಾನಡೆ ಅವರೂ ಅದನ್ನು ಕುರಿತು ಇದೇ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಕೊನೆಯದಾಗಿ ಶೂನ್ಯತತ್ವವನ್ನು ಹೀಗೆ ಸಂಗ್ರಹಿಸಿ ಹೇಳಬಹುದು:

1. ಮಾನವೀಯ ಅಹಂಕಾರವನ್ನು (ego), ಸಂಕುಚಿತ ದೃಷ್ಟಿಯನ್ನು, ಆಶೆ, ದೋಷ, ದ್ವೇಷ, ರಾಗ, ಮೋಹಗಳನ್ನು ಶೂನ್ಯಗೊಳಿಸುವುದು.

2. ನಮ್ಮ ಅಂತರಾತ್ಮನನ್ನು ಗುರುತಿಸುವುದು. ಅಂತರಾತ್ಮನ ಮಾರ್ಗದರ್ಶನದಿಂದ ಎಲ್ಲರಲ್ಲಿ, ಎಲ್ಲೆಡೆಗಳಲ್ಲಿ ಪರಮಾತ್ಮನನ್ನು ಕಾಣುವುದು, ಅನುಭವಿಸುವುದು.

3. ಪರಾತ್ಪರ ಪ್ರಜ್ಞೆಯನ್ನು ಪಡೆಯುವುದು.

4. ಎಲ್ಲವನ್ನು ಒಳಗೊಳ್ಳುವ ಶೂನ್ಯದ ಬಯಲಿನ ನಿಲವನ್ನು ಪಡೆಯುವುದು.

5. ಸಂಸಾರದಿಂದ ಪಲಾಯನ ಕೈಕೊಳ್ಳದೆ ಮಾನವೀಯ ಜೀವನದಲ್ಲಿದ್ದೂ ದಿವ್ಯ ಜೀವನದತ್ತ ಸಾಗುವುದು. ಮತ್ತು ಆ ದಿವ್ಯ ಜೀವನವನ್ನು ರೂಢಿಸಿಕೊಳ್ಳುವುದು.

ಈ ದಿಸೆಯಲ್ಲಿಯೇ ಶಿವಶರಣರು ಸಾಗಿದರು. ಹಾಗೆ ಸಾಗಿದ ಶರಣರ ಬಾಳಿನ ಪಥವನ್ನು 'ಶೂನ್ಯಸಂಪಾದನೆ' ಕೃತಿಯು ನಮಗೆ ತೋರಿಸಿಕೊಡುತ್ತಿದೆ.

ಅಂತೆಯೆ ಅದು ಅತ್ಯಂತ ಮೌಲಿಕ ಕೃತಿಯಾಗಿದೆ.

★

ಶೂನ್ಯ ಸಂಪಾದನೆ ಒಂದು ವಿಹಂಗಮ ನೋಟ

ಲೇಖಕರು :
ಶ್ರೀಮತಿ ನೀಲಗಂಗಾದೇವಿ, ಸಿ. ಚರಂತಿಮಠ, ಎಂ.ಎ.,
ಧಾರವಾಡ.

ಶೂನ್ಯ ಸಂಪಾದನೆ ಶರಣರ ಅನುಭಾವದ ನುಡಿಮುತ್ತುಗಳ ಸಂಕಲನಗ್ರಂಥ. ಶರಣರ ಅನುಭಾವದ ಸಾರಸಂಗ್ರಹ ಇದು. ಕನ್ನಡ ಸಾಹಿತ್ಯದಲ್ಲಿ ಅತ್ಯುನ್ನತ ಸ್ಥಾನ ಪಡೆದಿದೆ. ಹನ್ನೆರಡನೆಯ ಶತಮಾನದಲ್ಲಿ ಶರಣರು ಕ್ರಾಂತಿಯನ್ನೆಸಗಿದರು. ಆ ಕ್ರಾಂತಿ ಧಾರ್ಮಿಕ, ತಾತ್ವಿಕ, ಸಾಮಾಜಿಕ, ಸಾಹಿತ್ಯಕ ಕ್ಷೇತ್ರಗಳನ್ನು ವ್ಯಾಪಿಸಿತು. ಕೇವಲ ವರ್ಣಾಶ್ರಮ ಧರ್ಮದ ಸೆಳವಿಗೆ ಸಿಲುಕಿ ಬಳಲಿ ಬೆಂಡಾದ ಸಮಾಜವು ಕಾರಣಿಕ ಪುರುಷರ ಬರವನ್ನೇ ನೋಡುತ್ತಿದ್ದಿತೆಂಬಂತೆ ಶಿವಶರಣರು ಉದಯಿಸಿ ವರ್ಣಾಶ್ರಮವನ್ನು ಸಂಪೂರ್ಣವಾಗಿ ತ್ಯಜಿಸಿ ಸಮತಾ ತತ್ವದ ಮೇಲೆ ಸಮಾಜವನ್ನು ನಿರ್ಮಿಸಲು ಪ್ರಯತ್ನಿಸಿದರು. ಕರ್ಮಕಾಂಡ ಅರ್ಥಹೀನವಾದುದೆಂದು ಮನಗಂಡು ಶರಣರು ಸಹಜ ಸದ್ಭಕ್ತಿಗೆ ಮೊರೆ ಹೋದರು. ಅಂದಿನ ವಚನ ಸಾಹಿತ್ಯವನ್ನು ನಾವು ಮನತೆರೆದು ನೋಡಿದರೆ ನಮಗೆ ಅಲ್ಲಿ ಕಾಣುವದು. "ಕರ್ಮ ಹೋಗಿ ಕ್ರಿಯೆಯಾದುದು ಧರ್ಮ ದಯೆಯ ಸಾಕಾರ ಸ್ವರೂಪವಾದುದು. ಕಾಯಕವು ಸಮಾಜದ ನಾಡಿಯಾದುದು, ಉಚ್ಚ ನೀಚ ಭಾವವಳಿದು ಹೋದುದು. ಹೆಣ್ಣು ಗಂಡೆಂಬ ಭೇದವಿಲ್ಲದುದು ಕಂಡುಬರುತ್ತದೆ". ಅನುಭವ ಮಂಟಪದಲ್ಲಿ ವಿವಿಧ ಜಾತಿ ಪಂಗಡಗಳಿಂದ ಭಕ್ತರಾಗಿ ಬಂದ ಶಿವಶರಣರು ಬಾಳಿನ ಮೌಲ್ಯಗಳ ಬಗ್ಗೆ ಪರಿಶೀಲಿಸಿ ತಮ್ಮದೇ ಆದ ಅನುಭಾವವನ್ನು ನುಡಿಮುತ್ತುಗಳಲ್ಲಿ ಉಸುರಿದರು. ವಿಚಾರ ಸ್ವಾತಂತ್ರ್ಯ, ಆಚಾರ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ, ಪ್ರಸಾದಭಾವನೆ ಮೊದಲಾದ ವಿಚಾರಗಳು ತಲೆಎತ್ತಿದವು. ಈ ಎಲ್ಲ ಮೌಲ್ಯಗಳನ್ನು ಹೊತ್ತ ವಚನಸಾಹಿತ್ಯ ಜಾಗತಿಕ ಸಾಹಿತ್ಯದಲ್ಲಿ ಉನ್ನತ ಸ್ಥಾನ ಪಡೆದಿದೆ.

ಶರಣರ ಕ್ರಾಂತಿ ವಿಪ್ಲವದಲ್ಲಿ ಕೊನೆಗೊಂಡಮೇಲೆ ಹದಿನೈದನೆಯ ಶತಮಾನದ ಕೊನೆಯಲ್ಲಿ ಸಾಹಿತ್ಯಪ್ರಜ್ಞೆ ಅಂದಿನ ಜನತೆಗೆ ಉಂಟಾಯಿತು. ಆಗ ವೀರಶೈವ ಸಾಹಿತ್ಯ ಪುನರುಜ್ಜೀವನಗೊಂಡಿತು. ಅಂದಿನ ಅನುಭಾವಿಗಳು, ಸಾಹಿತ್ಯಪ್ರೇಮಿಗಳು, ಧರ್ಮಜಿಜ್ಞಾಸುಗಳು ಅದನ್ನು ನಾನಾಮುಖವಾಗಿ ಸಂಗ್ರಹಿಸುತ್ತ, ಸಂಕಲ್ಪಿಸುತ್ತ, ಸಂಪಾದಿಸುತ್ತ, ವ್ಯಾಖ್ಯಾನಿಸುತ್ತ ವಿವರಣೆ ಬರೆಯುತ್ತ ಬಂದಿರುವರು. ಈ ಬಗೆಯ ಸಂಕಲನ ಸಾಹಿತ್ಯದಲ್ಲಿ ಶೂನ್ಯ ಸಂಪಾದನೆಗಳ ಗುಂಪೊಂದು ಅತಿ ಮಹತ್ವವಾದದು.

ಶೂನ್ಯಸಂಪಾದನೆ ಒಂದು ಸಂಕಲನ. ವಚನಗಳನ್ನು ಸಂಭಾಷಣೆಯ ರೂಪದಲ್ಲಿ ಪೋಣಿಸಿರುವುದು ಇದರ ವೈಶಿಷ್ಟ್ಯ, ವಚನ ಸಾಹಿತ್ಯ ಹುಟ್ಟಿದ್ದು ಹನ್ನೆರಡನೆಯ ಶತಮಾನದಲ್ಲಿಯಾದರೂ ಅದು ಒಂದು ಸುವ್ಯವಸ್ಥಿತ ರೂಪವನ್ನು ಪಡೆದುದು ಹದಿನೈದನೆಯ ಶತಮಾನದಲ್ಲಿ. ಯುಗಧರ್ಮದ ಆದೇಶ ಜೀವನ ಸಂದೇಶ ನೂತನಾನುಭವದ ಆವಿಷ್ಕಾರದ ಫಲವಾಗಿ ಕನ್ನಡ ನೆಲಕ್ಕೆ ಬಿದ್ದ ವಚನಮಳೆಯ ಮುಂಗಾರು ಹನಿಗಳು ಹೊಸ ಮುತ್ತಿನ ಸುಪ್ಪಾಣಿಯಾಗಿ ಮೂರು ಶತಮಾನಕಾಲ ಮರೆಯಂತಿದ್ದು ಈ ಶತಮಾನದಲ್ಲಿ ಹೊರಬಂದು ಮೂರ್ತ ಸ್ವರೂಪವನ್ನು ಪಡೆದವು. ತೂರಿ ಹೋದ ಮುತ್ತು, ಹವಳಗಳನ್ನು ಕೂಡಿಸಿ ಅವಕ್ಕೆ ಒಂದು ವ್ಯವಸ್ಥಿತ ರೂಪವನ್ನು ಕೊಟ್ಟ ಮನ್ನಣೆ ಈ ಸಂಕಲನಕಾರರಿಗೆ ಸಲ್ಲುತ್ತದೆ. ಶೂನ್ಯ ಸಂಪಾದನೆಗಳು ಒಟ್ಟು ಐದು ೧. ಶಿವಗಣಪ್ರಸಾದಿ ಮಹಾದೇವಯ್ಯಗಳ ಸಂಪಾದನೆ ೨. ಕೆಂಚವೀರಣ್ಣೊಡೆಯರ ಸಂಪಾದನೆ ೩. ಗುಮ್ಮಳಾಪುರದ ಸಿದ್ಧಲಿಂಗದೇವರ ಸಂಪಾದನೆ ೪. ಗೂಳೂರ ಸಿದ್ಧವೀರಣಾರ್ಯರ ಸಂಪಾದನೆ ೫. ಹಲಗೆಯ ದೇವರ ಸಂಪಾದನೆ. ಇವೇ ಐದು, ಸಂಕಲನಕಾರನ ಕೆಲಸ ಸುಲಭವಾದರೂ ಹೊಣಗಾರಿಕೆಯದು ಎನ್ನಿಸುತ್ತದೆ. ಅವನು ವಚನ ಅಂತರಾಳವನ್ನು ಅರಿತಿರಬೇಕಾಗುತ್ತದೆ. ಶರಣರ ಅನುಭಾವವನ್ನು ಅಳವಡಿಸಿಕೊಂಡಿರಬೇಕಾಗುತ್ತದೆ. ಅವರ ನಿಲುವನ್ನು ಅರಿತವನಾಗಿರಬೇಕಾಗುತ್ತದೆ. ಶೂನ್ಯಸಂಪಾದನೆಯ ವೈಶಿಷ್ಟ್ಯವೆಂದರೆ ಅದರ ನಾಟಕೀಯತೆ; ಶರಣರು ಒಟ್ಟಾಗಿ ಸೇರಿ ನಡೆಸಿದ ಧಾರ್ಮಿಕ ಚರ್ಚೆಗಳನ್ನು ನಿರೂಪಿಸುವುದೇ ಇದರ ಉದ್ದೇಶ. ಇಂತಹ ಚರ್ಚೆಗಳ ಚಿತ್ರಣದಲ್ಲಿ ಸಂಕಲನಕಾರನ ಕೆಲಸ ಅತಿ ಮಹತ್ವದ್ದು. ಶರಣರು ಆಡಿದ ಸಂವಾದಗಳನ್ನು ತನ್ನ ಮಾತಿನ ಕೊಂಡಿಗಳಿಂದ ಸೇರಿಸುತ್ತಾನೆ ಸಂಕಲನಕಾರ. ಶೂನ್ಯಸಂಪಾದನೆ ಕೇವಲ ವಚನಗಳ ಸಂಗ್ರಹವಲ್ಲ; ಅದೊಂದು ಜೀವಂತ ಸಂಕಲನ. ಅದರ ವ್ಯಾಖ್ಯಾನದ ರೀತಿ ವಿಶಿಷ್ಟವಾದುದು ಮತ್ತು ಸೊಗಸಾದುದು.

ಇನ್ನು 'ಶೂನ್ಯಸಂಪಾದನೆ' ಎಂದರೇನು ? ನಾವು ಕೇಳಿದ್ದು ಧನಸಂಪಾದನೆ, ಕೀರ್ತಿಸಂಪಾದನೆ ಮಾತ್ರ. ಶೂನ್ಯಸಂಪಾದನೆ ಇದರಿಂದ ಬಹಳ ಭಿನ್ನವಾದುದು. ಶರಣರ ಮಾತಿನಲ್ಲಿ 'ಶೂನ್ಯ' ಎಂದರೆ ಏನೂ ಇಲ್ಲದುದು ಎಂದಲ್ಲ ಎಲ್ಲವನ್ನೂ ಒಳಗೊಂಡುದು. ಮತ್ತು ಎಲ್ಲದರ ಅಸ್ತಿತ್ವಕ್ಕೆ ಕಾರಣವಾದುದು, ಆದರೆ ಏನೂ ಅಲ್ಲದುದು ಎಂದು ಅರ್ಥವಾಗುತ್ತದೆ. ವೀರಶೈವ ಧಾರ್ಮಿಕ ಸಾಹಿತ್ಯದಲ್ಲಿ 'ಶೂನ್ಯ' ಎಂಬ ಮಾತನ್ನು ಅಷ್ಟಾವರಣ, ಪಂಚಾಚಾರಗಳ ಬೆಲೆಯನ್ನರಿತು ಷಟ್‌ಸ್ಥಲ ಮಾರ್ಗವಾಗಿ ಉಪಾಸನೆ ಮಾಡಿದ ಸಾಧಕನಿಗೆ ಸಾಧನೆಯ ಅಂತ್ಯದಲ್ಲಿ ಒದಗುವ ಆತ್ಮಸಾಕ್ಷಾತ್ಕಾರ ಎಂಬ ಅರ್ಥದಲ್ಲಿ, ಅಥವಾ ಸಾಕ್ಷಾತ್ಕಾರದ ಅನುಭವ ಎಂಬ ಅರ್ಥದಲ್ಲಿ ಉಪಯೋಗಿಸಲಾಗಿದೆ. ಸೃಷ್ಟಿಪೂರ್ವ ಪರವಸ್ತುವನ್ನೂ ಶೂನ್ಯವೆಂದೇ ನಿರ್ದೇಶಿಸುತ್ತಾರೆ. ಇದನ್ನೇ ಅಚ್ಚ ಕನ್ನಡದಲ್ಲಿ

'ಬಯಲು' ಎನ್ನುತ್ತಾರೆ. ಇದೇ ಪೂರ್ಣ ಸ್ಥಿತಿ, ಬಯಲು ಸ್ಥಿತಿ ಶೂನ್ಯವನ್ನು ಈ ಶ್ಲೋಕದಲ್ಲಿ ನೋಡಬಹುದು.

"ಓಂ ಪೂರ್ಣವರಿದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯ ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವ ಶಿಷ್ಯತೇ" ಇದೇ ಪರಿಪೂರ್ಣ ಸ್ಥಿತಿ. ಶೂನ್ಯಕ್ಕೆ ಶೂನ್ಯದಿಂದ ಭಾಗಿಸಿದರೇನು, ಗುಣಿಸಿದರೇನು, ಕಳೆದರೇನು, ಕೂಡಿಸಿದರೇನು ಉಳಿಯುವದು ಶೂನ್ಯ ತಾನೆ. ಇದೇ ಶರಣರ ನುಡಿಯಲ್ಲಿ:

"ಘನ ಮಹಿಮ ಶರಣಂ ಸಂಗದಿಂದ ಘನಕ್ಕೆ ಘನವೇದ್ಯವಾದ ಬಳಿಕ ಅಱಿಯಲಿಲ್ಲ, ಮಱಿಯಲಿಲ್ಲ, ಕೂಡಲಿಲ್ಲ, ಅಗಲಲಿಲ್ಲ, ಮನ ಮೇರೆದಪ್ಪಿ ನಿರವಯಲಾದ ಸುಖವ ಶೂನ್ಯ ನಿಶೂನ್ಯವೆಂದು ನುಡಿಯಲುಂಟೇ ಶಬ್ದಮುಗ್ಧವಾಗಿ ಎನ್ನ ಅಜಗಣ್ಣ ತಂದೆಯ ಬೆರಸಿದ ಬಳಿಕ ಉರಿಯುಂಡ ಕರ್ಪೂರದಂತಾದೆನಯ್ಯಾ"

"ಏನು ಏನೂ ಇಲ್ಲದ ಬಯಲೊಳಗೊಂದು ಬಗೆಗೊಳಗಾದ ಬಣ್ಣತಲೆಯೋಱಿತ್ತು, ಆ ಬಯಲನಾ ಬಣ್ಣ ಶೃಂಗರಿಸಲು ಬಯಲು ಸ್ವರೂಪಗೊಂಡಿತ್ತು. ಅಂತಪ್ಪ ಸ್ವರೂಪಿನ ಬೆಡಗು ತಾನ ನಮ್ಮ ಗೊಹೇಶ್ವರ ಲಿಂಗದ ಪ್ರಥಮ ಭಿತ್ತಿ"

ಇದೇ ಶೂನ್ಯಸ್ಥಿತಿ. ಈ ಶೂನ್ಯ ಸಂಪಾದನೆಗೆ ಅಲ್ಲಮನೇ ಕೇಂದ್ರವ್ಯಕ್ತಿ. ಪ್ರಭುದೇವನು ಅಷ್ಟಾಂಗ ಯೋಗೀಶ್ವರ, ದೇಹೇಂದ್ರಿಯ ಮಾನಪ್ರಾಣಹಂಕಾರಾದಿ ಗುಣಧಮ ಕರ್ಮನಿರ್ಲೇಪನ. ಗುರು,ಲಿಂಗ, ಜಂಗಮ, ಪಾದೋದಕ, ಪ್ರಸಾರ್ದ, ಪಂಚಾಚಾರ, ಪ್ರತಿಷ್ಠಾಪನಾಚಾರ್ಯ. ಷಟ್ಸ್ಥಲ ಚಕ್ರವರ್ತಿ. ಬಸವ ಚೆನ್ನಬಸವ ಪ್ರಾಣನಾಯಕ. ವೀರಶಿವಾಚಾರ ಪ್ರಥಮನಾಯಕ, ಮರ್ತ್ಯ ಲೋಕ ಪಾವನ ಕಾರಣಾವತಾರ. ಅನಿಮಿಷನ ಶಿಷ್ಯ. ಗುಹೇಶ್ವರ ನಾಮಾಮೃತ ಸ್ವೀಕಾರ ಸಂತುಷ್ಟ ಮತ್ತು ಸಕಲ ಜಗದಾಚಾರ್ಯನಾದ ಅಲ್ಲಮ ಪ್ರಭುದೇವರು "ನಿಂದಲ್ಲಿ ನೆಳಲಿಲ್ಲದೆ ಸುಳಿದರೆ ಹೆಜ್ಜೆಯಿಲ್ಲದೆ ಲೋಕವನ್ನು ಪಾವನ ಮಾಡುತ್ತಾ ಒಂದೆರಡೆಂಬ ಸಂದೇಹವನ್ನು ಅಳಿಸಿ ಲಿಂಗಾಂಗೈಕ್ಯ ಸ್ಥಲಕ್ಕೆ ದಾರಿತೋರಿದ ಮಹಾನುಭಾವಿ"

ಇದಕ್ಕೂ ಪೂರ್ವಚರಿತ್ರೆಯನ್ನು ನೋಡಿದಾಗ ಕೈಲಾಸದ ರುದ್ರಗಣದಲ್ಲಿ ಅತ್ಯಂತ ಶ್ರೇಷ್ಠನಾದ "ನಿರ್ಮಾಯ"ನು ಶಿವನ ಕೃಪೆಯಿಂದ ಮಹಾನುಭಾವನಾಗಿದ್ದಾನೆ. ಅವನ ಹೊಗಳಿಕೆಯನ್ನು ಪರಮೇಶ್ವರನಿಂದ ಕೇಳಿದ ಪಾರ್ವತಿ ಅವನನ್ನು ಮಾಯಾಸಕ್ತನಾಗಿ ಮಾಡುವೆನೆಂದು ಪಣತೊಟ್ಟು ರುದ್ರಕನ್ನಿಕೆಯನ್ನು 'ಕಾಮಲತೆ' ಎಂದು ಕರೆದು ನಿರ್ಮಾಯ ಮೋಹಗೊಳ್ಳುವಂತೆ ಮಾಡಲು ಹೇಳುವಳು. ಅದರಂತೆ ಅವಳು ಅತ್ಯಂತ ಲಾವಣ್ಯವತಿಯಾಗಿ ನಿರ್ಮಾಯ ಬರುವ ದಾರಿಯಲ್ಲಿ ನಿಂತಾಗ ಅವನು ಈ ಪ್ರಲೋಭನ ಸಂಚಿಗೆ ಸಿಕ್ಕು ಅಲ್ಲಮನು ಸೋತನಾದರೂ ಎಚ್ಚತ್ತು ಮಾಯಾವರಣ ತನಗೆಲ್ಲಿಂದ ಮುಸುಕಿತೆಂದು ಅನುತಾಪದಿಂದ ಬೆಂದು ಎಂದಿನಂತೆ ಶಿವನ ಸಭೆಗೆ ಬಂದನು. ಅವನ ನಿಲುವನ್ನು ತಿಳಿದ ಶಿವನು "ಮರ್ತ್ಯ ಲೋಕದಲ್ಲಿ ಹುಟ್ಟಿ, ಆ ರುದ್ರಕನ್ನಿಕೆಯಲ್ಲಿ ಸುರತಸುಖವನ್ನು ಸುಖಿಸುತ್ತಿರು" ಎಂದು ಶಾಪ ಕೊಡುವನು. ಈ ಶಾಪದ ಫಲವಾಗಿ ಅಲ್ಲಮನು ಬನವಾಸಿ ಗ್ರಾಮದಲ್ಲಿರುವ ನಾಗವಾಸಾಧಿಪತಿಯಾದ ಶಿವಭಕ್ತನೊಬ್ಬನ ಸತಿ ಸುಜ್ಞಾನದೇವಿಯ ಗರ್ಭದಲ್ಲಿ ಜನಿಸಿದನು. ಕೈಲಾಸ ಗಣಪದವಿ ಶಾಪಪ್ರಸಂಗ ಮಾತ್ರ ಸಂಪ್ರದಾಯದ ಪುರಾಣ ಕಥೆ.

ಮಾಯಾ ಪ್ರಸಂಗವು ಒಂದು ವಿಚಾರಾರ್ಹ ವಿಷಯವಾಗಿದ್ದು ಅಲ್ಲಿ ಭಿನ್ನಾಭಿಪ್ರಾಯಗಳು ಕಂಡುಬರುತ್ತವೆ. ಚಾಮರಸ, ಗುಮ್ಮಳಾಪುರದ ಸಿದ್ಧಲಿಂಗದೇವರು ಮತ್ತು ಗೂಳೂರು ಸಿದ್ಧವೀರಣ್ಣೊಡೆಯರ ಪ್ರಕಾರ ಅಲ್ಲಮ ಪ್ರಭುದೇವರು ಕೈಲಾಸದ ಅವತಾರವಲ್ಲ. ಶಾಪಹತರಾಗಿ ಭೂಮಿಗೆ ಬಂದವರಲ್ಲ ಅಥವಾ ಭೂಮಿಯಲ್ಲಿ ಭೌತಿಕ ದೇಹದ ಮಾನವಚೋಹವನ್ನು ತೊಟ್ಟು 'ಚೋಹವೆ'ತಾನು ಎಂಬ ಮರವೆಯ ಕೈಯಲ್ಲಿ ಸಿಕ್ಕು ಕಾಮಲತೆಯನ್ನು ಮೋಹಿಸಿ, ಮಾಯಾ ಮೋಹದ ಜಂಜಡದಲ್ಲಿ ಬಿದ್ದು ಕಾಮಲತೆ ಸತ್ತು ಹೋದ ಮೇಲೆ ಬುದ್ಧಿ ಬಂದು ಎಚ್ಚತ್ತುನೋಡಿ ತನ್ನ ತಾ ತಿಳಿದು ತನ್ನ ನಿಜ ಸಿದ್ಧಿಯನ್ನು ಪಡೆದ ಮಾನವ ಮೂರ್ತಿಯಲ್ಲ. ಅದು ನಿರಂಜನ ಅವತಾರ, ನಿರ್ಲೇಪಮೂರ್ತಿ, ನಿರ್ಮಾಯ ಆಕಾರ. 'ಸಗುಣ ನಿಗುಣಭರಿತ' ಈ ಅವತಾರ ಕೇವಲ ಭಕ್ತಿ ಕಾರಣ, ಜಗತ್‌ಕಲ್ಯಾಣ ಕಾರಣ, ಜಗಮುದುದ್ಧಾರ ಕಾರಣ. ಇನ್ನು ಸಿದ್ಧವೀರದೇವರು ಇದನ್ನು ಹೆಚ್ಚು ಸಮರ್ಥಿಸುತ್ತ, ಯಾರಾದರೂ ಪ್ರಭು ಮಾಯಾಸಕ್ತ, ಮಾಯಾವಶಗತನೆಂದು ನುಡಿದರೆ ಅವರಿಗೆ "ಗುರು ಲಿಂಗ ಜಂಗಮದ್ರೋಹ ತಪ್ಪದು ಎಂದು ಪ್ರಭುದೇವರ ಸ್ವವಚನವನ್ನು ಸಾಕ್ಷ್ಯ ಕೊಟ್ಟಿದ್ದಾರೆ.

"ಬ್ರಹ್ಮವಿಷ್ಣುಗಳ ಮಾಯೆ ತೊತ್ತಳದುಳಿವಂದು,
ದೇವ ದಾನವರ ಮಾಯೆ ಅಗಿದಗಿದು ತಿಂಬಂದು,
ರುದ್ರಗಣ ಪ್ರಮಥಗಣಂಗಳೆಂಬವರ ಮಾಯೆ
ಮರುಳ್‌ಮಾಡಿ ಕಾಡುವಂದು
ನೊಸಲಕಣ್ಣು ಪಂಚಮುಖ ದಶಭುಜದವರಿಗೆ ಮಾಯೆ
ಅರ್ಧಾಂಗಿಯಾದಂದು,
ಅಷ್ಟಾಶೀಲೆ ಸಹಸ್ರ ಋಷಿಯರುಗಳ ಮಾಯೆ
ತಪೋಮದದಲ್ಲಿ ಕೆಡಹುವಂದು
ನಾನು ಮಾಯಾ ಕೋಳಾಹಳನಾಗಿರ್ದೆ ಕಾಣಾ
ಗೋಹೇಶ್ವರಾ"

ಬ್ರಹ್ಮ ವಿಷ್ಣುಗಳು ದೇವ ದಾನವರು, ರುದ್ರಗಣ ಪ್ರಮಥ ಗಣಂಗಳು, ಮನಮುನಿ ಋಷಿಗಳು, ಪಂಚಮುಖ ದಶಭುಜ ಹಣೆಗಣ್ಣ ಹರ ಮುಂತಾದವರು ಮಾಯೆಯ ತಕ್ಕೆಯಲ್ಲಿ ಸಿಕ್ಕವರೇ, ಇದು ಸಹಜ. ಮಾಯೆಯ ಆಧಾರದ ಮೇಲೆಯೇ ವಿಶ್ವಮೂರ್ತಿ ಪ್ರಪಂಚದ ಕಟ್ಟಡ ನಿಂತಿದೆ. ಆಧಾರ ತಪ್ಪಿದರೆ ? ಅಖಂಡ ಪರಿಪೂರ್ಣವಾಗಿರುವ ಚಿದ್‌ಬೆಳಗಿನ ಬಯಲಲ್ಲಿ ಬ್ರಹ್ಮ ತಾನೊಬ್ಬನೇ. ಇನ್ನು ಹರಿಹರ ಮಹಾದೇವಯ್ಯಗಳ ಅಲ್ಲಮಪ್ರಭು ಕಾರಣ ಪುರುಷ, ಅವತಾರ ಹೌದು. ಶಾಪಹತವಾದ ಭೂಮಿಗೆ ಅವತರಿಸಿ ಶಾಪದ ಫಲವನ್ನುಂಡು ವಿಮೋಚನೆ ಹೊಂದಿ ಜಗದೋದ್ಧಾರ ಮಾಡಿದ ಕೈಲಾಸದ ಅವತಾರ ಅದು.

ಕೈಲಾಸ ಗಣಪದವಿ ಶಾಪಗಳ ಪ್ರಸಂಗ ಸಂಪ್ರಾದಾಯದ ಪುರಾಣಕಥೆ. ಆದರೆ ಕಾಮಲತೆ ಪ್ರಸಂಗ ವಿಚಾರಾರ್ಹವಾದುದು. ಪ್ರಭುದೇವರ ವಚನಗಳನ್ನು ಪರಿಶೀಲಿಸಿದರೆ ಕಾಮಲತೆಯ ಪ್ರಸಂಗಕ್ಕೆ ಕೆಲವೇ ವಚನಗಳು ಆಧಾರವಾಗಿ ದೊರೆಯುತ್ತವೆ.

"ಇವಳ ನೋಟವೆನ್ನ ಮರ್ತ್ಯಕ್ಕೆ ತಂದುದಯ್ಯಾ
ಅವಳ ಕೂಟದ ಸವಿಯಡಗಾತಿ ಕಾಡಿತ್ತಯ್ಯಾ"

ಇಂಥ ಎರಡು ಮೂರು ವಚನಗಳನ್ನು ಬಿಟ್ಟರೆ ಪ್ರಭುದೇವರ ಮಾಯಾ ಸಂಸಾರದ ಕುರುಹೇ ಇಲ್ಲ. ಹರಿಹರ, ಮಹಾದೇವಯ್ಯಗಳ ಅಲ್ಲಮ ಪ್ರಭುವಿನ ದರ್ಶನ ಬೇರೆ. ಚಾಮರಸ, ಗುಮ್ಮಳಾಪುರದ ಸಿದ್ಧಲಿಂಗದೇವರು ಮತ್ತು ಗೂಳೂರ ಸಿದ್ಧವೀರಣ್ಣೊಡಯರು ನಿರೂಪಿಸಿದ ಅಲ್ಲಮ ಪ್ರಭುವಿನ ದಿವ್ಯಾತಾಶದ ದರ್ಶನ ಬೇರೆ.

ದಿವ್ಯದಿಂದ ಅವತರಿಸಿದ ಈ ನಿರಂಜನ ನಿರ್ಮಾಯಜಂಗಮ ಅನಿಮಿಷಯ್ಯನೆ ತನ್ನ ಸದ್ಗುರುವೆಂದು ತಿಳಿದು ಆತನೆಡೆಗೆ ನಡೆದಿದ್ದಾನೆ. ಮುಂದೆ ಪ್ರಭುವಿಗೆ ಸುಜ್ಞಾನಾಂಕುರಗೊಂಡು "ಮಣ್ಣಮರೆಯ ದೇಗುಲ"ದ ಗರ್ಭಗುಹೆಯೊಳಗೆ ಪ್ರವೇಶಮಾಡುತ್ತಿದ್ದಾನೆ. ಶಿವತತ್ವ ವಿದ್ಯೆಯಲ್ಲಿ ಸಂಪೂರ್ಣ ಪಕ್ವವಾಗಿದ್ದಾನೆ. ಅದನ್ನು ಸಂಪಾದನಕಾರರ ಮಾತಿನಲ್ಲಿ ಹೇಳುವುದಾದರೆ:

"ತಾವು ನವಮಾಸಂ ತೀವಿದ ಗರ್ಭಿಣಿಯಂತೆ ಶಿವತತ್ವ ವಿದ್ಯೆಯೊಳಗೆ ಸಂಪೂರ್ಣವಾಗೆ ಎಡೆಗೊಂಡು ಗುರುಹಸ್ತ ಬಂದು ಸೋಂಕದ ಮುನ್ನವೆ ಶಿಖಿಕರ್ಪೂರದಂತಾದುಪುದೆಂಬ ಭಾವದಿರವಿಂಗೆ ಸೂಚಿಸುತ್ತಮಿರೆ ಗುರುವಿಂದ ಮುನ್ನವೆ ಶಿಷ್ಯನು ಗುರುವೆಂಬ ಶಿವಾದ್ವೈತ ವಾಕ್ಯ ಸತ್ಯವಾದಂತೆ ಅಂತರಂಗದೊಳು ಗುರುಭಾವ ತಲೆದೋರಿತ್ತಿರ್ಪ ಅಲ್ಲಮಪ್ರಭುದೇವರು..............."

ಗುರುದೇವನ ಪರುಷಹಸ್ತ ಬಂದು ಮಸ್ತಕವನ್ನು ಸೋಂಕಿ, ಒಳಗೆ ವೇದಿಸಿ, ಭಾವ ಹೃದಯ ನೇತ್ರದಿಂದ ಇಷ್ಟಲಿಂಗವನ್ನು ಕರಸ್ಥಲಕ್ಕೆ ಕರುಣಿಸುವುದಕ್ಕಿಂತ ಮೊದಲೇ ಪ್ರಭುದೇವರ ಅಂತರಂಗದ ಪ್ರಾಣಲಿಂಗ ಹೊರಬಿದ್ದು ಕರದಖಂಡ ತೇಜವಾಗಿ ಬಹಿರಂಗಕೆ ಕ್ರಿಯಾಲಿಂಗವಾಗಿ ಮೂಡುವುದೇನೋ ಎನ್ನುವಷ್ಟು ಗರ್ಭಬೆಳೆದಿದೆ. ಗುರು ಕಾರುಣ್ಯ ಹಡೆಯಲು ಹೊರಗೆ ಗುರುಮೂರ್ತಿಬೇಕು. ಆದರೆ ಅಂತರಂಗದಲ್ಲಿಯೇ ಈ ಬೋಧಾಮೂರ್ತಿ ಇಲ್ಲವೆಂದು ಹೇಳುವವರಾರು ? ಅಂತರಂಗ ಗುರು ಇಲ್ಲದಿದ್ದರೆ ಹೊರಗೆ ಎಷ್ಟು ಗುರುಗಳಿದ್ದರೇನು ? ಶಿಷ್ಯನಲ್ಲಿ ಸದಾ ಸನ್ನಿಹಿತವಾದ ಗುರು ಇದ್ದಾನೆ. ಪ್ರಭುದೇವ ಸಮಾಧಿಯ ಒಳಹೊಕ್ಕು ಕಂಡುದೇನು ಒಂದು ದಿವ್ಯ ಮಾನವ ದೀಪ್ತಿ. 'ಮಣ್ಣಮರೆಯ ದೇಗುಲದೊಳಗೊಂದು ಮಾಣಿಕ್ಯ ....' ಕಂಡಿದ್ದಾನೆ ಪ್ರಭುದೇವ, ಆ ಮಾಣಿಕ್ಯ ಎಂಥದು ನೋಡಿ.

"ಸ್ಪಟಿಕದ ಘಟದಂತೆ ಒಳಹೊರಗಿಲ್ಲ ನೋಡಾ ವಿಗಡ
ಚರಿತ್ರಕ್ಕೆ ಬೆರಗಾದೆನು.
ನೋಡುವರೆ ಕಾಣಬರುತ್ತಿದೆ, ಮುಟ್ಟುವರೆ ಕೈಗೆ ಸಿಲುಕದು.
ಹೊದ್ದುವರೆ ಸಮೀಪ ಹತ್ತೆ ಸಾರುವರತ್ತತ್ತ ತೋರುತ್ತದೆ
ಆಕಾರವ ನಿರಾಕಾರ ನುಂಗಿ ಬಯಲ ಸಮಾಧಿಯಲ್ಲಿ
ಸಿಲ್ಕಿತ್ತು ನೋಡಾ !
ದರುಶನದಿಂದವ್ನೃತಹಾರವಾಯಿತ್ತು ಬೆರಸಿದಡಿನ್ನೆಂತೆ ಗೊಹೇಶ್ವರ !

ಅನಿಮಿಷಯ್ಯನ ಕಾಯ ಸ್ಪಟಿಕದ ಕೊಡ, ಒಳಹೊರಗೆ ಬೆಳಗುವ ಮಹಾಘನ ಜ್ಯೋತಿರ್ಲಿಂಗವನ್ನು ಧರಿಸಿರುವ ಸ್ವಚ್ಛಪಾರದರ್ಶಿ. ಅನಿಮಿಷಯ್ಯನ ಅರಿವು ಮಾನವ್ಯದ ತಾಮಸಗತ್ತಲೆಯನ್ನೆಲ್ಲ ಕಳೆದ 'ಅಣೋರಣಿಯಾನ್ ಮಹತೋ ಮಹಿಯಾನ್' ಆಗಿ 'ಯಜ್ಜ್ಯೋತಿಷಾಂ ಜ್ಯೋತಿಃ' ಆಗಿದೆ. ಈ ಮಹಾಜ್ಯೋತಿಯ ಪ್ರತಾಪದಿಂದ ಆತನ ಮಾನವಘಟದ ಪ್ರಕೃತಿಯ ಗುಣಧರ್ಮ ಕರ್ಮವೆಲ್ಲ ಸುಟ್ಟು ನಿರ್ಮಲವಾಗಿ ನಿಂತಿದೆ. ಸರ್ವಶೂನ್ಯ ನಿರಾಲಂಬವಾದ ಅನಿಮಿಷಯ್ಯನ ಈ ಇರವೇ ನಿಜಸಮಾಧಿ. ಇದೇ ನಿರವಯಸಮಾಧಿ. ಇದೇ ಲಿಂಗಾಂಗ ಸಾಮರಸ್ಯ. ಕಾಣಬಾರದ ಸದ್ಗುರು ಕಣ್ಣಿಗೆ ಗೋಚರವಾಗಿದ್ದಾನೆ. ಆತನೇ ಗುರು ತಾನೇ ಶಿಷ್ಯನೆಂದು ನಿಶ್ಚೈಯಿಸಿದ ಪ್ರಭುದೇವ. ಆದರೆ ಅನಿಮಿಷಯ್ಯ ನಿರ್ವಿಕಲ್ಪ ಸಮಾಧಿಯಲ್ಲಿ ನಿಶ್ಯಬ್ದ ನಿಮಗ್ನನಾಗಿದ್ದುದನ್ನು, ಅವನಿಗೆ ತಾನೆಂಬುದಾಗಲಿ ಪರ ಎಂಬುದಾಗಲಿ ತೋರದಿರುವುದನ್ನು ಅಲ್ಲಮನು ಮನಗಂಡು ಗುರುವಿಗೂ ತನಗೂ ಆವ ಭೇದವನ್ನು ಕಾಣದೆ ತನ್ನ ಅಂತರಂಗದ ಬೋಧಾಮೂರ್ತಿಯನ್ನೇ ಶ್ರೀಗುರುವೆಂದು ಅರಿತು ಅವನ ಕರಸ್ಥಲದ ಲಿಂಗವನ್ನು ತಾನೇ ಅನುಗ್ರಹಿಸಿಕೊಂಡನು. ಒಡನೆಯೆ ಆ ಅನಿಮಿಷ ಗುರುದೇವನು ಲಿಂಗೈಕ್ಯನಾದನು. ಅವನ ದೇಹ ಚೆಲ್ಲಾಡಿತು. ತನ್ನ ಪರಮಗುರು ಅನಿಮಿಷದೇವನ ಮನುಷಾಕಾರ ಕಳಚಿ ಬಿದ್ದುದಕ್ಕೆ ಪ್ರಭುವಿನ ಮನದಲ್ಲಿ ಸಂಚಲತರಂಗ, ಹೃದಯದಲ್ಲಿ ಕ್ಷೋಭೆ, ಚಿಂತೆ, ಸಂತಾಪ, ಅನುತಾಪ ತನ್ನ ಆಕೃತ್ಯದಿಂದ ಗುರುವಳಿದನಲ್ಲಾ ಎಂಬ ಅನುತಾಪ. ಆ ಗುರುವಿನ ಚೈತನ್ಯ ಅವನ ಅಂಗೈಯ ಲಿಂಗದಲ್ಲಿ ಅಡಗಿ ಆ ಲಿಂಗ ತನ್ನ ಕರಸ್ಥಲಕ್ಕೆ ಬಂದುದನ್ನು ಸ್ಮರಿಸಿಕೊಂಡನು. "ಶ್ರೀ ಗುರು ನನ್ನ ಅಂಗೈಯೊಳಗೇ ಅಲ್ಲ, ಅಂತರಂಗದಲ್ಲೂ ನೆಲೆಗೊಂಡಿರುವುದರಿಂದ ಆತನು ಮೃತನಲ್ಲ, ಅಮೃತ"ನೆಂದು ಪ್ರಭುದೇವನು ತನ್ನನ್ನು ತಾನೇ ಸಂತೈಸಿಕೊಂಡು ಶ್ರದ್ಧೆ, ನಿಷ್ಠೆ, ಅವಧಾನ, ಅನುಭಾವ, ಆನಂದ, ಸಮರಸ ಈ ಷಡಂಗವೂ ಕ್ರಮವಾಗಿ ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗ, ಶರಣ, ಐಕ್ಯ ಎಂಬ ಷಟ್‌ಸ್ಥಲಗಳಲ್ಲಿ ಅಳವಟ್ಟು ಸರ್ವಾಚಾರ ಸಂಪತ್ತು ಸಿದ್ಧಿಸಿತು ಅಲ್ಲಮನಿಗೆ.

ಅರಿವು ಆಚಾರದಲ್ಲಿ ಸಮವೇದಿಸಿ ತನ್ನನ್ನು ಆಶ್ರಯಿಸಿದ ಮಹಾನುಭಾವಿಗಳಿಗೆ 'ನಿಶ್ಯಬ್ದ'ವನ್ನು ವಚನಾನುಭಾವವಾಗಿ ನಿರೂಪಿಸಲಿಚ್ಛಿಸಿ ನಿಂತಲ್ಲಿ ನೆಳಲಿಲ್ಲದೆ ಸುಳಿವಲ್ಲಿ ಹೆಜ್ಜೆಯಿಲ್ಲದೆ ದಿಗಂಬರ ಜಂಗಮವಾಗಿ, ಕೈಯಲ್ಲಿ ವೀಣಾದಂಡವನ್ನು ಹಿಡಿದು ವಚನಗಳನ್ನು ಹಾಡುತ್ತಾ ಲೋಕಕಾರುಣ್ಯ ಯಾತ್ರೆಯನ್ನು ಕೈಕೊಂಡನು.

ಮುಕ್ತಾಯಕ್ಕ ಅಜಗಣ್ಣನ ತಂಗಿ. ಅಜಗಣ್ಣನಗಲ್ದ ವಿಯೋಗಾವಸ್ಥೆಯಿಂದ ಪ್ರಲಾಪಿಸುತ್ತಿದ್ದಾಳೆ. ಸತ್ಯ, ಸದಾಚಾರವಂತರು

ಶಿವಲಿಂಗೈಕ್ಯರು. ಶಿವಸುಖಿಗಳು ಸ್ವಾನುಭಾವ ಗಪ್ಯರು ಸಮ್ಯಕ್ ಶರಣರಿದ್ದೆಡೆಗೇ ಚಲಿಸುತ್ತಿದ್ದ ಪ್ರಭುದೇವನಿಗೆ ಅಕ್ಕನ ಪ್ರಲಾಪ ವಿಚಿತ್ರವೆನಿಸುತ್ತದೆ. ಅಕ್ಕನಲ್ಲಿ ಏನೋ ಕೊರತೆ ಕುಂದು ಕಂಡು ಬರುತ್ತದೆ. ಪರವಸ್ತುವಿನಲ್ಲಿ ನೆರೆವ ಭರ ಭರಾಟೆ ವಿಯೋಗ ವಿರಹ ಅಂತೆಯೇ ವಿಕಳವಾದ ಅವಸ್ಥೆಯಿಂದ ಕೊಸರಿಕೊಂಡು ಸಂಯೋಗ ಸಹಿತವಾದ ಸಕಳಕ್ಕಾಗಿ ಮುನ್ನುಗ್ಗುತ್ತಿದೆ. ಆದರೆ ಅಕ್ಕನ ವಿಕಳಾವಸ್ಥೆಯಲ್ಲಿ ಏನೋ ಕೊರತೆ ಇದೆ. ಈ ಕೊರತೆ ಹಿಂಗದೆ ನೆರತೆಯ ಸಂಪೂರ್ಣ ಸಂಯೋಗ, ಸಂಗಮ ಸಮರಸದ ಸಂಭವವಿಲ್ಲ.

ಕೊರತೆಯ ಹಿಂಗಿಸಿ ಅರಿವಿನ ದಾರಿತೋರಿದ ಪ್ರಭು ಮುಕ್ತಾಯಿಗೆ ಒಂದು ಎರಡು ಸಂಧಿಯಲ್ಲಿ ನಿಂದು ಬೆಳಗು ಕತ್ತಲೆ ಎಂಬ ಸಂದೇಹವನ್ನು ತೊರೆ ತಾಯೇ ! ನೀನಾರು, ಸತ್ತ ಅಜಗಣ್ಣನಾರು "ತನ್ನಲ್ಲಿ ತಾನು ಸನ್ನಿಹಿತನಾದವನಿಗೆ ದುಃಖಿಸುವುದು ಭ್ರಾಂತಿ–ಯೆಂದರೂ ಒಡಲೇ ಇಲ್ಲದಾತನಿಗೆ ಸಾವೆಲ್ಲಿಯದೆಂದೂ" ಹೇಳಿ ಸಂತೈಸುವನು. ಆದರೆ ಮುಕ್ತಾಯಿ ದಿಟ್ಟ ಶರಣೆ. ಅಲ್ಲಮನಂಥ ಮಹಾಜ್ಞಾನಿಯ ಜೊತೆ ಧೈರ್ಯದಿಂದ ತಾತ್ತ್ವಿಕ ಸಮಾಲೋಚನೆ ಮಾಡಿದಳು. ಮುಕ್ತಾಯಕ್ಕನಿಗೆ ಅಲ್ಲಮನ ತತ್ತ್ವಗ್ರಹಿಕೆ ಸರಿ ಎನಿಸಿದರೂ ಅವನ ಆ ನಿಲವು ಬರಿಯ ಮಾತಿನ ಚದುರತನವೇನೋ ಎಂದು ಅವಳಿಗೆ ಸಂಶಯ ಮೂಡುವುದು. ಪರೀಕ್ಷಿಸಿ ನೋಡಲೆಂದು ಆಕೆ ಅಲ್ಲಮನನ್ನು ಕುರಿತು "ನನ್ನ ನಾನರಿತು ಪರಬ್ರಹ್ಮವಾದೆ-ನೆನ್ನುವೆ ಆದರೆ ನಿನಗೇಕೆ ಮಾತಿನ ಗೊಂದಲ ಹಿಂಗದು ?" ಎಂದು ಮೊದಲಿಸುವಳು. "ಮಾತೆಂಬುದು ಜ್ಯೋತಿರ್ಲಿಂಗ ಅದರ ಸ್ವರವೇ ಪರತತ್ತ್ವ ತಾಲು ಮುತ್ತು ಓಷ್ಠಗಳೇ ಅದರ ಬೀಡು. ಆಡುಂಬೊಲ ನಾದಬಿಂದು ಕಲಾತೀತವೇ. ಅದರ ಲೀಲಾ ವಿಲಾಸ ಮಾತಿನ ಮಹಿಮೆಯನ್ನು ಶರಣರು ಬಲ್ಲವರಾದುದರಿಂದಲೇ ಅವರು ಮಾತನಾಡಿಯೂ ಮಾತಿನ ಸೂತಕವಿಲ್ಲದವರು" ಎನ್ನುವನು. ಕೊನೆಗೆ ಅಲ್ಲಯ್ಯನು ಅರಿತು ಮರೆತ ಶಿವಯೋಗಿಯ ಮಾತು ಜ್ಯೋತಿರ್ಲಿಂಗವಲ್ಲದೆ ಬೇರೆಯಾಗದೆಂದು ಹೇಳಿ ಅವಳಿಗೆ ಬೆಳಗು ತೋರುವನು. ಅರಿವು ಮರವಿನ ಸಂದೇಹದಿಂದ ದೂರ ಮಾಡಿ ಬಯಲಿನತ್ತ,ಶೂನ್ಯದತ್ತ ದಾರಿ ತೋರುವನು. ಮುಕ್ತಾಯಕ್ಕನ ವಿಕಳಾವಸ್ಥೆಯ ಪ್ರಳಾಪವನ್ನು ತಿಳುಹಿ, ಅಕ್ಕನಲ್ಲಿ ಮಹಾನುಭಾವವನ್ನು ಎಚ್ಚರಿಸಿ ತೋರಿ, ಸೊನ್ನಲಿಗೆಪುರಕ್ಕೆ ಬರುತ್ತಾನೆ ಪ್ರಭುದೇವ.

ಹನ್ನೆರಡನೆಯ ಶತಮಾನದಲ್ಲಿ ಮೊದಲು ಸಣ್ಣ ಹಳ್ಳಿಯಾ-ಗಿದ್ದ ಸೊನ್ನಲಿಗೆ ಶಿವಯೋಗಿ ಸಿದ್ಧರಾಮನಿಂದ ಮಹಾ ಪುಣ್ಯ ಕ್ಷೇತ್ರವಾಗಿದೆ. ಜನದ ಹಿತಾರ್ಥವಾಗಿ ಶಿವಯೋಗಿ ಸಿದ್ಧರಾಮಯ್ಯ ಗುಡಿ ಗೋಪುರ, ಕೆರೆ, ಅರವಟ್ಟಿಗೆ, ಆರವೆ, ಅನ್ನಛತ್ರಗಳನ್ನು ಕಟ್ಟಿಸುವ ಕೆಳಕಳದಲ್ಲಿ ಮನಮಗ್ನವಾಗಿ ಇದ್ದಾನೆ. ಶ್ರೀ ಸಿದ್ಧರಾಮನ ಇರವನ್ನು ತಿಳಿಯಬೇಕೆಂದು ಸೊನ್ನಲಿಗೆಪುರಕ್ಕೆ ಬಂದನು. ಅಲ್ಲಿ ಶಿವಾಲಯಗಳನ್ನು ಕಟ್ಟುತ್ತಿದ್ದ [illegible] ಮುಂದೆ ಹೋಗಿ 'ಒಡ್ಡರಾಮನಿದ್ದಾನೆಯೇ' ಎಂದು ಕೇಳಿದರೆ ಗುರುನಿಂದೆಯ [illegible] ಬಡಿದರು. ಅವರ ಗಾಯ ಆದುದು ಯಾರಿಗೆ ತಿರುಗಿ ಅವರಿಗೆ. ಅದನ್ನು ತಿಳಿದ ಸಿದ್ಧರಾಮ ತನ್ನ ಗುಡ್ಡರಿಗೆ ಆದ ನೋವು ತನ್ನ ನೋವೆಂದು ಹಣೆಗಣ್ಣು ತೆಗೆಯಲು ಆ ಹಣೆಗಣ್ಣಿನ ಇಂಗಳ ಭೂಮಿಯಲ್ಲೆಲ್ಲ ಪಸರಿಸಿತು. ಇದ ಸ್ಮರಿತ ಪ್ರಭುದೇವನು ತನ್ನ ಅಂಗಾಲದಿಂದ ಇಂಗಳವನ್ನು [illegible], ತನ್ನೆಡೆಗೇ ಬರುತ್ತಿದ್ದ ಇಂಗಳವನ್ನು ನೋಡಿ ಸಿದ್ಧರಾಮನು ಅಲ್ಲ-ಮನು ಸಾಕ್ಷಾತ್ ಶಿವನೆಂಬ ಪ್ರಜ್ಞೆ ಮೂಡಿ ಪ್ರಭುವಿನ ಶ್ರೀ ಪಾದಂಗಳಿಗೆ ನಮಸ್ಕರಿಸಿದ. ಮುಂದೆ ಏಕಾಂತ ಸಮಾಧಿಯಲ್ಲಿ ಕೂಡಿ, ಯೋಗದ ವಿಚಾರವಾಗಿ ಅನುಭಾವ ನಡೆಸುವರು. ಪ್ರಭುದೇವನು ಸಿದ್ಧರಾಮನಿಗೆ "ಸರ್ವಶೂನ್ಯ ಸಮಾಧಿ"ಯ ನಿಲವನ್ನೂ ಬೋಧಿಸುವನು. ಆಗ ಸಿದ್ಧರಾಮನು ಪ್ರಭುದೇವನ ಕರಸ್ಥಲದ ಲಿಂಗವನ್ನು ಕುರಿತು ವಿಚಾರಿಸುವನು. ನಂತರ ಪ್ರಭು ಇಷ್ಟಲಿಂಗದ ಮಹತ್ತ್ವವನ್ನು ಹೇಳಿ ಸೂಕ್ಷ್ಮ ತತ್ತ್ವಗಳನ್ನು ಚೆನ್ನಬಸವಣ್ಣನಿಂದ ತಿಳಿಸುವೆನೆಂದು ಕಲ್ಯಾಣಕ್ಕೆ ಆಹ್ವಾನಿಸುವನು.

ಪ್ರಭುದೇವರು ಸಿದ್ಧರಾಮನನ್ನು ಒಡಗೊಂಡು ಕಲ್ಯಾಣದ ಹಾದಿಯಲ್ಲಿ ನಡೆಯುತ್ತಿದ್ದಾರೆ. ಕಲ್ಯಾಣಕ್ಕೆ ನಡೆದಿರುವ ಕಾಲಿನಲ್ಲಿ ಹರ್ಷತುಂಬಿ ಹರಿಯುತ್ತಿರುವಂತೆ ಸಿದ್ಧರಾಮ ಪ್ರಭುದೇವರ ಹೃದಯ ಪರಮಾನಂದದಿಂದ ಹೊಗರೇರಿ ಕಾಲೂರಿ ಹೆಜ್ಜೆಯಿಟ್ಟು ನಡೆವ ನಿರ್ಭರದಲ್ಲಿವೆ. ಹೀಗೆ ಪ್ರಭುದೇವ ಸಿದ್ಧರಾಮರು ಬಸವಣ್ಣನ ಮನೆಯ ಬಾಗಿಲಲ್ಲಿ ಮಮತೆಯಿಂದ ನಮಿಸಿ ನಿಂತಾಗ, ಬಸವಣ್ಣನು ಶಿವಲಿಂಗದೊಳಗೆ ಪ್ರಭುದೇವರ ನಿಜಮೂರ್ತಿಯನ್ನು ಕಂಡು ಕರೆದು ತನ್ನಿ ಎಂದು ಅಪ್ಪಣ್ಣನನ್ನು ಕಳಿಸುವನು. ಬಂದ ಜಂಗಮಕ್ಕೆ ಬಸವಣ್ಣನ ಭಕ್ತಿಯನ್ನು ಬಿತ್ತರಿಸಿ ಅವರ ಮನವೊಲಿಸಿ ಒಳಗೆ ದಯಮಾಡಿಸಿಕೊಂಡು ಹೋಗಬೇಕೆಂದು ವಿಶ್ವಪ್ರಯತ್ನಮಾಡಿದ ಅಪ್ಪಣ್ಣನ ಹವಣಿಕೆ ಮೀರಿಹೋಯ್ತು. ನಿರಾಶೆಯಿಂದ ಭಾರವಾದ ಹೃದಯ, ಒಣಗಿದ ಮೋರೆಯಲ್ಲಿ ಬಸವಣ್ಣನಲ್ಲಿಗೆ ತಿರುಗಿಬಂದ ಅಪ್ಪಣ್ಣ. ಸಂಗನ ಬಸವಣ್ಣ ಎಂದರೆ ಭಕ್ತಿಯ ಘನಘಟ್ಟಿ ಎಂಬ ಮಾತಿನಲ್ಲಿ ಎಳ್ಳಷ್ಟು ಸಂಶಯವಿಲ್ಲ ಅಪ್ಪಣ್ಣನಿಗೆ.ಹಾಗಿದ್ದರೆ ಜಂಗಮ ವೇಕೆ ದಯಮಾಡಿಸಲಿಲ್ಲ? ಅದು ಬಸವಣ್ಣನ ಭಕ್ತಿಯ ಕೊರತೆಯಲ್ಲ. ತನ್ನ ಆತ್ತಿಯ ಹಣ್ಣಿನ ಭಕ್ತಿಯೇ, ಜಂಗಮ ಒಳಗೆ ಬಾರದಿರಲು ಕಾರಣ ಎಂದು ಅಪ್ಪಣ್ಣನ ಎದೆಯಲ್ಲಿ ಹೆದರಿಕೆಯ ಮುದ್ರೆ ಮೂಡಿತು. ಎರಡುಸಲ ಅಪ್ಪಣ್ಣ ಹೋದರೂ ಪ್ರಭುದೇವ ಬಾರದಿರಲು ಅಪ್ಪಣ್ಣ 'ಎನ್ನ ಮಾತಿಂಗೆ ಬಾರರು ನೀವೆ ಹೋಗಿ ಬಿಜಯಂಗೈಸಿ ಕೊಂಡು ಬಾರಾ ಸಂಗನ ಬಸವಣ್ಣ' ಎಂದು ಹೇಳಿ ಆ ಮೂರ್ತಿ ಎಂಥದು ಎಂಬುದನ್ನು ವಿವರಿಸುವನು. 'ಕಾಬರೆ ಕಂಗಳಿಗೆ ಅಸಾಧ್ಯ. ಮುಟ್ಟುವರೆ ಸೋಂಕಿಂಗಸಾಧ್ಯ, ಮಾತನಾಡಿಸಿ ನೋಡಿದರೆ ವಾಙ್ಮನೋತೀತ,ನಿಂದರೆ ನೆಳಲಿಲ್ಲ,ಸುಳಿದರೆ ಹೆಜ್ಜೆಯಿಲ್ಲ ಎಂದು ಪ್ರಭುದೇವರೆಂಬ ಭಾವ ತೋರುತ್ತದೆ ಬಸವಪ್ರಿಯ ಕೂಡಲಸಂಗಯ್ಯನ ಶರಣರ ಚರಣವಿಡಿವರೇಳಾ ಸಂಗನಬಸವಣ್ಣಾ'.

ಇದೇ ಹೊತ್ತಿಗೆ ಚೆನ್ನಬಸವಣ್ಣ ಬಂದು 'ಪ್ರಭುದೇವರು ಸಿದ್ಧರಾಮಯ್ಯನವರು ಬಂದು ದ್ವಾರದಲ್ಲಿ ಮುಂದೆ ನಿಂದ್ದಿದ್ದಾರೆ. ನೀವೇ ಹೋಗಿ ಬಿಜಯಂಗೈಸಿ ತನ್ನಿ' ಎಂದು ಬಸವಣ್ಣನನ್ನು ಬಿನ್ನಯಿಸುತ್ತಾನೆ. ಅಲ್ಲದೆ ಈ ತೆರನಾಗಿ ಹೇಳುತ್ತಾನೆ. 'ಸಂಗಮನಾಥ

ಮನೆಗೆ ಅಂಗವಿಡಿದು ಬಂದರೆ, ದಿಮ್ಮನೆ ಇದಿರೆದ್ದು ವಂದಿಸಬೇಕು ನೋಡಯ್ಯಾ; ಲಿಂಗವ ಪೂಜಿಸಿ ಫಲವೇನಯ್ಯಾ .... ಕೂಡಲಸಂಗಮ ದೇವರಲ್ಲಿ ನದಿಯೊಳಗೆ ನದಿಬೆರೆಯದನ್ನಕ್ಕರ ನಿಜಸಮಾಧಿಯೊಳು ಬೆರಸುವ ಭೇದ ಎನಗೆಂದು ಸಯವಪ್ಪುದು?' — ಎಂದು ಶರಣಸಂಗಕ್ಕೆ ಹಗಲಿರುಳು ಹಂಬಲಿಸಿದಿರಿ ನೀವು. ಆ ಕೂಡಲಸಂಗಮದೇವರು ಬಾಗಿಲಿಗೆ ಹರಿದುಬಂದರೆ ಕಣ್ಣರಿಯದಿದ್ದರು ಕರುಳರಿಯಬೇಡವೇ ಸಂಗನಬಸವಣ್ಣ ? ಎಂದು ಹೇಳಿ ಪ್ರಭುದೇವ ಸಿದ್ಧರಾಮದೇವರು ಬಂದು ಬಾಗಿಲಲ್ಲಿ ನಿಂತರೆ 'ಅಟ್ಟಾಟಿಕೆ ಯಲ್ಲಿಂತು ತೆರಹು ಮರಹಾಗಿಪ್ಪುದು' ನಿಮಗೆ ಯೋಗ್ಯವೆ ಬಸವಣ್ಣ ಎಂದು ಎಚ್ಚರಿಸುವನು ಚೆನ್ನಬಸವಣ್ಣ :

'ಕಾಯಭಕ್ತ ಪ್ರಾಣಜಂಗಮ ಕೂಡಲಸಂಗನ ಶರಣರು ಬಂದರೆ ಉಪಚಾರಕ್ಕೆ ಇಂಬಿಲ್ಲ, ಕೂಡಲಸಂಗನ ಶರಣರ ಮನೆಯ ಬಾಗಿಲುಗಾಹೆ ನಾನಾಗಿರ್ದು ಕರ್ತರು ಗೃಹಕ್ಕೆ ಬಂದರೆ ಬೇಕು ಬೇಡೆನ್ನೆ' ಎಂದು ಭಕ್ತಿ ತಲೆಗೇರಿದ್ದ ಬಸವಣ್ಣ, ಚೆನ್ನಬಸವಣ್ಣನ ಮಾತು ಕೇಳಿ ಬಸವಣ್ಣನ ಭೀತಿ ಪಾತಾಳಕ್ಕಿಳಿದು.

'....ಎನ್ನ ಶಿರವನವರ ಪಾದಕ್ಕೆ ಪೂಜೆಯ ಮಾಡುವೆನು....' ಎಂದು 'ಲಿಂಗಾರ್ಚನೆಯ, ಮಾಡುವೆನಯ್ಯಾ, ಜಂಗಮವೆನ್ನ ಮಠಕ್ಕೆ ಬಂದರೆ, ಲಿಂಗಾರ್ಚನೆಯ ಮಾಡಿ ಜಂಗಮಾರ್ಚನೆಯ ಮಾಡುವೆನು...........' ಏಕೆಂದರೆ 'ಲಿಂಗಜಂಗಮಯೋರ್ಮಧ್ಯೇ ಜಂಗಮಸ್ತು ವಿಶಿಷ್ಯತೇ' ಎಂದು ಲಿಂಗಫಲದ ಒಳದಿರುಳಾದ ಜಂಗಮ ಲಿಂಗವನ್ನು ಕಾಣುತ್ತ, ಜಂಗಮಭಕ್ತಿಯ ಗಂಭೀರ ವಿಶೇಷವನ್ನು ಹಾಡುತ್ತ ಬಸವಣ್ಣ ನಡೆದಿದ್ದಾನೆ. 'ಬಸವರಾಜದೇವರು ಲಿಂಗಾರ್ಚನೆಯಿಂದೆದ್ದು ಚೆನ್ನಬಸವರಾಜದೇವರು ಮೊದಲಾದ ಅಸಂಖ್ಯಾತ ಮಹಾಗಣಂಗಳ ಕರೆಸಿಕೊಂಡು, ವಿಭೂತಿವೀಳೆಯ ಕಾಣಿಕೆ ಸಹವಾಗಿ ನವರತ್ನಖಚಿತ ಒಡಗೂಡಿದ ದಿವ್ಯಾಂಬರಗಳಂ ಗುಡಿ ತೋರಣಂಗಳಂ ಕಟ್ಟಿಸಿ, ದೇವಾಂಗಿ ಮೌಕ್ತಿಕದ ಸೆರಗಿನ ಸೀರೆಯಂ ನಡೆಮಡಿಯಂ ಹಾಸಿ, ಚೀನಿ ಚೀನಾಂಬರದಲ್ಲಿ ಪವಳದ ಝಲ್ಲರಿಯಿಂ ರತ್ನದ ಝಲ್ಲರಿಯಿಂ ಮೇರಕಟ್ಟಿಂ ಕಟ್ಟಿ, ಕಳಸಕನ್ನಡಿ ಪಂಚಮಹಾವಾದ್ಯದಿಂ ಧೂಪಾರತಿ ಘಂಟೆ ಸಹವಾಗಿ ಪ್ರಭುದೇವರ ಕರೆಯ ಬಹ ಸಂಭ್ರಮದಿಂದಿರುತ್ತಿರಲ್........' ಇದಿರುಗೊಳ್ಳುವ ಸಂಭ್ರಮದಲ್ಲಿ ಅಪ್ಪಣ್ಣ ಬಾಚಿರಸ ಚೆನ್ನಬಸವಣ್ಣನಲ್ಲದೆ ಅಸಂಖ್ಯಾತ ಶರಣರು ನಡೆದಿದ್ದಾರೆ.

ದ್ವಾರವಟ್ಟದ ಮುಂಗಡೆಗೆ ಅಂಗಳದಲ್ಲಿಯೆ ನಿಂತ ಪ್ರಭುದೇವ ಸಿದ್ಧರಾಮಯ್ಯನೊಡನೆ ಬಸವಣ್ಣನ ಭಕ್ತಿಯನ್ನೇ ಕುರಿತು ಪ್ರಸಂಗಿಸುತ್ತಿದ್ದಾನೆ. ನೋಡು ಸಿದ್ಧರಾಮಯ್ಯ ಭಕ್ತರ ತಲೆಯಲ್ಲಿ ಅಹಂಕಾರ ಮೂಡುತ್ತಿದೆ. "...........ಭೃತ್ಯವಿದ್ದೆಡೆಗೆ ಕರ್ತನೈತಂದರೆ ಅಟ್ಟಾಟಿಕೆಯಲ್ಲಿ ಇಂತು ಕರೆದವರುಂಟೆ ? ಬಸವಣ್ಣನೇ ಈ ಗತಿಯಾದ ಬಳಿಕ ಇನ್ನುಳಿದ ಭಕ್ತರ ಪಾಡೇನು ರಾಮಯ್ಯ? ಭಕ್ತಿಯ ಉನ್ಮತ್ತ ತಲೆಗೇರಿದ್ದ ಬಸವಣ್ಣನನ್ನು ಕುರಿತು ಪ್ರಭು ಮಾತಾಡುತ್ತಿದ್ದಾನೆ.

ಬಸವಣ್ಣ ತನ್ನ ತಪ್ಪಿಗೆ ತಾನೇ ನೊಂದು ಬೆಂದಿದ್ದಾನೆ. ಅತ್ಯಂತ ಕಿಂಕಿಲನಾಗಿ 'ಕರುಣಿಸಯ್ಯಾ ತಂದೇ' ಎಂದು ಹೃದಯವನ್ನು ಕಿತ್ತು ಪ್ರಭುವಿನ ಪಾದದಲ್ಲಿರಿಸಿ ಬಿನ್ನವಿಸುತ್ತಾನೆ. ಆದರೆ ಪ್ರಭುವಿನ ದೃಷ್ಟಿಯಲ್ಲಿ ಬಸವಣ್ಣ ಇನ್ನು ಬೆಂದು ಇನ್ನೂ ಪರಿಪಾಕವಾಗಬೇಕು. ಸಂಗಮನಾಥನ ಸವಿಗಂಪು ಮಧುರುಚಿ ತನಿರಸ ತುಂಬಿ ಬಸವಣ್ಣನಲ್ಲಿ ಲಿಂಗಜಂಗಮ ಭಕ್ತಿರಸನಿಷ್ಪತ್ತಿಯಾಗಬೇಕು. ಭಕ್ತಿಯಲ್ಲಿ ಬೆಳೆದಿರುದ ಅದ್ವೈತದ ಅಹಂಭಾವವನ್ನು ಕಿತ್ತು ಕಳೆದು ಬಸವಣ್ಣ ಭಕ್ತಿಯುಗವಾಗಬೇಕು. ಈ ಕಾರಣದಿಂದಲೇ ಪ್ರಭು ಬಸವಣ್ಣನ ಶಿವಾಚಾರ ವರ್ತನೆಯನ್ನು ಆಕ್ಷೇಪಿಸುತ್ತಾರೆ.

ಜಡಿದು ಝಂಕಿಸುವ ಜಂಗಮರ ಮಾತು ಕೇಳಿ ಬಸವಣ್ಣನವರು'ಅತ್ಯಂತ ನೊಂದು ತಮ್ಮ ಲಿಂಗಾರ್ಚನೆಯ ತಾವೇ ಜಟಿದುಕೊಳ್ಳುತ್ತಾರೆ'. 'ಮುನ್ನೂರಅವತ್ತು ದಿನ ಸ್ರವವ ಮಾಡಿ, ಕಳನ. ನೇಱಿ ಕೈಯಱಿದಂತಾಯಿತೆನ್ನ ಭಕ್ತಿ' ಎಂದು ನೊಂದು ಭಕ್ತಿಯಲ್ಲಿ ನಿಷ್ಠೆ ನೆಲೆಗೊಂಡಿದ್ದರೆ 'ಸ್ಥಾವರ ಜಂಗಮದ ಭೇದ' ನನಗೇಕೆ ಹೊಳೆಯಲಿಲ್ಲ ಎಂದು ಪರಿತಪಿಸುತ್ತ ಜಂಗಮಲಿಂಗವೇ, ಪ್ರಭುರಾಯಾ, ಎನ್ನಕರಸ್ಥಲಲಿಂಗದ ಹೃದಯಜ್ಯೋತಿಯೆ, ಒಳಗೆ ಬಾರಯ್ಯಾ ತಂದೇ. 'ಎನ್ನ ತಪ್ಪನೆಣಿಸಿಹೆನೆಂದರೆ ತಡೆಯಿಲ್ಲ...........' ಇನ್ನು ತಪ್ಪಿದೆನಾದರೆ ನಿಮ್ಮ ಪಾದವೇ ದಿವ್ಯ ಇದಕ್ಕೆ ಪ್ರಮಥಗಣಂಗಳ ಮುಂದೆ ಕಿನ್ನರಿ ಬೊಮ್ಮಣ್ಣಗಳ ಸಾಕ್ಷಿ ಕೊಡುವೆನು.

ಬಸವಣ್ಣನ ಪರ ಕಿನ್ನರಿ ಬೊಮ್ಮಣ್ಣನು ಬಿನ್ನಹ ಮಾಡಿಕೊಳ್ಳಲು ಪ್ರಭು ಬಸವಣ್ಣನ ಮಹಾದ್ವಾರವನ್ನು ಹೊಗುವ ಮುನ್ನ ಆ ಮನೆಯ ಮುಂದಿರುತ್ತಿದ್ದ ಮರುಳಶಂಕರ ದೇವನ ಪರುಷಗುಣವನ್ನು ತಿಳಿಸುವನು. ಮುಂದೆ ಪ್ರಭುದೇವರು ಬಿಜಯಂಗೈಯಲು ಬಸವಾದಿ ಶರಣರೆಲ್ಲರೊಡಗೂಡಿ ಗೋಷ್ಠಿ ನಡೆಯುವದು. ಚೆನ್ನಬಸವಣ್ಣ ಸಿದ್ಧರಾಮದೇವರಿಗೆ ಇಷ್ಟಲಿಂಗದ ಕುರುಹನ್ನು ಅರುಹುವನು ಮತ್ತು ಇಷ್ಟಲಿಂಗ ಧಾರಣ ಮಾಡುವನು.

ಮುಂದೆ ಕಾಯಕತತ್ತ್ವ ನಿರೂಪಣೆ ಬರುವದು. ಅಲ್ಲಿ ನುಲಿಯ ಚಂದಯ್ಯ, ಮೋಳಿಗೆ ಮಾರಯ್ಯ, ಆಯ್ದಕ್ಕಿ ಮಾರಯ್ಯಗಳ ಕಾಯಕ ನಿಷ್ಠೆ ವಿವರಿಸಲಾಗಿದೆ. ಆಮೇಲೆ ಅಕ್ಕನಿಗೆ ನಿಜದ ನಿಲವಿನ ದಾರಿ ತೋರಿದ ಪ್ರಭುದೇವ ಲೇಖನ ವಿಸ್ತಾರ ಭಯದಿಂದ ಮುಂದಿನ ಸಂಪಾದನೆಗಳನ್ನು ವಿವರಿಸಲಾಗಲಿಲ್ಲ.

ಒಟ್ಟು ಈ ಗ್ರಂಥದಲ್ಲಿ ಹುದುಗಿರುವುದೇನು ? ಇದರ ಸಾರ ಸಂಗ್ರಹವೇನು ? ಮಹಾಶರಣರು ನಡೆದು ಮುಟ್ಟಿದ ದಾರಿ ಯಾವುದು ? ಅವರ ಧ್ಯೇಯ ಏನು ?

"ಒಳಗೆ ನೋಡಿದರೆ ಒಳಗೆ ಬಯಲು
ಹೊರಗೆ ನೋಡಿದರೆ ಹೊರಗೆ ಬಯಲು
ನೆನೆದಿಹೆನೆಂದರೆ ಮನಬಯಲು
ನೆನೆಹಿಸಿಕೊಂಡಿಹೆನೆಂದರೆ,
ನೀನಿಲ್ಲವಾಗಿ ನಾನೂ ಬಯಲು ನೀನೂ ಬಯಲು ನೋಡಾ,
ಭಾವಿಸಿಕೊಂಬ ವಸ್ತುವಿಲ್ಲವಾಗಿ,ಭಾವ ಬಯಲೆಂದೆನು ಕಾಣಾ
ಮರಹು ನಷ್ಟವಾಯಿತ್ತಾಗಿ, ಅರುಹು ಶೂನ್ಯವಾಯಿತ್ತು ನೋಡಾ
ಅರುಹು ಶೂನ್ಯವಾದುದೇ ಅಖಂಡ ನಿರಾಳ ನೋಡಾ
ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೆ"

ಈ ನಿರಾಳ ಈ ನಿರವಯಲು ಮಾನುಷವಾದ ಮನ,ಮಾನುಷ ಬುದ್ಧಿ, ಮಾನುಷ ಭಾಷೆಗಳಿಗೆ ಮಾನುಷ್ಯಕ್ಕೆ ಹಿಡಿಸುವ ಮುಟ್ಟಬಲ್ಲ ಅನುಭಾವವಲ್ಲ. ಆದರೆ ದೇಹದ ಸಂಭ್ರಮ, ಪ್ರಾಣಕರಣ ಇಂದ್ರಿಯದ ಸಂಭ್ರಮ ಅರಿವು ಕುರುಹಿನ ಸಂಭ್ರಮ ಭಾವದ ಬಯಕೆಯ ಸಂಭ್ರಮವೆಲ್ಲ ಅಡಗಿ ನಿಜ ಸಹಜದ ನಿರಾಳದಲ್ಲಿ ಸಹಜವಾಗಿ ನಿಂದು 'ನಿರವಯಲ' ಸಹಜ ಸಮಾಧಿಯಲ್ಲಿ ಇದ್ದು ತಾನೆ ವಿಶ್ವರೂಪವಾಗಿ ದಿವ್ಯ ವಿಲಾಸವನ್ನು ಮಾಡಿದರೆ ಆಡಿದರೆ ಆಗ ಈ ಮಾನವ ಮೋಹದ ಬಯಲು ಕಾಣದಾಗದು. ಇನ್ನು ಶೂನ್ಯಸಂಪಾದನೆಯನ್ನು ಮುಕ್ತಾಯ ಮಾಡಿ ನುಡಿದ ಮಾತುಗಳಲ್ಲಿ ಏನೆಲ್ಲಡಗಿದೆ ಎಂದು ಹೇಳಬಹುದು. ಇವು ಸಿದ್ಧವೀರಣ್ಣೊಡೆಯರ ಮಾತುಗಳು.

" ಇದು ಪರಮಗುರು, ಇದು ಪರಮವೀರ ಶೈವಸಿದ್ಧಾಂತ ತತ್ತ್ವಜ್ಞಾನ, ಇದು ವೀರಶೈವಾಚಾರ ಪ್ರತಿಷ್ಠಾಪನಾಚಾರ್ಯ, ಇದು ದಿವ್ಯ ವೇದಾಂತ ಶಿರೋಮಣಿ. ಇದು ಸಮಸ್ತ ಶಾಸ್ತ್ರ ಮುಖ್ಯ ಮುಖದರ್ಪಣ. ಇದು ಮಹಾಜ್ಞಾನ ಪ್ರವರ್ಧನ ಪರಮಾನುಭಾವ ಸಂಬೋಧೆ, ಇದು ಸರ್ವಾಚಾರ ಸಂಪನ್ನ ಸಮಾರೂಢ ಸಂಗ್ರಹ, ಇದು ಪರಮ ರಾಜಯೋಗಸಾಧ್ಯ ಸಂಪಾದನೆ, ಇದು ಸಚ್ಚಿದಾನಂದ ನಿತ್ಯ ಪರಿಪೂರ್ಣ ರಸಾಮೃತ ಪ್ರಸನ್ನ ಪ್ರಸಾದ, ಇದು ಅಜ್ಞಾನತಿಮಿರಾಂಜನ ತಂತ್ರ ಪ್ರಸನ್ನ ಪ್ರಸಾದ........................ " ಎಂದು ತನ್ನ ಗ್ರಂಥವನ್ನು ಕುರಿತ ನುಡಿದ ಮಾತಿನಲ್ಲಿ ಶೂನ್ಯ ಸಂಪಾದನೆಯ ಪ್ರಯೋಜನವಾಗಿದೆ.

ಷಣ್ಮುಖ ಶಿವಯೋಗಿಗಳ ಜೀವನ ದರ್ಶನ

ಲೇಖಕರು :
ಸಿಂಪಿಲಿಂಗಣ್ಣ
ಚಡಚಣ

ಜೀವನವೆಂದರೆ ಕಪಟನಾಟಕ ಸೂತ್ರಧಾರನು ನಡೆಯಿಸಿರುವ ನಿರಂತರ ನಾಟಕವೆಂದು ಹೇಳಲಾಗುತ್ತದೆ. ಮಾನವಕೋಟಿಯೇ ಆ ಮಹಾ ನಾಟಕದಲ್ಲಿ ಪಾತ್ರವಾಡುತ್ತದೆ. ಅಂಥ ಮಹಾನಾಟಕವು ಅಸಂಖ್ಯ ಉಪನಾಟಕಗಳನ್ನು ಒಳಗೊಂಡಿರುತ್ತದೆ. ಬರೆದಿಟ್ಟುದನ್ನು ಆಡುವ ನಾಟಕವದಲ್ಲ; ಆಡಿದ ಮೇಲೆ ಬರೆಯಬಹುದಾದ ಅಥವಾ ಆಡುತ್ತ ಹೋದಂತೆ ಬರೆಯುತ್ತ ಹೋಗುವ ನಾಟಕ. ಅದಕ್ಕೆ ಪೂರ್ವಾಭ್ಯಾಸ ಬೇಕಿಲ್ಲ. ಆದರೆ ಅದು ಪೂರ್ವನಿಯೋಜಿತವೇ ಆದಂತಿರುತ್ತದೆ. ತೆರೆಯ ಮರೆಯಲ್ಲಿ ಅದೆಂಥದೋ ಸಂಚು ನಡೆಯುತ್ತದೆ —"ನೀನು ಆ ಪಕ್ಕದಿಂದ ಬಾ, ನಾನು ಈ ಪಕ್ಕದಿಂದ ಬರುತ್ತೇನೆ. ಜೀವನರಂಗದಲ್ಲಿ ನಿಂತು ಕಂಠಪಾಠಮಾಡದ ಮಾತುಗಳನ್ನಾಡಿ, ರೂಢಿಸಿಕೊಳ್ಳದ ಹಾಡುಗಳನ್ನು ಹಾಡಿ ಕಥೆಯನ್ನು ಮುಂದುವರಿಸೋಣ" ಎನ್ನುವಂತೆ. ಭೂಮಿಯ ಮೇಲೆ ಜನ್ಮತೊಟ್ಟು ಬಂದವರೆಲ್ಲರೂ ಪಾತ್ರಧಾರಿಗಳು. ಯಾವ ಪಾತ್ರವೂ ವ್ಯರ್ಥವಲ್ಲ. ಪ್ರತಿಯೊಂದು ಪಾತ್ರವು, ಅದೆಷ್ಟು ಸಾಮಾನ್ಯವಾಗಿದ್ದರೂ ಒಂದು ಉದ್ದೇಶವನ್ನು ಸಾಧಿಸುವ ಸಲುವಾಗಿಯೇ ರಂಗಭೂಮಿಯ ಮೇಲೆ ಕಾಣಿಸಿಕೊಳ್ಳುತ್ತದೆ. ಸಾಮಾನ್ಯ ಜೀವನ ಪಾತ್ರವು ಬಹುತರ ಯಾರಕಣ್ಣಿಗೂ ಬೀಳದೆ, ಯಾರ ಲಕ್ಷ್ಯಕ್ಕೂ ಬಾರದೆ ತೆರೆಗೆ ಸರಿಯಬಹುದು. ಬಹುಜನರ ಕಣ್ಣಿಗೆ ಬೀಳುವ ಅಸಮಾನ್ಯನ ಜೀವನವು ನಾಯಕ ಪಾತ್ರವೋ ಉಪನಾಯಕ ಪಾತ್ರವೋ ಎನಿಸಿ ಬಹುಕಾಲ ನೆನಪಿನಲ್ಲಿ ನೆಲೆಯೂರುತ್ತದೆ. ಮರವೆಯಾದರೂ ಮತ್ತೆ ನೆನಪು ಮಾಡಿಕೊಡುವಂತೆ ಗ್ರಂಥಸ್ಥವಾಗಿಯೋ ಕಂಠಸ್ಥವಾಗಿಯೋ ಉಳಿದುಕೊಳ್ಳುತ್ತದೆ.

ಇನ್ನೂರು ವರ್ಷಗಳ ಹಿಂದೆ, ಎರಡು ಅಸಮಾನ್ಯ ಆತ್ಮಗಳು ತೆರೆಯಮರೆಯಲ್ಲಿ ಮೊದಲೇ ನಿರ್ಧರಿಸಿದ ಯೋಜನೆಯೊಡನೆ ರಂಗಭೂಮಿಯ ಮೇಲೆ ಕಾಣಿಸಿಕೊಳ್ಳುತ್ತವೆ. "ನಾನು ಇತ್ತಕಡೆಯಿಂದ ಬರುತ್ತೇನೆ. ನೀನು ಇನ್ನೊಂದು ಕಡೆಯಿಂದ ಬಾ" ಎಂದು ತೆರೆಯ ಮರೆಯಲ್ಲಿ ಮಾತಾಡಿಕೊಂಡಿರಲೂಬಹುದು. ಆ ಎರಡು ಆತ್ಮಗಳು ಧರಿಸಿದ ಪಾತ್ರಗಳ ಎರಡು ಹೆಸರುಗಳು ಕ್ರಮವಾಗಿ ಅಖಂಡೇಶ್ವರ, ಷಣ್ಮುಖಸ್ವಾಮಿ. ಸ್ಥಳ ನಡುಗನ್ನಡನಾಡು. ಹಿಂದಿನ ಸಾರೆ ಹಂತಿಯ ಕಣವಾಗಿದ್ದ ನೆಲದ ಬೆಳೆಯಂತೆ ಹುಲುಸಾಗಿ ಬೆಳೆದು ನಿಂತರು.

ಕಟ್ಟೆಯು ಕಲ್ಲು ಕಟ್ಟಿಗೆ :

ಶ್ರೀ ಅಖಂಡೇಶ್ವರ ಎಂಬ ಸ್ವಾಮಿಗಳು ಬೆಳಗಾವಿಯತ್ತಣವರೆಂದು ಹೇಳಲಾಗುತ್ತದೆ. ಅವರು ಕಲ್ಯಾಣವನ್ನು ಕಾಣಬೇಕೆಂದು ಹೊರಟ ಯಾತ್ರಿಕರು. ದಾರಿಯಲ್ಲಿ **ಜೇವರಗಿ** ಗ್ರಾಮ ಹತ್ತಿತು. ಅಲ್ಲಿಯ ಜನರು ಸ್ವಾಮಿಗಳನ್ನು ಬಹು ಸತ್ಕಾರಪೂರ್ವಕವಾಗಿ ಬರಮಾಡಿಕೊಂಡರು. ಅಷ್ಟೇ ಅಲ್ಲ, ತಮ್ಮ ಭಕ್ತಿಯ ಒಲುಮೆಯಿಂದ ಅಲ್ಲಿಯೆ ನೆಲಸುವಂತೆ ಮಾಡಿದರು. ಅಖಂಡೇಶ್ವರ ಸ್ವಾಮಿಗಳು ಜೇವರಗಿಗೆ ಆಕರ್ಷಿತರಾದರು. ಅದು ಸೂಜಿ–ಸೂಜಿಗಲ್ಲುಗಳ ಸಂಬಂಧವೇ ಸರಿ. ಜೇವರಗಿ ಸುತ್ತಲಿಲ್ಲ ಶರಣ ಸತ್ಪುರುಷರ ಸ್ಥಾನಗಳಿವೆ. ಶರಣಬಸವೇಶ್ವರರ ಕಲಬುರಗಿ, ಗದ್ದುಗೆಯ ಕರುಣಪ್ಪನವರ ಅಂದೇಲಿ, ಮಡಿವಾಳಪ್ಪನವರ ಕಡಕೋಳ, ಬಕ್ಕಪ್ಪನವರ ರಾಮಪುರ, ಸಜ್ಜನ ಸಂಗಪ್ಪನವರ ಗುಡೂರು, ಶರಣಬಸವೇಶ್ವರರ ಜನ್ಮಸ್ಥಳವಾದ ಅರಳಗುಂಡಿಗೆ ಇವುಗಳ ಮಧ್ಯದಲ್ಲಿರುವ ಜೇವರಗಿಯೂ ಅಖಂಡೇಶ್ವರರಿಂದ ಶರಣ ಸ್ಥಾನವಾಗಿ ಪರಿಣಮಿಸಬೇಕಾಗಿದ್ದುದು ಸಹಜ ಕ್ರಮವೇ ಆಗಿದೆ. ಈ ಕಾರಣದಿಂದ ಅಖಂಡೇಶ್ವರರು ಕಟ್ಟೆಯ ಕಲ್ಲು ಕಟ್ಟಿಗೆ ಕುಳಿತಂತಾಯಿತು.

ಉತ್ಸವ ಮೂರುತಿ :

"ಆನೆ ಬಂತು ಆನೆ, ಯಾವೂರಾನೆ ? ಇಲ್ಲಿಗೇಕೆ ಬಂತು ? ಹಾದಿ ತಪ್ಪಿ ಬಂತು". ಹೀಗೆ ನಾವು ಸಾಮಾನ್ಯವಾಗಿ ಹಾದಿತಪ್ಪಿ ಬಂತೆಂದೇ ಲೆಕ್ಕಹಾಕುವೆವು. ಆದರೆ ಅಖಂಡೇಶ್ವರರು ಜೇವರಗಿಗೆ ಬರುವುದಾಗಲಿ, ಅಲ್ಲಿ ನೆಲೆಸುವದಾಗಲಿ ಆಕಸ್ಮಿಕವಾಗಿದ್ದರೂ ಅದು ಪೂರ್ವನಿಯೋಜಿತ ಕಾರ್ಯವೆಂದು ಹಿಂದಿನಿಂದ ತಿಳಿಯುವದು. ಅಖಂಡೇಶ್ವರ ಸ್ವಾಮಿಗಳು ಜೇವರಗಿಯಲ್ಲಿ ನೆಲೆಸಿನಿಂತು ಅಲ್ಲಿ ಒಂದು ಮಠವನ್ನು ಕಟ್ಟಿಸಿದರು. ಏತಕ್ಕಾಗಿ ? ಸಿದ್ಧವಾದ ಮಠವನ್ನು ವಚನಮಂಟಪವಾಗಿ ಮಾರ್ಪಡಿಸುವ ಸಲುವಾಗಿ. ಅದಕ್ಕೆ ಕಾರಣನಾದ ಮಹಾನುಭಾವನು ಮುಂದೆ ಎಂಟೇ ವರ್ಷಗಳಲ್ಲಿ ಅದೇ ಜೇವರಗಿ ಗ್ರಾಮದಲ್ಲಿ ಹುಟ್ಟಬಂದನೆಂದರೆ, ಅದು ಪೂರ್ವನಿಯೋಜಿತವೇ ಆಗಿರುವುದರಲ್ಲಿ ಸಂಶಯವಿಲ್ಲ. ಆ ಮಹಾನುಭಾವನೆಂದರೆ ಷಣ್ಮುಖ ಶಿವಯೋಗಿ. ಜೇವರಗಿ ನಿವಾಸಿಗಳಾಗಿದ್ದ ಮಲ್ಲಶೆಟ್ಟೆಪ್ಪ–ದೊಡ್ಡಮಾಂಬೆ ಎಂಬ ದಂಪತಿಗಳು ಅಖಂಡೇಶ್ವರರ ಕೃಪೆಗೆ ಪಾತ್ರರಾಗಿದ್ದರು. ಅದರ ಪರಿಣಾಮದಿಂದ ಒಬ್ಬ ಗಂಡುಮಗನನ್ನು ಪಡೆದರು. ಮಗನಿಗೆ ಷಣ್ಮುಖ ಎಂದು ಹೆಸರಿಟ್ಟರು. ಕೂಸಿಗೆ ಅಖಂಡೇಶ್ವರರಿಂದಲೇ ಲಿಂಗದೀಕ್ಷೆ ಆಯಿತು. ವಿದ್ಯಾಭ್ಯಾಸವೂ ಅವರಲ್ಲಿಯೇ ನಡೆಯಿತು. ಗುರುಗಳಲ್ಲಿ ಷಣ್ಮುಖನು ಶಿವಾನುಭವ ಶಾಸ್ತ್ರವನ್ನು ಅಭ್ಯಸಿಸಿದನಲ್ಲದೆ, ಶಿವಯೋಗದ ನೆಲೆಯನ್ನೂ, ಷಟ್‌ಸ್ಥಲದ ಕಲೆಯನ್ನೂ ಅರಿತುಕೊಂಡನು. ಗುರುವಿಗೇ ಸಮರ್ಪಿತನಾದ ಷಣ್ಮುಖನು ಶಿವಯೋಗಿಯೇ ಆಗಿಬಿಟ್ಟನು. ಇನ್ನೇನು ? ಶಿವಯೋಗವನ್ನು

ಮೈಗೂಡಿಸಿಕೊಳ್ಳುವುದಕ್ಕಾಗಿ, ಗುರುಗಳ ಅಪ್ಪಣೆ ಪಡೆದು, ಶಿವಶರಣರ ಸ್ಥಾನಗಳನ್ನು ಕಣ್ಣಾರಿ ಕಾಣಲು ಪ್ರಯಾಣ ಕೈಕೊಂಡನು. ಶರಣರ ಆತ್ಮಪ್ರಭೆಯನ್ನು ಮನಗೂಡಿಸಿಕೊಳ್ಳುವ ಉದ್ದೇಶದಿಂದ ಹನ್ನೆರಡು ವರ್ಷಗಳನ್ನು ಸಂಚಾರದಲ್ಲಿಯೇ ಕಳೆದನು.

ಅಂತರಂಗದ ಹಸಿವು :

ಹನ್ನೆರಡು ವರ್ಷಗಳ ದೀರ್ಘವಾದ ಪ್ರವಾಸ ಕಾಲದಲ್ಲಿ ಅವನಿಗೆ ಎಲ್ಲಿ ನೋಡಿದರೂ, ಏನೂ ನೋಡಿದರೂ ಮೂರು ಬಲೆ, ಆ ಬಲೆಗಳಲ್ಲಿ ಸಿಲುಕಿ ಗಾಸಿಗೊಳ್ಳುತ್ತಿದ್ದ ಜನಜಂಗುಳಿ ಇವೇ ಕಣ್ಣಿಗೆ ಬಿದ್ದವು. ಕಾಲ, ಕಾಮ, ಮಾಯೆ ಇವೇ ಆ ಮೂವರು ಬಲೆಗಾರರು. ಕಾಲನು ಜಾಲಗಾರನಾದರೆ, ಕಾಮನು ಬೇಟೆಗಾರ, ಮಾಯೆಯೆಂಬುವಳು ರಕ್ಕಸಿ. ಒಬ್ಬನು ಕರ್ಮದ ಬಲೆಯನ್ನು ಹರಹುವನು. ಇನ್ನೊಬ್ಬನು ಬಲೆಯಲ್ಲಿ ಸಿಕ್ಕವರನ್ನು ಬೇಟೆಯಾಡುವನು. ಇನ್ನೊಬ್ಬಳು ರಕ್ತಹೀರಿ ಹಿಪ್ಪೆಮಾಡಿ ಉಫ್ಫೆಂದು ಊದಿಬಿಡುವಳು. ಆ ಪರಿಸ್ಥಿತಿಯನ್ನು ಕಂಡು ಷಣ್ಮುಖನ ಎದೆ ನಡುಗಿತು; ಉಸಿರು ಉಡುಗಿತು; ಮುಂದುಗಾಣದೆ ಮತಿ ಗತಿಗೆಟ್ಟಿತು. ಇದಕ್ಕೆನಾದರೂ ಉಪಾಯವಿಲ್ಲವೇ–ಎಂದು ಜೀವ ತಲ್ಲಣಿಸಿತು. ಆದೆಂಥ ತೊಡಕಿನ ಬಲೆಯಾದರೂ ಅದಕ್ಕೊಂದು ಬಿಡಿಸುವ ಕೀಲು ಇರಲೇಬೇಕಷ್ಟೆ ? ಷಣ್ಮುಖನದು ಪರಮಾತ್ಮನಿಂದ ಆಯ್ಕೆಯಾದ ಆತ್ಮವಾದ್ದರಿಂದ, ಅವನಿಗೆ ಗಾಢಚಿಂತನದಲ್ಲಿ ಒಂದು ದಾರಿ ಕಂಗೊಳಿಸಿತು. ಅಖಂಡೇಶ್ವರನ ಕರುಣೆಯೇ ಆ ದಾರಿಯೆಂದು ಸ್ಪಷ್ಟವಾಯಿತು. "ನೀವು ಕರುಣಿಸಿದರೆ ಆ ಮಾಯೆ ಎಷ್ಟರವಳು? ಎಂಬ ಧೈರ್ಯ ಮೂಡಿತು. ಆದ್ದರಿಂದ ಆತನ ಕರುಣೆಗೆ ಶರಣು ಹೋಗುವುದೇ ಮೊದಲನೇ ಕೆಲಸವೆಂದು ಬಗೆದನು.

ಜೇವರಗಿಯ ಉತ್ತರಕ್ಕೆ ಆರು ಅಂತರದಲ್ಲಿ ಕೋಳತೂರು ಎಂಬ ಗ್ರಾಮವಿದೆ. ಅಲ್ಲಿಂದ ಸುಮಾರು ಅರ್ಧ ಮೈಲು ದೂರದಲ್ಲಿ ಎರಡು ಬೆಟ್ಟಗಳು. ಮಧ್ಯದಲ್ಲಿ ಒಂದು ಭಯಾನಕ ಕೊಳ್ಳ. ಅದಿಂದಿಗೂ ಜೋಗಿಯ ಕೊಳ್ಳವೆಂದು ಹೆಸರಾಗಿದೆ. ಅಲ್ಲಿ ಭೀಮಾನದಿಯ ರುದ್ರ ರಮಣೀಯ ಪ್ರವಾಹ ಬೇರೆ. ಆ ಕೊಳ್ಳ ದುರ್ಗಮ, ನಿರ್ಜನ, ನಿಸರ್ಗ ರಮ್ಯ ಚೇತೋಹಾರಿಯಾಗಿದೆ. ಅದು ಷಣ್ಮುಖಸ್ವಾಮಿಗಳಿಗೆ ಯೋಗ ಸಾಧನೆಯ ಬೀಡಾಯಿತು. ನಿಸ್ತಬ್ಧ ಪ್ರಕೃತಿ ಸ್ಥಾನದಲ್ಲಿ ಪುರುಷನು ಜಾಗೃತಗೊಂಡು ಮಿಸುಕಲಾರಂಭಿಸುವನು. ಆ ದಿವ್ಯ ಮಸುಕಿನಲ್ಲಿ ಷಣ್ಮುಖಶಿವಯೋಗಿಗಳ ವಚನವಾಣಿ ಹೊರಹೊಮ್ಮಿತು. ಆ ಅಖಂಡ ವಾಣಿಗಳೇ ಅಖಂಡೇಶ್ವರನ ವಚನಗಳಾಗಿ ಪರಿಣಮಿಸಿವೆ.

ಯೋಗಸಾಧನೆಯ ನಾಲ್ಪರಿ :

ಷಣ್ಮುಖ ಶಿವಯೋಗಿಗಳು ಕ್ರಮವಾಗಿ ಮಂತ್ರ, ಲಯ, ಹಠ, ರಾಜಯೋಗಗಳೆಂಬ ನಾಲ್ಕು ವಿಧದ ಯೋಗಗಳನ್ನು ಸಾಧಿಸಿದರು. ಅಲ್ಲದೆ ಶಾಂಭವೀ ಮುದ್ರೆ, ಅಂತರ್ಬಾಹ್ಯಲಕ್ಷ್ಯ ಇವುಗಳನ್ನು ತಳಹದಿ ಮಾಡಿಕೊಂಡು, ಅನುಕ್ರಮವಾಗಿ ಷಟ್‌ಸ್ಥಲಗಳ ಮೆಟ್ಟಲೇರುತ್ತ ಶಿವಯೋಗವನ್ನು ಸಾಧಿಸತೊಡಗಿದರು. ಅದರ ವಿವರಣೆಯನ್ನು ಅವರ ಭಾಷೆಯಲ್ಲಿಯೆ ಕೇಳಬೇಕು–

"ಅಯ್ಯ, ನಿಮ್ಮನೆನ್ನ ಕರಸ್ಥಲದಲ್ಲಿ ನೋಡಿದೊಡೆ
ನೀವೆನ್ನ ಕಂಗಳ ಕೊನೆಯಲ್ಲಿ ತೋರುತಿರ್ಪಿರಿ.
ಅಯ್ಯ, ನಿಮ್ಮನೆನ್ನ ಕಂಗಳ ಕೊನೆಯಲ್ಲಿ ನೋಡಿದೊಡೆ
ನೀವೆನ್ನ ಮನದ ಕೊನೆಯಲ್ಲಿ ತೋರುತಿರ್ಪಿರಿ.
ಅಯ್ಯ, ನಿಮ್ಮನೆನ್ನ ಮನದ ಕೊನೆಯಲ್ಲಿ ನೋಡಿದೊಡೆ
ನೀವೆನ್ನ ಪಂಚಮುಖದಲ್ಲಿ ತೋರುತಿರ್ಪಿರಿ.
ಅಯ್ಯ, ನಿಮ್ಮನೆನ್ನ ಪಂಚಮುಖದಲ್ಲಿ ನೋಡಿದೊಡೆ
ನೀವೆನ್ನ ನವಚಕ್ರದಲ್ಲಿ ತೋರುತಿರ್ಪಿರಿ.
ಅಯ್ಯ, ನಿಮ್ಮನೆನ್ನ ನವಚಕ್ರದಲ್ಲಿ ನೋಡಿದೊಡೆ
ನೀವೆನ್ನ ಸರ್ವಾಂಗದಲ್ಲಿ ತುಂಬಿರ್ಪಿರಿ".

ಈ ಅನುಭವವನ್ನು ಅವರು ಮಾತುಮಾತಿಗೆ ಅಖಂಡೇಶ್ವರನ ಗಾರುಡವೆಂದು ಬಣ್ಣಿಸಿದ್ದಾರೆ. ಹೀಗೆ ಅವರ ಶಿವಯೋಗಸಾಧನೆ ಮುಂದುವರಿದು ಮಹಾಸಿದ್ಧಿಯನ್ನು ಕೈಗೊಳಿಸಿತು. ಅಲ್ಲಿಗೇರ ಬೇಕಾದರೆ ಏನೇನು ಎದುರಿಸಿದರು, ಹೇಗೆ ಹೇಗೆ ಮುಂದುವರಿದರು ತಿಳಿಯಬೇಡವೇ ? "ತನುವಿನ ಗುಣಗಳ ತರಿದೊಟ್ಟಿದರು. ಮನದ ಮಾಯಾವಿಕಾರದ ಬಾಯಟೊಣೆದರು. ಕರಣಂಗಳ ಕತ್ತಲೆಯ ಕಡೆಗೊದ್ದರು. ಎಡಬಲಗಳ ತಡಹಿ, ನಡುಮಧ್ಯದ ಮಾರ್ಗವಿಡಿದರು". ಆಮೇಲೆ ಸುಷುಮ್ನಾಗಿರಿಯನಡರಿ, ಕಡೆಮೊದಲಿಲ್ಲದ ಬೆಳಗಿನೊಳಡಗಿ ಬೆಳಗತೊಡಗಿದರು. ಕೊನೆಗೆ "ನಾನು ಶಿವಯೋಗಿಯಾದೆನಯ್ಯಾ" ಎಂದು ಗುರು ಅಖಂಡೇಶ್ವರನಲ್ಲಿ ಶ್ರುತಪಡಿಸಿದರು.

ಸಮನ್ವಯ ದರ್ಶನ :

ಷಣ್ಮುಖ ಶಿವಯೋಗಿಗಳ ಜೀವನವನ್ನೆಲ್ಲ ನಿರೀಕ್ಷಿಸಿದರೆ, ವಚನಗಳನ್ನೆಲ್ಲ ಪರೀಕ್ಷಿಸಿದರೆ ಒಂದೇ ಒಂದು ಮಾತು ಸ್ಪಷ್ಟವಾಗುತ್ತದೆ. ಅದು ಏನೆಂದರೆ—ಸಮನ್ವಯ. ಸಮನ್ವಯವೇ ಅವರ ದರ್ಶನಸಾರ. ಮೊಟ್ಟಮೊದಲು ಶಿಷ್ಯೋತ್ತಮನಾಗಿ, ಗುರುವಿನಡಿಗಳನ್ನು ಸೇರಿ ಒಂದಾದರು. ಅಖಂಡೇಶ್ವರನಲ್ಲಿ ಷಣ್ಮುಖನನ್ನು ಸಮರಸಗೊಳಿಸಿದರು. ಷಣ್ಮುಖನಂತೆ ಷಡಸ್ಥಲಗಳನ್ನು ಅನುಸರಿಸಿ ಐಕ್ಯಸ್ಥಿತಿಯನ್ನು ಕಂಡರು. ಮಂತ್ರ, ಲಯ, ಹಠ, ರಾಜ ಎಂಬ ನಾಲ್ಕು ಯೋಗಗಳನ್ನು ಶಿವಯೋಗದಲ್ಲಿ ಸಮನ್ವಯಗೊಳಿಸಿದರು. ಸನ್ಯಾಸ ಸಂಸಾರಗಳು ಭಿನ್ನವೆಂದು ಬಗೆಯದೆ ಅಭಿನ್ನವೆಂದು ಭಾವಿಸಿದರು. ಇಹಪರಗಳೆಂಬ ಎರಡು ಮುಖಗಳನ್ನು ಒಂದು ಮೈಯಲ್ಲಿ ಅಳವಡಿಸಿದರು. ತನುಮನಧನಗಳನ್ನು ಗುರುಲಿಂಗಜಂಗಮಗಳ ಏಕಸೂತ್ರದಲ್ಲಿ ಪವಣಿಸಿ ಸುಸೂತ್ರಗೊಳಿಸಿದರು. ದಯ, ಭಯ, ಸ್ವಯ, ನಯಗಳನ್ನು ಕ್ರಮವಾಗಿ ಸಕಲ ಪ್ರಾಣಿಗಳಲ್ಲಿ, ಗುರುಲಿಂಗಜಂಗಮದಲ್ಲಿ, ಸಕಲ ಗುಣಂಗಳಲ್ಲಿ, ನುಡಿಗಡಣದಲ್ಲಿ ಅಳವಡಿಸಿ ಸರಿಬೆರೆತರು. "ಸಕಲ ದೇಹಗಳೊಳಗೆ ಸಂಭ್ರಮಿಸಿ ತುಂಬಿರ್ಪ ಪರವಸ್ತು ನೀನೊಬ್ಬ" ಎಂದು ಅನುಭವಿಸಿದರು. "ಒಬ್ಬಗೆ ಬಂದುದು ಎಲ್ಲರಿಗುಂಟೆ"ಂದು ತಾವು ಗಳಿಸಿದ ನಿಜಸುಖವನ್ನು ಎಲ್ಲರಿಗೂ ಹಂಚಿಕೊಟ್ಟು ಹೊಂದುಗೂಡಿದರು. ಸಂಗನಬಸವನ ಸದ್ಭಕ್ತಿ, ಮಡಿವಾಳ ಮಾಚಯ್ಯನ ವೀರಮಾಹೇಶ್ವರತೆ, ಚೆನ್ನಬಸವಣ್ಣನ ಪರಮಪ್ರಸಾ

ದತೆ, ಸಿದ್ಧರಾಮನ ಪ್ರಾಣಲಿಂಗಿಪ್ರಕಾರ ತಮ್ಮೊಳಗೆ ಅಳವಡಲೆಂದು ಹಾರಯಿಸಿದರು. ಉರಿಲಿಂಗಪೆದ್ದಿ, ಅಜಗಣ್ಣತಂದೆ, ನಿಜಗುಣ ಶಿವಯೋಗಿ, ಅಕ್ಕಮಹಾದೇವಿ, ಪ್ರಭುದೇವ ಇವರೆಲ್ಲರ ಬಾಳಕೆಚ್ಚು ತಮ್ಮಂತರಂಗದಲ್ಲಿ ನೆಲೆಗೊಳ್ಳಲೆಂದು ಏಕಾಗ್ರತೆ ತಳೆದರು. "ನಿಮ್ಮ ಗಣಂಗಳ ಸಮ್ಮೇಳನದಲ್ಲಿ ಇರಿಸು" ಎಂದು ಅಭೀಪ್ಸೆಪಟ್ಟರು. ನಿಜ ವಾಗಿಯೂ ಸಮರಸವೇ ಜೀವನವಲ್ಲವೇ ? ಅಂಥ ಸಮರಸ ಜೀವನ ವನ್ನು ರಚಿಸಿ, ವಚಿಸಿ ಧನ್ಯರಾದರು ಷಣ್ಮುಖ ಶಿವಯೋಗಿಗಳು. ಅವರ ಇಡಿಯ ವಚನಗಳು, ಅಂಥ ಸಮನ್ವಯಕ್ಕೆ ಸಾಧನವಾಗಿವೆ; ಉದಾಹರಣೆ ಆಗಿವೆ. ಸಮನ್ವಯಾನುಭವವೇ ಅವರ ಜೀವನದ ಭವ್ಯದಿವ್ಯಸಂಪತ್ತು.

ಶಿವಯೋಗಿಗಳು ಕಂಡ ಹೇಯಸಂಸಾರ :

"ತಾಯಿಯ ಬಸುರಲ್ಲಿ ಬಿಂದುರೂಪಾಗಿ ಬಂದು,
ಒಂಬತ್ತು ತಿಂಗಳ ಪರ್ಯಂತರ ಕದ್ದಕಳ್ಳನ ಹೆಡಗೈಯ ಕಟ್ಟಿ ಸೆರೆಮನೆಯಲ್ಲಿ ಕುಳ್ಳಿರಿಸುವಂತೆ
ಗರ್ಭವೆಂಬ ಸೆರೆಮನೆಯಲ್ಲಿ ಕುಳ್ಳಿರ್ದು
ಕಡಿವ ಜಂತು ಜಂಗುಳಿಯ ಬಾಧೆ, ಸುಡುವ ಜಠರಾಗ್ನಿಯ ಬಾಧೆ,
ಎಡದಲ್ಲಿ ಮೂತ್ರದ ತಡಿಕೆಯ ಬಾಧೆ, ಬಲದಲ್ಲಿ ಅಮೇಧದ ಹಡಕೆಯ ಬಾಧೆ
ಮೊದಲಾದ ಬಾಧೆಗಳಿಂದ ದುಃಖಪಟ್ಟು,
ತಾಯಗರ್ಭದಿಂದ ಹೊರಗೆಬಂದು,
ಬಾಲಲೀಲೆಯ ಸುಖದುಃಖಗಳನನುಭವಿಸಿ,
ಯೌವನದ ವಯಸ್ಸಿನಲ್ಲಿ ಕಾಮದಲ್ಲಿ ಕರಗಿ,
ಕ್ರೋಧದಲ್ಲಿ ಕೊರಗಿ, ಮದಮತ್ಸರಂಗಳಲ್ಲಿ ಮುಂದುಗೆಟ್ಟು,
ಬಂದಯೋನಿಯೆಂದರಿಯದೆ, ಉಂಡಮೊಲೆಯೆಂದರಿಯದೆ,
ಕಾಮವಿಕಾರ ತಲೆಗೇರಿ, ವಿಷಯಾತುರನಾಗಿ
ಸ್ತ್ರೀಯರ ಸಂಗದಿಂದ ದೇಹದೊಳಗಣ ಊರ್ಧ್ವಬಿಂದು
ಜಾರಿಜಾರಿ ಇಳಿದು, ಸೋರಿಸೋರಿ ದೇಹವು ನಿಸ್ಸಾರವಾಗಿ
ಯೌವನದ ಬಲಗೆಟ್ಟು, ಮುಪ್ಪಾವರಿಸಿ, ಅಚೇತನಗೊಂಡು,
ಆದಿವ್ಯಾಧಿ ರೋಗರುಜೆಗಳಿಂದ ದುಃಖಪಟ್ಟು,
ಎದೆ ಗೂಡುಗಟ್ಟಿ, ಬೆನ್ನುಬಾಗಿ, ಕಣ್ಣು ಒಳನಟ್ಟು,
ಶರೀರ ಎಳಲಾಟಗೊಂಡು, ಕಾಲಮೇಲೆ ಕೈಯೂರಿ
ಕೋಲು ಹಿಡಿದು ಏಳುತ್ತ, ನಾನಾತರದ ದುಃಖದಾವತಿಯಿಂದ
ಆತ್ಮಗೆಟ್ಟು, ನಷ್ಟವಾಗಿ ಹೋಯಿತ್ತು ನೋಡಾ.
ಇದಕಂಡು ನಾನಂಜಿ, ಮರಳಿ ಜನ್ಮಕ್ಕೆ ಬರಲಾರೆ
ನಿಮ್ಮ ಮೊರೆಹೊಕ್ಕೆನಯ್ಯ ಅಖಂಡೇಶ್ವರಾ".

ಭಯಾನಕವಾದ ಈ ದೃಶ್ಯವನ್ನು ಕಂಡು ಅಂಜಲಾರದವ ರಾರು ? ಅದರಂತೆ ಮರುಕ್ಷಣದಲ್ಲಿ ಮರೆತು ಬಿಡಲಾರದವರಾರು ? ಮರೆತವ ಮಾನವ ಪ್ರಾಣಿ, ಮರೆಯಲಾರದವ ಶರಣ ಶಿಶು. ಷಣ್ಮುಖ ಶಿವಯೋಗಿಗಳು, ಸಂಸಾರದ ಈ ಹೇಯ ದೃಶ್ಯವನ್ನು ನೆನೆದು, ಜನ್ಮ ಮರಣಕ್ಕೆ ಬರಲಾರೆನೆಂದುಕೊಂಡರು. ಅದಕ್ಕಾಗಿ ಅಖಂಡೇಶ್ವರನನ್ನು ಮೊರೆಹೊಕ್ಕರು. ಜನ್ಮ ಬಂದ ಬಳಿಕ ಮರಣ, ಮರಣ ಹೊಂದಿದ ಮೇಲೆ ಜನ್ಮಕ್ರಮ ಪ್ರಾಪ್ತ; ಅನಿವಾರ್ಯ; ಸಹಜ. ಹಾಗಾದರೆ ಜನ್ಮ ಮರಣಗಳಲ್ಲಿ ಸಮನ್ವಯವನ್ನುಉಂಟು ಮಾಡುವ ಉಪಾಯವೇನಾದರೂ ಉಂಟೇ ? ಜನ್ಮ ಮರಣಗಳ ಮೊದಲು ಕಡೆಗಳನ್ನು ಬಿಟ್ಟರೆ, ನಡುವೆ ಉಳಿಯುವುದು ಜೀವನ. ಆ ಜೀವನವನ್ನೇ ಸತ್ಯಜೀವನವನ್ನಾಗಿಯೋ, ನಿತ್ಯಜೀವನವನ್ನಾಗಿಯೋ ಮಾರ್ಪಡಿಸಿಕೊಳ್ಳಲು ಸಾಧ್ಯವಿಲ್ಲವೇ ? ಸಾಧ್ಯವಿದ್ದರೆ ಅದೇ ಜನ್ಮಮರಣಗಳ ಸಾಮಂಜಸ್ಯ. ಜೀವ ಭಾವವನ್ನು ಕಿತ್ತಿಸೆದು, ದೇವ ಭಾವವನ್ನು ಕರುಣಿಸಲು ಶಾಶ್ವತದ ಏಣಿಯನ್ನು ಆಶ್ರಯಿಸಬೇಕು. ತನುವಿಕಾರದ ಕತ್ತಲೆಯಿಂದ, ಮನವಿಕಾರದ ಮರೆಯಿಂದ, ಹೊರಬಂದು ಭಕ್ತಿವಿಚಾರದಲ್ಲಿ ನೆಲೆಸುವ ಎತ್ತುಗಡೆ ನಡೆಯಿಸಬೇಕು.

"ಅಖಂಡ ಬ್ರಹ್ಮವೇ ತಾನಾದ ಶರಣಂಗೆ
ಜನನವಿಲ್ಲ ಮರಣವಿಲ್ಲ; ಕುಲವಿಲ್ಲ ಕಲ್ಪಿತವಿಲ್ಲ
ಸುಖವಿಲ್ಲ ದುಃಖವಿಲ್ಲ; ಪಾಪವಿಲ್ಲ ಪುಣ್ಯವಿಲ್ಲ
ಪ್ರಳಯ ಮಹಾಪ್ರಳಯಂಗಳು ಮುನ್ನವೇ ಇಲ್ಲ
ಇದು ಕಾರಣ ಅನೇಕ ಅನಂತಕೋಟಿ
ಅಜಾಂಡಗಳು ಅಳಿದು ಹೋದಡೆಯೂ
ಅಖಂಡೇಶ್ವರಾ, ನಿಮ್ಮ ಶರಣ ನಿತ್ಯನಾಗಿ ಉಳಿದಿಹನು"

ಗುರುವೆನಲು ಜನನ ಮರಣದ ಬೇರು ಕೊರೆವುದು, ಯಾಕಂದರೆ—

"ಗುರುವೇ ಪರತತ್ವವು ತಾನೆ ನೋಡಾ,
ಗುರುವೇ ಪರವಸ್ತುವು ತಾನೆ ನೋಡಾ
ಗುರುವೇ ಪರಬ್ರಹ್ಮವು ತಾನೆನೋಡಾ.
ಗುರುವೇ ಪರಮೇಶ್ವರನು ತಾನೆ ನೋಡಾ".

ಇದೇ ಜನ್ಮಮರಣಗಳಿಂದ ದೂರವಾಗುವ ದಾರಿ. ಇದೇ ಹುಟ್ಟು ಸಾವುಗಳಿಂದ ಕಡೆಗಾಗುವ ಕೀಲು. ಅಖಂಡಬ್ರಹ್ಮವೇ ತಾನಾದ ಶರಣಂಗೆ ಮಾತ್ರ ಇದು ಸಾಧ್ಯ. ಅಂಥ ಶರಣರಾರು ? ಷಣ್ಮುಖ ಶಿವಯೋಗಿಗಳ ಕಣ್ಣಲ್ಲಿ ಅಂಥ ಶರಣನೆಂದರೆ, ಕಲ್ಯಾಣದ ಭಕ್ತಿ ಭಾಂಡಾರಿ ಬಸವಣ್ಣ.

ಬಸವನ ಹಾದಿಯೇ ಹಾದಿ

ಷಣ್ಮುಖ ಶಿವಯೋಗಿಗಳಿಗೆ ಬಸವಣ್ಣನೇ ಆದರ್ಶ. ಆತನ ಜೀವನವೇ ಆದರ್ಶ ಜೀವನ. ಆತನ ಸುಳಾದಿಯಲ್ಲಿಯೇ ತಮ್ಮ ಜೀವನ ದರ್ಶನವನ್ನು ರೂಪಿಸಿಕೊಂಡರು. ಅಂತೆಯೇ ಶಿವಯೋಗಿಗಳು ಬಾಯಿ ಬಿಚ್ಚಿ ಹೇಳುತ್ತಾರೆ—

"ಬಸವಣ್ಣನೇ ಷಡಸ್ಥಲ ಬ್ರಹ್ಮನೆನಗೆ
ಬಸವಣ್ಣನೇ ಸರ್ವಾಚಾರ ಸಂಪತ್ತಾದನಾಗಿ
ಬಸವಣ್ಣನ ಹಾಸಿಕೊಂಡು, ಬಸವಣ್ಣನ ಹೊದ್ದುಕೊಂಡು
ಬಸವಣ್ಣನ ಸುತ್ತಿಕೊಂಡು, ಬಸವಣ್ಣನ ಧರಿಸಿಕೊಂಡು
ಬಸವಣ್ಣನ ಚಿದ್ಗರ್ಭದೊಳಗೆ ಕುಳ್ಳಿರ್ದು
ನಾನು ಬಸವ ಬಸವ ಬಸವಾ
ಎನುತಿರ್ದೆನಯ್ಯ ಅಖಂಡೇಶ್ವರಾ."

ಇಷ್ಟೇ ಅಲ್ಲ. "ನಾನು ಬಸವಾಕ್ಷರವೆಂಬ ಹಡಗವೇರಿ, ಬಸವ ಬಸವ ಬಸವಾ ಎಂದು ಭವಸಾಗರವ ದಾಟಿದೆನಯ್ಯ" ಎಂದು ಉಗ್ಗಡಿಸುತ್ತಾರೆ. ಯಾಕೆಂದರೆ ಬಸವಣ್ಣನು ಶಿವನಪ್ಪಣೆಯಿಂದ ಧರೆಗಿಳಿದು ಬಂದವನು. ಗುರುಲಿಂಗ ಜಂಗಮ ಭಕ್ತಿಯನ್ನು ಅಳವಡಿಸಿಕೊಂಡವನು. ಷಡಸ್ಥಲ ಬ್ರಹ್ಮದ ಅನುವರಿದು ನೂರೊಂದು ಸ್ಥಳಕುಳಂಗಳ ಕರತಳಾಮಳಕವಾಗಿ ತಿಳಿದವನು. ಮೇಲಾಗಿ ನಿಜೈಕ್ಯ ಪದದಲ್ಲಿ ನಿರ್ವಯಲಾದವನು—ಎಂಬ ಚಿತ್ರವನ್ನು ಮಿಂಚಿನ ಮಸಿಯಿಂದ ತನ್ನೆದೆಯಲ್ಲಿ ಅಳುಕಿಸಿ ಹೋಗಲಾರದಂತೆ ಮೂಡಿಸಿಕೊಂಡ ತೋರುತ್ತದೆ.

ಎದೆಯಲ್ಲಿ ಬಸವಣ್ಣನ ನಿಚ್ಚಳಮೂರ್ತಿ; ಬಾಯಲ್ಲಿ ಬಸವಣ್ಣನ ನಿರ್ಮಲ ಕೀರ್ತಿ ಇವರೆಡೇ ಶಿವಯೋಗಿಗಳಿಗೆ ಸರ್ವಸಂಜೀವಿನಿ ಆಗಿದ್ದವು. ಬಸವನ ನಾಮಮಹಿಮೆಯನ್ನು ಅವರು ಕೊಂಡಾಡಿದ್ದು ಹೇಗೆಂದರೆ—

"ಬಸವನ ನಾಮವು ಕಾಮಧೇನು ಕಾಣಿರೋ
ಬಸವನ ನಾಮವು ಕಲ್ಪವೃಕ್ಷ ಕಾಣಿರೋ
ಬಸವನ ನಾಮವು ಚಿಂತಾಮಣಿ ಕಾಣಿರೋ
ಬಸವನ ನಾಮವು ಪರುಷದ ಖಣಿ ಕಾಣಿರೋ
ಬಸವನ ನಾಮವು ಸಂಜೀವನದ ಮೂಲಿಕೆ ಕಾಣಿರೋ".

ಹೀಗೆ ಬಸವಣ್ಣನನ್ನು ಹಲವು ವಿಧದಲ್ಲಿ ನೆನೆದು, ಹಲವು ವಿಧದಲ್ಲಿ ಹೊಗಳಿ, ನಿದ್ರೆ–ಎಚ್ಚರಿಕೆಗಳಲ್ಲಿ ಸಂಗಡಿಸಿಕೊಂಡ ಶಿವಯೋಗಿಗಳು ತಮ್ಮ ಗುರಿಯತ್ತ ಸಾಗಲು ಅತುಲ ಶಕ್ತಿಯನ್ನು ಪಡೆದರು. ಅದೇ ಶಕ್ತಿ ಅವರಿಗೆ ವಚನ ರಚನಾ ಕೌಶಲವನ್ನು ನೀಡಿತೆನ್ನಬೇಕು.

ಪ್ರಕಟಗಾಮಿನಿ ವಚನಗಂಗೆ

ಹತ್ತನೇ ಶತಮಾನದಲ್ಲಿ ದೇವರದಾಸಿಮಯ್ಯ, ಶಂಕರದಾಸಿಮಯ್ಯರಲ್ಲಿ ವಚನಗಂಗೆ ಸೆಲೆಯೊಡೆದರೂ ಅದು ಮಹಾಪೂರವಾಗಿ ತುಂಬಿ ಸೂಸಿದ್ದು ಹನ್ನೆರಡನೇ ಶತಮಾನದಲ್ಲಿ; ಬಸವಣ್ಣ, ಚೆನ್ನಬಸವಣ್ಣ, ಅಕ್ಕಮಹಾದೇವಿ. ಅಲ್ಲಮಪ್ರಭು ಮೊದಲಾದ ನೂರಾರು ಶರಣರ ಆತ್ಮಸಾಧನೆಯಲ್ಲಿ, ಆ ಬಳಿಕ ವಚನಗಂಗೆ ಮಂದಗಮನೆ ಮಾತ್ರ ಆಗಿ ಬಿಡದೆ ಗುಪ್ತಗಾಮಿನಿಯೂ ಆಗಿಬಿಟ್ಟಳು. ಹದಿನೈದನೇ ಶತಮಾನದಲ್ಲಿ ಎಡೆಯೂರು ಸಿದ್ಧಲಿಂಗೇಶ್ವರ ಮೊದಲಾದ ಮಹಾನುಭಾವರ ದಿವ್ಯ ಚೇತನದಲ್ಲಿ ಮತ್ತೆ ತಿಳಿಗಂಗೆಯಾಗಿ ಕಾಣಿಸಿಕೊಂಡಳು. ತರ್ವಾಯ ಮುನ್ನೂರು ವರ್ಷ ಗುಪ್ತಗಾಮಿನಿಯೋ ಗುಪ್ತಗಾಮಿನಿಯೋ ಆಗಿ ಅಖಂಡೇಶ್ವರರ ಕರಸಂಜಾತರಾದ ಷಣ್ಮುಖ ಶಿವಯೋಗಿಗಳ ಕಾಲಕ್ಕೆ ಆ ವಚನಗಂಗೆ ಸ್ಫಟಿಕಸೆಲೆಯಾಗಿ ನೆಗೆದೆದ್ದಳು. ಭೀಮಾತೀರದಲ್ಲಿರುವ ಕೋಳಕೂರು ಗ್ರಾಮಕ್ಕೆ ಅನತಿ ದೂರದಲ್ಲಿರುವ ಜೋಗಿಕೊಳ್ಳದಲ್ಲಿ ನೋಂಪಿದೊಟ್ಟ ಷಣ್ಮುಖ ಶಿವಯೋಗಿಗಳು ಆ ಸ್ಫಟಿಕ ಸೆಲೆಗೆ ವಾಹಕವಾದರು. ಬಸವಣ್ಣನನ್ನೇ ಆದರ್ಶವಾಗಿರಿಸಿಕೊಂಡ ಷಣ್ಮುಖ ಸ್ವಾಮಿಗಳಿಗೆ ಬಸವಣ್ಣನವರ ವಚನ ರಚನಾಶಕ್ತಿಯೂ ಅನುಷಂಗಿಕವಾಗಿ ಬಂದಿತು. ಬಸವಣ್ಣನವರ ವಚನಗಳಿಗೆ ಕೂಡಲಸಂಗಮದೇವ ಎಂಬ ಮುದ್ರಿಕೆಯಿರುವಂತೆ, ಷಣ್ಮುಖ ಶಿವಯೋಗಿಗಳ ವಚನಗಳಿಗೆ ಅಖಂಡೇಶ್ವರ ಎಂಬ ಮುದ್ರಿಕೆಯಾಯಿತು. ಆ ವಚನಗಳು ಜೀವರಗಿಯಲ್ಲಿದ್ದ ಅಖಂಡೇಶ್ವರ ಸ್ವಾಮಿಗಳ ಚಿತ್ತವನ್ನು ಸೆಳೆದವು. ತಮ್ಮ ಶಿಷ್ಯೋತ್ತಮನ ಭಕ್ತಿಯ ಉತ್ಕಟತೆಯಿಂದ ಸ್ಪರ್ಶಗೊಂಡವರಾದರು. ತಮ್ಮ ಶಿಷ್ಯನನ್ನು ಜೇವರಗಿಗೆ ಬರಮಾಡಿಕೊಂಡರು. 'ಜಗದ್ಗುರು' ಎಂಬ ಯಥೋಚಿತ ಪ್ರಶಸ್ತಿಯಿಂದ ಸನ್ಮಾನಿಸಿದರು- ಆ ಅಪ್ರತಿಮ ಪಂಡಿತ. ಧರ್ಮೋಪದೇಶಕನಿಗೆ ಸಂಭ್ರಮಪೂರಿತ ಸ್ವಾಗತವನ್ನು ಕೋರಿದರು. ಸ್ವತಃ ಗುರುಗಳು ಅರ್ಧ ಹಾದಿಯಲ್ಲಿಯೇ ಶಿಷ್ಯನನ್ನು ಎದುರುಗೊಳ್ಳಲು ಹೋದರು. ಗುರುಶಿಷ್ಯರಿಬ್ಬರ ಸೇತುವೆಯ ಆ ಮೆರವಣಿಗೆಯು ಅತ್ಯಂತ ವೈಭವಯುತವಾಗಿತ್ತೆಂದು ಹೇಳಬೇಕೇ ? ವೃದ್ಧ ಗುರುಗಳಾದ ಅಖಂಡೇಶ್ವರರು ಯುವಕ ಯತಿಯನ್ನು ಶೂನ್ಯ ಸಿಂಹಾಸನ ಪದವಿಯ ಉಚ್ಚತಮ ಪ್ರಶಸ್ತಿಗೆ ತಂದರಲ್ಲದೆ ಆತನನ್ನು ತಮ್ಮ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಶಕ್ತಿಗಳಿಗೆ ಉತ್ತರಾಧಿಕಾರಿಯನ್ನಾಗಿಯೂ ಮಾಡಿದರು. ತಾವು ಜಗನ್ನಿಯಾಮಕನೊಡನೆ ಬೆರೆತುಹೋದರು. ಗುರು ಅಖಂಡೇಶ್ವರರು ಮಠ ಕಟ್ಟಿಸಿದರೆ, ಶಿಷ್ಯ ಷಣ್ಮುಖ ಶಿವಯೋಗಿಗಳು ಅದನ್ನು ವಚನಮಂಟಪವಾಗಿಸಿದರು.

ಅನುಭಾವದುಸಿರು

ಬಸವಣ್ಣನ ಆದರ್ಶವನ್ನು ಇರಿಸಿಕೊಂಡ ಷಣ್ಮುಖಶಿವಯೋಗಿಗಳಿಗೆ, ಆತನ ಸುಳುಹು ದಾರಿಯಾದ ಷಡಸ್ಥಲ ಮಾರ್ಗವೇ ರಾಜಮಾರ್ಗವಾಯಿತು. ಒಳಗೆ ಅನುಭಾವ, ಹೊರಗೆ ಅದರ ಉಸಿರು. ಆ ಅನುಭಾವದುಸಿರೇ ವಚನಮಂಟಪದೊಳಗಿನ ಉಲುಹಾಯಿತು; ಸೊಲ್ಲಾಯಿತು; ಬರಹವಾಗಿ ಓಲೆಗಿಳಿಯಿತು; ಶತ ಶತಮಾನಗಳ ಶಾಶ್ವತ ಲೇಖವಾಯಿತು. ಷಡಸ್ಥಲದ ಅನುಸರಣೆಯೆಂದರೆ, ಲಿಂಗಾಂಗ ಸಾಮರಸ್ಯದ ಎತ್ತುಗಡೆ. ಇಲ್ಲಿ ತನು ಮನ ಧನ, ಅಲ್ಲಿ ಗುರು ಲಿಂಗ ಜಂಗಮ. ತನು ಮನ ಧನಗಳೇ ಗುರು ಲಿಂಗ ಜಂಗಮವಾಗಬೇಕು. ಇದೇ ಲಿಂಗಾಂಗ ಸಾಮರಸ್ಯ. ತನುಮನಧನಗಳು ಗುರುಲಿಂಗಜಂಗಮವಾಗುವ ಪರಿಯೇ ಅಖಂಡೇಶ್ವರನಲ್ಲಿ ಒಳಗಾಗುವ ಹದ.

"ಎನ್ನ ತನುವೇ ಗುರು, ಮನವೇ ಲಿಂಗ
ಧನವೇ ಜಂಗಮವಾಯಿತ್ತಾಗಿ
ಅಖಂಡೇಶ್ವರಾ ನಾ ನಿಮ್ಮೊಳಗಿಪ್ಪೆನು".

ನಾನು ನಿಮ್ಮೊಳಗೆ, ನೀವು ನನ್ನೊಳಗೆ ಆಗುವುದೆಂದರೆ ನಾನೂ ಇಲ್ಲದ ನೀನೂ ಇಲ್ಲದ ಸ್ಥಿತಿ, ಏನೇನೂ ಇಲ್ಲದ ಪರಿಸ್ಥಿತಿ. ಮಾಡಿ

ಮಾಡಿ ತನು ನೀವೇ ಆಗಬೇಕು. ಕೂಡಿ ಕೂಡಿ ಮನ ನೀವೇ ಆಗಬೇಕು. ನೀಡಿ ನೀಡಿ ಧನ ನೀವೇ ಆಗಬೇಕು.

"ಮಾಡುವ ತನುವು ನೀವೇ ಆದಿರಿ
ಕೂಡುವ ಮನವು ನೀವೇ ಆದಿರಿ
ನೀಡುವ ಧನವು ನೀವೇ ಆದಿರಿ
ಅಖಂಡೇಶ್ವರಾ ನಾನೂ ಇಲ್ಲ,
ನೀವೂ ಇಲ್ಲ, ಏನೇನೂ ಇಲ್ಲ"

ಷಡ್‌ಸ್ಥಲ—ಷಡ್‌ಲಿಂಗ

ವ್ಯಕ್ತಿಯ ಆರು ಶಕ್ತಿಗಳು ಕೊನರಿ ಚಿಗುರಿ, ಪಲ್ಲವಿಸಿ ಹೂತು, ಕಾತು ಫಲಿಸಿದಾಗ ಅವು ಲಿಂಗವೆನಿಸುವವು, ಷಡ್‌ಲಿಂಗವೆನಿಸುವವು. ಕ್ರಿಯಾಶಕ್ತಿಯಿಂದ ಆಚಾರ ಲಿಂಗವು ಕಾತರೆ, ಜ್ಞಾನಶಕ್ತಿಯಿಂದ ಗುರುಲಿಂಗವೂ, ಇಚ್ಛಾಶಕ್ತಿಯಿಂದ ಶಿವಲಿಂಗವೂ ಫಲಿಸಿಬರುವವು. ಆದಿಶಕ್ತಿಯಿಂದ ಜಂಗಮ ಲಿಂಗವು ಮೈಗೊಂಡರೆ, ಪರಾಶಕ್ತಿಯಿಂದ ಪ್ರಸಾದ ಲಿಂಗವೂ, ಚಿಚ್ಛಕ್ತಿಯಿಂದ ಮಹಾಲಿಂಗವೂ ಫಲಿಸುವವು. ಒಂದೊಂದು ಫಲಕ್ಕೆ ಒಂದೊಂದು ಸತ್ತ್ವ; ಒಂದೊಂದು ಸ್ವಾರಸ್ಯ. ಆಚಾರ ಲಿಂಗವು ಶ್ರದ್ಧೆಯ ಸತ್ತ್ವವನ್ನು ನೀಡಿದಂತೆ, ಗುರುಲಿಂಗವು ನಿಷ್ಠಾಸತ್ತ್ವವನ್ನೂ, ಶಿವಲಿಂಗವು ಅವಧಾನ ಸತ್ತ್ವವನ್ನೂ ನೀಡುವವು. ಜಂಗಮಲಿಂಗವು ಅನುಭಾವದ ತಿರುಳನ್ನು ಒದಗಿಸಿದಂತೆ, ಪ್ರಸಾದ ಲಿಂಗವು ಆನಂದದ ಸ್ವಾರಸ್ಯವನ್ನೂ, ಮಹಾಲಿಂಗವು ಸಮರಸದ ಪೌಷ್ಟಿಕವನ್ನೂ ಒದಗಿಸುವವು. ಈ ಆರು ಲಿಂಗಗಳಲ್ಲಿ ಬೆಳೆಯುತ್ತ ಹೋಗುವುದೇ ಲಿಂಗಾಂಗ ಸಾಮರಸ್ಯದ ಉದ್ದಿಮೆ. ಅದರಂತೆ ಆಚಾರಲಿಂಗವನ್ನು ಆಧಾರ ಚಕ್ರದಲ್ಲಿ, ಗುರುಲಿಂಗವನ್ನು ಸ್ವಾಧಿಷ್ಠಾನ ಚಕ್ರದಲ್ಲಿ ಅಳವಡಿಸಿ, ಶಿವಲಿಂಗವನ್ನು ಮಣಿಪೂರಕ ಚಕ್ರದಲ್ಲಿ, ಜಂಗಮಲಿಂಗವನ್ನು ಅನಾಹತ ಚಕ್ರದಲ್ಲಿ ನೆಲೆಗೊಳಿಸಿದರೆ ತೀರದು. ಪ್ರಸಾದಲಿಂಗವನ್ನು ವಿಶುದ್ಧಿ ಚಕ್ರದಲ್ಲಿ, ಮಹಾಲಿಂಗವನ್ನು ಆಗ್ನೇಯ ಚಕ್ರದಲ್ಲಿ ಸ್ಥಿರಗೊಳಿಸುವ ಸಾಧನದಿಂದ ಮನಸ್ಸಿನ ಹರಿದಾಟವು ಹದಗೊಳ್ಳುವದು; ವಿರೋಧಗೊಳ್ಳುವದು. ಆಗ ಮನೋಹರನಾದ ಸಿಂಗರದ ನಲ್ಲ ಬಂದು, ತನ್ನೊಳಗೆ ಮಾಡಿಕೊಳ್ಳುವನು.

"ಮನಕ್ಕೆ ಮನೋಹರನಾದ, ಕಂಗಳಿಗೆ ಮಂಗಳನಾದ
ಸಿಂಗರದ ನಲ್ಲ ಬಂದು ಎನ್ನ ತನ್ನೊಳಗೆ ಮಾಡಿಕೊಂಡ"

—ಎಂದು ಶಿವಯೋಗಿಗಳು ಹೊಟ್ಟೆಬಿಚ್ಚಿ ಹೇಳುತ್ತಾರೆ. ಆ ತನ್ನೊಳಗೆ ಮಾಡಿಕೊಂಡ ವಿವರವನ್ನು ತಿಳಿಯಬೇಕೆನ್ನುವವರಿಗೆ ನಸುನಾಚುತ್ತಲೋ ತುಸುನಾಚುತ್ತಲೋ ಹೀಗೆ ಹೇಳುವರು—

"ಎನ್ನ ತನುವಿನೊಳಗೆ ತನ್ನತನುವಿಟ್ಟು ಮಹಾತನುವ ಮಾಡಿದ
ಎನ್ನಮನದೊಳಗೆ ತನ್ನಮನವಿಟ್ಟು ಘನಮನವ ಮಾಡಿದ
ಎನ್ನಪ್ರಾಣದೊಳಗೆ ತನ್ನ ಪ್ರಾಣವಿಟ್ಟು ಚಿತ್‌ಪ್ರಾಣವ ಮಾಡಿದ
ಎನ್ನಜೀವದೊಳಗೆ ತನ್ನಜೀವವಿಟ್ಟು ಸಂಜೀವನವ ಮಾಡಿದ
ಎನ್ನಭಾವದೊಳಗೆ ತನ್ನ ಭಾವವಿಟ್ಟು ಸದ್ಭಾವವ ಮಾಡಿದ".

ಯಾರು ಹೀಗೆಲ್ಲ ಮಾಡಿದವರು ? ಅಖಂಡೇಶ್ವರನಲ್ಲ ! ಕರ್ಪುರದ ಹೆಣ್ಣು, ಉರಿ ಪುರುಷನನ್ನು ಅಪ್ಪಿದಾಗ ರೂಪ ಉಳಿಯುವದೇ ? ತನುಮನಧನಗಳಲ್ಲಿ ಸಾಮರಸ್ಯವನ್ನು ತಂದುಕೊಂಡು, ದೇವದೇವನಿಗೆ ಅರ್ಪಿಸಿದರೆ ಅದು ದಿವ್ಯ ಸಾಮರಸ್ಯವಾಗಿ,ಪರಿಣಮಿಸದಿರುವದೇ ? ಸಮರಸದ ಜೀವನವನ್ನು ಅಳವಡಿಸಿಕೊಂಡವರಿಗೆ ಲಿಂಗಾಂಗ ಸಾಮರಸ್ಯವೆನ್ನುವುದು ಅಂಗೈನೆಲ್ಲಿ.

ಇದ್ದಲ್ಲೆಲ್ಲಾ ಕಾಣಿಸಿಕೊಂಡರೆ

ನಾಲಗೆಯ ತುದಿಯಲ್ಲಿರುವ ಗಂಡನ ಹೆಸರನ್ನು ತುಟಿಯಲ್ಲಿ ತರುವ ಹಂಬಲ, ಕನ್ನಿಕ್ಕಿಗಳಿಗಿರುವುದು ಸ್ವಾಭಾವಿಕ. ಯಾರಾದರೂ ತನಗೆ ಗಂಡನ ಹೆಸರು ಕೇಳಲೆಂಬ ತವಕ ಎದೆಯಲ್ಲಿ ತುಂಬಿ ತುಳುಕುತ್ತಿರುವದು. ಅದಕ್ಕಾಗಿ ತಾನೇ ಮೊದಲಿಗೆ ಬೇಟ ತೆಗೆದು, ಬೇರೊಬ್ಬ ಕನ್ನಿಕೆಗೆ ಗಂಡನ ಹೆಸರು ಹೇಳಬೇಕೆಂದು ಕೆಣಕಿ ಕೇಳುವಳು. ಹೇಳಲು ನಿನಗೆ ನಾಚಿಕೆಯೆನಿಸುತ್ತಿದ್ದರೆ, ಹೇಳಲಿಕ್ಕೆ ಬರುತ್ತಿರದಿದ್ದರೆ ನನಗೆ ಕೇಳಿ ನೋಡೆಂದು ಆಹ್ವಾನಿಸುವಳು. ಕೇಳುವುದೇ ತಡ, ಹೇಳಿಯೇ ಬಿಡುವಳು. ಅರ್ಥಹಾಕಿ ಹೇಳುವಳು;ಅರ್ಥವೆತ್ತಾಗಿ ಹೇಳುವಳು. ಮಾನವ ಕನ್ನಿಕೆಗಳ ಹಾಡೇ ಇಂತಾದರೆ, ಭಕ್ತ ಕನ್ನಿಕೆಯ ಪಾಡು ಇನ್ನೆಂತು ? ಷಣ್ಮುಖ ಶಿವಯೋಗಿಗಳು ಭಕ್ತ ಕನ್ನಿಕೆಯಾಗಿ ಹೀಗೆ ಕೇಳುವರು—

"ಗಂಡನುಳ್ಳ ಗರತಿಯರೆಲ್ಲರು
ನಿಮ್ಮ ಗಂಡನ ಕುರುಹು ನೀವೆ ಹೇಳಿರೇ
ನೀವು ಅರಿಯದಿರ್ದೊಡೆ
ನಾವು ನಮ್ಮ ಗಂಡನ ಕುರುಹು ಹೇಳುವೆವು ಕೇಳಿರೇ
ಹೊಳೆವ ಕೆಂಜಡೆಗಳ, ಬೆಳಗುವ ಫಾಳಲೋಚನದ
ಥಳಥಳಿಪ ಸುಳಿಪಲ್ಲಿನ
ಕಳೆದುಂಬಿ ನೋಡುವ ಕಂಗಳ ನೋಟದ...."

ಮನಕ್ಕೆ ಬಂದ ಚೆಲುವನ ರೂಪ, ಮನಗಳ್ಳನಾದ ಮಾತಿರವನ ಲಲ್ಲೆನುಡಿ, ಯಾವ ಚೆಲುವೆಗೆ ಬೇಡ ? ಆತನ ಮುದ್ದಾದ ಕೆಂದುಟಿಯ ಮುದ್ದು, ಮೈಯಲ್ಲಿ ಮಿಂಚಿನ ಹೊಳೆತುಳುಕಾಡಿಸುವ ಆತನ ಸರ್ವಾಂಗದ ಅಪ್ಪುಗೆ ಯಾವ ನಲ್ಲೆ ಒಲ್ಲೆಂದಾಳು ? ಅಖಂಡೇಶ್ವರನ ಅರ್ಧಾಂಗಿಯಾದ,ಗಂಡುದೊತ್ತಿನ ದಾವತಿಯನ್ನು ಹೊತ್ತ ಷಣ್ಮುಖ ಶಿವಯೋಗಿ ಎಂಬ ಮಡದಿ ಆ ಬಗೆಯನ್ನು ಬಗೆದುಂಬುವಂತೆ ಉಸುರಿದ್ದಾಳೆ, ಅದು—

"ಆತನ ದಿವ್ಯರೂಪು ನೋಡಿ ಎನ್ನ ಕಂಗಳು ದಣಿಯವು
ಆತನ ಲಲ್ಲೆವಾತ ಕೇಳಿ, ಎನ್ನ ಕಿವಿಗಳು ದಣಿಯವು
ಆತನ ಜಿಹ್ವೆಯ ಚುಂಬಿಸಿ ಎನ್ನ ಬಾಯಿ ದಣಿಯದು
ಆತನ ಸರ್ವಾಂಗವನಪ್ಪಿ ಎನ್ನ ತನು ದಣಿಯದು
ಆ ಅಖಂಡೇಶ್ವರನ ಕೂಡಿ ಒಳಪೊಕ್ಕು
ಪರಿಣಾಮವ ಸೂರೆಗೊಂಡು
ಎನ್ನ ಮನ ದಣಿಯದು ನೋಡಿರವ್ವಾ".

ಮೆಣಸಿನಕಾಯಿ ತಿನ್ನುವ ಜಡಮಾನವನಿಗೇನು ಗೊತ್ತು ಮೆಣಸಿನ ಕಾಳಿನ ರುಚಿ ?

ಹೊಂದಿಕೆ—ಒಂದಿಕೆ

ತನುಮನ ಪ್ರಾಣಗಳ ಸೇರುವೆಯೇ ನಾನೆಂದು ಸ್ಥೂಲವಾಗಿ ನಾವೆಲ್ಲರೂ ಬಗೆಯುವೆವು. ಆದರೆ ದಿಟ್ಟಿಸಿ ನೋಡಿದರೆ, ನಿಟ್ಟಿಸಿ ನೋಡಿದರೆ ತನುಮನ ಪ್ರಾಣಗಳು ನನ್ನವಾಗಿರುವವೇ ಹೊರತು, ಅವೇ ನಾನಲ್ಲವೆಂದು ಕಂಡು ಬರುವದು. ತನ್ನನ್ನು ತಾನರಿಯು—ವುದೇ ಕಠಿಣವಾಗಿರುವಾಗ ದೇವನನ್ನು ಅರಿಯುವುದು ಇನ್ನೂ ಕಠಿಣ; ಕಠಿಣತರ. ಎಲ್ಲವನ್ನೂ ಅರಿಯಬಹುದು. ಆದರೆ ತನ್ನನ್ನು ತಾನು ಅರಿಯಲು ಆಗದಯ್ಯ—ಎಂದು ಒಳ್ಳೊಳ್ಳೆಯವರು ನೆಲಕ್ಕೆ ಕೈಯೂರಿ ಕುಳಿತುಕೊಳ್ಳುವ ಪ್ರಸಂಗಗಳಿವೆ. ಕಾಣುವುದರ ಹಿಂದೆ ಕಾಣ—ದ್ದೊಂದು ಉಂಟಂತೆ. ಕಾಣುವುದರ ಆಶ್ರಯ ಪಡೆದು ಕಾಣದ್ದೊಂ-ದನ್ನು ಕಾಣಬಹುದೆಂದು ಬಲ್ಲವರು ಹೇಳುತ್ತಾರೆ. ಹುಳಿವಿಡಿದು ಘೃತವ ಕಾಣುವ ಮಾಟ, ಸತಿವಿಡಿದು ಮುಕ್ತಿಸತಿಯನ್ನು ಸಂಗಳಿಸುವ ಹೂಟ ಶರಣರದು. ನಮಗೆ ಗೋಚರಿಸುವ ತನುಮನ ಪ್ರಾಣಗಳ ಸುಳುಹಿನಲ್ಲಿಯೇ ತನುಮನ ಪ್ರಾಣಗಳ ಒಡೆಯನನ್ನು ಗುರುತಿಸಬೇಕಾಗಿದೆ. ತನುಮನ ಪ್ರಾಣಗಳೊಡನೆ ನಾವು ಹೊಂದಿದ್ದೇವೆ ಎನ್ನುವುದು ಮಾತ್ರ ನಮಗೆ ತಿಳಿದಿದೆ. ಆದರೆ ಅವುಗಳೊಡನೆ ನಾವು ಬರೆಹೊಂದಿರದೆ ಒಂದಿಯೂ ಇದ್ದೇವೆ—ಎನ್ನುವುದನ್ನೂ ತಿಳಿಯಬೇಕಾಗಿದೆ. ತನು ಮನ ಪ್ರಾಣಗಳೊಡನೆ ಯಾವುದು ಒಂದಿರುವುದೋ ಅದೇ ನಾನು. ಆ ನಾನು ದಾಸೋಹಂ ಭಾವನೆಯಲ್ಲ; ಶಿವೋಹಂ ಭಾವನೆ. ಅದು ವೈಯಕ್ತಿಕ ಅಹಂಕಾರವಲ್ಲ; ಪುರು-ಷೋತ್ತಮ ಅಹಂಕಾರ. ಈ ಗುಟ್ಟು ಷಣ್ಮುಖಶಿವಯೋಗಿಗಳಿಗೆ ಹೊಳೆದಿತ್ತು. ಅಂತೆಯೇ ಅವರು ಢಾಣಾಡಂಗುರವಾಗಿ ಈ ಕೆಳಗಿನ ನುಡಿಯನ್ನು ಸ್ಪಷ್ಟವಾಗಿ ಉಚ್ಚರಿಸಿದರು—

"ಎನ್ನ ತನುವಿನ ಮರೆಯಲ್ಲಿದ್ದ
ಚಿನುಮಯನ ಅರಸುವ ಬನ್ನಿರೇ
ಎನ್ನ ಮನದ ಮರೆಯಲ್ಲಿರ್ದ
ಮಹಾಘನವಸ್ತುವ ಹುಡುಕುವ ಬನ್ನಿರೇ
ಎನ್ನ ಪ್ರಾಣದ ಮರೆಯಲ್ಲಿರ್ದ
ಪರಬ್ರಹ್ಮವೆಂಬ ಅಖಂಡೇಶ್ವರನ ನೋಡುವ ಬನ್ನಿರೇ"

ನೋಡುವ ಬನ್ನಿರೇ—ಎಂದು ಕೂಗಿ ಕರೆದರೆ, ಕಣ್ಣಿದ್ದವರೆಲ್ಲ ನೋಡಬಲ್ಲರೇ ? ಕಣ್ಣಿಂದ ನೋಡದೆ ಕಣ್ಣೊಳಗಿಂದ ನೋಡಬಲ್ಲವರಿಗೆ ಮಾತ್ರ ಅದು ಸಾಧ್ಯ. ಕಣ್ಣು ಬೇಕು ಮೊದಲು. ಕಣ್ಣಿಗೆ ಹಚ್ಚುವ ಅಂಜನ ಅದಕ್ಕೂ ಮೊದಲು ಬೇಕು. ನೆಲದ ಮರೆಯ ದ್ರವ್ಯ ಗೋಚರಿಸುವುದಕ್ಕೆ ಕಣ್ಣಿಗೆ ಅಂಜನ ಲೇಪಿಸಬೇಕಾಗುತ್ತದೆ. ಅದು ದ್ರವ್ಯಾಂಜನವಾಯಿತು. ದ್ರವ್ಯ ಬೇಕಾದವರು ಕಣ್ಣಿಗೆ ದ್ರವ್ಯಾಂಜನ ಲೇಪಿಸಿಕೊಳ್ಳುವರು. ಆದರೆ ನಮಗೆ ಬೇಕಾದದ್ದು ಧನ ಸಂಪತ್ತಲ್ಲ; ದೇವ ಸಂಪತ್ತು. ಅದನ್ನು ಕಾಣಬೇಕೆನ್ನುವವರು ಕಣ್ಣಿಗೆ ಹಚ್ಚಿಕೊಳ್ಳತಕ್ಕ ಶಿವಾಂಜನವೊಂದು ಇರಬೇಕಲ್ಲವೇ ? ಅದು ನಮ್ಮ ಚಿತ್ತಿನ ಮಧ್ಯದಲ್ಲಿದೆಯೆಂದು ಷಣ್ಮುಖಶಿವಯೋಗಿಗಳಿಗೆ ಗೊತ್ತಾಯಿತು. ಅದನ್ನು ಪ್ರಯೋಗಿಸಿಯೂ ಬಿಟ್ಟರೆಂದು ತೋರುತ್ತದೆ.

"ಅಂಜನದ ಬಲದಿಂದ
ನೆಲದ ಮರೆಯ ದ್ರವ್ಯವ ಕಾಣುವಂತೆ
ಎನ್ನ ಚಿತ್ತಿನ ಮಧ್ಯದಲ್ಲಿ ನಿತ್ಯ ಶಿವಜ್ಞಾನಾಂಜನವು
ಪ್ರಜ್ವಲಿಸಲಾಗಿ ತತ್ವಾತತ್ವಂಗಳು ವ್ಯಕ್ತವಾದವು.
ಅಖಂಡೇಶ್ವರನೆಂಬ ಪರವಸ್ತುವು
ಹೂಣಿರ್ದ ಗೊತ್ತು ಕಾಣ ಬಂದಿತ್ತು"

ಹೇಗಿದ್ದಿತು ಆ ಅಖಂಡೇಶ್ವರನೆಂಬ ಪರವಸ್ತು ? ಅದು ಒಂದೇ ವಿಧವಾಗಿ ಗೋಚರಿಸಲಿಕ್ಕಿಲ್ಲ. ಅವರವರ ಮನಕ್ಕೆ ಬಂದ ರೂಪದಲ್ಲಿ ಕಾಣಿಸಿಕೊಳ್ಳುವದು. ಕೂಡಲ ಸಂಗನಾಗಿ ಒಬ್ಬರಿಗೆ ಗೋಚ-ರಿಸಿದರೆ, ಗುಹೇಶ್ವರನಾಗಿ ಇನ್ನೊಬ್ಬರಿಗೆ ಕಂಗೊಳಿಸುವನು; ಚೆನ್ನಮಲ್ಲಿಕಾರ್ಜುನನಾಗಿ ಮತ್ತೊಬ್ಬರಿಗೆ ಗೋಚರಿಸಿದರೆ, ಕಪಿಲಸಿದ್ಧ ಮಲ್ಲಿಕಾರ್ಜುನನಾಗಿ ಮಗುದೊಬ್ಬರಿಗೆ ಕಂಗೊಳಿಸುವನು. ದೇವನೊಬ್ಬ ನಾಮ ಹಲವು ಎನ್ನುವುದು ಅದೆಷ್ಟು ಸತ್ಯವೋ ಅಷ್ಟೇ ಸತ್ಯವಾದ ಸಂಗತಿಯೆಂದರೆ—ದೇವನೊಬ್ಬ, ರೂಪ ಹಲವು. ಷಣ್ಮುಖ ಶಿವಯೋಗಿಗಳ ದೇವನಾಮ ಅಖಂಡೇಶ್ವರನೆಂದು ತಿಳಿದಿದ್ದೇವೆ. ಆದರೆ ಅವನ ರೂಪವೆಂಥದೆನ್ನುವುದನ್ನು ಅವರನ್ನೇ ಕೇಳೋಣ. ಅವರೇನು ಹೇಳುವರು ?—

"ಹರಿನಯನ ಚರಣ ಕಮಲದಲಿ ಧರಿಸಿ
ಶಿರಮಕುಟದಲ್ಲಿ ಹರಿವ ಗಂಗೆಯ ಧರಿಸಿ
ಅಸುರರ ಶಿರಗಳ ಕೊರಳ ಹಾರವ ಮಾಡಿ
ಅಜಶಿರಪಾತ್ರವ ಕರದ ಮಧ್ಯದೊಳಿರಿಸಿ
ಗಜಚರ್ಮಾಂಬರ ಭುಜಗ ಭೂಷಣನೆನಿಸಿ
ತ್ರಿಜಗವ ಪಾಲಿಸುತ್ತ ಬಂದಿರಯ್ಯ
ಎನ್ನ ಕರಸ್ಥಳಕ್ಕೆ ಅಖಂಡೇಶ್ವರಾ".

ಇದೀಗ ದೇವ ದೇವನ ಭವ್ಯರೂಪ. ಭಕ್ತನ ಕಾಣ್ಕೆ. ಶರಣಸತಿಗೆ ಗೋಚರಿಸಿದ ರೂಪವನ್ನು ನೋಡುವದಾಗದೆ ಆಕೆ ಕಣ್ಣು ಮುಚ್ಚಿಕೊಳ್ಳುವಳೇನೋ. ಆತನ ಹೆಸರನ್ನೇನೋ ಆಕೆ ಉಬ್ಬಿನಿಂದ ಹೇಳುತ್ತಾಳೆ. ಆತನ ಮಾಟ ಕೂಟವನ್ನು ನೆನಹಿಗೆ ತಂದು ಮೆಲಕು ಹಾಕುತ್ತಾಳೆ—

"ಬಾಯೊಳಗೆ ಬಾಯನಿಕ್ಕಿ
ಎದೆಗೆ ಎದೆ ತಕ್ಕೈಸಿ
ಮೈಗೆ ಮೈ ಹೊಂದಿಸಿ
ಕೂಡಿದ ಅಖಂಡೇಶ್ವರನ ಸುಖವು
ಜೇನು ಸಕ್ಕರೆ ಸವಿದಂತಾಯಿತು ನೋಡಿರವ್ವಾ"

ಈ ಸೇರುವೆ ಹೊಂದಿಕೆ ಮಾತ್ರ ಆಗಿರದೆ ಒಂದಿಕೆಯೂ ಆಗಿದೆಯೆನ್ನುವುದು ತೀರ ಸ್ಪಷ್ಟವಾಗಿದೆ.

ಅಖಂಡೇಶ್ವರನ ಪಡೆದ ತಾಯಿ

ಷಣ್ಮುಖಶಿವಯೋಗಿಗಳು ಬಸವಣ್ಣನವರನ್ನು ಅನುಕರಿಸಿದ್ದಾಗಲಿ, ಅನುಸರಿಸಿದ್ದಾಗಲಿ ಬರಿಯ ಬಾಯ ಮಾತಿನಲ್ಲಿ ಅಲ್ಲ. ಮೈಯೊಳಗಿನ ರಕ್ತದ ಕಣಕಣದಲ್ಲಿಯೂ ಎದೆಯ ಪ್ರತಿಯೊಂದು ಮಿಡಿತದಲ್ಲಿಯೂ ಸಾಧಿಸಿಕೊಂಡಿದ್ದೆಂದು ಹೇಳಬಹುದು. ಶರಣ ಸತಿಯಾಗಿ ಮಧುರ ಮಿಲನವನ್ನು ಗಳಿಸಿದಂತೆ, ದೇವಮಾತೆಯಾಗಿ ವಾತ್ಸಲ್ಯ-ವಾರಿಗೆ ಮೈಯೊಡ್ಡಿಯೂ ನಿಂತಿದ್ದಾರೆ. ಪ್ರಾಣಪತಿ–ದೇಹಸತಿಗಳಲ್ಲಿ ಬಸವಣ್ಣನವರು ಕೂಡಲಸಂಗನೆಂಬ ಮಗುವನ್ನು ಪಡೆದಂತೆ, ಷಣ್ಮುಖ ಶಿವಯೋಗಿಗಳು ಲಿಂಗವೆಂಬ ಮಗುವನ್ನು ಹಡೆದು ತಾವ-ದರ ತಾಯಿಯಾದರು. ಆ ಮಗುವಿಗೆ ಅಖಂಡೇಶ್ವರ ಎಂಬ ಹೆಸರಿಟ್ಟರು. ಪ್ರಾಣಕ್ಕೆ ಪರಿಣಾಮನಾದ, ತನುವಿಗೆ ತರಹರನಾದ ಆ ಅಗಮ್ಯ ಅಗೋಚರ ಶಿಶುವನ್ನು ಪಡೆದ ಬಗೆಯನ್ನು ಅವರು ವಿವರಿಸಿದ್ದು ಹೀಗೆ—

"ನೋಡಿರೇ ನೋಡಿರೇ ಒಂದು ವಿಚಿತ್ರವ
ಶಿಷ್ಯನೆಂಬ ಹೆಂಡತಿಯು ಶ್ರೀಗುರುವೆಂಬ ಗಂಡನು
ಹಸ್ತಮಸ್ತಕ ಸಂಯೋಗವೆಂಬ ಕೂಟದಿ ಕೂಡಲು
ಷಡಕ್ಷರ ಮಂತ್ರವೆಂಬ ವೀರ್ಯದ ಚಲನೆಯಾಗಿ
ಆ ಶಿಷ್ಯನೆಂಬ ಹೆಂಡತಿಯ, ಕರ್ಣವೆಂಬ ಗರ್ಭವ ಪ್ರವೇಶಿಸಲು
ಮನ ಬಸುರಾಗಿ ಕರಣಗಳೆಂಬ ಯೋನಿಯಲ್ಲಿ
ಲಿಂಗವೆಂಬ ಮಗನ ಹಡೆದು
ಅಂಗೈಯೆಂಬ ತೊಟ್ಟಿಲಲ್ಲಿಕ್ಕಿ
ಮಂಗಳಸ್ತೋತ್ರವೆಂಬ ಜೋಗುಳ ಹಾಡಿ
ಅಖಂಡೇಶ್ವರನೆಂಬ ಹೆಸರಿಟ್ಟರು ನೋಡಾ.
ಇದು ಕಾರಣ ನೀವೀಗ ಮಗನಾದಿರಿ
ನಾ ನಿಮಗೆ ತಾಯಿಯಾದೆನಯ್ಯ ಅಖಂಡೇಶ್ವರಾ".

ಆ ಮಗು ದಿವ್ಯಜ್ಯೋತಿಯಾಗಿ, ಸ್ಥೂಲ-ಸೂಕ್ಷ್ಮ-ಕಾರಣ ತನುಗಳನ್ನೆಲ್ಲ ಬೆಳಗಿತೆಂದು ಹಿರಿಹಿಗ್ಗಿನಲ್ಲಿ ಹಾಡಿದ್ದಾರೆ. ಆ ಜ್ಯೋತಿಯು ತನುತ್ರಯಗಳಲ್ಲಿ ತ್ರಿವಿಧರೂಪ ತಳೆಯಿತೆಂದು ನಿಬ್ಬೆರಗಿನಲ್ಲಿ ಕುಣಿದಾಡಿದ್ದಾರೆ. ಆ ಹಿಗ್ಗಿನ ಹಾಡು, ಆ ನಿಬ್ಬೆರಗಿನ ಕುಣಿತ ಅದೆಂಥ ಜೋಹುಗಾರಿಕೆಯದಿರಬೇಕು !

"ಎನ್ನ ಸ್ಥೂಲತನುವೆಂಬ ಮನೆಯಲ್ಲಿ
ಲಿಂಗವೆಂಬ ಜ್ಯೋತಿಯ ತುಂಬಿದೆನಯ್ಯ.
ಎನ್ನ ಸೂಕ್ಷ್ಮತನುವೆಂಬ ಮನೆಯಲ್ಲಿ
ಮಂತ್ರವೆಂಬ ಜ್ಯೋತಿಯ ತುಂಬಿರ್ದೆನಯ್ಯ.
ಎನ್ನ ಕಾರಣತನುವೆಂಬ ಮನೆಯಲ್ಲಿ
ಜ್ಞಾನವೆಂಬ ಜ್ಯೋತಿಯ ತುಂಬಿರ್ದೆನಯ್ಯ.
ಎನ್ನ ಒಳಹೊರಗೆ ತುಂಬಿ ಬೆಳಗುವ
ಜ್ಯೋತಿಯ ಬೆಳಗಿನೊಳಗೆ
ಸುಳಿವುತಿರ್ದೆನಯ್ಯ ಅಖಂಡೇಶ್ವರಾ".

ಆ ಜ್ಯೋತಿಯು ತಳೆದ ತ್ರಿವಿಧ ರೂಪಗಳೆಂದರೆ ಲಿಂಗ, ಮಂತ್ರ ಹಾಗೂ ಜ್ಞಾನ ಎನ್ನುವುದು ಸ್ಪಷ್ಟವಾಗಿದೆ. ಇಂಥ ಮಹಾನುಭಾವದ ಸತ್ವವನ್ನು ಒಳಗೊಂಡ ವಚನಗಳು ಕಾಯದ ಕಾರ್ಪಣ್ಯವನ್ನು ಕಳೆಯಬಲ್ಲವು. ಜೀವನೋಪಾಧಿಯನ್ನು ಅಳಿಸಬಲ್ಲವು. ಅಲ್ಲದೆ ಅವು ಪ್ರಾಣದ ಪ್ರಪಂಚವನ್ನು ತೊಲಗಿಸಬಲ್ಲವು. ಭಾವದ ಭ್ರಮೆಯನ್ನು ಬಯಲುಮಾಡಬಲ್ಲವು. ಮನದ ವ್ಯಾಕುಲವನ್ನು ಮಾಣಿಸಬಲ್ಲವು. ಕರಣೇಂದ್ರಿಯಗಳ ಕಷ್ಟಗುಣವ ನಷ್ಟಮಾಡಬಲ್ಲವು. ಏಕೆಂದರೆ ಅವು ಬಾಳೆಯೆಲೆಯ ಮೇಲೆ ತುಪ್ಪತೊಡೆದಂತೆ ಒಪ್ಪವಿಟ್ಟವುಗಳಾಗಿವೆ. ಜೀವನದ ಹಿನ್ನೆಲೆ ಹಸನಾಗಿದ್ದರೆ, ಮಾತಿನ ಮುನ್ನಲೆ ಇನ್ನೂ ಹಸನಾಗುವದಲ್ಲವೆ ?

ಅಚ್ಚ ಪ್ರಸಾದಿ-ನಿಚ್ಚ ಪ್ರಸಾದಿ

ತನುಮನಭಾವಗಳಲ್ಲಿ ಪ್ರಶಾಂತನಾಗಿರುವವನೇ ಪ್ರಸಾದಿಯೆನಿಸುತ್ತಾನೆ. ಪ್ರಸನ್ನಚಿತ್ತವೇ ಪ್ರಸಾದಿಯ ಮುಖ್ಯ ಲಕ್ಷಣವೆಂದು ಹೇಳಲಾಗುತ್ತದೆ. ತನುಮನಭಾವಗಳು ಪ್ರಶಾಂತತೆಯಲ್ಲಿ ಸಮನ್ವಯಗೊಂಡರೆ, ಪರಿಸರವೆಲ್ಲವೂ ಮಹಾಪ್ರಸಾದದ ಸಾಮಂಜಸ್ಯ ಪಡೆಯುತ್ತವೆ. ಆಗವನು ಪರಮಪ್ರಸಾದಿಯೆನಿಸುತ್ತಾನೆ.

"ಕಾಯದ ಕೈಮುಟ್ಟಿ ಇಷ್ಟಲಿಂಗಕ್ಕೆ ರೂಪವನರ್ಪಿಸಿದಲ್ಲಿ
ಶುದ್ಧಪ್ರಸಾದವೆನಿಸಿತ್ತು.
ಮನದ ಕೈಮುಟ್ಟಿ ಪ್ರಾಣಲಿಂಗಕ್ಕೆ ರುಚಿಯನರ್ಪಿಸಿದಲ್ಲಿ
ಸಿದ್ಧಪ್ರಸಾದವೆನಿಸಿತ್ತು.
ಭಾವದ ಕೈಮುಟ್ಟಿ ಭಾವಲಿಂಗಕ್ಕೆ ತೃಪ್ತಿಯನರ್ಪಿಸಿದಲ್ಲಿ
ಪ್ರಸಿದ್ಧ ಪ್ರಸಾದವೆನಿಸಿತ್ತು
ಇಂತು ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದ ಗ್ರಾಹಕರ ತೋರಿ
ಬದುಕಿಸಯ್ಯ ಎನ್ನ ಅಖಂಡೇಶ್ವರಾ".

ಕಾಯ–ಮನ–ಭಾವಗಳ ಸಾಮಂಜಸ್ಯ ಒತ್ತಟ್ಟಿಗಾದರೆ, ಇಷ್ಟ–ಪ್ರಾಣ–ಭಾವಲಿಂಗಗಳ ಸಾಮರಸ್ಯ ಇನ್ನೊತ್ತಟ್ಟಿಗೆ. ಅಲ್ಲದೆ ರೂಪ-ರಸ-ತೃಪ್ತಿಗಳ ಏಕರಸತೆ ಬೇರೊತ್ತಟ್ಟಿಗೆ. ಈ ಮೂರರ ಹೊಂದಾಣಿಕೆ, ಒಂದಾಣಿಕೆ ಗಳಿಸಿಕೊಂಡವನು ಅಚ್ಚ ಪ್ರಸಾದಿಯೂ ಅಹುದು; ನಿಚ್ಚಪ್ರಸಾದಿಯೂ ಅಹುದು. ಅವನು ಅತ್ತಿತ್ತ ಹರಿದಾಡುವ ಚಂಚಲ ಮನವನ್ನು ತಡೆದು ನಿಲ್ಲಿಸಿ ಏಕಾಗ್ರತೆಗೆ ಅಣಿಗೊಳಿಸುತ್ತಾನೆ. ಪ್ರಗಾಢ ಏಕಾಗ್ರತೆಯೇ ಆತ್ಮದೃಷ್ಟಿಯೆನಿಸುತ್ತದೆ. ಆತ್ಮದೃಷ್ಟಿಗೆ ಗೋಚರಿಸದೆ ಮೈಯಡಗಿಸಿಕೊಳ್ಳುವ ವಸ್ತುವಾದರೂ ಯಾವುದು ?

ಲಿಂಗ ವ್ಯವಹಾರ

ಆತ್ಮ ದೃಷ್ಟಿಯನ್ನು ಗಳಿಸಿದ ಶರಣನು ಕಣ್ಣುಹೊರಳಿಸಿ-ದಲ್ಲೆಲ್ಲ, ಕಣ್ಣು ಅರಳಿಸಿದಲ್ಲೆಲ್ಲ ಚೆಲುವರ ಚೆಲುವನಾದ ಶಿವಸ್ವರೂ-ಪವನ್ನೇ ಕಾಣುತ್ತಾನೆ. ಶಿವಸ್ವರೂಪವನ್ನು ಕಂಡವನು ಶಿವನೊಡನೆಯೇ ವ್ಯವಹರಿಸುತ್ತಾನೆ. ಸ್ಥಾವರ-ಜಂಗಮಗಳೆಲ್ಲ, ಚರಾಚರ

ವಸ್ತುಗಳೆಲ್ಲ ಸಮರಸಗೊಂಡು ಸ್ವಯಂಭೂವಾಗಿ ಪರಿಣಮಿಸಿದಾಗ ತಾನಾರು, ಅನ್ಯಿಗರಾರು ? ಅಂಥಲ್ಲಿ ಲಿಂಗದ ನಡೆಯಲ್ಲದೆ, ಲೋಕದ ನಡೆ ಕಲಿತರೂ ಬರುವಂತಿಲ್ಲ.

"ಲಿಂಗದ ನಡೆಯಂತೆ ನಡೆವನಲ್ಲದೆ
ಲೋಕದ ನಡೆಯಂತೆ ನಡೆವನಲ್ಲ ನೋಡಾ ನಿಮ್ಮ ಶರಣ
ಲಿಂಗದ ನುಡಿಯಂತೆ ನುಡಿವನಲ್ಲದೆ
ಲೋಕದ ನುಡಿಯಂತೆ ನುಡಿವನಲ್ಲ ನೋಡಾ ನಿಮ್ಮ ಶರಣ
ಲಿಂಗದ ಮಚ್ಚಿನಲ್ಲಿ ಸುಳಿವನಲ್ಲದೆ
ಲೋಕದ ಮಚ್ಚಿನಲ್ಲಿ ಸುಳಿವನಲ್ಲ ನೋಡಾ ನಿಮ್ಮ ಶರಣ.
ಲಿಂಗದ ವ್ಯವಹಾರದಲ್ಲಿರುತ್ತಿಹನಲ್ಲದೆ
ಲೋಕದ ವ್ಯವಹಾರದಲ್ಲಿರುತಿಪನಲ್ಲ ನೋಡಾ ನಿಮ್ಮ ಶರಣ.
ಇಂತಪ್ಪ ಲಿಂಗಾಗಸಂಗಸಮರಸವನರಿದ ಶಿವಶರಣನ
ಶಿವನೆನ್ನಬೇಕಲ್ಲದೆ
ಲೋಕದವನೆಂದು ನುಡಿದ ಸೂತಕದೇಹಿಗಳಿಗೆ
ಪಾತಕ ತಪ್ಪದಯ್ಯ ಅಖಂಡೇಶ್ವರಾ".

ಮೈಯೆಲ್ಲಾ ಬೆಳಗು ಸೂಸುತ್ತಿರುವ ಬೆಳಕಿಗೆ ಕವನೆರಳೆಲ್ಲಿಯದು ? ಮೊಟ್ಟಮೊದಲು ಶ್ರೀಕೃಷ್ಣನ ಬಾಯಿಂದ ಭಗವದ್ಗೀತೆಯನ್ನು ಆಲಿಸಿ, ಆಚರಿಸುತ್ತಿರುವ ಸೂರ್ಯನಿಗೆಲ್ಲಿದೆ ಛಾಯೆ? ಅಚ್ಚ ನಿಚ್ಚ ಶರಣನ ಸ್ಥಿತಿಗೇರಿರುವವನ ಬಳಿಗೆ ಲೋಕವ್ಯವಹಾರಗಳು ಸುತ್ತಿಸುಳಿಯವು. ಮರವೆ-ಅಲಸಿಕೆಗಳು ಹತ್ತುಹರದಾರಿ ದೂರ ಉಳಿಯುವವು.

ಪರುಷಮಣಿಯ ಸ್ಪರ್ಶ

ಶರಣನ ತನುಮನಪ್ರಾಣಗಳು ದಿವ್ಯಸ್ಪರ್ಶದಿಂದ ಮಹಾತನು, ಘನಮನ, ಚಿತ್‌ಪ್ರಾಣವಾಗಿ ಪರಿಣಮಿಸಿದ್ದರಿಂದ ಅವನನ್ನು ಕಾಯದ ಕಳವಳವು ಕಂಗೆಡಿಸದು. ಜೀವನೋಪಾಯವು ಜೀಯ ಎನ್ನಿಸದು. ಲೋಕದ ಜಂಜಡವು ಜಡವೆನಿಸದು. "ಎನ್ನನು ವ್ಯವಹಾರದಲಿರಸಲೀದಯ್ಯ" ಎನಿಸಿಬಿಡುತ್ತದೆ.

"ಕಾಯದ ಕಳವಳದಲ್ಲಿ ಕಂಗೆಡುವವನಲ್ಲ ಶರಣ
ಜೀವನುಪಾಧಿಕೆಯ ಹೊದ್ದುವನಲ್ಲ ಶರಣ
ಭಾವದ ಭ್ರಮೆಯಲ್ಲಿ ಸುಳಿವನಲ್ಲ ಶರಣ
ಮನದ ಮರವೆಯಲ್ಲಿ ಮಗ್ನನಲ್ಲ ಶರಣ
ಕರಣಂಗಳ ಕತ್ತಲೆಯಲ್ಲಿ ಸುತ್ತಿಬೀಳುವನಲ್ಲ ಶರಣ
ಇಂದ್ರಿಯಗಳ ವಿಕಾರದಲ್ಲಿ ಹರಿದಾಡುವನಲ್ಲ ಶರಣ
ಪರತರಲಿಂಗದ ಬೆಳಗಿನೊಳಗೆ ಬೆಳೆದು
ತೆರಹಿಲ್ಲದೆ ಬೆಳಗುವ ಪರಮಗಂಭೀರ ಶರಣನ ನಿಲುವಿಗೆ
ನಮೋನಮಃ ಎಂಬೆನಯ್ಯ ಅಖಂಡೇಶ್ವರ"

ಷಣ್ಮುಖ ಶಿವಯೋಗಿಗಳಂಥವರೇ ಅಂಥ ಶರಣನ ನಿಲುವಿಗೆ ನಮೋನಮಃ ಎನ್ನುತ್ತಿರುವ ಸಾಮಾನ್ಯ ಜೀವಿಗಳು ಅವನ ಮುಂದೆ ಅಡ್ಡಬಿದ್ದು ದಿಂಡುರುಳಿಕೆ ಹಾಕದಿರಲಾರರು. "ಹತ್ತೂನಿಟ್ಟಿಗೆ ಹೊತ್ತಿಸಿ ಉರಿಯನು, ನಿಂತೆನು ನಾಕೆತ್ತಡಿಯಾಗಿ" ಎಂಬ ನಿಲುವಿಯಲ್ಲಿಯ ಸಾಧಕನಿಗೆ ಮಾತ್ರ ಅಂಥ ಶರಣರನ್ನು ಕಲ್ಪಿಸಲು ಸಾಧ್ಯ. ಸಾಮಾನ್ಯರ ಕಲ್ಪನೆಗೂ ನಿಲುಕದ ಶರಣನ ಬಾಳು ಜೀವನದಲ್ಲಿ ಅಳವಡಬಲ್ಲದೇ? ನಿಮಿಷನಿಮಿಷಕ್ಕೂ ನೆನಪುಗೊಂಡು,ಅದಕ್ಕಾಗಿಯೇ ಕೈತೊಳಕೊಂಡು ಬೆನ್ನುಹತ್ತುವ ನಿರ್ಧಾರವಿಲ್ಲದಿದ್ದರೆ,ಶರಣಜೀವನದ ಹೆಸರು ಸಹ ಎತ್ತಬಾರದು. ಅದು ಹುಲಿಮೀಸೆ; ಸುಣ್ಣದ ಹರಳು. ಅವುಗಳಿಂದ ದೂರವೇ ಉಳಿಯಬೇಕು. ಅವುಗಳೊಡನೆ ಸಲಿಗೆ ಸಲ್ಲದು. ಅನರ್ಥಕಾರಿ ಅದು. ಪರುಷಮಣಿಯ ಸ್ಪರ್ಶಕ್ಕೂ ಅರ್ಹತೆ ಬೇಕು. ಕಬ್ಬಿಣದ ಸೂಜಿಗಿದೆ ಆ ಅರ್ಹತೆ. ಬೆಳ್ಳಿಯ ಸೂಜಿಗಲ್ಲ; ಬಂಗಾರದ ಸೂಜಿಗೂ ಅಲ್ಲ. ಕಟ್ಟಿಗೆ-ಕಲ್ಲುಗಳದಂತೂ ಮೊದಲೇ ಅಲ್ಲ. ಕಬ್ಬಿಣದ ಸೂಜಿಯನ್ನೇ ಸ್ಪರ್ಶಮಣಿ ಮುಟ್ಟಿ ಸುವರ್ಣವಾಸ ಬಲ್ಲದು. ಆದರೆ ಸೂಜಿ ಮೊದಲಿಗೆ ತನ್ನ ಮೈಜಂಗು ಕಳಕೊಳ್ಳಬೇಕು; ತೊಳಕೊಳ್ಳಬೇಕು. ಅದನ್ನು ಬಿಟ್ಟರೆ ಬೇರೆ ಗತಿಯೇ ಇಲ್ಲ. ಮರೆಯಲಾಗದು. ಸ್ಪರ್ಶಮಣಿಯೆಂದರೆ ಸೂಜಿಗಲ್ಲು ಅಲ್ಲವೇ ?

ಕುರುಡ–ಕುಂಟರ ಸೇರುವೆ

ತಿಳುವಳಿಕೆಯಿದ್ದರೆ ಸಾಕು, ಹೆಚ್ಚಿಗೇನೂ ಬೇಕಿಲ್ಲ ಎನ್ನುವವರ ಜಾತಿ ಒಂದು. ತಿಳಿಯಲಿ ಬಿಡಲಿ ನಡವಳಿಕೆ ಬೇಕು, ಸಾಕು ಅಷ್ಟೇ ಎನ್ನುವವರ ಜಾತಿ ಇನ್ನೊಂದು. ಒಂದು ಜಾತಿಗೆ ಜ್ಞಾನವೇ ಆಧಾರ; ಇನ್ನೊಂದು ಜಾತಿಗೆ ಕ್ರಿಯೆಯೇ ಊರುಗೋಲು. ಇವನು ವೇದಾಂತಿ ಅವನು ಸಿದ್ಧಾಂತಿ. ಆದರೆ ಅವರಲ್ಲಿ ಒಬ್ಬನಿಗೆ ಕಣ್ಣಿಲ್ಲ. ಇನ್ನೊಬ್ಬನಿಗೆ ಕಾಲಿಲ್ಲ, ಕಣ್ಣಿಲ್ಲದ ಕುರುಡ ಮುಂದುಗಾಣನು. ಕಾಲಿಲ್ಲದ ಕುಂಟ ಮುಂದುವರಿಯನು. ಉಭಯರ ಸೇರುವೆ-ಸಹಕಾರಗಳಿಂದ ಮಾತ್ರ ಉಭಯ ಉದ್ದೇಶಗಳೂ ಈಡೇರುತ್ತವೆ; ಉಭಯರಿಗೂ ಕಲ್ಯಾಣಸಾಧಿಸುತ್ತದೆ. ಕುರುಡನೂ ಕುಂಟನೂ ಸಹಕರಿಸಿ ಕುಂಟ ಕುರುಡನಾಗಬೇಕು. ಕ್ರಿಯಾಜ್ಞಾನಗಳು ಒಂದುಗೂಡಿ, ಸತ್‌ಕ್ರಿಯಾ ಸಮ್ಯಕ್‌ಜ್ಞಾನ ಸಂಪನ್ನವಾಗಬೇಕು, ಒಂದೇಪಕ್ಕದಿಂದ ಯಾವ ಪಕ್ಷಿಯೂ ಗಗನಕ್ಕೇರಿ ವಿಹರಿಸಲಾರದು. ಅದರಂತೆ, ಅದು ನೆಲದ ಮೇಲೂ ಉಳಿಯಲಾರದು; ಉಳಿಯಬಾರದು.

"ಕ್ರಿಯೆಯೇ ಅಧಿಕವೆಂಬ
ಗೊಡ್ಡುಸಿದ್ಧಾಂತಿಗಳ ಮಾತು ಸೊಗಸದಯ್ಯ ಎನಗೆ
ಜ್ಞಾನವೇ ಅಧಿಕವೆಂಬ
ದಡ್ಡವೇದಾಂತಿಗಳ ಮಾತು ಸೊಗಸದಯ್ಯ ಎನಗೆ
ಅದೇನುಕಾರಣವೆಂದರೆ
ಅವುದಾನೊಂದು ಪಕ್ಷಿ
ಉಭಯರೆಕ್ಕೆಯಿಂದ ಗಗನಕ್ಕೆ ಹಾರುವಂತೆ
ಅಂತರಂಗದಲ್ಲಿ ಸಮ್ಯಕ್‌ಜ್ಞಾನ
ಬಹಿರಂಗದಲ್ಲಿ ಶಿವಸತ್‌ಕ್ರಿಯಾಸನ್ನಿಹಿತವಲ್ಲದೆ
ಪರವಸ್ತುವ ಕೂಡಬಾರದಾಗಿ
ಇದು ಕಾರಣ
ಸತ್‌ಕ್ರಿಯಾ ಸಮ್ಯಕ್‌ಜ್ಞಾನಸಂಪನ್ನರಾದ
ಮಹಾಶರಣರ ತೋರಿ ಬದುಕಿಸಯ್ಯ ಎನ್ನ ಅಖಂಡೇಶ್ವರ".

ಇದು ಷಣ್ಮುಖ ಶಿವಯೋಗಿಗಳು ಮಂಡಿಸಿದ ಸಮನ್ವಯ ಸಿದ್ಧಾಂತ. ನಿಸರ್ಗವು ತಿಳುವಳಿಕೆಯ ಉಪಕರಣವನ್ನು ಮನುಷ್ಯ ಶರೀರದ ತಲೆಯಲ್ಲಿ, ಕಾರ್ಯಕ್ಷಮತೆಯ ಉಪಕರಣವನ್ನು ತೋಳುಗಳಲ್ಲಿ ಇರಿಸಿದೆ. ತಲೆ-ತೋಳುಗಳು ಬೇರೆಬೇರೆಯೆನಿಸಿದರೂ ಅವು ಒಂದೇ ಶರೀರದಲ್ಲಿ ಅಳವಟ್ಟಿವೆ. ತಲೆತುಟ್ಟತುದಿಯಲ್ಲಿದ್ದರೆ ತೋಳು ಎಡಬಲಗಳಲ್ಲಿವೆ. "ಮೊದಲು ತಿಳಿಯೆ ಬಳಿಕ ಮಾತು. ಒಂದು ತಿಳಿ, ಎರಡು ಮಾಡು. ಹಾಗೆ ಮಾಡುವಾಗ ನಟ್ಟನಡುವೆ ನಿಷ್ಠೆ–ನಿಶ್ಚಯಗಳು ಎದೆಯಲ್ಲಿ ಸ್ಥಿತವಾಗಲಿ" ಎನ್ನುವುದೇ ಮನುಷ್ಯ ಶರೀರ ರಚನೆಯ ಸಂದೇಶವೆಂದು ತೋರುತ್ತದೆ. ತಾನು ದೇವಶಿಶುವೆಂದು ಉಸಿರು ಪೊಳಗೇ ಮೊಳಗುತ್ತದೆ; ಸೋಹಂ ಎನ್ನುತ್ತದೆ. 'ನಾನು' ಎಂದು ಎದೆಗೆ ಕೈಯಿಟ್ಟು ತೋರಿಸುವ ಸಹಜಕ್ರಮವಿದೆಯಲ್ಲದೆ, ಹಣೆಗೆ ಕೈಹಚ್ಚಿ ಹೇಳುವ ಅವಾಸ್ತವ ಕ್ರಮವಿಲ್ಲ. ಇದನ್ನೆಲ್ಲ ಬಗೆದಂದರೆ, ಪ್ರತಿಯೊಬ್ಬ ಮಾನವಪ್ರಾಣಿ ಶರಣಬೀಜವನ್ನೇ ಹೊತ್ತು ತಂದ ಭವಿಯಾಗಿರುತ್ತದೆ. ಸೂಕ್ತ ಕೃಷಿಯಿಂದ ಶರಣಬೀಜವನ್ನು ಬೆಳೆಸಿನಿಲ್ಲಿಸುವುದೇ ಭವಿಯಧಾವತಿಯಾಗಿರುತ್ತದೆ. ಅಂಥ ಕೃಷಿ ಕೈಕೊಂಡ ಕ್ಷಣವೇ ಭವಿ ಭಕ್ತನೆನಿಸುತ್ತಾನೆ. ಭವಿಯೆಂದರೆ ಹಿಡಿದೆನೆಯ ಕಾಳು; ಭಕ್ತನೆಂದರೆ ಬಿತ್ತಿದ ಕಾಳು. ಬದುಕಿನ ಕಾಲವೆಲ್ಲ ಈ ಬೇಸಾಯದ ಬಾಳು. ಇದನ್ನರಿಯದ ಬಾಳು ಹಾಳು ಬೀಳು. ಇದನ್ನರಿತವನೇ ಪೂರ್ಣಾಯುಷ್ಯವನ್ನು ಸಹ "ಬಡನೂರುವರುಷ" ಎಂದು ಭಾವಿಸಬಲ್ಲನು. ಅದನ್ನು ಅರಿಯುವಂತೆ ಮಾಡುವುದೇ ಈ ಲೋಕ ವಿದ್ಯಾಲಯದ ಶಿಕ್ಷಣಕ್ರಮ.

ಅಭ್ಯಾಸವಿಲ್ಲದ ಅಡಿಗೆ

ಪ್ರತಿಯೊಂದು ಮನುಷ್ಯ ಶರೀರದಲ್ಲಿ ಶಿವದೇವರಿಬ್ಬರೂ ವಾಸವಾಗಿದ್ದಾರೆ. ಆದರೆ ಅವರು ತಮ್ಮಷ್ಟಕ್ಕೆ ತಾವು ಐಕ್ಯಗೊಳ್ಳಲಾರರು. ಆ ಸೇರುವೆ ಸಹಜವಾಗಿ ದೇವರ ಐಕ್ಯವನ್ನು ತಂದುಕೊಡಲಾರದು. ಮನೆಯೊಳಗೆ ಹಾಲಿನ ಮಡಕೆಯ ಹತ್ತಿರವೇ ಮಜ್ಜಿಗೆಯ ಗಡಿಗೆಯೂ ಉಂಟು. ಅಷ್ಟಕ್ಕೆ ಮೊಸರು ಹುಟ್ಟಬರದು. ಹಾಲಿನಲ್ಲಿ ಮಜ್ಜಿಗೆ ಹನಿಯದಿದ್ದರೆ ಹೆಪ್ಪುಗೊಳ್ಳುವ ಬಗೆ ಹೇಗೆ ? ಅದರಂತೆ ಜೀವನು ತನ್ನ ಮಟ್ಟಗುಳಿದರೆ, ಶಿವನು ತನ್ನಷ್ಟಕ್ಕೆ ತಾನುಳಿಯುವನು.

"ಹಾಲು ಹರವಿಯ ಮೇಲೆ, ಮಜ್ಜಿಗೆಯ ತುಂಬಿಸಿದರೇನು
ಹೆಪ್ಪಾಗಬಲ್ಲದೇ ಸಮ್ಮಿಶ್ರಣದಿಂದಲ್ಲದೆ ?
ಅಂಗದ ಮೇಲೆ ಲಿಂಗಧಾರಣವಾದಡೇನು
ಸಮರಸವಾಗಬಲ್ಲದೇ ಅಯ್ಯಾ ಶಿವಜ್ಞಾನವಿಲ್ಲದೆ
ಅಖಂಡೇಶ್ವರಾ"

ತನುಮನ ಪ್ರಾಣಗಳು ಗುರುಲಿಂಗ ಜಂಗಮ ಸೇವೆಗೆ ಅಣಿಯಾದಾಗಲೇ ಅವು ಸರಿಯಾದ ವಿನಿಯೋಗವಾದಂತೆ. ಸಾರ್ಥಕ ಜೀವನವನ್ನು ಸಾಧಿಸುವದೆಂದರೆ ಉತ್ತಮ ಅಡಿಗೆಯನ್ನು ಅಣಿಗೊಳಿಸುವುದು. ಕಾಯವನ್ನು ಕಾಯಕದಲ್ಲಿ ತೊಡಗಿಸದೆ, ಭೋಗದಲ್ಲಿ ಮಾತ್ರ ತೊಡಗಿಸಿದರೆ, ಅಭ್ಯಾಸವಿಲ್ಲದವರ ಅಡಿಗೆಯಾಗುವದು. ಸಾಮಗ್ರಿಯ ನಾಶವಾಗುವದಲ್ಲದೆ ಅಡಿಗೆಯ ಹದವೂ ಕೆಡುತ್ತದೆ. ಹುಸಿಯ ಸಂಸಾರದಲ್ಲಿ ಎಡ್ಡಾಗುವ ಪ್ರಾಣಿಗಳನ್ನು ಕುರಿತು ಶಿವಯೋಗಿಗಳು— " ಅಡ್ಡದಾಶೆಗೆ ದುಡ್ಡಿನ ಲಾಭ ಕಳೆವರೇ " ಎಂದು ಕೇಳುತ್ತಾರೆ. ಸಾಮಂಜಸ್ಯದ ದಾರಿಯನ್ನು ಬಿಟ್ಟು, ಸಾಮರಸ್ಯವನ್ನು ಸಾಧಿಸಲಿಕ್ಕಾಗದು. ಮೂಗು ಸಂಪಿಗೆಯ ತೆನೆಯೆಂದೂ, ಕಣ್ಣು ತಾವರೆಯ ಪುಷ್ಪವೆಂದೂ, ಹಲ್ಲು ದಾಳಿಂಬರ ಬೀಜವೆಂದೂ ಬಗೆಯುವುದು ಒಂದು ವಿಧದ ಭ್ರಾಂತಿಯಾದರೆ, ಮೂಗು ಸಿಂಬಳ ಕುಪ್ಪಿಯೆಂದೂ, ಕಣ್ಣು ಒಡಕು ಕವಡೆಯೆಂದೂ, ಹಲ್ಲು ಹೊಲೆಯ ಭಾವಿಯಲ್ಲಿ ನೆಟ್ಟ ಎಲುವೆಂದೂ ಹೀಗಳೆಯುವುದು ಇನ್ನೊಂದು ಭ್ರಾಂತಿಯಾಗುವದು. ಒಂದು ಮೋಹ; ಇನ್ನೊಂದು ವೈರಾಗ್ಯ. ದೇಹವೆಂದರೆ ಜೀವಂತ ಹೆಣವಲ್ಲ. ಅದು ಅಂತರಾತ್ಮನನ್ನು ಹೊತ್ತ ತೇರು. ಪ್ರಕೃತಿಯ ಸತ್ತ್ವ-ರಜ-ತಮಗಳ ಕೀಲುಬನ್ನು ಸೋರಿಸುವ ಬುದ್ದಲಿಮಾತ್ರವಾಗಿರದೆ, ಜ್ಞಾನ–ಶಕ್ತಿ–ಕಾಂತಿಗಳ ಸುಗಂಧವನ್ನು ಸೂಸುವ ದಿವ್ಯ ಮಾತ್ರೆಯೂ ಅಹುದೆಂದು ಭಾವಿಸುವುದು ನ್ಯಾಯ, ಸೂಕ್ತ. ದೇಹವೇ ಸರ್ವಸ್ವವೆಂದು ಬಗೆದು, ಅದರ ಸಿಂಗಾರದಲ್ಲಿಯೇ ಆಯುಷ್ಯ ಕಳೆಯುವವರಿಗೆ ವೈರಾಗ್ಯವನ್ನು ಬೋಧಿಸಲಿ, ಅದು ಸಾರ್ಥಕ. ಆದರೆ ದೇಹವನ್ನು ಹೊಂಗೊಬ್ಬರ ಸಿದ್ಧಪಡಿಸುವ ಯಂತ್ರ ಮಾಡಿ ಬಿಟ್ಟವರಿಗೆ ವೈರಾಗ್ಯ ಬೋಧೆ ವಿಪರೀತ ಪರಿಣಾಮ ಮಾಡುವುದರಲ್ಲಿ ಸಂಶಯವಿಲ್ಲ. ಜೀವನಕ್ಕೆ ಸಂಯಮ ಕಲಿಸುವ ದಾರಿಯೇನೋ ಒಳ್ಳೆಯದು. ಆದರೆ ನೆವದಿಂದ ಜೀವನ ಶಕ್ತಿಗಳನ್ನು ಕೊಂದು ಹಾಕದೆ, ಅವುಗಳನ್ನು ಪಳಗಿಸಿಕೊಳ್ಳುವುದು ಯಥಾರ್ಥ ಕ್ರಮ. ಜಗತ್ತನ್ನು ಹುಲಿಯ ಬಾಯಲ್ಲಿ ಸಿಕ್ಕ ಹುಲ್ಲೆಯೆಂದೊ, ಸರ್ಪದ ಬಾಯಲ್ಲಿ ಸಿಕ್ಕ ಕಪ್ಪೆಯೆಂದೋ ಭಾವಿಸುವುದು ದುಃಖ ಮರಣಗಳನ್ನು ತಪ್ಪಿಸುವ ದಾರಿ ಹಿಡಿಸುವದಕ್ಕಾಗಿ ಮಾತ್ರ ಒಳ್ಳೆಯದು. ಆದರೆ ಸಂಸಾರವನ್ನು ಜೀವನವನ್ನು ಹದಗೆಡಿಸುವುದಕ್ಕಾಗಿ ಮಾತ್ರ ಸಲ್ಲದು.

ನೀನೆಲ್ಲಿಂದ ಬಂದಿ ?

ನಾವೆಲ್ಲರೂ ಈ ಭೂಮಿಗೆ ಬಂದುದು ಅದೊಂದೇದಾರಿಯಿಂದ. ಅಹುದು. ಅದು ಹೇಸಿಕೆಯ ದಾರಿ. ಕಿಸುಕುಳದ ಕೀವು ತುಂಬಿ ಒಸರುವದಾರಿ. ಹಸಿತೊಗಲಿನ ಹಳಿಗಾಯದ ದಾರಿ. ಆದರೆ ನಾವೆಲ್ಲರೂ ಹೋಗುವ ದಾರಿಮಾತ್ರ ಬೇರೆಬೇರೆಯಾಗಿದೆ. ನೆನಪಿರಲಿ. ಅಂಥ ಹೇಸಿಕೆಯ ದಾರಿಯಲ್ಲಿಯೇ ಬಂದ ರಾಮಕೃಷ್ಣರು, ಅವತಾರಿ ಎನಿಸಿದರು. ಕಿಸುಕುಳದ ಕೀವುತುಂಬಿ ಒಸರುವ ದಾರಿಯಿಂದಲೇ ಬಂದ ಬುಧ್ಧ-ಬಸವರು ಧರ್ಮಸ್ಥಾಪಕರಾದರು. ಹಸಿತೊಗಲಿನ ಹಳಿ ಗಾಯದಿಂದ ಬಂದವರೇ ಈ ಜಗತ್ತಿನಲ್ಲಿ ಸಂಸ್ಕೃತಿಯನ್ನು ಮೆರೆಸಿದರು; ಧರ್ಮರಾಜ್ಯವನ್ನು ಕಟ್ಟಿದರು; ಅನುಭಾವವನ್ನು ಸಂಗಳಿಸಿದರು. ಆದರೆ ಅವರೆಲ್ಲ ನರಕದ ಹುಳುಗಳೇ ಆಗಿಬಿಟ್ಟರೇ? ಕೆಸರಲ್ಲಿ ಹುಟ್ಟಕೊಂಡೇ ಕಮಲ ಮೇಲೆದ್ದು ಬಂದಿತು. ಕೆಸರಲ್ಲಿ ಹುಟ್ಟಿಕೊಂಡಿದ್ದು ಕಮಲದ ಕರ್ಮವೆನಿಸಿದರೆ, ಅದು ಮೇಲಕ್ಕೆದ್ದು ಮುಖವೆತ್ತಿ ನಿಂತಿದ್ದು ಪುಣ್ಯವೆನಿಸದೇ ? ಅಂಥ ಪುಣ್ಯವನ್ನು ಮೆರೆಸುವ ನಿರ್ಧಾರ ಕೈಕೊಳ್ಳುವುದಾದರೆ, ಕರ್ಮಕ್ಷಾಲನಕ್ಕಾಗಿ ಕೆಸರಲ್ಲಿ

ಇನ್ನೂ ಇದೆ

ಹುಟ್ಟಿಬರುವುದಕ್ಕೆ ಹಿಂದುಮುಂದು ನೋಡುವುದೇಕೆ ? ವಿಷಯ ಸುಖವನ್ನು ಒಲ್ಲಗೆಳೆಯುವ ಬುದ್ಧಿಬರಬೇಕಾದರೆ, ವ್ಯಕ್ತಿಗೆ ಆತ್ಮ ಸುಖದ ಸವಿ ಕಿಂಚಿತ್ತಾದರೂ ಸೋಂಕಿರಬೇಕು. ಆದ್ದರಿಂದ ಜೀವಿಗಳಿಗೆ ಆತ್ಮಸುಖದ ಸ್ವಾರಸ್ಯವನ್ನು ತೋರಿಸಿಕೊಡುವುದೇ ಜಗತ್ತಿನಲ್ಲಿ ಜ್ಞಾನಿಗಳು ಮಾಡಬೇಕಾದ ಮುಖ್ಯ ಕೆಲಸ. ವಿಷಯಸುಖವನ್ನು ಒಲ್ಲಗಳೆಯುವ ಬುದ್ಧಿಯುಂಟಾಗಬೇಕಾದರೆ, ಅದಕ್ಕೆ ಅಲ್ಲಗಳೆಯುವ ನುಡಿಗಳನ್ನು ಕೇಳಿಸಬೇಕು; ಬಿಂಬಿಸಬೇಕು. ಆ ಅರ್ಥದಲ್ಲಿ ಷಣ್ಮುಖ ಶಿವಯೋಗಿಗಳ ಈ ಮಾತು ತುಂಬ ಮಾರ್ಮಿಕವಾಗಿದೆ —

"ಬಣ್ಣದ ಚರ್ಮದ ಹೆಣ್ಣಿನ ಸಂಗದ ಕೂಟ
ಸುಖಸವಿಯೆಂದು ಮನವೆಳಸುವ ಕಣ್ಣಗೆಟ್ಟಣ್ಣಗಳು
ನೀವು ಕೇಳಿರೋ,
ತನ್ನ ಊರ್ಧ್ವಬಿಂದು ಮಾಯಾವಶದಿಂದ
ಅಧೋಗತಿಗಿಳಿದು ಮೂತ್ರನಾಳ ತಗುಲಿ
ಕಿಂಚಿತ್ ಸುಖವುಂಟಾಗುತಿಪ್ಪುದಲ್ಲದೆ
ಆ ಹೆಣ್ಣಿನಿಂದೇನು ಸುಖವುಂಟು ಎಡ್ಡಪ್ರಾಣಿಗಳಿರಾ ?
ಇಂತೀದೃಷ್ಟವ ತಿಳಿದು, ಭೇದಿಸಿ ಕಾಣಲರಿಯದೆ
ಹೇಸಿಕೆಯ ಕಿಸುಕುಳದ ಕೀವು ತುಂಬಿ ಒಸರುವ
ಹಸಿಯತೊಗಲಿನ ಗಾಯದಲಿ, ವಿಷಯಾತುರದಿಂದ ಬಿದ್ದು
ಮತಿ ಮಸುಳಿಸಿ ಮುಂದುಗಾಣದೆ
ಮುಳುಗಾಡುತಿಪ್ಪುದು ನೋಡಾ ಮೂಜಗವೆಲ್ಲಾ
ಅಖಂಡೇಶ್ವರ".

ಶಿವನು ಲೀಲೆಗಾಗಿ ಈ ಏರ್ಪಾಡು ಮಾಡಿರುವನಲ್ಲದೆ, ಜೀವರ ಮೇಲಿನ ಹುನಸಿನಿಂದಲ್ಲ. ಒಮ್ಮೆ ಜ್ಞಾನಿಯೆನಿಸಿ ಇನ್ನೊಮ್ಮೆ ಅಜ್ಞಾನಿಯೆನಿಸುವನು. ಒಮ್ಮೆ ಸಂತೋಷದಲ್ಲಿರಿಸಿ, ಇನ್ನೊಮ್ಮೆ ಚಿಂತೆಯಲ್ಲಿರಿಸುವನು. ಅದಕ್ಕೆ ಭಕ್ತನು — "ಎನ್ನನೇತಕೆ ಕಾಡುವೆ ಹೇಳಯ್ಯ? ಎಂದು ಕೇಳುವನು.

"ಮರ್ಕಟನಂತೆ ಎನ್ನಮನವ
ವ್ಯಾಕುಲದಲ್ಲಿ ಹುಚ್ಚುಗೊಳಿಸಿ
ಎನ್ನನೇತಕೆ ಕಾಡುವೆ ಹೇಳಯ್ಯ ?
ನಿಮಗೆ ಹೊತ್ತು ಹೋಗದೆ
ಮತ್ತೊಂದು ವ್ಯಾಪಾರವಿಲ್ಲವೆ
ಎನ್ನಕೂಡೆ ಹದುರುಚದುರಿನಿಂದೆ
ವೇಳೆಯ ಕಳೆವರೆ ಹೇಳಾ ಅಖಂಡೇಶ್ವರಾ"

"ನೀನೆಲ್ಲಿಂದ ಬಂದಿ" ಎಂಬ ಸಮಸ್ಯೆಯಂತೆ, "ನೀನೆಲ್ಲಿಗೆ ಹೊರಟೆ" ಎನ್ನುವ ಸಮಸ್ಯೆಯೂ ಜಟಿಲವಾಗಿದೆ. ಆಟದ ಹೊತ್ತಿನಲ್ಲಿ ಆಡಿಸುವ, ಪಾಠದ ಹೊತ್ತಿನಲ್ಲಿ ಓದಿಸುವ ಲೋಕಶಿಕ್ಷಕನಿರುವಾಗ ಆಟ-ಪಾಠಗಳಲ್ಲಿ ನಾವು ಆಸಕ್ತಿ ವಹಿಸಬೇಕಾಗುತ್ತದೆ. ಆಟದಲ್ಲಿ ಸೋಲು ಗೆಲುವು ಅನಿವಾರ್ಯ. ಸೋಲಿಲ್ಲದ ಆಟವೇ ಇಲ್ಲ. ಜಟಿಲವೆನಿಸದ ಪಾಠವೇ ಇಲ್ಲ. ತಿಳಿಯದ ವಿಷಯವನ್ನು ತಿಳಕೊಳ್ಳುವದಕ್ಕೆ ಪ್ರಯತ್ನಿಸುವುದೇ ಪಾಠವಲ್ಲವೇ ? ಅದು ಕಠಿಣವೆನಿಸಬಹುದು, ಜಟಿಲವೆನಿಸಬಹುದು. ತಿಳಿದ ವಿಷಯವನ್ನು ಕಲಿಯುವ ಸಂದರ್ಭವೇ ಇಲ್ಲವೆಂದಾಗ ಅಲ್ಲಿ ಬಿಗಿ-ಗಡಚುಗಳ ಸಮಸ್ಯೆಯೇ ಇಲ್ಲ.

ಶಾಲೆಯೆಂದರೆ ಶಿಕ್ಷಕ ವಿದ್ಯಾರ್ಥಿಗಳ ಸೇರುವೆ. ಶಿಕ್ಷಕನು ಹತ್ತಿರವಿರುವಾಗ ವಿದ್ಯಾರ್ಥಿ ಭಯಪಡುವುದೇಕೆ ? "ನಾನಿಹ ಪರಿಯಂತ ನೀನುಂಟು. ನೀನಿಹ ಪರಿಯಂತ ನಾನುಂಟು".

ನಲ್ಲನ ಭಾವಚಿತ್ರ

ಷಣ್ಮುಖ ಶಿವಯೋಗಿಗಳು ಭಕ್ತಿ ನಮ್ರತೆಯಿಂದ ಲಿಂಗಪತಿಗೆ ಶರಣ ಸತಿಯಾಗಿ, ಒಲುಮೆ ಗಳಿಸಿಕೊಂಡಿದ್ದು ಸುಳ್ಳಲ್ಲ. ಲಿಂಗಪತಿಯ ತುಟಿಗೆ ತುಟಿಯಿಟ್ಟು ಮುದ್ದು ಸವಿದಿದ್ದಾರೆ. ಮೈಗೆ ಮೈಯಪ್ಪಿ ದಿವ್ಯ ಸ್ಪರ್ಶದ ಸುಖವನ್ನುಂಡಿದ್ದಾರೆ. "ಬಾಯೊಳಗೆ ಬಾಯಿಕ್ಕಿ, ಎದೆಗೆ ಎದೆ ತಕ್ಕೈಸಿ, ಮೈಗೆ ಮೈ ಹೊಂದಿಸಿ ಕೂಡಿದ ಅಖಂಡೇಶ್ವರನ ಸುಖವು ಜೇನು ಸಕ್ಕರೆ ಸವಿದ"ದ್ದು ಪೂರ್ಣ ಸತ್ಯ. ಲಿಂಗಕೂಟದ ಸುಖವನ್ನು ಅವರು, ಶೃಂಗಾರಯುಕ್ತವಾಗಿ ಬಣ್ಣಿಸಿದ್ದು ಹೇಗೆಂದರೆ—

"ನಲ್ಲನ ಕೂಡಿದ ಸುಖವೆಲ್ಲವ ಮೆಲ್ಲನೆ ಉಸುರುವೆ ಕೇಳಿರವ್ವ
ಏಳು ನೆಲೆಯ ಮಣಿಮಾಣಿಕ್ಯ ಮಂಟಪದುಪ್ಪರಿಗೆಯ ಮೇಲೆ
ಚಪ್ಪರ ಮಂಚವ ಹಾಸಿ
ಒಪ್ಪುವ ಊಟವ ನೀಡಿ
ಕರ್ಪೂರ ವೀಳ್ಯವ ತೊಟ್ಟು
ಲಜ್ಜೆಗೆಟ್ಟು, ನಾಚಿಕೆತೊರೆದು, ತನುಜಜ್ಜರಿತವಾಗಿ
ತೆಕ್ಕೆ ಚುಂಬನಾದಿಗಳಿಂದ ಅಮರ್ದಪ್ಪಿ
ಅಸ್ತಿಗಳು ನುಗ್ಗುನುರಿಯಾಗಿ
ಮನದ ಪರಿಣಾಮು ಹೊರಹೊಮ್ಮಿ
ಪರಮಾನಂದದ ಮಹಾಪರಿಣಾಮದ ಸುಗ್ಗಿಯೊಳಗೆ
ಪರವಶಗೊಂಡಿರ್ದೆನು ಅಖಂಡೇಶ್ವರನೆಂಬ ನಲ್ಲನ ಕೂಡಿ"

ನಲ್ಲನ ಅಂತರಂಗವನ್ನರಿತ ಶರಣಸತಿ, ಆತನ ನಲುಮೆಯೊಲುಮೆಗಳ ಸ್ವಾರಸ್ಯವನ್ನು ತಿಳಿದ ಸರಣಸತಿ, ಆತನ ಸಹವಾಸದ ಸಹಜಾನಂದವನ್ನು ಸಹಜವಾಗಿ ಸವಿಯುವ ಶರಣಸತಿ, ತನ್ನೆದುರಿಗೆ ಆತನ ಭಾವಚಿತ್ರವನ್ನೂ ಇರಿಸಿಕೊಳ್ಳಲು ಮರೆತಿಲ್ಲ. ಅದನ್ನು ಬಣ್ಣಬಣ್ಣದ ಶಬ್ದಗಳಿಂದ ಚಿತ್ರಿಸಿಕೊಂಡಿದ್ದಾಳೆ. ಅದು ಪ್ರತ್ಯಕ್ಷನಲ್ಲನನ್ನು ತಂದು ನಿಲ್ಲಿಸಲಾರದಾದರೂ ನಲ್ಲನ ರೂಪವನ್ನು ಕಣ್ಣಮುಂದೆ ಕಟ್ಟಿ ನಿಲ್ಲಿಸಿದೆ. ಅದನ್ನು ಅರಿತುಕೊಳ್ಳೋಣ —

"ಅಖಂಡಜ್ಞಾನಭರಿತ ಶರಣಂಗೆ ಪೃಥ್ವಿಯೆ ಖಟ್ವಾಂಗ
ಆಕಾಶವೇ ಕಿರೀಟ, ಮೇಘಾದಿಗಳೇ ಮಜ್ಜನ.
ನಕ್ಷತ್ರಗಳೇ ಪುಷ್ಪಮಾಲೆಗಳು, ವೇದಗಳೇ ಮುಖಂಗಳು.
ಶಾಸ್ತ್ರಂಗಳೇ ಅವಯವಗಳು.
ಸೋಮಸೂರ್ಯಾದಿಗಳೇ ನಯನಂಗಳು
ದಶದಿಕ್ಕುಗಳೇ ಹೊದಿಕೆಗಳು.
ಬ್ರಹ್ಮಾಂಡವೇ ಒಡಲಾದ ಮಹಾಮಹಿಮನ
ಏನೆಂದು ರಮಿಸಬಹುದಯ್ಯ ಅಖಂಡೇಶ್ವರ".

ಶಿವಯೋಗಿಗಳ ಮನಕ್ಕೆ ಬಂದ ನಲ್ಲ–ಅಖಂಡೇಶ್ವರನೆಂಬ ಹೆಸರಿನಲ್ಲಿ ಜಗದಗಲ, ಮುಗಿಲಗಲ, ಮಿಗೆಯಗಲವಾಗಿ ನಿಂತ ಈ ಭಾವ ಚಿತ್ರವನ್ನು ಕಂಡಮಾತ್ರಕ್ಕೆ ಆತನ ದರ್ಶನಲಾಭವಾಗುತ್ತದೆ. ನಲ್ಲನನ್ನು ಪ್ರತ್ಯಕ್ಷ ಕಾಣುವುದಕ್ಕೆ ಸಾಧ್ಯವಿಲ್ಲದಿರುವಾಗ ಈ ಭಾವಚಿತ್ರವನ್ನು ಕಂಡು ಸಂತೃಪ್ತರಾಗಬಹುದಾಗಿದೆ. ಅಂತೆಯೇ "ನೀನು ಎನ್ನಗಲಿದೊಡೆ ಗುರುದ್ರೋಹಿ. ಆನು ನಿನ್ನಗಲಿದರೆ ಸಮಯಕ್ಕೆ ಹೊರಗು" ಎಂದು ಖಡಾಖಂಡಿತವಾಗಿ ಹೇಳಿದ್ದಾಳೆ ಶರಣ ಸತಿ.

ವಚನ ರಚನೆಯ ಕಾಯಕ

ಬರೆಯಬೇಕೆಂದು ಬರೆದ ಬರವಣಿಗೆಯಲ್ಲ ವಚನರಚನೆ, ಛಂದೋಬದ್ಧವಾಗಿರಲಿಕ್ಕಿಲ್ಲ. ಆದರೆ ಅದರಲ್ಲಿ ಕವನದ ಕಮನೀಯತೆಯಿದೆ, ಗದ್ಯದ ಬೆಡಗಿದೆ, ಬೆರಗೂ ಇದೆ. ಗದ್ಯವೂ ಅಲ್ಲದ ಪದ್ಯವೂ ಅಲ್ಲದ ವೃತ್ತಗಂಧಿಯೆಂದರೂ ವಚನದ ಅರ್ಥ ಪೂರ್ಣವಾಗದು. ಗದ್ಯವಾಗಿಯೂ ಪದ್ಯಾತ್ಮವನ್ನು ಪಡೆದ ಕೃತಿಗೆ ವಚನವೆಂದರಾದೀತು. ಆದರೆ ಅದಕ್ಕೆ ಅನುಭಾವದ ಉಸಿರೇ ಜೀವಾಳವಾಗಿದೆ. ಅದಿಲ್ಲದಿದ್ದರೆ ಅದು ನಿರ್ಜೀವ ಕೃತಿಯೇ. ಷಣ್ಮುಖ ಶಿವಯೋಗಿಗಳು ಬಸವಣ್ಣನವರ ಜೀವನವನ್ನು ಆದರ್ಶವಾಗಿರಿಸಿಕೊಂಡಂತೆ, ಅವರ ವಚನರಚನೆಯನ್ನೂ ಕಣ್ಣಮುಂದೆ ಇರಿಸಿಕೊಂಡಿದ್ದಾರೆ. ಬಸವಣ್ಣನ ಹಾಗೂ ಅಕ್ಕಮಹಾದೇವಿಯ ವಚನಗಳನ್ನು ಶಿವಯೋಗಿಗಳು ಅರೆದು ಕುಡಿದು ಅರಗಿಸಿಕೊಂಡಿದ್ದಾರೆಂದರೂ ಸಲ್ಲುವದು. ಹಾಗೆ ಮಾಡಿದ್ದನ್ನು ಅವರು ಬಿಟ್ಟ ತೇಗಿನಿಂದ ಗುರುತಿಸಬಹುದಾಗಿದೆ. ಅಕ್ಕ–ಅಣ್ಣಗಳ ವಚನಗಳನ್ನು ಮೈಗೂಡಿಸಿಕೊಂಡು, ಮನಗೂಡಿಸಿಕೊಂಡು ತಮ್ಮ ಭಾಷೆಯಲ್ಲಿ ಹೇಳಿದರೇನೋ ಎನ್ನುವಂತೆ ಹಲವು ಸಾರೆ ಅನಿಸುತ್ತದೆ. ಸಾಕಷ್ಟು ಉದಾಹರಣೆಗಳನ್ನು ಇಲ್ಲಿ ಒದಗಿಸಬಹುದು. ನಿರೂಪಣೆಯಲ್ಲಿ, ಶೈಲಿಯಲ್ಲಿ ಅನೇಕ ವಚನಗಳು ಅಕ್ಕನ ಹಾಗೂ ಅಣ್ಣನ ವಚನಗಳಿಗೆ ಹೋಲುತ್ತವೆ.

"ನೀನೊಲಿದರೆ ಕೊರಡು ಕೊನರುವದಯ್ಯ
ನೀನೊಲಿದರೆ ಬರಡು ಹಯನವಹುದಯ್ಯ
ನೀನೊಲಿದರೆ ವಿಷವು ಅಮೃತವಹುದಯ್ಯ
ಕೂಡಲ ಸಂಗಮದೇವಾ, ನೀನೊಲಿದರೆ
ಸಕಲ ಪಡಿಪದಾರ್ಥಗಳೆಲ್ಲ ಮುಂದೆ ಬಂದಿಪ್ಪವು ನೋಡಾ".

ಇದು ಬಸವಣ್ಣನ ವಚನವೆನ್ನುವುದು ಎಲ್ಲರಿಗೂ ಗೊತ್ತು. ಇದರೊಡನೆ ಷಣ್ಮುಖ ಶಿವಯೋಗಿಗಳ ಈ ಕೆಳಗಿನ ವಚನವನ್ನು ಹೋಲಿಸಿ ನೋಡಬಹುದಾಗಿದೆ.

"ನೀನೊಲಿದರೆ ಕಲ್ಲೆಲ್ಲ ಕನಕವಯ್ಯಾ !
ನೀನೊಲಿದರೆ ಹುಲ್ಲೆಲ್ಲ ರಾಜಾನ್ನವಯ್ಯಾ !
ನೀನೊಲಿದರೆ ಕೊರಡೆಲ್ಲ ಕಲ್ಪವೃಕ್ಷವಯ್ಯಾ !
ನೀನೊಲಿದರೆ ಬರಡೆಲ್ಲ ಕಾಮಧೇನುವಯ್ಯಾ !
ನೀನೊಲಿದರೆ ಏನುಂಟು ಏನಿಲ್ಲವಯ್ಯಾ ಅಖಂಡೇಶ್ವರಾ !"

ಮೇಲೆ ಕಾಣಿಸಿದ ಎರಡೂ ವಚನಗಳಲ್ಲಿ ಸಮಭಾವದೊಡನೆ, ಸಮಛಂದಸ್ಸನ್ನೂ ಕಾಣಬಹುದಾಗಿದೆ. ಶ್ರೀ ಸಿದ್ದಯ್ಯಪುರಾಣಿಕರು ಹೇಳಿದಂತೆ, "ಇಲ್ಲಿ **ಕೊರಡು ಬರಡು**ಗಳ ಜೊತೆಗೆ ಕಲ್ಲು–ಹುಲ್ಲುಗಳು ಹೊಸದಾಗಿ ಸೇರಿವೆ....ನೀನೊಲಿಯುವುದೇ ತಡ,ಆ ಕ್ಷಣದಲ್ಲಿ ಕಲ್ಲೆಲ್ಲ ಕನಕ, ಹುಲ್ಲೆಲ್ಲ ರಾಜಾನ್ನ, ಕೊರಡೆಲ್ಲ ಕಲ್ಪವೃಕ್ಷ, ಬರಡೆಲ್ಲ ಕಾಮ–ಧೇನು —ಎಂದು ಮಾರ್ಮಿಕವಾದ ಮಾರ್ಪಾಟನ್ನು ಮಾಡಲಾಗಿದೆ. ಅದರಿಂದ ಸಮಗ್ರ ವಚನದ ಪರಿಣಾಮ - ರಮಣೀಯತೆಯನ್ನು ಹೆಚ್ಚಿಸಲಾಗಿದೆ".

"ಚಿಲಿಮಿಲಿಯೆಂದೋದುವ ಗಿಳಿಗಳಿರಾ, ನೀವು ಕೇಳಿರೇ ಕೇಳಿರೇ" ಎಂದು ಆರಂಭಗೊಳ್ಳುವ ಅಕ್ಕಮಹಾದೇವಿಯ ವಚನ ಸರ್ವ ಪರಿಚಿತ. ಅದೇ ಜಾಡಿನಲ್ಲಿ ಮೂಡಿ ಬಂದ ಷಣ್ಮುಖ ಶಿವಯೋಗಿಗಳ ವಚನವನ್ನು ಇಲ್ಲಿ ಇಡಿಯಾಗಿ ವಿವರಿಸಿದೆ—

"ಅರಳಿಯ ಮರದೊಳಗಿನ ಅರಗಿಳಿಗಳಿರಾ
ನಮ್ಮ ಅಖಂಡೇಶ್ವರನ ಕಂಡರೆ ಹೇಳಿರೇ
ಮಾವಿನ ಮರದೊಳಗೆ ಕೂಗುವ ಕೋಗಿಲೆಯ ಹಿಂಡುಗಳಿರಾ
ನಮ್ಮ ನಾಗಭೂಷಣನ ಕಂಡರೆ ಹೇಳಿರೇ
ಕೊಳನ ತೀರದಲ್ಲಾಡುವ ಕರಹಂಸಗಳಿರಾ
ನಮ್ಮ ಎಳೆಯ ಚಂದ್ರಧರನ ಕಂಡರೆ ಹೇಳಿರೇ
ಮೇಘಧ್ವನಿಗೆ ಕುಣಿವ ನವಿಲುಗಳಿರಾ
ನಮ್ಮ ಅಖಂಡೇಶ್ವರನೆಂಬ ಅವಿರಳ ಪರಶಿವನ
ಕಂಡರೆ ಹೇಳಿರೇ"

ಇದು ದೋಷವಲ್ಲ, ಗಾಢವಾದ ಅನುಸರಣೆ, ಗೂಢವಾದ ಅನುಕರಣೆ ಇವುಗಳ ಫಲವೆನ್ನಬೇಕು. "ತಂದೆ ನೀನೆ ಅಯ್ಯ ಎನಗೆ, ತಾಯಿ ನೀನೆ ಅಯ್ಯ ಎನಗೆ" ಎಂಬ ಅಖಂಡೇಶ್ವರ ವಚನವು, ಬಸವಣ್ಣನವರ "ತಂದೆ ನೀನು, ತಾಯಿ ನೀನು " ಎಂಬ ವಚನವನ್ನು ಹೋಲುತ್ತಿದ್ದರೂ ಛಂದಬಂಧಗಳು ಬೇರೆ ಬೇರೆ ಆಗಿವೆ.

ಷಣ್ಮುಖ ಶಿವಯೋಗಿಗಳು (1637 ರಿಂದ 1701 ರ ವರೆಗೆ) ಎಪ್ಪತ್ತೆರಡು ವರ್ಷ ಬದುಕಿ, ಲೋಕಸಂಗ್ರಹ ಕಾರ್ಯದ ಮೂಲಕ, ಸಕಲ ಜನರಿಗೆ ಲೇಸನ್ನೇ ಒದಗಿಸುವ 717 ವಚನಗಳನ್ನೂ, 41 ಜೋಗುಳ ಪದಗಳನ್ನೂ ಅಖಂಡೇಶ್ವರ ಎಂಬ ಮುದ್ರಿಕೆಯಲ್ಲಿ ರಚಿಸಿದ್ದಾರೆ.

ಅಖಂಡೇಶ್ವರ ವಚನಗಳು ಬಹು ಜನರ ಬಳಕೆಯಲ್ಲಿವೆಯೆಂದು ಹೇಳಲಾಗುತ್ತದೆ. ಪುರಾತನರು ಪುರಂತ ಕುಣಿಯುವಾಗ ಹೆಚ್ಚಾಗಿ ಅಖಂಡೇಶ್ವರ ವಚನಗಳನ್ನೇ ಉಪಯೋಗಿಸುತ್ತಾರಂತೆ. ಬಲ್ಲವರು ಹೇಳುವಂತೆ, ಯೋಗ–ಶಿವಯೋಗಗಳ ಸಾಧನೆಯಿಂದ ಕುಂಡಲಿನಿ ಅಂದರೆ ಲಿಂಗಶಕ್ತಿ ಜಾಗ್ರತಗೊಳ್ಳಲು ಪ್ರಾಪ್ತವಾಗುವ ವಾಕ್‌ಸಿದ್ಧಿಯಿಂದ ರಚಿತವಾದ ಹಾಗೂ ಅಕ್ಕಮಹಾದೇವಿಯ ವಚನಗಳಂತೆ

ಕಾವ್ಯಮಯವಾದ ವಚನಗಳು ಸರಳ–ಸುಗಮವಾಗಿರುವುದರಿಂದ ಅವು ಜನರಲ್ಲಿ ಹೆಚ್ಚಾಗಿ ಬಳಕೆಯಲ್ಲಿ ಬಂದಿರುವವೆಂದು ಹೇಳಬಹುದು. ಅದು ಹಸಿದ ಕರುವಿಗೆ ತೊರೆವು ಬಿಟ್ಟ ಆಕಳು ಸಂಧಿಸಿದಂತಾಗಿದೆ.

ಜಯಪತ್ರ

"ಗುಹೇಶ್ವರನ ಗುಟ್ಟು, ಮಡಿವಾಳೇಶನ ಪಟ್ಟು, ಅಖಂಡೇಶ್ವರನ ಕಟ್ಟು" ಎಂಬ ನಾಣ್ಣುಡಿಯು ಜೇವರಗಿ ಭಾಗದಲ್ಲಿ ಇಂದಿಗೂ ಪ್ರಚಲಿತವಿದೆಯೆಂದು ತಿಳಿದಿದೆ. ಆ ಲೋಕೋಕ್ತಿಯೆಂದರೆ ಜನತೆ ವಚನಕಾರನಿಗಿತ್ತ ಜಯಪತ್ರವೆಂದೇ ಹೇಳಬೇಕು. ಶಿವಯೋಗಿಗಳ ಜೀವನದಲ್ಲಿ, ಸಾಧನದಲ್ಲಿ, ಕಾರ್ಯನಿರ್ವಹಣೆಯಲ್ಲಿ ಸಾಮರಸ್ಯವೇ ಜೀವಾಳವಾಗಿರುವುದನ್ನು ಸ್ಪಷ್ಟವಾಗಿ ಕಂಡಿದ್ದಾಯಿತು. ಅವರ ವಚನಗಳು ಅಂದಿನ ಇಂದಿನ ವಚನಗಳ ಭಾಷೆ-ಶೈಲಿಗಳಲ್ಲಿ ಸಾಮರಸ್ಯವನ್ನು ಕಾಪಾಡಿಕೊಂಡು ಬಂದಿದೆ. ಅವರು ಆಗಾಗ ಆದಿಜನರ ಕೇರಿಗೆ ನಡೆದು ಹೋಗಿ, ಅಲ್ಲಿ ಪ್ರವಚನ ಮಾಡುತ್ತಿದ್ದರೆಂದೂ, ಅವರ ಭವಿತನವನ್ನು ತೊಡೆದು ಹಾಕಲು ದೀಕ್ಷೆ ನೀಡುತ್ತಿದ್ದರೆಂದೂ ನಿಸ್ಸಂಶಯವಾಗಿ ತಿಳಿದು ಬಂದಿದೆ.

ಜೇವರಗಿ ಮಠದಲ್ಲಿ ಅಖಂಡೇಶ್ವರನ ತಪಃ ಪ್ರಭಾವವು ಶಿಷ್ಯ ಪರಂಪರೆಯಲ್ಲಿ ಪ್ರವಹಿಸಿ, ಸಾಮಂಜಸ್ಯವನ್ನು ತೋರ್ಪಡಿಸುತ್ತ ಬಂದಿದೆ. ಷಣ್ಮುಖ ಶಿವಯೋಗಿಗಳನ್ನು ಕುರಿತು, ಆ ಭಾಗದಲ್ಲಿ ಜಾನಪದ ಗೀತೆಗಳು ಸಿಗಬಹುದೆಂದು ಹೇಳುತ್ತಾರೆ. ಅವರು ಲೋಕ ಜಂಜಡದಿಂದ ದೂರರಾದ ಶಿವಯೋಗಿಗಳಾಗಿದ್ದರೂ ಲೋಕ ಹಿತವನ್ನು ಮರೆತಿರಲಿಲ್ಲ. ಆತ್ಮ ಕಲ್ಯಾಣದೊಡನೆ ಲೋಕ ಕಲ್ಯಾಣವನ್ನೂ ಸಾಧಿಸಿದ್ದಾರೆ. ಅವರ ವಚನಗಳು ಅಜರಾಮರವಾದಂತೆ, ಅವರ ತಪೋಭೂಮಿಯಾದ ಜೋಗಿಕೊಳ್ಳವನ್ನೂ, ಅವರ ಗುರುಸ್ಥಾನವಾದ ಅಖಂಡೇಶ್ವರ ಮಠವನ್ನೂ ಯಾರೂ ಮರೆಯಲಾರರು. ಶಿವಯೋಗಿಗಳಿಂದ ರಚಿತವಾಗಿ ನಾಡಿಗರ ನಾಲಗೆಯ ಮೇಲೆ ಇಂದಿಗೂ ನಲಿಯುತ್ತಿರುವ ಜೋಗುಳದ ಮಾದರಿಯೊಂದನ್ನು ತಿಳಿಯಬೇಡವೇ ?

"ಜೋ ಜೋ ಆದಿ ಮಧ್ಯಾಂತ ದೂರ
ಜೋ ಜೋ ವೇದವೇದಾಂತ ಸಾರ
ಜೋ ಜೋ ನಾದ ಬಿಂದು ಕಳೆಪೂರ
ಜೋ ಜೋ ತತ್ತ್ವಜ್ಞಾನ ಶೃಂಗಾರ। ಜೋ ಜೋ ॥

ಹರಿಹರ ಕವಿಯ ಕಾವ್ಯದ ಹಿನ್ನೆಲೆ ಮತ್ತು ಆತನ ಆತ್ಮಚರಿತ್ರೆ

ಲೇಖಕರು :
ಪ್ರೊ. ತ. ಸು. ಶಾಮರಾವ್, ಎಂ.ಎ.,
ಮೈಸೂರು

ಹನ್ನೆರಡನೆಯ ಶತಮಾನವೆಂಬುದು ಕರ್ಣಾಟಕದ ಧಾರ್ಮಿಕ ಇತಿಹಾಸದಲ್ಲಿ ಒಂದು ಪ್ರಮುಖವಾದ ಘಟ್ಟ; ಅದರಂತೆಯೇ ಕನ್ನಡ ಸಾಹಿತ್ಯದ ಇತಿಹಾಸದಲ್ಲಿಯೂ ಅದು ಗಮನಾರ್ಹವಾದ ಒಂದು ನೂತನ ಯುಗ. ಎರಡರಲ್ಲಿಯೂ ಕೋಲಾಹಲಕರವಾದ ಕ್ರಾಂತಿಯೊಂದು ಈ ಕಾಲದಲ್ಲಿ ನಡೆಯಿತು. ಒಂದಾನೊಂದು ಕಾಲದಲ್ಲಿ ಭರತಖಂಡವನ್ನೆಲ್ಲಾ ಆಕ್ರಮಿಸಿದ್ದ ಬೌದ್ಧಮತವು ಹನ್ನೆರಡನೆಯ ಶತಮಾನದ ವೇಳೆಗೆ ನಾಮಾವಶೇಷವಾಗಿ ಹೋಯಿತು. ಹಲವು ಕಾಲ ಕನ್ನಡ ನೆಲದ ಮೇಲೆ ತನ್ನ ಸಾರ್ವಭೌಮತ್ವವನ್ನು ಸ್ಥಾಪಿಸಿಕೊಂಡಿದ್ದ ಜೈನಮತವೂ ಆ ವೇಳೆಗೆ ಚೋಳರ ದಾಳಿಗೆ ಸಿಕ್ಕಿ ನೆಲಹಿಡಿದಿತ್ತು. ಮತ್ತೊಮ್ಮೆ ತಲೆಯೆತ್ತಲೆಂದು ಆಗಾಗ ಅದು ಯತ್ನಿಸಿತಾದರೂ ಪೂರ್ವದ ಮಹತ್ತನ್ನು ಮತ್ತೆ ಗಳಿಸಿಕೊಳ್ಳಲು ಅದಕ್ಕೆ ಸಾಧ್ಯವಾಗಲಿಲ್ಲ. ಅನಾದಿಕಾಲದಿಂದಲೂ ಪರಂಪರೆಯಾಗಿ ಹರಿದು ಬರುತ್ತಿದ್ದ ವೈದಿಕ ಮತವು ತನ್ನ ಧರ್ಮತತ್ವಗಳ ಉದಾತ್ತತೆಯನ್ನು ಎಂದೋ ಕಳೆದುಕೊಂಡು, ಹೂರಣಕ್ಕಿಂತ ಕಣಕವೇ ಮಿಗಿಲು ಎನ್ನುವಂತೆ, ತತ್ವಗಳಿಗಿಂತ ಮಿಗಿಲಾಗಿ ಸಂಪ್ರದಾಯಾಚರಣೆಗೆ ಆ ಮತ ಶರಣಾಗಿ ಮಾರುಹೋಗಿತ್ತು. ಸಮಾಜದ ನಾಯಕ ಪಟ್ಟವನ್ನು ವಹಿಸಿದ್ದ ಬ್ರಾಹ್ಮಣಮತ ತನ್ನ ಅರ್ಥಹೀನವಾದ ನಡವಳಿಕೆ, ಆಚಾರ, ಮಡಿವಂತಿಕೆ, ಡಾಂಭಿಕತನ, ಜಾತೀಯತೆ, ದಬ್ಬಾಳಿಕೆ ಮೊದಲಾದ ಹೀನ ಗುಣಗಳಿಂದ ತನ್ನ ಮತಾನುಯಾಯಿಗಳಿಗೆ ಬೇಸರ ಹುಟ್ಟಿಸಿತೆಂದು ತೋರುತ್ತದೆ. ಹೀಗಾಗಿ, ಧರ್ಮ ಜಗತ್ತಿನಲ್ಲಿ ಒಂದು ಕ್ರಾಂತಿ ಅನಿವಾರ್ಯವಾಯಿತು. ಈ ಕ್ರಾಂತಿಗೆ ನಾಂದಿಯನ್ನು ಹಾಡಿದವರು ಬ್ರಾಹ್ಮಣರೇ ಎಂಬುದು ಇಲ್ಲಿ ಗಮನಾರ್ಹವಾದುದು. ಹರಿಪಾರಮ್ಯವನ್ನು ಸಾರುತ್ತಿದ್ದ ಬ್ರಾಹ್ಮಣ ಪಂಥದಿಂದ ಹೊರಬಂದ ರಾಮಾನುಜಾಚಾರ್ಯರು ಶ್ರೀವೈಷ್ಣವ ಅಥವಾ ವಿಶಿಷ್ಟಾದ್ವೈತ ಪಂಥಕ್ಕೆ ಮೂಲಪುರುಷರಾದರು; ಹರಪಾರಮ್ಯವನ್ನು ಘೋಷಿಸುತ್ತಿದ್ದ ಬ್ರಾಹ್ಮಣ ಪಂಥದಿಂದ ಸಿಡಿದುಬಂದ ಬಸವಣ್ಣನವರು ವೀರಶೈವ ಅಥವಾ ಶಕ್ತಿವಿಶಿಷ್ಟಾದ್ವೈತ ಪಂಥದ ನಾಯಕರಾದರು. ಮೇಲಿನ ಎರಡು ಪಂಥಗಳೂ ತಮ್ಮ ಮೂಲಕ್ಕಾಗಿ ಪ್ರಪ್ರಾಚೀನತೆಯ ಕಗ್ಗತ್ತಲಲ್ಲಿ ಕೈನೀಡಿ ತಡವರಿಸುತ್ತಿವೆಯಾದರೂ ಅವುಗಳ ಸ್ಪಷ್ಟ ಅಭಿವ್ಯಕ್ತತೆ ಹನ್ನೆರಡನೆಯ ಶತಮಾನದಲ್ಲಿ ಕಂಡುಬರುತ್ತದೆ. ಮತ ಪ್ರಕ್ರಿಯಗಳಲ್ಲಿ ಎರಡಕ್ಕೂ ಭಿನ್ನತೆ ಕಾಣಬರುವುದಾದರೂ ಈ ಎರಡರ ಧ್ಯೇಯ ಮಾತ್ರ ಒಂದೇ—ಮೋಕ್ಷದ ಹೆದ್ದಾರಿಗೆ ಮುಳ್ಳು ಬೇಲಿಯಾಗಿದ್ದ ವರ್ಣಭೇದದ ನಿರಸನ. ಮಾನವ ಪ್ರೇಮ, ಸರ್ವ ಸಮಾನತೆ, ದೈವಭಕ್ತಿ, ನೈತಿಕ ಜೀವನ ಇತ್ಯಾದಿ ಗುಣಲಕ್ಷಣಗಳು ಈ ಎರಡು ಧರ್ಮಗಳಿಗೂ ಸಮಾನವಾಗಿವೆ. ಈ ಮತ ಧರ್ಮಗಳ ಧರ್ಮಧ್ವಜದಡಿಯಲ್ಲಿ ಎಲ್ಲ ಜಾತಿ ಮತ ಪಂಥದವರಿಗೂ ಸಮಾನತೆ ದೊರೆಯಿತು.

ಧರ್ಮ ಜಗತ್ತಿನಲ್ಲಿ ಮೂಡಿದ ಕ್ರಾಂತಿ ಸಾಹಿತ್ಯ ಜಗತ್ತನ್ನೂ ಪ್ರವೇಶಿಸಿತು. ರಾಮಾನುಜಾಚಾರ್ಯರು ತಮಿಳುನಾಡಿನವರು; ಅವರಿಂದ ಆ ಭಾಷೆಗಾದ ಸಹಾಯ ಇಲ್ಲಿ ಅಪ್ರಕೃತ. ಬಸವಣ್ಣನವರಾದರೊ ಹದಿನಾರಾಣೆ ಕನ್ನಡಿಗರು. ಕನ್ನಡನಾಡು, ನುಡಿ, ಜನ, ಜೀವನಕ್ಕೆ ಅವರಿಂದಾದ ಸಹಾಯ ನ ಭೂತೊ ನ ಭವಿಷ್ಯತಿ. ಧರ್ಮ ಜಗತ್ತಿನಲ್ಲಿ ಅವರು ಊದಿದ ಕ್ರಾಂತಿಯ ಕಹಳೆ ಕನ್ನಡ ಸಾಹಿತ್ಯ ಜಗತ್ತಿನಲ್ಲಿಯೂ ಮಾರ್ಮೊಳಗಿತು. ಅಂದಿನವರೆಗೆ ಬೆಳೆದುಬಂದಿದ್ದ ಕನ್ನಡ ಸಾಹಿತ್ಯ ಕೇವಲ ಸಂಸ್ಕೃತದ ಛಾಯೆಮಾತ್ರ. ವಸ್ತು ಮತ್ತು ರೀತಿಯಲ್ಲಿ, ಭಾವ ಮತ್ತು ಭಾಷೆಯಲ್ಲಿ ಅದುವರೆಗೆ ಬೆಳೆದುಬಂದ ಸಾಹಿತ್ಯವೆಲ್ಲಾ ಸಂಸ್ಕೃತ ಕಾವ್ಯಗಳ ಅನುಕರಣೆ, ಅನುಸರಣೆ. ಸಾಹಿತ್ಯದ ಉಗಮಸ್ಥಾನವೆಂದರೆ ರಾಜಾಸ್ಥಾನ; ಅದರ ಪ್ರಚಾರ ಮತ್ತು ಪ್ರಸಾರವೆಲ್ಲಾ ರಾಜರಲ್ಲಿ, ರಾಜಾಸ್ಥಾನದ ಪಂಡಿತರಲ್ಲಿ; ಆ ಜನರ ಮೆಚ್ಚಿಗೆಯೇ ಅವುಗಳ ಅಸ್ತಿತ್ವದ ಸಾರ್ಥಕತೆ. ಆ ಕಾವ್ಯಗಳ ಹೆಗ್ಗುರಿ ವಿಷಯ ನಿರೂಪಣೆಗಿಂತ ಹೆಚ್ಚಾಗಿ ಪಾಂಡಿತ್ಯ ಪ್ರದರ್ಶನ. ಅಂದಿನ ಕವಿಗಳ ಪ್ರತಿಭೆ, ಪಾಂಡಿತ್ಯಗಳಿಂದ ಮಂಡಿತಳಾದ ಕಾವ್ಯದೇವಿ ಅವರ ಆಶ್ರಯದಾತರಂತೆಯೇ ಸಿಂಹಾಸನಸ್ಥಳಾಗಿ ಮಂಡಿಸಿದ್ದಳು. ಜನಸಾಮಾನ್ಯರು ಅವಳ ವೈಭವವನ್ನು ದೂರದಿಂದ ಕಂಡು ಭಕ್ತಿಯಿಂದ ಕೈಮುಗಿಯಬೇಕಾಗಿತ್ತೆ ಹೊರತು ಆ ವೈಭವದಲ್ಲಿ ಪಾಲುಗಾರರಾಗುವಂತಿರಲಿಲ್ಲ. ಆದಿಯಿಂದಲೂ ಇದೇ ಹಾಡಾಗಿದ್ದ ಆ ಸಾಹಿತ್ಯಕ್ಕೆ ಮೊದಲಿನಿಂದಲೂ ಪ್ರತಿಭಟನೆ ಇದ್ದೇಇತ್ತು. ಆದರೆ ವಸ್ತುಸ್ಥಿತಿಯನ್ನು ಧೈರ್ಯದಿಂದ ಇದುರಿಸಬಲ್ಲ ಧೀರೋದಾತ್ತರು ಬಹುಕಾಲದವರೆಗೆ ಹುಟ್ಟಲಿಲ್ಲ.. ಕಡೆಗೆ ಹನ್ನೆರಡನೆಯ ಶತಮಾನದಲ್ಲಿ ಕಾಣಿಸಿಕೊಂಡ ಧರ್ಮವೀರರು—ವಚನಕಾರರು—ತಮ್ಮ ವಚನಗಳ ಮೂಲಕ ಕನ್ನಡ ಸಾಹಿತ್ಯ ಜಗತ್ತಿನಲ್ಲಿ ನೂತನ ಪ್ರಜಾಪ್ರಭುತ್ವವೊಂದನ್ನು ಸ್ಥಾಪಿಸಿದರು. ನಾವು ಇಂದು ಸ್ವತಂತ್ರ ಭಾರತದಲ್ಲಿ ಯಾವ ಸರ್ವಸಮಾನತೆಯನ್ನು ಸಂಭಾವಿಸುತ್ತಾ ಕಾಯಕದ ಮಹಿಮೆಯನ್ನು ಮುಗಿಲೆತ್ತರಕ್ಕೆ ಎತ್ತಿ ಬಿತ್ತರಿಸುತ್ತಿದ್ದೇವೆಯೋ ಅದನ್ನು ಎಂಟುನೂರು ವರ್ಷಗಳ ಕೆಳಗೇ ಸಾರಿಹೇಳಿದ ಕೀರ್ತಿ ವಚನಕಾರರಿಗೆ ಸಲ್ಲುತ್ತದೆ.

ವಚನಕಾರರ ಹೆಗ್ಗುರಿ ಜನಜಾಗ್ರತಿಯೇ ಹೊರತು ಸಾಹಿತ್ಯ ಸೃಷ್ಟಿಯಲ್ಲ. ಅವರು ಪಾಂಡಿತ್ಯ ಪ್ರದರ್ಶಕರೂ ಅಲ್ಲ, ಕೀರ್ತಿಕಾಮಿಗಳೂ ಅಲ್ಲ; ಅವರ ವಚನಗಳು ಅದ್ವಿತೀಯವಾದ ಸಾಹಿತ್ಯ ಗುಣ

ದಿಂದ ತುಂಬಿದ್ದರೂ ಅವರು ಕಾಂತಾಸಮ್ಮಿತ ಕಾವ್ಯ ಸೃಷ್ಟಿಗೆಂದು ಹೊರಟವರಲ್ಲ. ಈ ವಚನಗಳನ್ನು ಹಾಡಿದವರಲ್ಲಿ ಪಂಡಿತರಂತೆ ಅಪಂಡಿತರಾದವರೂ ಇದ್ದಾರೆ. ಇವರಿಬ್ಬರ ಗುರಿಯೂ ಒಂದೆ—ನಿತ್ಯ ಸತ್ಯದ ಸಾಕ್ಷಾತ್ಕಾರ. ಈ ಧನ್ಯಜೀವಿಗಳು ತಮ್ಮ ಅನುಭವವನ್ನು ಆಧರಿಸಿ ಧರ್ಮಬೋಧೆ ಮಾಡಿದ್ದಾರೆ. ಆದ್ದರಿಂದ ಈ ಸಂತರ ವಾಣಿ ಬೈಬಲಿನಂತೆ, ಉಪನಿಷತ್ತುಗಳಂತೆ ಸರಳವಾಗಿ ಆಧ್ಯಾತ್ಮ, ಧರ್ಮ, ನೀತಿಗಳ ನಿರೂಪಣೆ ಮಾಡುತ್ತದೆ. ಈ ನಿರೂಪಣೆಯಲ್ಲಿ ಸಾಹಿತ್ಯಾಂಶಕ್ಕಿಂತ ಧಾರ್ಮಿಕಾಂಶವೇ ಪ್ರಮುಖವಾದುದು. ವಚನಕಾರರು ಅಲ್ಪದಲ್ಲಿ ಕಲ್ಪವನ್ನು ಸೃಷ್ಟಿಸಿದ್ದಾರೆ; "ಗದ್ಯಂ ಕವಿನಾಂ ನಿಕಷಂ ವದಂತಿ" ಎಂಬ ಆರ್ಯೋಕ್ತಿಗೆ ಅವರ ವಚನಗಳು ಜ್ವಲಂತ ಉದಾಹರಣೆಗಳಂತಿವೆ. ಆದರೂ ಅವು ಕೇವಲ ಕವಿಕಾವ್ಯಗಳಲ್ಲ, ವೇದ ಉಪನಿಷತ್ತುಗಳಂತೆ ಧರ್ಮಗ್ರಂಥಗಳು. ಪಾಶ್ಚಾತ್ಯ ಕವಿಯೊಬ್ಬನ ಮಾತಿನಲ್ಲಿ ಹೇಳುವುದಾದರೆ, ವಚನಕಾರನಾದವನು "ಸಂತನಾಗಲು ಬಲ್ಲ ಅವನು ಸುಧೀರಮತಿ, ಕವಿಯಾಗಲೊಲ್ಲ" ಏಕೆಂದರೆ "ನೂರು ಕಾವ್ಯದ ಸಾರ ಒಂದು ಸಾಕ್ಷಾತ್ಕಾರ". ಕಾವ್ಯರತಿಯೆಂಬುದು ಒಂದು "ಸಂಸ್ಕೃತಿ ವಿಲಾಸ"; ಸಂತರ ಬಾಳಾದರೋ "ಸೃಷ್ಟಿಗೆ ವಿಕಾಸ". ಆದ್ದರಿಂದ ವಚನಕಾರರು ಕೇವಲ ಕವಿಗಳಲ್ಲ; ಸಂತರು, ಋಷಿಗಳು. ಅವರ ನುಡಿ 'ಕಾಂತಾ ಸಮ್ಮಿತ'ಕ್ಕಿಂತಲೂ ಹೆಚ್ಚಾಗಿ 'ಪ್ರಭು ಸಮ್ಮಿತ'. ಅವರು ಕವಿಗಳಾಗಿರುವುದಕ್ಕಿಂತಲೂ ಹೆಚ್ಚಾಗಿ ಕವಿಕಾವ್ಯಗಳಿಗೆ ವಸ್ತುವಾಗಬಲ್ಲ ಉದಾತ್ತ ಚೇತನರು.

ವಚನಕಾರರಾದ ಶಿವಶರಣರನ್ನು ತನ್ನ ಕಾವ್ಯವಸ್ತುವಾಗಿ ಬಳಸಿಕೊಂಡ ಕವಿಗಳಲ್ಲಿ ಹರಿಹರನು ಅಗ್ರಗಣ್ಯ, ಅಗ್ರಮಾನ್ಯ. ಕನ್ನಡ ಸಾಹಿತ್ಯ ಜಗತ್ತಿನಲ್ಲಿ ಈತನೊಬ್ಬ ನೂತನ ಯುಗಪುರುಷ. ಶಿವಶರಣರ ಪುಣ್ಯಚರಿತ್ರೆ ಜನಸಾಮಾನ್ಯರ ಸೊತ್ತಾಗಬೇಕೆಂಬುದು ಆ ಉದಾರ ಚೇತನದ ವಿಶಾಲದೃಷ್ಟಿ. ಆದ್ದರಿಂದಲೇ ಆತನು ಚಂಪೂ ಕಾವ್ಯಸೃಷ್ಟಿಯಲ್ಲಿ ಪರಿಣತಹಸ್ತನಾಗಿದ್ದರೂ ಅದನ್ನು ಬಿಟ್ಟು ಜನಜೀವನಕ್ಕೆ ಸಮೀಪವಾದ ಅಚ್ಚ ಕನ್ನಡದ ರಗಳೆಯ ಛಂದಸ್ಸನ್ನು ತನ್ನ ಕಾವ್ಯಗಳಿಗೆ ಮಾಧ್ಯಮವಾಗಿ ಬಳಸಿಕೊಂಡನು. ಆತನು ತನ್ನ ಪ್ರಥಮ ಕೃತಿಯಾದ ಗಿರಿಜಾ ಕಲ್ಯಾಣವನ್ನು ಸಂಪ್ರದಾಯದ ಚಂಪೂ ರೂಪದಲ್ಲಿಯೇ ರಚಿಸಿದನು. ಅದನ್ನು ಆಮೂಲಾಗ್ರವಾಗಿ ಓದಿದರೆ ಆತನೆಂತಹ ಪ್ರೌಢ ಪಂಡಿತ ಕವಿಯೆಂಬುದು ನಮಗೆ ಅರ್ಥವಾಗುತ್ತದೆ. ಆತನ ಈ ಕಾವ್ಯ ಭಾಗಗಳನ್ನು ಕನ್ನಡದ ಸುಪ್ರಸಿದ್ಧ ವೈಯಾಕರಣಿಯಾದ ಕೇಶಿರಾಜನು ತನ್ನ ಸೂತ್ರಗಳಿಗೆ ಉದಾಹರಣೆಯಾಗಿ ಸ್ವೀಕರಿಸಿದ್ದಾನೆ. ಹದಿಮೂರನೇ ಶತಮಾನದಲ್ಲಿದ್ದ ಮಲ್ಲಿಕಾರ್ಜುನನು ತನ್ನ ಸೂಕ್ತಿ ಸುಧಾರ್ಣವವೆಂಬ ಕವಿಕಾವ್ಯ ಸಂಗ್ರಹದಲ್ಲಿ ಹರಿಹರ ಕವಿಯ ಗಿರಿಜಾ ಕಲ್ಯಾಣದಿಂದ ಪದ್ಯವನ್ನು ಎತ್ತಿಕೊಂಡು ಉದ್ಧರಿಸಿದ್ದಾನೆ. ಈ ಧಾಟಿಯನ್ನೇ ಮುಂದುವರಿಸಿಕೊಂಡು ಕಾವ್ಯಗಳನ್ನು ಸೃಷ್ಟಿಸುತ್ತಾ ಹೋಗಿದ್ದರೆ ಆತನೂ ಪಂಪ ರನ್ನರಂತೆ ಪಂಡಿತಮಾನ್ಯನಾದ ಕವಿ ಎನಿಸುತ್ತಿದ್ದನು. ಆದರೆ ಹರಿಹರನು ಕೀರ್ತಿಶನಿಯ ಬೆನ್ನುಹತ್ತಲಿಲ್ಲ; ಲೋಕ ಕಲ್ಯಾಣದ ಉದಾತ್ತ ದೃಷ್ಟಿಯನ್ನು ತಾಳಿದನು. ಆದ್ದರಿಂದಲೇ ಆತನು ತನ್ನ ಪಾಂಡಿತ್ಯವನ್ನು ಬದಿಗಿಟ್ಟು, ಜನರ ಮಾತಿನಲ್ಲಿ, ಜನರ ಛಂದಸ್ಸಿನಲ್ಲಿ ಕಾವ್ಯಸೃಷ್ಟಿಯನ್ನು ಕೈಕೊಂಡನು.

ರಗಳೆಯ ಛಂದಸ್ಸು ಕನ್ನಡ ಸಾಹಿತ್ಯದಲ್ಲಿ ಬಹು ಪ್ರಾಚೀನ ಕಾಲದಿಂದಲೂ ಪ್ರಯೋಗದಲ್ಲಿತ್ತು. ಆದರೆ ಅದು ಕೇವಲ ಕ್ವಚಿತ್ತಾಗಿ ಮಾತ್ರ. ಅದನ್ನು ಸಮಗ್ರ ಗ್ರಂಥದ ರಚನೆಗಾಗಿ ಬಳಸಿಕೊಂಡ ದಿಟ್ಟತನ ಹರಿಹರನದು. ಆತನು ಬರೆಯ ಹೊರಟ ಶಿವಶರಣರ ಕಥೆಗೆ ರಗಳೆಯು ನಿರರ್ಗಳವಾಗಿ ಹರಿಯುವಂತ ಛಂದಸ್ಸಾಗಿ ಕಾಣಿಸಿತು. ಆದ್ದರಿಂದ ಅದನ್ನು ಬಳಸಿಕೊಂಡ. ಆದರೆ ಆತನು ಈ ಛಂದಸ್ಸಿನಲ್ಲಿ ಆದಿ ಅಂತ್ಯಗಳಲ್ಲಿ ಪ್ರಾಸವನ್ನು ಬಳಸಿದ. ಇದರಿಂದ ಸುದೀರ್ಘವಾದ ಕಥಾನಿರೂಪಣೆಯಲ್ಲಿ ಒಂದು ಬಗೆಯಾದ ಏಕತಾನತೆ ಬಂದಂತಾಯಿತು. ಕೇಳುವವರಿಗೆ ಸ್ವಲ್ಪಮಟ್ಟಿಗೆ ಬೇಸರಕ್ಕೆ ಕಾರಣವಾಯಿತು. ಆತನು ಇನ್ನೊಂದು ಹೆಜ್ಜೆ ಮುಂದಿಟ್ಟು ಪ್ರಾಸದ ನಿಯಮವನ್ನು ಕಿತ್ತುಹಾಕಿದ್ದರೆ ಅದು ಆಧುನಿಕರು ಈಗ ಬಳಸುತ್ತಿರುವ ಸರಳ ರಗಳೆಯ ರೂಪವನ್ನು ತಳೆದು ಎಂತಹ ದೀರ್ಘ ನಿರೂಪಣೆಗೂ ಹೊಂದಿಕೊಳ್ಳಬಹುದಾಗಿತ್ತು. ಆಧುನಿಕ ಕವಿಗಳು ಹರಿಹರನ ಮಾರ್ಗದರ್ಶನಕ್ಕಾಗಿ ಆತನಿಗೆ ಋಣಿಯಾಗಿರಬೇಕಾಗುತ್ತದೆ.

ಹರಿಹರ ಕವಿ ಕನ್ನಡ ಸಾಹಿತ್ಯದಲ್ಲಿ ನೂತನ ಪಂಥವೊಂದನ್ನು ನಿರ್ಮಿಸಿ ಯುಗಪುರುಷನಾದ. ಆತನ ಕಾವ್ಯಗಳು ಸಂತರ ಚರಿತ್ರೆಗಳನ್ನು ರಸಮಯವಾಗಿ ಚಿತ್ತರಿಸಿ ಲೋಕಕಲ್ಯಾಣವನ್ನು ಸಾಧಿಸಿವೆ. ಆತನ ಸಂಪರ್ಕದಿಂದ ನಮ್ಮ ಹೃದಯ ಗಂಗಾಸ್ನಾನ ಮಾಡಿದಂತೆ ಪವಿತ್ರತೆಯನ್ನು ಪಡೆಯುತ್ತದೆ. ಆತನಿಂದ ಈಚೆಗೆ ಕಾವ್ಯಸೃಷ್ಟಿಗೆ ಕೈಹಾಕಿದ ಶರಣಕವಿಗಳೆಲ್ಲರೂ ತಮ್ಮ ಕಾವ್ಯಾರಂಭದಲ್ಲಿ ಆತನಿಗೆ ಸ್ತುತಿರೂಪದ ಪುಷ್ಪಾಂಜಲಿಯನ್ನು ಅರ್ಪಿಸಿ ಕೃತಿರಚನೆಗೆ ತೊಡಗುತ್ತಾರೆ. ಷಡಕ್ಷರಕವಿ ಆತನನ್ನು ಕುರಿತು "ಹರೀಶ್ವರಸ್ತೇನ ಕವಿಃ ಕಃ" ಎಂದು ಕೇಳಿರುವ ಪ್ರಶ್ನೆ ಕಾಲಗರ್ಭದಲ್ಲಿ ತೂರಿಬಂದು ಉತ್ತರವಿಲ್ಲದೆ ಅನುರಣಿತವಾಗುತ್ತಿದೆ.

ಆಧ್ಯಾತ್ಮ ಜೀವಿಗಳಾದ ಭಾರತೀಯರಲ್ಲಿ ಐತಿಹಾಸ ದೃಷ್ಟಿಗೇ ಅಭಾವ. ಇಲ್ಲಿನ ಆಧ್ಯಾತ್ಮಿಕ ಜೀವನದಲ್ಲಿ ಅಹಂಕಾರ ನಿರಸನಕ್ಕೆ ಅಗ್ರಮಾನ್ಯತೆ. ಆದ್ದರಿಂದ ಅಧ್ಯಾತ್ಮ ಜೀವಿಗಳಾದ ಸಂತರ ಲೌಕಿಕ ಇತಿಹಾಸವೆಂಬುದು ಅನೇಕವೇಳೆ ಮೊಲದ ಕೋಡಾಗಿ ಹೋಗುತ್ತದೆ. ಹರಿಹರ ಮಹಾಕವಿಯು ಈ ನೇಮಕ್ಕೆ ಸಂಪೂರ್ಣ ಹೊರತಾದವನಲ್ಲ. ಆತನು ತನ್ನ ಸಮಗ್ರ ಜೀವನ ವೃತ್ತಾಂತವನ್ನು ತನ್ನ ಕಾವ್ಯಗಳಲ್ಲಿ ಹೇಳಿಕೊಂಡಿಲ್ಲ. ಆದ್ದರಿಂದ ಆ ಜೀವನದ ವಿವರಗಳನ್ನು ತಿಳಿಯಲು ಆತನನ್ನು ಕುರಿತು ಇತರರು ಬರೆದಿರುವುದನ್ನು ಆಶ್ರಯಿಸಬೇಕಾಗುತ್ತದೆ. ಇದಕ್ಕೂ ಹೆಚ್ಚಾಗಿ ಆತನ ಕಾವ್ಯಗರ್ಭವನ್ನು ಹೊಕ್ಕು ಆತನ ಜೀವನದ ವಿವರಗಳನ್ನು ಊಹಿಸಬೇಕಾಗುತ್ತದೆ. ಹರಿಹರ ಮಹಾಕವಿಯು ಪಂಪಾಶತಕ, ರಕ್ಷಾಶತಕ, ಮುಡಿಗೆಯ ಅಷ್ಟಕ, ಗಿರಿಜಾಕಲ್ಯಾಣ ಮತ್ತು ನೂರಾರು ಶಿವಶರಣರ ಕಥೆಗಳನ್ನು ಬರೆದಿದ್ದಾನೆ. ಇವುಗಳಲ್ಲಿ ಆತನ ಆತ್ಮಕಥೆಯ ಸ್ಥೂಲರೇಖೆಗಳನ್ನು ನಾವು ಸ್ಪಷ್ಟವಾಗಿ ಗುರುತಿಸಬಹುದು. ಸ್ಪಷ್ಟ ಇತಿಹಾಸದ ಅಭಾವ

ದಲ್ಲಿ ಕಾರ್ಯಕಾರಣ ಸಂಬಂಧವಾದ ಊಹೆಯನ್ನೇರಿ ಹೋಗುವುದೊಂದೆ ಉಪಾಯ. ಈ ಉಪಾಯವನ್ನು ಕೈಕೊಂಡು ಹರಿಹರನ ಆತ್ಮಕಥೆಯ ಸ್ಥೂಲರೇಖೆಗಳನ್ನು ನಾವಿಲ್ಲಿ ಚಿತ್ರಿಸ ಹೊರಡುತ್ತೇವೆ.

ಮಹಾಕವಿ ಹರಿಹರ ಜನಿಸಿದುದು ಕನ್ನಡನಾಡಿನ ಪವಿತ್ರ ಕ್ಷೇತ್ರವಾದ ಹಂಪೆಯಲ್ಲಿ. ದೇವಾಧಿದೇವನಾದ ವಿರೂಪಾಕ್ಷನು ಅಲ್ಲಿಯ ಅರಾಧ್ಯದೈವ. ಆತನ ಭಕ್ತರಾದ ಮಹದೇವಭಟ್ಟ, ಶರ್ವಾಣಿಯರೆಂಬ ಸಾತ್ವಿಕ ದಂಪತಿಗಳ ಪುಣ್ಯಗರ್ಭದಲ್ಲಿ ಹಿರಿಯ ಮಗನಾಗಿ ಹುಟ್ಟಿದ, ಹರಿಹರ ಆತನ ತಂಗಿ ರುದ್ರಾಣಿ. ಆಕೆಯು ಹಂಪೆಯಲ್ಲಿದ್ದ ಶಿವ ಭಕ್ತನೊಬ್ಬನನ್ನು ಕೈಹಿಡಿದು ತನ್ನ ಪುಣ್ಯಗರ್ಭದಿಂದ ರಾಘವಾಂಕ ಮಹಾಕವಿಯನ್ನು ಪಡೆದಳು. ಹರಿಹರನು ಮಾಯಿದೇವನೆಂಬ ಗುರುವಿನಲ್ಲಿ ವಿದ್ಯಾಭ್ಯಾಸಮಾಡಿ, ದ್ವಾರಸಮುದ್ರದ ಹೊಯ್ಸಳರಾಜ ನರಸಿಂಹಬಲ್ಲಾಳನಲ್ಲಿ ಕರಣಿಕನಾದ. ಕರಣಿಕನಾದ ಆತನು ಕಾರಣ ಪುರುಷನಾಗುವ ಸನ್ನಿವೇಶವೊಂದು ಸೃಷ್ಟಿಯಾದಂತೆ ಕಾಣುತ್ತದೆ. ಒಮ್ಮೆ ಆತನು ತನ್ನ ಕಾರ್ಯಾಗಾರದಲ್ಲಿ ಕುಳಿತಿರುವಾಗ ಇದ್ದಕ್ಕಿದ್ದಂತೆಯೆ ತನ್ನ ಲೆಖ್ಖಣಿಯನ್ನು ಕೆಳಗಿಟ್ಟು ಅಂಗೈಗಳನ್ನು ಉಜ್ಜಿಗೊಳ್ಳಲು ಹೊರಟನಂತೆ ! ಇದನ್ನು ಕಂಡು ಕುತೂಹಲಗೊಂಡ ಜನ ಅದಕ್ಕೆ ಕಾರಣವನ್ನು ಕೇಳಿದಾಗ ಹಂಪೆಯ ವಿರೂಪಾಕ್ಷನ ಗುಡಿಯಲ್ಲಿ ಮೇಲುಕಟ್ಟಿನ ಒಟ್ಟಿಗೆ ಬೆಂಕಿಹತ್ತಿತ್ತೆಂದು, ಅದನ್ನು ತಾನು ಕೈಯಿಂದ ಉಜ್ಜಿ ಆರಿಸಿದುದಾಗಿಯೂ ಹೇಳಿದನಂತೆ ! ಇದನ್ನು ಕೇಳಿದ ರಾಜನು ಸತ್ಯಸಂಗತಿಯನ್ನು ಅರಿಯಲೆಂದು ಹಂಪೆಗೆ ದೂತರನ್ನು ಅಟ್ಟಿದನಂತೆ ! ಅವರು ಅಲ್ಲಿಗೆ ಹೋಗಿಬಂದು ಹರಿಹರನ ನುಡಿ ಸತ್ಯವೆಂದು ಹೇಳಿದರಂತೆ ! ರಾಜನು ಅಚ್ಚರಿಯಿಂದ ಹರಿಹರನನ್ನು ಸನ್ಮಾನಿಸಹೋಗಿದನಂತೆ. ಆದರೆ ಹರಿಹರನಿಗೆ ಮಾತ್ರ ರಾಜನ ಊಳಿಗ ಅಸಹ್ಯವಾಗಿ ಕಾಣಿಸಿತು. ಆತನು ತನ್ನ ಸೇವಾವೃತ್ತಿಯನ್ನು ತ್ಯಜಿಸಿ ಹುಟ್ಟಿದೂರಾದ ಹಂಪೆಗೆ ಹಿಂತಿರುಗಿದನು. ಬಹುಶಃ ಆತನಿಗೆ ಬಾಳಿನಲ್ಲಿಯೂ ಕಟು ಅನುಭವಗಳಿಂದ ಸಂಸಾರದಲ್ಲಿ ಜಿಗುಪ್ಸೆಹುಟ್ಟಿತೆಂದು ತೋರುತ್ತದೆ. ವಿರೂಪಾಕ್ಷನ ಪೂಜೆಯಲ್ಲಿಯೂ ಆತನ ಕರುಣೆಯಿಂದ ತನ್ನಲ್ಲಿ ಬುಗ್ಗೆಯಾಗಿ ಎದ್ದ ಸತ್ಕಾವ್ಯಗಳ ರಚನೆಯಲ್ಲಿಯೂ ತನ್ನ ಉಳಿದ ಬಾಳನ್ನು ಸವೆಸಿ ಸಾರ್ಥಕಜೀವಿಯಾದನೆಂದು ತೋರುತ್ತದೆ.

ಹರಿಹರ ಕವಿಯ ಜೀವನದಲ್ಲಿ ನಡೆದುದೆಂದು ಹೇಳಿರುವ ಮೇಲಿನ ಪವಾಡ ಸತ್ಯವೊ ಅಸತ್ಯವೊ, ಹೇಳುವುದು ಕಷ್ಟ. ಆದರೆ ಆತನು ಕೆಲಕಾಲ ರಾಜಾಸ್ಥಾನದಲ್ಲಿದ್ದು ದೊರೆಯ ಊಳಿಗದಲ್ಲಿ ಅಸಹ್ಯಗೊಂಡಿದ್ದನೆಂಬುದರಲ್ಲಿ ಸಂಶಯವಿಲ್ಲವೆಂದು ಹೇಳಬಹುದು. ಕವಿಯು ಪಂಪಾಶತಕದಲ್ಲಿ

ಪೋಗೆನೆಪೋಪ, ಬಾರೆಲವೊ ಬಾರೆನೆ ಜೀಯ
ಹಸಾದವೆಂದು ಬೆ
ಳ್ಳಾಗುತೆ ಬರ್ಪ,ನಾಣಿಲವೊ ಸುಮ್ಮನಿರೆಂದಡೆ
ಸುಮ್ಮನಿರ್ಪ ಮ
ತ್ತಾಗಳೆ ಝುಂಕಿಸುತ ನಡುಗಿ ಬೀಳುವ ಸೇವೆಯ
ಕಷ್ಟವೃತ್ತಿಯಂ
ನೀಗಿಪೆನೆಂದು ನಿಮ್ಮ ದೆಶೆಯಿಂ ಕರುಣಾಕರ ಹಂಪೆಯಾಳ್ದನೆ

ಎಂದು ಹೇಳಿರುವುದು ಆತನ ಆತ್ಮಕಥನದ ಒಂದು ತುಣುಕೆಂದೆ ತೋರುತ್ತದೆ. ಅದೇ ಶತಕದ ಮತ್ತೊಂದು ಪದ್ಯದಲ್ಲಿ ತನ್ನ ಜೀವನದ ಉದಾತ್ತ ಧ್ಯೇಯವನ್ನು ಹೀಗೆಂದು ಘೋಷಿಸುತ್ತಾನೆ.

ಮನುಜರ ಮೇಲೆ,ಸಾವವರ ಮೇಲೆ, ಕನಿಷ್ಟರ ಮೇಲೆ ಅಕಟಾ
ತನತನಗಿಂದ್ರ, ಚಂದ್ರ, ರವಿ, ಕರ್ಣ, ದಧೀಚಿ,
ಬಲೀಂದ್ರರೆಂದು ಮೇಣ್
ಅನವರತಂ ಪೊಗಳ್ದು ಕೆಡಬೇಡಲೆ ಮಾನವ, ನೀನರ್ಹನಿಶಂ
ನೆನೆಪೊಗಳರ್ಚಿಸೆನ್ನ ಕಡು ಸೊಂಪಿನ ಪೆಂಪಿನ
ಹಂಪೆಯಾಳ್ದನಂ

ಈ ಪದ್ಯವು ಆತನಿಗೆ ರಾಜನ ಊಳಿಗದಲ್ಲಿದ್ದ ಜಿಹಾಸೆಯನ್ನು ಮತ್ತಷ್ಟು ದೃಢಪಡಿಸುತ್ತದೆ. ಹರಿಹರನು ಹಾಕಿಕೊಟ್ಟ ಈ ಸ್ವತಂತ್ರ ಮನೋವೃತ್ತಿ ಆತನ ಅನುಯಾಯಿಗಳಿಗೆಲ್ಲಾ ಒಂದು ಹೆದ್ದಾರಿಯಾಗಿ ಪರಿಣಮಿಸಿತು. ಈ ಸ್ವತಂತ್ರ ಮನೋವೃತ್ತಿ ಆತನ ಹುಟ್ಟುಗುಣ. ಆತನ ಈ ಸ್ವಭಾವ ಬಹುಶಃ ಆತನ ಪ್ರಥಮ ಕೃತಿಯಾದ 'ಗಿರಿಜಾ ಕಲ್ಯಾಣ'ದಲ್ಲಿಯೆ ಸ್ವಲ್ಪಮಟ್ಟಿಗೆ ವ್ಯಕ್ತವಾಗಿದೆ. ಪ್ರಾಸಸ್ಥಾನದಲ್ಲಿ ಱಟಿ, ಕುಳ, ಕ್ಷಳಗಳನ್ನು ಬೆರಸಬಾರದೆಂಬುದು ಛಂದಶ್ಶಾಸ್ತ್ರದ ನಿಯಮ. ಆ ಅಕ್ಷರಗಳ ನಿಜವಾದ ಉಚ್ಚಾರಣೆ ಹರಿಹರನ ಕಾಲಕ್ಕೆ ಆಗಲೇ ಸತ್ತುಹೋಗಿತ್ತು. ಆದರೂ ಅವನ್ನು ಕ್ರಮಬದ್ಧವಾಗಿ ಬಳಸಲು ಕವಿಗಳು ತಿಣುಕುತ್ತಿದ್ದರು. ಅನೇಕ ವೇಳೆ ಅವನ್ನು ತಪ್ಪುತಪ್ಪಾಗಿ ಬಳಸುತ್ತಿದ್ದರು. ಅವನ್ನು ಕೈಬಿಡುವಷ್ಟು ಧೈರ್ಯ ಯಾವ ಕವಿಗೂ ಇರಲಿಲ್ಲ. ಈ ಅತಂತ್ರ ಸ್ಥಿತಿ ಹರಿಹರನ ಸ್ವತಂತ್ರ ಮನೋವೃತ್ತಿಗೆ ಸರಿಬೀಳಲಿಲ್ಲ. ಆತನು ಆ ನಿಯಮವನ್ನು ಪ್ರತಿಭಟಿಸಿ

ನೊಡುವುದೊಂದಕ್ಕರಮದು
ಮಾಡುವೊಡುಚ್ಚರಣೆಗರಿದು ಮೂರುಂ ತೆರನಂ
ಕೂಡೆ ಕವಿತತಿ ವಿಚಾರಿಸ
ಬೇಡದರಿಂ ಱಟಿ ಕುಳ ಕ್ಷಳಂಗಳನಿದರೊಳ್

ಎಂದು ಗುಡುಗಿದ. ತನ್ನ ಕಾವ್ಯಗಳಲ್ಲಿ ಧೈರ್ಯವಾಗಿ ಅದನ್ನು ಆಚರಣೆಗೂ ತಂದ.

ಹರಿಹರನು ಬರೆದಿರುವ ನೂರಾರು ರಗಳೆಗಳಲ್ಲಿ ಸುಮಾರು ಹತ್ತುಹನ್ನೆರಡು ಭಾವಗೀತಾತ್ಮಕವಾಗಿವೆ. ಅವುಗಳಲ್ಲಿ ವಸ್ತುನಿಷ್ಠವಾಗಿರುವ ಪಂಚಾಕ್ಷರಿ, ವಿಭೂತಿ, ರುದ್ರಾಕ್ಷಿ ಇತ್ಯಾದಿಗಳ ಮಹಿಮೆಯನ್ನು ನಿರೂಪಿಸುವ ರಗಳೆಗಳಾದರೆ ಪಿಂಡೋತ್ಪತ್ತಿ, ಪುಷ್ಪ ಇತ್ಯಾದಿ ಕೆಲವು ರಗಳೆಗಳು ವ್ಯಕ್ತಿನಿಷ್ಠವಾದುವು. ಈ ವ್ಯಕ್ತಿನಿಷ್ಠವಾದ ರಗಳೆಗಳಲ್ಲಿ ಹರಿಹರನ ಆತ್ಮಕತೆ ಸ್ವಲ್ಪಮಟ್ಟಿಗೆ ವ್ಯಕ್ತವಾಗಿದೆಯೆಂದು ವಿದ್ವಾಂಸರ ಊಹೆ. ಆತನ ಪಿಂಡೋತ್ಪತ್ತಿ ರಗಳೆಯಲ್ಲಿ ಆತನ ಸಂಸಾರ ಜೀವನ ಸ್ವಲ್ಪಮಟ್ಟಿಗೆ ಪ್ರತಿಬಿಂಬಿಸಿದೆಯೆಂದು ಹೇಳಬಹುದು.ಜೀವಾಣುವು ತಾಯಿಯ ಗರ್ಭವನ್ನು ಪ್ರವೇಶಿಸಿದಂದಿನಿಂದ ಹುಟ್ಟಿ, ಬೆಳೆದು, ಯೌವನಸ್ಥನಾಗಿ, ಮುಪ್ಪಿನಿಂದ ಮರಣಹೊಂದುವ

ವರೆಗಿನ ಕಷ್ಟಕೋಟಲೆಗಳು ಕಣ್ಣಿಗೆ ಕಟ್ಟುವಂತೆ ಕವಿ ಚಿತ್ರಿಸಿದ್ದಾನೆ. ಇವನ್ನು ಓದುತ್ತ ಹೋದಂತೆ ಸಂಸಾರ ಜೀವನದಲ್ಲಿ ಜಿಗುಪ್ಸೆ ಹುಟ್ಟಿ ವೈರಾಗ್ಯ ಒಡಮೂಡುತ್ತದೆ. ಈ ರಗಳೆಗೆ 'ಸಂಸಾರ ವ್ಯಾಮೋಹ ನಿರಸನ ರಗಳೆ' ಎಂದು ಹೆಸರನ್ನು ಇಟ್ಟಿರುವುದು ಅತ್ಯಂತ ಅರ್ಥವತ್ತಾಗಿದೆ.

"ಕಲ್ಲಾಗಿ, ಮಣ್ಣಾಗಿ, ಕುಳಿಯಾಗಿ, ತೆವರಾಗಿ, ಹುಲ್ಲಾಗಿ, ಲತೆಯಾಗಿ, ಹುಳುವಾಗಿ, ಖಗವಾಗಿ, ಕಪಿಯಾಗಿ, ಮೃಗವಾಗಿ ಬಳಸಿ ಬಂದು, ಆವಾವಯೋನಿಗಂ ತನುವಾಗಿ" —ಕಟ್ಟಕಡೆಗೆ ಹೇಗೋ ಮನುಷ್ಯಜನ್ಮ ಬರುತ್ತದೆಯಂತೆ. ಜೀವ ಗರ್ಭವನ್ನು ಪ್ರವೇಶಿಸಿ ಅಲ್ಲಿ ಅನುಭವಿಸುವ ಸಂಕಟಗಳನ್ನು ಕವಿಯು ಅತ್ಯಂತ ಮಾರ್ಮಿಕವಾಗಿ ಚಿತ್ರಿಸಿದ್ದಾನೆ. ಆ ಜೀವಿ ಯೋನಿಯಿಂದ ಹೊರಬಂದು ಆರಾರ್ ಆದೇಂ ಮಾಳ್ಪರ್ ಅಂತದಕ್ಕೆ ಒಳಗಾಗಿ ಶಿಶುತನವನ್ನು ಕಳೆದಮೇಲೆ ಬಾಲ್ಯದ ಅನೇಕ ರೋಗಗಳಿಗೆ ತುತ್ತಾಗಿ ನರಕದುಃಖವನ್ನು ಅನುಭವಿಸುತ್ತಿದ್ದರೂ ಭಗವಂತನನ್ನು ನೆನೆಯುವುದಿಲ್ಲ. ಬೆಳೆದು ಯೌವನ ಬಂದ ಮೇಲೆ ಮದುವೆಯಾಗುತ್ತದೆ. ಈ ದಾಂಪತ್ಯ ಜೀವನದ ಇಲ್ಲಿನ ಕಥನವೆಲ್ಲವೂ ಕವಿಯ ಅನುಭವದ ಒಂದು ಪ್ರತಿಬಿಂಬವೆಂದು ಕೆಲವರ ಊಹೆ. ಯೌವನ ಬಂದಿತು, ಹಿರಿಯರು ಅವನಿಗೊಂದು ಮದುವೆ ಮಾಡಿದರು- ಅದು

"ಹಾಳೂರ ತೋಳಮಂ ಕೊರಲೊಳಿಕ್ಕುವ ತೆರದಿ
ಕೇಳ ಹೆಳವಂಗೆ ಸಂಕಲೆಯ ಬಂಧಿಪ ತೆರದಿ
ಪಶುವಿನ ಕೊರಲೊಳೊಂದು ಪಾಶಮಂ ಬಿಗಿವಂತೆ
ಮಿಸುಕದಂತಲ್ಲೊಂದು ಎಳೆ ಮರವ ಬಿಗಿದಂತೆ
ದೈತೆಯಂ ತಂದೊರ್ಬ್ಬಳಂ ಮದುವೆಯಂ ಮಾಡಿ"

ಜೀವಿಯನ್ನು ಸಂಸಾರ ಬಂಧನಕ್ಕೆ ಸಿಲುಕಿಸಿತು. ಹೆಣ್ಣಿನ ಸುಖದ ದಾಹ ಹೆಚ್ಚಿದ ಜೀವಿ

"ಲಲನೆಯರ ಸವಿನುಡಿಯು ಕರ್ಣಕಿನಿದಾಗುತುಂ
ತಲೆಪುಳಿತ ನಾಯಂತೆ ಇರದೆ ಬೇಳಾಗುತುಂ"

ವಿರಸದಾಂಪತ್ಯದಿಂದಲೋ, ಯೌವನ ಧನರೂಪಗಳ ಜೊತೆಗೆ ದುರ್ಬೋಧರ ಸಹವಾಸದಿಂದಲೊ ಅಡ್ಡ ಹಾದಿಯನ್ನು ಹಿಡಿದ.

ಪುಳಿತ ಪೆಣನಂ ಕಡಿದು ತಿನುತಿರ್ಪ ನಾಯಂತೆ
ಕುಳಿತ ಮಾಂಸಕ್ಕಳುಪಿ ತಿಂಬ ಬಳ್ಳುವಿನಂತೆ
ಉಚ್ಛಿಷ್ಟದೊಳ್ ಬಾಳ್ವ ಹಂದಿಯಾ ತೆರನಂತೆ
ಅಚ್ಚರಿಯ ಪೇಸಿಕೆಯೊಳಗೆ ಮುಳುಗು ತಾ ನಿಂತೆ

ಜೀವಕ್ಕೆ ಹೇಸಿಗೆಯಾಗುವ ಸ್ತ್ರೀ ಸುಖದ ವರ್ಣನೆಯನ್ನು ಮಾಡಿ "ಸಂತತಂ ಯೌವನದ ನರಕದೊಳು ಮುಳುಗಿರಲು" ಪರಶಿವನನ್ನು ನೆನೆಯಲು ವ್ಯವಧಾನವೇ ಸಿಕ್ಕಲಿಲ್ಲ.

ಇಂದ್ರಿಯ ಸುಖಕ್ಕೆ ಆಳಾಗಿದ್ದ ಆ ಜೀವಿ

ಚಿನ್ನಮಂ ಚರಿತ್ರೆಯುಂ ಕನ್ಯೆಯರ್ಗಳಾಗಿ
ಹೊನ್ನುಂ ವಿಳಾಸಮುಂ ವಿಷಯಕ್ಕೆ ಹಾಳಾಗಿ
ಸಂಗಮುಂ ಪ್ರಾಯಮುಂ ಹೇಯಕ್ಕೆ ಬರಿದಾಗಿ
ಅಂಗಂಗಳದಟೆಲ್ಲವಂಗನೆಗೆ ಮಾರಾಗಿ

ಕೈಲಿದ್ದ ಕಾಸು, ಮೈಲಿದ್ದ ಕಸುವು ಮುಗಿದ ಮೇಲೆ ಅವನ ವಿಲಾಸದ ಹೆಣ್ಣುಗಳು ಕಸವನ್ನು ಬಿಸುಡುವಂತೆ ಅವನನ್ನು ಹೊರಕ್ಕೆ ಎತ್ತಿ ಹಾಕಿದರು.

"ನಡೆವೆಣನೆ, ನುಡಿವೆಣನೆ, ಬಾಳ್ವೆಣನೆ ಪೋಗೆಂದು
ಬಡಿಯದಿರು ಬಾಲವಂ ಸುಡು ನಾಯಿ ಥೂ ಎಂದು"

ಅವನನ್ನು ಬಡಿದೋಡಿಸಿದರು. ಅವನಿಗೆ ಆಗ ಬುದ್ಧಿ ಬಂತು. ಆದರೆ ಕಾಲ ಮಿಂಚಿ ಹೋಗಿತ್ತು. ಮನೆ ಬರಿದು, ಮೈತುಂಬಾ ಸಾಲ. "ಸಾಲದಿಂ ಸಿಗ್ಗಾಗಿ ಫಲಉಪವಾಸಂ ಪತ್ತಿ" ಸಂಕಟಪಟ್ಟ. ಮನೆ ತುಂಬಾ ಮಕ್ಕಳು ಬೇರೆ. "ಬಾಲಕರ್ ಬಾಲೆಯರ್ ಕೊಯಿದು ತಿನುತಿರೆ ಮುತ್ತಿ". ಆ ಮಕ್ಕಳ ಕಾಟಕ್ಕಾಗಿ ಅವರ ಹೊಟ್ಟೆಬಟ್ಟೆಗಳಿಗಾಗಿ ಆರಂಭವನ್ನು ಕೈಕೊಳ್ಳಬೇಕಾಯಿತು. ಅದು ವ್ಯರ್ಥವಾಗಲು ವ್ಯಾಪಾರಕ್ಕೆ ಕೈಹಾಕಿದ. ಅದರಲ್ಲಿ ಅಸಲು ಲಾಭಗಳೆರಡೂ ಇಲ್ಲದಂತಾಗಲು ಸೇವಾವೃತ್ತಿಯನ್ನು ಕೈಕೊಳ್ಳಬೇಕಾಯಿತು. ಅದು ಮತ್ತೂ ದುಃಖಕರವಾಗಿತ್ತು.

"ಪತಿಯಪ್ಪ ನಿನ್ನನರಿಯದೆ ನರರ್ಗಾಳಾಗಿ
ಮತಿಗೆಟ್ಟು ಧೃತಿಗುಂದಿ ಮರ್ತ್ಯರ್ಗೆ ತೊತ್ತಾಗಿ
ನಡುವಿರುಳು ಪೋಗೆನಲು ನಾಲ್ಗಾವುದಂ ಪೋಗಿ
ಎಡಹುತುಂ ತಾಗುತುಂ ಲಘುವಾಗಿ ಮರುಳಾಗಿ"

ಜೀವ ರೋಸಿತು, ಮರುಗಿ ಕತಕತ ಕುದಿಯಿತು. ಅವನ ಸ್ಥಿತಿ ಹೇಗಾಯಿತೆಂದರೆ

"ಎಂಟುಗೇಣುದ್ದಮಂ ಗೇಣುದ್ದದೊಳ್ ನಿಲಿಸಿ
ಎಂಟು ಮಡಿ ಕಾರ್ಪಣ್ಯಮಂ ಮುಖದೊಳಳವಡಿಸಿ
ನಿಂದವರ್ಗಳಂ ಬೇಡಿ ನೆರೆದವರ್ಗಳಂ ಬೇಡಿ
ಬಂದವರ್ಗಳಂ ಬೇಡಿ ಬಲ್ಲವರ್ಗಳಂ ಬೇಡಿ
ತಾನುಳಿಯಲುಳಿಯಲ್ಲರ ನಾವಗಂ ಬೇಡಿ
ಏನೆಂಬೆನೆಲ್ಲಿಯುಂ ಪಡೆಯದೆ ಮೊಗಂ ಬಾಡಿ"

ಕೋಟಲೆಯಲ್ಲಿ ಕತ ಕತ ಕುದಿದ ಆ ಜೀವ " ಅನೇಕೆ ಸಂಸಾರವೇಕೆ ಕೇಳೆಲೆ ತಂದೆ, ನೀನು ಎನಗೊಡ್ಡಿದ ಮಹೇಂದ್ರ ಜಾಲಂ ತಂದೆ" ಎಂಬ ಘಟ್ಟವನ್ನು ಮುಟ್ಟಿದ. ಅದುವರೆಗೆ ಮರೆತಿದ್ದ ಮಹದೇವನ ಮಮತೆ ಈಗ ಮನಕ್ಕೆ ಬಂತು. ಶಿವಕರುಣೆಯನ್ನು

"ನಿತ್ಯಲಿಂಗಾರ್ಚನೆಯೊಲಿರಿಸೆನ್ನನೆಲೆದೇವ
ಸತ್ಯ ಶರಣರ ನಡುವೆ ಸಲಿಸೆನ್ನ ನೆಲೆದೇವ"

ಎಂದು ಆರ್ತನಾಗಿ ಶಿವನನ್ನು ಮೊರೆಹೊಕ್ಕ. ಅವನ ಆರ್ತನಾದ ಶಿವನನ್ನು ಮುಟ್ಟಿತು. ಬಹುಶಃ ಈ ಘಟ್ಟದಲ್ಲಿಯೇ ಅವನು ಸರ್ವ ಸಂಗ ಪರಿತ್ಯಾಗ ಮಾಡಿ ಹಂಪೆಯ ವಿರೂಪಾಕ್ಷನನ್ನು ಮರೆಹೊಕ್ಕ ನೆಂದು ತೋರುತ್ತದೆ.

'ಸಂಸಾರ ವ್ಯಾಮೋಹ ನಿರಸನರಗಳೆ'ಯಲ್ಲಿ ಕವಿಯ ಪೂರ್ವಾಶ್ರಮ ಜೀವನ ಚಿತ್ರಿತವಾಗಿದ್ದರೆ ಆತನ ಪುಷ್ಪ ರಗಳೆಯಲ್ಲಿ ವಿರಕ್ತ ಜೀವನದ ದಿವ್ಯ ಸಂದರ್ಶನವಾಗುತ್ತದೆ. ಆತನು ಬೆಳಗಿನಜಾವಕ್ಕೆ ಎದ್ದು ವಿಭೂತಿಯನ್ನು ಧರಿಸಿ ಹೂವಿನ ಕರಡಿಗೆಯೊಂದನ್ನು ಕೈಯಲ್ಲಿ ಹಿಡಿದು ಶಿವಗೀತೆಗಳನ್ನು ಹಾಡುತ್ತಾ, ಶಿವಭಕ್ತರ ಕೀರ್ತಿಯನ್ನು ಕೈವಾರಿಸುತ್ತಾ, "ಪರಿಮಳದ ಸುಗ್ಗಿ, ಸೌರಭದ ಸಂದಣಿ" ಎನ್ನಿಸುವ ಹೂದೋಟಕ್ಕೆ ಹೊರಡುತ್ತಾನೆ. ಹೃದಯ ಭಕ್ತಿಯಿಂದ ತುಂಬಿದೆ, ಮನಸ್ಸು ಸಂತಸದಿಂದ ಹಿಗ್ಗಿದೆ, ಬಾಯಿ ಹಾಡುತ್ತಿದೆ, ಕಣ್ಣು ಚೆಂದ ಚೆಂದದ ಕುಸುಮ ವೃಂದವನ್ನು ನಲಿ ನಲಿದು ನೋಡುತ್ತಿದೆ, ಅಗೋ

"ಅಳಿಯರಗದನಿಲನಲುಗದ ರವಿಕರಂಪುಗದ
ಬೆಳಿಬೆಳೆದು ನಳಿನಳಿಸಿ ಮಘಮಘಿಸಿ ಕವಲಿಡಿದ"

ಇರುವಂತಿಗೆಯ ಪುಷ್ಪವಾಟ. ಭಕ್ತನು ಅದನ್ನು ಕುರಿತು "ಪರ ಶಿವಂಗೋಲೈಪ ಪೂವ ನೀಡಾ" ಎಂದು ಬೇಡಿ, "ತನಿಗಂಪುತೀವಿರ್ದ್ದ ಪಚ್ಚ ಪೊಸ ಪೂಗಳಂ ಕೊಂಡು ಕುಕಿನಿರುವುತುಂ ಕುಣಿವುತುಂ ನಡೆತಂದು" ಸಂಪಿಗೆಯ ವೃಕ್ಷವನ್ನು ಕಾಣುತ್ತಾನೆ. ಅದನ್ನು ಕುರಿತು

"ಏನವ್ವ ಸಂಪಿಗೆಯೆ ಶಿವನ ಸಿರಿಮುಡಿಗಿಂದು
ನೀನೀವ ಪೊಸಕುಸುಮಮಂ ನೀಡು ನೀಡೆಂದು

ಅವುಗಳನ್ನು ಕೊಯ್ದುಕೊಂಡು ಸೇವಂತಿಗೆಯ ಹತ್ತಿರಕ್ಕೆ ಬರುತ್ತಾನೆ.

"ದೇವಂಗೆ ದೇವರಶಿಖಾಮಣಿಯ ಜಡೆಮುಡಿಗೆ
ಸೇವಂತಿ ! ನೀನೀವ ಪೂಗಳಂ ನೀಡೆನಗೆ"

ಎಂದು ಪನ್ನೀರ ಪರಿಮಳದ ಆ ಹೂಗಳನ್ನು ಶೇಖರಿಸಿದ ಮೇಲೆ ಮಲ್ಲಿಗೆ ಮಾಧವಿಗಳನ್ನೂ ಅದಿರ್ಗಂಧಿ ಪುಷ್ಪಗಳನ್ನೂ ಬೇಡಿ ಪಡೆದು ಜಾಜಿಯ ಬಳಿಗೆ ಬರುತ್ತಾನೆ.

"ಜಾತಿ ನೀನೇ ಸಕಲ ಪುಷ್ಪ ಜಾತಿಗೆ ಜಾತಿ
ಭೂತೇಶ್ವರನ ಜಡೆಯ ಮುಡಿಗೇರಿದೊಡೆ ಜಾತಿ"

ಎಂದು ಅದನ್ನು ಪ್ರೋತ್ಸಾಹಿಸಿ ಅದರ ಹೊಸ ಕುಸುಮಗಳನ್ನು ಪಡೆದು ಕೇತಕಿಯ ಬಳಿಗೆ ಬರುತ್ತಾನೆ. ಅದನ್ನು ಕಂಡು ಆತನಿಗೆ ಬಾಳಿನ ಒಂದು ಮುಖದ ಸತ್ಯದರ್ಶನವಾದಂತಾಗುತ್ತದೆ.

"ಹೊರಗೆ ಮುಳ್ಳೊಳಗೆ ಕಂಪಕ್ಕಕ್ಕು ನಿನ್ನ ಪರಿ
ಹೆರೆಸೂಡಿದನ ಗುಪ್ತ ಭಕ್ತನೆಂತಿರ್ಪ್ಪ ಪರಿ
ಆಹಾ ದೆಸೆ ದೆಸೆಗೆ ಬೀರುವ ಸುಗಂಧದ ಸೂರೆ
ಆಹಾ ಕೇತಕಿ ನಿನ್ನ ಪರಿಮಳದ ಪರಿ ಬೇರೆ
ಪರಿಮಳಂ ಸುಳಿಗೊಂಡು ಬೆಳೆದು ಕವಲರಿಯಿತ್ತೊ
ಉರವಣಿಸಿ ಬೆಳೆವ ಪರಿಮಳಕೆ ಗರಿ ಮೂಡಿತ್ತೊ"

ಎಂದು ಅದನ್ನು ಸಂಭಾವಿಸಿ, ಅದರ ಪುಷ್ಪಗಳನ್ನು ಸಂಗ್ರಹಿಸಿದ ಮೇಲೆ ಪಡ್ಡಳಿ, ಬಿಳಿಯ ಕಸ್ತೂರಿ, ಪೊಲ್ಲೆಮರುಗ, ಮುಡಿ-ವಾಳಗಳನ್ನು ಮಾತನಾಡಿಸಿ ದವನದ ಹತ್ತಿರಕ್ಕೆ ಬರುತ್ತಾನೆ. ಅದನ್ನು ಕಂಡರೆ ಕವಿಗೆ ಬಲು ಪ್ರೀತಿ.

"ದವನವೇ ಶಿವನ ಪರಿಮಳದ ಹಬ್ಬವೆ ಬಾರ
ಭುವನದೊಳ್ ನಿನಗೆ ಸರಿಯಿಲ್ಲ ಸೌರಭಸಾರ"

ಎಂದು ಕುಣಿಯುತ್ತಾ ಹೋಗಿ ಅದನ್ನು ಶೇಖರಿಸುತ್ತಾನೆ. ಪರಿಮಳದರಸಿ ಸುರಹೊನ್ನೆ, ಕಮಲ, ನೈದಿಲೆ, ಲಿಂಗದೊಲವಾದ ಚೆಂಗಣಗಿಲೆ ಇತ್ಯಾದಿ ಹೂಗಳೆಲ್ಲವನ್ನೂ ಬಿಡಿಸಿಕೊಂಡು ಒಂದು ಎಳೆಯ ಮಾವಿನ ಮರದ ಕೆಳಗಿದ್ದ ಚಂದ್ರಕಾಂತ ಶಿಲಾತಲದಲ್ಲಿ ಕುಳಿತು, ಕೆಳಗೆ ಬಾಳೆ ಎಲೆಯನ್ನು ಹಾಸಿ ತಾನು ತಿರಿತಂದ ಪುಷ್ಪಗಳನ್ನೆಲ್ಲಾ ಅದರ ಮೇಲೆ ಮೃದುವಾಗಿ ಸುರಿದು, ಸರಸಿಜ ಸೂತ್ರದಿಂದ ಅವುಗಳನ್ನು ಮಾಲೆ ಕಟ್ಟುತ್ತಾನೆ. ಆ ಭಕ್ತ ಹೂಗಳನ್ನು ಬಳಸುವ ರೀತಿ ಎಷ್ಟು ಕೋಮಲವಾಗಿದೆ !

"ಕೈಮುಟ್ಟಿ ಮುಟ್ಟದೆ ಮನಂ ಮುಟ್ಟಿ ಕಟ್ಟುತುಂ
ಕೈ ಮರೆದು ಹೂ ಬೀಳೆ ಮಿಗೆ ಸತ್ತುಹುಟ್ಟುತುಂ
ನೋಡಿದಡೆ ಹೂ ಬಾಡುಗೆಂದು ಕಣ್ಮುಚ್ಚುತುಂ
ನಾಡೆ ನೆನೆದೊಡೆ ಕುಂದುಗೆಂದು ಮನಬೆಚ್ಚುತುಂ"

ಅವುಗಳ ಹಾರವನ್ನು ಕಟ್ಟುತ್ತಾನೆ. ಆ ವೇಳೆಗೆ ದುಂಬಿಗಳು ಹೂಗಳನ್ನರಸುತ್ತಾ ತೋಟಕ್ಕೆ ಬರುತ್ತವೆ. ಅಲ್ಲಿ ಹೂಗಳೇ ಇಲ್ಲ. ಅವು ಪರಿಮಳದ ಪಥವಿಡಿದು ಆ ಭಕ್ತನ ಬಳಿಗೆ ಬರುತ್ತವೆ. ಆತನು ಅವುಗಳನ್ನು ನಿವಾರಿಸುತ್ತಾ

"ಬೇಡೆಲೆಲೆ ಹಂಪೆಯರಸನ ಕುಮಾರಂ ಸಿತಗ
ನಾಡಂಬರಂಗಳಂ ಕೊಳ್ಳನಾರಡಿಗೆರಗ
ಅಳಿಯಾಸೆ ಬೇಡ, ನಿಮಗಿಲ್ಲಿ ಸೋಲುವರಿಲ್ಲ
ಗಳಗಳನೆ ಬಂದಂತೆ ಮರಳಿ ಗಳಗಳನೆಲ್ಲಾ"

ಎಂದು ಗದರಿಸಿ ಒಂದೆರಡು ಸಂಪಗೆಯ ಹೂಗಳನ್ನು ಅವುಗಳ ಕಡೆ ಬೀಸಿ ಓಡಿಸುತ್ತಾನೆ. ಅನಂತರ ಪರಮೇಶ್ವರನ ಗುಡಿಗೆ ಬಂದು, ಆತನು ನಿದ್ದೆಯಿಂದ ಏಳುವವರೆಗೂ ಕಾದಿದ್ದು, ಅನಂತರ ಮೆಲ್ಲನೆ

"ಏನೆನ್ನ ಶಿವನೆ, ಉಪ್ಪವಡಿಸಿರ್ದಾತಂದೆ
ಏನಯ್ಯ, ತಳುವಿರ್ದನೆನುತಲಿರ್ದಾತಂದೆ
ಅಳಿಗಳೆರಗದ ಗಂಧಪವನಲುಗದಲರ್ಗಳಂ
ಎಳಸಿ ತಂದೆತಂದೆ ! ದೇವ ಪೊಸಪೂಗಳಂ"

ಎಂದು ಹೇಳಿ, ಹತ್ತಿರಕ್ಕೆ ಹೋಗಿ ಸೇವಂತಿಗೆ ಹೂವಿನ ನೀರಿನಿಂದ ಮುಖತೊಳೆದು, ಪರಾಗದ ವಿಭೂತಿಯಿಟ್ಟು, ಕೇತಕಿಯ ನುಣ್ಣೆಸಳ್ಗಳಿಂದ ಶಿವನ ಜಟೆಯನ್ನು ಸಿಕ್ಕುಬಿಡಿಸಿ, ಶಶಿಕಳೆನೋಯದಂತೆ ಮತ್ತು ಸುರನದಿ ತುಳುಕದಂತೆ ಅದನ್ನು ಗಂಟುಹಾಕಿ, ಪುಷ್ಪದಿಂದ ಅಲಂಕರಿಸುತ್ತಾನೆ. ಭಗವಂತನ ಅರ್ಚನೆ ಕೀರ್ತನೆಗಳಲ್ಲಿ ಆತನು ಮೈಮರೆದು ಆನಂದ ಸಾಗರದಲ್ಲ ಮುಳುಗಿಹೋಗುತ್ತಾನೆ. ಹರಿಹರ ಕವಿಯ ಪುಷ್ಪಾರ್ಚನೆಯ ವರ್ಣನೆ ಪರಶಿವನ ಅಲಂಕರಣದೊಡನೆ ಕನ್ನಡ ಸಾಹಿತ್ಯದೇವಿಯ ಅಲಂಕರಣವಾಗಿಯೂ ತನ್ನ ಅಸ್ತಿತ್ವವನ್ನು ಸಾರ್ಥಕಪಡಿಸಿಕೊಂಡಿದೆ.

True magnanimity consists in deviating from the beaten path-ಸವೆದ ಹಾದಿಯನ್ನು ಬಿಟ್ಟು ಹೊಸ ಹೊಸ ಹೆದ್ದಾರಿಯೊಂದನ್ನು ನಿರ್ಮಿಸುವುದೇ ಹಿರಿತನದ ಲಕ್ಷಣ. ಹರಿಹರನು ನಿಂತನೀರಿಗೆ ಹೊಸ ಕಾಲುವೆಯನ್ನು ನಿರ್ಮಿಸಿ ಕವಿ ಕಾವ್ಯಕ್ಕೆ ಹೊಸದೊಂದು ಮಹಾಮಾರ್ಗವನ್ನು ನಿರ್ಮಿಸಿದ ಮಹಾಕವಿ. ವಸ್ತುರೀತಿಗಳಲ್ಲಿ, ಭಾವಭಾಷೆಗಳಲ್ಲಿ ಹರಿಹರನ ಕಾವ್ಯಶಕ್ತಿ ಕ್ರಾಂತಿಕಾರಕವಾದ ಹೊಸಹಾದಿಯನ್ನು ಹಿಡಿಯಿತು. ಇದಕ್ಕೆ ವಚನ ವಾಙ್ಮಯವೇ ಪ್ರೇರಕ ಮತ್ತು ಪೋಷಕ.

ಹರಿಹರನ ಭಕ್ತಿ ಮಾರ್ಗ

ಲೇಖಕರು :
ಡಾ॥ ಸಾ. ಶಿ. ಮರುಳಯ್ಯ, ಎಂ.ಎ.,ಪಿಎಚ್.ಡಿ.,
ಕನ್ನಡ ರೀಡರ್,
ಸರ್ಕಾರಿ ಕಾಲೇಜ್, ತುಮಕೂರು

ಮುಕ್ತಿಯ ಮಹಾಸೌಧಕ್ಕೆ ಮಾರ್ಗಗಳು ಮೂರು; ಒಂದು ಜ್ಞಾನಮಾರ್ಗ, ಇನ್ನೊಂದು ಕರ್ಮಮಾರ್ಗ, ಮತ್ತೊಂದು ಭಕ್ತಿ ಮಾರ್ಗ. ಆದರೆ ಮೊದಲ ಮಾರ್ಗ ಸಾಧಾರಣರಿಗಲ್ಲ, ಅಲ್ಲಮಾದಿ ಅಪರೋಕ್ಷ ಜ್ಞಾನಿಗಳಿಗೆ. ಎರಡನೆಯ ಮಾರ್ಗವೂ ಅಷ್ಟೇ. ಸಾಧಾರಣರಿಗೆ ಇದೂ ಅಗಮ್ಯವೇ. ಕರ್ಮಯೋಗದ ಮೂಲಕವೇ ಶಿವಯೋಗವನ್ನು ಸಾಧಿಸಿದ ಸಿದ್ಧಪುರುಷ ಸಿದ್ಧರಾಮ, ಲಾಳಿಯ ತಂತುವಿನಲ್ಲಿ ಕಂತು ಹರನನ್ನು ಕಂಡ ದೇವರ ದಾಸಿಮಾರ್ಯ ಮೊದಲಾದ ಮಹದ್ ವಿಭೂತಿಗಳಿಗೆ ಮಾತ್ರ ಅದು ಸಾಧ್ಯ. ಆದರೆ ಮೂರನೆಯದಾದ ಭಕ್ತಿಮಾರ್ಗ ಸರ್ವರಿಗೂ ಸರಳ. ಸಿದ್ಧಿಗಾಗಿ ಹಂಬಲಿಸುವ ಯಾವ ಸಾಧಕ ಬೇಕಾದರೂ ಈ ಮಾರ್ಗದಲ್ಲಿ ಸಲೀಸಾಗಿ ಸಾಗಬಹುದು. ಬಸವಾದಿ ಪ್ರಮಥರುಗಳು ಮೆಟ್ಟಿದ ಮಾರ್ಗ ಇದೇ. ಹರಿದಾಸರೂ, ಸಂತರೂ, ಭಕ್ತಿಕವಿಗಳೂ ಕಂಡುಕೊಂಡ ಹಾದಿ ಇದೇ. ಅಂತೆಯೇ ಎಲ್ಲ ಭಕ್ತರುಗಳ ಭಕ್ತಿಯೂ ಒಂದು. ಸಾಧಿಸಿದ ಮುಕ್ತಿಯೂ ಒಂದೇ. ಆದರೆ ಅವರ ಭಾವಗಳಲ್ಲಿ ಭಿನ್ನತೆಯಿರುವುದು ಸಹಜ. ಪತಿಯೆಂದು, ಪಶುಪತಿಯೆಂದು, ನೇಹಿಗನೆಂದು, ಬಂಧುವೆಂದು, ಸ್ವಾಮಿಯೆಂದು –ನಾನಾರೀತಿಯಲ್ಲಿ ಅವರ ಜೀವಾತ್ಮ ಪರಮಾತ್ಮನೊಡನೆ ಬಾಂಧವ್ಯವನ್ನು ಇಟ್ಟುಕೊಂಡಿದೆ.

ಕನ್ನಡದ ಸಂತಕವಿಗಳಲ್ಲೊಬ್ಬ ಹರಿಹರ ತನ್ನದೇ ಆದ ಒಂದು ಭಕ್ತಿಮಾರ್ಗವನ್ನು ಕಂಡುಕೊಂಡಿದ್ದಾನೆ, ಅದೇ ನಿಷ್ಠೆ ! ಅಚಲವಾದ ನಿಷ್ಠೆ ! ಗುರಿಸೇರುವವರೆಗೂ ವಿಚಲಿತನಾಗದೆ ಪಟ್ಟುಹಿಡಿದು ಸಾಗಿಸುವ ನಿಷ್ಠೆ. ನಿಷ್ಠೆಯೇ ಅವನ ಭಕ್ತಿಯ ಬೀಜ, ಅವನ ಕಾವ್ಯದ ಕ್ರಿಯಾಶಕ್ತಿ ಎಂದೂ ಹೇಳಬಹುದು. ಅವನ ಎಲ್ಲ ರಗಳೆಗಳಲ್ಲೂ ಬರುವ ಪಾತ್ರಗಳು ಸಾಧಾರಣವಾಗಿ ನಿಷ್ಠೆಯ ಮುಷ್ಠಿ ಹಿಡಿದೇ ಹೊರ ಹೊಮ್ಮುತ್ತವೆ. ರಗಳೆಗಳಲ್ಲಷ್ಟೇ ಅಲ್ಲ ಆತನ 'ಗಿರಿಜಾಕಲ್ಯಾಣ' ಚಂಪೂಕಾವ್ಯದ ಗಿರಿಜೆಯೂ ಸಹ ನಿಷ್ಠೆಯ ಮಹಾಪ್ರತೀಕವೇ ! ಅವನ ಅನ್ಯಾದೃಶ ಕಾವ್ಯೋದ್ಯಾನದಲ್ಲಿ ಭಕ್ತಿ ಈ ನಿಷ್ಠೆಯ ಬಣ್ಣ ತಳೆದೇ ಚಿರಂತನ ಚಿಲುಮೆಯಾಗಿ ಚಿಮ್ಮಿದೆ.

ಕನ್ನಡದ ಸಾರಸ್ವತ ಕ್ಷೇತ್ರದಲ್ಲಿ ಹರಿಹರನಿಗೆ ಮಹಾಕವಿ ಪಟ್ಟ ದೊರಕಿರುವುದು ಅವನ ಭಕ್ತಿಯ ಮಾರ್ಗದಿಂದ,

ನೆಚ್ಚಿದೆನೆಂದರೆ ಮೆಚ್ಚಿದೆನೆಂದರೆ
ಸಲೆಮಾರು ಹೋದೆನೆಂದರೆ
ತನುವಲ್ಲಾಡಿಸಿ ನೋಡುವೆ ನೀನು
ಮನವಲ್ಲಾಡಿಸಿ ನೋಡುವೆ ನೀನು,
ಇದಕ್ಕೆಲ್ಲ ಅಂಜದಿದ್ದರೆ ಭಕ್ತಕಂಪಿತ ನಮ್ಮ
ಕೂಡಲಸಂಗಮದೇವಾ.

ಎಂಬ ಬಸವಣ್ಣನವರ ವಚನಕ್ಕೆ ಪ್ರತ್ಯಕ್ಷ ನಿದರ್ಶನಗಳೆಂದರೆ ಹರಿಹರನ ರಗಳೆಗಳು ಮತ್ತು ಅವುಗಳಲ್ಲಿ ತುಂಬಿ ಸೂಸುತ್ತಿರುವ ಅಮೃತಸ್ಯಂದಿಯಾದ ಭಕ್ತಿ.

ಈ ಮಹಾಕವಿಯ 'ದರ್ಶನ'ಕ್ಕೆ ನಿದರ್ಶನವಾಗಿ 'ಅತಿಭಕ್ತನ ರಗಳೆ' ಮತ್ತು 'ಮಲುಹಣನ ರಗಳೆ' ಗಳನ್ನು ಗಮನಿಸೋಣ—

ಅತಿಭಕ್ತನ ರಗಳೆ :

ಹರಿಹರನ ಕಾವ್ಯ ಕ್ಷೇತ್ರದಲ್ಲಿ ಕಣ್ಣಿಗೆ ಕಾಣುವುದೆಲ್ಲ ಶಿವ ಸ್ವರೂಪವೇ ! ಅಲ್ಲಿಯ ಜನರು ಶಿವಭಕ್ತರು, ಹರಿಯುವ ನೀರು ತೀರ್ಥ, ಹೂಗಳಿರುವುದು ಪಂಪಾಪುರದರಸನ ಪೂಜೆಗಾಗಿ; ಬೀಸುವ ಗಾಳಿಯೂ ಅವನ ಸೇವೆಗಾಗಿಯೇ. ಹೀಗೆ ಎಲ್ಲವೂ ಅಲ್ಲಿ ಶಿವಾರ್ಪಿತವೇ.

ಕಥೆಯ ಆರಂಭದಲ್ಲಿಯೇ ಕವಿ ನಮ್ಮನ್ನು ಒಂದು ಸುಂದರವಾದ, ಪ್ರಶಾಂತವಾದ, ಮಂಗಳಕರವಾದ ವಾತಾವರಣಕ್ಕೆ ಕರೆದೊಯ್ಯುತ್ತಾನೆ. ಕಾವೇರಿ ನದಿಯ ದಡದಲ್ಲಿ ಕದಳಿತೋಟ, ಕುಸುಮದ ತೋಟ, ಕಬ್ಬಿನ ಬೆಳೆ ಮುಂತಾದ ಬೆಳಸುಗಳಿಂದ, ಶಿವ ಭವನಗಳಿಂದ, ಬಲ್ಲಿದ ದೊರೆಗಳ ಘನಮಾಡಗಳಿಂದ, ಕಂಗೊಳಿಸುವ ಚೋಳ ಸಾಮ್ರಾಜ್ಯ ಗೋಚರಿಸುತ್ತದೆ. ಮುಂದೆ ಆ ರಾಜ್ಯದಲ್ಲಿ .... ಒಂದು ಪುರವನ್ನು ಪ್ರವೇಶಿಸಬೇಕಾಗುತ್ತದೆ. ಅದು,

ಮಣಿಗಳ ಮಧ್ಯದ ಚಿಂತಾಮಣಿಯೆನೆ
ಕಣಿಗಳ ನಡುವಣ ಪರುಶದ ಕಣೆಯೆನೆ
ತರುಗಳ ಮಧ್ಯದ ಸುರತರುವೆಂದದಿ
ಗಿರಿಗಳ ಮಧ್ಯದ ಮೇರುವಿನಂದದಿ
ಏನೆಂಬೆನದ ಪೊಗಳಲ್ಬಾರದು
ಮಾನವ ರತ್ನಂಗಳಿಗದು ತೀರದು,

—ಹೀಗೆ ವರಲಕ್ಷ್ಮಿಗೆ ತವರ್ಮನೆಯಾಗಿ ಶೋಭಿಸಿರುತ್ತದೆ. ಅಲ್ಲಿ ಸಂದರ್ಶಿಸುತ್ತೇವೆ. ಒಂದು ಮಹಾ ಮಾನವರತ್ನವನ್ನು, —

ಭೂಮಿ ಮುಸುಂಕಿದ ನಿಧನದ ತೆರದಿಂ
ತಾಮಸ ಮುಸುಕಿದ ಸತ್ಯದ ತೆರದಿಂ

ಮೆರೆಯುವ ಕರಿಕಂಠನ ಪದಭಕ್ತನಾದ ಅತಿ ಭಕ್ತನನ್ನು ಮೀಂಗುಲಿಗನನ್ನು, ಈ ಅತಿ ಭಕ್ತನು ಶಿವನಲ್ಲಿಟ್ಟಿದ್ದ ಭಕ್ತಿ ಇಷ್ಟು— ನಿತ್ಯವೂ ತನಗೆ ಮೊದಲು ಸಿಕ್ಕಿದ ಮೀನನ್ನು ಈಶ್ವರನ ಪ್ರೀತ್ಯರ್ಥವಾಗಿ ಬಿಟ್ಟುಬಿಡುವುದು, ಇದು ಅವನ ನಿತ್ಯದ ನಿಯಮ. ಆ ಮೇಲೆ ಸಿಕ್ಕಿದವುಗಳನ್ನು ಮಾರಿಕೊಂಡು, ಬಂದ ಹಣದಲ್ಲಿ ತನ್ನ ಹೆಂಡತಿ ಮಕ್ಕಳೊಡನೆ ಸಂಸಾರ ನಡೆಸುವುದು. ಎಷ್ಟು ಸರಳವಾದ ಸಾಧಾರಣವಾದ ಪುಟ್ಟ ಸಂಸಾರ! ಆದರೆ ಇಂತಹ ಸರಳ ಜೀವಿಯ ಹೃದಯ ಸತ್ಯ ಬಹಿರಂಗವಾಗಬೇಕು, ಇದು ಕವಿಯ ಉದ್ದೇಶ. ಈ ಸತ್ಯ ಪರೀಕ್ಷೆ ಶಿವನಿಂದಲೇ ನಡೆಯುತ್ತದೆ. ಪರೀಕ್ಷೆ ಬಲವಾದಷ್ಟು ಭಕ್ತನ ಚಿತ್ತ ಸ್ಥಿರವಾಗುತ್ತಾ, ಭಕ್ತಿ ಬಲವಾಗುತ್ತಾ ಬರುತ್ತದೆ. ಇದು ಅತ್ಯಂತ ಮಹತ್ತಿಗೇರಿದಾಗ ಭಕ್ತನ ವ್ಯಕ್ತಿತ್ವ ಗೋಚರಿಸುತ್ತದೆ. ಶಿಲ್ಪಿಯ ಹತ್ತಾರು ಉಳಿಯ ಪೆಟ್ಟುಗಳು ಮೇಲಿಂದ ಮೇಲೆ ಬಿದ್ದ ನಂತರ ಶಿಲೆ ಪೂಜಾರ್ಹವಾದ ಮೂರ್ತಿಯಾಗುತ್ತದೆ.

ಅದರಿಂದ ಶಿವನಿಗೊಂದು ಲೀಲೆಯಾಗುತ್ತದೆ. ಭಕ್ತನಿಗೆ ಮೀನುಗಳೇ ಸಿಕ್ಕದಂತೆ ಮಾಡುತ್ತಾನೆ. ಕೆಲವು ದಿನಗಳು ಕಳೆದ ಮೇಲೆ ಒಂದು ಮೀನನ್ನು ಬಲೆಗೆ ಸಿಕ್ಕಿಸಿ ತಾನೇ ಮತ್ತೆ ಅದನ್ನು ಪಡೆಯುತ್ತಾನೆ. ಅತಿ ಭಕ್ತನ ನಿಯಮರೂಪದಲ್ಲಿ ಮಕ್ಕಳು ಮರಿಗಳೆಲ್ಲಾ ಹಸಿವಿನಿಂದ ಪ್ರಾಣ ಬಿಡುವಷ್ಟುಮಟ್ಟಿಗಾಗುವಂತೆ ಮಾಡುತ್ತಾನೆ. ಆದರೂ ಭಕ್ತನು ಧೃತಿಗೆಡದಿರುವುದನ್ನು ನೋಡಿ ಕಡೆಗೆ ಒಂದು ದಿನ—

ಹೊಳೆಯ ತೀರದಲಿ ಬಲೆಯಂ ಬೀಸಲು
ನಲಿನಲಿವುತ್ತಾಂ ನೇಣಂ ಸೆಳೆಯಲು
ನವರತ್ನದಿ ನಿರ್ಮಿತವಾಗೊಪ್ಪುವ
ನವನವಕಾಂತಿಗಳಿಂ ಮಡಿಯಾಗಿಹ
ಈರೇಳ್ಭುವನದ ಬೆಲೆಯೆಂದೆನಿಸುವ
ಚಾರು ಮೇರು ತಟ ಸನ್ನಿಭವೆನಿಸುವ
ಮೀನ ನೊಂದನೀಶಂ ಕೆಡಪುತ್ತಿರೆ

ಅದನ್ನು ತೆಗೆದು ನೋಡಿ ನಿಯಮದಂತೆ "ಶಿವಾರ್ಪಣಮಸ್ತು" ವೆಂದು ಬಿಟ್ಟು ಬಿಡುತ್ತಾನೆ. ಮತ್ತೆ ಬಲೆಯನ್ನು ಬೀಸಿ ತೆಗೆದರೆ ಅದೇ ಮೀನೆ! ಮೊದಲು ಶಿವಪ್ರಿಯವೆಂದು ಬಿಟ್ಟ ಮೀನೆ! ಅದನ್ನು ಸ್ವೀಕರಿಸಬಾರದೆಂದು ಮತ್ತೆ ಬಿಡುತ್ತಾನೆ. ಇಂಥಾ ದಡ್ಡನೂ ಉಂಟೆ! ಈರೇಳ್‌ಭುವನದ ಬೆಲೆ ಎಂದೆನಿಸತಕ್ಕ ಆ ಅನರ್ಘ್ಯ ವಸ್ತುವನ್ನು, ಆದರಲ್ಲೂ ದಾರಿದ್ರ್ಯದ ಬೇಸೆಯಿಂದ ಪ್ರಾಣ ಬಿಡುತ್ತಿರುವ ಸಮಯದಲ್ಲಿ ಯಾರಾದರೂ ಬಿಡುತ್ತಾರೆಯೇ! ಆದರೆ ಅತಿ ಭಕ್ತ ಶಿವನ ಅತಿ ಭಕ್ತನೇ! ಆ ಸ್ಥಳವನ್ನು ಬಿಟ್ಟು ಬೇರೆಡೆ ಹೋಗಿ ಬಲೆ ಬೀಸುತ್ತಾನೆ. ಅಲ್ಲಿಗೂ ಅದೇ ಮೀನು ಬಂದು ಬೀಳಬೇಕೆ! ನದಿಯ ಯಾವೆಡೆಯಲ್ಲಿ ಬಲೆ ಬೀಸಿದರೂ ಅದೇ ಮೀನು ಬೀಳುತ್ತದೆ.

ಬಲೆ ಛಿದ್ರವಾಗಿದೆ, ಬಲೆಯವನು ಭದ್ರವಾಗಿದ್ದಾನೆ, ಮೀನು ಬಿದ್ದೇ ಬೀಳಬೇಕು! ಆದರೆ ಎಷ್ಟು ಬಾರಿ ಬಿದ್ದರೂ ಬಲೆ ಮಾತ್ರ ಹರಿಯುವಂತಿಲ್ಲ!

ಹೀಗೆ ಸಂಜೆಯ ಪರ್ಯಂತ ಆ ಮೀನಿನೊಡನೆ ಸೆಣಸಿ, ಮರು ದಿವಸ ಬೆಳಿಗ್ಗೆ ಹೊಳೆಗೆ ಬಂದು, ಕರಿಕಂಠನ ನೆನಹಲಿ ಮನಸಂದು

ಬಲೆಯಂ ಬೀಸುತ ಗಮ್ಮನೆ ತೆಗೆಯಲು
ಹೊಳೆ ಹೊಳೆವನಾ ಪಾಠೀನವೆ ಬರಲುಂ।

ಏನಾಗಬೇಕು ಅವನ ಗತಿ! ಅತಿ ಭಕ್ತನ ಮನಸ್ಸು ದೃಢವಾಗುತ್ತದೆ. ಇನ್ನೊಮ್ಮೆ ಇದೇ ಮೀನು ಬಂದದ್ದಾದರೆ ತನ್ನ ಕೈಗಳನ್ನು ಛೇದಿಸಿಕೊಳ್ಳುವುದಾಗಿ ಪ್ರತಿಜ್ಞೆ ಮಾಡಿ,ದೈವದ ಮೇಲೆಯೇ ಒಂದು ಸವಾಲು ಹಾಕುತ್ತಾನೆ. ಆಗ ಶಿವನು ಭಕ್ತನ ಭಕ್ತಿನಿಷ್ಠೆಗೆ ಮೆಚ್ಚುತ್ತಾನೆ ಎನ್ನುವುದಕ್ಕಿಂತ ಭಕ್ತನಿಗೇ ಸೋಲುತ್ತಾನೆ ಎನ್ನೋಣ. ಶಿವ ಭಯಗೊಂಡವನಾಗಿ ಅತಿಭಕ್ತನು ಬೀಸಿದ ಭಕ್ತಿಬಲೆಯಲ್ಲಿ ನಿಜಕ್ಕೂ ಸಿಲುಕುತ್ತಾನೆ.

ದಶಭುಜ ಪಂಚಮುಖಂ ಫಣಿಕುಂಡಲಂ
ಎಸೆವ ಗಿರಿಜೆ ವೃಷಭೇಶ್ವರ ಸಹಿತಂ
ಭಕ್ತನ ಭಕ್ತಿಯ ಪಾಶದಿ ಸಿಲ್ಕುತ
ಅತ್ಯನುಪಮನಾ ಭಕ್ತಿಗೆ ಸಿಲ್ಕುತ

ನಿಜರೂಪು ತೋರುತ್ತಾನೆ. ಸಂಸಾರ ಸಹಿತವಾಗಿ ಬಂದಿದ್ದಾನೆ ಪರಮಾತ್ಮ! ದೇವತೆಗಳಿಂದ ಪುಷ್ಪವೃಷ್ಟಿಯಾಗುತ್ತದೆ, ದೇವದುಂದುಭಿಗಳು ಮೊಳಗುತ್ತವೆ. ಮುನಿಗಳು ಮುಕ್ತಕಂಠದಿಂದ ಹೊಗಳುತ್ತಿರಲು ದಿವ್ಯ ವಿಮಾನ ತಳತಳಿಸುತ್ತಾ ಬರುತ್ತದೆ. ಈಶ್ವರನು ತಾನೇ ತನ್ನ ಭಕ್ತನನ್ನು ಎತ್ತಿ ಅದರೊಳಗಿರಿಸಿ ಕೈಲಾಸಕ್ಕೆ ಕೊಂಡೊಯ್ದು ಭವ್ಯ ಗಣಂಗಳ ಕೂಡ ಹೇಳಿ, ಹೊಗಳಿ ಅತಿಭಕ್ತನಿಗೆ ಗಣಪದವಿಯನ್ನು ಕೊಡುತ್ತಾನೆ. ಇಲ್ಲಿಗೆ ಕತೆ ಮುಗಿಯುತ್ತದೆ. ಕವಿ ತನ್ನ ಕಟ್ಟಳೆಯ ಪ್ರಕಾರ ಕಡೆಯಲ್ಲಿ ಒಂದು ಕಂದ ಪದ್ಯವನ್ನು ಹಾಡಿ ತನ್ನ ಸ್ವಾಮಿ ಪಂಪಾಪುರದರಸನಲ್ಲಿ ಧ್ಯಾನಾಸಕ್ತನಾಗುತ್ತಾನೆ.

ಮಾಲುಹಣನ ರಗಳೆ :

ಮಳೆಯ ಹನಿಗೆ ಯಾವ ರೂಪ, ಬಣ್ಣ, ವಾಸನೆಗಳಿಲ್ಲ. ಆದರೆ ಭೂಮಿಯ ಸಂಪರ್ಕದಿಂದ ಅವೆಲ್ಲವೂ ಆದಕ್ಕೆ ಬಂದೊದಗುತ್ತವೆ. ಹರಿದ ನೆಲ, ನಿಂತ ನೆಲೆಗಳಿಂದ ಅದರ ಬೆಲೆಯ ನಿರ್ಣಯವಾಗುವುದೂ ಉಂಟು. ಉದಾಹರಣೆಗೆ ಹನಿನೀರಿಗೆ ಅಸ್ತಿತ್ವವಿದ್ದರೂ ವ್ಯಕ್ತಿತ್ವವಿಲ್ಲ. ಅದು ಸಾಗರವನ್ನು ಕೂಡಿಕೊಂಡ ಕೂಡಲೇ ಅದಕ್ಕೆ ಸಾಗರದ ಸಾಮರ್ಥ್ಯ ಬಂದೊದಗುತ್ತದೆ; ಸಾಗರವೇ ತಾನೆಂದು ಹೇಳಿಕೊಳ್ಳುತ್ತದೆ; ಸಾಗರವೇ ತಾನಾಗಿಬಿಡುತ್ತದೆ. ಆ ನೀರು ನೆಲದ ಮೇಲೆ ಹರಿಯುವಾಗ ಭೂಮಿಯ ಬಣ್ಣ, ಮಣ್ಣಿನ ಗುಣಗಳನ್ನು

ಅದು ಪಡೆಯುವುದು ಸಹಜ. ಆಗ ಅದರ ಯೋಗ್ಯತೆಯನ್ನು ನಿರ್ಣಯಿಸುವುದು ಅಷ್ಟೇ ಸಹಜವಾಗುತ್ತದೆ. ಅಂದರೆ ಹರಿಯುವ ಪಾತ್ರದ ಮೇಲೆ ನೀರಿನ ಯೋಗ್ಯತೆ ನಿರ್ಣೀತವಾಗುತ್ತದೆ. ಅದು ಗಂಗಾ, ತುಂಗಾ ಮೊದಲಾದ ಪವಿತ್ರ ಪಾತ್ರಗಳಲ್ಲಿ ಪ್ರವಹಿಸಿದರೆ ತೀರ್ಥವಾಗುತ್ತದೆ; ಗ್ರಾಮ ನಗರಗಳ ಚರಂಡಿಗಳಲ್ಲಿ ಹರಿದರೆ ಕೊಚ್ಚೆಯಾಗುತ್ತದೆ. ಅದೇ ರೀತಿ ಪರಮಾತ್ಮನಿಂದ ಅನುಗ್ರಹಿಸಲ್ಪಟ್ಟ ಶ್ರೀಶಕ್ತಿಯೊಂದು ಪ್ರತಿಯೊಬ್ಬನ ಹೃದಯದಲ್ಲೂ ನಿರ್ಮಲೋದಕದಂತೆ ಅತ್ಯಂತ ಪಾವಿತ್ರ್ಯದಿಂದಲೇ ಕೂಡಿರುತ್ತದೆ. ಅದನ್ನು ವ್ಯಕ್ತಿ ಯಾವ ಪ್ರಣಾಳಿಕೆಯಲ್ಲಿ ಹರಿಸುತ್ತಾನೆ–ಅದನ್ನು ಅವಲಂಬಿಸಿ ಅವನ ಯೋಗ್ಯತೆ ನಿರ್ಧರಿತವಾಗುತ್ತದೆ. ನೀರು ಒಂದೇ ಆದರೂ ಒಂದೆಡೆ ತೀರ್ಥವಾಯಿತು ಮತ್ತೊಂದೆಡೆ ಕೊಚ್ಚೆಯಾಯಿತು. ಅದೇ ನೀರು ಜೋಗದ ಜಲಪಾತವನ್ನುಳಿದು ಫೋರ್ ಬೇ ಬಳಿ ಪೆನ್‌ಸ್ಟಾಕ್‌ಗಳ ಮೂಲಕ ಹಾದು ಟರ್ಬೈನ್‌ಗಳನ್ನು ತಿರುಗಿಸಿದರೆ ಜ್ಯೋತಿಯನ್ನು ಉತ್ಪಾದಿಸಿತು, ಅದರ ಒಂದು ಹನಿ ಕಪ್ಪೆಚಿಪ್ಪಿಗೆ ಬಿದ್ದರೆ ಮುತ್ತು ಆಯಿತು, ಅದೇ ಹನಿ ಗಿಡವೊಂದರ ಮೇಲೆ ಬಿದ್ದಾಗ ಕರ್ಪೂರವೂ ಆಯಿತು. ಹಾಗೆಯೇ ಮಾನವನ ಮನೋಭೂಮಿಕೆಯಲ್ಲಿ ನಿರಂತರವೂ ಪ್ರವಹಿಸುತ್ತಿರುವ ಭಗವತ್ಕೃಪೆಯಿಂದ ಲಭ್ಯವಾಗಿರುವ ಆ ಶ್ರೀಶಕ್ತಿಯನ್ನು ಸನ್ಮಾರ್ಗದಲ್ಲಿ ಗಮಿಸುವಂತೆ ಮಾಡಬೇಕು ಎಂಬ ಕವಿಯ ಆಶಯಕ್ಕೆ ಮಲುಹಣನ ರಗಳೆ ಹಿಡಿದ ಕನ್ನಡಿಯಾಗಿದೆ.

ಕಥೆ ಅರಳುವುದು ಕಾಶ್ಮೀರದಲ್ಲಿ. ಕಾಶ್ಮೀರ ಶಾರದೆಯ ನೆಲವೀಡು, ಸೌಖ್ಯದಾಗರ, ತೃಪ್ತಿಯ ತವರು. ಭಾರತೀಪೀಠವೆಂಬ ಪಟ್ಟಣ ಅಲ್ಲಿಯ ರಾಜಧಾನಿ. ಅದಂತೂ ಶಿವನ ಸೆಜ್ಜೆ. ಎಲ್ಲಿ ನೋಡಿದಡಲ್ಲಿ ಶಶಿಕಾಂತಭವನಗಳು, ಸಿರಿನೆಲೆಯ ಕರುಮಾಡಗಳು, ಶಿವಭವನಗಳು. ಇಂತಹ ಸೋಮವೀಧಿ, ಸೂರ್ಯವೀಧಿಗಳಿಂದ ಶೋಭಿಸುವ ಭಾರತೀ ಪೀಠದ ಅರಸು ಪ್ರವರಸೇನ. ಆದರೆ ಅರಸನಿಗಿಂತಲೂ ಅಧಿಕ ಧನಪತಿಯಿದ್ದಾನೆ ಸುವರ್ಣಭಟ್ಟ ಎಂಬ ವಿಪ್ರಕುಲಪುಂಗವ. ಅವನ ಏಕಮಾತ್ರ ಪುತ್ರನೇ ಮಲುಹಣ. ಮಲುಹಣನಿಗೆ ಎಷ್ಟೇ ಸಂಪತ್ತಿದ್ದರೂ, ತಂದೆ ತಾಯಿಯರ ಪೋಷಣೆಯನ್ನು ಬಹುಕಾಲ ಪಡೆಯುವ ಭಾಗ್ಯವಿರಲಿಲ್ಲವೆಂದು ತೋರುತ್ತದೆ. ಎಳವೆಯಲ್ಲೇ ಎಲ್ಲರನ್ನು ಕಳೆದುಕೊಂಡು ತಾನೊಬ್ಬನೇ ಬೆಳೆಯುತ್ತಾನೆ–

ಸಕಳ ಭರಭಾರಕ್ಕೆ ತಾನೆ ವಲ್ಲಭನಾಗಿ
ಸಕಲ ಪರಿಜನಕೆಲ್ಲ ರಕ್ಷಶಿಕ್ಷಕನಾಗಿ
ಉತ್ತಮ ವ್ಯವಹಾರಪರಿಣತಂ ತಾನಾಗಿ
ಉತ್ತಮೋತ್ತಮಸಂಪದಕ್ಕೆ ನೆಲೆವನೆಯಾಗಿ

ಇಂತಿದ್ದ ಮಲುಹಣನ ಮೈಮೇಲೆ ಯೌವನದ ಧಾಳಿ ನಡೆಯುತ್ತದೆ. ಆಗ ಅವನ ನಡೆಯಲ್ಲಿ, ನುಡಿಯಲ್ಲಿ, ಅಂಗಾಂಗಗಳಲ್ಲಿ, ಅಭಿರುಚಿಯಲ್ಲಿ ಸಂಪೂರ್ಣ ಬದಲಾವಣೆಗಳು ಕಂಡುಬರುತ್ತವೆ. 'ಕರಣತತಿ ಭೋಗಸಂಪದವನಿಚ್ಛಿಸುತ್ತವೆ; ಸರ್ವೇಂದ್ರಿಯಗಳು ಸುಖದ ಬಯಕೆ" ಗಾಗಿ ಬಾಯ್ದೆರೆಯುತ್ತವೆ. ಅವನು "ಸುರಕುಜದ ಚಂದನದ ಕರ್ಪುರದ ಸಸಿಯಂತೆ, ಪರಿಮಳದ ಚಂದ್ರಿಕೆಯ ಕಾಂತಿ ಕರುವಿಟ್ಟಂತೆ" ಶೋಭಿಸುತ್ತಾನೆ, ಷೋಡಶಪ್ರಾಯಪ್ರಾಪ್ತನಾದಾಗ.

ಭಾರತೀಪೀಠದ ಮತ್ತೊಂದು ಬೀದಿಯಲ್ಲಿ, ಕುಸುಮಬಾಣನ ಕೀರ್ತಿ ಬೆಳೆಯುವಂತೆ ಬೆಳೆಯುತ್ತಿದ್ದಾಳೆ, ಆ ನಗರದ ಅಧಿದೈವವೆನಿಸಿದ ವಿಜಯೇಶ್ವರನ ಪಾತ್ರದ ವಿಳಾಸಿನಿಯಾದ ಪದ್ಮಾವತಿಯ ಪುತ್ರಿ ಮಲುಹಣಿ ! ಅವಳಿಗೂ ಷೋಡಶವರ್ಷ ಸಂಪ್ರಾಪ್ತವಾಗಿದೆ ! ರೂಪವತಿ, ಗುಣವತಿ, ಕಲಾವತಿ ! ಕೇಳಬೇಕೇ ? ಅವಳು ವಿಳಾಸಿನಿ, ವೇಶ್ಯೆ, ಆದರೆ – ಅಳಿ ತುಡುಂಕದ ಮಘಮಘಿಪ ಬಿರಿಮುಗುಳು, ಎಳಸುವ ಚಕೋರಿ ಮೊಗವಿಡದ ಚಂದ್ರಿಕೆ, ಪಿಕಚಂಚು ಸಂಚಾರವಿಲ್ಲದ ಎಳೆತಳಿರು !

ಇಂತಹ ತುಂಬು ಹರೆಯದ ತರುಣ ತರುಣಿಯರ ಸಮಾಗಮ ಶಿವಾಲಯದಲ್ಲಿ ಒಂದು ವಸಂತಮಾಸದ ಪ್ರಶಸ್ತ ಸಮಯದಲ್ಲಿ ಏರ್ಪಡುತ್ತದೆ. ನಿತ್ಯನೇಮಾಸಕ್ತಚಿತ್ತನಾದ ಮಲುಹಣನು ವಿಜಯೇಶ್ವರ ದೇವರ ದಿವ್ಯಶ್ರೀಪಾದಪ್ರಣತನಾಗಿ ದೇವಾಗಾರದ ಪ್ರಾಂಗಣಕ್ಕೆ ಬರುವ ಸಮಯಕ್ಕೆ ಸರಿಯಾಗಿ ಅಲ್ಲಿ ಕಾಮನಂಬಿನಂತೆ ನರ್ತನಕ್ಕೆ ಸಿದ್ಧಳಾಗಿ ನಿಂತಿದ್ದ ಮಲುಹಣಿಯನ್ನು ಕಂಡು ಮೋಹಪರವಶನಾಗುತ್ತಾನೆ; ಮಲುಹಣಿಯೂ ಅದೇ ಚಿತ್ತವಿಕಾರಕ್ಕೆ ಬಲಿಯಾಗುತ್ತಾಳೆ. ಸಿರಿವಂತನೆಂದು ಪ್ರಸಿದ್ಧನಾಗಿದ್ದ ಮಲುಹಣನಿಗೆ ವೇಶ್ಯಾಗೃಹದ ಮದನಕೇಳೀಸದನವೆನಿಪ್ಪ ಸೆಜ್ಜೆಯ ಸಿರಿಮಂಚ ಸ್ವಾಗತ ನೀಡುತ್ತದೆ, ಸುರತಸುಖ ಲಭಿಸುತ್ತದೆ. ಸ್ವರ್ಗವೂ ಸುಖವೊಂದರ ಮುಂದೆ ಸಪ್ಪೆಯೆನಿಸುತ್ತದೆ. ಆ ವೇಳೆಯಲ್ಲಿ–"ಕರಣವೆಲ್ಲಂ ನೋಟ, ನೋಟವೆಲ್ಲಂ ನುಡಿ, ನುಡಿಯೆಲ್ಲಂ ವಿರಹ, ವಿರಹವೆಲ್ಲಂ ದೈನ್ಯ, ದೈನ್ಯವೆಲ್ಲಂ ಸಾತ್ವಿಕ, ಸಾತ್ವಿಕವೆಲ್ಲಂ ರಸ, ರಸವೆಲ್ಲಂ ಮೈ, ಮೈಯೆಲ್ಲಂ ಕೂಟ, ಕೂಟವೆಲ್ಲಂ ಮನ, ಮನವೆಲ್ಲಂ ಮೆಚ್ಚು, ಮೆಚ್ಚೆಲ್ಲಂ ಸೋಲ, ಸೋಲವೆಲ್ಲಂ ಸುಖಮಯವಾಗಿ, ದಿನಂಗಳು ನಿಮಿಷಂಗಳಾಗಿ, ಮಾಸಂಗಳು ದಿನಂಗಳಾಗಿ, ವತ್ಸರಂಗಳು ಮಾಸಂಗಳಾಗಿ ಪದ್ಮಾವತಿ ಸಂಪನ್ನೆಯಾಗಿ"—ಅವನ ತಂದೆ ಮಗನ ನಿತ್ಯದ ಖರ್ಚಿಗೆ ಸಹಸ್ರ ಹೊನ್ನುಗಳಂತೆ ಸುಮಾರು ನೂರು ವರ್ಷಗಳಿಗಾಗಿ ತೆಗೆದಿಟ್ಟಿದ್ದ ಕೋಟಿ ಕೋಟಿ ಹೊನ್ನು ಕೇವಲ ಹತ್ತು ವರ್ಷಕ್ಕೂ ಸಾಲದೆ ಬರುತ್ತದೆ. ಆದರೆ 'ಧನಂ ತೀರೆಯುಂ ಮನಂ ತೀರಿರುವುದಿಲ್ಲ'. ಅದು ಉಂಡಷ್ಟು ಹಸಿವು, ಕುಡಿದಷ್ಟು ದಾಹ ! ಹೂವು ಅಳಿದರೂ ಹಿಡಿದ ಪರಿಮಳ ಅಗಲದಂತೆ ಮೋಹರಸವಾರಿರುವುದಿಲ್ಲ ಮಲುಹಣನಲ್ಲಿ. ಆದರೆ ನಿರ್ಧನನಾದ ಮಲುಹಣನಿಂದ ಮಲುಹಣಿಯನ್ನು ಬೇರ್ಪಡಿಸುತ್ತಾಳೆ ರಕ್ಕಸಕುಂಟಣಿಯಾದ ಪದ್ಮಾವತಿ. ಮಲುಹಣನನ್ನು 'ಸೆಜ್ಜೆಯ ಮನೆಯೊಳು ಮೊದಲಿಸಿ ಕುಳ್ಳಿರ್ದೆಡೆಯೊಳು ಕುಸುರಿದರಿದು ನಿಂದೆಡೆಯೊಳು ನೀರಂ ಚೆಲ್ಲಿ' ಮನೆ ಬಿಡಿಸಿ ಓಡಿಸುತ್ತಾಳೆ. ಮಲುಹಣಿಯ ದರ್ಶನ ಅವನಿಗೆ ಲಭಿಸದಂತೆ ಮಾಡುತ್ತಾಳೆ.

ಮಲುಹಣ ಹುಚ್ಚನಾಗುತ್ತಾನೆ.

ನಿಂದರಂ ಕಂಡು ಮಲುಹಣಿಯೆಂದು ಸೋಂಕುತಂ
ಬಂದರಂ ಕಂಡು ಮಲುಹಣಿಯೆನುತ್ತಪ್ಪುವಂ !

ಪಾಪ !

ಕಡೆಗೆ ಒಂದು ದಿನ—

ಮನದೊಳಗೆ ಕಣ್ಣೊಳಗೆ ಮಲುಹಣಿಯನಱಸುತಂ
ನೆನಹಿನೊಳು ನಿದ್ರೆಯೊಳು ಮಲುಹಣಿಯನಱಸುತಂ
ಬಂದೆಂಜಿಲಂ ಚೆಲ್ಲುವೊಂದು ಹೊಸ ಕುಳಿಯೊಳಗೆ
ನಿಂದು ಮಧ್ಯರಾತ್ರೆಪರಿಯಂತವದಱೊಳಗೆ
ಇರಲ್

ಮಲುಹಣಿಯ ಸೇವಕಿ, ಅವಳು ಉಂಡು ಕೈತೊಳೆದ ಎಂಜಲು ನೀರನ್ನು ಕುಳಿಯಲ್ಲಿದ್ದ ಮಲುಹಣನ ಮೇಲೆ ಚೆಲ್ಲಲು, ಪುಳಕಗೊಂಡವನಾಗಿ 'ಹಾ ಮಲುಹಣೀ ಮಲುಹಣೀ' ಎಂದು ಆರ್ತತೆಯಿಂದ ಕೂಗಿಕೊಳ್ಳುತ್ತಾನೆ. ದನಿಗೇಳಿದ ಕೂಡಲೇ ಮಲುಹಣಿ ಕರು—ಮಾಡದ ಹೊರವಲಯದಲ್ಲಿ ಬಂದು ನಿಂದು, 'ಮಲುಹಣ ಇದೇಕೆ ? ಇಲ್ಲಿ ನಿಲ್ಲುವದೇ ? ಹೋಗು ಹೋಗು' ಎಂದು ಸಾಂತ್ವನದ ನುಡಿ ನುಡಿದು ಮತ್ತೆ ಒಳ ಓವರಿಗೆ ಜಾರುತ್ತಾಳೆ.

ಅಂದಿನಿರುಳು ಪೂರಾ ಮಲುಹಣ ಅಲ್ಲಿಯೇ ಮರವಟ್ಟು ನಿಲ್ಲುತ್ತಾನೆ. ಅವನ ಭಂಗಿ ಬದಲಾಗುವುದಿಲ್ಲ; ಮಲುಹಣಿಯ ನೆನಹು ಮಾಸುವುದಿಲ್ಲ. ಅವನ ಮೈಮೇಲೆ ಸುರಿದ ಮಂಜು, ಅವನನ್ನು ಒಂದು ಮಂಜಿನ ಮೂರ್ತಿಯನ್ನಾಗಿಸುತ್ತದೆ. ಬೆಳಗಾದಾಗ ಕಂಡ ಮಲುಹಣಿ ಮಮ್ಮಲ ಮರಗುತ್ತಾಳೆ; ಓಡೋಡಿ ಬಂದು ಹಿಮವನ್ನೆಲ್ಲಾ ಸರಿಸಿ, ಮಲುಹಣನ ಕೈಹಿಡಿದು ಪಟ್ಟಿಸುತ್ತಾಳೆ—ನೊಂದ ಮನದಲ್ಲೇ ಅವಳ ನಾಲಗೆ ನುಡಿಯುತ್ತದೆ—

ಎನ್ನ ಮೇಲಿಕ್ಕುವೀ ಚಿತ್ತದಾತುರತೆಯಂ
ಪನ್ನಗಾಭರಣನೊಳು ಮಾಳ್ಪದೆನ್ನೊಲುಮೆಯಂ
....
ಎನ್ನ ಹವಣೇ ಕೋಟಿ ಮಲುಹಣಿಯರಾಗರೇ ! –ಎಂದು.

ವಿವೇಕದ ನುಡಿ ವಿವೇಚನೆಗೆ ಆಹಾರವಾಗುತ್ತದೆ. ಮಲುಹಣ ತನ್ನವಳ ಮಾತುಗಳನ್ನು ಮಾನ್ಯ ಮಾಡುತ್ತಾನೆ. ಶಿರಹಮಂ ಕಿಗೆದು ಪರನ ಮೇಲಿಕ್ಕುತ್ತಾನೆ. ಅದೇ ಅವನ ಬಾಳಿನ ಪರ್ವಕಾಲವಾಗುತ್ತದೆ. ಕಾಮದ ಕೊಚ್ಚೆಯಾಗಿ ಹರಿಯುತ್ತಿದ್ದ ಅವನ ಅಂತಃಶಕ್ತಿ ಭಕ್ತಿಯ ಭಾಗೀರಥಿಯಾಗಿ ಪ್ರವಹಿಸುತ್ತದೆ.

ಸತ್ಯನೆ ಸದಾಶಿವನೆ ಶಾಶ್ವತನೆ ಕರುಣಿಪುದು
ನಿತ್ಯನೆ ನಿರಾಶ್ರಯನೆ ನಿರ್ಭಯನೆ ಕರುಣಿಪುದು
ನಿರ್ಮಲನೆ ನಿರವಯನೆ ನಿರ್ದ್ವಂದ ಕರುಣಿಪುದು
ಚರ್ಮಧರ ನಿಃಕಳನೆ ನಿರಪೇಕ್ಷ ಕರುಣಿಪುದು
ಕಾರುಣ್ಯವಾರಾಸಿ ಕರುಣಿಪುದು ಕರುಣಿಪುದು
ಮಾರನುದಮಾತಂಗ ವಿಧ್ವಂಸಿ ಕರುಣಿಪುದು
ಕರುಣಿಪುದು ಕರುಣಾಂಬುನಿಧಿ ಶಂಭು ಕರುಣಿಪುದು
ಗಿರಿಜಾ ಮನೋಹರನೆ ಕರುಣಿಪುದು ಕರುಣಿಪುದು

ಘನಘೋರ ತಪಸ್ಸನ್ನಾಚರಿಸುತ್ತಾನೆ. ಶಿವನ ಸಾಕ್ಷಾತ್ಕಾರವಾಗುತ್ತದೆ. ಅವನ ಇಚ್ಛೆಯದು ಸಲ್ಲಿಸಿ, ತದನಂತರ ಮಲುಹಣನಿಗೆ ಗಣಪದವಿಯನ್ನು, ಮಲುಹಣಿಗೆ ರುದ್ರಕನ್ನಿಕೆಯ ಸ್ಥಾನವನ್ನು ಪರಶಿವನು ಕರುಣಿಸುತ್ತಾನೆ.

ಭಕ್ತಿ ಸಂಪನ್ನನಾದ ಹರಿಹರನು ಹಾಕಿಕೊಟ್ಟ ಭಕ್ತಿಮಾರ್ಗ ಇಂತಹುದು. ನಾವು ಮೊದಲೇ ಹೇಳಿದಂತೆ – ಹರಿಹರನು ಸೃಷ್ಟಿಸಿದ ಎಲ್ಲ ಪಾತ್ರಗಳೂ ಹೀಗೆಯೇ. ನಿಷ್ಠಾಭಕ್ತಿ ಹರಿಹರನ ಅದ್ವಿತೀಯ ರಾಜಮಾರ್ಗ. ಬದುಕಿನ ಒಳಿತು ಮತ್ತು ಅದರ ಸಂವರ್ಧನೆಗಾಗಿ ಅವನ ನಿತ್ಯದ ಕಾಳಜಿ; ಭಕ್ತಿ ಪಾರಮ್ಯವನ್ನು ಬಿತ್ತರಿಸುವುದೇ ಅವನ ಲೇಖಣಿಯ ಪ್ರಮುಖ ಕಾಯಕ ! ಇಂತಹ ಕವಿಯನ್ನು ಪಡೆದ ನಾಡು ಧನ್ಯ, ನುಡಿ ಧನ್ಯ !

* * *

ಹರಿಹರ ಕವಿಯು ಚಿತ್ರಿಸಿದ ಭಕ್ತಿಯ ನಾನಾ ಮುಖಗಳು

ಲೇಖಕರು :
ಪ್ರೊ. ಬಿ. ಸಿ. ಜವಳಿ, ಎಂ.ಎ.,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

[೧]

ಹರಿಹರ ಕವಿಯು "ಭಕ್ತಾಗ್ರೇಸರ" ನೆಂದು ಕನ್ನಡ ನಾಡಿನಲ್ಲಿ ಪ್ರಸಿದ್ಧನಾಗಿದ್ದಾನೆ. ಬಸವಣ್ಣನವರ ತರುವಾಯ ಈ ಕವಿಯೂ 'ಭಕ್ತಿ ಭಂಡಾರಿಯೇ' ಆಗಿದ್ದಾನೆ. ಕಾವ್ಯದ ಮೂಲಕ ಭಕ್ತರ ಕಥೆಗಳನ್ನು ಜನತೆಗೆ ವಿಸ್ತರಿಸುವಲ್ಲಿ ಆ ಭಕ್ತಿಯ ವೈವಿಧ್ಯವನ್ನು ಪ್ರಕಟಪಡಿಸಿದ್ದಾನೆ. ಪುಷ್ಪರಗಳೆಯಲ್ಲಿ ಭಕ್ತಿಯ ಬಗೆಗೆ ಕವಿ ಬರೆದ ಮಾತುಗಳಿವು:

"ಭಕ್ತಿ ಸುಖದಿಂದಿತರ ಸುಖವದೆಲ್ಲಿಯದೆನಿಸಿ,
ಮುಕ್ತಿಸುಖದಿಂದಧಿಕವಿದಕೆ ಪಡಿಯಿಲ್ಲೆನಿಸಿ,
ಪರುಷವಂ ಬಿಸುಡೆಂದು, ಸುರಭಿಯಂ ತೆಗೆಯೆಂದು,
ಸುರತರುವನೊಲ್ಲೆಂದು, ಅಮೃತಮಂ ಚಲ್ಲೆಂದು,
ನಿಧಿಗಳಂ ನೂಂಕು, ಚಿಂತಾಮಣಿಯನಿಡುಕೆಂದು,
ಮಧುಗಿಧುಗಳೆಲ್ಲಿಯವವೇತಃವವೇಕೆಂದು,
ಉರವಣಿಪ ಪರಮಬಕುತಿ ಸುಖದ ಸೊಕ್ಕೇಱಿ,
ಪರಮಪದದಾನಂದ ಸುಖದ ಸುಗೆ ತಲೆಗೇಱಿ"—

ಎಂದು ಕವಿಯು ಹಾಡಿ, ಭಕ್ತಿಯು, ಮುಕ್ತಿ ಸುಖವನ್ನು ಕೊಡುವುದಾದುದರಿಂದ, ಅದು ಪರುಷ, ಸುರಭಿ, ಸುರತರು, ಅಮೃತ ನಿಧಿ, ಚಿಂತಾಮಣಿ—ಮೊದಲಾದವುಗಳೆಲ್ಲಕ್ಕಿಂತಲೂ ಹೆಚ್ಚಿನ ಸುಖವನ್ನೊದಗಿಸುತ್ತದೆಯೆಂದು ತಿಳಿಸಿದ್ದುದರಿಂಡ ಜೀವನದಲ್ಲಿ ಅದು ಪರಮಪುರುಷಾರ್ಥವೆಂದು ಹೇಳಿದ್ದಾನೆ. ಅದಕ್ಕೆ ಸಮಾನವಾದುದು ಇನ್ನೊಂದಿಲ್ಲ. ಭಕ್ತಿಯೇ ಸರ್ವಶ್ರೇಷ್ಠ ಮೌಲ್ಯವೆಂಬುದು ಹರಿಹರನ ಅನುಮತ. ಈ ಭಕ್ತಿಯನ್ನೇ ಕುರಿತು ತನ್ನ ವಿಚಾರಗಳನ್ನು ಕವಿಯು ರಕ್ಷಾಶತಕ ಪಂಪಾಶತಕಗಳಲ್ಲಿ ವಿವರಿಸಿದ್ದಾನೆ:

ಭಕ್ತಿಯು ಭವರಾಟಳದಿಂದ ಮುಕ್ತಗೊಳಿಸುವ ಸಾಧನ; ಅರಿಷಡ್ವರ್ಗಗಳನ್ನು ನಾಶಗೊಳಿಸುವ ನಾಶಕ; ಮನದ ಅಸ್ಥಿರತೆಯನ್ನು ಹೋಗಲಾಡಿಸಿ, ವಿಷಯಗಳಿಂದ ಬಿಡಿಸಿ ಪರಮಾತ್ಮನತ್ತ ತಿರುಗಿಸುತ್ತದೆ; ಬುದ್ಧಿಯ ಗರ್ವವನ್ನು ಶಮನಗೊಳಿಸುತ್ತದೆ; ಚಿತ್ತವನ್ನು ಧ್ಯಾನದಲ್ಲಿ ನಡುವಂತೆ ಮಾಡುತ್ತದೆ; ನರರ ಸೇವೆಯಿಂದ ಮುಕ್ತಗೊಳಿಸುತ್ತದೆ. ಸಂಸಾರ, ತಾಪತ್ರಯ, ದೇಹಬಾಧೆಯಿಂದ ರಕ್ಷಣೆ ನೀಡುತ್ತದೆ; ಮಾಯೆಯಿಂದ ಬಿಡಿಸುತ್ತದೆ. ಶರೀರಕ್ಕೆ ಸಾರ್ಥಕತೆಯನ್ನೀಯುತ್ತದೆ. ಸಾವ ಮುನ್ನವೆ ಸಾರ್ಥಕ್ಯಪಡೆಯಲು ವ್ಯಕ್ತಿಯು ದೇವನಲ್ಲಿ ಮೊರೆಯಿಡುವುದು ಒಂದನೆಯ ಹಂತವೆನ್ನಬೇಕು; ಈ ಹಂತದಲ್ಲಿ ಜೀವಿಯು ತನ್ನ ಉದ್ಧಾರಕ್ಕೆ ದೇವರೇ ಕಾರಣನೆಂದು ಅವನನ್ನೇ ಜನನಿ-ಜನಕ, ಗುರು, ಗೋತ್ರ, ಮಹಾಬಂಧು, ಸರ್ವಸ್ವ ಎಂದು ತಿಳಿದು, ಆತನಿಗೆ ಮಹಾದೇವ, ಮಹಾಸ್ವಾಮಿಯೆಂದು ಸಂಬೋಧಿಸಿ, ಅವನ ಸರ್ವಶಕ್ತತೆಯನ್ನು ಅರ್ಥಮಾಡಿಕೊಂಡು ತನ್ನ ಅಲ್ಪತ್ವವನ್ನೂ ಅರಿತುಕೊಳ್ಳುತ್ತಾನೆ. ಭಕ್ತಿಯು ಸಂಸಾರಾಬ್ಧಿಯನ್ನು ದಾಟಿಸಿ, ದುರಾಚಾರ ದುರ್ಬುದ್ಧಿಯನ್ನು ಕಿತ್ತು, ಶ್ರೀ ಗುರುಪದಸರಸಿಜವನ್ನು ತೋರುತ್ತದೆ; ಲಿಂಗಾರೂಢನನ್ನಾಗಿ ಮಾಡುತ್ತದೆ; ಶರಣರ ಸಂಗವನ್ನುಂಟುಮಾಡುತ್ತದೆ. ಅದಕ್ಕಾಗಿ ಭಕ್ತನನ್ನಾಗಿ ಮಾಡಿ ವ್ಯಕ್ತಿಯನ್ನು ದೇವನತ್ತ ಎಳೆಯುತ್ತದೆ. ಈ ಭಕ್ತಿಯು ಮೂರು ರೀತಿಯಲ್ಲಿ ನಡೆಯುತ್ತದೆ : ಅರ್ಚನಾರೂಪದಲ್ಲಿ ನಡೆದು ತಳಿರು, ಹೂ, ಫಲ, ಬೇರು ಮೊದಲಾದವುಗಳ ಮೂಲಕ ವ್ಯಕ್ತಿಯು ದೇವನ ಅನುರಕ್ತಿಯನ್ನು ಪಡೆಯುತ್ತಾನೆ. ಈ ಅರ್ಚನಾ ಭಕ್ತಿಯನ್ನು ಹರಿಹರ ಕವಿಯು ಪುಷ್ಪರಗಳೆಯಲ್ಲಿ ವಿವರಿಸಿದ್ದಾನೆ. ಮನಸ್ಸೆಲ್ಲ ದೇವರಲ್ಲಿ ನಟ್ಟಿರುವುದರಿಂದ ಮನದ ಆಗ್ರಹಬುದ್ಧಿ ಕೆಡುತ್ತದೆ. ಇಂದ್ರಿಯಗಳಿಗೆ ಶುದ್ಧಿಯೊದಗುತ್ತದೆ. ಪೂಜೆ ಮಾಡುವಾಗ ದೇವರನ್ನು ನೆನೆದು, ಮುದ್ದಿಸಿ ಆನಂದ ಪಡೆಯುವ ಭಾವವುಂಟಾಗುತ್ತದೆ. ದೇವರ ಮೇಲೆ ಅಧಿಕ ಪ್ರೀತಿಯುಂಟಾಗುತ್ತದೆ, 'ಅನ್ಯದೈವಕ್ಕೆರಗದ' ಭಾವವು ತಲೆದೋರುತ್ತದೆ. ಮನ, ವಾಕ್ಯ, ನೋಟ, ಕಾರ್ಯ ಮೊದಲಾದುವುಗಳಲ್ಲೆಲ್ಲ ಪರಮಾತ್ಮನ ಧ್ಯಾನವೇ ಉಂಟಾಗುತ್ತದೆ. ದೇವರನ್ನು ಪ್ರೀತಿಸಿದವರೆಂದು ಭಕ್ತ-ಶರಣರೆಲ್ಲರ ನಡೆ-ನುಡಿಗಳಲ್ಲಿ ಪ್ರೀತಿ, ಭಕ್ತಿಯುಂಟಾಗುತ್ತವೆ. ಸತತವೂ ಈ ಸುಖಕ್ಕೇ ಆಶೆಯನ್ನುಂಟುಮಾಡುತ್ತದೆ ಈ ಭಕ್ತಿ.

ಈ ವಿಧವಾದ ಮೇಲೆ ಎರಡನೆಯ ವಿಧವೆಂದರೆ – ಪ್ರಾರ್ಥನಾ ಭಕ್ತಿ. ಈ ಪ್ರಾರ್ಥನೆಯಲ್ಲಿ ದೇವನ ಅನಂತಶಕ್ತಿ, ಅನಂತಗುಣಗಳ ಬಣ್ಣನೆಯಿರುತ್ತದೆ; ಅನಂತ ಲೀಲೆಗಳ ವೈಭವ ವರ್ಣನೆಯಿರುತ್ತದೆ. ಸತತವಾದ ಪ್ರಾರ್ಥನೆಯಿಂದ ಜಿಹ್ವೆ ಶುದ್ಧವಾಗುತ್ತದೆ. ಮೂರನೆಯ ವಿಧವೆಂದರೆ – ಧ್ಯಾನದ ಭಕ್ತಿ. ಇದನ್ನೇ ಹರಿಹರ ಕವಿಯು "ನೆನೆ, ಪೊಗಳು, ಅರ್ಚಿಸು ಎಮ್ಮ ಕಡುಸೊಂಪಿನ ಪೆಂಪಿನ ಹಂಪೆಯಾಳ್ದನಂ" ಎಂದು ಹೇಳಿದ್ದಾನೆ. ದೇವನನ್ನಲ್ಲದೆ ಬೇರೊಬ್ಬನ ಸ್ತುತಿಗಾಗಿ ನಾಲಗೆಯನ್ನು ಬಳಸಬಾರದೆಂದು ಭಕ್ತಿಯು ತಿಳಿಸುತ್ತದೆ. ದೇವನನ್ನಲ್ಲದೆ ವ್ಯಕ್ತಿಗಳನ್ನು ಸ್ತುತಿಸುವುದಾದರೆ ದೇವನನ್ನು ಕಾಣಲು

ಹಂಬಲಿಸುವ ಭಕ್ತ-ಶರಣರನ್ನು ಸ್ತುತಿಸಬಹುದೆಂದು ಹರಿಹರಕವಿಯು ಭಕ್ತ–ಶರಣರನ್ನು ಕೊಂಡಾಡಿದ್ದಾನೆ. ಆತನ ಭಕ್ತಿಯು ಶಿವ, ಶಕ್ತಿ ಮತ್ತು ಶರಣರನ್ನು ಕೊಂಡಾಡುವುದೇ ಆಗಿದೆ. ಶಿವನನ್ನು ಗುರು ರೂಪದಲ್ಲಿ, ಲಿಂಗರೂಪದಲ್ಲಿ, ಜಂಗಮರೂಪದಲ್ಲಿ, ಶರಣರರೂಪದಲ್ಲಿ, ಭಕ್ತರ ರೂಪದಲ್ಲಿ ಕೊಂಡಾಡುತ್ತಾನೆ ಕವಿ. ಗಿರಿಜಾಕಲ್ಯಾಣದಲ್ಲಿ ಅದು ಶಿವ–ಶಕ್ತಿಯರ ಆರಾಧನೆಯಾಗಿದೆ. ಅನೇಕ ಶರಣರಕಥೆಗಳಲ್ಲಿ ಲಿಂಗರೂಪದಲ್ಲಿ, ಜಂಗಮ ರೂಪದಲ್ಲಿ ಆರಾಧನೆ ಮಾಡಿದುದಾಗಿದೆ. ಹರಿಹರನ ಭಕ್ತಿಯು ದೇವನ ಆರಾಧನೆಯ ರೂಪದಲ್ಲಿ ಪ್ರಕಟಗೊಂಡಾಗ ಅದು ಶಿವಾರಾಧನೆ – ಲಿಂಗಾರಾಧನೆಯಾಗಿ ಹೊರಹೊಮ್ಮಿದೆ. ಶಿವನನ್ನಲ್ಲದೆ ಬೇರೊಂದು ದೈವಕ್ಕೆ ತಲೆಬಾಗುವುದು, ಬೇರೊಂದು ದೈವವನ್ನು ಮನ್ನಿಸುವುದು, ಆರಾಧಿಸುವುದು ಹರಿಹರ ಕವಿಗೆ ಹಿಡಿಸದ ಮಾತು. ಮನುಷ್ಯನು ಕಣ್ಮರೆಯಾಗುವಾಗ ಅವನೊಡನೆ ಯಾವುದೂ ಬರುವುದಿಲ್ಲ. ತಂಡದ "ಪಾಪಪುಣ್ಯವಿವೆ ಬರ್ಪುವು" ಆದರಿಂದ ಮಹೇಶನನ್ನು ಅರ್ಚಿಸು, "ಬೇಡಿದುದನೊಲಿದೀವ"; ಆದರಿಂದ "ಮಹಾನಿಧಿ"ಯನ್ನರ್ಚಿಸು ಎಂದು ಕವಿಯು ಹೇಳುತ್ತಾನೆ. "ಏಕೋದೇವಃ ಹರಃ" ಎಂಬ ಸಿದ್ಧಾಂತ ಹರಿಹರ ಕವಿಯದು.

"ಎರಡುಂಟೆಂಡೆನುತಿರ್ಪ ಪಾತಕರ ಮಾತಂ ಮೀರುವೆಂ"

ಎಂದು ನುಡಿದುದು ಈ ಕಾರಣದಿಂದ. ಈ ತತ್ವದಲ್ಲಿ ಅಚಲವಾದ ನಂಬಿಕೆ ಹರಿಹರ ಕವಿಯದು. " ಹರಂಗೆ ಶಶಿಭೂಷಣಂಗೆ ಈಶ್ವರಂಗೆ ನಾಲಗೆಯಂ ಮಾಜಿಿದೆಂ" ಎಂದಿದ್ದಾನೆ. ಈ ಹಿನ್ನೆಲೆಯಲ್ಲಿ ಹರಿಹರ ಕವಿಯ ಭಕ್ತರ–ಶರಣರ ಚರಿತ್ರೆಗಳನ್ನು ಅವಲೋಕಿಸಬೇಕು.

[೨]

ಶ್ರೀ ನಿಜಗುಣ ಶಿವಯೋಗಿಗಳು 'ಕೈವಲ್ಯ ಪದ್ಧತಿ'ಯಲ್ಲಿ ಭಕ್ತಿಯ ಲಕ್ಷಣವನ್ನು ಇಂತು ವಿವರಿಸಿದ್ದಾರೆ:

"ಆವ ಕಾಲದೊಳು ಬಳಿಕಾವ ದೇಶದೊಳು ಬೇ
ರಾವ ವಸ್ತುವಿನೊಳೊಡವೆರೆಯದಲೆ–ಮಮತೆ–
ಆವ ಪರಿಯೊಳು ತನ್ನ ಮೇಲಿರ್ಪುದಂತೆ–ಗುರು
ದೇವತೆಯೊಳನುರಾಗವಿಹುದೆ ನಿಜ ಭಕ್ತಿ".–

(ನೀತಿಕ್ರಿಯಾಚರ್ಯಸ್ಥಲ)

" ತನ್ನ ಮೇಲಿರುವಂತಹ ಅನುರಾಗವನ್ನು ಗುರು ದೇವತೆಗಳಲ್ಲಿಡುವುದೇ ನಿಜ ಭಕ್ತಿ " ಎಂದು ಹೇಳಿರುವ ಮಾತು ಹರಿಹರ ಕವಿಯ ಭಕ್ತಿಗೂ ಅನ್ವಯಿಸುತ್ತದೆ. ಅಲ್ಲದೆ ಭಕ್ತಿಯ ಬಗೆಗೆ ಈ ರೀತಿಯ ತಿಳುವಳಿಕೆಯನ್ನು ನಿಜಗುಣರು ಹೇಳಿದುದನ್ನು ಗಮನಿಸಬೇಕು. ಅವರು ಕರ್ಮಕ್ಕೂ ಭಕ್ತಿಗೂ ಇರುವ ವ್ಯತ್ಯಾಸವನ್ನೂ ಈ ಕೆಳಗಿನ ಎರಡು ಪದ್ಯಗಳಲ್ಲಿ ತಿಳಿಸಿದ್ದಾರೆ.

ಕರ್ಮ:

"ದೇಹಾಭಿಮಾನವೆರಸಿ ಕೃತ್ಯನಿಚಯವ–
ನೂಹಿಸಿ ಮಾಡಿಯವರ ಫಲಗಳನು
ಸಾಹಸಿಯಾಗಿ ಭೋಗಿಪ ಕರ್ತೃ ತಾನೆಂದು
ಮೋಹವೆ ಭವಬೀಜವಹುದಿದು ಕರ್ಮಕಾಂಡ".

ಭಕ್ತಿ:

"ತಾನು ತನ್ನಸು ತನುಗುಣ ಕರ್ಮವಿಷಯ ಸಂ–
ತಾನ ಕರಣಭೋಗ ಭವನಾದಿಗಳನು
ಸಾನುರಾಗದೆ ಶಂಭುಲಿಂಗವೆಂದರಿದಭಿ
ಮಾನವಿಲ್ಲದುದೆ ಮುಕ್ತಿಯನೀವ ಭಕ್ತಿಕಾಂಡ"

ದೇಹಾಭಿಮಾನವಿಲ್ಲದೆ–ತನ್ನದೆಂದರಿಯದೆ ಪರಮಾತ್ಮನದೆಂಬ ಅರ್ಪಣಾಭಾವದಿಂದ ಸಮಸ್ತ ಕ್ರಿಯೆಗಳನ್ನು ನಡೆಸುವುದೇ ಭಕ್ತಿಯೆಂದು ತಾತ್ಪರ್ಯ. ಈ ಭಾವವನ್ನೇ ಹರಿಹರ ಕವಿಯು ತನ್ನ ಕೃತಿಗಳಲ್ಲಿ ರೂಪಿಸಿದ್ದಾನೆ. ಮುಖ್ಯವಾಗಿ ಭಕ್ತಿಯಲ್ಲಿ ನಾವು ನೋಡಬೇಕಾದ ಗುಣಗಳೆಂದರೆ: (1) ದೇಹಾಭಿಮಾನವನ್ನು ತೊರೆದು ಪರಮಾತ್ಮನಿಗಾಗಿ ಸರ್ವ ಚಟುವಟಿಕೆ ನಡೆಸುವುದು. (2) ತಾನು–ತನ್ನಸುವಿನೊಳು ಇಡುವಂತಹ ಅನುರಕ್ತಿಯನ್ನು ಗುರು–ದೇವತೆಗಳಲ್ಲಿಡುವುದು ಇವು ಮುಖ್ಯವೆನ್ನಬಹುದು. ಈ ತತ್ವಗಳಿಗನುಗುಣವಾಗಿ ನೋಡಿದರೆ ಹರಿಹರನ ಕಥಾನಾಯಕರು ತಮ್ಮನ್ನು–ಅವಲಂಬಿಸಿದ ಪತ್ನಿ, ಪುತ್ರ–ಪುತ್ರಿ, ತಂದೆ–ತಾಯಿ ಇತರ ಯಾವುದರ ಮೇಲೆಯೂ ಅಭಿಮಾನ, ಮಮತೆ, ಮೋಹಾದಿಗಳನ್ನಿಡದೆ, ತನು–ಮನ–ಧನಗಳನ್ನು ಒಡಲ ಕಳವಳಕ್ಕೆ ಬಳಸದೆ, ಸ್ವಾರ್ಥಕ್ಕೆ ಬಳಸದೆ, ಗುರುಪೂಜೆ–ಲಿಂಗಪೂಜೆ–ಜಂಗಮ ದಾಸೋಹಕ್ಕೆ ಬಳಸಿಕೊಂಡು, ತನು-ಮನ-ಧನ, ಸತಿ-ಸುತ-ಪುತ್ರಿಯರನ್ನು ಸಾರ್ಥಕಗೊಳಿಸಿದರು. ಭಗವಂತನ ಇಚ್ಛೆಯನ್ನು ನೆರವೇರಿಸಿ ಪರಮಾತ್ಮನ ಅನುಗ್ರಹಕ್ಕೆ ಪಾತ್ರರಾದರು.

[೩]

ಪರಮಾತ್ಮನಿಗೆ ಜೀವಿಯು ತೋರಬೇಕಾದ ಅನುರಕ್ತಿಯು ಹಲವು ವಿಧಗಳಲ್ಲಿರುವುದು ಸಾಧ್ಯವಿದೆ. ಆದುದರಿಂದ ಅದನ್ನು ಇಷ್ಟೇ ವಿಧ ಎಂದು ಹೇಳುವುದು ದುಸ್ತರವೇ ಸರಿ. ಆದರೂ ಭಕ್ತಿಯನ್ನು ನವವಿಧವಾಗಿಯೂ, ಆರುವಿಧವಾಗಿಯೂ ವಿಂಗಡಿಸುತ್ತಾರೆ. ವೈದಿಕ ಭಕ್ತಿಯು ನವವಿಧವಾಗಿದ್ದರೆ ವಚನಕಾರರು ಭಕ್ತಿಯನ್ನು ಆರುವಿಧವೆಂದು ವಿಂಗಡಿಸುತ್ತಾರೆ. ಷಟ್ಸ್ಥಲಕ್ಕನುಗುಣವಾಗಿ ಭಕ್ತಿಯೂ ವಿಕಾಸಹೊಂದುವುದನ್ನು ಹೇಳುತ್ತಾರೆ. ಹರಿಹರನಲ್ಲಿ ಅದು ಬಹುರೂಪಿಯಾಗಿದೆ. ಭಕ್ತರ ಕಥೆಗಳನ್ನು ಕವಿಯೇ ಒಂದೆರಡೆಡೆ ವಿಂಗಡಿಸಿ ಅವರನ್ನು ಹೀಗೆ ವರ್ಣಿಸಿದ್ದಾನೆ :

(ಅ) "ಪೂಜೆಯವರೊಂದು ದೆಸೆ, ನಿಷ್ಠೆಯವರೊಂದು ದೆಸೆ,
ಓಜೆಯವರೊಂದು ದೆಸೆ, ಒಲುಮೆಯವರೊಂದು ದೆಸೆ,
ಓದಿನವರೊಂದು ದೆಸೆ, ವೇದಿಸುವರೊಂದು ದೆಸೆ,
ವಾದಿನವರೊಂದು ದೆಸೆ, ಸಾಧುಗಳದೊಂದು ದೆಸೆ,

ಭಕ್ತಿಯವರೊಂದು ದೆಸೆ, ಯುಕ್ತಿಯವರೊಂದು ದೆಸೆ,
ಶಕ್ತಿಯವರೊಂದು ದೆಸೆ, ಮುಕ್ತಿಯವರೊಂದು ದೆಸೆ".

(ಕಣ್ಣಪ್ಪದೇವನರಗಳೆ)

ಲೌಕಿಕದಲ್ಲಿ ನಿರ್ಮೋಹವನ್ನು ತಾಳಿ ಪರಮಾತ್ಮನಿಗಾಗಿ ಎಂತೆಂತಹ ಕಾರ್ಯಗಳನ್ನು ಭಕ್ತರು ಕೈಕೊಂಡರೆಂಬುದನ್ನು ಹರಿಹರ ಕವಿಯು ಇಂತು ಬಣ್ಣಿಸಿದ್ದಾನೆ:

(ಆ) "ಪಿತನೆಂದು ನಿಂದನೇ ತಂಡೇಶನಾ ಪೊತ್ತು ?
ಸುತನೆಂದು ಮಾಣ್ದನೇ ಸಿರಿಯಾಳನಾಪೊತ್ತು ?
ಪುಸಲೆಯಾಂಡಂ ತನ್ನ ಗರ್ಭದೊಳಗಿರಿಸನೇ ?
ವಸುಧೆಯೊಳಗಲ್ಲನುಂ ಕೈಯಿಂದ ಬಿಟ್ಟನೇ ?
ಭಿನ್ನರುಚಿ ಭಿನ್ನಭಾವಂ ಭಕ್ತಿಯುಲೆ ಮಗನೆ;
ನಿನ್ನೆನ್ನ ವಶವೇ ಶರಣರ ಚರಿತ್ರಂ ಮಗನೆ;
ಇಂತೊಂದು ತೆರನೆನಲ್ಬಾರದೆನ್ನಯ ಭಕ್ತಿ;

ವೀರರುಂ ಶಾಂತರುಂ ನೇಮದಚಲಿತರುಂಟು;
ಧೀರರುಂ ಗುಪ್ತರುಂ ಕರುಣಮುಳ್ಳವರುಂಟು;
ಕಡುಮೋಹಿತಂ ಕೇಳು ಕಲಿಕಾಮನಿಂದೆನಗೆ".

(ಕಲಿಕಾಮದೇವರ ರಗಳೆ)

ಕಡುನಿಷ್ಠೆ, ಮನಸ್ಸಿನ ಪ್ರೀತಿ, ಇವು ಶಿವನಿಗೆ ಪ್ರಿಯವೇ ವಿನಾ, ಉಪಚಾರ, ಒಣ ಬೋಧೆಗಳಲ್ಲವಂತೆ. ಎಷ್ಟು ಜನ ಭಕ್ತರೋ ಅಷ್ಟೊಂದು ವಿಧದ ಭಕ್ತಿಯಿದೆಯೆಂದು ಹರಿಹರ ಕವಿಯು ಅಭಿಪ್ರಾಯ ಪಡುತ್ತಾನೆ.

[೪]

ವ್ಯಕ್ತಿಗಳ ಮನೋಭಾವಕ್ಕನುಗುಣವಾಗಿ ಸಾಮಾನ್ಯವಾಗಿ ದೇವರಿಗೆ ತೋರಿಸುವ ಭಕ್ತಿಯನ್ನು ಮೂರು ವಿಧವಾಗಿ ಕೊಂಡಾಡುತ್ತಾರೆ: ಅ) ಸಾತ್ವಿಕ ಮನೋಭಾವದ್ದು;
ಆ) ರಾಜಸ ಮನೋಭಾವದ್ದು;
ಇ) ತಾಮಸ ಮನೋಭಾವದ್ದು.

ಸಾತ್ವಿಕ ಮನೋಭಾವದವರು ತಮ್ಮ ಪೂಜೆ, ಧ್ಯಾನಗಳ ಬಗೆಗೆ ಪ್ರಚಾರ ಮಾಡಿಕೊಳ್ಳುವುದಿಲ್ಲ; ವೈಭವ ಡಂಭಾಚಾರಗಳನ್ನು ಪ್ರದರ್ಶಿಸುವುದಿಲ್ಲ. ದೇವನಲ್ಲಿ ಅತ್ಯಂತ ಮಮತೆಯನ್ನು ವ್ಯಕ್ತಪಡಿಸುತ್ತಾರೆ. ಇದು ಜಾತಿ-ಕುಲಗಳನ್ನು ಅವಲಂಬಿಸಿರುವುದಿಲ್ಲ; ಕೈಕೊಂಡ ವೃತ್ತಿಯನ್ನೂ ಅವಲಂಬಿಸಿರುವುದಿಲ್ಲ. ಈ ಭಕ್ತಿಯ ರಹಸ್ಯವನ್ನು ಹರಿಹರ ಕವಿಯು ಮಹಾ ಶಿವಭಕ್ತನಾದ ಬೇಡರ ಕಣ್ಣಪ್ಪದೇವನ ರೋಮಾಂಚಕಾರರ ಕಥೆಯಲ್ಲಿ ಇಂತು ವಿವರಿಸುತ್ತಾನೆ; ಈ ಮಾತುಗಳನ್ನು ತಿಳಿಸುವುದಕ್ಕಾಗಿಯೇ ಹರಿಹರ ಕವಿಯು ಬೇಡರ ಕಣ್ಣಪ್ಪನ ಕಥೆಯಲ್ಲಿ ಒಬ್ಬ ಪಾರ್ವನ ಭಕ್ತಿಯ ಚಿತ್ರಣವನ್ನೂ ಚಿತ್ರಿಸಿದ್ದಾನೆ. ಪಾರ್ವನು ನಿತ್ಯವೂ ಮಿಂದು, ಭಸಿತವನಿಟ್ಟು, ಶಿವಶಿವಾಯೆಂದು, ಶಾಸ್ತ್ರೋಕ್ತವಾಗಿ ಶಿವಾರಾಧನೆ ಮಾಡಿ, ಉಪಾಹಾರವಿತ್ತು, ಪ್ರದಕ್ಷಿಣವ ಕೈಕೊಂಡರೆ ಶಿವನು ಅವನಿಗೊಲಿಯದೆ ಬೇಡರ ಕಣ್ಣಪ್ಪನ "ಧರಣಿಗೆ ವಿರುದ್ಧ ಚರಿತ್ರ"ವನ್ನು ಶಿವನು ಮೆಚ್ಚಿದನೆಂದು ಪಾರ್ವತಿ ತಿಳಿಸಿದುದಕ್ಕೆ ಶಿವನು ಇಂತು ಉತ್ತರಿಸುತ್ತಾನೆ:

"ಪಾರ್ವನಗ್ಘವಣಿ ತಿಳಿ, ಮನ ಕದಡು ಎಲೆ ಗೌರಿ !
ಪಾರ್ವನರ್ಚನೆಯೆಂದು, ಮನಸತಿ ವಿಷಂ ಗೌರಿ !
ಅವನಿಟ್ಟ ಭಸಿತವವನಂ ಮುಟ್ಟದೆಲೆ ಗಿರಿಜೆ !
ಅವನ ರುದ್ರಾಕ್ಷಿಯವನಂ ಪೊರ್ದದೆಲೆ ಗಿರಿಜೆ !
ಬಾಯ ಮಂತ್ರಂ, ಮನದ ಭವಿತನವದೇಂ ಲೇಸೆ ?
ಕಾಯ ವೇಷಂ ಮನದ ಭವಿತನವದೇಂ ಲೇಸೆ ?
ಸತ್ಯವಿಲ್ಲದ ಪೂಜೆ ಸಸಿನವಪ್ಪುದೆ ಗೌರಿ ?
ಸತ್ಯವಿಲ್ಲದ ಹಾಡು ಸೊಗಸಪ್ಪುದೇ ಗೌರಿ ?
ಮನವಿಲ್ಲದವ ಮುಟ್ಟೆ ಬಡಿವಡೆದ ತೆಱನೆನಗೆ !
ಮನವುಳ್ಳವಂ ಬಡಿಯೆ ಪೂಜಿಸಿದ ತೆಱನೆನಗೆ !"

ಎನ್ನ ಭಕ್ತನಾದ ಬೇಡರ ಕಣ್ಣಪ್ಪನನ್ನು ಬೇಡರವನೆಂದು ಹೀಯಾಳಿಸುವೆ. ಅವನು:

"ಬೇಡನವನಿಂದ್ರ ರವಿ ಚಂದ್ರಾದಿ ಪದವಿಯಂ;
ಬೇಡನವನಜಹರಿಗಳೆಳಸಿಪ್ಪ ಪದವಿಯಂ;
ಎನ್ನನಲ್ಲದೆ ಬೇಡನೆನ್ನನಲ್ಲದೆ ನೋಡ;
ನೆನ್ನನಲ್ಲದೆ ಹಾಡನೆನ್ನನಲ್ಲದೆ ಕೂಡ";

ಎಂದು ಹೇಳಿ ಪಾರ್ವನ ಭಕ್ತಿಯ ಹೀನತೆಯನ್ನು ಬೇಡನ ಭಕ್ತಿಯ ಶುದ್ಧಿಯನ್ನು ಕೊಂಡಾಡಿ ಹರಿಹರ ಕವಿಯು ಭಕ್ತಿಯ ಮರ್ಮವನ್ನೇ ಹೊರಗೆಡಹಿದ್ದಾನೆ. ಬೇಡರವನಾದ ಕಣ್ಣಪ್ಪ ಜಾತಿಯಿಂದ ಹೀನ ಕುಲಜ; ವೃತ್ತಿಯಿಂದ ಪಶುಕರ್ಮಕಾರ; ಆದರೆ ಅವನ ಭಾವವು ಅತ್ಯಂತ ಮೃದು, ಶುದ್ಧ; ಮನಸ್ಸು ಮುಗ್ಧ. ಮುಗ್ಧರ ಮನಸ್ಸಿನ ಶುದ್ಧಿ ಶಿವನಿಗೆ ಹಿತಕರ; ಭಕ್ತಿಯಲ್ಲಿ ಶ್ರೇಷ್ಠವಾದುದು; ಯಾವ ಬೇಡಿಕೆಯನ್ನೂ ದೇವರಮುಂದಿಡದೆ ಪ್ರೀತಿಗಾಗಿಯೇ ಪ್ರೀತಿ, ಜೀವನ ಸ್ವಾರ್ಥಕ್ಕಾಗಿಯೇ ಭಕ್ತಿಯನ್ನು ನಡೆಸಿದುದು. ನೋಡಲು ಬೇಡರವನು ತಾಮಸಿಯೆಂದೆನಿಸಬಹುದು. ಆದರೆ ವಸ್ತುಸ್ಥಿತಿ ಹಾಗಲ್ಲ ಅವನ ಭಕ್ತಿಯಲ್ಲಿ ವ್ಯಾಪಾರವಿರಲಿಲ್ಲ.

ನಂಬಿಯಣ್ಣನದು ಸಖ್ಯಭಕ್ತಿ; ಶಿವನನ್ನು ಸಖನನ್ನಾಗಿ ಮಾಡಿಕೊಂಡವನೀತ. ಈತನ ನಂಬಿಕೆಗೆ ಒಲಿದು ಶಿವನು ಅವನಿಗೆ ಕುಂಟಣಿತನಮಾಡಿದನಂತೆ! ಅದರಂತೆ ಭೋಗಣ್ಣ, ದಾಸ, ಬಾಣ ಇವರಿಗೆ ಭಕ್ತರ ಇಷ್ಟಾರ್ಥ ಪೂರೈಸಲು ಶಿವನು ಅವರ ಸೇವೆ ಮಾಡಿದ. ಸಾಂಖ್ಯತೊಂಡನು ಕಲ್ಲಿನಿಂದು ಹೊಡೆದರೂ ಅದನ್ನು ದೇವರು ಸಹಿಸಿದನಂತೆ. ಇದೆಲ್ಲ ಅಜ್ಞ, ಮುಗ್ಧಮನದವರು ತೋರಿದ ಭಕ್ತಿ. ಅವರ ಅಜ್ಞತೆಯಲ್ಲಿ ಅನುಪಮದೈವಭಕ್ತಿಯಿದೆ; ಭಕ್ತ-ದೇವರ ನಡುವಿನ ಹೃದಯಂಗಮ ಸಂಬಂಧವಿದೆ. ಶಿವಭಕ್ತರು ಶಿವನ "ನೋವು ನಿಂದೆ"ಗಳನ್ನು ಸಹಿಸಲಾರರು. ಅದಕ್ಕಾಗಿ ಕಲಿಕಾಮದೇವನೆಂಬ

ಭಕ್ತನು ನಂಬಿಯಣ್ಣನೊಡನೆ-ತಿರುವಾರೂರ ಭಕ್ತರೊಡನೆ ಯುದ್ಧಕ್ಕೆಯೇ ಹೋಗುತ್ತಿದ್ದ. ಆತನ ಭಕ್ತಿ 'ವೀರಭಕ್ತಿ'. ಆತನು ಭಾಷೆ ಕೊಟ್ಟಮೇಲೆ ಪ್ರಾಣಹೋದರೂ ಬಿಡುವಂತಹನಲ್ಲ.

ಮಾದರ ಚೆನ್ನಯ್ಯಗಳ ರಗಳೆಯಲ್ಲಿ ಕವಿಯು ಮಾದರ ಚೆನ್ನಯ್ಯ ಮತ್ತು ಕರಿಕಾಲ ಚೋಳ ಇವರುಗಳ ಭಕ್ತಿಯ ವೈಶಿಷ್ಟ್ಯ—ವೈವಿಧ್ಯಗಳನ್ನು ತೋರಿದ್ದಾನೆ. ಕರಿಕಾಲ ಚೋಳನು 'ಹರಭಕ್ತನೂ' 'ಗುರುಭಕ್ತನೂ', 'ಸತ್ಯಶೀಲನೂ' ಆಗಿದ್ದನು. ಆತನ ಸೇವಕ ಮಾದರ ಚೆನ್ನಯ್ಯನು ಅವನಲ್ಲಿ ಕುದುರೆಗಳಿಗೆ ಹುಲ್ಲು ತರುವ ಕಾಯಕ ಕೈಕೊಂಡವ; 'ಲಿಂಗಾಭಿಮಾನಿ', 'ಲಿಂಗಪ್ರಾಣಿ', 'ಗುಪ್ತ ಶಿವಾರಾಧನೆಯನ್ನು ಮೆಚ್ಚಿದವ'. ಕಾಯಕದೊಡನೆ ಲಿಂಗಭಕ್ತಿಯನ್ನು ಬೆಳೆಸಿಕೊಂಡವನು. ಕಾಯಕದಿಂದ ಬಂದುದನ್ನೇ ಅಮೃತವನ್ನಾಗಿ ಸವಿದವನು; ಬಾಳು ಬಡತನದಿಂದ ಕೂಡಿತ್ತು. ಶಿವನಿಗೆ ಅತಿ ಆಪ್ತನಾತ. ಅರುವತ್ತು ವರುಷ ಪೂಜೆ ಮಾಡಿ ಶಿವಭಕ್ತಿಯನ್ನು ಬೆಳೆಸಿಕೊಂಡಿದ್ದ ಶರಣ. ಆತನ ಭಕ್ತಿ ಶಿವನಿಗೆ ಅತಿ ಹಿತವೆನಿಸಿತ್ತು. ಚೋಳರಾಜನೂ ಭಕ್ತಿಯಿಂದ ಲಿಂಗಾರಾಧನೆ ಮಾಡುತ್ತ ಬಂದವ. ಚೆನ್ನನದು ಜಡಭಕ್ತಿಯಾದರೆ ಚೋಳರಾಜನದು ಸಿರಿವಂತ ಭಕ್ತಿ. ದೇವಾನ್ನ ದಿವ್ಯಾನ್ನಗಳನ್ನು ಶಿವನಿಗಿತ್ತರೂ ಶಿವನು ಸ್ವೀಕರಿಸದೆ ಚೆನ್ನನ ಅಂಬಲಿ ಸ್ವೀಕರಿಸುತ್ತಿದ್ದ ! ಇದು ಚೋಳನಿಗೆ ಆಶ್ಚರ್ಯ. ಇದನ್ನು ತಿಳಿದು ಅಂತರಂಗ ಸಂಪನ್ನನಾದ ಚೆನ್ನಯ್ಯನನ್ನು ಎನ್ನನಿಧಿ, ಎನ್ನಗುರು, ಎನ್ನಹರ, ಷಡುವರ್ಗದೂರ—ಎಂದು ಕೊಂಡಾಡುತ್ತ ಅವನ ಗುಡಿಸಲಿಗೆ ಬಂದು ಚೆನ್ನನಂಘ್ರಿಯೊಳು ಚೋಳನು ತನ್ನ ಸರ್ವಾಂಗಮಂ ಇಳುಹುತ್ತಾನೆ. ಆಗ "ಸರ್ವಜ್ಞ, ನಿನ್ನ ಕೆರ್ಪಿಂಗೆನ್ನ ಶಿರ ಸರಿಯೆ" ಎನ್ನುತ್ತಾನೆ—ಚೋಳಭೂಪ. ಒಬ್ಬ ರಾಜನು ಬಡ ಶಿವಭಕ್ತನೂ ಮಾದರಕುಲದವನೂ ಆದವನ ಪಾದಗಳಿಗೆ ಬೀಳುವುದು ಕ್ರಾಂತಿಯ ವಿಷಯವಾದರೂ ರಾಜಸಭಕ್ತಿ ಸಾತ್ವಿಕ ಭಕ್ತಿಗೆ ಮಣಿಯಬೇಕಾದು ನ್ಯಾಯವೇ ಎಂಬುದು ಕವಿಯ ಭಾವನೆ. ತಿರುನೀಲಕಂಠರದು ಶಾಂತಭಕ್ತಿ; ಗುಪ್ತ ಭಕ್ತಿಯೂ ಅಹುದು. ತಿರುನೀಲಕಂಠರು ಪ್ರಚಾರಪ್ರಿಯರಲ್ಲ; ನೋವು ತೊಂದರೆಗಳನ್ನು ಅಂತರಂಗದಲ್ಲಿ ಶಿವನಿಗೂ ಹೇಳಿಕೊಂಡರೋ ಇಲ್ಲವೋ. ಅಂತಹ ತಾಳ್ಮೆಯ ಪ್ರತಿಮೂರ್ತಿಗಳವರು; ಅಚಲಿತ ಭಕ್ತಿ ಅವರದು. ಶರಣರನ್ನು ಕುಲಜರೆಂದು, ಹರಭಕ್ತರನ್ನು ತಾಯ್ತಂದೆಗಳೆಂದು, ಲಿಂಗವನ್ನೇ ಪ್ರಾಣವೆಂದು ಶಿವಭಾವನೆಯಿಂದ ಕರ್ತವ್ಯಗಳನ್ನು ನೆರವೇರಿಸಿದವರು. ಹೊರಗೆ ಕೃತಿಯಿಂದ ಶಿವಾಚಾರ, ಆಚರಣೆಯಿಂದ ಲಿಂಗಾರ್ಚಾನೆ; ಮನದ ಧ್ಯಾನದಿಂದ ಲಿಂಗಾರ್ಚನೆ ಮಾಡಿದವರು. ಜೀವನದ ಸುಖದುಃಖಗಳೆಲ್ಲವನ್ನೂ ಸದಾಶಿವನೇ ಮಾಡಿದನೆಂದು ತಿಳಿದವರು; ಭಕ್ತಿ ಅಭಿಮಾನಿಗಳು, ಶಿವಸ್ನೇಹಿಗಳು. ಈ ಸ್ನೇಹದ ಮುಂದೆ ತಮ್ಮ ಲೌಕಿಕ ಸಂಬಂಧವು ದೊಡ್ಡದಾಗಿ ಕಾಣಲಿಲ್ಲ. ಭಕ್ತರನ್ನು ವಿನಮಿತ ಭಾವದಿಂದ ಕಂಡು ಶಿರಬಾಗುತ್ತಿದ್ದವರು. ಕೋಪವೆಂಬ ಕಿಚ್ಚಿನ ಗಾಳಿಯೂ ಅವರನ್ನು ಸೋಂಕಲಿಲ್ಲ. ಹೊಡೆದಾಗ, ಬೈದಾಗ, ನಿಂದಿಸಿದಾಗ ಅವರು ಯಾವುದನ್ನೂ ಗಣಿಸದೆ, ಇದೆಲ್ಲಕ್ಕೂ ಶಿವನೇ ಕಾರಣನೆಂದು ತಿಳಿದವರು. "ಡಂಬಿನ ಭಕ್ತಿ ಹರಲೆಯೊಳು ತಂದಿಕ್ಕುತ್ತದೆಯೆಂದು" ತಿಳಿದವರು. ಶಿವನ ಪರೀಕ್ಷೆಯಲ್ಲಿ ಗೆದ್ದವರು. ಶಿವದರ್ಶನವಾಗಿ ಕೈಲಾಸಕ್ಕೆ ಹೋದಾಗ ಶಿವನು ಅಲ್ಲಿ ತಿರುನೀಲಕಂಠರನ್ನು ನಂದೀಶನಿಗೆ ಪರಿಚಯಿಸಿ "ಈ ನೆಲದೊಳಾರುವಂ ಪೋಲದವರಿಂತಿವರು" ಎಂದು ತಿಳಿಸುತ್ತಾನೆ. ಮಾನಿಗಳಾದ ಅವರಿಗೆ ಬದುಕಿನಲ್ಲಿ ಶಿವಪ್ರೇಮವೆಂಬುದು ಸ್ಫುರಣೆಯಿಂದ ಬೆಳೆದಿದೆ. ನುಡಿಯಲ್ಲಿ ಲಿಂಗವೇ ಮೆಚ್ಚಬೇಕು, ಅಂತಹ ಶಾಂತರಿವರು. ಇಹಃ ಪಗೆಯಾಂಡರು ಮಹಾದಾನಿ. ಇಲ್ಲೆನ್ನದೆ ಶಿವನಿಗೆ ಶಿವಭಕ್ತರಿಗೆ ದಾನವನ್ನಿತ್ತ ಮಹಾಶರಣನೀತ. ಕರೆದುಕೊಡುವ ದಾನಿಯೀತ. ಭಕ್ತಿಯು ಔದಾರ್ಯದಿಂದ ಕೂಡಿದುದು. ಭಸ್ಮವ ಧರಿಸಿಬಂದವರಲ್ಲಿ ಕುಂದುಕಾಣದಿಹ ಶರಣನೀತ. ತನ್ನ ಪತ್ನಿ ಪತಿಹಿತವನ್ನೇ ಪರೀಕ್ಷಿಸಲು ವಿಟನಾಗಿ ಬಂದ ಶಿವನಿಗೆ ಅರ್ಪಿಸಿ ಅಭಿಮಾನವನ್ನು ಕಳೆದುಕೊಂಡು ಶುದ್ಧಜೀವಿಯಾದನು. ತನ್ನ ಅಭಿಮಾನ, ಲೋಕಾಪವಾದ ಇವೊಂದೂ ಶಿವಭಕ್ತಿಯ ಮುಂದೆ ಮಹತ್ವವೆನಿಸಲಿಲ್ಲ. ಕೊಟ್ಟ ಪತ್ನಿಯನ್ನು ಮರಳಿಪಡೆಯಲು 'ಪತಿಹಿತವೆಯ' (ಇಹಃಪಗೆಯಾಂಡರ ಪತ್ನಿ) ಬಂಧುಗಳು ಪ್ರಯತ್ನಿಸಲು ಅವರೊಡನೆ ಕಲಿತನದಿಂದ ಹೋರಾಡಿದ ವೀರಭಕ್ತನೀತ. ಕಲಿಕಾಮದೇವನ ವರ್ಗಕ್ಕೆ ಸೇರಿದವನು. ಆದರೆ ದೇವನೊಲಿದುದು ಅಭಿಮಾನವನ್ನೇ ಶಿವನಿಗರ್ಪಿಸಿದುದಕ್ಕಾಗಿ. ವೈರಿಗಳೆಲ್ಲರೂ ಈ ಶರಣನ ಮೇಲೆ ಬಿದ್ದಾಗ ವಿಟವೇಷದೀಶ್ವರನಿಗೆ ಅವನು "ಎಲೆದೇವಾ, ತಲೆಹೋದಡೆ ಅಟ್ಟಿಯೊಳವಂದಿರಂ ಕೊಂದಪೆಂ" ಎಂಬ ಛಲ ಆತನದು. ಉಗ್ರ ಶರಭ, ವೀರಭದ್ರನ ಹಾಗೆ ತೋಳ್ಗಿ ವೀರಶ್ರೀಯಪಟ್ಟಕಟ್ಟಿ ಕಾದಾಡಿದ ಕಲಿಯೀತ. ಈತನನ್ನು ಕೈಲಾಸಕ್ಕೆ ಕರೆದೊಯ್ದು ಶಿವನು ನಂದೀಶನಿಗೆ ಎನ್ನ ಭಕ್ತರು : "ಅಭಿಮಾನಿಗಳು, ಅನಿಂದ್ಯರು, ಮಾನಿಗಳು, ದಾನಿಗಳು, ಏನನ್ನೂ ಎನ್ನಿಂದ ಬಯಸದ ನಿಷ್ಕಾಮರು, ಅತಿಭಕ್ತರು, ಗುಪ್ತರು, ಅತಿಶಕ್ತರು"—ಎಂದು ಮೊದಲಾಗಿ ಕೊಂಡಾಡುತ್ತಾನೆ.

ಇಳೆಯಾಂಡ ಗುಡಿಮಾರನೆಂಬ ಶಿವಭಕ್ತನು ಭಕ್ತತತಿಗೀವ ಮಹಾದಾನಿ; ತನಗುಳ್ಳುದುದ ಭಕ್ತತತಿ ಶರಣರಿಗೆ ಕೊಡುವ ವ್ರತದವ. ಕೊಟ್ಟು ದಣಿಯದವ; ಉದ್ಯೋಗ ಹೊಲ ಹರಗುವುದು; ಆದರೊಡನೆಯೇ ಶರೀರವನ್ನೂ ಹರಗಿ ಹಸನು ಮಾಡಿ, ನಿಷ್ಠೆಯೆಂಬ ಬೀಜ ಬಿತ್ತಿ, ಭಕ್ತಿಗಳನ್ನು ಬೆಳೆವುತ್ತಿದ್ದ. ಒಳ್ಳಿತಂ, ಸೊಗಸಿತಂ, ಉಕ್ಕಿಡಂ, ನಿಷ್ಠೆಯಿಂ ಶಿವಭಕ್ತರಿಗೆ, ಶರಣರಿಗೆ, ಜಂಗಮಕ್ಕೆ ದಾನ ಮಾಡುತ್ತಿದ್ದ. ಧನಧಾನ್ಯ ಮೊದಲಾದುವೆಲ್ಲವನ್ನೂ ಕೊಟ್ಟು ಹತ್ತಡಿ ನೆಲ, ಕೌಪೀನ ಮಾತ್ರ ಉಳಿಯಲು ತೊಡಲು ಮತ್ತೇನೂ ಉಳಿಯಲಿಲ್ಲ.

"ಧನಮಿಲ್ಲದಿರ್ದೊಡೇಂ ಧಾನ್ಯಮಿಲ್ಲದೊಡೇನೊ
ಮನೆಯಿಲ್ಲದೊಡಮೇನೊ ಏನುಮಿಲ್ಲದೊಡೇನೊ
ತನುವಿರ್ದಪುದು ಇದಜಂಳೊಳರ್ಥಮಂ ಕೊಟ್ಟಪೆಂ
ಮನಮಿರ್ದಪುದು ಮನದೊಳರ್ಥಮಂ ಕೊಟ್ಟಪೆಂ
ಎರಡು ಕಣ್ಣಿವೆ ಎರಡಟಿಳೊಳಗೊಂದನಿತ್ತಪೆಂ
ಹರಣಮಿದೆ ಹರಣದೊಳಗರ್ಥಮಂ ಕೊಟ್ಟಪೆಂ"

ಎಂದು ನಿರ್ಧರಿಸಿ ಈ ದಾನದ ವ್ರತವನ್ನು ತೊಂಬತ್ತೈದು ವರುಷ ಮಾಡಿ, ಮಾಳಿಗೆಯ ಜಂತೆಯಿಂದ ಶಿವನ ಚಳಿಯಾರಿಸಿ,

ಹೊಲದಲ್ಲಿ ಬಿತ್ತಿದ ಸೊಳಕೆಯನ್ನು ಕಿತ್ತು ತಂದು ಶಿವನಿಗೆ ಹಸಿವನ್ನು ಹಿಂಗಿಸಿ, ಶಿವನ ಉಗ್ರಪರೀಕ್ಷೆಯಲ್ಲಿ ಉತ್ತೀರ್ಣನಾದ. ಮಗನ ಸಾವನ್ನುಂಟು ಮಾಡಿದ ಶಿವನಿಗೆ, ಮಗನ ಸಾವಿನ ದುಃಖವನ್ನೆಣಿಸದೆ ಶಿವಭಕ್ತಿಯನ್ನು ನಡೆಸಿಕೊಟ್ಟ. ಇಂತಹ ಅನುಪಮ ಸಹಿಷ್ಣುವೂ ದಾನಿಯೂ ಈತ. ದಾನದ ಗುಣದಿಂದ ಹರನನ್ನು ಒಲಿಸಿಕೊಂಡವ. ಅಂತರಂಗದ ಸಾಧನೆಯಿಂದ ಸರ್ವವೂ ಶಿವನೊಡನೆ, ಶಿವಭಕ್ತರೊಡನೆಯೆಂಬ ತತ್ವದಿಂದ ಭಕ್ತರ ಬಂಟನು ತಾನೆಂದು ನಡೆದವನು. ಶಿವವೇಷದಲ್ಲಿ ಬಂದವರಲ್ಲಿ ಮೋಸವನ್ನು ಕಾಣದೆ, ವೈರಿಯೇ ಶಿವವೇಷದಲ್ಲಿ ಬಂದು ತನ್ನನ್ನು ಕೊಂದರೂ ಏಕನಿಷ್ಠೆಯಿಂದ ಮುಗ್ಧತನದಿಂದ ಭಕ್ತಿಪ್ರದರ್ಶನ ಮಾಡಿದವ ಸೇದಿರಾಜ. ಶರೀರದ ಘಾಸಿಗೆ ಮರುಗದೆ ಶಿವವೇಷಕ್ಕೆ ಮರುಳಾಗಿ ಪ್ರಾಣವನ್ನೇ ಅರ್ಪಿಸಿದ–ಅಲೌಕಿಕನೀತ. ವೈರಿ ಕೊಂದರೂ ಅವನಿಗೆ ರಕ್ಷಣೆಯಿತ್ತು ಸುರಕ್ಷಿತವಾಗಿ ಕಳಿಸಿ ಕ್ಷಮೆ ಮಾಡಿದ ಅತಿಧೀರ, ಅತಿವೀರ. ಶಿವನಲ್ಲಿ, ಶಿವವೇಷದಲ್ಲಿ ಅತ್ಯಂತ ನಂಬಿಕೆಯ ಬಲದ ಮೇಲೆ ಈತನ ಭಕ್ತಿ ನಿಂತಿದೆ. ಇದು ಒಂದು ದೃಷ್ಟಿಯಿಂದ ಮೂಢಭಕ್ತಿಯೆಂಬಂತೆ ತೋರುತ್ತದೆ. ಮೆರೆಮಿಂಡದೇವನು ಅಚಲನೂ, ಅಪ್ರತಿಮನೂ, ಏಕನಿಷ್ಠೆಯವನೂ, ಶುಚಿಯಾದವನೂ, ಶುಚಿತ್ವದಿಂದ ಅರ್ಥವನ್ನೂ ಸಂಪಾದಿಸಿದವನೂ ಆಗಿದ್ದವನು. ಅವನು ಶಿವನಲ್ಲದೆ ಬೇರೆಯವರನ್ನು ಲೆಕ್ಕಿಸದ ಕಡುಮಾನಿಯೂ, ಸತ್ಯನೂ, ಸದ್ಭಕ್ತಿಯುಕ್ತನೂ ಆದವನು. ಸರ್ವಸ್ವವನ್ನೂ ಸರ್ವೇಶಂಗಿತ್ತವ; ಆತನ ಸಕಲೇಂದ್ರಿಯಗಳೂ ಶಿವಾರಾಧನೆಗೇ ಮೀಸಲಾಗಿದ್ದುವು. ಅವನ ಆರಾಧನೆ ಅತ್ಯಂತ ಸ್ನೇಹದ್ದು. ಭಕ್ತರನ್ನು ಅತ್ಯಂತ ಆದರದಿಂದ ಕಾಣುತ್ತಿದ್ದನ. ತಿರುನಾಳ್ ಬಂದಾಗ ಅವನಲ್ಲಿಗೆ ಎಲ್ಲೆಡೆಯ ಭಕ್ತರೂ ಬರುತ್ತಿದ್ದರು. ಆ ಭಕ್ತರನ್ನು ಕವಿಯು ಹೀಗೆ ವರ್ಣಿಸಿದ್ದಾನೆ:

> "ಅರಿಬಿರಿವಿನುಬ್ಬಟೆಯ ನೇಮದಚಳರ್ಕೆಲರು;
> ಪರಿಪರಿಯ ವೀರದ ಮಹಾಸಮರ್ಥರ್ ಕೆಲರು;
> ಹರನಲ್ಲದೇನುವಂ ಸೊಗಸದಿರ್ಪರ್ ಕೆಲರು;
> ಪರಮ ಭಕ್ತಿಯೊಳು ತನುಗರಗುತಿರ್ಪರ್ ಕೆಲರು;
> ಶಾಂತರುಂ ಸತ್ಯರುಂ ವೀರರುಂ ಧೀರರುಂ;
> ಕಾಂತರುಂ ಕಮನೀಯ ರೂಪರುಂ ನಿತ್ಯರುಂ;

ಇದ್ದರು. ಅವರ ಮಧ್ಯೆದಲ್ಲಿ ಮೆರೆಮಿಂಡನು ಭಕ್ತರ ತೇಜನೂ, ಭರ್ಗನಭಾಳನೇತ್ರನೂ ಆಗಿ ಮೆರೆದನು. ಭಕ್ತ ದೇಹವೇ ಶಿವನಾಲಯ–ಭಕ್ತನೇ ದೇವನೆಂದು ನಂಬಿದವ. ಭಕ್ತರಿಗೆ ಇನ್ನೊಬ್ಬ ಭಕ್ತ ನಮಿಸದಿದ್ದರೆ ಅದನ್ನು ಅಪಮಾನವೆಂದು ಬಗೆದು ಅಂತಹವನನ್ನು ಭಕ್ತವರ್ಗದಿಂದ ಹೊರಗಿಡಲು ಮುಂದಾದವ. ಶಿವಭಕ್ತರ ನಿಂದೆಗೈದರೆ ಅವರನ್ನು ಹೊಡೆಯಲೂ ಹಿಂದುಮುಂದು ನೋಡದವ. ನಂಬಿಯಣ್ಣನು ಭಕ್ತರನ್ನು ವಂದಿಸದಿದ್ದುದಕ್ಕೆ ಅವನಿಗೆ ಬಹಿಷ್ಕಾರ ಹಾಕಿ, ಅವನಿಂದ ಭಕ್ತರನ್ನು ಹೊಗಳಿಸಿದವ. ಈ ರೀತಿ ಭಕ್ತರ ಬಳಗವನ್ನು ಬೆಳೆಸಲು ಇವನು ಅಪಾರ ಸಹಾಯ ಮಾಡಿದ್ದಾನೆ. ಇವನೊಬ್ಬ ಭಕ್ತನಿಧಿ. ಈತನದು ಉಗ್ರಭಕ್ತಿಯೆಂಬಂತೆ ಕಾಣುತ್ತದೆ. ಶರಣರಾದ ಅಮರ ನೀತಿಗಳು ದಾಸನಂತೆ ವಸ್ತ್ರದಾನವನ್ನಿತ್ತು, ಶಿವಾರಾಧನೆ ಮಾಡುತ್ತಿದ್ದ ಭಕ್ತ. ಅವನಲ್ಲಿ ಬರುವ ಭಕ್ತರನ್ನು ಇಂತು ವಿವರಿಸಿದ್ದಾನೆ:

> "ಉಗ್ರರುಂ ಶಾಂತರುಂ ಮೃದುಗಳುಂ ಮುಗುದರುಂ
> ವ್ಯಗ್ರರುಂ ನ್ಯಾಯನಿಷ್ಠುರರುಂ ಸಮರ್ಥರುಂ
> ನೆರೆದಮರನೀತಿಯಂ ಹರಸುತಿರ್ಪರ್ಕೆಲರು—"

ಎಂದು ವಿವರಿಸುವಲ್ಲಿಯೂ ಭಕ್ತರ ವೈವಿಧ್ಯವನ್ನು ವಿವರಿಸುತ್ತಾನೆ. ಈತನ ಮನಸ್ಸು ಬಹು ವಿಶಾಲವಾದುದು; ಕೇಳಿದ ಭಕ್ತರ್ಗೆ ಇಮ್ಮಡಿ ಕೊಡುತ್ತಿದ್ದ; ಮೋನದಿಂದ ಇದ್ದವರ್ಗೆ ನಾಲ್ವಡಿಯನೀಯುತ್ತಿರ್ದ; ಆನಂದವಿರ್ಮಡಿಸಿ ನೂರ್ಮಡಿಯನೀಯುತ್ತಿದ್ದ ! ಅನ್ನ–ವಸ್ತ್ರಗಳನ್ನಿತ್ತು ತಣಿಯದೆ–ಎನ್ನನೀವೆ ಬೇಡುವರಿಲ್ಲ; ಸತಿಯನೀವೆ ಶರಣರೆಳಸರು; ಸುತನನೀವೆ, ಭಕ್ತರೊಲ್ಲರು. ತಿರುನೀಲಕಂಠರನ್ನು ಪಾತ್ರೆಯನ್ನಿತ್ತು ಶಿವನು ಪರೀಕ್ಷೆ ಮಾಡಿದಂತೆ ಇವರಲ್ಲಿ ಕೌಪೀನವನ್ನಿಟ್ಟು ಪರೀಕ್ಷಿಸಿದ. ಶಿವನ ಕೌಪೀನಕ್ಕೆ ಸಮನಾಗಿ ಎಷ್ಟು ವಸ್ತ್ರಗಳನ್ನು ತೂಗಿದರೂ ಅಳತೆಗೆ ಸರಿಬರಲಿಲ್ಲ. ನಂತರ ಮಗನನ್ನು, ಪತ್ನಿಯನ್ನು, ಕೊನೆಗೆ ತನ್ನನ್ನೇ ಆ ಪರಡಿಯಲ್ಲಿ ತೂಗಿ, ಕೌಪೀನಕ್ಕೆ ಸತಿಸುತರನ್ನೂ ತನ್ನನ್ನೂ ಕೊಟ್ಟುದು ಸಣ್ಣ ಮಾತಲ್ಲ. ಹಿಡಿದ ವ್ರತ, ಭಾಷೆಗಳನ್ನು ನಡೆಸುವುದೇ ಶರಣರ ನೀತಿ. ಕರುವೂರ ಇರಿಭಕ್ತ ಶಿವಭಕ್ತನಿಷ್ಠ; ಅಭವನ ನಿಂದೆಯಂ ಕೇಳದವ; ಭವಿ ಶರಣರನ್ನು ಕೆಡೆನುಡಿಯಲು ಅವರನ್ನು ಹುಡಿಗಬ್ಬುತ್ತಿದ್ದ. ಕರಿ ತುರಗ ವಾಹನ ವಸ್ತುನಿಚಯಂಗಳನ್ನು ಶಿವನಲ್ಲಿ ಬೇಡುತ್ತಿರಲಿಲ್ಲ; ಸುರಪದವಿ, ಚಂದ್ರಪದವಿ ಕೇಳುತ್ತಿರಲಿಲ್ಲ. ಆದರೆ ಅವನು ದೇವರನ್ನು ಕೇಳುತ್ತಿದ್ದುದು ಹೀಗೆ:

> "ನಿನ್ನವರ ನಿಂದೆಯಂ ಕೇಳಿಸದಿರೆಲೆ ದೇವ,
> ನಿನ್ನವರ ಭಂಗಮಂ ಕಾಣಿಸದಿರೆಲೆ ದೇವ"

ಎಂದು. ಭಕ್ತರ ದರ್ಶನ, ಭಕ್ತರ ಮಾತು ಕೇಳುವುದು ಅವನಿಗೆ ಅತಿಪ್ರಿಯ. ಶಿವಾರಾಧನೆಯೊಡನೆ ಶಿವಭಕ್ತರಲ್ಲದವರ ನಡತೆಯನ್ನು ಸೈರಿಸುತ್ತಿರಲಿಲ್ಲ. ಅದಕ್ಕಾಗಿ ಒಬ್ಬ ವೈಷ್ಣವನನ್ನು ಕೊಡಲಿಯಿಂದ ಕೊಂದು ಹಾಕಿದ ಉಗ್ರವೀರ. ಸಾಮಾಜಿಕವಾಗಿ ಅವನ ವರ್ತನೆ ಸಮಂಜಸವೆಂದು ಕಾಣುವುದಿಲ್ಲ. ಆದರೆ ಅವನಲ್ಲಿಯ ಉಗ್ರ ಶಿವಭಕ್ತಿಯನ್ನು ಮೆಚ್ಚುವ ಕಾಲವು ಆದಾದುದರಿಂದ ಅವನ ಕೃತಿಯು ಖಂಡನಾರ್ಹವೆಂದೆನಿಸಲಿಲ್ಲ. ಹರಿಹರ ಕವಿಯು ಈ ಭಕ್ತರ ಭಕ್ತಿಯ ಬಗೆಗೆ:

> "ಎನ್ನ ಭಕ್ತರು ನಡೆದುದೇ ಬಟ್ಟೆ ಕೇಳಯ್ಯ ;
> ಎನ್ನ ಭಕ್ತರು ನುಡಿದುದೇ ವೇದವರಿಯಯ್ಯ;
> ಎನ್ನ ಭಕ್ತರು ಮಾಡಿತೇ ಮಾರ್ಗವೆಲೆ ಕೇಳ,
> ಎನ್ನ ಭಕ್ತರು ನೋಡಿತೇ ಪಾವನಂ ಕೇಳ;"

ಎಂದು ಆಡಿದ್ದಾನೆ. ಶಿವಭಕ್ತಿಯ ಪ್ರಸಾರ ಮಾಡುತ್ತಿದ್ದ ಕಾರ್ಯದಲ್ಲಿ ವೀರಶ್ರೀಯನ್ನು ತೋಳ್ಗೆ ಕಟ್ಟಿಕೊಂಡವರು ಭಕ್ತಿ, ವೈರಾಗ್ಯ,

ಪೀಠಿಕೆಗಳನ್ನು ನಿತ್ಯಸೇವಿಸುವೆಂದು ತಾಳಿ ಶಿವಭಕ್ತಿಯನ್ನು ಪ್ರಸಾರ ಮಾಡಿದರು. ಕೊಂಗುಲಿಯ ಕಲಿಯರು ಶಿವಸದಾಚಾರಶೀಲರು, ಅಭವ ಪೂಜೆಯಲ್ಲಿ ನಿರತರು; ಶಿವಗೆ ಧೂಪವಿಕ್ಕುವ ವ್ರತಹಿಡಿದವರು. ಅದರಿಂದಾಗಿ ಅವರ ಅರ್ಥ–ವೃತ್ತಿಗಳೆಲ್ಲ ತೀರಿದುವು. ಧನ ತೀರಿ ಮನ ವುಳಿದು ಅಂಜದೆ ಕೊನೆಗೆ ತನುವನ್ನೇ ಈಡಾಡುತ್ತಾನೆ. ದೀಪದ ಕಲಿಯೆಂಬ ಶರಣನೂ ಈ ತೆರದವನು. ಇವರಿಬ್ಬರು ಧೂಪ ದೀಪ ಗಳನ್ನು ಶಿವನಿಗೆ ಕೊಡುವ ವ್ರತ ಕೈಕೊಂಡು ಅವು ದೊರೆಯದಿದ್ದ ಕಾಲದಲ್ಲಿ ತಮ್ಮ ಶರೀರವನ್ನೇ ಉರಿಸಿ ಧೂಪ ಹಾಕಿದರು, ದೀಪ ಬೆಳಗಿದರು. ಇದು ಉಗ್ರಭಕ್ತಿಯ ಲಕ್ಷಣ. ಪರಮಾತ್ಮನಿಗೆ ಶರೀರವನ್ನರ್ಪಿಸಿ ಶರೀರವನ್ನು ಸಾರ್ಥಕಪಡಿಸಿಕೊಂಡರು. ಮಾನ ಕಂಜರು ತನಯಳ ಮುಡಿಯನ್ನೇ ಕೇಳಿದ ನಟಶಿವನಿಗೆ ಅದನ್ನು ಅರ್ಪಿಸಿದರು. ಹಿಡಿದ ವ್ರತವ ಬಿಡದಿಪ್ಪುದು ಶರಣರ ಛಲ. ಅದಕ್ಕಾಗಿ ಅವರು ಪ್ರಾಣವನ್ನು ಅರ್ಪಿಸಿದರೇ ವಿನಾ ವ್ರತ ಬಿಡಲಿಲ್ಲ. ಅರಿವಾಳ್ತಾಂಡನೆಂಬ ಶರಣ ಕೂಲಿಕಾರ. ಆದರೆ ಬಹು ಉದಾರಿ. ಸಣ್ಣವರಲ್ಲಿಯೆ ದೊಡ್ಡಗುಣವನ್ನು ಹರಿಹರ ಕವಿಯು ಬಹುವಾಗಿ ಪ್ರಶಂಸಿಸಿದ್ದಾನೆ. ಬಂದ ಕೂಲಿಯನ್ನು ಶಿವನಿಗೆ ಕೊಡುವುದು ಅವನ ವ್ರತ. ಭಕ್ತರನ್ನು ಕಂಡೊಡೆ ಜೀವವೇ ಬಂದಂತಾಗುತ್ತಿತ್ತು ಈತನಿಗೆ. ಆ ಭಕ್ತನ ಮನೋಭಾವವನ್ನು ಕವಿಯು ಇಂತು ನಿರೂಪಿಸಿದ್ದಾನೆ :

"ಅರ್ಚಿಸಲ್ಕರಿಯನನ್ಯರ್ಗಳುಪದಿರಬಲ್ಲ;
ಎಚ್ಚತ್ತು ಹೊಗಳಲರಿಯಂ ಹುಸಿಯದಿರಬಲ್ಲ;
ಆಡಲರಿಯಂ ಬಲವರಲು ಬಲ್ಲನೆಲೆದೇವಿ;
ಪಾಡಲರಿಯಂ ಪಾಡಿನರ್ಥವಾತಂ ದೇವಿ;
ಎನ್ನನರಿಯದ ಚೆಲುವು ಶಬುದ ಚೆಲುವೆಲೆ ಗಿರಿಜೆ;
ಎನ್ನನರಿಯದ ಹಾಡು ಹಲವಾಡಿತೆಲೆ ಗಿರಿಜೆ;
ನಡೆಯಿಲ್ಲದನ ಹಾಡ ನಾನೊಲಿವೆನೇ ದೇವಿ;
ನುಡಿದು ಹುಸಿವನ ನಡೆಯ ನಾನೊಲಿವೆನೆ ದೇವಿ;
ನುಡಿಕಿರಿದು ನಡೆಪಿರಿದು ನೋಡೆನ್ನ ಭಕ್ತಂಗೆ".

ಈ ಮಾತುಗಳು ಧರ್ಮಸೂಕ್ಷ್ಮವನ್ನೂ, ಧರ್ಮದ ತಿರುಳನ್ನೂ ತಿಳಿ ಸುವ ನುಡಿಗಳಾಗಿವೆ. ಭಕ್ತರ ಮನೋಭಾವವನ್ನು ಬಹಳ ಚೆನ್ನಾಗಿ ಪ್ರತಿಬಿಂಬಿಸುತ್ತವೆ. ಶಾಬ್ದಿಕ ಸಂಪತ್ತು, ಡಾಂಭಿಕ ಆಚರಣೆಗಳಿ ಗಿಂತಲೂ ಆಂತರಿಕ ಶುದ್ಧಿ, ಭಾವದ ಔನತ್ಯ, ಹೃದಯ ವೈಶಾಲ್ಯ, ಪರಮಾತ್ಮನನ್ನರಿವುದು ಇವೇ ಪ್ರಮುಖವಾಗಿವೆ

[೫]

ಏಕಾಂತ ರಾಮಯ್ಯ ಮತ್ತು ಆದಯ್ಯ ಒಂದು ವರ್ಗಕ್ಕೆ ಸೇರಿದವರು. ಅವರು ಜೈನಧರ್ಮದ ವಿರುದ್ಧ ಹೋರಾಡಿ ಶಿವಲಿಂಗ ಗಳನ್ನು ಸ್ಥಾಪಿಸಿ ಅಲ್ಲಿ ಶಿವಭಕ್ತಿಯ ಪ್ರಸಾರಮಾಡಿದರು. ಈ ಕಾರ್ಯದಲ್ಲಿ ಅವರು ಪ್ರಾಣವನ್ನೂ ಕೊಡಲು ಮುಂದಾದರು. ಕಲಿತನದಿಂದ ಎದುರಾದವರನ್ನು ಪ್ರತಿಭಟಿಸಿದರು. ಅವರು ಪರ ಧರ್ಮೀಯರೊಡನೆ ಕಾದುವಾಗ ತಾವಾಗೆ ಕಾಲುಕೆದರಿ ಜಗಳ ತೆಗೆ ದವರಲ್ಲ. ಒಮ್ಮೆ ಜಗಳ ತೆಗೆದರೆ ಪಣತೊಟ್ಟು ಪ್ರಾಣದ ಹಂಗು ದೊರೆದು ಕಾದಿ ಜಯಶಾಲಿಗಳಾದರು.

ಕವಿ ಹರಿಹರನು ಏಕಾಂತದ ರಾಮಯ್ಯನನ್ನು ಇಂತು ವರ್ಣಿಸಿದ್ದಾನೆ:

"ನುಡಿಯಂ, ನುಡಿದ ಬಳಿಕ ತಪ್ಪಂ, ಅಚಳಿತ ವಚನ
ಹಿಡಿದ ಭಾಷೆಯ ಬಿಡದೆ ಕಡೆಗಣಿಸ ದೃಢಮನ
ಎಡೆಗೊಡಂ, ತೊಟ್ಟು ಹಿಮ್ಮೆಟ್ಟಂ, ಕಲಿ, ಛಲಿ,—ಎಂದು.

ಏಕಾಂತದ ರಾಮಯ್ಯನು ಶಿರಸ್ ಪವಾಡವನ್ನು ಮೆರೆದಾಗ ಅವನ ನೆರವಿಗೆ ನಾನಾ ಭಕ್ತರು ಅಲ್ಲಿ ಸೇರಿದ್ದರು.

"ಅಕಳಂಕ ಚರಿತರನುಪಮ ಕೃಪಾಕರರಲ್ಲಿ
ಒಪ್ಪುವ ಕರಸ್ಥಲ ಉರಸ್ಥಲದಚಲಿತರಲ್ಲಿ
ನಿಪ್ಪಸರದಚ್ಚ ಶಿವಲಿಂಗವ್ರತಿಗಳಲ್ಲಿ
ಪಂಚಾಕ್ಷರಿಯ ರೂಪುಗೊಂಡಂದದಿಂ ಕೆಲರು
ಪಂಚ ಭೌತಿಕವಿಲ್ಲದೊಡಲೊಳಿರ್ಪರ್ಕೆಲರು
ಶಾಂತರುಗ್ರರು ಸತ್ಯರನುಪಮತ್ಯಾಗಿಗಳು
ಸಂತೋಷಿಗಳ್ ಸುಖಿಗಳಸಮ ಶಿವಯೋಗಿಗಳು" –—ಎಂದು ವರ್ಣಿಸಿದ್ದಾನೆ.

ಶಿವಭಕ್ತರನ್ನು ಅವರ ಭಕ್ತಿಯ ಸಾಧನೆಯನ್ನು ಅವಲಂಬಿಸಿ ಅವರನ್ನು ವಿಂಗಡಿಸಬಹುದಾಗಿದೆ. ಪಾರ್ವತಿಗೆ ಅವನ ಬಗೆಗೆ ಹೇಳು ವಾಗ: 'ಧೀರನಂ', 'ಮಹಾಭಕ್ತನಂ', 'ನಿಷ್ಠಾಭಕ್ತಿಯುಕ್ತನಂ', ನಿಬ್ಬರದ ಭಾಷೆಯನ್ನು ಕೈಕೊಂಡು, ಸಿರವನರಿದು ಏಳು ದಿನದ ಮೇಲೆ ಪಡೆದ ಮಹಾನಿಷ್ಠನು—ಎಂದು ಬಣ್ಣಿಸುತ್ತಾನೆ. ಶಂಕರ ದಾಸಿಮಯ್ಯನೂ ಶಿವಭಕ್ತಿ ಪ್ರಸಾರದ ಕಾಲದಲ್ಲಿ ಉಗ್ರವಾದ ಹೋ-ರಾಟವನ್ನು ಮಾಡಿದನು. ರೇವಣಸಿದ್ಧ, ಆದಯ್ಯ, ಶಂಕರದಾಸಿ-ಮಯ್ಯ ಮೊದಲಾದ ಶಿವಶರಣರು 'ಪರಸಮಯ ಭೀಷಣರು'. ಧುರದೊಳಗಿದಿರಾದವರನ್ನು ಎದುರಿಸಿ ಮರೆಹೊಕ್ಕವರನ್ನು ರಕ್ಷಿಸಿ ದ್ದಾರೆ.

ಮಹದೇವಿಯಕ್ಕ, ಬಸವಣ್ಣ ಮೊದಲಾದ ಶಿವಶರಣರು ಲಿಂಗ ಪೂಜೆ, ಸಮಾಜ ಸೇವೆಗಳಿಂದ ಪರಮಾತ್ಮನ ಅನುಗ್ರಹಕ್ಕೆ ಪಾತ್ರ ರಾದವರು. ಅವರ ಆರಾಧನೆ, ಅವರಿಗೆ ಅನ್ಯಾತದ ಬೆಳಕನ್ನಿತ್ತಿದೆ. ಇವರು ಮನೋಭಾವದಿಂದ ವಿಶಾಲ ಹೃದಯಿಗಳು. ಆದರೆ ಭವಿಗಳ ನಿರ್ದೈವರ ದೂಷಣೆಯನ್ನು ತಾಳುತ್ತಿರಲಿಲ್ಲ. ಶಿವಧರ್ಮದ ಪ್ರಸಾ-ರಕ್ಕೆ ತನು ಮನ ಧನ, ಸತಿ, ಸುತ-ರಾಜ್ಯ ಮೊದಲಾದವುಗಳನ್ನೆಲ್ಲ ಅರ್ಪಿಸಿ ಅವುಗಳನ್ನು ಸಾರ್ಥಕಪಡಿಸಿಕೊಂಡರು. ದೈವೀ ಹಿರಿಮೆ ಯನ್ನು ಸಾರಿ, ಪರಹಿತ, ಲೋಕ ಕಲ್ಯಾಣ ಕಾರ್ಯಗಳಿಂದ ಶಿವ ಭಕ್ತಿಯನ್ನು ಬೆಳಗಿಸಿದರು. ಕಾಯಕ, ಶಿವಪೂಜೆಯ ಮೂಲಕ ಶಿವಾನುಗ್ರಹಕ್ಕೆ ಪಾತ್ರರಾದವರು, ಯೋಗದಿಂದ ಶಿವನ ಪ್ರೀತಿಗೆ

ಪಾತ್ರರಾದವರು, ವ್ರತ-ಭಾಷೆಗಳಿಂದ ಹೆಸರಾದವರು ಕೆಲರು; ಅನು-ಪಮ ದಾನ, ತ್ಯಾಗ, ತಾಳ್ಮೆ, ಪ್ರೀತಿ, ಪ್ರಾಮಾಣಿಕತೆಗಳಿಂದ ಹೆಸರು ಪಡೆದವರು ಕೆಲರು. ಪರಮಾತ್ಮನ ಪ್ರೀತಿಯು ಅವರೆಲ್ಲರಿಗೆ ವ್ಯಕ್ತವಾದುದು ಅವರಲ್ಲಿದ್ದ ಅತ್ಯಂತ ಗಾಢವಾದ ವಿಶ್ವಾಸ, ಶ್ರದ್ಧೆ, ಮನಶುದ್ಧಿಯ ಭಾವನೆಗಳಿಂದ. ಹೀಗೆ ಹರಿಹರ ಕವಿಯಲ್ಲಿ ಭಕ್ತಿಯ ನಾನಾ ಮುಖಗಳನ್ನು ಕಾಣಬಹುದಾಗಿದೆ. ಪ್ರತಿಯೊಬ್ಬನ ಸ್ವಭಾ-ವವೂ ಒಂದೊಂದು ವಿಧ. ಅದು ಅನೇಕ ವಿಧವಾಗಿ, ಅನೇಕ ಮುಖವಾಗಿ ಪ್ರಕಟವಾದುದನ್ನು ಕಾಣಬಹುದಾಗಿದೆ.

ಬಸವಣ್ಣ, ಮಹದೇವಿಯಕ್ಕ, ಅಲ್ಲಮ ಇವರ ಭಕ್ತಿಯಲ್ಲಿ ಅತ್ಯಂತ ಹೃದಯಂಗಮವಾದುದೆಂದರೆ ಬಸವಣ್ಣನ ಭಕ್ತಿ. ಅದು ಕೂಡಲಸಂಗನ ಆರಾಧನೆ, ಶರಣಸೇವೆ, ಶಿವಾನುಭವ ಗೋಷ್ಠಿಗಳ ಮೂಲಕ ಅವನಲ್ಲಿ ಹೊರಹೊಮ್ಮಿದೆ. ಮಹದೇವಿಯಕ್ಕನ ಭಕ್ತಿ ಗುರುಸೇವೆ, ಲಿಂಗಪೂಜೆ, ಜಂಗಮ ಪ್ರೇಮಗಳ ಮೂಲಕ ವ್ಯಕ್ತವಾಗಿದೆ. ಪ್ರಭುದೇವನು ಗೊಗ್ಗಯ್ಯನಿಂದ ಪಡೆದ ಲಿಂಗದ ಆರಾಧನೆ ಗುರುವಿನ ಅನುಗ್ರಹದ ಮೂಲಕ ವ್ಯಕ್ತವಾಗಿದೆ. ಇವರೆಲ್ಲರ ಭಕ್ತಿ ಅದರಲ್ಲಿಯೇ ನಿಷ್ಕಾಮ ಭಕ್ತಿ-ಭಕ್ತಿಗಾಗಿ ಭಕ್ತಿಯನ್ನು ತೋರ್ಪಡಿಸಿದರು. ಪರಮಾತ್ಮನಲ್ಲಿ ಅತ್ಯಂತ ಮಧುರಮಯ ಭಾವವನ್ನು ವ್ಯಕ್ತಪಡಿಸಿದರು. ಅವರಿಗೆ ಗುರು-ಜಂಗಮರಲ್ಲಿದ್ದ ಗೌರವ ಅನುಪಮ. ಶರಣರಲ್ಲಿದ್ದ ಕೈಂಕರ್ಯ ಅಸದಳ. ಶಿವನಲ್ಲಿ ಶಿವಶರಣರಲ್ಲಿ ದಾಸಭಾವದ ಕೈಂಕರ್ಯವನ್ನೂ ಅವರನ್ನು ಪ್ರಾಣಕ್ಕೆ ಸಮನಾಗಿ ಕಂಡವರೂ ಆಗಿದ್ದಾರೆ. ಲಿಂಗಧ್ಯಾನದ ಮೂಲಕ ಅವನನ್ನು ಕನಸಿನಲ್ಲಿ ಕಂಡು ಯೋಗನಿದ್ರೆಯಲ್ಲಿ ಸಂಗಮವನ್ನು ಅನುಭವಿಸಿದ್ದಾರೆ. ಪುರಾತನರ ಉಗ್ರತೆ ಇಲ್ಲಿಲ್ಲ; ಅವರಲ್ಲಿದ್ದ ಮೌಢ್ಯ ಕಾಣಬರುವುದಿಲ್ಲ. ಶಿವನನಲ್ಲದೆ ಹಾಡರು; ಶಿವನನ್ನಲ್ಲದೆ ಕೂಡರು; ಶಿವನನ್ನಲ್ಲದೆ ನೋಡರು. ಸರ್ವಾರ್ಪಣಭಾವದಿಂದ ಗುರುಸೇವ, ಲಿಂಗಾರಾಧನೆ, ಶರಣರ ಸೇವೆಗಳ ಮೂಲಕ ದೈವೀ ಅನುಗ್ರಹಕ್ಕೆ ಪಾತ್ರರಾದರು. ಪುರಾತನರ ಭಕ್ತಿ ಇದೆ; ದೇವನಲ್ಲಿಯ ಅನುಪಮ ಅನುರಕ್ತಿ ಇದೆ. ಆದರೆ ಅವರಲ್ಲಿಯ ಕಠೋರತನ, ಉಗ್ರತೆ ಇಲ್ಲಿ ಕಾಣುವುದು ವಿರಳ. ಅರಿತು ಮಾಡುವ ಭಕ್ತಿ ಇವರದಾಗಿದೆ. ಹರಿಹರ ಕವಿಯು ಇವರೆಲ್ಲರ ಮೂಲಕ ಶೈವ–ವೀರಶೈವ ಶರಣರ ಭಕ್ತಿಯ ವೈವಿಧ್ಯವನ್ನು ಬಹು ಸುಂದರವಾಗಿ ಸಾಧಿಸಿದ್ದಾನೆ. ಅವನು ನಿರೂಪಿಸಿದ ಭಕ್ತಿಯ ವಿಧಾನಗಳಲ್ಲಿ ಶಾಂತಭಕ್ತಿಯೂ ಗುಪ್ತಭಕ್ತಿಯೂ ಇಂದಿನ ಕಾಲಕ್ಕೂ ಅನುಸರಿಸಲು ಬಹು ಯೋಗ್ಯವಾದವುಗಳಾಗಿವೆ. ಪರಸಮಾಜಗಳ ಮಧ್ಯದಲ್ಲಿ–ಅವರ ಆಧಿಕ್ಯವಿದ್ದ ಕಾಲದಲ್ಲಿ ಆ ಹಿಂದಿನ ಗುಪ್ತಭಕ್ತರು ಶಿವನಿಗೆ ತೋರಿದ ಮಮತೆ, ವಿಶ್ವಾಸ, ಭಕ್ತಿಗಳು ಅಂತ್ಯಂತ ಅನುಕರಣೀಯವಾಗಿವೆ.

ಕೃತಕೃತ್ಯ ಕವಿ ಹಂಪೆಯ ರಾಘವಾಂಕ

ಲೇಖಕರು :
ಟಿ. ಕೇಶವಭಟ್ಟ, ಎಂ.ಎ.,
ಬೆಂಗಳೂರು.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹರಿಹರ, ರಾಘವಾಂಕ – ಇಬ್ಬರಿಗೂ ಅತಿ ಶ್ರೇಷ್ಠವೂ, ವಿಶಿಷ್ಟವೂ ಆದ ಸ್ಥಾನವಿದೆ. ಇವರಿಬ್ಬರೂ ಒಳ್ಳೆಯ ಕಾವ್ಯಗಳನ್ನು ರಚಿಸಿದವರು ಎಂಬುದು ಮಾತ್ರವೇ ಇದಕ್ಕೆ ಕಾರಣವಲ್ಲ. ಇವರು ಸಾಹಿತ್ಯ ಪ್ರಪಂಚದಲ್ಲಿ ಒಂದು ಹೊಸ ಯುಗದ ನಿರ್ಮಾಪಕರು. ತಮ್ಮ ಕಾಲದಲ್ಲಿ ನವೀನ ಸಾಹಿತ್ಯ ಶೈಲಿಯನ್ನು ರೂಪಿಸಿದವರು. ವಸ್ತು ಪಾತ್ರಗಳನ್ನು ಪುರಾಣದಿಂದ ಇತಿಹಾಸಕ್ಕೆ ಇಳಿಸಿದವರು. ಸಾಮಾಜಿಕ ವಿಚಾರಗಳಿಗೆ ಹೆಚ್ಚಿನ ಮಹತ್ವವನ್ನು ಕೊಟ್ಟವರು. ಹರಿಹರನು ಗುರು, ರಾಘವಾಂಕ ಶಿಷ್ಯ. 'ಗುರುವಿನಂತೆ ಶಿಷ್ಯ' ಎಂಬ ಮಾತಿದ್ದರೂ ರಚನೆಯಲ್ಲಿ ಒಂದು ದೃಷ್ಟಿಯಿಂದ ಹರಿಹರನಿಗಿಂತ ರಾಘವಾಂಕನದೇ ಮೇಲುಗೈ ಎನ್ನಬಹುದು. ಹರಿಹರನ ವಿಚಾರ ಇಲ್ಲಿ ಲೇಖನಕ್ಕೆ ಪ್ರಸ್ತುತವಲ್ಲದುದರಿಂದ ರಾಘವಾಂಕನನ್ನು ಮಾತ್ರ ಸಮಾವಲೋಕಿಸಬೇಕಾಗುತ್ತದೆ.

ರಾಘವಾಂಕನನ್ನು ಕುರಿತ ವಿವೇಚನೆಗಳಿಗೆಲ್ಲ ಮೂಲಭೂತ ಸೂತ್ರಗಳಿಂದೊಪ್ಪುವ ಪದ್ಯವೊಂದು ಪಂಪ ಭಾರತದಲ್ಲಿ ಬರುತ್ತದೆ. ಗುಣಾರ್ಣವನು ಹೇಗೆ ರಾಜ್ಯವಾಳಿದನು ಎಂಬುದನ್ನು ತಿಳಿಸುತ್ತದೆ–

> ಪಸರಿಸಿ ನೀಳ್ದ ತನ್ನ ಜಸದೊಳ್ ಪೆಱನೊರ್ವನ ಕೀರ್ತಿ
> ತಳ್ತು ರಂ
> ಜಿಸೆ ನೆಗಳ್ದಾದನೇಂ ನೆಗಟ್ದನೆಂಬ ಚಲಂ ಮಿಗೆ ತನ್ನ
> ಪೆಂಪು ತ
> ನ್ನೆಸಕಮೆ ತನ್ನ ವಿಕ್ರಮಮೆ ತನ್ನ ನೆಗಟ್ತಿಯೆ ತನ್ನ
> ಮಾತೆ ತಾ
> ನೆಸೆವ ಜಗತ್ರಯಕ್ಕೆನಿಸಿ ಪಾಲಿಸಿದಂ ನೆಲನಂ ಗುಣಾರ್ಣವಂ
> (ಆ. 14—39)

"ಎಸೆವ ಜಗಕ್ಕೆ ತಾನೆನಿಪುವಾ ಕೃತಿಗಳ್ ಕವಿ ರಾಘವಾಂಕನಾ" ಎಂದು ಕೊನೆಯ ಪಾದವನ್ನು ಮಾರ್ಪಡಿಸಿಕೊಂಡರೆ ಕವಿ ರಾಘವಾಂಕನಿಗೆ ಆ ಎಲ್ಲ ಹೇಳಿಕೆಗಳು ಅನ್ವಿತವಾಗುವವು. ಪೂರ್ವಿಕರ ಕೀರ್ತಿಯೇ ತನ್ನಲ್ಲಿ ನೆಲೆಗೊಂಡಿರುವಂತೆ ಜೀವಿಸಿ ಪ್ರಖ್ಯಾತನಾದವನ ಜೀವನ ಅದೇನು ಹಿರಿದು ? ತನ್ನ ಪೆಂಪು, ತನ್ನ ಎಸಕ, ತನ್ನ ವಿಕ್ರಮ, ತನ್ನ ಕೀರ್ತಿ, ತನ್ನ ಮಾತು — ಈ ಐದು ಅಂಶಗಳು ಲೋಕಕ್ಕೆ ಪಸರಿಸುವಂತೆ ಬಾಳಿದುದೇ ಶ್ರೇಷ್ಠ ಜೀವನ.

ರಾಘವಾಂಕನ ಪೆಂಪು – ಅವನು ಕಾವ್ಯಮಾರ್ಗಾನ್ವೇಷಣೆಯಲ್ಲಿ ತನ್ನ ಗುರುವನ್ನು ಮೀರಿಸಿದುದರಿಂದ ವೇದ್ಯವಾಗುತ್ತದೆ- ಹರಿಹರನು ರಗಳೆಗಳನ್ನು ಬಳಸಿ ಮಾರ್ಗವನ್ನು ಸರಳಗೊಳಿಸಿದನು; ಶರಣರ ಜೀವನವನ್ನು ವಸ್ತುವಾಗಿ ಮಾಡಿದನು. ರಾಘವಾಂಕನು ನೂತನ ಮಾರ್ಗಾನ್ವೇಷಣೆಯಲ್ಲಿ ಮುಂದುವರೆದು [illegible] "ಷಟ್ಪದೀ ಸಂಪ್ರದಾಯ ಸ್ಥಾಪಕ"ನೆನಿಸಿದನು. ಪುರಾಣೇತಿಹಾಸ ಪುರುಷರನ್ನಲ್ಲದೆ ಶರಣರನ್ನೂ ಕಾವ್ಯವಸ್ತು ಶರಣರನ್ನಾಗಿ ಮಾಡಿ ಯಶಸ್ವಿಯಾದನು. ಈ ಕಾರ್ಯಗಳು ಅವನ ಪೆಂಪಿಗೂ ಎಸಕಕ್ಕೂ ನಿದರ್ಶನಗಳು. ಪರವಾದಿಗಳನ್ನು ಜಯಿಸಿದುದರಲ್ಲಿ ರಾಘವಾಂಕನ ವಿಕ್ರಮ ಅನನ್ಯವಾಗಿ ಕಾಣುತ್ತದೆ. ಕವಿಜೀವನ ಕಾವ್ಯ ಜೀವನಗಳೆರಡನ್ನೂ ಒಂದುಗೂಡಿಸಿದಂತೆ ಗೆಯ್ದ ಅವನ ರಚನೆಗಳಲ್ಲಿ ಆತನ ಕೀರ್ತಿ ಮೂಡಿ ದಿಗಂತವಿಶ್ರಾಂತವಾಗಿದೆ. ಅನ್ಯರ ಕಾವ್ಯ ಪ್ರಯೋಗವನ್ನು ಬಳಸದೆ, ತನ್ನದೇ ಆದ ಭಾವಸ್ಫುರಣೆಗೆ ತಕ್ಕುದಾದಭಾಷೆಯಲ್ಲಿ ರಚಿಸಿದ ಆತನ ಕಾವ್ಯಗಳ ಮಾತು ತನ್ನ ಮುಂದಿನವರಿಗೆ ಅನುಕರಣೀಯ. ಹೀಗೆ ರಾಘವಾಂಕನ ಕೃತಿಗಳು ಲೋಕಮಾನ್ಯವಾದುವೆನ್ನಬಹುದು.

ರಾಘವಾಂಕನು ಹಂಪೆಯಲ್ಲಿ ಜನಿಸಿದನು. ಇವನ ತಂದೆ ಆರಾಧ್ಯ ಶೈವಬ್ರಾಹ್ಮಣ ಮಹಾದೇವಭಟ್ಟ, ತಾಯಿ ರುದ್ರಾಣಿ. ರುದ್ರಾಣಿಯ ಸಹೋದರನೇ ಹರಿಹರ ಮಹಾಕವಿ. ಹರಿಹರನು ಇವನಿಗೆ ಮಾವ, ಧರ್ಮಗುರು, ವಿದ್ಯಾಗುರು. ರಾಘವಾಂಕನ ಕಾಲ ಕ್ರಿ.ಶ. ಸುಮಾರು 1225. ಇವನು ಬರೆದ ಕಾವ್ಯಗಳು –ಹರಿಶ್ಚಂದ್ರ ಚಾರಿತ್ರ, ಸೋಮನಾಥ ಚಾರಿತ್ರ, ಸಿದ್ಧರಾಮ ಚಾರಿತ್ರ, ವೀರೇಶ ಚರಿತೆ, ಶರಭ ಚಾರಿತ್ರ ಮತ್ತು ಹರಿಹರ ಮಹತ್ವ.[1] ಇವುಗಳಲ್ಲಿ ಶರಭಚಾರಿತ್ರ, ಹರಿಹರ ಮಹತ್ವ ಎಂಬಿವೆರಡು ಸಿಕ್ಕಿಲ್ಲ. ಇವಲ್ಲದೆ, ಸಾಂಗತ್ಯದಲ್ಲಿರುವ 'ದೇವಾಂಗ ದಾಸಿಮಯ್ಯನ ಪುರಾಣ' ವನ್ನು ಇವನೇ ಬರೆದನೆನ್ನಲು ಆಧಾರಗಳಿವೆ. 'ಅನುಭವ ಶಿಖಾಮಣಿ' ಯನ್ನು ಬರೆದ ನಾರಸಿಂಹನು (1768) ರಾಘವಾಂಕನ ಶರ ಷಟ್ಪದೀ ರೂಪವಾದ ಕಾವ್ಯದ ಆಧಾರದಿಂದ ಬರೆದುದಾಗಿ ಹೇಳಿದ್ದಾನೆ. ರಾಘವಾಂಕನ ಶರಷಟ್ಪದಿಯ ಕಾವ್ಯವಾವುದೆಂದು ಗೊತ್ತಾಗಿಲ್ಲ. ತೆಲುಗಿನಲ್ಲಿ ದ್ವಿಪದೀ ರೂಪದಲ್ಲಿ ರಾಘವಾಂಕನು ಬರೆದ "ನಳಚರಿತ್ರೆ" ಇದೆಯಂತೆ. ಅವನು ಇವನೇ ಎಂಬುದೂ ನಿರ್ಧಾರವಾಗಿಲ್ಲ.

ಕನ್ನಡ ಸಾಹಿತ್ಯದಲ್ಲಿ ಕವಿ ಜೀವನವನ್ನೇ ಕಾವ್ಯವಸ್ತುವಾಗಿ ಅಥವಾ ಕವಿಯನ್ನೇ ಕಾವ್ಯನಾಯಕನನ್ನಾಗಿ ಮಾಡಿ ಬರೆಯಲಾದ ಕಾವ್ಯಗಳು ತೀರಾ ವಿರಳ. ಹನ್ನೆರಡನೆಯ ಶತಮಾನಕ್ಕೆ ಹಿಂದೆಯೇ ಆಗಿ ಹೋದ ಪಂಪ, ರನ್ನ ಮುಂತಾದ ಕವಿಗಳು ಉದಾತ್ತ ಜೀವನ

[1] ರಾಘವಾಂಕನು ಇಟ್ಟುಕೊಂಡ ಹೆಸರು ಇದಕ್ಕೂ 'ಹರಿಹರ ಚಾರಿತ್ರ' ಎಂದು ಇದ್ದಿರಲು ಸಾಧ್ಯವಿದೆ.

ನಡೆಸಿದವರು. ಪಂಪನಂತೂ ಕಲಿಯೂ ಕವಿಯೂ ನಾಡೋಜನೂ ಆಗಿದ್ದನು. ಆದರೆ ಅವನ ಜೀವನ ಕುರಿತು ಯಾರೂ ಕಾವ್ಯ ಬರೆದಂತಿಲ್ಲ. ಈ ಬಗೆಯ ಕಾವ್ಯರಚನೆಯಲ್ಲಿ ಮೊದಲಿಗನು ಕವಿ ರಾಘವಾಂಕ. ಅವನು ಬರೆದ ಅನುಪಲಬ್ಧ ಕಾವ್ಯ "ಹರಿಹರ ಮಹತ್ವ" ಎಂಬುದು ಆತನ ಗುರುವಾದ ಹರೀಶ್ವರನ ಚರಿತ್ರವೇ ಆಗಿದೆ ಎಂದು ಸಿದ್ಧನಂಜೇಶನು ಬರೆದ "ರಾಘವಾಂಕ ಚಾರಿತ್ರ"ದಿಂದ (ಕ್ರಿ. ಶ. 1650) ತಿಳಿದುಬರುತ್ತದೆ. ಹರಿಹರನು 'ಹರಿಹರ ಮಹತ್ವ'ದಲ್ಲಿ ಕಾವ್ಯನಾಯಕನಾದಂತೆ 'ರಾಘವಾಂಕ ಚಾರಿತ್ರ' ಎಂಬ ಉಪಲಬ್ಧ ಕೃತಿಯಲ್ಲಿ ರಾಘವಾಂಕನು ಕಾವ್ಯನಾಯಕನಾಗಿದ್ದಾನೆ. ರಾಘವಾಂಕ ಚಾರಿತ್ರವು ವಾರ್ಧಕ ಷಟ್ಪದಿಯಲ್ಲಿದೆ. "ನಾನೃಷಿಃ ಕುರುತೇ ಕಾವ್ಯಂ" (ಋಷಿಯಾಗದವನು ಕವಿಯಾಗಲಾರ) ಎಂಬ ಮಾತನ್ನು ಚರಿತಾರ್ಥಗೊಳಿಸಿದವರಲ್ಲಿ ರಾಘವಾಂಕನೊಬ್ಬನೆಂದು ತೋರುತ್ತದೆ. ಅವನ ಜೀವನವೂ ಕಾವ್ಯಜೀವನವೂ ಅಭಿನ್ನಗಳಾಗಿದ್ದವೆಂದು ತೋರುತ್ತದೆ.

ರಾಘವಾಂಕನ ವ್ಯಕ್ತಿತ್ವವು ಅನ್ಯಾದೃಶವಾದುದೆಂದು ರಾಘವಾಂಕ ಚಾರಿತ್ರದಿಂದ ತಿಳಿದು ಬರುತ್ತದೆ. ಅವನೊಬ್ಬ ಕಾರಣ ಪುರುಷ (ಕವಿ). ಹಂಪೆಯಲ್ಲಿದ್ದ ಮಹಾದೇವ ರುದ್ರಾಣಿಯರು ಪುತ್ರಾಪೇಕ್ಷೆಯಿಂದ ಪರಶಿವನನ್ನು ಪೂಜಿಸಿದರು. ಶಿವನು ತನ್ನ ಜ್ಞಾನ-ವೈರಾಗ್ಯ-ವಿವೇಕ ಸದ್ಗುಣಗಳನ್ನೇ ಒಂದು ಪುತ್ಥಳಿ ಮಾಡಿ, ಅದಕ್ಕೆ ಪ್ರಾಣವನ್ನಿತ್ತು ಲೋಕದಲ್ಲಿ ಹುಟ್ಟಲು ಆಜ್ಞೆ ಮಾಡಿದನು. ಆದರಂತೆ ಹುಟ್ಟಿದವನೇ ಈತನೆಂದು ರಾಘವಾಂಕ ಚಾರಿತ್ರದಲ್ಲಿ ಹೇಳಿದೆ. ಇವನು ಹುಟ್ಟಿದೊಡನೆ ಮಹಾದೇವ ಭಟ್ಟನು ದಾನ ಧರ್ಮಾದಿಗಳನ್ನು ಆಚರಿಸಿ, ತನ್ನ ವಂಶಗುರುವಾದ ಹರೀಶ್ವರನನ್ನು ಬರಿಸಿದನು. ಮಗುವಿಗೆ ಶೈವೋಪದೇಶವನ್ನು ಕರುಣಿಸುವಂತೆ ಕೇಳಿಕೊಂಡನು. ಗುರು ಹರೀಶ್ವರನು ಹಸುಳೆಯ ತಲೆಯಲ್ಲಿ ಮಂತ್ರಯುತ ಭಸಿತವನ್ನಿಟ್ಟು ಸತ್ಕ್ರಿಯೆಗಳನ್ನು ಮಾಡಿ — ರಾಘವ, ರಾಘವಾಂಕ, ರಾಘವದೇವ ಎಂದು ನಾಮಕರಣೋತ್ಸವವನ್ನು ಮಾಡಿದನು. ಏಳು ವರ್ಷವಾದೊಡನೆ ರಾಘವಾಂಕನಿಗೆ ಹರಿಹರನಿಂದ ಗಾಯತ್ರಿಯ ಉಪದೇಶವೂ ಆಯಿತು. ಅಖಿಳ ಲೌಕಿಕ–ವೈದಿಕ ವಿದ್ಯೆಗಳಲ್ಲಿ ಪ್ರವೀಣನಾಗಿ 'ಬುಧವರ'ನೆನಿಸಿ ಅವನು ರಾಘವಾಂಕ ಪಂಡಿತನಾದನು. ಅವನು ಗಳಿಸಿದ ಪಾಂಡಿತ್ಯವನ್ನು ಸಿದ್ಧನಂಜೇಶನು ಹೀಗೆ ವರ್ಣಿಸಿದ್ದಾನೆ—

ವಾರಿಜೋದ್ಭವನಮರಗುರು ವಾಣಿ ಫಣಿರಾಜ
ನೀ ರಾಘವನ ಸತ್ಕವಿತ್ವಕ್ಕೆ ಚತುರತೆಯ
ಚಾರುಬುದ್ಧಿಗೆ ಸರಸ ವಾಕ್ಯಕ್ಕೆ ಬಹು ವಿಧದ ವ್ಯಾಖ್ಯಾನ
ಶಕ್ತಿಗಳ್ಗೆ ||
ಸಾರಿದಂ ಜಡಜಭವನಾಮುಮಂ ಸ್ವರ್ಗಮಂ
ಸೇರಿದಂ ಗಂಡನ ಮೊಗಂ ಪೊಕ್ಕಡಂಗಿದಳು
ಮಾರಸಾತಳ ಕಿಳಿದನೆನಲುಳಿದ ಬುಧಕುಲದ ವಾರ್ತೆಯೇ
ನವನ ಮುಂದೆ ||

(ರಾಘವಾಂಕ ಚಾರಿತ್ರ ಸಂ. 2—59)

ಯಾಥಾಸಂಖ್ಯಾಲಂಕಾರದ ಕವಿಚಾತುರ್ಯದ ಈ ಪದ್ಯೋಕ್ತಿಗಳು ರಾಘವಾಂಕನ ಕವಿತೆ, ಬುದ್ಧಿಚಾತುರ್ಯ, ಸರಸವಾಕ್ಕೌಶಲ, ವ್ಯಾಖ್ಯಾನ ಶಕ್ತಿ—ಎಂಬ ಚತುರ್ಮುಖಗಳನ್ನು ಚಿತ್ರಿಸಿವೆ.

ರಾಘವಾಂಕನ ಕವಿತಾ ಸಾಮರ್ಥ್ಯವನ್ನು ಕಂಡು ಮೆಚ್ಚಿದ ಪಂಪಾಪುರದ ದೇವರಾಜೇಂದ್ರನು ಅವನಿಗೆ "ಕವಿಶರಭಭೇರುಂಡ" ಎಂಬ ಬಿರುದಿನ ಪಾದ ಪೆಂಡೆಯವನ್ನಿತ್ತು ಗೌರವಿಸಿದನು. ಸತ್ಯವಂತರ ಚರಿತೆಯನುಸುರೆಂದು ಹೇಳಿದ ಅರಸನ ಬಿನ್ನಹವನ್ನು ಮನ್ನಿಸಿ ಹರಿಶ್ಚಂದ್ರ ಚಾರಿತ್ರವನ್ನು ರಚಿಸಿ, ಎಲ್ಲರ ಮನ್ನಣೆಗೆ ಪಾತ್ರನಾದನು.

ರಾಘವಾಂಕನು ಈ ಹರಿಶ್ಚಂದ್ರ ಚಾರಿತ್ರ ಕಾವ್ಯವನ್ನು ಹೊನ್ನ ಹರಿವಾಣದಲ್ಲಿರಿಸಿ ಕೊಂಡೊಯ್ದು ತನ್ನ ಗುರುವಾದ ಹರಿಹರನ ಮುಂದಿಟ್ಟು ನಮಸ್ಕರಿಸಿದ ಸಂದರ್ಭದಲ್ಲಿ ತನ್ನ ಶಿಷ್ಯನು ಈ ಕಾವ್ಯದಲ್ಲಿ ನರಸ್ತುತಿಗೆ ಪ್ರಾಧಾನ್ಯವನ್ನಿತ್ತನೆಂಬ ಆಪಾದನೆಯಿಂದ ತರಹರಿಸದಾದನು. ತನ್ನ ಎಡದ ಪಾದುಕೆಯೊಳಿಡಲು ರಾಘವನ ಮುಂಬಲ್ಲುಗಳು ಕಳಚಿಬಿದ್ದುವು. ಮುಂದೆ ರಾಘವಾಂಕನು ತನ್ನ ಗುರುವಿನ ಪ್ರೀತ್ಯರ್ಥವಾಗಿ ಶೈವಕೃತಿ ಪಂಚಕವನ್ನು ರಚಿಸಿ, ಕಳೆದ ಹಲ್ಲುಗಳನ್ನು ಮರಳಿ ಪಡೆದನು. ಒಮ್ಮೆ ಹಲ್ಲುಗಳು ಕಳಚಿಬಿದ್ದುದು, ಮತ್ತೆ ಅವನ್ನೇ ಪಡೆದುದು – ಎಂದಿರುವುದರಿಂದ ಈ 'ಹಲ್ಲುಗಳು' ಎಂಬುದೂ ಎಡದ ಪಾದುಕೆಯಿಂದ ಒಡೆದ ವಿಚಾರವೂ ವಾಚ್ಯಾರ್ಥಕವಲ್ಲವೆಂದು ವಿದಿತವಾಗುತ್ತದೆ.

ಒಮ್ಮೆ ರಾಘವಾಂಕನು ಓರುಂಗಲ್ಲಿನ ಪ್ರತಾಪರುದ್ರನ ಬಿನ್ನಹದಂತೆ ಅಲ್ಲಿಗೆ ಹೋಗಿ, ವೀರೇಶ ಚರಿತೆಯನ್ನು ರಚಿಸಿ, ವೀರೇಶನನ್ನು ಒಲಿಸಿದನು. ವೀರೇಶ ಚರಿತೆ "ಮೀಸಲುಗವಿತೆ"ಯೆನಿಸಿತು. ಪರವಾದಿಗಳ ಮುಂದೆ ಈ ಮೀಸಲುಗವಿತೆಯಿಂದಲೇ ರಾಘವಾಂಕನು ಜಯಭೇರಿ ಮೊಳಗಿಸಿದುದು. ಈ ಕೃತಿಯ ಕುರಿತು ಡಾ|| ಆರ್. ಸಿ. ಹಿರೇಮಠರು ಹೀಗೆಂದಿದ್ದಾರೆ— "ವೀರೇಶ ಚರಿತೆ.....ಕವಿ ರಾಘವಾಂಕನ ಅದ್ಭುತ ಕಾವ್ಯ ಶಕ್ತಿ ಪ್ರದರ್ಶನಕ್ಕಾಗಿ ಮೀಸಲಾಗಿರಿಸಿದ "ಮೀಸಲುಗವಿತೆ". ಈ ಕೃತಿರಚನೆಗೆ ಕಾರಣ, ಕೃತಿಯ ವಸ್ತು, ರಚನಾ ಪರಿಣಾಮ—ಇವನ್ನು ಲಕ್ಷಿಸಿದರೆ "ಮೀಸಲುಗವಿತೆ" ಎಂಬುದಕ್ಕೆ ಬೇರೆ ವಿಶೇಷಾರ್ಥ ಇರುವಂತೆ ಕಾಣುತ್ತದೆ. 'ಮೀಸಲು' ಎಂದರೇನು ನೋಡೋಣ.

'ಮೀಸು' ಎಂಬುದಕ್ಕೆ 'ಈಜಾಡು' ಎಂದು ಹವಿಕ ಕನ್ನಡದಲ್ಲಿ ಅರ್ಥ. 'ಜಯಶಾಲಿಯಾಗು' ಎಂಬ ಲಕ್ಷ್ಯಾರ್ಥದಲ್ಲಿ ಈ ಧಾತುವನ್ನು ಸಾರೋದ್ಧಾರವಾಗಿ ಬಳಸುತ್ತಾರೆ. 'ಅಲು'ಸೇರಿದಾಗ ಅದು ಭಾವನಾಮವಾಗುತ್ತದೆ. ಆಗ 'ಮೀಸಲುಗವಿತೆ' ಎಂಬುದಕ್ಕೆ 'ವಿಜಯ ಗೀತ' ಎಂಬ ಅರ್ಥ ಬರುತ್ತದೆ. ರಾಘವಾಂಕನು ಪರ-ವಾದಿಗಳನ್ನು ಇದರ ಮೂಲಕ ಜಯಿಸಿದುದರಿಂದ ಇದು 'ವಿಜಯ ಗೀತ' ಎಂಬುದು ನಿಶ್ಚಯ. ಈ ಕಾವ್ಯದ ವಸ್ತು ದಕ್ಷಾಧ್ವರಧ್ವಂಸಿಯಾದ ವೀರೇಶನ ವಿಜಯವಾಗಿರುವುದರಿಂದಲೂ ಇದು "ವಿಜಯ ಗೀತ"ವೇ ಆಗಿರುತ್ತದೆ. ಗುರು ಹರಿಹರನ ಒಡೆತದಿಂದ ಕಳೆದ

ಹಲ್ಲುಗಳನ್ನು ಮರಳಿ ಪಡೆದು ಗುರುವಿನ ಮನವನ್ನು ಜಯಿಸಲು ಸಹಾಯಕವಾದ ಕಥನಕಾವ್ಯವಾಗಿಯೂ ಇದು ವಿಜಯಕಾವ್ಯವೇ ಆಗಿರುತ್ತದೆ. ಇದರ ಬಂಧರೂಪವನ್ನು 'ಉದ್ದಂಡ ಷಟ್ಪದಿ'ಎಂದು ಕರೆದಿರುವುದರಲ್ಲಿಯೂ ವಿಜಯ ಕಾವ್ಯದ ಅರ್ಥಚ್ಛಾಯೆಯನ್ನು ಕಾಣಬಹುದು. 'ಉದ್ದಡ ಷಟ್ಪದಿ' ಎಂದರೇನು ?

ರಾಘವಾಂಕನ ಹರಿಶ್ಚಂದ್ರ ಚಾರಿತ್ರ, ಸೋಮನಾಥ ಚಾರಿತ್ರ, ಸಿದ್ಧರಾಮ ಚಾರಿತ್ರ ಎಂಬೀ ಮೂರು ಉಪಲಬ್ಧ ಕಾವ್ಯಗಳೂ ವಾರ್ಧಕ ಷಟ್ಪದಿಯಲ್ಲಿಯೇ ರಚಿತವಾಗಿವೆ. ವೀರೇಶ ಚರಿತೆಯ ಛಂದಸ್ಸನ್ನು 'ಉದ್ದಂಡ ಷಟ್ಪದಿ' ಎನ್ನಲಾಗಿದೆ. ಮಾತ್ರಾಗಣನೆಯಲ್ಲಿ ಇದು ವಾರ್ಧಕದಂತೆಯೇ ಇದೆ. ಆದರೆ ಇದು ವಾರ್ಧಕ ಷಟ್ಪದಿಯಲ್ಲ. ವಾರ್ಧಕದ ರಚನೆ ಪಂಚಮಾತ್ರಾಗಣಗಳಿಂದ ಆಗುತ್ತದೆ. ಆದರೆ ಉದ್ದಂಡ ಷಟ್ಪದಿ ಚತುರ್ಮಾತ್ರಾಗಣಗಳಿಂದ ಕೂಡಿದೆ. ನಾಲ್ಕುಮಾತ್ರೆಯ ಗಣಗಳು ಏಕತಾಳದ ಗತಿಗೆ ಒಡಂಬಡುವುದಾಗಿ, ವೀರರಸಪ್ರಚೋದಕಗಳಾಗಿವೆ. ಈ ಗಣಗಳು ಸೈನಿಕ ಪಥಸಂಚಲನಕ್ಕೆ ಅನುಗುಣವಾಗುವವು. ಈ ದೃಷ್ಟಿಯಿಂದ 'ಉದ್ದಂಡ ಷಟ್ಪದಿ' 'ಸಂಚಲನಗೀತೆ' (Marching Song). ಉದ್ದಂಡ (ಉತ್ + ದಂಡ) –ಎತ್ತಿದ ದಂಡ ಎಂಬೀ ಅರ್ಥ ಪಥಸಂಚಲನಕ್ಕೆ ಅನುಗುಣವಾಗಿದೆ. ಸೈನ್ಯಸಂಚಲನದಲ್ಲಿ ರಣವಾದ್ಯಗಳನ್ನು ಪದಗತಿಗನುಗುಣವಾಗಿ ನಿನದಿಸುತ್ತಾರೆ. ಆಗ ಎತ್ತಿದ ದಂಡವುಳ್ಳ ದಳವು ಕ್ರಮಬದ್ಧವಾಗಿ ಹೆಜ್ಜೆಯಿಡುತ್ತದೆ. ಸೈನ್ಯವು ದಂಡೆತ್ತುವ ಕಾರ್ಯವೇ 'ಉದ್ದಂಡ'. ಉದ್ದಂಡ ಷಟ್ಪದಿಯಲ್ಲಿ ರಚಿತವಾದ ಈ ಕಾವ್ಯವು ದಕ್ಷಯಾಗದ ಕಡೆಗೆ ವೀರೇಶನು ಗಣಕುಲದೊಡನೆ ದಂಡೆತ್ತಿಹೋದ ಕಥನದಿಂದ ಕೂಡಿದೆ. ಉದಾಹರಣಾರ್ಥ ಒಂದು ಪದ್ಯವಿದು —

ಕುಲಗಿರಿಗಳ ಕೈಗುಂಡುಗಳ ಬ್ರಹ್ಮಾಂಡಂ
ಗಳ ಹೊಡೆಸೆಂಡುಗಳ ದಿಶಾಕರಿಗಳ ದಂತಂ
ಗಳ ಪಿಲ್ಲಣಿಗೆಗಳ ಮಹಾಕಾಲನ ಕೋಣನ ಕೋಡಿನ
ಹೊಸ ಬಡಿಗೆಗಳ ||
ಕುಳಿಕನ ಕಡ್ಡಣಗೆಯ ಶಶಿ ರವಿಗಳ ತಾಳಂ
ಗಳ ಧರೆ ಗಗನಂಗಳ ಪಲ್ಲಟಿಸುವ ಬಲಯುತ
ಬಲದಿಂ ಗಣಕುಲ ನಡೆದುದು ವೀರೇಶನ ಕೆಲಬಲದಲಿ
ಜಗದಗಲದೊಳು ||

ತಾಳಗತಿಗೆ ಅನುಗುಣವಾಗಿ ಹೇಳಿದಾಗ ಇದು ಪಥಸಂಚಲನೆಗೆ ಸರಿ ಹೊಂದುವುದು. ಈ ಪದ್ಯದ ಒಂದನೆಯ ಮತ್ತು ಎರಡನೆಯ ಪಾದಗಳಲ್ಲಿ ನಾಲ್ಕು ಮಾತ್ರೆಯ ನಾಲ್ಕೇ ಗಣಗಳಿದ್ದು ಮೂರನೆಯದರಲ್ಲಿ ಆರು ಗಣಗಳೂ ಅಂತ್ಯ ಗುರುವೂ ಇದ್ದರೆ.ಅದೇ ರೀತಿ ಉಳಿದ ಅರ್ಧ ಪದ್ಯವೂ ಇದ್ದರೆ 'ಪರಿವರ್ಧಿನಿ' ಎಂಬ ಷಟ್ಪದಿಯಾಗುವುದಷ್ಟೆ ? ಉದ್ದಂಡ ಷಟ್ಪದಿಯಲ್ಲಿ ಮೊದಲ ಎರಡು ಪಾದಗಳಲ್ಲಿ ಇಂತಹ ಐದು-ಐದು ಗಣಗಳಿವೆ. ಮೂರನೆಯದರಲ್ಲಿ ಇಂಥವು ಏಳು ಗಣಗಳು ಮತ್ತು ಅಂತ್ಯದಲ್ಲಿ ಅಂತ್ಯ ಗುರುವುಳ್ಳ ಚತುರ್ಮಾತ್ರಾಗಣ ಇವೆ. ಮಾತ್ರಾಸಂಖ್ಯೆಯಲ್ಲಿ ಈ ರಚನೆ ವಾರ್ಧಕ ಷಟ್ಪದಿಯಂತಿದೆ. ದಕ್ಷನ ಮೇಲೆ ವೀರೇಶನು ಎತ್ತಿದ ದಂಡವೆನಿಸಿಯೂ ಇದು 'ಉದ್ದಂಡ' ಎಂಬ ಹೆಸರಿಗೆ ಒಪ್ಪುವಂಥದು.

ಷಟ್ಪದೀ ಪ್ರಯೋಗ ನಿಪುಣನಾದ ಕವಿ ರಾಘವಾಂಕನಿಗೆ ಹೀಗೆ ಬಗೆಬಗೆಯ ಷಟ್ಪದಿಗಳನ್ನು ರಚಿಸುವುದು ಲೀಲಾಜಾಲವೇ ಸರಿ. ಈ ಛಂದೋ ರಚನೆಯ ಕುರಿತು ಇನ್ನೆರಡು ಮಾತು ಈ ಸಂದರ್ಭದಲ್ಲಿ ಅನುಚಿತವಾಗದು. ಷಟ್ಪದಿಯ ಸಾಮಾನ್ಯ ಲಕ್ಷಣವನ್ನು ಛಂದೋಂಬುಧಿಯಲ್ಲಿ ಹೀಗೆ ಕಾಣಿಸಿದೆ—

ತೋರುವ ಮಾತ್ರೆಯ ಷಟ್ಪದಿ
ಗಾರಾರಡಿಯೊಳರವಲ್ಲಿಯೊಂದೇ ನಿಯಮಂ
ಮೂರಕ್ಕೊಂದು ಪದರ್ಧಂ
ಬೇರೀಶಂ ಕಡೆಯೊಳಲ್ಲ ನಿಲ್ಲದೆ ಬರ್ಕುಂ ||

ಇದರ ಪ್ರಕಾರ, 'ಉದ್ದಂಡ ಷಟ್ಪದಿ'ಯ ಮೂರನೆಯ ಮತ್ತು ಆರನೆಯ ಪಾದ ಸರಿಯಾದ ಲೆಕ್ಕಕ್ಕೆ–ವಿಭಜನೆಗೆ, ಬರುವುದಿಲ್ಲ. ಲಕ್ಷಣ ಪ್ರಕಾರ ಆ ಒಂದು (ಮೂರನೆಯ ಅಥವ ಆರನೆಯ) ಪಾದದಲ್ಲಿ ಗಣಗಳು $5+2\frac{1}{2}$ + ಗುರು ಬರಬೇಕು. ಈ ಅರ್ಧಗಣದ ಪರಿಗಣನೆ ಸೊಗಸಲ್ಲ. ಗಣವು ಅರ್ಧವಾದರೆ ಅದು ಗಣವೆನಿಸುವುದೇ ಇಲ್ಲ. ಆದುದರಿಂದ ಈ 'ಉದ್ದಂಡ ಷಟ್ಪದಿ'ಯನ್ನು ಮೊದಲ ಪಾದದಲ್ಲಿ ನಾಲ್ಕು ಮಾತ್ರೆಗಳ ಆರುಗಣಗಳಿಂದ ರಚಿಸಿ, ಉಳಿದವುಗಳನ್ನು ಆ ಲೆಕ್ಕಕ್ಕೆ ಅನುಗುಣವಾಗಿ ರಚಿಸಿದ್ದರೆ ಚೆನ್ನಾಗುತ್ತಿತ್ತು. ರಾಘವಾಂಕನು ಹಾಗೆ ರಚಿಸಲಿಲ್ಲ. ವಿನೋದಾರ್ಥವಾಗಿ ಆ ರೀತಿ ಇಲ್ಲೊಂದು ಪದ್ಯವನ್ನು ರಚಿಸಿ, ಅದಕ್ಕೆ "ದೀರ್ಘದಂಡ ಷಟ್ಪದಿ" ಎಂದು ಹೆಸರಿಸಿ, ಸಹೃದಯರ ಅವಗಾಹನೆಗಾಗಿ ಈ ಕೆಳಗೆ ಕೊಟ್ಟಿರುತ್ತೇನೆ —

ದೀರ್ಘದಂಡ ಷಟ್ಪದಿ :

ಸೊಂಪಿಂದೊಪ್ಪುವ ಕುಂತಳದೇಶದೊಳು ವಿರೂಪಾಕ್ಷನ
ಲಂಪಿನ ಪಂಪಾಕ್ಷೇತ್ರದೊಳಾರಾಧ್ಯ ಬ್ರಾಹ್ಮಣ ಕುಲ
ಸಂಪನ್ನ ಮಹಾದೇವನೆನಿಪ್ಪಂ ವಿದ್ವಜ್ಜನರ ಶಿರೋಮಣಿ
ತತ್ಸತಿ ರುದ್ರಾಣಿ ||
ದಂಪತಿಗಳು ಸದ್ಭಕ್ತಿಮನಸ್ಕತೆಯಿಂದಾ ಪರಶಿವ
ನ ಪೂಜಿಸಲಾತನ ಬೈರಾಗ್ಯಂ ಜ್ಞಾನಗುಣಗಳ
ಲ್ಲಿಂ ಪರಿಣಾಗುತೆ ರುದ್ರಾಣಿಯ ಗರ್ಭಾಂಬುಧಿಯಿಂ ಬರೆ
ರಾಘವನೆಂಬಂಕಿತಗೊಂಡಂ ||೧||

ಕವಿ ಉದಾತ್ತನಾಗದಿದ್ದರೆ, ಕಾವ್ಯ ಉದಾತ್ತವಾಗದು. ವಾಲ್ಮೀಕಿಯಂತೆ ಇತರರು ರಾಮಾಯಣ ಬರೆಯಲಾರದಾದರು. ಆದುದರಿಂದ "ನಾನೃಷಿಃ ಕುರುತೇ ಕಾವ್ಯಂ" ಎಂಬ ವಾಕ್ಯಕ್ಕೆ ಪ್ರಭಾವ ಬಂತು. ಉದಾತ್ತಚರಿತನಲ್ಲದ ಕವಿ ಸ್ವಪ್ರತಿಭೆಯಿಂದ, ಕಲ್ಪನಾಶಕ್ತಿಯಿಂದ,ಪಾಂಡಿತ್ಯದಿಂದ, ಪೂರ್ವಕಾವ್ಯಾನುಭವಗಳಿಂದ, ಸ್ವಾಧ್ಯಾಯದಿಂದ ಕವಿತೆಯನ್ನೋ ಮಹಾಕಾವ್ಯವನ್ನೋ ಸೃಷ್ಟಿಸಬಹುದು. ಆ ಕಾವ್ಯದಲ್ಲಿ ರಸಾಲಂಕಾರಗಳನ್ನು ಜೀವನಾನುಭವ

ಗಳನ್ನು ವಿದಗ್ಧತೆಯನ್ನು ತುಂಬಿ ಓದುಗರನ್ನು ಮುಗ್ಧಗೊಳಿಸ ಬಹುದು, ಜನರ ಮನ್ನಣೆಯನ್ನು ಗಳಿಸಬಹುದು. ಆದರೆ ಉದಾತ್ತ ನಲ್ಲದ ಕವಿಯನ್ನು ಪೂರ್ವಗ್ರಹ ಬಿಡದು. ಅವನ ಅನುದಾತ್ತ ಗುಣವು ಅವನ ಕಾವ್ಯದ ಉದಾತ್ತ ಪಾತ್ರಗಳಲ್ಲೇ ಮೂಡಿಬರದಿರದು. ಆತನು ನೀಚಪಾತ್ರವನ್ನು ಉದಾತ್ತೀಕರಿಸಬಹುದು. ಆತನ ಕಾವ್ಯೋದ್ದೇಶ ಅನುದಾತ್ತವಾಗಬಹುದು. ಕಾವ್ಯ ಗುಣಗಳಲ್ಲಿ ರಂಜನೆಯೊಂದೇ ಮುಖ್ಯವಲ್ಲವಷ್ಟೆ.

ಕನ್ನಡದಲ್ಲಿ ಕಾವ್ಯದ ಲಕ್ಷಣವನ್ನು ಹೇಳಿರುವ ಕವಿರಾಜ ಮಾರ್ಗಕಾರನ ಮಾತಿನ ಕಡೆಗೆ ಲಕ್ಷ್ಯವಿಡೋಣ—

ಕವಿಭಾವ ಕೃತಾನೇಕ
ಪ್ರವಿಭಾಗ ವಿವಿಕ್ತ ಸೂಕ್ತ ಮಾರ್ಗಂ ಕಾವ್ಯಂ
ಸವಿಶೇಷ ಶಬ್ದ ರಚನಂ
ವಿವಿಧಾರ್ಥ ವ್ಯಕ್ತಿ ವರ್ತಿತಾಲಂಕಾರಂ (1—22)

ಕಾವ್ಯವು 'ಕವಿಭಾವಕೃತ', ಅನೇಕವಾದ ವಿಶೇಷ ವಿಭಾಗ ಗಳಿಂದ ಬೇರೆ ಬೇರೆಯಾಗಿ ಕಾಣಿಸುವಂಥದು, (ಸು ಉಕ್ತ) ಚೆನ್ನಾಗಿ ಹೇಳಿದುದು—ಎಂಬೀ ಪೂರ್ವಭಾಗದ ಲಕ್ಷಣ ನಿರೂಪಣೆ ಮಾರ್ಗ ಕಾರನದೇ ಆಗಿರುವಂತೆ ಕಾಣುತ್ತದೆ. 'ಸವಿಶೇಷ ಶಬ್ದ ರಚನಂ....' ಎಂಬೀ ಉತ್ತರಭಾಗದ ಮಾತು ಭಾಮಹ ದಂಡಿಗಳ ಅಭಿಪ್ರಾಯವೇ ಆಗಿದೆ. ಮಾರ್ಗಕಾರನು ಹೇಳಿರುವ "ಕವಿಭಾವ ಕೃತ" ಎಂಬ ಮಾತು ಇಲ್ಲಿ ಲಕ್ಷ್ಯಾರ್ಹ. ಭಾವದಂತೆ ಮಾತು, ಮಾತಿನಂತೆ ಕಾರ್ಯ. "ಕವೇಃ ಕರ್ಮ ಕಾವ್ಯಂ" ಎಂಬ ಮಾತೂ ಇದೆ. ಇದರಿಂದ ಕಾವ್ಯ ದಲ್ಲಿ ಅಲ್ಲಲ್ಲಿ ಬರುವ ಪಾತ್ರಗಳ ಮೂಲಕ, ಸನ್ನಿವೇಶಗಳ ಮೂಲಕ, ಮಾತುಗಳ ಮೂಲಕ ಅಭಿವ್ಯಕ್ತವಾಗುವ ಭಾವಗಳು ಕವಿಯ ನಿಜ ಭಾವಗಳೇ ಆಗಿರುತ್ತವೆ. ಕವಿಭಾವವೇ ಕಾವ್ಯಕ್ಕೆ ಪ್ರೇರಕ ವಸ್ತು. ಕಾವ್ಯ ಪ್ರಾರಂಭದ ಮೊದಲು ಕವಿ ತನ್ನ ಮೆಚ್ಚಿಕೆಯ ವಿಷಯ ಯಾವುದು ? ಯಾವುದು ನೀತಿ ಸಂಪನ್ನ ಸಹೃದಯ ಚೇತೋ-ಹಾರಿಯಾದೀತು ? ಯಾವ ಸಂದೇಶ ಜನತೆಗೆ ಹಿತ ?—ಎಂಬುದನ್ನು ಯೋಚಿಸಿಯೇ ಪದವಿಡಲು ತೊಡಗುತ್ತಾನೆ. ಅದೇ 'ಕವಿ ಭಾವ'. ರಾಘವಾಂಕನ ಕಾವ್ಯಗಳಲ್ಲಿ ಅವನ ಕವಿ ಭಾವಗಳೇ—ಅವನು ಹೇಳಲು ಎತ್ತಿಕೊಂಡ ಮೌಲ್ಯಗಳೇ ಪ್ರಕಟವಾಗಿರುವುದನ್ನು ಕಾಣಬಹುದು. ಅವನು ತನ್ನ ಉದಾತ್ತತೆಯನ್ನು ಹೇಳಿಕೊಂಡಿರುವುದು ಹೀಗೆ—

ಪರರೊಡವೆಯಂ ಕೊಂಡು ಕೃತಿಯ ಪೇಳದ ಭಾಷೆ
ಪರರ ಕಾವ್ಯಾರ್ಥಗಳಂ ಛಿದ್ರಿಸದ ಭಾಷೆ
ಪರರ ದೈವವ ನುತಿಸದಿಪ್ಪ ಭಾಷೆಯು ಪರರ ಕ್ಲೇಶವೀಕ್ಷಿಸದ
ಭಾಷೆ ||
ಪರರ ನಿಂದಿಸಿ ತನ್ನ ಹೊಗಳಿಕೊಳ್ಳದ ಭಾಷೆ
ಪರರ ವಧುವಂ ಕಂಡು ಮನವೆಳಸದಿಹ ಭಾಷೆ
ಪರರ ವಸ್ತುವ ತೃಣಕೆ ಸರಿಯೆಂಬ ಭಾಷೆಯಿದು
ರಾಘವಾಂಕಗೆ ಸಂದುದು
(ಹ. ಕಾ. 1—16)

ಸತ್ಯ, ಅಚೌರ್ಯ, ನಿಜಭಕ್ತಿ, ಜೀವದಯೆ, ನಿರ್ಗರ್ವತೆ, ಬ್ರಹ್ಮ ಚರ್ಯ, ಅಪರಿಗ್ರಹ—ಮುಂತಾದ ಸದ್ಗುಣಗಳು ತನ್ನಲ್ಲಿವೆಯೆಂದು ಪ್ರತಿಜ್ಞಾಪೂರ್ವಕವಾಗಿ ರಾಘವಾಂಕನು ಈ ಪದ್ಯದಲ್ಲಿ ಸಾರಿದ್ದಾನೆ. ಇದರಿಂದ ಕವಿಯು ಒಳ್ಳೆಯ ನಡತೆಗೆ ಪ್ರಾಶಸ್ತ್ಯವಿತ್ತವನೆಂದು ವೇದ್ಯವಾಗುತ್ತದೆ. ಧರ್ಮದ ಲಕ್ಷಣವೂ ನಡತೆಯೇ, ಭಕ್ತಿಯ ಲಕ್ಷಣವೂ ಅದೇ.

ರಾಘವಾಂಕನು ತನ್ನ ಕಾವ್ಯಗಳಿಗೆ "ಚಾರಿತ್ರ" ಎಂಬ ಹೆಸರನ್ನಿಟ್ಟಿರುವುದು, ಅವನಲ್ಲಿದ್ದ ಕವಿಭಾವದ ನಡತೆಯ ಹಿನ್ನೆಲೆಗೆ ತಕ್ಕಂತೆ ಔಚಿತ್ಯಪೂರ್ಣವಾಗಿದೆ. "ಕೃತಿಗೆ ನಾಮಂ ಹರಿಶ್ಚಂದ್ರ ಚಾರಿತ್ರ" ಎಂದು ಹರಿಶ್ಚಂದ್ರ ಕಾವ್ಯದಲ್ಲಿ, "ಕೃತಿಪೆಸರು ಶ್ರೀ ಸೋಮನಾಥ ಚಾರಿತ್ರ", 'ಕೃತಿಪೆಸರು ಶ್ರೀ ಸಿದ್ಧರಾಮ ಚಾರಿತ್ರ'—ಎಂದು ಆ ಕೃತಿಗಳಲ್ಲಿ ಹೇಳಿದ್ದಾನೆ. ಚಾರಿತ್ರ (character) ಎಂಬುದಕ್ಕೆ ಒಳ್ಳೆಯ ನಡತೆ ಎಂದೇ ಅರ್ಥ. ಗ್ರಂಥ ಸಂಪಾದಕರು ಕವಿಯೇ ಇಟ್ಟಿರುವ ಹೆಸರುಗಳನ್ನು ಬಿಟ್ಟು ಹರಿಶ್ಚಂದ್ರ ಕಾವ್ಯ, ಸಿದ್ಧರಾಮ ಚರಿತೆ—ಎಂದು ಹೇಳಬೇಕಾಗಿರಲಿಲ್ಲವೆಂದು ತೋರುತ್ತದೆ. ಜೀವನ ದಲ್ಲಿ ಒಳ್ಳೆಯ ನಡತೆಯಲ್ಲಿ ನಡೆದವರನ್ನು ಚಿತ್ರಿಸುವುದೇ ಕವಿಯ ಗುರಿಯೆಂಬುದು ಆಯಾ ಕೃತಿನಾಮಗಳಿಂದಲೇ ವಿದಿತವಾಗುತ್ತದೆ.

ರಾಘವಾಂಕನ ಕಾವ್ಯಗಳಲ್ಲಿ ಹರಿಶ್ಚಂದ್ರ ಚಾರಿತ್ರವೇ ಮಕುಟ ಮಣಿ ಎಂದು ವಿದ್ವಾಂಸರ ಅಭಿಪ್ರಾಯ. ಆದುದರಿಂದಲೇ ಅದು ಅವನ ಕೊನೆಯ ರಚನೆಯೆಂದು ಭಾವಿಸಿದ್ದಾರೆ. ಈ ಭಾವನೆ ರಾಘವಾಂಕನು ಹರಿಶ್ಚಂದ್ರ ಕಾವ್ಯ ರಚನೆಮಾಡಿ ಗುರು ಕೋಪಕ್ಕೆ ಪಕ್ಕಾದುದನ್ನೂ ಆಮೇಲೆ ಐದು ಶೈವಕಾವ್ಯರಚನೆ ಮಾಡಿ ಗುರುಕೃಪಾ ಪಾತ್ರನಾದುದನ್ನೂ ಪೊಳ್ಳಾಗಿಸುತ್ತದೆ. ರಾಘವಾಂಕ ಚಾರಿತ್ರವನ್ನು ಬರೆದ ಸಿದ್ಧನಂಜೇಶನು ಹೇಳುವ ಪ್ರಕಾರ, ರಾಘವಾಂಕನ ಕಾವ್ಯರಚನೆಗಳ ಆನುಪೂರ್ವಿ ಹೀಗಿದೆ—ಹರಿಶ್ಚಂದ್ರ ಚಾರಿತ್ರ, ಸೋಮನಾಥಚಾರಿತ್ರ, ಶರಭಚಾರಿತ್ರ, ಹರಿಹರ ಮಹತ್ವ, ಸಿದ್ಧರಾಮ ಚಾರಿತ್ರ, ವೀರೇಶ ಚರಿತೆ. ಈ ಕಾವ್ಯಗಳಲ್ಲಿ ಪಡಿಮೂಡಿರುವ ಕವಿಯ ವ್ಯಕ್ತಿತ್ವ, ಆದರ್ಶ, ಶೈಲಿ—ಇವುಗಳ ದೃಷ್ಟಿಯಿಂದ ಕೆಲವರು ವಿದ್ವಾಂಸರು ಪರಿಶೀಲಿಸಿ ತಿಳಿಸಿರುವ ರಚನೆಯ ಅನುಕ್ರಮ ಹೀಗೆ — ಸೋಮನಾಥ ಚಾರಿತ್ರ, ವೀರೇಶಚರಿತೆ, ಸಿದ್ಧರಾಮ ಚಾರಿತ್ರ, ಹರಿಶ್ಚಂದ್ರಚಾರಿತ್ರ. ಎರಡು ಅನುಪಲಬ್ಧ ಕೃತಿಗಳಾಗಿರುವುದರಿಂದ ಅವನ್ನಿಲ್ಲಿ ಹೇಳಲು ಬರುವುದಿಲ್ಲ.

ಯಾವ ವಿಚಾರವನ್ನು ತಿಳಿಸಲೇಬೇಕೆಂದು, ಯಾವುದು ತನ್ನ ಹಾಗೂ ತಾನು ಭಾವಿಸುವಂತೆ ಸಮಾಜದ ಜೀವನ ಮೌಲ್ಯವೆಂದು, ಯಾವುದರಿಂದ ಅಥವಾ ಹೇಗೆ ಜನರು ಬದುಕಬೇಕೆಂದು, ಯಾವುದನ್ನು ಹೇಳದೆ ಇರಲು ಸಾಧ್ಯವೇ ಇಲ್ಲವೆಂದು ರಾಘವಾಂಕನು ಯೋಚಿಸಿದ್ದನೋ ಅವನ್ನೇ ನಿರೂಪಿಸುವ ಉದ್ದೇಶದಿಂದ ಅವನ ಎಲ್ಲ ಕಾವ್ಯಗಳು ರಚಿತವಾಗಿವೆ. ಅಲಂಕಾರ, ರಸ, ರೀತಿ, ವರ್ಣನೆಗಳು, ಪಾತ್ರ, ಶೈಲಿ ಮುಂತಾದವೆಲ್ಲವೂ ಆ ಮುಖ್ಯಾಂಶಕ್ಕೆ ಪೋಷಕಗಳು. ಆದುದರಿಂದಲೇ ಆತನ ಕಾವ್ಯಗಳಿಗೆ ಹಿರಿಮೆ.

'ಘನಸತ್ಯವೇ ಜೀವ', ಅದೇ ಜೀವನ ಮೌಲ್ಯ ಎಂದು ನಂಬಿ ಸಕಲವೆನ್ನೂ ತ್ಯಾಗಮಾಡಿ ಕಷ್ಟಪರಂಪರೆಗಳನ್ನು ಅನುಭವಿಸಿ ನೀತಿಯನ್ನು ಬಿಸದೆ ಬಾಳಿದ ಹರಿಶ್ಚಂದ್ರನ ಚಿತ್ರಣ ಹರಿಶ್ಚಂದ್ರ ಚಾರಿತ್ರ ಎಂಬ ಹೆಸರಿಗೆ ತಕ್ಕುದಾಗಿದೆ. ಭಕ್ತಿಯಲ್ಲಿ ಅಚಲನಾಗಿ ಶಿವನನ್ನು. ಒಲಿಸುವೆಡೆಯಲ್ಲಿ ಬಂದ ಯಾವ ವಿಪತ್ತನ್ನೂ ಲೆಕ್ಕಿಸದೆ, ನೀತಿವಂತನಾಗಿ ಮೆರೆದು ಸೋಮನಾಥನನ್ನು ಪುಲಿಗೆರೆಗೆ ತಂದ ಆದಯ್ಯನ ಚಿತ್ರಣದಿಂದ ಕೂಡಿದುದು 'ಸೋಮನಾಥ ಚಾರಿತ್ರ'. ದಯೆ, ಶಾಂತಿ, ನೀತಿ, ಭಕ್ತಿಸಂಪನ್ನನಾಗಿ ಕೆರೆ ಕಾಲುವೆ ದೇವಾಲಯ ನಿರ್ಮಾಣಗಳನ್ನು ಮಾಡಿ ಕೃಷಿ ಕರ್ಮವನ್ನು ನಡೆಸಿ ಶ್ರಮದಾನಮಾಡಿ, ಆದರ್ಶ ಸಮಾಜಸೇವಕನೆನಿಸಿದ ಸಿದ್ಧರಾಮನನ್ನು ಚಿತ್ರಿಸುವ ಕಾವ್ಯ "ಸಿದ್ಧರಾಮ ಚಾರಿತ್ರ." ಶಿವದ್ವೇಷಿ, ಮಹಾಗರ್ವಿಯಾಗಿ ವರ್ತಿಸಿದ ದಕ್ಷನಿಗೆ ಏನಾಯಿತೆಂಬುದನ್ನು ವಿವರಿಸುವ ಚರಿತೆ 'ವೀರೇಶಚರಿತೆ'. ಇದರಲ್ಲಿಯೂ ನೀತಿಯಿದೆ. ಸಚ್ಚಾರಿತ್ರತೆಯ ವಿರುದ್ಧಮುಖದ ಚಿತ್ರಣಕ್ಕೂ ಅದರ ಪರಿಣಾಮಕ್ಕೂ ಇದರಲ್ಲಿ ಪ್ರಾಧಾನ್ಯ.

ಜನ ಬದುಕಬೇಕೆಂದು ಹರಿಶ್ಚಂದ್ರ ಚಾರಿತ್ರವನ್ನು ಕಾವ್ಯವಾಗಿ ರಚಿಸುವಲ್ಲಿ ಪ್ರಾರಂಭದ ಮಂಗಳ ಪದ್ಯವೇ ತ್ಯಾಗದ ಹಿರಿಮೆಯನ್ನು ಉದ್ಘೋಷಿಸುವಂತಿದೆ—

ಶ್ರೀ ಪತಿಗೆ ಸೊಬಗನುಡುಪತಿಗೆ ಶಾಂತಿಯನು ವಾ
ಣೀಪತಿಗೆ ಚಾತುರ್ಯಮಂ ದಿವಸ್ಪತಿಗೆ ಪ್ರ
ತಾಪಮಂ ಸುರಪತಿಗೆ ಭೋಗಮಂ ರತಿಪತಿಗೆ
ಮೂಲೋಕವಾವರಿಸುವ
ರೂಪಂ ಸರಿತ್ಪತಿಗೆ ಗಂಭೀರತೆಯನು ಸ್ವಾ
ಹಾ ಪತಿಗೆ ತೇಜಮಂ ಕೊಟ್ಟ ಗುರುಮೂರ್ತಿ ಪಂ
ಪಾಪತಿ ವಿರೂಪಾಕ್ಷನೆಮಗಿಷ್ಟಸಿದ್ಧಿಯಂ ಮಾಳ್ಕೆ
ಸಂತೋಷದಿಂದ ||

ರಾಘವಾಂಕನು ತನ್ನ ಆರಾಧ್ಯದೇವನಾದ ವಿರೂಪಾಕ್ಷನನ್ನು ಇಲ್ಲಿ ಮಹಾ ತ್ಯಾಗಶೀಲ ದಾನಿಯಾಗಿ ಚಿತ್ರಿಸಿದ್ದಾನೆ. ವಿಷ್ಣುವೇ ಮೊದಲಾದ ಮಹಾತ್ಮರಿಗೆ ಒಂದೊಂದನ್ನೇ ತೆಗೆದು ಕೊಟ್ಟಿದ್ದಾನೆ ಶಿವನು. ಕೊಟ್ಟಷ್ಟೂ ಅವನಲ್ಲಿರುವುದು ಮುಗಿಯದು. ಉಪನಿಷತ್ತಿನಲ್ಲಿ ಹೇಳಿಲ್ಲವೆ ? " ಪುಣ್ಯಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ" –ಎಂದು. ಅಂತಹ ದಾನಶೀಲನಾದ ದೇವನು ನಮಗೆ ಇಷ್ಟಸಿದ್ಧಿಮಾಡಲಿ –ಎಂಬುದು ಹೆಚ್ಚು ಔಚಿತ್ಯಪೂರ್ಣವಾಗಿದೆ. ದಾನಕ್ಕೆ ಪ್ರೇರಕ ದಯೆ. ಆದುದರಿಂದ ದಯಾಗುಣವೂ ಶಿವನಲ್ಲಿ ಕಲ್ಪಿತವಾಗಿಯೇ ಇದೆ. 'ದಯೆಯೇ ಧರ್ಮದ ಮೂಲ' ಎಂಬ ಬಸವೇಶ್ವರರ ವಾಗರ್ಥ ಇಲ್ಲಿ ಅಡಕವಾಗಿದೆ. ಪಂಪನು ಧರ್ಮದ ಲಕ್ಷಣಗಳನ್ನು ಹೇಳುತ್ತ "ದಯೆ, ದಮಂ, ದಾನಂ, ತಪಂ, ಶೀಲಂ"– ಎಂಬಲ್ಲಿ ದಯೆಯನ್ನೇ ಮೊದಲು ಹೇಳಿದ್ದಾನೆ. ದಯೆ ದಾನಗಳೇ ರಾಘವಾಂಕನ ಎಲ್ಲ ಕಾವ್ಯಗಳ ರಚನೆಗೆ ಪ್ರೇರಕವಾದ 'ಕವಿಭಾವ' –ಎನ್ನಬಹುದು. ಹರಿಶ್ಚಂದ್ರ ಕಾವ್ಯದ ಮೊದಲನೆಯ ಮಂಗಳ ಪದ್ಯವೇ ದಯೆ-ದಾನಗಳನ್ನು ಪ್ರತಿಪಾದಿಸುವಂಥದು. ಬೇರೆ ಬೇರೆ ಮಹಾವ್ಯಕ್ತಿಗಳಿಗೆ ಔಚಿತ್ಯವರಿತು ಅವಶ್ಯಕವಾದವುಗಳನ್ನು "ಕೊಟ್ಟ ಗುರುಮೂರ್ತಿ" ಎಂಬಲ್ಲಿ ಈ "ಕೊಟ್ಟ" ಎಂಬುದೇ ಹರಿಶ್ಚಂದ್ರಕಾವ್ಯದ ಜೀವಾಳ. ತನ್ನ ಕಾವ್ಯಕನ್ನಿಕೆಯನ್ನು ರಾಘವಾಂಕನು ವಿರೂಪಾಕ್ಷನಿಗೆ ಕೊಟ್ಟಿದ್ದಾನೆ. ಕೊಡುವಲ್ಲಿ ರೂಪ ಮುಖ್ಯವಲ್ಲ. ಗುಣವೇ ಮುಖ್ಯ. ಹರಿಶ್ಚಂದ್ರನ ಸತ್ಯವನ್ನು ಕೆಡಿಸುವೆನೆಂದು ದೇವಲೋಕದಲ್ಲಿ ವಿಶ್ವಾಮಿತ್ರನ ವಾಗ್ದಾನ, ಹರಿಶ್ಚಂದ್ರನು ಸತ್ಯವಂತನೇ ನಿಶ್ಚಯವೆಂದು ವಸಿಷ್ಠನ ವಾಗ್ದಾನ, ಸುವರ್ಣಯಾಗದ ವೇಳೆ ದಕ್ಷಿಣೆ ಹಾಗೂ ಮುಂದೆ ವಿಶ್ವಾಮಿತ್ರನಿಗೆ ರಾಜ್ಯಸರ್ವಸ್ವದ ದಾನ, ಸತ್ಯರಕ್ಷಣೆಗಾಗಿ ಹರಿಶ್ಚಂದ್ರನಿಂದ ಸತಿಸುತರ ದಾನ, ಸ್ವದಾನ, ಕೊನೆಗೆ ಶಿವನಿಂದ ಇಷ್ಟದಾನ, ವಿಶ್ವಾಮಿತ್ರನಿಂದ ಪುನಃ ಹಿಂದಕ್ಕೆ ರಾಜ್ಯದಾನ– ಹೀಗೆ ಕೊಡುವುದೆಂಬುದೇ ಈ ಕಾವ್ಯದ ಜೀವನಾಡಿಯಾಗಿದೆ. ಇದರಿಂದ ಕವಿ ತನ್ನ ಮಂಗಲಾಚರಣೆಯಲ್ಲಿ ಮಹಾಕವಿಗಳು ಹಲವರು ಅನುಸರಿಸಿದ ಕ್ರಮದಂತೆ ತನ್ನ ಕಾವ್ಯದ ಸಾರಾಂಶವನ್ನೇ ಹೇಳಿದುದು ಭಾಸವಾಗುತ್ತದೆ. ದಯೆ–ದಾನಗಳೆಂಬಿವು ಸೋಮನಾಥ ಚಾರಿತ್ರ ಸಿದ್ಧರಾಮಚಾರಿತ್ರಗಳಲ್ಲಿಯೂ ಪ್ರಧಾನವಾಗಿಯೇ ಬಂದಿವೆ.

ನಿರಾಡಂಬರವೂ ಎಲ್ಲರಿಗೂ (ಕೆಟ್ಟದನ್ನು ಮಾಡುವವರಿಗೆ ಕೂಡ) ಒಳ್ಳಿತನ್ನೇ ಮಾಡಿ ತಿದ್ದುವ ಗುಣವೂ ಭಾರತೀಯ ಸಂಸ್ಕೃತಿಯ ಹಿರಿಯ ಗುಣಗಳು. ಈ ಗುಣಗಳು ಬಸವಣ್ಣನವರಲ್ಲಿ ವಿಶೇಷವಾಗಿದ್ದುವು. ಯಾರೋ ಒಬ್ಬ ಕಳ್ಳ ಬಂದು ಬಸವಣ್ಣನ ಹೆಂಡತಿಯ ಕಿವಿಯೋಲೆಗಳನ್ನು ಕಳಚುವ ವೇಳೆಗೆ ಬಸವಣ್ಣನವರು- "ಎಲೆ ದುಷ್ಟೆ, ಸಂಗಮೇಶ್ವರನ ಕೈನೊಂದೀತು, ಬೇಗನೆ ಕಳಚಿ ಕೊಡು !" ಎಂದರಂತೆ- ರಾಘವಾಂಕನೂ ಇದೇ ಬಗೆಯವನು, ಅವನ ಕಾವ್ಯದ ಉದಾತ್ತ ಪಾತ್ರಗಳೂ ಇಂಥವೇ ಆಗಿವೆ. ಸಿದ್ಧನಂಜೇಶನು ರಾಘವಾಂಕ ಚಾರಿತ್ರದಲ್ಲಿ ಉದಾಹರಿಸಿದ ರಾಘವಾಂಕನ ಜೀವನದ ಒಂದು ಘಟನೆಯಿದು—

ಓರುಂಗಲ್ಲಿನಲ್ಲಿ ರಾಘವಾಂಕನು ಮೀಸಲು ಗವಿತೆ ಓದಿ ಕುಕವಿಗಳನ್ನು ಗೆದ್ದಾಗ, ಅತನಿಗೆ ಕನಕಸ್ನಾನ ಮಾಡಿಸಬೇಕೆಂದು ಕಾಕತೀಯ ರಾಜನು ಇಚ್ಛಿಸಿದನಂತೆ. ರಾಘವಾಂಕನು ಅದನ್ನು ನಿರಾಕರಿಸಿದನು. ಇಂತಹ ರಾಜಗೌರವವನ್ನು ನಿರಾಕರಿಸುವ ಕವಿ ಬೇರೆ ಯಾವನಿದ್ದಾನು ? ಅಲ್ಲಿಂದ ರಾಘವಾಂಕನು ಹಂಪೆಗೆ ಬರುತ್ತಿದ್ದಾಗ ಅದೇ ಕುಕವಿಗಳು ಜಂಗಮರ ವೇಷದಲ್ಲಿ ಅವನೆದುರಿಗೆ ಬಂದರು. ರಾಘವಾಂಕನು ಅಂದಣವಿಳಿದು ಭಕ್ತಿಯಿಂದೆರಗಿದನು. ಆಗ ಅವರು ಖಡ್ಗವನ್ನು ಹಿರಿದರು. ರಾಘವಾಂಕನ ಚರರು ಬಂದಾಗ ಅವರು ಓಡಿಹೋದರು. ಆಗ ರಾಘವಾಂಕನು ಹೀಗೆಂದನಂತೆ— "ನಿಮ್ಮ ಹಸ್ತಂ ನೊಂದುವಕಟಾ ಕಠಿನ ದೇಹಿನಾಂ ಮೃದುರೂಪಿ ನೀಂ". ಶಿವದೂತರು ರಾಘವಾಂಕನನ್ನೊಯ್ಯಲು ವಿಮಾನ ತೆಗೆದುಕೊಂಡು ಬಂದಾಗ, ಆ ಜಂಗಮರನ್ನೇ ಮೊದಲು ಕಳುಹಿಸಿ,— ಅನ್ಯಾಯವೆಸಗಿದವರಿಗೆ ಸದ್ಗತಿಯನ್ನೇ ಕೊಡಿಸಿದನು. ನಿರಾಡಂಬರ, ಕಾರುಣ್ಯ, ಕ್ಷಮಾ ಗುಣಗಳ ಮೂರ್ತಿಯಾದ ರಾಘವಾಂಕನ ಪಾತ್ರಗಳೂ ಇಂಥವೇ ಆಗಿವೆ.

ಹರಿಶ್ಚಂದ್ರನು ಹೊಲತಿಯರನ್ನು ಓಡಿಸಿದ ನಂತರ, ವಿಶ್ವಾಮಿತ್ರನೇ ಅವನ ಬಳಿಗೆ ಬರುತ್ತಾನೆ. ತನಗೆ ಆತನು ಘಾತಕನಾದರೂ ಹರಿಶ್ಚಂದ್ರನು ಇದಿರೆದ್ದು ಕಾಣಿಕೆಕೊಟ್ಟು ನಮಿಸುತ್ತಾನೆ–

ಇದಿರೆದ್ದನರ್ಘ್ಯ ನವರತ್ನಂಗಳಂ ನೀಡಿ
ಪದಪಂಯೋಜದ ಮೇಲೆ ಹೊಡೆಗೆಡೆದ ಭೂಭುಜನ
ನೊದೆದು ಸಿಡಿಲೇಳ್ಗೆಯಿಂದಣಕಿಸಿದನೆಂದು ವಿಶ್ವಾಮಿತ್ರ
ಮುನಿನಾಥನು"
(ಅ. 8—2)

ತನ್ನ ಪಾದಕಮಲಗಳಿಗೆ ಸಾಷ್ಟಾಂಗವೆರಗಿದ ಹರಿಶ್ಚಂದ್ರನನ್ನು ವಿಶ್ವಾಮಿತ್ರನು ಒದೆದನಂತೆ. ಆಗ ಹರಿಶ್ಚಂದ್ರನಿಗೆ ಕೋಪ ಬರಲಿಲ್ಲ. ಅವನ ಮಾತನ್ನು ರಾಘವಾಂಕನು ಕವಿತೆಯಲ್ಲಿ ಹೀಗೆಂದಿದ್ದಾನೆ—

ಹಿಂದೆ ಮಾಡಿದ ಸುಕೃತ ಸೂಚನೆಯ ದೇವತಾ
ವಂದನೆಯ ಸನ್ಮುನಿಪದಾಬ್ಜ ಭಜನೆಗಳ ಫಲ
ದಿಂದಿಂದು ನಿಮ್ಮಂಘ್ರಿ ಕಮಲದರ್ಶನವಾಯ್ತು
ಕೃತಕೃತ್ಯನಾದೆನೆನುತ ॥
ಸಂದೇಹವಳಿದ ಸಂತಸದಲಿಪ್ಪನ್ನ ನೀ
ವಿಂದೊದೆದು ಮೃದುಪಾದ ಪಲ್ಲವಂ ನೊಂದವೆಲೆ
ತಂದೆ ಪರುಷ ಪ್ರತಿಮೆ ಮುನಿದೊದೆದೊಡಂ ಲೋಹ
ಹೊನ್ನಾಗದಿರದೆಂದು ॥
(ಅ. 8–3)

ವಾಸ್ತವಿಕವಾಗಿ ನಿರಪರಾಧಿಯೇ ಆದ ತನ್ನನ್ನು ವಿಶ್ವಾಮಿತ್ರನು ಸೊಕ್ಕಿನಿಂದ ಒದೆದಾಗ "ನಿಮ್ಮ ಮೃದುಪಾದಕ್ಕೆ ಎಷ್ಟು ನೋವಾಯಿತೋ ! ಪರುಷದ ಗೊಂಬೆ ಕೋಪದಿಂದ ಒದೆದರೂ ಕಬ್ಬಿಣವು ಚಿನ್ನವಾಗದೆ ಇರುವುದೆ ?" ಎಂಬೀಮಾತು ರಾಘವಾಂಕನ ಕವಿಭಾವವಲ್ಲದೆ ಮತ್ತೇನು ? ಇದೇ ಕಾವ್ಯದಲ್ಲಿ ಚಂದ್ರಮತಿಯ ತಲೆಯನ್ನು ಹರಿಶ್ಚಂದ್ರನು ತನ್ನೊಡೆಯನ ಆಜ್ಞಾಪಾಲನೆಯ ಸತ್ಯರಕ್ಷಣೆಗಾಗಿ ಕಡಿಯುವ ಸಂದರ್ಭ ಬರುತ್ತದೆ. ಆ ವೇಳೆಗೆ ಚಂದ್ರಮತಿ ತನ್ನ ಕೊನೆಯ ಹರಕೆಯಾಗಿ ಹೇಳುವ ಮಾತಿನಲ್ಲಿ "ವಿಶ್ವಾಮಿತ್ರ ನಿತ್ಯನಾಗಲಿ" ಎನ್ನುತ್ತಾಳೆ. ಹೀಗೆ ಕಲ್ಲೆದೆಯನ್ನು ಕರಗಿಸುವ ಸತ್ಯಾಗ್ರಹದ ಸಹನ ಶೀಲತೆಯನ್ನು ಸ್ವತಃ ಕವಿಯಲ್ಲಿಯೂ ಕವಿಯ ಕೃತಿಯಲ್ಲಿಯೂ ನಾವು ಕಾಣುತ್ತೇವೆ.

ಭಕ್ತಿ ವಿಚಾರದಲ್ಲಿ ಸೋಮನಾಥ ಚಾರಿತ್ರವು ಹರಿಶ್ಚಂದ್ರ ಕಾವ್ಯಕ್ಕಿಂತ ಹಿರಿದೆನಿಸುತ್ತದೆ. ಶಿವನು ಪ್ರತ್ಯಕ್ಷನಾಗಿ "ಬೇಕಾದ ವರವ ನೀಂ ಬೇಡು, ಭೂಪಾಲ" ಎಂದಾಗ ಹರಿಶ್ಚಂದ್ರನು "ಕಾಶಿಯ ವಿಶ್ವನಾಥ ಮಂದಿರಕ್ಕಿಂತ ಎರಡು ಯೋಜನದಷ್ಟು ಎತ್ತರದಲ್ಲಿ ತನ್ನ ಕೀರ್ತಿಪುರವು ಹೇಮವಿರಚಿತವಾಗಿ ಇರಬೇಕು" –ಎಂದು ಕೀರ್ತಿಯನ್ನು ಬೇಡುತ್ತಾನೆ. ಸೋಮನಾಥ ಚಾರಿತ್ರದಲ್ಲಿ ಪುಣ್ಯವತಿ ಸಂತಾನಾಪೇಕ್ಷೆಯಿಂದ ಶಿವನಲ್ಲಿ ಬೇಡುವಂತೆ ತನ್ನ ಪತಿಗೆ ತಿಳಿಸಿದಾಗ ಅವನು–"ಭಕ್ತಿಕೈಗೂಲಿಯೇ? ಬೇಡುವವ ಭಕ್ತನೇ?" ಎನ್ನುತ್ತಾನೆ.

ಇಲ್ಲಿ ನಿಷ್ಕಾಮ ಭಕ್ತಿಯಿದೆ. ಆದಯ್ಯನು ಸೌರಾಷ್ಟ್ರದಿಂದ ಶಿವನನ್ನು ಪುಲಿಗೆರೆಗೆ ತರುವಲ್ಲಿ ಪ್ರಕಟವಾಗಿರುವ ಭಕ್ತಿಯಲ್ಲಿಯೂ ಸ್ವಾರ್ಥವಿಲ್ಲ. ಲೋಕಹಿತವಿದೆ. ಅದಕ್ಕಾಗಿ ಛಲವಿದೆ. ಆದುದರಿಂದ ಇದೂ ನಿಷ್ಕಾಮ ಭಕ್ತಿಯೇ ಆಗಿದೆ.

ಕವಿ ರಾಘವಾಂಕನ ನಾಲ್ಕು ಕಾವ್ಯಗಳು ಸಕಲ ಸದ್ಗುಣ ಕಾವ್ಯಗುಣ ಸಂಪನ್ನವಾಗಿಯೂ ಒಂದೊಂದು ಬಗೆಯಲ್ಲಿ ಒಂದೊಂದು ಮಿಗಿಲು. ಸತ್ಯನಿಷ್ಠೆಯಲ್ಲಿ ಹರಿಶ್ಚಂದ್ರ ಚಾರಿತ್ರ, ದೈವ ಭಕ್ತಿಯಲ್ಲಿ ಸೋಮನಾಥ ಚಾರಿತ್ರ, ಜನತಾ ಸೇವೆ ಪರೋಪಕಾರಗಳಲ್ಲಿ ಸಿದ್ಧರಾಮ ಚಾರಿತ್ರ, ಅಧರ್ಮ ದ್ವೇಷದ ಮೂಲಕ ನೀತಿ ಪ್ರತಿಪಾದನೆಯಲ್ಲಿ ವೀರೇಶ ಚರಿತ. ಇಂತಹ ಉದಾತ್ತ ಹಾಗೂ ಸಮಾಜೋಪಯೋಗಿ ತತ್ತ್ವ ಪ್ರತಿಪಾದನೆಯೊಂದಿಗೆ ಕಾವ್ಯಕಲೆಯಲ್ಲಿ ಯಾವುದೂ ಹಿಂದೆ ಬಿದ್ದಿಲ್ಲ. ವರ್ಣನೆಗಳು, ರಸಭಾವಗಳು, ಉಕ್ತಿಚಮತ್ಕೃತಿಗಳು, ನಾಟಕೀಯ ಸನ್ನಿವೇಶಗಳು, ಪಾತ್ರ-ಸಂದರ್ಭ ಸಹಜವಾದ ಭಾವ ಭಾಷೆಗಳು, ಗಾದೆ ಮಾತುಗಳು, ದೇಶೀ ಪ್ರಯೋಗಗಳು ಕಾವ್ಯ ಸೌಂದರ್ಯವನ್ನು ಹೆಚ್ಚಿಸಿವೆ. ಇವೆಲ್ಲವುಗಳಿಂದ ರಾಘವಾಂಕನ ಕಾವ್ಯಗಳು ರಸದ ಮಡುಗಳು, ಪುಣ್ಯದ ಪುಂಜಗಳು. ಪಶುತೆಯಿಂದ ಮಾನವೀಯತೆಗೂ, ಮಾನವೀಯತೆಯಿಂದ ದೇವತ್ವಕ್ಕೂ ಏರುವ ಸೋಪಾನಗಳು. ಕವಿ ಇವನ್ನೆಲ್ಲ ಜನ ಬದುಕಬೇಕೆಂದು ಬರೆದನು. ಕಾವ್ಯಗಳನ್ನು ಪಂಪಾಂಬಿಕೆಯರಸನಾದ ತನ್ನ ಆರಾಧ್ಯದೇವನಾದ ವಿರೂಪಾಕ್ಷನಿಗೆ ಅರ್ಪಣೆ ಮಾಡಿದನು. ಆದುದರಿಂದಲೇ ಕೃತಕೃತ್ಯನಾದ ಅಭಿಮಾನಕ್ಕೆ ಪಾತ್ರನಾದನು.

ಇನ್ನೂ ರಾಮೂವಕ್ಕೊಂಡು

ಚಾಮರಸನ ಅಲ್ಲಮಪ್ರಭು

ಲೇಖಕರು :
ಸೋಮಶೇಖರ ಇಮ್ರಾಪೂರ, ಎಂ.ಎ.,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಹನ್ನೆರಡನೆಯ ಶತಮಾನದಲ್ಲಿ ವೈಚಾರಿಕ, ಅದರಂತೆ ಸಾಹಿತ್ಯಿಕ ಕ್ರಾಂತಿಯನ್ನೂ ಸಾಧಿಸಿದ ಶಿವಶರಣರ ನಂತರ,ಹದಿನೈದ ನೆಯ ಶತಮಾನದ ಹೊತ್ತಿಗೆ 'ನೂರೊಂದು ವಿರಕ್ತರು' ಅದೇ ಕ್ರಾಂತಿಯನ್ನು ಬೇರೊಂದು ದಿಕ್ಕಿನತ್ತ ಮುಂದುವರೆಸಿದರು. ಆಧ್ಯಾತ್ಮದ ಉನ್ನತಿಗೆ ಶರಣರ ಪ್ರಶಾಂತ ಜೀವನದ ನಿರೂಪಣೆಯೇ ಅವರ ಗುರಿಯಾಯಿತು. ಇಂಥ ವಿರಕ್ತರ ಕ್ರಾಂತಿಯಲ್ಲಿ ಹೆಸರುಳಿಸಿದ ಚಾಮರಸನೂ ಒಬ್ಬ ಅಗ್ರಗಣ್ಯ ವಿರಕ್ತನಾದುದರಿಂದ, ಅನುಭಾವ ಕಾವ್ಯದ ಪರಮೋದ್ದೇಶವನ್ನು ತನ್ನ 'ಪ್ರಭುಲಿಂಗಲೀಲೆ' ಯಲ್ಲಿ ಸಾಧಿಸಿ ಕೃತಾರ್ಥನಾದ. ಪ್ರಭುವಿನ ಬದುಕನ್ನೇ ಅಂತರಂಗದಲ್ಲಿ ಸಾಕ್ಷಾತ್ಕರಿಸಿಕೊಂಡ ಶ್ರೇಷ್ಠ ಯೋಗಿ ಆತ. ಮತ ಧರ್ಮ ನೀತಿಗಳ ತಿಕ್ಕಾಟದಲ್ಲಿಯೇ ಆವರೆಗೆ ಬೆಳೆದು ಬಂದಿದ್ದ ಭಿನ್ನಮತೀಯ ಕಾವ್ಯ ಗಳು ಅರಸರ ಆಶ್ರಯದಲ್ಲಿ ಸಿಕ್ಕು ತಮ್ಮ ಸ್ವತಂತ್ರ ನಾಲಿಗೆಯನ್ನೇ ಕಳೆದುಕೊಂಡದ್ದನ್ನು ಆ ಮೊದಲೇ ಹರಿಹರ, ರಾಘವಾಂಕ ಮುಂತಾದ ವೀರಶೈವ ಕವಿಗಳು ಅಲ್ಲಗಳೆದು,'ಮನುಜರ ಮೇಲೆ ಸಾವವರ ಮೇಲೆ' ಕಾವ್ಯ ಬರೆದ ಅದ್ಧೂರಿತನಕ್ಕೆ ಸಿಡಿದೆದ್ದಿದ್ದರು. ಲೌಕಿಕದಲ್ಲಿಯೇ ಪಾರಮಾರ್ಥ ಸಾಧಿಸಿ ಕೃತಾರ್ಥರಾದ ಶಿವಶರಣರನ್ನು ಕಾವ್ಯದಲ್ಲಿ ಕೊಂಡಾಡಿ, ಪರಮತದೂಷಣೆಯಿಂದ ದೂರಾಗಿ ತಮ್ಮ ನಾಲಿಗೆ ಯನ್ನೇ ಗಿರೀಶಂಗೆ ಮಾರಿಕೊಂಡದ್ದು ಚಾಮರಸನಂತ ಪ್ರತಿಭಾನ್ವಿತ ಕವಿಗಳಿಗೆ ದಾರಿ ಇನ್ನು ಸುಗಮವಾಯಿತು. 12 ನೆಯ ಶತಮಾನ ದಲ್ಲಿ ಶಿವಶರಣ ಶರಣೆಯರಿಗೆಲ್ಲ ಆದ್ಯ ಗುರುವೆನಿಸದ, ಶಿವಾನುಭವ ಗೋಷ್ಠಿಗೆ ಕಿರೀಟಪ್ರಾಯನಾದ ಅಲ್ಲಮಪ್ರಭುವಿನ ಧೀಮಂತ ವ್ಯಕ್ತಿತ್ವ ಚಾಮರಸನ ಕಣ್ಣು ಕೋರೈಸಿತು. ಪರಶಿವಮೂರ್ತಿ ಯೆನಿಸಿ ಜ್ಞಾನಯೋಗ ತತ್ಪರ, ವೈರಾಗ್ಯಮೂರ್ತಿ, ಜಿತಕಾಮನಾದ ಅಲ್ಲಮನನ್ನೇ ತನ್ನ ಕಾವ್ಯದ ಮಹಾನಾಯಕನನ್ನಾಗಿ ಮಾಡಿಕೊಂಡ. ಪ್ರಭುವಿನ ಆದರ್ಶಸಾಧನೆಯೇ ಚಾಮರಸನ ಪರಮಗುರಿ. ಆತನ ಅಸದೃಶವಾದ ಲಿಂಗಲೀಲೆಯೇ ಈತನ ಅಮೋಘವಾದ ಕಾವ್ಯಲೀಲೆ. ಚಾಮರಸನ ದಿವ್ಯದೃಷ್ಟಿಗೆ ಪ್ರಭುದೇವರು ಒಬ್ಬ ಸಾಧಕನಾಗಿ ಗೋಚರಿಸದೇ ಜನ್ಮತಃ ಸಿದ್ಧಪುರುಷನಾಗಿದ್ದಾನೆ. ಅಂತೆಯೇ ಪ್ರಭು ವಿನ ಚಲನವಲನಗಳಿಗೆಲ್ಲಕ್ಕೂ ತಾತ್ವಿಕ ಹಿನ್ನೆಲೆಯಲ್ಲಿ ಸಿದ್ಧಿಯ ಸೀಮೆಗಳನ್ನು ಗುರುತಿಸಬಯಸುವ ಚಾಮರಸನ ಜಾಣ್ಮೆ, ಪಾಂಡಿತ್ಯ ಅಲ್ಲಮನಲ್ಲಿಟ್ಟ ಅನನ್ಯ ಭಕ್ತಿಗಳು ಕಾವ್ಯದುದ್ದಕ್ಕೂ ಆದ್ರ್ರಗೊಂಡಿವೆ. ಅಂತರಂಗದಲ್ಲಿ ನಡೆದ ಇಂದ್ರಿಯಂಗಳ ನಿರಂತರ ಹೋರಾಟವೂ ಚಾಮರಸನ ದೃಷ್ಟಿಯಿಂದ ದೂರವಾಗಿಲ್ಲ. ಅಂತೆಯೇ 'ಪ್ರಭುಲಿಂಗ ಲೀಲೆ' ವೀರಶೈವ ಮಹಾಪುರಾಣವೆನಿಸಿಕೊಂಡಿದೆ. ಆದರೆ ಅದು ಒಂದು ಉತ್ತಮೋತ್ತಮ ಐತಿಹಾಸಿಕ ಮಹಾಕಾವ್ಯವೂ ಹೌದೆಂಬು ದನ್ನು ಮರೆಯುವಂತಿಲ್ಲ.

ಒಟ್ಟನಲ್ಲಿ ಹಳಗನ್ನಡ, ನಡುಗನ್ನಡ ಕಾವ್ಯ ಸಮುದಾಯದಲ್ಲಿ ಲೌಕಿಕ ಕಾವ್ಯದಲ್ಲಿ ಅಲೌಕಿಕತೆಯನ್ನು ಸಂಬಂಧಿಸಿದ 'ವಸ್ತುಕ–ವರ್ಣಕ ಕಾವ್ಯ',ಅಲೌಕಕದಲ್ಲಿ ಲೌಕಿಕತೆಯನ್ನು ಸೇರಿಸಿದ'ವರ್ಣಕ-ವಸ್ತುಕ ಕಾವ್ಯ'ಗಳು ಒಂದಲ್ಲ ಒಂದು ರೀತಿಯ ಗುಣಾವಗುಣಗಳಿಗೆ ಪಕ್ಕಾಗಿವೆ. ಅದಕ್ಕೆ ಚಾಮರಸನ 'ಪ್ರಭುಲಿಂಗ ಲೀಲೆ' ಹೊರತಲ್ಲ ವಾದರೂ 'ವಸ್ತುಕ–ವರ್ಣಕ ಕಾವ್ಯ'ಕ್ಕೆ ಶ್ರೇಷ್ಠ ಮಾದರಿಯಾಗಿ ನಿಲ್ಲಬಲ್ಲ ಮಹಾಕೃತಿಯೆಂಬುದನ್ನು ಅಲ್ಲಗಳೆಯುವಂತಿಲ್ಲ. ಲೌಕಿಕ ವ್ಯಕ್ತಿ ವೃತ್ತಾಂತವನ್ನು ಹೇಳುವ ವಸ್ತುಕದ ವಾಸ್ತವತೆಯಲ್ಲಿ, ಭಾಷೆಗೂ ನಿಲುಕದ ಧೀಮಂತ ವ್ಯಕ್ತಿತ್ವಗಳನ್ನು ನಿರೂಪಿಸುವಾಗ ಮಾತ್ರ ಅವಾಸ್ತವ ಎನ್ನಬಹುದಾದ ವರ್ಣಕ ಕಾವ್ಯದ ಅಂಶಗಳು, ವಾಸ್ತವತೆಗೆ ಪೂರಕವಾಗಿ ಬರುವುದನ್ನು 'ಪ್ರಭುಲಿಂಗಲೀಲೆ'ಯಲ್ಲಿ ಮನಗಾಣಬಹುದಾಗಿದೆ. ಅಂದಾಕ್ಷಣಕ್ಕೆ ಚಾಮರಸನ ಕಥಾ ನಾಯಕ ಚಾರಿತ್ರಿಕತೆಯನ್ನು ಅಳುಕಿಸಿಕೊಂಡು, ಕೇವಲ ಗಗನಾಂ-ಗಣದಲ್ಲಿ ವಿಹರಿಸುವ ವ್ಯಕ್ತಿಯಾಗಿಲ್ಲ. ನೆಲದ ಬದುಕಿನಲ್ಲಿ ಎಲ್ಲ ರೊಂದಿಗೆ ಅನುಭವ-ಅನುಭಾವವನ್ನು ಹಂಚಿಕೊಂಡು ಲೌಕಿಕದಲ್ಲಿ ಇದ್ದುಕೊಂಡೇ ಪರಮಾರ್ಥವನ್ನು ಸಾಧಿಸಬಲ್ಲ ಸಿದ್ಧಿಪುರುಷನಾಗಿ ಕಾವ್ಯದ ಮೈತುಂಬಿಕೊಂಡು ವಿರಾಜಿಸಿದ್ದಾನೆ.

ಕನ್ನಡ ಕವಿ ಚಕ್ರವರ್ತಿಗಳೆನಿಸಿಕೊಂಡವರು ಹಚ್ಚಿಕೊಂಡ ಯಾವ ಆತ್ಮ ಪ್ರತ್ಯಯ ಹೆಗ್ಗಳಿಕೆಗಳೂ ಚಾಮರಸನಿಗಿಲ್ಲ. ಇದ್ದರೂ ಅದು ವಿನಯಕ್ಕೆ ಮಾದರಿ. ತನ್ನ ಆತ್ಮವನ್ನೇ ಪ್ರಭುವಿನ ಅನಂತ ಲೀಲೆಗಳಲ್ಲಿ ಭಕ್ತಿ ವಿನಮ್ರನಾಗಿ ಸಲ್ಲಿಸಿದ್ದಾನೆ. ಜನನದ ಕುತ್ತದಲಿ ಕುದಿಕುದಿದು ಕರ್ಮದ ಕತ್ತಲೆಗೆ ಸಿಲುಕುವ ಕಥಾನಾಯಕರು ಅವನಿಗೆ ಬೇಡ. ಹೊತ್ತು ಹೋಗದ ಪುಂಡರಾಲಿಪ ಮತ್ತಮತಿಗಳ ಗೊಡ್ಡು ಗೋಷ್ಠಿಗಳಿಗಾಗಿ ಕಾವ್ಯ ಬರೆವ ಚಾಪಲ್ಯವೂ ಅವನಿಗೆ ಬೇಡ. ವೀರ ಶೈವ ಕವಿ ಮನೋಭಾವ ಪರಂಪರೆಗನುವರ್ತಿಯಾದ ವರಕವಿನಿಂದೆ ಗೊಗ್ಗದ ಮುಗಿಲು ಮನಸ್ಸು ಆತನಿಗಿದೆ. ಕರ್ಮದ ಕೋಟಲೆ ಗಳನ್ನೆಲ್ಲ ಹರಿದೊಗೆದು ಬಯಲ ದೇಹಿಯೆನಿಸಿಕೊಂಡ ಶಿವಸ್ವರೂಪಿ ಯಾದ ಚಾರಿತ್ರಿಕ ವ್ಯಕ್ತಿ ಅಲ್ಲಮ ಆತನ ದಾರ್ಶನಿಕ ಜೀವನವೇ ಅವನ ಕಾವ್ಯಸೃಷ್ಟಿ ಮತ್ತು ಸಿದ್ಧಿಗೆ ಚಾಲನೆ. ಅಂತೆಯೇ ಅಂಥ ಸತ್ಯ ಶರಣರ ಕತೆಯನ್ನು ಕೇಳುವವರು ಕುರಿಗಳಂತಿರಬಾರದು. ಅವರು ಸತ್ಯವಂತರು; ನಿಷ್ಠಾವಂತರು. ಭಕ್ತಿಯ ತೆರನ ತಿಳಿದಾ-

ಚರಿಸುವ ಸತ್ಯ ಶರಣರಾಗಿರಬೇಕೆಂದು ಕಾವ್ಯದ ಪ್ರಾರಂಭದಲ್ಲಿಯೇ ನಿಗದಿಗೊಳಿಸುತ್ತಾನೆ. ತಾನು ತೊದಲು ನುಡಿಯಲ್ಲಿ ನೇದ್ಯಮ-ಪ್ಪಂತೆ ಬಡನುಡಿಯಲ್ಲಿ ಬರೆಯುತ್ತಿದ್ದುದು ಸುಳ್ಳು ಪುರಾಣವಲ್ಲ, ಸತ್ತವರ ಕಥೆಯಲ್ಲ, ಸಾಕ್ಷಾತ್ 'ಗುಹೇಶ್ವರ ಲಿಂಗಲೀಲೆ' ಎಂಬ ವಿವೇಕವೂ ಸದುವಿನಯವೂ ಅವನದಾಗಿದೆ. ಅಂಥವನನ್ನು ಕಾವ್ಯ ದಲ್ಲಿ ಹಿಡಿದಿಡಲು ತಾನು ಅಸಮರ್ಥನೆಂದೇ ಅವನ ಭಾವನೆ, ಎಲ್ಲ ದಕ್ಕೂ ಗುರು ಗುಹೇಶ್ವರನೇ ತನಗೆ ಪ್ರೇರಕವೆಂಬುದನ್ನು ಸೂಚಿಸಿ 'ಮಾಡಿದೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ'ಎಂಬ ಶರಣ ಮಾರ್ಗದ ನಿಸ್ಪೃಹತೆಯನ್ನೂ ಮೆರೆದಿದ್ದಾನೆ. ಹರಿಹರ ರಾಘವಾಂಕರಂತೆ ಚಾಮರಸನೂ ಒಬ್ಬ ಶ್ರೇಷ್ಠ ದಾರ್ಶನಿಕ ಕವಿ ಅಷ್ಟೇ ಅಲ್ಲ; ಶರಣಯೋಗಿ; ಅಂತೆಯೇ ಅಲ್ಲಮ ಪ್ರಭುವಿನ ಅಂಗಕ್ರಿಯೆಗಳೆಲ್ಲ ಆತನಿಗೆ ಲಿಂಗಕ್ರಿಯೆಗಳಾಗಿಯೇ ತೋರ್ಬೈಸಿವೆ. ಅಂತೆಯೇ ಕಾವ್ಯದ ಮೊದಲ ಪದ್ಯದಲ್ಲಿಯೇ ಪ್ರಭುವಿನ ಮಹಿಮೆ ಯನ್ನು ಕೊಂಡಾಡುವ ತವಕ ಆತನದು. ಅವನ ದಾರ್ಶನಿಕ ದೃಷ್ಟಿ ಯಲ್ಲಿ ಬಯಲ ದೇಹಿಯಾದ ಪ್ರಭುವಿನ ಬಹುಮುಖ ವ್ಯಕ್ತಿತ್ವ-ಗಳೆಲ್ಲವೂ ಸ್ಥಾವರಗೊಂಡಿವೆ.

ಶ್ರೀಮದಮಲ ಜ್ಞಾನಭಕ್ತಿ
ಪ್ರೇಮ ವೇದಪುರಾಣ ಶಾಸ್ತ್ರ
ಸ್ತೋಮ ನುತ ನತ ಚಾರು ಚರಣಾಂಭೋಜ ಘನಮಹಿಮ ।
ನಾಮರೂಪ ಕ್ರೀ ಕಳಾಪ ವಿ
ರಾಮನನುಪಮ ದಿವ್ಯ ತೇಜೋ
ವ್ಯೋಮ ಮೂರುತಿ ಗುರುಗುಹೇಶ್ವರ ಲಿಂಗ ಶರಣಾರ್ಥಿ ॥

ಪವಾಡ ಪುರುಷನಾದ ಚಾರಿತ್ರಿಕ ವ್ಯಕ್ತಿ ಪ್ರಭುದೇವನ ವ್ಯಕ್ತಿತ್ವಗಳ ನ್ನೆಲ್ಲವನ್ನು ಈ ಒಂದು ಪದ್ಯದಲ್ಲಿ ಹಿಡಿದಿಟ್ಟ ಚಾಮರಸನ ಕಾವ್ಯೋ ದ್ದೇಶವೇ ಉನ್ನತವಾಗಿದೆ. ಆತನ, ಕಲ್ಪನೆ ಮತ್ತು ಪ್ರತಿಭೆಗಳಲ್ಲಿ, ಪಾಂಡಿತ್ಯ ಹಾಗೂ ವಿಚಾರಸರಣಿಗಳಲ್ಲಿ, ಶೈಲಿ ಮತ್ತು ಜೀವಂತ ನಿರೂಪಣೆಯಲ್ಲಿ, ರಸ ಮತ್ತು ಪಾತ್ರ ಪರಿಪೋಷಣೆಗಳಲ್ಲಿ ಹೊಸತನ ವಿದೆ. ಇತರ ಮಹಾಕವಿಗಳಿಗೆ ಹೆಗಲೆಣೆಯಾಗಿ ನಿಲ್ಲುವ ಕಾವ್ಯ ಪ್ರತಿಭೆಯೂ ಅವನಿಗಿದೆ. ಅಂತೆಯೇ ವೀರಶೈವ ತತ್ವ ಕುರಿತ ತಪೋನಿಷ್ಠ ವಾಸ್ತವಿಕ ಕಾವ್ಯ 'ಪ್ರಭುಲಿಂಗಲೀಲೆ' ಅವನಿಂದ ಸೃಷ್ಟಿ ಯಾಗಿದೆ. ಆತನಿಗೆ ಅಲ್ಲಮನ ಲೌಕಿಕ ಚರಿತ್ರೆಯೊಂದೇ ಸಾಲದು, 'ಶಿವನ ನಟನಾಟಕ ಲೀಲೆಯ' ಅವಾಂತರ ವಿಶೇಷಗಳೂ ಪ್ರಿಯ ವಾಗಿವೆ. 'ಪ್ರಭುಲಿಂಗಲೀಲೆ', ಒಟ್ಟಿನಲ್ಲಿ "ಕಥೆಗೆ ಕಥೆ, ಕಾವ್ಯಕ್ಕೆ ಕಾವ್ಯ, ತತ್ವಕ್ಕೆ ತತ್ವ" ಈ ಮುಪ್ಪುರಿಗಳ ಸುಂದರ ಸಮನ್ವಯ ಸಾರಸಮುದ್ರ. ವೀರಶೈವ ತತ್ವಜ್ಞಾನವನ್ನೇ ಅಲ್ಲಮನ ವ್ಯಕ್ತಿತ್ವ ದೊಂದಿಗೆ ಸರಳೀಕರಿಸಿದ ಅಸಾಮಾನ್ಯ ಕಾವ್ಯ. ಅಷ್ಟೇ ಅಲ್ಲ. ಚಾರಿತ್ರಿಕ ವ್ಯಕ್ತಿ ಮತ್ತು ಧರ್ಮತತ್ವಗಳೊಂದಿಗೆ ಉನ್ನತ ಕಾವ್ಯತತ್ವ ವನ್ನು ಮೆರೆದ, ಮಾನವನ ಆತ್ಮೋನ್ನತಿಗಾಗಿ ಕಳಕಳಿ ಹೊಂದಿದ ಶ್ರೇಷ್ಠ ಕಾವ್ಯ.

ಹರಿಹರ ರಾಘವಂಕರಿಗೆ ಹಂಪೆಯ ವಿರೂಪಾಕ್ಷ ಹೇಗೋ ಹಾಗೆ ಚಾಮರಸನಿಗೆ ಅಲ್ಲಮಪ್ರಭು. ಪಂಪನಿಗೆ ಅರಕೇಸರಿ, ರನ್ನನಿಗೆ ಇರಿವ ಬೆಡಂಗ, ನಾಗಚಂದ್ರನಿಗೆ ರಾಮಚಂದ್ರ, ಕುಮಾರವ್ಯಾಸ-ಲಕ್ಷ್ಮೀಶರಿಗೆ ಕೃಷ್ಣ, ರತ್ನಾಕರವರ್ಣಿಗೆ ಭರತೇಶ, ಭೀಮಕವಿಗೆ ಬಸವಣ್ಣ ಅಷ್ಟೇ ಏಕೆ ಆಧುನಿಕ ಸಂಪ್ರದಾಯದ ಬೇಂದ್ರೆ-ಕುವೆಂಪು ಅವರಿಗೆ ಅರವಿಂದರು ರಾಮಕೃಷ್ಣರು ಹೇಗೋಹಾಗೆ ಚಾಮರಸನಿಗೆ ಅಲ್ಲಮನೇ ಸರ್ವಸ್ವ. ಅಲ್ಲಮನೇ ಅವನಿಗೆ ಸ್ಫೂರ್ತಿಸೆಲೆ. ಆದರೂ ಅಲ್ಲಮನ ಅಲೌಕಿಕತೆಯನ್ನು ಅಲ್ಲದ ಲೌಕಿಕಕ್ಕೆ ವರ್ಗಾಯಿಸಿದ ಹಳಗನ್ನಡ ನಡುಗನ್ನಡ ಕವಿ ಕಾವ್ಯ ಕಥಾನಾಯಕರಿಗಿಂತ ಚಾಮ ರಸನ ಕಥಾನಾಯಕನ ಸ್ಥಾನ ಮೇಲ್ಮಟ್ಟದ್ದಾಗಿದೆ. ಅಷ್ಟೇ ಅಲ್ಲ ಕಾವ್ಯ ದುದ್ದಕ್ಕೂ ಹಿಂದು ಮುಂದಾಗದಂತೆ ಜಾಗರೂಕತೆಯಿಂದ ಬೆಳೆಸಿ ಕೊಂಡು ಹೋದ ಕಥಾನಾಯಕನ ಪಾತ್ರನಿರೂಪಣೆ ಇಲ್ಲಿ ಪರಿ ಪೂರ್ಣಗೊಂಡಿದೆ. ಪ್ರಭುವಿನ ಪೂರ್ವೋತ್ತರಗಳನ್ನು ಒಗ್ಗೂಡಿಸಿ ಕೊಂಡೇ ಅವನ ವ್ಯಕ್ತಿತ್ವಗಳನ್ನೆಲ್ಲ ಹದವರಿತು ಬಳಸಿ, ಕಾವ್ಯ ದುದ್ದಕ್ಕೂ ಬೆಳೆಸಿಕೊಂಡುಹೋದ ಚಾಮರಸನ ಕಲೆಗಾರಿಕೆಯೂ ಶ್ರೇಷ್ಠಮಟ್ಟದ್ದಾಗಿದೆ.

ಚಾಮರಸನ ಕಾವ್ಯಕ್ಕೆ ಹರಿಹರನ ಪ್ರಭುದೇವರ ರಗಳೆ, ಭೀಮ ಕವಿಯ ಬಸವ ಪುರಾಣ,ರಾಘವಾಂಕನ ಸಿದ್ಧರಾಮ ಚರಿತೆ ಮುಂತಾ ದವುಗಳು ಆಕರಗಳಾಗಿದ್ದರೂ, ಕವಿಯ ಭಕ್ತಿ ಹಾಗೂ ಉಕ್ತಿಗಳಿಗೆ ಅನುಗುಣವಾಗಿ ಕಾವ್ಯದಲ್ಲಿ ಉಕ್ತವಾದ ಆಯಾ ಶಿವಶರಣರ ಬದು ಕಿನ ವೃತ್ತಾಂತಗಳಲ್ಲಿ ಅಲ್ಪಸ್ವಲ್ಪ ಮಾರ್ಪಾಟುಗಳಾಗಿವೆ. ಆದರೂ ಪ್ರಸಂಗವರಿತು ಆಯಾ ಶರಣರ ವಚನಗಳ ಅಂತರಂಗವನ್ನು ಅರಿತು ಕೊಂಡೇ ಕಾವ್ಯ ನಡೆಸಿದ ಚಾಮರಸನು, ಚಾರಿತ್ರಿಕ ಸತ್ಯ ಸಂಗತಿ ಗಳಿಂದ ದೂರ ಹೋಗಿಲ್ಲ. ಶರಣರಿದ್ದಲ್ಲಿ ಕೈಲಾಸವೆಂಬುದನ್ನು ಮನವಾರೆ ನಂಬಿದವನಾದ್ದರಿಂದ, ಅದನ್ನೇ ತನ್ನ ಕೃತಿಯಲ್ಲಿ ಸಾರ್ಥಕಗೊಳಿಸಿದ್ದಾನೆ. ಪ್ರಭುಲಿಂಗ ಲೀಲೆಯಲ್ಲಿ ಸಾಧಕರಾಗಿ ಉಕ್ತವಾದ ಶಿವಶರಣ ಶರಣೆಯರಿಗೆಲ್ಲ ಅಲ್ಲಮನೇ ಕೇಂದ್ರ ವ್ಯಕ್ತಿ. ಚುಂಬಕ ಶಕ್ತಿ ಹೊಂದಿದ ಅವನ ಪ್ರಭಾವ ವಲಯದಲ್ಲಿಯೇ ಚುಂಬ ಕೀಯ ವಸ್ತುಗಳಾಗಿ ತಿರುಗುವ ಶರಣರ ಸಮೂಹವೇ ಭೂಲೋ-ಕಕ್ಕೆ ಅಮೃತತ್ವವನ್ನು ಲೇಪಿಸುವ ತರಾತುರಿಯಲ್ಲಿದೆ. ಅಂತೆಯೇ 'ಪ್ರಭುಲಿಂಗಲೀಲೆ'ಯ ನಾಂದಿಯಾಗಿಯೇ ದೇವಲೋಕದ ಅಲೌಕಿಕ ರಂಗಸ್ಥಳ ಕಾದು ನಿಂತಿದೆ. 'ಭೋಗ ಭೂಮಿಯ ಭೋಗ ತನು ವಿನಲಿ ಸಾಧಿಸಿದ ಅನುಪಮ ಸಿದ್ಧಿಯನ್ನು ಯೋಗ್ಯರಾದವರು ಭೂ ಭಾಗದೊಳು ಮಾನವ ಶರೀರಿಗಳಾಗಿ ಸಾಧಿಸಿ ನಿಜವನರಿದರು" ಎಂಬ ಶಿವನಾಡಿದ ಮಾತಿನಿಂದ, ಭೂಲೋಕದಲ್ಲಿ ಅವತರಿಸಿದ್ದ ಈ ಅಲ್ಲಮ. ಅಂತೆಯೇ ಉಳಿದ ಶರಣರು ಕಾರಣಿಕ ಪುರುಷರೆಂಬುದನ್ನೇ ಚಾಮ ರಸ ಸೂಚ್ಯವಾಗಿ ಧ್ವನಿಸಿದ್ದಾನೆ. 'ತನ್ನ ನಿಜರೂಪವೇ ಅಲ್ಲಮ' ನೆಂದು ಶಿವನಿಂದ ಹೇಳಿಸಿದ ಚಾಮರಸನಿಗೆ ಎಲ್ಲವೂ ಶಿವಮಯವಾ ಗಿದೆ. ಅಂತೆಯೇ ತನ್ನ ಕಥಾನಾಯಕ 'ಶಿವನನಟ ನಾಟಕ ಲೀಲಾ ಸೂತ್ರಧಾರಿ' ಎಂದು ನಂಬಿದ್ದಾನೆ.

ಇನ್ನೂರಾಮೂವತ್ತೂರು

ಪ್ರಭುದೇವರ ತಂದೆ ತಾಯಿ ನಿರಹಂಕಾರ ಸುಜ್ಞಾನಿಗಳೆಂದು [illegible] ಚಿಸಿ ಸಾತ್ವಿಕ ಶಕ್ತಿಹೊಂದಿದ ತಾತ್ವಿಕ ವ್ಯಕ್ತಿಗೆ ತಕ್ಕ ಕೌಟುಂಬಿಕ ಪರಿಸರವನ್ನು ಧ್ವನಿಪೂರ್ಣಗೊಳಿಸಿದ್ದಾನೆ. ತಾಮಸ ಕಳೆಯಾದ ಮಾಯೆಗೂ ಕೂಡ ತಂದೆತಾಯಿಗಳು ಬನವಸೆಯ ಸಕಲೈಶ್ವರ್ಯ ಪರಿಪೂರ್ಣ ಮಮಕಾರ, ಮೋಹಿನೀ ದೇವಿಯರೆಂದು ತಾಮಸಗುಣ ಸೂಚಿತ ಹೆಸರುಳ್ಳ ಪರಿಸರ ಕಟ್ಟಿದ್ದಾನೆ. ಮಾಯೆಯ ಗೆಳತಿಯೂ 'ಮದಮಾನಿ'ಯಂತೆ, ಹೀಗೆ ಮುಂತಾದ ಕಾಲ್ಪನಿಕ ಹೆಸರುಗಳಲ್ಲಿಯೂ ತನ್ನ ಕಲೆಗಾರಿಕೆಯನ್ನು [illegible]. ಪ್ರಭುವಿನ ಜನನವೇ ಅವನಿಗೆ ಪವಾಡ ಸದೃಶ, ಆತನಿಗೆ 'ಅಲ್ಲಮ'ನೆಂದರಷ್ಟೆ ಸಾಲದು. ಇಲ್ಲಿ ಎಲ್ಲವನ್ನು ಅಲ್ಲವಾಗಿಸುವ 'ಅಲ್ಲಮಪ್ರಭು'ವಾಗಿದ್ದಾನೆ. ಸಾಕ್ಷಾತ್ ಪರಶಿವನ ಅವತಾರವೇ ಘೋಷಿತವಾಗಿದೆ. ಚಾಮರಸನಿಗೆ ಆತ ಆಯೋನಿಜ. ಸುಜ್ಞಾನಿ ನಿರಹಂಕಾರರು ಸತ್ಪುತ್ರ ಕುವರನನ್ನು ಬಯಸಿ ಮಾಡಿದ ವ್ರತ, ಪೂಜೆ, ತಪಕ್ಕೆ ಪ್ರತಿಫಲವಾಗಿ ದೊರೆತ ಜ್ಞಾನನಿಧಿ ಅದು. ಲಿಂಗಸಮಾಧಿಯಲ್ಲಿ ನವಮಾಸ ಕಳೆಯುತ್ತಲೇ ಮನಸ್ಸಿನಲ್ಲಿ ಮೂಡಿದ ಮಗುವಿನ ಚಿತ್ಕಳೆಗೆ ಪ್ರತಿರೂಪವಾಗಿ ಪಕ್ಕದಲ್ಲಿಯೇ ಎಳೆರವಿಯಂತೆ ಕಂಗೊಳಿಸಿದ ಸುಂದರ ಮೂರ್ತಿಯನ್ನು ಕಂಡರೆಂದು ಹೇಳುವ ಚಾಮರಸನ ಸೊಗಸುತನಕ್ಕೆ ಎಣೆಯಿಲ್ಲ. ಅದೂ ಅಲ್ಲಮನ ಈ ವೃತ್ತಾಂತವನ್ನೆಲ್ಲ ರಜತಾದ್ರಿಯಿಂದಿಳಿದ ವಿಮಳೆಯ ಬಾಯಿಂದ (ಕಾಮಾತುರಕ್ಕೆ ಸೋತು ಬಣ್ಣವಳಿದ) ಮಾಯೆಗೆ ತಿಳಿಸುವಲ್ಲಿ ಹೆಚ್ಚು ಆದರಣೀಯನೆನಿಸುತ್ತಾನೆ.

ಅಲ್ಲಮ ಮೊದಲೇ ಬಯಲ ಸ್ವರೂಪಿ, ವ್ಯೋಮಮೂರುತಿ ಕೇಳುವುದೇನು ? ದಂಪತಿಗಳ ಕೈಗೆ "ಭಾರವಿಲ್ಲದೆ ಕೈಗೆ ಸೋಂಕದೆ-ಸಾರ ತೇಜಃಪುಂಜತನು ಶಿಶು ತಾನಾಗಿ" ವಿಸ್ಮಯ ಹುಟ್ಟಿಸಿತು. ಒಡನೆಯೇ 'ಜಾತನಲ್ಲ, ವಿಚಾರಿಸುವೊಡೆ ಅಜಾತನಲ್ಲ ಉಪಮಾತೀತನೀತ' ಎಂಬ ತೀರ್ಮಾನ ಆ ದಂಪತಿಗಳದು. ವಿಜೃಂಭಣೆಯಿಂದ ಹೆಸರಿಟ್ಟರು.

ಬಲ್ಲೊಡೀ ಶಿಶುವೀತರೊಳಗಿಹ
ನಲ್ಲ ಹೊರಗಹನಲ್ಲ, ಭಾವಿಸ
ಲಿಲ್ಲದಿರುತಿಹನಲ್ಲವೆನುತಾ ತಂದೆ ತಾಯಿಗಳು ।
ಎಲ್ಲ ಜಾಡ್ಯದ ಜಂಜಡಂಗಳ
ನಲ್ಲವೆನಿಸುವ ಬಾಲಕಗೆ ಬಳಿ
ಕಲ್ಲಮಪ್ರಭುವೆಂದು ಹೆಸರನು ಕೊಟ್ಟರರ್ತಿಯಲಿ ॥

ಅಷ್ಟೇ ಅಲ್ಲ ಅಲ್ಲಮನ ಬೆಳವಣಿಗೆಯನ್ನು ತೀವ್ರತೆಯನ್ನು ಕಾವ್ಯದ ಅಭಿವ್ಯಕ್ತಿಯಲ್ಲಿ ತೋರುವ ಚಾಮರಸನ ವರ್ಣನೆ ಭೀಮಕವಿ ಕುಮಾರವ್ಯಾಸರ ಪಾರವಿಲ್ಲದ ವರ್ಣನೆಯನ್ನೇ ನೆನಪಿಸುತ್ತದೆ. ಎಲ್ಲ [illegible] ಆತನ [illegible] ಗಳಿಗೆ ಸಂಜೆಗೆ [illegible] ಕಲಿತನಂತೆ, ನಗೆಯ ಕಲಿತನಂತೆ, ತಂದೆ ತಾಯಿಗಳ ಮನೋರಥದ ಕೂಡ ಬೆಳೆದು ಬಾಲ ಲೀಲೆಯಿಂದ ಮೆರೆದು ರೂಢಿ-ಗಚ್ಚರಿ ಉಂಟುಮಾಡಿದನಂತೆ. ಮುಂತಾಗಿ ಅವನ ಬೆಳವಣಿಗೆಯನ್ನು ಕೈಚಿಟಿಕೆ ಹೊತ್ತಿನಲ್ಲಿಯೇ ಒಂದೊಂದರಂತೆ ಗಂಗಟ್ಟಿ ನಿಲ್ಲಿಸಲಾಗಿದೆ. ಅಷ್ಟೇ ಅಲ್ಲ :

ಆತನೋದದ ವೇದಶಾಸ್ತ್ರಸ
ಮೇತವಾತನ ನಾಲಿಗೆಯ ತುದಿ
ಗೋತು ಬೆಸನನು ಬೇಡುತಿಹವಾತನ ಪದಾಬ್ಜದಲಿ ।

ಎಂಬ ಪದ್ಯದಲ್ಲಂತೂ ಅಲ್ಲಮನ ಅಲೌಕಿಕ ವ್ಯಕ್ತಿತ್ವವನ್ನು ಸ್ಪಷ್ಟಗೊಳಿಸಿದ್ದಾನೆ. ಅಷ್ಟೇ ಅಲ್ಲ ಹರಿಹರನಿಂದ ಭಿನ್ನನಾಗುವುದೂ ಇಂಥ ಸಂದರ್ಭದಲ್ಲಿ. ಪ್ರಭುವಿನ ಬಗ್ಗೆ ಹರಿಹರ ಚಾಮರಸರ ಕಾವ್ಯಗಳಲ್ಲಿ ಘಟನೆ, ಸ್ಥಳ, ಹೆಸರು ಮುಂತಾದವುಗಳಲ್ಲಿ ಹಿಂದು ಮುಂದು ಇಲ್ಲವೆ, ಅಲ್ಪ ಭಿನ್ನತೆಯಿದ್ದರೂ ಅಲ್ಲಮನ ಘನ ವ್ಯಕ್ತಿತ್ವ ರೂಪಿಸುವ ಇಬ್ಬರ ಗುರಿಯೂ ಒಂದೇ ಆಗಿದೆ. ಆದರೆ ಚಾರಿತ್ರಿಕ ಸಂಗತಿಗಳಿಗೆ ಹೆಚ್ಚು ಸಮೀಪದವನಾಗಿ ಬಾಳಿದ ಹರಿಹರನ ವಾಸ್ತವಿಕ ಅಂಶದಿಂದ ಲೌಕಿಕನಾದ ಅಲ್ಲಮಪ್ರಭು, ಚಾಮರಸನಲ್ಲಿ ಅಲೌಕಿಕ ಆವರಣದಲ್ಲಿ ಲೀಲಾಜಾಲವಾಗಿ ವಿಹರಿಸುವ ಪವಾಡಪುರುಷನಾಗಿ ಕಂಗೊಳಿಸುತ್ತಾನೆ. ಹರಿಹರನಿಗೆ ಪ್ರಭುದೇವರ ಚರಿತ್ರೆ ಮುಖ್ಯವಾಗಿದ್ದರೆ, ಚಾಮರಸನಿಗೆ ಪ್ರಭುವಿನ ಲೀಲೆ ಮಹತ್ವದ್ದೆನಿಸಿದೆ.

ಸಕಲ ಶಾಸ್ತ್ರವಿದ್ಯಾಪಾರಂಗತನಾದ ಅಲ್ಲಮನು ತಂದೆ ತಾಯಿಗಳಿಗೂ ಸದ್ಗತಿಯ ಮಾರ್ಗ ತೋರಿಸುತ್ತಾನೆ. ನಿಜರೂಪ ಮರೆಸಿ ಹೊಸವೇಷ ಧರಿಸಿ ಮದ್ದಳೆಯವನಾಗಿ ಬನವಸೆಯ ಮಧುಕೇಶ್ವರ ದೇವಾಲಯಕ್ಕೆ ಬಂದು ಅಭಿನವ ಕಾಮನಂತೆ ವಿರಾಜಿಸುತ್ತಾನೆ. ಮಧುಕೇಶ್ವರನೇ ತನ್ನ ಪತಿಯಾಗಬೇಕೆಂದು ಬಯಸಿ ಪೂಜೆಗೆಂದು ಬಂದ ನಾರಿ ಮಾಯಾದೇವಿ, ಆತನ ಮದ್ದಳೆಯ ಗತಿಗೆ ಮಾರು ಹೋಗುವ, ಆತನೊಂದಿಗೆ ಕಾಮ ಲೀಲೆಗೆಳಸುವ ಹೃದಯತುಂಬಿದ ಸೂಕ್ಷ್ಮ ಅನಿಸಿಕೆಗಳನ್ನೆಲ್ಲ ಚಾಮರಸ ಸುಂದರವಾಗಿ ನಿರೂಪಿಸಿದ್ದಾನೆ. 'ಕಾರಮುಗಿಲಿನ ಗರ್ಜನೆಯ ಕೇಳಿದ ಸೋಗೆಯಂತೆ' ಕುಣಿದು ಅಲ್ಲಮನೊಂದಿಗೆ ಅನುರಕ್ತಳಾಗುವ ಸನ್ನಿವೇಶ ಚಾಮರಸನ ರಸಿಕತೆಗೆ ಕಳಸಪ್ರಾಯವಾಗಿದೆ. ಅಲ್ಲಮನ ರೂಪಕಂಡ ಮಾಯೆ ಚಿತ್ರಜನ ಅಳಲಿನಲ್ಲಿ ಬಿದ್ದು ಮೌನವಾಗಿದ್ದಳಂತೆ. ಆಗ ಆಕೆಯ ಗೆಳತಿಯರೇ ಮುಂದಾಗಿ 'ಆವದೇಶದ ಪುರುಷನೈ ನಿನಗಾವ ಹೆಸರು' ಮುಂತಾಗಿ ಕೇಳುವುದು ಮತ್ತು ಆ ಪ್ರಶ್ನೆಗಳಿಗೆ ಅಲ್ಲಮನು "ದೇಶವೆಮ್ಮದು ಪರದೇಶ, ಬಿರುದಿನ ಬಿಂಕಕಾರರ ವಾಸಿಗರನಲ್ಲೆನಿಸುವಲ್ಲಮನೆಂಬ ಹೆಸರೆನಗೆ' ಎಂದುದು ಕಾವ್ಯದ ಸಹಜತೆಯೊಂದಿಗೆ ಅಲ್ಲಮನ ನಟನಾಲೀಲೆಯೂ ಅಲ್ಲಿ ವ್ಯಕ್ತವಾಗಿದೆ. ಒಟ್ಟಿನಲ್ಲಿ ಮಾಯೆಗೆ ತಾನೂ ಕಾಮಿಯೆಂಬಂತೆ ನಟಿಸುತ್ತಾನೆ. ನಾಟ್ಯಶಿಕ್ಷಾಚಾರ್ಯನಾಗಿ ಅವಳ ಅರಮನೆಗೂ ಹೋಗುತ್ತಾನೆ. ಮಾಯೆಯ ಕಣ್ಣು ಕಾಮಕ್ಕೆ ತಿರುಗಿದಾಗ ಅಲ್ಲಮನಿಗೆ ಆಕೆಯನ್ನು ಉದ್ಧರಿಸುವುದು ಅನಿವಾರ್ಯವಾಗುತ್ತದೆ. ಆಕೆಯ ಹುಚ್ಚು ಅಹಂಭಾವ ತುಂಬಿದ ಹರೆಯ ಅಲ್ಲಮನನ್ನು ಅಪ್ಪಿಕೊಳ್ಳಲೂ ಹಿಂದು ಮುಂದು ನೋಡುವುದಿಲ್ಲ. ಆಗ ಪ್ರಭು ಬಯಲದೇಹಿಯಾಗಿ ತೋರುತ್ತಾನೆ. ಮಾಯೆಯ ದುಃಖಕ್ಕೆ ಮಿತಿ ಇಲ್ಲ. 'ಉದಕದಲ್ಲಿ ಮುಳುಗಿದ ಸುಣ್ಣದ ಕಲ್ಲಿನಂತೆ ಕುದಿದು ಬಣ್ಣ

ವಳಿದ' ಪರಿ ಕಂಡ ಕೆಳದಿಯರು ಬಂದು ಅಲ್ಲಮನಿಗೆ ಕೇಳಿದಾಗ 'ಮಾಯೆ ಅಗಲಿದ ಬಳಿಕ ಭಾವಿಸೆ ಕಾಯವುಂಟೇ ಅಕಟಾ ಸಾಯದಂತಿರೆ ಸತ್ತೆ'ನೆಂದು ಉತ್ತರಿಸುತ್ತಾನೆ. ಪಾರ್ವತಿಯ ಆಣತಿಯಂತೆ ಮಾಯೆಯನ್ನು ಎಚರಿಸಲಿಕ್ಕೆಂದು ಭೂಲೋಕಕ್ಕೆ ಬಂದ ವಿಮಳಿಯಿಂದ ಅಲ್ಲಮನ ಪೂರ್ವವೃತ್ತಾಂತವನ್ನು ತಿಳಿದ ಮಾಯೆಯ ಛಲಕ್ಕೆ ಗರಿಮೂಡುತ್ತದೆ. ಕಾಮವನ್ನೇ ತನ್ನ ಪರಮ ಗುರಿಯೆಂದು ತಿಳಿದ ಮಾಯೆಗೆ ಪರಮ ತತ್ವದ ಸೀಮೆಯನ್ನರಿತುಕೊಳ್ಳುವುದು ಅಸಾಧ್ಯವಾಗುತ್ತದೆ. ಪುನಃ ಮಧುಕೇಶ್ವರ ದೇವಾಲಯದಲ್ಲಿ ಸಂಧಿಸಿದಾಗ ಅಲ್ಲಮನ ಮದ್ದಳೆಗೆ ತಕ್ಕಂತೆ ಮೈದಣಿಯೆ ಕುಣಿದು ವಿಮಳೆಗೂ ಸನ್ನೆಯಿಂದ ಅಲ್ಲಮನನ್ನು ತೋರಿದಳು. ಅಲ್ಲಮನೂ 'ಹೂಡಿ ಹಣ್ಣಿದ ಜಗದ ಜಂತ್ರವನಾಡಿಸುವ ಮಾಯಾಂಗನೆಯ ತಾನಾಡಿಸುವನೆಂಬುದನ್ನು ಪ್ರತ್ಯಕ್ಷ ತೋರ್ಪಡಿಸುವವನಂತೆ' ಮದ್ದಳೆಯ ನುಡಿಸಿದನು. ವಿಮಳೆ ಹೇಳಿದ ಬುದ್ಧಿವಾದಕ್ಕೆ ಬೆಲೆಕೊಡದ ಮಾಯೆ, ಉದ್ಧಟತನದಲ್ಲಿಯೇ ಬಳಲುವಂತಾಯ್ತು. ಕೊನೆಗೆ ಅಲ್ಲಮನನ್ನು ಹಿಡಿಯಹೊರಟಾಗ ಆತ ಮದ್ದಳೆಯನ್ನೇ ಒಗೆದು ಅಲ್ಲಿಂದ ಹೊರಗಾಗುತ್ತಾನೆ. ಮಾಯೆಯು ಯಾರ ಮಾತನ್ನು ಕೇಳದೇ ಅಲ್ಲಮನಿಗಾಗಿ ಅರಮನೆಯನ್ನು ಬಿಟ್ಟು ಕಾಲು ನಡಿಗೆಯಲ್ಲಿಯೇ ಕಲ್ಲುಮುಳ್ಳು ತುಳಿಯುತ್ತ, ದೆಸೆದೆಸೆಗೆ ಬಾಯ್ಬಿಡುತ್ತ ಅಲೆವ ಸನ್ನಿವೇಶ ಹೃದಯವಿದ್ರಾವಕವಾಗಿದೆ. ಅಲ್ಲಮ ಪುನಃ ಅವರಿಗೆ ದರ್ಶನ ಕೊಟ್ಟು ತನ್ನ ನಟನಾಟಕ ಲೀಲೆಯನ್ನು ಮುಂದುವರಿಸುತ್ತಾನೆ. ಮಾಯೆಗೆ ತಿಳಿಹೇಳಿ ಉದ್ಧರಿಸಬೇಕೆಂಬುದೇ ಅವನ ಗುರಿಯಾಗಿದೆ. ಆದರೆ ಅಲ್ಲಿ ಆದ ಪ್ರಸಂಗವೇ ಬೇರೆ. ಅಲ್ಲಮನನ್ನು ಕಂಡೊಡನೆ ಮಾಯೆ ಮತ್ತು ಆಕೆಯ ಕೆಳದಿಯರು ಬಾಯಿಗೆ ಬಂದಂತೆ ಅಲ್ಲಮನನ್ನು ಬಯ್ಯುತ್ತಾರೆ. ಮಾಯೆಯ ಪತಿಯಾಗಿ ಉದ್ಧರಿಸಬೇಕೆಂದು ಬೇಡಿಕೊಳ್ಳುತ್ತಾರೆ. ಆದರೆ ಅಲ್ಲಮ ಇದಾವುದಕ್ಕೂ ಒಳಗಾಗದಿರುವಾಗ ಮಾಯೆಯ ಸಿಟ್ಟು ಹಾವಾಗಿ ಹೆಡೆ ಬೀಸುತ್ತದೆ. ಆದರೆ "ಒಂದು ಬೀಜವ ಬಿತ್ತಿ ಮತ್ತೊಂದು ಫಲವ ಬಯಸುವವರು ಮರುಳರು. ಮಾಯೆಗೆ ಪರಮ ತತ್ವಜ್ಞಾನವೇ ಇಲ್ಲವೆಂ"ದು ಹೇಳಿ ಅಲ್ಲಿಂದ ಪುನಃ ಬಯಲಾಗುತ್ತಾನೆ.

ಹೀಗೆ "ದೇವದಾನವ ಮಾನವರುಗಳನ್ನೇ ದಾವಣಿಯ ದನವಾಗಿ ಕಟ್ಟುವ, ಹರಿಹರ ಬ್ರಹ್ಮಾದಿಗಳನ್ನೇ ದಿಕ್ಕು ತಪ್ಪಿಸುವ ಮಾಯೆಯ ಆಟಗಳೆಲ್ಲ ಅಲ್ಲಮನ ಎದುರಿಗೆ ವಿಮುಖವಾದವು. ಮಾಯೆಯನ್ನು ಮುರಿದು ಮಾಯಾಕೋಲಾಹಲನಾದ ಪ್ರಭುವಿನ ಮತ್ತು ಮಾಯೆಯ ಪ್ರಸಂಗ ಉನ್ನತ ಮಟ್ಟದ್ದಾಗಿದೆ. ಚಾಮರಸನ ರಸಿಕತೆ, ಕಲ್ಪನಾಸಿದ್ಧಿ ಹಾಗೂ ಉತ್ತಮ ಕಾವ್ಯ ಕಲೆಗಾರಿಕೆಗೆ, ಈ ಪ್ರಸಂಗ ಒಳ್ಳೆ ಉದಾಹರಣೆಯಾಗಿದೆ. ಕಾವ್ಯದ ಪ್ರಾರಂಭದಲ್ಲಿಯೇ ಕಾವ್ಯರಸಿಕರ ಮನಸೆಳೆವ ಮಾಯೆ ವೀರಶೈವ ತತ್ವಜ್ಞಾನದಲ್ಲಿ ಒಂದು ಭ್ರಮೆಯಲ್ಲವೆಂಬುದನ್ನು ತೋರಿಸಿದ ಶ್ರೇಯಸ್ಸು ಚಾಮರಸನದು. ಮಾಯೆ ಮತ್ತು ಅಲ್ಲಮರ ಇಶ್ಚಿತವನ್ನೇ ಅರಿತ ಚಾಮರಸ, ತನ್ನ ಅಗಾಧವಾದ ಲೋಕನಿರೀಕ್ಷೆಯಿಂದ ಮಿಗಿಲೆನಿಸಿದ್ದಾನೆ. ಮಾಯೆಯ ಕಾಮತಾಪಕ್ಕೆ ಮರುಗುವ ಓದುಗನಿಗೆ ಅಲ್ಲಮನ ಧೀಮಂತ ವ್ಯಕ್ತಿತ್ವವನ್ನು ಏಕಕಾಲಕ್ಕೆ ದರ್ಶಿಸುವ ಪ್ರತಿಭೆ ಚಾಮರಸನವಾಗಿದೆ.

ಮಾಯಾಕೋಲಾಹಲನಾದ ಅಲ್ಲಮಪ್ರಭು ಭಕ್ತರ ಬಂಧುವಾಗಿ,ಅವರ ಕುಂದುಕೊರತೆಗಳನ್ನು ತಿದ್ದಿ ಆತ್ಮವಿಕಾಸದ ಸುಮಾರ್ಗ ತೋರಿಸುವುದಕ್ಕಾಗಿ ಲೋಕಸಂಚಾರ ಕೈಕೊಳ್ಳುತ್ತಾನೆ. ಅಲ್ಲಿಂದ ಪ್ರಭುವಿನ ಆದರ್ಶ ಜೀವನಕ್ಕೆ ಮೊದಲಾಗುತ್ತದೆ. ಲಿಂಗ ನಿಜವನು ಬಯಸಿದ ಭಕ್ತಗಣವನ್ನು ಅನುಗ್ರಹಿಸುವುದಕ್ಕಾಗಿ ಪ್ರಭುದೇವ ಕಾರಣ ಕಾಯದಲ್ಲಿ ಸುಳಿಯುತ್ತಾನೆ. 'ಕಾಯಕವೇ ಕೈಲಾಸ'ವೆಂದು ಕಾಯಕ ನಿರತನಾದ ಗೊಗ್ಗಯ್ಯನಿಗೆ ಅಲ್ಲಮನು ಪ್ರಾಣಲಿಂಗಜ್ಞಾನವನ್ನುಂಟು ಮಾಡಿಕೊಳ್ಳಬೇಕೆಂದು ಬೋಧಿಸಿ, ಸಮಾಧಿಸ್ತನಾಗಿದ್ದ ಅನಿಮಿಷಯ್ಯನೆಂಬ ಶಿವಯೋಗಿಯ ದೃಷ್ಟಾಂತವನ್ನು ತೋರಿಸುತ್ತಲೇ ಅನಿಮಿಷಯ್ಯನ ಕೈಯಲ್ಲಿದ್ದ ಲಿಂಗವು ಪ್ರಭುವಿನ ಕೈಸೇರಿತು. ಆ ಲಿಂಗದೊಡನೆ ಆ ಯೋಗಿಯ ಪ್ರಾಣಕಳೆಯೂ ಸೇರಿದ್ದನ್ನು ಕಂಡ ಗೊಗ್ಗಯ್ಯ ಅಲ್ಲಮನಿಗೆ ಸಂಪೂರ್ಣ ಮನಸೋತು ಅವನಿಂದ ಉಪದೇಶ ಪಡೆದನು. ಕಾಯಕದಲ್ಲಿದ್ದು ಆಧ್ಯಾತ್ಮ ಸಾಧಿಸಲು ಸಾಧ್ಯವೆಂಬ ವಿಚಾರ ಅಲ್ಲಮನದು. ಮುಂದೆ ಬರುತ್ತಿದ್ದಂತೆ ಸತ್ತ ಅಣ್ಣನಿಗಾಗಿ ದುಃಖಿಸುವ ಮುಕ್ತಾಯಕ್ಕನಿಗೆ ಸಮಾಧಾನ ಹೇಳಿ 'ಅಜಗಣ್ಣನು ಗುಹೇಶ್ವರ ಲಿಂಗದ ಶರಣನಲ್ಲದೆ, ಮೊದಲು ಇದ್ದು ಆಮೇಲೆ ಹೋದವನಲ್ಲ ಆತನು ನಿತ್ಯನು' ಎಂಬ ತಿಳಿವು ನೀಡಿದ ಆಗ. ಮುಕ್ತಾಯಕ್ಕ ತಾನು ಮುಂದೇನು ಮಾಡಬೇಕೆಂಬುದನ್ನು ಕೇಳಲು ಪ್ರಭು "ಅಕ್ಕ ಕೇಳಾ ನಿನ್ನ ಹೆಸರಿಗೆ ತಕ್ಕ ಬಯಕೆಯ ನೀನು ಬಯಸಿದೆ, ಮಿಕ್ಕ ಭವಭಾರಿಗಳು ಬಲ್ಲರೆ ಲಿಂಗ ಮಾರ್ಗವನು ?" ಎಂದು ಆಕೆಯನ್ನು ಹೊಗಳಿ ವೀರಶೈವ ತತ್ವೋಪದೇಶ ದಯಪಾಲಿಸುತ್ತಾನೆ. ಪರಿಪರಿಯಿಂದ ಅಲ್ಲಮನನ್ನು ತಾತ್ವಿಕವಾಗಿ ಪ್ರಶ್ನಿಸಿದ ಮುಕ್ತಾಯಕ್ಕ ಮಹಾಶಿವಭಕ್ತೆ ಅಷ್ಟೇ ಅಲ್ಲ ಪರಮ ಪಂಡಿತೆಯಾಗಿಯೂ ವಿರಾಜಿಸುತ್ತಾಳೆ. ಹೀಗೆ ಅಲ್ಲಮಪ್ರಭು ಅವರವರ ದೃಷ್ಟಿಯಂತೆ ತನ್ನ ವರ್ತನೆಗಳಲ್ಲಿ ನಟನೆಯನ್ನು ತೋರಿದ್ದಾನೆ. ಮಾಯೆ, ಗೊಗ್ಗಯ್ಯ, ಮುಕ್ತಾಯಕ್ಕರೊಡನೆ ನಡೆದುಕೊಂಡ ನಟನೆಗಳೆಲ್ಲ ಒಂದೊಂದು ತಾತ್ವಿಕ ಹಿನ್ನೆಲೆಯನ್ನೊಳಗೊಳ್ಳುವಂತೆ ನಿರೂಪಿಸಿದ ಚಾಮರಸನ ಪಾಂಡಿತ್ಯ ಹಾಗೂ ಕಲಾತ್ಮಕತೆ ಆದರಣೀಯ. ಅನಿಮಿಷಯ್ಯನ ಪ್ರಸಂಗದಲ್ಲಂತೂ ಗುರುಕಾರುಣ್ಯ, ಲಿಂಗೋಪದೇಶ, ಶಿವಯೋಗ ಮುಂತಾದವುಗಳ ಮಹತ್ವವನ್ನು ಚಿತ್ರಿಸಿ, ಅಲ್ಲಮಪ್ರಭು ಪರಶಿವನಷ್ಟೇ ಅಲ್ಲ, ಆತನೊಬ್ಬ ಶ್ರೇಷ್ಠ ಶಿಷ್ಯನೂ ಹೌದೆಂಬುದನ್ನು ಸ್ಪಷ್ಟಪಡಿಸಿದ್ದಾನೆ.

ಅಲ್ಲಮಪ್ರಭು ತನ್ನ ಲೋಕ ಸಂಚಾರದಲ್ಲಿ ಸೊನ್ನಲಾಪುರದ ಸಿದ್ಧರಾಮ ಹಾಗೂ ಶ್ರೀ ಪರ್ವತದ ಗೋರಕ್ಷರನ್ನು ಸಂದರ್ಶಿಸಿದ ಪ್ರಸಂಗಗಳನ್ನು ಚಾಮರಸ ನಾಟಕೀಯವಾಗಿಸಿ, ಅಲ್ಲಮನ ಲೀಲೆಗೆ ತಕ್ಕ ಗಾಂಭೀರ್ಯವನ್ನು ಕಾಯ್ದುಕೊಂಡಿದ್ದಾನೆ. ಯೋಗಿಯಾದ ಸಿದ್ಧರಾಮನಿಗೆ ನಿಷ್ಕಾಮಬುದ್ಧಿ ಬಾರದ್ದಕ್ಕೆ ನೊಂದುಕೊಂಡ ಅಲ್ಲಮಪ್ರಭು ಆತನ ಶಿಷ್ಯರಾದ ಗುಡ್ಡರನ್ನು ಕೆಣಕಿ ಸಿದ್ಧರಾಮನನ್ನು

ಜರೆಯುತ್ತಾನೆ. ಆ ಶಿಷ್ಯರು ಸಿಟ್ಟಿಗೆದ್ದು ಅಲ್ಲಮನನ್ನು ಹಿಡಿಯಲು ಹೊರಟು, ನಿರುಪಾಯರಾಗುತ್ತಾರೆ ಅವರು ಒಗೆದ ಕಲ್ಲುಗಳಾವವೂ ಅಲ್ಲಮನಿಗೆ ಬಡಿಯದಿರುವುದನ್ನು ಕಣ್ಣಾರೆ ಕಂಡ ಅವರು ಅಚ್ಚರಿ ಪಟ್ಟು ಸಿದ್ಧರಾಮನಿಗೆ ದೂರಿತ್ತಾಗ ಸಿದ್ಧರಾಮನ ಹಣೆಗಣ್ಣು ಜ್ವಾಲೆ ಕಾರುತ್ತದೆ. ನಿಂದಿಸಿದವನನ್ನು ಭಸ್ಮ ಮಾಡುವ ಛಲ ಸಿದ್ಧರಾಮ ನದು. ಆಗ ಅಲ್ಲಮನು ಅವನ ರೋಷ ಕಂಡು " ಸುಡು ಸುಡು ಯತಿತ್ವವನು ರೋಷಾವೇಶವೇತಕೆ ಯೋಗಿಯಾದವಗೆ " ಎಂದು ತಾತ್ವಿಕವಾಗಿ ಯೋಗಿಯ ಗುಣ ಅರಹುತ್ತಾನೆ. ಸಿದ್ಧರಾಮನ ಬಿರುನುಡಿಗಳನ್ನು ಸಹಿಸುತ್ತಾನೆ. ಸಿದ್ಧರಾಮನ ಹಣೆಗಣ್ಣಿಗೆ ಪಟ್ಟಣವೇ ಉರಿಯುತ್ತಿದ್ದರೂ ಅಲ್ಲಮನಿಗೇನೂ ಸೋಂಕಲಿಲ್ಲ. ಜಗದುದ್ಧಾರಕನಾದ ಅಲ್ಲಮ ಆ ಉರಿಯನ್ನು ತನ್ನ ಅಂಗಾಲು ಕಣ್ಣಿನಿಂದ ತೊಡೆದು ಹಾಕಿದ. ' ಹಿಂಸಾಧರ್ಮ ಕರ್ಮದಲ್ಲಿ ಉರಿದೇಳುತಿಹ ಭವರೋಗಿ' ಎಂದು ಸಿದ್ಧರಾಮನನ್ನು ಅಲ್ಲಗಳೆದ. ಸಿದ್ಧರಾಮನಿಗೆ ಆಗ ಜ್ಞಾನೋದಯವಾಗಿ ಪಶ್ಚಾತ್ತಾಪಪಡುವ ಸನ್ನಿವೇಶ ಸಹಜತೆಯಿಂದ ಕೂಡಿದೆ. ಅಲ್ಲಮನ ಶಾಂತಚಿತ್ತದ ವರ್ತನೆ ಅತಿಮಾನವತೆಯ ಪರಮ ಘಟ್ಟ ಮುಟ್ಟುತ್ತದೆ. "ಹಿರಿಕಿರಿಯರಲ್ಲಿ ಬೇಧಭಾವವನ್ನೆಣಿಸದೇ ಸರ್ವಸಮತಾ ಭಾವದಿಂದಿರಬೇಕೆಂದೂ ಖ್ಯಾತಿ, ಲಾಭ ದಿಚ್ಛೆಗಳಿಂದ ಪ್ರಯೋಜನವಿಲ್ಲ"ವೆಂದು, ಸಿದ್ಧರಾಮನಿಗೆ ತಿಳಿಹೇಳಿ, ಕಾಯಕರಣದ ಸಂದು ಸಂಬಂಧವನು ಸೂಚಿಸಿ, ಜೀವಪರಮರೊನ್ನೊಂದು ಮಾಡುವ ಶಕ್ತಿ ಭಕ್ತಿಯ ಹೊಂದಿಕೆಯನುಪದೇಶ ಮಾಡಿ, ಕಲ್ಯಾಣಕ್ಕೇ ಕರೆತರುತ್ತಾನೆ. ಬಸವಾದಿ ಪ್ರಮಥರ ಸಾಧನೆಯ ಹಂತಗಳನ್ನು ತೋರಿಸಿ ಆತನಿಗೆ ದಿವ್ಯಮಾರ್ಗ ತೆರೆಯುತ್ತಾನೆ-

ಕಲ್ಯಾಣದಲ್ಲಿ ಇನ್ನು ಸಾಧಕರಾಗಿದ್ದ ಬಸವಣ್ಣ,ಮರುಳಶಂಕರ ದೇವ,ಅಕ್ಕಮಹಾದೇವಿ ಮುಂತಾದವರನ್ನೂ ಪುಟಕ್ಕಿಟ್ಟ ಚಿನ್ನವಾಗಿಸಿ ಅವರೊಂದಿಗೆ ತನ್ನ ಲೀಲೆಯನಾಡಿದ ಪ್ರಸಂಗಗಳಲ್ಲಿ ಚಾಮರಸನ ಪಾಂಡಿತ್ಯ ಹಸಿರಾಗಿದೆ. ಗೋರಕ್ಷಕನ ಪ್ರಸಂಗವಂತೂ ಯೋಗ ಯೋಗಗಳಲ್ಲಾದ ಅಂತರಂಗದ ಕಾಳಗವೇ ಆಗಿದೆ. ತನ್ನ ಯೋಗ ಬಲದಿಂದ ವಜ್ರದೇಹಿಯಾದ ಗೋರಕ್ಷಕನು ತನುವಿನ ಬಗ್ಗೆ ತಾಳಿದ ಮೋಹವನ್ನು ಬಿಡಿಸಿದ ಸನ್ನಿವೇಶ ಸುಂದರ. ಅಷ್ಟೇ ನಾಟಕೀಯ. ಅಲ್ಲಮನು 'ಬಯಲದೇಹಿ' ಎಂಬುದನ್ನು ಚಾಮರಸ ಪುನಃ ಸೃಷ್ಟಿಸಲು ಹೊರಟಂತಿದೆ. ಗೋರಕ್ಷಕನ [illegible] ಖಡ್ಗದಿಂದ ಹೊಡೆಯಲಾಗಿ ನಾದ ಹುಟ್ಟಿತು. ಆದರೆ ಗೋರಕ್ಷಕನೇ ಖಡ್ಗದಿಂದ ಅಲ್ಲಮನನ್ನು ಹೊಡೆಯಲು ಸಾಹಸವೂ ಕೂಡ ಹುಟ್ಟಲಿಲ್ಲ. ಖಡ್ಗವನ್ನು ಬಯಲಿನಲ್ಲಿ ಬೀಸಿದಂತಾಗಿ ಗೋರಕ್ಷಕನ ಅಹಂಭಾವಕ್ಕೆ ಕೊನೆಯಾಯಿತು. ಆಗ ಅಲ್ಲಮನು ಆತನಿಗೆ ಶರೀರವನ್ನು ಬಲಪಡಿಸುವುದೇ ಮೋಕ್ಷವಲ್ಲವೆಂಬುದನ್ನು ತಿಳಿಸಿ ಮೋಕ್ಷದ ಮಾರ್ಗ ತೋರಿದನು. ಹಾಗೆಯೇ ತನ್ನ ಸಂಚಾರದಲ್ಲಿ ಕಿರಾತನನಿಗೆ ಜೀವಹಿಂಸೆ ಪಾಪವೆಂದು ಬೋಧಿಸಿ ಸನ್ಮಾರ್ಗಕ್ಕೆ ತಂದದ್ದು. ಕಾಡಿನಲ್ಲಿ ವ್ಯಸನ ಕಟ್ಟಿಕೊಂಡು ಜಪತಪಗಳಲ್ಲಿ ನಿರತರಾದ ಋಷಿಗಳಿಗೆ ಆತ್ಮದ ನಿಲುವನ್ನು ಅರುಹಿದ್ದು, ಈ ಮುಂತಾದ ಪ್ರಸಂಗಗಳು ಅಲ್ಲಮನು ಜೀವ ದಯಾಪರನಾಗಿದ್ದನೆಂಬುದಕ್ಕೆ ಆಧಾರ ನೀಡುತ್ತವೆ.

ಈ ಎಲ್ಲ ಪ್ರಸಂಗಗಳಲ್ಲಿ ಅಲ್ಲಮನು ತೋರಿದ ವಿಶ್ವಪ್ರೇಮ, ಪ್ರಾಣಿ ದಯೆ, ಅನುಕಂಪಗಳೂ ಆದರ್ಶಪ್ರಾಯವಾಗಿವೆ. ಕಾಮವೇ ಜೀವನದ ಪರಮೋದ್ದೇಶವೆಂದು ತಿಳಿದ ಮಾಯೆ, ಬದುಕಿನಲ್ಲಿ ಕಾಯಕ ತತ್ವವೇ ಶ್ರೇಷ್ಠವೆಂದು ನಂಬಿದ ಗೊಗ್ಗಯ್ಯ, ಕೀರ್ತಿಯೇ ಜೀವಿತದ ಕೊನೆಯೆಂದು ಭಾವಿಸಿದ ಸಿದ್ಧರಾಮ, ಕಾಯಯೋಗವೇ ಕೊನೆಯದೆಂದು ನಂಬಿದ ಗೋರಕ್ಷ, ನಾ ಮಾಡಿದೆನೆಂದು ಅಹಂಭಾವದಿಂದಿದ್ದ ಬಸವಣ್ಣ, ಮುಂತಾದ ಮಹಾಶಿವಶರಣರೆನ್ನಿಸಿಕೊಂಡವರಿಗೂ ಸಾಧನೆಯ ಪರಮ ಗುರಿ ಅರುಹಿದ ಅಲ್ಲಮಪ್ರಭು ಲೋಕ ಪಾವನನೆನಿಸುತ್ತಾನೆ.

ಒಟ್ಟಿನಲ್ಲಿ ಸಾಧಕರನ್ನು ಮೀರಿದ ಅಗಾಧಸಿದ್ಧಿ ಅಲ್ಲಮನಿಗೆ ಹುಟ್ಟಿನಿಂದಲೇ ಬಂದಿವೆಂಬುದನ್ನು ಚಾಮರಸನು ಕೊನೆಯವರೆಗೂ ಸಾಧಿಸ ಹೊರಟಿದ್ದಾನೆ. ತನ್ನ ನಟನೆಯಲ್ಲಿಯೇ ಸಾಧಕರ ನಿಜಸ್ವರೂಪ ತಿಳಿದು ತನ್ನ ಲೀಲೆಯನ್ನು ತೋರಿಸುವ ವ್ಯಕ್ತಿತ್ವ ಅಲ್ಲಮನದಾಗಿದೆ. ಜನ ಬದುಕಬೇಕೆಂದು ಬರೆದ ವೀರಶೈವ ಕವಿಕಾವ್ಯ ಉದ್ದೇಶ ಆದರ್ಶಗಳಿಗೆ, ಚಾಮರಸನೂ ಸಹಕರಿಸಿದ್ದಾನೆ. ಪರಮ ವೈರಾಗ್ಯಮೂರ್ತಿ, ಜ್ಞಾನನಿಧಿ, ಶೂನ್ಯಸಿಂಹಾಸನಾಧೀಶ್ವರ ಅಲ್ಲಮಪ್ರಭುವಿನ ಘನತೆ, ಗೌರವಗಳಿಗೆ ಬಾಧೆ ತಟ್ಟದ ಹಾಗೆ ಕಾವ್ಯದುದ್ದಕ್ಕೂ ವ್ಯಕ್ತಿಮಹಿಮೆಯನ್ನು ಮೂರ್ತಗೊಳಿಸಿದ ಶ್ರೇಯ ಅವನದಾಗಿದೆ.

ನಿಜಗುಣ ಶಿವಯೋಗಿ

ಲೇಖಕರು :
ಪ್ರೊ. ದೇವೇಂದ್ರಕುಮಾರ್ ಹಕಾರಿ,
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಚರಿತ್ರೆಗೆ ಪರಿಮಿತಿಯಿದೆ; ಆದರೆ ಚಾರಿತ್ರಿಕ ಪುರುಷರು ಈ ಪರಿಮಿತಿಗಳನ್ನು ದಾಟಿ ಚಿರಂತನವಾಗಿ ಉಳಿಯುತ್ತಾರೆ. ನಿಜಗುಣರು ಅಂಥ ಸೀಮಾಪುರುಷರು. ಪರಿಮಿತಿಗಳನ್ನು ಮೀರಿ ಮಿಡಿದ ಅವರ ಹೃದಯ ಮಾನವೀಯ ಪರಮಸತ್ಯಗಳ ತವನಿಧಿ. ಅವರು ಅನಿಮಿತ್ತ ಬಾಂಧವರು, ಅನುಪಮ ಆನಂದದ ಕಡಲು, ವಿನಯಾದಿ ಗುಣಮಣಿ ವಿಭೂಷಿತರು. ಜನನಮರಣಗಳ ಲೆಕ್ಕವನ್ನು ವಿಶ್ಲೇಷಿಸಿ ಅರಿವು ಇರವುಗಳನ್ನು ಸಮನ್ವಯಗೊಳಿಸಿದ ಅಧಿಕ-ವಿದ್ಯಾ ಸಂಪನ್ನರು. ಗುರುಬೋಧೆ ಮಹತ್ತರವಾದುದು–ಅದರ ಮೂಲಕ ಪರಾತ್ಪರವಾದ ದಿವ್ಯಚಿತ್ತು ತನ್ನ ಇರವು ಎಂದು ಸಾರಿದ ಮಹಾ ಅನುಭಾವಿಗಳು. ಅವರ ಒಂದು ಪ್ರಾರ್ಥನೆ ಹೀಗಿದೆ :

> 'ಬೇಡುವೆನಭವ ನಿಮ್ಮನು ಭವಭವದೊಳು
> ಮಾಡೆನಗೊಲಿದು ಸುಗುಣಸಂತತಿಯನು'

ಜನ್ಮಜನ್ಮಾಂತರಗಳಲ್ಲಿ ನಿಮ್ಮನ್ನು ಬೇಡುವುದು ಸುಗುಣಗಳ, ದೇವ ಕೃಪೆಯಿಟ್ಟು ನೀಡು. ಕಷ್ಟಕಾಲದಲ್ಲಿ ಧೈರ್ಯ, ಐಶ್ವರ್ಯವಂತನಾದಾಗ ವಿನಯ, ಯೌವನಕಾಲದಲ್ಲಿ ಸಂಯಮ, ಹಿಡಿದ ನಿಯಮವನ್ನು ಬಿಡದಂತೆ–ಪರಿಪಾಲಿಸುವ ಛಲ, ಇಂಥ ಸದ್ಗುಣಗಳನ್ನು ನೀಡು.

ಯಾರಿಗೂ ದೇಹಿ ಎನ್ನದ ಸಾಹಸ, ಎಂಥ ಪ್ರಸಂಗದಲ್ಲೂ ಸುಳ್ಳುಹೇಳದಂಥ ಸತ್ಯನಿಷ್ಠೆ, ಶಾಶ್ವತ ಕಾರ್ಯ ಸಾಧಿಸುವ ಪ್ರಾಮಾಣಿಕತೆ, ಶಾಂತಸ್ವಭಾವಗಳನ್ನು ಕರುಣಿಸು. ಇರುವ ಸಂಪತ್ತನ್ನು ಹಂಚಿಕೊಂಡು ಉಣ್ಣುವ ಉದಾರ ಹೃದಯ, ಹಿತಭಾವದಿಂದ ಮಾಡುವ ದಾನಗುಣ, ಅರಿವಿನಲ್ಲಿ ನಂಬುಗೆ ಹೃದಯ ವಿಕಾಸಗಳನ್ನು ಕೃಪೆಗೈ. ಕೋಪವಿಲ್ಲದ ತಪೋಬುದ್ಧಿ, ಪರಸ್ತ್ರೀ ವ್ಯಾಮೋಹಕ್ಕೆ ಸಿಲುಕದ ಸಂಯಮ, ಎದೆಗುದಿಯನ್ನು ಉಂಟುಮಾಡದ ವಂಚನೆಯಿಲ್ಲದ ಸಂಸಾರಸುಖ, ಶಾಂತಿಪ್ರದ ಧರ್ಮ ಚ್ಯುತಿಯಿರದ ಭಕ್ತಿ, ಗುರುಸೇವೆ ಮುಂತಾದ ಸದ್ಗುಣಗಳನ್ನು ದಯಪಾಲಿಸು.

ಈ ಲೋಕದ ನಡವಳಿಕೆಗೆ ಒಂದು ಕೈಪಿಡಿಯಂತಿರುವ ಈ ಪ್ರಾರ್ಥನೆ, ನಿಜಗುಣರು ಸಾಧಿಸಬಯಸಿದ ಲೌಕಿಕ ಧರ್ಮಕ್ಕೆ ಅಥವಾ ಮಾನವೀಯ ಧರ್ಮಕ್ಕೆ ಸಾಕ್ಷಿಯಾಗಿದೆ. ಎಂದೂ ಚ್ಯುತಿಯಿರದ ಭಕ್ತಿಯಿಂದ ಬದುಕಿಗೆ ಶಾಂತಿಪ್ರದವಾದ ಸಹಜರೀತಿಯ ಧರ್ಮಸ್ವರೂಪವನ್ನು ಅಳವಡಿಸುವುದು ನಿಜಗುಣರ ದೃಷ್ಟಿಯಾಗಿತ್ತು. ಅವರು ಶಾಶ್ವತವಾದ ಗುಣಗಳನ್ನು ನೀಡುವಂತೆ ಪ್ರಾರ್ಥನೆ ಮಾಡುತ್ತಾರೆ. ಸಂಪತ್ತು ಅಳಿದುಹೋಗಬಹುದು; ಆದರೆ ಹೃದಯಸಂಪತ್ತು ಭಕ್ತಿ ಅಳಿದೀತೇ ? ಅದು ಅವಿನಾಶಿ. ಆದರಿಂದಲೇ ಸಮಷ್ಟಿ ಕಲ್ಯಾಣ ಸಾಧ್ಯ. ಶ್ರೇಷ್ಠ ಗುಣ ಸಂಪಾದನೆಯೇ ಜೀವನದ ಪರಮಗುರಿ ಎಂದು ಅವರ ಈ ಪ್ರಾರ್ಥನೆ ಸೂಚಿಸುತ್ತದೆ. ಭಕ್ತಿ ಧರ್ಮ ನಿಜಗುಣರ ಜೀವನ ಮುನ್ನಡೆದ ಪಥ; ಅನುಭಾವದ ಅಭಿವ್ಯಕ್ತಿ ಅವರ ಕೃತಿ; ಸಂಗೀತ ಅವರ ಅಂತರಂಗದ ಸ್ಪಂದನೆ. ನಿಜಗುಣರು ಧರ್ಮ–ಸಾಹಿತ್ಯ–ಸಂಗೀತಗಳ ತ್ರಿವೇಣಿಸಂಗಮ.

ಸುಮಾರು 1300 ರಲ್ಲಿ ಕೊಳ್ಳೇಗಾಲ ಪ್ರದೇಶದ ಚಿಲಕವಾಗಿ ಭಾಗದ ಅರಸನಾಗಿದ್ದರಬಹುದಾದ ನಿಜಗುಣರು ಕಾಲಾನಂತರದಲ್ಲಿ ಪರಮವೈರಾಗ್ಯಮೂರ್ತಿಗಳಾಗಿ, ಆತ್ಮಸಾಕ್ಷಾತ್ಕಾರ ಪಡೆದ ಶಿವಯೋಗಿಗಳು. ಅವರ ಜೀವನದ ವಿಷಯದಲ್ಲಿ ಅನೇಕ ಐತಿಹ್ಯಗಳಿವೆ. ಒಂದು ಉಚಿತವೆನ್ನಬಹುದಾದ ಐತಿಹ್ಯ ಹೀಗಿದೆ :

ನಿಜಗುಣರು ಎಲ್ಲ ವಿಧದ ಐಹಿಕ ಸುಖಸಂಪತ್ತುಗಳನ್ನು ಪಡೆದಿದ್ದರೂ, ಹುಟ್ಟಿನಿಂದಲೇ ಒಂದುರೀತಿಯ ಅಂತರಂಗದ ಅತೃಪ್ತಿ, ಒಂದುಬಗೆಯ ಅಸಮಾಧಾನ ಅವರನ್ನು ಕಾಡುತ್ತಿತ್ತು- ಭೌತಿಕ ಸುಖಸಂಪದಗಳು ವೇದಾದಿಶಾಸ್ತ್ರಾಧ್ಯಯನಗಳು–ಸಂಗೀತಾದಿ ಲಲಿತಕಲೆಗಳು ಇವಾವವೂ ನೀಡಲಾಗದಂತಹ ಒಂದು ಅತೀಂದ್ರಿಯ ಅನುಭವ, ದಿವ್ಯತೆಯ ದರ್ಶನಕ್ಕಾಗಿ ಅವರು ಪರಿತಪಿಸುತ್ತಿದ್ದರು. ಅವರ ಆತ್ಮ ಅನಂತತೆಗಾಗಿ ಹಸಿದಿತ್ತು. ರಾಜಗುರುಗಳು ಅವರ ಈ ಹಂಬಲಕ್ಕೆ ಪ್ರೇರಣೆ ಕೊಡುತ್ತಾರೆ. ಆದರೆ ತಮ್ಮನ್ನು ಅಂಥ ದಿವ್ಯ ಪಥದ ಕಡೆಗೆ ಮುನ್ನಡೆಸಿಕೊಂಡು ಹೋಗುವ ಗುರು ದೊರಕಿಯಾನೇ ಎಂದು ಹಗಲಿರುಳು ಅವರು ತವಕಿಸುತ್ತಿದ್ದರು.

ಒಂದುದಿನ ಅವರ ಕನಸಿನಲ್ಲಿ ಒಬ್ಬ ತೇಜಸ್ವಿ ಪುರುಷ ಬಂದು ನಿನ್ನ ಗುರು ಬರುತ್ತಾನೆ; ಅವರನ್ನು ಗುರುತಿಸು ಎಂದು ಹೇಳಿ ಮಾಯವಾಗುತ್ತಾನೆ. ಕಾಲ ಗತಿಸುತ್ತದೆ. ಒಮ್ಮೆ ಅನಿರೀಕ್ಷಿತವಾಗಿ ಅರಮನೆಗೇ 'ಹಸಿವೆ' ಎಂದು ಬಂದ ವೃದ್ಧನನ್ನು ಅಂತಃಪುರಕ್ಕೆ ಕಳಿಸಲಾಗುತ್ತದೆ. ವೃದ್ಧ ಸನ್ಯಾಸಿಯನ್ನು ಕಂಡ ನಿಜಗುಣರ ಅರಸಿ ಅರಸರು ಬರುವವರೆಗೆ ತಡೆಯಲು, ಬಳಿಕ ಬಿಸಿ ಪಕ್ವಾನ್ನ ಸ್ವೀಕರಿಸಲು ಕೇಳಿಕೊಳ್ಳುತ್ತಾಳೆ. 'ಇದ್ದುದನ್ನು ಈಗಲೇ ಕೊಡು' ಎನ್ನುತ್ತಾನೆ ವೃದ್ಧ. ಸರಿ, ದೇವರಿಗೆ ಎಡೆಮಾಡಿ ತಂದರಾಯಿತು ಎಂದು ಅರಸಿ ಒಳಗೆ ಹೋಗಿ ಪಕ್ವಾನ್ನ ತರುವಷ್ಟರಲ್ಲಿ ಸ್ವಲ್ಪ ತಡವಾಗುತ್ತದೆ. ಬಂದು ನೋಡುತ್ತಾಳೆ. ಸನ್ಯಾಸಿ ಹೋಗಿರುತ್ತಾನೆ. ಬದಲು ಅವನು

ಕುಳಿತ ಜಾಗೆಯಲ್ಲಿ ಒಂದು ಚಿನ್ನದ ತಂಬುಗೆ. ವಿಸ್ಮಿತಳಾದ ಅರಸಿ ಕೂಡಲೇ ಅದನ್ನು ಆ ಸ್ಥಾನಕ್ಕೆ ಕಳಿಸುತ್ತಾಳೆ. ನಿಜಗುಣರ ದೃಷ್ಟಿಗೆ ಅದೊಂದು ಅಪೂರ್ವವಾದ ಗುರುವಿತ್ತ – ಕುರುಹಾಗಿ ಗೋಚರಿಸುತ್ತದೆ. ಆ ಸನ್ಯಾಸಿಯನ್ನು ಎಷ್ಟು ಹುಡುಕಿಸಿದರೂ ಲಭ್ಯವಾಗಲಿಲ್ಲ. ಸಂಸಾರದಲ್ಲಿ ಒಂದು ರೀತಿಯ ನಿರಾಸಕ್ತಿ ಉಂಟಾಯಿತು. ಅವರನ್ನು ಹುಡುಕಬೇಕು, ಪಡೆಯಬೇಕು ಎಂದು ಕಾತರಿಸಿದರು. ಅವರ ಪತ್ನಿ ನಿಜಗುಣರ ಆಂತರಿಕ ತಳಮಳವನ್ನು ಅರ್ಥ ಮಾಡಿಕೊಂಡು ಪ್ರೇರಕಶಕ್ತಿಯಾಗಿ ನಿಲ್ಲುತ್ತಾಳೆ. ರಾಜ್ಯ ಸಂಪದವನ್ನು ತೊರೆದ ನಿಜಗುಣರು ತಮ್ಮ ಗುರುವನ್ನು ಅರಸುತ್ತ ಹೊರಡುತ್ತಾರೆ. ಕೆಲವು ವರುಷದ ಬಳಿಕ ದೊರೆತ ಒಬ್ಬ ಪ್ರಚ್ಛನ್ನ ವೇಷಧಾರಿ ಶಂಭುಲಿಂಗನೇ ಅವರ ಪಾಲಿಗೆ ಗುರು. ಅವರ ಜೊತೆ ಪಯಣ. ಸುಣ್ಣಕ್ಕಾಗಿ ಈ ಶಿಷ್ಯನನ್ನು ಒಬ್ಬ ಸಿರಿವಂತ ನೃತ್ಯಗಾತಿಯ ಮನೆಯಲ್ಲಿ ಒತ್ತೆಯಿಟ್ಟ ಶಂಭುಲಿಂಗ ಹೋಗಿಬಿಡುತ್ತಾನೆ. ಅರಮನೆಯಲ್ಲಿದ್ದ ವೃದ್ಧೆಯ ಸೇವೆಯನ್ನು ಚ್ಯುತಿ ಬಾರದೆ ಪೂರೈಸುವ ಹೊತ್ತಿಗೆ ಶಂಭುಲಿಂಗರು ಬಂದು ನಿಜಗುಣರನ್ನು ಕರೆದುಕೊಂಡು ಹೋಗುತ್ತಾರೆ. ಮಿಂಚಿನಲ್ಲಿ ಮಿಂಚು ಬೆರೆತ ಅನುಭವ ನಿಜಗುಣರಿಗೆ.

ಶಂಭುಲಿಂಗರು ಲಿಂಗದೊಳಗಾಗುತ್ತಾರೆ. ನಿಜಗುಣರು ನಾದದ ನೆಲೆ ನಿಜದ ಆಳ ಅರಿತು ಆತ್ಮಸಾಕ್ಷಾತ್ಕಾರ ಪಡೆದ ಮಹಾಯೋಗಿಗಳಾಗಿ ಹಿಂದುರಿಗಿ ಅರಮನೆಗೆ ಬಂದು ಕೊನೆಯುಸಿರಿಗಾಗಿ ಕಾದಿದ್ದ ಪತ್ನಿಗೆ ದರ್ಶನವಿತ್ತು ಲೌಕಿಕಕಾರ್ಯ ಮುಗಿಸಿ ಮತ್ತೆ ಶಂಭುಲಿಂಗನ ಬೆಟ್ಟ ಸೇರುತ್ತಾರೆ. ಆತ್ಮಾನುಭೂತಿಯ ಪರಮಾನಂದದಲ್ಲಿ ಲೀನವಾಗುತ್ತಾರೆ. ಪರಮಾರ್ಥ ಪಥದಲ್ಲಿ ಬಹುದೂರ ಸಾಗಿದ ಸಿದ್ಧಿಯನ್ನೂ ಹೊಂದಿದ ನಿಜಗುಣರು ಲೌಕಿಕವನ್ನು ಎಂದೂ ಕಡೆಗಣಿಸುವಂತೆ ಹೇಳಲಿಲ್ಲ. ಎರಡೂ ಒಡನೊಡನೆ ಒಡವೆರೆದು ಮುನ್ನಡೆಯಬೇಕು. ಹಾಗೆ ಯಾರು ತಮ್ಮ ಜೀವನ ರೂಪಿಸಿಕೊಳ್ಳುತ್ತಾರೆ ಅವರು ಜಾಣರು.

'ಜಾಣನು ಲೌಕಿಕ ಪರಮಾರ್ಥವೆರಡನು
ಮಾಣದೆ ಕೂಡಿ ನಡೆಸುತಿಹನಿಂತು'.

ಅದು ಹೇಗೆ ?

"ಕೊಳನ ಹೊಕ್ಕರೆ ಒಡಲಿನ ತಂಪು, ಬಿಸಿಲಿನ
ಜಳನು ಮಿಕ್ಕಪೈಯೊಳು ಕಾಣ್ಬಂತೆ
ತಿಳಿವಿನ ಸುಖವನು ವಿಷಯಾಭಿರತಿಯ ಸಂ
ಗೊಳಿಸುತೆ ಸಮಯವೊಂದರೊಳಯ್ದುತಿಹನು"

ಕೊಳದಲ್ಲಿ ಹೊಕ್ಕರೆ, ನೀರಿನಲ್ಲಿರುವ ಶರೀರದ ಭಾಗದಿಂದ ತಂಪು, ಮಿಕ್ಕ ಭಾಗದಿಂದ ಬಿಸಿಲಿನ ಜಳ ಸಮನಿಸಿ ಅನುಭವಕ್ಕೆ ಬರುವಂತೆ ಇರವಿನ ಸವಿ, ಅರಿವಿನ ಸುಖಗಳು ಧರ್ಮಾಚರಣೆಯಲ್ಲಿ ಅಳವಟ್ಟು ಪರಮಾರ್ಥದ ಅನುಭಾವ ತನ್ನಲ್ಲಿ ಹೊಮ್ಮಬೇಕು. ಪರಮಾರ್ಥ ಪಥದ ದೀಪಸ್ವರೂಪ ಗುರು. ಶ್ರೀ ಗುರುವಿನ ಕೃಪೆಯನ್ನು ನಿಜಗುಣರ ಒಂದು ಹಾಡು ವಿವರಿಸುವ ರೀತಿ:

ಶ್ರೀ ಗುರುವೆ ನೀನೆ ಶರಣಾಗೆನಗೆ ನಿಜಸುಖದ
ಸಾಗರನೆ ಸಕಲ ವಿದ್ಯಾಗುಣ ನಿವಾಸ ॥
ಮಲದ ಮರವೆಯನು ಮಾಯಾಮೋಹವನು ಕರ್ಮ
ಕುಲದ ಸುಖದುಃಖವನು ವಚನ ಬಂಧವನು
ಸತಿ ತಿರೋಹಿತಿಯ ಸಾಹಸವೆಂಬುದನು ಬಿಡಿಸಿ ಎನ್ನ
ಬೋಧಾ ರೂಪವನೆ ಬೋಧಿಸಿದ ॥

ಗುರು ಪರಮಾರಾಧ್ಯಮೂರ್ತಿ. ಪ್ರತ್ಯಕ್ಷ ಪರಶಿವ. ನಿಜಸುಖದ ಕಡಲು. ಸಕಲ ಅರಿವಿನ ನೆಲೆ. ಮನದ ಮಲಿನವ ಕಳೆದು ಪ್ರಾಣದ ನಿಜಸ್ವರೂಪವನ್ನೇ ಬೋಧಿಸುವ ದರ್ಶನ ಮಾಡಿಸುವ ಮಹಾನುಭಾವ. ಪರಮಾತ್ಮ ಎನ್ನುವುದು ಜೀವನದ ಪರಮ ಸತ್ಯ. ಅಂತರಂಗದಲ್ಲಿ ಅಮೂರ್ತವಾಗಿರುವ ಆತ್ಯಂತಿಕ ಚೈತನ್ಯ. ಅದು ಮತ ತರ್ಕಗಳಿಗೆ ನಿಲುಕಿಲ್ಲ. ಶಾಸ್ತ್ರಗಳಿಗೆ ದೊರಕಿಲ್ಲ. ಮನುಮುನಿಗಳು ದೇವತೆಗಳು ಅದನ್ನು ಕಂಡಿಲ್ಲ. ಇಂಥಹ ಘನಚೈತನ್ಯವನ್ನು ಅಂಗೈಯಲ್ಲಿ ತಂದಿರಿಸಿ ಪ್ರತ್ಯಕ್ಷ ತೋರಿಸಿದ ಮಹಾನುಭಾವ ಗುರು. ಆದುದರಿಂದ ಗುರುವಿನ ಉಪದೇಶವನ್ನು ಚೆನ್ನಾಗಿ ಕ್ರಿಯೆಯಲ್ಲಿ ಸದಾಚಾರದಲ್ಲಿ ಸಮನ್ವಯಗೊಳಿಸಬೇಕು. ಶ್ರೀ ಗುರುವಿನ ವಚನ ಉಪದೇಶ ಅದನ್ನು ಅರಿತು ಆಚರಿಸಿದಾಗ ಲಾಲಿಸಿ ಪಾಲಿಸಿದಾಗ ನರರಿಗೆ ತಮ್ಮ ನಿಜಸ್ವರೂಪ ಎಟಕುತ್ತದೆ.

'ದುರಿತ ಕರ್ಮವನ್ನು ಮಾಡಬೇಡ; ಪುಣ್ಯವನ್ನೇ ಮಾಡು. ಹರನ ಅಡಿ ಹಿಡಿ. ಸತ್ಯದಲ್ಲಿ ಅಚಲ ನಿಷ್ಠೆಯಿರಲಿ. ಶಾಂತರೊಡನೆ ಆಡು. ಜೀವರಲ್ಲಿ ಕರುಣೆಯಿರಲಿ. ನೀತಿವಿದನಾಗು. ನಂಬಿದವರನ್ನು ಕಾಪಾಡು. ಯಾರನ್ನೂ ತಿರಸ್ಕರಿಸಬೇಡ. ಮನಸ್ಸಿಗೆ ಬಂದಂತೆ ನಡೆಯಬೇಡ. ಇಹಲೋಕದ ಸುಖಗಳಿಗಾಗಿ ಕೊರಗಬೇಡ. ಕಾಮಾದಿಗಳನ್ನು ಗೆಲ್ಲು. ಜನ್ಮ ಇದೇ ಕಡೆ ಎಂದು ನಂಬು. ಪುಸಿಯದಿರು. ಕಷ್ಟ ಬಂದು ಮುತ್ತಿದರೆ ಅಂಜಬೇಡ. ನಿಜದ ಅರಿವು ಸಮನಿಸಿದ ಬಳಿಕ ಹೃದಯದಲ್ಲಿ ಅಭಿನ್ನ-ಅದ್ವೈತದ ಸ್ಥಿತಿ ನೆಲೆಸುತ್ತದೆ. ಅದ್ವೈತವನ್ನು ಬಾಹ್ಯದಲ್ಲಿ ಬಳಸಬೇಡ. ಗುರುವಿನ ಉಪದೇಶವನ್ನು ಕೇಳಿದ ಮನಸ್ಸು ಅದನ್ನು ಆಳವಾಗಿ ತನ್ನ ಒಳಕ್ಕೆ ಎಳೆದುಕೊಳ್ಳುವುದಿಲ್ಲ. ಅದು ಮತ್ತೆ ಮತ್ತೆ ಈ ಲೋಕದ ಭ್ರಮೆಗಳಲ್ಲಿ ಸುಳಿದು ಮಾಯಾಮೋಹಗಳಲ್ಲಿ ಸಿಲುಕುತ್ತದೆ. ತನ್ನ ನಿಜಸ್ವರೂಪವನ್ನು ಮರೆಯುತ್ತದೆ. ಅದಕ್ಕೆ ನಿಜಗುಣರು ' ಆರು ನಾನೆಂದು ವಿಚಾರಿಸು' ಎನ್ನುತ್ತಾರೆ. ಈ ಲೋಕದ ಸುಖಭೋಗಗಳು ನಮ್ಮ ನಿಜಸ್ವರೂಪ ದರ್ಶನಕ್ಕೆ ಸಹಾಯಕವಾಗಬೇಕು. ಆದರೆ ಅನೇಕ ಸಲ ವಿಸ್ಮೃತಿಯಿಂದ ಮನಸ್ಸು ಪರಮಾತ್ಮ ಪ್ರಜ್ಞೆಯಿಂದ ವಂಚಿತವಾಗುತ್ತದೆ, ವಿಮುಖವಾಗುತ್ತದೆ. ಸಂಸಾರ ಸಮವಾಗುವುದಿಲ್ಲ; ಪ್ರೇರಕವಾಗುವುದಿಲ್ಲ; ಆಗ ಮನಸ್ಸು ಜೊತೆಗೆ ಬದುಕು 'ವಿಷಮ'ವೆನಿಸುತ್ತದೆ. ಆದುದರಿಂದ 'ಆರುನಾನೆಂದು ವಿಚಾರಿಸು-ವಿಷಮ ಸಂಸಾರವಿದನು ಕನಸೆಂದರಿ ' ಎನ್ನುತ್ತಾರೆ. ಮನಸ್ಸನ್ನು ಕೋಗಿಲೆಗೆ ಹೋಲಿಸಿ ಅದನ್ನು ಪರಿಪರಿಯಾಗಿ ರಮಿಸುತ್ತಾರೆ, ತಿಳಿಹೇಳುತ್ತಾರೆ, ವಾತ್ಸಲ್ಯದಿಂದ ಯಾಚಿಸುತ್ತಾರೆ.

'ಕೋಗಿಲೆ, ಚೆಲ್ವಕೋಗಿಲೆ, ಮುದ್ದು ಕೋಗಿಲೆ. ಜಾಣ ಕೋಗಿಲೆ' ಎಂದು ಪ್ರೀತಿಯಿಂದ ಸಂಬೋಧಿಸಿ ಪರಮ ಅರ್ಥದ ಪ್ರಜ್ಞೆಯನ್ನು ಹೊಂದಲು ಕರೆಕೊಡುತ್ತಾರೆ. ಜೀವನವನ್ನು ನೋಡು ವಲ್ಲಿ ಮನುಷ್ಯ ಚೈತ್ರದೃಷ್ಟಿಯನ್ನು ಸೃಷ್ಟಿಸಿಕೊಳ್ಳಬೇಕು. ಚೈತ್ರ ದಲ್ಲಿ ಕೋಗಿಲೆ ಮತ್ತೂ ಚೆಲ್ವಾಗಿರುತ್ತದೆ; ವಸಂತದ ಚಿಗುರು ಮೆಲಿದ ಅದರ ಕೋಮಲ ಕಂಠದಲ್ಲಿ ಪಂಚಮ ಸ್ವರ ಮಾಧುರ್ಯವಿದೆ. ಕೋಗಿಲೆಯ ಕೂಜನ ವಸಂತ ಸೌಂದರ್ಯದ ಸೂಚನೆ. ಪರಮಾರ್ಥ ಸಾಧನೆಯ ಪರಮಾತ್ಮ ಸಾಕ್ಷಾತ್ಕಾರದ ನಿಲವು ಮನಸ್ಸಿಗೆ ಎಟಕು ವುದು ಜೀವನದಲ್ಲಾಗುವ ಪರಮಸೌಂದರ್ಯದ ಅರಿವಿನಿಂದ.

ಇಂಥ ಒಂದು ವಿವೇಚನೆಯಿಂದ ಮೊದಲುಗೊಂಡ ಅವರ ವಿಚಾರ ಮಥನ ಗುರುವಚನ ದೀಪ್ತಿಯ ಪ್ರಕಾಶದಲ್ಲಿ ಅರಳುತ್ತದೆ. ಗುರುವಚನದಿಂದ ಅಧಿಕವಾದ ಸುಧೆ ಬೇರೆ ಯಾವುದೂ ಇಲ್ಲ. ವ್ಯಾಮೋಹಕ್ಕಿಂತ ಬೇರೆ ಅಜ್ಞಾನದ ಬೀಜವಿಲ್ಲ. ಪಡೆದ ಅಪವಾದ ಕ್ಕಿಂತ ಬೇರೆ ಮರಣವಿಲ್ಲ. ಶಾಂತಿಗಿಂತ ಬೇರೆ ಜಪವಿಲ್ಲ. ಜೀವನ ದಲ್ಲಿ ಶ್ರೇಷ್ಠವಾದ ತಪಸ್ಸು ಯಾವುದು? ಸತ್ಯ. ಸತ್ಯವೇ ಶ್ರೇಷ್ಠವಾದ ತಪಸ್ಸು. ಸತ್ಯದ ಆಚರಣೆಯೇ ಸಾಧನೆ. ಅಸತ್ಯ, ಅಜ್ಞಾನ, ಹಿಂಸೆ, ಕೋಪ, ಕ್ರೌರ್ಯ ಇವೆಲ್ಲ ಮನಸ್ಸನ್ನು ಮುತ್ತುವ ದೌರ್ಬಲ್ಯಗಳು. ಈ ದೌರ್ಬಲ್ಯಗಳನ್ನು ಗೆಲ್ಲಬೇಕಾದರೆ ಉದಾತ್ತ ಮೌಲ್ಯಗಳನ್ನು ದಿನನಿತ್ಯ ಅಳವಡಿಸಿಕೊಳ್ಳಬೇಕು. ಅದಕ್ಕಾಗಿ ಈ ಮೌಲ್ಯಗಳಲ್ಲಿ ಶ್ರದ್ಧೆ, ನಂಬುಗೆಗಟ್ಟಿಗೊಳ್ಳಬೇಕು. ಈ ನಂಬುಗೆ ಗಟ್ಟಿಗೊಳ್ಳಲು ನಿಜಗುಣರು ಹತ್ತಾರು ಪ್ರಶ್ನೆ ಹಾಕುತ್ತಾರೆ.

ಸ್ವಾಭಿಮಾನಕ್ಕಿಂತ ಮಿಕ್ಕಿದ ಧರ್ಮವುಂಟೇ? ಈ ಶರೀರವನ್ನು ಮೀರಿದ ಇಂದ್ರಜಾಲ ಬೇರೆ ಇದೆಯೇ? ಕಾಮಕ್ಕಿಂತ ಬಲವಾಗಿ ಇರಿಯುವ ಅಲಗುಂಟೇ? ಕ್ರಮತಪ್ಪಿ ನಡೆಯುವುದಕ್ಕಿಂತ ಮಿಗಿಲಾದ ಕಷ್ಟವಿದೆಯೇ? ಅಹಂಕಾರಕ್ಕಿಂತ ಹೆಚ್ಚಿನ ಬಂಧನವಿದೆಯೇ? ಕರುಣೆಗಿಂತ ಅಧಿಕವಾದ ಧರ್ಮವಿದೆಯೇ? ಭಕ್ತಿಗಿಂತ ಮಿಗಿಲಾದ ಚಾರಿತ್ರ್ಯವಿದೆಯೇ? ಭಕ್ತಿ ಅಂತರಂಗದ ಸೊತ್ತು. ಇದು ಶುದ್ಧ ಚಾರಿತ್ರ್ಯಕ್ಕೆ ಮೂಲ. ನರನಾಗಿ ಹುಟ್ಟಿ ಹರನಾಗುವ ಕನಸು ಹೊತ್ತ ನಾವು ಹರನನ್ನು ಸಾಧಿಸಬೇಕಾದರೆ ಅದಕ್ಕಾಗಿ ಸ್ವಾರ್ಥದ ಅಜ್ಞಾನದ ಹಮ್ಮಿನ ತ್ಯಾಗ ಮಾಡಬೇಕು. ಘನತರ ಪುಣ್ಯದ ನೆಲೆಯಾದ ಸದ್‌ಭಕ್ತಿಯನ್ನು ಬೆಳೆಯಬೇಕು—ಹುಲುಸಾಗಿ ಒಕ್ಕಬೇಕು. ನಿಜ ಗುಣರು 'ಅವರಿವರೆನ್ನದೆ ನಿಜವರಿದವರಂಘ್ರಿ ಗರ್ವಿತ'ರಾಗಿ ಸಂತಸ ದಿಂದ ಬಾಳಲು ಕಲಿಸಿದರು. ನರಜನುನು ಸುಲಭವಾಗಿ ದೊರೆಯುವು ದಿಲ್ಲ, ದೊರಕಿದ ಈ ಅವಕಾಶವನ್ನು ಹಾಗೆಯೇ ಕಳೆದುಕೊಳ್ಳ ಬಾರದು. ಮನುಷ್ಯನ ತೊಡಕಿಲ್ಲದ ಜಂಜಡವಿಲ್ಲದ ಮನಸ್ಸಿನ ಬೆಳವಣಿಗೆಯಿಂದ ಸಹಜ ಜ್ಞಾನ ಸಹಜ ಭಕ್ತಿ. ಅದು ಇದು ಎನ್ನದೆ ಅಖಿಲ ತತ್ತ್ವಗಳ ಜಟಿಲತೆಯನ್ನು ತಿಳಿದು ಕಳೆದು,ಉಳಿದ ಸದಮಳ ಚಿತ್ತದ ಪೂರ್ಣಾನಂದ ಸ್ವರೂಪವೇ ತಾನು ಎಂದು ನಂಬಿ, ಬಹು ಮತಗಳನ್ನು ಎಣಿಸದೆ, ಹದುಳದಿಂದ ಇರಲು ಸಾಧ್ಯವಾಗುವುದೇ ಸಹಜ ಸುಜ್ಞಾನ. ಸುಜ್ಞಾನ ಭಕ್ತಿಗಳ ಸಮರಸದ ಸದಾಚಾರವೇ ಶಿವಕೃಪೆಗೆ ಪ್ರೇರಕ. ಭಕ್ತಿ ಎನ್ನುವುದು ಬದುಕಿನ ಸಮಸ್ತ ಸಾಧನ ಗಳ ಒಂದು ಪರಿಪಕ್ವರೂಪ. ಅಂಥ ಪರಿಣತಿ ಅಂತರಂಗದಲ್ಲಿ ಸಮನ್ವಯಗೊಂಡರೆ ನರನ ಸಾಧನೆ ಪರಿಪೂರ್ಣ; ಅವನು, ಪುಣ್ಯ ಪುರುಷ, ಪ್ರಣವ ಪುರುಷ. ಕಾಲದ ಸೀಮೆಗೆ ಕರ್ಮದ ಬಂಧನಕ್ಕೆ ಮಾಯೆಯ ಜಾಲಕ್ಕೆ ಅವನು ಸಿಲುಕುವುದಿಲ್ಲ. ಅವನು ಇವೆಲ್ಲವು ಗಳನ್ನು ಗೆಲ್ಲುತ್ತಾನೆ—ಅತೀತನಾಗುತ್ತಾನೆ.

'ಕಾಲ, ಕರ್ಮ, ಮಾಯೆಯೆಂಬಿವನು ಗೆಲಲಹುದು, ವಿ
ಶಾಲ ಮತಿಗಳು ಶಿವಭಕ್ತಿಯುಕ್ತರಾಗಿರೆ'.

ಶಿವಭಕ್ತಿಯುಕ್ತವಾದ ಆತ್ಮ 'ಕರುಣ ರಸದಕೋಡಿ' 'ನಿಜಾ ನಂದದ ನೆಲೆ'ಈ ನೆಲೆಯಲ್ಲಿ ನಿಂದ ನಿಜಗುಣರಿಗೆ ಜೀವನವೇ ಒಂದು ಶ್ರುತಿ ಬದ್ಧ ವೀಣೆ ಎನ್ನುವ ಅನುಭವ. ಯೋಗದ ನಿಜಾನಂದದಲ್ಲಿ ನಿಂದು ಅವರು ಮಿಡಿದ ಈ ಬದುಕಿನ ವೀಣೆಯಿಂದ ಹೊಮ್ಮಿದ ಅಗಣಿತರಸ ತರಂಗಗಳೇ ಅವರ ಹಾಡುಗಳು.

'ಯೋಗಿ ನಿಜಾನಂದದೊಳು ನುಡಿಸುವ ವೀಣೆ ರಾಗರಸತರಂ-ಗಿಣಿ' ಎನ್ನುವುದು ಅವರ ಸಹಜ ವಾಣಿ.

ಹತ್ತನೆಯ ಶತಮಾನದಿಂದಲೇ ವಚನಗಳನ್ನು ಸಂಗೀತಶಾಸ್ತ್ರ-ಕ್ಕನುಗುಣವಾಗಿ ಹಾಡುತ್ತ ಬಂದಿದ್ದು ಕನ್ನಡ ನಾಡಿನ ಹಾಡುಗಬ್ಬ ಗಳ ಪರಂಪರೆಗೆ ನಿಜಗುಣರ ಹಾಡುಗಳಿಂದ ಒಂದು ಹೊಸ ಪ್ರವಾಹ ಬಂದು ಸೇರಿ, ಅವು ಕನ್ನಡ ಸಾಹಿತ್ಯದ ಉನ್ನತ ಕಾಣಿಕೆಯಾಗಿ ಉಳಿದವು.

ಪರಮಾರ್ಥ ಪ್ರಜ್ಞೆಯಿಂದ ರೂಪುಗೊಂಡ ಅವರ ಹಾಡುಗಳು ಕೇವಲ ಹಾಡುಗಳಾಗಲಿಲ್ಲ; ಸಾಹಿತ್ಯಪ್ರಿಯರಿಗೆ ರಸಪರಿಪಾಕವಾ-ದುವು; ಸಂಗೀತ ರಚನಾಕಾರರಿಗೆ ಮಾದರಿಯಾದುವು.

ನಿಜಗುಣರು, ಎಲ್ಲ ಮತಧರ್ಮಗಳ ತಿರುಳನ್ನು ಗ್ರಹಿಸಿ ಶಾಸ್ತ್ರ ವಸ್ತು ವಿಷಯಗಳ ನಿಜರೂಪವನ್ನು ಕಂಡು 'ವಿವೇಕ ಚಿಂತಾಮಣಿ' ಯಂಥ ಒಂದು ವಿಶ್ವಕೋಶವನ್ನು ರಚಿಸಿ ಕನ್ನಡ ಸಾಹಿತ್ಯದ ವೈಚಾ ರಿಕ, ಆಧ್ಯಾತ್ಮಿಕ ಮಡಿಲನ್ನು ತುಂಬಿದ ಪುಣ್ಯ ಪುರುಷರು.

ಲೆಕ್ಕಿಗರ ಈ ನಾಡಿನಲ್ಲಿ ಗಣಿತವು ದರ್ಶನದ ಮಟ್ಟಕ್ಕೆ ಏರಿರು ವುದನ್ನು ನಾವು ಕಾಣುತ್ತೇವೆ. ನಿಜಗುಣರ ಕೃತಿಗಳಲ್ಲಿ ಗಣಿತ ಶಾಸ್ತ್ರದ ಕೆಲವು ಅಂಕಿ ಸಂಖ್ಯೆಗಳು ವಿಶಿಷ್ಟ ರೀತಿಯ ಬಳಕೆ ಪಡೆದಿವೆ.

'ಏಳುದಿನದುದಯದೊಳು ಗಾನಮೂರುತಿಗಳಾ।
ಏಳು ಸಡೆ ತಂದರಿವು ಮರವೆ ಪುಗದ ಭವ ನೀ
ನೇಳೆನುತ್ತುಪ್ಪವಡಿದುಪಚಾರವನು ಮಾಡಿ
ಯೋಳಿಸಿದರಗಣಿತನ........'

ಈ ರಚನೆಯಲ್ಲಿ 'ಏಳು' ಎನ್ನುವುದು 'ಪದ'ವಾಗಿಯೂ 'ಸಂಖ್ಯೆ'ಯಾಗಿಯೂ ಕಂಡು ಬರುತ್ತದೆ. ವ್ಯವಹಾರದ ದೃಷ್ಟಿಯಲ್ಲಿ

'ಏಳು' ಎನ್ನುವುದು ಅಶುಭ ಸಂಖ್ಯೆಯೆಂದು ಭಾವಿಸಲಾಗುತ್ತದೆ; ಇಲ್ಲಿ ಅದು ಜೀವನ ವಿಕಾಸದ ಸಂಕೇತ. ಸಪ್ತ ಸ್ವರಗಳ ವಿಕಾಸ ಕ್ರಮ ಏಳು ದಿನಗಳವರೆಗೆ ನಡೆದು ಸ್ವರಾಧಿ ದೇವತೆಗಳಾದ ಅಂಗೀರಸ, ಭೃಗು, ಕಶ್ಯಪ, ವಶಿಷ್ಠ, ನಾರದ, ಅತ್ರಿ, ಕಪಿಲ ಮೊದಲಾದವರ ಸಾಕ್ಷಾತ್ಕಾರದ ಅದ್ಭುತ ಘಟನೆಗೆ ಗಣಿತಶಾಸ್ತ್ರದಲ್ಲಿ ಶೂನ್ಯಕ್ಕೆ ಬಹುಮೊತ್ತದ ಸ್ಥಾನವಿದೆ. ನಿಜಗುಣರು ತಮ್ಮ ದಿವ್ಯಾನುಭಾವವನ್ನು ಅಭಿವ್ಯಕ್ತಿಗೊಳಿಸುವಲ್ಲಿ ಗಣಿತ ಶಾಸ್ತ್ರ ಹದ ಸಂಖ್ಯೆಗಳನ್ನು ದರ್ಶನದ ಪಾರಿಭಾಷಿಕ ಸ್ವರೂಪದಲ್ಲಿ ಬಳಸುತ್ತಾರೆ.

ಕೈವಲ್ಯ ಪದ್ಧತಿಯಲ್ಲಿ:

'ಗಣಿತವಿದನು ಕೂಡಿ ಕಳೆಯ ಬಲ್ಲಾತನೆ
ತ್ರಿಣಯನೆನಿಪನು ಲೆಕ್ಕಿಗರ ಮಧ್ಯದೊಳು....
ಒಂದನು ಮೂರಾಗಿ ಪೆಚ್ಚಿಸುತವರೊಳ
ಗೊಂದೊಂದರೊಳಗೆರಡನೀರೈದು.....'

ಎಂದು ಮುಂತಾಗಿ ಬರುವ ಪದ್ಯದಲ್ಲಿ ನಿಜಗುಣರ ಆಳವಾದ ದರ್ಶನವನ್ನು ಗಣಿತ ರೂಪದಲ್ಲಿ ಅದನ್ನು ಬಿಡಿಸಿ ಸ್ಫುಟವಾಗಿ ಶುದ್ಧವಾಗಿ ಹೇಳಲು ಅವರು ಮಾಡಿರುವ ಯತ್ನವನ್ನು ಕಾಣುತ್ತೇವೆ. 'ಒಂದನ್ನು ಮೂರಾಗಿ ಹೆಚ್ಚಿಸುತ್ತ ' ಎನ್ನುವಲ್ಲಿ ಮೂಲ ಚಿದಂಗ ಒಂದು ಇದ್ದು, ಅದು ತ್ಯಾಗಾಂಗ, ಭೋಗಾಂಗ,ಯೋಗಾಂಗ ಎಂದು ಮೂರಾಯಿತು. ಹೀಗೆಯೇ ಈ ಲೆಕ್ಕವನ್ನು ವಿಶ್ಲೇಷಿಸುತ್ತ ಕೊನೆಗೆ ನೂರೊಂದು ಸ್ಥಲಗಳ ಸಂಕೇತವನ್ನು ಅವರು ಬಹು ಮಾರ್ಮಿಕವಾಗಿ ವಿವರಿಸುತ್ತಾರೆ. ಈ ಪದ್ಯದ ನಿಲವು ಅನುಭಾವಿಗಳು ಅನುಭವಿಸಿ ಬಿಡಿಸಿದುದು; ಅದನ್ನು ಗೆರೆಕೊರೆದು ಹೇಳುವುದು ಸುಲಭವಲ್ಲ. ಶಿವಯೋಗಿಗಳಾದ ನಿಜಗುಣರು ಈ ಮಾತು ಹೇಳುತ್ತಾರೆ. ಈ ಪದ್ಯದಲ್ಲಿ ಗಣಿತಶಾಸ್ತ್ರ ದರ್ಶನದಹಂತಧಾರಣೆಮಾಡಿದ್ದು ಅದನ್ನು ನಿಜಗುಣರು ಹೇಗೆ ಬಳಸಿಕೊಂಡರು ಎನ್ನುವುದು ಮುಖ್ಯ.

ವಿಶ್ವಕೋಶವೆಂದು ಕರೆಯಬಹುದಾದ 'ವಿವೇಕಚಿಂತಾಮಣಿ' ಯಲ್ಲಿ ಅವರು ನಿರೂಪಿಸಿದ ವಿಷಯಗಳೇ ಇಲ್ಲ ಎಂದರೆ ಅತಿಶಯೋಕ್ತಿ ಅಲ್ಲ. ಹತ್ತು ಪ್ರಕರಣಗಳ ಹರವು ಪಡೆದ ಈ ಗ್ರಂಥದಲ್ಲಿ ಕಾವ್ಯ ಶಾಸ್ತ್ರ, ಧರ್ಮಶಾಸ್ತ್ರ, ಖಗೋಳ ವಾಯುಗತಿಶಾಸ್ತ್ರ, ಜ್ಯೋತಿಷ್ಯ, ಸಂಗೀತ ಮತ್ತು ಶಿವಯೋಗ ಹೀಗೆ ಜಿಜ್ಞಾಸೆ ಅಗತ್ಯವಾದ ಮೂಲ ಭೂತ ವಸ್ತು ವಿಷಯಗಳ ತಾತ್ವಿಕ ವಿವೇಚನೆ ನಡೆದಿದೆ. ಸಪ್ತಸ್ವರಗಳ ಸಾಕ್ಷಾತ್ಕಾರ ಪಡೆದಿದ್ದ ಈ ನಾದಯೋಗಿ ಸಂಗೀತಶಾಸ್ತ್ರವನ್ನು ಕುರಿತು ಒಂದು ಅಧ್ಯಾಯವನ್ನೇ ರಚಿಸಿದ್ದಾರೆ.

ವೇದಕಾಲದಿಂದ ತಮ್ಮ ಕಾಲದವರೆಗೆ ಪ್ರಚಲಿತವಿದ್ದ ಎಲ್ಲ ಸಂಗೀತ ಪರಂಪರೆಗಳನ್ನು ಕರಗತ ಮಾಡಿಕೊಂಡು ಸಂಗೀತಶಾಸ್ತ್ರ ಅದರ ರೂಪುರೇಷೆ–ರಾಗ, ತಾಳ ಲಯ ಗತಿಗಳನ್ನು ಕುರಿತು ವಿವರಗಳನ್ನು ಒದಗಿಸಿ ಸಂಗೀತಶಾಸ್ತ್ರದ ಚರಿತ್ರೆಗೆ ಒಂದು ಖಚಿತವಾದ ಬುನಾದಿ ಹಾಕಿಕೊಟ್ಟಿದ್ದಾರೆ. 'ಶ್ರವಣ ವಿಷಯವಾದ ಪರಮನಾದ' ಓಂಕಾರದಿಂದ ಉತ್ಪತ್ತಿಯಾಯಿತು. ನಾದಗಳು ದಶವಿಧ. ಅನಾಹತ ನಾದ - ಹತನಾದ. ಈ ಪರಿಚ್ಛೇದದಲ್ಲಿ ಸ್ವರ–ಕಾಲ–ರಾಗಗಳು–ರಾಗಸಂಖ್ಯೆ–ರಾಗಗಳನ್ನು ಹಾಡುವ ಕಾಲ ಮುಂತಾದ ವಿವರಗಳ ವಿವೇಚನೆ ಅದ್ಭುತವಾಗಿದೆ.

ಅನುಭಾವ ಮತ್ತು ನಾದಗಳ ಸಮನ್ವಯವಾದ ನಿಜಗುಣರ ವ್ಯಕ್ತಿತ್ವದ ಎರಡು ಕಣ್ಣು ಸೌಂದರ್ಯ, ಸಂಗೀತ. ಸಮಷ್ಟಿ ಜೀವನದ ಸ್ಪಂದನೆಯಲ್ಲಿ ಸೃಷ್ಟಿಯ ಮೂಲ ಮಂತ್ರವಾದ ಓಂಕಾರವನ್ನು ಕೇಳಿದ ಅವರಿಗೆ ಈ ಓಂಕಾರ ನಾದದ ಮೂಲಕ ಸಂಗೀತ ಸರಸ್ವತಿ ಒಲಿದಳು. ಸಂಗೀತದ ಹುಟ್ಟು ಅದರ ವಿಕಾಸ ಕುರಿತಾದ ಅವರು ನೀಡುವ ವಿವರಗಳಲ್ಲಿ ಈ ಮಾತು ಸ್ಫುಟವಾಗಿದೆ. ಸಂಗೀತಕ್ಕೆ ನಾದವೇ ಮುಖ್ಯ. ಅದು 'ಸೋಹಂ' ಎಂಬ ಎರಡಕ್ಷರದ ಹಂಸ ಮಂತ್ರ. ಇದಕ್ಕೆ ಮೂಲ ಓಂಕಾರ; ಇದರಿಂದ ಉತ್ಪನ್ನವಾದುದೆ ಅನಾಹತ ನಾದ. ಶಿವ ಶಕ್ತಿ ಬೀಜದ ಬೆಸುಗೆಯಾದ ತಾಣದ, ಏಕವರ್ಣದ ಶ್ರವಣ ವಿಷಯವಾದ ಪರಮ ನಾದ. ಆ ಮೂಲ ನಾದದಿಂದ ದಶ ವಿಧ ನಾದಗಳು ಹುಟ್ಟುತ್ತವೆ. ಇವು ಅನಾಹತ ನಾದಗಳು. ಇವುಗಳಿಂದಲೇ ಬಹಿರಂಗದ ಹತನಾದ ಹುಟ್ಟಿತು. ಈ ಹತನಾದದ ಆರೋಹ ಅವರೋಹಗಳನ್ನು ಅನುಸರಿಸಿ ಕಂಠ ಧ್ವನಿ–ಕಂಠಧ್ವನಿಯಿಂದ ಸಪ್ತಸ್ವರ. ಆದುದರಿಂದ ಓಂಕಾರದಿಂದಲೇ ಸಪ್ತ ಸ್ವರಗಳ ಆಕಾರ ಸೃಷ್ಟಿ. ಇವುಗಳನ್ನು ಆಧರಿಸಿ ವಿವಿಧ ವಾದ್ಯಗಳು ರೂಪು ತಳೆದವು. ಪರಮಾತ್ಮನ ಸದ್ಯೋಜಾತಾದಿ ಮುಖಗಳಿಂದ ಓಂಕಾರ ಪ್ರಣವದ ಪರಿಕಿತವನ್ನು ಪರಿಭಾವಿಸಿ ಸಪ್ತಸ್ವರಗಳ ನಾದದ ನಿಶ್ಚಿತ ಹಂತ ನೆಲೆಗೊಂಡಿತು. ಈ ಸಪ್ತಸ್ವರಗಳಿಗೆ ಸಪ್ತ ಋಷಿಗಳೇ ಪ್ರಚಾರಕರು – ಇವರು ಗಾನಮೂರ್ತಿಗಳು. ಏಳುವಾರದ ಉದಯದಲ್ಲಿ ಏಳು ಗಾನಮೂರ್ತಿಗಳು ಬಂದುಹಾಡಿ ಪರಮಚೈತನ್ಯ ಸ್ವರೂಪಿಯಾದ ಪರಶಿವನನ್ನು ಸ್ತುತಿಸುವ ಉದಯಗೀತೆಯಾಗಿದೆ ಈ ಕೆಳಗಿನ

'ಏಳುದಿನದುದಯದೊಳು ಗಾನಮೂರುತಿಗಳಾ ।
ದೇಳು ನಡೆತಂದರಿವು ಮರವೆ ಪುಗದಭವನೀ
ನೆಳೆನುತ್ತುಪ್ಪಡಿದುಪಚಾರವನು ಮಾಡಿ
ಯೇಳಿಸಿದರಗಜೇಶನ.......' ಎನ್ನುವ ರಚನೆ.

ನಿಜಗುಣರ ಹಾಡುಗಳಲ್ಲಿ ವೀಣೆ, ಕೋಗಿಲೆ, ಗಿಳಿಗಳು ಮತ್ತೆ ಮತ್ತೆ ಬಳಸಲ್ಪಟ್ಟಿವೆ. ರಾಗ, ರಸ, ತರಂಗಿಣಿ, ಮೇಳೈಸು, ಬಾಜಿಸು ಗೀತ ಮುಂತಾದ ಪದಗಳು ಸಂದರ್ಭಾನುಸಾರ ಬಂದು ಅವರ ಸಂಗೀತ ಸಿದ್ಧಿಯ ಸಾಕ್ಷಿನುಡಿಯುತ್ತವೆ.

ಕೈವಲ್ಯ ಪದ್ಧತಿಯ ಹಾಡುಗಳೆಲ್ಲ ನಿರ್ದಿಷ್ಟ ರಾಗ ತಾಳಗಳಲ್ಲಿ ರಚಿತವಾಗಿವೆ. ನಾದರಾಮಕ್ರಿಯೆ, ಧನ್ಯಾಸಿ, ಶಂಕರಾಭರಣ, ದೇಶಿ, ಅಹರಿ, ಪಹಡಿ, ಸೌರಾಷ್ಟ್ರ, ಮಾಳವ, ಕಾಂಬೋಧಿ, ಲಲಿತೆ, ಸಾರಗ ಸುವ್ವಾಲಿವರ್ಣ, ಭೈರವಿ, ತೋಡಿ, ಕುರಂಜಿ, ಸಾಳಂಗ, ಶ್ರೀರಾಗ, ವಸಂತ, ಫಾರಶಿ, ಮಧ್ಯಮಾವತಿ, ಭೌಳಿನಾಟಿ, ಕಲ್ಯಾಣಿ, ಭೂಪಾಲಿ ಮೊದಲಾದ ರಾಗಗಳು ಕೃತಿಯ ಭಾವಕ್ಕೆ ಅನುಗುಣವಾಗಿ ಸೂಚಿಸಲ್ಪಟ್ಟಿವೆ.

ಪರಮಾನುಭವ ಮತ್ತು ದಿವ್ಯ ಸಂಗೀತ ಜ್ಞಾನಗಳ ಜೊತೆಗೆ ನಿಜಗುಣರ ಹಾಡುಗಳಲ್ಲಿ ಅತಿ ಸುಲಲಿತ ಮತ್ತು ಅಷ್ಟೇ ಪ್ರೌಢವಾದ ಭಾಷೆಯ ಬಳಕೆಯನ್ನು ಕಾಣುತ್ತೇವೆ. ಅವರ ಹಾಡುಗಳು ಬದುಕಿನ ಇಡಿಯಾದ ದೃಷ್ಟಿಯನ್ನು ಒಳಗೊಂಡಿವೆ. ಅವುಗಳಲ್ಲಿ ಹೆಪ್ಪುಗಟ್ಟಿದ ದಿವ್ಯಾನುಭಾವದ ಒಂದೊಂದೇ ಪದರನ್ನು ಎತ್ತುತ್ತ ಹೋದ ಹಾಗೆ ಅರ್ಥವ್ಯಾಪ್ತಿಯ ನಿಸ್ಸೀಮದ್ರವ್ಯ ಅನುಭವಕ್ಕೆ ಬರುತ್ತದೆ. ಅಂಥ ಒಂದು ಅಖಂಡ ದೃಷ್ಟಿ, ಪೂರ್ಣದೃಷ್ಟಿ ಸೀಮಿತ ವಲಯದಲ್ಲಿ ಜೀವಿಸುವ ಮಾನವನಿಗೆ ಹೇಗೆ ಸಾಧ್ಯ ಎನ್ನುವ ಅಚ್ಚರಿ ನಮಗಾಗುತ್ತದೆ. ಅಂಥ ದಿವ್ಯ ಚೈತನ್ಯದ ಆಳದಿಂದ ಸ್ಪಂದಿಸಿದ ಅವರ ಹಾಡುಗಳ ಅನುಭಾವದ ಘನತೆಯನ್ನು ಪೃಥಕ್ಕರಿಸುವುದು ಒಂದು ಜಟಿಲ ಕ್ರಿಯೆ. ಏಕೆಂದರೆ ನಿಜಗುಣರ ದೃಷ್ಟಿಯಲ್ಲಿ ಕಾವ್ಯ ರಚನೆ ಕೇವಲ ಶಬ್ದಾರ್ಥ ಉಪಮಾಲಂಕಾರಗಳ ವ್ಯಾಪಾರವಾಗಿರದೆ ಅದು ಆತ್ಮಸಾಕ್ಷಾತ್ಕಾರದ ಸಾಧನೆಗೆ ಒಳಗು. ಅಂಥ ಸಾಧನೆಯಲ್ಲಿ ನಿರತರಾದ ಅವರು ದಿವ್ಯಾನುಭಾವವನ್ನು ಆಧ್ಯಾತ್ಮಿಕ ನೆಲೆಯಲ್ಲಿ ಅಭಿವ್ಯಕ್ತಿಗೊಳಿಸುವ ಅತೀಂದ್ರಿಯ ದೃಷ್ಟಿಯುಳ್ಳವರು. ಕಾವ್ಯಕ್ಕೆ ಆಧ್ಯಾತ್ಮಿಕ ಅನುಭೂತಿ ಪ್ರತಿಮೆಯಾದಾಗ ಅದು ಸಾಂಕೇತಿಕವಾಗಿ ತತ್ತ್ವಜ್ಞಾನವನ್ನು ನಿರೂಪಿಸಬಹುದು.

ವ್ಯಕ್ತಿಗತವಾದ ಅನುಭವಗಳು ಇಂದ್ರಿಯಗಳ ಮುಖಾಂತರ ಲಭ್ಯವಾದ ಜ್ಞಾನಕ್ಕೆ ಪರಿಮಿತವಾದುದು; ಅವುಗಳನ್ನು ಇಂದ್ರಿಯಾನುಭವದ ತುಯ್ತಕ್ಕೆ ಅನುಗುಣವಾಗಿ ಮನುಷ್ಯನಲ್ಲಿ ಉಂಟಾದ ಪ್ರಾಥಮಿಕ ಪ್ರಕ್ರಿಯೆಗಳು ಎಂದು ಇಟ್ಟುಕೊಳ್ಳಬಹುದು. ಈ ಪ್ರಕ್ರಿಯೆಗಳು ಸಹಜವಾಗಿ–ಸಹಜ ಪ್ರೇರಣೆ ಉತ್ಕಟಗೊಂಡಾಗ ಬುದ್ಧಿ ಅದರಲ್ಲಿ ಬೆರೆತು ಈ ಉತ್ಕಟತೆ ಇಂದ್ರಿಯಾತೀತ ಜ್ಞಾನವನ್ನೊಳಗೊಂಡ ಸಂವೇದನೆಯಾಗಬಹುದು. ಈ ಸಂವೇದನೆ ವ್ಯಕ್ತಿತ್ವ ಪ್ರಜ್ಞೆಯ ಚಿರಂತನವಾದ ಅಂಶ; ತನ್ನಲ್ಲಿ ಹೊಳೆದ, ತನಗೆ ತೋಚಿದ ನಿಲವನ್ನು, ತತ್ತ್ವವನ್ನು, ವ್ಯಕ್ತಿ ಅನುಭವ ಪರಿವರ್ತಿತ ಸತ್ಯವನ್ನಾಗಿ ಆವಿಷ್ಕಾರಗೊಳಿಸಬೇಕಾಗುತ್ತದೆ. ಈ ಸತ್ಯ ಕೇವಲ ಬುದ್ಧಿಯ, ತರ್ಕದ ಕೈಗೂಸಲ್ಲ: ಅನುಭಾವದ ಸುಗಂಧ, ಅಂತಃಕರಣದ ಸ್ಪಂದನ; ಇದು ಕಾವ್ಯಕ್ರಿಯೆಗೆ ಪ್ರೇರಕ. ಈ ಹಂತದಲ್ಲಿ ಕಾವ್ಯ, ಆಧ್ಯಾತ್ಮಿಕ ಅನುಭೂತಿಯನ್ನು ಅನುಭವೀಕೃತ ಸ್ವರೂಪದಲ್ಲಿ ಒಪ್ಪಿಕೊಂಡು ಅಖಂಡ ಜೀವನವನ್ನು ಪ್ರತಿಮಿಸುವ ಹೊಂಚು ಹಾಕುತ್ತದೆ. ಅದು ಕಾವ್ಯಋಷಿಯ ನಾದಯೋಗಿಯ ಪಾರದರ್ಶಕ ಅಥವಾ ಅತೀಂದ್ರಿಯ ದೃಷ್ಟಿಯಿಂದ ಸ್ಫುರಿಸುವ ಪ್ರತಿಸೃಷ್ಟಿ.

ನಿಜಗುಣರ ಆಧ್ಯಾತ್ಮಿಕ ಅನುಭವ ಪಾರಮಾರ್ಥಿಕ ಹಂಬಲ, ಸಮಸ್ತ ಅಸ್ತಿತ್ವದಲ್ಲಿ ಪ್ರತಿಸ್ಪಂದಿಸಿ ಅದದಲ್ಲಿ ನೆಲೆನಿಲ್ಲುತ್ತದೆ; ನೆಲೆ ಮೀರಿ ಅದರಾಚೆಯೂ ಚಾಚಿಕೊಳ್ಳುತ್ತದೆ; ನಿಸ್ಸೀಮವನ್ನೂ ಬಾಚಿಕೊಳ್ಳುತ್ತದೆ.

ಆಧ್ಯಾತ್ಮಿಕ ಅನುಭೂತಿಯು ಕಾವ್ಯಾನುಭವವಾಗಿ ಆವಿಷ್ಕಾರಗೊಳ್ಳುವುದು ವ್ಯಷ್ಟಿಪ್ರಜ್ಞೆಯ ಒಂದು ನಿಸ್ಸೀಮಸ್ತರದಲ್ಲಿ. ಅದು ವ್ಯಕ್ತಿಯ ಜ್ಞಾನಸಾಧನವಾದ ಮನಸ್ಸಿನ ಮುಖಾಂತರ; ಈ ಮನದಿಂದ ರೂಪುಗೊಂಡ 'ನಾನು' ಇದಕ್ಕೆ ಮೂಲ. ಆದರೆ ಈ 'ನಾನು' ಎನ್ನುವುದು ಕೇವಲ ಹಮ್ಮು ಅಲ್ಲ. ಸ್ವಸ್ವರೂಪಜ್ಞಾನದಿಂದ ಪ್ರೇರಿತವಾದ ಎಚ್ಚರ: 'ನಾನು' ಎನ್ನುವುದರಲ್ಲಿಯ ಅಹಂಕಾರ ನಿರಸನಗೊಂಡ ನಿರುಮ್ಮಳದ ನಿಲವು: ಅದ್ಭುತ ಸೃಷ್ಟಿಯಲ್ಲಿ ಹಿಗ್ಗಿ, ಅಂತರಂಗದ ಅಗಣಿತ ಜಟಿಲಕ್ರಿಯೆಗಳಲ್ಲಿ ಹಬ್ಬಿ, ಆತ್ಮದ ಮೂಲಸ್ವರೂಪವಾದ ಪರಮಚೈತನ್ಯ ದ್ರವ್ಯದಲ್ಲಿ ಒಡವೆರೆದು, ತನ್ನಲ್ಲಿ ತಾನೇತಾನಾಗಿ ಸಹಜವಾಗಿ ಇಂಬುಗೊಂಡ ಸಮಷ್ಟಿಪ್ರಜ್ಞೆಯ ಅತೀಂದ್ರಿಯಸ್ತರದಲ್ಲಿ ನಿಂದು ಮತ್ತೆ ಈ ಲೋಕವನ್ನು ನಿರುಕಿಸುವ ಒಂದು 'ಸಾಕ್ಷಿ' ಭಾವ. ಇದನ್ನು 'ಸಾಕ್ಷಿಪ್ರಜ್ಞೆ' ಎಂದು ಕರೆಯಬಹುದು.

ನಿಜಗುಣರ,

'ಬಾಧೆತನ್ನೊಳು ತೋರದು, ಪರಮಾರ್ಥ
ಬೋಧೆ ನೆಲೆಗೊಂಡು ನಿಂದಮೇಲೆ'

ಎನ್ನುವ ರಚನೆಯನ್ನು ಈ ಹಿನ್ನಲೆಯಲ್ಲಿ ವಿಶ್ಲೇಷಿಸಬಹುದು.

ಜೀವನದ ಪರಮ ಅರ್ಥವಾದ ಆತ್ಮಸಾಕ್ಷಾತ್ಕಾರದ ಅರಿವು ಇರವಿನಲ್ಲಿ ಇಂಬುಗೊಳ್ಳಬೇಕು. ಆಗ ಬಾಧೆ ತನ್ನಲ್ಲಿ ತೋರದು; ಈ ಬದುಕು ಯಾತನೆಗಳ ಬೀಡು ಎಂದು ಅನ್ನಿಸದು.

'ಆನಂದಮಯನೆ ಜಗವರಚಿಸಿ, ವಿ
ಜ್ಞಾನಮಯನೆನಿಸಿ ಕರ್ಮವಿಡಿದು
ಹಾನಿಗೊಳಗಹನಲ್ಲದೆ ಸತಿಸಾಕ್ಷಿ
ತಾನೆಂಬ ನಿಜವನರಿದಮೇಲೆ ಬಾಧೆತನ್ನೊಳು ತೋರದು.

ಜೀವಾತ್ಮಬೇರೆ, ಪರಮಾತ್ಮಬೇರೆ ಎನ್ನುವುದು ಅಜ್ಞಾನ. ಅದನ್ನು ಕ್ರಿಯಾತ್ಮಕವಾಗಿ ಅತಿಗಳೆಯಬೇಕು. ಭವ,ಶಿವ ಎನ್ನುವ ದ್ವಂದ್ವವನ್ನು ಭಿನ್ನಾತ್ಮಕ ತಿಳುವಳಿಕೆಯನ್ನು ನಷ್ಟಗೊಳಿಸಿ ಅಭಿನ್ನಾತ್ಮಕ ಜ್ಞಾನವನ್ನು ಸಾಧಿಸಬೇಕು. ಆಗ ಆ ಚಿತ್‌ಸ್ವರೂಪಿನ ಇಂಗಿತವೇ 'ಸ್ವಯ' ಎನ್ನುವುದು ಹೊಳೆಯುತ್ತದೆ. ಆಗ ಬಾಧೆ-ಅಜ್ಞಾನ–ತೋರದು.

'ಮರೆದು ಮೊದಲರಿದ ಬಳಿಕಾ ಸಹಜದೊಳು
ನಿರುಗೆ ನೆಲೆಯಾದುದೆಂಬ ಮತಿಗೆ
ಪೆರತೆನಿಪ ಶುಂಭಲಿಂಗವಾಗಿ ತಾ
ನುರೆ ಮಾನವನು ಮೀರಿದಮೇಲೆ'

ಈ ಪ್ರಪಂಚದಲ್ಲಿ ಬಂದಾಗ ಮನುಷ್ಯನಿಗೆ ಸ್ವಸ್ವರೂಪದ ವಿಸ್ಮೃತಿಯುಂಟಾಗುತ್ತದೆ. ಗುರುವಿನ ಉಪದೇಶದಿಂದ ಅವಿಸ್ಮೃತಿ ತಿಳಿಯುತ್ತದೆ. ಗುರು ಸ್ವಸ್ವರೂಪ ಜ್ಞಾನವನ್ನುಂಟುಮಾಡುತ್ತಾನೆ. ನೀನು ನೀನಲ್ಲ: ಆ ನಿರಾಳ ಸಹಜದ ವ್ಯವಸ್ಥಿತ ವಿನ್ಯಾಸ; ಸಹಜದನಿರುಗೆ .ಅರಿವಿನಲ್ಲಿ ಹಮ್ಮು ಬೆರೆತು ಈ ಸಹಜ ಜ್ಞಾನಕ್ಕೆ ಮರೆವೆ ಅಂಟಿತು; ಬುದ್ಧಿಗೆ ಬೇರೆಯಾಗಿ ತೋರಿತು. ನಾನು ಎನ್ನುವುದರಲ್ಲಿಯ ಅಭಿಮಾನ ಅಹಂಕಾರಗಳ ವಲಯವನ್ನು ದಾಟದ ಮುಕ್ತಚಿತ್ತ ಆತ್ಮವು ಶುಂಭುಲಿಂಗರೂಪ-ಪರಮಚೈತನ್ಯಸ್ವರೂಪ. ಆದುದ

ರಿಂದ ಈ ಅವಿರಳವಾದ ನಿಜದ ಅನುಭೂತಿ, ದರ್ಶನ, ಆತ್ಮಗತವಾಗಿ ಪ್ರಪಂಚದಲ್ಲಿ ತಾನಿದ್ದು ಕೇವಲ 'ಸಾಕ್ಷಿ' ಎನ್ನುವ ದಿವ್ಯಾನುಭಸ್ಫುರಿಸಿ ನೆಲೆ ನಿಂದಲಿ-ಸಲೆಸಾಕ್ಷಿತಾನೆಂಬ ನಿಜವನರಿದವೇಲೆ ಬಾಧೆತನ್ನೊಳು ತೋರದು.

ಈ ರಚನೆಯಲ್ಲಿ ಅನುಭಾವ ಹೇಗೆ ಹಂತಹಂತವಾಗಿ ವಿಸ್ತಾರ ಗೊಂಡಿದೆ ಮತ್ತು ಅದಕ್ಕನುಗುಣವಾದ ಭಾಷೆ ಎಷ್ಟು ಸಹಜವಾಗಿ ರೂಪುಗೊಳ್ಳುತ್ತ ಬಂದಿದೆ ಎನ್ನುವುದನ್ನು ನೋಡಬಹುದು. ಕನ್ನಡ ನುಡಿ ಮಾನವನ ಯಾವುದೇ ಹಂತದ ದಿವ್ಯಾನುಭವವನ್ನು ಸಮರ್ಥ ವಾಗಿ ವ್ಯಕ್ತಗೊಳಿಸಬಲ್ಲುದು ಎನ್ನುವುದಕ್ಕೆ ನಿಜಗುಣರ ಇಂಥವೇ ಕೆಲ ರಚನೆಗಳನ್ನು ಉದಹರಿಸಬಹುದು.

ಮನುಷ್ಯ ತನ್ನನ್ನು ತಾನು ಅರಿತುಕೊಳ್ಳುವುದು ಅಷ್ಟೊಂದು ಸುಲಭಸಾಧ್ಯವಲ್ಲ; ಅವನು ಲೌಕಿಕ ಜೀವನದ ಮಾಯಾಮೋಹ ಗಳಲ್ಲಿ ಭ್ರಮೆಗಳಲ್ಲಿ ಸಿಲುಕಿ ಚಡಪಡಿಸುವುದನ್ನು, ವಿಫಲನಾಗಿ ನಗೆ ಗೀಡಾಗಿರುವುದಮ್ನ ನಿರೀಕ್ಷಿಸಿದ್ದಾರೆ. ಬಹುಶಃ ಒಂದು ಹಂತದಲ್ಲಿ ಅನುಭವಿಸಿಯೂ ಇದ್ದಾರೆ.

'ಆಡುತ್ತೈದಳೆ ಮಾಯೆಯೆಂಬ ಕಾಮಿನಿ ಬಿಡದೆ
ನೋಡಿಬಲ್ಲವರು ಸಂಸಾರ ನಾಟಕವ' ||ಪ||

ಎನ್ನುವ ಹಾಡು ಇಂಥ ಅನುಭಾವದ ವಸ್ತುವಾಗಿದೆ. ವಿಡಂಬನೆಗೆ ಇದೊಂದು ಉತ್ತಮ ಮಾದರಿಯಾಗಿದ್ದು ಇಲ್ಲಿಯ 'ಮಾಯೆ'ಯ ಪ್ರತಿಮೆ ಬಹುವ್ಯಾಪಕವಾಗಿದೆ. ಈ ಹಾಡಿನಲ್ಲಿ ಅವರು ಕೊಡುವ ಉಪಮೆ ಬಳಸುವಭಾಷೆ ಒಡಮೂಡಿಸುವಕಲ್ಪನೆ ಎಲ್ಲವೂ ರಚನೆಯ ಒಟ್ಟಾದಂದ ಶಿಲ್ಪಕ್ಕೆ ಸಹಾಯಕಾರಿಯಾದ ಅಂಶಗಳಾಗಿವೆ. 'ಸಂಸಾರ ಎನ್ನುವ ನಾಟಕವನ್ನು ಮಾಯೆಎನ್ನುವ ಕಾಮಿನಿ ಎಡಬಿಡದೆ ಆಡು ತ್ತಿದ್ದಾಳೆ' ಎನ್ನುವ ಕಲ್ಪನೆಯಿಂದ ಈ ರಚನೆ ಆರಂಭವಾಗಿ ಹೀಗೆ ಮುಂದುವರೆಯುತ್ತದೆ.

ಶಿವಶಕ್ತಿಯೆಂಬ ರಂಗದೊಳು ನರ ನಾಗ ದಾ
ನವದೇವತಾದಿ ಪೆಸರಿನತನುಗಳೆಂಬ
ವಿವಿಧರೂಪಿನ ಬೊಂಬೆಗಳಾತ್ಮರೆಂಬ ಸೂ
ತ್ರವನು ಹವಣಿಸಿ ಮೋಹದೊಡನೆ ಮೇಳೈಸಿ || ೧ ||

ಮೂರವಸ್ಥೆಯ ಮರೆಯೊಳಿರ್ದು ತಾನಲ್ಲಲ್ಲಿ
ಆರು ವಿಕೃತಿಗಳು ನವಗುಣೋನ್ನತಿಗಳೆಂಬ
ಬೇರು ವಡೆದಿಹ ಭಾವರಸ ಚಿತ್ರರಚನೆ ಕೆಲ
ಜಾರದಂತಭಿನಯಿಸಿ ತೋರಿ ನಿಯತದೊಳು || ೨ ||

ಪರಮುಕ್ತರೆಂಬ ಕೋವಿದರೊಂದುಗೂಡಿ ಪರ
ತರ ಶಂಭುಲಿಂಗವೆಂಬತುಳ ಭೂಭುಜನು
ಪರಿವಿಡಿದು ತನ್ನ ಸನ್ನಿಧಿಯೊಳಿಂತೆಸೆವವರ
ಪರಿಯನವಿಕಾರದಿಂದೀಕ್ಷಿಸುತ್ತಿರಲು || ೩ ||

ಜೀವನದ ಸಂಕೀರ್ಣಾನುಭವದಿಂದ ಈ ಹಾಡು ಆರಂಭ ಗೊಳ್ಳುತ್ತದೆ. ಸಂಸಾರ ನಾಟಕ ಜಟಿಲ. ಅದರ ಅನೇಕ ಮುಖ ಗಳು ಈ ನಾಟಕವನ್ನು ಸಂಕೀರ್ಣಗೊಳಿಸುತ್ತವೆ; ಉದ್ದೀಪನಗೊಳಿ ಸುತ್ತವೆ. ಅಗಣಿತ ಮುಖದ ಕ್ರಿಯೆಗಳ ಉದ್ದೀಪ್ತ ಸಂಕೀರ್ಣ ಚಾಲನೆಯನ್ನು ಅನುಭವಕ್ಕೆ ವಸ್ತುರೂಪವಾಗಿ ಆಯ್ದುಕೊಳ್ಳ ಲಾಗಿದೆ. ಸಂಸಾರ ಎನ್ನುವ ನಾಟ್ಯ, ಮಾಯೆ ಎನ್ನುವ ಕಾಮಿನಿ. ಅವಳೇ ಇದನ್ನು ಆಡುತ್ತಿದ್ದಾಳೆ. ಇದು ಎಡೆಬಿಡದ ನರ್ತನ. ಬಲ್ಲ ವರು ಇದನ್ನು ಅರಿತು ನಿರೀಕ್ಷಿಸಬೇಕು. ಶಿವಶಕ್ತಿಯರ ಅಭಿವ್ಯಕ್ತಿ ರೂಪವಾದ ಈ ಸೃಷ್ಟಿ ರಂಗಮಂಟಪ.

ಇಲ್ಲಿಂದ ಮುಂದೆ ಹಾಡು ಸಹಜವಾದ ಪ್ರತಿಮೆಯಾಗುವ ಹವಣಿಕೆ ಗಮನಾರ್ಹ. ಮನುಷ್ಯರು, ನಾಗರು, ರಾಕ್ಷಸರು,ದೇವತೆ ಗಳು ಈ ಮೊದಲಾದ ಶರೀರಗಳು–ಅನೇಕ ಬಗೆಯ ಸ್ವರೂಪಿನ ಬೊಂಬೆಗಳು, ಬೊಂಬೆಗಳಿಗೆ-ಈತಲಂಚಗಳಿಗೆ-ಜೀವಾತ್ಮರೆಂಬ ದಾರ ವನ್ನು-ಸೂತ್ರವನ್ನು ಕಟ್ಟಿ ಮಮಕಾರದೊಂದಿಗೆ ಮಾಡಿ ಎಲ್ಲವನ್ನೂ ಸಂಗತಗೊಳಿಸಿ ಮೇಳೈಸಿ ಮಾಯೆ ಈ ನಾಟ್ಯವನ್ನು ಆಡುತ್ತಿದ್ದಾಳೆ.

ಜಾಗೃತ್ ಆದಿ ಅವಸ್ಥೆಗಳಲ್ಲಿ ತಾನು ಮರೆಯಾಗಿದ್ದಾಳೆ. ಎಲ್ಲ ಅವಸ್ಥೆಗಳಲ್ಲೂ ಸಮಯಾನುಸಾರವಾಗಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಾದಿಗಳನ್ನು ಉಂಟು ಮಾಡಿ ಭಿನ್ನತೆಯನ್ನು ಬಿತ್ತಿ, ಅದಕ್ಕನಗುಣವಾದ ಹಾವ ಭಾವಗಳನ್ನು ಅನುಗೊಳಿಸಿ, ಆಶ್ಚರ್ಯ, ಅದ್ಭುತ.ಆನಂದ ರಂಜನೆಗಳನ್ನು ನವರಸಗಳ ಮುಖಾಂ-ತರ ಹೊಮ್ಮಿಸಿ, ನಾಟ್ಯದ ಕಳೆಗೆ–ಲಕ್ಷಣಗಳಿಗೆ ಕುಂದು ಬಾರದಂತೆ ಒಂದು ನಿಯತ ಗತಿಯಲ್ಲಿ ಅಭಿನಯಿಸಿ ತೋರಿಸುತ್ತಾಳೆ.

ಇಲ್ಲಿಂದ ಮುಂದಿನ ಮತ್ತು ಕೊನೆಯ ನುಡಿಯಲ್ಲಿ ಈ ರಚನೆ ತನ್ನ ಶಿಲ್ಪದ ಪೂರ್ಣರೂಪಕ್ಕೆ ತಿರುಗುತ್ತದೆ.

ಈ ನಾಟ್ಯವನ್ನು ಸೂತ್ರದ ಬೊಂಬೆಯ ಒಬ್ಬ ದೊರೆ ನೋಡು ತ್ತಿದ್ದಾನೆ. ಅವರ ಜೊತೆಗೆ ಮುಕ್ತರೆಂಬ ಕುಶಲರು ಏಕಪ್ರಕಾರವಾಗಿ ಸಮರಸಗೊಂಡು ಕುಳಿತಿದ್ದಾರೆ. ತನ್ನ ಸನ್ನಿಧಿಯಲ್ಲಿ ತಮ್ಮನ್ನು ಅರಿಯದೆ ಸ್ವಸ್ವರೂಪ ಜ್ಞಾನವಿಲ್ಲದೆ ಕೇವಲ ಮಾಯೆಯೆಂಬ ಕಾಮಿ ನಿಯ ಭ್ರಾಮಕಸೂತ್ರ ಚಲನೆಯ ಪರಿಕ್ರಮಕ್ಕೆ ಅನುಗುಣವಾಗಿ ಕುಣಿಯುವ ಗೊಂಬೆಗಳನ್ನು ವಿಕಾರರಹಿತ ತತ್ತ್ವದಿಂದ ನಿರ್ವಿಕಾರ ಮನೋಭಾವನೆಯಿಂದ ನಿರೀಕ್ಷಿಸುತ್ತಿದ್ದಾನೆ.

ಈ ಆಟವನ್ನು ನೋಡಬೇಕು; ಅದಕ್ಕೆ ಬಲ್ಲವರಾಗಬೇಕು. ಅಂತರಂಗದಲ್ಲಿ ಇಂಬುಗೊಂಡು ತುಂಬಿಕೊಂಡಿರುವ ಶಂಭುಲಿಂಗನ ಅರಿವು. ಆ ಶಂಭುಲಿಂಗವೇ ದೊರೆ. ಅವನನ್ನು ಅರಿಯಬೇಕು; ಪ್ರಜ್ಞಾವಂತರಾಗಬೇಕು. ಆತ್ಮದ ಎಚ್ಚರ ಅಖಂಡವಾದಾಗ ಅದು ಸಮಷ್ಟಿ ಪ್ರಜ್ಞೆ. ಮಾನವ ಚೈತನ್ಯ ಪರಿಪೂರ್ಣವೆನಿಸುವ ಹಾಗೆ ಉದಾತ್ತ ರೀತಿಯ ನಡೆ ನುಡಿಯ ಮೂಲಕ ಅಭಿವ್ಯಕ್ತಿಗೊಳ್ಳುವುದು ಈ ಪ್ರಜ್ಞಾವಿಕಾಸದಿಂದಾಗಿ. ಪ್ರಜ್ಞೆ ಎನ್ನುವುದು ಎಚ್ಚರ. ಯಾವ

ಗುಂಜೂ, ಯಾವ ಸಿಕ್ಕೂ ಅದಕ್ಕಿಲ್ಲ. ಸ್ವಸ್ಫುಟವಾದ ಅರಿವಿನ ಮೆದುವಾದ ಮಿಂಚಿನೆಳೆಗಳ ಸಾಂದ್ರತರ ಹಾಸು ಹೊಕ್ಕು ಪ್ರಜ್ಞೆ.

ಆತ್ಮದ ಮೂಲ ದ್ರವ್ಯವಾದ ಸಮಷ್ಟಿ ಚೇತನದ ಅರಿವಿನಿಂದ ತಾನು ಸಾಕ್ಷಿಎನ್ನುವ ಪರಮ ಜ್ಞಾನದ ಸಾಕ್ಷಾತ್ಕಾರವೇ ಇಂಥ ಹಾಡಿನ ರಚನೆಗೆ ಸಾಮುಗ್ರಿ ಎನ್ನುವ ಮಾತನ್ನು ವಿಮರ್ಶಕ ಮರೆಯುವಂತಿಲ್ಲ. ಆದುದರಿಂದ ಜೀವನದ ಸಂಕೀರ್ಣಾನುಭವ ಕಾವ್ಯಕ್ರಿಯೆಗೆ ಒಳಪಟ್ಟು, ಆಧ್ಯಾತ್ಮಿಕ ಅನುಭೂತಿಯ ಆನಂದಾನುಭವಕ್ಕೆ, ರಸಾವಿಷ್ಕಾರಕ್ಕೆ ತಕ್ಕ ಸಾವಯವ ಸಮಗ್ರತೆಯನ್ನು ಪಡೆಯುವುದರಲ್ಲಿ ಸಫಲವಾಗಿದೆ.

ನಿಜಗುಣರ ರಚನೆಗಳು - ಅನುಭಾವ ಪದಗಳು - ಹಾಡಿನ ಸಾಮಾನ್ಯವಾದ ಸೀಮಿತ ಸ್ತರವನ್ನು ಮೀರಿ ಅರ್ಥವ್ಯಾಪ್ತಿ ಅಪರಿಮಿತ ವಸ್ತು ಪ್ರತಿರೂಪಗಳನ್ನು ಒಳಗೊಂಡು ವ್ಯಕ್ತಿನಿಷ್ಠವಾದ ಕಾವ್ಯ ಹೇಗೆ ವಸ್ತುನಿಷ್ಠವಾಗಬಹುದು ಎನ್ನುವುದಕ್ಕೆ ಮಾದರಿಯಾಗಿವೆ.

ಸದಾಶಿವನು ಮೂಲ ಪ್ರಣವ ನಾದಾತ್ಮಕ. ಪ್ರಣವದ ಉಪಾಸನೆ ಸಂಗೀತದ ಗುರಿ. ಪ್ರಣವದ ಚಿಂತನೆ ಆತ್ಮದ ಉಸಿರು; ಎರಡನ್ನೂ ಸಾಧಿಸಿ, ಜೀವನದ ಅಖಂಡ ವ್ಯಾಪ್ತಿಯಲ್ಲಿ ದೀಪ್ತವಾದ ದಿವ್ಯ ಜ್ಯೋತಿಯನ್ನು ಕಂಡ ದ್ರಷ್ಟಾರರು ನಿಜಗುಣರು. ಅವರು ಹೊರಗೂ ಬೆಳಗಿದ,ಒಳಗೂ ಬೆಳಗಿದ ನಿರ್ಮಲವಾದ ಪರಂಜ್ಯೋತಿ.

ಲೇಖಕರು :
ಡಾ॥ ಗೊರೂರು ರಾಮಸ್ವಾಮಿ ಅಯ್ಯಂಗಾರ್

ಮುಪ್ಪಿನ ಷಡಕ್ಷರಿ ಬೋಧಿಸಿದ ಮುಕ್ತಿಮಾರ್ಗ

ಹನ್ನೆರಡನೆಯ ಶತಮಾನದಲ್ಲಿ ಕನ್ನಡ ಸಾಹಿತ್ಯ ಮತ್ತು ಜನಜೀವನಕ್ಕೆ ವೀರಶೈವ ವಚನಕಾರರ ಪ್ರವೇಶದಿಂದ, ಅಪೂರ್ವವಾದ ಶಕ್ತಿಯೂ ಕ್ರಾಂತಿಯೂ ಆಳವಿಸ್ತಾರಗಳೂ, ವೈಚಾರಿಕತೆ ನಾವಿನ್ಯ ವೈವಿಧ್ಯತೆಗಳೂ, ವಿಶ್ವಮಾನ್ಯ ಯೋಗ್ಯತೆ ಗುಣಗಳೂ ಉಂಟಾದವು. ಆ ಪ್ರಭಾವವೇ ಇಂದೂ ಪರಿಣಾಮಕಾರಿಯಾಗಿ ನಮ್ಮ ಬಾಳನ್ನು ರೂಪಿಸುತ್ತಿವೆ. ಪ್ರಜಾಪ್ರಭುತ್ವದ ಅಡಿಗಲ್ಲುಗಳಾದ ಜಾತ್ಯಾತೀತತೆ, ಸರ್ವಸಮಾನತ್ವ ಸಚ್ಚಾರಿತ್ರ್ಯ, ಸೇವೆಗಾಗಿ ಬಾಳ್ವೆ ಈ ಧ್ಯೇಯಗಳನ್ನೆಲ್ಲ ವೀರಶೈವ ವಚನಕಾರರು ಎಂಟುನೂರು ವರುಷಗಳ ಹಿಂದೆಯೇ ಜನಜೀವನದಲ್ಲಿ ಹಾಸುಹೊಕ್ಕಾಗಿ ಬೆಳೆಸಿದರು. ಈ ಧ್ಯೇಯ ಸಾಧನೆಗಾಗಿಯೇ ಹಾಡುಗಬ್ಬಗಳನ್ನು ರಚಿಸಿ - ಅವುಗಳಲ್ಲಿ ಜೀವನಾನುಭವ, ತತ್ವಜ್ಞಾನ, ವೈರಾಗ್ಯ ದೈವಭಕ್ತಿಗಳನ್ನು ತುಂಬಿದವನು ಶ್ರೇಷ್ಠ ಅನುಭಾವೀ ವರಕವಿ, ಮುಪ್ಪಿನ ಷಡಕ್ಷರಿದೇವ. ಷಡಕ್ಷರಿ, ಜ್ಞಾನಸಾರವನ್ನೆಲ್ಲ ಸುಲಭವಾದ ಶೈಲಿಯಲ್ಲಿ ಪಾಮರರಿಗೂ ಅರ್ಥವಾಗುವಂತೆ, ಹಾಡಲು ಹಿತವಾಗಿ ರಮಣೀಯವಾಗಿರುವಂತೆ, ರಾಗ ಧಾಟಿ ಸ್ವರಗಳಿಂದ ಆಪ್ಯಾಯಮಾನವಾಗಿ ಅನೇಕ ಹಾಡುಗಳನ್ನು ರಚಿಸಿದ್ದಾನೆ. ವಚನಕಾರರು ಹೇಗೆ, ಸುಲಭತೆ ಸರ್ವಗ್ರಾಹ್ಯತೆ ಸಹೃದಯರ ಮನ್ನಣೆ ಇವುಗಳಿಗಾಗಿ ನೇರ ಸಂಭಾಷಣಾ ಕ್ರಮದ ವಚನಗಳ ಮಾರ್ಗವನ್ನು ಆರಿಸಿಕೊಂಡರೋ ಹಾಗೆಯೇ, ಮುಪ್ಪಿನ ಷಡಕ್ಷರಿಯೂ ಅದೇ ಉದ್ದೇಶಕ್ಕಾಗಿ, ತನ್ನ ಉದಾತ್ತ ವಿಚಾರಗಳನ್ನು ತಿಳಿಸಲು ಹಾಡುಗಳ ವಾಹಕವನ್ನು ಉಪಯೋಗಿಸಿಕೊಂಡನು. ನಾನಾ ಕೋಟಲೆಯಲ್ಲಿ ತೊಳಲುತ್ತಿರುವ ಮಾನವ ಕೋಟಿಗೆ, ತನ್ನ ಉದ್ಧಾರಕ ಸಂದೇಶವನ್ನು, ನೀಡುವುದಷ್ಟೇ ಅವನ ಮುಖ್ಯ ಗುರಿಯಾಗಿತ್ತು - ತನ್ನ ಕವಿತ್ವದ ಹೆಮ್ಮೆ ಪ್ರಚಾರವಲ್ಲ ಮನುಷ್ಯಸ್ವಭಾವ ಹಾಡಿಗೆ ಒಲಿಯುವುದು ಎಂಬುದನ್ನು ಅರಿತಿದ್ದ ಅವನು, ಹಾಡಿನ ಮೂಲಕವೇ ಜನರ ಮುಕ್ತಿಯನ್ನು ಸಾಧಿಸುವ ಮಾರ್ಗವನ್ನು ಕೈಕೊಂಡನು.

ಲೋಕೋದ್ಧಾರಕರಾದ ಮಹನೀಯರು, ಎಂದಿನಿಂದಲೂ ಮಾನವರ ಉದ್ಧಾರಕ್ಕಾಗಿಯೂ ಜ್ಞಾನಬೋಧೆಗಾಗಿಯೂ ಹಾಡುಗಬ್ಬ, ಗೀತೆ ಕವನಗಳ ಮಾರ್ಗವನ್ನು ಆರಿಸಿಕೊಂಡಿದ್ದಾರೆ. ರಾಮಾಯಣ ಭಾರತಗಳೂ ಸಹ ಗಾನಮಯ ಕಾವ್ಯಗಳೆ. ಅನೇಕ ಶಿವ ಪುರಾಣಗಳೂ ಗಾನಕಾವ್ಯಗಳೆ. ರಾಮಾಯಣವನ್ನು ವಾಲ್ಮೀಕಿ ಋಷಿ, ಕುಶಲವರಿಂದ ಹಾಡಿಸುವುದಕ್ಕಾಗಿಯೇ ಬರೆದನೆಂಬ ಕಥೆಯಿದೆ. ಭಗವದ್ಗೀತೆ ದೇವರೇ "ಹಾಡಿದ್ದು", "ನಾದಪ್ರಿಯ ನಮ್ಮ ಶಿವ" ಎಂದು ವಚನಕಾರರೇ ಹಾಡಿದ್ದಾರೆ. ಹಾಗೆ ನೋಡಿದರೆ ವಚನಗಳೆಲ್ಲ ಹಾಡುಗಬ್ಬಗಳೆ. ಅವುಗಳಲ್ಲಿ ಹಾಡುಗಳ ಮಾಧುರ್ಯವೂ ಪದಜೋಡಣೆಯೂ ಅಚ್ಚುಕಟ್ಟೂ ನಾದಸೌಂದರ್ಯವೂ ಸ್ವರಮೇಳವೂ ಇವೆ. ಮಾತು, ಸುಲಭವಾಗಿದ್ದರೂ, ಅರ್ಥದಲ್ಲಿ ಆಳವೂ ಪರಿಪಕ್ವತೆಯೂ ಗಹನ ನಿರೂಪಣೆಯೂ ಇದೆ. ಅವು ಶಾಸ್ತ್ರೀಯ ಸಂಗೀತ ಗಾಯನಕ್ಕೂ ಅಳವಡುವದೆಂಬುದನ್ನು ಈಚಿನ ವಿದ್ವಾಂಸರು ಹಾಡಿ ಸಿದ್ಧಪಡಿಸಿದ್ದಾರೆ. ಸ್ವತಃ ಬಸವಣ್ಣನವರನ್ನೇ ಕನ್ನಡ ಕವಿಗಳು "ಕವಿ ಪಂಡಿತ ಗಾನ ಚಕ್ರವರ್ತಿ" ಎಂದು ಸಂಬೋಧಿಸಿದ್ದಾರೆ. ಭಕ್ತರು ಸಾಧಾರಣವಾಗಿ ಗಾಯಕರೂ ಆಗಿರುತ್ತಾರೆ. ಭಕ್ತಿಗೆ ಗಾಯನವೂ-ಚಕ್ರಕ್ಕೆ ಎಣ್ಣೆಯಂತೆ ಒಂದು ಉಪಕರಣ (ಗಾಯನವಿಲ್ಲದವ ಭಕ್ತನಲ್ಲವೆಂದು ಅರ್ಥವಲ್ಲ). ಹರಿಹರನೇ ಲಿಂಗಾರ್ಚನೆಯ ರಗಳೆಯಲ್ಲಿ ಬಸವಣ್ಣನವರು ರಾಗಗಳಿಂದಲೇ ಶಿವನನ್ನು ಅರ್ಚಿಸಿದರೆಂದು ಹೇಳುತ್ತಾನೆ. "ಪೊಗಳಿ ತಣಿಯದೆ ಬಾಯ್ವಿಟ್ಟು ನಿಂದೊಮ್ಮೆ, ಹಾಡಿ ನೋಡುವೆನೆಂದು ಮನವಿಟ್ಟು, ಲಲಿತ ಬಂಗಾಳದಿಂದೊ ಅದು ನಿಮ್ಮಂ ಹಾಡಿ, ಮಲಹರಿ ವರಾಳಿಯಿಂದೊ ಅದು ನಿಮ್ಮಂ ಹಾಡಿ, ದೇಶಗುರ್ಜರಿಗಳಿಂದೀಶ ನಿಮ್ಮಂಹಾಡಿ, ದೇಶಾಕ್ಷಿಗೌಳದೆ ಮಹೇಶ ನಿಮ್ಮಂ ಪಾಡಿ, ಬತ್ತೀಸರಾಗದಿಂ ಕರ್ತುರ ನಿಮ್ಮಂ ಹಾಡಿ, ಚಿತ್ತದೊಡೆಯನೆ ಮತ್ತೆ ಮತ್ತೆ ನಿಮ್ಮಂ ಹಾಡಿ" ಎಂದು ಹಾಡುತ್ತಾನೆ. (ಬಸವಣ್ಣನವರು ದೇಶಿಯಲ್ಲಿ ಹಾಡಿದರೆಂಬುದನ್ನು ನಾವು ಗಮನಿಸಬೇಕು) ವೀರಶೈವ ಸಾಹಿತ್ಯಗಳಾದ ಶಾಖೆಗಳಾದ ಕೈವಲ್ಯ ಸಾಹಿತ್ಯ ಅಥವಾ ಶರಣ ಸಾಹಿತ್ಯ ಸಾಗರ, ನಿಜಗುಣ ಶಿವಯೋಗಿಗಳ ಅದ್ಭುತ ಜ್ಞಾನ ಅಪೂರ್ವ ವ್ಯಕ್ತಿತ್ವ ಅಸಾಧಾರಣ ಪ್ರತಿಭೆಗಳಿಂದ ಒಂದು ವ್ಯವಸ್ಥಿತ ರೂಪಕ್ಕೆ ಬಂದು, ಮುಪ್ಪಿನ ಷಡಕ್ಷರಿಯು ಅದರ ಒಂದು ಪವಿತ್ರ ಗಂಗೆಯಾಗಿ ಕಂಗೊಳಿಸುತ್ತಿದ್ದಾನೆ.**

ನಮ್ಮ ಯಾವ ಕವಿಗಳಿಗೂ ತಮ್ಮ ಜೀವಿತದ ಚಾರಿತ್ರ್ಯಾಂಶಗಳನ್ನು ಬರೆದಿಡುವುದರಲ್ಲಿ ಶ್ರದ್ಧೆ ಇಲ್ಲ. ಅವರ ಕೃತಿಗಳೇ, ಅವರ ಸಂದೇಶವೇ ಅವರ ಬಾಳಿನ ವ್ಯಾಖ್ಯಾನ. ಕೀರ್ತನ ಕೇಸರಿ (ಪದ್ಮಶ್ರೀ ಡಾಕ್ಟರ್) ಬಿ. ಶಿವಮೂರ್ತಿ ಶಾಸ್ತ್ರಿಗಳು, "ಮುಪ್ಪಿನ ಷಡಕ್ಷರಿ ನಿಜಗುಣ ಶಿವಯೋಗಿಗಳ ಸಮಕಾಲೀನರೆಂದೂ, ಶಂಭುಲಿಂಗನ ಬೆಟ್ಟದಲ್ಲಿಯೇ ಇವರ ಗವಿ ಇದೆಯೆಂದೂ ಬರೆದಿದ್ದಾರೆ" ಮುಪ್ಪಿನ ಷಡಕ್ಷರಿಯು, "ಎರಗಂಬಳಿಯ ಸಿದ್ಧವರಲಿಂಗ ನಾಮದಿಂ, ಹರನೆ

**ಸುಬೋಧಸಾರ ಗ್ರಂಥದ ಮುನ್ನುಡಿಯಲ್ಲಿ ಕಾವ್ಯಾನಂದರು.

ನೀನೆನಗೆ ದೀಕ್ಷೆಯ ಮಾಡಿದೆ. ವರ ಷಡಕ್ಷರಿ ದೇವರ ನಾಮದಿಂದೆನಗೆ ಅರುಹಿದಿರಿ ಶಿವಶಾಸ್ತ್ರದನುಭವವನು" ಎಂದು ಹೇಳಿ ತಮ್ಮ ಗುರುವಿನ ನಾಮಸ್ಮರಣೆ ಮಾಡಿದ್ದಾನೆ.

ಮುಪ್ಪಿನ ಷಡಕ್ಷರಿದೇವನ ಈ ಮುಂದಲ ಹಾಡನ್ನು ಕೇಳದ ಕನ್ನಡಿಗರು ಇಲ್ಲವೆಂದು ಧಾರಾಳವಾಗಿ ಹೇಳಬಹುದು.

ಸಕಲಕೆಲ್ಲಕು ನೀನೆ
ಅಕಳಂಕ ಗುರುವೆಂದು
ನಿಖಿಲ ಶಾಸ್ತ್ರಗಳು ಪೇಳುತಿರಲರಿತೆನು ॥

ಅವರವರ ದರುಶನಕೆ ಅವರವರ ವೇಷದಲಿ
ಅವರವರಿಗೆಲ್ಲ ಗುರು ನೀನೊಬ್ಬನೆ ॥
ಅವರವರ ಭಾವಕ್ಕೆ ಅವರವರ ಪೂಜೆಗಂ
ಅವರವರಿಗೆಲ್ಲ ಶಿವ ನೀನೊಬ್ಬನೆ ॥

ಹೋರಾಟ ವಿಕ್ಕಿಸಲು ಬೇರಾದೆಯಲ್ಲದೆ
ಬೇರುಂಟೆ ಜಗದೊಳಗೆ ಎಲೆ ದೇವನೆ ।
ಆರು ಅರಿಯರು ನೀನು ಬೇರಾದ ಪರಿಗಳನು
ಮಾರಾರಿ ಶಿವ ಷಡಕ್ಷರಿ ಲಿಂಗವೆ ॥

ಈ ಮೇಲಿನ ಹಾಡನಲ್ಲಿ ಮುಪ್ಪಿನ ಷಡಕ್ಷರಿಯು "ದೇವರು ಒಬ್ಬನೇ. ಅವನೇ ಜಗತ್‌ಸೃಷ್ಟಿಸ್ಥಿತಿಲಯಗಳಿಗೆಲ್ಲ ಕಾರಣ. ಇಬ್ಬರೆಂಬುದು ಹುಸಿನೋಡಾ. ಭಕ್ತರು ಯಾವ ಯಾವ ರೀತಿಯಲ್ಲಿ ಪೂಜಿಸಿದರೆ ಅವರವರಿಗೆ ಅದೇ ರೀತಿಯಲ್ಲಿ ಶಿವ ಒಲಿಯುತ್ತಾನೆ" ಎನ್ನುತ್ತಾನೆ.

ಸದಾ ಶಿವಧ್ಯಾನ

ಮುಪ್ಪಿನ ಷಡಕ್ಷರಿ, ಶುದ್ಧ ಸಾತ್ವಿಕ, ಅಕೃತ್ರಿಮ ಭಕ್ತಿಯ ಶಿವಶರಣ. ಈಶ್ವರ ಸಾಕ್ಷಾತ್ಕಾರವೇ ಅವನ ಜೀವಿತದ ಗುರಿ. ಇದಕ್ಕೆ ಮಾರ್ಗ ಸದಾ ಶಿವಧ್ಯಾನಪರನಾಗಿರುವುದು. "ನಿನ್ನ ನೆನೆವ ಮನವ ಬಯಸುವೆನು.ನಿನ್ನ ನೆನೆವುದೆ ಹರುಷ,ನಿನ್ನ ನೆನೆವುದೆ ಪರುಷ, ನಿನ್ನ ನೆನೆವುದೆ ಕಾಮಧೇನು ನನಗೆ. ನಿನ್ನ ನೆನೆವುದೆ ತಪ, ನಿನ್ನ ನೆನೆವುದೆ ಜಪ ನಿನ್ನ ನೆನೆವುದೆ ಪರಮತತ್ವ". ಎಂಬುದು ಅವನ ದೃಢತೆ. ದೇಹದಂಡನೆಯನ್ನು ಮಾಡಿ ತೀರ್ಥ ಕ್ಷೇತ್ರಗಳಲ್ಲಿ ತೊಳಲಿ ಗಿರಿಗಹ್ವರಗಳಲ್ಲಿ ಬಳಲುವುದು ಎಲ್ಲರಿಗೂ ಸಾಧ್ಯವಿಲ್ಲ. ಭಕ್ತನಿಗೆ ಶಿವನೆ ಮಾತೆ, ತಾತ, ಬಂಧು ಬಳಗ, ಅವನೇ ಪತಿ ಅವನೇ ಹಿತ; ಅವನೇ ಕುಲಗುರು, ವಿದ್ಯಾಗುರು ದೀಕ್ಷಾಗುರು ಮೋಕ್ಷಾಗುರು. ಶರಣ, ಶಿವನಲ್ಲಿ ಹೀಗೆ ಪೂರ್ಣವಾಗಿ ವಿನಮ್ರನಾಗುತ್ತಾನೆ.

ದೇಹದ ಮೋಹವನ್ನು ಬಿಡಬೇಕು

ಭಕ್ತನ ಮೊದಲ ಆವಶ್ಯಕ ಕರ್ತವ್ಯ, ದೇಹದ ಮೋಹವನ್ನು ಬಿಡುವುದು. ಇದು ಎಂತಹ ಜ್ಞಾನಿಗಳಿಗೂ ತುಂಬ ಪ್ರಯಾಸದ ಕಾರ್ಯ "ಜಡತ್ವ ನಿದ್ರೆ ಆಕಳಿಕೆ ಹಸಿವು ಬಾಯಾರಿಕೆ ವ್ಯಸನ ಸುಖ ದುಃಖ ಇವುಗಳ ಬೀಡು ದೇಹ. ಹಗಲು ಇರುಳು, ಹೊಟ್ಟೆ ತುಂಬ ಬೇಕು. ಇದು ತೊಗಲ ಚೀಲ; ಶುಕ್ಲದೊರತೆ ಕರುಳ ಜಾಳಿಗೆ, ಅಘದ ಬೀಡು ಮುಕುತಿ ಗೋಡು. ಇದನ್ನು ಹಗಲೂ ಇರುಳೂ ರಕ್ಷಿಸಿ ಕೊನೆಗೆ ಯಮನಿಗೊಪ್ಪಿಸುವೆ. ಅಂಗವಿರಲಿ, ಆದರೆ ಹೃದಯದಲ್ಲಿ ಮಂಗಳಾತ್ಮ ಷಡಕ್ಷರಿಯ ಲಿಂಗವ ನೆನೆ" ಎಂಬುದು ಮುಪ್ಪಿನ ಷಡಕ್ಷರಿಯ ಸಂದೇಶ.

ಈ ಜಗತ್ತು ಮಾಯೆ

ಹೀಗೆ ಪರಮೇಶ್ವರನಲ್ಲಿ ಪೂರ್ಣಸಮರ್ಪಣಭಾವ ವುಂಟಾಗಬೇಕಾದರೆ, ಈ ಜಗತ್ತು ಸತ್ಯವೆಂಬ ಮಾಯೆ ಅಳಿಯಬೇಕು. ಮಾಯೆಯನ್ನು ಜಯಿಸುವುದು ಸಾಮಾನ್ಯರಗೆ ಸಾಧ್ಯವಿಲ್ಲ."ಚಂದ್ರನಂತೆ ಮುಖ, ಕಮಲದಳದಂತೆ ನಯನ, ಪೊಂಗಳಸದಂತ ಕುಚ, ಕನಕಲತೆಯಂತ ಅಂಗ, ಬಿಂಬಫಲದಂತ ಅಧರ; ಕಡೆಗಣ್ಣೋಟ, ಮೃದುವಚನ, ದೈನ್ಯೋಕ್ತಿ ನಸುಮುನಿಸು ಚಾತುರ್ಯ, ಬೆಳುನಗೆ" ಇವು ಮಾಯೆಯ ಆಕರ್ಷಣೆ. "ಮಾಯೆಯಲ್ಲಿ ಕಾಲನಿಹ, ಕಾಮನಿಹ, ನೇಣುಕತ್ತರಿಗಳಿವೆ. ವಿಷವಿದೆ ನರಕವಿದೆ. ಎಲೆ ಮಾಯೆ ನಿನ್ನನ್ನು ಗೆಲುವರಾರು?" ಎನ್ನುತ್ತಾರೆ ಮುಪ್ಪಿನಾರ್ಯರು. ಪ್ರಭುಲಿಂಗ ಲೀಲೆಯಲ್ಲಿ ಚಾಮರಸನು "ಮಾಯೆ, ಸರ್ವಾಂಗ ಸುಂದರಿಯಾಗಿ ಬಂದಾಗ, ದೀರ್ಘಕಾಲ ಇಂದ್ರಿಯನಿಗ್ರಹ ತಪಸ್ಸುಗಳನ್ನು ಆಚರಿಸುತ್ತಿದ್ದ ಋಷಿಗಳೂ ಯತಿಗಳೂ ಜಿತೇಂದ್ರಿಯರೂ ನಡನಡನಡುಗಿ ಆಕೆಯ ಪಾದಾಕ್ರಾಂತರೆಂದೂ ಅಲ್ಲಮಪ್ರಭು ಒಬ್ಬ ಮಾತ್ರ ಮಾಯೆಯನ್ನು ಸೋಲಿಸಲು ಸಾಧ್ಯವಾಯಿತೆಂದೂ" ಹೇಳುತ್ತಾನೆ. ದೇಹಾಭಿಮಾನವನ್ನು ಧರೆಯ ಸುಖದ ಭೋಗಗಳನ್ನೂ ಬಿಟ್ಟಲ್ಲದೆ ಮಾಯೆಯನ್ನು ಗೆಲುವುದು ಸಾಧ್ಯವಿಲ್ಲ. "ಸರ್ವ ಸಂಗ ಪರಿತ್ಯಾಗಿಯಾದವನಿಗೆ ಯಾರ ಹಂಗೇನು ? ನನಗೆ ಎಲ್ಲ ಕಷ್ಟವನ್ನೂ ಕೊಟ್ಟಲ್ಲದೆ ನಿನ್ನ ಧ್ಯಾನ ಬರದು" ಎನ್ನುತ್ತಾನೆ ಷಡಕ್ಷರಿ. "ಒಡೆದ ಗಡಿಗೆ, ಹರಿದ ಜೋಳಿಗೆ, ಎಡಗೈಯ ಮುರಿದ ಕೋಲು ಇವುಗಳನ್ನು ಹಿಡಿದು ಹೊಟ್ಟೆತುಂಬಾ ತಿನ್ನೋಣ ಎಂದು ಊರನ್ನೆಲ್ಲ ಬಿಕ್ಷೆಮಾಡಿದರೆ, ತಿರುದುದೆಲ್ಲ ದಾರಿಯಲ್ಲಿ ಚೆಲ್ಲಿ ಹೋಗಲಿ; ಮತ್ತೆ ತಿರಿಯಲು ಹೋದರೆ ಯಾರೂ ಪುನಃ ಭಿಕ್ಷೆ ನೀಡದಿರಲಿ. ಹೊದೆಯುವ ಹಳೆಯ ಬೊಂತೆ, ಕೈಕಾಲಿಗೆ ಸಾಕಾಗದಿರಲಿ; ಹೋದೆಡೆಯೆಲ್ಲ ನನ್ನನ್ನು ಅಟ್ಟಿ ಓಡಿಸಲಿ. ಹೀಗಾದಲ್ಲದೆ ನನಗೆ ನಿನ್ನ ಧ್ಯಾನ ಬರದು" ಎನ್ನುತ್ತಾನೆ ಷಡಕ್ಷರಿ.

ದೇಹನೇ ದೇಗುಲ

ಈಶ್ವರನನ್ನು ಪೂಜಿಸಲು, ದೇವಾಲಯ, ಪೂಜಾದ್ರವ್ಯಗಳು ಪೂಜಾ ಪಾತ್ರೆಗಳು ಇವೆಲ್ಲ, ಸರ್ವಸಮರ್ಪಣ ಭಾವದ ಮುಪ್ಪಿನ ಷಡಕ್ಷರಿಗೆ ಆವಶ್ಯಕವಿಲ್ಲ " ಎಲೆ ಲಿಂಗವೇ ನನ್ನ ದೇಹವೇ ನಿನಗೆ ಉನ್ನತಾಲಯ. ಕಾಲುಗಳೇ ಕಂಭಗಳು. ತೋಳುಗಳೇ ಮದನಕೈ ತಲೆಯೇ ಸೌವರ್ಣ ಕಲಶ. ನಾಲಗೆ ಘಂಟೆ, ನಯನಗಳೇ ಜ್ಯೋತಿ ಮುಖವೇ ದ್ವಾರ, ದಂತವೇ ಮಿನುಗುತಿಹ ಮೌಕ್ತಿಕದ ಸೂಸಕ. ನನ್ನ ಸಮತೆಯೇ ಜಲವು, ನನ್ನ ಸದ್ಗುಣ ಗಂಧ, ನನ್ನ ನಿತ್ಯತ್ವವೇ

ಅಕ್ಷತೆ, ನನ್ನ ಜ್ಞಾನವೇ ಪುಷ್ಪ, ನನ್ನ ಭಕ್ತಿಯೇ ಬೋನ, ನನ್ನ ಮನಸ್ಸೇ ನಿನಗೆ ಪೂಜಾರಿ" ಹೀಗೆ ದೇಹ ಮನಸ್ಸುಗಳನ್ನೇ ದೈವೀಮಯ ಮಾಡಿದ ಷಡಕ್ಷರಿಗೆ, ಲಿಂಗ ಸಾಕ್ಷಾತ್ಕಾರಕ್ಕೆ ಕೊರತೆ ಎಲ್ಲಿ ?

ಆದರೆ ಇಂದ್ರಿಯಗಳ ಇಚ್ಛೆಗೆ ಸೋಲುವ ಮನಸ್ಸಿಗೆ ಇಂದುಧರನ ಕಡೆಗೆ ಮನವಿಡುವ ಏಕಾಗ್ರತೆ ದೊರಕುವುದು ಅತಿ ಕಷ್ಟ. ಪರ್ವತಾಗ್ರದಲ್ಲಿ ಪರ್ಣಶಾಲೆಯನ್ನು ಕಟ್ಟಿ, ಕಂದಮೂಲ ಫಲಗಳನ್ನು ಸವಿಯುತ್ತ ತಪಸ್ಸು ಮಾಡಿ, ಇಂದ್ರಜಾಲಗಳನ್ನು ಮಾಡಬಹುದು. ದೂರದೃಷ್ಟಿ, ದೂರಶ್ರವಣ ಮಾರಣಾದಿ ಮಂತ್ರ ತಂತ್ರ, ಗಗನ ಸಂಚಾರ, ಮಾರಿ, ಯಕ್ಷಿಣಿ ರಚಿಸಬಹುದು. ಹುಲಿಯ ಕೂಡ ಸೆಣಸಬಹುದು. ಮಲೈಗಜದ ಇದಿರಿನಲ್ಲಿ ನಿಂತು ಕಾದಬಹುದು. ಕುಂಭಕಾದಿ ಯೋಗದಿಂದ ಕುಂಭಿಣಿಯನ್ನು ಬಿಟ್ಟು, ಅಂಬರವ ಏರಬಹುದು. ಎಲ್ಲ ವ್ರತಗಳನ್ನೂ ನಡೆಸಬಹುದು. ಆದರೆ ಎಲ್ಲ ಇಂದ್ರಜಾಲ, ಮಹೇಂದ್ರಜಾಲಗಳಿಗೂ ಅತೀತನಾದ ಚನ್ನ ಷಡಕ್ಷರಾಂಕ ಲಿಂಗ, ತಾನೇ ತಾನಾಗಿ ಒಲಿಯುವ ತನಕ, ಏನು ಮಾಡಿದರೂ ಫಲವಿಲ್ಲ. ಮನವನ್ನು ಹತೋಟಿಯಲ್ಲಿಟ್ಟ ಹೊರತು, ದೈವ ಸಾಕ್ಷಾತ್ಕಾರವಿಲ್ಲ." ಮನವೆಂಬುದು ಮರ್ಕಟ. ಹಿಡಿವುದನೆ ಹಿಡಿಯದಯ್ಯ, ಹಿಡಿಯದುದನೆ ಹಿಡಿವುದಯ್ಯ. ಕೆಡುವ ನಡೆಯ ನಡೆಸಿ ಎನ್ನ ಭವಕೆ ಬರಿಸಿತು. ನಾನು ನಿಮ್ಮ ನೆನೆವೆನೆನಲು, ತಾನು ನಿಮ್ಮ ನೆನೆಯದಯ್ಯ. ಶ್ವಾನನಂತೆ ಹಲವು ಕಡೆಗೆ ಹರಿಯುತಿರ್ಪುದು. ಜ್ಞಾನ ಮೌನ ಜಪದೊಳಿರದು. ಮಂಗಳಾತ್ಮ ಲಿಂಗವೇ, ಈ ನನ್ನ ಹೀನ ಮನವನ್ನು ಶಿಕ್ಷಿಸು" ಎಂದು ಭಕ್ತ ಷಡಕ್ಷರಿ, ಅಳಲುತ್ತಾನೆ.

ಜೀವಿತದಂತೆ ಸಾಹಿತ್ಯ

ವೈರಾಗ್ಯಮೂರ್ತಿಯಾದ ಮುಪ್ಪಿನ ಷಡಕ್ಷರಿಯ, ಬಾಳು, ಸಾಹಿತ್ಯ ರಚನೆ ಎರಡೂ ಒಂದನ್ನೊಂದು ಅನುಸರಿಸಿ ನಡೆದು ಪರಸ್ಪರ ಪೂರಕಗಳಾದವು. ಬಾಳಿನಂತೆ ಸಾಹಿತ್ಯವೂ ಪರಿಶುದ್ಧವೂ ಅನುಭವಪೂರ್ಣವೂ, ಈಶ್ವರಾರ್ಪಿತವೂ ಸಾಧನಾ ಮಾರ್ಗವೂ ಆಯಿತು. ಜೀವನ ಹೇಗೆ ಲಿಂಗಸಾಕ್ಷಾತ್ಕಾರಕ್ಕೆ ಮುಡುಪಾಯಿತೋ, ಸಾಹಿತ್ಯವೂ ಹಾಗೆಯೇ ಈಶ್ವರಾರ್ಪಿತವೂ ಸಾಧಕರಿಗೆ ಮಾರ್ಗದರ್ಶನವೂ ಆಯಿತು. ಲಿಂಗಸಾಕ್ಷಾತ್ಕಾರವನ್ನು ಹೊಂದಲು ಬಯಸುವವರಿಗೆ ನಿಜವಾದ ವೈರಾಗ್ಯವಿರಬೇಕು. ಹುಟ್ಟುವಾಗ ತರಲಿಲ್ಲ. ಹೋಗುವಾಗ ಒಯ್ಯಲಾರ. ಪರರ ಸ್ವತ್ತಿಗಾಗಿ ಆಸೆ ಮಾಡಿದೆ. ಸತ್ತುಹೋದ ಮೇಲೆ ಅರ್ಥ ಯಾರಿಗೆ ? ಪ್ರಾಪಂಚಿಕ ಐಶ್ವರ್ಯವನ್ನೆಲ್ಲ ಭಕ್ತ, ತಿರಸ್ಕರಿಸಬೇಕು. ಅವು ಸ್ಥಿರವಲ್ಲ. "ತಿರುಕನೋರ್ವನೂರ ಮುಂದೆ" ಎಂಬ ಷಡಕ್ಷರಿಯ ಹಾಡು,ವಿನೋದಪ್ರದವಾಗಿರುವುದಾದರೂ " ಐಶ್ವರ್ಯವು ಎಷ್ಟು ಅಶಾಶ್ವತ, ಕನಸಿನ ಸಿರಿಯಂತೆ ಇಹಲೋಕದ ಸಿರಿ ಸಹ ಎಂಬುದರ ಸಂಕೇತವಾಗಿದೆ". ಮೆರೆಯುತಿರ್ದ ಭಾಗ್ಯವೆಲ್ಲ, ಹರಿದು ಹೋಯಿತೆಂದು ತಿರುಕ, ಮರಳಿ ನಾಚುತಿರ್ದ ಮರುಳನಂತೆ. ಇದನರಿದು ಷಡಕ್ಷರಿ ಲಿಂಗವನ್ನು ಹರುಷದಿಂದ ಭಜಿಸು. ನಿತ್ಯ ಸುಖ ತಪ್ಪದು " ಎನ್ನುತ್ತಾನೆ ಮುಪ್ಪಿನಾರ್ಯ.

ಶರಣನಿಗೆ ಸಮಚಿತ್ತ ಬೇಕು

ನಿಜವಾದ ಜ್ಞಾನವಿಲ್ಲದ ಬರಿಯ ಗ್ರಂಥಪಾಂಡಿತ್ಯದಿಂದ ಪ್ರಯೋಜನವಿಲ್ಲ. ಇಂದ್ರಜಾಲ ತುರಗಯಾನ ಯಕ್ಷಸಿದ್ಧಿ ಕೊರಳುಜಿರಳು ಅಗ್ನಿಸ್ತಂಭ ಉದಕಸ್ತಂಭ, ಗಣಿತ ಇವೆಲ್ಲ, ಒಂದು ಕಾಳು ನೆಲ್ಲಿಗಾಗಿ, ಮಂದರ ಪರ್ವತದಷ್ಟು ಜಳ್ಳುರಾಶಿ ತೂರಿದಂತೆ. ಭಕ್ತನು ಎಲ್ಲರನ್ನೂ ದೇವರಂತೆ ಕಾಣಬೇಕು. ಬೈವವರು, ಕೆಡಹಿ ತುಳಿಯುವವರು, ಕಟ್ಟಿ ಸುಲಿಗೆಮಾಡುವ ಕಳ್ಳರು, ಶತ್ರುವಾಗಿ ಬಂದು ಇರಿದು ಕೊಚ್ಚುವವರು, ಎನ್ನ ತಲೆಯ ಮೇಲೆ ಪಾದವನಿಡುವವರು, ಎಲ್ಲರೂ ಇಂದುಧರನ ರೂಪ ಎಂದು ಭಾವಿಸುವ ಸಮಚಿತ್ತವಿರಬೇಕು. ಕುರಿಯ ಕಾಯುತಲಿರಲಿ, ತರುವ ಕಾಯುತಲಿರಲಿ, ಕೆರವ ಹೊಲಿಯುತಲಿರಲಿ, ಕಟ್ಟಿಗೆಯನು ಹೊತ್ತು ಕಷ್ಟಪಡುತಿರಲಿ ಕಾಕರಾಗಲಿ ವಿಷಯಾನೀಕರಾಗಲಿ ಬಹಳ ಪೋಕರಾಗಲಿ, ವೇಶಿಯರನು ಕೂಡಿಕೊಂಡು ಅವರ ಹೆಗಲ ವಾಸದಲಿ ತೋಳನಿಡಿದುಕೊಂಡು ಬರಲಿ, ಈಶಲಾಂಛನಗಳಿದ್ದರೆ ಅವರನ್ನು ಶ್ರೀ ಷಡಕ್ಷರಾಕ್ಷನೆಂದು ನಮಿಸುವ ಸಮಚಿತ್ತವಿರಬೇಕು. ದೇವರಿಗೆ ಯಾವ ಯಾವ ರೂಪು, ಯಾವ ಯಾವ ಆಕಾರ ಎಂದು ಖಚಿತವಾಗಿ ಯಾರು ಹೇಳಬಲ್ಲರು ? ದೇವರು ಯಾವರೂಪಿನಲ್ಲಿ ಬರುತ್ತಾನೋ ಕಂಡವರಿಲ್ಲ. ಆದುದರಿಂದ ಅವನನ್ನು ಕುರಿತು ಅಂತು ಇಂತು ಎನಬಾರದು.

ಒಡೆಯ ನಮಗೆ ಏಕೆ ನಾಡ
ಗೊಡವೆ, ನಿಮ್ಮ ರೂಪು ಇರಲು
ಒಡೆಯನೆಂದು ನಮಿಸೆ ಶುದ್ಧ, ಹಲವದೇತಕೆ ।
ಮೃಡ ಷಡಕ್ಷರಾಂಕ ನಿಮ್ಮ
ಬೆಡಗು ತಿಳಿಯಲರಿವೆವಾಗಿ
ಒಡೆಯರುಗಳನಂತು ಇಂತು ಎನ್ನಬಾರದು ॥

ಭಕ್ತನಿಗೆ ಹಿರಿದು ಕಿರಿದು ಎಂಬುದಿಲ್ಲ. ಯಾವ ದ್ವಂದ್ವವೂ ಇಲ್ಲ. ಅಹಂಕಾರ ಮಮಕಾರಗಳಿಲ್ಲ. ಅಂಬಲಿ ಅಮೃತದನ್ನ, ಕಂಬಳಿ ಕನಕದುಪಟಿ, ಅಂಬುಧಿ, ಕಾಲುವೆ, ಕನಕದುಪ್ಪರಿಗೆ, ತಿಪ್ಪೆ, ಕನಕ ಶೈಲ, ಹುಲ್ಲುಮರಡಿ, ರನ್ನ, ಕಲ್ಲು, ಅರಳಮಂಚ ಮುಳ್ಳುಹಾಸು, ಸುಗಂಧಪುಡಿ, ಧೂಳು, ಕನಕದುಡಿದಾರ, ನೂಲು, ಎಲ್ಲ ಆತನಿಗೆ ಸಮ. ಪರಕೆ ಪರವಾದ ಲಿಂಗಶರಧಿಯಲ್ಲಿ ಮುಳುಗಿ, ಹೊರಗೆ ಮೆರೆದಿರುವ ಅವನಿಗೆ ಹಿರಿದು ಕಿರಿದು ತೋರದು. "ನನಗೆ ಭೋಗ ಭಾಗ್ಯ ಬೇಡ. ನಿಮ್ಮ ತೊತ್ತು ಸೇವೆ ನಿತ್ಯವಾಗಲಿ. ನನ್ನನ್ನು ಕಂದಿಸಿ ಬಾಧಿಸಿದವರಿಗೆ, ಕೊಂದವರಿಗೆ, ನನ್ನ ಪೂಜೆ ಫಲಗಳಾಗಲಿ. ಹಿಂದೆ ಬೈದವರಿಗೆ, ಮುಂದೆ ಬೈವವರಿಗೆ, ಕುಂದದೆಲ್ಲರ ನಡುವೆ ಬೈದಡವರಿಗೆ ಅಂದಣವನು ಏರುವಂತೆ ಭೋಗವಾಗಲಿ. ಹಿಂದೆನ್ನ ನಿಂದಿಸಿದ ಜನಂಗಳೆಲ್ಲ ಸುಖದೊಳಿರಲಿ" ಎಂಬುದೇ ಅಜಾತಶತ್ರುವಾದ ಷಡಕ್ಷರಿಯ ಬಯಕೆ.

ಸಂಶಯರಹಿತನಾಗಿ ಶಿವನನ್ನು ನಂಬಬೇಕು

ಶಿವಸಾಕ್ಷಾತ್ಕಾರವನ್ನು ಬಯಸುವ ಅನುಭಾವಿ ಭಕ್ತನು, ಸಂಶಯರಹಿತನಾಗಿ, ತನ್ನನ್ನು ನಂಬಿ ನೆಚ್ಚಿ ಕರೆಯುವವರನ್ನು, ಉದ್ಧಾರ ಮಾಡಲು ಈಶ್ವರನು ಸದಾ ಸಿದ್ಧನಾಗಿರುವನೆಂಬುದನ್ನು

ದೃಢವಾಗಿ ಅರಿಯಬೇಕು. ಭಕ್ತಿಯಿಲ್ಲದವರು ಮಾತ್ರ, "ಶಿವ ಅಂದು ಭಕ್ತರ ಉದ್ಧಾರ ಮಾಡಿದ. ಇಂದು ಮಾಡುತ್ತಾನೆಯೇ" ಎಂದು ಕೇಳಬಹುದು. "ಅಂದಿಗೊಬ್ಬ ಶಿವ, ಇಂದಿಗೊಬ್ಬ ಶಿವ ಎಂದು ನುಡಿವ ಪಾತಕರಿಗೆ ನರಕ, ತಪ್ಪದು. ಅಂದಿನವರು ಇಂದಿನವರು ಎಂದು ನುಡಿಯಬೇಡ". ಆದರೆ ಶಿವನು ಒಲಿಯಬೇಕಾದರೆ ಪ್ರತಿಯೊಬ್ಬ ವ್ಯಕ್ತಿಯೂ, ನಿತ್ಯ ನಿರ್ಮಲನಾಗಿ ಮನಸ್ಸನ್ನು ದೈವದಲ್ಲಿ ನಿಲ್ಲಿಸಿ, ಇಹಲೋಕದ ಭೋಗಲಾಲಸೆಯನ್ನು ಬಿಡಬೇಕು. ತನ್ನ ಮುಕ್ತಿಯನ್ನು, ತನ್ನ ಗುಣ ಪ್ರಯತ್ನಗಳಿಂದ ತಾನೇ ಸಾಧಿಸಿಕೊಳ್ಳಬೇಕು. ಹಿಂದಲವರು ಗವಿಗಳಲ್ಲಿ ಕುಳಿತು, ತನುವನ್ನು ಅಸ್ತಿ ಮಾಡಿಕೊಂಡರು; ಕೋಡುಗಲ್ಲು ತುದಿಯ ಮೇಲೆ ಕಾಲ ಗಗನಕೆ ನೀಡಿ ಉಗ್ರತಪಸ್ಸನ್ನು ಮಾಡಿದರು ಎಂದು ಅದನ್ನೇ ಸುಮ್ಮನೆ ಅನುಕರಿಸಬಾರದು. "ಮುನ್ನ ಮಾಡಿದವರ ಕಂಡು, ಇನ್ನು ನೋಡಿ ಮಾಡಿ ಬಹಳ, ಬನ್ನ ಬಡುತ ಇರಲು ಕಡೆಗೆ ಕೆಟ್ಟುವೋ-ಪುದು, ತನ್ನ ತಾನೇ ಪಕ್ವವಾಗಿ, ತನ್ನ ತಾನೇ ಪಥಕ್ಕೆ ಬರಲು ಚನ್ನ ಷಡಕ್ಷರಿಯ ಲಿಂಗ ತಾನೆ ಒಲಿವನು" ಎಂದು ಷಡಕ್ಷರಿ ಆಶ್ವಾಸನೆ ಕೊಡುತ್ತಾನೆ.

ಶರಣನಿಗೆ ಯಾರ ಹಂಗೂ ಇಲ್ಲ

ಶರಣನಿಗೆ ಯಾರ ಹಂಗೂ ಇಲ್ಲ. ಅವನು ಯಾರನ್ನೂ ಕಾಡಿ ಬೇಡಿ ಬಳಲುವುದಿಲ್ಲ. ಅವನಿಗೆ ಬೇಕಾದುದೆಲ್ಲ ಈಶ್ವರ ಕೃಪೆಯಿಂದ ನಿರಾಯಾಸವಾಗಿ ದೊರಕುತ್ತವೆ. "ಮೃಡನ ಪೂಜೆ ಮಾಡಲಿಕೆ ಮಡುವಿನ ಗಣಿಗಳುಂಟು, ಅಡವಿಯಲಿ ಕಾಡ ಪತ್ರಿ ಪುಷ್ಪಗಳುಂಟು ಒಡಲಿಗೆ ಅನ್ನ, ದುಡಿದರೆ ಉಂಟು. (ದುಡಿದರೆ ಉಂಟು ಎನ್ನುತ್ತಾನೆ. ಶರಣನಾದರೂ ಕುಳಿತು ಊಟಮಾಡುವುದಿಲ್ಲ) ಶಯನಕೆ ಗುಡಿಗಳುಂಟು. ಛಳಿಯನ್ನು ಹೋಗಲಾಡಿಸಲು ಒಡೆಯರು ಬಿಸುಟ ಅರಿವೆ ಉಂಟು. ಬುದ್ಧಿ ಹೇಳಲು ಆದ್ಯರ ವಚನಗಳುಂಟು, ಉದ್ಧರಿಸುವಡೆ ಶಿವನ ಮಂತ್ರವುಂಟು. ಅರ್ಧನಾರಿ ಎಂಬ ದೈವವಿದ್ದ ಬಳಿಕ, ಅನುಭಾವಿಗಳನ್ನು ಯಾಕೆ ಅಗಲಿಹೋಗಲಿ, ನರರ ಮೊಳ್ಕೆಯಿಂದ ನನಗೆ ಆಗಬೇಕಾದುದೇನು?" ಎನ್ನುತ್ತಾನೆ ಮುಪ್ಪಿನ ಷಡಕ್ಷರಿ. ಅವನ ವ್ಯಾಪಾರವೆಲ್ಲ ಈಶ್ವರನೊಂದಿಗೆ ಮಾತ್ರ.

ನಾನು ದೋಷಿ

ಮುಪ್ಪಿನ ಷಡಕ್ಷರಿಯ ವಿನಯ ಅನ್ಯಾದೃಶವಾದದು. ಆತ ತನ್ನಲ್ಲಿ ಸರ್ವದೋಷಗಳೂ ಇವೆಯೆಂದು ಘಂಟಾಘೋಷವಾಗಿ ಹೇಳಿಕೊಳ್ಳುತ್ತಾನೆ. ಭಗವದ್ಭಕ್ತರೆಲ್ಲರ ಮನೋಭಾವವೂ ಇದೇ ಆಗಿದೆ. ಆತ, ಎಲ್ಲ ಶರಣರಿಗೆ ಆನತನಾಗಿ ಎಲ್ಲರಿಂದಲೂ ಒಂದೊಂದು ವರವ ಬಿಕ್ಷೆ ಬೇಡುತ್ತಾನೆ. ಬಸವಣ್ಣನವರಿಂದ ಭಕ್ತಿಭಿಕ್ಷೆ ಬೇಡುತ್ತಾನೆ. ಸಿದ್ಧರಾಮಯ್ಯನಿಂದ ಶಿವಯೋಗಭಿಕ್ಷೆ ಬೇಡುತ್ತಾನೆ, ಮಹದೇವಿಯಕ್ಕನಿಂದ ನಿರ್ವಾಣಭಿಕ್ಷೆ ಬೇಡುತ್ತಾನೆ. ಅಜಗಣ್ಣನಿಂದ ಗಂಭೀರ ಭಿಕ್ಷೆ ಬೇಡುತ್ತಾನೆ. ಷಡಕ್ಷರಿ ಬೇಡುವ ವರಗಳೆಲ್ಲ ಆಯಾ ಶರಣ ಶರಣೆಯರ ಸಾಧನೆಯ ಪ್ರಸಾದದ ಅತಿಮುಖ್ಯ ಭಾಗಗಳೇ ಆಗಿವೆ. "ನಮ್ಮ ಶರಣರು ಬಹಳ ಧರ್ಮಿಗಳು, ನಿರ್ಮಳರು, ಒಮ್ಮೆಯೂ ಭಿಕ್ಷವನ್ನು ಇಲ್ಲವೆನ್ನರು. ನಮ್ಮ ಸಂರಕ್ಷಿಸುವ ಧರ್ಮಭಿಕ್ಷೆಗಳನುಂಡು ನೆಮ್ಮುವೆನು ಶಿವ ಷಡಕ್ಷರಿ ಅಂಗವ." ಇಂತಹ ಪರಿಪಕ್ವವಾದ ಮನಸ್ಸು, ಎಲ್ಲ ಶರಣ ಮೌಕ್ತಿಕಮಣಿಗಳ ಆಶೀರ್ವಾದ. ಇವುಗಳು ತನ್ನಂತಹ ಸಾಧಕರಿಗೆಲ್ಲ ದೊರೆಯಲೆಂದು ಪರಮಕಾರುಣಿಕನಾದ ಷಡಕ್ಷರಿ ಆಶಿಸುತ್ತಾನೆ. "ನಾನು ಭಕ್ತಿಯಿಲ್ಲದ ಬಡವ. ಎಲ್ಲರನ್ನೂ ಬೇಡಿದೆ. ಎಲ್ಲ ಪುರಾತನರೂ ನೆರೆದು ಭಿಕ್ಷವನ್ನಿಕ್ಕಿದರೆ ಎನ್ನ ಪಾತ್ರೆ ತುಂಬಿತು" ಎನ್ನುತ್ತಾನೆ ಕೃತಜ್ಞತೆಯಿಂದ.

ಈಶ್ವರನೊಂದಿಗೂ ಸರಸ

ಭಕ್ತಿಯ ಆವೇಶದಲ್ಲಿ ಷಡಕ್ಷರಿ, ಶಿವನನ್ನೇ ನಿಂದಾಸ್ತುತಿಯ ಭಾವದಲ್ಲಿ "ಮುನ್ನ ಶರಣರು ನಿನ್ನ ಮೇಲೆ ಮುನಿದುದಕೆ, ಈಗ ನನ್ನಮೇಲೆ ಹಗೆಯ ಮಗುಚುತಿರುವೆಯಾ ? ಎನ್ನ ನೊಲ್ಲದಿರ್ದೊಡೆ ನೀನು ಎನ್ನ ಮುನ್ನದೇಕೆ ಕೂಡಿದೆ ? ಎನ್ನ ಬಿಡುವೆನೆಂದೊಡೆ ನೀನು, ನಿನ್ನ ಬಿಡೆನು ನಾನು ಗುರವಿನಾಜ್ಞೆಗೆ. ಗುರುಸ್ವಾಮಿ ಎನ್ನ ಕರೆದು ನಿಮಗೆ ಕೊಟ್ಟರು" ಎಂದು ವಾದಾಡುತ್ತಾನೆ. ಈಶ್ವರನನ್ನೇ ಗೇಲಿಮಾಡಿಬಿಡುತ್ತಾನೆ. "ಲಿಂಗವೇ ನಾನು ನಿನಗೆ ಹೇವವನ್ನಿಕ್ಕಲಾರೆ. ಎನ್ನ ಮನವೆಂಬ ವಧುವನ್ನು ನೀನು ಭಾವಿಸಿ ಆಳಲಾರೆ. ಶಿಖಂಡಿಗಳ ಕೈಯಲ್ಲಿ ಕೊಲ್ಲಿಸಿಕೊಂಡು ಮುಖಭಂಗಿತನಾದೆ. ಸಖಿಯಳಂಜದೆ ನಿನ್ನ ಶಿರವನೇರಿದ ಮೇಲೆ ಸುಖನಿನಗೆಲ್ಲಿಯದು ? ನಿಮ್ಮಲ್ಲಿ ಹಿರಿಯತನ ಬರನಾಗಿ ಹೋಯ್ತು. ಬೇಡನು ಕೆರೆದಕಾಲಲಿ ನಿಮ್ಮ ತಲೆಯೊರಸಲು ಪರಿಹಾಸ್ಯವಾಯಿತು. ನೀನು ಹೋಗಿ ಬಾಣಾಸುರನ ಬಾಗಿಲ ಕಾಯ್ದೆ. ನಿನಗೆ ಅಪಖ್ಯಾತಿ ಬಂದಿತು. ಹೆಗಲ ಸಂಚಿಯನೆ ಹೊತ್ತು ಕುಂಟಣಿಯಾಗಿ ಹಗಲಿರುಳೆಡತಾಕಿದೆ. ನಿನ್ನದು ನಗೆಪಾಡಾಯಿತು. ನಾನು ಮಮಕಾರದಿಂದ ಇಂತು ನಿನ್ನನ್ನು ಹಿಯಾಳಿಸುವೆ. ಮುನಿಸು ಬೇಡ" ಎಂದು ಬೇಡುತ್ತಾನೆ.

ತನ್ನಲ್ಲಿರುವ ಸಣ್ಣದೋಷಗಳನ್ನು ದೊಡ್ಡದಾಗಿ ಭಾವಿಸಿ, ಇತರರ ತಪ್ಪನ್ನು ಕುರಿತು ಚಿಂತಿಸದಿರುವುದೇ, ಜ್ಞಾನಿಯ ಪರಿಪೂರ್ಣತೆಗೆ ಮಾರ್ಗ. ಎಲ್ಲ ಸಂತರೂ ಶರಣರೂ ಸಿದ್ಧರೂ ಸದಾ ಈ ಮನೋಭಾವದಿಂದಲೇ ಪ್ರೇರಿತರಾಗಿರುತ್ತಾರೆ. ಇದರಿಂದ ಆತ್ಮಾಭಿಮಾನವೂ, ತಾನೇ ತನ್ನ ಅದೃಷ್ಟದ ಕರ್ತೃ ಎಂಬ ದುರಭಿಮಾನವೂ ನಾಶವಾಗಿ, ಈಶ್ವರನಲ್ಲಿ ಶರಣಾಗತಿಯ ಭಾವ, ಸಂಪೂರ್ಣವಾಗುತ್ತದೆ. ತನ್ನ ಅಪರಾಧಗಳ ಪಟ್ಟಿಯನ್ನೇ, ಹನ್ನೆರಡು ಪದ್ಯಗಳಲ್ಲಿ ವಿವರಿಸಿ ಶಿವನೆದುರಿಗೆ ಒಪ್ಪಿಸುವುದರಿಂದ ತನ್ನ ಮನಸ್ಸು ಪರಿಶುದ್ಧವಾಗುವುದೆಂದು ಮುಪ್ಪಿನ ಷಡಕ್ಷರಿ ನಂಬುತ್ತಾನೆ.

ಬೂಳನು ಪಾಪಿಷ್ಟನು ದುಷ್ಟರ ಭವಿ-
ಮೇಳನು, ಹಿಂಸೆಗೆ ಹೆದರದೆ ಹಿರಿಯರ
ಝೂಳಿಸಿ ನುಡಿದಪಕೀರ್ತಿಯ ಒಡಲಿನ ಕಾಕು ವಿಚಾರನಿಗೆ !
ಧಾಳಕತನದಲಿ ವಾಗ್ಜಾಲದೊಳತಿ
ಕಾಲನ ಬಾಧೆಗೆ ಬಿದ್ದು ಪುನರ್ಭವ
ಮಾಲೆಯ ಕೊರಳಿಗೆ ತೊಡರಿಸಿ ಕೊಂಬವನಿಗೊಮ್ಮೆ
ಕೃಪೆ ಮಾಡು

ಇನ್ನೂರಾನಲವತ್ತೇಳು

ಇದಕ್ಕಿಂತ ಹೆಚ್ಚಾಗಿ ನೈಜಾನು ಸಂಧಾನ,ಒಬ್ಬನಿಗೆ ಸಾಧ್ಯವೇ ಇಲ್ಲ. ವಿಮಲ ಷಡಕ್ಷರ ಲಿಂಗದ ನಿಜಸುಖವೆಂದಿಗೆ ದೊರಕುವುದು ಎಂದು ಶರಣ, ಸದಾ ಚಿಂತಿಸುತ್ತಾನೆ.

ಲಿಂಗವ ಅರಿವುದೇ ದೇವತ್ವ

ದೇವತ್ವವೆಂಬುದು ಸರ್ವಾರ್ಪಣ ಮನೋಭಾವದ ಸೇವಾ ಪೂರಿತ ಶುದ್ಧ ಭಾವನೆ. ಅದು ಮಾಯ ಮಾಟ ಅದ್ಭುತ ಮಹೇಂದ್ರ ಜಾಲ, ಇಂದ್ರಜಾಲ, ಅಘಟನಾಘಟನ ಸಾಮರ್ಥ್ಯ ಇವೆಲ್ಲ ಅಲ್ಲ. ಅದು ಅತ್ಯಂತ ಸರಳ, ನೇರ, ಈಶ್ವರನೊಂದಿಗೆ ಅಂತಃಕರಣಪೂರಿತ ಮಿಲನ. ಉರಿವ ಕಿಚ್ಚ ಹೊಕ್ಕು ಬೇಯದೆ ಹೊರಟರೆ, ಭರದಿಂದ ಬಂದು ಹೊಳೆಯ ಮೇಲೆ ನಡೆದರೆ, ಚಿತ್ತದಲ್ಲಿಯ ಮಾತ ಹೇಳಿದರೆ, ಹತ್ತಿ ಗಗನದಲ್ಲಿ ನಡೆದರೆ, ದೂರದೃಷ್ಟಿ ದೂರಶ್ರವಣಗಳಿದ್ದರೆ, ದೇವತ್ವವೆಂಬರು. ಅನುಭಾವಿಷಡಕ್ಷರಿ,ಇದಾವುದನ್ನೂ ದೇವತ್ವವೆಂದು ಒಪ್ಪನು. "ಆರೈವ ಮನದಿ ಷಡಕ್ಷರಿಲಿಂಗವ ಬಲ್ಲರೆ ಅದೇ ನಿಜವಾದ ದೇವತ್ವ" ಎಂಬುದು ಆತನ ಮತ.

ವಿರತಿ ಸುಲಭವಲ್ಲಯ್ಯ

ವಿರತಿ ಎಲ್ಲರಿಗೂ ಸುಲಭವಲ್ಲ. ಅನ್ನ ವಸ್ತ್ರ ತೊರೆದು ದಿಗಂಬರ ನಾಗಿ ಜಡೆ ಬೆಳಸಿದರೆ ವಿರಕ್ತನಾಗುವುದಿಲ್ಲ. ಅನ್ಯರ ಒಡವೆಗಳಲ್ಲಿ ಬಿಡುವಂತೆ,ದೇಹದಲ್ಲಿ ನಮ್ರ ಮೋಹವನ್ನು ಬಿಡಬೇಕು. 'ಕರಿ ಕರಡಿ ವ್ಯಾಘ್ರ ಸಿಂಹ ಉರಗ ಸಿಡಿಲು ಚೋರ ಯಾರಿಂದಲೂ ಮರಣ ಭೀತಿ ಬಿಡಬೇಕು. ಹೀಗೆ ನಿರುತ ಪರಮಷಡಕ್ಷರಿ ಲಿಂಗವನಾಚರಿಪನೇ ನಿಜವಾದ ವಿರಕ್ತ. ಇಂತಹ ವಿರಕ್ತಿ, ತನಗೆ ಸಾಧ್ಯವಲ್ಲದುದರಿಂದ ತಾನು "ಅಕ್ಕನಾಗಮ್ಮ, ಸತ್ಯ ಚೆಂಗಳೆ ಚೆಲ್ವೆ ಅಕ್ಕರೆಯ ಮಹದೇವಿ, ಸುಗ್ಗಿಯವ್ವ, ಚಿಕ್ಕ ಕೊಡಗೂಸಿನವರಕ್ಕರೆಯ ತೊತ್ತಿನ ಮಕ್ಕಳೆಂದು ತಿಳಿದು, ಅವರ ಎತ್ತಾಗಿ ತೊತ್ತಾಗಿ ಅವರ ಪಶುವಾಗಿ ಸುಖದಿಂದಿದ್ದು, ಅವರುಂಡು ವಿಕ್ಕುದನು ಅವರುಟ್ಟು ಬಿಸುಟುದನು, ಅವರಗಿದ ತಂಬುಲವ ಸವಿದು ಅವರಂಗಳವ ಗುಡಿಸಿ, ಅವರ ಬಾಗಿಲ ಕಾದು, ಅವರ ಕೀಳಿಲಿ ಸೇರಿಕೊಂಡಿರ್ಪ, ವರವನ್ನೇ ಕೋರುವ ಶರಣ ಸೇವಾ ಭಕ್ತಿಯ ಪರಾಕಾಷ್ಠತೆ ಪರಿಪಕ್ವತೆ ಪರವಶತೆ ಪಾವಿತ್ರ್ಯವನ್ನು ಬಯಸುವೆನೆಂದು ನಮ್ರನಾಗಿ ಷಡಕ್ಷರಿ ಬೇಡುತ್ತಾನೆ.

ಪೂರ್ಣ ಶರಣಾಗತಿ

"ನೀನೇ ನನ್ನನ್ನು ರಕ್ಷಿಸಬೇಕೆಂದು ಮುಪ್ಪಿನ ಷಡಕ್ಷರಿ ಶಿವನಲ್ಲಿ ಪೂರ್ಣ ಶರಣಾಗತನಾಗುತ್ತಾನೆ". ನನ್ನನ್ನು ರಕ್ಷಿಸುದೇವ, ನಾನು ಹುಟ್ಟು ಸಾವುಗಳಿಗೆ ಹೆದರುತ್ತೇನೆ. ಎಡವಿ ಬೀಳುವವ; ನುಡಿಯಬಲ್ಲೆ, ಆದರೆ ನಡೆಯಲಾರೆ. ಎನಗೆ ಭಕ್ತಿ ಇಲ್ಲ, ಜ್ಞಾನ ಇಲ್ಲ, ವಿರತಿ ಇಲ್ಲ. ನೀನು ಕರುಣೆಯಿಂದ ರಕ್ಷಿಸದಿರೆ ಕೆಡುವೆ. ಸರ ಶರೀರವೆಂಬ ದೊಡ್ಡ ಕೋಳದೊಳಗೆ ಸಿಲುಕಿ ಕರಗಿ ಕೊರಗಿ ಮರುಗಿ ಅಳಲಿ ಬಳಲುತ್ತಿದ್ದೇನೆ. ನಾನು ಧೀರನಲ್ಲ, ವೀರನಲ್ಲ. ಈ ಘೋರ ತನುವ ತೊಡಿಸಿ ನನ್ನನ್ನು ಇಲ್ಲಿಗೆ ನೀನೇ ಬಿಟ್ಟೆ. ನೀನಲ್ಲದೆ ನನ್ನ ಕೇಳ್ವರಾರು ? ನೀನು ರಕ್ಷಿಸದಿರೆ ನಾನು ಕೆಡುವೆನು" ಎಂದು ಅಳಲುತ್ತಾನೆ.

ಕಾವ್ಯಶೈಲಿ

ಮುಪ್ಪಿನ ಷಡಕ್ಷರಿಯ ಕಾವ್ಯಶೈಲಿ ಸರಳವಾದುದು. ಅಪೂರ್ವವೂ ಭಾವಪೂರ್ಣವೂ ಆದುದು. ಇಲ್ಲಿ ಮಾತುಗಳೆಲ್ಲಾ ಸುಲಭವಾದರೂ ಗಹನವಾದ ತತ್ವಗಳನ್ನೊಳಗೊಂಡಿವೆ. ಅವನು ನಿಸ್ಸಂದೇಹವಾಗಿ ಅತ್ಯುತ್ತಮ ಕವಿ. ಹೆಚ್ಚು ವಿದ್ಯಾವಂತರಲ್ಲದವರಿಗೂ ಕ್ಲೇಶವಿಲ್ಲದೆ ಅರ್ಥವಾಗುವ ಆಡುಮಾತುಗಳು. ವಚನಕಾರರೆಲ್ಲರಿಗೂ ಪಳಗಿರುವಂತೆ ಇವನಿಗೆ ಕನ್ನಡನುಡಿ ಪೂರ್ಣವಾಗಿ ವಶವಾಗಿದೆ. ಮುಪ್ಪಿನಾರ್ಯರ ಹಾಡುಗಳಲ್ಲಿ ಭಾವವೆಲ್ಲ ಅನುಭಾವ; ರಸವೆಲ್ಲ ಸಮರಸ, ರುಚಿಯೆಲ್ಲ ಶುಚಿ. ಆಧ್ಯಾತ್ಮ ಜೀವಿಯ ಅಂತರಂಗದ ಆಕಾಂಕ್ಷೆಗಳೇ ಹಾಡಿನ ಹೊನಲಾಗಿ ಹರಿದಿರುವ ಮೂಲಕ, ಸಾಯುಜ್ಯೋನ್ಮುಖರತಿಯ ಮನೋಹರತ್ವವೂ ಅಪರೋಕ್ಷಜ್ಞಾನದ ಬೆಳಕೂ, ಸರ್ವಾರ್ಪಣ ಭಾವದ ಸೌಂದರ್ಯವೂ ವೀರವಿರತಿಯ ಗಾಂಭೀರ್ಯವೂ, ಮಧುರ ಭಕ್ತಿಯ ಮನೋಜ್ಞತೆಯೂ, ಹಾಡುಗಳ ತುಂಬೆಲ್ಲ ಸಾಂದ್ರವಾಗಿ ಹರಡಿಕೊಂಡಿದೆ. ಕವಿವರ್ಯ ಬೇಂದ್ರೆಯವರು ತಮ್ಮ "ನಮಗೆ ಬೇಕಾದ ಕಾವ್ಯ"ವೆಂಬ ಲೇಖನದಲ್ಲಿ ಇವರ ಎಲೆ ಲಿಂಗವೇ ಎಂಬ ಹಾಡನ್ನು ಉದಾಹರಿಸಿ " ಹೀಗೆ ಹಾಡಬಲ್ಲ ಸರ್ವಸಮರ್ಪಣದ ಸೇವಾ ಭಕ್ತಿಯ ಕವಿಗಳು ನಮಗೆ ಬೇಕೆಂದು ಬರೆದಿದ್ದಾರೆ. ತಮ್ಮ ರೇಡಿಯೋ ಭಾಷಣದಲ್ಲಿ ಇವರ ಕವನಗಳನ್ನು ವೆಗ್ಗಳವಾಗಿ ಉದಹರಿಸಿ ಇವರ ಹಾಡುಗಳ ಬಗ್ಗೆ ಇದ್ದ ತಮ್ಮ ಆದರ ಗೌರವಗಳನ್ನು ವ್ಯಕ್ತಪಡಿಸಿದ್ದಾರೆ".[1] ಶುದ್ಧ ಕಾವ್ಯದ ಒರೆಗಲ್ಲು ಹಚ್ಚಿ ನೋಡಿದರೂ, ಮುಪ್ಪಿನ ಷಡಕ್ಷರಿಯ ಹಾಡುಗಳು ಉನ್ನತ ಮಟ್ಟದಲ್ಲಿ ನಿಲ್ಲುತ್ತವೆ. " ಯುಗ ಯುಗವು ಹಿಂಗುತಿದೆ " ವೆಂಬ ತಮ್ಮ ಅತ್ಯಂತ ಶ್ರೇಷ್ಠ ಕವನದಲ್ಲಿ, " ಶಿವಷಡಕ್ಷರ ಲಿಂಗವೊಂದೇ ಶಾಶ್ವತ. ಉಳಿದುದೆಲ್ಲ ನಶ್ವರ, ಎಂಬುದನ್ನು ಷಡಕ್ಷರಿ ಮನೋಜ್ಞವಾಗಿ ವಿವರಿಸಿದ್ದಾರೆ. ಕೃತ ತ್ರೇತ ದ್ವಾಪರಂ ಕಲಿಯುಗಂ ತಾನು ತಿರು ತಿರುಗಿ ಮರಳಿ ಹೋಗುತ್ತಿವೆ. ಎಲ್ಲವೂ ನಾಶವಾಗುತ್ತಿವೆ.

ತಾಳಾಸುರಂ ಪಂಚ ಮೇಢ್ರಾಸುರಂ ವ್ಯಾಘ್ರ
ಲಾಳಾಸುರಂ ಶಕಟವಿಕಟಾಸುರಂ ನರಕ
ವ್ಯಾಳಾಸುರಂ ಕಾಕ ಮೂಕಾಸುರಂ ರಾವಣಂ
ಸೋಮಕಾಸುರಕನು ।

1. ಸುಬೋಧಸಾರ ಗ್ರಂಥದ ಮುನ್ನುಡಿಯಲ್ಲಿ ಶ್ರೀ ಕಾವ್ಯಾನಂದರು.

ಜ್ವಾಲಾಸುರಂ ರಕ್ತಬೀಜಾಧರಂ ನಮುಚಿ
ಕಾಳಾಧರಂ ಬಲಿಯು ದೇವಾಂತಕಂ ಜಂಭ
ಜಾಳಂಧರಂ ಭಸ್ಮದೇವಾಸುರಂ ಮುಖ್ಯವಾಗಿರ್ದಸುರರಳಿದರು॥

ಗೋರಟಂ ಚರ್ಪಟಿಯು ರತ್ನಗೋಪಂ ವ್ಯಾಳಿ
ಧೀರ ಮಧ್ಯಾಂಧ್ರ ನಾಗಾರ್ಜುನಂ ಖರ್ಪರಂ
ದಾರುಣಿಯೊಳಳಿದರೀ ಮನದಿಚ್ಛೆಮರಣ ದ್ರೌ ದ್ರೋಣ
ಭೀಷ್ಮರು ಅಳಿದರು ।
ವಾರಿಜಾಕ್ಷಂ ವಾರಿಜೋದ್ಭವಂ ಮೊದಲಾದ
ಸೂರೀಂದ್ರ ನಿರ್ಜರರು ಯಕ್ಷ ಕಿನ್ನರ ಗರುಡ
ಮೂರು ತಾಪಸನವರು ಈರೇಳು ಲೋಕದೊಳಗಳಿದರುಳಿದರ
ಕಾಣೆನು ॥

ಉನ್ನತ ಶರಣನೂ ಅನುಭಾವಿಯೂ ಕವಿಯೂ ಶುದ್ಧ ಜೀವಿಯೂ ಮುಕ್ತಿ ಮಾರ್ಗದರ್ಶಕನೂ ಆದ ಮುಪ್ಪಿನ ಷಡಕ್ಷರಿಯ ಜೀವನ, ಕಾವ್ಯಗಂಗೆಯ ಆದರ್ಶಗಳು ನಮಗೆ ಸದಾ ಕೈದೀವಿಗೆಯಾಗಲಿ. ಈ ಲೇಖನವನ್ನು ಮುಪ್ಪಿನ ಷಡಕ್ಷರಿಯ ಮಾತಿನಿಂದಲೇ ಮುಗಿಸೋಣ.

ಝಗ ಝಗಿಸುವ ಶಶಿ ಶೂರ್ಯರ ಬೆಳಗಿಂ
ಮಿಗೆ ದೇವರ್ಕಳ ಮುಕುಟದ ಬೆಳಗಿಂ
ಸೊಗ ಸೊಗಸುತಲಿಹ ರತ್ನದ ಓಲಗ ಶಾಲೆಯ ತೇಜದೊಳು ।
ಗಗನದ ಕಕುಭಂಗಳ ನುರೆ ತೀವಿದ
ಹಗಲಿರುಳೆನ್ನದೆ ಓಲಗದೊಳಗಿಹ
ನಗೆ ಮೊಗದಾ ಷಡಕ್ಷರ ಲಿಂಗದ ಧ್ಯಾನದೊಳೆಂದಿಹೆನೋ ॥

* * * *

ಶ್ರೀಮಾನ್ ಮಂಜಪ್ಪನವರು, ಮುಪ್ಪಿನ ಷಡಕ್ಷರಿ ರಚಿಸಿದ ಎಪ್ಪತ್ತೈದಕ್ಕಿಂತ ಹೆಚ್ಚು ಹಾಡುಗಳನ್ನು ಶೋಧಿಸಿ, ಅವುಗಳಿಗೆಲ್ಲ ಅನುರೂಪವಾದ ರಾಗಗಳನ್ನು ಅಳವಡಿಸಿದರು. ಈ ಕವನ ಸಂಕಲನಕ್ಕೆ ಶ್ರೀ ಕಾವ್ಯಾನಂದರು (ಸಿದ್ದಯ್ಯ ಪುರಾಣಿಕರು) ಒಂದು ಉತ್ಕೃಷ್ಟ ವಿದ್ವತ್‌ಪೂರ್ಣ ಮುನ್ನುಡಿ ರಚಿಸಿದ್ದಾರೆ. ಈ ಗ್ರಂಥವನ್ನು ಮುರುಘಾಮಠ ಹಾವೇರಿಪೇಟೆ ಧಾರವಾಡದ ಶ್ರೀ ಮುರುಘರಾಜೇಂದ್ರ ಪ್ರಸಾದ ನಿಲಯದ ಶ್ರೀ ಮ. ನಿ. ಪ್ರ. ಮೃತ್ಯುಂಜಯ ಮಹಾಸ್ವಾಮಿಗಳು ಪ್ರಕಾಶನಗೊಳಿಸಿ, ಕನ್ನಡಿಗರಿಗೆ ಉಪಕಾರ ಮಾಡಿದ್ದಾರೆ. ಈ ಲೇಖನದಲ್ಲಿ ಉದಹರಿಸಿರುವ ಮುಪ್ಪಿನ ಷಡಕ್ಷರಿಯ ಹಾಡುಗಳನ್ನು, ನಾನು ಆ ಸಂಕಲನದಿಂದ ಆರಿಸಿಕೊಂಡಿದ್ದೇನೆ.

ಷಡಕ್ಷರದೇವ

ಲೇಖಕರು :
ಡಾ॥ ವಿ. ಶಿವಾನಂದ, ಎಂ.ಎ.,ಪಿ.ಎಚ್.ಡಿ.,
ಸ್ನಾತಕೋತ್ತರ ಕೇಂದ್ರ
ಗುಲಬರ್ಗ.

ಕನ್ನಡ ಕಾವ್ಯವಾಹಿನಿ ಪಂಪನಲ್ಲಿ ಹರಿದು ಹರಿಹರನಲ್ಲಿ ಕವಲೊಡೆದು ಷಡಕ್ಷರಿಯಲ್ಲಿ ಸಂಗಮವಾಗಿರುವದನ್ನು ನಾವು ನೋಡುತ್ತೇವೆ. ಪಂಪ, ಹರಿಹರ ಹಾಗೂ ಷಡಕ್ಷರದೇವ ಈ ಮೂವರು ಕವಿಗಳು ಕನ್ನಡ ಸಾಹಿತ್ಯ ವಾಹಿನಿಯ ದಿಕ್ಕನ್ನೇ ಬದಲಿಸಿದ ಯುಗ ಪ್ರವರ್ತಕರು, ಕ್ರಾಂತಿ ಕವಿಗಳು.

ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಪಂಪ ಹಾಗೂ ಷಡಕ್ಷರ ದೇವರು ಕನ್ನಡ ಕಾವ್ಯಾಚಲದ ಎರಡು ಮಹೋನ್ನತ ಕವಿಶೈಲಗಳು, ಪಂಪ ಕವಿಶೈಲದ ಮೇಲೇರಿ ನಿಂತರೆ ತತ್ಪೂರ್ವ ಕಾವ್ಯದ ಮಂಜು ಬಿದ್ದಿರುವುದನ್ನು ನೋಡಬಹುದು. ಷಡಕ್ಷರ ಕವಿಶೈಲವನ್ನೇರಿ ನೋಡಿದಾಗ ಕನ್ನಡ ಕಾವ್ಯಗಳ ಸ್ಪಷ್ಟತೆಯನ್ನು, ಮಹಾಕವಿ ಮನೋಧರ್ಮದ ಶುಭ್ರಧವಳವನ್ನೂ ಕಾಣಬಹುದು.

ಜೀವನ ಸಂಗತಿಗಳು

ಷಡಕ್ಷರದೇವನು ' ದನುಪುರೋದ್ದಾನಯಶೀಂದ್ರ ವಂಶಜ ' ನೆಂಬುದಾಗಿ ತನ್ನ ಸಂಸ್ಕೃತ ಕೃತಿಯಾದ 'ಕವಿಕರ್ಣರಸಾಯನ'ದಲ್ಲಿ ಹೇಳಿಕೊಂಡಿದ್ದಾನೆ.[1]

ರಾಜಶೇಖರ ವಿಳಾಸದಲ್ಲಿ ತನ್ನ ಗುರುಪರಂಪರೆಯನ್ನು ಹೇಳಿಕೊಳ್ಳುತ್ತ ' ರೇವಣಸಿದ್ಧ ದೇಶಿಕನು ದನುಗೂರೊಳ್ಬಾ । ಸುರವರ ಮಠದೊಳ್ ಪರಮಹಂಸನೆನೆ ರಂಜಿಸಿದಂ' ಎನ್ನುತ್ತಾನೆ. ಇವನ ಶಿಷ್ಯ ಚಿಕವೀರದೇಶಿಕನು, ಈ ಚಿಕವೀರ ದೇಶಿಕನೇ ಷಡಕ್ಷರ ದೇವನ ಗುರು. ಆದ್ದರಿಂದ ಷಡಕ್ಷರ ಕವಿಯ ಜನ್ಮಭೂಮಿ ದನುಗೂರು ಎಂದೂ, ಅವನು ಅಲ್ಲಿಯ ಗುರುಪೀಠಕ್ಕೆ ಅಧಿಕಾರಿಯಾಗಿದ್ದನೆಂದೂ ಹೇಳಬಹುದು. ವೀರಶೈವ ಗುರುವರ್ಗದವರಲ್ಲಿ ಗುರುವಂಶಜರೇ ಪೀಠದೊಡೆಯರಾಗುವ ಸಂಪ್ರದಾಯ ಇರುವುದರಿಂದ, ಷಡಕ್ಷರ ದೇವ ದನಗೂರು ಮಠದ ಸಂತತಿಯವನೇ ಆಗಿರಬೇಕು.

ಷಡಕ್ಷರ ಕವಿಯು ಕ್ರಿ.ಶ. ಸುಮಾರು 1636ರಲ್ಲಿ ಜನಿಸಿದನು. ಇವನ ಜನ್ಮಭೂಮಿ ದನಗೂರು. ಉದ್ದಾನ ಶಿವಯೋಗಿಗಳಿಂದ ಪರಂಪರಾಗತವಾಗಿ ಬಂದ ಚಿಕವೀರದೇಶಿಕರ ಕರಕಮಲಸಂಜಾತನೆನ್ನಿಸಿ, ಷಡಕ್ಷರದೇವ ದನಗೂರು ಮಠದ ಪಟ್ಟಾಧಿಕಾರಿಯಾಗಿದ್ದನು. ಚಿಕದೇವರಾಯನ ತಾಯಿಯಾದ ಅಮೃತಾಂಬೆಯ ತವರು ಮನೆಗೆ ಷಡಕ್ಷರ ಕವಿ ಕುಲಗುರುವಾಗಿದ್ದರಿಂದ ಅವನು ಆ ಸಂಬಂಧದಿಂದ ಅಲ್ಲಿಯೇ ಹೋಗಿ ನೆಲಸಿರಬೇಕು. ಅವನ ವಿದ್ಯಾಭ್ಯಾಸ, ಕಾವ್ಯರಚನಾ ಕ್ಷೇತ್ರ ಎಳಂದೂರೇ ಆಗಿತ್ತು.

ಷಡಕ್ಷರ ಕವಿಯನ್ನು ಕುರಿತು ದೇವಚಂದ್ರನು 'ರಾಜಾವಳೀ ಕಥೆ'ಯಲ್ಲಿ ಹೇಳಿದ ವಿಷಯ ಇಂತಿದೆ.

i) ಷಡಕ್ಷರಿಯು 'ಎಳಂದೂರು ಅಮೃತಾಂಬಿಕಾ ತವರು ಮನೆಗೆ ಗುರುವಾದ ಆರಾಧ್ಯ ಪುತ್ರನು.[2]

ii) ....'ಷಡಕ್ಷರಿಯು, ತತ್ಪುರದ ಜೈನಬ್ರಾಹ್ಮಣನಪ್ಪ ಬೊಮ್ಮರಸನ ಪುತ್ರ. ವಿಶಾಲಾಕ್ಷ ಪಂಡಿತನೂ ತಿರುಮಲಾರ್ಯನು ಮಿಂತು ಮೂವರುಂ ಸಹಾಧ್ಯಾಯಿಗಳಾಗಿ ನಿಘಂಟು, ವ್ಯಾಕರಣ, ಕಾವ್ಯ, ನಾಟಕ, ಛಂದೋಲಂಕಾರ, ತರ್ಕ ಮೊದಲಾದ ವಿದ್ಯೆಯಲ್ಲಮಂ ಕಲಿತು ತಂತಮ್ಮ ಮತಪ್ರಮೇಯಂಗಳೊಳು ಶಿಖಾಮಣಿಗಳೆನಿಸಿ, ಕವಿ, ಗಮಕಿ, ವಾದಿ–ವಾಗ್ಮಿತ್ವದೊಳು ಅಗ್ರಗಣ್ಯರೆನಿಸಿದರ್ ಅವರೊಳು ಚಿಕದೇವರಾಜರಸಂ ಕೋವಿದ ಶಿಖಾಮಣಿಯೆನಿಸಿದಂ, ವಿಶಾಲಾಕ್ಷಂ ಸಾಹಿತ್ಯ ಭಾರತಿಯೆನಿಸಿದಂ ಷಡಕ್ಷರಿಯು ಕವಿಶೇಖರನೆನಿಸಿದಂ'.[3]

ಷಡಕ್ಷರ ಕವಿಯು ಹದಿನಾಡು ಹಾಗೂ ಮೈಸೂರ ಅರಸರ ರಾಜಮನ್ನಣೆಗೆ ಅರ್ಹನಾಗಿದ್ದುಕೊಂಡು ಸಂಸ್ಕೃತ ಹಾಗೂ ಕನ್ನಡ ಭಾಷೆಯಲ್ಲಿ ಅನೇಕ ಕೃತಿಗಳನ್ನು ರಚಿಸಿ, ರಾಜಮಹಾರಾಜರಿಂದ ಸ್ತುತಿಸಲ್ಪಟ್ಟು ಕೀರ್ತಿಶಾಲಿಯಾಗಿದ್ದಾನೆ. ಕವಿಯು ಕ್ರಿ.ಶ. ಸುಮಾರು 17 ನೆಯ ಶತಮಾನದ ಉತ್ತರಾರ್ಧದವರೆಗೆ ಇದ್ದು, ಎಳಂದೂರಿನಲ್ಲಿಯೇ ಲಿಂಗೈಕ್ಯನಾದನು. ಷಡಕ್ಷರ ಕವಿಯ ಸಮಾಧಿ ಎಳಂದೂರಿನಲ್ಲಿಯೇ ಇದೆ. ಇವನು ತಪಸ್ಸು ಮಾಡಿದ ಒಂದು ಗುಡ್ಡಕ್ಕೆ 'ಷಡಕ್ಷರಗುಡ್ಡ'ವೆಂಬ ಹೆಸರು ಇಂದಿಗೂ ಇದೆಯೆಂಬ ಪ್ರತೀತಿ.

ಸ್ತವನ ವೈಶಿಷ್ಟ್ಯ

ಷಡಕ್ಷರ ಕವಿಯ ಸ್ತವನ ವಿಧಾನದಲ್ಲಿ ಒಂದು ವೈಶಿಷ್ಟ್ಯವಿದೆ. ಕವಿಯ ಅಂಕಿತ 'ಶಿವಲಿಂಗ' ಎಂಬುದಾಗಿದೆ. ಸಂಸ್ಕೃತ ಕೃತಿಗಳಲ್ಲಿ ಈ ಅಂಕಿತವಿಲ್ಲ. ಅವನ ಕನ್ನಡ ಕೃತಿಗಳ ಪ್ರತಿ ಆಶ್ವಾಸದ ಪ್ರಾರಂಭದಲ್ಲಿ "ಪಾಲಿಸೆಮ್ಮನುರೆ ಶಿವಲಿಂಗಂ", "ಎಮಗೀಗೆ ಸೌಖ್ಯಮಂ ಶಿವಲಿಂಗಂ" ಎಂದು ಮುಂತಾಗಿ ಶಿವಲಿಂಗದ ಅಂಕಿತ ಬರುತ್ತದೆ. ಈ ಅಂಕಿತ ಒಟ್ಟು 105 ಸಲ ಪ್ರಯೋಗವಾಗಿದೆ. ದನಗೂರು ಮಠದಲ್ಲಿರುವ ಪುರಾತನ ಗವಿಯು ಮೊದಲು ಶಿವಲಿಂಗೇಶ್ವರ ದೇವಾಲಯವಾಗಿತ್ತೆಂಬ ಪ್ರತೀತಿ ಇರುವುದರಿಂದ ಆರಾಧ್ಯ ದೈವವಾದ ಶಿವಲಿಂಗವನ್ನು ಕವಿ ಇಲ್ಲಿ ಸ್ತುತಿಸಿರಬಹುದಾಗಿದೆ. ಈ ಕವಿಯು ಗುರುವರ್ಗದವನಾಗಿದ್ದರೂ ಬಸವಾದಿ ಪ್ರಥಮರನ್ನು ಕೊಂಡಾಡಿ ಕಾವ್ಯ ಬರೆ

ದಿದ್ದಾನೆ. ಈ ವಿಶಾಲ ಗುಣಗಳು ಅವನ ಸ್ತವನ ವಿಧಾನದಲ್ಲಿ ಎದ್ದು ಕಾಣುತ್ತವೆ.

ಕೃತಿ ಪರಿಚಯ

'ಉಭಯ ಭಾಷಾ ವಿಶಾರದ'ನಾದ ಷಡಕ್ಷರ ದೇವನು ರಚಿಸಿರಬಹುದಾದ ಒಟ್ಟು ಕೃತಿಗಳ ಸಂಖ್ಯೆ 22 ಕ್ಕೂ ಮಿಕ್ಕಿವೆ. ಅವನ್ನಿಲ್ಲಿ ಹೆಸರಿಸಲಾಗಿದೆ.

ಮಹಾಕೃತಿಗಳು

ಸಂಸ್ಕೃತ.

೧) ಕವಿಕರ್ಣರಸಾಯನ[4]

ಕನ್ನಡ

೧) ರಾಜಶೇಖರ ವಿಳಾಸ
೨) ವೃಷಭೇಂದ್ರ ವಿಜಯ
೩) ಶರಬ ಶಂಕರ ವಿಳಾಸ
೪) ಷಡಕ್ಷರ ಸ್ತೋತ್ರ ಉತ್ಸಹ ರಗಳೆ.

ಕಿರುಕೃತಿಗಳು :

೧) ಶಿವಸ್ತೋತ್ರ ಮಂಜರಿ.
೨) ಶಿವಸ್ತವ ಮಂಜರಿ.
೩) ನಮಃ ಶಿವಾಯಷ್ಟಕ.
೪) ಶ್ರೀ ಮದನಾದಿ ಸಿದ್ಧಲಿಂಗ ಸ್ತವನ.
೫) ವೀರಭದ್ರೋದಾಹರಣ ಗದ್ಯ.
೬) ವೀರಭದ್ರದಂಡಕ.
೭) ಇಂದುಧರ ಸ್ತೋತ್ರ.
೮) ಶಿವಮಾನಸ ಸ್ತೋತ್ರ.
೯) ಇಷ್ಟಲಿಂಗಸ್ತವನ.
೧೦) ಬಸವಾಷ್ಟಕ.
೧೧) ನೀಲಾಂಬಿಕಾ ಸ್ತೋತ್ರ.
೧೨) ತತ್ವತ್ರಯ ಮಂಜರಿ.
೧೩) ಶಿವಾಧಿಕ್ಯ ರತ್ನಾವಳಿ.
೧೪) ಭಕ್ತಾಧಿಕ್ಯ ರತ್ನಾವಳಿ.
೧೫) ಮಂಗಲಾಷ್ಟಕ.
೧೬) ಲಿಂಗಾಷ್ಟಕ.
೧೭) ಮಾತಿನ ಮಾಲಿಕೆ.
೧೮) ತೋಂಟದಾರ್ಯಸ್ತವನ.

ಕೆಲವು ಪ್ರಮುಖ ಸಂಸ್ಕೃತ ಕೃತಿಗಳ ಪರಿಚಯ

ಷಡಕ್ಷರ ಕವಿಯು ರಚಿಸಿದ ಸಂಸ್ಕೃತ ಕೃತಿಗಳಲ್ಲಿ ಅತ್ಯಂತ ಪ್ರಮುಖವಾದುದು ಕವಿಕರ್ಣರಸಾಯನ. ಇದರ ಹೆಸರೇ ಸೂಚಿಸುವಂತೆ ಇದು ಕವಿಗಳ ಕರ್ಣಕ್ಕೆ ರಸಾಯನ ಸ್ವರೂಪವಾಗಿರುವ ಉತ್ತಮ ಕಾವ್ಯ. ಇದು ೧೪ ಸರ್ಗಗಳಲ್ಲಿ ರಚಿತವಾಗಿದ್ದು ಇದರ ನಾಲ್ಕು ಸರ್ಗಗಳು ಮಾತ್ರ ಅಚ್ಚಾಗಿವೆ. ಇವುಗಳಲ್ಲಿ ೧೬೫ ಶ್ಲೋಕಗಳು ಬಂದಿವೆ. ತಮಿಳುನಾಡಿನ ಸೌಂದರ ಚೋಳನ ಕಥೆ ಇದರ ಕಾವ್ಯ ವಸ್ತುವಾಗಿದೆ. 'ಹರಿಹರನುದಿತ ಮಾರ್ಗ'ದಿಂದಲೇ ಇದನ್ನು ರಚಿಸಿದ್ದಾಗಿ ಕವಿ ಅದರಲ್ಲಿ ಹೇಳಿರುವುದರಿಂದ ಈ ಸಂಪ್ರದಾಯ ಕನ್ನಡಕ್ಕೆ ಸಾಮಾನ್ಯವೆನಿಸುತ್ತಿದ್ದರೂ ಸಂಸ್ಕೃತ ಸಾಹಿತ್ಯ ಚರಿತ್ರೆಯಲ್ಲಿ ಇದು ವಿಶಿಷ್ಟ. ಸಂಸ್ಕೃತ ಕಾವ್ಯ ಪ್ರಪಂಚದಲ್ಲಿ ಶ್ರೀ ಹರ್ಷನ 'ನೈಷಧೀಯ ಚರಿತೆ'ಗೆ ಸರಿದೊರೆಯಾಗಿ ನಿಲ್ಲುವ ಕಾವ್ಯಗುಣ ಇದರಲ್ಲಿದೆ ಎಂದಾಗಿ ಪಂಡಿತರು ತರ್ಕಿಸಿದ್ದಾರೆ.[6] ವೀರಭದ್ರೋದಾಹರಣ ಗದ್ಯವು ಅತ್ಯಂತ ಕ್ಲಿಷ್ಟವಾಗಿದ್ದು, ವಿವಿಧ ವೃತ್ತಗಳಿಂದ ಕೂಡಿ ಕವಿಯ ಸಂಸ್ಕೃತ ಪಾಂಡಿತ್ಯಕ್ಕೆ ಒರೆಗಲ್ಲಾಗಿ ನಿಲ್ಲುತ್ತದೆ. ಶಿವಸ್ತವ ಮಂಜರಿಯು ೧೦೧ ವೃತ್ತಗಳಲ್ಲಿದೆ. ೧೧೦ ವೃತ್ತಗಳು ಶಿವಾಧಿಕ್ಯ ರತ್ನಾವಳಿಯಲ್ಲಿ ಬಂದಿವೆ. ಇದನ್ನು ಶಂಕರಾಚಾರ್ಯರ ಶಿವಾನಂದ ಲಹರಿಗೆ ಹೋಲಿಸಲಾಗುತ್ತದೆ. ಭಕ್ತಾಧಿಕ್ಯ ರತ್ನಾವಳಿಯು ಭಕ್ತನ ಆಧಿಕ್ಯವನ್ನು ಪ್ರತಿಪಾದಿಸುತ್ತಿದೆ. ಇದೇ ರೀತಿ ಸ್ತುತಿ, ಸ್ತೋತ್ರ, ಅಷ್ಟಕ, ರಗಳೆಗಳು, ಶಿವ ಹಾಗೂ ಶಿವಶರಣರ ಮಹಿಮೆಗಳನ್ನು ವರ್ಣಿಸುವ ಮತೀಯ ಕಿರುಕೃತಿಗಳಾಗಿದ್ದರೂ ಕಾವ್ಯಾಂಶಗಳಿಂದ ಕೂಡಿ ಮೆರಗು ಪಡೆದಿವೆ.

ಕನ್ನಡ ಕೃತಿಗಳ ಸ್ಥೂಲ ಪರಿಚಯ ಹಾಗೂ ರಸವಿಮರ್ಶೆ

ಷಡಕ್ಷರ ಕವಿಯು ಸಂಸ್ಕೃತದಲ್ಲಿ ಎಂತಹ ಕೃತಿ ರಚನೆಗೈದಿದ್ದರೂ ಅವನ ಕಾವ್ಯದ ಹಿರಿಮೆ ನಮಗೆ ಕಂಡು ಬರುವುದು ಕನ್ನಡ ಕೃತಿಗಳಲ್ಲಿಯೇ. ಕನ್ನಡ ಸಾಹಿತ್ಯದಲ್ಲಿ ಅವನ ಚಂಪೂ ಕೃತಿಗಳಾದ ರಾಜಶೇಖರ ವಿಳಾಸ, ವೃಷಭೇಂದ್ರ ವಿಜಯ ಹಾಗೂ ಶಬರಶಂಕರ ವಿಳಾಸಗಳು ನಿತ್ಯನೂತನವಾದ ಕಲಾಕೃತಿಗಳಾಗಿವೆ.

ರಾಜಶೇಖರ ವಿಳಾಸದ ಕಥೆ[7]

ಚೋಳ ದೇಶದ ಮಧ್ಯದಲ್ಲಿ ಧರ್ಮವತೀಪುರವು ಶಿವಭಕ್ತ ಪ್ರಜೆಗಳಿಂದ ಶೋಭಿಸಿದೆ. ಆದಕ್ಕೆ ರಾಜನು ಸತ್ಯೇಂದ್ರ ಚೋಳ. ಅಮೃತಮತಿ ಅವನ ಸತಿ. ಮಂತ್ರಿ–ಪತಿಮೋಹಿ. ಅವನ ಮಗ ಮಿತವಚನ. ಸತ್ಯೇಂದ್ರಚೋಳ ಪರಮ ಶಿವಭಕ್ತ, ಒಂದು ಸಲ ಕಾಶಿಗೆ ಹೋಗಿ ಸಹಸ್ರ ಕುಭಾಂಭಿಷೇಕದಿಂದ ಶಿವಾರ್ಚನೆಗೈದು ಬರಬೇಕೆಂಬ ತನ್ನ ಮನದಿಷ್ಟವನ್ನು ಮಂತ್ರಿಗೆ ತಿಳಿಸುತ್ತಾನೆ. ಆಗ ಮಂತ್ರಿ ಪತಿಮೋಹಿ "ನಿಮ್ಮೊಳ್ ಮೃಡನೆಂದುಂ ನೆಲಸಿ ನಿಂದನ್ ಅದಱಿಂ ನೀಮಿರ್ದೆಡೆ ಕಾಶಿಯಲ್ತೆ" [8]ಎಂದು ಹೇಳಿ ಸಾಮಂತ ಅರಸರನ್ನು ಸಾಲಾಗಿ ನಿಲ್ಲಿಸಿ ಘನ ಕನಕ ಘಟ ಸಹಸ್ರದಿಂದ ನೃಪತಿಯ ಪೂಜೆಗೆ ಅಣಿ ಮಾಡುತ್ತಾನೆ. ಅಮೃತಮತಿ ಒಮ್ಮೆ ಶಿವಪೂಜಾನಂತರ ಪುರಾಣ ಕೇಳುತ್ತಿರುವಲ್ಲಿ ಮಾರ್ಕಂಡೇಯನ ಬಾಲಲೀಲಾ ವರ್ಣನೆ ಬರಲು ತನಗೆ ಮಕ್ಕಳಿಲ್ಲವಲ್ಲ ಎಂದು ಕೆಲದೊಳಿರ್ದ ಗೆಳತಿಗೆ 'ಎಳವರೆಯದೊಳ್ ಎಳೆಯರ್ಕಳ....ನೋಡಿ ಮುದ್ದಿಪ ವಿಳಾಸಕ್ಕೆ ನೋಂತುದಿಲ್ಲಾಂ ಕೆಳದೀ" ಎಂದು ಚಿಂತಿಸುತ್ತಾಳೆ.[9] ಮುಂದೆ

ಚಿಧ್ವನ ಶಿವಾಚಾರ್ಯರು ಕರುಣಿಸಿತ್ತ ಪಂಚಾಕ್ಷರಿ ಮಂತ್ರೋಪದೇಶ ದಿಂದ ಮಂತ್ರಿಲಕ್ಷ್ಮೀಧರ [illegible] ರಾಜಶೇಖರ [illegible] ಮಗನಾಗಿ ಹುಟ್ಟುತ್ತಾನೆ. ಅರಸು ಹಾಗೂ ಮಂತ್ರಿ ಕುಮಾರರು ಸಮಚರಿತರಾಗಿ ಸಮವಿನಯ, ಸಮರೂಪು, ಸಮಗುಣಗಳಿಂದ ಸಮ ಸಮನಾಗಿ ಬೆಳೆಯುತ್ತಾರೆ. ಒಂದು ದಿನ ರಾಜಶೇಖರ ಓಲಗಗೊಟ್ಟಿರಲು ಸಿಂಧುರಾಜ ಕಾಣಿಕೆಯಾಗಿ ಎರಡು ಜಾತ್ಯಾಶ್ವಗಳನ್ನೀಯುತ್ತಾನೆ. ರಾಜಕುಮಾರನಿಗೆ ಅಶ್ವಾರೋಹಣದ ಇಚ್ಛೆಯಾಗಿ ಮಿತವಚನ ನೊಂದಿಗೆ ಅಶ್ವವಿಹಾರ ಕೈಕೊಳ್ಳುತ್ತಾನೆ. ವೇಗದಿಂದೋಡಿ ಬರುತ್ತಿದ್ದ ಮಿತವಚನನ ತುರಗದ ಖುರಹತಿಗೆ ತಿರುಕೊಳವಿನಾಚಿಯೆಂಬ ಶಿವಭಕ್ತೆಯ ಕುಮಾರ ಶಂಕರ ಸಿಕ್ಕಿ ಸಾಯುತ್ತಾನೆ. ಉಳಿದೊಬ್ಬ ಮಗನೇ ಸರ್ವಸ್ವವೆಂದು ನಂಬಿದ್ದ ತಿರುಕೊಳವಿನಾಚಿ ಅನಾಥಳಾಗಿ [illegible] ಕಣ್ಣೀರಿಡುತ್ತ [illegible]. ರಾಜನಾದ ಸತ್ಯೇಂದ್ರನಲ್ಲಿಗೆ ಆಕೆ ಬಂದು ತನಗಾದ ವೃತ್ತಾಂತವನ್ನು ತಿಳಿಸುತ್ತಾಳೆ. ನಿಜವ ತಿಳಿದ ಸತ್ಯೇಂದ್ರ ಚೋಳ "ನಿನಗಾದಪರಾಧ ಮೆನ್ನದು", ಎಂದು ತನ್ನ ಕುಮಾರ ಮಿತವಚನನಿಗೆ ವಚನ ಕೊಟ್ಟ ಪ್ರಕಾರ ಸ್ವತಃ ತನ್ನ ಮಗನಿಗೇ ಮರಣದಂಡನೆಯನ್ನೀಯುತ್ತಾನೆ. ರಾಜಶೇಖರನ ಶಿರಚ್ಛೇದನೆಯಾಗುತ್ತದೆ. ಕೂಡಲೇ ಅದು ಪಂಚಾಕ್ಷರಿ ಮಂತ್ರವನ್ನು ಜಪಿಸತೊಡಗುತ್ತದೆ. ಇದಕ್ಕೆ ಪಳಿಯಾಗಿ ಪತಿವೋಹಿ, ಸುದಾಯಿ, ತಿರುಕೊಳವಿನಾಚಿ, ಸತ್ಯೇಂದ್ರ ಎಲ್ಲರೂ ತಮ್ಮ ತಮ್ಮ ಶಿರವನ್ನರ್ಪಿಸುತ್ತಾರೆ. ಅಮೃತಮತಿಯೂ ಇದಕ್ಕೆ ಸಿದ್ಧಳಾಗಿ ನಿಂತಾಗ ಪರಶಿವನು ಪ್ರತ್ಯಕ್ಷನಾಗುತ್ತಾನೆ. ಎಲ್ಲರ ಶಿರಗಳೂ ಪಂಚಾಕ್ಷರಿ ಮಂತ್ರವನ್ನು ಜಪಿಸಿದ್ದರಿಂದ ಆ ಮಂತ್ರ ಮಹಿಮೆಗೆ ಒಲಿದ ಪರಶಿವನು ಸರ್ವರಿಗೂ ಪ್ರಾಣದಾನ ಮಾಡುತ್ತಾನೆ. ಕಾವ್ಯಕ್ಕೆ ಮಂಗಳವಾಗುತ್ತದೆ.

ರಾಜಶೇಖರ ವಿಳಾಸ, ಷಡಕ್ಷರ ದೇವನ ಪ್ರಥಮ ಕಲಾಕೃತಿ. ಹಳಗನ್ನಡದ ಚಂಪೂ ಶೈಲಿಯಲ್ಲಿಯೇ ಕಾವ್ಯವನ್ನು ರಚಿಸ ಹೊರಟಿರುವುದರಿಂದಲೂ, ಸಾಮಾನ್ಯ ಚಂಪೂ ಕವಿ ತರಬಹುದಾದ ವರ್ಣನೆಗಳನ್ನು ಸಾಂಪ್ರದಾಯಕವಾಗಿ ಇವನೂ ತಂದಿದ್ದಾನೆ. ಕವಿ ಸಮಯದ ಕಟ್ಟನ್ನೂ ಪಾಲಿಸಿದ್ದಾನೆ. ಆದರೆ ಹರಿಹರನ ಕ್ರಾಂತಿ ಗುಣಕ್ಕೆ ಒಲಿದ ಕವಿ ಷಡಕ್ಷರಿ ಱಳ–ಕುಳ–ಕ್ಷಳಗಳ ನಿಯಮವನ್ನು ಬಿಟ್ಟುಕೊಟ್ಟಿದ್ದಾನೆ.

ಷಡಕ್ಷರ ದೇವನ ಜನ್ಮಭೂಮಿಗೆ ಕನ್ನಡದ ಕಾವೇರಿ ಕೇವಲ ನಾಲ್ಕು ಮೈಲು ದೂರ. ಕವಿ 'ಸದಾಸೇವ್ಯ ನಿಮಿಷ ರಸ ಯುತೆ ಧರಾಕಾಮಧೇನು' ಎಂದು ಕವಿ ಆ ನದಿಯನ್ನು ಅಭಿಮಾನದಿಂದ ಬಣ್ಣಿಸುತ್ತಾನೆ. ಷಡಕ್ಷರಿ ಕವಿ ನಿಸರ್ಗ ಪ್ರೇಮಿ. ಸೃಷ್ಟಿಯ ರಾಮಣೀಯಕ ನೋಟವನ್ನು ಕವಿ ಕಣ್ದೀವಿ ನೋಡಿ, ಮನಂದೀವಿ ನೆನೆದು, ಭಾವಂದೀವಿ ಭಾವಿಸಿ ವರ್ಣಿಸುತ್ತಾನೆ. "ತೂಗುತೆ ತೊನೆಯುತೆ ಬಾಗುತೆ ಬಳ್ಕುತೆ ರಂಜಿಸುವಂತೆ ಸೊಂಪಾಗಿರ್ದ ಗಂಧಶಾಲೀವನ" ಇಲ್ಲಿ ಸುಂದರವಾದ ಶಬ್ದ ಚಿತ್ರವನ್ನು ಕಲ್ಪಿಸಿದ್ದಾನೆ ಕವಿ. ಈ ಕವಿಗೆ ಪ್ರಕೃತಿಯಲ್ಲಿ ಮಾನವ ಭಾವಗಳನ್ನು ಆರೋಪಿಸುವ ಉತ್ಪ್ರೇಕ್ಷಾ ಸಿದ್ಧಿ ಸಹಜವಾಗಿ ಸಾಧಿತವಾಗಿದೆ.

ತಲೆವಾಗಿದ ಸರಸಿಜದಿಂ
ದಲರ್ವಂಡೊಕ್ಕುದು ನಿಜೇಶನಗಲುತ್ತಿರೆ ತ–
ನ್ನಳಿನಿಮನಸ್ತಾಪದೆ ತಂ
ಬುಲಮಂ ಕೆಲಕುಗುಳ್ವಳೆಂಬುದಂ ಪ್ರಕಟಿಪವೋಲ್

ಸೂರ್ಯಾಸ್ತ ಸಮಯದಲ್ಲಿ ಕಮಲದಲ್ಲಿನ ಕೆಂಪುಪರಾಗ ಕೆಳಗೆ ಸುರಿಯುತ್ತದೆ, ಪತಿ ಅಗಲುವಾಗ ನಲ್ಲೆ ಮನಸ್ತಾಪದಿಂದ ತಂಬುಲವನ್ನು ಕೆಳಕ್ಕೆ ಉಗುಳುವಂತೆ, ಎಂಬ ಉತ್ಪ್ರೇಕ್ಷೆ, ಇಲ್ಲಿ ಸುಂದರವಾದ ಒಂದು ದಾಂಪತ್ಯ ಶೃಂಗಾರದ ಚಿತ್ರವನ್ನು ಕಣ್ಮುಂದೆ ತರುತ್ತದೆ.[10] ಕಮಲಕ್ಕೆ ಸೂರ್ಯ ಪತಿದೇವನಾಗಿರುವದು ಕವಿಸಮಯವಾಗಿರಬಹುದು, ಆದರೆ ಆ ಭಾವನೆ ಮಾತ್ರ ಲೌಕಿಕ ಜೀವನದಿಂದ ಕವಿಗೆ ಸ್ಫೂರ್ತಿನೀಡಿದೆ.

ರಾಜಶೇಖರ ವಿಳಾಸದಲ್ಲಿ ಶೃಂಗಾರ, ಕರುಣ ಹಾಗೂ ಭಕ್ತಿರಸಗಳ ತ್ರಿವೇಣಿ ಸಂಗಮ ಮಡುಗಟ್ಟಿ ನಿಂತಿದೆ. ಷಡಕ್ಷರ ದೇವನ ತಾರುಣ್ಯದಲ್ಲೆದ್ದಿರಬಹುದಾದ ಅಸಂಖ್ಯಾತ ಶೃಂಗಾರಪೂರಿತ ಮನಸ್ಸಿನ ಭಾವವೀಚಿಗಳು ರಾಜಶೇಖರ ವಿಳಾಸದ ವರ್ಣನೆಗಳಲ್ಲಿ, ಅಲಂಕಾರಗಳಲ್ಲಿ, ಸನ್ನಿವೇಶಗಳಲ್ಲಿ, ಪಾತ್ರಚಿತ್ರಣದಲ್ಲಿ ಅಭಿವ್ಯಕ್ತಗೊಳ್ಳುತ್ತವೆ. ರಾಜಶೇಖರವಿಳಾಸದ 11-12 ನೆಯ ಆಶ್ವಾಸಗಳಲ್ಲಂತೂ ಶೃಂಗಾರದ ಹುಚ್ಚು ಹೊಳೆ ಹರಿದಿದೆ.

ಸಿಂಹಳದ್ವೀಪಕ್ಕೆ ರಾಜಶೇಖರ ಹೋದಾಗ ಸರ್ವಮಂಗಳೆ ಹಾಗೂ ರಾಜಶೇಖರರ ಪ್ರೇಮಪೂರಿತ ಪ್ರಥಮ ಸಂದರ್ಶನದ ಸನ್ನಿವೇಶ, ಒಂದು ಶೃಂಗಾರದ ರಂಗಮಂಟಪದಂತಿದೆ. ಮೊದಲಬಾರಿ ರಾಜಶೇಖರ ಸರ್ವಮಂಗಳೆಯನ್ನು ನೋಡಿದಾಗ, "ಗೆಡೆಗೆಟ್ಟಿದು ಕಣ್ಬೇಟಂ ಗೆಡೆಗೆಟ್ಟುದು ಚಿತ್ತವೃತ್ತಿ ನವವಿರಹಂ ತಡೆಗೆಟ್ಟುದು" ಆಗ ರಾಜ ತನ್ನಲ್ಲಿಯೇ "ಈ ಲಲನೆಯ ಸೌಂದರ್ಯಂ ಸೋಲಿಸಿದುದು, ಗಡಾ ಮದೀಯ ಮನವನದಾರ್ಗಂ ಸೊಲದುದಂ ಶಿವ ಶಿವ ಶಶಿಮೌಳಿಯ ಮಾಯೆಯನದಾರ್ ಮೀರಲ್ ಬಲ್ಲರ್" ಎನ್ನುತ್ತಾನೆ. ಇದೇ ರೀತಿಯಲ್ಲಿಯೇ ನಿಂತು ಮನಸೋತವಳು ಸರ್ವಮಂಗಳೆ. ಚೆಲ್ವಿದ ಕರಣಂಗಳಂ ಮೆಲ್ಲನೆ ಸಂತೈಸಿಕೊಂಡು ಸಾರ್ವಭೌಮ ಮುಂದೆ ನಡೆಯುತ್ತಿದ್ದಾಗ ಸರ್ವಮಂಗಳೆಯ ನಯನ ಪಥ ಮೀರಿ ಹೋಗಿ ಒಮ್ಮೆಲೇ ಅವನನ್ನು ಅಪ್ಪುತ್ತದೆ. ಆಗ ಮಂಗಳೆಗೆ "ಪಡಿದೆರೆದಂತೆ ಪಾರಿತೆರ್ದೆ ಜುಮ್ಮನೆ ಮೈನವಿರುರ್ವಿ ಮೂಡಿದತ್ತಿಡಿಕಿರಿದಿರ್ದ ಬಲ್ಮೊಲೆಗಳಿಟ್ಟೆಡೆಯೊಳ್ ಬೆಮರಣ್ಮಿದತ್ತು, ಮೇಣ್ ದಡದಡಿಸಿತ್ತು ನುಣ್ದೊಡೆ ರದಚ್ಛದಮುರ್ವಿಡಿಗಿತ್ತು ಸುಯ್ಗೆ ಕಾಯ್ಪಡರ್ದುದೊಡಲ್ಗೆ ಮೆಲ್ಲನಡಿಯಿಟ್ಟುದು ಮೂರ್ಛೆ". ಈಕೆಯ ಅವಸ್ಥೆಯನ್ನು ಕಂಡ ಗೆಳತಿಯರು ಮಂಗಳೆಯನ್ನು ಉಪಚರಿಸುತ್ತಾರೆ.

ಷಡಕ್ಷರದೇವ, ಇಲ್ಲಿ ಇಬ್ಬರು ಪ್ರೇಮಿಗಳ ಪ್ರಥಮ ಸಂದರ್ಶನದಲ್ಲುಂಟಾಗುವ ಮನಸ್ಸಿನ ಸ್ಥಿತಿಯನ್ನು ಪರಿಣಾಮವನ್ನು ಅವರ ಮನಸ್ಸಿನಲ್ಲಿ ತಾನೇ ನೆಲಸಿ ನಿಂತು ವರ್ಣಿಸುತ್ತಾನೆ. ಮನೋವಿಶ್ಲೇಷಣಾತ್ಮಕ ದೃಷ್ಟಿಯಿಂದ ಈ ಸನ್ನಿವೇಶ ಅತ್ಯಂತ ಮಹತ್ವ

ದ್ದಾಗಿದೆ. ಕವಿ ಇಲ್ಲಿ ಗಾಂಭೀರ್ಯವನ್ನು, ಉದ್ದಾಮ ಶೃಂಗಾರವನ್ನು ತಂದು, ಅತ್ಯುಚ್ಚ ಮಟ್ಟದ ಸಂಸ್ಕೃತಿಯ ಎರಡು ಪ್ರೇಮ ಜೀವಿಗಳ ಮನಸ್ಸನ್ನರಿತು ಒಂದುಗೂಡಿಸಿದ್ದಾನೆ. ಸರ್ವಮಂಗಳೆಯ ದರ್ಶನವರ್ಣನಾಶ್ವಾಸದಲ್ಲಿ ಕವಿಯ ಪ್ರತಿಭೆ ವರ್ಣನಾ ವೈಖರಿ, ಸೂಕ್ಷ್ಮ ನಿರೀಕ್ಷಣೆ, ಮನಸ್ಸಿನ ಆಗು ಹೋಗುಗಳನ್ನು ದಳದಳವಾಗಿ ವಿಂಗಡಿಸಿ ರಸವತ್ತಾಗಿ ಚಿತ್ರಿಸುವ ಪದ್ಧತಿ—ಷಡಕ್ಷರದೇವನ ಸಹಜ ಕವಿತ್ವಕ್ಕೆ ಸಾಕ್ಷಿಯಾಗಿದೆ.

ಈ ಕಾವ್ಯವನ್ನು ಓದುತ್ತ ಓದುತ್ತ ಹೋದಂತೆಲ್ಲ ಔನ್ನತ್ಯದ ಮೆಟ್ಟಿಲುಗಳನ್ನು ಏರುತ್ತಿರುವಂತೆ ಭಾಸವಾಗುತ್ತದೆ. ಈ ಎಲ್ಲ ರಸ ಸನ್ನಿವೇಶಗಳನ್ನು ದಾಟಿ ನಡೆದಂತೆ ಕಾವ್ಯಕ್ಕೆ ಕಾವೇರುತ್ತ ಹೋಗುತ್ತದೆ. ಆಗ ನಾವು ಅತ್ಯಂತ ಮಹತ್ವದ ರಸಘಟ್ಟವೊಂದಕ್ಕೆ ಬಂದು ಮುಟ್ಟುತ್ತೇವೆ. ಅದರ ಹೆಸರು ತಿರುಕೊಳವಿನಾಚಿಯ ಪ್ರಳಾಪ. ಇಲ್ಲಿಂದಲೇ ಷಡಕ್ಷರಿದೇವನ ರಾಜಶೇಖರವಿಳಾಸ, ಮಹಾಕಾವ್ಯದ ಮಹೋನ್ನತ ಸ್ಥಿತಿಯನ್ನು ಮುಟ್ಟಿ ಮುಂದುವರೆದು ಸಿದ್ಧಿಯ ಪತಾಕೆಯನ್ನು ಏರಿಸುತ್ತದೆ. ತಿರುಕೊಳವಿನಾಚಿಯ ಪ್ರಳಾಪದ ಪ್ರಸಂಗ ಇಡೀ ಕಾವ್ಯದ ಒಡಲಿಗೆ ಆತ್ಮಸ್ವರೂಪದಂತಿದೆ. ಷಡಕ್ಷರ ದೇವನ ರಸಸಿದ್ಧಿ, ಜೀವಸಿದ್ಧಿ ಹಾಗೂ ಕಾವ್ಯಸಿದ್ಧಿಗಳ ಸಂಗಮ ಇಲ್ಲಿನ ರಸಸಮುದ್ರದಲ್ಲಿ ಲೀನವಾಗುತ್ತದೆ. ತಾಯ್ತಂದೆ, ಬಂಧು–ಬಳಗದವರ ಪೂರ್ವಾಶ್ರಯವನ್ನು ತ್ಯಜಿಸಿ ನಿಂತ ಏಕಾಕಿ ಸನ್ಯಾಸಿ ! ಷಡಕ್ಷರ ಕವಿ ಎಂತಹ ಅಗಾಧ ವಾತ್ಸಲ್ಯವನ್ನಿಲ್ಲಿ ವ್ಯಕ್ತಪಡಿಸಿದ್ದಾನೆ! ಲೋಕದಲ್ಲಿ ಮಗುವನ್ನು ಕಳೆದುಕೊಂಡು ಅನಂತಬಗೆಯಾಗಿ ದುಃಖಿಸುವ ತಾಯಿಗೂ, ತಿರುಕೊಳವಿನಾಚಿಯ ಪ್ರಳಾಪಕ್ಕೂ ಯಾವ ಅಂತರವೂ ಇಲ್ಲ. ಷಡಕ್ಷರಿದೇವ ಇದನ್ನು ಕಾವ್ಯದಲ್ಲಿ ಕಂಡರಸಿದ ಬಗೆ ಅವನ ಅಪೂರ್ವ ರಸಗ್ರಹಣ ಶಕ್ತಿಗೆ ಒಂದು ನಿದರ್ಶನ. ಆಕೆ ಪತಿಯನ್ನೂ ತನ್ನ ಮೊದಲಿನ ಆರು ಮಕ್ಕಳನ್ನೂ ಕಳೆದುಕೊಂಡಿದ್ದಾಳೆ. ಉಳಿದ ಒಬ್ಬನೇ ಒಬ್ಬ ಮಗ ಶಂಕರನನ್ನು ನೋಡಿ ಸಂತಸದ ದಿನಗಳನ್ನು ಕಳೆಯುತ್ತಿದ್ದಾಗಲೇ ಅದೆಂತಹ ವಿಧಿಸಂಕಲ್ಪ ! ಮಗು ಕುದುರೆಯ ಕಾಲಿಗೆ ಸಿಕ್ಕು ಮಡಿದಿದೆ. ಶೀರಿಹೋದ ಮಗುವಿನ ಮುದ್ದು ಮುಖವನ್ನು ನೋಡಿದಾಗ ತಾಯಿಗೆ ಕಂಠ ಉಮ್ಮಳಿಸುತ್ತದೆ. ಮಡಿದ ಮಗುವನ್ನೆತ್ತಿ ಸತ್ಯೇಂದ್ರನಲ್ಲಿಗೆ ತರುವ "ಕರತಳದಲ್ಲಿ ತಾಳ್ದ ತಲೆ ಸೋಗಿಲೊಳಿಟ್ಟ ಕಬಂಧಮೆತ್ತಲುಂ । ಪರೆದಳಿಕಾಳಿ ಧೂಳಿಪುದಿದಂಗಮುಡಂಗಿದ ಬಲ್ಪು ನೆತ್ತರೊಳ್ । ಪೊರೆದು ಸೆರಂಗು ಪಾಯ್ವುಗುವ ಕಣ್ಬನಿ ಬತ್ತುವ ಬಾಯ್ವೊದಳ್ಪಸು । ಯ್ಯೊರಗಿದ ವಕ್ತ್ರಮುಚ್ಚಳಿತಹಾರವಮೊಪ್ಪಿರೆ" ವಿನಾಚಿ ಒಬ್ಬಳೇ ಬರುತ್ತಿದ್ದಾಳೆ. ಇದೇ ವೇಳೆಗೆ ಕವಿಯು ಔಚಿತ್ಯಪೂರ್ಣವಾಗಿ ಸಂಜೆಯ ವರ್ಣನೆಯನ್ನು ತರುತ್ತಾನೆ. ಲೋಕಕ್ಕೂ ಆಕೆಯ ಜೀವನಕ್ಕೂ ಒಮ್ಮೆಲೆ ಕತ್ತಲೆ ಮುತ್ತಿಗೆ ಹಾಕುತ್ತದೆ.[11] ತಿರುಕೊಳವಿನಾಚಿ ತನ್ನ ಮಗನ ಕಳೇವರವನ್ನೆತ್ತಿ "ಮುಂಡಮುಂ ರುಂಡಮುಂ ಪತ್ತಿಸೆ ನೋಡಿ ಮತ್ತಮಿರದೆ, ಹಾ ! ಮಗನೆ, ಮುದ್ದುಗ! ಮಧುರವಾಣಿ! ವಂಶಲಲಾಮ! ಕೊರಲುಂ ಮೆಟ್ಟುವ ಪದದೋಳ್ ತುರಂಗ ಕಂಗೆಟ್ಟು ಜನನಿಯೆಂಜೆನ್ನ ನೀಂ ಕರೆದೆಯೋ …….. ದೋಷಾಕರೆಯೆಂದೇಂ ತೊರೆದೆಯೋ" ಎಂದು ತನ್ನನ್ನೇ ಶಪಿಸಿಕೊಳ್ಳುತ್ತಾಳೆ. ಭಾವನೆಗಳ ಒತ್ತಡದಲ್ಲಿ ಶಬ್ದವ್ಯಾಪಾರನಿಷ್ಠೆಯೆ ಮಾಯವಾಗುತ್ತದೆ ಎಂಬುದನ್ನು ಕವಿ. ….ನೋಡುವ ಕಣ್ಣೊಡೆದುದು ಮಾತಾಡಿಪ ನಾಲಗೆ ಮುರುಂಟಿದುದು……..ನೀನಾಡಿಡೆಡೆಗಳಂ ನೀನೊರಗಿದ ಪಾಂಸುಂ ನೀನುಂಡ ತಾಣಮುಮನಿನ್ನಾನೆಂತೀಕ್ಷಿಸುವೆನ್ ಎಂದು ವಿವರಿಸುವುದು ಔಚಿತ್ಯಪೂರ್ಣವಾಗಿದೆ. "ಅಳಲದಿರು ತಾಯೆ ದುಃಖಂಗೊಳ್ಳದಿರು" ಎಂದು ಸತ್ತ ಮಗು ಎದ್ದು ತಾಯಿಗೆ ಹೇಳಬೇಕಂತೆ; ಅವನಿನ್ನೂ ಬದುಕಿದ್ದಾನೆಂದೇ ಭಾವಿಸಿದ್ದಾಳೆ. ಅದಕ್ಕೇ "ಕಡುಮುಳಿದರವೋಲ್ಸುಮ್ಮನಿರ್ಪುದೆ ಸುಕುಮಾರಾ" ಎಂದು ಪ್ರಶ್ನಿಸುತ್ತಾಳೆ. 'ಪಸಿದೆಯೆಲೆ ಕಂದಾ' ಎಂದು ಮಕ್ಕಳೊಡನಂಗಣಕ್ಕೈದಿರೆ ತಳ್ತಧೂಳಿಯಿಂ ನಾಡೆ ಸೆರಂಗಿನಿಂದೊರೆಸಬೇಕೆಂಬ ಭ್ರಮೆ ಆಕೆಗಿನ್ನೂ ಇದೆ. ಆಕೆಯ ಜೀವನದಲ್ಲಿ ಸ್ಥೈರಣೆಯಿಲ್ಲ, ಶಾಂತಿಯಿಲ್ಲ, ಪ್ರಜ್ಞೆಯಿಲ್ಲ, ದೈನ್ಯಂಬಟ್ಟು, ಬಾಯಂಬಿಟ್ಟು ಕಂದನ ಪೆಸರ್ಗೊಂಡು ಶಂಕರಾ, ಶಂಕರಾಯೆಂದು ಕರೆಕರೆದು ನೆನೆನೆನೆದು ಹಲುಬಿ ಹಂಬಲಿಸುತ್ತಾಳೆ. "ಅಳಲದಿರು ತಾಯೆ ನೀನಾ । ರಳಿದಣುಗನಿದಾರವಂ ಕೊರಲ್ಗೊರೆದ ಮಹಾ । ಖಳನಾವನಾತನಂ ಪೇ । ಳ್ವಳಿಯೊಳ್ನೆರೆ ಕಾಣ್ಬೆನಿದಕೆ ತಕ್ಕುಜ್ಯುಗಮಂ । ಎಂದು ಸತ್ಯೇಂದ್ರ ಚೋಳ ಸಂತೈಸುತ್ತಿದ್ದರೂ ಶಂಕರ ತಿರುಗಿ ಬರುವಂತಿಲ್ಲ. ಆಕೆ ಗಳಗಳನೆ ಅಳುತ್ತಲೇ ಇರುತ್ತಾಳೆ. ಇದು ಷಡಕ್ಷರದೇವನ ಕರುಣಾರಸ ಸಿದ್ಧಿಯ ಪ್ರತೀಕಕ್ಕೆ ಒಂದು ನಿದರ್ಶನ. ರಾಘವಾಂಕನ ಹರಿಶ್ಚಂದ್ರ ಕಾವ್ಯದ ಚಂದ್ರಮತಿ ಪ್ರಳಾಪದ ಪ್ರಸಂಗವನ್ನುಳಿದರೆ ಕನ್ನಡದಲ್ಲಿ ಇದೇ ಮಹತ್ವದ ಕರುಣಾರಸ ಸನ್ನಿವೇಶವಾಗಿದೆ.

"ತಿರುಕೊಳವಿನಾಚಿಯ ಸಂದರ್ಭ ನಿಜವಾಗಿಯೂ ಹೃದಯಸ್ಪರ್ಶಿಯಾಗಿದೆ, ಷಡಕ್ಷರಿ ಎಂತಹ ಪಂಡಿತನಾದರೂ, ಎಷ್ಟು ಉತ್ಪ್ರೇಕ್ಷೆಗಳ ಉದ್ಯಾನವನ್ನು ರಚಿಸಿದರೂ, ರಸಮಯ ಸನ್ನಿವೇಶಗಳಲ್ಲಿ ಅವನು ತೀರ ಸರಳ ಮಾನವ ಸಹಜನಾಗುತ್ತಾನೆ" ಎಂಬ ವಿಮರ್ಶಕರ ಹೇಳಿಕೆ ಸತ್ಯವಾಗಿದೆ.[12] ಮಹಾಕವಿಯ ಅನುಭವ ಅನುಭೂತಿಗಳನ್ನು ಇಂತಹ ಸನ್ನಿವೇಶಗಳಲ್ಲಿಯೇ ನಾವು ನೋಡಬೇಕು. "ತಾಯಿಯ ಕರುಳನ್ನೇ ಎತ್ತಿ ಕಾವ್ಯದಲ್ಲಿಟ್ಟಂತಿದೆ" ಎನ್ನುವ ಮಾತೂ ಈ ಸಂದರ್ಭದಲ್ಲಿ ಅರ್ಥಪೂರ್ಣವಾಗಿದೆ.[13] ಷಡಕ್ಷರದೇವನ ಇಂತಹ ರಸ ಸನ್ನಿವೇಶವನ್ನು ಈ ಯುಗದ ಯಾವ ಕವಿಗಳೂ ಕಲ್ಪಿಸಿಕೊಂಡಿಲ್ಲ. ಇದೊಂದೇ ಅಂತಲ್ಲ ಇನ್ನುಳಿದ ಯಾವ ರಸಗಳ ಪ್ರತಿಪಾದನೆಯಲ್ಲೂ ಸಿದ್ಧಿಯನ್ನು ಪಡೆದಿಲ್ಲ. ಚಿಕದೇವರಾಜ ವಿಜಯದಲ್ಲಿ ವೀರರಸ ಸನ್ನಿವೇಶಗಳು ಬಂದಿದ್ದರೂ ರಾಜ ಮಹಾರಾಜರ ಏರಾಟ–ಹೋರಾಟಗಳ ನಡುವೆ ನಡೆದ ಐತಿಹಾಸಿಕ ನಿರೂಪಣೆಯಾಗಿದೆಯೇ ವಿನಃ ಕಾವ್ಯದ ಹೊಳಪು ಅಲ್ಲಿಲ್ಲ.

ರಾಜಶೇಖರ ವಿಳಾಸದ ಕೊನೆಯ ಸನ್ನಿವೇಶವಂತೂ ಕಾವ್ಯದ ಮಹೋನ್ನತ ಸ್ಥಲಗಳಲ್ಲೊಂದಾಗಿದೆ. "ನಿನಗಾದಪರಾಧಮೆನ್ನದು"

ಎಂದು ಮಿತವಚನದಿಂದಾದ ಅಪರಾಧ ತನ್ನದೆಂದು ರಾಜಶೇಖರ ಹೇಳಿದುದರ ಪರಿಣಾಮವಾಗಿ ತಿರುಕೊಳವಿನಾಚಿಯ ಮಗ ಶಂಕರನ ಸಾವಿನ ಕಾರಣ ತಿಳಿದ ದೊರೆ ತನ್ನ ಮಗ ರಾಜಶೇಖರನಿಗೇ ಮರಣ ದಂಡನೆಯನ್ನಿತ್ತಿದ್ದಾನೆ. ರಾಜಶೇಖರ ಅದನ್ನು ಆತ್ಮ ಸಂತೋಷ ದಿಂದ ಒಪ್ಪಿ ತನ್ನ ತಾಯಿ ಅಮೃತಮತಿಯ ಬಳಿಗೆ ಅಂತಿಮದರ್ಶನ ಕ್ಕಾಗಿ ಬಂದಿದ್ದಾನೆ. ರಾಜಶೇಖರ ಸಾರ್ವಭೌಮನಾದರೇನು ತಾಯಿಗೆ ಮಗನೇ ಅಲ್ಲವೆ ! ಅವನನ್ನು "ತೋಳ್ಗಳಿಂ ನೆಗಪಿ ನಲಿದು ಮುಂಡಾಡಿ" ಕುಳ್ಳಿರಿಸಿಕೊಂಡು ಕೇಳುತ್ತಾಳೆ. ಆಗ ಕವಿಯ ಹೃದಯ ದಿಂದೊಂದು ಮಾತು ಹೊರಬರುತ್ತದೆ–"ಜನನೀ ಪುತ್ರ ಸ್ನೇಹವೆಂತ ಪ್ಪುದೋ." ತಾಯಿ, ಮಗನ ನಗುಮೊಗವನ್ನು ನೋಡಿ ಬೆಸಗೊಂಡಾಗ, ರಾಜಶೇಖರ ಅದ ಸಂಗತಿಯನ್ನು ವಿವರಿಸಿ ಇದಕ್ಕಾಗಿ ಚಿಂತಿಸ ದಿರೆಂದು ಸೆರಗೊಡ್ಡಿ ಬೇಡಿಕೊಳ್ಳುತ್ತಾನೆ. (ಈ ಪ್ರಸಂಗದಲ್ಲಿ ಹೆಂಡತಿಯ ನೆನಪಂತೂ ರಾಜಶೇಖರನಿಗಾಗುವದೇ ಇಲ್ಲ.) ಆಗ ಅಮೃತಮತಿಯ ಮಾತಿದು "ಎನ್ನಾಳ್ದನ ಸತ್ಯಂಗೆಲೆನಿನ್ನಸುವಂ ಶಿವ ಭಕ್ತೆ ಶಿಸುಗೆ ಕುಡು ಚಿಂತೆಯಿದೇಕೆನ್ನಸುವೆ ? ಈ ಸತ್ಯವಚನ ಈ ನಯ ಸದ್ಗುಣ ವಿವೇಕ ಮತ್ತೂನುಗಲ್ಲದನ್ಯರೊಳೊಳವೆ" ಎಂದು ಆನಂದಾಶ್ರುವನ್ನು ಹರಿಸುತ್ತಾಳೆ. ಮಗನಿಗೆ ಮರಣದಂಡನೆಯಾಗುತ್ತಿದ್ದನ್ನು ಕೇಳಿಯೂ, ಕಂಡೂ, ತಾಯಿ ಹೀಗೆ ಆಡಿದಳೇ? ಇದೆಂತಹ ಮನೋಧೈರ್ಯ ! ಕೆಲವೇ ನಿಮಿಷಗಳ ಹಿಂದೆ ಇದೇ ಕವಿ ಓರ್ವ ಸಾಮಾನ್ಯ ಸ್ತ್ರೀ ನಾಚಿ, ತನ್ನ ಮಗ ಮಡಿದುದರ ನಿಮಿತ್ತವೇ ಶಂಕರ ನಿಗಾಗಿ ಒಂದೇ ಸವನೇ ಅಳುತ್ತಿರುವುದನ್ನು ಜಗತ್ತೇ ಕೇಳಿಸುವಂತೆ ಕರುಣಾಶ್ರವಣ ಮಾಡಿಸಿಲ್ಲವೇ ? ಇಲ್ಲಿ ಸಾರ್ವಭೌಮ ರಾಜಶೇಖರ ಪ್ರಾಣಾರ್ಪಣೆ ಮಾಡುವುದನ್ನು ಕಂಡಾಗ ತಾಯಿ ಅಮೃತಮತಿಗೆ ಒಂದು ಹನಿ ಕಣ್ಣೀರೂ ಬರಲಿಲ್ಲವೇ ? ಅದೆಂತಹ ನಿಶ್ಚಲ ನಿಲುವು ಅವಳದು ? ಎಷ್ಟಾದರೂ ಸ್ತ್ರೀ ಅಲ್ಲವೇ ಅವಳು? ಬಹುದಿನಗಳಿಂದ ಬಯಸಿ ಹೊತ್ತು ಹೆತ್ತ ಒಬ್ಬನೇ ಮಗ ರಾಜಶೇಖರನ ತಾಯಿಯಲ್ಲವೇ ಅಮೃತಮತಿ. ಇದು ಕವಿ ತೋರಿಸುವ ವಿಪರ್ಯಾಸ ವಲ್ಲವೇ ? ಅಲ್ಲ. ಇದು ಷಡಕ್ಷರದೇವ ತನ್ನ ಕಾವ್ಯವನ್ನು ಮಹೋನ್ನತಿಗೊಯ್ಯುತ್ತಿರುವ ರೀತಿ. ಅವನ ಕಾವ್ಯದ ಬೃಹದ್ದರ್ಶನದ ಗುಟ್ಟೇ ಇಲ್ಲಿ ಅಡಗಿದೆ. ತಿರುಕೊಳವಿನಾಚಿ ನಿಂತ ನಿಲುವೆ ಇನ್ನೂ ಲೋಕಕ್ಕೆ ಋಣಿಯಾಗಿದೆ. ಅಮೃತಮತಿಯ ಮನೋಭೂಮಿಕೆ ಈಗಾಗಲೇ ಲೋಕಾತೀತವಾದ ಹಂತವನ್ನು ಮುಟ್ಟಿದೆ. ವಿನಾಚಿಗೆ– ಚಿಂತೆ, ಶೋಕ, ರಾಗ, ಭಯ ಮುಂತಾದ ಲೌಕಿಕ ಗುಣಗಳು ಇನ್ನೂ ಬಿಟ್ಟಿಲ್ಲ. ಅಮೃತಮತಿ ಇವೆಲ್ಲವನ್ನು ಮೀರಿ ಹೋಗಿ ಪರಿಪೂರ್ಣತ್ವದ ಸ್ಥಿತಿಯನ್ನು ಮುಟ್ಟಿದ್ದಾಳೆ. ಶೈವಭಕ್ತರ ನಿಷ್ಠೆಯನ್ನೂ ನಾವಿಲ್ಲಿ ನೆನೆಸಿಕೊಳ್ಳಬಹುದು. ಷಡಕ್ಷರಿದೇವ ಇದನ್ನೆಲ್ಲ ಕಾವ್ಯಮಯವಾಗಿ ಹೇಳಿದ್ದಾನೆ. ಜೊತೆಗೆ ಇಲ್ಲಿ ಲೌಕಿಕ ಹಾಗೂ ಅಲೌಕಿಕ ಜೀವನ ದರ್ಶನ ಸಮನ್ವಯ ತತ್ವವನ್ನೂ ಸಾರಿದ್ದಾನೆ.

ರಾಜಶೇಖರ ವಿಳಾಸದ ಪಾತ್ರ ಸೃಷ್ಟಿಯೂ ಅಷ್ಟೇ ಪ್ರಧಾನ ವಾಗಿದೆ. ಅಲ್ಲಿರುವ ಪಾತ್ರಗಳಲ್ಲಿ ಮಾನವೀಯ ಹೃದಯಗಳ ಮಿಡಿತ ವಿದೆ. ಅನುಕಂಪೆಯಿದೆ. ಪತಿವೋಹಿ, ರಾಜಶೇಖರ, ಸಂದಾಯಿತ್ರಿ, ನಾಚಿ, ಸತ್ಯೇಂದ್ರಚೋಳ, ಮಿತವಚನ ಇವರೆಲ್ಲರೂ ತಮ್ಮ ತಮ್ಮ ಶಿರಗಳನ್ನು ಪರಮಾತ್ಮನಿಗೆ ಅರ್ಪಿಸುವಾಗ ಉಗ್ರಭಕ್ತಿಯ ಕಲ್ಪನೆ ಒಂದೆಡೆ, ಸತ್ಯಕ್ಕಾಗಿ, ಪ್ರೀತಿಗಾಗಿ, ನ್ಯಾಯಕ್ಕಾಗಿ ಆತ್ಮಾರ್ಪಣ ಮಾಡುತ್ತಿರುವ ಹೃದಯದ್ರಾವಕ ಸನ್ನಿವೇಶ ಇನ್ನೊಂದೆಡೆ. ಒಂದೆಡೆ ಧರ್ಮ, ಇನ್ನೊಂದೆಡೆ ರಾಜಧರ್ಮ - ಇವೆಲ್ಲವೂ ಕಾವ್ಯಧರ್ಮದಲ್ಲಿ ರೂಪಿತವಾಗಿ ರಾಜಶೇಖರವಿಳಾಸ ಓದುಗರ ಹೃದಯವನ್ನೇ ಸೂರೆಗೊಳ್ಳುತ್ತದೆ. ಷಡಕ್ಷರದೇವ ಇದನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾನೆ. ಭಕ್ತಿರಸದ ಹೊನಲನ್ನು ಹರಿಸಿದ್ದಾನೆ. ರಾಜಶೇಖರ ವಿಳಾಸ ಮಹಾಕಾವ್ಯವಾಗಿ ನಿಂತ ನೆಲೆ ಇಲ್ಲಿದೆ.

ರಾಜಶೇಖವಿಳಾಸ ಈ ಯುಗದ ಮಹಾಕಾವ್ಯ. ರಸವತ್ತಾದ ಮಹಾಕಾವ್ಯದ ರಚನೆಯಲ್ಲಿ ಯಶಸ್ವಿಪಡೆದ ಅಂದಿನ ಕವಿಗಳಲ್ಲಿ ಷಡಕ್ಷರಿದೇವ ಒಬ್ಬನೇ ಒಬ್ಬ. ರಾಜಶೇಖರವಿಳಾಸವು ಅಂದಿನ ಯುಗದ ಕವಿಗಳ, ವಿದ್ವಾಂಸರ, ಸಹೃದಯರ, ಜನತೆಯ, ರಸ ವಿಮರ್ಶೆಯ ಒರೆಗಲ್ಲಿಗೆ ಹಚ್ಚಿ ಪರೀಕ್ಷಿಸಿ ನೋಡಿದ ರಸವತ್ಕಾವ್ಯ.

ರಾಜಶೇಖರ ವಿಳಾಸಕ್ಕೆ ದೊರೆಯಬೇಕಿದ್ದ ಪ್ರಶಸ್ತಿ ಎಂದೋ ದೊರೆತಿದೆ. ಈ ಕಾವ್ಯರಚನೆಗೆ ಸಂಬಂಧಿಸಿ ಕೆಲವು ಆಖ್ಯಾಯಿಕೆ ಗಳಿವೆ. ನೇಮಿಚಂದ್ರನ ಲೀಲಾವತಿಯೊಡನೆ ಸ್ಪರ್ಧಿಸಿ, ಕವಿ ಷಡಕ್ಷರಿ, ಅದಕ್ಕಿಂತ ಸರಸವಾದ ಕಾವ್ಯವನ್ನು ರಚಿಸುವುದಾಗಿ ಹೇಳಿ ರಾಜ ಶೇಖರ ವಿಳಾಸವನ್ನು ಒಂದು ವರ್ಷದಲ್ಲಿಯೇ ಬರೆದು, ಪಂಡಿತ ಗೋಷ್ಠಿಯ ಮುಂದಿಟ್ಟನಂತೆ. ಆಗ ವಿದ್ವಾಂಸರೆಲ್ಲರೂ "ನೇಮಿ ಚಂದ್ರನ ಲೀಲಾವತಿ ಕನ್ನಡದಲ್ಲಿ ಪ್ರೌಢಕಾವ್ಯವಾದಾಗ್ಯೂ ರಾಜ ಶೇಖರ ವಿಳಾಸದಷ್ಟು ರಸಪುಷ್ಠಿಯುಳ್ಳದ್ದಲ್ಲ ವೆಂದು ಹೇಳಿ ಒಟ್ಟಾಗಿ ಷಡಕ್ಷರದೇವನ ಕವಿತ್ವ ವಿಷಯವಾಗಿ,

ಜಿಹ್ವಾಂತರ್ನಟದಂಬುಜ್ಯಾಸನ ವಧೂ ಪಾದಪ್ರವಾಳಸ್ಫುರನ್
ಮಂಜೀ ರದ್ವಯ ಮಂಜುನಾದ ವಿಭವ ಶ್ರೀಗರ್ವ ಸರ್ವಾಂಕಷಾಃ
ಜೀಯಾಸುರ್ಭವತಃ ಷಡಕ್ಷರ ವಿಭೋ ಕುಂದಾರ ವಿಂದಾವಲೀ
ಮಂದಾರದ್ರುಮ ಮಂಜರೀ ಮಧು ಝುರೀ ಮಾಧುರ್ಯ
ಧುರ್ಯಾಗಿರಃ

ಎಂದು ಯೋಗ್ಯತಾ ಪತ್ರಮಂ ಕೊಟ್ಟರೆಂಬ ಬಹು ಕಾಲದಿಂದಲೂ ಒಂದು ಐತಿಹ್ಯವು ಜನಜನಿತವಾಗಿ ಬಂದಿರುವುದು".[14]

ಅದೇ ರೀತಿ ರುದ್ರಭಟ್ಟನ ಜಗನ್ನಾಥವಿಜಯ, ಹಾಗು ಲಕ್ಷ್ಮೀಶನ ಜೈಮಿನಿ ಭಾರತಗಳಿಗೂ ಸಂಬಂಧಿಸಿ ರಾಜಶೇಖರ ವಿಳಾಸ ಉಲ್ಲೇಖನಗೊಂಡಿದೆ. ಕಾಲಮಾನದ ದೃಷ್ಟಿಯಿಂದ ಈ ಕವಿಗಳು ಬೇರೆ ಬೇರೆ ಯುಗದವರಾಗಿದ್ದರೂ, ರಾಜಶೇಖರವಿಳಾಸ ರಚನೆ ಗೊಳ್ಳುವುದಕ್ಕಿಂತ ಮೊದಲು ಜನತೆಯಲ್ಲಿ ಲೀಲಾವತಿ, ಜಗನ್ನಾಥ ವಿಜಯಗಳು ಪ್ರಚಾರದಲ್ಲಿದ್ದವೆಂತಲೂ, ಮುಂದೆ ಆ ಪ್ರಶಸ್ತಿ ರಾಜ ಶೇಖರವಿಳಾಸ, ಜೈಮಿನಿಭಾರತ ಕೃತಿಗಳಿಗೆ ದೊರೆತಿರಬೇಕೆಂದೂ ಭಾವಿಸಬಹುದು. ಇವೆರಡೂ ಕಾವ್ಯಗಳನ್ನು ಪಠಿಸುವ ರೂಢಿ ನಮ್ಮ ಜನತೆಯಲ್ಲಿ ಇಂದಿನವರೆಗೂ ಮುಂದುವರೆದು ಬಂದಿದೆ.

ವೃಷಭೇಂದ್ರ ವಿಜಯಂ ೧೮

ವೃಷಭೇಂದ್ರವಿಜಯದ ಕೃತಿಪತಿ ಬಸವನಾದರೂ ಸಹಸ್ರದಳ ಕಮಲದಂತಿರುವ ಆ ಬಸವಣ್ಣನವರ ವ್ಯಕ್ತಿತ್ವದ ಸುತ್ತಲೂ ಅರಳಿ ನಿಂತ ಅಸಂಖ್ಯಾತ ಪುರಾತನ, ನೂತನ ಶರಣರ ಭಕ್ತಿ, ಜ್ಞಾನ, ವೈರಾಗ್ಯ ಜೀವನದ ಸುರಮ್ಯ ಕಥೆಗಳೆಲ್ಲ ಇಲ್ಲಿ ಬಂದಿವೆ. ಈ ದೃಷ್ಟಿಯಿಂದ ಇದೊಂದು ಶರಣರ ಬೃಹತ್ಕಥಾ ಕಾವ್ಯಮಂಜರಿ. "ಕಥನ ಕವನಗಳ ಬನಿ". ಪ್ರಾರಂಭದ ಐದಾರು ಆಶ್ವಾಸಗಳವರೆಗೆ ಮಾತ್ರ ಬಸವಣ್ಣನವರ ಜೀವನಕ್ಕೆ ಸಂಬಂಧಿಸಿದ ನೇರವಾದ ಕಥೆ ಇದೆ. ಮುಂದಿನ ಕಾವ್ಯಭಾಗವೆಲ್ಲ ಶರಣರ ಕಥೆಗಳಿಗಾಗಿ ಮೀಸಲಾಗಿದ್ದು, ಬಸವಣ್ಣನವರ, ಹಾಗೂ, ಶಿವಶರಣರ ಅವಿನಾಭಾವ ಸಂಬಂಧವನ್ನು ಈ ಕಥೆಗಳು ಸೂಚಿಸುತ್ತವೆ.

ಲಿಂಗನಿಷ್ಠಾಪರರ, ಮುಗ್ಧರ, ಉಗ್ರನಿಷ್ಠಾವಂತರ, ಕಾಯಕ ಜೀವಿಗಳ ಸರ್ವೇಂದ್ರಿಯಾರ್ಪಿತರ, ಭೂತದಯಾಪರರ, ಭವಿಸಂಗವರ್ಜಿತರ, ಕ್ರಾಂತಿಪುರುಷರ, ಲೋಕೋದ್ಧಾರಕರ ಶಿವಧರ್ಮರಕ್ಷಕರ. ಕಾಮತತ್ವದಿಂದ ಪರತತ್ವಕ್ಕೇರಿದ ಶರಣರ ಕಥೆಗಳನ್ನು ಷಡಕ್ಷರ ಕವಿ ಹೃದಯಂಗಮವಾಗಿ ನಿರೂಪಿಸಿದ್ದಾನೆ.

ಬಸವಣ್ಣನವರ ಭಕ್ತಿಜೀವನದ ಪರಿಚಯವನ್ನು ಕವಿ ಷಡಕ್ಷರಿ ಬಹುಸುಂದರವಾಗಿ ಮಾಡಿಕೊಡುತ್ತಾನೆ. ಅವರಬಗ್ಗೆ ಕವಿಯಲ್ಲಿರುವ ಭಕ್ತಿಯೂ ಅಷ್ಟೇ ಆಳವಾದುದು. 'ಪ್ರಮಥ ಪ್ರಥಮಾಚಾರ್ಯ', 'ಶರಣರ ಕೈಯ ಕೈಪಿಡಿ', 'ಈಶಭಕ್ತರ ಸುರಧೇನು' 'ಶಿವಮತಸಾರ' ಎಂಬಂತಹ ವಿಶೇಷಣಗಳು ಆಕರ್ಷಕವಾಗಿವೆ. ಗರ್ಭಾಷ್ಟಕ ಪ್ರಸಂಗದಲ್ಲಿ ಕವಿ ತೋರಿದ ಜಾಣ್ಮೆ ಎದ್ದುಕಾಣುತ್ತದೆ. ಬಸವೇಶ-ಮಾದಿರಾಜರ ಸಂಭಾಷಣೆಯಲ್ಲಿ ಸ್ವಮತಾಧಿಕ್ಯತೆ; ಪರಮತ ನಿಂದೆಯ ಅಂಶಗಳಿರಬಹುದು, ಅವೆಲ್ಲವೂ ಕಾಲಮಹಿಮೆ, ಅದನ್ನೇ ವಿಮರ್ಶಿಸಿ ಕವಿಯನ್ನು ಟೀಕಿಸುವುದು ಅನುಚಿತ. ಆದರೆ ಕಾವ್ಯದೃಷ್ಟಿಯಿಂದ ಆ ಪ್ರಸಂಗವನ್ನೀಕ್ಷಿಸಬೇಕು. ಅಲ್ಲಿರುವ ಸಂಭಾಷಣಾ ಕೌಶಲ್ಯ, ನಾಟಕೀಯತೆ, ವೈಚಾರಿಕ ವಿಮರ್ಶೆ ಸೊಗಸಾಗಿ ನಿರೂಪಿತವಾಗಿದೆ. ಗರ್ಭಾಷ್ಟಮಾಬ್ದ ಸಂಪ್ರಾಪ್ತವಾಗಲು ಮಾದಿರಾಜ ನಡೆಸಿದ ಸಂಭ್ರಮವನ್ನು ಕುರಿತು ಬಸವಣ್ಣ ಕೇಳುತ್ತಾನೆ.

ಬಸವ : ಜನಕ ! ಘನಸಂಭ್ರಮಮಿದೇನು ಪೇಳ್ ?
ಮಾದಿರಾಜ : ತನೂಭವ, ನಿನಗುಪನಯನದ ದಿನಮಾದುದು.
ಬಸವ : (ಮುಗುಳ್ನಗೆ ನಕ್ಕು) ಮೃಡನ್ ಎನಗೆಸಗಿದ ದೀಕ್ಷೆಯನ್ ಮರೆದು ಏನನಾಲೋಚಿಸಿದೈ ? ಹರದೀಕ್ಷೆಯಾಂತ ಮಹಿಮನ್ ಪರದೀಕ್ಷೆಯನಾಸೆಗೆಯ್ವನೇ ?
ಮಾದಿರಾಜ : ಮಗನೆ ಪಿರಿಯರೆಲ್ಲರ್ ನಡೆದ ನಡಾವಳಿಯನ್ ಒಲ್ಲೆನೆಂಬುದು ಬಲ್ಲತನಂ ಅಲ್ತು ....

ಹೀಗೆ ಈ ಪ್ರಸಂಗ ಮುಂದುವರಿಯುತ್ತದೆ. ಚಂಪೂಶೈಲಿಯ ಬಿಗುಬಂಧದಿಂದಾಗಿ ಮಾತಿನ ರೀತಿ, ಸಹಜತೆಗಳು ಒಮ್ಮೊಮ್ಮೆ ಅಸ್ಪಷ್ಟವೆಂದು ಕಂಡರೂ ಅರ್ಥವ್ಯಕ್ತಿಗೆ ಯಾವ ಆತಂಕವೂ ಇಲ್ಲ. ಭೀಮಕವಿ ಇದನ್ನೇ ದೇಸೀಯ ಮಾತು, ಮನ, ಭಾವಗಳಿಂದ ಸಹಜವಾಗಿ ಚಿತ್ರಿಸಿದ್ದಾನೆ ನಿಜ. ಆದರೆ ಅವನಷ್ಟು ಅತಿರೇಕವಾಗಿ ಷಡಕ್ಷರಿಯಲ್ಲಿ ಈ ಪ್ರಸಂಗ ಮುಂದುವರೆದಿಲ್ಲ.

ಬಸವಣ್ಣನವರು ಕಲ್ಯಾಣದಲ್ಲಿ ಶರಣರೊಡನೆ ಇದ್ದ ಜೀವನವನ್ನು ಕುರಿತು, ಕವಿ ಹೀಗೆ ಹೇಳುತ್ತಾನೆ. ಇಲ್ಲಿ ಭಕ್ತಿರಸದ ಹೊನಲು ಹರಿದಿದೆ. ಛೇಕಾನುಪ್ರಾಸದ ಛಂದೋಲಹರಿ ಭಾವದ ಉತ್ಕಟತೆಗೆ ಕಾರಣವಾಗಿದೆ.

ಹರಿಸದೆ ನೋಡಿ ನೋಡಿ ಸುಖವಾರ್ಧಿಯೊಳಾಳುತೆ
ಮೂಡಿ ಮೂಡಿ ಸಾ ।
ದರಮುರೆ ಪಾಡಿ ಪಾಡಿ ಪದಪೂಜನಮಂ ಮಿಗೆ ಮಾಡಿ
ಮಾಡಿ ಭ ॥
ಕ್ತಿರತಿಯ ಕೂಡಿ ಕೂಡಿ ನಿಜದೇಹಮನಂಘ್ರಿಗೆ ನೀಡಿ
ನೀಡಿ ಶಾಂ॥
ಕರ ಗಣವೃಂದಮಂ ಭಜಿಸಿ ತತ್ಕೃಪೆಯಂ ಪಡೆದಂ
ವೃಷಾಧಿಪಂ ॥16

ಅದೇ ರೀತಿಯಾಗಿ ಬಸವೇಶನ ದಾನಗುಣ, ಜಂಗಮ ದಾಸೋಹವನ್ನೂ ಅಷ್ಟೇ ಭಕ್ತಿರಸಪೂರ್ಣವಾಗಿ ಕವಿ ಚಿತ್ರಿಸಿದ್ದಾನೆ.

ಷಡಕ್ಷರದೇವ ಬಸವಣ್ಣನವರ ಪಾತ್ರಚಿತ್ರಣದ ಜೊತೆಗೆ ಇನ್ನುಳಿದ ಶರಣರ ಜೀವನವನ್ನೂ ಅಷ್ಟೇ ರಮ್ಯವಾಗಿ ರೂಪಿಸಿದ್ದಾನೆ. "ಚಿದಭಿನ್ನಂ ಚೆನ್ನಬಸವಂ ಕಲ್ಯಾಣ ಕಲ್ಪದ್ರುಮಂ"ಎಂದು ಅವನು ಚನ್ನಬಸವಣ್ಣನನ್ನು ವಿಶೇಷಿಸಿದ್ದಾನೆ. ಪ್ರಭುದೇವ ಕಲ್ಯಾಣಕ್ಕೆ ಬಂದ ಮೇಲೆ ಬಸವನ ಭಕ್ತಿ ಪರೀಕ್ಷೆಗಾಗಿ ನಡೆಸಿದ ಆರೋಗಣೆಯ ಸಂದರ್ಭ ಬರುತ್ತದೆ. ಇಲ್ಲಿ "ಗಗನಂ ಬಾಯ್ದೆರೆದಂದದಿಂದೆ ಸಕಲಾನ್ನವ್ರಾತಮಂ ಕೊಂಡಚಿ। ದ್ಗಗನಾಕಾರನಾದ "ನೆಂದು ಕವಿ ಹೇಳುವ ಬಗೆ ಪ್ರಭುವಿನ ದಿವ್ಯ–ಭವ್ಯವಾದ ವ್ಯಕ್ತಿತ್ವವನ್ನೇ ತೆರೆದು ತೋರಿಸುತ್ತದೆ. ಇನ್ನುಳಿದ ಶರಣರ ಪಾತ್ರಚಿತ್ರಣಕ್ಕಾಗಿ ಕವಿ ಒಂದೊಂದೇ ಕಥೆಯನ್ನು ಹೇಳುತ್ತಾ ಹೋಗುತ್ತಾನೆ. ಷಡಕ್ಷರದೇವನ ಕಥನ ಕಲೆ ಇಲ್ಲಿ ಸಿದ್ಧಿಪಡೆದಿದೆ. ಒಬ್ಬೊಬ್ಬ ಶರಣರ ಸಂಕ್ಷಿಪ್ತ ಕಥೆಯನ್ನು ಹೇಳುತ್ತ ಹೋಗುವಾಗ ಅವರ ಭಕ್ತಿಯ ಸಾಧನೆ, ಅದರ ರೂಪ, ಅದರ ವೈವಿಧ್ಯ, ಅವರ ಮನದ ನಿಲುಗಡೆ, ಜೀವನ ಸಿದ್ಧಿ, ಅವರಿತ್ತ ಸಂದೇಶ–ಇವೆಲ್ಲವನ್ನೂ ಗಾಗರದಲ್ಲಿ ಸಾಗರ ತುಂಬಿದಂತೆ ಬಣ್ಣಿಸುತ್ತಾ ಹೋಗುತ್ತಾನೆ.

ನೂತನ ಶರಣರ ಕಥೆಗಳನ್ನು ಹೇಳುವಲ್ಲಿ ಷಡಕ್ಷರ ಕವಿಯ ಪ್ರತಿಭೆಯೂ ನಿತ್ಯನೂತನವಾಗಿದೆ.

ಸೋಳಿಗೆ ಮಾರಯ್ಯನ ಕಾಯಕ ಹೊಗಳಲರಿಯದು. ಬಸವಣ್ಣನ ದಾನಗುಣವನ್ನು ವಿಡಂಬನೆಗೈಯುತ್ತ ಸೋಳಿಗಯ್ಯ

ಇನ್ನೂ ರವಿದತ್ತ್ಯದು

ಹೇಳುವ ಮಾತಿದು. " ನಿನ್ನಯ ಕೃಪೆಯಿಂ ಬಡತನಮನ್ನೀಗಿದೆ ನಿನಗೆ ನೀನೆ ಮಾನ್ಯವಪ್ಪಾ! ಕೋಪಮುಡು ನಿನ್ನ ಶಿರಮೊಳ್ ಮೂಡಿದುದೆಲೆ ಬಸವ ಬಡವರಿರ್ದೆಡೆಗೆ ಮುದಂ ಗೂಡಿ ಗಮಿಸುತ್ತೆ ಧನಮಂ ನೀಡುವೆ" ಎನ್ನುತ್ತಾನೆ. ಆಗ ಬಸವಣ್ಣನಿಗೆ ಹಿಂದೊಮ್ಮೆ ನಡೆದ ಪ್ರಭುವಿನ ಆರೋಗಣೆಯ ಪ್ರಸಂಗ ನೆನಪಾಗಿ " ಮುನ್ನಂ ನಿನ್ನಂ ವಸುರಹಿತವೆಂದು ನೆನೆದಂ ವಸುಧೆಯೊಳಿಂದೆನ್ನ ಪೋಲ್ಪ ಗಾಂಪರುಮೊಳರೆ" ಎಂದು ಪಶ್ಚಾತ್ತಾಪ ಪಟ್ಟು ಕ್ಷಮೆ ಕೇಳಿಕೊಳ್ಳ ಬೇಕಾಗುತ್ತದೆ. ಒಬ್ಬೊಬ್ಬ ಶರಣರ ಜೀವನದ ಮಟ್ಟ ಇಂತಹ ಸಂದರ್ಭಗಳಲ್ಲಿ ಮಹೋನ್ನತಿಗೇರುತ್ತದೆ. ಷಡಕ್ಷರದೇವ ಇಂತಹ ಮಹೋನ್ನತ ಸ್ಥಲಗಳನ್ನು ರಸವತ್ತಾಗಿ ಚಿತ್ರಿಸಿದ್ದಾನೆ.

ಷಡಕ್ಷರ ದೇವನ ಚಂಪೂರೂಪವು ವೃಷಭೇಂದ್ರ ವಿಜಯದ ಜನಪ್ರಿಯತೆಗೆ ಆತಂಕವಾಗಿರಬಹುದು. " ಷಡಕ್ಷರಿಯ ಕಾವ್ಯದ ಹೊರಮೈ ಚಂಪೂ ಆಕಾರವನ್ನು ತಾಳಿದರೂ ಒಳಗಿನ ಆತ್ಮ ಹರಿಹರ ರಾಘವಾಂಕ, ಚಾಮರಸಾದಿ ಕವಿಗಳು ಬೆಳೆಸಿಕೊಂಡು ಬಂದ ಅವಿನಾಶಿಯಾದ ಭಕ್ತಿ ಮತ್ತು ತತ್ವದರ್ಶನದಿಂದ ಪ್ರೇರಿತವಾದದ್ದು " ಎಂಬ ಹೇಳಿಕೆ ಬಹುಮಟ್ಟಿಗೆ ನಿಜ.

"ಷಡಕ್ಷರ ದೇವ ಹುಟ್ಟನಿಂದಲೇ ಶೃಂಗಾರ ಕವಿ. ಶೃಂಗಾರ ರಸ ನಿರೂಪಣೆಯಲ್ಲಿರುವ ಪ್ರಾವಿಣ್ಯ ಷಡಕ್ಷರದೇವನಿಗೆ ಭಕ್ತಿರಸ ಪ್ರತಿಪಾದನೆಯಲ್ಲಿಲ್ಲದೆ ಹೋಗಿದೆ"[17] ಎಂಬ ಹೇಳಿಕೆ ರಾಜಶೇಖರ ವಿಳಾಸವನ್ನೇ ಕುರಿತು ಹೇಳುತ್ತಿದ್ದರೆ ಸರಿ. ಈ ಮಾತು ಅವನ ವೃಷಭೇಂದ್ರ ವಿಜಯಕ್ಕೆ ಅನ್ವಯಿಸದೇ ಹೋಗಬಹುದಾಗಿದೆ. ಏಕೆಂದರೆ ವೃಷಭೇಂದ್ರ ವಿಜಯ " ಭಕ್ತಿಯ ಅಮೃತ ಕಲಶವನ್ನು ಹೊತ್ತು ಮೆರವಣಿಗೆ ಹೊರಟಿರುವ ಐರಾವತದಂತಿದೆ".[18] ಭಕ್ತಿಯ ವಿವಿಧ ಮುಖಗಳಾದ ಶ್ರದ್ಧೆ ನಿಷ್ಠೆ, ಸಮರಸ ಇವೇ ಮೊದಲಾದ ಷಡ್ವಿಧ, ನವವಿಧ ಭಕ್ತಿಯ ವಿಕಾಸ ಈ ಶರಣರ ಕಥೆಗಳಲ್ಲಾಗಿದೆ. ಬೇಡರ ಕಣ್ಣಪ್ಪ, ಮುಗ್ಧ ಸಂಗಾರ್ಯರಲ್ಲಿ ಮುಗ್ಧ ಭಕ್ತಿಯನ್ನೂ, ಸಿರಿಯಾಳನಲ್ಲಿ ಸರ್ವತ್ಯಾಗ ಸಂಕೇತವಾಗಿ ಬಂದ ಉಗ್ರ ಭಕ್ತಿಯನ್ನೂ, ದೀಪದ ಕಲಿಯಾರನಲ್ಲಿ ನಿಷ್ಠಾಭಕ್ತಿಯನ್ನೂ, ಮೋಳಿಗೆ ಮಾರಯ್ಯ ಮೊದಲಾದ ಶರಣರ ಕಥೆಗಳಲ್ಲಿ ಅವರವರ ಜೀವನ ವಿಧಾನವನ್ನರಿತು ಭಕ್ತಿ ಪ್ರತಿಮೆಗಳನ್ನೂ ಕವಿ ಷಡಕ್ಷರಿದೇವ ಸುಂದರವಾಗಿ ನಿರೂಪಿಸಿದ್ದಾನೆ.

ವೃಷಭೇಂದ್ರ ವಿಜಯವು ಈ ದೃಷ್ಟಿಯಿಂದ ಮಾನವತೆಯ ಮಟ್ಟದ ಮೇಲೇರಿ ನಿಂತು ಜೀವನ ಸಿದ್ಧಿಯನ್ನು ಪಡೆದ ಶರಣರ ಕಥೆಗಳನ್ನು ಜೀವನ ಸಂಸ್ಪರ್ಶಿಯಾಗುವಂತೆ ಹೇಳಿದ ಉದಾತ್ತದರ್ಶನದ ರಸಪೂರ್ಣ ಕಾವ್ಯ. ಲೌಕಿಕರಾಗಿ ಬಾಳಿ ಅಲೌಕಿಕರಾಗಿ ಕೀರ್ತಿವೆತ್ತ ಶರಣರ ಪವಾಡಗಳನ್ನು, ಅವರಿತ್ತ ಲೋಕ ಸಂದೇಶವನ್ನು ಅವರುಗೈದ ಲೋಕಸಂಗ್ರಹ ಕಾರ್ಯಗಳನ್ನು ವಿವರಿಸುವ ಶರಣರ ವಿಶ್ವಕೋಶ ವೃಷಭೇಂದ್ರ ವಿಜಯ.

ಬಸವ ಪುರಾಣದ ಪರಂಪರೆ ನಮ್ಮ ನಾಡಿನಲ್ಲಿ ಈ ಮೊದಲೇ ಬೆಳೆದು ಬಂದಿತ್ತು. ಬಸವಣ್ಣನವರ ಹಾಗೂ ಇನ್ನುಳಿದ ಶರಣ ಕಥೆಗಳನ್ನು ಜನತೆ ಭಕ್ತಿಭಾವದಿಂದ ಆಲಿಸುತ್ತಿತ್ತು. ಜನತೆಯ ಸಂಸ್ಕೃತಿಯನ್ನು ರೂಪಿಸುವಲ್ಲಿ ಈ ಕಥೆಗಳ ಪ್ರಭಾವ ಅಂದು ಪ್ರಕಟಿತವಾಗಿರಬೇಕು. ಈ ದೃಷ್ಟಿಯಿಂದ ಬಸವ ಪುರಾಣದಲ್ಲಿನ ಒಂದು ಆಕರ್ಷಕ ಗುಣವೆಂದರೆ ಅಲ್ಲಿ ಬರುವ ಕಥೆಗಳ ವಿಶಿಷ್ಟತೆ. ಷಡಕ್ಷರ ನಂತಹ ಭಕ್ತ ಕವಿ ಶರಣರ ಈ ಜೀವನ ಕಥೆಗಳಿಗೆ ಮಾರುಹೋಗಿ ಇದನ್ನೇ ತನ್ನ ಕಾವ್ಯದಲ್ಲಿ ಅಳವಡಿಸಿ ಬಸವ ಪುರಾಣದ ಆಧಾರದ ಮೇಲಿಂದ ತನ್ನ ವಸ್ತು ಕಾವ್ಯವನ್ನು ರಚಿಸಿರಬೇಕು. ಷಡಕ್ಷರ ಕವಿ ಬಸವ ಪುರಾಣವನ್ನೇ ಅನುಸರಿಸಿದ್ದರೂ ಉಚಿತಕ್ಕೆ ತಕ್ಕಂತೆ ಅಲ್ಲಲ್ಲಿ ಅನೇಕ ಮಾರ್ಪಾಡುಗಳನ್ನೂ ಮಾಡಿಕೊಂಡು ಕೃತಿಯ ಸಮಗ್ರ ಸೌಂದರ್ಯವನ್ನು ಹೆಚ್ಚಿಸಿದ್ದಾನೆ. ಭೀಮ ಕವಿಯ ಬಸವ ಪುರಾಣಕ್ಕಿರುವ ಜನಪ್ರಿಯತೆ ಷಡಕ್ಷರದೇವನ ವೃಷಭೇಂದ್ರ ವಿಜಯಕ್ಕಿಲ್ಲವೆಂಬುದು ನಿಜ. ಆದರೆ ಜನಪ್ರಿಯತೆಯೊಂದೇ ಕಾವ್ಯವಿಮರ್ಶೆಯ ಅಳತೆಗೋಲಾಗಲಾರದು. ಸಾಮಾನ್ಯ ಜನತೆಯಲ್ಲಿ ಶರಣರ ಕಥೆಗಳು ಯಾವ ರೂಪದಿಂದಲಾದರೋ ಉಳಿದು-ಬೆಳೆದು ಬರುತ್ತವೆ. ಆದರೆ ಸಾಹಿತ್ಯ ಕ್ಷೇತ್ರದಲ್ಲಿ ವಿದ್ವತ್ಪೂರ್ಣವಾದ,ಪ್ರೌಢವಾದ, ಅಷ್ಟೇ ರಸವತ್ತಾದ ಕಾವ್ಯಗಳಿಗೆ ಎಲ್ಲ ಕಾಲಕ್ಕೂ ಬೆಲೆಯಿದೆ. ಷಡಕ್ಷರಿದೇವ ಈ ಕಥೆಗಳನ್ನು ಚಂಪೂರೂಪದಲ್ಲಿ ಹೇಳಿರುವದು,ಅದರ ವಸ್ತು ಗಾಂಭೀರ್ಯವನ್ನೂ ಹೆಚ್ಚಿಸಿದಂತೆ, ಶೈಲಿ ಹಾಗೂ ದರ್ಶನದ ಗಾಂಭೀರ್ಯವನ್ನೂ ವಿಕಾಸಗೊಳಿಸಿದೆ. ಈ ದೃಷ್ಟಿಯಿಂದ ವೃಷಭೇಂದ್ರ ವಿಜಯ ಉಳಿದ ವೀರಶೈವ ಪುರಾಣಗಳಿಗಿಂತ ವಿಶಿಷ್ಟವಾಗಿದೆ. "ವೃಷಭೇಂದ್ರ ವಿಜಯ ಷಡಕ್ಷರ ದೇವನ ಕೃತಿಗಳಲ್ಲೆಲ್ಲ ಶ್ರೇಷ್ಠವಾದುದೆಂದು ನಿರ್ಣಯಿಸಬಹುದಲ್ಲದೆ ಕನ್ನಡ ಸಾಹಿತ್ಯದಲ್ಲಿಯ ಶ್ರೇಷ್ಠವರ್ಗದ ಕಾವ್ಯಗಳಲ್ಲಿಯೂ ಇದೊಂದು ಎಂದು ಪರಿಗಣಿಸಬಹುದು". ಎಂಬ ನಿರ್ಣಯ ಘನವಾಗಿದೆ.[19]

ಶಬರಶಂಕರ ವಿಳಾಸ[20]

ಇದು ಷಡಕ್ಷರದೇವನ ಕೊನೆಯ ಕೃತಿ, ಇದೊಂದು ಖಂಡ ಕಾವ್ಯ. ಇಂದ್ರಕೀಲಾಚಲದಲ್ಲಿ ಅರ್ಜುನನು ತಪಸ್ಸುಮಾಡಿ ಪರಶಿವನಿಂದ ಪಾಶುಪತಾಸ್ತ್ರವನ್ನು ಪಡೆದುಕೊಂಡ ಒಂದು ಪ್ರಸಂಗ- ಇದರ ಕಥಾವಸ್ತು. ಇದು ಶಿವನ ಪಂಚವಿಂಶತಿ ಲೀಲೆಗಳಲ್ಲೊಂದಾಗಿ ಶಿವಪುರಾಣಗಳಲ್ಲೂ ವರ್ಣಿತವಾಗಿದೆ.

ಶಬರಶಂಕರವಿಳಾಸದ ವಸ್ತು ಕಿರಿದು; ವರ್ಣನೆ ಹಿರಿದು; ವರ್ಣಿಸುವವನೇ ಕವಿ ಎಂಬ ಭಾವನೆ ಒಂದು ಕಾಲಕ್ಕಿತ್ತು. ಷಡಕ್ಷರಿದೇವ ಇಂಥ ಕಾಲದಲ್ಲಿ ಬದುಕಿದವನು. ಜನ–ಮನದ ಅಭೀಪ್ಸೆ ಎಂತೋ ಅಂತೆ, ಕಾವ್ಯವಾಹಿನಿ ಹರಿದು ಬರುತ್ತದೆ. ಇಲ್ಲಿಬರುವ ಕೆಲವು ವರ್ಣನೆಗಳು ಚಿತ್ತಾಕರ್ಷಕವಾಗಿವೆ. ಪ್ರಾರಂಭದಲ್ಲಿನ ಸಮುದ್ರ ವರ್ಣನೆ ಹೊಸದೇನೂ ಅಲ್ಲ. ಆದರೂ ಷಡಕ್ಷರ ಕವಿ ಉತ್ಪ್ರೇಕ್ಷಿಸುವ ರೀತಿ ವಿಶಿಷ್ಟವಾಗಿದೆ.ನಾಲ್ಕಾರು ಪದ್ಯಗಳಲ್ಲಿಯೇ ಅದನ್ನು ಮುಗಿಸಿ ಕವಿ ಓದುಗರನ್ನು ಕೈಲಾಸಕ್ಕೆ ಕರೆದೊಯ್ಯುತ್ತಾನೆ. ಅವನು ಮಾಡಿದ ಕೈಲಾಸವರ್ಣನೆ ಅದ್ವಿತೀಯವೂ, ಅಪೂರ್ವವೂ ಆಗಿದೆ. ಅಲ್ಲಿಯ "ಮರವೆಲ್ಲಂ ಸುರವಾದಪಂ ಮಿಸುಪ ಕಲ್ಲೆಲ್ಲಂ

ಮಣಿಶ್ರೇಣಿ", "ಲತಾಪ್ರತೀತಿಯೆಲ್ಲಂ ಕಲ್ಪವಲ್ಲೀ ಕುಲಂ" ಎಂದು ಹೇಳಿ ಕವಿಯು ಮೃಣ್ಮಯ ಜಗತ್ತಿನ ಅಣು – ಅಣುವಿನಲ್ಲೂ ಚಿನ್ಮಯವನ್ನು ಕಾಣುತ್ತಾನೆ, ರೂಪಿಸುತ್ತಾನೆ. "ಈ ಕೈಲಾಸ ವರ್ಣನೆ ಡಾಂಟೆ ಮೊದಲಾದವರ ವರ್ಣನೆಗೆ ಹೊಯ್‌ಕೈಯಾಗಿದೆ". ಎನ್ನುವ ಲಂಡನ್ನಿನ ತಜ್ಞ ವಿಮರ್ಶಕರಾದ ಎಲ್. ಟಿ. ಬಾರ್ನೆಟ್ ಅವರ ಅಭಿಪ್ರಾಯ ಸೂಕ್ತವಾಗಿದೆ. ಅದೇ ರೀತಿ ಇಂದ್ರ ಕೀಲಾಚಲದ ವರ್ಣನೆಯೂ ಭವ್ಯವಾಗಿದೆ. "ಮುನಿಗಳ ಬೀಡು ಮುಕ್ತಿಯ ತವರ್ಮನೆ ಪೆರ್ಮೆಯಗೊತ್ತು........ ಸಯ್ಪಿನ ಸೀಮೆ ದಿವ್ಯನಂದನದ ನಿವಾಸವಾದ ಇಂದ್ರಕೀಲಾಚಲವು ವರ್ಣನಾತೀತ. ಅದನ್ನು ಕವಿಯೇ 'ಮಿಗೆ ಬಣ್ಣಿಸಲಾರ್ಗೆ ಗೋಚರಂ' ಎಂದು ಹೇಳಿದ್ದಾನೆ. ಆದರೂ ಪ್ರತಿಭಾವಂತನಾದ ಕವಿ ಷಡಕ್ಷರಿದೇವ, ಅಲ್ಲಿನ ಬೆಳಗು ಬೈಗುಗಳನ್ನು, ಗಿರಿಕಂದರಗಳನ್ನು, ಇನಿಯರ್ಗೆ ನಾನಾವಿಳಾಸವನ್ನು ತೋರುವ ಖೇಚರಿಸಂಚಯ, ಪಕ್ಕಿವಲಸು, ನಾರಿಕೇಳ ತೆಂಗು ಮೊದಲಾದ ವೃಕ್ಷತತಿಯನ್ನು, ಕಾಮನ ಸಮಾಜದಂತೆ ತೋರುವ ಮಾವರವನ್ನು, ಗಿಳಿ, ಕೋಗಿಲೆಗಳನ್ನು, ತಿಳಿಗೊಳ, ತಪೋವನ, ತಾಪಸೇಂದ್ರರನ್ನೆಲ್ಲ ಸುಂದರವಾಗಿಯೇ ಬಣ್ಣಿಸಿದ್ದಾನೆ.

ಷಡಕ್ಷರ ಕವಿಯ ವರ್ಣನೆ ಒಮ್ಮೊಮ್ಮೆ ನಮ್ಮನ್ನು ಕಲ್ಪನೆಯ ಕಾಡಿಗೂ ಕರೆದೊಯ್ಯುವಂತೆ; ಯಥಾವತ್ತಾದ, ವಾಸ್ತವದ ಕಡೆಗೂ ಕರೆತರುತ್ತದೆ. ಉದಾಹರಣೆಗೆ ತಪೋಧನರು ಕೈಲಾಸಕ್ಕೆ ಬಂದ ಸನ್ನಿವೇಶ. ಆಗ ಅವರ ವೇಶಭೂಷಣಗಳನ್ನು ವರ್ಣಿಸುವ ರೀತಿಯನ್ನು ಲಕ್ಷಿಸಬೇಕು. "ಅವರ ಜಟಾವಳಿ ಕೆದರಿದೆ, ಮೃಗಾಜಿನ ಜಾರಿದೆ. ಮೊಗ ಕಂದಿದೆ. ನಿಡುಸುಯ್ಯಿಂದ ತುಟಿ ಕಾಂತಿಗುಂದಿದೆ. ಕೈಯ ಕಮಂಡಲು ಕಂಪನಗೊಂಡಿದೆ". ಅರ್ಜುನನ ತಪೋವರ್ಣನೆಯೂ ಇದಕ್ಕೆ ಹೊರತಾಗಿಲ್ಲ. ಷಡಕ್ಷರ ಕವಿಯು ಯೋಗಿಯೂ ಹೌದು. ಕವಿ ತನಗೆ ಯೋಗದ ವಿಧಾನ ಚನ್ನಾಗಿ ಗೊತ್ತಿದೆಯೆಂಬುದನ್ನು ಅಲ್ಲಿ ತೋರಿಸಿಕೊಟ್ಟಿದ್ದಾನೆ. "ಅರೆಮುಗುಳ್ದಕ್ಷಿಗಳ್ ಮಿಡುಕುಗುಂಪದ ಚೆಂದುಟಿ ನಿರ್ಮಳಾಂಗ" ಇದೆಲ್ಲವೂ ಯೋಗಾಸೀನನಾದ ಒಬ್ಬ ಯೋಗಿಯನ್ನೇ ಚಿತ್ರಿಸುತ್ತದೆ.

ಅರ್ಜುನನ ಸ್ಥಿರ ಭಕ್ತಿಭಾವ, "ಹೊರಗಣ ಮಾಯಾಭ್ರಾಂತಿಗೊಳಗಾದ ನಿರ್ವಿಕಾರತೆಯಲ್ಲಾ ಅವನ ತಪೋವರ್ಣನೆಯಲ್ಲಿ ಸುಂದರವಾಗಿ ಅಭಿವ್ಯಕ್ತಗೊಂಡಿದೆ.

ತನುವೃತ್ತಂ ನೇತ್ರದೊಳ್ ನೇತ್ರದ ಬಗೆ ಮನದೊಳ್
ತನ್ಮನಂ ಬುದ್ಧಿಯೊಳ್ ಬು ।
ದ್ಧಿನಿತಾಂತಂ ಚಿತ್ತದೊಳ್ ಚಿತ್ತದ ನಿಲವದಹಂಕಾರದೊಳ್
ಸಂದಹಂಕಾ ।
ರನಿಯೋಗಂ ಜೀವನೊಳ್ ಜೀವನೆ ಪರಮನೊಳಾಳ್ದೈಕ್ಯಮಂ
ನಿಲ್ಪನಂ ಬೇ ।[21]
ಟೆನಿಪಂದಂಬೊಂದದಾನಂದದ ನಿಧಿಯೆನಿಸಲ್
ಸಾಲ್ಪನಿರ್ದಂ ಮುನೀಂದ್ರಂ ॥

"ನೀನಾನೆಂಬೆರಡರಡಚಿದುದು। ಮಾನಸಮುಂ ಭೋದಿಯಾಲಿ ಕಲ್ಲಾಯ್ತು, ಶಿವಂ ತಾನಾದನೋ ತಾನೆ ಶಿವನಾದನೋ ಎಂಬ ತೆಱದಿನವನೊಪ್ಪಿರ್ದುಂ"[22] ಈ ಮುಂತಾದ ವರ್ಣನೆಯಲ್ಲಿ ಷಡಕ್ಷರ ಕವಿಗಿದ್ದ ಶಿವಾನುಭಾವಯೋಗವು ವರ್ಣಿತಗೊಂಡಿದೆ. ಈ ದೃಷ್ಟಿಯಿಂದ ಶಬರಶಂಕರ ವಿಳಾಸವು ಷಡಕ್ಷರ ಕವಿಯ ಮನಸ್ಸಿನ ಪರಿಪಕ್ವತೆಯನ್ನು ಯೋಗಜೀವನದ ಅನುಭವವನ್ನೂ ಸೂಚಿಸುತ್ತದೆ. ಇನ್ನುಳಿದ ಕಿರಾತವರ್ಣನೆ ಮುಂತಾದವುಗಳಲ್ಲಿ ಷಡಕ್ಷರಿಯು ಸಂಪ್ರದಾಯಕ್ಕೆ ಕಟ್ಟುಬಿದಿದ್ದಾನೆ.

ಪಾತ್ರಸೃಷ್ಟಿಗೆ ಇಲ್ಲಿ ಹೆಚ್ಚಿನ ಅವಕಾಶವಿಲ್ಲವಾದರೂ ಕವಿಯು ಅರ್ಜುನನಲ್ಲಿ ಶೌರ್ಯ, ತಪೋನಿಷ್ಠೆ, ಕ್ಷಾತ್ರತೇಜ, ಸ್ವಾಭಿಮಾನ, ಛಲ, ಭಕ್ತಿಭಾವನೆ ಇತ್ಯಾದಿ ಗುಣಗಳನ್ನು ತುಂಬಿ ಜೀವಂತಗೊಳಿಸಿದ್ದಾನೆ. 'ಎಲೆಗಿರಿಜಾತೆ ನೋಡಿವನ ಸಾಹಸಮಂ' ಎಂದು ಪರಶಿವನು ಗಿರಿಜೆಗೆ ಹೇಳವಾಗಲೂ, 'ಬಾರೆಲೆ ಪದ್ಮಲೋಚನನ ಮೈದುನ ಪಾಂಡವ' ಎಂದು ಗಿರಿಜೆ ಅರ್ಜುನನ್ನು ಕರೆವಲ್ಲಿಯೂ ಪಾತ್ರಗಳ ಜೀವಂತಿಕೆ ಸಂಭಾಷಣಾ ದೃಷಿಯಿಂದ ಇನ್ನೂ ಹೆಚ್ಚುತ್ತದೆ.

ಹೀಗೆ ಶಬರಶಂಕರವಿಳಾಸದ ಹಲವೆಡೆಗಳಲ್ಲಿ ನಾವು ವರ್ಣನ ಸೌಂದರ್ಯ ಸನ್ನಿವೇಶ ರಚನೆ, ವಸ್ತುಸಂವಿಧಾನ, ಪಾತ್ರಸೃಷ್ಟಿ, ಸಂಭಾಷಣೆ ಇತ್ಯಾದಿ ಅಂಶಗಳು ರಮ್ಯವಾಗಿ ಬಂದಿರುವುದನ್ನು ಕಾಣುತ್ತೇವೆ. ಆದರೂ ಕವಿ ಹೇಳುವಂತೆ "ಇದು ಪೊಸರೀತಿ ನೋಡಿದು ನವೀನಮಲಂಕೃತಿ ನವ್ಯಭಾವಮಿಂತಿದು ನವ್ಯವೃತ್ತಿ.....ಕೀರ್ತಿಸೆ ನಿಮಿರ್ಚಿವೆನೀ ಸುಭಗ ಪ್ರಬಂಧಮಂ" ಎಂಬ ಹೇಳಿಕೆ ಮಾತ್ರ ಅತಿಶಯೋಕ್ತಿಯೆಂದು ಕಾಣುತ್ತದೆ.

ಶಬರಶಂಕರ ವಿಳಾಸವು ಒಂದು ಕಿರುಕೃತಿಯಾದ ಮಾತ್ರಕ್ಕೆ ಅದರಲ್ಲಿ ಕಾವ್ಯ ಸೌಂದರ್ಯವಿಲ್ಲವೆಂದಲ್ಲ. ಮಹಾಕಾವ್ಯ ಬರೆವ ಛಲದಿಂದ ಹೊರಟ ಕವಿ ಷಡಕ್ಷರಿಯು ಇಲ್ಲಿ ತನ್ನ ಸಂಯಮನ ಶಕ್ತಿಯನ್ನು ಚೆನ್ನಾಗಿ ತೋರ್ಪಡಿಸಿದ್ದಾನೆ. ಕಾವ್ಯದಲ್ಲಿ ಶಿವಸ್ತುತಿಯ ಆಧಿಕ್ಯ, ಕಾನನ, ಬೇಟೆ, ಇತ್ಯಾದಿ ವರ್ಣನೆಯ ವೈಪರೀತ್ಯವಿರುವುದೇನೋ ನಿಜ. ಆದರೆ ಕವಿ ರಚಿಸಿಕೊಂಡ ಸನ್ನಿವೇಶಕ್ಕೆ ಅದೆಲ್ಲವೂ ಪೋಷಿತವಾಗಿಯೇ ಬಂದಿದೆ.

ಶಬರಶಂಕರ ವಿಳಾಸವು ಒಂದು ಖಂಡಕಾವ್ಯವೇ ಎಂಬುದನ್ನು ವಿಚಾರಿಸಬೇಕು. "ಇದನ್ನು ಲಘುಕಾವ್ಯ ಇಲ್ಲವೆ ಖಂಡಕಾವ್ಯ ಎಂದು ಕರೆಯುವುದಕ್ಕಿಂತ ಮಧ್ಯಮಕಾವ್ಯ ಎನ್ನುವುದು ಲೇಸು.... ಕ್ಲಿಷ್ಟ ಸಂದರ್ಭಗಳಲ್ಲಿ ಇವರ ಸಂಸ್ಕೃತಾಡಂಬರ, ದುರ್ಬೋಧತೆಗಳು ತೋರಿಬರುತ್ತವೆ. ಒಟ್ಟಿನಲ್ಲಿ ಇದು ಮಧ್ಯಮ ಗಾತ್ರದ ಮಧ್ಯಮ ಗುಣದ ವಿದಗ್ಧ ಕಾವ್ಯ" ಎಂಬುದಾಗಿ ಸಾಹಿತ್ಯ ಚರಿತ್ರಕಾರರು ಹೇಳುತ್ತಾರೆ.[23] ಡಾ॥ ಮುಗಳಿಯವರು ಇದನ್ನು ಮಧ್ಯಮಕಾವ್ಯವೆಂದೇನೋ ಕರೆದಿದ್ದಾರೆ. ಆದರೆ ಆ ಕಾವ್ಯಜಾತಿಯ ಲಕ್ಷಣವನ್ನು ಅವರು ವಿವರಿಸಿಲ್ಲ. 'ಮಧ್ಯಮ ಗಾತ್ರ' 'ಮಧ್ಯಮ ಗುಣ'ಗಳೇ ಅದರ ಲಕ್ಷಣಗಳಾಗಿದ್ದರೆ ಗಾತ್ರದ ದೃಷ್ಟಿಯಿಂದ ಕಾವ್ಯದ ಮಟ್ಟವನ್ನು ಅಳೆಯುವುದಂತೂ ತರವಲ್ಲ ಇನ್ನು ಲೇಖಕರು ಹೇಳುವ

'ಮಧ್ಯಮ ಗುಣ'ವನ್ನು ನಾವು ಮಹಾಕಾವ್ಯದಲ್ಲಿಯೂ ಕಾಣಬಹುದು. ಆದ್ದರಿಂದ ಈ ಹೇಳಿಕೆ ಶಬರಶಂಕರ ವಿಳಾಸಕ್ಕೆ ಸಮಂಜಸವಾಗಿದೆ. ಮಹಾಕಾವ್ಯವನ್ನೇ ಕುರಿತ ಒಂದು ಬಗೆಯ ವಿಮರ್ಶನ ಶಾಸ್ತ್ರದೃಷ್ಟಿಯಲ್ಲಿ ಸಮಗೆ ಹೀಗೆನ್ನಿಸುವದು ನಿಜ. ಆದರೆ ಶಬರ ಶಂಕರ ವಿಳಾಸಕ್ಕೆ ಸಹಜವಾಗಿಯೇ ಅನ್ವಯಿಸುವ ಕೆಲವು ಖಂಡ ಕಾವ್ಯದ ಲಕ್ಷಣಗಳ ಮೇಲಿಂದ ಈ ಕೃತಿಯ ಮೌಲ್ಯ ನಿರ್ಣಯ ಸಾಧ್ಯವೆಂದು ತೋರುತ್ತದೆ.[24]

ಶಬರಶಂಕರ ವಿಳಾಸದ ಪಾತ್ರಸೃಷ್ಟಿಯ ಬಗ್ಗೆ ವಿವರಿಸುತ್ತ "ಶಬರ ವೇಷಧಾರಿಯಾದ ಶಂಕರನೇ ಇಲ್ಲಿಯ ಕಥಾನಾಯಕ ಈ ನಿಮಿತ್ತ ಶಿವಲೀಲೆಯಲ್ಲಿ ಅರ್ಜುನನ ಪಾತ್ರ ಅಮುಖ್ಯ" ಎಂಬ ಅಭಿಪ್ರಾಯ ಒಂದೆಡೆಗೆ ವ್ಯಕ್ತವಾಗಿದೆ.[25] ಆದರೆ ಈ ಹೇಳಿಕೆ ಪಂಪ ರನ್ನಾದಿಗಳಲ್ಲಿ ಬರುವ ಪ್ರಸಂಗಕ್ಕೆ ಅನ್ವಯಿಸುವಂತೆ ಷಡಕ್ಷರ ಕವಿಗೆ ಅನ್ವಯಿಸಲಾರದು. ಏಕೆಂದರೆ ಇಲ್ಲಿ ಶಿವಾಧಿಕ್ಯದೊಡನೆ ಭಕ್ತಾಧಿಕ್ಯವೂ ಪ್ರಕಟವಾಗಿದೆ. ಶಕ್ತಿ, ಹಾಗೂ ಭಕ್ತಿಗಳ ಸಮನ್ವಯ ಸಿದ್ಧಾಂತವನ್ನು ಕವಿ ಇಲ್ಲಿ ನಿರೂಪಿಸ ಹೊರಟಂತಿದೆ. "ಕೊಲುವೆನೆಂಬ ಭಾಷೆ ದೇವನದಾದರೆ ಗೆಲುವೆನೆಂಬ ಭಾಷೆ ಭಕ್ತನದು" ಎಂಬ ವಚನೋಕ್ತಿಯು ಇಲ್ಲಿ ಸಾರ್ಥಕ ಪಡೆದಿದೆ. ಒಂದು ದೃಷ್ಟಿಯಿಂದ ಪರಶಿವನ ಈ ಲೀಲೆಗೆ ಭಕ್ತನಾದ ಅರ್ಜುನನೇ ಪ್ರೇರಕನಾಗಿದ್ದಾನೆ. ಈ ಸಂದರ್ಭದಲ್ಲಿ ಈ ಕೃತಿಯು ಪಾತ್ರ ಪ್ರಧಾನಕ್ಕಿಂತ ಹೆಚ್ಚಾಗಿ ಘಟನಾಪ್ರಧಾನವೇ ಆಗಿರುವುದನ್ನೂ ನಾವು ಲಕ್ಷಿಸಬೇಕು. "ಶಬರ ಶಂಕರ ವಿಳಾಸದಲ್ಲಿ ನಡೆಯುವದು ಹುಸಿ ಜಗಳ ಈ ಕಥೆ ಹುಸಿ ಕಥೆ" ಎಂಬ ಮಾತೂ ಸಮಂಜಸವಾಗಿಲ್ಲವೆಂದು ತೋರುತ್ತದೆ.[26] ಇದು ಶಿವಲೀಲಾ ಕಥನ. ಶಿವನ ಈ ಸನ್ನಿವೇಶ ಒಂದು ಹುಸಿಯಲ್ಲ, ಅದೊಂದು ಲೀಲೆ. ಕಿರಾತ ಪ್ರಸಂಗ ಶಿವನ ಪಂಚವಿಂಶತಿ ಲೀಲೆಗಳಲ್ಲೊಂದಾಗಿದೆ.

ಶಬರಶಂಕರ ವಿಳಾಸದ ರಸವಿಮರ್ಶೆ ಮಾಡುತ್ತ "ವೀರರಸ ಇಲ್ಲಿ ಬಾರದೇ ಹೋಗಿದೆ. ಏಕೆಂದರೆ ಶಿವನಿಗೆ ಅರ್ಜುನನ್ನು ನಿಗ್ರಹಿಸಬೇಕೆಂಬ ಆಶೆಯಾಗಲಿ, ಹಟವಾಗಲಿ ಇಲ್ಲ, ತನ್ನ ಭಕ್ತನೆಂದು ಗೊತ್ತಿದೆ. ಆದ್ದರಿಂದ ವೀರರಸ ಅಭಿವ್ಯಕ್ತಗೊಳ್ಳುವ ಸಂದರ್ಭಕ್ಕೆ ಬಾಧೆ ಬಂದಂತಾಗುತ್ತದೆ. ಎಳೆಯ ಮಗುವೊಂದು ತಂದೆಯ ಮೇಲೆ ಸೆಟೆದು ನಿಂತ ಒಂದು ವಿನೋದ ಅನುಭವಕ್ಕೆ ಬರುತ್ತದೆ.[27]" ಎಂಬ ಹೇಳಿಕೆಯನ್ನಿಲ್ಲಿ ಪರಿಶೀಲಿಸಬೇಕು. ಶಿವಾರ್ಜುನರು ಯುದ್ಧ ಮಾಡುವ ಕಾಲಕ್ಕೆ ಅವರ "ಪಾದ ತಳಕ್ಕೆ ಧರಾತಳಂ ಕುಸಿಯೆ ಕೂರ್ಮಂ ಕುಗ್ಗೆ ಕೆಂಗಿಡಿ ಕೆದರೆ.....ಖರ್ಪರದ್ವ್ರಾಪದರ್ ಕಲಿಗಳ್" ಎಂದು ಕವಿ ವೀರರಸೋಚಿತವಾದ ವರ್ಣನೆಯನ್ನು ಮಾಡಿದಾಗ್ಯೂ ಇದನ್ನು ಲಕ್ಷಿಸದೆ ತಂದೆ ಮಗನ ಸಾದೃಶ್ಯದಿಂದಾಗಿ ಈ ಹೇಳಿಕೆ ಬಂದಂತಾಗಿದೆ. ಅವರ ಅಭಿಪ್ರಾಯದಂತೆ ಶಿವನಿಗೆ ಅರ್ಜುನ 'ತನ್ನ ಭಕ್ತನೆಂದು ಗೊತ್ತಿದೆ'. ಆದರೆ ಅರ್ಜುನನಿಗೆ ಇವನು ಶಿವನೇ ಎಂಬ ಕಲ್ಪನೆ ಮಾತ್ರ ಇಲ್ಲ. ಅದ್ದರಿಂದ ಇಲ್ಲಿ ವೀರರಸಕ್ಕೆ ಅವಕಾಶ ದೊರಕಿಲ್ಲವೇ ?

ಒಟ್ಟಿನಲ್ಲಿ ಶಬರಶಂಕರವಿಳಾಸ ಉತ್ತಮ ಸನ್ನಿವೇಶ, ಉತ್ತಮ ವರ್ಣನೆ, ಅಲಂಕಾರ, ಪಾತ್ರಚಿತ್ರಣ, ರಸನಿರೂಪಣೆಗಳಿಂದ ಕೂಡಿದ ಉತ್ತಮ ಗುಣದ ಉತ್ತಮ ಕಾವ್ಯ. ಕೃತಿ ಗಾತ್ರದಲ್ಲಿ ಕಿರಿದಾದರೂ ಸತ್ತ್ವ ಮಾತ್ರ ಹಿರಿದಾದುದಾಗಿದೆ.

ಪ್ರಭಾವ ಮುದ್ರೆ

ಷಡಕ್ಷರದೇವ ಚಿಕದೇವರಾಯನ ಕಾಲದ ಕನ್ನಡ ಸಾಹಿತ್ಯದ ದಿಗ್ಗಜ ಕವಿ. 17 ನೆಯ ಶತಮಾನದ ಯುಗ ನಿರ್ಮಾಪಕ. ಸಾಂಗತ್ಯ, ಷಟ್ಪದಿ, ಗಳಂತಹ ಸುಲಭ ಗ್ರಾಹ್ಯವಾದ ಸಾಹಿತ್ಯ ಹೆಚ್ಚಿದ್ದ ಕಾಲದಲ್ಲಿ ಮರೆಯಾಗಿಹೋಗಿದ್ದ ಚಂಪೂಶೈಲಿಯನ್ನು ಮತ್ತೆ ಉಳಿಸಿ, ಬೆಳಸಿದ ಶ್ರೇಯಸ್ಸು ಇವನದು. ಕನ್ನಡ ಚಂಪೂ ಇತಿಹಾಸದಲ್ಲಿ ಸತ್ತ್ವ ಮತ್ತು ಸಾರ್ಥಕತೆಯ ದೃಷ್ಟಿಯಿಂದ ಪಂಪ ಮೊದಲಿಗನಾದರೆ ಷಡಕ್ಷರದೇವ ಕಟ್ಟಕಡೆಯವನು. ಷಡಕ್ಷರದೇವ ವರ್ಣಕಾವ್ಯಗಳನ್ನು ವಸ್ತುಕ ರೀತಿಗೆ ಮಾರ್ಪಡಿಸಿಕೊಳ್ಳುವಲ್ಲಿ ತೋರಿದ ಪ್ರತಿಭೆ ಅನುಕರಣೀಯವಾದುದಲ್ಲ. ಅನನ್ಯಸಾಧಾರಣವಾದುದು. ಸ್ವತಂತ್ರ ಪ್ರಜ್ಞೆ, ಸೌಂದರ್ಯ ಭಾವಗಳಿಂದ ಪ್ರೇರೇಪಿತವಾದುದು. ಇದರಿಂದ ಇವನ ಕಾವ್ಯಗಳು ವಸ್ತುಕ-ವರ್ಣಕ ಶೈಲಿಯ ಮಾರ್ಗ ಸೇತುವೆಯಂತಿವೆ. ಪಾಂಡಿತ್ಯ, ಪ್ರತಿಭೆ ವ್ಯಾಕರಣಶುದ್ಧಿ, ಭಾಷಾಪ್ರಭುತ್ವ, ವರ್ಣನಾಕೌಶಲ್ಯ ಛಂದೋವೈವಿಧ್ಯತೆಗಳ ದೃಷ್ಟಿಯಿಂದ ಇವನಷ್ಟು ಪರಿಶುದ್ಧ ಕನ್ನಡ ಕಾವ್ಯಮಾರ್ಗವನ್ನು ರೂಪಿಸಿದವರೇ ಇಲ್ಲವೆನ್ನಬಹುದು. ಈ ಕವಿ ಕಂದ ರಚನೆಯಲ್ಲಿ ಅಪೂರ್ವ ಸಿದ್ಧಿ ಪಡೆದು 'ಕಂದ ಬರೆದವನೇ ಕವಿ' ಎಂಬ ಮಾತಿಗೆ ನಿದರ್ಶನವಾಗಿದ್ದಾನೆ. ಕಾವ್ಯಗಳಲ್ಲಿ ಭಿನ್ನಭಿನ್ನ ಛಂದೋಪದ್ಧತಿಯನ್ನು ಅನುಸರಿಸಿದವರಲ್ಲಿ ಇವನ ಹೆಸರು ಅಗ್ರಗಣ್ಯವಾಗಿದೆ. ಕಾವ್ಯದ ರಸೋತ್ಕರ್ಷತೆಯ ದೃಷ್ಟಿಯಿಂದ 'ತಿರುಕೊಳವಿನಾಚಿ ಪ್ರಳಾಪ' ಕನ್ನಡ ಕರುಣ ರಸ ಪ್ರಸಂಗಗಳಲ್ಲಿ ಶ್ರೇಷ್ಠವಾದ ಭಾಗವಾಗಿದೆ. ಅದೇ ರೀತಿ ಶೃಂಗಾರ ರಸ ಸಿದ್ಧಿಯಲ್ಲೂ ಇವನು ನಿಪುಣ ಕವಿಯೆನ್ನಿಸಿದ್ದಾನೆ ಒಟ್ಟಿನಲ್ಲಿ ಷಡಕ್ಷರ ಕವಿ ಯುಗಧರ್ಮ, ಕಾವ್ಯಮಾರ್ಗ, ಕಾವ್ಯದೃಷ್ಟಿ ಧರ್ಮೋದ್ದೇಶ, ಪಾಂಡಿತ್ಯ, ರಸ, ತತ್ವನಿಷ್ಟ ಎಲ್ಲ ದೃಷ್ಟಿಯಿಂದಲೂ ಮಹೋದ್ದಾಮ ಕವಿ, ಇಂತಹ ಕವಿಯನ್ನು 'ಮಹಾ ಕವಿಯ ತೇಜೋಂಶವುಳ್ಳವನು' ಎಂದು ಪರಿಗಣಿಸುವದು ಅವನ ವ್ಯಕ್ತಿತ್ವ ಕೃತಿತ್ವಗಳೆರಡಕ್ಕೂ ಸಮುಚಿತವೆನ್ನಿಸಲಾರದು.

ವೈಷ್ಣವ ಕವಿಗಳ ಸಮಕಾಲೀನನಾಗಿ ಬಾಳಿ, ಜೈನ ಕವಿಗಳ ಚಂಪೂ ರೀತಿಯನ್ನು ಶರಣ ಕವಿಗಳ ಕಾವ್ಯೋದ್ದೇಶವನ್ನೂ ಕೊನೆ ಕೊನೆಯದಾಗಿ ಸಮನ್ವಯಿಸಿಕೊಂಡು, ಪುರಾರಿಯ ಕೃಪೆಯಿಂದ ಮೂರು ಮಹಾಕೃತಿಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿ ಸಾರ್ಥಕನಾದ ಕವಿ ಷಡಕ್ಷರಿ. ಇವನನ್ನು ಹಳಬರಲ್ಲಿ ಹೊಸಬ ಹೊಸಬರಲ್ಲಿ ಹಳಬ ಎಂದು ಕರೆದರೂ ಕವಿಗೆ ನಿತ್ಯನೂತನವಾದ ಸ್ಥಾನ ಇದ್ದೇ ಇದೆ. ಇವರ ಕೃತಿಗಳು ಪ್ರಾಚೀನ ಕನ್ನಡ ಕಾವ್ಯಮಾರ್ಗದ ಕೊನೆಯ ಮೈಲುಗಲ್ಲುಗಳು. ಈ ದೃಷ್ಟಿಯಿಂದ ಷಡಕ್ಷರದೇವ ಸಾಹಿತ್ಯ ಚರಿತ್ರೆಯಲ್ಲಿ ಸೀಮಾ ಪುರುಷ. ಸಾಹಿತ್ಯ ನಿರ್ಮಿತಿಯಲ್ಲಿ ನಿಸ್ಸೀಮ ಪುರುಷ.

"ಷಡಕ್ಷರದೇವ" — ಅಡಿ ಟಿಪ್ಪಣಿ

1 ಕವಿಕರ್ಣ ರಸಾಯನ ಸರ್ಗ 1 ಪದ್ಯ. 54.

2 ರಾ. ಕ. ಅಧಿಕಾರ 12. ಪು 445.

3 ಅದೇ. ಪು. 446.

4 ಕಾವ್ಯದ 4 ಸರ್ಗಗಳು ಮಾತ್ರ ದೊರಕಿವೆ. ಇಲ್ಲಿನ ಪದ್ಯಗಳು ಸಂಸ್ಕೃತ'ಸುಭಾಷಿತ ರತ್ನ ಭಂಡಾಗಾರ'ದಲ್ಲಿ ಸಂಕಲನಗೊಂಡಿರುವದು ಷಡಕ್ಷರ ಕಾವ್ಯ ಪ್ರಸಿದ್ಧಿಯ ದ್ಯೋತಕ.

5 ರಾಜಶೇಖರವಿಳಾಸಂ ಆಶ್ವಾಸ 1. ಪದ್ಯ 21. ಸಂ. ಡಾ|| ಆರ್. ಸಿ. ಹಿರೇಮಠ ಮತ್ತು ಡಾ|| ಎಂ. ಎಸ್. ಸುಂಕಾಪೂರ

6 ಶರಣ ಸಾಹಿತ್ಯ 8—8. ಚಂದ್ರಶೇಖರಶಾಸ್ತ್ರಿ, ಹೊಳಲು

7 ತಮಿಳು ಮಹಾ ಕಾವ್ಯ 'ಶಿಲಪ್ಪದಿಗಾರಂ', ಪೆರಿಯಪುರಾಣಂ ಕನ್ನಡದ ಭಾವ ಚಿಂತಾರತ್ನಗಳಲ್ಲಿ ಈ ಕಥಾ ಮೂಲವಿದೆ.

8 ರಾ. ಶೇ. ವಿ. ಆ. 1 ಪ. 28.

9 ರಾ. ವಿ. 3—46. ಇದೇ ಪದ್ಯದ ಛಾಯೆ ಮುದ್ದಣನ ರಾಮಾಶ್ವಮೇದದ ಪದ್ಯ 4–18 ರಲ್ಲಿದೆ.

10 ಷಡಕ್ಷರ ದೇವನು ಉತ್ಪ್ರೇಕ್ಷಾ ಸಾಮ್ರಾಜ್ಯದ ಚಕ್ರವರ್ತಿ. ಆದರೆ ಅವನ ಉತ್ಪ್ರೇಕ್ಷೆಗಳನ್ನು ಕೇವಲ ಅಸಂಭಾವ್ಯತೆ, ಕಲ್ಪಕತೆಗಳಿಂದ ಕೂಡಿದ ಸಾಮಾನ್ಯ ಅಲಂಕಾರ ಎಂಬುದಕ್ಕಿಂತ ಅವನ್ನು ಇಂದಿನ ಕಾವ್ಯ 'ಪ್ರತಿಮೆ' (poetic image) ಗಳು ಎಂದು ಪರಿಗಣಿಸಿದರೆ ಕವಿಯ ನೈಜ ಪ್ರತಿಭೆಯನ್ನು ಮಾನವೀಯ ಭಾವಗಳ ರೂಪಣ ಕಲೆಯನ್ನು ಅರಿತಂತಾಗುತ್ತದೆ.

11 ಇದನ್ನು ಉದ್ದೀಪನ ಪ್ರಕೃತಿ-ಸಂಕೇತಪರವಾದ ವರ್ಣನೆ ಎನ್ನಬಹುದು. ಆಲಂಬನ ಪ್ರಕೃತಿ ವರ್ಣನೆ ಶುದ್ಧ ನೈಸರ್ಗಿಕವಾಗಿದ್ದರೆ ಉದ್ದೀಪನ ಪ್ರಕೃತಿಯಲ್ಲಿ ಮಾನವೀಯ ಭಾವಗಳ ಸಾದೃಶ್ಯ ಸಂಬಂಧ ಏರ್ಪಟ್ಟಿರುತ್ತದೆ.

12 ಕನ್ನಡ ಸಾಹಿತ್ಯ ಚರಿತ್ರೆ ಪು. 350. ಡಾ|| ರಂ. ಶ್ರೀ ಮುಗಳಿ

13 ರಾ. ಶೇ. ವಿ. ಪು iv. ಸಂ. ಡಾ|| ಆರ್. ಸಿ. ಹಿರೇಮಠ ಮತ್ತು ಡಾ|| ಎಂ. ಎಸ್. ಸುಂಕಾಪೂರ

14 ರಾ. ಶೇ. ವಿ. ಉಪೋದ್ಘಾತ ಪು. 1—2. ಶ್ರೀ ಪಿ. ಆರ್. ಕರಿಬಸವಶಾಸ್ತ್ರಿಗಳು.

15 ಭೀಮಕವಿಯ ಬಸವ ಪುರಾಣವು ವರ್ಣಕದಲ್ಲಿದೆ. ಇದನ್ನೇ ಕವಿ ಷಡಕ್ಷರದೇವ ವಸ್ತುಕಕ್ಕೆ ತಿರುಗಿಸಿ ಶಿವಶರಣರ ಸಾಮಾನ್ಯ ಕಥೆಗಳಿಗೆ ಪಂಡಿತರ ಮನ್ನಣೆ ದೊರಕುವಂತೆ ಮಾಡಿದ್ದಾನೆ.

16 ವೃ. ವಿ. 5–45 ಸಂ. ಪಿ. ಆರ್. ಕರಿಬಸವಶಾಸ್ತ್ರಿ

17 ಅಭಿವಂದನೆ ಪು. 284. ಎಚ್. ದೇವೀರಪ್ಪ.

18 ಷಡಕ್ಷರದೇವ. ಎಸ್. ಎಮ್. ವೃಷಭೇಂದ್ರಸ್ವಾಮಿ ಕ.ವಿ. ವಿ. ಉಪನ್ಯಾಸ.

19 ಶ. ಶಂ. ವಿ. ಪೀಠಿಕೆ. ಪು. 15. ಎಸ್.ಎಸ್. ಬಸವನಾಳ.

20 ಈ ಕಥಾ ಮೂಲ. ಮಹಾಭಾರತದ ಅರಣ್ಯ ಪರ್ವ ಅಧ್ಯಾಯ 13-14 ರಲ್ಲಿದೆ.

21 ಶ. ಶಂ. ಪಿ. 2—101.

22 ಅದೇ. 2—105.

23 ಕ. ಸಾ. ಚ. ಪು. 367. ಡಾ|| ರಂ. ಶ್ರೀ. ಮುಗಳಿ.

24 ಗದಾಯುದ್ಧ, ಯಶೋಧರ ಚರಿತೆ ಕಬ್ಬಿಗರ ಕಾವ್ಯ. ಇವು ಕನ್ನಡದ ಖಂಡಕಾವ್ಯಗಳಾಗಿವೆ. ಶಬರಶಂಕರ ವಿಳಾಸವೂ ಇದೇ ಶ್ರೇಣಿಗೆ ಸೇರಿದೆ.

25 ಜನಪ್ರಿಯ.ಕ. ಸಾ. ಚ. ಪು. 641. ತ.ಸು. ಶಾಮರಾಯ ಮೇ. ರಾಜೇಶ್ವರಯ್ಯ.

26 ಅದೇ ಪು. 641

27 ಅದೇ ಪು. 641

—oo—

ರಾಜಶೇಖರ ವಿಳಾಸದ ನಾಲ್ವರು ವ್ಯಾಖ್ಯಾನಕಾರರು

ಲೇಖಕರು :
ಡಾ|| ರಾ. ಯ. ಧಾರವಾಡಕರ, ಎಂ.ಎ.,ಪಿಎಚ್.ಡಿ.,
ಬೆಂಗಳೂರು

ಚಿಕ್ಕದೇವರಾಯನ ಕಾಲದಲ್ಲಿ ಚಂಪೂಸಾಹಿತ್ಯ ಪರಂಪರೆಯ ಕೀರ್ತಿಪತಾಕೆಯನ್ನು ಎತ್ತಿಹಿಡಿದವರಲ್ಲಿ ಅಗ್ರಗಣ್ಯನೆಂದರೆ ಷಡಕ್ಷರ ಮಹಾಕವಿ. ಚಂಪೂರಚನೆಗೆ ಅಗತ್ಯವಾದ ಪಾಂಡಿತ್ಯ, ಪ್ರೌಢಿಮೆ, ಕಲ್ಪಕತೆ ಮತ್ತು ಹರವಾದ ದೃಷ್ಟಿ ಅವನಿಗಿದ್ದಿತು. ಈ ಪಾಂಡಿತ್ಯದ ಮೂಲಕವೇ ಅವನು ಸಂಸ್ಕೃತದಲ್ಲಿ 'ಕವಿಕರ್ಣರಸಾಯನ'ವನ್ನು ಬರೆದುದಲ್ಲದೆ, ಕನ್ನಡದಲ್ಲಿ ರಾಜಶೇಖರ ವಿಳಾಸ, ಶಬರಶಂಕರವಿಳಾಸ ಮತ್ತು ವೃಷಭೇಂದ್ರ ವಿಜಯ ಎಂಬ ರತ್ನತ್ರಯಗಳನ್ನು ರಚಿಸಿದನು.

ಪಾಂಡಿತ್ಯಪ್ರಗಲ್ಭವಾದ ಈ ಕೃತಿಗಳ ಅಭ್ಯಾಸ ಒಂದು ಕಾಲಕ್ಕೆ ಕನ್ನಡ ವೈದುಷ್ಯದ ಸಂಕೇತವಾಗಿದ್ದಿತು. ಕುಮಾರವ್ಯಾಸಭಾರತ, ತೊರವೆ ರಾಮಾಯಣ, ಜೈಮಿನಿಭಾರತ ಮತ್ತು ಷಡಕ್ಷರಿಯ ಕೃತಿಗಳು ಪ್ರತಿಯೊಂದು ಹಳ್ಳಿಯಲ್ಲಿ ಕೇಳ ಸಿಗುತ್ತಿದ್ದವು. ಅದರಲ್ಲಿಯೂ ಷಡಕ್ಷರ ಕವಿಯ ಕೃತಿಗಳಿಗೆ ಅನ್ವಯ ಹಚ್ಚಬಲ್ಲವನಿಗೆ ಮದುವೆಯ ಮಾರುಕಟ್ಟೆಯಲ್ಲಿಯೂ ಹೆಚ್ಚಿನ ಬೆಲೆ ಇತ್ತಂತೆ.

ಆದ್ದರಿಂದ ಇಂಥ ಪ್ರಗಲ್ಭ ಕೃತಿಗಳ ವಾಖ್ಯಾನ ಬರೆಯುವುದು ಅನೇಕ ಪಂಡಿತರಿಗೆ ಅವಶ್ಯಕವಾಗಿ ಕಂಡಿರಬೇಕು. ಅಂತಲೇ ಕಳೆದ ಶತಮಾನದಲ್ಲಿ ಧಾರವಾಡ ಜಿಲ್ಲೆಯಲ್ಲಿಯೇ ನಾಲ್ವರು ಪಂಡಿತರು 'ರಾಜಶೇಖರ ವಿಳಾಸದ' ಟೀಕೆಯನ್ನು ಬರೆದರು. ಬಾಣಕಾದಂಬರಿಯ ಸುಪ್ರಸಿದ್ಧ ಅನುವಾದಕರಾದ ಗಂಗಾಧರ ಮಡಿವಾಳೇಶ್ವರ ತುರಮರಿಯವರು (ಸು. 1827-1877) ಸನ್ 1871 ರಲ್ಲಿ ರಾಜಶೇಖರದ ಮೊದಲನೆಯ ಆಶ್ವಾಸದ ಟೀಕೆಯನ್ನು ಬರೆದಿದ್ದರೆ, ಶಾಂತವೀರ ರಾಚಿದೇವ ಕಿತ್ತೂರ ಅವರು (1827–1885) ಸನ್ 1872 ರಲ್ಲಿ ಎರಡನೆಯ ಆಶ್ವಾಸದ ಟೀಕೆಯನ್ನು ಬರೆದರು, ತದನಂತರ ಸನ್ 1873 ರಲ್ಲಿ ಅನ್ನದಾನೀಶ್ವರ ಅರಳಿಲೆಮಠ ಎಂಬವರು ಮೂರನೆಯ ಆಶ್ವಾಸದ ಟೀಕೆಯನ್ನು ಬರೆದರೆ, ಇದೇಕಾಲಕ್ಕೇ ತುರಮರಿಯವರು ಪುನಃ ನಾಲ್ಕನೆಯ ಆಶ್ವಾಸದ ಟೀಕೆಯನ್ನು ಬರೆದರು. ಇದಾದ ನಂತರ ಸುಪ್ರಸಿದ್ಧ ಪಂಡಿತರಾಗಿದ್ದ ಘೋಂಡೊ ನರಸಿಂಹ ಮುಳಬಾಗಲ ಅವರು ಸನ್ 1892 ರಲ್ಲಿ ರಾಜಶೇಖರದ ಏಳನೆಯ ಆಶ್ವಾಸದ ಟೀಕೆಯನ್ನು ಬರೆದರು. ಹೀಗಾಗಿ, ಈಗಿನ ಧಾರವಾಡ ಜಿಲ್ಲೆಯಲ್ಲಿಯೇ ಆಗಿಹೋದ ನಾಲ್ವರು ಸುಪ್ರಸಿದ್ಧ ಪಂಡಿತರು, ಗಂಗಾಧರಮಡಿವಾಳೇಶ್ವರ ತುರಮರಿ, ಶಾಂತವೀರ ರಾಚಿದೇವ ಕಿತ್ತೂರ, ಅನ್ನದಾನೀಶ್ವರ ಅರಳಿಲೆಮಠ ಮತ್ತು ಘೋಂಡೊ ನರಸಿಂಹ ಮುಳಬಾಗಲ ಅನುಕ್ರಮವಾಗಿ ಒಂದು, ಎರಡು ಮತ್ತು ನಾಲ್ಕು, ಮೂರು ಮತ್ತು ಏಳನೆಯ ಆಶ್ವಾಸಗಳಿಗೆ ಟೀಕೆಗಳನ್ನು ಬರೆದರು. ಇತ್ತೀಚೆಗೆ ಸನ್ 1907 ರಲ್ಲಿ ಬೆಂಗಳೂರು ಗುರುವಣ್ಣದೇವರ ಮಠದ ನಂಜುಂಡ ಸ್ವಾಮಿಗಳು 13 ಮತ್ತು 14 ನೆಯ ಆಶ್ವಾಸನೆಗಳಿಗೆ ಟೀಕೆ ಬರೆದಿದ್ದಾರಲ್ಲದೆ, ತಮ್ಮ ಗ್ರಂಥದ ಮುನ್ನುಡಿಯಲ್ಲಿ "11-12 ಈ ಎರಡೂ ಆಶ್ವಾಸಗಳಿಗೆ ಟೀಕೆ ಬರೆದು ಮುದ್ರಣಮಾಡಿಸುವ ಸಂಭ್ರಮಣಾಸಕ್ತರಾಗಿದ್ದೇವೆ" ಎಂದು ಹೇಳಿರುವುದರಿಂದ, 11–12 ನೇ ಆಶ್ವಾಸನೆಗಳಿಗೂ ವ್ಯಾಖ್ಯಾನಗಳು ರಚಿತವಾದಂತೆ ಕಂಡುಬರುತ್ತದೆ. ಪ್ರಸ್ತುತ ಲೇಖದಲ್ಲಿ ನಾವು ಉತ್ತರ ಕರ್ನಾಟಕದ ನಾಲ್ವರೂ ವ್ಯಾಖ್ಯಾನಕಾರರ ಬಗೆಗೂ ಅವರು ಬರೆದ ಟೀಕುಗಳ ಬಗೆಗೂ ಪರಿಚಯ ಮಾಡಿಕೊಡಲಾಗಿದೆ.

ಗಂಗಾಧರ ಮಡಿವಾಳೇಶ್ವರ ತುರಮರಿ (ಸು. 1827-1877)

ಶ್ರೀಯುತರು ಬಾಣಕಾದಂಬರಿಯನ್ನು ಅಪ್ರತಿಮವಾಗಿ ಕನ್ನಡದಲ್ಲಿ ಭಾಷಾಂತರಿಸಿದ್ದರ ಮೂಲಕ ಕಾದಂಬರಿ ತುರಮರಿಯವರೆಂದೇ ಪ್ರಸಿದ್ಧರಾಗಿದ್ದಾರೆ. ಇವರ ಮೂಲ ಊರು ಬೆಳಗಾವ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ತುರಮರಿ ಎಂಬುದು. ಇವರು ಮೂಲತಃ ವೀರಶೈವ ಮತದ ಪಂಚಮಸಾಲಿ ಒಳಪಂಗಡಕ್ಕೆ ಸೇರಿದವರು. ಇವರು ಎಷ್ಟೋ ಕಾಲ ಧಾರವಾಡದ ಶಿಕ್ಷಕ ವಿದ್ಯಾಲಯದ ವೈಸ್-ಪ್ರಿನ್ಸಿಪಾಲರಾಗಿ ಕೆಲಸ ಮಾಡಿದರು. ಶ್ರೀಯುತರ ಬರವಣಿಗೆ ವೈಪುಲ್ಯವನ್ನು ನೋಡಿದರೆ, ಅವರು ಸುಮಾರು ವರುಷಕ್ಕೊಂದರಂತೆ ಅಂದಿನ ಕಠಿಣಕಾಲದಲ್ಲಿಯೂ ಪ್ರಸಿದ್ಧಿಸಿದಂತೆ ಕಂಡುಬರುತ್ತದೆ. ಅವರು ಬರೆದ ಶಬ್ದಮಣಿದರ್ಪಣದ ವ್ಯಾಖ್ಯಾನ ಸನ್ 1866 ರಿಂದ ಮಠಪತ್ರಿಕೆಯಲ್ಲಿ ಧಾರವಾಹಿಯಾಗಿ ಪ್ರಕಟವಾಯಿತು. ಅವರ 'ಹಳಗನ್ನಡ ಕವಿತಾಸಂಗ್ರಹ' 1867 ರಲ್ಲೂ, 'ಶಬ್ದಮಂಜರಿ' ಎಂಬ ನಿಘಂಟು 1869 ರಲ್ಲೂ,ರಾಜಶೇಖರವಿಲಾಸದ ಟೀಕೆ 1871 ರಲ್ಲೂ, ನಿಜಗುಣಶಿವಯೋಗಿಗಳ 'ಕೈವಲ್ಯಪದ್ಧತಿ'ಯ ಟೀಕೆ 1873 ರಲ್ಲೂ, ರಾಜಶೇಖರದ ನಾಲ್ಕನೆಯ ಆಶ್ವಾಸದ ಟೀಕೆ 1874 ರಲ್ಲೂ, ಪತ್ರಗಳ ಪರಿಷ್ಕರಣ 1875 ರಲ್ಲೂ, ಕಾದಂಬರೀ ಅನುವಾದ 1876-77 ರಲ್ಲೂ ಪ್ರಕಟವಾದುವು. ಶ್ರೀಯುತರು 5-10-1877 ರಂದು ಕೈಲಾಸವಾಸಿಗಳಾದರು. ಹೀಗೆ, ಆಮರಣ ಪರ್ಯಂತ ಲೇಖಕರು ಕನ್ನಡಕ್ಕಾಗಿ ದುಡಿದರು. ಶ್ರೀಯುತರು ಬರೆದ ಟೀಕೆಗೆ ಅಂದಿನ ಡೈರೆಕ್ಟರಾಗಿದ್ದ ಮಿ. ಪೀಲ್ ಎಂಬವರಿಂದ 200 ರೂಪಾಯಿ

ನಗದು ಬಹುಮಾನವಲ್ಲದೆ, 430 ರೂಪಾಯಿ ಮುದ್ರಣವೆಚ್ಚಕ್ಕಾಗಿ ಸಹಾಯಧನ ದೊರಕಿತು. ಅಲ್ಲದೆ, ಸರಕಾರವು ಈ ಪುಸ್ತಕದ 800 ಪ್ರತಿಗಳನ್ನು ಕೊಂಡುಕೊಂಡಿತು. 9 ನೆಯ ಆಶ್ವಾಸದ ಟೀಕೆಯಲ್ಲಿ ಬರುವ 'ಗಂಗಾಧರ ಶಾಂತವೀರ ಶರಣರ್ ಪೇಳ್ದ ಭಾಸದ್ವಿತೀಯ ನವಾಶ್ವಾಸ' ಎಂದು ಬರುತ್ತದೆ.

ಶಾಂತವೀರ ರಾಚಿದೇವ ಕಿತ್ತೂರ (1827-1885)

ಶ್ರೀಯುತರು ಚೆನ್ನಮ್ಮನ ಕಿತ್ತೂರಿನವರು. ಇವರ ತಂದೆಯ ಹೆಸರು ಚಿಕ್ಕರಾಚಯ್ಯ. ತಾಯಿ ಶಿವಗಂಗಾದೇವಿ. ಇವರ ಉದರದಲ್ಲಿ ಶಾಂತವೀರರು 27-9-1827 ರಂದು ಜನಿಸಿದರು. ಶ್ರೀಯುತರ ತಂದೆ, ಸಂಸ್ಕೃತ ಮತ್ತು ಕನ್ನಡದಲ್ಲಿ ವಿದ್ವಾಂಸರಾಗಿದ್ದರೆ, ತಾಯಿ ಬಸವಪುರಾಣ, ರಾಜಶೇಖರವಿಳಾಸಗಳನ್ನು ಸರಾಗವಾಗಿ ಮುಖೋದ್ಗತವಾಗಿ ಹೇಳುತ್ತಿದ್ದರು. ಕಿತ್ತೂರಿನ ದೊರೆ ಮಲ್ಲಸರ್ಜನ ಮಗ ಶಿವಲಿಂಗ ಸರ್ಜನೂ, ಗರಗದ ಮಡಿವಾಳಸ್ವಾಮಿಗಳೂ ಶಾಂತವೀರರ ಸಹಪಾಠಿಗಳಾಗಿದ್ದರಂತೆ. ಶ್ರೀಯುತರು ಧಾರವಾಡದ ಶಿಕ್ಷಣ ವಿದ್ಯಾಲಯದಲ್ಲಿ ಬೋಧಕರಾಗಿ ಕೆಲಸಮಾಡಿದರು. ಶ್ರೀಯುತರಿಗೆ ಫ್ಲೀಟ್ ಮತ್ತು ಕಿಟೆಲ್‌ರ ಕೂಡ ಪ್ರತ್ಯಕ್ಷ ಸಂಪರ್ಕವಿದ್ದಿತು. ಶ್ರೀಯುತರು ಬರೆದ 'ಸಟೀಕ ರಾಜಶೇಖರವು' ಸನ್ 1872 ರಲ್ಲಿ ಪ್ರಕಟವಾಯಿತು. ಪುಟಸಂಖ್ಯೆ 153+8 ಇದು ಬೆಳಗಾವಿಯ ಬೆಳಗಾವ ಸಮಾಚಾರ ಮುದ್ರಣಾಲಯದಲ್ಲಿ ಮುದ್ರಿತವಾಯಿತು. ಬೆಲೆ 1 ರೂ. 8 ಆಣೆ. ಗ್ರಂಥದ ಸೂಚನೆಯಲ್ಲಿ ಶ್ರೀಯುತರು ಹೀಗೆ ಹೇಳಿದ್ದಾರೆ :

" ಮಲ್ಲಾಡ ಕಿತ್ತೂರೆಂಬ ಗ್ರಾಮದಲ್ಲಿಯಿರುವ ಹುಚ್ಚರಾಚಯ್ಯನವರ ಮಠದ ರಾಚಿದೇವ ಶಿವಗಂಗಾದೇವಿಯವರ ಪುಣ್ಯಗರ್ಭೋದಯನಾದ ಶಾಂತವೀರದೇವನು ಗುರುಕಾರುಣ್ಯಾನುಸಾರವಾದ ಯಥಾಮತಿಯಿಂದ ಈ ರಾಜಶೇಖರವಿಳಾಸದೆರಡನೆಯ ಸಂಧಿಯನ್ನು ವಿವರಿಸಿ, ಶ್ಲೋಕದಲ್ಲಿ ಚರಣ, ಪ್ರಾಸ, ವೃತ್ತನಾಮಗಳಿಂದಲೂ, ಅನ್ವಯದಲ್ಲಿ ಶ್ಲೇಷಾರ್ಥ, ತದ್ಭವ, ಶಬ್ದಾರ್ಥ, ಸಮಾಸಗಳಿಂದಲೂ, ಶಾಸ್ತ್ರವಿಷಯದಲ್ಲಿ ಕೌಮುದಿ, ಸಾರಸ್ವತ, ಶಬ್ದಮಣಿದರ್ಪಣ, ಮೊದಲಾದ ಸಂಸ್ಕೃತ ಕರ್ಣಾಟ ವ್ಯಾಕರಣ ಸೂತ್ರಾರ್ಥಗಳಿಂದಲೂ, ಶಾಂತವೀರ ಛಂದಸ್ಸು, ನಾಗವರ್ಮ ಛಂದಸ್ಸುಗಳ ನೇಮಗಳಿಂದಲೂ, ಕುವಲಯಾನಂದ ಚಂದ್ರಿಕಾ ಮೊದಲಾದಲಂಕಾರಗಳ ವ್ಯಾಖ್ಯಾನಗಳಿಂದಲೂ, ನವರಸಗಳಿಂದಲೂ ಧ್ವನಿಗಳಿಂದಲೂ, ನೋಟದಲ್ಲಿ ಪುರಾಣಾನಂತರ ಕಥೆಗಳಿಂದಲೂ, ಕೋಶದಲ್ಲಿ ಸಂಸ್ಕೃತ ಕರ್ಣಾಟ ಶಬ್ದಗಳ ಉತ್ಪತ್ಯಗಳಿಂದಲೂ ಸಯುಕ್ತಮಾಗಿ ಸುಲಭ ಭಾಷೆಯೊಳಗೆ ಟೀಕಿಸಿದನು" ಎಂದು ಹೇಳಲಾಗಿದೆ. ಇದರಿಂದ ಶಾಂತವೀರರ ಆಳವಾದ ಪಾಂಡಿತ್ಯ, ಪ್ರತಿಭೆ ಮತ್ತು ಪರಿಶ್ರಮಗಳ ಪರಿಚಯವಾಗದಿರದು. ಉದಾಹರಣೆಗೆ,

ತೊಳಗುವ ಚಂದ್ರಕಾಂತಕಳಶಂಬಿಡಿದಂಬುಜನೇತ್ರೆ ನೀರನಂ
ಜುಳಿಪುಟದಲ್ಲಿ ನಿಂದೆರೆಯೆ ತನ್ಮಧುರಾಧರರಾಗ ಮಿಶ್ರಿತೋ
ಜ್ವಳಮರುಣಾಂಬುವೆಂದುಸಿಕನಿರ್ಪುದನೀಕ್ಷಿಸೆನಕ್ಕೊಡಾಕೆಯು
ಜ್ವಳದಶನಾಂಶುಮಿಶ್ರಮದು ಶಂಕೆಯನೋಡಿಸೆ ಪಾಂಥನೀಂಟಿದಂ ||

—ಎಂಬುದರ ಭಾವಾರ್ಥವನ್ನು ಹೀಗೆ ಕೊಡಲಾಗಿದೆ :

"ಅರವಟ್ಟಿಗೆಯ ಸ್ತ್ರೀಯಳು ಚಂದ್ರಶಿಲೆಯ ಮೊಗೆಯಿಂದ ಹಾದಿಕಾರಗೆ ನೀರಪಣಿಸುವಾಗ ಕೆಳದುಟಿಯ ಕೆಂಪುಕಾಂತಿಯು ನೀರೊಳಗೆ ಪ್ರತಿಫಲಿಸಿದುದರಿಂದ ಭ್ರಾಂತಿಯಾಗಿ ರಕ್ತವೆಂದು ತಿಳಿಕೊಂಡು ಕುಡಿಯದೆ ಸುಮ್ಮನೆಯಿರುವವನನ್ನು ಕಂಡು ನಕ್ಕ ಕೂಡಲೆ ಈಕೆಯ ನಿರ್ಮಲವಾದ ಹಲ್ಲಿನ ಕಾಂತಿಯು ಆ ನೀರೊಳಗೆ ಪ್ರತಿಫಲಿಸಿ ಸಂಶಯವನ್ನು ಬಿಡಿಸಲಾಗಿ ಹಾದಿಕಾರನು ನೀರಕುಡಿದನು"*

ಕಾಮನು ತನ್ನನ್ನು ಬಾಣವನ್ನಾಗಿ ಉಪಯೋಗಿಸಿಕೊಳ್ಳಬೇಕೆಂದು ಕೇತಕಿಯು ಕೇಳುವ ಸಂಭರ್ಭದ ಕಥೆಯನ್ನು ಶಾಂತವೀರರು ಹೀಗೆ ವಿವರಿಸಿದ್ದಾರೆ :

"ಪೂರ್ವದಲ್ಲಿ ಬ್ರಹ್ಮನಾರಾಯಣರು ತಮ್ಮೊಳಗೆ ಅಹಂ ಬ್ರಹ್ಮ ಎಂಬ ನಿಮಿತ್ತವಾಗಿ ಜಗಳಾಡುವ ಸಮಯದಲ್ಲಿ, ಎಲೈ ಬ್ರಹ್ಮನಾರಾಯಣರೆ ನಿಮ್ಮ ಗರ್ವವನ್ನು ಪರಿಹರಿಸುವುದಕ್ಕೆ ಮಹಾದೇವನು ವುರುಲಿಂಗರೂಪದಿಂದ ವುದಯವಾಗುವನೆಂದು ಆಕಾಶವಾಣಿಯು ನುಡಿದು ಬಯಲಾದ ಕೂಡಲೆ ನೇತ್ರಕ್ಕೆ ಅಗೋಚರವಾಗಿ ಉರುಲಿಂಗವು ವುದಯವಾಯಿತು. ಆಗ ಮುನಿಗಳ ಸಮಕ್ಷದಲ್ಲಿ ಈ ಲಿಂಗದ ಪಾದಮಸ್ತಕಗಳನ್ನು ಕಂಡವರು ದೊಡ್ಡವರೆಂದು ಪ್ರತಿಜ್ಞಾ ಮಾಡಿಕೊಂಡು ನಾರಾಯಣನು ವರಹಾರೂಪದಿಂದ ಪಾತಾಳಾದಿ ಲೋಕಗಳನ್ನು ತಿರಿಗಿ ಕಾಣದೆ ಬ್ರಹ್ಮನು ಸಭೆಯೊಳಗೆ ಲಿಂಗದ ಮಸ್ತಕವನ್ನು ಕಂಡೆನೆಂದು ಸುಳ್ಳುಹೇಳಿದನು. ಇದಕ್ಕೆ ಮೋಸಹೋದ ಕೇತಕೀಪುರುಷನು ಆ ಬ್ರಹ್ಮನು ಲಿಂಗದ ಮಸ್ತಕವನ್ನು ಕಂಡೆನೆಂದು ಸುಳ್ಳು ಸಾಕ್ಷಿ ಹೇಳಿದ ಕೂಡಲೆ ಕೋಪಿಸಿ ನನ್ನ ಪೂಜೆಗೆ ದೂರವಾಗಿ ಸೂಳೆಯರ ತುರುಬಿನಲ್ಲಿ ಯಿರಹೋಗೆಂದು ಮಹಾದೇವನು ಆ ಕೇತಕೀಪುರುಷಗೆ ಶಾಪವಕೊಟ್ಟನು. ಎಂಬೀ ಕಥೆಯು ವ್ಯಾಸಕೃತ ಪುರಾಣದಲ್ಲಿ ಪ್ರಸಿದ್ಧವಾಗಿರುವದು".† ಇದರಲ್ಲಿ ಶಾಂತವೀರರ ಪಾಂಡಿತ್ಯ ಬಹುಶ್ರುತತ್ವಗಳನ್ನು ಕಾಣುತ್ತೇವೆ.

ಅನ್ನದಾನೀಶ್ವರ ಅರಳೆಲೆಮಠ (ಸು. 1830)

ಇವರ ಪೂರ್ಣ ಹೆಸರು ಅನ್ನದಾನಪ್ಪಯ್ಯ ಬಸವಲಿಂಗಾರ್ಯ ಅರಳೆಲೆಮಠ. ಇವರು ಮೃಡಗಿರಿ ಅಂದರೆ ಇಂದಿನ ಧಾರವಾಡ ಜಿಲ್ಲಾ ಮುಂಡರಗಿಯಲ್ಲಿ ಇರುತ್ತಿದ್ದರು. ಇವರ ಟೀಕಾಗ್ರಂಥ ಬೆಂಗಳೂರು ಹೊಳಕಲ್ಲು ನರಸಿಂಹಯ್ಯನವರ ವಿಚಾರದರ್ಪಣ ಮುದ್ರಣಾಲಯದಲ್ಲಿ ಮುದ್ರಿತವಾಗಿದೆ. ಇವರು ತಮ್ಮನ್ನು "ತದ್ರೇಣುಕೇಶಾಚಾರ್ಯ (ಅಂದರೆ ಷಡಕ್ಷರದೇವರ) ಸೂತ್ರಧಾರಕರು" ಎಂದು ಕರೆದುಕೊಂಡಿದ್ದಾರೆ. ರಾಜಶೇಖರ ಕಾವ್ಯದ ರಚನೆಯ ಬಗ್ಗೆ ವ್ಯಾಖ್ಯಾನಕಾರರು ಹೀಗೆ ಹೇಳುತ್ತಾರೆ:

*ಸಟೀಕ ರಾಜಶೇಖರ 1872 ; ಪು. 28-29

†ಸಟೀಕರಾಜಶೇಖರ 1872 ; ಪು. 58-59

"ಪರಮಾತ್ಮನ ಎದೆಯ ಮೇಲಣ ವಿಭೂತಿಯ ರೇಣುವಿನಿಂದ ಉದ್ಭವಿಸಿದ ರೇಣುಕಾಚಾರ್ಯರ ವಂಶೀಭೂತನಾಗಿ, ಬೆಂಗಳೂರು ದಕ್ಷಿಣ ಭಾಗದಲ್ಲಿರುವ ದನಗೂರೆಂಬ ಗ್ರಾಮದ ಮಠಕ್ಕೆ ಅಧಿಕರ್ತೃವಾದ ಚಿಕ್ಕವೀರದೇಶಿಕೋತ್ತಮನ ಅನುಗ್ರಹ ಶಿಷ್ಯನಾದ ಷಡಕ್ಷರಿದೇವನೆಂಬ ಪ್ರಸಿದ್ಧನಾದ ಕವಿಸಿಂಹ್ವನು 215 ನೇ ವರ್ಷಗಳಲ್ಲಿ, ಮೈಸೂರ(ಕೃಷ್ಣ)ರಾಜನ ಘನ ಸಭೆಯೊಳಿದ್ದ ಚಾರ್ವಾಕಾದಿಗಳನ್ನು ಬದ್ಧವಾದದಿಂ ಗೆದ್ದು ಸ್ತಬ್ಧರನ್ನು ಮಾಡಲಾ ಧೊರೆಯು—ಸನ್ಮಾನ ವೆನ್ನು ಮಾಡಿ ಮೋಹದಿಂ ತನ್ನಲ್ಲಿಯೇ ಇರಿಸಿಕೊಂಡನು". "ಒಂದು ಸಲ........ಚಾರ್ವಾಕಾದಿ ಮತಸ್ಥರು ಲೀಲಾವತಿಯೆಂಬುದೊಂದು ಜಿನ್ನಕಾವ್ಯವನ್ನು ನರಪತಿಗೆ ತೋರಿಸಿ ಇಂಥ ಕಾವ್ಯವು ಎಲ್ಲಿಯೂ ಇಲ್ಲ ಎಂದು ಹೇಳಲಾಗಿ, ದೊರೆ ಷಡಕ್ಷರ ಕವಿಯ ಕಡೆಗೆ ನೋಡಿದ ನಂತೆ, ಆಗ ಅಲ್ಲಿದ್ದ ವಿದ್ವಾಂಸರು ಅಂತಸ್ಥವಾಗಿ "ಎಲೈ ಪಟ್ಟದ ಸ್ವಾಮಿಗಳೇ ನಿಂಮ ನಾಮ (ಷಡಕ್ಷರ) ಮಂತ್ರನುಹಿಮಾಪ್ರದರ್ಶತ ಮಾಡೊಂದು ಪುಸ್ತಕ ಕಾವ್ಯವನ್ನು ವಿರಚಿಸಬೇಕೆಂದು"ಪ್ರಾರ್ಥಿಸಲು "ಸಕಲ ದುರ್ಜನರ ಭಂಗಪಡಿಸುವಿಕೆಯೂ ತನ್ನ ಸುಂದರ ಪ್ರಾಗಲ್ಭ್ಯತೆಯೂ, ಆ ಪಂಡಿತರ ಸ್ತುತಿಯೂ ಮುಪ್ಪುರಿಗೊಂಡಂತೆ ಹೃತ್ಕಾಳದಲ್ಲಿ" ಶೋಭಿಸಲು ಗುಬ್ಬಿ ಮಲ್ಲಣಾರ್ಯ ಕೃತ ಭಾವ ಚಿಂತಾರತ್ನದ ಪುಸ್ತಕ ಪ್ರಬಂಧವನ್ನು "ನವರಸ, ಅಲಂಕಾರ, ಧ್ವನಿ, ಲಕ್ಷಣ, ಬಂಧ, ಶ್ಲೇಷಾದ್ಯರ್ಥ, ಉಪೇಕ್ಷಾದ್ಯಂಗ, ವೈದರ್ಭ್ಯಾದಿ ರೀತಿ, ಅಂತರ್ಲಾಪಿ, ಬಹಿರ್ಲಾಪಿ, ಸಮಸ್ಯ, ಶಬ್ದ, ಸಂಧಿ, ಸಮಾಸ ಧಾತು, ದೇಶ, ಅನ್ಯದೇಶ, ತತ್ಸಮ, ತದ್ಭವಾದಿಗಳಿಂ ಗರ್ಭೀಕೃತ ಮಾದ ಅನೇಕ ವಿಧ ವೃತ್ತ, ಕಂದ, ವಚನ, ರಗಳೆ, ತ್ರಿವಿಧಿ,ತ್ರಿವುಡೆ, ಗದ್ಯ, ಮುಂತಾದವುಗಳಿಂದ ನಿಯುತವಾಗಿ" ರಾಜಶೇಖರವನ್ನು ಒಂದು ವರ್ಷದಲ್ಲಿ ರಚಿಸಿ, ರಾಜಾಸ್ಥಾನಕ್ಕೆ ಒಯ್ಯಲು ಸರ್ವಕುವಾದಿಗಳೂ, ಮಾಧ್ವಾದಿ ಶ್ರಿಮತಸ್ಥರೂ ನೋಡಿ ಜಿಹ್ವಾಸ್ತಂಭರಾಗಿರಲು ಷಡಕ್ಷರ ಮಹಾಕವಿ ಹೀಗೆ ಅಂದನಂತೆ:

ಕಡಿವಡೆದುದೋ ನಂಜಿನ ಮು
ಳ್ಳುಡಿದುದೊ ಕಾರ್ಯ್ನೊನ್ನ ಸರಳಕೀಲಿಸಿದುದೊ ಮೇ
ಣಡರ್ದುದೊ ಮೂಕಗ್ರಹಮೆನೆ
ಮಿಡುಕದು ಖಳರಸನೆ ಸುಕವಿಕಾವ್ಯಸ್ಥಳದೋಳ್ ||

ಕವಿಕೃತಿಯನ್ನು ಮೆಚ್ಚಿದ ದೊರೆ ಎಳಂದೂರು ಗ್ರಾಮದಲ್ಲಿ ಕವಿಗಾಗಿ ಒಂದು ಮಠವನ್ನು ಕಟ್ಟಿಸಿಕೊಟ್ಟನಂತೆ. "ಆ ಷಡಕ್ಷರಿ ದೇವನಿಂದ ಶಾಲಿವಾಹನ ಶಕ ೧೫೭೭ನೇ ಜಯನಾಮ ಸಂವತ್ಸರ ಮಾಘಮಾಸ ಶುಕ್ಲಪಕ್ಷದ (3) ಬುಧವಾರಕ್ಕೆ ಸಂಪೂರ್ಣವಾದ" ರಾಜಶೇಖರದ ಮೂರನೆಯ ಆಶ್ವಾಸಕ್ಕೆ ಲೇಖಕರು ಟೀಕೆಯನ್ನು ರಚಿಸಿದ್ದಾರೆ. ಮೂಲ ಶ್ಲೋಕದಲ್ಲಿಯ ಆಡಿ, ಪ್ರಾಸ, ವೃತ್ತನಾಮಗಳನ್ನೂ, ಶಬ್ದಾರ್ಥದಲ್ಲಿ ಪದಖಂಡಣ, ಶ್ಲೇಷಾರ್ಥ, ವ್ಯಾಕರಣ, ರಸಾಲಂಕಾರಗಳನ್ನೂ, ಕಠಿಣ ಶಬ್ದಗಳ ಅರ್ಥಗಳನ್ನೂ, ತಾತ್ಪರ್ಯ ಸಂಗ್ರಹದಲ್ಲಿ ಶ್ರುತಿ, ಸ್ಮೃತಿ, ಪುರಾಣಾಗಮ ಸಂಮತ ಶ್ಲೋಕಗಳನ್ನೂ, ಭಾವಾರ್ಥದಲ್ಲಿ ಸಾರಾಂಶವನ್ನು ಕೊಡಲಾಗಿದೆ. ಕೊನೆಗೆ ಲೇಖಕರು ಹೀಗೆ ಪ್ರಾರ್ಥಿಸಿಕೊಂಡಿದ್ದಾರೆ:

"ಅಕಸ್ಮಾದಲಂಕಾರಾದಿಗಳೋಳ್ಕಿಂಚಿದ್ದೋಷಗಳು ಬಿದ್ದಿದ್ದಾವು; ಅದರ ಕಡೆಗೆ ಲಕ್ಷ್ಯಕೊಡದೆ, ಅರ್ಥವಿಷಯದ ಕಡೆಗೆ ಮನಸ್ಸುಗೊಡಬೇಕು. ಯಾಕಂದರೆ ನಾನು ಕುಗ್ರಾಮ ವಾಸಿಯಾಗಿರುವುದರಿಂದಲೂ, ಮತ್ತು ಘನವಿದ್ವಾಂಸನಲ್ಲದರಿಂದಲೂ, ಇದೇ ಪ್ರಥಮ ಗ್ರಂಥವನ್ನು ಬರದುದರಿಂದಲೂ, ಶಿವಪ್ರಾಜ್ಞಜನವನ್ನು ಕುರಿತು ಸ್ಮರಿಸುತ್ತೇನಲ್ಲಾ ಮೊದಲು ಕೆಲಸ ಮಾಡತಕ್ಕರಿಗೆಂಥಾವರಿಗಾದರೂ ಸ್ವಲ್ಪ ಭ್ರಮೆಯಾಗುವುದು. ಕಾರಣ ಇದರಲ್ಲಿ ಕೆಲವು ವ್ಯಂಗಗಳುಂಟಾಗಿದ್ದಾದರೆ ಕ್ಷಮಿಸಬೇಕೆಂದು ಅಪೇಕ್ಷಿಸುತ್ತೇನೆ". ಈ ಟೀಕೆಯನ್ನು ರಚಿಸುವಲ್ಲಿ ವ್ಯಾಖ್ಯಾನಕಾರರ ಉದ್ದೇಶವೆಂದರೆ– "ಧರ್ಮಶಾಲಾಪ ವಿದ್ಯಾರ್ಥಿಬಾಲರಿಗೂ, ಮಠ ಮನೆಗಳಲ್ಲಿ ಪಠಿಸುವ (ಗುರುಶೀಕ್ಷ್ಪಾತತ್ವರಪ್ಪ) ಶಾಸ್ತ್ರಾಭ್ಯಾಸಿಗಳಿಗೂ, ಏತತ್ಕರ್ನಾಟದೇಶೀಯ ಬಹುಳ (ಕಾಂಕ್ಷ) ಜನರಿಗೂ ವ್ಯುತ್ಪಾದಕ"ವಾಗುವುದು.

ಧೋಂಡೊ ನರಸಿಂಹ ಮುಳಬಾಗಲ (1848-1898)

ತುಂಬಾ ಕುಶಾಗ್ರಮತಿಗಳು. ಸನ್ 1866 ರಲ್ಲಿ ಕನ್ನಡ ಮೂರನೆಯ ವರುಷದ ಶಿಕ್ಷಕ ಪರೀಕ್ಷೆಯಲ್ಲಿ 322 ಗುಣಗಳಲ್ಲಿ 294 ಗುಣಗಳನ್ನು ದೊರೆಕಿಸಿ ಪ್ರಪ್ರಥಮರಾಗಿ ಉತ್ತೀರ್ಣರಾಗಿದ್ದರು. ಶ್ರೀಯುತರೂ ಧಾರವಾಡದ ಶಿಕ್ಷಕ ವಿದ್ಯಾಲಯದಲ್ಲಿ ಕನ್ನಡಪಂಡಿತರಾಗಿದ್ದರು. ಮುಳಬಾಗಲರು ಸಂಸ್ಕೃತದಿಂದ 'ಉತ್ತರರಾಮಚರಿತ್ರ' 'ಮೃಚ್ಛಕಟಿಕ' 'ವೇಣೀಸಂಹಾರ' 'ಮಾಲವಿಕಾಗ್ನಿಮಿತ್ರ' ಮೊದಲಾದುವುಗಳನ್ನೂ, 'ಕನ್ನಡ ನುಡಿಗಟ್ಟು' 'ಕನ್ನಡ ಕೈಪಿಡಿ' 'ಛಂದಸ್ಸಾರ' 'ಪದ್ಯಾರ್ಥಸಾರ' ಮೊದಲಾದ ಅಭ್ಯಾಸಪೂರ್ಣವಾದ ಗ್ರಂಥಗಳನ್ನು ಬರೆದರು. ಶ್ರೀಯುತರ 'ನುಡಿಗಟ್ಟು' ಎಷ್ಟೋ ವರ್ಷಗಳವರೆಗೆ ಉತ್ತರ ಕರ್ನಾಟಕದಲ್ಲಿ ವ್ಯಾಕರಣ ವಿಷಯಕವಾದ ಆಧಾರ ಗ್ರಂಥವಾಗಿದ್ದಿತು. ಶಿವರುದ್ರಪ್ಪ ಕುಲಕರ್ಣಿಯವರ ಹೇಳಿಕೆಯಂತೆ ಮುಳಬಾಗಲರು 'ಹಿತೋಪದೇಶ'ವನ್ನು ಅರ್ಧಭಾಷಾಂತರಿಸಿದಂತೆ ತಿಳಿದುಬರುತ್ತದೆ. 'ಮುಳಬಾಗಲರವರ ಚರಿತ್ರಶತಕ'ದಲ್ಲಿ ಅವರ ಕೃತಿ ರಚನೆಯ ಬಗ್ಗೆ ಹೀಗೆ ಹೇಳಿದೆ :

ಉರುತರ ರಾಜಶೇಖರದ ಸಪ್ತಮಸಂಧಿಯ ಟೀಕೆಯನ್ನುರೆ
ವಿರಚಿಸಿ ಬಾಲಕರ್ಗೆ ಮುದವಿತ್ತರು ತಾಂ ಕವಿತಾರ್ಥಸಾರಮಂ§

ಕೃಷ್ಣಾರ್ಯರು ಉಲ್ಲೇಖಮಾಡಿದ ಟೀಕೆಗೆ 'ರಾಜಶೇಖರ ವಿಲಾಸ ವೃತ್ತಿ' ಎಂಬ ಹೆಸರನ್ನು ಲೇಖಕರು ಕೊಟ್ಟಿದ್ದರು.

ರಾಜಶೇಖರ ವಿಲಾಸವೃತ್ತಿ :

ಮುಳಬಾಗಲರು ಬರೆದ ಈ ಟೀಕು ಸನ್ 1892 ರಲ್ಲಿ ಧಾರವಾಡದ ಹಿಂದು ಪ್ರಿಂಟಿಂಗ್ ವರ್ಕ್ಸ್‌ದಲ್ಲಿ ಮುದ್ರಿತವಾಯಿತು. ಪುಟ

§ಮುಳಬಾಗಲರವರ ಚರಿತ್ರಶತಕ : ಕೃಷ್ಣಾರ್ಯ : 1898

ಸಂಖ್ಯೆ 188. ಈ ಏಳನೆಯ ಆಶ್ವಾಸದಲ್ಲಿ ಸರ್ವಮಂಗಳೆಯು ರಾಜಶೇಖರನನ್ನು ಭೇಟಿಯಾದ ವರ್ಣನೆ ಬರುತ್ತದೆ. ಲೇಖಕರು ಮೊದಲ 'ಸದರಿ'ನಲ್ಲಿ ಪದ್ಯದ ಹೆಸರು, ಎರಡನೆಯ ಸದರಿನಲ್ಲಿ ಚರಣ ಭೇದದಿಂದ ಪದ್ಯಲೇಖನ, ಮೂರನೆಯದರಲ್ಲಿ ಪದ್ಯದ ಪದಭೇದ, ನಾಲ್ಕನೆಯದರಲ್ಲಿ ಅರ್ಥಸಹಿತವಾದ ಅನ್ವಯ, ಐದನೆಯದರಲ್ಲಿ ಪದ್ಯದ ಭಾವಾರ್ಥ, ಆರನೆಯದರಲ್ಲಿ ವ್ಯಾಕರಣ ಸೂಚನೆಗಳು ಮೊದಲಾದುವುಗಳನ್ನು ಹೇಳಿದ್ದಾರೆ. ಮುಳಬಾಗಲರ ವ್ಯಾಖ್ಯಾನದ ನಿದರ್ಶನವಾಗಿ ಈ ಕೆಳಗಿನ ಪದ್ಯವನ್ನು ಕೊಡಬಹುದು :

ಸ್ಮರ ಸಿದ್ಧಂ ಮೋಹನ ಯಂ
ತ್ರರಚನೆಯನೊಡರ್ಚಲೆಂದು ಮೂಗೆರೆದೆಗೆದಂ
ತರಳೆಯುದರಪತ್ರದೊಳನೆ
ಕರಮೆಸೆಗುಂ ತ್ರಿವಳಿ ಕಮಳದಳಲೋಚನೆಯಾ ॥

ಇದರ ಭಾವಾರ್ಥ ಹೀಗೆ :

"ಕಾಮನೆಂಬ ಸಿದ್ಧನು ಮರುಳುಮಾಡುವ ಯಂತ್ರದ ರಚನೆಯನ್ನು ಮಾಡಲಿಕ್ಕೆಂದು ಸರ್ವಮಂಗಳೆಯ ಹೊಟ್ಟೆಯೆಂಬ ಎಲೆಯ ಮೇಲೆ ಮೂರು ಗೆರೆಗಳನ್ನು ತೆಗೆದನೆಂಬಂತೆ ಆ ಕಮಲಾಕ್ಷಿಯ ತ್ರಿವಳಿಗಳು ಮೇಲಾಗಿ ಶೋಭಿಸುವವು"*

ಹೀಗಾಗಿ, ಸನ್ 1871 ರಿಂದ ಮೊದಲ್ಗೊಂಡು, ಸನ್ 1872, 1873 ಮತ್ತು 1892 ಹೀಗೆ ರಾಜಶೇಖರ ವಿಳಾಸದ ಟೀಕು ವ್ಯಾಖ್ಯಾನ ಕೃತಿ ಧಾರವಾಡ ಪ್ರಾಂತದಲ್ಲಿಯೇ ನಾಲ್ಕು ಜನ ವಿದ್ವಾಂಸರಿಂದ ನಡೆಯಿತು. ಹಳೆಯ ಮೈಸೂರಿನತ್ತ ನಂಜುಂಡ ಸ್ವಾಮಿಗಳಿಂದ ವ್ಯಾಖ್ಯಾನ ರಚಿತವಾಯಿತು. ಈಯೆಲ್ಲ ವ್ಯಾಖ್ಯಾನಗಳನ್ನು ಸಂಗ್ರಹಿಸಿ, ಒಂದೇ ಗ್ರಂಥವನ್ನಾಗಿ ಸಂಕಲಿಸಿದರೆ, ಕನ್ನಡದ ಅಭ್ಯಾಸಕ್ಕೆ ತುಂಬಾ ಅನುಕೂಲವಾದೀತು ! ರಾಜಶೇಖರವಿಳಾಸದಂಥ ಪ್ರೌಢಕಾವ್ಯವನ್ನು ಸಾಮಾನ್ಯರೂ ಪಠಿಸಿದಲ್ಲಿ ತುಂಬಾ ಸಹಾಯಕವಾದೀತು !!

*ರಾಜಶೇಖರ ವಿಲಾಸವು : 1892 : ಪು. 70-71

ಶತಕ ಸಾಹಿತ್ಯ

ಲೇಖಕರು :
ಹಂಪ. ನಾಗರಾಜಯ್ಯ, ಎಂ.ಎ.,
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾನಿಲಯ

ಯಾವುದೇ ಒಂದು ಭಾಷೆಯ ಒಟ್ಟು ಸಾಹಿತ್ಯವನ್ನು ಪರಿಶೀಲಿಸಿದಾಗ ಅದನ್ನು ಪ್ರಮುಖವಾಗಿ ವಸ್ತುನಿಷ್ಠ ಸಾಹಿತ್ಯ ಮತ್ತು ವ್ಯಕ್ತಿನಿಷ್ಠ ಸಾಹಿತ್ಯ ಎಂದು ಎರಡು ವಿಧವಾಗಿ ವಿಭಜಿಸಬಹುದು. ಕನ್ನಡ ಸಾಹಿತ್ಯವೂ ಇದಕ್ಕೆ ಹೊರತಾಗಿಲ್ಲ. ಇಲ್ಲಿನ ಬಹುಪಾಲು ಸಾಹಿತ್ಯ ವಸ್ತುನಿಷ್ಠವಾಗಿದೆ. ಕವಿಯ ಕಾವ್ಯ ರಚನೆಗಿಂತ ಮೊದಲೆ ಸಿದ್ಧವಾಗಿದ್ದು ಜನಮನದಲ್ಲಿ ಪ್ರಸಿದ್ಧಿ ಪಡೆದ ವಸ್ತುವನ್ನು ಆರಿಸಿಕೊಂಡು ಆ ವಸ್ತುವನ್ನೇ ಪ್ರಧಾನವಾಗಿರಿಸಿಕೊಂಡು ಬರೆಯಲು ಹೊರಡುವಾಗ ಅನುಕೂಲದಂತೆ ಅನನುಕೂಲವೂ ಇದೆ. ಮುಖ್ಯವಾಗಿ ಇಂಥ ವಸ್ತುಪ್ರಧಾನ ಕಾವ್ಯಗಳಲ್ಲಿ ಕವಿಯ ವೈಯಕ್ತಿಕ ಅನಿಸಿಕೆಗಳು ಪ್ರಧಾನವಾಗಿ ಒಡಮೂಡಲು ಕೆಲವು ಇತಿಮಿತಿಗಳಿರುವುದರಿಂದ, ಅವೇನಿದ್ದರೂ ಅಧೀನವಾಗಿ ಬರಬೇಕಾಗುತ್ತದೆ. ಪಂಪ ರನ್ನ ಪೊನ್ನ ಜನ್ನ ಮೊದಲಾದ ನಮ್ಮ ಕನ್ನಡದ ಹಲವಾರು ಹಿರಿಯ ಕವಿಗಳ ಕಾವ್ಯಗಳೆಲ್ಲ ಹೀಗೆ ವಸ್ತುನಿಷ್ಠ ಕಾವ್ಯಗಳಾಗಿವೆ.

ವ್ಯಕ್ತಿನಿಷ್ಠ ಕಾವ್ಯಗಳಲ್ಲಿ ಕವಿಗೆ ನಿರ್ಬಂಧಗಳಿರುವುದಿಲ್ಲ. ಅಲ್ಲಿ ಆತನಿಗೆ ಪೂರ್ಣ ಸ್ವಾತಂತ್ರ್ಯ. ವ್ಯಕ್ತಿನಿಷ್ಠ ಕಾವ್ಯ ಭಾವಪ್ರಧಾನ. ಇದು ಆಧುನಿಕ ಭಾವ ಗೀತೆಗಳ ಮಾದರಿಯದು. ವಸ್ತುನಿಷ್ಠ ಕಾವ್ಯದಲ್ಲಿ ಭಾವ ಪ್ರಾಧಾನ್ಯ ಇಲ್ಲವೆಂದು ತಿಳಿಯಬೇಕಾಗಿಲ್ಲ. ಆದರೆ ಅಲ್ಲಿರುವಂತೆ ವ್ಯಕ್ತಿನಿಷ್ಠ ರಚನೆಯಲ್ಲಿ ಸಿದ್ಧವಸ್ತು ಇಲ್ಲ. ವೈಯಕ್ತಿಕ ಕಷ್ಟ ನಷ್ಟ, ರಾಗ ವಿರಾಗ, ನೋವು ನಲಿವು, ಸೋಲು ಗೆಲುವು ಮೊದಲಾದವುಗಳ ನಿವೇದನ ಇಲ್ಲಿ ಸಲೀಸು. ಹೀಗೇ ಇರಬೇಕು, ಇದೇ ಆಗಬೇಕು, ಇಷ್ಟೇ ಬರಬೇಕು, ಇಂತಹುದೇ ಛಂದಸ್ಸು ಎಂಬ ಗಡಿಬಂಧಗಳಿರುವುದಿಲ್ಲ. ನಿಯಮಗಳು ಸಡಿಲವಾಗಿರುವುದು ಸೌಕರ್ಯವಾಗಿರುವಂತೆ ಎಚ್ಚರಿಕೆಯೂ ಆಗಿದೆ. ವಸ್ತುನಿಷ್ಠ ಕಾವ್ಯದಲ್ಲಿ ಕಾವ್ಯವನ್ನು ನಡಸಿಕೊಂಡು ಹೋಗಲು ಯಾವ ಬಂಡವಾಳವೂ ಇಲ್ಲದಿದ್ದಲ್ಲಿ ಕಡೆಗೆ ವಸ್ತುವಾದರೂ ಇರುತ್ತದೆ. ಇಲ್ಲಿ ಅಂಥ ಆಲಂಬನವಿಲ್ಲ. ಕೇವಲ ಅನುಭವ ಶ್ರೀಮಂತಿಕೆ, ಪ್ರತಿಭಾ ವಿಲಾಸ, ಸ್ಫೂರ್ತಿ, ಕಲ್ಪನೆ ಮೊದಲಾದುವನ್ನೇ ಆಶ್ರಯಿಸಬೇಕು. ವ್ಯಕ್ತಿನಿಷ್ಠ ಕಾವ್ಯ ಕ್ಷೇತ್ರದಲ್ಲಿ ಸಮರ್ಥಶಾಲಿಯಷ್ಟೇ ಯಶಸ್ವಿಯಾಗಬಲ್ಲ. ಅಷ್ಟೇ ಅಲ್ಲ, ಕವಿಯ ಸಾಮರ್ಥ್ಯಕ್ಕೆ ಈ ಕ್ಷೇತ್ರ ನಿಕಷವೂ ಹೌದು. ಬಹು ಬೇಗ ಕವಿಯ ಬಣ್ಣ ಇಲ್ಲಿ ಬಯಲಾಗುತ್ತದೆ. ಅಂದ ಮಾತ್ರಕ್ಕೆ ವಸ್ತುನಿಷ್ಠ ಕಾವ್ಯಕ್ಕಿಂತ ವ್ಯಕ್ತಿನಿಷ್ಠ ಕಾವ್ಯ ಶ್ರೇಷ್ಠವೆಂಬ ತೀರ್ಮಾನ ತಳೆಯಬೇಕಾಗಿಲ್ಲ. ಇದಕ್ಕೆ ಸಮಂಜಸವಾದ ಒಂದು ನಿದರ್ಶನವೆಂದು ಕನ್ನಡ ಸಾಹಿತ್ಯವನ್ನು ನಾವು ಹೆಸರಿಸಬಹುದು. ಏಕೆಂದರೆ ಕನ್ನಡದಲ್ಲಿ ಶತಕಗಳೂ ಸ್ವಲ್ಪಮಟ್ಟಿಗೆ ಅಷ್ಟಕಗಳೂ ವ್ಯಕ್ತಿನಿಷ್ಠ ಮಾದರಿಗೆ ಉದಾಹರಣೆಗಳಾಗಿ ನಿಲ್ಲುತ್ತವೆ. ಆದರೆ ಈ ವ್ಯಕ್ತಿನಿಷ್ಠ ಸಾಹಿತ್ಯ ಪ್ರಕಾರದ ಸೌಲಭ್ಯ ವಿಶಿಷ್ಟಗಳ ಅನುಕೂಲವನ್ನು ಹರಿಹರ ರತ್ನಾಕರರಂತಹ, ಒಂದು ಕೈಯ ಬೆರಳೆಣಿಕೆಯ ಕವಿಗಳಷ್ಟೇ ಕೊಳ್ಳೆಹೊಡೆದಿದ್ದಾರೆ. ಉಳಿದವರು ಬಹುಪಾಲು ಸಾಮಾನ್ಯತಾಸ್ತ್ರದಲ್ಲಿ ಚಲಿಸುವ ಛಾಯೆಯಾಗಿದ್ದಾರೆ.

ಶತಕಗಳಿಗೆ ಸಂಸ್ಕೃತದಲ್ಲಿ, ಹಾಗೆಯೇ ಕನ್ನಡದಲ್ಲಿ ಮೊದನಿಂದ ಮನ್ನಣೆಯಿದೆ. ಕನ್ನಡದ ಪ್ರಾಚೀನ ಗದ್ಯ ಗ್ರಂಥವಾದ ವಡ್ಡಾರಾಧನೆಯ ಕರ್ತೃ ತನಗಿಂತ ಪ್ರಾಚೀನವಾದ ಕೃತಿಗಳಿಂದ ಉದಾಹರಣೆಗಳನ್ನು ಉದ್ಧರಿಸುವ ಸ್ವಭಾವದವನು; ಆತ ಕೂಡ ಸಂಸ್ಕೃತ ಭರ್ತೃಹರಿಯ ಶತಕಗಳಿಂದ ಉದಾಹರಣೆಯನ್ನಿತ್ತಿರುವುದನ್ನು ಇಲ್ಲಿ ಉಲ್ಲೇಖಿಸಬಹುದು. ಏಕೆಂದರೆ ಇದು ಶತಕಗಳ ಹಿರಿಮೆಯನ್ನು ಸಾರುವ ಉಜ್ವಲ ನಿದರ್ಶನಗಳಲ್ಲೊಂದು. ಸಂಸ್ಕೃತದಲ್ಲಿ ಭರ್ತೃಹರಿಯ ಶೃಂಗಾರಶತಕ, ಅಮರುಕವಿಯ ಅಮರುಶತಕದಂತೆ ಕನ್ನಡದಲ್ಲಿ ಶುದ್ಧ ಪ್ರಾಂಜಲ ಶತಕಗಳು ಬರಲಿಲ್ಲವಾದರೂ ಸರ್ವಜನ ಗ್ರಾಹ್ಯವೂ, ಪ್ರಿಯವೂ, ಸುಲಭವೂ ಆಸ್ವಾದ್ಯವು ಆದ ಶತಕಗಳು ಕೆಲವಾದರೂ ಕಂಡುಬರುತ್ತವೆ; ರತ್ನಾಕರವರ್ಣಿ ರಚಿಸಿರುವ ಮೂರು ಶತಕಗಳಲ್ಲಿ ಎರಡು ಮಾತ್ರ ಎಲ್ಲ ಮತದವರನ್ನೂ ಮೆಚ್ಚಿಸಿ ತಲೆದೂಗಿಸುವದೆಂಬುದನ್ನು ನಿದರ್ಶನವಾಗಿ ಹೆಸರಿಸಬಹುದು.

ಕನ್ನಡದ ಶತಕಗಳು ಬಹುವಾಗಿ ನೀತಿ ಪ್ರಧಾನವಾಗಿವೆ. ಲೌಕಿಕಕ್ಕಿಂತ ಪಾರಮಾರ್ಥಿಕವೇ ಇಲ್ಲಿ ಪ್ರಮುಖ. ಕಥಾತ್ಮಕ ಶತಕಗಳು ತೀರ ಕಡಮೆ. ಸ್ತೋತ್ರ ರೂಪದ ಶತಕಗಳೂ ಇವೆ. ಒಟ್ಟಾರೆ, ಶತಕಗಳು ಸ್ವಕೀಯವಾಗಿದ್ದರೂ ಮತೀಯವಾಗಿವೆ. ಮತೀಯ ಆವರಣಗಳನ್ನು ಕಳಚಿಕೊಂಡು ಓದುಗರನ್ನು ಸೆರೆಹಿಡಿಯುವ ಸತ್ಕಾವ್ಯ ಶತಕಗಳೂ ಇವೆಯೆಂಬುದನ್ನು ನೆನಪಿನಲ್ಲಿಡಬೇಕು. ಮುಕ್ಕಾಲುಮೂರುವೀಸಪಾಲು ಶತಕಗಳು ಭಕ್ತಿಗೀತೆಗಳು. ಇಲ್ಲಿ ಭಕ್ತಿಯೇ ಸ್ಥಾಯಿ,ಉಳಿದ ಭಾವಗಳು ಸಂಚಾರಿ. ಮೇಲೆ ಹೇಳಿದಂತೆ, ಇಲ್ಲೆಲ್ಲ ನೀತಿಪ್ರತಿಪಾದನೆ ಎದ್ದು ಕಾಣುತ್ತದೆಯಾಗಿ ಅನಿವಾರ್ಯವಾಗಿ ಕಾವ್ಯ ವೇನಿದ್ದರೂ ಬೋಧನಕ್ಕೆ ಅಧೀನವಾಗಿ ದ್ವಿತೀಯ ಪಂಕ್ತಿಯಲ್ಲಿ ಗಮಿಸಬಹುದಾಗುತ್ತದೆ.

ಕನ್ನಡದ ಶತಕಗ್ರಂಥಗಳಲ್ಲಿ ವೀರಶೈವ ಕವಿಗಳ ರಚನೆಗೆ ಪ್ರಮುಖ ಸ್ಥಾನವಿದೆ. ಎಲ್ಲ ಧರ್ಮದಲ್ಲಿರುವಂತೆ ಇವರಲ್ಲಿಯೂ ಭಕ್ತಿ

ಪ್ರಧಾನ ಕವಿಗಳು ಹೇರಳ. ಸಂಸ್ಕೃತದಲ್ಲಿ ಭರ್ತೃಹರಿಯ ಮೂರು ಶತಕಗಳಿರುವುದರ ಸಾನ್ನ್ಯದ ಸ್ಫೂರ್ತಿಯಿಂದ ಕನ್ನಡದಲ್ಲಿ ಮಗ್ಗೆಯ ಮಾಯಿದೇವನೂ ಮೂರು ಶತಕಗಳನ್ನು ರಚಿಸಿದ್ದಾನೆ. ಇವನ್ನು 'ಶತಕತ್ರಯ'ವೆಂದೂ ಕರೆಯುವದುಂಟು; ರತ್ನಾಕರನ ಮೂರು ಶತಕಗಳಿಗೂ ಶತಕತ್ರಯವೆಂದು ಕರೆಯುತ್ತಾರೆ. ಮಾಯಿದೇವನ ಮೂರು ಶತಕಗಳಲ್ಲಿ ಭಕ್ತಿ-ಜ್ಞಾನ-ವೈರಾಗ್ಯಗಳನ್ನು ವೀರಶೈವ ಆಗಮಗಳಲ್ಲಿನ ವಿಷಯ ಮರ್ಯಾದೆಯನ್ನು ಅನುಸರಿಸಿದ ನಿರೂಪಣೆಯಿದೆ; ಇವಕ್ಕೆ ಕ್ರಮವಾಗಿ ಶಿವಾಧವ–ಶಿವಾವಲ್ಲಭ–ಮಹದೈಪುರೀಶ್ವರ ಎಂದು ಪದಾಂಕಿತವಿದೆ. ಈ ಮೂರು ಶತಕಗಳು ವೀರಶೈವಾಗಮೋಕ್ತ ಭಕ್ತಿ ಆಚರಣೆ, ಜ್ಞಾನಗಳನ್ನು ಕರತಲಾಮಲಕವಾಗಿ ನಿರೂಪಿಸುವ ಕೈಪಿಡಿಗಳಂತಿವೆ. ಇವು ಶೈವ ಮುಮುಕ್ಷುಗಳ ಪಠನಮನನಗಳಿಗೆ ಅತ್ಯಂತಾರ್ಹವಾಗಿವೆಯೆಂದು ಮನ್ನಣೆಗಳಿಸಿವೆ.

ಈ ಶತಕಗಳ ಕರ್ತೃವಾದ ಮಗ್ಗೆ ಮಾಯಿದೇವನನ್ನು ಅನುಭವ ಸೂತ್ರವೆಂಬ ಪ್ರಶಸ್ತಿ ಗ್ರಂಥವನ್ನು ರಚಿಸಿದ ಕಲ್ಯಾಣದ ಮಾಯಿದೇವರೇ ಇರಬೇಕೆಂದು ನಂಬಿಕೆಯೂ ಸಬಲವಾಗಿ ವ್ಯಕ್ತವಾಗಿದೆ. ಶತಕಗಳಲ್ಲಿ ಸಿಗುವ ಒಂದೆರಡು ಆಂತರಿಕ ಪ್ರಮಾಣಗಳನ್ನು ವಿರೂಪಾಕ್ಷ ಪಂಡಿತನ ಚೆನ್ನಬಸವಪುರಾಣದ (5–10) ಹೇಳಿಕೆ ಪುಷ್ಟೀಕರಿಸುತ್ತದೆ. ಅದನ್ನು ಒಪ್ಪಿಕೊಳ್ಳುವುದಾದರೆ ಕವಿಯ ಪರಂಪರೆ ಹೀಗಿರುತ್ತದೆ : ಐಪುರ ನಗರದಲ್ಲಿನ ಉಪಮನ್ಯು ಶಿವಾಚಾರ್ಯ–ಭೀಮನಾಥ – ಕಳೇಶ್ವರ – ಜೊಪ್ಪನಾಥ–ನಾಕರಾಜ–ಸಂಗಮೇಶ್ವರದೇವ–ಮಾಯಿದೇವ. ಕನ್ನಡ ಶತಕಗಳಲ್ಲಿ ಐಪುರದ ಸೋಮನಾಥನನ್ನು ಇಷ್ಟದೈವವನ್ನಾಗಿ ಭಜಿಸಿದೆ. ವಿಜಯನಗರದ ಪ್ರೌಢದೇವರಾಯನಿಂದ ಸಂಪೂಜಿತನಾಗಿದ್ದನೆಂದು ಚೆನ್ನಬಸವಪುರಾಣಕಾರನ ರಚನೆಯಿರುವುದರಿಂದ, ಕವಿಯ ಕಾಲ 15 ನೆಯ ಶತಮಾನವಿರಬಹುದು.

ಈ ಕವಿಯ ಸಂಸ್ಕೃತ ಪಾಂಡಿತ್ಯ, ಶಿವಾಗಮಜ್ಞಾನ ಅಗಾಧವಾದುದು. ಈ 'ಶತಕತ್ರಯಿ'ಗೆ ತೋಂಟದ ಸಿದ್ಧಲಿಂಗ ಶಿವಯೋಗಿಯು (17 ನೆಯ ಶ.) ಕರ್ನಾಟಕ ವ್ಯಾಖ್ಯಾನ ಬರೆದಿದ್ದಾನೆಂಬುದು ವಿಡಂಬನೆಗೆ ಕಿರೀಟವಿಟ್ಟಂತಿದೆ. ಮಾಯಿದೇವನ ಶತಕಗಳು ಸಂಸ್ಕೃತಭೂಯಿಷ್ಠವಾಗಿ ಸಾಮಾನ್ಯರಿಗೆ ದುರವಗಾಹ್ಯವಾಗಿ ಇರುವುದರಿಂದ ಇಂಥದೊಂದು ಟೀಕೆಯ ಅಗತ್ಯ ಬಹಳ ಹಿಂದೆಯೇ ಕಂಡುಬಂದಿದೆ. ಹೀಗೆಂದಾಗ ಕವಿಗೆ ಕನ್ನಡದ ಗಂಧವೇ ಇಲ್ಲವೆಂದಲ್ಲ; ಅದರ ಗಾಳಿಯಿರುವಾಗಲೂ ಅರ್ಥದ ಉಸಿರಾಟ ಕಷ್ಟ, ಉಸಿರಾಟವಿದ್ದಾಗಲೂ ಉಲ್ಲಾಸವಿರುವುದಿಲ್ಲ. ವೀರಶೈವೇತರರಿಗೆ ಮಾತ್ರವಲ್ಲದೆ ಕವಿಯ ಸ್ವಮತಸ್ಥರಿಗೆ ಶತಕಗಳು ಶಾಸ್ತ್ರದ ಕಹಿ ಗುಳಿಗೆಗಳು. ಸಟೀಕಾ ಶತಕತ್ರಯವನ್ನು ಓದಿದಮೇಲೂ ಬರುವ ಭಾವನೆ, 'ಈತನಲ್ಲಿ ಪರಿಭಾಷೆಯ ಗಲಿಬಿಲಿಯಿಂದ ಕಸಿವಿಸಿಯಿದೆ' ಎಂಬುದು. ಮೂರು ಶತಕಗಳು ವೃತ್ತಗಳಲ್ಲಿವೆ. ವೃತ್ತಗಳ ನಡಿಗೆಯಲ್ಲಿ ಕೆಲವು ಕಡೆ ಪ್ರಸನ್ನತೆಯಿದ್ದರೂ ಮನೋಜ್ಞತೆಯಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ ಮತೀಯ ಪರಿವೇಶದ ಆಚೆಗೆ ಕವಿ ಪ್ರತಿಭೆ ಚಾಚದಿರುವುದು. ಇದರಿಂದ ಈತನ ಶತಕಗಳಿಗೆ ಹರಹು ಬರುವುದಿಲ್ಲ.

ಅರಿದಪೆನೆಂಬವಂಗರಿಯಬಾರದು ನಿನ್ನ ನಿಜ ಪ್ರಯತ್ನದಿಂ
ದರಿದರಿದಪೆನೆನ್ನದಂಗರಿಯ ಬರ್ಪುದು ನೀಂ ಕೃಪೆಮಾಡೆ
ಚೋದ್ಯಮೇ
ನರಸುವವನಂಗೆ ಸಿಲ್ಕದ ನಿಧಾನಮಯತ್ನಪರಂಗೆ ಭಾಗ್ಯದಿಂ
ದಸರದೆ ಸಿಲ್ಕುವಂತೆ ಪರಮ ಪ್ರಭುವೇ ಮಹದೈಪುರೀಶ್ವರಾ ॥ 38

ಮತಾಚಾರ ವ್ರತಾಚಾರಗಳಲ್ಲಿ ಪರಾಯಣರಾದವರಿಗೆ ಇವನ ವಿವರಣೆ ಹಿಡಿಸಬಹುದು. ಉಳಿದವರಿಗೆ ಶುಷ್ಕವಾಗಿದೆ. ಇದರ ನೀರಸತೆ ಎಷ್ಟಿದೆಯೆಂದರೆ, ಎಲ್ಲ ಜನರಿಗೂ ನಿಲುಕುವಂತಹ ಪದ್ಯಗಳನ್ನು ಇಲ್ಲಿಂದ ಆರಿಸುವುದು ಕಷ್ಟಸಾಧ್ಯವಾಗಿದೆ. ಇದ್ದುದರಲ್ಲಿ ಉತ್ತಮವೆಂದು ಎರಡು ಪದ್ಯಗಳನ್ನು ಉದಾಹರಿಸಿದೆ :

ಪ್ರಿಯತನೆಯಪ್ಪ ಜಾಯೆ ನಿಜವಲ್ಲಭನಂ ರತಿಕೇಳಿಯೊಳ್ಮನಂ
ಬಯಸಿದ ಹಾಗೆ ತರ್ಜನ ವಿಡಂಬನ ಗರ್ಹಣತಾಡನಾದಿಯಂ
ನಯಿಸಲದೇಂ ವಿರೋಧಮೋ ಸುಖಾಸ್ಪದಮೋ ಶರಣಂ
ಸ್ವಕೀಯರಿಂ
ಗಯಜನದಲ್ಲಿ ಲೀಲೆವಿಡಿದೇನನೊಡರ್ಚಿದೊಡೇಂ
ಶಿವಾಧವಾ ॥ 68

ನಿರಹಂಭಾವಮದುಳ್ಳೊಡೆಲ್ಲವರೊಳೇನುಂ ಬೇಡ ದಾನಂ ತಪ
ಶ್ಚರಣಂ ಪೂಜನಮುಂತೆದಿಲ್ಲದೊಡದೆಲ್ಲಂ ಬಂಧ ಹೇತು ಕ್ರಿಯಾ
ಕರಣಂ ಕೊಟ್ಟೊಡಮಾಹ ಪೂಜಿಸಿದೊಡಂ ನೋಡಾ
ತಪಂಗೈದೊಡಂ
ಪರಮಾರ್ಥಂ ನಿರಹಂಕೃತಿ ಕ್ರಿಯೆ ಬಳಿಕ್ಕೆಲ್ಲಂ
ಶಿವಾವಲ್ಲಭಾ ॥ 47

ಈತನ ತದ್ವಿರುದ್ಧವಾದ ಕಾವ್ಯಾನುಭವ ತಂದುಕೊಡುತ್ತಾನೆ ಸತ್ಕವಿ ಹರಿಹರ. ವೀರಶೈವ ಶತಕ ಕವಿಗಳಲ್ಲಿ ಹರಿಹರ ಆದ್ಯ ಹಾಗೂ ಅಗ್ರ. ಆಸ್ತಿಕ–ನಾಸ್ತಿಕರಿಗೆಲ್ಲ ಆತನ ಶತಕಗಳು ಉಪಾದೇಯ; ಮುಡಿದ ಹೂ ಅಗಲ್ದೊಡಂ ಬಾಡಿದೊಡಂ ಹಿಡಿದ ಪರಿಮಳ ಬಿಡದು. ಆತ ಶಿವಭಕ್ತ ಕವಿ; ಶಿವಗುಣ ಶೀಲ, ಶಿವಗುಣ ಲೋಲ, ಶಿವಗುಣ ರತ್ನಾಕರ.

ಹಂಪೆಯ ವಿರೂಪಾಕ್ಷ ಕೃಪಾಪೋಷಿತ ಹರಿಹರ ಕವಿ ಸ್ರಗ್ಧರಾ-ಮಹಾ ಸ್ರಗ್ಧರಾ ವೃತ್ತಗಳಿಂದ ಕೂಡಿರುವ ರಕ್ಷಾ ಶತಕ ಸಂಸಾರ ವ್ಯಾಮೋಹ ನಿರಸನವನ್ನು ನಿರೂಪಿಸುತ್ತದೆ. ಲೌಕಿಕ ಸುಖದ ಲಂಪಟತ್ವದ ಲೋಲಾಟದಲ್ಲಿ ಮುಳುಗಿ ಕಳೆದ ದಿನಗಳನ್ನು ಕವಿ ವೃಥಾ ವ್ಯರ್ಥವಾದ ಬಂಜೆ ಬಾಳೆಂದು ಮನಗಂಡ ಕ್ಷಣದಲ್ಲಿ ಸ್ಫುರಿಸಿದ ಭಾವತರಂಗಗಳು ಇಲ್ಲಿ ಒಂದರ ಹಿಂದೆ ಒಂದು ಎಂಬಂತೆ ವೀಚಿಗತಿಯಲ್ಲಿ ತೇಲಿಬರುತ್ತವೆ. ಸಂಸಾರವನ್ನು ಹೊತ್ತು ನಿತ್ತರಿಸಲು ಆಗದೆ ಸೋತು ಸಾಕಾಗಿ ಆಸತ್ತು ಬೇಸತ್ತು ನುಡಿದ ನೊಂದ ಜೀವದ ಉದ್ಗಾರಗಳು, ನವೆದ ಜೀವದ ಉಸಿರಾಟ ಕೂಡ ಕೇಳುವಷ್ಟು ಭಾವಸ್ಪರ್ಶಿಯಾಗಿವೆ. ರಕ್ಷಾಶತಕದಲ್ಲಿ ಶಿವಶ್ರೀರಕ್ಷೆ–ಕೃಪೆಗಳಿಗಾಗಿ

ನೊರೆಯಿದೆ. ಅಳಲು ತಳಮಳಗಳುಂಟಾದ ವ್ಯಕ್ತಿಯ ಬೆಳವಣಿಗೆಯಲ್ಲಿ ಮೊದಲ ಹೆಜ್ಜೆಯಿದು.

ಪಂಪಾ ವಿರೂಪಾಕ್ಷ ಶತಕ 'ಪಂಪಾಶತಕ'ವೆಂದು ಪ್ರಸಿದ್ಧಿಪಡೆದಿದೆ. ಇದು ಕವಿಯ ಎರಡನೇ ಹೆಜ್ಜೆ. ಹಂಪೆಯ ಪಂಪಾ ವಿರೂಪಾಕ್ಷನಿಗೆ ಶರಣು ಬಂದ ಬಳಿಕ ಆತನ ಶ್ರೀಪಾದ ಸೇವೆಗೆ ತನುವಿತ್ತು ಮನತೆತ್ತು ಬಾಳು ಮುಡುಪಿಟ್ಟ ವ್ಯವಸ್ಥೆಯಲ್ಲಿ ಕಾಣುತ್ತದೆ. ಗಾನಗಮಕಗಳಿಂದ ಶಿವನನ್ನು ನುತಿಸಿ ಭಜಿಸಿ ತನ್ಮಯವಾಗುವ ಸ್ಥಾಯಿಭಾವವಿದೆ; ರತ್ನಾ ಶತಕದ ಕಳವಳವಿಲ್ಲ, ಭಾವಪೂರದ ಅಬ್ಬರವಿಲ್ಲ; ಪ್ರವಾಹ ತಗ್ಗಿದ ಮೇಲೆ ಪ್ರಶಾಂತತೆಯಿದೆ.

ಕನ್ನಡಿಯಲ್ಲಿ ಪಡಿಮೂಡಿರುವ ಆನೆಯ ಆಕೃತಿಯ ಹಾಗೆ, ಹರಿಹರನ ಜೀವನ ರೇಖೆಗಳು ಈ ಎರಡು ಶತಕಗಳಲ್ಲಿ ಅಡಗಿರುವ ಸಾಧ್ಯತೆಯನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಕವಿ ಜೀವದ ಆ ರೂಪರೇಖೆಗಳನ್ನು ಸಾಲಿಡಿದು ಸೂಚಿಸುವುದು ಸಾಧ್ಯವಿಲ್ಲವಾದರೂ ಒಟ್ಟು ಕಾವ್ಯಧ್ವನಿಯನ್ನು ಹಿಡಿದು ಒಂದು ಸೂಕ್ಷ್ಮ ಜೀವದ ಬೆಳವಣಿಗೆಯನ್ನೂ, ಪ್ರಸಂಗದ ಒತ್ತಡಗಳಲ್ಲಿ ಸಿಕ್ಕಾಗ ಜರ್ಝರಿತವಾಗಿ ಅನುಭವಿಸುವ ನಿರ್ವಿಣ್ಣತೆ ಹಳವಂಡವನ್ನೂ ಕಾಣುತ್ತೇವೆ.

ಸತಿಪುತ್ರರ್ ಮಿತ್ರರಾಪ್ತರ್ ತನುಧನಮೆಂಬಿಂತಿವಂ
ನಿತ್ಯಮೆಂದು
ಚ್ಯತರ ವ್ಯಾಸಂಗದಿಂ ಮೆಯ್ಯರಿಯದೆ ಮರುಳಾಗಿರ್ದೆನೆನ್ನಂ
ದುರಾಶಾ ।
ವೃತನಂ ದುರ್ಮೋಹಿಯಂ ದುಸ್ತರತರ ವಿಷಯವ್ಯಾಪ್ತನಂ
ದುರ್ಧರೈನೋ
ಹತನಂ ದುರ್ಬೋಧನಂ ರಕ್ಷಿಪುದೆಲೆ ಕೃಪೆಯಿಂದಂ
ವಿರೂಪಾಕ್ಷಲಿಂಗಾ ॥

ಹರಣಂಗಳ್ ಕಳೆಯೇರೆ ಲೋಚನಯುಗಂ ನೀರೇರೆ
ಮೆಯ್ಯೆಲ್ಲಮಂ
ಕುರಮೇರಲ್ ನುಡಿಕಂಪಮೇರೆ ಕರಣಂಗಳ್ ಲೀಲೆಯೇರಲ್
ಮೊಗಂ ।
ಸಿರಿಯೇರಲ್ ತಲೆಗೇರಿದುತ್ಸವದೆ ನಿನ್ನಂ ಪೂಜಿಸುತ್ತಾನುಮಾ
ದರದಿಂದೀಕ್ಷಿಸುತಾಡುತಿರ್ಪುದೆನಗಿನ್ನೆಂದೋ ವಿರೂಪಾಕ್ಷನೇ ॥

ಅವಿವೇಕವನ್ನು ಕಳೆದುಕೊಂಡು ವಿವೇಕವನ್ನು ಕಂಡುಕೊಂಡ ಹೆಜ್ಜೆಗುರುತುಗಳಂತೆ ಇಲ್ಲಿನ ಪದ್ಯಗಳು ದೀಪ್ತಗೊಳ್ಳುತ್ತವೆ. ಗತಭಾಗ್ಯದಿಂದ ರೋಸಿಹೋದ ಮನಃಸ್ಥಿತಿಯ ಕಿಟಕಿಯಾಗಿ, ಬಹಿರಂಗ ಜೀವನದ ಘಟನೆಗಳು ಉಂಟುಮಾಡಿದ ಆಂತರಿಕ ಪರಿಣಾಮದ ಅಂತರಂಗದ ಚಿತ್ರವಾಗಿ ಕೆಲವು ಪದ್ಯಗಳು ಮೌಲಿಕವಾಗಿವೆ. 'ನಡೆತಂದೆನ್ನಯ ಕಣ್ಗಳಲ್ಲಿರು, ಬಿಡದಂತೆನ್ನಯ ಜಿಹ್ವೆಯಲ್ಲಿರು, ಎಡೆಗೊಂಡೆನ್ನಯ ಚಿತ್ತದಲ್ಲಿರು' –ಎಂದು ಅಂಗಲಾಚುವ ಅವಸರಿಸುವ ಕರೆ ಹೃದಯದ ಆಳದಿಂದ ಬಂದದ್ದು ಎಂದು ನಿಚ್ಚಳವಾಗುತ್ತದೆ. ಕವಿಯ ದರ್ಶನೋತ್ಕಂಠೆ, ಭಾವಾವೇಶ ನಮ್ಮಲ್ಲೂ ಪ್ರತಿಸ್ಪಂದಿಸುತ್ತದೆ. ಕಲಾಚತುರನಂತೆ ಕವಿ ತನ್ನ ಭಾವಗಳನ್ನು ಪ್ರಭಾವಶಾಲಿಯಾಗಿ ಒಡಮೂಡಿಸಿದ್ದಾನೆ.

ಪೋಗೆನೆ ಪೋಪ ಬಾರೆಲವೋ ಬಾರೆನೆ ಜೀಯ
ಹಸಾದಮೆಂದು ಬೆ
ಳ್ಳಾಗುತೆ ಬರ್ಪ ಮಾಣೆಲವೋ ಸುಮ್ಮನಿರೆಂದೊಡೆ
ಸುಮ್ಮನಿರ್ಪ ಮ ।
ತ್ತಾಗಳೆ ಬಗ್ಗಿಸಲ್ ನಡುಗಿ ಬೀಳುವ ಸೇವಿಪ ಕಷ್ಟವೃತ್ತಿಯಂ
ನೀಗಿದೆನಿಂದು ನಿಮ್ಮ ದಯೆಯಿಂ ಕರುಣಾಕರ
ಹಂಪೆಯಾಳ್ದನೇ ॥

ಹೊಸತಿಳಿವಿನ ಹೊಂಬೆಳಗಿನಲ್ಲಿ ಹೊಸ ಹಾದಿ ಹಿಡಿದು ಹೊರಟ ಧೃತಗತಿಯ ಲಯವಿದೆ. ಕಡೆಗೆ ಕವಿಗೆ ಶಿವತತ್ವ ರುಚಿಸುತ್ತದೆ, ಓದುಗನಿಗೆ ಇಲ್ಲಿಯ ಕಾವ್ಯತತ್ವ ಹಿಡಿಸುತ್ತದೆ. ಶರಣರ ಸಂಗದಿಂದ ಶಿವನ ಸಾನಿಧ್ಯದಿಂದ ಕವಿಗೆ ಆನಂದವಾಯಿತೆಂಬ ಧನ್ಯತಾಭಾವದಲ್ಲಿ, ತನಗೆ ಶಿವದರ್ಶನವಾಯಿತೆಂಬ ತಾದಾತ್ಮ್ಯತಾ ತೃಪ್ತಿಯಲ್ಲಿ ಶತಕಗಳು ಮುಗಿಯುತ್ತವೆ.

16ನೆಯ ಶತಮಾನದ ಕವಿಗಳಲ್ಲಿ ರತ್ನಾಕರವರ್ಣಿ ಅಗ್ರಗಣ್ಯ. ರೂಪಕ ಸಿಂಚಿತವಾದ ಸರಳ ಭಾಷೆಯಲ್ಲಿ ತ್ಯಾಗ ಭೋಗ ಸಮನ್ವಯದ ಯೋಗ ದರ್ಶನವನ್ನು ಪ್ರತಿಮಿಸಿದ ರತ್ನಾಕರ ತನ್ನ ಜೀವನ ವಿವರವನ್ನು ಕಾವ್ಯಗಳಲ್ಲಿ,ಉಳಿದ ಕವಿಗಳು ಕೊಟ್ಟಿರುವಂತೆ, ಎಲ್ಲಿಯೂ ಕೊಟ್ಟಿಲ್ಲ. ಈತ ಕ್ಷತ್ರಿಯ ವಂಶಜನೆಂದು ದೇವಚಂದ್ರನೆಂಬ ಅರ್ವಾಚೀನ ಕವಿ ತನ್ನ ರಾಜಾವಳಿ ಕಥೆಯಲ್ಲಿ ಕೆಲವು ವಿವರಗಳನ್ನು ಕೊಟ್ಟಿದ್ದಾನೆ. ಅವು ಚಾರಿತ್ರಿಕವಾಗಿ ಎಷ್ಟು ಗ್ರಾಹ್ಯವೋ ತಿಳಿಯದು. 1448 ರಲ್ಲಿದ್ದ ವಿಜಯಣ್ಣನೂ ರತ್ನಾಕರನೂ ಸಮಕಾಲೀನರೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿದೆ. ರತ್ನಾಕರನ ಜೀವನ-ಕಾವ್ಯ ಕುರಿತು ಕಥೆ ಕಾದಂಬರಿ ನಾಟಕಗಳು ಹುಟ್ಟಿಕೊಂಡಿವೆ.

ಈಗ ನಿಸ್ಸಂದಿಗ್ಧವಾಗಿ ತಿಳಿದು ಬಂದಿರುವಂತೆ ರತ್ನಾಕರ ತುಳುವ ದೇಶದ ಮೂಡುಬಿದರೆಯ ಕವಿ. ಕಾವ್ಯ ಅಲಂಕಾರ ಲಕ್ಷಣ ಶಾಸ್ತ್ರಗಳಲ್ಲಿ ನಿಪುಣ. ಭೈರಸ ಒಡೆಯರ ಗಮನ ಸೆಳೆದವನು, ಮಹೇಂದ್ರ ಕೀರ್ತಿಗಳ ಶಿಷ್ಯನಾದವನು. ರಾಜಾಶ್ರಯವಿದ್ದರೂ ಅದನ್ನು ಮೆಚ್ಚಿದವನಲ್ಲ. ಪ್ರಧಾನವಾಗಿ ಶೃಂಗಾರ ಕವಿಯಾದರೂ ಅವನ ಆಧ್ಯಾತ್ಮ ಪಿಪಾಸೆಗೆ ಕಡಮೆಯಿಲ್ಲ. ಭರತೇಶ್ವರ ಚರಿತೆ ರಚನೆಯಾದ ಮೇಲೆ ಅದರಲ್ಲಿ ಬರುವ ಕೆಲವು ವಾಕ್ಯಗಳು ಜಿನ ಪುರಾಣಕ್ಕೆ ವಿರೋಧವಾಗಿಯೆಂಬ ವಿಚಾರವಾಗಿ ಪಟ್ಟಾಚಾರ್ಯರೊಡನೆ ಸಂವಾದ ನಡೆಯಿತು. ರತ್ನಾಕರ 'ಆತ್ಮಜ್ಞಾನಿಗೆ ಜಾತಿಕುಲಮಾವುದಾದೊಡಂ ಸಮಮೆಂದು ಲಿಂಗಮಂ ಕಟ್ಟಿಕೊಂಡು ವೀರಶೈವ ಶಾಸ್ತ್ರಂಗಳಂ ಬಸವ ಪುರಾಣಂ ಮೊದಲಾಗಿ ಮಾಡಿ ಕೆಲವು ದಿನದಂ ಮೇಲೆ' ಮತ್ತೆ ಜಿನಮಾರ್ಗ ನಂಬಿ ನಡೆದನೆಂಬ ನಂಬಿಕೆಯಿದೆ. ಇದಲ್ಲದೆ ಸೋಮೇಶ್ವರ ಶತಕದ ಪ್ರಾಚೀನ ತಾಳಪತ್ರ ಪ್ರತಿಯಲ್ಲಿ ರತ್ನಾಕರನೇ ವೈರಾಗ್ಯಬಂದು ಪರದೀಕ್ಷೆ ತಳೆದಾಗ ಸೋಮೇಶ್ವರ ಶತಕವನ್ನು ರಚಿಸಿದನೆಂದು ತಿಳಿಸುವ ಪದ್ಯವೊಂದಿದೆ. ಇವು ಚರ್ಚಾಸ್ಪದ ಸಂಗತಿಗಳು.

ಆದರೆ ವೀರಶೈವಕ್ಕೆ ಮತಾಂತರ ಗೊಂಡುದನ್ನು ಮಾನ್ಯ ಮಾಡುವುದಕ್ಕೆ ಪೋಷಕವಾಗಿ, ಇತ್ತೀಚಿಗೆ ದೊರೆತು ಅಚ್ಚಾಗಿರುವ ರತ್ನಾಕರನ ಹಾಡುಗಳಲ್ಲೂ ಒಂದು ಹಾಡು ಮತಾಂತರವನ್ನು ಪ್ರಸ್ತಾಪಿಸಿದೆ. 'ತ್ರಿಜಗತ್ಸ್ವಾಮಿ ಜಿನೇಂದ್ರಸಿದ್ಧ ಶಿವಲೋಕಾರಾಧ್ಯ ಸರ್ವಜ್ಞ ಶಂಭು' ಎಂಬ ಪದ್ಯ ರತ್ನಾಕರನ ಸಮನ್ವಯ ದೃಷ್ಟಿಯನ್ನೂ 'ಶಾಸ್ತ್ರಂ ಬಂದಡೆ ಸೈರಣೆ ನಿಗರ್ವಂ ಮೇಲ್ಪಾತು' ಎಂಬ ಪದ್ಯ ಆತನ ವಿನಯ ಪ್ರೇರಿತ ಸುಹೃದ್ ದೃಷ್ಟಿಯನ್ನೂ ಸಾರುತ್ತವೆ.

ರತ್ನಾಕರ ಕಲಿತವರಿಗೆ ಕಲ್ಪವೃಕ್ಷ, ಕಲಿಯದವರಿಗೆ ಕಾಮಧೇನು. ಇವನ ಸಮಗ್ರ ಕೃತಿಗಳು ಕನ್ನಡದಿಂದ ಹಿಂದಿ ಮರಾಠಿ ಇಂಗ್ಲೀಷ್ ಗುಜರಾತಿ ಮೊದಲಾದ ಭಾಷೆಗಳಿಗೆ ತರ್ಜುಮೆಯಾಗಿ ಮೆಚ್ಚುಗೆ ಪಡೆದಿವೆ. ತನ್ನ ಕಾವ್ಯಶಕ್ತಿಯ ಬಗ್ಗೆ ವಿಶ್ವಾಸವಿದ್ದ ಕವಿ ಅದನ್ನು ಹೇಗೆ ಸದ್ವಿನಿಯೋಗಿಸಿಕೊಳ್ಳಬೇಕೆಂಬುದರ ಬಗ್ಗೆ ಸ್ಪಷ್ಟ ನಿಲುವು ಇದ್ದವನು, 'ಕವಿತಾಶಕ್ತಿಯೆ ಕಲ್ಪವಲ್ಲಿಯದನಾಸದ್ಧರ್ಮ ಮೆಂದೆಂಬ ಮೇರುವಿನೋಳ್' ಚಿತ್ತ ಬೇಕೆಂದು ಹೇಳುತ್ತಾನೆ.

ರತ್ನಾಕರ ಕವಿ ಮೂರು ಶತಕ ಕಾವ್ಯಗಳನ್ನು ರಚಿಸಿದ್ದಾನೆ; ತ್ರಿಲೋಕ ಶತಕ, ರತ್ನಾಕರ ಶತಕ ಮತ್ತು ಅಪರಾಜಿತ ಶತಕ. ಇವುಗಳೆಲ್ಲ ಸಪಾದ ಶತಕಗಳು, ಪ್ರತಿಯೊಂದು ಶತಕದಲ್ಲೂ 128 ಪದ್ಯಗಳಿವೆ. ತ್ರಿಲೋಕ ಶತಕ ಕಂದ ಪದ್ಯಾತ್ಮಕವಾಗಿದ್ದು ಉಳಿದೆರಡು ಶತಕಗಳು ವೃತ್ತಪದ್ಯಾತ್ಮಕವಾಗಿವೆ. ರತ್ನಾಕರ ಶತಕದಲ್ಲಿನ ಪದ್ಯಗಳಲ್ಲಿ ಕೆಲವು ಶಾರ್ದೂಲ ವಿಕ್ರೀಡಿತ ವೃತ್ತದಲ್ಲಿಯೂ ಮತ್ತೆ ಕೆಲವು ಮತ್ತೇಭವಿಕ್ರೀಡಿತದಲ್ಲಿಯೂ ಇವೆ. ಅಪರಾಜಿತ ಶತಕದಲ್ಲಿನ ಪದ್ಯಗಳಲ್ಲಿ ಕೆಲವು ಉತ್ಪಲಮಾಲಾವೃತ್ತದಲ್ಲಿಯೂ ಮತ್ತೆ ಕೆಲವು ಚಂಪಕಮಾಲಾದಲ್ಲೂ ಇವೆ.

ರತ್ನಾಕರನ ಮೂರು ಶತಕಗಳೂ ದ್ರಾಕ್ಷಾಪಾಕದಂತಿವೆಯೆಂಬುದು ನಿಜವಾದರೂ ತ್ರಿಲೋಕಶತಕ ತೀರ ಸಾಧಾರಣವಾದ ಅಕಾವ್ಯವಾಗಿದೆ. ಇದಕ್ಕೆ ಕಾರಣ ಅದರ ವಸ್ತು. ಅದರಲ್ಲಿ ತ್ರಿಲೋಕಾಕೃತಿಯನ್ನು, ಅಂದರೆ ಜೈನಧರ್ಮಾನುಸಾರವಾದ ಭೂಗೋಳ ರಚನೆಯನ್ನು ನಿರೂಪಿಸಿದೆ. ಇಲ್ಲಿ ಬರುವ ರಜ್ಜುಗಿಜ್ಜುಗಳ ಉಜ್ಜುಗದಲ್ಲಿ ಓದುಗನಿಗೆ ರುಚಿ ಹತ್ತುವುದಿಲ್ಲ. ರತ್ನಾಕರ ಶತಕದಲ್ಲಿ ವೈರಾಗ್ಯ, ನೀತಿ, ಆತ್ಮವಿಚಾರಗಳು ಬೋಧಪ್ರದವಾಗಿ ಪ್ರತಿಪಾದಿತವಾಗಿವೆ. ಕೆಲವು ಜೈನ ಕಾವ್ಯಗಳು ಜೈನ ಧರ್ಮದ ಪರಿಭಾಷೆಯ ಹೊರೆಯೇರಿರುವುದರಿಂದ ಅಲ್ಲಿನ ವಿಷಯ ಅಗ್ರಹ್ಯವಾಗಲು ಕಾರಣವಾಗಿವೆ, ಬಹಶಃ ಅಂಥ ಶಾಸ್ತ್ರ ಸಂಗತಿಗಳನ್ನು ಸುಲಭಗೋಳಿಸಿ ಎಲ್ಲರಿಗೂ ನಿಲುಕುವಂತೆ ಮಾಡಲು ಸಾಧ್ಯವಿಲ್ಲವೆಂಬ ಭಾವನೆ ಬರಬಹುದು. ರತ್ನಾಕರ ಅದನ್ನು ಅಲ್ಲಗಳೆಯುವಂತೆ ಮಾಡುತ್ತಾನೆ. ತತ್ವವನ್ನೂ ಯಾವ ತಿಣುಕಾಟಕ್ಕೂ ಎಡೆಯಿಲ್ಲದಂತೆ ತಿಳಿಗೊಳಿಸುತ್ತಾನೆಂಬುದಕ್ಕೆ 'ತತ್ವಪ್ರೀತಿಮನಕ್ಕೆ ಪುಟ್ಟಲದು' ಎಂಬಂಥ ಪದ್ಯಗಳನ್ನು ಉದಾಹರಿಸಬಹುದು, ಜೈನರಲ್ಲಿ ಬರುವ ರತ್ನತ್ರಯದ ಕಲ್ಪನೆಯನ್ನು ಇಲ್ಲಿ ಸುಲಭವಾಗಿ ಸರಳೀಕರಿಸಿದ್ದಾನೆ. ಕನ್ನಡ ಕಾವ್ಯಾಭ್ಯಾಸಿಗಳಿಗೆ ಜೈನ ಕಾವ್ಯಗಳ ವ್ಯಾಸಂಗ ಕಾಲದಲ್ಲಿ ಎದುರಾಗುವ ಕರ್ಮಸಿದ್ಧಾಂತವನ್ನು ರತ್ನಾಕರ ಮನೋಜ್ಞವಾಗಿ ಹೇಳಿ ಮನವರಿಕೆ ಮಾಡಿಸುತ್ತಾನೆ, 'ಬೂರಂವಾರಿಯೊಳಳ್ದ' ಎಂಬ ಪದ್ಯವನ್ನು ನೋಡಬಹುದು. ಸರಿಯಾದ ಉಚಿತರೀತಿಯ ಜೀವನ ನಡಸಿದವರು ಸಾವಿಗಂಜುವ ಅಗತ್ಯವಿಲ್ಲ. ಶ್ರಾವಕ (ಗೃಹಸ್ಥ) ನ ಕಾರ್ಯಗಳನ್ನು ನಿರ್ವಂಚನೆಯಿಂದ ನಿರ್ವಹಿಸಬೇಕು; ದಾನಕ್ಕಿಲ್ಲ, ತಪಕ್ಕಿಲ್ಲ, ಮತ್ತು ಸಾವಿಂಗಂಜಲದೇಕೆ ಎಂಬ ಪದ್ಯಗಳನ್ನು ಹೆಸರಿಸಬಹುದು.

ಇವೆಲ್ಲಾ ಧಾರ್ಮಿಕ ಸಂಗತಿಗಳನ್ನು ಹೃದ್ಯವಾಗಿ ಚೊಕ್ಕವಾಗಿ ನಿರೂಪಿಸಿದನೆಂಬ ಮಾತಿಗೆ ಉದಾಹರಣೆಗಳಾದುವು. ಧರ್ಮಪಥ ಭ್ರಷ್ಟನಾದೆನೆಲ್ಲಾ ಎಂದು ಕೊರಗಿ ಕರಗಿ ಹರಿದ ಕವಿ ಮನವನ್ನು ಕನ್ನಡಿಸುವ ಪದ್ಯಗಳು ನಮಗೆ ಇನ್ನೂ ಪ್ರಿಯವಾಗುತ್ತವೆ; ನಾನಾ ಗರ್ಭದಿ ಪುಟ್ಟಿ,ಹಾಗೂ ಸ್ತ್ರೀಯಂ ಮಕ್ಕಳನೆಂತಗಲ್ವೆ ಎಂಬ ಪದ್ಯಗಳು ಸಾಕ್ಷಿ. ಲಜ್ಜೆ ಸಂಕೋಚಗಳಿಲ್ಲದೆ ತನ್ನ ನಡೆ ನುಡಿಗಳ ನಡಾವಳಿಯನ್ನು ನಿರ್ದಾಕ್ಷಿಣ್ಯವಾಗಿ ತಾನೇ ಪರಾಂಬರಿಸಿ ಅದರ ಹುಳುಕುಗಳನ್ನು ಹೊರಗೆಳೆದು ನೇಯುತ್ತಾನೆ:

ಎತ್ತೆತ್ತಂ ಲತಾಂಗಿಯರ್ಸುಳಿದರತ್ತತ್ತಾಡುಗುಂ ಕಣ್ಗಳೆ
ತ್ತೆತ್ತಂ ಕಾಮಿನಿಯರ್ಮೊಗಂದೆಗೆದರತ್ತತ್ತೊಂದುಗುಂಜಿಹ್ವೆಮ
ತ್ತೆತ್ತೆತ್ತಂ ಸರಿಮಿಂಡಿಯರ್ತೆಗೆದರತ್ತತ್ತೆಯ್ದುಗುಂ ಬುದ್ಧಿ ನಿ
ಮ್ಮತ್ತಂ ಬಾರದು ಕೆಟ್ಟೆನೇವೆನಕಟಾ ರತ್ನಾಕರಾಧೀಶ್ವರಾ ॥

ಮದವೆದ್ದಾನೆಗೆ ಕಲ್ಲಪೊಯ್ವುದಿನಿಜೇ ಮೆಯ್ತೀಟೆಗಂ ಕಜ್ಜಿಗಂ
ಬದಿಯಂ ತೋಡುವುದೊಳ್ಳಿತಲ್ತು ಬಗೆವಂದಾತ್ಮಂಗೆ
ನಾರೀರತಂ ।
ಮುದವಲ್ತಾದೊಡಮಂತದಂ ಬಿಡಲಶಕ್ಯಂ ಬಿಟ್ಟೋಡಿ
ಯೌವನೋ
ನ್ಮದದುದ್ರೇಕ ವೆಡಂಗದೇವೆನಕಟಾ ರತ್ನಾಕರಾಧೀಶ್ವರಾ ॥

ಪೆರರಂ ಪೇಳ್ದೊಡೆ ನೋವರಾನೆನಗೆ ಪೇಳ್ವೆಂ ಕಾಮಿನೀ
ಮೂತ್ರದೊ
ಜ್ಜರ ಮ್ನೆಯ್ಯಂ ಲತೆಯೆಂದು ಮಾಂಸಕುಚಮಂ
ಹೇಮಾಬ್ಜಮೆಂದೆಂದು ನೆ ।
ತ್ತರನುಂಡಾ ತುಟಿಯಂ ಸುಧಾರುಚಿಯೆನುತ್ತಾಂ
ಬಳ್ದುದು ಸಾಲದ
ನ್ಯರನೊಯ್ದೆಂ ಕವಿಯೊ ವಲಂ ಕಪಿಯೊ ನಾಂ
ರತ್ನಾಕರಾಧೀಶ್ವರಾ ॥

ಹೆಣ್ಣಿನ ಲಾವಣ್ಯವನ್ನು ಅಡಿಯಿಂದ ಮುಡಿಯತನಕ ಎಡೆಬಿಡದೆ ಕಣ್ಣಿಗೆ ಕಟ್ಟುವಂತೆ ಚೆಲುವು ತೊಟ್ಟಿಕ್ಕುವಂತೆ ಭರತೇಶ ಚರಿತೆಯಲ್ಲಿ ಬಣ್ಣಿಸಿದ ಕವಿಯ ಉದ್ಗಾರಗಳಿವು. ಅಂದಿನ ಭೂಮಿಕೆಯಿಂದ ಲಂಘಿಸಿ ಬೇರೆ ನೆಲೆಯಲ್ಲಿ ನಿಂತ ಕವಿ ಪರಿತಪಿಸುವ ಜುಗುಪ್ಸಾ ಭಾವವಿಲ್ಲಿದೆ. ಮತ್ತೊಬ್ಬರನ್ನು ಅಂದು ಪ್ರಯೋಜನವಿಲ್ಲವೆಂದು ತನಗೆ ತಾನೇ ಆತ್ಮಗತವಾಗಿ ಹೇಳಿ ಗತ ಬದುಕಿಗೆ ನೊಂದು ನುಡಿಯುತ್ತಿದ್ದಾನೆಂದು ತೋರುತ್ತದೆ. ಈ ವಿವರಣೆಗಳು

ಭಾವ ತೀವ್ರತೆಯಿಂದ ಸ್ಪಂದಿಸುತ್ತವೆ. ನಿನ್ನಂ ಧ್ಯಾನಿಪಂಗೆ ಮುಕ್ತಿ ಯರಿದೇ, ಕ್ಷಮೆ ಮಾಳ್ಪಂತೆ ವಿರೋಧಮೇಂ ಕುಡುವುದೆ ಸಂತೋಷ-ಮಂ, ನಿನ್ನಂ ಚಿಂತಿಸುತಿರ್ಪವಂಗೆ ಪರದೇಶಂ ತನ್ನ ದೇಶಂ, ಅಳ್ಕರಿಂ ಪಡೆದ ರಾಜ್ಯಶ್ರೀಯನೇನಂತ್ಯದೊಳ್ ಕೊಂಡೊಯ್ದಪ್ಪನೆ, ದೊರೆಯೇನಂ ಪಿಡಿದಿರ್ಪನಂತದನೆ ಲೋಕಂ ಮೆಚ್ಚುಗುಂ, ಭೂನಾಥರ್ಕಳ ಬಾಳ್ಕೆ ಚಿತ್ತಕೆ ಸದಾ ತಳ್ಳಂಕ, ಎಲೆಲೇ ಉಳ್ಳುದನಾಡೆ ಕೊಳ್ಳಿಗೊಳು ವನೋಣಿಸು—ಮುಂತಾದ ಪದ್ಯಗಳು ಸಂದರ್ಭದ ಕಾಣಿಸಿಂದ ಅರ್ಥವಿಸ್ತಾರ ಪಡೆದು ನೆನಪಿನಲ್ಲಿ ನಿಲ್ಲುತ್ತವೆ.

ಅಪರಾಜಿತ ಶತಕದಲ್ಲಿ ಆಧ್ಯಾತ್ಮ—ವೇದಾಂತದ ವಿಚಾರಗಳಿದ್ದರೂ ಅವು ಆನುಷಂಗಿಕವಾಗಿ ಪರಿಣಮಿಸಿ ಕಾವ್ಯ ಗುಣಕ್ಕೆ ಪಟ್ಟ ಕಟ್ಟಿವೆ. ಇಲ್ಲಿನ ಲಲಿತವಾದ ಪದಗುಂಫನ ಶ್ರುತಿಮಧುರವಾಗಿದೆ. ವಿಷಯ ನಿರೂಪಣೆ ಸ್ಫುಟವಾಗಿದ್ದು ಅರ್ಥಪೂರ್ಣ-ವಾಗಿದೆ. "ಅರಸುವೆನೆನ್ನ ದೇಹದೊಳಗೆನ್ನನೆ ಕಾಣ್ಬೆನಮೂರ್ತ ಸಿದ್ಧನಂ ಪೊರಗೊಳಗೆಲ್ಲಮಂ ತೊಳೆದು ತಿಂಗಳ ಪುತ್ಥಳಿ ಮಾಡಿ ನೋಡುವೆ"ನೆಂದು ಕವಿ ಲೋಕ ಸಂತೆಯ ಚಿಂತೆ ಮರೆತು ಆತ್ಮನ ಅನಂತ ಸುಖದಲ್ಲಿ ಲೀನವಾಗುತ್ತಾನೆ. ರತ್ನಾಕರವರ್ಣಿ ಜೈನ ಧರ್ಮದ ಸಿದ್ಧಾಂತ ಸಾರವನ್ನು ಈ ಅಪರಾಜಿತ ಶತಕದ ಮೊದಲ ಹದಿನಾಲ್ಕು ಪದ್ಯಗಳಲ್ಲಿ ತುಂಬಿದ್ದಾನೆ. ಅದು ಸಂಕ್ಷಿಪ್ತ ಬ್ರಹ್ಮಾಂಡ, ಸಾಸುವೆಯಲ್ಲಿ ಸಾಗರ ತುಂಬಿ ಕೊಟ್ಟ ಕವಿಕಾರ್ಯ. ಅನಂತರ ಲೋಕದ ಜನರ ಸ್ವಭಾವ ಪರಿಶೀಲನೆಯನ್ನು ಸ್ವಾನುಭವದ ಒರೆಗಲ್ಲಿನಲ್ಲಿ ನಡಸುತ್ತಾನೆ:

ತನುಪಗೆಯೆಂಬವಂ ವ್ರತಯುತಂ ವಿಷಯಂ ವಿಷಮೆಂದು
ಬಿಟ್ಟವಂ
ವಿನುತ ತಪಸ್ವಿ ಕೋಪವಿಡಿದಿರ್ದ ಕಷಾಯಕೆ
ದೂರನಾದ ಶಾಂ ।
ತನೆ ಸಕಲಾತ್ಮ ರಕ್ಷಕನನಿತುಂ ಗುಣಸಂತತಿಗೂಡಿ ತತ್ವ ಭಾ
ವನೆಯೊಳೆ ಬಾಳ್ವನೇ ಶಿವನವಂಗೆಣೆಯಾರಪರಾಜಿತೇಶ್ವರಾ ॥

ಮೈಮೇಲಿನ ಮೋಹವಿರುವ ತನಕ ಮಾನವನ ಬದುಕು ಯಮನ ಕೈಗೆ ಸಿಕ್ಕಿದ ಹಕ್ಕಿಯ ಹಾಗೆ ಕಂಟಕದ ಮಡಿಲಲ್ಲಿ ಇರಬೇಕು. ವಿಷಯಲಂಪಟತೆಯಿರುವಾತ ಬೆಂಕಿಯ ಕುಂಡದಲ್ಲಿ ಬಿದ್ದು ಚುಯ್ಯನೆ ಬೆಂದು ಬೂದಿಯಾದಂತೆ. ಅಂಥ ದರಿದ್ರ ಚೇತನನೂ ಅದರ ಕಷಾಯೋತ್ಪಾಟನೆ ಮಾಡಿದರೆ ಕರ್ಮದ ಅನಾವರಣ ಮಾಡಿ ನಿತ್ಯ ಸತ್ಯದ ಸ್ವರೂಪ ನೋಡಲು ಸಶಕ್ತನಾಗುತ್ತಾನೆ. ಅದರ ಸರಳ ಪಾಠವನ್ನು, ವಿಧಾನವನ್ನು ಕವಿ ಇಲ್ಲಿ ತಿಳಿಸಿಕೊಟ್ಟಿದ್ದಾನೆ. ತನ್ನ ನೋಟವನ್ನು ಆತ್ಮನಲ್ಲಿಟ್ಟು ಯಾರು ಬಾಳುತ್ತಾರೋ ಆ ಧೀರ ಬಹು ಕರ್ಮವಿದ್ದರೂ ಕ್ಷಣದಲ್ಲಿ ಅದನ್ನು ಪುಡಿ ಮಾಡುತ್ತಾನೆ. ಕಷಾಯ ಬಿಡದೆ, ಇಂದ್ರಿಯ ಸುಡದೆ, ತೃಷ್ಣೆ ಪರೀಷಹ ಗೆಲ್ಲದೆ ಸುಮ್ಮನೆ 'ಕರ್ಮ ಶತ್ರುವೇ ಬಿಡು ಬಿಡು ಪೋಗು ಎನಲ್ ನಲ್ ನುಡಿಗೆ ಪೋ-ದಪುದೇ ?'.

ತನ್ನೊಳೆ ತನ್ನ ನೋಳ್ಪ ಋಷಿಗನ್ಯರ ನೋಟಮದೇಕೆ
ಚಿದ್ದುಣೋ
ತ್ಪನ್ನ ಸುಧಾನ್ನಮುಣ್ಬ ಮುನಿಗೊಳ್ಳುಣಿಸೆಂಬ
ವಿವಕ್ಷೆಯೇಕೆ ಸಿ ।
ದ್ಧಂ ನಮ ಎಂಬ ವಾಕ್ಯಮಿರೆ ಬೇರ್ನುಡಿಯೇಕೆ ನಿಜಾತ್ಮ
ರೂಪದೊಳ್
ನಿನ್ನೊಡನಾಡುವಂಗುಳಿದ ಗೋಷ್ಠಿಗಳೇಕಪರಾಜಿತೇಶ್ವರಾ ॥

ಸೊರ್ಕಿ ಶರೀರನಾರಿ ಧನವೆನ್ನವಿವೆಂದವರಲ್ಲಿ ಕಣ್ಮನಂ
ಸಿರ್ಕಿ ವಿವೇಕಿಗಳ್ನುಡಿದ ಧರ್ಮವನೊಲ್ಲದೆ
ಕೊಳಕೊರ್ಬಿನೊಳ್ ।
ಕರ್ಕಶವೃತ್ತಿಯೊಳ್ನಡೆವ ಕಾಮುಕ ರಂತಕನೊಯ್ವ
ಕಾಲದೊಳ್
ಮರ್ಕಟನಂತೆ ಪಲ್ಗಿರಿವರೇತರ ಬಾಳಪರಾಜಿತೇಶ್ವರಾ ॥

ಇಲ್ಲಿನ ಬಹುಪಾಲು ಜೀವನ ವಿವೇಕದ ಮಾತುಗಳು ತನಗೆ ತಾನೆ ಹೇಳಿಕೊಂಡ ಧಾಟಿಯಲ್ಲಿವೆ. ನಿನ್ನನೆ ನಂಬು ನಂಬಿದಡೆ ನನ್ನನೆ ನಂಬಿದೆ, ಆವನುಮಕ್ಕೆ ನಿಮ್ಮಡಿಗಳಂ ನೆನೆವಾತನೆ ನನ್ನ ಬಂಧು ಸದ್ಭಾವದೆ ಪೂಜಿಪಾತನೆ ಸಖಂ ನನ್ನ ಮೆಚ್ಚಿನಾ ದೇವನ ನಚ್ಚಿದಾತನೆನಗನ್ಯನೆ— ಎಂಬ ಭಾವದ ನಿಲುಗಡೆ ಪರಿಭಾವನೆಗೆ ತಕ್ಕುದಾಗಿದೆ. ಕವಿಯಲ್ಲಿ ಕವಿದಿದ್ದ ಚಿತ್ತ (ಜ) ಚಾಂಚಲ್ಯಗಳೆಲ್ಲ ಬತ್ತಿ, ಒತ್ತಿ ತರುಂಬಿನಿಂದ ಸಂಶಯದ ಏರುಪೇರುಗಳೆಲ್ಲ ಅಡಗಿ ಅಸ್ಖಲಿತ ಮೇರು ಸ್ಥಿರತೆ ಪ್ರಾಪ್ತವಾಗಿ ವಿಶ್ವಾಸ ಸಂಪೂರ್ಣವಾಗಿ ಕಾಣಿಸಿಕೊಂಡಾಗ ಹಾಡುವ ಆನಂದ ಗೀತೆ 'ರಂಭೆಯೆ ಬಂದು ತಾಂ ಕೊರ-ಲನಪ್ಪಿದೊಡಂ ಪುಳಕಂಗಳಾಗದೆ......ಬುದ್ಧಿ ಕಲಂಕದೇ ಶಿಲಾಸ್ತಂಭವೆನಲ್ಕೆಯೆನ್ನೊಳಗೆ ನಿಲ್ವೆನಪರಾಜಿತೇಶ್ವರಾ' ಎಂಬುದು. ಹೀಗೆ 'ಪಗರಣಪಾಟಮೆಂದು ಜಗಮಂ ಸಲೆ ನೋಡುವ' ಸ್ಥಿತಪ್ರಜ್ಞತ್ವ ಪಡೆದ ಮೇಲೆ ಹೆದರಿಕೆಯಿಲ್ಲ. ರವಿನಡೆದತ್ತೆಲ್ಲ ಬೆಳಗಲ್ಲದೆ ಕತ್ತಲೆಯಿಲ್ಲ. ಆತ್ಮ ತತ್ವ ಮನದಲ್ಲಿ ನಟ್ಟು, ನುಡಿವಾತನ ಮಾತುಗಳೆಲ್ಲ ಮೋಕ್ಷದ ಮಾರ್ಗವೆ. ನೋಡುವ ನೋಡಿ ಲಾಲಿಸುವ, ಅವನ ಬರ್ದುಂಕೆ, ಚೆಲುವರ ಚೆಲ್ವ—ಮುಂತಾದ ಪದ್ಯಗಳು ಕಾವ್ಯದ ಸ್ಪರ್ಶದಿಂದ ಮನಸೆಳೆಯುತ್ತವೆ; ನಿನ್ನ ಪದಾಬ್ಜ ಭಕ್ತಿ, ಮೊನ್ನೆ ಬರುತ್ತೆ ಕಂಡೆನವನಂ, ಪೇಳವೆ ವೇಳೆ ವೇಳೆಗಿಳಿವಾಯು—ಎಂಬ ಪದ್ಯಗಳು ಮನೋಹರವಾದ ಶೈಲಿಗೂ ಪರಿಭಾವನಾರ್ಹ ವಿಚಾರಕ್ಕೂ ಉತ್ತಮ ನಿದ-ರ್ಶನವಾಗಿವೆ. ರತ್ನಾಕರ ಶತಕ ಮತ್ತು ಅಪರಾಜಿತೇಶ್ವರ ಶತಕಗಳ ನಿರೂಪಣೆಯ ವಿನ್ಯಾಸ ಒಂದು ಜೀವಂತವಾದ ವ್ಯಕ್ತಿತ್ವ ಹಂತಹಂತವಾಗಿ ಬೆಳೆದ ಕ್ರಮವನ್ನು ಪರಿಚಯ ಮಾಡಿಕೊಡುತ್ತವೆ. ಕವಿಯ ಜೀವನಾನುಭವದಂತೆ ಸೂಕ್ಷ್ಮ ಸಂವೇದನೆಗಳು ಕೂಡ ಹಲವಾರು ಪದ್ಯಗಳಲ್ಲಿ ಸೊಗಸಾಗಿ ಹರಳುಗೊಂಡಿವೆ. ಮತೀಯ ಮಿತಿಗಳನ್ನು ಕತ್ತರಿಸಿ ಸರ್ವಜನಗ್ರಾಹ್ಯವಾಗುವ ಇಲ್ಲಿನ ಪದ್ಯಗಳ ಪ್ರಾಂಜಲ ನಿರೂಪಣೆ ಬೆಲೆಯುಳ್ಳದ್ದಾಗಿದೆ. ಆತ್ಮಕಥನದ ವೈಹಾಳಿಗತಿಯಲ್ಲಿ ಬಿಚ್ಚಿಕೊಳ್ಳುವ ಈ ಎರಡು ಶತಕಗಳು ಅತ್ಯಂತ ಆತ್ಮೀಯ ರೀತಿಯಲ್ಲಿ ಜೀವನದ ಸಮೀಕ್ಷೆಯನ್ನು ನಡಸಿದಂತಿವೆ, ಕವಿಸ್ವಭಾವದ

ಪದರುಗಳನ್ನು ತೆರೆದಿರಿಸಿದಂತಿವೆ. ಕನ್ನಡ ಕಾವ್ಯಗಳು ಹೀಗೆ ಆತ್ಮ ನಿಷ್ಠ ಭಾವಗಳನ್ನು ಸಮಾವೇಶಗೊಳಿಸಿದ್ದರೆ ಅವುಗಳ ಗುಣಮಟ್ಟ ಮೇಲೇರುವ ಮಾತಂತಿರಲಿ, ಓದುಗರಿಗೆ ಹೊಸ ಅನುಭವ ಲಾಭ ವೆಂತೂ ಪ್ರಾಪ್ತವಾಗುತ್ತಿತ್ತು.

ಕನ್ನಡ ಶತಕ ಕಾವ್ಯಗಳಲ್ಲೇ ಅತ್ಯಂತ ಜನಪ್ರಿಯ ಕೃತಿ ಸೋಮೇಶ್ವರ ಶತಕ. ಅದರ ಸೂಕ್ತಿ ಸಮಾನ ಉಕ್ತಿಗಳನ್ನು ಗಾದೆ ಗಳಂತೆ ಉದಾಹರಿಸುತ್ತಾರೆ. ಪುಲಿಗೆರೆಯ ಸೋಮಕವಿಯಿಂದ ರಚಿತವಾದುದೆಂದು ತಿಳಿಯಲಾದ ಈ ಶತಕ ಸುಮಾರು ಹದಿನೈ ದನೆಯ ಅಥವಾ ಹದಿನಾರನೆಯ ಶತಮಾನದ್ದೆಂದು ತೋರುತ್ತದೆ.

ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ
ಕೆಲವಂ ಮಾಳ್ಪವರಿಂದ ಕಂಡು ಕೆಲವಂ ಸುಜ್ಞಾನದಿಂ
ನೋಡುತಂ ।
ಕೆಲವಂ ಸಜ್ಜನಸಂಗದಿಂದಲರಿಯಲ್ ಸರ್ವಜ್ಞನಪ್ಪಂ ನರಂ
ಪಲವುಂ ಪಳ್ಳ ಸಮುದ್ರವೈ ಹರಹರಾ ಶ್ರೀ
ಚೆನ್ನಸೋಮೇಶ್ವರಾ ।

ರವಿಯಾಕಾಶಕೆ ಭೂಷಣಂ ರಜನಿಗಾಚಂದ್ರಂ
ಮಹಾಭೂಷಣಂ
ಕುವರಂ ವಂಶಕೆ ಭೂಷಣಂ ಸರಸಿಗಂಭೋಜಾತಗಳ್
ಭೂಷಣಂ ।
ಹವಿ ಯಜ್ಞಾಳಿಗೆ ಭೂಷಣಂ ಸತಿಗೆ ಪಾತಿವ್ರತ್ಯವೇ
ಭೂಷಣಂ
ಕವಿಯಾಸ್ಥಾನಕೆ ಭೂಷಣಂ ಹರಹರಾ ಶ್ರೀ
ಚೆನ್ನಸೋಮೇಶ್ವರಾ ॥

ಈ ಶತಕವನ್ನು ಶುದ್ಧ ಕಾವ್ಯವೆಂದು ಹೇಳುವುದಕ್ಕೆ ಹಿಂಜರಿಕೆ ಯಾಗುತ್ತದೆ. ಪ್ರತಿ ಸಾಲೂ ಚಪ್ಪರಿಸಿ ಮೆಲಕು ಹಾಕುವಂತಿರು ವುದು ನಿಜವಾದರೂ ಅವೆಲ್ಲಾ ನೀತಿಬೋಧೆಯನ್ನು ಗರ್ಭದಲ್ಲಿರಿಸಿ ಕೊಂಡು ಪ್ರಸವಿಸಿದ ಪಂಕ್ತಿಗಳಾಗಿವೆ. ಕಾವ್ಯದಲ್ಲಿ ನೀತಿಯ ಸ್ಥಾನ ಏನು, ಯಾವುದು ಎಂಬ ವಿಚಾರದಲ್ಲಿ ವಿಮರ್ಶಕರು ಸಾಕಷ್ಟು ಚರ್ಚಿಸಿದ್ದಾರೆ. ಕಾವ್ಯದಲ್ಲಿ ನೀತಿಗೆ ಪ್ರವೇಶವಿಲ್ಲವೆಂದಲ್ಲ. ಹಾಗೆ ನೋಡುವುದಾದರೆ ಎಲ್ಲ ಕಾವ್ಯಗಳ ಅಂತರ್ಯದಲ್ಲೊಂದು ಆಚಾರ, ಸಂಹಿತೆ ಕೂತೇ ಇರುತ್ತದೆ. ಆದರೆ ಪ್ರಭು ಸಂಹಿತೆ—ಮಿತ್ರ ಸಂಹಿತೆಗಳಲ್ಲಿ ಬರುವುದಕ್ಕಿಂತ ಬೇರೆಯಾಗಿ ನೀತಿ ಕಾಂತಾಸಂಹಿತೆ ಯಾದ ಕಾವ್ಯದಲ್ಲಿ ಮೈದೋರಬೇಕಾಗುತ್ತದೆ. ಮುಖ್ಯವಾಗಿ ಅದರ ಅಭ್ಯಾಸ ಕಾಲದಲ್ಲಿ ಸಹೃದಯ ಸ್ಪಂದಿಸುವುದು ರಸಾನುಭವಕ್ಕೆ. ಸೋಮೇಶ್ವರ ಶತಕದಿಂದ ದೊರೆಯುವ ಅನುಭವ ಆ ಬಗೆಯದಲ್ಲ. ನೀತಿ ಧರ್ಮ ಪ್ರೇರಿತವಾದ ಪ್ರಚೋದಿತವಾದ ನಾಣ್ಣುಡಿಗಳು ಇಲ್ಲಿ ಗಟ್ಟಿಗೊಂಡಿವೆ. ಹಾಗೆಂದು ಈ ಕೃತಿಯನ್ನು ಅಪಮೌಲ್ಯ ಗೊಳಿಸಬೇಕೆಂದು ಅರ್ಥವಲ್ಲ. ಇದಕ್ಕಿರುವ ಪರಿಮಿತಿ ಲೋಕೋಪ ಯೋಗವನ್ನು ಕಡೆಗಣಿಸುವಂತಿಲ್ಲ. ನಿತ್ಯಜೀವನದ ಯಾವುದೇ ಸಂದರ್ಭಕ್ಕೂ ತಾರ್ಕಣೆಯಾಗುವ ಪದ್ಯಗಳು ಇದರಲ್ಲಿ ಸಾಲು ಗಟ್ಟಿವೆ:

ಉಡುರಾಜಂ ಕಳೆಗುಂದಿ ಪೆರ್ಚದಿಹನೇ ನ್ಯಗ್ರೋಧಬೀಜಂ
ಕೆಲಂ
ಸಿಡಿದುಂ ಪೆರ್ಮರನಾಗದೇ ಎಳೆಗರುಂ ಎತ್ತಾಗದೇ
ಲೋಕದೊಳ್ ।
ಮಿಡಿ ಪಣ್ಣಾಗದೆ ದೈವದೊಲ್ಮೆಯಿರಲಾ ಕಾಲಾನುಕಾಲಕ್ಕೆ
ತಾಂ ।
ಬಡವಂ ಬಲ್ಲಿದನಾಗನೇ ಹರಹರಾ ಶ್ರೀ ಚೆನ್ನಸೋಮೇಶ್ವರಾ ॥

ಮಡೆಯಂಗುತ್ತಮನು ವಿದ್ಯೆ ಬೆಟ್ಟ ಕುರುಡಂಗಂ ಮಾರ್ಗವೇ
ಬೆಟ್ಟ ಕೇಳ್
ಬಡವರಿಗೆಲ್ಲರ ವೈರ ಬೆಟ್ಟ ಜಡದೇಹಂಗುಜ್ಜುಗಂ ಬೆಟ್ಟ ಮು।
ಪ್ಪಡಸಿರ್ದಾತಗೆ ಪೆಣ್ಣು ಬೆಟ್ಟ ರುಣವೇ ಪೆರ್ಬೆಟ್ಟ
ಮೂಲೋಕದೊಳ್
ಕಡುಲೋಭಂಗಿಡೆ ಬೆಟ್ಟವೈ ಹರಹರಾ
ಶ್ರೀ ಚೆನ್ನಸೋಮೇಶ್ವರಾ ॥

ಇವುಗಳ ಮಹತ್ವ ಎಂದೂ ಮಾಸುವಂತಹುದಲ್ಲ. ಭಾಷಣ ದಲ್ಲಿ, ಸಂಭಾಷಣೆಯಲ್ಲಿ, ಚರ್ಚೆಗಳಲ್ಲಿ, ಬುದ್ಧಿವಾದ ಹೇಳುವಲ್ಲಿ— ಹೀಗೆ ಹಲವು ಸಂದರ್ಭಗಳಲ್ಲಿ ಇವು ನೆರವಿಗೆ ಬರುತ್ತವೆ. ಆದರೆ ಈ ಶತಕಗಳಿಂದ ಏನನ್ನು ನಾವು ನಿರೀಕ್ಷಿಸಬಹುದೆಂಬುದನ್ನು ಕವಿಯೇ ತನ್ನೊಂದು ಪದ್ಯದಲ್ಲಿ ತಿಳಿಸಿದ್ದಾನೆ:

ಮತಿಯಂ ಬುದ್ಧಿಯ ಜಾಣ್ಮೆಯಂ ಗಮಕಮಂ ಗಾಂಭೀರ್ಯಮಂ
ನೀತಿಯಾ
ಯತಮಂ ನಿಶ್ಚಲಚಿತ್ತಮುಂ ನೃಪವರಾಸ್ಥಾನೋಚಿತಾ
ರ್ಥಂಗಳಂ ।
ಅತಿಮಾಧುರ್ಯ ಸುಭಾಷಿತಂಗಳ ಮಹಾ ಸತ್ಕೀರ್ತಿಯಂ
ಬಾಳ್ಕೆಯಂ
ಶತಕಾರ್ಥಂ ಕೊಡದಿರ್ಪುದೇ ಹರಹರಾ
ಶ್ರೀಚೆನ್ನಸೋಮೇಶ್ವರಾ ॥

ಇದು ಭರತವಾಕ್ಯದಂತಿದೆ; ವಿವೇಕ, ಬುದ್ಧಿ, ಜಾಣ್ಮೆ, ಓದುವ ಒಳ್ಳೆಯ ಶೈಲಿ, ಗಾಂಭೀರ್ಯ, ನೀತಿ, ದೃಢಮನಸ್ಸು, ರಾಜಾಸ್ಥಾನಕ್ಕೆ ತಕ್ಕುದಾದ ಪಾಂಡಿತ್ಯ, ಬಹಳ ಇಂಪಾದ ವಾಕ್ಪಟುತ್ವ, ಮೇಲಾದ ಕೀರ್ತಿ, ಜೀವನ - ಇವೆಲ್ಲ ಶತಕದ ಅರ್ಥ ಹಿಡಿದವರಿಗೆ ದೊರೆಯ ದಿರದು.

ಕನಕದಾಸ ರಚಿತ 'ಹರಿಭಕ್ತಿಸಾರ' ಷಟ್ಪದೀ ರೂಪದ ಶತಕ. ಇದನ್ನು ಶತಕ ಕಾವ್ಯವೆಂದು ಪರಿಗಣಿಸಬಹುದೆ ಎಂದು ಚರ್ಚಿ ಸುವುದು ಅನಗತ್ಯ. ಪ್ರತಿ ಪದ್ಯವೂ ರಕ್ಷಿಸುನಮ್ಮನನವರತ ಎಂದು ಕಡೆಯಾಗುವುದು ಇದು ಶತಕವೆಂದು ಕಾವ್ಯನ್ಯಾಯಾಲಯ ತೀರ್ಪಿ ತ್ತಂತಿದೆ. ಹರಿಭಕ್ತಸಾರ ತೀರ ನೇರವಾಗಿ ಹರಿಯುವ ಭಕ್ತ

ಹೃದಯದ ಮೊರೆಯಸಾರ. ಅಕುಟಿಲವಾದ ಇಲ್ಲಿನ ಕಳಕಳಿ ಕರುಣೆ ಸಹಜತೆ ನಿರರ್ಗಳ ಗತಿ ಕಾವ್ಯದ ಸ್ಪರ್ಶದಿಂದ ಹೊಸ ಬೆಡಗು ಪಡೆದು ರೋಚಕವಾಗಿವೆ. ಕವಿ ಅನುಭವಿಸಿದ ಜೀವದ ಅನಿತ್ಯತಾ ಭಾವವನ್ನು ಓದುಗರಲ್ಲೂ ಮೂಡಿಸುವುದಲ್ಲದೆ, ತನ್ನಂತೆ ಅವರೂ ದೈವದ ಶರಣಾಗತಿದೆ ತಲೆಬಾಗುವಂತೆ ಪ್ರೇರೇಪಿಸುತ್ತದೆ. ಕಾವ್ಯದ ನಡಿಗೆಯಲ್ಲಿ ಲವಲವಿಕೆಯಿಗೆ. ಷಟ್ಪದಿಯೂ ಶತಕ ಕಾವ್ಯಗಳಿಗೆ ಹೇಗೆ ಉತ್ತಮ ಯಶಸ್ವೀ ಮಾಧ್ಯಮವಾಗಬಲ್ಲುದೆಂಬುದನ್ನು ಉಳಿದ ಕವಿಗಳಿಗೆ ಕನಕದಾಸನು ತೋರಿಸಿಕೊಟ್ಟಿದ್ದಾನೆ. ಶತಕ ಕಾವ್ಯಗಳಲ್ಲಿ ಸೋಮೇಶ್ವರ ಶತಕದಂತೆ ಹರಿಭಕ್ತಿಸಾರವೂ ಜನಪ್ರಿಯತೆಗಳಿಸಿದೆ:

ದೀನ ನಾನು ಸಮಸ್ತ ಲೋಕಕೆ
ದಾನಿ ನೀನು ವಿಚಾರಿಸಲು ಮತಿ
ಹೀನ ನಾನು ಮಹಾಮಹಿಮ ಕೈವಲ್ಯ ಪತಿ ನೀನು ।
ಏನಬಲ್ಲೆನು ನಾನು ನೆರೆ ಸು
ಜ್ಞಾನ ಮೂರುತಿ ನೀನು ನಿನ್ನ ಸ
ಮಾನರುಂಟೇ ದೇವ ರಕ್ಷಿಸು ನಮ್ಮನನವರತ ॥

ಎಂಬ ಪದ್ಯ ಆಬಾಲವೃದ್ಧರ ನಾಲಗೆಯ ಮೇಲೆ ನಲಿದಾಡಿದ, ಜನಾನುರಾಗ ಪಡೆದ ಪದ್ಯ. ಸ್ವಕೀಯ ಸಂಗತಿಗಳನ್ನು ಕವಿ ಕಾವ್ಯ ಪಾಕದಲ್ಲಿ ಹೇಗೆ ಕರಗಿಸಿ ಬೆಸುಗೆ ಹಾಕುತ್ತಾನೆಂಬುದನ್ನು ತಿಳಿಯಲು ಒಂದು ಉದಾಹರಣೆ :

ಪೇಳಲೆನ್ನಳವಲ್ಲವೀಯಮ
ನಾಳುಗಳು ನೆರೆಯಂಗದೇಶವ
ದಾಳಿಮಾಡುವರಕಟಕಟ ಸೆರೆಸೂರೆಗಳ ಪಿಡಿದು ।
ಕಾಳು ಮಾಡುವರಿನ್ನು ತನುವಿದು
ಬಾಳಲರಿಯದು ಕೋಟಿಯವರಿಗೆ
ಕೋಳು ಹೋಗದ ಮುನ್ನ ರಕ್ಷಿಸು ನಮ್ಮನನವರತ ॥

ಜನರ ಮೂಢ ರೂಢಿಗಳನ್ನು ಕವಿ ಬಹು ಪರಿಣಾಮಕಾರಿಯಾಗಿ ಖಂಡಿಸುತ್ತಾನೆ :

ಎಂಜಲೆಂಜಲು ಎಂಬರಾನುಡಿ
ಎಂಜಲಲ್ಲವೆ ವಾರಿ ಜಲಚರ
ದೆಂಜಲಲ್ಲವೆ ಹಾಲು ಕರುವಿನ ಎಂಜಲೆನಿಸಿರದೇ ।

ನೀತಿ ಭಕ್ತಿ ವೈರಾಗ್ಯಗಳನ್ನು ಈ ಶತಕ ಕಾವ್ಯ ಮನೋಜ್ಞವಾಗಿ ಚಿತ್ರಿಸುತ್ತದೆ.

ಸರ್ವಜ್ಞನ ಬಗೆಗೆ–ವಿಚಾರ, ಅವಿಚಾರ, ಅಪಪ್ರಚಾರ

ಲೇಖಕರು :
ಎಚ್. ದೇವೀರಪ್ಪ, ಎಂ.ಎ.,
ಬೆಂಗಳೂರು

ನಮ್ಮ ನಾಡಿನಲ್ಲಿ ಸುಮಾರು ನಾನೂರು ವರ್ಷಗಳ ಹಿಂದೆ ಪ್ರತಿಭಾಶಾಲಿಯೂ ಮಹಾಯೋಗಿಯೂ ಆದ ಒಬ್ಬ ವರಕವಿಯಿದ್ದ. ಆತನ ಹೆಸರು ವಿಳಾಸ ಯಾರಿಗೂ ಗೊತ್ತಿಲ್ಲ. ಆದರೆ ಆತನ ಸರ್ವಜ್ಞಾಂಕಿತ ವಚನಗಳು ನಾಡಿನಲ್ಲೆಲ್ಲಾ ಸುಳಿವ ಶಿವ ಶಾಸನಗಳಾಗಿವೆ. ಈವರೆಗೆ ಹಲವಾರು ಜನ ವಿದ್ವಾಂಸರು, ಕವಿಗಳು, ಸಂಶೋಧಕರು, ಇತರರು ಈ ವಚನಗಳ ಮೇಲೆ ನೂರಾರು ಲೇಖನಗಳನ್ನೋ, ಸಣ್ಣ ದೊಡ್ಡ ಪುಸ್ತಕಗಳನ್ನೋ ಬರೆದು ಪ್ರಕಟಿಸಿದ್ದಾರೆ. ಸರ್ವಜ್ಞ ಸುಭಾಷಿತಗಳನ್ನು ತಮ್ಮ ಭಾಷಣ, ವಾಚನ, ವ್ಯಾಖ್ಯಾನಗಳಲ್ಲಿ ಬಳಸಿಕೊಂಡಿರುವ ಜಾಣರೆಷ್ಟೋ ಲೆಕ್ಕವಿಲ್ಲ. ಆದರೂ ಆ ವಚನಗಳು ಹಳಸಲಾಗಿಲ್ಲ, ಸಮುಕಲಾಗಲಿಲ್ಲ; ಮತ್ತಷ್ಟು ಮೇಲ್ಮೆ ಮೆರುಗು ಕಾಂತಿ ಕಮನೀಯತೆಗಳನ್ನು ಪಡೆಯುತ್ತಿವೆ; ನವನವೋನ್ಮೇಷಶಾಲಿಯಾಗಿ ಕಂಗೊಳಿಸುತ್ತಿವೆ. ಆ ಅಂಕಿತದಲ್ಲಿ ನವಸೃಷ್ಟಿ ನಡೆಯುತ್ತಲೇ ಇದೆ.

ಕಲಿತವರು, ಕಲಿಯದವರು, ಹುಡುಗರು, ಮುದುಕರು, ಬಡವರು, ಬಲ್ಲಿದರು ಎಲ್ಲಾ ಕನ್ನಡಿಗರೂ ಈ ವಚನಗಳನ್ನು ಗಾದೆಯಂತೆಯೋ ಸೂಕ್ತಿಯ ರೂಪದಲ್ಲಿಯೋ ತಮ್ಮ ನಿತ್ಯದ ಜೀವನದಲ್ಲಿ ಸಂದರ್ಭೋಚಿತವಾಗಿ ಉಪಯೋಗಿಸುತ್ತಲಿದ್ದಾರೆ. ನಾಲ್ಕೋ ಐದೋ ಸರ್ವಜ್ಞವಚನಗಳನ್ನು ನೆನಪಿಟ್ಟುಕೊಂಡಿರುವವರು ಲಕ್ಷಾಂತರ ಜನ; ನೂರಕ್ಕಿಂತ ಹೆಚ್ಚು ವಚನಗಳನ್ನು ಬಾಯಿಪಾಠ ಮಾಡಿಕೊಂಡಿರುವವರು ಸಾವಿರಾರು ಮಂದಿ; ಸಾವಿರ ವಚನಗಳನ್ನು ನಿರರ್ಗಳವಾಗಿ ಹಾಡಬಲ್ಲವರು ಹಲವು ಜನ. ಮೊನ್ನೆ ತಾನೆ, ಕನ್ನಡ ಸಾಹಿತ್ಯ ಪರಿಷತ್ತಿನವರು ಸರ್ವಜ್ಞ ವಚನಗಳ ಕಂಠಪಾಠ ಸ್ಪರ್ಧೆ ಏರ್ಪಡಿಸಿದ್ದಾಗ, ಕಲ್ಬುರ್ಗಿ ಜಿಲ್ಲೆಯ ಒಬ್ಬ ಬಾಲಕ ಒಂದುಸಾವಿರದ ಇನ್ನೂರು ವಚನಗಳನ್ನು ತಪ್ಪದೆ ತಡವರಿಸದೆ ಉಸುರಿಬಿಟ್ಟ ! ಸುರುವಿಬಿಟ್ಟ !! ಇಷ್ಟೊಂದು ಜನಪ್ರಿಯತೆಯನ್ನು ಪಡೆದಿರುವ ಸರ್ವಜ್ಞ ವಚನಗಳ ಕರ್ತೃ ನಿಜವಾಗಿಯೂ ಕನ್ನಡದ ನಾಡೋಜ; ಜಾಣ ಜಾಣರ ದೇವ; ಕರ್ನಾಟಕದ ಕವಿಗಳಲ್ಲೆಲ್ಲ ಅತ್ಯಂತ ಭಾಗ್ಯಶಾಲಿ.

ನನಗೆ ಕುತೂಹಲ, ಹಾತೊರಿಕೆಯಿಂದ ಕೂಡಿದ ಕುತೂಹಲ –ಈ ವಚನಗಳನ್ನು ಬರೆದವನ ಹೆಸರೇನು ? ಯಾರ ಮಗ ? ಯಾವ ಊರಿನವ, ಸೀಮೆಯವ ? ಕುಲಗೋತ್ರಯಾವುವು ? ಬೆಳೆದ ಪರಿಸರ ಎಂತಹುದು ? ವಿದ್ಯಾಗುರುಗಳಾರು ? ಈತ ಜೀವಿಸಿದ್ದು ಯಾವಾಗ? ಎಲ್ಲಾ ತಿಳಿದುಕೊಳ್ಳಬೇಕೆಂದು. ಅದಿನ್ನೂ ಬೆಳೆಯುತ್ತಲೇ ಇದೆ, ಸರ್ವಜ್ಞನ ಕೀರ್ತಿಪ್ರಭಾವಗಳಂತೆ.

'ಸರ್ವಜ್ಞ' ಕವಿಯ ಹೆಸರೆ ? ಬಿರುದೆ ? ಅಂಕಿತವೆ ?

> ಸರ್ವಜ್ಞನೆಂಬುವನು । ಗರ್ವದಿಂದಾದವನೆ ?
> ಸರ್ವರೊಳೊಂದು ನುಡಿಗಲಿತು - ವಿದ್ಯದ
> ಪರ್ವತವೆ ಆದ ಸರ್ವಜ್ಞ

— ಈ ಪದ್ಯದಿಂದ, ಇಂತಹ ಇತರ ಪದ್ಯಗಳಿಂದ, 'ಸರ್ವಜ್ಞ' ಎಂಬುದು ಕವಿಯ ಹೆಸರೇ ಇರಬೇಕೆಂದು ಭಾಸವಾಗುತ್ತದೆ. ವಚನಕಾರರಲ್ಲಿ ಒಬ್ಬಿಬ್ಬರು – ಉದಾಹರಣೆಗೆ ಅಂಬಿಗರ ಚೌಡಯ್ಯ, ನಿಜಗುಣದೇವ – ತಾವು ರಚಿಸಿರುವ ವಚನಗಳಿಗೆ ತಮ್ಮ ಹೆಸರಿನ ಮುದ್ರೆಯನ್ನೇ ಒತ್ತಿದ್ದಾರೆ. ಅಂಬಿಗರ ಚೌಡಯ್ಯನಂತೆ ಸರ್ವಜ್ಞನೂ ಇದ್ದುದನ್ನು ಇದ್ದಂತೆಯೇ ನುಡಿಯುವ ನ್ಯಾಯ ನಿಷ್ಠುರಿ. ಸಂಪಾದನೆಯ ಸಿದ್ಧವೀರಣ್ಣದೇವರು ಎಂಬುವರು 'ಆಚರಣೆ'ಗೆ ಸಂಬಂಧಪಟ್ಟ ಸರ್ವಜ್ಞಾಂಕಿತ ವಚನಗಳನ್ನು ಸಂಕಲಿಸಿದ್ದಾರೆ. ಆ ಸಂಕಲನದ ಹಸ್ತಪ್ರತಿಗಳ ಆದ್ಯಂತಗಳಲ್ಲಿ "ಸರ್ವಜ್ಞಮೂರ್ತಿಯ ಆಚರಣೆಯ ಸಂಬಂಧದ ತ್ರಿವಿಧಿ" ಎಂದು ಬರೆದಿದೆ. 'ಪರಮಾರ್ಥ-ಸರ್ವಜ್ಞನ ವಚನಗಳು' ಎಂಬ ಪುಸ್ತಕದ ಸಂಪಾದಕರಾದ ಎಲ್. ಬಸವರಾಜು ಅವರು, "ಸರ್ವಜ್ಞನ ತ್ರಿಪದಿಗಳ ಮೂಲ ಅಂಕಿತ ಸರ್ವಜ್ಞ ಅಲ್ಲ –ಪರಮಾರ್ಥ. ಹೀಗಾಗಿ ಈ ಕೃತಿಯ ಹೆಸರೂ "ಪರಮಾರ್ಥ" –ಇದನ್ನು ಬರೆದವನು (ದೇವಸಾಲೆ) ಸರ್ವಜ್ಞ" ಎನ್ನುತ್ತಾರೆ. ಆದರೆ ಸರ್ವಜ್ಞಾಂಕಿತ ವಚನಗಳ ಮೂಲಪ್ರತಿಯಲ್ಲಿ, ಎಂದರೆ ಕವಿಯೇ ಬರೆದ ಹಸ್ತಪ್ರತಿಯಲ್ಲಿಯೇ ಇದ್ದುವು ಎಂದು ನಿಸ್ಸೃಷ್ಟವಾಗಿ ನಿಸ್ಸಂದೇಹವಾಗಿ ಹೇಳಬಹುದಾದ ಪದ್ಯಗಳಿಂದ ಏನುಗೊತ್ತಾಗುತ್ತದೆ ? ನೋಡಬೇಕು.

> ತನ್ನ ತಾನರಿದಂಗೆ । ಭಿನ್ನಭಾವನೆಯಿಲ್ಲ
> ತನ್ನವರು ಇಲ್ಲ ಪರರಿಲ್ಲ–ತ್ರೈಭುವನ
> ತನ್ನೊಳಗೆ ಇಹುದು ಸರ್ವಜ್ಞ

> ತನ್ನ ತಾನರಿದಾತ । ತನ್ನ ಜ್ಞಾನದೊಳಡಗಿ
> ತನ್ನ ಬಂಧುಗಳ ನೆರೆದೊರೆದು–ಪರಬೊಮ್ಮ
> ದುನ್ನತಿಯೊಳಿಹನು ಸರ್ವಜ್ಞ

> ದೊರಕಿದನು ಉಂಡುಂಡು । ದೊರಕಿದನು ಉಟ್ಟುಟ್ಟು
> ದೊರಕಿದಲಿ ಶಯನ ಪಡೆವಾತ–ಲೋಕಕ್ಕೆ
> ನಿರುತನಾಗಿಕ್ಕು ಸರ್ವಜ್ಞ

ತಿರಿದಿಹರೆ ಕೂಳಕ್ಕು । ಕೆರೆದಿಹರೆ ಬೋಳಕ್ಕು
ಕರೆದಿಹರೆ ಅಡ್ಡ ಹೆಸರಕ್ಕು - ನಿಜವಿರಲು
ಸ್ಥಿರಗೊಳ್ಳಲಕ್ಕು ಸರ್ವಜ್ಞ

ಕವಿ, ಈ ವಚನಗಳಲ್ಲಿ ತನ್ನನ್ನೆ ತಾನು ಚಿತ್ರಿಸಿಕೊಂಡಿದ್ದಾನೆ. ತನ್ನ ಕನ್ನಡಿಯಲ್ಲಿ ತನ್ನನ್ನೇ ಕಂಡುಕೊಂಡಿದ್ದಾನೆ. ತಾನು, ತನ್ನದು, ತನ್ನವರು, ತನ್ನತನ–ಎಲ್ಲವನ್ನೂ ಸರ್ವಭಾವದಿಂದ ಸಂಪೂರ್ಣವಾಗಿ ಪರಮಾತ್ಮನಲ್ಲಿ ಸಮರ್ಪಿಸಿಕೊಂಡವನೀತ. ತಾನಿಲ್ಲ, ಆವನೇ ಎಲ್ಲ ! ಇಂತಹ ಮಹಾನುಭಾವಿ, ವೀರವಿರಕ್ತ ತನ್ನ ಪೂರ್ವಾಶ್ರಮದ ಹೆಸರೊಂದನ್ನೇಕೆ ಉಳಿಸಿಕೊಂಡಾನು ? ಶ್ರೀ ಗುರುವಿನ ಕರುಣ ಪ್ರಸಾದ ಪಡೆದು ಆತ ಪುನರ್ಜಾತನಾಗಿದ್ದ. ಪೂರ್ವಜನ್ಮದ ಹೆಸರು ಹಿಡಿದು ಕರೆದರೆ ಅದು ಅಡ್ಡ ಹೆಸರಾಗುವುದು; ನಿಜನಾಮ (ಪರಬ್ರಹ್ಮ) ವಾಗುವುದಿಲ್ಲ. ವಚನಗಳನ್ನು "ಜೇಗುಲವೆ ಮಾತಾಡುವಂದದೊಳಾ ಗಿರದೆ ತಾನೊಳಗಿದ್ದು" ಅವನಿಂದ ನುಡಿಸುವವನು ಸರ್ವಾಂತ ರ್ಯಾಮಿಯೂ ಸರ್ವಶಕ್ತನೂ ಆದ ಸರ್ವಜ್ಞ

ಡೊಂಕು ಹಣ್ಣುಗಳಲ್ಲಿ । ಡೊಂಕು ಬಾಳಯಹಣ್ಣು
ಡೊಂಕುಂಟು ಒಳಗೆ ರುಚಿಯುಂಟು - ಸಜ್ಜನರ
ಡೊಂಕು ಲೇಸೆಂದ ಸರ್ವಜ್ಞ

ಕಿರಿಯಂದಿನಾ ಪಾಪ । ನರೆ ಬಂದು ಹೋದೀತೆ ?
ಅರಿವಿಂಗೆ ಹಿರಿದು ಕಿರಿದಿಲ್ಲ - ಇದನು ನೀ
ನರಿದು ನೋಡೆಂದ ಸರ್ವಜ್ಞ

—ಹೀಗೆ " ಎಂದ ಸರ್ವಜ್ಞ "ನು ಪರಮಾತ್ಮನೇ ಹೊರತು ಹಾಡುವ ಕವಿಯಲ್ಲ, ಬರೆವ ಲಿಪಿಕಾರನಲ್ಲ. ಆದುದರಿಂದ ಸರ್ವಜ್ಞ ಎಂಬುದು ಹೆಸರಲ್ಲ. ಈ ಲೇಖನದ ಆದಿಯಲ್ಲಿಯೇ ಉಲ್ಲೇಖಿಸಿರುವ ವಚನ ಬೇರೆ ಯಾರೋ ಬರೆದು ಹೊಸದಾಗಿ ಸೇರಿಸಿದುದು. ಸಂಪಾದನೆಯ ಸಿದ್ಧವೀರದೇವರು ಆಚರಣೆಯ ಸಂಬಂಧದ ವಚನಗಳನ್ನು ಸಂಗ್ರಹಿಸಿದ ಕಾಲದಲ್ಲಿಯೇ ಸರ್ವಜ್ಞಾಂಕಿತ ವಚನಗಳ ಕರ್ತೃವು ಸರ್ವಜ್ಞನೆಂಬ ಒಬ್ಬ ವ್ಯಕ್ತಿ ಎಂಬ ತಿಳುವಳಿಕೆ ಜನರಲ್ಲುಂಟಾಗಿತ್ತು. ವಿರಕ್ತರಾದ ಅವರಿಗೂ ಈ ವಚನಗಳನ್ನು ' ಬರೆದವನ ' ಪೂರ್ವಾಶ್ರಮದ ಹೆಸರೇನೆಂಬುದನ್ನು ವಿಚಾರ ಮಾಡುವ ಆವಶ್ಯಕತೆ ಇಲ್ಲವೆಂದು ತೋರಿರಬೇಕು.

ಸರ್ವಜ್ಞ ಎಂಬುದು ಈ ಕವಿಯ ಬಿರುದಿರಬೇಕು ಎನ್ನುತ್ತಾರೆ ಕೆಲವರು. ಈ ಬಿರುದು ಇರಬೇಕಾದುದು ಪರಮಾತ್ಮನೊಬ್ಬನಿಗೇ. ಆದರೂ ಮನುಷ್ಯರಿಗೂ ಚಪಲ, ತಾವು ಸರ್ವಜ್ಞರೆನ್ನಿಸಿಕೊಳ್ಳಬೇಕೆಂದು. 12 ನೆಯ ಶತಮಾನದಲ್ಲಿ, ವಿಶ್ವಕೋಶಸದೃಶವಾದ 'ಮಾನಸೋಲ್ಲಾಸ' ಎಂಬ 'ಅಭಿಲಷಿತಾರ್ಥ ಚಿಂತಾಮಣಿ'ಯನ್ನು ರಚಿಸಿರುವ ಚಾಲುಕ್ಯ ಸೋಮೇಶ್ವರನು 'ಭೂಲೋಕಮಲ್ಲ' 'ಸರ್ವಜ್ಞ ಚಕ್ರವರ್ತಿ' ಎಂಬ ಬಿರುದು ಧರಿಸಿದ್ದ. ವ್ಯಾಸ ಭಾರತಕ್ಕೆ ವ್ಯಾಖ್ಯಾನ ಬರೆದಿರುವ ವಿದ್ವಾಂಸನೊಬ್ಬನು ತಾನು ಸರ್ವಜ್ಞನಾರಾಯಣ ಎಂದು ಹೇಳಿಕೊಂಡಿರುವನಂತೆ. ಇನ್ನೂ ಅನೇಕ ಜನ ಪ್ರಕಾಂಡ ಪಂಡಿತರು ಈ ಬಿರುದನ್ನು ಧರಿಸಿರಬಹುದು. ಆದರೆ ಸರ್ವಜ್ಞ ವಚನ ಕರ್ತೃವಿನ ಹುಟ್ಟು ನಾಡಾದ (ಅದು ಮುಂದೆ ವಿವರಿಸಲ್ಪಟ್ಟಿದೆ) ಬೆಳುವಲ ದೇಶದ ವಿದ್ವಾಂಸ ಕವಿಯೊಬ್ಬನನ್ನು

ಕೆಲಬರ್ ತರ್ಕವಿಶಾರದರ್, ಕೆಲಬರ್ ಆಪ್ತಾಲಾಪ
ಸಂಬೋಧಕರ್
ಕೆಲಬರ್ ನಾಟಕಕೋವಿದರ್, ಕೆಲಬರ್ ಒಳ್ಗಬ್ಬಂಗಳಂ
ಬಲ್ಲವರ್
ಕೆಲಬರ್ ಬ್ಯಾಕರಣಜ್ಞರಿಂತಿನಿತುಮಂ ಬಲ್ಲನ್ನರಿಲ್ಲ; ಎಲ್ಲಮಂ
ಸಲೆ ಸೋಮೇಶ್ವರ ಸೂರಿ ಬಲ್ಲನನಘಂ
ನಯ್ಯಾಯಿಕಾಗ್ರೇಸರಂ
—ಅಬಲೂರು ಶಾಸನ, ಕ್ರಿ. ಶ. ೧೧೦೧

—ಹೀಗೆ ಪ್ರಶಂಸೆ ಮಾಡಲಾಗಿದೆ. 'ಎಲ್ಲವಂ ಸಲೆ ಬಲ್ಲವಂ' ಸರ್ವಜ್ಞ ತಾನೆ ! ಶಾಸನ ಪದ್ಯದಲ್ಲಿರುವ ಅಭಿಪ್ರಾಯವನ್ನು ಅಲುಗಿಸಲೆಂದೇ

ಎಲ್ಲ ಬಲ್ಲವರಿಲ್ಲ ! ಬಲ್ಲವರು ಬಹಳಿಲ್ಲ
ಬಲ್ಲವರು ಇದ್ದು ಬಲವಿಲ್ಲ—ಸಾಹಿತ್ಯ
ವೆಲ್ಲರಿಗಿಲ್ಲ ಸರ್ವಜ್ಞ

—ಈ ವಚನ ಹುಟ್ಟಿತೋ ಏನೊ. ಬೆಳುವಲದೇಶದವನೇ ಆದ ಸರ್ವಜ್ಞವಚನ ಕರ್ತೃವು ಈ ಶಾಸನವನ್ನು ನೋಡಿರುವುದು ಅಸಂಭವವೇನಲ್ಲ. ಈಶಾಸನಕ್ಕೇ ಶಾಸ್ತಿಮಾಡಿರುವ ಕವಿ ಎಲ್ಲ ಬಲ್ಲವರಿಲ್ಲ ಎಂದು ನಮ್ರತೆಯನ್ನು ಮೆರೆದಿರುವವನು ತಾನೇ 'ಸರ್ವಜ್ಞ' ಎಂಬ ಬಿರುದನ್ನಿಟ್ಟುಕೊಂಡಾನೆ ? (ಇಲ್ಲಿ ಸಾಹಿತ್ಯ ಎಂಬ ಪದಕ್ಕೆ ದೈವಬಲ, ಅದೃಷ್ಟ ಎಂದೂ ಕಾವ್ಯ ಸಮೂಹ ಎಂದೂ ದ್ವಂದ್ವಾರ್ಥವಿದೆ. ವಚನದ ನಿರ್ವಚನ ಇಲ್ಲಿ ಅಸಂಗತ).

ಮತ್ತೆ ಕೆಲವರು ವಿದ್ವಾಂಸರು ಜನತೆಯೇ ಕವಿಗೆ ಈ ಬಿರುದನ್ನು ಕೊಟ್ಟರಬೇಕೆಂದು ಊಹಿಸಿದ್ದಾರೆ. ಇದು ನಿಜವಾಗಿದ್ದರೆ ಬಿರುದು ಪಡೆದು ಆದ ಮೇಲೆ, ಪ್ರತಿಯೊಂದು ವಚನದ ಮುಡಿಯಲ್ಲಿಯೂ 'ಸರ್ವಜ್ಞ' ಎಂಬ ಮುಡಿಗೆಯನ್ನು ಸೇರಿಸಲಾಯಿತೆಂದು ಭಾವಿಸಬೇಕಾಗುತ್ತದೆ. ಅದು ಅವ್ಯವಹಾರ್ಯ. ಪದ್ಯ ರಚನೆ ಮಾಡುವ ಮೊದಲೇ ಬಿರುದು ಕೊಟ್ಟಿದ್ದರೆ ಯಾವ ಆಧಾರದ ಮೇಲೆ ಏನು ನೋಡಿ ಕೊಟ್ಟರು ? ಕವಿ ಅದನ್ನು ಅಂಗೀಕರಿಸಿದನೆ ? ಈ ಎಲ್ಲ ಪ್ರಶ್ನೆಗಳೇಳುತ್ತವೆ.

ಆದುದರಿಂದ 'ಸರ್ವಜ್ಞ' ಎಂಬುದು ಬಿರುದೂ ಅಲ್ಲ. ಅಂಕಿತ. ಎ. ಆರ್. ಕೃಷ್ಣಶಾಸ್ತ್ರಿಗಳು "ಸರ್ವಜ್ಞ ಎಂಬುದು ಎಲ್ಲವನ್ನು ತಿಳಿದ ಜ್ಞಾನಸ್ವರೂಪನಾದ ಭಗವಂತನನ್ನು ಮನಸ್ಸಿನಲ್ಲಿಟ್ಟುಕೊಂಡು ಉಪಯೋಗಿಸುವ ಅಂಕಿತವಾಗಿ ಕಾಣುತ್ತದೆ" ಎಂದಿದ್ದಾರೆ. ಈ ಅಭಿಪ್ರಾಯವನ್ನು ಮೇಲೆಯೇ ಸಮರ್ಥಿಸಿದೆ. 'ಸರ್ವಜ್ಞ' ಎಂಬುದೇ

ತ್ರಿಪದಿಯ ಕೊನೆಯ ಗಣಸ್ಥಾನದಲ್ಲಿ, ಛಂದಸ್ಸಿನ ದೃಷ್ಟಿಯಿಂದ ಸರಿಯಾಗಿ ಹೊಂದಿಕೊಳ್ಳುತ್ತದೆ.

ಈಗ ಮತ್ತೊಂದು ಪ್ರಶ್ನೆ ಹೆಡೆಯೆತ್ತುತ್ತದೆ. ಸರ್ವಜ್ಞ ಎಂಬುದು ಕವಿಯ ಹೆಸರಲ್ಲ, ಅವನ ವಚನಗಳ ಅಂಕಿತ ಎನ್ನುವುದಾದರೆ 'ಪರಮಾರ್ಥ' ಏನಾಗಬೇಕು ? ಎಲ್. ಬಸವರಾಜು ಅವರೇ ಹೇಳಿರುವಂತೆ 'ಪರಮಾರ್ಥ' ಅಂಕಿತವಿರುವುದು ಮೂರೋ ನಾಲ್ಕೋ ಹಸ್ತಪ್ರತಿಗಳಲ್ಲಿ. ಅವನ್ನುಳಿದು, ಈಗ ಉಪಲಬ್ಧವಿರುವ, ಕನ್ನಡ ನಾಡಿನ ಉದ್ದಗಲಕ್ಕೂ ಹರಡಿರುವ ನೂರಾರು ಹಸ್ತಪ್ರತಿಗಳಲ್ಲಿ, ವಚನಗಳ ಅನೇಕ ಮುದ್ರಣಗಳಲ್ಲಿ, 'ಸರ್ವಜ್ಞ' ಎಂಬ ಅಂಕಿತವೇ ಇದೆಯಲ್ಲ, ಅದಕ್ಕೇನು ಸಮಾಧಾನ? ಕವಿಚರಿತಕಾರರು ಅರುವತ್ತು ವರ್ಷಗಳ ಹಿಂದೆಯೇ 'ಪರಮಾರ್ಥ' ಎಂಬ ಅಂಕಿತವಿರುವ ಒಂದು ಹಸ್ತಪ್ರತಿಯನ್ನು ನೋಡಿದ್ದರು. ಅವರು, "ನಮಗೆ ದೊರೆತ ಒಂದು ಓಲೆಯ ಪ್ರತಿಯಲ್ಲಿ ಪ್ರತಿ ಪದ್ಯವೂ 'ಪರಮಾರ್ಥ' ಎಂದು ಮುಗಿಯುವುದಲ್ಲದೆ ಗ್ರಂಥಕ್ಕೆ 'ಪರಮಾರ್ಥಿಕೆ' ಎಂಬ ಹೆಸರೂ ಹೇಳಿದೆ" ಎಂದು ಹೇಳಿಯೂ ಇದ್ದಾರೆ. ಎಲ್. ಬಸವರಾಜು ಅವರಿಗೆ ಸಿಕ್ಕಿರುವುದು ಅದೇ ಕೂಟದ ಮತ್ತೊಂದೆರಡು ಹಸ್ತಪ್ರತಿ ಅಷ್ಟೆ.

'ಪರಮಾರ್ಥ' ರೂಢನಾಮವೂ ಅಲ್ಲ, ಅಂಕಿತನಾಮವೂ ಅಲ್ಲ; ಭಾವನಾಮ. ಅದು ಎಲ್ಲಾ ವಚನಗಳಿಗೂ ಹೊಂದಿಕೊಳ್ಳುವುದೂ ಇಲ್ಲ. ನೋಡಿ,

ಮೊಲೆಯಿಲ್ಲದಾವು ತಾ । ತಲೆಯಲ್ಲಿ ಕರೆವುದು
ಸ್ಥಲ ನೆಲೆಯಾಗಿ ಕರೆದುಂಬ–ಯೋಗಿಯ
ಕುಲನಾಶವೆಂದ ಪರಮಾರ್ಥ

ಎಂಟೆರಡು ತಲೆಯುಳ್ಳ । ತುಂಟ ರಾವಳ ಕೆಟ್ಟ
ಬಂಟ ಕೀಚಕನು ಸುಡುಸತ್ತ–ಪರಸತಿಯ
ನೆಂಟು ಬೇಡೆಂದ ಪರಮಾರ್ಥ

ಹುಸಿವಾತ ದೇಗುಲದ । ದೆಸೆಯತ್ತ ಮುಂಡಾಗಿ
ನೊಸಲೆತ್ತಿ ಕರವ ಮುಗಿದರೆ–ಇಷ್ಟುದ್ದ
ಹುಸಿವನೆಂದೆಂಬೆ ಪರಮಾರ್ಥ

ಇಂತಹುವೇ ಹಲವು ಉದಾಹರಣೆಗಳನ್ನು ಕೊಡಬಹುದು. ಇಲ್ಲಿ, 'ಎಂದ', 'ಎಂಬೆ' – ಈ ಪದಗಳಿಗೆ ಏನು ಅರ್ಥ ? ಏನು ಅನ್ವಯ ? 'ಪರಮಾರ್ಥ' ಪುಲ್ಲಿಂಗವೋ ಸ್ತ್ರೀಲಿಂಗವೋ? ಸರ್ವಜ್ಞನ ತತ್ವಗಳನ್ನೊಪ್ಪದ ಯಾವನೋ ಒಬ್ಬ ಪ್ರತಿಕಾರನು ನಿಜಗುಣಶಿವಯೋಗಿಗಳ 'ಪರಮಾರ್ಥ ಗೀತೆ'ಯನ್ನು ನೋಡಿದ, 'ಸರ್ವಜ್ಞ' ತೆಗೆದು 'ಪರಮಾರ್ಥ' ಇಟ್ಟ ! ಗ್ರಂಥಕ್ಕೆ 'ಪರಮಾರ್ಥಿಕೆ' ಎಂಬ ವಿಚಿತ್ರವಾದ ಹೆಸರನ್ನಿಟ್ಟ.

ವೆಂಕ ಎಂಬುವನು ಮಾಡಿಕೊಂಡಿರುವ ನಕಲಿನಲ್ಲಿ ಮತ್ತೂ ಕೆಲವು ಸ್ವಾರಸ್ಯ ಸಂಗತಿಗಳಿವೆ. ಉತ್ತಂಗಿ ಚನ್ನಪ್ಪನವರ ಮುದ್ರಣದಲ್ಲಿ 'ಬ್ರಾಹ್ಮಣ ಪದ್ಧತಿ'ಗೆ ಸಂಬಂಧಪಟ್ಟಂತೆ ಇರುವ ವಚನಗಳು ಸುಮಾರು 100; ವೆಂಕನ ಪ್ರತಿಯಲ್ಲಿ ಕೇವಲ 38. ಉಳಿದ 62 ವಚನಗಳೂ ಪ್ರಕ್ಷಿಪ್ತವೇ ಹಾಗಾದರೆ ?

ಕೊಟ್ಟವರ ತಲೆ ಬೆನ್ನ । ತಟ್ಟುವರು ಹಾರುವರು
ಬಿಟ್ಟರೇ ಕುಟ್ಟಿ ಕೆಡಹುವರು–ಹಾರುವರ
ಬಟ್ಟೆ ಬೇಡೆಂದ ಸರ್ವಜ್ಞ

ಕೆಟ್ಟರೆ ದ್ವಿಜರಿಂದ । ಕೆಟ್ಟವರು ಇನ್ನಿಲ್ಲ
ಕೆಟ್ಟುದನು ಬಿಟ್ಟು ನಡೆದರೆ– ಅವರಿಂದ
ನೆಟ್ಟನವರಿಲ್ಲ ಸರ್ವಜ್ಞ

—ಈ ಎರಡೂ ಪದ್ಯಗಳು ಉತ್ತಂಗಿಯವರ ಮುದ್ರಣದಲ್ಲಿವೆ. ವೆಂಕನ ಹಸ್ತಪ್ರತಿಯಲ್ಲೇಕೆ ಇಲ್ಲ ? ಇವು ಬೇಡ;

ವಿಪ್ರರಿಂದಲೆ ವಿದ್ಯೆ । ವಿಪ್ರರಿಂದಲೆ ಬುದ್ಧಿ
ವಿಪ್ರ ನಿಜವಿಪ್ರರಿಲ್ಲದರೆ—ಈ ಜಗವು
ಕ್ಷಿಪ್ರದಲಿ ಕೆಡುಗು—ಸರ್ವಜ್ಞ

ಮಾಪರಾ ಪೋಪರೆ । ಪಾಪವೇನದು ಕೆಸರೆ ?
ಮಾಪರೆ ಮಯ್ಯ ಮಲ ಪೋಪು-ದಾಪಾಪ
ಲೇಪವಾಗಿಕ್ಕು ಸರ್ವಜ್ಞ

ಈ ವಚನಗಳಿದ್ದರೇನಾಗುತ್ತಿತ್ತು ? ವೆಂಕನ ಹಸ್ತಪ್ರತಿಯಲ್ಲಿ ಈ ಕೆಳಗಿನ ವಚನರತ್ನಗಳಿಲ್ಲ:

ಹೊಲೆಗೇರಿಯಲಿ ಹುಟ್ಟು । ಎಲುವಿನ ಗೃಹವಾಸ
ಸಲೆ ಧರ್ಮಿ ದಾಸಿಯೆನಿಸದೆ—ಹಾರುವನು
ಕುಲಕೆ ಹೋರಿಹನು ಸರ್ವಜ್ಞ

ಊರೆಲ್ಲ ನಂಟರು । ಕೇರಿಯೆಲ್ಲವು ಬಳಗ
ಧಾರುಣಿಯೆಲ್ಲ ಕುಲದೈವ–ವಾಗಿನ್ನು
ಯಾರನ್ನು ಬಿಡಲೊ ಸರ್ವಜ್ಞ

ಉತ್ತಂಗಿಯವರ ಮುದ್ರಣದಲ್ಲಿ ಒಂದು ವಚನ ಹೀಗಿದೆ:

ನಡೆವುದೊಂದೇ ಭೂಮಿ । ಕುಡಿವುದೊಂದೇ ನೀರು
ಸುಡುವಗ್ನಿಯೊಂದೆ ಇರುತಿರಲು–ಕುಲಗೋತ್ರ
ನಡುವೆ ಎತ್ತಣದು ಸರ್ವಜ್ಞ

ಇದೇ ವಚನ ವೆಂಕನ ಹಸ್ತಪ್ರತಿಯಲ್ಲಿ ವಿರೂಪಗೊಂಡು, ಗೋಣ್ಮುರಿದ ಗಿಳಿಯಾಗಿದೆ. ನೋಡಿ,

ನಡೆವುದೊಂದೇ ಭೂಮಿ । ಕುಡಿವುದೊಂದೇ ನೀರು
ಸುಡುವೊಡೆ ಕಿಚ್ಚು ಎರಡಿಲ್ಲ—ಜಗನೆಲ್ಲ
ಜಡಗೊಂಬುತಿದೆ ಕೊ ಪರಮಾರ್ಥ

ಇನ್ನೂ ರಾಎಷ್ಟತ್ತೂರು

—ಈ ಬಗೆಯ ನೂರಾರು ನಿದರ್ಶನಗಳಿವೆ. ವಚನರತ್ನ ಭಂಡಾರದಿಂದ ನೂರಾರು ವಚನಗಳನ್ನು ಕಿತ್ತೆಸೆದು ನೂರಾರು ವಚನಗಳನ್ನು ವಿಕೃತಗೊಳಿಸಿ, ಉಳಿದುವುಗಳ ಕಣ್ಣು ಕಿತ್ತು, ಬೇರೆ ಕೃತಕ ನೇತ್ರಗಳನ್ನಿಟ್ಟು ಕೃತಕೃತ್ಯರಾದವರು ಯಾರಿರಬಹುದು ? ಹೀಗೆ ಸರಸ್ವತಿ ದ್ರೋಹ ಮಾಡಿದವನಾರು ? ಕನ್ನಡ ಮುಖಕ್ಕೆ ಮಸಿ ಬಳಿದವರಾರು ? ಕ್ರಿ. ಶ. 7—3—1636 ರಲ್ಲಿದ್ದ ವೆಂಕ. ಇದು ಸತ್ಯ. 'ವೆಂಕ' ಆತನ ನಿಜನಾಮಧೇಯವೇನಲ್ಲ. ಕಳ್ಳರು, ದರೋಡೆಕೋರರು, ಕೊಲೆಗಡುಕರು ವೇಷ ಮರೆಸಿಕೊಳ್ಳುವಂತೆ ಈತನೂ ತನ್ನ ನಿಜವಾದ ಹೆಸರನ್ನು ಮರೆಮಾಚಿಕೊಂಡಿದ್ದಾನೆ. ಆಂಗ್ಲ ಭಾಷೆಯಲ್ಲಿ some x, y, z ಎಂದು ಹೇಳುವಂತೆ ಕನ್ನಡದಲ್ಲಿ 'ವೆಂಕ, ನಾಣಿ, ಸೀನ'ಎಂದು ಅಪ್ರಸಿದ್ಧ ಅಗಣ್ಯ ಅನಾಮಿಕರನ್ನು ಸಂಬೋಧಿಸುವುದುಂಟು. ಸಂಸ್ಕೃತದ'ಡಿತ್ಥ' ಇದೇ ತಾಡಿಯದು. ಪ್ರಾಚೀನ ಕರ್ನಾಟಕದಲ್ಲಿ 'ಬೂತು'ಎಂಬ ಮಾತು ಇದೇ ಅರ್ಥದಲ್ಲಿ ಪ್ರಯೋಗವಾಗುತ್ತಿದ್ದಿತು. ಈ 'ವೆಂಕಬೂತು' ನಿಜವಾಗಿಯೂ ನಿಸ್ಸಂದೇಹವಾಗಿಯೂ ಪಕ್ಕಾ ವರ್ಣವಾದಿ; ಅಸ್ಸಲ್ ಪ್ರತಿಗಾಮಿ; ದ್ವೇಷಾಸೂಯೆಗಳೇ ಮೈವೆತ್ತಂತಿರುವ ಅಸುರ ಪಿಂಡ !

'ಪರಮಾರ್ಥ' ಅಂಕಿತವೆ ? 'ಪರಮಾರ್ಥಿಕೆ' ಗ್ರಂಥದ ಹೆಸರೆ ?

ಸದ್ಯದಲ್ಲಿ, ಈ ವಚನಕಾರನ ಹೆಸರೇನೆಂಬುದು ಗೊತ್ತಿಲ್ಲದಿರುವುದರಿಂದ, ಇವನ ಅಂಕಿತವನ್ನೆ ಅಂಕಿತನಾಮವೆಂದು ವ್ಯವಹರಿಸುವುದು ಅನಿವಾರ್ಯ.

ಸರ್ವಜ್ಞನ ಸೀಮೆ :

ಈ ಕವಿಯು ತಾನು ಹುಟ್ಟಿ ಬೆಳೆದು ಬೆಳಗಿದ, ತನ್ನ ಪವಿತ್ರ ಪಾದದ ಸವಿಸೋಂಕಿನಿಂದ ಪುಳಕಗೊಂಡ ಪುಣ್ಯಭೂಮಿ ಯಾವುದು ಎಂಬುದನ್ನು ಬಾಯ್ಬಿಟ್ಟು ಹೇಳಿಲ್ಲ. ಅಲ್ಲಿ ವಿಶೇಷವಾಗಿ ಬೆಳೆಯುವ ದವಸಧಾನ್ಯಗಳು, ಅಲ್ಲಿ ಕಣ್ಗೊಳಿಸುವ ಸೃಷ್ಟಿ ಸೌಂದರ್ಯದ ವಿಶಿಷ್ಟತೆ, ಅಲ್ಲಿಯ ಜನರ ಬಗೆಬಗೆಯ ಅಡಿಗೆ ಊಟಗಳ ಮೋಜು, ಅವರ ಸಮೃದ್ಧಿಜೀವನ ಜಾಣ್ಮೆ ರಸಿಕತೆಗಳನ್ನು ಬಹು ಮನೋಜ್ಞವಾಗಿ ರುಚಿಕಟ್ಟಾಗಿ ಬಣ್ಣಿಸಿ ಆ ಸೀಮೆ ಯಾವುದೆಂಬುದನ್ನು ನಮ್ಮ ಊಹೆಗೇ ಬಿಟ್ಟಿರುತ್ತಾನೆ. ಆ ವರ್ಣರಂಜಿತ ಚಿತ್ರಗಳನ್ನು ನೋಡಿ.

ಜೋಳದ ಬೋನಕ್ಕೆ । ಬೇಳೆಯ ತೊಗೆಯಾಗಿ
ಕಾಳೆಮ್ಮೆ ಕರೆದ ಹಯನಾಗಿ–ಬೆಳುವಲದ
ಮೇಳ ನೋಡೆಂದ ಸರ್ವಜ್ಞ

ಜೋಳದ ಬೋನವಾಗಬೇಕು, ಅದಕ್ಕೆ ಅವರೆಯ ಬೇಳೆಯ ತೊಗೆಯಾಗಬೇಕು; ಮೇಲೆ ಕಾಳಿಯೆಮ್ಮೆ ಕರೆದ ಹಾಲಾಗಬೇಕು; ನೋಡಬೇಕು, ಬೆಳುವಲದ ಊಟದ ಮಝಾ ! ಇಲ್ಲಿ 'ಕಾಳೆಮ್ಮೆ' ಎಂಬ ಪದ ಪ್ರಾಸಕ್ಕಾಗಿ ಜೋತುಕೊಂಡು ಬರಲಿಲ್ಲ. ಎಮ್ಮೆಗಳಲ್ಲಿ ಕರಿಯ ಬಣ್ಣದ ಎಮ್ಮೆ ಮೇಲಂತೆ. ಅದರ ಮೈ, ಕಪ್ಪಗೆ ಮಿರಿಮಿರಿ ಮಿಂಚುತ್ತಿರುತ್ತದೆ.

ಕಣಿಕದ ಕಡುಬಾಗಿ । ಮಣಕೆಮ್ಮೆ ಹಯನಾಗಿ
ಕುಣಿ ಕುಣಿದು ಕಡೆವ ಸತಿಯಾಗಿ–ಬೆಳುವಲದ
ಅಣಕ ನೋಡೆಂದ ಸರ್ವಜ್ಞ

ಸಾಧಾರಣವಾಗಿ, ಅಳಿಯನನ್ನು ಗೌರಿಹಬ್ಬಕ್ಕೆ ಮುಂಚೆ ಮೇಯಿಸುವುದಕ್ಕಾಗಿ ಮಾಡುವ ಅಡಿಗೆ - ಗೋದಿಯ ಕಡುಬು. ಅದಕ್ಕೆ ಜೊಚ್ಚಿಲು ಮಣಕನ ತುಪ್ಪ ಒಪ್ಪು; ಮುದಿಯೆಮ್ಮೆಯ ತುಪ್ಪವಲ್ಲ. ಬೆಳುವಲದ ಭಾಮಿನಿಯೊಬ್ಬಳು ತನ್ನ ಪತಿಯನ್ನು ಮೇಯಿಸಬೇಕು. ಅದಕ್ಕಾಗಿ ಗೋದಿಯ ಕಡುಬನ್ನು ಒಲೆಯ ಮೇಲೆ ಬೇಯುವುದಕ್ಕಿಟ್ಟು, ಮಣಕೆಮ್ಮೆಯ ಮೊಸರನ್ನು ಕಡೆಯುತ್ತಿದ್ದಾಳೆ; ಕುಣಿಕುಣಿದು ಕಡೆಯುತ್ತಿದ್ದಾಳೆ. ಕುಣಿಯುವುದಕ್ಕೆ ರಂಗಸ್ಥಳವೇ ಆಗಬೇಕೇನು ? ಅಲ್ಲಿ ಸರ್ವಜ್ಞ, ಕಲೆ ಕಾಯಕಗಳೆರಡರ ಸುಮಧುರ ಸಂಗಮವನ್ನು ಕಂಡಿದ್ದಾನೆ. ಕಂಡು 'ಬೆಳುವಲದ ಬೆಡಗು ಒನಪು ವಯ್ಯಾರಗಳನ್ನು ನೋಡ' ಎಂದು ಉದ್ಗಾರವೆತ್ತಿದ್ದಾನೆ.

ಕಡಲೆಯನು ಗೋದಿಯನು । ಮಡಿಕುದ್ದು ಬೆಳೆದರೂ
ಸುಡಬೇಕು ನಾಡನೆಂದವನ–ಬಾಯೊಳಗೆ
ಪುಡಿಗಡುಬು ಬೀಳ್ಗು ಸರ್ವಜ್ಞ

ಬೆಳುವಲನಾಡಿನ ಜನರು ತುಂಬಾ ಜಾಣರು ಮತ್ತು ಹಾಸ್ಯಪ್ರಿಯರು. 'ಸುಡಬೇಕು ನಾಡನೆಂದವನ' ಬಾಯಲ್ಲಿ ಪುಡಿಗಡುಬು ತುರುಕಿ ಅವನ ಬಾಯಿ ಮುಚ್ಚಿಸಿಬಿಡುತ್ತಾರೆ. ಅವನು ತನ್ನ ಅಭಿಪ್ರಾಯವನ್ನು ಬದಲಾಯಿಸಲೇಬೇಕಲ್ಲ !

ಈಗ ಮಲೆನಾಡಿನ ಮತ್ತು ಮಲೆನಾಡಿನವರ ವರ್ಣನೆ.

ಕಿಚ್ಚುಂಟು ಕೆಸವುಂಟು । ಬೆಚ್ಚನ ಮನೆಯುಂಟು
ಇಚ್ಚೆಗೆ ಬರುವ ಸತಿಯುಂಟು–ಮಲೆನಾಡ
ಮೆಚ್ಚ ನೋಡೆಂದ ಸರ್ವಜ್ಞ

ಬೆಲ್ಲಗೆಣಸುಗಳುಂಟು । ಅಲ್ಲಲ್ಲಿ ನೀರುಂಟು
ನೆಲ್ಲೋಗರುಂಟು ನೆಳಲುಂಟು–ಕೆರೆಕುಂಟೆ
ಎಲ್ಲೆಲ್ಲು ಉಂಟು ಸರ್ವಜ್ಞ

ಅಲ್ಲ ಬಸಿರಿನ ಉಂಟು । ಬೆಲ್ಲ ಬಿಳಿಯೆಲೆಯುಂಟು
ಮೆಲ್ಲಲ್ಕೆ ಬಳೆ, ಹಲಸುಂಟು–ಮಲೆನಾಡ
ನಲಿ [illegible] ಸರ್ವಜ್ಞ

ಬೆಳುವಲನಾಡಿನ ಮಗ್ಗುಲಲ್ಲೇ ಇರುವ ಮಲೆನಾಡಿನ ಪಯಿರುಪಚ್ಚೆಗಳನ್ನು ತೋಟ ತುಡಿಗೆಗಳನ್ನು ಚಲುವಿನ ನೆಲೆಗಳನ್ನು ಸುಖಸಂಸಾರದ ಚಿತ್ರವನ್ನು ಈ ವಚನಗಳಲ್ಲ ಕನ್ನಡಿಸಿದೆ.

ಈಗಿನ ಶಿವಮೊಗ್ಗೆ, ಧಾರವಾಡ, ಕಾರವಾರ ಜಿಲ್ಲೆಗಳ ಕೆಲ ಕೆಲವು ಭಾಗಗಳನ್ನು ಒಳಗೊಂಡಿದ್ದ ಪ್ರದೇಶಕ್ಕೆ ಬೆಳುವಲನಾಡು ಎಂದು ಕರೆಯುತ್ತಿದ್ದರು. ಈ ಪ್ರದೇಶದ ವೈಶಿಷ್ಟ್ಯ ಮಲೆನಾಡು ಬಯಲು ಸೀಮೆಗಳೆರಡರ ಸೆರಗೂ ಸೇರಿರುವುದು. ಇಲ್ಲಿ ಬಯಲು ಸೀಮೆಯ ಬೆಡಗು ಮಲೆಸೀಮೆಯ ಸೊಗಸು ಎರಡನ್ನೂ, ನಾಲ್ಕಾರು ಮೈಲಿಗಳ ಅಂತರದಲ್ಲಿಯೇ ನೋಡಬಹುದು. ಒಂದೊಂದು ಕಡೆ ಎರಡರ ಸುಂದರ ಸಂಗಮ. ಸರ್ವಜ್ಞನನ್ನು ಪಡೆಯುವ ಪರಮ ಸೌಭಾಗ್ಯ ಈ ನಾಡಿಗೆ ಲಭಿಸಿತ್ತು.

ಸರ್ವಜ್ಞನ ಸ್ಥಳ, ತಾಯಿತಂದೆಗಳು

ಈ ವಿಷಯವನ್ನು ಅಮೂಲಾಗ್ರವಾಗಿ ವಿವೇಚಿಸುವುದು ಅಹಿತಕರವಾದ ಕೆಲಸವಾದರೂ ಅತ್ಯವಶ್ಯಕ. ಕವಿಚರಿತೆಕಾರರಾದ ಆರ್. ನರಸಿಂಹಾಚಾರ್ಯರು ಈತನ ಕಾಲದೇಶಾದಿಗಳನ್ನು ಕುರಿತು ಬರೆಯುತ್ತ, "ಧಾರವಾಡ ಜಿಲ್ಲೆಯ ಮಾಸೂರು ಎಂಬ ಗ್ರಾಮದಲ್ಲಿ ಬಸವರಸನೆಂಬ ಆರಾಧ್ಯ ಬ್ರಾಹ್ಮಣನಿದ್ದನು. ಅವನ ಹೆಂಡತಿ ಮಲ್ಲಮ್ಮ. ಈಕೆಗೆ ಮಕ್ಕಳಿಲ್ಲದೆ ಇದ್ದುದರಿಂದ ತನ್ನ ಕೊರತೆಯನ್ನು ಗಂಡನೊಡನೆ ಹೇಳಿಕೊಳ್ಳಲು ಆತನು ಕಾಶಿಗೆ ಹೋಗಿ ಈಶ್ವರನಲ್ಲಿ ಗಂಡು ಮಗುವಾಗಬೇಕೆಂದು ಬೇಡಿಕೊಂಡನು. ಈಶ್ವರನಿಂದ ಪಡೆದ ಪ್ರಸಾದವನ್ನು ನುಂಗಿ ಮರಳಿ ತನ್ನೂರಿಗೆ ಬರುವ ದಾರಿಯಲ್ಲಿ ಅಂಬಲೂರೊಳಗೆ ಒಬ್ಬ ಕುಂಬಾರನ ಮನೆಯಲ್ಲಿ ಇಳಿದುಕೊಂಡನು. ಅಲ್ಲಿದ್ದ ಮಾಳಿಯೆಂಬುವಳಲ್ಲಿ ಮೋಹಗೊಳ್ಳಲು ಅವಳು ಗರ್ಭಿಣಿಯಾಗಿ ಸರ್ವಜ್ಞನನ್ನು ಹಡೆದಳು"—ಎಂದು, ಇದನ್ನು ಸರ್ವಜ್ಞನೇ ಹೇಳಿದ್ದಾನೆನ್ನುವರು.

ರಂ. ಶ್ರೀ. ಮುಗಳಿ ಅವರು, "ಅವನ (ಸರ್ವಜ್ಞನ) ಚರಿತ್ರೆಯಲ್ಲಿ ಬಂದಿರುವ ಬಸವರಸ ಮತ್ತು ಕುಂಬಾರ ಮಾಳಿಯ ಪ್ರಣಯ ಕಥೆ ಸತ್ಯವಿರಲಿ ಬಿಡಲಿ, ಅವನ ಜನ್ಮ ಅಸಂಪ್ರದಾಯಿಕವಾಗಿರಬಹುದೆಂದು ತೋರುತ್ತದೆ. ಅವನ ಬಾಲ್ಯದಲ್ಲಿ ತಾಯಿ ಯಾರು ತಂದೆ ಯಾರು ಎಂದು ಕೇಳಿ ಅನೇಕರು ಅಣಕಿಸಿರಬಹುದು.ಆಗಲೇ ಅವನು 'ನಾ, ಶಿವನ ಮಗ'ನೆಂದು ಹೇಳಲು ಮೊದಲು ಮಾಡಿರಬೇಕು. ತಾಯಿಯೊಡನೆ ಹೊಂದಿಕೆಯಾಗದೆ ಅವನು ಸಣ್ಣ ವಯಸ್ಸಿನಲ್ಲಿಯೇ ಮನೆ ಬಿಟ್ಟು ಹೋಗಿರಬಹುದು"ಎಂದು ಊಹಿಸಿದ್ದಾರೆ. ಈ ಊಹೆಗೆ ಕವಿಚರಿತೆಕಾರರ ಹೇಳಿಕೆಯೇ ಆಧಾರವಾಗಿರಬೇಕು.

ವಿ. ರು. ಕೊಪ್ಪಳ ಅವರು ಉತ್ತಂಗಿ ಚನ್ನಪ್ಪನವರ ಸರ್ವಜ್ಞ ವಚನಗಳ ಕಿರಿಯಾವೃತ್ತಿ(1947)ಗೆ ಪ್ರಸ್ತಾವನೆ ಬರೆಯುತ್ತ, "ಕುಂಬಾರ ಪಂಗಡಕ್ಕೆ ಮುಖಂಡನೆನಿಸಿ ಪಂಡಿತನೆನಿಸಿದ(ಮಾಸೂರ) ಬಸವರಸನು ಕಾಶಿಯ (ದಕ್ಷಿಣ ಕಾಶಿ ಎನಿಸಿದ ಹಂಪೆ ?) ಈಶನಿಂದ ಮಕ್ಕಳ ವರಪ್ರಸಾದವನ್ನು ಪಡೆದುಕೊಂಡು ಅದನ್ನು ತಪಟೂರಿನಲ್ಲಿದ್ದ ಮಲ್ಲಮ್ಮನಿಗೆ ನೀಡಿದನು. ಅದರ ಫಲವಾಗಿ ಸರ್ವಜ್ಞನು ಜನಿಸಿದನು. ತಂದೆ ತಾಯಿಗಳು ಅವನಿಗೆ ಪುಷ್ಪದತ್ತನೆಂದು ಕರೆದಿರಲಿಕ್ಕೆ ಸಾಕು. ಗುರುಕರಸಂಜಾತನಾದ ಅವನು ಸರ್ವಜ್ಞನೆಂದು ಕರೆಯಿಸಿಕೊಂಡನು. (ವರರುಚಿ ಎಂಬುದು ಅವನ ಜನ್ಮಾಂತರದ ಅರಿವನ್ನು ಸೂಚಿಸುತ್ತಿದೆ)—ಎಂದಿದ್ದಾರೆ. ಹಿಂದಿನವರು ಹೇಳಿದುದನ್ನೇ ಇವರೂ ಸ್ವಲ್ಪ ಮುಚ್ಚಿ, ಸ್ವಲ್ಪ ಬಿಚ್ಚಿ ಹೇಳಿದ್ದಾರೆ.

ಶಿವಮೂರ್ತಿ ಶಾಸ್ತ್ರಿಗಳು ಈ ಕಥೆಗಳನ್ನು ನಂಬುವುದಿಲ್ಲ. ಈ ವೃತ್ತಾಂತವನ್ನು ಒಳಗೊಂಡಿರುವ ಪದ್ಯಗಳನ್ನು ಯಾರೋ ಹೊಸದಾಗಿ ಬರೆದು ಸೇರಿಸಿರಬೇಕೆನ್ನುತ್ತಾರೆ. " ಸರ್ವಜ್ಞನ ಆತ್ಮವನ್ನು ನೋಡಿದರೆ ಈ ದಂತ ಕಥೆಯಲ್ಲಿಯೂ ಒಂದು ನಿಜಾಂಶವಿರಬಹುದೇನೋ ಎಂಬ ಸಂದೇಹವುಂಟಾಗುತ್ತದೆ" ಎಂದೂ ಅವರ ಅನಿಸಿಕೆ.

'ರಾಧಾಧವ'ರು, ' ಕನ್ನಡ ನುಡಿ ' (ಡಿಸೆಂಬರ್ 1, 1974)ಯಲ್ಲಿ ಕವಿ ಚರಿತೆಕಾರರ ಅಭಿಪ್ರಾಯವನ್ನೇ ಉಚ್ಚರಿಸಿದ್ದಾರೆ.

ಆದರೆ ಈ ಎಲ್ಲ ಹೇಳಿಕೆಗಳಿಗಿಂತಲೂ ಸ್ವಾರಸ್ಯವಾಗಿರುವುದು ಶ್ರೀಕಲಮದಾನಿ ಗುರುರಾಯರೆಂಬುವರ ನಿರೂಪಣೆ. ಅವರು 'ಸರ್ವಜ್ಞ ವಚನಗಳು' ಎಂಬ ಅಗ್ಗದ ಮುದ್ರಣವನ್ನು ಹೊರತಂದಿದ್ದಾರೆ. ಅವರ ಮಾತು ಕೇಳಿ,

"ಧಾರವಾಡ ಜಿಲ್ಲೆಯ ಮಾಸೂರ ಗ್ರಾಮದಲ್ಲಿ ವಾಸಿಸುತ್ತಿರುವ ಒಳ್ಳೇ ಕರ್ಮಾನುಷ್ಠವುಳ್ಳ ಬ್ರಾಹ್ಮಣನು ಸಂಸಾರ ಹೂಡಿಕೊಂಡು ಎಷ್ಟೋ ಕಾಲ ಗತಿಸಿದರೂ ಅವನಿಗೆ ದೇವರು ಸಂತಾನವನ್ನು ಕೊಟ್ಟಿರಲಿಲ್ಲ. ಆದರಿಂದ ದುಃಖಿತನಾಗಿ ಕಾಶೀ ಯಾತ್ರೆಯನ್ನು ಕೈಕೊಂಡನು. ಅಲ್ಲಿ ಕಾಶೀ ವಿಶ್ವನಾಥನನ್ನು ಅಖಂಡವಾಗಿ ಸೇವಿಸಿದನು. ವಿಶ್ವನಾಥನು ಪ್ರೀತನಾಗಿ ಆ ಬ್ರಾಹ್ಮಣನ ಸ್ವಪ್ನದಲ್ಲಿ ಬಂದು "ನಿನ್ನಿಂದ ಒಂದು ದಿವ್ಯ ಜೀವಜ್ಯೋತಿಯು ಭೂಮಿಗಿಳಿಯುವುದು" ಎಂದು ಹೇಳಿದಂತಾಯಿತು. ಬ್ರಾಹ್ಮಣನು ಸಂತೋಷಭರಿತನಾಗಿ ಊರಿಗೆ ಹೊರಟನು. ಈ ದಿನ ರಾತ್ರಿಯೊಳಗಾಗಿ ತನ್ನ ಊರು ಮುಟ್ಟದರೆ ನಿರ್ದಿಷ್ಟಪಡಿಸಿದ ಕಾಲದಲ್ಲಿ ತಲಪಿದಂತಾಗುತ್ತಿತ್ತು. ಆದರೆ ಆ ಊರ ಮಗ್ಗುಲಲ್ಲಿಯೇ ಹಾಯ್ದು ಹೊಳೆಯೊಂದು ಮಹಪೂರ ಬಂದುಬಿಟ್ಟಿತ್ತು. ಮಳೆಯು ಸಹ ಧೋ ಧೋ ಎಂದು ಸುರಿಯುತ್ತಿತ್ತು. ಬ್ರಾಹ್ಮಣನು ಈಚೆಯ ದಂಡೆಯಲ್ಲಿಯ ಒಂದು ಕುಂಬಾರನವನ ಮನೆಯಲ್ಲಿ ನೆರಳಿಗೆಂದು ನಿಂತನು. ಪಂಚಾಂಗ ತೆಗೆದು ಜ್ಯೋತಿಷ್ಯ ಗುಣಿಸಿ ಲೆಕ್ಕ ತೆಗೆದರೆ ಈ ದಿನ ರಾತ್ರಿ ತನ್ನಿಂದ ತನ್ನ ಪತ್ನಿಯ ಗರ್ಭದಲ್ಲಿ ದಿವ್ಯಜ್ಯೋತಿಯೊಂದು (ಸ್ವಪ್ನದಪ್ರಕಾರ) ಉದಯಿಸಿ ಬರಬೇಕು, ರಾತ್ರಿಯಾದಂತೆ ಊರಿಗೆ ತಲುಪುವ ಆಸೆ ತಪ್ಪಿತೆಂದು ಬ್ರಾಹ್ಮಣನು ಚಡಪಡಿಸತೊಡಗಿದನು. ಇದನ್ನು ಕಂಡು ಕುಂಬಾರ ಮುದುಕಿಯು ಕನಿಕರದಿಂದ ಬ್ರಾಹ್ಮಣನನ್ನು ಕೇಳಿದಳು ಇವನು ಚಡಪಡಿಸುವ ಕಾರಣವನ್ನು. ಬ್ರಾಹ್ಮಣನು ತನ್ನ ಎಲ್ಲ ಕಥೆಯನ್ನು ವಿವರಿಸಿ " ಈ ದಿನ ರಾತ್ರಿ ಅಮೃತಗಳಿಗೆಯು. ನನ್ನಿಂದ ಒಂದು ಅಮೂಲ್ಯ ಜ್ಯೋತಿಯು ಭೂಮಿಗಿಳಿಯುವದಿದೆ, 'ನಾನಿಲ್ಲಿ ನನ್ನ ಪತ್ನಿ ಅಲ್ಲಿ' ಎಂದು ಚಡಪಡಿಸಿದನು.

ಮುದುಕಿಯು ಇದನ್ನು ಕೇಳಿ ಒಳಗೆಹೋಗಿ ಬಹಳ ಯೋಚಿಸಿ ತಿರುಗಿ ಮತ್ತೊಮ್ಮೆ ಬ್ರಾಹ್ಮಣನಲ್ಲಿ ಬಂದಳು. "ವಿಪ್ರೋತ್ತಮಾ, ನಿನ್ನ ಪತ್ನಿಯನ್ನಂತೂ ನೀನು ಈಗ ಹೊಂದಲಾರಿ. ದಿವ್ಯಜ್ಯೋತಿ

ಎಲ್ಲಿ ಇಳಿದರೇನು ? ನನ್ನ ಸೊಸೆಯನ್ನು ಕಳಿಸುತ್ತೇನೆ. ಅವಳೇ ಗರ್ಭಧರಿಸಲಿ ಈ ಅಮೃತಗಳಿಗೆಯನ್ನು ವ್ಯರ್ಥ ಹೋಗಗೊಡಬೇಡ ಎಂದಳು. ಬ್ರಾಹ್ಮಣನೂ ಒಪ್ಪಿದನು. ಆ ದಿನ ರಾತ್ರಿ ತರುಣಿಯೂ, ಸುಂದರಿಯೂ, ಸದ್ಗುಣಿಯೂ, ಸತ್ಪಾತ್ರಳೂ ಆದ ಕುಂಬಾರ ಸೊಸೆ ಮಾಳಿ ಎಂಬುವಳೊಡನೇ ಕಳೆದನು. ಮಾಳಿಯು ಸಹ ಸಂತೋಷ ದಿಂದ ಬ್ರಾಹ್ಮಣನಿಗೊಲಿದಳು. ಆವಳಲ್ಲಿ ಬ್ರಾಹ್ಮಣನಿಂದ ಗರ್ಭದಾನ ವಾಯಿತು. ದಿವ್ಯವಾದ ಜೀವಜ್ಯೋತಿಯೊಂದು ಭೂಮಿಗಿಳಿಯಿತು. "ಬ್ರಾಹ್ಮಣನು ತಂದೆ ಕುಂಬಾರ ಮಾಳಿಯು ತಾಯಿ" ಎಂದು ಸರ್ವಜ್ಞನು ತಾನೇ ಒಂದು ಕಡೆಗೆ ತನ್ನ ಜನನದ ಬಗ್ಗೆ ಹೇಳಿ ಕೊಂಡಿದ್ದಾನೆ."

ಕವಿಚರಿತೆಕಾರರೂ ಕಲಮುದಾನಿ ಅವರೂ ಹೇಳಿರುವಂತೆ, ಈ ಕಥೆಯ ಮೂಲ 16 ಸರ್ವಜ್ಞಾಂಕಿತ ವಚನಗಳೇ. ಇವು ಉತ್ತಂಗಿ ಚನ್ನಪ್ಪನವರು ಸಂಪಾದಿಸಿ ಪ್ರಕಟಿಸಿರುವ ಎಲ್ಲಾ ಮುದ್ರಣಗಳ ಆರಂಭದಲ್ಲಿವೆಯಾದರೂ ಅಲ್ಲಿ 'ಬ್ರಾಹ್ಮಣ' ಎಂಬ ಪದವಿಲ್ಲ. ಎಲ್. ಬಸವರಾಜು ಅವರು ಅಚ್ಚುಹಾಕಿಸಿರುವ 'ಪರಮಾರ್ಥ' ದಲ್ಲಿಯೂ ಇವೆ. ಇವು ಸರ್ವಜ್ಞ ವಿರಚಿತವಾಗಿರಲಾರವು ಎಂದು, ಅನೇಕ ಜನ ವಿದ್ವಾಂಸರು ಸಂದೇಹ ವ್ಯಕ್ತಪಡಿಸಿದ್ದಾರೆ. ಕೆಲವರು ಕವಿಯ ಧೋರಣೆಯನ್ನು ಗಮನಿಸಿ ಅವನವೇ ಇದ್ದಿರಬಹುದೆಂದಿರುವರು. ಆದರೆ ಈವರೆಗೆ ಯಾರೂ ಈ ಪದ್ಯ ಕವಿಯವಲ್ಲ ಎಂದಾಗಲೀ ಕವಿಯವೇ ಎಂದಾಗಲಿ ಸಾಧಾರವಾಗಿ ಸಕಾರಣವಾಗಿ ತೋರಿಸಿ ಕೊಟ್ಟಿಲ್ಲ. ಇದು ಆ ದೆಸೆಯಲ್ಲಿ ಒಂದು ಪ್ರಯತ್ನ. ಪ್ರಯತ್ನಕ್ಕೆ ಮೊದಲು ಸರ್ವಜ್ಞವಚನಗಳ ಸ್ವರೂಪ ವೈಶಿಷ್ಟ್ಯಗಳನ್ನು ರೂಪಿಸಿ ಕೊಳ್ಳುವುದು ಅಗತ್ಯ.

ಸರ್ವಜ್ಞವಚನಗಳು ತ್ರಿಪದೀ ಮಟ್ಟಿನಲ್ಲಿವೆ. ಸರ್ವಜ್ಞನ ತ್ರಿಪದಿಗೂ ಆತನಿಗಿಂತ ಹಿಂದಿನ ತ್ರಿಪದಿಗೂ ಛಂದೋ ದೃಷ್ಟಿಯಿಂದ ಕೆಲವು ವ್ಯತ್ಯಾಸಗಳಿವೆ. ಇದನ್ನು ಹಾಡುವವರು ಎರಡನೆಯ ಪಾದದ ಮೂರು ಗಣಗಳನ್ನು ಹಾಡಿ, ಮತ್ತೆ ಅದೇ ಪಾದವನ್ನು ಪೂರ್ತಿ ಯಾಗಿ ಹೇಳಿ ಅನಂತರ ಮೂರನೆಯ ಪಾದವನ್ನು ಹಾಡಬೇಕು. ಜಾನಪದ ತ್ರಿಪದಿಗಳನ್ನು ಹಾಡುವುದೇ ಹೀಗೆ. ಮಾನಸೋಲ್ಲಾಸ ಕಾರನೂ ಇದನ್ನು ಗಮನಿಸಿದ್ದಾನೆ. ಹಾಡುವವನ ದೃಷ್ಟಿಯಲ್ಲಿ ಅದು ನಾಲ್ಕು ಪಾದಗಳ ಹಾಡು. ಅವನು ಗಮನಿಸಬೇಕಾದುದು ಒಂದೊಂದು ಗಣವನ್ನೂ ಉಚ್ಚರಿಸುವಾಗ ಎಷ್ಟು ಕಾಲ ಬೇಕು ಎಂಬುದನ್ನು. ಇದು ಅಂಶಗಣಘಟಿತವೆ, ಮಾತ್ರಾಗಣಘಟಿತವೆ ಎಂಬ ಪ್ರಶ್ನೆ ಇಲ್ಲಿ ಗೌಣ. ಇಲ್ಲಿ, ಕಾಲವನ್ನಳೆಯುವುದಕ್ಕೆ ಸಂಗೀತ ಶಾಸ್ತ್ರವನ್ನು ಅನುಸರಿಸಿ ಲಘ್ವಕ್ಷರವನ್ನು ಅಳತೆಗೋಲಾಗಿ ಬಳಸ ಬಹುದು.

5 5 5 5
ಆಗಿಲ್ಲ ಹೋಗಿಲ್ಲ ⋮ ಮೇಗಿಲ್ಲ ಕೆಳಗಿಲ್ಲ

5 4 5+1
ತಾಗಿಲ್ಲ ತಪ್ಪು ⋮ ತಡಹಿಲ್ಲ

5 4 5 5
ತಾಗಿಲ್ಲ ತಪ್ಪು ⋮ ತಡಹಿಲ್ಲ ಲಿಂಗಕ್ಕೆ

5 4 5+1
ಬೇಗುಲವೆ ಇಲ್ಲ ⋮ ಸರ್ವಜ್ಞ

ಪ್ರಥಮ ಪಾದದಲ್ಲಿ ಪಂಚಾಕ್ಷರದ ನಾಲ್ಕು ಗಣಗಳು; ಅವು ಎರಡೆರಡಾಗಿ ಒಡೆದು ಯತಿ ಏರ್ಪಟ್ಟು ದ್ವಿತೀಯಾರ್ಧ ಪ್ರಥಮಾರ್ಧ ಗಳಲ್ಲಿ ಒಳಪ್ರಾಸ. ದ್ವಿತೀಯ ಪಾದದಲ್ಲಿ ಕ್ರಮವಾಗಿ ಪಂಚಾಕ್ಷರ ಗಣ, ಚತುರಕ್ಷರಗಣ, ಯತಿ, ಷಡಕ್ಷರಗಣ. ತೃತೀಯ ಪಾದದಲ್ಲಿ, ಪಂಚಾಕ್ಷರಗಣ, ಚತುರಕ್ಷರಗಣ, ಯತಿ, ಮುಂದೆ ಎರಡು ಪಂಚಾ ಕ್ಷರಗಣಗಳು. ಚತುರ್ಥ ಪಾದದಲ್ಲಿ ಪಂಚಾಕ್ಷರಗಣ, ಚತುರಕ್ಷರಗಣ, ಯತಿ, ಷಡಕ್ಷರಗಣ. ನಾಲ್ಕು ಪಾದಗಳಲ್ಲಿ ಒಟ್ಟು 14 ಗಣಗಳು. 6, 9, 13 ನೆಯ ಗಣಗಳು ಮೂರುಮಾತ್ರೆಯುಳ್ಳವಾದರೂ ಅವನ್ನು ಹಿಗ್ಗಲಿಸಿ ನಾಲ್ಕಕ್ಷರಗಳ ಕಾಲ ಹಾಡಬೇಕು. 7, 14 ನೆಯ ಪಾದ ಗಳನ್ನು ಉಚ್ಚರಿಸಲು ಆರಕ್ಷರಗಳ ಕಾಲವನ್ನೇ ತೆಗೆದುಕೊಳ್ಳಬೇಕು. 7, 10 ನೆಯ ಗಣಗಳು ಅಂತ್ಯಲಘುವುಳ್ಳವಾಗಿರಲೇಬೇಕು. ಏಕೆಂದರೆ ಆ ಒಂದೇ ಪದವನ್ನು ಒಂದುಸಲ ಆರಕ್ಷರದ ಕಾಲದಲ್ಲಿಯೂ ಮತ್ತೊಂದು ಸಲ ಐದಕ್ಷರ ಕಾಲದಲ್ಲಿಯೂ ಹೇಳಬೇಕಾಗುತ್ತದೆ. ಒಂದೊಂದುಸಲ ಕಾಲ ಗಣನೆಗೆ ಒಡಂಬಡುವಂತೆ ಗಣಗಳನ್ನು ಹಿಗ್ಗಿಸುವುದು ಕುಗ್ಗಿಸುವುದು ಮಾಡಬೇಕಾಗುತ್ತದೆ. ಹಿಗ್ಗಿಸುವುದೇ ಹೆಚ್ಚು ಹಿತಕರ. ಅದರ ಫಲವಾಗಿ ರಾಗಮಾಧುರ್ಯ ಏರ್ಪಟ್ಟು ಭಾವಸೌಂದರ್ಯ, ಅರ್ಥಪುಷ್ಟಿ ಮಿಗಿಲಾಗುತ್ತದೆ. ಇಷ್ಟು ಸರ್ವಜ್ಞ ಪದ್ಯಗಳ ಛಂದೋಲಕ್ಷಣ.

ಛಂದಸ್ಸು, ಅಂಕಿತ ಎರಡನ್ನೇ ನೋಡಿ ಇಂತಿಂಥ ವಚನಗಳು ಸರ್ವಜ್ಞನೇ ಬರೆದುವು ಎಂದು ತಿಳಿಯುವುದಕ್ಕಾಗುವುದಿಲ್ಲ. ಅನೇಕ ನಕಲಿ ವಚನಗಳಲ್ಲಿಯೂ ಈ ಲಕ್ಷಣಗಳೆಲ್ಲಾ ಇರುತ್ತವೆ. ಆತನ ಭಾಷೆ, ಶೈಲಿ, ರೀತಿ, ಮನೋಧರ್ಮ, ಆದರ್ಶಗಳು ಆಲೋಚನೆಗಳು-ಮುಂತಾದುವನ್ನು ಪರೀಕ್ಷಿಸಿ ಮೂಲ ವಚನಗಳಿಂದ ಖೋಟಾ ವಚನ ಗಳನ್ನು ಬೇರ್ಪಡಿಸಬೇಕಾಗುತ್ತದೆ.

ಸರ್ವಜ್ಞನ ಭಾಷೆ ಬನಿ ಬೆಡಗು ಕಸುವುಗಳುಳ್ಳ ಸವಿಗನ್ನಡ. ಅದರಲ್ಲಿ ಸಂಸ್ಕೃತ ಮತ್ತು ತದ್ಭವ ಶಬ್ದಗಳೂ ಸೇರಿರುತ್ತವೆಯಾದರೂ ಅವು ಎಲ್ಲರಿಗೂ ಅರ್ಥವಾಗುವಂತಹವು. ಮಾತುಗಳು ಒಂದ ಕ್ಕೊಂದು ಅಂಟಿಕೊಂಡಿರದೆ ಕೋದ ಮುತ್ತುಗಳಂತಿರುತ್ತವೆ. ಬಸ ವಣ್ಣನವರ ಮಾತಿನಲ್ಲಿ ಹೇಳುವುದಾದರೆ, ಮುತ್ತಿನ ಹಾರದಂತೆ, ಮಾಣಿಕ್ಯದ ದೀಪ್ತಿಯಂತೆ, ಸ್ಫಟಿಕದ ಸಲಾಕೆಯಂತೆ, ಬಾಣದಂತೆ ನೇರವಾಗಿ ಎದೆಗೆ ನಾಟುತ್ತವೆ. ಚುಚ್ಚುನುಡಿ, ಚುಚ್ಚುನುಡಿ, ಹಾಸ್ಯ ವಿನೋದನೆ, ಕಟಕಿ, ವ್ಯಂಗ್ಯ, ದ್ವಂದ್ವಾರ್ಥ ಶ್ಲೇಷೆ—ಎಲ್ಲಾ ಬಗೆಯ ಒಕ್ಕಣಿಕೆಯಲ್ಲಿಯೂ ಈತನ ಕನ್ನಡತನ ಹಳಚ್ಚನೆ ಹೊಳೆಯುತ್ತದೆ. ಒಟ್ಟನಲ್ಲಿ, ವಚನದ ಅಂಕಿತವನ್ನು ತೆಗೆದಿಟ್ಟರೂ ಅದರಲ್ಲಿ ಆತನ ವ್ಯಕ್ತಿತ್ವವನ್ನು ನೋಡಬಹುದು.

ಮತ್ತೊಂದು ಗಮನಾರ್ಹವಾದ ಅಂಶ. ಸರ್ವಜ್ಞನು ಕುಲ ಭೇದ, ಪಂಗಡ ಭೇದ, ವರ್ಗ ಭೇದ, ವರ್ಣ ಭೇದ, ಕಾಯಕ ಭೇದ ಮುಂತಾದ ಯಾವ ಭೇದವನ್ನೂ ಅರಿಯದ ಬಚ್ಚ ಬರಿಯ ಲಿಂಗ ವಂತ, ವಿರಕ್ತ, ವಚನಕಾರ. ವಚನಕಾರರು, ಕವಿಗಳ ಹಾಗೆ ತಮ್ಮ ಕೃತಿಗಳ ಆರಂಭದಲ್ಲಿ ಇಷ್ಟದೇವ, ಗುರು, ಗುರುಪರಂಪರೆ, ತಮ್ಮ ವಂಶಪರಂಪರೆ,ಬಿರುದುಬಳುವಳಿಗಳು ಯಾವುದನ್ನೂ ಹೇಳಿಕೊಳ್ಳುವ ರಲ್ಲ. ತಮ್ಮಗಿಂತ ಪೂರ್ವದ ವಚನಕಾರರನ್ನೋ ಕವಿಗಳನ್ನೋ ಸ್ಮರಿಸ ಬೇಕೆಂದು ಸ್ಮರಿಸಿದವರಲ್ಲ. ಅಂತ್ಯದಲ್ಲಿಯೂ ಹೀಗೆಯೆ. ಆನುಷಂಗಿಕ ವಾಗಿ ಆದ್ಯರ,ಸಮಕಾಲೀನ ಶರಣರ, ಕೆಲವು ವೇಳೆ ಪೌರಾಣಿಕ,ಐತಿ ಹಾಸಿಕ ವ್ಯಕ್ತಿಗಳ ಹೆಸರುಗಳನ್ನು ಮಾತ್ರ ಉಲ್ಲೇಖಿಸಿದ್ದರು. ಅವರ ಲ್ಲನೇಕರು ತಾವು ಕಂಡ ಉಂಡ ದಿವ್ಯಾನುಭವವನ್ನು ಬೆಡಗಿನ ವಚನ ಗಳಲ್ಲಿ ಹಿಡಿದಿಟ್ಟಿದ್ದಾರೆ. ಅವರ ವಚನಗಳ ಮುಡಿವುಗಳಲ್ಲಿರುವ ಅಂಕಿತಗಳನ್ನು ನೋಡಿ ಇವು ಇಂತಿಂತಹ ಶರಣನ, ಶರಣೆಯ ವಚನ ಗಳು ಎಂಬುದನ್ನು ಗುರುತಿಸುವುದಕ್ಕಾಗುತ್ತದೆ. ಸರ್ವಜ್ಞನದೂ ಇದೇ ಧ್ಯೇಯ, ಧೋರಣೆ. ಅಷ್ಟೇ ಅಲ್ಲ, ತನ್ನ ಆರಾಧ್ಯ ದೈವದ ಹೆಸರನ್ನೂ ಕೂಡ ಶರಣರು 'ಕೂಡಲ ಸಂಗಮದೇವ', 'ಗುಹೇಶ್ವರ' 'ಕಪಿಲಸಿದ್ಧ ಮಲ್ಲಿಕಾರ್ಜುನ' 'ಚೆನ್ನಮಲ್ಲಿಕಾರ್ಜುನ' ಎಂದು ಹೇಳಿ ಕೊಂಡಿರುವಂತೆ ಹೇಳಿಕೊಂಡಿಲ್ಲ. ' ಸರ್ವಜ್ಞ ' ಹರನೂ ಆಗ ಬಹುದು, ಹರಿಯೂ ಆಗಬಹುದು, ' ಅಲ್ಲಾ 'ನೂ ಆಗಬಹುದು. ವಚನಕಾರರಂತೆ ಈತನೂ ಹಲವಾರು ಬೆಡಗಿನ ವಚನಗಳನ್ನೂ ರಚಿಸಿದ್ದಾನೆ.

ಈ ಅಂಶಗಳೆಲ್ಲವನ್ನೂ ನೆನಪಿನಲ್ಲಿಟ್ಟುಕೊಂಡು ಉತ್ತಂಗಿ ಚೆನ್ನಪ್ಪನವರು ಸಂಗ್ರಹಿಸಿ ಪ್ರಕಟಿಸಿರುವ 'ಪೀಠಿಕಾಪ್ರಕರಣ'ದ ಆದಿಯಲ್ಲಿ ಬರುವ 16 ವಚನಗಳು ಅವನವೇ ಅಲ್ಲವೇ ಎಂಬುದನ್ನು ಈಗ ಒರೆಗೆ ಹಚ್ಚಬಹುದು. ವೆಂಕನ ಪ್ರತಿಯಲ್ಲಿಯೂ ಈ ವಚನ ಗಳಿವೆ; ಕ್ರಮ ಬೇರೆ.

ನಂದಿಯನು ಏರಿದನ । ಚಂದಿರನ ಸೂಡಿದನ
ಕಂದನ ಬೇಡಿ ನಲಿದಾನು–ನೆನೆವುತ್ತ
ಮುಂದೆ ಪೇಳುವೆನು ಸರ್ವಜ್ಞ 1

ಶರಣರ ವಚನಗಳ ಆದಿಯಲ್ಲಿ ಗಣಪತಿಯ ಪ್ರಾರ್ಥನೆ ಇರುವುದಿಲ್ಲ. ತಾನು ಹೇಳುವನು ಎಂಬ ಅಹಂಕಾರ ಇವನಲ್ಲಿಲ್ಲಿರು ತ್ತದೆ ? ಈ ವಚನದಲ್ಲಿ ಇತರ ದೋಷಗಳೂ ಇವೆ. ಇಲ್ಲಿ ಅವನ್ನೆಣಿ ಸುವುದು ಅನಗತ್ಯ.

ಅಂದು ಜೇಡರ ದಾಸ । ಹಿಂದೆ ನಾ ವರ ರುಚಿಯು
ಇಂದು ಸರ್ವಜ್ಞ ನಾ ನಿಮ್ಮ–ಕರುಣದ
ಕಂದ ಕಾಣಯ್ಯ ಸರ್ವಜ್ಞ 2

ಇದೇ ಪದ್ಯವು ಉತ್ತಂಗಿ ಅವರ ಸಂಗ್ರಹದಲ್ಲಿಯೆ,

ಅಂದಿನ ಪೂದತ್ತ । ಬಂದ ವರರುಚಿಯಾಗಿ
ಮುಂದೆ ಅವ ಸಾಲೆ ಸರ್ವಜ್ಞ–ನೆಂದೆನಿಸಿ
ನಿಂದವನು ನಾನೆ ಸರ್ವಜ್ಞ 4

— ಎಂದು ಮತ್ತೆ ಕಾಣಿಸಿಕೊಂಡಿದೆ.

ಎಲ್. ಬಸವರಾಜು ಅವರು ಅಚ್ಚುಹಾಕಿಸಿರುವ 'ಪರಮಾರ್ಥ'ದಲ್ಲಿ,

(ಅಂದಿನಾ) ಪುಷ್ಪದತ್ತ । ಬಂದ ವರರುಚಿಯಾಗಿ
ಮುಂದೇವ ಸಾಲೆ ಸರ್ವಜ್ಞನೆಂದೆನಿಸಿ
ನಿಂದವನು ತಾನೆ ಪರಮಾರ್ಥ 2

—ಹೀಗೆ ಪ್ರೈಡೋರಿದೆ. ಬಸವಣ್ಣನವರಂತೆ ಜೇಡರದಾಸಿಮಯ್ಯನೂ ಸರ್ವಜ್ಞನ ಮೇಲೆ ಅತಿಶಯವಾದ ಪ್ರಭಾವವನ್ನು ಬೀರಿದ್ದಾನೆ. ವರರುಚಿಯು ನೀತಿರತ್ನ ಎಂಬ ಸಂಸ್ಕೃತ ಗ್ರಂಥದ ಕರ್ತೃ ಎಂದು ಗೊತ್ತಾಗುತ್ತದೆ. ಜೇಡರ ದಾಸನಿಗೆ ಪ್ರತಿಸ್ಪರ್ಧಿಯಾಗಿ ನಿಂತಿರುವ ಪುಷ್ಪದತ್ತನು (ಪೂದತ್ತ) ನಂಬಿಯಣ್ಣನರಗಳೆಯಲ್ಲಿ ಹೇಳಿರುವಂತೆ ಕೈಲಾಸದ ಒಬ್ಬ ಗಣವರ್. ಯಾವನೋ ಒಬ್ಬ ಪ್ರತಿಕಾರನು ಸರ್ವಜ್ಞನಿಗೆ ತನ್ನ ಪೂರ್ವಜನ್ಮದ ಅರಿವೂ ಇದ್ದಿತೆಂಬುದನ್ನು ಸೂಚಿಸುವುದಕ್ಕಾಗಿ ಈ ಪದ್ಯಗಳನ್ನು ಬರೆದು ತೂರಿಸಿರಬೇಕು. ಈ ಪದ್ಯಕ್ಕೆ ಅನೇಕ ಪಾಠಾಂತರಗಳಿರುವುದೂ ಇದರ ಕಟ್ಟಡದಲ್ಲಿ ಭಾಷೆಯಲ್ಲಿ ದೋಷವಿರುವುದೂ ಇದು ಸರ್ವಜ್ಞನೇ ಬರೆದುದಲ್ಲ ವೆಂಬುದಕ್ಕೆ ಸಾಕ್ಷಿ. 'ಮುಂದೆ ಅವ ಸಲೆ' ಎಂಬುದು 'ಮುಂದೆ ಅವ ಸಾಲೆ' ಎಂದಾಗಿ 'ಮುಂ ದೇವ ಸಾಲೆ' ಎಂದು ವಿರೂಪಗೊಂಡಿದೆ. ಎಲ್. ಬಸವರಾಜರು ಸರ್ವಜ್ಞನನ್ನು ' ದೇವಸಾಲೆ ಸರ್ವಜ್ಞ ' ಎಂದು ಕರೆದಿದ್ದಾರೆ.

ಮುನ್ನ ಕೈಲಾಸದಲಿ । ಪನ್ನಾಗ ಧರನಾಳು
ಎನ್ನಯ ಪೆಸರು ಪುಷ್ಪದತ್ತನು–ಎಂದು
ಮುನ್ನಿಪರು ದಯದಿ ಸರ್ವಜ್ಞ 3

ಇದೇ ಪದ್ಯ ಸ್ವಲ್ಪ ಪಾಠಾಂತರದೊಂದಿಗೆ ಎಲ್. ಬಸವರಾಜು ಅವರ 'ಪರಮಾರ್ಥ'ದಲ್ಲಿದೆ. ಎರಡನೆಯ ಪಾದದಲ್ಲಿ ಛಂದೋ ದೋಷ, ಯತಿಭಂಗ ಎರಡೂ ಇವೆ. ಹಿಂದಿನ ಪದ್ಯದಲ್ಲಿರುವ 'ಪುಷ್ಪದತ್ತ' ಇಲ್ಲಿಯೂ ಹೂ ಹಿಡಿದು ನಿಂತಿದ್ದಾನೆ. ಈ ವಚನ ಸರ್ವಜ್ಞನದಲ್ಲ ಇದು ಆವನ ಶೈಲಿಯೆ ?

ಮುಕ್ಕಳಿಲ್ಲವು ಎಂದು । ಅಕ್ಕ ಮಲ್ಲಮ್ಮನು
ಮುಕ್ಕವೆ ಬಸವರಸಗರುಪಲಿಂ—ಕಾಶೀಯ
ಮುಕ್ಕಣ್ಣನೊಲಿದ ಸರ್ವಜ್ಞ 4

ಇದರಲ್ಲಿಯೂ ಪಾಠ ವ್ಯತ್ಯಾಸ. ಅರ್ಥ ಅಸ್ಪಷ್ಟ. ಎರಡನೆಯ ಪಾದದಲ್ಲಿ ಛಂದೋ ದೋಷ. ಸರ್ವಜ್ಞನ ಭಾಷೆಯೂ ಅಲ್ಲ ಇದು.

ಮಾಸೂರ ಬಸವರಸ । ಕೂಸನೀಶನೆ ಕೇಳಿ
ಕಾಶಿಯ ಅಭವನೊಳು ಪಡೆದವರ-ವದು ನಡುವೆ
ಸೂಸಿತೆಂತೆನಲು ಸರ್ವಜ್ಞ 6

ಸರ್ವಜ್ಞನ ಊರು ಮಾಸೂರು ಎಂಬುದನ್ನು ತಿಳಿದಿದ್ದ ಪ್ರತೀ ಕಾರನೊಬ್ಬನು ಈ ವಚನದ ಕರ್ತೃ. ಇದರಲ್ಲಿಯೂ ಸರ್ವಜ್ಞನಲ್ಲಿ ರುವ ಪ್ರಸನ್ನತೆಯಿಲ್ಲ. ಯಥಾ ಪ್ರಕಾರ ಇನ್ನುಳಿದ ದೋಷಗಳು.

ಇನ್ನೂ ರಾಎಪ್ರತ್ತೇಳು

ಗಂಡಾಗಬೇಕೆಂದು । ಪಿಂಡವನು ನುಂಗಲದು
ರಂಡೆ ಮಾಳವ್ವೆಯೊಳು ಬರುವ—ದೆಂತೆನಲು
ಕಂಡುದನು ಪೇಳ್ವೆ ಸರ್ವಜ್ಞ 7

ಗಂಡು ತನ್ನದು ಎಂದು । ಲಿಂಡೆ ಸುತನೆಂಬುವಳು
ಖಂಡ ಪರಶುವಿನ ವರಪುತ್ರ—ಆನು ನೆರೆ
ಕಂಡುದನೆ ಪೇಳ್ವೆ ಸರ್ವಜ್ಞ 13

ಮಾಳವ್ವೆ ಅಥವಾ ಮಾಳಿಯು ಸರ್ವಜ್ಞನ ತಾಯಿ ಎಂದು ಹೇಳುವುದು ಈ ಪದ್ಯದ ಕರ್ತೃವಿನ ಉದ್ದೇಶ. ' ಪಿಂಡವನು ನುಂಗಲು' ಎಂದರೆ ಪ್ರಸಾದ ಸ್ವೀಕರಿಸಲು ಎಂದು ತಿಳಿಯಬೇಕೆ ? 'ಪಿಂಡ' ಶಬ್ದದ ಬಳಕೆ ಲಿಂಗವಂತರಲ್ಲಿಲ್ಲ. 'ಕಂಡುದನೆ ಪೇಳ್ವೆ'— ಈ ಮಾತಿನ ಔಚಿತ್ಯವೇನು ?

ಗಡಿಗೆ ಮಡಿಕೆಯ ಕೊಂಡು । ಅಡಿಗೆಯ ವೇಳೆಯೊಳು
ಬಿಡದೆ ಮಳೆ ಮೋಡ ಪೊಡೆಯಲ್ಕೆ—ಇರ್ವರಿಗೆ
ತಡಬಡಲಾಯ್ತು ಸರ್ವಜ್ಞ 8

ಮೇಲಿನ ಪದ್ಯಗಳಲ್ಲಿರುವ ಗುಣಗಳೇ ಈ ಪದ್ಯದಲ್ಲಿಯೂ. ಅರ್ಥವಿಲ್ಲ, ಅನ್ವಯವಿಲ್ಲ. ಪ್ರಸನ್ನತೆ ಮೊದಲೇ ಇಲ್ಲ.

ಅಂಬಲೂರೊಳಗೆಸೆವ । ಕುಂಬಾರ ಸಾಲೆಯಲಿ
ಇಂಬಿನ ಕಳೆಯ ಮಾಳಿಯೊಳು—ಬಸವರಸ
ನಿಂಬಿಟ್ಟ ನೆನ್ನ ಸರ್ವಜ್ಞ 9

ಬೆಳುವಲ ನಾಡಿನಲ್ಲಿ ನನಗೆ ತಿಳಿದಿರುವಂತೆ 'ಅಂಬಲೂರು' ಇಲ್ಲ. ಇರುವುದು ಅಬಲೂರು. ಅದರ ಹಳೆಯ ಹೆಸರು, ಶಾಸನಗಳಲ್ಲಿ ರುವಂತೆ ಅಬ್ಬಲೂರು. ಅದು ಎಂದೂ 'ಅಂಬಲೂರು' ಎಂದು ರೂಪಾಂತರ ಹೊಂದಲಿಲ್ಲ. ಈ ವಚನವನ್ನು ರಚಿಸಿರುವ ರಸಿಕ ಸಜ್ಜನನಿಗೆ ಸರ್ವಜ್ಞಮೂರ್ತಿಯು ಕುಂಬಾರವನೆಂದು ಹೇಳುವ ಉದ್ದೇಶ. ಪ್ರಾಸಕ್ಕಾಗಿ ಅಂಬಲೂರು ಎಂಬ ಪದಪ್ರಯೋಗ. 'ಮಾಳಿ' ಎಂಬುದಕ್ಕೆ, ಅಗಸರ ಹೆಂಗಸು, ನಿಕೃಷ್ಟ ಹೆಣ್ಣು, ತೋಟ ಜಾತಿ, ಸಂಭೋಗ ಶಕ್ತಿಯಿಲ್ಲದವಳು (ಮುಟ್ಟು ನಿಂತವಳು) ಮುಂತಾದ ಅರ್ಥಗಳಿವೆ. ಸಂದಿಗ್ಧಾರ್ಥವುಳ್ಳ ಪದಗಳನ್ನು ಸರ್ವಜ್ಞ ಬಳಸುವುದಿಲ್ಲ. ಈ ಪದ್ಯವನ್ನು ಆತನೇ ಬರೆದಿದ್ದರೆ, ಆತನ ಊರು ಈಗಿನ ಅಬ್ಬಲೂರೇ ಆಗಿದ್ದರೆ ಅವನು ಅಬ್ಬಲೂರು ಎಂದು, ಸರಿ ಯಾದ ಹೆಸರನ್ನೇ ಇಡುತ್ತಿದ್ದ.

ಬಿಂದುವನು ಬಿಟ್ಟು ಹೋ । ದಂದು ಬಸುರಾದವಳು
ಒಂದಾಗಿ ಹೊತ್ತ ದಶಮಾಸ—ಉದರದೊಳು
ನಿಂದಾನು ಬೆಳೆದೆ ಸರ್ವಜ್ಞ 10

ಯಾರೂ ಕೇಳದ, ಅರಿಯದ, ಕಾಣದ ರಹಸ್ಯ ! ಇದನ್ನು ಹೇಳುವುದಕ್ಕೆ ಸರ್ವಜ್ಞನೇ ಬರಬೇಕಾಗಿತ್ತೆ ! ಪ್ರಕ್ಷೇಪಕಾರ ಮೊದಲ ಪಾದದಲ್ಲಿಯೇ ಎಡವಿ ಬಿದ್ದಿದ್ದಾನೆ,ಗತಿಗೆಟ್ಟು ಆಯತಿಗೆಟ್ಟು ಯತಿಗೆಟ್ಟು. ಈ ವಚನ ಸರ್ವಜ್ಞವಿರಚಿತವಲ್ಲವೆಂಬುದಕ್ಕೆ ಬೇರೆ ಕಾರಣಗಳನ್ನು ಹೇಳುವುದು ಸತ್ತ ಹಾವನ್ನು ಹೊಡೆಯುವಂತೆ.

ಹೆತ್ತವಳು ಮಾಳಿಯೆ । ನ್ನೊತ್ತಿ ತೆಗೆದವಳು ಬೆ
ನ್ನೊತ್ತಿ ಹಿಡಿದವಳು ಕಾಳಿ ತಾ—ಪೊರದೊಳಗೆ
ಬಿತ್ತರಿಸಿದವಳು ಸರ್ವಜ್ಞ 11

ತಾಳ, ಗತಿ, ಯತಿ, ಲಯ, ಅರ್ಥ ಒಂದೂ ನೆಟ್ಟಗಿಲ್ಲ. ಹೆಚ್ಚೇನು ಹೇಳುವುದು ?

ಬೆಳೆಯೆನ್ನದರಿದೆಂದು । ಕಳೆಯ ಕಂಡವರೆಲ್ಲ
ನೊಳೆಯಲ್ಲಿ ಸಸಿಯನರಿತು ತಾಂ-ಮಾಳಿಯನು
ತಿಳಿವವರು ಅರಿಗು ಸರ್ವಜ್ಞ 12

ಈ ವಚನವು ನವ ಸೃಷ್ಟಿಯೆಂಬುದನ್ನು 'ತಿಳಿವವರು ಅರಿಗು'! ವಚನವನ್ನು ಹಾಡಿ ನೋಡಿದರೆ ಅದರ ಪಾಡು ಗೊತ್ತಾಗುತ್ತದೆ.

ಮಾಳನೂ ಮಾಳಿಯೂ ಕೂಳಿತ್ತ ಹೆಮ್ಮೆಯಲಿ
ಕೇಳಲೆನ್ನಾರ ಮಗನೆಂದು—ನಾ ಶಿವನ
ಮೇಳದವನೆಂದೆ—ಸರ್ವಜ್ಞ 14

ಮಾಳನೂ ಮಾಳಿಯೂ ಕವಿಯ ತಂದೆ ತಾಯಿಗಳೇ ಆಗಿದ್ದರೆ ನೀನಾರ ಮಗ ಎಂದು ಪ್ರಶ್ನೆ ಮಾಡುತ್ತಿದ್ದರೆ ? ಅವರಿಗೆ ಕೂಳಿತ್ತ ಹೆಮ್ಮೆಯಾದರೂ ಏಕಿರಬೇಕು ?

ಎಲ್. ಬಸವರಾಜು ಅವರು ಅಚ್ಚು ಹಾಕಿರುವ'ಪರಮಾರ್ಥ' ದಲ್ಲಿ, ಕೊಂಚ ಪಾಠಾಂತರದೊಂದಿಗೆ—ಕೂಳ್ ತಿಂದ ಹೆಮ್ಮೆಯಲಿ, ಕೇಳಿ ನೀನಾರ, ಮೇಳದಣುಗೆಂಬೆ— ಬಂದಿದೆ. ಇದರ ಆಶಯವುಳ್ಳ ಇನ್ನೊಂದು ವಚನವೂ ಇದೆ:

ತಂದೆ ಹಾರುವನಲ್ಲ । ತಾಯಿ ಮಾಳಿಯು ಅಲ್ಲ
ಚಂದ್ರಶೇಖರನ ವರಪುತ್ರ–ನಾನಿಮ್ಮ
ಕಂದನಲ್ಲೆಂಬೆ ಪರಮಾರ್ಥ 13

ಹುಬ್ಬಳ್ಳಿಯ ಸಂತೆಯ ಮುದ್ರಣದಲ್ಲಿ ಇದೇ ಪದ್ಯ,

ತಂದೆ ಕುಂಬರ ಮಲ್ಲ । ತಾಯಿ ಮಾಳಲೆ ದೇವಿ
ಇಂದು ಶೇಖರನ ವರಪುತ್ರ ಧರಣೀಗೆ
ಬಂದು ಜನಿಸಿದನು ಸರ್ವಜ್ಞ

— ಹೀಗೆ ಕಾಣಿಸಿಕೊಂಡಿದೆ. ಎರಡೂ ನಕಲಿ ಮಾಲುಗಳೆ. ಇವೆರ ಡಕ್ಕೂ ಮೂಲ, ಮೇಲೆ ಹೇಳಿದ 'ಮಾಳನೂ ಮಾಳಿಯೂ' ಎಂಬ 'ಅಸ್ಸಲ್ ನಕಲಿ' ಮಾಲು ! ಈ ಮೂರು ಪದ್ಯಗಳ ಕಡೆಯ ಪಂಕ್ತಿಯ ಅಭಿಪ್ರಾಯ ಒಂದೇ ಆಗಿರುವುದನ್ನು ಗಮನಿಸಬೇಕು. ಬಹುಶಃ ಮೊದಲು ಹುಟ್ಟಿದುದು 'ಮಾಳನೂ ಮಾಳಿಯೂ' ಎಂಬ ನಕಲಿ ಪದ್ಯ. ಅನಂತರ ಬಂದ ಪ್ರತಿಕಾರನಿಗೆ ಈ ಪದ್ಯ ಸಾಲದು, ಇದಕ್ಕೆ ಪೋಷಕವಾಗಿ ಇನ್ನೊಂದು ಪದ್ಯ ಇರಬೇಕು ಎನ್ನಿಸಿತು.

'ತಂದೆ ಹಾರುವನಲ್ಲ'ಎಂಬ ಪದ್ಯವನ್ನು ಬರೆದು ತೂರಿಸಿದ.ಮತ್ತೊಬ್ಬ ಪ್ರತಿಕಾರ ಬಂದು 'ಹಾರುವನಲ್ಲ' ಎಂಬುದರ ಬದಲು 'ಕುಂಬರ ಮಲ್ಲ'ನನ್ನು ಸೇರಿಸಿದ ! ಎರಡೂ ಪದ್ಯಗಳ ಪ್ರಥಮ ಪಾದಗಳನ್ನು ನೋಡಿ. ಅಲ್ಲಿ ಒಳಪ್ರಾಸ ಇದೆಯೆ ?

ತಾ ಎಂಬೆನಲ್ಲದೆ । ತಾಯಿ ನಾನೆಂಬೆನೆ ?
ತಾಯಿಯೆಂದಾನು ನುಡಿದೇನು – ಪರಸ್ತ್ರೀಯ
ತಾಯಿಯೆಂದೆಂಬೆ ಸರ್ವಜ್ಞ 15

ಇದೇ ಪದ್ಯ ಎಲ್. ಬಸವರಾಜು ಅವರ 'ಪರಮಾರ್ಥ'ದಲ್ಲಿ,

ತಾಯೆಂದೆನಲ್ಲದೆ । ತಾಯಿ ತಾನೆಂದೆನೆ
ತಾಯೆಂದೆನೆಂದು ಸಖನುಡಿಯೆ–ಪರಸತಿಯ
ತಾಯೆಂದೆನೆಂದು ಪರಮಾರ್ಥ 770

ಎರಡರ ಅರ್ಥವೂ ಅಸ್ಪಷ್ಟ. ಪರಸ್ತ್ರೀಯರನ್ನು (ಪರಸತಿಯನ್ನು) ತಾಯಿ ಎಂದು ಕರೆಯುವುದು ಕನ್ನಡಿಗನ ಉತ್ತಮ ಸಂಸ್ಕೃತಿಯ ದ್ಯೋತಕ. ಅದಿರಲಿ, ಪರಸ್ತ್ರೀ (ಪರಸತಿ) ಎಂಬ ಮಾತನ್ನು ಬಳಸಿರುವ ಸರ್ವಜ್ಞನಿಗೆ 'ಸ್ವಸ್ತ್ರೀ' ಇದ್ದಳೆಂದು ತಿಳಿಯಬೇಕೆ ? ಆತ ಸಂಸಾರಿಯಲ್ಲವಲ್ಲ ! ಆ ಮಾತನ್ನು ಬಿಡಿ, ಪರಸತಿಯರನ್ನು ತಾಯಿ ಎನ್ನುವ ಗೃಹಸ್ಥ ಹಡೆದ ತಾಯಿಯನ್ನು ತಾಯಿ ಎಂದು ಭಾವಿಸಬಾರದೆ ? ವಾಸ್ತವವಾಗಿ ಯಾವ ಕನ್ನಡಿಗನೂ ತಾಯಿಯನ್ನು 'ತಾಯಿ' ಎಂದು ಸಂಬೋಧಿಸುವುದೂ ಇಲ್ಲ; ಅಮ್ಮ, ಅವ್ವ, ಅಬ್ಬೆ, ಅಬೆ, ಬೇ ಎಂದು ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ರೂಢಿ. ಮಾಸೂರಿನಲ್ಲಿ 'ಅಬೇ' ಎಂದೂ 'ಅವ್ವಾ' ಎಂದೂ ಕರೆಯುವುದು ರೂಢಿ.

ನೂಕಿದರು ಅವರಾಗ । ಕೂಕತನದೊಳು ಬೇಗ
ಲೋಕದೊಳಗೆಲ್ಲ ಕಂಡುದನು–ನುಡಿದು ತಾ
ನೇಕವಾಗಿಹನು ಸರ್ವಜ್ಞ 16

'ಪರಮಾರ್ಥ'ದಲ್ಲಿ ಇದೇ ಪದ್ಯ 'ನೂಕಿದವರರಾಗ', 'ಕೂಕಟಿಯವನನು', 'ನುಡಿವುತ ಏಕವಾಗಿಹೆನು' ಎಂಬ ಪಾಠಾಂತರಗಳನ್ನುಳ್ಳದಾಗಿದೆ. ಪದ್ಯದ ಮೊದಲ ಪಾದದ ಅರ್ಥಕ್ಕೂ ಎರಡು ಮೂರನೆಯ ಪಾದಗಳ ಅರ್ಥಕ್ಕೂ ಹೊಂದಿಕೆಯಾಗುವುದಿಲ್ಲ. ನಾವೇ ಯೋಚಿಸಿ ಊಹಿಸಿಕೊಳ್ಳಬೇಕು. 'ಕೂಕತನ' 'ಕೂಕಟಿ'—ಈ ಮಾತುಗಳ ಅರ್ಥವನ್ನು ಊಹಿಸಿಕೊಳ್ಳಬೇಕು. ಕುಹತತನ > ಕೂಕತನ ಆಗುವುದಿಲ್ಲ; ಕುಯಕತನ, ಕುಯ್ಕತನ ಎಂದಾಗುತ್ತದೆ. 'ಕೂಕಟಿ' ಎಂದರೇನೋ ತಿಳಿಯದು. ಇದು ಸರ್ವಜ್ಞ ವಚನದಂತೆ ತೋರುವ ಒಂದು ಕಗ್ಗ ! ಸರ್ವಜ್ಞನ ಶೈಲಿಯೆ ?

ವಚನಕಾರರು ತಮ್ಮ ಜನನ, ಬಾಲ್ಯ, ವಿದ್ಯಾಭ್ಯಾಸಾದಿಗಳನ್ನು ಕುರಿತು ಏನನ್ನೂ ಹೇಳಿಕೊಂಡಿರುವುದಿಲ್ಲ. ಸರ್ವಜ್ಞನೂ ವಚನಕಾರನೆ, ನಿಸ್ಸಂಶಯವಾಗಿ. ಆತನು ಕೂಡ ಸ್ವವಿಷಯವನ್ನು ಹೇಳಿಕೊಳ್ಳಲಿಲ್ಲ. ಇನ್ನಾರೋ ಬರೆದು ಸೇರಿಸಿದರು. ಅವನು ಹಾದರಕ್ಕೆ ಹುಟ್ಟಿದವನೆಂದು ಸಾರಿ ತಮ್ಮ ಕೀಳುರುಚಿಯನ್ನು ಪ್ರದರ್ಶಿಸಿದರು. ಹೀಗೇಕೆ ಮಾಡಿದರೆಂಬುದಕ್ಕೆ ಕಾರಣಗಳೂ ಇವೆ.

ಇದ್ದುದನ್ನು ಇದ್ದ ಹಾಗೆ ಹೇಳಿದರೆ ಸಿದ್ದಪ್ಪನಿಗೆ ಸಿಡಿಲು ಬಡಿಯಿತಂತೆ ! ಹಾಗೆ, ಸರ್ವಜ್ಞ ವಚನಗಳ ಸಿಡಿಲುಗಳು ಸಮಾಜದ ಹಲವು ಪಂಗಡಗಳಲ್ಲಿದ್ದ ಸ್ವಾರ್ಥಿಗಳಿಗೆ ಬಡಿದವು. ಮಹಾ ಪ್ರತಿಭಾಶಾಲಿಯೂ ಮಹಾನುಭಾವಿಯೂ, ಮಹಾ ಕವಿಯೂ, ವಿಶ್ವಬಂಧುವೂ ಆಗಿರುವ ಕವಿಯು ಲಿಂಗವಂತರಲ್ಲಿ ಹುಟ್ಟಿರುವುದು ಅಸಂಭವ ಎಂದು ಆ ಕಾಲದ ಲಿಂಗಾಯತೇತರರು ಭಾವಿಸಿರಬೇಕು. ಪಟ್ಟಭದ್ರ ಹಿತಾಸಕ್ತಿಗಳಿಗಂತೂ ಈತನ ಮಾತುಗಳು ಬರಸಿಡಿಲಿನಂತೆ ಎರಗುತ್ತಿದ್ದುವು; ಎರಗುತ್ತಲೂ ಇವೆ ! ಇಂತಹ ಗುಂಪುಗಳಲ್ಲಿದ್ದ ಕುತ್ಸಿತಮತಿಯೊಬ್ಬನು ಈ ಹದಿನಾರು ಪದ್ಯಗಳನ್ನು ಬಹು ಕಷ್ಟಪಟ್ಟು ನೆಯ್ದು 'ಸರ್ವಜ್ಞ' ಎಂಬ ಅಂಕಿತವಿಟ್ಟಿರಬೇಕು.

ಪೀಠಿಕೆಯಲ್ಲಿರುವ ಈ ಪ್ರಕ್ಷಿಪ್ತ ಪದ್ಯಗಳಿಂದ ನಮಗೆ ಸರ್ವಜ್ಞಮೂರ್ತಿಯ ನಿಜವಾದ ವೃತ್ತಾಂತವಾದರೂ ಸ್ವಲ್ಪವೂ ಗೊತ್ತಾಗುವುದಿಲ್ಲ. ಬೆಳುವಲ ನಾಡಿನ ಮಾಸೂರು ಈತನ ಸ್ಥಳವಾಗಿದ್ದರೂ ಇರಬಹುದು. ಈ ಪರಂಜ್ಯೋತಿಯನ್ನು ಪಡೆದ ಪುಣ್ಯವಂತರು, ಸದಾಚಾರ ಸದ್ಗುಣ ಸಂಪನ್ನರಾದ ಲಿಂಗವಂತ ದಂಪತಿಗಳೆಂಬುದು ಸುನಿಶ್ಚಯ. ಸರ್ವಜ್ಞ ವಚನಗಳನ್ನು ಯಾವ ಪೂರ್ವ ಗ್ರಹಕ್ಕೂ ಒಳಗಾಗದೆ, ನಿರ್ಮತ್ಸರದಿಂದ, ಸಹೃದಯತೆಯಿಂದ ಪರಿವೀಕ್ಷಿಸಿದರೆ ಈ ಸತ್ಯ ತಾನಾಗಿಯೇ ಗೋಚರಿಸುತ್ತದೆ.

ಇನ್ನು ಈತನ ಕಾಲದ ವಿಷಯವಾಗಿ. ವೆಂಕ ಎಂಬುವನು ಕ್ರಿ.ಶ. 7-3-1636 ರಲ್ಲಿ ಬರೆದು ಮುಗಿಸಿದ ಒಂದು ಓಲೆಯ ಪ್ರತಿ ಎಲ್. ಬಸವರಾಜು ಅವರಲ್ಲಿದೆ. ಕೃತಿಕರ್ತನು ಆ ಕಾಲಕ್ಕಿಂತ ಪೂರ್ವದಲ್ಲಿದ್ದನೆಂಬುದು ಇದರಿಂದ ವ್ಯಕ್ತವಾಗುತ್ತದೆ. ಸಂಪಾದನೆಯ ಸಿದ್ಧವೀರಣಾಚಾರ್ಯರು ಸರ್ವಜ್ಞಮೂರ್ತಿಯ ಆಚರಣೆಯ ಸಂಬಂಧದ ತ್ರಿವಿಧಿಗಳನ್ನು ಸೇರಿಸಿದ್ದಾರೆ. ಅವರ ಸಂಪಾದಕರಾದ ಜಿ. ಎಂ. ಉಮಾಪತಿಶಾಸ್ತ್ರಿ ಅವರು ಈತನ ಕಾಲ ಸುಮಾರು ಕ್ರಿ.ಶ. 1600 ಎಂದು, ಕವಿ ಚರಿತೆಕಾರರ ಅಭಿಪ್ರಾಯವನ್ನೇ ಅನುಮೋದಿಸಿದ್ದಾರೆ. ವೆಂಕನ ಹಸ್ತಪ್ರತಿಯ ಕಾಲವನ್ನೂ, ಸಿದ್ಧವೀರಣಾಚಾರ್ಯರ ಕಾಲವನ್ನೂ ಗಮನಿಸಿ, ಈ ಕವಿಯು ಕ್ರಿ.ಶ. 1600 ಕ್ಕೆ ಪೂರ್ವದಲ್ಲಿದ್ದನೆಂದು ಧೈರ್ಯವಾಗಿ ಹೇಳಬಹುದು. ಎಷ್ಟು ಪೂರ್ವದಲ್ಲಿ ಎಂಬುದೇ ಪ್ರಶ್ನೆ.

ಸರ್ವಜ್ಞ ವಚನಗಳ ಪರಿಪೂರ್ಣ ಪರಿಶುದ್ಧ ಪ್ರತಿಯು ದೊರಕಿದ ಮೇಲೆ ಈ ವಿಷಯವನ್ನು ಮತ್ತೆ ಪರಿಶೀಲಿಸಬೇಕಾಗುತ್ತದೆ. ಸದ್ಯದ ತೀರ್ಮಾನ, ಈ ಕವಿಯು ಕ್ರಿ.ಶ. 1500 ರಿಂದ 1600 ರ ಕಾಲಾವಧಿಯಲ್ಲಿ ಜೀವಿಸಿದ್ದಿರಬಹುದು.

ವೀರಶೈವ ಸಾಹಿತ್ಯದಲ್ಲಿ ಲಕ್ಷಣಪ್ರಜ್ಞೆ

ಲೇಖಕರು :
ಎಸ್. ವಿ. ಸೀತಾರಾಮಯ್ಯ, ಎಂ.ಎ.,
ಬೆಂಗಳೂರು

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪ್ರಾಚೀನ ಕನ್ನಡ ಸಾಹಿತ್ಯವನ್ನು ಜೈನಯುಗ, ವೀರಶೈವಯುಗ, ಬ್ರಾಹ್ಮಣಯುಗ ಎಂದು ಧಾರ್ಮಿಕ ದೃಷ್ಟಿಯಿಂದ ವಿಭಾಗ ಮಾಡುವ ಕ್ರಮವು ಒಂದುಂಟು. ಈ ಕ್ರಮವನ್ನು ಅನುಲಕ್ಷಿಸಿ ಹೇಳುವುದಾದರೆ, ಗುಣ ಮಟ್ಟದ ದೃಷ್ಟಿಯಿಂದಾಗಲಿ ಸಂಖ್ಯಾ ಬಾಹುಳ್ಯದ ದೃಷ್ಟಿಯಿಂದಾಗಲಿ ಜೈನ ಬ್ರಾಹ್ಮಣ ಕೃತಿಕಾರರಿಗೆ ಕಡಮೆಯೆನಿಸದೆ ಅವರಿಗೆ ಸರಿಸಮ ನಾಗಿ ವೀರಶೈವ ಕವಿಗಳು ಕನ್ನಡ ಸಾಹಿತ್ಯ ಭಂಡಾರಕ್ಕೆ ಅಮೋಘ ವಾದ ಕೃತಿರತ್ನಗಳನ್ನು ತುಂಬಿದ್ದಾರೆ.

ಆದರೆ ಕನ್ನಡ ವಾಙ್ಮಯ ಪ್ರಪಂಚವನ್ನು ಒಮ್ಮೆ ಸಿಂಹಾವ ಲೋಕನ ಕ್ರಮದಲ್ಲಿ ಗಮನಿಸಿದರೆ, ಕಾವ್ಯಶಾಸ್ತ್ರ ಹಾಗೂ ಕಾವ್ಯಾಂಗ ಗಳು ಎನ್ನಬಹುದಾದ ವ್ಯಾಕರಣ, ಛಂದಸ್ಸು ಮತ್ತು ನಿಘಂಟುಗಳ ಶಾಸ್ತ್ರಗಳಲ್ಲಿ ವೀರಶೈವ ಕವಿಗಳು ಜೈನಕವಿಗಳ ಹಾಗೆ ಎದ್ದು ಕಾಣುವ ಮಟ್ಟಿಗೆ ಕೃಷಿಮಾಡಿಲ್ಲದಿರುವುದು ನಮ್ಮ ಗಮನವನ್ನು ಸೆಳೆಯುತ್ತದೆ. ಈ ವಿದ್ಯಮಾನಕ್ಕೆ ಕಾರಣವೇನು ಎಂಬ ಪ್ರಶ್ನೆ ವಿಚಾರಣೀಯ ವಾಗಿದೆ.[1]

ಕನ್ನಡ ಕಾವ್ಯಮಾರ್ಗಕ್ಕೆ ಮಾತ್ರವಲ್ಲದೆ ಕಾವ್ಯಲಕ್ಷಣಕ್ಕೂ ಜೈನರೇ ಆದ್ಯಪ್ರವರ್ತಕರು. ಜೈನಕವಿಗಳು ಸಂಸ್ಕೃತ ಪ್ರಾಕೃತ ಭಾಷೆಗಳಲ್ಲಿ ನಿಸ್ಸೀಮ ಪಂಡಿತರಾಗಿದ್ದರು. ಗಂಗರು, ರಾಷ್ಟ್ರಕೂಟರು, ಚಾಲುಕ್ಯರು ಮೊದಲಾದ ರಾಜವಂಶೀಯರು ಜೈನಕವಿಗಳಿಗೆ ಮೊದ ಲಿನಿಂದಲೂ ಆಶ್ರಯದಾತರಾಗಿದ್ದರು. ಅವರ ಹಾಗೂ ಅವರ ಸಾಮಂತರ ಆಸ್ಥಾನಗಳು ಸಕಲವೇದಾಗಮ ಪುರಾಣಾದಿ ಧಾರ್ಮಿಕ ಮತ್ತು ಲೌಕಿಕ ಶಾಸ್ತ್ರಗಳಲ್ಲಿ ಪಾರಂಗತರಾದ ವಿದ್ವಾಂಸರುಗಳಿಂದಲೂ ಕವಿ ಗಮಕಿ ವಾದಿ ವಾಗ್ಮಿಗಳಿಂದಲೂ ಶೋಭಿಸುತ್ತಿದ್ದವು. ಆದ್ದರಿಂದ, ಅವರು ಧಾರ್ಮಿಕ ಕಾವ್ಯಗಳನ್ನೇ ಬರೆಯಲಿ ಲೌಕಿಕ ಕಾವ್ಯಗಳನ್ನೇ ಬರೆಯಲಿ, ಸಾಧಾರಣವಾಗಿ ವಿದ್ವಾಂಸರಾಗಿದ್ದ ಆಶ್ರಯದಾತರನ್ನೂ ಅವರ ಸಭಾಸದರನ್ನೂ ಮೆಚ್ಚಿಸುವುದಕ್ಕಾಗಿ ಸಂಸ್ಕೃತ ಕಾವ್ಯಮಾರ್ಗ ದಲ್ಲಿ ಲಕ್ಷಣಬದ್ಧವಾಗಿ ಕಾವ್ಯರಚನೆ ಮಾಡಿದರು; ಮುಂದಿನವರ ಮಾರ್ಗದರ್ಶನಕ್ಕಾಗಿ ಲಕ್ಷಣ ಗ್ರಂಥಗಳನ್ನೂ ವ್ಯಾಕರಣ ಮುಂತಾದ ಶಾಸ್ತ್ರಗ್ರಂಥಗಳನ್ನೂ ನಿರ್ಮಾಣಮಾಡಿದರು. 10 ನೆಯ ಶತಮಾನ ದಿಂದ ಸುಮಾರು 13 ನೆಯ ಶತಮಾನದವರೆಗಿನ ಅವಧಿಯಲ್ಲಿ ಜೈನ ಕವಿಗಳಿಂದ ರಚಿತವಾದ ಪ್ರಮುಖ ಕೃತಿಗಳು ಚಂಪೂಕಾವ್ಯಗಳು. ಜೈನಪುರಾಣಗಳ ಘನ ಗಂಭೀರ ಉದಾತ್ತ ವಸ್ತುನಿಷ್ಠವಾದ ಈ ಕೃತಿಗಳು 'ವಸ್ತುಕ' ಗಳೆಂದೂ, ಬಹುಶಃ ಗದ್ಯಮಿಶ್ರಿತವಾದದ್ದ ರಿಂದಲೋ ಏನೋ ಓದುವ (ವಾಚನ, ಪಠನ) ಕಾವ್ಯಗಳು ಅಥವಾ ಓದುಗಬ್ಬಗಳು ಎಂದೂ ಪ್ರಸಿದ್ಧವಾದವು.[2] ಈ ಯುಗದ ಈ ಕಾವ್ಯ ದೃಷ್ಟಿ ಮಾರ್ಗಕಾವ್ಯ ಲಕ್ಷಣನಿಷ್ಠೆ ಈ ಯುಗದಲ್ಲೇ ಕೃತಿರಚನೆ ಮಾಡಿದ ಹರಿಹರ, ರಾಘವಾಂಕ, ಸೋಮರಾಜ, ಮುಂತಾದ ವೀರ ಶೈವ ಕವಿಗಳಲ್ಲಿಯೂ ಒಂದನೆಯ ನಾಗವರ್ಮ (ಕರ್ಣಾಟಕ ಕಾದಂಬರೀ ಕರ್ತೃ : ಸು. 990), ರುದ್ರಭಟ್ಟ (ಜಗನ್ನಾಥ ವಿಜ ಯದ ಕರ್ತೃ : ಸು. 1200), ದೇವಕವಿ (ಕುಸುಮಾವಳೀ ಕಾವ್ಯದ ಕರ್ತೃ : ಸು. 1225), ಈ ಬ್ರಾಹ್ಮಣಕವಿಗಳಲ್ಲಿಯೂ ಸ್ಪಷ್ಟವಾಗಿ ಪ್ರಕಟಗೊಂಡಿದೆ. ಈ ಕವಿಗಳೆಲ್ಲರೂ ಕಾವ್ಯಲಕ್ಷಣಜ್ಞರಾಗಿದ್ದರು ಎಂಬಲ್ಲಿ ಸಂದೇಹವೇ ಇಲ್ಲ. ಅವರ ಕೆಲವು ಗಮನಾರ್ಹ ಉಕ್ತಿಗಳು ಅವರ ಕಾವ್ಯಲಕ್ಷಣಾಭಿಜ್ಞತೆಯನ್ನೂ ಕಾವ್ಯಲಕ್ಷಣ ನಿಷ್ಠೆಯನ್ನೂ ಸ್ಪಷ್ಟವಾಗಿ ಪ್ರತಿಬಿಂಬಿಸುತ್ತವೆ.

ಮೇಲೆ ಹೆಸರಿಸಿದ ವೀರಶೈವ ಕವಿಗಳ ಕಾವ್ಯಲಕ್ಷಣಾನುಸರ ಣೆಯ ದೃಷ್ಟಿಯನ್ನು ಸ್ವಲ್ಪ ಪರಿಶೀಲಿಸಿ ನೋಡೋಣ:

ಹರಿಹರನು ಮೊದಲು ಅರುವತ್ತು ಮೂವರು ಪುರಾತನರ ಮತ್ತು ಇತರ ಶಿವಶರಣರ ರಗಳೆಗಳನ್ನು ರಚಿಸಿದನೆಂದೂ, ಇವು ವಿದ್ವಾಂಸರಿಗೆ ಮೆಚ್ಚಿಗೆಯಾಗದೆ ಅವನನ್ನು 'ರಗಳೆಯ ಕವಿ'ಎಂದು ಹಾಸ್ಯ ಮಾಡಿದರೆಂದೂ, ಈ ಅಪಖ್ಯಾತಿಯನ್ನು ನೀಗಿಕೊಳ್ಳುವುದ ಕ್ಕಾಗಿಯೂ ತನಗೆ ಪೂರ್ವ ಕವಿಗಳಂತೆ ಮಹಾಕಾವ್ಯವನ್ನು ರಚಿಸುವ ಪ್ರತಿಭೆಯೂ ಸಾಮರ್ಥ್ಯವೂ ಉಂಟೆಂಬುದನ್ನು ತೋರಿಸಿಕೊಳ್ಳುವು ದಕ್ಕಾಗಿಯೂ 'ಗಿರಿಜಾ ಕಲ್ಯಾಣ'ವನ್ನು ರಚಿಸಿದನು—ಎಂಬ ಐತಿಹ್ಯ ವಿದೆ. ವಿಚಾರ ಮಾಡಿ ನೋಡಿದರೆ, ಅವನು ಮೊದಲು ಗಿರಿಜಾ ಕಲ್ಯಾಣವನ್ನು ಬರೆದು, ಅನಂತರವೇ ರಗಳೆಗಳನ್ನು ಬರೆದನೆಂದು ತೋರುತ್ತದೆ. ಪ್ರಾರಂಭದಲ್ಲಿ, ತನ್ನ ಕಾಲದಲ್ಲಿ ಪಂಡಿತ ಪ್ರಿಯ

---

1 [illegible] ಬ್ರಾಹ್ಮಣಕವಿಗಳೂ ಈ ಕ್ಷೇತ್ರಗಳಲ್ಲಿ ಗಮನಾರ್ಹ ವಾಗಿ ಕೆಲಸಮಾಡಿಲ್ಲ. ಅವರ ವಿಚಾರ ಈ ಲೇಖನಕ್ಕೆ ಪ್ರಸ್ತುತವಲ್ಲ.

2 ಈ ಸಂದರ್ಭದಲ್ಲಿ ಜನ್ನ ಕವಿಯ (ಸು. 1209—30) ಈ ಮಾತುಗಳನ್ನು ಗಮನಿಸಬೇಕು : ".... ಪದ್ಯಬಂಧದೊಳಂ .... ಗದ್ಯಬಂಧದೊಳಂ ತದ್ಯುಗಳ ಸಂಮಿಳಿತ ರಸಭಾವ ಸಂಪಚ್ಚಂಪೂ ಕೃತಿಯೊಳಂ ಓದಿ ಪೊಗಳ್ವ ಸುರನರಖೇಚರರ ...." (ಅನಂತನಾಥ ಪುರಾಣ ; 10–28 ರ ತರುವಾಯದ ವಚನ)

ವಾಗಿ ಪ್ರಾಚುರ್ಯದಲ್ಲಿದ್ದ ಸಾಂಪ್ರದಾಯಿಕ ಕಾವ್ಯ ಪದ್ಧತಿಗೆ ಕಟ್ಟು ಬಿದ್ದು, ತಾನು ರಾಜಸಭೆಯಲ್ಲಿರದಿದ್ದರೂ ರಾಜಸಭೆಯ ಮನ್ನಣೆಗೆ ಪಾತ್ರವಾಗುವಂತೆ ಲಕ್ಷಣ ಸಂಪನ್ನವಾಗಿ ಕಾವ್ಯ ರಚನೆ ಮಾಡಿ ಕೀರ್ತಿಭಾಜನನಾಗಲು ಅವನು ಗಿರಿಜಾ ಕಲ್ಯಾಣವನ್ನು ರಚಿಸಿದನು ಎಂಬ ಊಹೆ ಸಹೇತುಕವಾದುದೆನ್ನಿಸುತ್ತದೆ. ಈ ಊಹೆಗೆ ಕವಿಯ ಮಾತುಗಳೇ ಸಮರ್ಥನೆ ನೀಡುತ್ತಿವೆ:

ಪೊಸತಿದು ಪಾವನಮಿದು ರಂ–
ಜಿಸುವ ಮಹಾನರ್ಘ್ಯಮಿಂತಿದೆಂಬೀ ಜಸದಿಂ
ರಸವತ್ಕಾವ್ಯಂ ತಾಂ ರಾ
ಜಸಭೆ[3] ಬ್ರಹ್ಮಸಭೆ ದೇವಸಭೆಗೆಸೆದಿರ್ಕುಂ (1–15)

ರಾಜಸಭೆಯಲ್ಲಿನ ವಿದ್ವಾಂಸರಿಗೂ ಕವಿಜನಕ್ಕೂ ತನ್ನ ಕಾವ್ಯ ಪ್ರಿಯವಾಗುವುದೆಂಬುದು ಹರಿಹರನ ನಂಬಿಕೆ. ಅವನ ರಗಳೆಗಳಲ್ಲಿ ಕಂಡು ಬರುವ ಜನಾಭಿಮುಖ ದೃಷ್ಟಿ ಇಲ್ಲಿ ಕಂಡುಬರುವುದಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ, ತಾನು ಬರೆಯುತ್ತಿರುವುದು ಬೀದಿ ತಿರುಗುವ ಸಾಮಾನ್ಯ ಜನಕ್ಕಲ್ಲ, ವಿದ್ವಜ್ಜನರಾದ ರಸಿಕರಿಗೆ, ಎಂಬ ಬಿಂಕದ ಕೊಂಕು ಗಿರಿಜಾ ಕಲ್ಯಾಣದ ಕವಿಯಲ್ಲಿ ಸುಸ್ಪಷ್ಟವಾಗಿದೆ:

ಗೌರೀವರ ಕರ್ಣಾಲಂ–
ಕಾರಂ ರಸಪೂರಮತಿಗಭೀರಂ ಕಾವ್ಯಂ
ನೀರಸರಜೀವಂತೇನಿದು
ತಾರೆಲೆಯೇ ಬೀದಿವಾಡೆ ನೆರವಿಯ ತುಮುಕೇ ? (1–30)

ರಸಮಿದು ಭಾವಿಮಿದರ್ಥಮಿ-
ದು ಸಮಾಸಮಿದುಚಿತಪದಮಿದುತ್ಪ್ರೇಕ್ಷೆಯಿದೆಂ-
ದು ಸವಿದು ಸವಿದು ಕರಂ ನವ-
ರಸದೊಳಗಾಳುತ್ತುಮಿರ್ಪ ರಸಿಕರೆ ಬಲ್ಲರ್. (1–31)

ಪಂಪಾದಿ ಜೈನಕವಿಗಳ ಮಹಾ ಕಾವ್ಯ ಮಾರ್ಗದಲ್ಲಿಯೇ ಗಿರಿಜಾ ಕಲ್ಯಾಣವು ರಚಿತವಾಗಿದೆ. ಈ ಸಂಬಂಧದಲ್ಲಿ, ಡಾ|| ಶಿ. ಚಿ. ನಂದಿಮಠ ಅವರು ಸಂಪಾದಿಸಿ ಪ್ರಕಟಿಸಿರುವ ಗಿರಿಜಾಕಲ್ಯಾಣದ ಪರಿಷ್ಕೃತ ಮುದ್ರಣದ ಪ್ರಸ್ತಾವನೆಯಲ್ಲಿ ಅವರು ಹೇಳಿರುವ ಮಾತುಗಳು ಉಲ್ಲೇಖಾರ್ಹವಾಗಿವೆ:

"ಸಾಹಿತ್ಯ ದರ್ಪಣಕಾರ ವಿಶ್ವನಾಥನು, ಕಾವ್ಯದರ್ಶಕಾರ ಮಹಾಕವಿದಂಡಿ, ಸೂಕ್ತಿಸುಧಾರ್ಣವದ ಸಂಕಲನಕಾರ ಮಲ್ಲಿಕಾ-ರ್ಜುನ, ಇವರು ಮಹಾಕಾವ್ಯದ ಲಕಣಗಳನ್ನು ವಿವರಿಸಿರುವರು. ಅವುಗಳಲ್ಲಿ ಮುಖ್ಯವಾದುವು: 1. ಮಹಾಕಾವ್ಯವು ಸರ್ಗಬಂಧವಾಗಿರಬೇಕು. 2. ಒಬ್ಬನೇ ನಾಯಕನಿರಬೇಕು. ಅವನು ದೇವ, ಸದ್ವಂಶದವ, ಕ್ಷತ್ರಿಯ, ಧೀರೋದಾತ್ತಗುಣಾನ್ವಿತನಾಗಿರಬೇಕು. 3. ಶೃಂಗಾರ, ವೀರ, ಶಾಂತರಸಗಳಲ್ಲಿ ಒಂದು ಮುಖ್ಯಾಂಗವಾಗಿರಬೇಕು. ಇಲ್ಲವೆ ಅವೆಲ್ಲವೂ ಅದರಲ್ಲಿರಬೇಕು. 4. ಇತಿಹಾಸಕ್ಕೆ ಸಂಬಂಧಿಸಿದ ಇಲ್ಲವೆ ಸಜ್ಜನಾಶ್ರಯವಾದ ವಸ್ತುವಿರಬೇಕು. 5. ಆದಿಯಲ್ಲಿ ನಮಸ್ಕ್ರಿಯಾ, ಆಶೀರ್ವಾದ, ವಸ್ತುನಿರ್ದೇಶ, ಖಲರನಿಂದೆ, ಸಜ್ಜನರ ಗುಣವರ್ಣನೆಗಳಿರಬೇಕು. 6. ಪ್ರತಿ ಸರ್ಗದಲ್ಲಿ ಒಂದೇ ವೃತ್ತದ ಪದ್ಯಗಳು, ಸರ್ಗಾಂತ್ಯದಲ್ಲಿ ಬೇರೆ ವೃತ್ತದ ಪದ್ಯ ಇರಬೇಕು ಅಥವಾ ಪ್ರತಿಸರ್ಗದಲ್ಲಿ ನಾನಾ ವೃತ್ತದ ಪದ್ಯಗಳೂ ಇರಬಹುದು. 7. ಸರ್ಗಗಳು ಎಂಟಕ್ಕಿಂತ ಹೆಚ್ಚಿಗಿರಬೇಕು. ಅವು ಅತಿ ಸಣ್ಣವೂ ಅತಿ ದೊಡ್ಡವೂ ಆಗಿರಬಾರದು. ಸರ್ಗದ ಅಂತ್ಯದಲ್ಲಿ ಮುಂದಿನ ಸರ್ಗದ ಸೂಚನೆಯಿರಬೇಕು. 8. ಸಂಧ್ಯಾ, ಸೂರ್ಯ, ಚಂದ್ರ, ರಾತ್ರಿ, ಪ್ರದೋಷ, ಪ್ರಾತಃಕಾಲ, ಮಧ್ಯಾಹ್ನ, ಮೃಗಯಾ, ಶೈಲಿ, ವನ, ಋತು, ಸಾಗರ, ಸಂಭೋಗ, ವಿಪ್ರಲಂಭ, ಮುನಿ, ಸ್ವರ್ಗ, ಪುರ, ಅಧ್ವರ, ರಣ, ಪ್ರಯಾಣ, ಪುತ್ರೋದಯ, ಮೊದಲಾದವುಗಳ ವರ್ಣನೆಯಿರಬೇಕು. 9. ಕವಿಯವೃತ್ತ ಮತ್ತು ನಾಮ–ನಿರ್ದೇಶ, ನಾಯಕನ ಇತರರ ಕಾವ್ಯದ ನಾಮನಿರ್ದೇಶ,ಪ್ರತಿಸರ್ಗದ ವಿಷಯಕ್ಕನುಸರಿಸಿ ಅದರ ನಾಮನಿರ್ದೇಶ ಇವುಗಳಿರಬೇಕು. ಇವುಗಳಲ್ಲಿ ಯಾವುದನ್ನಾದರೂ ಬಿಟ್ಟರೆ ಅದು ಮಹಾ ಕಾವ್ಯವಾಗಲಾರದು. ಗಿರಿಜಾ ಕಲ್ಯಾಣವು ಈ ಎಲ್ಲ ಲಕ್ಷಣಗಳನ್ನೊಳಗೊಂಡಿದೆ. ಅದು ಸರ್ಗ (ಸಂಧಿ) ಬಂಧವಾಗಿದೆ. ಕಥೆಯು ಐತಿಹಾಸಿಕವಾಗಿದೆ. ಕಥಾನಾಯಕನಾದ ಶಿವನು ದೇವತಾ ಪುರುಷನು. ಈ ಕಾವ್ಯದ ಅಂಗವಾಗಿ ಶೃಂಗಾರ, ವೀರ, ಶಾಂತರಸಗಳು ಬಂದಿವೆ. ಹರಿಹರನು ಶಿವನ ಭಕ್ತ. ಆದುದರಿಂದ ಆತನ ಕಾವ್ಯಗಳಲ್ಲಿ ಶಿವಭಕ್ತಿ ರಸವು ತುಂಬಿ ತುಳುಕುತ್ತಿದೆ....ಮೊದಲನೆಯ ಸಂಧಿಯಲ್ಲಿ ವಸ್ತುನಿರ್ದೇಶ, ಕುಕುವಿನಿಂದೆ, ಹರಿಹರನ ಗುರುಪರಂಪರೆ, ಹಿಮಾಚಲದ ವರ್ಣನೆಗಳಿವೆ. ಪ್ರತಿ ಸಂಧಿಯಲ್ಲಿ ಬೇರೆ ಬೇರೆ ವೃತ್ತಗಳೂ ಕಂದಗಳೂ ತುಂಬಿವೆ. ಮೂಲ ಗ್ರಂಥದಲ್ಲಿ ಹತ್ತು ಸಂಧಿಗಳಿವೆ. ಶೈಲ, ವನ, ಋತು, ಪ್ರಯಾಣ, ಮೃಗಯಾ ಮೊದಲಾದವುಗಳ ವರ್ಣನೆ ತುಂಬಿದೆ. ಆದುದರಿಂದ, ಗಿರಿಜಾ ಕಲ್ಯಾಣವು ಕನ್ನಡ ಸಾಹಿತ್ಯದಲ್ಲಿ ಉತ್ತಮ ತರದ ಕಾವ್ಯವೆಂದೂ ಮಹಾ ಕಾವ್ಯದ ಲಕ್ಷಣಗಳನ್ನೆಲ್ಲ ಒಳಗೊಂಡಿದೆಯೆಂದೂ ವಿದ್ವಾಂಸರಿಂದ ಮನ್ನಣೆ ಪಡೆದಿದೆ. ಮೂಲ ಗಿರಿಜಾ ಕಲ್ಯಾಣದ ನಾಲ್ಕನೆಯ ಸಂಧಿಯಲ್ಲಿ ಪರ್ವತರಾಜನು ನಾರದನನ್ನು ಕರಕೊಂಡು ಚಂದ್ರಿಕಾ ವಿಹಾರ ಮಾಡಿದ ವಿಷಯವನ್ನು ಕವಿಯು ಕಾವ್ಯ ಲಕ್ಷಣಗಳನ್ನೆಲ್ಲಾ ಪೂರ್ತಿ ಮಾಡುವು-ದಕ್ಕಾಗಿಯೇ ಸೇರಿಸಿರಬೇಕು. ಇಲ್ಲದಿದ್ದರೆ ಹರಿಹರನಂತಹ ವಿರಕ್ತನು ನಾರದನಂತಹ ಋಷಿಯನ್ನು ವಿಷಯ ಭೋಗಿಗಳಿಗೆ ಆಕರ್ಷಕವಾದ ಸ್ಥಳಗಳೆಡೆಗೆ ತರುತ್ತಿರಲಿಲ್ಲ".[4]

"ಈತನ ಬಂಧವು ಜೈನಶೈಲಿಯನ್ನು ಅನುಸರಿಸಿ ಲಲಿತವಾಗಿಯೂ ಮೃದು ಮಧುರ ಗಂಭೀರವಾಗಿಯೂ ಇದೆ" ಎಂದು ಆರ್. ನರಸಿಂಹಾಚಾರ್ಯರು (ತಮ್ಮ ಕವಿಚರಿತೆಯಲ್ಲಿ) ಅಭಿಪ್ರಾಯ ಪಟ್ಟಿದ್ದಾರೆ. 'ಜೈನಶೈಲಿ' ಎಂಬ ಮಾತಿಗೆ 'ಮಹಾಕಾವ್ಯಲಕ್ಷಣಾನುಸಾರಿಯಾದ ಪ್ರೌಢ ಚಂಪೂಶೈಲಿ' ಎಂದು ಅರ್ಥಮಾಡಬಹುದು.

ಲಕ್ಷಣಬದ್ಧವಾದ ಪೂರ್ವಕಾವ್ಯಗಳ ಪರಿಚಯ ಅಭ್ಯಾಸಗಳೂ ಲಕ್ಷಣಗ್ರಂಥಗಳ ಪರಿಜ್ಞಾನವೂ ಇಲ್ಲದೆ ಗಿರಿಜಾಕಲ್ಯಾಣದಂಥ ಶ್ರೇಷ್ಠಮಟ್ಟದ ಲಕ್ಷ್ಯಗ್ರಂಥವನ್ನು ನಿರ್ಮಾಣಮಾಡುವುದು ಅಸಾಧ್ಯ

ಹರಿಹರನು 'ಘನಕವಿತಾವಿಳಾಸದೊಳೆಸಂದ' ಮಯೂರ, ಕಾಳಿದಾಸ, ಬಾಣ, ಹಲಾಯುಧ, ಕೊಂಡಗುಳಿ ಕೇಶಿರಾಜ, ಉದ್ಭಟ,ಮಲ್ಹಣ, ಭೋಜರಾಜ – ಈ ಶೈವ ಕವಿಗಳನ್ನು ಸ್ಮರಿಸಿದ್ದಾನೆ. ಹರಿಹರನ ಶಿಷ್ಯನಾದ ರಾಘವಾಂಕನೂ ಇವರನ್ನು ತನ್ನ ಹರಿಶ್ಚಂದ್ರ ಕಾವ್ಯದಲ್ಲಿ ಸ್ಮರಿಸಿದ್ದಾನೆ. ಇವರೂ ಇವರ ತರುವಾಯದ ವೀರಶೈವ ಕವಿಗಳಲ್ಲಿ ಕೆಲವರೂ ಸಂಸ್ಕೃತ ಕನ್ನಡ ಲಕ್ಷಣ ಗ್ರಂಥಗಳ ಪರಿಚಯವನ್ನು ಹೊಂದಿದ್ದು, ಲಕ್ಷಣ ಪ್ರಜ್ಞೆಯುಳ್ಳವರಾಗಿದ್ದರು ಎನ್ನುವುದಕ್ಕೆ ಅವರ (ಪೀಠಿಕಾ ಪ್ರಕರಣದ) ಕವಿ ಕಾವ್ಯ ಪ್ರಶಸ್ತಿರೂಪದ ಪದ್ಯಗಳೂ, ಅಲ್ಲಲ್ಲಿ ಬಳಸಿರುವ ಲಕ್ಷಣ ಪರಿಭಾಷೆಯೂ ಸಮರ್ಥ ಸಾಕ್ಷಿ ನುಡಿಯುತ್ತವೆ.

ಹರಿಹರನು ಪೂರ್ವಕವಿ ಪದ್ಧತಿಯಂತೆ ತನ್ನ ವಿಷಯವಾಗಿ ಇತರ ಕವಿಗಳೂ ಸಹೃದಯರೂ ಮಾಡಿದಂತೆ ಕ್ಷಮ್ಯವಾದ ಆತ್ಮ ಪ್ರಶಂಸೆಯನ್ನು ಮಾಡಿಕೊಂಡ ಮೇಲೆ, " ಪದೆಪಿಂ ಪೇಳ್ದಪೆಂ ರೀತಿ ಭಾವಂ ಛಂದೋಲಂಕಾರ ಸಾರಂ ಪುದಿದಿರೆ ಗಿರಿಜೋದ್ವಾಹಮಂ ಪ್ರೀತಿಯಿಂದಂ" ಎಂಬ ಪ್ರತಿಜ್ಞೆಯಿಂದಲೇ ಕಾವ್ಯಾರಂಭ ಮಾಡುತ್ತಾನೆ. ಎಲ್ಲ ಕಾವ್ಯಾಂಗಗಳೂ ಕಾವ್ಯಾತ್ಮವಾದ ರಸವನ್ನು ಓಲೈಸುವುವು ಎಂಬುದು ಹರಿಹರನ ದೃಷ್ಟಿ. ಅದು ಈ ಕೆಳಗಿನ ಪದ್ಯದಲ್ಲಿ ಚೆನ್ನಾಗಿ ವ್ಯಕ್ತವಾಗಿದೆ.

ಅತುಳತರಾರ್ಥಮರ್ಥದನುವೃತ್ತಿಪದಂ ಪದದಿಚ್ಛೆಬಂಧಮೂ-
ರ್ಜಿತ ಪದಬಂಧಸಂದಿನವರೀತಿ ಸುರೀತಿ ಗುಣಂ ಸದ್ವೃತ್ತಲಂ–
ಕೃತಿಸದಲಂಕೃತಿ ಪ್ರತಿಮನೊಪ್ಪುವ ಭಾವಮನೂನಭಾವದು-
ನ್ನತರಸಮೆಂದು ಸತ್ಕವಿಗಳಾಲಿಸೆಪೇಳ್ದಪೆನೀ ಪ್ರಬಂಧಮಂ.

'ಪದಬಂಧ' ಸ್ವರೂಪದಿಂದ ಮಾರ್ಗ (ಅಥವಾ ವಾಮನ ಮತದಂತೆ ರೀತಿ), ಮತ್ತು ಗುಣಗಳು ಸಿದ್ಧಿಸುತ್ತವೆ ಎಂಬುದನ್ನು ಮುಖ್ಯವಾಗಿ ಪ್ರತಿಪಾದಿಸಿದವರು ದಂಡಿ ಮತ್ತು ವಾಮನ. ಭರತ ಮುನಿ ನಾಟ್ಯ ಸಂಬಂಧವಾಗಿ ರಸನಿರೂಪಣೆ ಮಾಡಿದ್ದರೂ ಕಾವ್ಯಕ್ಕೆ ಅನ್ವಯಿಸುವಂತೆ ಮೊತ್ತ ಮೊದಲಿಗೆ ರಸದ ಪ್ರಾಶಸ್ತ್ಯವನ್ನು ಎತ್ತಿ ಹಿಡಿದವರು ಆನಂದವರ್ಧನ ಮತ್ತು ಮಮ್ಮಟ. ಆನಂದವರ್ಧನ ಧ್ವನಿಸಿದ್ಧಾಂತ ಸ್ಥಾಪನಾಚಾರ್ಯ; ಮಮ್ಮಟನೂ ಅದರ ಪುರಸ್ಕರ್ತ. ಹರಿಹರ ರಾಘವಾಂಕಾದಿ ವೀರಶೈವ ಕವಿಗಳ ಮಾತಿರಲಿ, ಪ್ರಾಯಿಕವಾಗಿ ಪ್ರಾಚೀನ ಕನ್ನಡ ಕವಿಗಳು ರಸದ ವಿಚಾರವಾಗಿ ಪ್ರಸ್ತಾಪ ಮಾಡಿರುವರೇ ಹೊರತು 'ಧ್ವನಿ'ಯ ವಿಚಾರವಾಗಿ ಸ್ಪಷ್ಟವಾಗಿ ಪ್ರಸ್ತಾಪ ಮಾಡಿಲ್ಲ.[5] ಕನ್ನಡ ಕವಿಗಳಿಗೂ ಲಾಕ್ಷಣಿಕರಿಗೂ ಧ್ವನಿ ತತ್ವದ ಪರಿಚಯವಿರಲಿಲ್ಲ ಎನ್ನುವುದಕ್ಕಿಂತ ಅವರು ಅದಕ್ಕೆ ಅಷ್ಟಾಗಿ ಪ್ರಾಶಸ್ತ್ಯ ಕೊಟ್ಟಂತೆ ಕಾಣುವುದಿಲ್ಲ ಎಂದು ಹೇಳುವುದು ಸೂಕ್ತ. ಆದ್ದರಿಂದ, ಹರಿಹರಾದಿಗಳು ಧ್ವನಿ ಶಬ್ದವನ್ನು ಉಚ್ಚರಿಸದಿದ್ದರೆ, ಆ ಸಂಬಂಧದ ಇತರ ಪಾರಿಭಾಷಿಕ ಪದಗಳನ್ನು ಪ್ರಯೋಗ ಮಾಡದಿದ್ದರೆ, ಅದು ಆಶ್ಚರ್ಯದ ಸಂಗತಿಯೇನಲ್ಲ.

ಗಿರಿಜಾ ಕಲ್ಯಾಣದ 'ಗಿರಿರಾಜ ದೇಶ ಪುರಾಸ್ಥಾನ ವರ್ಣನಂ' ಎಂಬ ದ್ವಿತೀಯಾಶ್ವಾಸದಲ್ಲಿ, ಪರ್ವತರಾಜನ ಆಸ್ಥಾನ ವರ್ಣನೆಯ ಸಂದರ್ಭದಲ್ಲಿ, ಹರಿಹರನು ಆಸ್ಥಾನದಲ್ಲಿದ್ದ ಸಭಾ ಜನರನ್ನು ವಿಶಿಷ್ಟ ರೀತಿಯಲ್ಲಿ ವರ್ಣಿಸುತ್ತಾನೆ. ಆಸ್ಥಾನದಲ್ಲಿ ಮುಗ್ಧಾಂಗನೆಯರು, ಮಧ್ಯಮ ನಾಯಿಕೆಯರು, ವಿದಗ್ಧವನಿತೆಯರು—ಇವರ ವಿವರ ಪೂರ್ಣವಾದ ವರ್ಣನೆಯಿಂದ ಹರಿಹರನಿಗೆ ಶೃಂಗಾರರಸ ವಿಷಯಕ ಲಕ್ಷಣ ಗ್ರಂಥಗಳ ಪರಿಚಯವಿದ್ದಿತೆಂದು ಧಾರಾಳವಾಗಿ ಊಹಿಸಬಹುದು. ಭೋಜರಾಜನ ಹೆಸರನ್ನು ಸ್ಮರಿಸಿರುವುದರಿಂದ ಅವನ ಶೃಂಗಾರ ಪ್ರಕಾಶದ ಪರಿಚಯವೋ, ಇಲ್ಲವೆ ಭರತ ಧನಂಜಯರ ನಾಟ್ಯ ಶಾಸ್ತ್ರ ಗ್ರಂಥಗಳೋ ಅವನ ಪರಾಮರ್ಶೆಗೆ ಬಂದಿರಬಹುದು. ಇದೇ ಆಸ್ಥಾನ ವರ್ಣನೆಯಲ್ಲಿ—"ಮತ್ತಂ ವಕ್ರೋಕ್ತಿ ಸ್ವಭಾವೋಕ್ತಿ ಪಾಕಲಾಲಿತ್ಯ ಗುಂಪು ಇಂಪು ರೀತಿ ನೂತನ ಮಾಗೆ ಗದ್ಯ ಪದ್ಯ ಕಾವ್ಯ ಕಳಾ ಪ್ರೌಢಿ ರೂಢಿವಡೆದಿಹ ಮಿಕ್ಕಿರ್ದ ಸರಸ ಕವಿಗಳ ಸಂದಣಿಯೊಳಂ" ಎಂಬ ಹರಿಹರನ ಉಕ್ತಿ ಅತ್ಯಂತ ಗಮನಾರ್ಹವಾಗಿದೆ. ಇಲ್ಲಿ ಹೇಳಿರುವ ವಕ್ರೋಕ್ತಿ ಸ್ವಭಾವೋಕ್ತಿಗಳೇ ಆ ಹೆಸರಿನ ಅಲಂಕಾರಗಳಲ್ಲ. ಭಾಮಹನ ಮತದಂತೆ,ಶಾಸ್ತ್ರನಿರೂಪಣೆಯ ಉಕ್ತಿ ವಿಧಾನದಿಂದ ಭಿನ್ನವಾದ, ಸೌಂದರ್ಯನಿಷ್ಠವಾದ ಕಾವ್ಯ ನಿರೂಪಣೆಯ ಉಕ್ತಿ ವಿಧಾನ ' ವಕ್ರೋಕ್ತಿ '; ಲೋಕದಲ್ಲಿರುವಂತೆಯೇ ವಸ್ತು ವಿವರಗಳನ್ನು ಹೃದ್ಯವಾಗುವಂತೆ ವರ್ಣನೆ ಮಾಡಿದರೆ, ಈ ಬಗೆಯ ಉಕ್ತಿ ವಿಧಾನ 'ಸ್ವಭಾವೋಕ್ತಿ'. ಭಾಮಹನ ದೃಷ್ಟಿಯಲ್ಲಿ ಇವೆರಡೂ ಪ್ರತ್ಯೇಕ ಅಲಂಕಾರಗಳಲ್ಲ.[6] ಶ್ರೀ ವಿಜಯನು ಕವಿರಾಜಮಾರ್ಗದಲ್ಲಿ ದಂಡಿಯನ್ನು ಅನುಸರಿಸಿ ವೈದರ್ಭಗೌಡ ಮಾರ್ಗಗಳ ನಿರೂಪಣೆ ಮಾಡುವಾಗ ಅವುಗಳನ್ನು ದಕ್ಷಿಣೋತ್ತರ ಮಾರ್ಗಗಳೆಂದು ಕರೆದು, ಭಾಮಹನ ಮತವನ್ನೂ ಅಳವಡಿಸಿಕೊಂಡು ದಕ್ಷಿಣ ಮಾರ್ಗದ ಭೇದಕ ಗುಣ ಸ್ವಭಾವೋಕ್ತಿಯೆಂದೂ ಉತ್ತರಮಾರ್ಗದ ಭೇದಕ ಗುಣ ವಕ್ರೋಕ್ತಿಯೆಂದೂ ವಿಶೇಷಿಸಿ ಹೇಳಿದ್ದಾನೆ.[7] ಹರಿಹರನು ಕಾವ್ಯಾಲಂಕಾರವನ್ನೂ ಕವಿರಾಜ ಮಾರ್ಗವನ್ನೂ ನೋಡಿದ್ದನೋ ಇಲ್ಲವೋ ಹೇಳುವುದು ಕಷ್ಟ. ಆದರೆ, ಈ ಕಾವ್ಯ ತತ್ತ್ವ ಅವನ ಮನಸ್ಸಿನಲ್ಲಿರುವುದಂತೂ ಸ್ಪಷ್ಟ.

ಇನ್ನು ರಾಘವಾಂಕನ ಕಡೆಗೆ ತಿರುಗೋಣ. ರಾಘವಾಂಕನು ತನ್ನ ಸೋದರ ಮಾವನೂ ಗುರುವೂ ಆದ ಹರಿಹರನ ಚಂಪೂ ಶೈಲಿಯನ್ನು ಅನುಸರಿಸದೆ, ಇನ್ನೂ ಶೈಶವಾವಸ್ಥೆಯಲ್ಲಿದ್ದ ಷಟ್ಪದೀ ಕಾವ್ಯ ಪ್ರಕಾರವನ್ನು ಕೈಗೆತ್ತಿಕೊಂಡು, 'ವರ್ಣಕ' ಎಂದರೆ ಷಟ್ಪದಿ ಕಾವ್ಯ' ಎಂಬ ಪ್ರತೀತಿ ನೆಲೆಗೊಳ್ಳುವಷ್ಟರ ಮಟ್ಟಿಗೆ ಷಟ್ಪದಿ ಕಾವ್ಯ ಪಟ್ಟವನ್ನು ರಚಿಸಿ, ಒಂದು ಹೊಸ ಸಂಪ್ರದಾಯದ ಪ್ರವರ್ತಕನಾದನು. ಬಹುಶಃ ಹರಿಶ್ಚಂದ್ರ ಕಾವ್ಯವೇ ಅವನ ಚೊಚ್ಚಲು ಕೃತಿಯೆಂದು ತೋರುತ್ತದೆ. "ರಾಘವಾಂಕನ ಇತರ ಕಾವ್ಯಗಳಲ್ಲಿ ವೀರಶೈವ ಮತ ವಿಷಯಗಳು ಅಧಿಕವಾಗಿದ್ದು, ಕಾವ್ಯ ಲಕ್ಷಣಗಳು ಗೌಣವಾಗಿರುವುವು. ಹರಿಶ್ಚಂದ್ರ ಕಾವ್ಯದಲ್ಲಿ ರಸಾಲಂಕಾರದಿ ಕಾವ್ಯ ಲಕ್ಷಣಗಳೂ ಕಾವ್ಯ ಶೈಲಿಯ ಪ್ರೌಢಿಮೆಯೂ ಹೆಚ್ಚಾಗಿರುವುವು."[8] ತನ್ನ ಕಾವ್ಯ ಲಕ್ಷಣ ಸಂಪನ್ನತೆಯನ್ನು ಕವಿಯೇ ಹೀಗೆ ರೂಪಕಮಾಡಿ ವರ್ಣಿಸಿದ್ದಾನೆ:

ರಸಜೀವ ಭಾವವೊಡಲರ್ಥವವಯವ ಶಬ್ದ–
ವಿಸರವೇ ನುಡಿಯಲಂಕಾರವೇ ತೊಡಿಗೆಯು ತ–

ವೆ ಸುಲಕ್ಷಣವೆ ಲಕ್ಷಣ ವಿಮಳ ಪದನ್ಯಾಸ ನಡೆ ರೀತಿ
ಸುಕುಮಾರತೆ ।
ರಸಿಕತನ ಸುಳಿ ಸುಖಂ ನಿಳಯವೆಂತಪ್ಪಯಿಾ
ಪೊಸ ಕಾವ್ಯಕನ್ನಿಕೆಯ ಪಡೆದು ಪಂಪಾಂಬಿಕೆಯ–
ರಸ ವಿರೂಪಾಕ್ಷಂಗೆ ಕೊಟ್ಟು ಹಂಪೆಯ ರಾಘವಾಂಕನೇಂ
ಕೃತಕೃತ್ಯನೋ (೧–೨೪)

ಈ ಪದ್ಯದಲ್ಲಿ ರಾಘವಾಂಕನ ಕಾವ್ಯಲಕ್ಷಣ ಪ್ರಜ್ಞೆ ಖಚಿತವಾಗಿದೆ; ಒಪ್ಪುವಂತಿದೆ. ಕಾವ್ಯದಲ್ಲಿ ರಸಭಾವಕ್ಕೆ ಪ್ರಾಧಾನ್ಯವನ್ನು ಕೊಟ್ಟು ರಸ ಜೀವ ಎಂದದ್ದರಿಂದ ಪರ್ಯಾಯವಾಗಿ ರಸ ಕಾವ್ಯದ ಆತ್ಮ ಎಂಬ ನಿಲುವಿಗೆ ಬಂದ ಹಾಗಾಯಿತು. ನಾಗವರ್ಮನು ಕಾವ್ಯಾವಲೋಕನದಲ್ಲಿ " ರಸಭಾವನಿರ್ಣೀತಿಯೆ ಜೀವಂ " ಎಂದು ಹೇಳಿರುವುದನ್ನೇ ಇಲ್ಲಿ ಸಂಕ್ಷೇಪಗೊಳಿಸಿ ಹೇಳಿದಂತಿದೆ. ಆದರೆ, ರಾಘವಾಂಕನು 'ಭಾವ'ವನ್ನು ' ರಸ 'ದಿಂದ ಬೇರ್ಪಡಿಸಿ, ' ಭಾವ ವೊಡಲು' ಎಂದಿರುವುದು ವಿಚಾರಣೀಯವಾಗಿದೆ. ಕವಿಭಾವವೇ ಕಾವ್ಯ ಸರ್ವಸ್ವಕ್ಕೂ ಮೂಲ. ಅದು ಸಹೃದಯನಿಂದ ಆಸ್ವಾದ್ಯವಾದಾಗ ರಸಪರಿಣಾಮವನ್ನು ಹೊಂದುತ್ತದೆ. ಶಬ್ದಾರ್ಥಗಳನ್ನು (ನಾಗವರ್ಮನ ಮತದಂತೆ, ಅದರಿಂದ ಸಿದ್ಧವಾದ 'ರೀತಿ'ಯನ್ನು) ಕಾವ್ಯಶರೀರ ಎಂದು ಇಟ್ಟುಕೊಂಡರೆ, ಕವಿಭಾವವು ಶಬ್ದಾರ್ಥಗಳ ಮೂಲಕವಾಗಿಯೇ ವ್ಯಕ್ತಪಡಬೇಕಾದ್ದರಿಂದ, ಭಾವವನ್ನೂ ಕಾವ್ಯ ಶರೀರದ ಮುಖ್ಯ ಭಾಗ ಎಂದೇ ಗ್ರಹಿಸಬೇಕಾಗುತ್ತದೆ. ಈ ಸಂದರ್ಭದಲ್ಲಿ, ರಾಘವಾಂಕನ ಹೇಳಿಕೆ ಅಸಂಗತವೆನಿಸುವುದಿಲ್ಲವೆಂದು ಕಾಣುತ್ತದೆ. ಅರ್ಥವನ್ನು ಭಾವ ಶರೀರದ ಅವಯವ ಎಂದಿರುವುದು ಅವನ ಕಲ್ಪನೆಗೆ ಹೊಂದಿಕೊಂಡೇ ಇದೆ. ಹಾಗೆಯೇ ಶಬ್ದ ವಿರಸವೇ ನುಡಿ ಎಂದಿರುವುದು. ಅಲಂಕಾರವೇ ತೊಡಿಗೆ ಎಂದು ಹೇಳಿ, ಶಬ್ದಾಲಂಕಾರಗಳಿಗೆ ಕಾವ್ಯ ಶರೀರದಲ್ಲಿ ಆಭರಣಗಳ ಸ್ಥಾನವನ್ನು ಕೊಟ್ಟಿರುವುದೂ ಸಮುಚಿತವಾಗಿಯೇ ಇದೆ. ಕಾವ್ಯಕ್ಕೆ ಅಲಂಕಾರಗಳು ಅಗತ್ಯವಲ್ಲ ಎಂಬ ನಾಗವರ್ಮನ ಮತವೇ ಇಲ್ಲಿ ಸೂಚಿತವಾಗಿದೆ.[9] ಕಾವ್ಯ ಕನ್ನಿಕೆಯ ' ಸುಖಂ ನಿಳಯ ' ಎಂದಿರುವುದರಲ್ಲಿ ಕಾವ್ಯದ ವಿಶ್ರಾಂತಿ ಸ್ಥಾನ (ಎಂದರೆ, ಪರಮ ಪ್ರಯೋಜನ) ಸಹೃದಯನ ಹೃದಯಾನಂದ ಎಂಬುದು ಧ್ವನಿತವಾಗಿದೆ. ಹೀಗೆ, ಅಲಂಕಾರ ಶಾಸ್ತ್ರದ ಸಾರ ಸರ್ವಸ್ವವನ್ನು ರಾಘವಾಂಕ ಭಟ್ಟಿಯಿಳಿಸಿದ್ದಾನೆ.

ರಾಘವಾಂಕನೂ ಹರಿಹರನ ಮೇಲ್ಪಂಕ್ತಿಯನ್ನನುಸರಿಸಿ ಮಹಾ ಕಾವ್ಯ ಲಕ್ಷಣಗಳಲ್ಲಿ ಒಂದಾದ ಅಷ್ಟಾದಶವರ್ಣನೆಗಳಲ್ಲಿ ಮುಖ್ಯವಾದುವನ್ನೆಲ್ಲಾ ತನ್ನ ಕಾವ್ಯದಲ್ಲಿ ಸಮಾವೇಶಗೊಳಿಸಿದ್ದಾನೆ. ಪುರ ಸಂಚಾರ ಸನ್ನಿವೇಶದಲ್ಲಿ ಹರಿಶ್ಚಂದ್ರನನ್ನು ಸೂಳೆಗೇರಿಗೆ ಪ್ರವೇಶ ಮಾಡಿಸಿ, ರಾಘವಾಂಕ ತನ್ನ ಕಾವ್ಯ ಗುರುವಿಗೆ ಕಾವ್ಯ ಲಕ್ಷಣದ ಪಾಠವೊಪ್ಪಿಸಿದ್ದಾನೆ ! ತನ್ನ ಕಾಮಶಾಸ್ತ್ರ ಜ್ಞಾನದ ಪ್ರಕಾಶಕ್ಕೆ ಸುಸಂಧಿಯನ್ನು ಕಲ್ಪಿಸಿಕೊಂಡಿದ್ದಾನೆ.

ಉದ್ಭಟ ಕಾವ್ಯ ಕರ್ತೃವಾದ ಸೋಮರಾಜನು ತನ್ನ "ಕಬ್ಬದಿಂಪು ಬುಧರಂ ಬಗೆಗೊಳ್ಪುದು" ಎಂಬ ನಂಬಿಕೆಯನ್ನು ವ್ಯಕ್ತಪಡಿಸಿ, ತನ್ನ ಕಾವ್ಯವು "ವಿಧೃತಾಲಂಕಾರದಿಂದಂ ನವಯುವತಿಯವೋಲ್, ಲಕ್ಷ್ಮ್ರಣ ಸ್ಫೂರ್ತಿಯಿಂದಂ ವಿಧುಜೃಂಭದ್ಬಿಂಬದಂತುಜ್ವಲ ರಸಮಯದಿಂದಂ ಮನೋಜ್ಞೋಕ್ಷ್ಣವೆಂತುದ್ಘಚತತ್ತ್ವಾನಂದಡಿಂದಂ ತ್ರಿದಶಕುಜದವೋಲ್ ಧಾತ್ರಿಯೊಳ್ ಶೋಭಿಕುಂ" ಎಂದು ವರ್ಣಿಸಿ, ವಿದ್ವಜ್ಜನ ಪ್ರಿಯವಾದ ಲಕ್ಷಣಬದ್ಧತೆಯಲ್ಲಿ ತನ್ನ ನಿಷ್ಠೆಯನ್ನು ಪ್ರಕಟಿಸಿದ್ದಾನೆ. ಇವನ ಕಾವ್ಯಕಂದವೃತ್ತಗಳಿಂದ ಕೂಡಿದ್ದು, ಚಂಪೂ ಕಾವ್ಯ ಸಂಪ್ರದಾಯದ ಪ್ರೌಢಬಂಧುರಶೈಲಿಯಲ್ಲಿದೆ.

ವೀರಶೈವ ಸಾಹಿತ್ಯ ಪರಂಪರೆ ವಚನಕಾರರಿಂದಲೇ ಪ್ರಾರಂಭವಾಗಿದ್ದು, ಅವರ ಕ್ರಾಂತಿಕಾರಕ ವಿಚಾರಗಳ ಪ್ರಭಾವ ವೀರಶೈವ ಕವಿಗಳಮೇಲೂ ಬಿದ್ದಿತು. ಶಿವಶರಣರ ವಚನಗಳಲ್ಲಿ ಕಾವ್ಯಗುಣ ವಿರುವ ಕಡೆ ಅದು ಸಹಜವಾಗಿ ಹೊಮ್ಮಿಬಂದದ್ದು."ವಸ್ತುಕವರ್ಣಕ-ತ್ರಿಸ್ಥಾನದ ಮೇಲೆ ನುಡಿದ ನುಡಿಗಳು ಇತ್ತಿತ್ತಲ್ಲಲ್ಲದೆ ಅತ್ತತ್ತಲಾರು ಬಲ್ಲರು ? ಇವರೆತ್ತಲೆಂದರಿಯರು, ಗಿಳಿವಿಂಡುಗೆಡೆವರು; ನಿಮ್ಮನೆತ್ತ ಬಲ್ಲರು ಗುಹೇಶ್ವರಾ ?" ಎಂಬ ಅಲ್ಲಮಪ್ರಭುವಿನ ವಚನದಲ್ಲಿ ಕಾವ್ಯ ವಿಮುಖತೆ ಎದ್ದುಕಂಡರೂ, ಕಾವ್ಯಸ್ವರೂಪ ಪ್ರಜ್ಞೆಯೂ ಮಿಂಚುತ್ತಿದೆ.ಹರಿಹರ ರಾಘವಾಂಕರ ಕಾಲದವರೆಗೂ ವಸ್ತುಕವಾಗಲಿ ವರ್ಣಕವಾಗಲಿ, ಪ್ರಧಾನವಾಗಿ ರಾಜಾಸ್ಥಾನಗಳಲ್ಲಿ ಬುಧರ ಹಾಗೂ ಕವಿಗಳ ರಂಜನೆಗಾಗಿಯೇ ರಚಿತವಾಗುತ್ತಿದ್ದುವು. ಅಲ್ಲಮಪ್ರಭು....ವಸ್ತುಕ ವರ್ಣಕ ಕವಿಗಳನ್ನು ಸಗಟಾಗಿ ಹೀಯಾಳಿಸುವುದನ್ನು ಗಮನಿಸಿದರೆ, ಅವು 'ಇತ್ತಿತ್ತ' ಎಂದರೆ, ಅಷ್ಟೇನೂ ಸದಭಿರುಚಿಯಿಂದ ಕೂಡಿರದ ಮನೋರಂಜನೆಯತ್ತ ಒಲೆಯ ತೊಡಗಿದ್ದುವು ಎಂಬುದು ಸ್ಪಷ್ಟವಾಗುತ್ತದೆ".[10] 'ಕಾವ್ಯಾಲಾಪಾಂಶ್ಚ ವರ್ಜಯೇತ್' ಎಂಬ ಘೋಷಣೆಯ ಪ್ರತಿಧ್ವನಿ ಇಲ್ಲಿ ಮೊರೆಯುತ್ತಿದೆ. ಆ ಕಾಲದ ವಸ್ತುಕ ವರ್ಣಗಳು ಕಾವ್ಯದ ಹೆಸರಿನಲ್ಲಿ ಯಾವ ಕಡೆಗೆ ಮುಖ ಮಾಡಿದ್ದುವು ಎಂಬುದು ಇಲ್ಲಿ ಸೂಚಿತವಾಗಿದೆ. ಅಲ್ಲಮಪ್ರಭು ಯಾವ ಕಾವ್ಯಗಳನ್ನು ಕುರಿತಿದ್ದಾನೆಯೋ ಊಹಿಸುವುದು ಕಷ್ಟ. ಇದು ಹಾಗಿರಲಿ, ವಸ್ತುಕವರ್ಣ ಎಂಬ ಕಾವ್ಯ ಪ್ರಭೇದಗಳ ನಿರ್ದೇಶದೊಂದಿಗೆ 'ತ್ರಿಸ್ಥಾನ' ಎಂಬ ಪದದ ಪ್ರಯೋಗ ಇಲ್ಲಿ ಗಮನಾರ್ಹ. ಅಲಂಕಾರ ಶಾಸ್ತ್ರದಲ್ಲಿ ಅಲಂಕಾರಪ್ರಸ್ಥಾನ, ರೀತಿಪ್ರಸ್ಥಾನ, ಧ್ವನಿ ಪ್ರಸ್ಥಾನ, ಎಂಬ 'ಪ್ರಸ್ಥಾನತ್ರಯ' ಪ್ರಸಿದ್ಧವಾಗಿದೆ. ಈ ಶಬ್ದ ಪ್ರಯೋಗ ಎಷ್ಟು ಪ್ರಾಚೀನ ಎಂಬ ಬಗೆಗೆ ಈ ಲೇಖಕ ಅಜ್ಞಾನವನ್ನೇ ಪ್ರಕಟಿಸಬೇಕಾಗಿದೆ. 'ವಸ್ತುಕ ವರ್ಣಕ ತ್ರಿಸ್ಥಾನ' ಎಂದರೆ ಅವುಗಳಲ್ಲಿ ಉಪನಿಷ್ಟವಾದ ಅಲಂಕಾರ, ರೀತಿ ಧ್ವನಿ (ಅಥವಾ ರಸ) ಇವುಗಳನ್ನು ಅವಲಂಬಿಸಿದ ಮೂರು ಪ್ರಧಾನ ಕಾವ್ಯ ಲಕ್ಷಣಗಳು ಪ್ರಭುವಿನ ಲಕ್ಷ್ಯದಲ್ಲಿದ್ದಿರಬಹುದೇ ಎಂಬ ಅನುಮಾನ ಮಾತ್ರ ಇಲ್ಲಿ ಸಾಧ್ಯ.[11] ಒಟ್ಟಿನ ಮೇಲೆ, ಅಲ್ಲಮಪ್ರಭು ಲಕ್ಷಣ ದೃಷ್ಟಿಯಿಂದ ಕಾಣಿಸಿಕೊಳ್ಳದಿದ್ದರೂ ಆತ ಕಾವ್ಯಲಕ್ಷಣಜ್ಞನಾಗಿದ್ದನೆಂದು ಊಹಿಸಬಹುದಾಗಿದೆ.

ಬಹುಶಃ ಎಲ್ಲ ವಚನಕಾರರಿಗಿಂತ ಬಸವಣ್ಣನವರ ವಚನಗಳಲ್ಲಿ ಕಾವ್ಯಗುಣ ಅತಿಶಯವಾಗಿದೆ ಎಂದರೆ ತಪ್ಪಾಗದು. ಆದರೆ, ಅವರಿಗೆ ಕಾವ್ಯ ಲಕ್ಷಣಗಳ ಅರಿವಿತ್ತೆ ಎಂಬ ಪ್ರಶ್ನೆಗೆ ಉತ್ತರ ಹೇಳುವುದು ಕಷ್ಟ. "ತಾಳಮಾನಸರಿಸವನರಿಯೆ, ಓಜೆ ಬಜಾವಣೆಯ

ಲೆಕ್ಕವನೆಱಿಯೆ, ಅಮೃತಗಣ ದೇವಗಣವನೆಱಿಯೆ" ಎಂಬ ಲಕ್ಷಣ ಜ್ಞಾನದ ಅಭಾವವನ್ನು ನಿವೇದಿಸಿಕೊಂಡಿರುವ ಈ ವಚನದಲ್ಲಿ ಸಂಗೀತ ಲಕ್ಷಣದ ಪ್ರಸ್ತಾವವಿದೆಯೇ ಹೊರತು ಕಾವ್ಯ ಲಕ್ಷಣದ್ದಿಲ್ಲ. "ಎನ್ನ ಕಾಯವ ದಂಡಿಗೆ ಮಾಡಯ್ಯಾ, ಎನ್ನ ಶಿರವ ಸೋರೆಯ ಮಾಡಯ್ಯಾ, ಬತ್ತೀಸರಾಗವ ಹಾಡಯ್ಯಾ....."ಎಂಬ ವಚನವೂ ಸಂಗೀತಕ್ಕೆ ಸಂಬಂಧಪಟ್ಟದ್ದೆ. ಕೆಲವು ವಚನಕಾರರು ತ್ರಿಪದಿಗಳನ್ನು ರಚಿಸಿದ್ದರೂ, ಅಷ್ಟರಿಂದ ಅವರು ಕಾವ್ಯ ಲಕ್ಷಣಜ್ಞರಾಗಿದ್ದರು ಎಂದು ತೀರ್ಮಾನ ಮಾಡಲಾಗುವುದಿಲ್ಲ. ಜನಪದ ಸಾಹಿತ್ಯವೆಲ್ಲವೂ ಕಾವ್ಯ ಲಕ್ಷಣದಲ್ಲಿ ಅನಭಿಜ್ಞರಾದವರಿಂದ ರಚಿತವಾದ ತ್ರಿಪದಿ ಮುಂತಾದ ದೇಸಿ ಛಂದಸ್ಸಿನ ರಚನೆಗಳಿಂದ ತುಂಬಿದೆ. ಒಟ್ಟಿನಮೇಲೆ ವಾಚನ ಕಾರರ ಅನುಭವ ಶಿವಾನುಭವ; ಕಾವ್ಯನುಭವವಲ್ಲ.

ವೀರಶೈವ ಧರ್ಮದ ಸಾಮಾಜಿಕ ಕ್ರಾಂತಿಯ ಹಾಗೂ ವಚನ ಕಾರರ ಕಾವ್ಯಲಕ್ಷಣ ವಿಮುಖ ಮತ್ತು ಜನಾಭಿಮುಖ ವಾಙ್ಮಯ ನಿರ್ಮಾಣದ ಪರಿಣಾಮ ಪ್ರಭಾವ ವೀರಶೈವ ಕವಿಗಳ ಮೇಲೆ ಮೂಡಿತು. ಹರಿಹರ ರಾಘವಾಂಕರು ತಮ್ಮ ಮೊದಲ ಕೃತಿಗಳನ್ನು ಚಂಪೂ ಕಾವ್ಯಗಳ ಲಕ್ಷಣಗಳಿಗೆ ಕೂಡಿದಮಟ್ಟಿಗೂ ಹೊಂದಿಕೊಂಡೇ ಬರೆದರು. ಹರಿಹರನು ತನ್ನ ಗಿರಿಜಾ ಕಲ್ಯಾಣದಲ್ಲಿ—

ನೋಡುವೊಡೊಂದಕ್ಷರಮದು
ಮಾಡುವೊಡುಚ್ಚಾರಣೆಗರಿದು ಮೂಱುಂ ತೆಱನಂ
ಕೂಡೆ ಕವಿತತಿ ವಿಚಾರಿಸೆ
ಬೇಡದಱಿಂ ಱಳಕುಳಕ್ಷಳಂಗಳನಿದಱೊಳ್ (೧-೩೨)

ಎಂದು ಘೋಷಿಸಿ, ಕನ್ನಡ ಸಾಹಿತ್ಯದಲ್ಲಿ ಕ್ರಾಂತಿಯ ಮೊದಲ ಹೆಜ್ಜೆಯೆನಿಟ್ಟನು. ಹರಿಹರನು ತನ್ನ ರಗಳೆಗಳಿಂದಲೂ, ಅವನ ಶಿಷ್ಯ ರಾಘವಾಂಕನು ತನ್ನ ಷಟ್ಪದೀ ಕಾವ್ಯಗಳಿಂದಲೂ ಕನ್ನಡ ಸಾಹಿತ್ಯ ದಲ್ಲಿ ಒಂದು ನೂತನ 'ವರ್ಣಕ' ಕಾವ್ಯ ಸಂಪ್ರದಾಯದ ಪ್ರವರ್ತಕ ರಾದರು. ಈ 'ವರ್ಣಕಕಾವ್ಯ'ಪಂಪ ಉಲ್ಲೇಖಿಸುವ 'ವರ್ಣಕ' ಕವಿತೆ ಯಿಂದ ಭಿನ್ನವಾದುದು ಎಂಬುದನ್ನು ಗಮನಿಸಬೇಕು. ಪಂಪಾದಿ 'ವಸ್ತುಕ' ಕವಿಗಳು ಗೇಯಪ್ರಧಾನ್ಯವೂ, ವರ್ಣನಾಪರವೂ, ಶೃಂಗಾರ ರಸಪ್ರಧಾನ್ಯವೂ ಆದ 'ವರ್ಣಕ'ಗಳನ್ನು ತಮ್ಮ ಕೃತಿಗಳಲ್ಲಿ ಸಮಾವೇಶ ಮಾಡಿದ್ದರು. ಹರಿಹರ ರಾಘವಾಂಕರು ಪ್ರಾರಂಭಿಸಿದ 'ವರ್ಣಕ ಕಾವ್ಯ' ಪದ್ಧತಿಯಲ್ಲಿ, ಚಂಪೂ ಶೈಲಿಯ ಚೌಕಟ್ಟಿನಲ್ಲಿ ನೆಲೆನಿಂತಿದ್ದ ಹದಿನೆಂಟು ವರ್ಣನೆಗಳ ಕಟ್ಟುಪಾಡನ್ನು ಸಡಿಲಗೊಳಿಸಿಕೊಂಡು ತಂತಮ್ಮ ಕಥಾವಸ್ತುವಿಗೆ ಅಗತ್ಯವಾದ ವರ್ಣನೆಗಳನ್ನು ಮಾತ್ರ ವೀರಶೈವ 'ವರ್ಣಕ' ಕವಿಗಳು ಪುರಸ್ಕರಿಸಿದರು; ಸಂಸ್ಕೃತ ಛಂದಸ್ಸಿನಿಂದ ಎರವಲು ಪಡೆದ ವೃತ್ತ ಕಂದಗಳನ್ನು ಕೈಬಿಟ್ಟು, ರಚನಾ ಸೌಲಭ್ಯಕ್ಕೂ ಜನಬಳಕೆಯ ಮಾತಿಗೂ ಇಂಬುಕೊಡುವ ರಗಳೆ, ಷಟ್ಪದಿ, ತ್ರಿಪದಿ, ಸಾಂಗತ್ಯ, ಈ ದೇಸಿ ಛಂದಸ್ಸುಗಳನ್ನು ಸನ್ನಿವೇಶ ಬಲದಿಂದಾಗಿ ಸ್ವೀಕರಿಸಿದರು. ಜೈನ ಕವಿಗಳ ಚಂಪೂಶೈಲಿಯನ್ನು ತ್ಯಜಿಸಿದ್ದರೂ ಅವರ ತೀರ್ಥಂಕರ ಪುರಾಣಗಳ ಧಾರ್ಮಿಕವಸ್ತು ಕಥನ ವೀರಶೈವ ಪುರಾಣ ವಸ್ತುವಿನ ರೂಪದಲ್ಲಿ ವರ್ಣಕಕಾವ್ಯ ಗಳಲ್ಲಿ ಪ್ರಭಾವಶಾಲಿಯಾಯಿತು. ವೀರಶೈವ ಕವಿಗಳು ವರ್ಣಕಕಾವ್ಯ ಸಂಪ್ರದಾಯದ ನೇತಾರರಾದರು; ಮುಂದೆ ಬಂದ ಜೈನ ಬ್ರಾಹ್ಮಣ ಕವಿಗಳು ಕೂಡ ಇವರನ್ನು ಅನುಸರಿಸುವಂತಾಗಿ, ಮತ್ತೆ ಷಡಕ್ಷರ ದೇವನು ಹದಿನೇಳನೆಯ ಶತಮಾನದಲ್ಲಿ ಸರ್ವಲಕ್ಷಣೋಪೇತವಾದ ಚಂಪೂಶೈಲಿಯನ್ನು ಪುನರುತ್ಥಾನಮಾಡುವ ತನಕ 'ವರ್ಣಕಕಾವ್ಯ' ಅಥವಾ 'ಹಾಡುಗಬ್ಬ' ತನ್ನ ಆಧಿಪತ್ಯವನ್ನು ಅವಿಚ್ಛಿನ್ನವಾಗಿ ನಡಸಿತು.

ವರ್ಣಕ ಕಾವ್ಯ ಅಚ್ಚಗನ್ನಡಕ್ಕೆ ಒಗ್ಗದ ಸಂಸ್ಕೃತ ಛಂದೋ ಮಾರ್ಗವನ್ನೂ ಅದಕ್ಕೆ ಅನುಗುಣವಾದ, ಕೆಲಮಟ್ಟಿಗೆ ಅಗತ್ಯವಾಗಿದ್ದು, ಸಂಸ್ಕೃತ ಮತ್ತು ಹಳಗನ್ನಡಗಳ ಭಾಷಾ ಮರ್ಯಾದೆ ಯನ್ನೂ ಕೈಬಿಟ್ಟ ಮಾತ್ರಕ್ಕೆ ಲಕ್ಷಣ ರಹಿತವಾಗಿ ಬೋಳು ಬೋಳಾ ಯಿತೆಂದು ಭಾವಿಸಬಾರದು. ಒಂದು ಕಾವ್ಯ ಸಂಪ್ರದಾಯ ಹಳ- ತೆನಿಸಿ ಹೊಸತೊಂದಕ್ಕೆ ದಾರಿ ಮಾಡಿಕೊಟ್ಟಾಗ ತನ್ನ ಸತ್ತ್ವದ ಬಹು ಭಾಗವನ್ನು ಅದಕ್ಕೆ ಧಾರೆಯೆರೆದೇ ಹಿಂದಕ್ಕೆ ಸರಿಯುತ್ತದೆ. ರಾಘವಾಂಕನು ಷಟ್ಪದಿ ಸಂಪ್ರದಾಯವನ್ನು ಲಕ್ಷಣಯುತವಾಗಿಯೇ ನಿರ್ಮಾಣ ಮಾಡಿ ಮಾರ್ಗದರ್ಶಿಯಾದನು. ಇದು ಹಳೆಯ ಲಕ್ಷಣ ವಲ್ಲ; ಹೊಸ ಲಕ್ಷಣವಷ್ಟೆ. ಈ ನೂತನವಾದರೂ ಸನಾತನ ಎನ್ನ ಬಹುದಾದ ಕವಿ ಸಹಜವಾದ ಲಕ್ಷಣ ಪ್ರಜ್ಞೆ ಕೆರೆಯ ಪದ್ಮರಸನ ವಂಶಸ್ಥನಾದ ಪದ್ಮಣಾಂಕನ ಉಕ್ತಿಗಳಲ್ಲಿ ಸ್ಪಷ್ಟವಾಗಿ ಹೊರ ಹೊಮ್ಮಿದೆ. 'ಪದ್ಮರಾಜ ಪುರಾಣ'ದಲ್ಲಿ ತನ್ನ ಗ್ರಂಥದ ಉತ್ಕೃಷ್ಟತೆ ಯನ್ನು ಹೇಳಿಕೊಳ್ಳುವ ಸಂದರ್ಭದಲ್ಲಿ ಅದಕ್ಕೆ ಕಾರಣವಾದ ಲಕ್ಷಣ ವಿಚಾರವನ್ನು ಹೀಗೆ ನಿರೂಪಿಸಿದ್ದಾನೆ:

ಸತಿಸಪ್ತಮಿಯಭೇದಮುಂ ಱಟಕುಳಕ್ಷಳಮು—
ನತಿಶಯದ ಗಮಕ ಕ್ರಿಯಾ ಸಮಾಸಂಗಳಂ
ಶ್ರುತಿಸಹ್ಯಸಂಧಿಯುಂ ತದ್ಧಿತಪದಮನಪಭ್ರಂಶ
ದೇಶೀಯಂಗಳಂ ।
ನುತಮಾಗೆ ಯೋಗಿಪ ಸಮಾಸಮುಂ ಸುಸಮುಸಂ—
ಸ್ಕೃತಮುಂ ವಿರಹಿತಾವ್ಯಯೋರು ಸಂಸ್ಕೃತ ಲಿಂಗ
ತತಿ ಶಿಥಿಲಪದಮುಖಾದ್ಯುಕ್ತ ಲಕ್ಷಣಮಱಿವ ಚತುರರೀ
ಕೃತಿಗೊಲಿಯರೇ ॥

ಸರಸತ್ವದಿಂ ಸಲಕ್ಷಣದಿಂ ಬೆಡಂಗಿನಿಂ
ಪರಮ ಸೌಂದರ್ಯದಿಂ ಜಾತಿಯಿಂ ಗುಣದಿನು-
ತ್ಕರ ವೃತ್ತಿಯಿಂದಲಂಕಾರದಿಂ ಮೋಹನಡೆ ಭಾವದಿಂ
ನಿರ್ದೋಷದಿಂ ।
ನಿರುಪಮುಮೃದೂಕ್ತಿಯಿಂ ಪ್ರೀತಿಯಿಂ ರೀತಿಯಿಂ
ವರಗಮುಕದೊಳ್ಪಿಂ ಸಕಲಕಲಾ—
ಸ್ಫುರಣದಿಂದೊಪ್ಪುವೀಕೃತಿಯುವತಿ ಕೋವಿದರನೇಂ
ಸೋಲಿಸದೆ ಬಿಡುವಳೇ ॥

ಹರೀಶ್ವರನನ್ನು ಭಕ್ತಿಯಿಂದ ಸ್ಮರಿಸಿರುವ ಪದ್ಮಣಾಂಕನು ಅವನು ಕಿತ್ತೊಗೆದಿದ್ದ ಱಟಕುಳಕ್ಷಳಭೇದಗಳನ್ನು ತನ್ನ ಕಾವ್ಯದಲ್ಲಿ

ಪುನಃ ಪ್ರತಿಷ್ಠಾಪನೆ ಮಾಡಿರುವುದಲ್ಲದೆ, ಕೇಶಿರಾಜನು ಎತ್ತಿಹಿಡಿದ ಇತರ ಕನ್ನಡ ವ್ಯಾಕರಣ ವೈಶಿಷ್ಟ್ಯಗಳಿಗೂ[12] ಮನ್ನಣೆ ಕೊಟ್ಟಿರುವುದು ಅತ್ಯಂತ ಗಮನಾರ್ಹವಾಗಿದೆ. ಇನ್ನೊಂದು ಪದ್ಯದಲ್ಲಿ ಅವನ ಕಾವ್ಯ ಲಕ್ಷಣ ಪಕ್ಷಪಾತ ಸುವ್ಯಕ್ತವಾಗಿದೆ. ಕಾವ್ಯರಚನೆಯಲ್ಲಿ ವ್ಯಾಕರಣ ಶುದ್ಧಿಗೆ ಇವನು ಗಮನ ಕೊಟ್ಟಿರುವುದು ಎಲ್ಲ ಕಾಲದಲ್ಲೂ ಅನುಸರಣೀಯವಾದ ಆದರ್ಶ. ಕಾವ್ಯ ಮೀಮಾಂಸೆಯಲ್ಲಿ ವ್ಯಾಕರಣದ ಪ್ರಮುಖ ಸ್ಥಾನವನ್ನು ಸಂಸ್ಕೃತ ಕನ್ನಡ ಲಾಕ್ಷಣಿಕರು ಗುರುತಿಸಿದ್ದಾರೆ.

ಲಕ್ಷಣನಿಷ್ಠೆಯಲ್ಲಿ ಭೀಮಕವಿಯನ್ನು ಅನುಸರಿಸಿರುವ ಪದ್ಮಣಾಂಕನ ತರುವಾಯ ಚೆನ್ನಬಸವಪುರಾಣ ಕರ್ತೃವಾದ ವಿರೂಪಾಕ್ಷ ಪಂಡಿತನು ನಮ್ಮ ಗಮನವನ್ನು ಸೆಳೆಯುತ್ತಾನೆ. "ಕರ್ಣಾಟಕ ವ್ಯಾಕರಣ ಛಂದಸ್ಸಲಂಕಾರ ಶಬ್ದಂಗಳ ಅನುಗೊಳಿಸಿ ವರ್ಣಕಕ್ಕಿಲ್ಲ ಲಕ್ಷಣಮೆಂಬ ಜನರ ನಾಣ್ಣುಡಿಯನಲ್ಲೆನಿಸಿ ಪೇಳ್ವೆಂ ವಿನೂತನ ಕಾವ್ಯಮಂ ಜಗತ್ಸೇವ್ಯಮಂ" ಎಂದು ಈತ ಹೇಳಿಕೊಂಡಿರುವುದನ್ನು ನೋಡಿದರೆ, "ಇವನ ಕಾಲಕ್ಕೆ ಹಿಂದೆಯೇ ಷಟ್ಪದೀರೂಪವಾದ ಗ್ರಂಥವನ್ನು ಆವ ನಿರ್ಬಂಧವೂ ಇಲ್ಲದೆ ಲಕ್ಷಣವಿರುದ್ಧವಾಗಿ ಬರೆಯುತ್ತಿದ್ದಂತೆ ತೋರುತ್ತದೆ" ಎಂಬ ಕವಿಚರಿತೆಕಾರರ ಮಾತು ವಿಚಾರಣೀಯವಾಗಿದೆ. (ಕವಿಚರಿತೆ II, 1972; ಪುಟ 259). ಸಾಧಾರಣ ಕವಿಗಳು ಹಾಗೆ ಮಾಡುತ್ತಿದ್ದಿರಬಹುದು; ಅವರ ಸಂಖ್ಯೆಯು ಹೆಚ್ಚಾಗಿದ್ದು, ಜನರ ನಾಣ್ಣುಡಿ ಹುಟ್ಟಲು ಕಾರಣವಾಗಿರಬಹುದು; ಆದರೆ ಇಂಥ ಕಾವ್ಯಗಳು ಕಾಲಗರ್ಭದಲ್ಲಿ ಜೀರ್ಣವಾಗಿಹೋಗಿದ್ದು, ಸತ್ವವುಳ್ಳ ಕವಿ ಕೃತಿಗಳು ಮಾತ್ರ ಉಳಿದುಕೊಂಡಿರುವಂತೆ ಕಾಣುತ್ತದೆ. ಲಕ್ಷಣಬದ್ಧ ಷಟ್ಪದೀಕಾವ್ಯಪರಂಪರೆಗೆ ವೀರಶೈವ ಕವಿಗಳಲ್ಲದೆ ಕುಮಾರವ್ಯಾಸ, ಲಕ್ಷ್ಮೀಶರಂಥ ಶ್ರೇಷ್ಠ ಕವಿಗಳೂ ಕಾಣಿಕೆ ನೀಡಿರುವುದನ್ನು ಇಲ್ಲಿ ಸ್ಮರಿಸಬಹುದು. ಲೇಖನ ವಿಸ್ತಾರಭಯದಿಂದ ಇನ್ನು ಕೆಲವು ವೀರಶೈವ ಕವಿಗಳ ಲಕ್ಷಣನಿಷ್ಠೆಯನ್ನು ದೃಷ್ಟಾಂತಿಸುವುದಕ್ಕೆ ಅವಕಾಶವಿಲ್ಲವಾಗಿದೆ.

ಈ ಹಿನ್ನೆಲೆಯಲ್ಲಿ ವಿಚಾರಮಾಡಿದರೆ, ವೀರಶೈವ ಕವಿಗಳು ಲಕ್ಷಣವಿರೋಧಿಗಳಲ್ಲ ಎಂಬ ಅಂಶ ಸ್ಪಷ್ಟವಾಗುತ್ತದೆ. ಆದ್ದರಿಂದ, ನಾವು ಬಲ್ಲಮಟ್ಟಿಗೆ, ಜಾಯೇಂದ್ರನೊಬ್ಬನನ್ನು ಬಿಟ್ಟರೆ ವೀರಶೈವರಲ್ಲಿ ಲಾಕ್ಷಣಿಕರು ಕಾಣಸಿಕೊಳ್ಳದಿರುವುದು ನಿಜವಾಗಿ ಸೋಜಿಗವೆನಿಸುತ್ತದೆ. ನಿಜಗುಣರೇನೋ ತಮ್ಮ ವಿವೇಕಚಿಂತಾಮಣಿಯಲ್ಲಿ ಕೆಲವು ಕಾವ್ಯಲಕ್ಷಣಾಂಶಗಳನ್ನು ಪಟ್ಟಿಮಾಡಿ ಹೇಳಿರುವರೇ ಹೊರತು ಲಕ್ಷಣ ವಿವರಣೆಯ ಗೋಜಿಗೆ ಹೋಗಿಲ್ಲ. ಜಾಯೇಂದ್ರನ ಲಕ್ಷಣಗ್ರಂಥಗಳು (ಕನ್ನಡ ಕುವಲಯಾನಂದ ಮತ್ತು ರಸಮಂಜರಿ) ಷಟ್ಪದಿಗಳಲ್ಲಿ ರಚಿತವಾಗಿರುವುದು ಒಂದು ವಿಶೇಷ.

ವೀರಶೈವ ಕವಿಗಳು ವ್ಯಾಕರಣ, ಛಂದಸ್ಸು, ಅಲಂಕಾರ, ಮುಂತಾದ ಕಾವ್ಯಪರಿಕರಗಳನ್ನು ಗಾಳಿಗೆ ತೂರಿಲ್ಲ; ಅವರ ಕಾವ್ಯ ಲಕ್ಷಣ ಪ್ರಜ್ಞೆ ಜಾಗೃತವಾಗಿಯೇ ಇದೆ; "ಪಂಡಿತರುಂ ವಿವಿಧಕಳಾ ಮಂಡಿತರುಂ" ಮೆಚ್ಚಬಹುದಾದಂಥ ಕೃತಿಗಳನ್ನು ರಚಿಸಿದ್ದಾರೆ. ಆದರೂ, ಕಾವ್ಯಲಕ್ಷಣ ಗ್ರಂಥನಿರ್ಮಿತಿಗೂ ತತ್ಸಂಬಂಧವಾದ ಇತರ ಶಾಸ್ತ್ರಗ್ರಂಥಗಳ ರಚನೆಗೂ (ಬ್ರಾಹ್ಮಣ ಕವಿಗಳಂತೆ) ಅವರು ಮನಸ್ಸುಕೊಡದಿದ್ದರೆ, ಚರ್ವಿತಚರ್ವಣಕ್ಕೂ ಪಿಷ್ಟಪೇಷಣಕ್ಕೂ ವ್ಯರ್ಥವಾಗಿ ಶ್ರಮಪಡಲೇಕೆ ಎಂದು ಅವರು ಭಾವಿಸಿರಬಹುದು.

ಅಡಿಟಿಪ್ಪಣಿಗಳು

3 'ರಾಜಸಭೆ' ಎನ್ನುವುದಕ್ಕೆ 'ಇಂದ್ರಸಭೆ' ಎಂದೂ ಅರ್ಥಮಾಡಬಹುದಲ್ಲವೇ ಎಂದು ಆಕ್ಷೇಪಿಸಬಹುದು. ಆದರೆ, ಮುಂದೆ ಅದೇ ಪಂಕ್ತಿಯಲ್ಲಿ'ದೇವಸಭೆ'ಎಂಬ ಪ್ರಯೋಗವೂ ಇದೆ. 'ಇಂದ್ರಸಭೆ' ಎಂದರೂ ಒಂದೆ, 'ದೇವಸಭೆ' ಎಂದರೂ ಒಂದೆ. ಆದ್ದರಿಂದ, ಇಲ್ಲಿ ರಾಜಸಭೆ=ನೃಪಸಭೆ [ಎಂದರೆ, ಆ ಕಾಲದಲ್ಲಿ ಆಳುತ್ತಿದ್ದ ನರಸಿಂಹ ಬಲ್ಲಾಳನ (1141–1173) ಆಸ್ಥಾನ]. ಇವನ ಆಳಿಕೆಯಲ್ಲಿ ಹರಿಹರನು ಹಳೆಯಬೀಡಿನಲ್ಲಿ 'ಕರಣಿಕರ ಕುಲತಿಲಕ' ನಾಗಿದ್ದನು. (ಆರ್. ನರಸಿಂಹಾಚಾರ್, ಕವಿಚರಿತೆ–I, 1972ರ ಮುದ್ರಣ, ಪುಟ 257).

4 ಹರಿಹರದೇವ ಕೃತ ಗಿರಿಜಾ ಕಲ್ಯಾಣ ಪ್ರಬಂಧಂ; ಪ್ರಸ್ತಾವನೆ, ಪು. 46—47.

5 ಬಹುಶಃ ಹರಿಹರ ರಾಘವಾಂಕರಿಗೆ ಸಮಕಾಲೀನ ಎನ್ನಬಹುದಾದ ಜೈನ ಕವಿ ನೇಮಿಚಂದ್ರನು ತನ್ನ 'ಲೀಲಾವತಿ'ಯಲ್ಲಿ 'ಪ್ರತೀಯಮಾನೋಪಲಕ್ಷಿತಂ ', ' ವಾಚ್ಯಂ ' ಎಂಬ ಧ್ವನಿ ಸಿದ್ಧಾಂತದ ಪಾರಿಭಾಷಿಕ ಪದಗಳನ್ನು ಉಪಯೋಗಿಸಿರುವುದಲ್ಲದೆ, ' ಅರ್ಧನೇಮಿ ಪುರಾಣದ' ಆಶ್ವಾಸಾಂತ್ಯ ಗದ್ಯದಲ್ಲಿ ತನ್ನನ್ನು ' ವ್ಯಂಗಭಂಗೀ ನಿಧಾನ ದೀಪವರ್ತಿ ' ಎಂದು ವಿಶೇಷಿಕೊಂಡಿದ್ದಾನೆ. 'ಶಾರದಾ ವಿಲಾಸ' ಎಂಬ ಧ್ವನಿ ಪ್ರಕ್ರಿಯೆಯ ಸಣ್ಣ ಲಕ್ಷಣ ಗ್ರಂಥವನ್ನು ಬರೆದಿರುವ ಸಾಳ್ವನೂ ಜೈನನೇ. ಈ ಪರಿಸ್ಥಿತಿಯಲ್ಲಿ ವೀರಶೈವ ಲಕ್ಷಣ ಗ್ರಂಥಕಾರನಾದ ಜಾಯೇಂದ್ರನು ತನ್ನ 'ಕನ್ನಡ ಕುವಲಯಾನಂದ ' ದಲ್ಲಿ ಧ್ವನಿ ತತ್ತ್ವವನ್ನು ಸಂಕ್ಷೇಪವಾಗಿಯಾದರೂ ವಿವರಿಸಿರುವುದು ಗಮನಾರ್ಹ.

6 ಅನಿಬದ್ಧಂ ಪುನರ್ಗಾಥಾ ಶ್ಲೋಕಮಾತ್ರಾದಿ ತತ್ ಪುನಃ ।
ಯುಕ್ತಂ ವಕ್ರಸ್ವಭಾವೋಕ್ತ್ಯಾ ಸರ್ವಮೇವೈತದಿಷ್ಯತೇ ॥
ನನಿತಾಂತಾದಿಮಾತ್ರೇಣ ಜಾಯತೆ ಚಾರುತಾ ಗಿರಾಮ್ ।
ವಕ್ರಾಭಿಧೇಯಶಬ್ದೋಕ್ತಿರಿಷ್ಟಾ ವಾಚಾಮಲಂಕೃತಿಃ ॥
ಸ್ವಭಾವೋಕ್ತಿರಲಂಕಾರ ಇತಿ ಕೇಚಿತ್ ಪ್ರಚಕ್ಷತೇ ।
ಅರ್ಥಸ್ಯ ತದವಸ್ಥತ್ವಂ ಸ್ವಭಾವೋಽಭಿಹಿತೋ ಯಥಾ ॥
—ಕಾವ್ಯಾಲಂಕಾರ: I-30, 36, 93

7 ನಿಗದಿತ ಕಾವ್ಯೋಕ್ತಿಗಳೊಳ್ । ನೆಗಟ್ದುವು ಮಾರ್ಗಂಗಳಿಂತು
ಪೆರಡುಕ್ತಿಗಳುಂ ॥
ಬಗೆವಾಗಳೆರಡು ಮಾಟ್ಕಿಯೊ । ಳೊಗೆದುವು ವಕ್ರಸ್ವಭಾವ
ನಿಯತಿಕ್ರಮದಿಂ ॥
ಸತತಂ ದಕ್ಷಿಣ ಮಾರ್ಗೋ । ದಿತೋಕ್ತಿ ಭೇದಕ ಗುಣಂ
ಸ್ವಭಾವಾಖ್ಯಾನಂ ।
ವಿ[ತ]ತೋತ್ತರ ಮಾರ್ಗಗತಂ । ಪ್ರತೀತ ವ್ರಕೋಕ್ತಿ
ಕೃತಮನಲ್ಪವಿಕಲ್ಪಂ ॥
—ಕವಿರಾಜಮಾರ್ಗ: II—52, 53

8 ಹರಿಶ್ಚಂದ್ರ ಕಾವ್ಯ : ಸಂ. ವೈ. ನಾಗೇಶಶಾಸ್ತ್ರಿ ಮತ್ತು ಎಂ. ಜಿ. ವೆಂಕಟೇಶಯ್ಯ; 1957; ಪೀಠಿಕೆ, ಪು. V.

9 "ಬುಧವ್ರಾತಂ ಒಜಲ್ದು ಬಿಚ್ಚವೆಸಿ ನಚ್ಚುವಳಂಕೃತಿ ಕೂಡದಿರ್ದೊಡಂ ರೀತಿಯೊಳೂಂದೆ ಪೇಟ್ವುದು ರಸಂಬಿಡೆ ಬಂಧುರ ಕಾವ್ಯ ಬಂಧಮಂ"—ಕಾವ್ಯಾವಲೋಕನ, ಪದ್ಯ 780.

10ಎಂ. ವಿ. ಸೀತಾರಾಮಯ್ಯ: ' ಭಾರತೀಯ ಕಾವ್ಯಮೀಮಾಂಸೆಗೆ ಕನ್ನಡ ಕವಿಗಳ ಕೊಡುಗೆ '; ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟನೆ, 1974; ಪು. 50.

11 ನಿಜಗುಣ ಶಿವಯೋಗಿಗಳು ದಶವಿಧ ನಾದಗಳನ್ನು ಕುರಿತು ಹೇಳುವಾಗ, " ಮತ್ತಮಾ ಓಂಕಾರಮೆಂಬ ನಾದದಿಂ ಸ್ವರ, ನಿರ್ಘೋಷ, ನಿರ್ಣಯ ಧ್ವನಿ, ವಾಸಧ್ವನಿ, ಕಹಳ ಧ್ವನಿ, ಶಂಖ ಧ್ವನಿ, ಮೇಘ ಧ್ವನಿ, ಭೇರಿ ಧ್ವನಿ, ಮೃದಂಗ ಧ್ವನಿ, ಮಂಧ್ರ ಧ್ವನಿ ಎಂಬ ದಶನಾದಂಗಳಾದವವರಲ್ಲಿ, ಮೊದಲ ಸ್ವರವೇ ನಾಭಿ ಉರ, ಕಂಠವೆಂಬ ತ್ರಿವಿಧಸ್ಥಾನದಿಂ ಪುಟ್ಟುಗುಮದೇ ಜೀವನಿಷ್ಠಮಾದ ಮಾರುತೋದ್ಗತಿಯಿಂದಭಿವ್ಯಕ್ತಮಾಗಿ ಹೃದಯ, ಕಂಠ ಶಿರಸ್ಸೆಂಬ ಸ್ಥಾನತ್ರಯದಲ್ಲಿ ಕ್ರಮದಿಂ ಮಧುರ, ಮಂದ್ರ, ತಾರವೆಂಬ ಸ್ವರಭೇದಾತ್ಮಕತ್ವದಿಂ ಪರಿವೃತ್ತಾ ಸ್ವರಗಳೆಂದವೆ ಷಡ್ಜಾದಿ ಸಪ್ತ ಸ್ವರಂಗಳಾದವು...... " ಎಂದು ವಿವರಿಸಿದ್ದಾರೆ. ನಾದವು ನಾಭಿಯಲ್ಲಿ ಉತ್ಪತ್ತಿಯಾದರೂ ಅದು ಪ್ರಕಟವಾಗಿ ಸ್ವರ ರೂಪದಲ್ಲಿ ಅನುಭವಕ್ಕೆ ಬರುವುದು ಹೃದಯ (ಉರ), ಕಂಠ, ಶಿರಸ್ಸು (ಅಥವಾ ಮುಖ) ಇವುಗಳ ಮೂಲಕ. ಈ ಮೂರು ಸ್ಥಾನಗಳಲ್ಲಿ ಸ್ವರವು (ಓಂಕಾರ ಮೂಲವಾದದ್ದು) ನಾದ ಬಿಂದು ಕಳಾ ರೂಪಿಗಳು. ಪರಬ್ರಹ್ಮರೂಪದ ಓಂಕಾರ ನಾದದ ಅಧಿಷ್ಠಾನ ಸಹಸ್ರಾರ ಚಕ್ರ; ಇಲ್ಲಿ ನಿರ್ಗುಣ ಬ್ರಹ್ಮನಾದ ಬಿಂದು ಕಳಾತೀತ. ವಸ್ತುಕ ವರ್ಣಕಗಳು ಗೇಯ ರೂಪದಲ್ಲಿ (ಸ್ವರ ರೂಪದಲ್ಲಿ) ಪ್ರಕಟಗೊಂಡಾಗ, ಅವು ಮೇಲೆ ಹೇಳಿದ ' ಸ್ಥಾನ ತ್ರಯ' (ನಾಭಿ, ಉರ, ಕಂಠ) ಅಥವಾ ' ತ್ರಿಸ್ಥಾನದ ಮೇಲೆ ನುಡಿದ ನುಡಿಗಳು', 'ಇತ್ತಿತ್ತಲು'; 'ಅತ್ತತ್ತಲು' ಎಂದರೆ 'ಸಹಸ್ರಾರ ಚಕ್ರದಲ್ಲಿನ'ನಾದಬಿಂದು ಕಳಾತೀತನಾದ ನಿರ್ಗುಣಬ್ರಹ್ಮ; ಈ ಬ್ರಹ್ಮ ಸಾಕ್ಷಾತ್ಕಾರ ಯೋಗಿಗಳಿಗೆ ಸಾಧ್ಯವೇ ಹೊರತು ಕವಿಗಳಿಗಲ್ಲ ಎಂಬುದು ಅಲ್ಲಮ ಪ್ರಭುವಿನ ವಚನದ ಆಶಯಇದ್ದರೂ ಇರಬಹುದು.

12 ಕೇಶಿರಾಜನ ಗ್ರಂಥಾಂತ್ಯದ ಪದ್ಯವೇ ಇಲ್ಲಿ ಪಡಿಮೂಡಿದೆ:–

ಗಮಕಸಮಾಸದಿಂ ಬಳಕುಳಕ್ಷಳದಿಂ ಶ್ರುತಿಸಹ್ಯ ಸಂಧಿಯಿಂ
ಸಮುಚಿತಮಾಗಿ ಬರ್ಪಸತಿ ಸಪ್ತಮಿಯಿಂ ಸಮಸಂಸ್ಕೃ
ತೋಕ್ತಿಯಿಂ
ವಮಹಪಭೇದದಿಂ ವಿರಹಿತಾವ್ಯಯ ಸಂಸ್ಕೃತ ಲಿಂಗದಿಂ ಪದೋ-
ತ್ತಮ ಶಿಥಿಲತ್ವದಿಂ ಯತಿವಿಲಂಘನದಿಂದರಿದಲ್ತೆ ಕನ್ನಡಂ.

ವೀರಶೈವ ಸಾಹಿತ್ಯ

ಲೇಖಕರು :
ಶ್ರೀ ಜೆ. ಬಿ. ಮಲ್ಲಾರಾಧ್ಯ, ಎಂ.ಎ.,ಐ.ಎ.ಎಸ್. (ನಿವೃತ್ತಿ)
ಅಧ್ಯಕ್ಷರು
ಅಖಿಲ ಭಾರತ ವೀರಶೈವ ಮಹಾ ಸಭೆ, ಬೆಂಗಳೂರು

ಮಾನವ ಸಂಸ್ಕೃತಿಯನ್ನು ಶ್ರೇಷ್ಠಗೊಳಿಸಿ, ಉನ್ನತವಿಹಾರ, ಉತ್ತಮ ವಿಚಾರಗಳಲ್ಲಿ ಲೀನನನ್ನಾಗಿ ಮಾಡುವುದೇ ಸಾಹಿತ್ಯದ ಗುರಿ ಎಂದು ಒಪ್ಪಿದಲ್ಲಿ, ವೀರಶೈವ ಸಾಹಿತ್ಯಕ್ಕೆ ಆ ಕೀರ್ತಿಯು ಯಥೇಚ್ಛವಾಗಿ ಸಲ್ಲಬೇಕಾಗುವುದು. ಸಾಹಿತ್ಯವು ಜೀವನವನ್ನು ಮೇಲಕ್ಕೆತ್ತುವ ಉತ್ತಮ ಸಾಧನ. ಜೀವನವನ್ನು ರಮಿಸಿ ತನ್ನ ಚಾಪಲ್ಯವನ್ನು ಪೂರ್ಣಗೈದುಕೊಳ್ಳುವನು ಉತ್ತಮ ಸಾಹಿತಿಯಲ್ಲ. — ಜೀವನ, ಸಾಹಿತ್ಯ ಇವೆರಡರಲ್ಲಿ ಜೀವನ ಬಹಳ ದೊಡ್ಡದು ಎನ್ನುವುದೇ ಬಸವೇಶ್ವರ, ಹರಿಹರಾದಿಯಾಗಿ ಎಲ್ಲ ವೀರಶೈವ ಕವಿಗಳ ಧ್ಯೇಯವಾಗಿತ್ತು. ವೀರಶೈವ ಸಾಹಿತ್ಯವು, ಮಾನವನ ಅಂತಸ್ತನ್ನೇ, ಮೇಲಕ್ಕೆ ಏರಿಸಿತು. ಮಾನವತೆಯ ಸಮಾನಸ್ಕಂದತೆಯನ್ನು ಸಾರುತ್ತಾ, ಅರಸ ಸಕಲೇಶ ಮಾದರಸನ ಪಕ್ಕದಲ್ಲಿ ಮೊಚ್ಚಿಗಾರ ಮಾದರ ಚನ್ನಯ್ಯನನ್ನು ಕೂಡಿಸಿತು. ಹಡಪದ ಅಪ್ಪಣ್ಣನ ಪಂಕ್ತಿಯಲ್ಲಿ ಶಿವಯೋಗಿ ಸಿದ್ಧರಾಮಣ್ಣನವರೂ, ಬಸವಣ್ಣನವರೂ 'ಕುಳಿತರು' ಸ್ತ್ರೀಯು ಹೀನಜಂತು ಎಂಬ ಭಾವನೆ ತೊಲಗಿಸಿ, ಮಹಾದೇವಿ, ಮುಕ್ತಾಯಿ, ಸತ್ಯಕ್ಕಗಳು, ಪ್ರಭುದೇವ, ಚನ್ನಬಸವಣ್ಣ ಬಸವಣ್ಣನವರ ಸರಿಸಮಾನರೆಂದು ಮೆರೆಯಿಸಿತು. ಇಂದಿನ ಜಗತ್ತಿನ, ನೂತನ ಪ್ರಪಂಚದ ಪುನರ್‌ವ್ಯವಸ್ಥೆಯ ಧರ್ಮವಾಗಿರುವ, ಸಮತಾವಾದವು (ಸೋಷಿಯಲಿಜಂ) 12 ನೇ ಶತಮಾನದಲ್ಲಿಯೇ ಬಸವಣ್ಣನವರಿಂದಲೂ, ಅವರ ಪರಂಪರೆಗೆ ಸೇರಿದ ವಚನಕಾರರು ಕವಿಗಳಿಂದಲೂ ಆಚರಣೆಯಲ್ಲಿತ್ತು ಎನ್ನುವದು ನಮಗೆ ಆಶ್ಚರ್ಯವೆನಿಸಬಹುದು. ಈ ಸಮಾನಸ್ಕಂದತೆಯೂ ಸೋದರ ಭಾವನೆಯು ಬೆಳೆಯಬೇಕಾದರೂ, ಏಕೇಶ್ವರ ಪೂಜೆಯು ಅವಶ್ಯಕವೆಂಬುದನ್ನು ಬಸವೇಶ್ವರಾದಿ ಪ್ರಮುಥರು ಗ್ರಹಿಸಿದರು. ಈ ದೃಷ್ಟಿಯಿಂದ ಶಿವಶರಣರ ವಚನಗಳು, ಇನ್ನಿತರ ವೀರಶೈವ ಸಾಹಿತ್ಯ ಗ್ರಂಥಗಳೂ ಕಾವ್ಯವನ್ನು ಅಭ್ಯಾಸ ಮಾಡಬೇಕೆಂಬ ಪಂಡಿತರಿಗೆ ಮಾತ್ರವಲ್ಲದೆ, ಇಡೀ ನಾಡಿಗೇ, ಇಡೀ ಜಗತ್ತಿಗೇ ಬೇಕಾದುದಾಗಿದೆ. ಕನ್ನಡಪ್ರಭೆಯುಜ್ವಲಿಸಿದ ಐದಾರು ಶತಮಾನಗಳಲ್ಲಿ ಇಂತಹ ಬೆಳೆಯನ್ನಿತ್ತು ಮಾನವ ಕಲ್ಯಾಣವನ್ನೇ ಗುರಿಯಾಗಿ ಉಳ್ಳ, ಸಾಹಿತ್ಯವನ್ನು ಸೃಷ್ಟಿಸಿ, ಪಸರಿಸಿದ ಕೀರ್ತಿ ವೀರಶೈವ ಕವಿಗಳದ್ದು.

ಸಂಸ್ಕೃತ ಶ್ರೇಷ್ಠ, ಮಿಕ್ಕ ದೇಶ ಭಾಷೆಗಳು ಕೀಳು ಎಂಬ ಭಾವನೆ ಜನರಲ್ಲಿ ಬೇರೂರಿದ್ದಾಗ, ಮೂಲೆಗೆ ಒತ್ತರಿಸಲ್ಪಟ್ಟಿದ್ದ ಕನ್ನಡವನ್ನು ಆದರಿಸಿ, ಒಪ್ಪವಿಟ್ಟು, ಮೈಸಿರಿಗೂಡಿಸಿ, ಹೊರಗೆತಂದು, ಮೆರೆಯಿಸಿ, ಭಾಷಾಮರ್‍ಯಾದೆಯಲ್ಲಿ, ವಿವರಣ ಪದ್ಧತಿಯಲ್ಲಿ, ಛಂದಸ್ಸಿನ ವಿಚಾರದಲ್ಲಿ ಹಲಕೆಲವು ಸುಧಾರಣೆಗಳನ್ನು ಮಾಡಿ ಹೊಸ ಮಾರ್ಗಗಳನ್ನು ಎತ್ತಿಹಿಡಿದು, ಜನಪದದ ಮೂಲೆ ಮೂಲೆಗೂ ಸಾರಿ ಕನ್ನಡದೇವಿಯ ಮೂರ್ತಿಯನ್ನು, ಹೊತ್ತು ಮೆರೆಯಿಸಿದ ಧವಳ ಕೀರ್ತಿ ವೀರಶೈವರದು.

ವೀರಶೈವ ವಾಙ್ಮಯವು ಕನ್ನಡದಲ್ಲಿ ರಾಶಿರಾಶಿಯಾಗಿದೆ. ಮತತತ್ವಗಳನ್ನು ಒಳಗೊಂಡ ಗ್ರಂಥಗಳು ಅಧಿಕ ಸಂಖ್ಯೆಯಿಂದ ಕಂಗೊಳಿಸುತ್ತವೆ. ವೀರಶೈವರು ವೇದಾಗಮ ಮಾರ್ಗಾವಲಂಬಿಗಳಾದರೂ, ಕನ್ನಡದಲ್ಲಿಯೇ ಗ್ರಂಥರಚನೆ ಮಾಡಿದ್ದಕ್ಕೆ ಪ್ರಬಲ ಕಾರಣವುಂಟು. ಕರ್ನಾಟಕದಲ್ಲಿ ಧರ್ಮಗ್ಲಾನಿಯಾಗತೊಡಗಿತ್ತು. ಕರ್ಮಚಂಡಾಲರು ಧರ್ಮದ ಸೋಗಿನಿಂದ, ನೀಚಕೃತ್ಯಗಳನ್ನು ಆಚರಿಸಿ, ಪತಿತ ಪಾಮರರನ್ನು ಕೆಳಗೆ ತುಳಿಯುತ್ತ, ಸ್ವಾರ್ಥವನ್ನು ಸಾಧಿಸುತ್ತಿದ್ದರು. ಬಸವಾದಿ ಪ್ರಥಮರು ಲೋಕಕಲ್ಯಾಣ ದೃಷ್ಟಿಯಿಂದ ಅವತರಿಸಿ, ಕಳೆಗುಂದಿದ ವೀರಶೈವ ಮತವನ್ನು ಉದ್ಧಾರ ಮಾಡಲಿಕ್ಕೆ ಜನಪದದಲ್ಲಿ ನೀತಿ ಪ್ರಚಾರಮಾಡಿ ಹೃದಯದ ಮೇಲೆ, ಧರ್ಮದ ಬೆಳಕನ್ನು ಬೀರುವುದಕ್ಕೆ ನಾಡ ನುಡಿಯಿಂದಾಗುವಷ್ಟು ಅಂದರೆ ಕನ್ನಡ ವಾಗ್ದೇವಿಯಿಂದಾಗುವಷ್ಟು ಪ್ರಯೋಜನವು ಸಂಸ್ಕೃತದಿಂದಾಗದು ಎಂದು ಅರಿತು ಜನರ ಮೇಲೆ ಉತ್ತಮ ಪರಿಣಾಮವನ್ನುಉಂಟು ಮಾಡುವುದು ಮೃದು ಮಧುರ ಗದ್ಯ ಪದ್ಯ ಗ್ರಂಥ ರಚನೆ ಮಾಡಿದರೆಂದು ಹೇಳಬಹುದು.

ಕನ್ನಡ ಸಾಹಿತ್ಯಕ್ಕೆ ಸೇವೆ ಸಲ್ಲಿಸಿದ ವೀರಶೈವ ಕವಿಗಳಲ್ಲಿ 1) ವಚನಕಾರರು. 2) ಪುರಾಣ ಕವಿಗಳು 3) ಕಾವ್ಯ ಪ್ರಬಂಧಕರ್ತರು 4) ಶತಕಕಾರರು. 5) ಶಾಸ್ತ್ರ ಗ್ರಂಥಕಾರರು ಎಂದು ಐದು ಭಾಗ ಮಾಡುವುದು.

1) ವೀರಶೈವ ಮತದ ಪುನರುದ್ಧಾರವು ಕ್ರಿಸ್ತಶಕ 12ನೇ ಶತಮಾನದಲ್ಲಿ ಪ್ರಾರಂಭವಾಯ್ತು. ಬಸವೇಶ್ವರರೂ, ಅವರ ಅನುಯಾಯಿಗಳೂ, ಈ ಕಾರ್ಯದಲ್ಲಿ ಟೊಂಕಕಟ್ಟಿ ನಿಂತರು. ಶಿವಶರಣರು ಪರಿಶುದ್ಧ ನಡೆ ನುಡಿಗಳಿಂದ, ಮಹಿಮೆಯನ್ನು ಸಂಪಾದಿಸಿ ಉಪದೇಶ ಮಾಡಲು ಶಕ್ತರಾಗಿ ಸಂಸ್ಕೃತ ಭಾಷೆಯಲ್ಲಿ ಗೂಢವಾಗಿ ಪಾಮರ ವರ್ಗಕ್ಕೆ ನಿಲುಕದವುಗಳಾಗಿದ್ದ ವೇದ, ಆಗಮ, ಉಪನಿಷತ್ತು ಪುರಾಣ, ಇತಿಹಾಸ ಶಾಸ್ತ್ರ ಇವೆಲ್ಲವುಗಳ ಅಭಿಪ್ರಾಯವನ್ನು ಭಕ್ತಿ ಭಾವಗಳ ಪುಟಕ್ಕಿಟ್ಟು, ಎದೆಯೊಲವನ್ನು ತುಂಬಿ ಲಲಿತ ಮಧುರ, ಸುಂದರ, ನೂತನ ವಚನಾಮೃತವನ್ನು ಕಿವಿಯಿಂದೀಂಟಿಸಿ ಜನರ ಚಿತ್ತವೃತ್ತಿಯನ್ನು ತಿದ್ದಲು ಯತ್ನಿಸಿದರು. ಈಶ್ವರಲಬ್ಧವಾದ ಶಿವಶರಣ, ಶಿವಶರಣೆಯರಿಂದ ಹೊರಟ ವಾಕ್ಸಮುದಾಯವೇ 'ವಚನ

ಗಳು''ಇವುಗಳ ಶ್ರೇಷ್ಠತೆಯನ್ನು ಬಸವಣ್ಣನವರ ಮಾತುಗಳಿಂದಲೇ ಹೀಗೆ ಹೇಳಬಹುದಾಗಿದೆ. 'ಹಾಲತೊರೆಗೆ ಬೆಲ್ಲದಂತಹ ಕೆಸರು, ಸಕ್ಕರೆಯಂತಹ ಮಳಲು, ತವರಾಜದಂತಹ ನೊರೆ ತೊರೆಗಳು, ಇಂತಪ್ಪ ಆದ್ಯರ ವಚನವಿರಲು, ಬೇರೆ ಭಾವಿಯ ತೋಡಿ, ಉಪ್ಪು ನೀರು ಸವಿದಂತಾಯಿತ್ತಯ್ಯ ಎನ್ನ ಯುಕ್ತಿ, ನಿಮ್ಮ ವಚನಗಳ ಕೇಳದೆ ಅನ್ಯ ಪುರಾಣಗಳ ಕೇಳಿ, ಕೆಟ್ಟೆನಯ್ಯಾ ಕೂಡಲ ಸಂಗಮ ದೇವಾ....''

ಈ ಬಗೆಯ ವಚನ ಸಾಹಿತ್ಯವು ಜಗತ್ತಿನ ಯಾವ ಭಾಷೆ ಯಲ್ಲೂ ಸಿಗಲಾರದೆಂದು ವಿದ್ವಾಂಸರ ಏಕಾಭಿಪ್ರಾಯ. ವಚನ ಕಾರರು ಈ ವಚನಗಳನ್ನು ಬಹುಕಾಲ ಚಿಂತಿಸಿ, ತಲೆತುರಿಸಿ, ಮೋರೆ ಕಿವುಚಿ, ನಿಟ್ಟುಸಿರ್ಗರೆದು, ಪಲವಂ ನೆನೆದು ಬರೆದವುಗಳಲ್ಲ. ಜನ ಸಾಮಾನ್ಯರ ಹೃದಯವನ್ನು ತಿಳಿ ಬೆಳಕಿನ ಕಡೆಗೆ ಸೆಳೆಯುವಾಗ, ದೇವರನ್ನು ಕುರಿತು ಹಂಬಲಿಸುವಾಗ, ಅನುಭವ ಮಂಟಪದಲ್ಲಿ ಚರ್ಚಿಸುವಾಗ, ಭಾವಪರವಶರಾದಾಗ, ಹೃದಯಾಲವಾಲದ ಶಮ ಜಲದಿಂದುಜ್ಜೀವಿಸಿದ ವಿಮಲಜ್ಞಾನಲತೆಯಿಂದೊಗೆದ, ಅಕ್ಷಯ ಸುಖದ ಸಫಲತೆಗಳು ಈ ವಚನಗಳು. ಜನಮನದ ಈ ಅಭಿರುಚಿಗೆ ತಕ್ಕಂತೆ ಸುಂದರವಾದ ಉಪಮೆ, ದೃಷ್ಟಾಂತ,ರೂಪಕಗಳನ್ನು ನುಡಿಗೆ ಬೆಡಗನ್ನು ತರಬಲ್ಲ ಪ್ರಾಸ, ಯಮಕಾದಿ ಶಬ್ದಾಲಂಕಾರಗಳನ್ನು ವಚ ನಗಳಲ್ಲಿ ಬಳಸಿಕೊಂಡು ಹೊಂದಿಕೆಯಾಗಿ ಹೆಣದಿದ್ದಾರೆ.

ವಚನಕಾರರ ಉಪದೇಶ ನಿಮಗೆ ತಿಳಿಯದೆ ಏನೂ ಇಲ್ಲ. ಆದರೂ ಕೆಲವನ್ನು ನಿರೂಪಿಸಿದರೆ ಎಲ್ಲರಿಗೂ ಎಲ್ಲ ಕಾಲಕ್ಕೂ ಸಂತೋಷವಾಗುವುದರಲ್ಲಿ ಸಂದೇಹವಿಲ್ಲ.

"ಒಲ್ಲೆನೆಂಬುದು ವೈರಾಗ್ಯ" "ಕಾಯಕವೇ ಕೈಲಾಸ" "ಅಯ್ಯಾ ಎಂದೊಡೆ ಸ್ವರ್ಗ, ಎಲವೋ ಎಂದೊಡೆ ನರಕ" "ಕಾಂಚನವೆಂಬ ನಾಯನೆಚ್ಚಿ ನಿಮ್ಮ ನಾಮರೆದೆನಯ್ಯಾ" "ನಾದ ಪ್ರಿಯನಲ್ಲ, ವೇದ ಪ್ರಿಯನಲ್ಲ, ಭಕ್ತಿಪ್ರಿಯನಮ್ಮ ಕೂಡಲಸಂಗಮದೇವ" "ಎನ್ನ ಚಿತ್ತ ಅತ್ತಿಯ ಹಣ್ಣು" "ಮುಸಿಯನೇಸು ಕಾಲಜಳಗಿದರೆ ಬಿಳಿದಾಗಬಲ್ಲದೆ" "ಹುತ್ತವ ಬಡಿದರೆ ಹಾವು ಸಾಯಬಲ್ಲದೆ" "ಅರಿಯಬಾರದ ಘನವ ಅರಿತವರು ಅರಿಯದಂತಿರ್ಪರು ಗುಹೇಶ್ವರಾ" "ದಯವಿಲ್ಲದ ಧರ್ಮ ವಾವುದಯ್ಯಾ, ದಯವಿರಬೇಕು ಸಕಲ ಪ್ರಾಣಿಗಳಲ್ಲಿ" "ಸಂಸಾರ ವೆಂಬುದು ಗಾಳಿಯ ಸೊಡರು, ಸಿರಿಯೆಂಬುದು ಸಂತೆಯ ಮಂದಿ ಕಂಡಯ್ಯಾ" "ಎಲೆ ಎಲೆ ಮಾನವಾ, ಅಳಿಯಾಸೆ ಬೇಡವೊ, ಕಾಡ ಬೆಳದಿಂಗಳ ಸಿರಿ ಸ್ಥಿರವಲ್ಲ" "ಕಂಡ ಭಕ್ತಂಗೆ ಕೈಮುಗಿವಾತನೇ ಭಕ್ತ" "ಮೃದು ವಚನಗಳೇ ಸಕಲ ಜಪಂಗಳು" "ಹೊಸ ಮುತ್ತಿನ ಸುಪ್ಪಾಣಿಯಂತೆ ಅಲಿಂಗೈಕ್ಯವು, ತನುನಿರ್ವಾಣ, ಮನಸಂಸಾರ, ಮಾತು ಬ್ರಹ್ಮನೀತಿ ಅಧಮ, ಆದೇತರ ಅರಿವು ಘಾತುಕನ ಕೈಯ ಕತ್ತಿಯಂತೆ" ಬಂದ ಬಸಿರನು ಉಂಡ ಮಾಲಿಂಬೆಸು, ಕಂಡು ಮರುಗ ದಿರಾ ಮನವೆ" ಹೀಗೆ ಚಿಕ್ಕ ಮಾತುಗಳಲ್ಲಿ ಚೊಕ್ಕ ಸಾಹಿತ್ಯವನ್ನು ತುಂಬಿ "ಕಿರಿದರೊಳೆ ಪಿರಿದುಂ ಅರ್ಥಮನಡಗಿಸಿ, ನೆರೆಮಾತನಾ [illegible] ವಚನಾ

ಮೃತವನ್ನು ಸವಿದ ಅನೇಕ ಧರ್ಮ ಮಹಾನುಭಾವರು, "ವಚನಗಳು ಕನ್ನಡದ ಉಪನಿಷತ್ಸಾರ ಸರ್ವಸ್ವ, ಸಾಹಿತ್ಯ ಪ್ರಪಂಚದಲ್ಲಿ ಬೆಳಗುವ ಜೀವರತ್ನಗಳು" ಎಂದು ಮುಕ್ತ ಕಂಠದಿಂದ ಸಾರಿದ್ದಾರೆ. ವೀರಶೈವರು ವಚನಾಮೃತವಾರಿಧಿ ಸೃಷ್ಟಿಕರ್ತರು, ವಚನ ಸಾಹಿತ್ಯ ಸಾರ್ವ ಭೌಮರು ಎಂದರೆ ಹೆಚ್ಚಿನದಲ್ಲ.

ವೀರಶೈವ ಕವಿಗಳು ಬಹುವಾಗಿ ಧರ್ಮಾಭಿಮಾನಿಗಳು, ಮತ ಧರ್ಮ ಬೋಧಕಳಾದ ಶಿವನ ಶಿವಶರಣರ ಸಂಬಂಧವಾದ ವಿಷಯ ಗಳ ಜತೆಯಲ್ಲಿ, ಮತಧರ್ಮಸ್ವರೂಪವನ್ನು ಹೆಣೆದು ಪುರಾಣಗಳನ್ನು ಬರೆದಿದ್ದಾರೆ."ಮನುಜರ ಮೇಲೆ ಸಾವವರ ಮೇಲೆ,ಕನಿಷ್ಠರ ಮೇಲೆ ಪದ್ಯಮಂ, ತನತನಗಿಂದ್ರ, ಚಂದ್ರರವಿಕರ್ಣ, ದಧೀಚಿ, ಬಲೀಂದ್ರ ರೆಂದು ತಾನವರ ತತಿ ಪೊಗಳ್ವುದಿಲ್ಲವೆಂದು, ಹರಿಹರ ಕವಿ, ತನ್ನದು "ಪೆರರ ದೈವವನುತಿಸದಾ ಭಾಷೆ" ಎಂದು ರಾಘವಾಂಕ, ಪದ್ಮರಸ ಪಂಡಿತಾರಾಧ್ಯರು "ಶಿವಾದ್ವೈತ ಸಿದ್ಧಾಂತಮಂ ಪ್ರತಿಷ್ಠಿಸುವನೆಂಬ ಅಚಲ ಭಾಷೆ"ಎಂದು "ಧರೆಯೊಳ್ಪುಟ್ಟಿ ಪುಟ್ಟುತ್ತುರುಳ್ವ ನರರ ಮೇಲುರ್ಬಿ ಕಬ್ಬಂಗಳಂ ಬಿತ್ತರಿಸುತ್ತುಂ ಸಪ್ರಯಾಸಂ, ಕೆಲಕೆಲದ ಕಟಾ ಕಬ್ಬಿಗರೆ ಕೆಟ್ಟು ಸೋದರೆ" ಇತ್ಯಾದಿ ಎಂದೂ, ಷಡಕ್ಷರ ದೇವ ಕವಿಯೂ ಹೇಳಿದ್ದಾರೆ.

ಕನ್ನಡ ಭಾಷೆಯಲ್ಲಿ ರಚಿಸಲ್ಪಟ್ಟ ವೀರಶೈವ ಪುರಾಣ ಕವಿಗ ಳಲ್ಲಿ ''ನೆರದ ಸೊಗಸಿನ ಸುಗ್ಗಿ, ರಸದ ಮಡು, ಪುಣ್ಯ ಸಾಗರ'ವಾದ ಸಿದ್ಧರಾಮ ಪುರಾಣವನ್ನು ರಚಿಸಿದ ರಾಘವಾಂಕ, ದುರಿತಾರಿಗಳಂ ಸುಡುವ ಪಂಚಾಕ್ಷರೀ ಮಹಿಮೆಯನ್ನು ವಿಸ್ತರಿಸುವ ಸಾನಂದ ಚರಿ ತ್ರೆಯನ್ನು ಬರೆದ ಕುಮಾರ ಪದ್ಮರಸಪಂಡಿತಾರಾಧ್ಯ, "ಸರಸ ಗುಣ ದಿಂ, ಸಲ್ಲಕ್ಷಣದಿಂ ಬೆಡಗಿನಿಂ, ಪರಮ ಸೌಂದರ್ಯದಿಂ, ಜಾತಿಯಿಂ, ಗುಣದಿ ಸೂಕ್ಕರ ವೃತ್ತಿಯಿಂದಲಂಕಾರದಿಂ, ನಿರ್ದೋಷದಿಂ, ನಿರು ಪಮ ಮೃದೂಕ್ತಿಯಿಂದೊಡಗೂಡಿದ, ಪದ್ಮರಾಜ ಪುರಾಣವನ್ನು ಬರೆದ ಪದ್ಮಣಾಂಕ ಪಂಡಿತಾರಾಧ್ಯ, 'ಕೇಳಿದೊಡೆ ಸಾಕವರ ಕಿವಿಯಂ ಮನವಮಂ, ತೋಳ ಹಿಡಿದೊಡನೆ ನಿರ್ಮಲನ ನವರಸ ದುಗ್ಧವಾರಾಶಿ ಯೊಳಗೊಂದೂ ಅಳಿಸದೆ ಬಿಡದ, ಚನ್ನಬಸವ ಪುರಾಣವನ್ನು ಬರೆದ ವಿರೂಪಾಕ್ಷ ಪಂಡಿತ, ಬಸವ ಪುರಾಣವನ್ನು ಬರೆದ ಭೀಮಕವಿ, ಪ್ರಭುಲಿಂಗಲೀಲೆಯ ಚಾಮರಸ, ಶಿವತತ್ವ ಚಿಂತಾಮಣಿಯ ಲಕ್ಕ- ಣಾಮಾತ್ಯ ಇವರು ಮುಖ್ಯರು. ಈ ಪುರಾಣಗಳು ಮತ ಗ್ರಂಥಗ ಳಾದರೂ, ಸಾಹಿತ್ಯ ದೃಷ್ಟಿಯಿಂದ ಅಚ್ಚುಮೆಚ್ಚಿನವು, ಗಣನೀಯ ವಾದವುಗಳು ಎಂಬುದರಲ್ಲಿ ಸಂದೇಹವಿಲ್ಲ.

ರಗಳೆ ಕವಿಯೆಂದು ಕೀರ್ತಿವೆತ್ತ ಹರಿಹರನು 'ನೋಡುವುದೊಂ ದಕ್ಕರಮದು ಮಾಡುವೊಡುಚ್ಚರಣೆಗರಿದು ಮೂರುಂತೆರನಂ : ಕೂಡೆ ಕವಿತತಿ ವಿಚಾರಿಸಬೇಡದರಿಂ ರಳಕುಳಕ್ಷಳಂಗಳನಿದರೊಳ್', ಎಂದು ಉದ್ಘೋಷಿಸಿ ಸಂಪ್ರದಾಯ ಬದ್ಧವಾಗಿದ್ದ ಕಾವ್ಯದ ಕಟ್ಟನ್ನು ಸಡಲಿಸಿಬಿಟ್ಟಿದ್ದಾನೆ. ಇವನ್ನು ಓರಂಗಲ್ಲಿನ ಪ್ರತಾಪರುದ್ರನ ಆಸ್ಥಾ ನಕ್ಕೆ ಹೋಗಿ ಪರವಾದಿಗಳನ್ನು, ಕವಿಗಳನ್ನು ಸೋಲಿಸಿ ಆ ಅರಸನ ಸಮ್ಮುಖದಲ್ಲಿ ವೀರೇಶ್ವರ ಚರಿತ್ರೆಯನ್ನು ರಚಿಸಿ ಕನ್ನಡನಾಡಿಗೆ

ತಿಲಕಪ್ರಾಯವಾಗಿದ್ದಾನೆ. ಈ ಕೆಚ್ಚೆದೆಯ ಕವಿಗಳ ಕಾಲದಲ್ಲೇ, ಕನ್ನಡ ನುಡಿವೆಣ್ಣು ಬಹಳ ಕಾಲದ ಹಳೆಯ ಸಂಪ್ರದಾಯವನ್ನು ಅದರ ಭೂಷಣಗಳನ್ನು ಬದಿಗಿರಿಸಿ, ಹೊಸ ಸೊಬಗಾಂತು ನಡೆನುಡಿಗಳಲ್ಲಿ ಪರಿವರ್ತನ ಹೊಂದಿ ಮುಂದೆ ಬಂದ ಕವಿಗಳ ಚಿತ್ತವನ್ನು ತನ್ನೆಡೆಗೆ ಸೆಳೆದುಕೊಂಡಿದ್ದಾಳೆ. ಜೈನರೂ, ಬ್ರಾಹ್ಮಣರೂ, ಬ್ರಾಹ್ಮಣೇತರರೂ ಈ ನವೀನ ಸಂಪ್ರದಾಯಕ್ಕೆ ಶರಣು ಹೋದರೆಂಬುದಕ್ಕೆ ಮುಂದಿನ ಸಾಹಿತ್ಯ ಚರಿತ್ರೆಯೇ ಸಾಕ್ಷಿಯಾಗಿದೆ.

ವೀರಶೈವರೂ ಸಾಹಿತ್ಯ ಪ್ರಪಂಚದಲ್ಲಿ ಉಜ್ವಲವಾಗಿ ಬೆಳಗಿದ ಕಾಲವೆಂದರೆ ಕರ್ಣಾಟಕ ಸಾರ್ವಭೌಮ ಪ್ರೌಢದೇವ ರಾಯರಕಾಲ. ಈ ರಾಜನ ಆಸ್ಥಾನದಲ್ಲಿ ಉನ್ನತ ಪದವಿಗಳನ್ನು ವೀರಶೈವರೇ ಅಲಂಕರಿಸಿದುದರಿಂದ ರಾಜನಿಗೆ ವೀರಶೈವರಲ್ಲಿ ಸಂಪೂರ್ಣ ಪ್ರೀತಿ ವಿಶ್ವಾಸಗಳಿದ್ದುವೆಂಬುದಕ್ಕೆ ಅದೃಶ್ಯ ಕವಿಯ ಪ್ರೌಢರಾಯನ ಕಾವ್ಯವೇ ಸಾಕ್ಷಿ.

"ಸತ್ತವರ ಕಥೆಯಲ್ಲ, ಜನನದ ಕುತ್ತದಲ್ಲಿ ಕುದಿಕುದಿದು, ಕರ್ಮದ ಕತ್ತರಿಗೆ ಸಿಕ್ಕುವರ ಸೀವೆಯ ಮಾತು ತಾನಲ್ಲ; ಸತ್ಯ ಶರಣರು ತಿಳಿವುದೀ ಪ್ರಭುಲಿಂಗಲೀಲೆಯೊಳು"...ಎಂದು ಹಾಡಿದ ಮಹಾಕವಿ ಚಾಮರಸನು ಪ್ರೌಢರಾಯನ ಆಸ್ಥಾನದಲ್ಲಿದ್ದವನು.

ಕರ್ಣಾಟಕ ಕವಿ ಚಕ್ರವರ್ತಿ ಎನಿಸಿದ ಸುರಂಗ ಕವಿಯ ಚಂಪೂರೂಪವಾದ ತ್ರಿಷಷ್ಠಿ ಪುರಾತನರ ಚರಿತ್ರೆ. 'ಇಂಗಡಲೊಡನುಡಿಯೊ, ನೆರೆದಿಂಗಳ ಸೋದರನೋ, ಸುದತಿಯಧರಾಮೃತದಿಂ ಪಿಂಗಿದ ಗುರುವೋ, ಸುಧಾರಸಮಂ ಗೆಲ್ದಂದವೋ ಭವದ್ವಚಸ್ಯಮು ದಯವೋ".....ಎಂದು ಪಂಡಿತಮಂಡಲಿಯಿಂದ ಹೊಗಳಿಸಿಕೊಂಡ ರಾಜಶೇಖರ ವಿಳಾಸ, ವೃಷಭೇಂದ್ರ ವಿಜಯ, 'ಸುಸಿಲಾಶೆಯ ನಲ್ಲಳ ನೋಟದಂತೆ' ಸುಂದರವಾದ ಶಬರ ಶಂಕರ ವಿಲಾಸಗಳನ್ನು ರಚಿಸಿದ ಉಭಯ ಕವಿತಾ ವಿಶಾರದ ಶ್ರೀ ಷಡಕ್ಷರದೇವ, ಅಭಿನವ ಕಾಳಿದಾಸ ಎಂದು ಹೆಸರಾಂತ ಬಸವಪ್ಪಶಾಸ್ತ್ರಿ, ಇತ್ಯಾದಿ ಶಿವಕವೀಂದ್ರರು ಕನ್ನಡ ವಾಙ್ಮಯದಲ್ಲಿ ಅಮೃತತುಲ್ಯವಾದ ಕಾವ್ಯಸಮುದಾಯವನ್ನು ತುಂಬಿದ್ದಾರೆ.

4\. ವೀರಶೈವ ಕವಿಗಳು ರಗಳೆ, ಸಾಂಗತ್ಯ,ದ್ವಿಪದಿ,ಚೌಪದಿ ಷಟ್ಪದಿ, ದಂಡಕ, ಹಾಡುಗಳು ಇತ್ಯಾದಿ ವಿವಿಧ ದೇಶೀಯ ನೂತನ ಪದ್ಧತಿಯಲ್ಲಿ ಅನೇಕಾನೇಕ ಗ್ರಂಥಗಳನ್ನು ಬರೆದಿದ್ದಾರೆ. ಇವರಲ್ಲಿ ಕೆರೆಯ ಪದ್ಮರಸ ಪಂಡಿತಾರಾಧ್ಯರು, ನಿಜಗುಣ ಶಿವಯೋಗಿಗಳು, ಸರ್ಪಭೂಷಣ ಶಿವಯೋಗಿಗಳು, ಸರ್ವಜ್ಞ ಕವಿ ಇವರು ಮುಖ್ಯರು. ಈ ಕವಿವರರ ಸಾಹಿತ್ಯ ಸೇವೆಯು ಅಪಾರವಾದುದು. ನಿಜಗುಣ ಶಿವಯೋಗಿಗಳು ಸಕಲ ವೇದಾಗಮ ಪುರಾಣೇತಿಹಾಸಜ್ಞರು. ಸಂಗ್ರಹವಾಗಿ ಬರೆಯುವುದರಲ್ಲಿ ಬಲ್ಲಿದರು. ವಿವೇಕ ಚಿಂತಾಮಣಿ, ಕೈವಲ್ಯ ಪದ್ಧತಿ, ಪರಮಾರ್ಥಗೀತೆ ಮೊದಲಾದ ಆರೇಳು ಗ್ರಂಥಗಳನ್ನು ರಚಿಸಿದ್ದಾರೆ. ಇವರು ಆರು ಗ್ರಂಥಗಳಿಗೆ ಷಟ್‌ಶಾಸ್ತ್ರಗಳೆಂದು ಪ್ರಖ್ಯಾತಿ ಬಂದಿದೆ. ವಿವೇಕ ಚಿಂತಾಮಣಿಯು ಬಹು ಜನ ಮಾನ್ಯವಾದುದು. ಇದನ್ನು ಕನ್ನಡ ವಿಜ್ಞಾನ ಕೋಶವೆಂದರೂ ಸಲ್ಲುವುದೆಂದು ಪಂಡಿತರ ಅಭಿಪ್ರಾಯ.

ಮುಂಡೆ ಬೋಳಿಸಿಕೊಂಡು, ತುಂಡು ಗಂಬಳಿ ಹೊದೆದು, ಹಿಂಡನಗಲಿದ ಗಜದಂತಿದ್ದು, ಭೂಮಂಡಲವನ್ನೆಲ್ಲ ಸಂಚರಿಸಿ, ಎಲ್ಲರಿಂದೊಂದು ನುಡಿಗಲಿತು, ವಿದ್ಯೆಯ ಪರತ್ವವೇ ಆದ ಕನ್ನಡ ಜಾಣ ಸರ್ವಜ್ಞನು, ತ್ರಿಪದಿಗಳಲ್ಲಿ ಗ್ರಂಥ ರಚನೆ ಮಾಡಿದ್ದಾನೆ. ಸರ್ವಜ್ಞ ವಚನವೆಂದರೆ ಉತ್ತಮ ವಿಷಯಗಳ ವಿವಿಧ ಯೋಚನೆಗಳ ಪ್ರದರ್ಶನ ಶಾಲೆ; ಜ್ಞಾನ ಭಂಡಾರ. ತಾನು ಆತ್ಮಾನುಭವದಿಂದ ಕಂಡ ಸತ್ಯವನ್ನು ಮುಚ್ಚುಮರೆಯಿಲ್ಲದೆ ಸಮಾಜದಲ್ಲಿ ಸಾರಿ, ಜನರ ಕಣ್ಣಿಗೆ ಜ್ಞಾನಾರ್ಜನೆಯನ್ನು ಹಚ್ಚಿದ್ದಾನೆ. ಕರ್ತವ್ಯದ ಕಡೆಗೆ ತಿರುಗಿಸಿದ್ದಾನೆ. ಹೃದಯದ ಕಲ್ಮಶವನ್ನು ತೊಳೆದಿದ್ದಾನೆ. ಜನಪದದಲ್ಲಿ ಸತ್ಯದ ಬೀಜವನ್ನು ಬಿತ್ತಿದ್ದಾನೆ. ಇಂದಿಗೂ ಕೀರ್ತಿ ಕಾಯವಾಗಿ ಬಾಳಿದ್ದಾನೆ. ಕೊರಡನ್ನು ಕೊನರಿಸುವ ಶಕ್ತಿ ತ್ರಿಪದಿಗಳಿಗೆ ಬಂದದ್ದು ಸರ್ವಜ್ಞ ಕವಿಯಿಂದ. ಸರ್ವಜ್ಞನ ಕಣ್ಣಿಗೆ, ವರ್ಣನೆಗೆ ಕಾಣದೆ, ಸಿಲುಕದೆ, ಮಣ್ಣಿರೆದು ಮರೆಯಾದ ಒಂದು ಉತ್ತಮವಾದ ಪದಾರ್ಥವಾದರೂ, ರೂಢಿಯಲ್ಲಿದ್ದೀತೆ ? ಮಾತುಗಳು ಕಿರಿದು, ಸುಲಭ, ಲಲಿತ, ಸುಂದರ, ಮಧುರ, ಹೇಳುವ ರೀತಿ, ನೀತಿ, ಅರ್ಥಭಾವಗಳು ಹಿರಿಯವು, ಶ್ರೇಷ್ಠ ವರ್ಗದವು, ಒಂದೊಂದು ಕತೆಯಲ್ಲಿ ಮಾತುಗಳು, ಸಾಣೆಹಿಡಿದ ಅಲಗಿನಂತೆ ನಿಶಿತ, ಅರ್ಥಗರ್ಭಿತ, ಸಿಡಿಲಿನಂತೆ ಕಠೋರ ಕ್ರೂರ. ಸರ್ವಜ್ಞನನ್ನು ಕುರಿತು, ಆಧುನಿಕ ಸಂಪ್ರದಾಯ ಕವಿತಾಚಾರ್ಯ ಬೇಂದ್ರೆಯವರು:

"ಸರಸ ಮಾತುಗಳಲ್ಲಿ ಬೆರೆಸಿ, ಸಿಡಿಲಿನ ನೀರ ಸುರಿಸಿದಳು, ವಚನ ಘುಡಿ ಘುಡಿಸಿ, ಕಿರಿಗನ್ನಡರಸನಿವನೊಬ್ಬ ಸರ್ವಜ್ಞ" ಎಂದು ಸ್ತುತಿಸಿ, ಸಿರಿಗನ್ನಡ ಸಾಹಿತ್ಯ ಸಾಮ್ರಾಜ್ಯದ ಚಕ್ರವರ್ತಿ ಸ್ಥಾನಾಧಿಷ್ಠತನನ್ನಾಗಿ ಮಾಡಿದ್ದಾರೆ. ಸರ್ವಜ್ಞನ ಉಪದೇಶಾಮೃತವನ್ನು ಸವಿದ ಬೇಂದ್ರೆಯವರು ಹೆಚ್ಚೇನೂ ಹೇಳಲಿಲ್ಲವಷ್ಟೆ ?

"ಹುಟ್ಟುವಾಗಲೆ ಧನವ ಮೂಟೆ ಕಟ್ಟಿಳಿದನೆ", "ಸಿರಿಬಂದ ಕಾಲಕ್ಕೆ ಕರೆದು ದಾನವಮಾಡು, ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ", "ಇದ್ದು ಉಣದಿಪ್ಪ ಬಾಯೊಳಗೆ ಕತ್ತೆಯಾಲದ್ದಿಯೇ ಬೀಳ್ಗು", ನಾಡೆಂಬ ದೇಹಕ್ಕೆ ರೂಢಿ ಪತಿಯೇ ಪ್ರಾಣ, ಮೆಚ್ಚಿದಂತ ರಸಿನಲಿ ಎಚ್ಚರದಿಂದಿರಬೇಕು", "ಅಪಮಾನದೂಟದಿಂದುಪವಾಸ ಲೇಸು" "ಸತ್ಯವಂತರ ನೀನು ಸತ್ತರೆಂದೆನಬೇಡ" "ಜಾತಿ ಹೀನರ ಮನೆಯ ಜ್ಯೋತಿಹೀನನೇ, ಯಾತರದ ಹೂವೇನು ನಾತರದು ಸಾಲದೆ", "ಸರ್ವದಂತರ್ಯಾಮಿ ನೂರ್ವನೆಂಬುದು ತತ್ವ", "ಕೋಪವೆಂಬುದು ತಾಪಾಪದಾ ನೆಲಗೆಟ್ಟು" ದೇವರಲಿ ಕುಲಭೇದವಿಲ್ಲ, ಹೊಲೆಯಲ್ಲದ ಉತ್ತಮರು ಎಲ್ಲಿ", ಹರಹತ್ಯ ಮಾಡಿದನ ನರಪು ಕಾನಸವು, ಸತ್ಯವೆಂಬುದು ತಾನು ನಿತ್ಯವಲಿ ಮೆರೆದಿಪುದು" ಹೀಗೆ ಸಹಸ್ರಾರು ಉಪದೇಶಗಳಿಂದ ಕನ್ನಡ ನುಡಿಯನ್ನು ಅಲಂಕರಿಸಿದ್ದಾನೆ. ನಾಡನ್ನು ಬೆಳಗಿದ ಸರ್ವಜ್ಞಗೆ ವೀರಶೈವರೇಕೆ, ಸಮಸ್ತ ಕನ್ನಡಿಗರು ಚಿರುಋಣಿಗಳಾಗಿ ಕಾಣಬೇಕಲ್ಲವೆ ?

ಹನ್ನೆರಡನೆಯ ಶತಮಾನದ ಉತ್ತರಾರ್ಧದಿಂದ ಮೊದಲ್ಗೊಂಡು, ಹದಿನೇಳನೇ ಶತಮಾನದ ಪೂರ್ವಾರ್ಧದವರೆಗೆ, ಚರಿತ್ರೆಯ ಕಾಲಘಟ್ಟವನ್ನು ವೀರಶೈವ ಸಾಹಿತ್ಯದ ಮಹೋನ್ನತ ಕಾಲವೆನ್ನಬಹುದು. ಈ ಐನೂರು ವರ್ಷಗಳಲ್ಲಿ ವೀರಶೈವ ಅರಸರು, ಸನ್ಯಾಸಿಗಳು, ಸಾಧು ಸಂತರು, ಮಹಾ ಕವಿಗಳು, ಸಾಮಾನ್ಯ ಕವಿಗಳು ಇವರೆಲ್ಲರೂ ಸಮರಸರಾಗಿ ಶಕ್ತಿ ವಂಚನೆ ಇಲ್ಲದೆ, ಸಕಲಶಾಸ್ತ್ರ ನ್ಯಾಯಗಳ ತತ್ವಗಳನ್ನು, ತಿಳಿಗನ್ನಡದಲ್ಲಿ ಹಾಡಿ, ಕನ್ನಡ ಸಾಹಿತ್ಯ ಭಂಡಾರವನ್ನು ಶ್ರೀಮಂತಗೊಳಿಸಿದ್ದಾರೆ. ಮುಖ್ಯವಾಗಿ ವೀರಶೈವರ ಸಮಸ್ತ ತತ್ವಜ್ಞಾನವೂ, ಕನ್ನಡದಲ್ಲಿ ಪ್ರತಿಬಿಂಬಿಸಿದೆ. ಕನ್ನಡ ಸಾಹಿತ್ಯಕ್ಕೆ ವೀರಶೈವರಿಂದ ಸಂದ ಸೇವೆ ಅಪಾರವಾದದ್ದು. ನಾಡಿನ ಇತಿಹಾಸದಲ್ಲಿ, ಸಾಹಿತ್ಯ ಚರಿತ್ರೆಯಲ್ಲಿ ವೀರಶೈವರಿಗೆ ದಿವ್ಯವಾದ ಒಂದು ಸ್ಥಾನವುಂಟು ಮಾನವುಂಟು.

ಮೇಲ್ಕಂಡ ಈ ಎಲ್ಲ ವಿವರಣೆಯಿಂದ ವೀರಶೈವ ಸಮಾಜದ ಗತ ವೈಭವವು ವ್ಯಕ್ತವಾದಂತಾಯ್ತು. ಶಿವಶರಣರು ಹಿಂದೂ ತತ್ವಜ್ಞಾನದಲ್ಲಿಯೂ, ಸಮಾಜ ರಚನೆಯಲ್ಲಿಯೂ, ಅದ್ಭುತವಾದ ಕ್ರಾಂತಿಯನ್ನುಂಟುಮಾಡಿದ್ದಾರೆ. ಆದುದರಿಂದಲೇ, ವೀರಶೈವ ಸಂಸ್ಕೃತಿಯಲ್ಲಿ ಆರ್ಯರ ತತ್ವಜ್ಞಾನ, ದ್ರಾವಿಡರ ಭಕ್ತಿಮಾರ್ಗ, ಜೈನರ ಅಹಿಂಸಾ ಧರ್ಮ, ಬೌದ್ಧರ ಸಮತಾವಾದ, ಸಿಕ್ಕರ ಧರ್ಮನಿಷ್ಠೆಗಳು ಎದ್ದು ಕಾಣುವದು.

ಈ ಸಿಂಹಾವಲೋಕನದಿಂದ, ನಮ್ಮ ವೀರಶೈವ ಸಾಹಿತ್ಯದ ಪ್ರಗತಿ ಮಾರ್ಗಕ್ಕೆ ಮುಂದೆ ಯಾವ ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳಬೇಕೆನ್ನುವ ಪ್ರಶ್ನೆ ನಮ್ಮನ್ನು ಜಾಗೃತರನ್ನಾಗಿ ಮಾಡಬೇಕಲ್ಲವೇ ?

ಸಾಹಿತ್ಯವು ಜನಜೀವನದ ಪ್ರತಿಬಿಂಬ. ಯಾವ ಸಮಾಜವು ತನ್ನ ಇತಿಹಾಸ ಮತ್ತು ಸಾಹಿತ್ಯಗಳನ್ನು ಉಪೇಕ್ಷಿಸುತ್ತದೆಯೋ ಅದು ಕಾಡು ಜನಗಳ ಗುಂಪಿಗೆ ಸಮಾನವೆಂದು ಹೇಳಬಹುದಾಗಿದೆ. ಕರ್ನಾಟಕದ ಏಕೀಕರಣವಾಗಿರುವ ಈ ಕಾಲದಲ್ಲಿ ಕರ್ನಾಟಕದ ಹಾಗೂ ಭರತ ಖಂಡದ ಸರ್ವ ವಿಧದ ಉನ್ನತಿಗಾಗಿ ವೀರಶೈವ ಸಮಾಜವು ದುಡಿಯಬೇಕಾಗಿದೆ. ನಮ್ಮ ಹಿರಿಯರು ತೋರಿಸಿರುವ ರೀತಿಯನ್ನನುಸರಿಸಿ, ನಮ್ಮ ಸಾಹಿತ್ಯ ಸಂಸ್ಕೃತಿಗಳನ್ನು ಅಭಿವೃದ್ಧಿಗೊಳಿಸಬೇಕಾಗಿದೆ. ಸಮಾಜದ ಇಂದಿನ ಸ್ಥಿತಿ ಅಷ್ಟು ಆಶಾಜನಕವಾಗಿಲ್ಲವೆಂದು ವಿಷಾದದಿಂದ ಸೂಚಿಸಬೇಕಾಗಿದೆ. ಸಮಾಜದಲ್ಲಿ ಸಾಹಿತಿಗಳ, ಸಾಹಿತ್ಯ ಪ್ರೇಮಿಗಳ ಸಂಖ್ಯೆ ಕೇವಲ ಕಮ್ಮಿ. ಈ ಪರಿಸ್ಥಿತಿಯನ್ನು ಹೋಗಲಾಡಿಸಿ, ಸಮಾಜ ಬಾಂಧವರು ದೇಶ, ಭಾಷೆ ಧರ್ಮದ ಸೇವೆಗೆ ಕಂಕಣ ಕಟ್ಟುವಂತೆ ಪ್ರೇರೇಪಿಸುವುದು ಅವಶ್ಯವೆನಿಸಿದೆ.

ಅಖಿಲ ಭಾರತ ವೀರಶೈವ ಮಹಾಸಭೆಯ ಕರ್ತವ್ಯದಲ್ಲಿ ವೀರಶೈವದ ವಾಙ್ಮಯವನ್ನು ಹೊರಗೆಡುಹುದು, ಎಷ್ಟು ಉದ್ಗ್ರಂಥಗಳು ಅಚ್ಚಾಗದೆ ಇರುವುದನ್ನು ಅಚ್ಚುಹಾಕಿಸಿ ಪ್ರಕಟಿಸುವುದು. ಪ್ರಕಾಶಗೊಳಿಸುವುದು ಅತ್ಯಂತ ಪವಿತ್ರವಾದದ್ದೆಂದು ನನ್ನ ಭಾವನೆ. ಈ ವಿಷಯದಲ್ಲಿ ಅವಿಶ್ರಾಂತ ಶ್ರಮ ಪಡೆದು ಸಿದ್ಧರಾಗಿರುವ ಪಂಡಿತರ ಸೇವೆಯೂ ಬೇಕು. ಕೇಂದ್ರ ಗ್ರಂಥಾಲಯವೂ ಪುಸ್ತಕ ಭಂಡಾರವೂ ಬೇಕು. ಎಲ್ಲಕ್ಕೂ ಮೇಲಾಗಿ ಧನ ಬೇಕು.

ಹಳೆಯ ಕೈ ಬರೆಹದ ತಾಳೆವೋಲೆಯ ಪುಸ್ತಕಗಳು ಅನೇಕ ಮಠಗಳಲ್ಲಿ, ಗೃಹಸ್ಥರ ಮನೆಗಳಲ್ಲಿ ಅಸ್ತವ್ಯಸ್ತವಾಗಿ ಬಿದ್ದು ಹುಳ ಹತ್ತಿ ಹೋಗುತ್ತಲಿವೆ. ಆದ್ದರಿಂದ ಮಹಾಸಭೆಯು ಪ್ರಚಾರಕರನ್ನು ನೇಮಿಸಿ, ಈ ಗ್ರಂಥಗಳನ್ನು ಸಂಗ್ರಹಿಸಿ ಒಂದು ಕೇಂದ್ರ ಸಂಸ್ಥೆಗೆ ಸಲ್ಲಿಸುವಂತೆ ಪ್ರೇರೇಪಿಸಬೇಕು.

ಅಪ್ರಕಾಶಿತ ಕನ್ನಡ ಕಾವ್ಯಗಳನ್ನು ಹಾಗೂ ವೀರಶೈವ ಸಾಹಿತ್ಯ ರತ್ನಗಳನ್ನು ಪ್ರಕಟಿಸುವ ಕಾರ್ಯ ಭರದಿಂದ ಸಾಗಬೇಕಾಗಿದೆ. ಯಾವುದೊಂದು ಪ್ರಬುದ್ಧ ಜನಾಂಗದ ಚರಿತ್ರೆಯನ್ನು ನೋಡಿದರೂ, ಅದು ತನ್ನ ಪ್ರಾಚೀನ ಸಂಪತ್ತನ್ನು ಉಳಿಸಿಕೊಂಡು ಬೆಳೆಸಿಕೊಂಡು ಮುಂದುವರಿಯುತ್ತಿರುವುದನ್ನು ನಾವು ವಿಶ್ವದಲ್ಲಿ ಕಾಣಬಹುದು. "ಸಾಹಿತ್ಯವು ಸಮಕಾಲೀನರ ರನ್ನಗನ್ನಡಿ" ಎಂದು ವಿವೇಕಾನಂದರು ಹೇಳಿದ್ದಾರೆ. " Literature is the golden mirror of contemporary society"(Swami Vivekananda)

ಇತ್ತೀಚೆಗೆ ಕನ್ನಡದಲ್ಲಿ ನವೀನ ಸಾಹಿತ್ಯವು ತಲೆಯೆತ್ತುತ್ತಿದೆ. ಪ್ರಾಚೀನ ಕವಿಗಳಲ್ಲಿ ಕಾಣದಿದ್ದ ವಿವಿಧತೆ, ನವೀನತೆ ನಾವು ಕಾಣುತ್ತಿದ್ದೇವೆ. ಸಾಹಿತ್ಯವು ಹೀಗೆ ಕಾಲಕ್ಕೆ ತಕ್ಕಂತೆ ಪರಿವರ್ತನಗೊಳ್ಳುವನು ನ್ಯಾಯವೇ ಸರಿ. ಹೀಗೆ ನವೀನ ಸಾಹಿತ್ಯವು ಪ್ರಚಾರವಾಗುತ್ತಿದ್ದರೂ, ಪ್ರಾಚೀನ ಸಾಹಿತ್ಯವು ಹಿಮ್ಮೆಟ್ಟುತ್ತಿರುವುದನ್ನು ನೋಡಿ ಸಮಸ್ತ ವೀರಶೈವರೂ ಕಣ್ಣೀರಿಡಬೇಕಾಗಿದೆ.

ಕೆಲವು ಜನ ಪದವೀಧರರೂ ಅಧಿಕಾರ ವರ್ಗದವರೂ ಪ್ರಾಚೀನ ಕವಿಗಳನ್ನು ಅವರ ಕಾವ್ಯಪದ್ಧತಿಯನ್ನು ಅಸಮಂಜಸವಾಗಿ ಅನವಶ್ಯಕವಾಗಿ ಟೀಕಿಸುತ್ತಿರುವುದು ಶೋಚನೀಯ ಸಂಗತಿ. ನವೀನ ವಾಙ್ಮಯದಲ್ಲಿ ನನಗೆ ತಿಳಿದಮಟ್ಟಿಗೆ ಕೆಲವು ವಿದ್ವತ್ಪೂರ್ಣವಾದ ಹಾಗೂ ಭಾವ ಭಾಷೆಗಳ ಸಮರಸವುಳ್ಳ ಕೃತಿಗಳನ್ನು ಬಿಟ್ಟರೆ ಗಟ್ಟಿಗಿಂತ ಟೊಳ್ಳು ಹೆಚ್ಚೆಂಬುದನ್ನು ಹೇಳುವುದು ಅನಿವಾರ್ಯವೆನಿಸಿದೆ. ಇದನ್ನು ಯಾರೂ ಪ್ರಾಕಾರಾಂತರ ಭಾವಿಸಲಾಗದು. ಅನೇಕ ಆಧುನಿಕ ಕವಿಗಳಲ್ಲಿ ನನಗೆ ಅಪಾರ ಗೌರವವಿದೆ. ಒಟ್ಟಿನಲ್ಲಿ ಕಣ್ಮರೆಯಾಗಿರುವ ಮತ್ತು ಅಪ್ರಕಾಶಿತವಾಗಿರುವ ಕನ್ನಡ ಗ್ರಂಥಗಳ ಕಡೆಗೆ ವೀರಶೈವ ಸಮಾಜ ಪ್ರೇಮಿಗಳು, ಸಾಹಿತ್ಯ ಭಕ್ತರು ಗಮನ ಕೊಡುವರೆಂದು ನನ್ನ ಬಯಕೆ.

ವೀರಶೈವ ಇತಿಹಾಸ, ಧರ್ಮ, ಸಾಹಿತ್ಯ ಮುಂತಾದ ವಿಷಯಗಳ ಮೇಲೆ ಸಂಶೋಧನಾತ್ಮಕವಾದ ಅಧಿಕಾರಯುತವಾದ, ಗ್ರಂಥ

ಗಳನ್ನು ಕನ್ನಡ, ಇಂಗ್ಲೀಷ್, ಹಿಂದಿ, ಮರಾಠಿ ಇತ್ಯಾದಿ ದೇಶ ಮತ್ತು ಪರದೇಶ ಭಾಷೆಗಳಲ್ಲಿ ಪಂಡಿತರಿಂದ ಬರೆಯಿಸಿ ಪ್ರಕಾಶ ಪಡಿಸುವದೊಂದು ಕಾರ್ಯ ಉಪಯುಕ್ತವಾದ್ದೆಂದು ನಾನು ಹೇಳಬಯಸುತ್ತೇನೆ. ಹೀಗೆ ಮಾಡುವುದರಿಂದ ಸಮಾಜದ ನಿಜಸ್ಥಿತಿ, ಮತ ಧರ್ಮದ ಔನ್ನತ್ಯ ಇವು ಪ್ರಕಾಶಗೊಂಡು ವಿಶ್ವದ ಜನರು ನಮ್ಮಲ್ಲಿ ಗೌರವ, ಆದರ, ವಿಶ್ವಾಸಗಳನ್ನು ವೃದ್ಧಿಗೊಳಿಸಿದಂತಾಗುವುದರಲ್ಲಿ ಸಂದೇಹವಿಲ್ಲ. ಮೇಲಾಗಿ ಅಖಿಲ ಭಾರತ ವೀರಶೈವ ಮಹಾಸಭೆಯು ಸಮಾಜದ ವಿದ್ಯಾವಂತ ತರುಣರಲ್ಲಿ ಸಾಹಿತ್ಯಾಭಿರುಚಿಯನ್ನು ಹೆಚ್ಚಿಸಿ, ಸ್ಫೂರ್ತಿಗೊಳಿಸಬೇಕು. ನವೀನ ಸಾಹಿತ್ಯವನ್ನು ಬರೆಯವುದಕ್ಕೆ ಪ್ರೋತ್ಸಾಹಕೊಟ್ಟು, ಶಿಷ್ಯವೃತ್ತಿಗಳನ್ನು, ಪಾರಿತೋಷಕಗಳನ್ನು, ಪದಕಗಳನ್ನು, ಪ್ರಶಸ್ತಿಪತ್ರಗಳನ್ನು ನಿಯೋಜಿಸುವುದು ಒಳ್ಳೆಯದು. ತರುಣರಿಗೆ ಪ್ರಾಚೀನ ಸಾಹಿತ್ಯದ ಅಭಿಮಾನ ಹೆಚ್ಚುವಂತೆ ಮಾಡುವುದಕ್ಕೂ ಇದೇ ಉಪಾಯ. ಸಮಾಜದ ಏಳ್ಗೆಗೆ ಸಹಾಯಕರ್ತರಾಗಿ, ನಾಯಕತ್ವವನ್ನು ವಹಿಸಬೇಕಾಗುವ ತರುಣರಿಗೆ ಸಮಾಜದ ಕೀರ್ತಿ, ಪ್ರತಿಷ್ಠೆ, ಗೌರವಗಳ, ನಿಜಸ್ವರೂಪವು ತಿಳಿಯಬೇಕಾದರೆ ಸಾಹಿತ್ಯದ ಅಮಲು ಅವರಲ್ಲಿ ಬೇರೂರಬೇಕು. ದುರುಪದೇಶದಿಂದ ದಾರಿತಪ್ಪಿ ಸಮಾಜಕ್ಕೆ ದೂರವಾಗುವ ತರುಣರನ್ನು ಬೇರೆ ವಿಧವಾದ ಹವ್ಯಾಸಗಳಿಂದ ತಪ್ಪಿಸಿ, ಸಾಹಿತ್ಯದೇವಿಯ ಆರಾಧನೆಯಲ್ಲಿ ಮಗ್ನರನ್ನಾಗಿ ಮಾಡುವುದು ಹಿರಿಯರೆಲ್ಲರ ಕರ್ತವ್ಯ. ಇದು ಮಹಾಸಭೆಯವರ ಪಾಲಿಗೆ ಬಂದ ಹೊಣೆಗಾರಿಕೆ. ನನ್ನ ಸ್ವಂತ ಅಭಿಪ್ರಾಯವನ್ನು ಹೇಳುವುದಾದರೆ, ವೀರಶೈವ ಸಾಹಿತ್ಯದ ಮೇಲ್ಮೆಗಾಗಿ ಪ್ರತ್ಯೇಕ ಒಂದು "ವೀರಶೈವ ಸಾಹಿತ್ಯ ಪರಿಷತ್ತು" ನಿರ್ಮಾಣವಾಗಬೇಕು; ವೀರಶೈವ ಸಾಹಿತ್ಯ ಪ್ರಚಾರ, ನಮ್ಮ ಮತಧರ್ಮ ತತ್ವಗಳ ಪ್ರಚಾರ, ನಮ್ಮ ಸಂಸ್ಕೃತಿಯ ಪ್ರಚಾರ, ಇವು ನಮ್ಮ ಜೀವನದ ಉಸಿರಾಗಬೇಕು. ನಮ್ಮ ಪಂಚಾಕ್ಷರೀ ಜಪವಾಗಿ ಪರಿಣಮಿಸಬೇಕು. ಅದುವರಿಗೆ ನಮ್ಮ ಸಮಾಜದ ದುಸ್ಥಿತಿ ಉತ್ತಮಗೊಳ್ಳಲಾರದೆಂದು ನನ್ನ ಗಾಢವಾದ ನಂಬಿಕೆ.

॥ ಸಿರಿಗನ್ನಡಂಗೆಲ್ಗೆ ॥

ವಿಶ್ವಧರ್ಮ ಹಾಗೂ ವೀರಶೈವಧರ್ಮ

ಲೇಖಕರು :
ಡಾ॥ ಎ. ಎಲ್. ಶಿವರುದ್ರಪ್ಪ, ಎಂ.ಎ.,ಪಿ.ಎಚ್.ಡಿ.,
ತತ್ವಶಾಸ್ತ್ರ ವಿಭಾಗ, ಮಾನಸ ಗಂಗೋತ್ರಿ
ಮೈಸೂರು

ವಿಶ್ವಧರ್ಮ ಎಂದರೇನು ?

ವಿಶ್ವಧರ್ಮ (Universal Religion) ಎಂದಾಗ ವಿಶ್ವದ ಜನರೆಲ್ಲರೂ ಆಚರಿಸಬಲ್ಲ ಒಂದೇ ಒಂದು ಧರ್ಮ ಎಂದು ಯಾರಿಗಾದರೂ ಭಾಸವಾಗಬಹುದಲ್ಲವೇ ? ಆದರೆ ಇಲ್ಲಿ ಆ ಮಾತಿನ ಅರ್ಥ ಅದಲ್ಲ. ಮಾನವನ ಧಾರ್ಮಿಕ ಪ್ರಜ್ಞೆಯು ಅವನ ಉಳಿದೆಲ್ಲ ಸಂಸ್ಕೃತಿ, ಜ್ಞಾನ ಮತ್ತು ವಿಜ್ಞಾನಗಳೊಂದಿಗೆ ಹಂತಹಂತವಾಗಿ ವಿಕಾಸಗೊಂಡಿದೆ ಎಂಬುದು ಒಂದು ವೈಜ್ಞಾನಿಕ ಸತ್ಯ. ಅಜ್ಞಾನಿ, ಅಸಂಸ್ಕೃತ ಮತ್ತು ಅನಾಗರಿಕನಾದ ಆದಿಮಾನವನಲ್ಲಿ ಕಂಡ ಅಸಹಾಯಕತೆ, ಭಯ ಮುಂತಾದ ಕಾರಣದಿಂದ ತಂತ್ರ ಯಂತ್ರದ ರೀತಿಯಲ್ಲಿ ಬೀಜರೂಪವಾಗಿ ಆರಂಭಗೊಂಡ ಧಾರ್ಮಿಕ ಪ್ರಜ್ಞೆ ಮುಂದೆ ವಿಕಾಸಗೊಂಡು ಆಧ್ಯಾತ್ಮ ಸ್ವರೂಪವನ್ನು ಪಡೆದು ವಿಶ್ವವ್ಯಾಪಕವಾಗಿದೆ. ಇದು ವರ್ಗಧರ್ಮ (Tribal Religion) ದ ರೂಪದಲ್ಲಿ ಮೊದಲಾಗಿ, ದೇಶೀಯ ಧರ್ಮ (National Religion) ಹಂತವನ್ನು ದಾಟಿ ಕೊನೆಗೊಮ್ಮೆ ವಿಶ್ವಧರ್ಮದ (Universal Religion) ಮಜಲನ್ನು ಮುಟ್ಟಿದೆ. ಈ ವಿಕಾಸದ ಮೂರು ಹಂತಗಳ ಮಹತ್ವವನ್ನು ಸಮಾಜ ಶಾಸ್ತ್ರಜ್ಞರು, ರಾಜಕೀಯ ಶಾಸ್ತ್ರಜ್ಞರು ಮತ್ತು ಆರ್ಥಿಕ ಶಾಸ್ತ್ರಜ್ಞರೂ ಸಹ ಮೆಚ್ಚಿದ್ದಾರೆ. ಕೇವಲ ತನ್ನ ಬುಡಕಟ್ಟಿಗೆ (Tribe) ಸೀಮಿತವಾಗಿದ್ದ ಮಾನವನ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪ್ರಜ್ಞೆ ವ್ಯಾಪಕಗೊಂಡು ದೇಶದಷ್ಟು ವಿಶಾಲವಾಗಿ ಕೊನೆಗೆ ವಿಶ್ವಪ್ರಜ್ಞೆಯಾಗಿ ವಿಕಾಸಗೊಂಡಿದೆ. ಈ ಧಾಟಿಯನ್ನೇ ಅನುಸರಿಸಿ ಮಾನವನ ಧಾರ್ಮಿಕ ಪ್ರಜ್ಞೆಯೂ ಬೆಳೆದು ಬಂದಿದೆ ಎಂಬುದು ವಿಚಾರವಂತ ದಾರ್ಶನಿಕರ ಸಿದ್ಧಾಂತ.

ಅಂದಮೇಲೆ, ಜಗತ್ತಿನಲ್ಲಿ ಈಗ ಪ್ರಚಲಿತವಿರುವ ಜೀವಂತ ಧರ್ಮ (Living Religion) ಗಳಲ್ಲೆಲ್ಲಾ ಈ ವಿಶ್ವಧರ್ಮದ ಅಂಶವು ಅಂತರ್ಗತವಾಗಿದೆ ಎಂದಂತಾಯಿತು. ವಿಶ್ವಧರ್ಮ ಎಂಬುದು ಒಂದು ಮಹತ್ವಪೂರ್ಣವಾದ ಆದರ್ಶ. ಈ ಆದರ್ಶವು ಇಂದು ಬದುಕಿರುವ ವಾಸ್ತವಿಕ ಧರ್ಮಗಳಲ್ಲೆಲ್ಲಾ ತಕ್ಕಮಟ್ಟಿಗಾದರೂ ಕಾಣಸಿಗುತ್ತದೆ. ವಿಶ್ವಧರ್ಮದ ಈ ಅಂಶವು ತಮ್ಮಲ್ಲಿರುವುದರಿಂದಲೇ ಬೇರೆ ಬೇರೆ ಹೆಸರಿನಿಂದ ಕರೆಯಲಾದ ವಿವಿಧ ಧರ್ಮಗಳು ಜಗತ್ತಿನ ಒಂದಲ್ಲ ಒಂದು ಜನಾಂಗದ ಮೇಲೆ ತಮ್ಮ ಪ್ರಭಾವವನ್ನು ಬೀರಲು ಶಕ್ತವಾಗಿವೆ. ಯಾವ ಒಂದು ಧರ್ಮವು ಮಾತ್ರ ಪರಿಪೂರ್ಣ ಮಟ್ಟದಲ್ಲಿ ವಿಶ್ವಧರ್ಮವೆನಿಸಲಾರದಾದರೂ ವಿಶ್ವಧರ್ಮದ ಕೆಲವು ಸ್ವಭಾವಗಳು ಎಲ್ಲ ಧರ್ಮಗಳಲ್ಲಿಯೂ ಹೆಚ್ಚುಕಡಮೆಯಾಗಿಯಾದರೂ ವ್ಯಾಪಿಸಿವೆ. ವಿಶ್ವಧರ್ಮದ ಅಂಶ ಯಾವ ಧರ್ಮದಲ್ಲಿ ಹೆಚ್ಚಾಗಿ ಮೈಗೂಡಿದೆಯೋ ಆ ಧರ್ಮ ಹೆಚ್ಚು ಅರ್ಥಪೂರ್ಣವಾಗಿದ್ದು ಬನಿಗೂಡಿರುತ್ತದೆ. ಏಕೆಂದರೆ ಈ ಅಂಶಗಳು ಮಾನವನ ಸಾಂಸ್ಕೃತಿಕ ವಿಕಾಸದ ಅಗ್ನಿಪರೀಕ್ಷೆಯಲ್ಲಿ ಗೆದ್ದು ಕೊನೆಯಲ್ಲಿ ಉಳಿದುಬಂದವುಗಳಷ್ಟೆ !

ವಿಶ್ವಧರ್ಮದ ವಿಶಿಷ್ಟತೆ :

ವಿಶ್ವಧರ್ಮ ಎಂಬುದು ವರ್ಗಧರ್ಮ ಮತ್ತು ರಾಷ್ಟ್ರಧರ್ಮವನ್ನೆಲ್ಲಾ ಮೀರಿ ನಿಂತದ್ದು. ಮಾನವನು ತನ್ನ ಮೃಗತ್ವವನ್ನು ನೀಗಿಕೊಂಡು ದೈವತ್ವವನ್ನೇರಲು ಸಹಕಾರಿಯಾದ ಈ ಧರ್ಮದಲ್ಲಿ ಜಾತಿ ಕುಲ, ವರ್ಣ ಬಣ್ಣ ಮುಂತಾದ ಯಾವ ಮೇರೆಗಳೂ ಇರಲಾರವು. ವಿಶ್ವಧರ್ಮದ ಪರಮೋದ್ದೇಶವೇನೆಂದರೆ, ನೈಸರ್ಗಿಕವಾದ ಪ್ರವೃತ್ತಿಗಳಿಗೆ (Natural instincts) ದಾಸನಾಗಿ ತೊಳಲುತ್ತಿರುವ ಮಾನವನಲ್ಲಿ ಸುಪ್ತವಾಗಿರುವ ದೈವೀಪ್ರಜ್ಞೆಯನ್ನು ಚೇತನಗೊಳಿಸಿ ಅವನ ಆತ್ಮೋದ್ಧಾರಕ್ಕೆ ನೆರವಾಗುವುದು. ಈ ಯತ್ನದಲ್ಲಿ ಮೊದಲಿಗರಾದವರನ್ನು ಪ್ರವಾದಿಗಳು, ಸಂತಶ್ರೇಷ್ಟರು ಮುಂತಾಗಿ ಕರೆಯುವರು. ಈ ಮಹನೀಯರು ಸತ್ಯಾನ್ವೇಷಣೆಗಾಗಿ ತಮ್ಮ ಸರ್ವ ಶಕ್ತಿಯನ್ನು ವ್ಯಯಿಸಿ, ತಾವು ಕಂಡ ದಿವ್ಯಾನುಭವವನ್ನು ಜನತೆಗೆ ನೀಡಿ ಅವರಲ್ಲಿ ಧಾರ್ಮಿಕ ಪ್ರಜ್ಞೆಯನ್ನು ಜಾಗ್ರತಗೊಳಿಸಲು ಶಕ್ತರಾಗಿದ್ದಾರೆ. ಇಂತಹ ಮಹನೀಯರು ವಿಶ್ವದ ಎಲ್ಲ ಭಾಗಗಳಲ್ಲಿಯೂ ಆಗಿ ಹೋಗಿದ್ದಾರೆ. ಇವರು ವಿವಿಧ ಧರ್ಮಗಳ ಆದಿಪ್ರವರ್ತಕರಾಗಿ, ಪುರಾತನರೆಂದು ಜಗದ್ವಂದ್ಯರಾಗಿದ್ದಾರೆ. ಇವರ ಸಂದೇಶವನ್ನು ಒಪ್ಪಿ ಅವರನ್ನು ಅನುಸರಿಸಿದ ಜನ ಆ ಬೋಧಕನ ಹೆಸರನ್ನೇ ಆ ಧರ್ಮಕ್ಕೂ ಇಟ್ಟಿದ್ದಾರೆ. ಬುದ್ಧನ ಬೋಧನೆಯನ್ನನುಸರಿಸಿ ಬೌದ್ಧ ಧರ್ಮ, ಕ್ರೈಸ್ತನ ಬೋಧನೆಯನ್ನಾದರಿಸಿ ಕ್ರೈಸ್ತ ಧರ್ಮ, ಪ್ರವಾದಿ ಮಹಮದನ ಮಾರ್ಗದರ್ಶನದಂತೆ ಇಸ್ಲಾಂಧರ್ಮ ಉಪನಿಷತ್ತಿನ ಋಷಿವರ್ಯರ ಸಿದ್ಧಿಯನ್ನನುಸರಿಸಿ ಹಿಂದೂ ಧರ್ಮ- ಹೀಗೆ ವಿವಿಧ ಧರ್ಮಗಳು ಬೆಳೆದು ಬಂದಿವೆ.

ಧರ್ಮಪ್ರವರ್ತಕರ ಸಾಧನೆ ಮತ್ತು ಬೋಧನೆಯ ಫಲವಾಗಿ ಬೆಳೆದು ಬಂದ ಈ ಧರ್ಮಗಳಲ್ಲಿ ಭಿನ್ನತೆಗಿಂತಲೂ ಏಕತೆಯೇ ಹೆಚ್ಚಾಗಿದೆ ಎಂಬುದು ಬಹು ಗಮನಾರ್ಹವಾದ ವಿಚಾರ. ಅವರುಗಳು ಬದುಕಿದ್ದ ಕಾಲ, ದೇಶ ಮತ್ತು ಪರಿಸರಗಳ ಕಾರಣದಿಂದ ಕಾಣಬರುವ ಅಲ್ಪ ಮತಭೇದವನ್ನು ಮರೆತರೆ ಆಗ ಇವರೆಲ್ಲರ ಬೋಧನೆಯಲ್ಲಿ ಕಾಣುವ ಮೂಲ ತತ್ವಗಳು ಒಂದೇ ಎಂಬುದು ಯಾರಿಗಾ

ದರೂ ವೇದ್ಯವಾಗುತ್ತದೆ. ಈ ಮತಾಚಾರ್ಯರ ಅನುಯಾಯಿಗಳ ಲೋಪದಿಂದಾಗಿ ಮೂಲ ಸಿದ್ಧಾಂತವು ಸಂಕೀರ್ಣಗೊಂಡಿರುವ ನಿದರ್ಶನಗಳಿಗೇನೂ ಕಡಮೆ ಇಲ್ಲ. ಆದರೆ ಅಂತಹ ಅಂಶಗಳನ್ನು ಗುರುತಿಸುವುದು ಸುಲಭ. ಆಚಾರ್ಯರಷ್ಟು ಆಚರಣೆಯ ನಿಷ್ಠೆ ಅನುಯಾಯಿಗಳಿಗಿರಬೇಕಷ್ಟೆ! ಅದಿಲ್ಲದಿದ್ದಾಗ, ಈ ರೀತಿ ಭವ್ಯತೆಯ ಮುಗಿಲನ್ನು ಮುಟ್ಟಿದ ಅನೇಕ ಸಿದ್ಧಾಂತಗಳು ಸಂಕೀರ್ಣಗೊಂಡು ಜಾತಿ, ಮತ, ವಿಧಿ ನಿಷೇದಗಳೇ ಮುಂತಾದ ಸಂಪ್ರದಾಯದ ಕಿರುಕುಳಕ್ಕೆ ಸಿಕ್ಕಿ ತಮ್ಮ ಧಾರ್ಮಿಕ ಸಂವೇದನೆಯನ್ನು ಕಳೆದುಕೊಳ್ಳುತ್ತವೆ. ಹಾಗಾಗಿ ವಿಶ್ವಧರ್ಮದ ಔನ್ನತ್ಯವನ್ನು ಮುಟ್ಟಿದ ಶ್ರೇಷ್ಠ ಧರ್ಮಗಳಲ್ಲಿಯೂ ಮ್ಲಾನತೆ ತಲೆದೋರುವುದು.

ವೀರಶೈವ ಧರ್ಮದಲ್ಲಿ ವಿಶ್ವಧರ್ಮ :

ವೀರಶೈವ ಧರ್ಮವು ಮೂಲತಃ ಅನುಭಾವ (Mystic) ಪ್ರಧಾನವಾದ ಧರ್ಮ. ಭಗವದನುಭವಕ್ಕೆ ಹಾತೊರೆದ ಶರಣರ ಸಮೂಹವು, ಅಂದು ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಡಾಂಭಿಕತೆಯನ್ನು ಖಂಡಿಸಿ ವಿನೂತನವಾದ ಧಾರ್ಮಿಕ ಜೀವನವನ್ನು ನಡೆಸಲು ಹಾದಿ ತೋರಿಸಿತು. ನಶ್ವರವಾದ ಈ ಜಗದ್ವ್ಯಾಪಾರಕ್ಕೆ ಕಾರಣ ರೂಪವಾಗಿ ನಿತ್ಯಸ್ವರೂಪಿಯಾದ ಪರಬ್ರಹ್ಮತತ್ವ ಒಂದಿರಬೇಕೆಂದು ಗುರುತಿಸಿ, ಆ ತತ್ವವೇ ಜೀವನಲ್ಲಿ ಆತ್ಮಸ್ವರೂಪಿಯಾಗಿ ರಾರಾಜಿಸುತ್ತಿದೆ ಎಂಬುದನ್ನು ಸಾಕ್ಷಾತ್ಕರಿಸಿದ ಉಪನಿಷತ್‌ಕಾರರು ಕ್ರಿ. ಪೂ. 3000 ವರ್ಷಗಳಿಗೆ ಮೊದಲೇ ಭಾರತದಲ್ಲಿ ಆಗಿ ಹೋಗಿದ್ದರು. ಇಂತಹ ಭವ್ಯ ಸಿದ್ಧಾಂತವು ಕಾಲಕ್ರಮದಲ್ಲಿ ಕರ್ಮಾಚರಣೆಗಳ ಗೋಜಿಗೆ ಸಿಕ್ಕಿ ತನ್ನ ಧಾರ್ಮಿಕ ತೀವ್ರತೆಯನ್ನು ಕಳೆದುಕೊಂಡು ಮಂದಗಾಮಿಯಾಯಿತು. ಸಾಮಾಜಿಕವಾಗಿ ಹಿಂದೂ ಧರ್ಮವು ವರ್ಣಾಶ್ರಮಗಳ ಕಟ್ಟುಪಾಡುಗಳಿಂದ ಬಿಗಿಗೊಂಡಿತು. ಧಾರ್ಮಿಕ ಆಚರಣೆಗಳು ಮತಾಚಾರಣೆಗಳ ಹೆಸರಿನಲ್ಲಿ ವಿಧಿ ನಿಷೇಧಗಳ ರೂಪತಳೆದು ಮಾನವನ ಧಾರ್ಮಿಕ ಸ್ವಾತಂತ್ರ್ಯವನ್ನು ಮೊಟಕು ಮಾಡಿದವು. ಧಾರ್ಮಿಕ ಜೀವನ ಕೇವಲ ಸಂಪ್ರದಾಯಬದ್ಧವೆನಿಸಿ ಅದು ತನ್ನ ಹೃದಯವಂತಿಕೆಯನ್ನು ನೀಗಿಕೊಂಡಿತು.

ವಿಶ್ವಧರ್ಮವಾಗಿ ಬೆಳಗಿದ ಹಿಂದೂಧರ್ಮ, ವರ್ಣಧರ್ಮ ಅಥವಾ ಜಾತಿ ಧರ್ಮವಾಗಿ ತನ್ನ ಹಿರಿಮೆಯನ್ನು ಕಳೆದುಕೊಳ್ಳದಂತೆ ಕಾಪಾಡುವ ಯತ್ನ ಮತ್ತೊಮ್ಮೆ 12 ನೇ ಶತಮಾನದಲ್ಲಿ ಕರ್ನಾಟಕದ ವೀರಶೈವ ಶರಣರಿಂದ ನಡೆಯಿತು. ಇಂತಹ ಮೊದಲ ಯತ್ನ ಕ್ರಿ.ಪೂ. 6 ನೇ ಶತಮಾನದಲ್ಲಿ ಬುದ್ಧನಿಂದ ನಡೆದಿದ್ದತಾದರೂ ಅದು ಅತಿರೇಕಗೊಂಡು ವೈನಾಶಿಕ ಸಿದ್ಧಾಂತವಾಯಿತೆಂಬುದನ್ನು ಸ್ಮರಿಸಬಹುದು. ಧಾರ್ಮಿಕ ಸ್ವಾತಂತ್ರ್ಯ ಮತ್ತು ಸತ್ಯಾನ್ವೇಷಣೆಗೆ ಹೆಸರಾದ ಹಿಂದೂ ಧರ್ಮವು ಕರ್ಮಾಚರಣೆಯ ಶುಷ್ಕ ಸಂಪ್ರದಾಯಕ್ಕೆ ಬಲಿಯಾದಾಗ ಅದರ ಉದ್ಧಾರಕ್ಕೆ ಬೇಕಾದ ಸಮರ್ಥ ಸುಧಾರಕರನ್ನು ತನ್ನಲ್ಲಿಯೇ ಸೃಷ್ಟಿಸುವ ಶಕ್ತಿ ತನಗೆ ಇದೆ ಎಂಬುದನ್ನು ಅದು ಒಂದಲ್ಲ ಅನೇಕಬಾರಿ ಈಗಾಗಲೇ ತೋರಿಸಿಕೊಟ್ಟಿದೆ. ಸನಾತನವಾದ ಹಿಂದೂಧರ್ಮ ಚಿರನೂತನವಾಗಿ ಬಾಳಬಲ್ಲದೆಂಬುದನ್ನು ಈ ಧರ್ಮದಲ್ಲಿಯೇ ಹುಟ್ಟಿಬಂದ ಧಾರ್ಮಿಕ ಸುಧಾರಕರು ತೋರಿಸಿಕೊಟ್ಟಿದ್ದಾರೆ. ಬ್ರಾಹ್ಮಣನಾಗಿ ಹುಟ್ಟಿದ ಬಸವಣ್ಣನು ಹಿಂದೂಧರ್ಮದ ಸುಧಾರಕರ ಶ್ರೇಣಿಗೆ ಸೇರಿದವನಾಗಿದ್ದು, ಹಿಂದೂ ಧರ್ಮದಲ್ಲಿ ಕಂಡ ಲೋಪದೋಷಗಳನ್ನು ಖಂಡಿಸಲು ಸ್ವಲ್ಪವೂ ಹಿಂತೆಗೆಯಲಿಲ್ಲ. ಅಲ್ಲದೆ ಈ ಸನಾತನ ಧರ್ಮದಲ್ಲಿ ಕಂಡ ಆತ್ಮೋದ್ಧಾರದ ಮಹತ್ತತ್ವಗಳನ್ನು ಗುರುತಿಸಿ ಗೌರವಿಸುವುದರಲ್ಲಿ ಅವನು ಯಾರಿಗೂ ಹಿಂದೆ ಬೀಳಲಿಲ್ಲ. ಆಕಾರಣದಿಂದಲೇ ಇವನು ಬೋಧಿಸಿದ ವೀರಶೈವ ಧರ್ಮದಲ್ಲಿ ವಿಶ್ವಧರ್ಮದ ಅಂಶಗಳು ಹಾಸುಹೊಕ್ಕಾಗಿ ವ್ಯಾಪಿಸಿವೆ.

ವಿಶ್ವಕ್ಕೆಲ್ಲಾ ಕಾರಣನಾಗಿ ವಿಶ್ವದ ಅಸ್ಥಿತ್ವಕ್ಕೆ ಆಧಾರ ರೂಪಿಯಾದ ದಿವ್ಯಶಕ್ತಿಯ ಅಸ್ತಿತ್ವದಲ್ಲಿ ನಂಬಿಕೆ ಇರುವುದು ವಿಶ್ವ ಧರ್ಮದ ಗುಣ. ಈ ದೈವೀಶಕ್ತಿಯನ್ನು ಹೆಸರಿಸುವಾಗ ಬೇರೆ ಬೇರೆ ಧರ್ಮಗಳು ತಮಗೆ ಸರಿಕಂಡ ರೀತಿಯಲ್ಲಿ ಹೆಸರಿಸಬಹುದು. ಆದರೆ ನಾಮಬೇಧದಿಂದಾಗಿ ಸತ್ಯದ ಸ್ವರೂಪವೇನು ಬದಲಾಗುವುದಿಲ್ಲ. ನಾಮರೂಪರಹಿತನಾದ ಭಗವಂತನಿಗೆ ಗುಣರೂಪಗಳನ್ನು ಸಂಬೋಧಿಸುವುದು ಮಾನವನ ಬುದ್ಧಿಗಿರುವ ಸಹಜವಾದ ಮಿತಿಯಿಂದಷ್ಟೆ. ನಿರಾಕಾರದ ಕಲ್ಪನೆ ಮಾನವನ ಬುದ್ಧಿಗೆ ಅಗಮ್ಯವಾದ್ದರಿಂದ ಅವನು ಭಗವಂತನನ್ನು ಒಂದಲ್ಲ ಒಂದು ನಾಮರೂಪದಿಂದ ಗುರುತಿಸಬೇಕಾಗಿದೆ. ಈ ಅಂಶವನ್ನು ವೀರಶೈವ ಧರ್ಮ ಚನ್ನಾಗಿ ಮನಗಂಡಿತ್ತೆಂಬುದಕ್ಕೆ ಬಸವಣ್ಣನ ಒಂದು ವಚನವೇ ಸಾಕ್ಷಿ.

"ದೇವನೊಬ್ಬ, ನಾಮ ಹಲವು, ಪರಮ ಪತಿವ್ರತೆಗೆ ಗಂಡನೊಬ್ಬ" ಈ ಮಾತಿಗೆ ಪ್ರತ್ಯಕ್ಷ ನಿರ್ದಶನವೋ ಎಂಬಂತೆ, ಅಂದಿನ ಆ ಶರಣ ಸಮೂಹವು ತಮ್ಮ ಆರಾಧ್ಯದೇವತೆಯಾದ ಒಬ್ಬನೇ ಪರಶಿವನನ್ನು ಸ್ಮರಿಸುವಲ್ಲಿ ತಮಗೆ ಸರಿ ಕಂಡ ಹೆಸರುಗಳನ್ನು ಬಳಸುತ್ತಾರೆ. ಬಸವಣ್ಣನ ದೈವ ಕೂಡಲ ಸಂಗಮನಾದರೆ, ಅಲ್ಲಮನ ದೈವ ಗುರುಗುಹೇಶ್ವರ ಲಿಂಗ, ಅಕ್ಕಮಹಾದೇವಿಯ ಇಷ್ಟದೈವ ಚನ್ನಮಲ್ಲಿಕಾರ್ಜುನ, ಸಿದ್ಧರಾಮನ ದೈವ ಕಪಿಲಸಿದ್ಧ ಮಲ್ಲಿಕಾರ್ಜುನ. ಹೀಗೆ ಅವರು ಬಳಸುವ ಹೆಸರು ಬೇರೆ ಇದ್ದರೂ ಅವರು ಅರಸುವ ದೈವ ಒಂದೇ ಎಂಬುದರಲ್ಲಿ ಅವರಿಗೆ ಯಾವ ಸಂಶಯವೂ ಇಲ್ಲ.

ತಾವು ಸಾಕ್ಷಾತ್ಕರಿಸಲು ಬಯಸುವ ಆ ಪರತತ್ವವು ಸರ್ವಶಕ್ತವಾದದ್ದು ಎಂಬುದು ಇವರ ನಂಬಿಕೆ. ಏಕೆಂದರೆ, ಆ ಪರಮಾತ್ಮನ ಒಲುಮೆಯಾದರೆ 'ಕೊರಡು ಕೊನರುವುದು, ಬರಡು ಹಯನಹುದು, ವಿಷವು ಅಮೃತವಹುದು'. ಆದರೆ ಅವನ ಒಲುಮೆ ಅಷ್ಟು ಸುಲಭವಲ್ಲ ಎಂಬುದು ಇವರ ಅನಿಸಿಕೆ. ಅವನಲ್ಲಿ ಪೂರ್ಣ ನಂಬಿಕೆ ಇಟ್ಟು ಕರೆದರೆ ಮಾತ್ರ ಅವನು ಒಲಿಯುವನು. ಕೇವಲ ನಂಬದೆ ನೆಚ್ಚದೆ ಒಣಿದೆ ಮಾಡುವ ಪೂಜೆಗೆ ಅವನು ಒಲಿಯಲೊಲ್ಲನು. ಆದ್ದರಿಂದ ಅವನನ್ನು ಸಾಧ್ಯಗೊಳಿಸಿಕೊಳ್ಳಲು ವೀರಶೈವ ಶರಣರು ತುಳಿದ ಮಾರ್ಗ ವಿಶಿಷ್ಟವಾದದ್ದು.

ಅಣು ರೇಣು ಪ್ರಾಣಕಾಷ್ಟದಲ್ಲಿಯೂ ಅಡಗಿರುವ ಆ ನಿರಾಕಾರನನ್ನು ಸಾಕಾರಗೊಳಿಸಿ, ಗುಡಿ ಗೋಪುರಗಳನ್ನು ಕಟ್ಟಿ ವಿಧಿವತ್ತಾಗಿ

ಸ್ಥಾಪಿಸಿ ಪೂಜಿಸುವ ಕ್ರಮ ಒಂದು ರೀತಿಯ ಕರ್ಮಾಚರಣೆ ಎಂದೆನಿಸುತ್ತದೆ. ಇದು ವಿಚಾರಪ್ರಧಾನವಾದ ವಿಶ್ವಧರ್ಮಕ್ಕೆ ಸಮ್ಮತವಲ್ಲ. ಈ ರೀತಿಯ ಆಚರಣೆಯನ್ನು ವೀರಶೈವ ಧರ್ಮವೂ ಅಷ್ಟಾಗಿ ಪ್ರೋತ್ಸಾಹಿಸಲಿಲ್ಲ. ಬಸವಣ್ಣನು ಇದನ್ನು ಕುರಿತು ತನ್ನ ವಚನ ಒಂದರಲ್ಲಿ ಹೀಗೆ ಹೇಳಿದ್ದಾನೆ:

"ಉಳ್ಳವರು ದೇವಾಲಯವ ಕಟ್ಟಿಸುವರಯ್ಯಾ,
ನಾನೇನ ಮಾಡುವೆನಯ್ಯ
ನಾನು ಬಡವನಯ್ಯ, ನನ್ನ ಕಾಲೇ ಕಂಬ, ನನ್ನ ದೇಹವೇ ದೇಗುಲ,
ನನ್ನ ಶಿರವೇ ಹೊನ್ನ ಕಲಶ, ಸ್ಥಾವರಕ್ಕಳಿವುಂಟು,
ಜಂಗಮಕ್ಕಳಿವಿಲ್ಲ".

ಅಂದಮೇಲೆ ಈ ಶಿವಶರಣರು ಕಟ್ಟಿಸುವ ದೇಗುಲವು ಜಂಗಮ ಸ್ವರೂಪಿಯಾಗಿದ್ದು, ಅದು ಅಳಿವಿಲ್ಲದಂತಹುದು. ದೇಹವೇ ದೇಗುಲ, ಅದರಲ್ಲಿರುವ ಆತ್ಮನೇ ದೇವರು. ಆತ್ಮನ ಸಾಕ್ಷಾತ್ಕಾರವೇ ದೈವ ಸಾಕ್ಷಾತ್ಕಾರ. ಉಪನಿಷತ್ತಿನ ಮಹಾ ಕಾವ್ಯವೆನಿಸಿದ 'ಅಹಂ ಬ್ರಹ್ಮಾಸ್ಮಿ' ಎಂಬ ಮಾತಿಗೆ ಇದಕ್ಕಿಂತ ಉತ್ತಮವಾದ ಭಾಷ್ಯ ಬೇರೊಂದುಂಟೆ ?

ಭಗವಂತನ ಒಲುಮೆಗೆ ವೇದ, ನಾದ, ಯಂತ್ರ, ಮಂತ್ರ, ಯಜ್ಞ, ಯಾಗಾದಿಗಳು ಸಾಧನವಾಗಬಹುದೆಂದು ವೀರಶೈವ ಶರಣರು ಒಪ್ಪಲಿಲ್ಲ. ಇಂತಹ ಶುಷ್ಕ ಆಚರಣೆಗಳನ್ನು ಕುರಿತು ಬಸವಣ್ಣ ಹೀಗೆ ಹೇಳುತ್ತಾನೆ:

ನೀರಕಂಡಲ್ಲಿ ಮುಳುಗುವರಯ್ಯ,
ಮರನಕಂಡಲ್ಲಿ ಸುತ್ತುವರಯ್ಯ,
ಬತ್ತುವ ಜಲನ, ಒಣಗುವ ಮರನ ಮೆಚ್ಚಿದವರು,
ನಿನ್ನನೆತ್ತ ಬಲ್ಲರು ಕೂಡಲಸಂಗಮದೇವ.

ಭಗವಂತನು ಕೇವಲ ಭಕ್ತಿಪ್ರಿಯನಾದ್ದರಿಂದ ಅವನ ಒಲುಮೆಗೆ ಭಕ್ತಿಯೇ ಸರಿಯಾದ ಸಾಧನವೆಂಬುದು ಭಕ್ತಿಭಂಡಾರಿ ಬಸವಣ್ಣನ ಮತ. ಅದನ್ನು ಕುರಿತು ತನ್ನ ವಚನ ಒಂದರಲ್ಲಿ ಹೀಗೆ ಹಾಡಿದ್ದಾನೆ :

ನಾದಪ್ರಿಯನೆಂಬರು ಶಿವನ, ನಾದಪ್ರಿಯನಲ್ಲ ಶಿವನು,
ವೇದಪ್ರಿಯನೆಂಬರು ಶಿವನ, ವೇದಪ್ರಿಯನಲ್ಲ ಶಿವನು,
ನಾದವಮಾಡಿದ ರಾವಣಂಗೆ ಅರೆ ಆಯುಷವಾಯಿತು,
ವೇದವನೋದಿದ ಬ್ರಹ್ಮಂಗೆ ಶಿರ ಹೋಯಿತ್ತು
ನಾದಪ್ರಿಯನೂ ಅಲ್ಲ, ವೇದಪ್ರಿಯನ್ನೂ ಅಲ್ಲ,
ಭಕ್ತಿಪ್ರಿಯ ನಮ್ಮ ಕೂಡಲಸಂಗಮದೇವ.

ಆದರೆ ಭಕ್ತಿಯ ಮಾರ್ಗ ಅತಿ ದುರ್ಗಮವಾದದ್ದು. ಅದು ಗರಗಸದಂತೆ ಹೋಗುತ್ತಲೂ ಕೊಯ್ಯುವುದು ಬರುತ್ತಲೂ ಕೊಯ್ಯುವುದು. ಭಕ್ತಿ ಒಲಿಯಬೇಕಾದರೆ ಅದಕ್ಕೆ ನೈತಿಕ ಜೀವನದ ಆಶ್ರಯ ಬೇಕು. ನಡೆನುಡಿಯಲ್ಲಿ ಪರಿಶುದ್ಧತೆ ಇಲ್ಲದಿದ್ದರೆ ಹಿಡಿದಿದ್ದಲಿಂಗವೇ ಘಟಸರ್ಪವಾಗಿರುತ್ತದೆ. ಭಕ್ತನಲ್ಲಿ ಅಂತರಂಗ ಬಹಿರಂಗ ಶುದ್ಧಿಯಾದಾಗ ಲಿಂಗವು ಕಲ್ಪವೃಕ್ಷವಾಗುತ್ತದೆ. ಈ ರೀತಿ ಅಂತರಂಗ ಬಹಿರಂಗ ಶುದ್ಧಿಯ ಹಿರಿಮೆಯನ್ನು ವಿಶ್ವಧರ್ಮವು ಗುರುತಿಸಿದೆ. ವೀರಶೈವ ಧರ್ಮದಲ್ಲಿ ಇದಕ್ಕೆ ತುಂಬ ಮಹತ್ವದ ಸ್ಥಾನವುಂಟು.

ಕಳಬೇಡ, ಕೊಲಬೇಡ, ಹುಸಿಯನುಡಿಯಲುಬೇಡ,
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ
ಇದೇ ಅಂತರಂಗಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲಸಂಗಮ ದೇವನನೊಲಿಸುವ ಪರಿ.

ಅಂದರೆ, ಭಕ್ತಿಪ್ರಿಯನಾದ ಕೂಡಲಸಂಗಮ ನೀತಿಪ್ರಿಯನೂ ಅಹುದು. ಒಂದನ್ನು ಬಿಟ್ಟು ಒಂದಾದರೆ ಸಾಲದು. ಈ ಎರಡೂ ಜತೆಗೂಡಿಯೇ ಇರಬೇಕು. ಶುದ್ಧ ಜೀವನದ ಈ ಸಿದ್ಧಾಂತಗಳನ್ನು ಜೈನ ಧರ್ಮವು ಪಂಚಾಣುವ್ರತಗಳೆಂದೂ, ಯೋಗಶಾಸ್ತ್ರವು ಯಮ ನಿಯಮಗಳೆಂದೂ, ಬೌದ್ಧ ಧರ್ಮವು ಅಷ್ಟವಿಧಾಚರಣೆಗಳೆಂದೂ ಮುಂತಾದ ಹೆಸರುಗಳಿಂದ ಮನ್ನಿಸಿವೆ.

ಮಾನವ ಕಲ್ಯಾಣ ಒಂದನ್ನೇ ಬಯಸುವ ವಿಶ್ವಧರ್ಮವು ವ್ಯಕ್ತಿಗಳ ನಡುವೆ ಜಾತಿ,ವರ್ಣ, ಇಲ್ಲವೇ ಲಿಂಗಬೇಧವನ್ನು ಎಂದೂ ಎಣಿಸುವುದಿಲ್ಲ. ಇಂತಹ ಧರ್ಮದಲ್ಲಿ ಯಾರೊಬ್ಬರೂ ಹೆಚ್ಚಿಲ್ಲ, ಯಾರೂ ಕೀಳಿಲ್ಲ, ಎಲ್ಲರೂ ಸರ್ವಸಮಾನರೆ. ಸ್ತ್ರೀ ಪುರುಷರು, ಬಡವ ಬಲ್ಲಿದರು. ಪಂಡಿತ ಪಾಮರರೆಲ್ಲರೂ ಸಮಾನವಾಗಿ ಧಾರ್ಮಿಕ ಜೀವನದಲ್ಲಿ ಪಾಲ್ಗೊಳ್ಳಬೇಕೆಂದು ಸಾರಿದ ವಿಶ್ವಧರ್ಮವನ್ನು ಮಾನವತಾ ಧರ್ಮ (Humanism) ಎಂದು ಕರೆಯುವುದೂ ಉಂಟು. ಈ ಸಿದ್ಧಾಂತವು ಶಿವಶರಣರ ಬದುಕಿನಲ್ಲಿ ಎಷ್ಟರಮಟ್ಟಿಗೆ ಪ್ರತಿಧ್ವನಿಸಿದೆ ಎಂಬುದನ್ನು ನೋಡೋಣ.

ಲೋಕದ ಮಾನ್ಯತೆಗೆ ಬೆನ್ನು ತಿರುಗಿಸಿ ಆಧ್ಯಾತ್ಮದ ಶೂನ್ಯತೆಯನ್ನರಸಿ ಬಂದ ಶರಣರು ಕಲ್ಯಾಣದಲ್ಲಿ ಬಸವಣ್ಣನ ಸುತ್ತ ನೆರೆದರಷ್ಟೆ. ಅಲ್ಲಮ ಪ್ರಭುವಿನ ಮಾತಿನಲ್ಲಿ ಹೇಳುವುದಾದರೆ:

ಕಲ್ಯಾಣವೆಂಬ ಪ್ರಣತೆಯಲ್ಲಿ, ಭಕ್ತಿರಸವೆಂಬ ತೈಲವನೆರೆದು,
ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿ
ಮುಟ್ಟಿಸಲು ।
ತೊಳಗಿ ಬೆಳಗುತ್ತಿರ್ದುದಯ್ಯ ಶಿವಪ್ರಕಾಶ, ಆ ಬೆಳಗಿನೊಳಗೆ
ಒಪ್ಪುತ್ತಿರ್ದರಯ್ಯ ಅಸಂಖ್ಯಾತ ಭಕ್ತ ಮಹಾಗಣಂಗಳು ॥

ಈ ಅಸಂಖ್ಯಾತ ಭಕ್ತಗಣಂಗಳಲ್ಲಿ ಯಾವ ಜಾತಿ, ಕುಲ, ಬೇದವೂ ಇಲ್ಲ. ಮಾದರ ಚನ್ನಯ್ಯ, ಹಡಪದ ಅಪ್ಪಣ್ಣ, ನುಲಿಯ ಚಂದಯ್ಯ, ಮಡಿವಾಳ ಮಾಚಯ್ಯ,ಡೋಹರ ಕಕ್ಕಯ್ಯ ಮುಂತಾದ ಹಲವು ಹನ್ನೆರಡು ಕುಲದವರೂ ಸೇರಿದ್ದರು. ಮಹದೇವಿಯಕ್ಕ, ಲಕ್ಕವ್ವ, ನೀಲವ್ವ ಮುಂತಾದ ಶಿವಶರಣೆಯರೂ ಅಲ್ಲಿ ಜೊತೆಗಿದ್ದಾರೆ.

ಅವರಲ್ಲಿ ಗೃಹಸ್ಥರಿದ್ದಾರೆ, ಪಂಡಿತರಿದ್ದಾರೆ, ಪಾಮರರೂ ಇದ್ದಾರೆ. ತಮ್ಮ ಸಾಮಾಜಿಕ ಹಿರಿಮೆ, ಆರ್ಥಿಕ ಹಾಗೂ ವ್ಯಾವಹಾರಿಕ ಅಂತರಗಳನ್ನೆಲ್ಲಾ ಮರೆತ ಇವರು ಅನುಭವ ಮಂಟಪದ ಧಾರ್ಮಿಕ ದಾಸೋಹದಲ್ಲಿ ಸರ್ವ ಸಮಭಾವದಿಂದ ಪಾಲ್ಗೊಂಡರೆಂಬುದು ಒಂದು ಮಹದಾಶ್ಚರ್ಯ. ವರ್ಣಸಂಕರಕ್ಕೆ ಹೆದರಿ ಧಾರ್ಮಿಕ ಸಮಾನತೆಯನ್ನು ಪುರಸ್ಕರಿಸಿದ ಅಂದಿನ ಸಮಾಜದಲ್ಲಿ ಇದು ಧಾರ್ಮಿಕಕ್ರಾಂತಿ ಎಂದೆನಿಸಿತು.

ವಿಶ್ವಧರ್ಮದಲ್ಲಿ ಶಾಸ್ತ್ರಾಧಾರಕ್ಕಿಂತ ವಿಚಾರಪರತೆಗೆ (rationalism) ಹೆಚ್ಚು ಮಾನ್ಯತೆ ಇರುತ್ತದೆ. ಯಾವುದೇ ಸಿದ್ಧಾಂತವು ಮಾನ್ಯಗೊಳ್ಳಬೇಕಾದರೆ ಅದು ಕೇವಲ ಶಬ್ದಪ್ರಮಾಣವಾದರೆ ಸಾಲದು, ಅದು ವಿಚಾರಯೋಗ್ಯವಾಗಿಯೂ ಇರಬೇಕು. ಆ ಕಾರಣದಿಂದಲೇ ವೀರಶೈವ ಶರಣರ ಧಾರ್ಮಿಕ ಚಿಂತನೆ ಅನುಭವ ಮಂಟಪದ ವಿಚಾರಗೋಷ್ಠಿಯಲ್ಲಿ ಪುಟಗೊಂಡು ಅಲ್ಲಮನಂತಹ ಅನುಭಾವಿಯ ಮನ್ನಣೆಯನ್ನು ಪಡೆಯಬೇಕಾಗಿದ್ದಿತು. ಈ ಶರಣರು ಅನುಭವ ಮಂಟಪದಲ್ಲಿ ತಮಗೆ ಲಭಿಸಿದ ಆಧ್ಯಾತ್ಮ ಸುಖವನ್ನು ವಚನ ರೂಪದಲ್ಲಿ ಹಾಡಿ ಅನುಭವಿಸಿದರು.

ಧರ್ಮದ ಹೆಸರಿನಲ್ಲಿ ನಡೆಯುವ ಯಾವ ರೀತಿಯ ಶೋಷಣೆಯೂ ಸಹ ವಿಶ್ವಧರ್ಮಕ್ಕೆ ಮಾನ್ಯವಾಗುವುದಿಲ್ಲ. ಧನಿಕನು ದರಿದ್ರನನ್ನು ಪ್ರಾಜ್ಞನು ಅಜ್ಞಾನಿಯನ್ನೂ ಶೋಷಿಸುವುದು ಹೇಗೆ ಅನ್ಯಾಯವೆನಿಸುವುದೋ ಹಾಗೆಯೇ ಧಾರ್ಮಿಕ ಕರ್ಮಗಳ ವಿಧಿ ನಿಷೇಧದ ರಕ್ಷಣೆಯ ಹೆಸರಿನಲ್ಲಿ ನಡೆಸುವ ಪುರೋಹಿತವರ್ಗದ ಶೋಷಣೆಗೆ ವಿಶ್ವಧರ್ಮದಲ್ಲಿ ಸ್ಥಾನವಿಲ್ಲ. ಧಾರ್ಮಿಕ ಪ್ರಜ್ಞೆ ಎಲ್ಲರ ಸ್ವತ್ತಾದ್ದರಿಂದ ಅದರ ಅರಿವು ಪ್ರತಿಯೊಬ್ಬನಿಗೂ ದೊರೆಯುವಂತಾಗಬೇಕು. ಅದಕ್ಕಾಗಿ ಒಬ್ಬನು ಮತ್ತೊಬ್ಬನನ್ನು ಆಶ್ರಯಿಸಿ ಬದುಕುವಂತಾಗಬಾರದು. ಧಾರ್ಮಿಕ ಜೀವನದಲ್ಲಿ ಮಧ್ಯವರ್ತಿಗಳ ಪಾತ್ರವನ್ನು ಖಂಡಿಸಿದ ಬಸವಣ್ಣ ಬಹು ಮಾರ್ಮಿಕವಾಗಿ ಹೀಗೆ ಅವರ ಪಾತ್ರವನ್ನು ಪ್ರಶ್ನಿಸುತ್ತಾನೆ :

ತನ್ನಾಶ್ರಯದ ರತಿಸುಖವ,
ತಾನುಂಬ ಊಟವನು
ತಾಮಾಳ್ಪ ಪೂಜೆಯನು
ಅನ್ಯರಿಂ ಮಾಡಿಸುವುದುಂಟೆ ?

ಅಂದಮೇಲೆ, ಪೂಜೆ ಮತ್ತು ಭಕ್ತಿ ಇವು ಭಕ್ತ ಮತ್ತು ಭಗವಂತನಿಗೆ ಮಾತ್ರ ತಿಳಿಯುವಂತಹವುಗಳು. ಇವರಿಬ್ಬರ ನಡುವೆ ಮಧ್ಯಸ್ತನಿಗೆ ಯಾವ ಸ್ಥಾನವೂ ಇಲ್ಲ. ಭಕ್ತನ ಹಾರೈಕೆ ಬಲಿತಾಗ ಭಗವಂತನ ಒಲುಮೆ ಸುಲಭಸಾಧ್ಯವಾಗುತ್ತದೆ. ಆದ್ದರಿಂದ 'ನಂಬಿ ಕರೆದರೆ ಓ ಎಂಬನು ಶಿವನು' ಎಂದು ಇವರು ಸಾರಿದರು.

ವೀರಶೈವ ಶರಣರು ಧಾರ್ಮಿಕ ಜೀವನದಲ್ಲಿ ಶರೀರ ಶ್ರಮಕ್ಕೆ ಒಂದು ಮಹತ್ವದ ಸ್ಥಾನವನ್ನು ಗಳಿಸಿಕೊಟ್ಟರು. ಶರೀರ ಶ್ರಮದಿಂದ ಧಾರ್ಮಿಕ ಸಾಧನೆ ಹೆಚ್ಚು ತೇಜಸ್ವಿಯಾಗುತ್ತದೆ. ಆದ್ದರಿಂದ 'ಕಾಯಕವೇ ಕೈಲಾಸ' ಎಂಬ ದಿವ್ಯ ಮಂತ್ರ ಇವರಿಂದ ಮೂಡಿಬಂದಿತು. ಧಾರ್ಮಿಕ ಸಾಧನೆಗೂ ಕಾಯಕಕ್ಕೂ ನಡುವೆ ಯಾವ ವಿರೋಧವೂ ಇವರಿಗೆ ಕಾಣಲಿಲ್ಲ. ಇವು ಪರಸ್ಪರ ಪೂರಕಗಳೆಂದು ಇವರು ಮನಗಂಡರು. ಈ ಅಂಶವನ್ನು ಕಡೆಗಣಿಸಿದ್ದರಿಂದಲೋ ಏನೋ ನಮ್ಮ ಸಂಸ್ಕೃತಿಯಲ್ಲಿ ವೃತ್ತಿವೈವಿಧ್ಯವನ್ನಾಧರಿಸಿದ ವರ್ಣ ಧರ್ಮ ಪ್ರಚಲಿತವಾಯಿತು. ಬೌದ್ಧಿಕ ಹಾಗೂ ಧಾರ್ಮಿಕ ಆಚರಣೆಯಲ್ಲಿ ತೊಡಗಿದವರು ಶಾರೀರಿಕ ಶ್ರಮವನ್ನು ನಿರ್ಲಕ್ಷಿಸಿದರು. ಹಾಗೆಯೇ ಕಾಯಕದ ವೃತ್ತಿಯವನ್ನವಲಂಭಿಸಿದವನಲ್ಲಿ ಬೌದ್ಧಿಕ ಚಿಂತನೆ ಕುಂಟಿತವಾಯಿತು. ಈ ರೀತಿ ವಿವಿಧ ವೃತ್ತಿಯ ವಿವಿಧ ವರ್ಗದ ಜನರಲ್ಲಿ ಅಪೂರ್ಣತೆಯುಂಟಾಗಿ ಮಾನವನ ಪೂರ್ಣ ವ್ಯಕ್ತಿತ್ವದ ವಿಕಾಸಕ್ಕೆ ಅಡ್ಡಿಯಾಯಿತು. ಈ ಅಪೂರ್ಣತೆಯನ್ನು ಹೋಗಲಾಡಿಸಲೋಸುಗವೇ ಶಿವಶರಣರು, ಧಾರ್ಮಿಕ ಜೀವನಕ್ಕೆ ಕಾಯಕದ ಸುಗಂಧವನ್ನು ಲೇಪಿಸಿದರು. ಗುರುವಾಗಲಿ, ಲಿಂಗವಾಗಲಿ, ಜಂಗಮನಾಗಲಿ, ಎಲ್ಲರಿಗೂ ಕಾಯಕದಿಂದಲೇ ಮುಕ್ತಿ. ಆದ್ದರಿಂದ ಇಲ್ಲಿ ಕಾಯಕಕ್ಕೆ ಸರ್ವಮಾನ್ಯತೆಯುಂಟು.

ಹೀಗೆ, ವಿಶ್ವಧರ್ಮದ ಅನೇಕ ಗುಣಗಳನ್ನೊಳಗೊಂಡ ವೀರಶೈವ ಧರ್ಮವು, ಮಾನವ ಕಲ್ಯಾಣಕ್ಕೆ ಬೇಕಾದ ಧಾರ್ಮಿಕ ಸಿದ್ಧಾಂತಗಳನ್ನು ಜನಸಾಮಾನ್ಯರಿಗೆ ತಿಳಿಯುವ ಮಾತಿನಲ್ಲಿ ಬೋಧಿಸಿ ಅವರಲ್ಲಿ ಧಾರ್ಮಿಕ ಜಾಗ್ರತಿಯನ್ನುಂಟುಮಾಡಲು ಶಕ್ತವಾಯಿತು. ಸಂಸ್ಕೃತ ಭಾಷೆಯಲ್ಲಿ ಶ್ರೀಮಂತಗೊಂಡಿದ್ದ ಉಪನಿಷತ್ತಿನಂತಹ ಶ್ರೇಷ್ಠ ತತ್ವಗಳನ್ನು ತಾವು ಅನುಭವಿಸಿ ಅದರ ಸಾರ ಸರ್ವಸ್ವವನ್ನು ತಿಳಿಯಾದ ಕನ್ನಡದಲ್ಲಿ ಜನತೆಯ ಹೃದಯವನ್ನು ಮುಟ್ಟುವಂತೆ ವಚನರೂಪದಲ್ಲಿ ಹಾಡಿ ಜನತೆಗೆ ಧಾರ್ಮಿಕ ಸ್ವಾತಂತ್ರ್ಯ ಹಾಗೂ ಆತ್ಮವಿಶ್ವಾಸವನ್ನು ತಂದುಕೊಟ್ಟರು ಆ ಕಾರಣದಿಂದಲೇ ಶರಣರ ವಚನಗಳು ಕನ್ನಡ ಸಾರಸ್ವತ ಲೋಕದಲ್ಲಿ ಉಪನಿಷತ್ತಿನಂತೆ ಮಾನ್ಯತೆ ಪಡೆದಿವೆ.

ಲೇಖಕರು :
ಟಿ. ಶಂಭುಲಿಂಗಪ್ಪ, ಎಂ.ಎ.,
ಕನ್ನಡ ಅಧ್ಯಾಪಕರು,
ಶ್ರೀ ಜಗದ್ಗುರು ಮುರಘರಾಜೇಂದ್ರ ಕಾಲೇಜ್,
ಚಿತ್ರದುರ್ಗ.

ಷಟ್‌ಸ್ಥಲ

ಮಾನವನು ಹುಟ್ಟು–ಸಾವುಗಳ ಅನಂತ ಚಕ್ರವ್ಯೂಹದಲ್ಲಿ ನರಳುತ್ತಿದ್ದಾನೆ. ಆಸೆ-ಆಮಿಷಗಳಿಗೆ ಲೋಲುಪ್ತನಾಗಿ, ಜೀವನದ ಹಿರಿಯ ಆದರ್ಶಗಳನ್ನು ಕೈಬಿಟ್ಟದ್ದಾನೆ. ಪಂಚೇಂದ್ರಿಯಗಳ ಐಹಿಕ ಸುಖಗಳ ಮಾಯೆಗೆ ಬಲಿಯಾಗಿದ್ದಾನೆ. ಜಾತಿ–ಮತಗಳ ಶೃಂಖಲೆಯನ್ನು ಧರಿಸಿ ನಿಂತಿದ್ದಾನೆ. ಹಮ್ಮು-ಬಿಮ್ಮುಗಳ ಪ್ರತಿನಿಧಿಯಾಗಿ ಮೆರೆಯುತ್ತಿದ್ದಾನೆ. ಇಂದು ಧಾರ್ಮಿಕ ರಂಗದಲ್ಲಿ ಕುಂಟುತ್ತಿದ್ದಾನೆ. ಇದಕ್ಕೆ ಕಾರಣವಿಲ್ಲದೇ ಇಲ್ಲ. 20 ನೆಯ ಶತಮಾನ ಅಣುಯುಗ. ಈ ಯುಗದಲ್ಲಿ ಪ್ರಕೃತಿಯ ಅನ್ವೇಷಣೆಗೆ ಹೊರಟ ಅವನ ದೃಷ್ಟಿ, ಧಾರ್ಮಿಕದ ಕಡೆ ಹರಿಯುತ್ತಿಲ್ಲ ಎಂದರೆ ತಪ್ಪಾಗಲಾರದು. ಅವನು ಇಂದು ಸಾಧಿಸಿದ, ಸಾಧಿಸುತ್ತಲಿರುವ ಎಲ್ಲ ರಂಗಗಳಲ್ಲು, ಒಂದಲ್ಲ ಒಂದು ಹಂತದಲ್ಲಿ ಧರ್ಮದ ಸ್ವರೂಪ ಇರುವುದನ್ನು ಕಾಣದೆ ಹೋಗುತ್ತಿದ್ದಾನೆ. ಪ್ರಾಯಶಃ ಮರೆತಂತೆ ಕಾಣುತ್ತಿದೆ. ಧಾರ್ಮಿಕ ಚಿಂತನೆಯಿಂದ ದೂರ ಸರಿದುದರಿಂದಲೋ ಅವನ ಬದುಕು ಆಂತರಿಕ ಅತೃಪ್ತಿಗೆ ಕಾರಣವಾಗಿದೆ ಎಂದೇಳಬಹುದು. ಜೀವನದ ವಿಚಾರಶೀಲ ಪರಿಪೂರ್ಣತೆಗೆ ಕಾರಣವಾವುದು ಎಂದು ಹೆಚ್ಚಾಗಿ ತಿಳಿಯದೇ ಹೋಗುತ್ತಿದ್ದಾನೆ.; ಶತಪಥಪಡುತ್ತಿದ್ದಾನೆ. ಅವನಲ್ಲಿ ಧರ್ಮದ ಆಸಕ್ತಿ ಕ್ಷೀಣಿಸುತ್ತಿದೆ. “ಹೀಗಾಗಬಾರದು. ಸರಿ. ಹೇಗಾಗಬೇಕು” ಎನ್ನುವುದನ್ನು ತಿಳಿಸುವ ನಿಮಿತ್ತವೋ ಭರತಖಂಡದಲ್ಲಿ ಅನೇಕ ಧರ್ಮಗಳು ಅವತರಿಸಬೇಕಾಯಿತು. ಹಾಗೆಯೇ ಅವತರಿಸಿದವು ಕೂಡ. ಅಂಥ ಧರ್ಮಗಳಲ್ಲಿ ವೀರಶೈವಧರ್ಮ ಒಂದು. ವಿಶ್ವಧರ್ಮ ಇತಿಹಾಸದಲಿ ಇದು ಅನಾದೃಶ. ಈ ಧರ್ಮದಲ್ಲಿ ಅವತರಿಸಿದ ಅನುಭಾವಿಗಳು – ಶಿವಶರಣರು. ತಮ್ಮ ಅನುಭಾವದಿಂದ “ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲಬೇಕೆಂಬ” ಸಾಮಾನ್ಯ, ಸರಳ ತತ್ವವನ್ನು ಉಪದೇಶಿಸಿ, ಸುಸಂಸ್ಕೃತ ಜೀವನದ ಸುಮಧುರ ರಸಾನುಭವಕ್ಕೆ ಕಾರಣರಾದರು. ಅವರ ವಚನಸಾಹಿತ್ಯ ಸೌರಭ ದಿಕ್ ದಿಗಂತಕ್ಕೆ ವ್ಯಾಪಿಸಿತು. ಅವರ ನುಡಿಮುತ್ತುಗಳು ಮುಕ್ತಿಮಾರ್ಗದ ಸೋಪಾನಗಳಾದವು.

ವಚನಕಾರರು ತಮ್ಮ ಧರ್ಮದ ತತ್ವಗಳನ್ನು ಕೇವಲ ಬೌದ್ಧಿಕವಾಗಿ ನಿರೂಪಿಸಲಿಲ್ಲ. ಈ ಒಂದು ವಿಷಯದಲ್ಲಿ ಅವರು ಸ್ವತಂತ್ರ ವಿಚಾರಶೀಲರು. ಸಮಾಜದ ಅಂಧಶ್ರದ್ಧತೆ, ಜಾತಿ-ಮತಗಳ ಶೃಂಖಲೆಯನ್ನು ಕಿತ್ತೊಗೆಯಲು ಅವರ ವಚನಸಾಹಿತ್ಯ ಮಾಧ್ಯಮವಾಗಿ ರೂಪುಗೊಂಡಿತು. ಧರ್ಮದ ಪರಿಪೂರ್ಣ ಸ್ವರೂಪಕ್ಕೆ ಅವರ ಆಧ್ಯಾತ್ಮ ಚಿಂತನೆ ಕಾರಣವಾಯಿತು. ಇದನ್ನು ಶಕ್ತಿ-ವಿಶಿಷ್ಟಾದ್ವೈತ, ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರ– ಈ ಸಿದ್ಧಾಂತಗಳ ಮೂಲಕ ಪ್ರತಿಪಾದಿಸಿದರು.

ಸ್ಥಲವೆಂದರೆ ಮೆಟ್ಟಲು — ಸ್ಥಾನವೆಂದರ್ಥ. ಸಾಧಕನು ಸಾಧನ ಸೋಪಾನವನ್ನೇರಬೇಕು. ಅಲ್ಲಿ ಸಿದ್ಧಪದವಿಯನ್ನು ಪಡೆಯಬೇಕು. ಈ ದೃಷ್ಟಿಯಿಂದ ಮೂಲತಃ ಆರು ಮೆಟ್ಟಲುಗಳನ್ನು ಕಲ್ಪಿಸಿಕೊಟ್ಟಿದೆ — ವೀರಶೈವ ಧರ್ಮ. ಈ ಆರು ಮೆಟ್ಟಲುಗಳೇ ಷಟ್‌ಸ್ಥಲಗಳು. ಸಾಧನ ಸೋಪಾನದ ದೃಷ್ಟಿಯಿಂದ ಅಂಗ ಮತ್ತು ಲಿಂಗ ಅಥವಾ ಜೀವ–ಶಿವ ಇವೆರಡರ ನಡುವಿನ ಆಯಾ ಮೆಟ್ಟಲಿನಲ್ಲಿರುವ ಸಂಬಂಧವನ್ನು ಷಟ್‌ಸ್ಥಲಗಳ ಮೂಲಕ ವಚನಗಾರರು ತೋರಿಸಿಕೊಟ್ಟಿದ್ದಾರೆ.

ಶೂನ್ಯ ಸಿಂಹಾಸನಾಧೀಶ ಅಲ್ಲಮಪ್ರಭುವಿನ ವಚನಗಳು ಸು-ಸಂಸ್ಕೃತ ಜೀವನದ ಸುಮಧುರ ರಸಾನುಭವಗಳ ಭರಣಿ. ಅವನ ಆಧ್ಯಾತ್ಮಿಕ ವಚನಗಳು ಕನ್ನಡದ ವೈಶಿಷ್ಟ್ಯ. ಒಂದೊಂದು ವಚನ ಚಿರಂತನವಾದ ಸ್ಫೂರ್ತಿಯ ನೆಲೆ; ಸಾಸಿವೆಯಲ್ಲಿ ಸಾಗರವನ್ನು ತುಂಬುವ ಕಲೆ; ಬದುಕಿನ ಕಹಿ–ಸಿಹಿಯ ಸವಿತಮ; ಸ್ವಸ್ಥಾನ ಸುಸ್ಥಿರ ಸುಮನ ಮಂಟಪ. ಅವನ ಅನುಭಾವ ನಿತ್ಯ ಸತ್ಯ; ಶಾಶ್ವತ: ದ್ವೈತ, ಅದ್ವೈತಗಳ ಸಂಗಮ ಕ್ಷೇತ್ರ. ಅವನ ಮಾರ್ಗ ಜ್ಞಾನ ಪ್ರಧಾನ. ಅವನ ಈ ಕೆಳಗಿನ ಒಂದು ವಚನ ಷಟ್‌ಸ್ಥಲ ಸಿದ್ಧಾಂತದ ದಿಗ್ದರ್ಶನ.

> ವಿಶ್ವಾಸದಿಂದ ಭಕ್ತನಾಗಿ, ಆ ವಿಶ್ವಾಸದೊಳಗಣ ನಿಷ್ಠೆಯಿಂ
> ಮಹೇಶ್ವರನಾಗಿ
> ಆ ನಿಷ್ಠೆಯೊಳಗಣ ಸಾವಧಾನದಿಂ ಪ್ರಸಾದಿಯಾಗಿ
> ಆ ಸಾವಧಾನದೊಳಗಣ ಸ್ವಾನುಭವದಿಂ ಪ್ರಾಣಲಿಂಗಿಯಾಗಿ
> ಆ ಸ್ವಾನುಭವದೊಳಗಣ ಅರಿವಿನಿಂ ಶರಣನಾಗಿ
> ಆ ಅರಿವು ನಿಜದಲ್ಲಿ ಸಮರಸಭಾವವನ್ನೈದಿದ
> ನಿರ್ಭಾವ ಪದದೊಳು
> ನಿಂದ ಭೇದವೇ ಐಕ್ಯ ಸ್ಥಲ ಕಾಣಾ–ಗುಹೇಶ್ವರಾ.

ವೀರಶೈವ ಭಕ್ತನ ಮುಖ್ಯ ಕರ್ತವ್ಯ ಲಿಂಗಧಾರಣೆ. ಇದರ ನಿಮಿತ್ತ ಗುರುಕಾರುಣ್ಯ. ಗುರುವಿನ ಮಂತ್ರೋಪದೇಶದ ಫಲ ಅಜ್ಞಾನ ಜಡ ನಾಶ. “ ಗುರುಲಿಂಗ ಒಂದೆಂಬರು. ಗುರುಲಿಂಗ ಒಂದಾದ ಠಾವ ತಿಳಿದು ನೋಡಿರೆ, ಗುರುಕಾರುಣ್ಯವಾದ ಬಳಿಕ ಅಂಗದ ಮೇಲೆ ಲಿಂಗವಿರಬೇಕು”. ಅಂಗ-ಲಿಂಗಗಳ ಸಮರಸ

ಲಿಂಗಾಂಗ ಸಾಮರಸ್ಯ. ಲಿಂಗವಿಲ್ಲದ ಗುರುಕಾರುಣ್ಯ ಬತ್ತಿದ ಕೆರೆಯಲ್ಲಿ ತಾವರೆ ಬಿತ್ತಿದಂತೆ. ಲಿಂಗಧಾರಣೆ ಪಡೆದ ವೀರಶೈವನು ಮೋಕ್ಷದ ಆರು ಸೋಪಾನುಗಳನ್ನು ಹತ್ತಬೇಕು. ಅವೇ ಆರು ಸ್ಥಲಗಳು ಅರ್ಥಾತ್ ಷಟ್‌ಸ್ಥಗಳು-ಭಕ್ತಸ್ಥಲ, ಮಾಹೇಶಸ್ಥಲ, ಪ್ರಸಾದಿ ಸ್ಥಲ, ಪ್ರಾಣಲಿಂಗಿ ಸ್ಥಲ, ಐಕ್ಯ ಸ್ಥಲ,

ಷಟ್‌ಸ್ಥಲ ನಿರೂಪಣೆಯ ಆದಿ ಭಕ್ತಸ್ಥಲದ ಮುಖ್ಯ ಲಕ್ಷಣ "ವಿಶ್ವಾಸದಿಂದ ಭಕ್ತನಾಗಿ"ವೆಂಬುದು. ಭಗವಂತನ ಕೃಪಾಕಟಾಕ್ಷೆಗೆ ನಾಂದಿಯಾಗಲಿರುವ ಈ ಭಕ್ತನಿಗೆ ಶ್ರದ್ಧೆ, ವಿಶ್ವಾಸ ಬಹು ಮುಖ್ಯ. ಜ್ವರ ಹಿಡಿದ ಬಾಯಿಗೆ ನೊರೆ ಹಾಲು ರುಚಿಸದಂತೆ, ಮಾಯಾ ಮೋಹಪಾಶಕ್ಕೊಳಗಾದ ಭಕ್ತನಿಗೆ ವಿಶ್ವಾಸ ರುಚಿಸದು. ಭಕ್ತಿಯನರಿಯದ ವ್ಯರ್ಥಜೀವಿ ಪರಮಾತ್ಮನನ್ನು ಸೇರದು. ಭಕ್ತನು ಜೀವನದ ಅಸಮತೆಯನ್ನು ಕಾಣಬಾರದು. ಸಕಲ ಜೀವರುಗಳಿಗೆ ಲೇಸನು ಬಯಸುವ ಶಂಭುವಿನ ಸಾಕ್ಷಾತ್ಕಾರಕ್ಕೆ ನೀತಿ, ನಿಷ್ಠೆ, ಧರ್ಮ, ಪ್ರೇಮ, ಆಚಾರ, ವಿಚಾರ, ಸದಾಚಾರ ಸದ್ಗುಣ, ಒಲವು, ವಿವೇಕ-ಎಲ್ಲವೂ ಬೇಕು. ಇದಲ್ಲೆಕ್ಕಿಂತ ಮೊದಲಿಗೆ ವಿಶ್ವಾಸದಿಂದ ಭಕ್ತನಾಗಿ ಶಿವನ ದರುಶನಕ್ಕೆ ಹಾತೊರೆಯಬೇಕು. "ಹರಿದ ಗೋಣಿಯಲಿ ಒಬ್ಬ ಕಳವೆಯ ತುಂಬಿ, ಇರುಳೆಲ್ಲ ನಡನನಂತೆ ಸುಂಕಕ್ಕಂಜಿ; ಕಳವೆಯಲ್ಲ ಹೋಗಿ ಬರೀ ಗೋಣಿ ಉಳಿದಿತ್ತು. ಆಳಿಮನದವನ ಭಕ್ತಿ ಇಂತಾಯಿತ್ತು". ಹೀಗಾಗಬಾರದು. "ಲೋಕದ ಚೇಷ್ಠೆಗೆ ರವಿ ಬೀಜವಾದಂತೆ ವಿಶ್ವಾಸದೊಳಗಣ ಭಕ್ತಿಯೇ ಭಕ್ತಿ. ವಿಶ್ವಾಸದೊಳಗಣ ನಿಷ್ಠೆಯಿಂದ ಮಾಹೇಶ್ವರನಾಗಿ ಭಗವಂತನ ಭಕ್ತಿಯ ಸನ್ನಿಧಾನದ ಎರಡನೆಯ ಮೆಟ್ಟಲು ಹತ್ತಬೇಕು. ಅದೇ ಮಹೇಶ್ವರ ಸ್ಥಲ. ಇಲ್ಲಿ ನಿಷ್ಠೆಯಿಂದ ಭಕ್ತ ಮಹೇಶ್ವರನಾಗಬೇಕು. ತನ್ನ ಭಕ್ತಿಯಲ್ಲಿ ದೃಢ ವಿಶ್ವಾಸದೊಡನೆ ಅಚಲತೆಯೂ ಇರಬೇಕು. ಸಂಸಾರ ಸಾಗರದಲ್ಲಿ ಅಲೆಯಂತೆ ಎದ್ದು ಬೀಳುವ ಅನೇಕ ಸಂಕಷ್ಟಗಳಿಗೆ ಅವನು ಭಯಪಡಬಾರದು. ಭಕ್ತಿಯ ಶ್ರದ್ಧೆಯಲ್ಲಿ ನಿಷ್ಠೆಯ ಪರಾಕಾಷ್ಠೆಯನ್ನು ಮೀರಿರಬೇಕು. ವೀರಶೈವನಿಗೆ ಅಂಗದ ಮೇಲೆ ಲಿಂಗವಿರಬೇಕು; ಅದೇ ಶ್ರೇಷ್ಠ. ಈ ಲಿಂಗದಲ್ಲಿ ನಿಷ್ಠೆಯಿಂದ ವರ್ತಿಸತಕ್ಕದ್ದು. ನಿಷ್ಠೆಯುಳ್ಳ ಭಕ್ತನಟ್ಟಡವಿಯಲ್ಲಿ ಇದ್ದಡೇನು ? ಇರವೆಯ ತೆರನರಿದು ನೆರೆ ಫಲವಿಲ್ಲದೆ ಮಾಡಿದನನ ಭಕ್ತಿ ಇರುವೆಯಿಂದ ಕರಕಷ್ಟ. ಕೆಲವೊಮ್ಮೆ ಭಗವಂತ ಭಕ್ತನನ್ನು ನಾನಾ ವಿಧದಿಂದ ಪರೀಕ್ಷಿಸಲೂಬಹುದು. ಅಂತಹ ಸಂದರ್ಭದಲ್ಲಿ ಭಕ್ತ ತನ್ನ ನಿಷ್ಠೆಯನ್ನು ಬಿಟ್ಟುಕೊಡಬಾರದು. "ಹರ ತನ್ನ ಭಕ್ತರ ತಿರಿವಂತೆ ಮಾಡುವ; ಒರೆದು ನೋಡುವ ಸುವರ್ಣದಂತೆ; ಅರೆದು ನೋಡುವ ಚಂದನದಂತೆ; ಅರಿದು ನೋಡುವ ಕಬ್ಬುನ ಕೋಲಿನಂತೆ". ಇದಕೆಲ್ಲ ಭಕ್ತ ಭಯಪಡದೆ ಇದ್ದಲ್ಲಿ " ಕರವಿಡಿದು ಎತ್ತಿಕೊಂಬ ನಮ್ಮ ರಾಮನಾಥ". ಕರ್ತವ್ಯದ ಕರೆಯೇ ಅವನಿಗೆ ಮುಖ್ಯ; ಭವಿಷ್ಯತ್ತಿನ ಬಗ್ಗೆ ಅವನಿಗೆ ಆಲೋಚನೆ ಕೂಡದು. ಇಂದಿಗೆಂತು, ನಾಳೆಗೆಂತೆಂದು ಚಿಂತಿಸಬಾರದು. ತಂದಿಕ್ಕುವ ಶಿವನಿಗೆ ಬಡತನವೇ ? ಭಗವಂತನನ್ನು ಕಾಣಲು ಜಂಬೂದ್ವೀಪ ಸುತ್ತಬೇಕಾಗಿಲ್ಲ. ಏಕದೇವ ನಿಷ್ಠಾಪರನಾಗಿ ವರ್ತಿಸಿದರೆ ಸಾಕು. ಅವನ ಸಾಕ್ಷಾತ್ಕಾರಕ್ಕೆ ಇಂತಹ ಕಾಲವೆಂಬುದಿಲ್ಲ. ಭಕ್ತನ ಮನೆಯಂಗಣವೇ ವಾರಣಾಸಿಯಾಗದೇ?

ವಿಶ್ವಾಸದಿಂದ ಭಕ್ತನಾಗಿ, ನಿಷ್ಠೆಯಿಂದ ಮಹೇಶ್ವರನಾಗಿ ಮುಂದುವರಿದ ಸಾಧಕನ ಮನಸ್ಸು ವಿಕಾಸಗೊಳ್ಳುತ್ತಾ, ಆಧ್ಯಾತ್ಮಿಕ ಅನುಭವದ ಪ್ರೇರಣೆಗೆ ಕಾರಣವಾಗುವುದು. ಇದಕ್ಕಾಗಿ ಅವನ ಮನಸ್ಸು ಮಿಡಿಯುವುದು; ಮನಸ್ಸಿನ ತುಮುಲ ನಿರ್ನಾಮಹೊಂದುವುದು. ಆಗ ಅವನು ನೈತಿಕಾಚರಣೆಗೆ ಕಾರಣನಾಗುವನು. ತನ್ನ ಕಾಯಕವೆಲ್ಲವೂ ಕೈಲಾಸವೆಂಬ ಭಾವನೆ ಮೂಡುವುದು. ಇಲ್ಲಿ ಅವನು ಕ್ರಿಯೆಯ ಫಲ ನಿರೀಕ್ಷಿಸಲಾರ. ಒಂದು ವೇಳೆ ನಿರೀಕ್ಷಿಸಿದರೂ, ಎಲ್ಲವೂ ಶಿವನಿಗೆ ಅರ್ಪಿತವಾಗಬೇಕು. ಈ ರೀತಿ ಅರ್ಪಿತವಾದುದೇ ಪ್ರಸಾದ. ಈ ಮನೋಭೂಮಿಕೆಯಲ್ಲಿ ನರ್ತಿಸುತ್ತಿರುವ ಅವನ ಮನಸ್ಸು ನಿಷ್ಠೆಯೊಳಗಣ ಸಾವಧಾನದಿಂ ಪ್ರಸಾದಿಯಾಗುವುದು. ಇದೇ ಪ್ರಸಾದಿ ಸ್ಥಲ.

ಸಾವಧಾನದಿಂದ ಭಕ್ತನು ಶಿವನನ್ನು ಮೊರೆಯಿಡಬೇಕು. "ಕಾಯಕವೇ ಕೈಲಾಸ" ವೆಂಬ ತತ್ವದ ಆಚರಣೆಗೆ ಕಾರಣನಾಗಬೇಕು. ಆ ಕಾಯಕದಿಂದ ದೊರೆತ ಪ್ರತಿಫಲವೇ ಪ್ರಸಾದ ! ಅದನ್ನು ಶಿವನಿಗೆ ಅರ್ಪಿಸುವ ಭಾವನೆ ಮೂಡಬೇಕು; ಹಾಗೆಯೇ ಅರ್ಪಿಸಬೇಕು ಕೂಡ. ಪ್ರಸಾದವೆಂದರೆ ಕಣ್ಣಿಗೆ ಕಾಣುವ ಬಾಹ್ಯಾಕಾರದ ವಸ್ತುವಲ್ಲ. ಬಾಹ್ಯಾಕಾರದ ವಸ್ತುವಾದರೆ ನಾಯಿಯೋ, ಬೆಕ್ಕೋ ಬಂದು ತಿಂದು ಹೋಗಬಹುದು. ಇಂತಹ ಪ್ರಸಾದ ವಾಸ್ತವವಾಗಿ ಮಾನವ ಲೋಭ ತೃಪ್ತಿಯ ಸಾಧನೆಗಳಾಗುವವು. ದೇವರು ಎದ್ದು ಬಂದು ಇದನ್ನು ತಿನ್ನಲಾರ; ಸ್ವೀಕರಿಸಲಾರ. ಸುಯಿದಾನವನರ್ಪಿಸಿ, ಪ್ರಸಾದ ಬೇಡುವ ಜನಾಂಗ ಸ್ವಾರ್ಥಕಕಲ್ಲದೆ ಮತ್ತೇನು ? "ಅಂಗದೊಡವೆಯ ಲಿಂಗಕ್ಕೆ ಕೊಟ್ಟು, ಫಲವ ಬೇಡುವ ಸರ್ವ ಅನ್ಯಾಯಿಗಳನೇನೆಂಬೆ" ಎಂದಿರುವ ಪ್ರಭುದೇವರ ನುಡಿಗಳು ಗಮನಾರ್ಹ. ಈ ತರಹ ಪ್ರಸಾದ, ಹಾಗು ಪ್ರಸಾದ ಕೊಡುವ ರೀತಿ ಭಕ್ತನಿಗೆ ಕೂಡದು. ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು ಲಿಂಗಕ್ಕೆ ಅರ್ಪಿತವಾಗಬೇಕು. ಶಿವಶರಣರ ಪ್ರಕಾರ "ಒಕ್ಕುದು ಪ್ರಸಾದವೆಂಬರು; ಮಿಕ್ಕುದು ಪ್ರಸಾದವೆಂಬರು; ಒಕ್ಕುದು ಮಿಕ್ಕುದನೆಲ್ಲ ಬೆಕ್ಕು ಕೊಳ್ಳದೇ ?" ಕಾರಣ ಇಕ್ಕಿ ಕೊಡುವುದು ಪ್ರಸಾದವಲ್ಲ. ಕಾಯಕದಿಂದ ಆರ್ಜಿಸಿಕೊಡುವ ಪ್ರಸಾದವೇ ಪ್ರಸಾದ.ಇನ್ನು ಒಂದು ಹೆಜ್ಜೆ ಮುಂದೆ ಹೋದಲ್ಲಿ "ತನ್ನನ್ನು ಶಿವನಿಗೆ ಅರ್ಪಿಸುವ ಮನೋಭಾವವೇ ಪ್ರಸಾದ". ಅಷ್ಟೆ ಅಲ್ಲ. ಭಕ್ತನ (ಸಾಧಕನ) ದೃಷ್ಟಿಯಲ್ಲಿ ವಿಶ್ವವೆಲ್ಲವೂ ಪ್ರಸಾದವೇ !

ಶ್ರದ್ಧೆಯಿಂದ ಭಕ್ತನಾಗಿ, ನಿಷ್ಠೆಯಿಂದ ಮಹೇಶ್ವರನಾಗಿ, ಸಾವಧಾನದಿಂದ ಪ್ರಸಾದಿಯಾದ ಭಕ್ತನ ಮುಂದಿನ ದಾರಿ ಹೆಚ್ಚಿನ ಅಂತರ್ಮುಖತೆಯನ್ನು ಪಡೆಯುತ್ತದೆ. ಅವನ ಹೃದಯಾಂತರಾಳದಲ್ಲಿ ಸೃಷ್ಟಿಯ ರಹಸ್ಯ ಅಡಗುತ್ತದೆ. ಇದನ್ನು ಸಾಧಕನು ತನ್ನ ಸ್ವಾನುಭಾವದಿಂದ ತಿಳಿಯುತ್ತಾನೆ. ತನ್ನಲ್ಲಿರುವ ಪ್ರಾಣಕ್ಕೆ ಹೆಚ್ಚಿನ ಮಹತ್ವ ಕೊಡುತ್ತಾನೆ. "ಪ್ರಾಣ ಪರಮಾತ್ಮನ ಸ್ವರೂಪ" ಎಂಬ ಭಾವನೆ ಮೂಡುತ್ತದೆ. ತನ್ನ ಪ್ರಾಣವೇ ಪ್ರಾಣಲಿಂಗವಾಗಿ ಇದನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಇದೇ ಪ್ರಾಣಸ್ಥಲ. ಸಾವಧಾನದೊಳಗಣ ಸ್ವಾನುಭಾವದಿಂ ಪ್ರಾಣ ಲಿಂಗಿಯಾಗುತ್ತಾನೆ.

ಈ ಪ್ರಾಣಸ್ಥಲದಲ್ಲಿ ಭಕ್ತನು ತನ್ನ ಯಾವತ್ತು ಪ್ರಾಣಶಕ್ತಿಯನ್ನು ಲಿಂಗದಲ್ಲೂ, ಲಿಂಗಶಕ್ತಿಯ ಸಮುದಾಯವನ್ನು ತನ್ನ ಪ್ರಾಣದಲ್ಲೂ ಸ್ವೀಕರಿಸಿ, ಅವುಗಳ ಅಭೇದವನ್ನು ಅನುಸಂಧಾನ ಮಾಡುತ್ತಾನೆ.

ಭಕ್ತ, ಮಾಹೇಶ್ವರಾ, ಪ್ರಸಾದಿ – ಈ ಮೂರು ಸ್ಥಲಗಳಲ್ಲಿ ಭಕ್ತನ ದೃಷ್ಟಿ ದ್ವೈತಸಿದ್ಧಾಂತವಾದರೆ, ಮುಂದಿನ ಸ್ಥಲಗಳು ಅಂತರಂಗದ ಅದ್ವೈದ ಕಡೆ ವಾಲುತ್ತವೆ. ಶರಣ ಸ್ಥಲದಲ್ಲಿ ಭಕ್ತ ಇದನ್ನು ಕಾಣುತ್ತಾನೆ. "ಸ್ವಾನುಭಾವದೊಳಗಣ ಅರಿವಿಂ ಶರಣನಾಗಿ" ಎಂಬ ಮಾತಿನಲ್ಲಿ ಬುದ್ಧಿ ಗೋಚರವಾದ ಶಿವನ ಸ್ವರೂಪ ಅನುಭಾವದಿಂದ ಗೋಚರವಾಗುತ್ತದೆ. ಅರಿವಿನಿಂದ ಶಿವನ ಸ್ವರೂಪ ತಾನೇ ಎಂಬ ಕಲ್ಪನೆ ಮೂಡುತ್ತದೆ. ಶಿವನ ಚಿತ್‌ಸ್ವರೂಪವೆಂಬ ಜ್ಞಾನ ಇಲ್ಲಿ ಹೊಳೆಯುತ್ತದೆ. ಕೂಡಲೆ ಅವನು ತನ್ನನ್ನು ಆವರಿಸಿದ ಎಲ್ಲ ಮಾಯಾಪಾಶಗಳನ್ನು ಕಿತ್ತೊಗೆದು, ಜೀವನ್ಮುಕ್ತಿಗೆ ಕಾರಣನಾಗುತ್ತಾನೆ.

ಸಮರಸ ಭಾವವನೈದಿಹ ನಿರ್ಭಾವ ಪದದಲಿ ನಿಂದ ಭೇದವೇ ಮುಂದಿನ ಐಕ್ಯಸ್ಥಲ. ಇದು ಭಕ್ತನ ಕೊನೆಯ ಹಂತ. ಶಿವನ ಸ್ವರೂಪವಾದ ಲಿಂಗದಲ್ಲಿ ತನ್ನ ಅಂಗವನ್ನು ಕೂಡಿಸುತ್ತಾನೆ. ಅನುಭಾವದಿಂದ ಲಿಂಗಾಂಗ ಸಾಮರಸ್ಯ ಕಾಣುತ್ತಾನೆ. ಸಮುದ್ರದಿಂದ ಆವಿಯಾದ ನೀರು ಸಮುದ್ರವನ್ನೇ ಸೇರುವಂತೆ ತಾನೆಂಬ ಅಂಗ ಲಿಂಗದಲ್ಲಿ ಬೆರೆಯುತ್ತದೆ. (ತ್ತಾನೆ)

ಹೀಗೆ ಈ ಷಟ್‌ಸ್ಥಲ ಸಿದ್ಧಾಂತ ವೀರಶೈವ ಧರ್ಮದ ಒಂದು ವಿಶಿಷ್ಟ ಕಾಣಿಕೆ. ಭಕ್ತಿ, ಜ್ಞಾನ, ಕರ್ಮ – ಇವು ಇಲ್ಲಿ ಮುಪ್ಪುರಿಗೊಂಡು ಸಾಧಕನ ಸಾಧನೆಯ ಮಹತ್ವವನ್ನು ನಿರೂಪಿಸುತ್ತವೆ. ಈ ಷಟ್‌ಸ್ಥಲ ಸಿದ್ಧಾಂತವು ಕೇವಲ ತಾತ್ವಿಕ ಜಿಜ್ಞಾಸೆಯಾಗಿರದೇ, ಆಚರಣೆಯ ಉತ್ತಮ ಮಾರ್ಗವೂ ಆಗಿದೆ. ತಾತ್ವಿಕ ಹಾಗು ಆಚರಣೆಯ ಮಾರ್ಗದ ಸಮನ್ವಯ ದೃಷ್ಟಿ ಇಲ್ಲಿ ವ್ಯಕ್ತವಾಗಿದೆ. ಈ ಸಿದ್ಧಾಂತವು ಕೇವಲ ವಚನಕಾರರ ಕಾಲದಲ್ಲಿ ಮಾತ್ರ ನಿರೂಪಣೆಗೊಳ್ಳದೆ, ಅವರಿಗಿಂತಲೂ ಹಿಂದಿನ ಶೈವಮತದಲ್ಲೂ ಇದು ಪ್ರತಿಪಾದನೆಗೊಂಡ ನಿದರ್ಶನಗಳು ಕೆಲವು. ಉದಾ : ಸಿದ್ಧಾಂತ ಶಿಖಾಮಣಿ, ಕಾಮಿಕಾ, ವಾತುಲಾಗಮ,ಮೊಗ್ಗೆಯ ಮಾಯಿದೇವನ ಶಿವಾನುಭವ ಸ್ತೋತ್ರ ಇತ್ಯಾದಿಗಳು.

ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತದ ಪ್ರಕಾರ ಸ್ಥಲವೆಂದರೆ ಶಿವತತ್ವವೆಂದು ಕರೆಯಲಾಗಿದೆ. ಶಿವನೇ ಲಿಂಗಸ್ಥಲದಲ್ಲಿ ಶಕ್ತಿರೂಪದಿಂದಲೂ, ಅಂಗಸ್ಥಲದಲ್ಲಿ ಭಕ್ತಿ ರೂಪದಿಂದಲೂ ಕಾರ್ಯಮಾಡುವನು. ಈ ಅಂಗ-ಲಿಂಗ ಸ್ಥಲಗಳಲ್ಲಿ ಪ್ರತ್ಯೇಕವಾಗಿ ಆರಾರು ಸ್ಥಲಗಳು ಕಲ್ಪಿಸಿಕೊಟ್ಟಿವೆ. ಅದು ಹೇಗೆಂದರೆ ಲಿಂಗದಲ್ಲಿ ಮೊದಲು ಇಷ್ಟ, ಪ್ರಾಣ ಮತ್ತು ಭಾವಲಿಂಗವೆಂಬ 3 ಸ್ಥಲಗಳು. ಬಳಿಕ ಇಷ್ಟಲಿಂಗದಲ್ಲಿ ಗುರುಲಿಂಗ, ಆಚಾರಲಿಂಗ ಎಂದೂ; ಪ್ರಾಣಲಿಂಗದಲ್ಲಿ ಪ್ರಸಾದಲಿಂಗ, ಚರಲಿಂಗ ಎಂದೂ; ಭಾವಲಿಂಗದಲ್ಲಿ ಶಿವಲಿಂಗ, ಮಹಾಲಿಂಗ ಎಂದು ಸ್ಥಲಗಳು ಕೂಡಿರುವುವು. ಅಂಗಸ್ಥಲದಲ್ಲಿ ಮೊದಲು ತ್ಯಾಗಾಂಗ, ಭೋಗಾಂಗ, ಯೋಗಾಂಗ ಎಂದು 3 ತೆರ. ನಂತರ ತ್ಯಾಗಾಂಗದಲ್ಲಿ ಭಕ್ತಸ್ಥಲ, ಮಾಹೇಶಸ್ಥಲವೆಂದೂ; ಭೋಗಾಂಗದಲ್ಲಿ ಪ್ರಸಾದಿಸ್ಥಲ ಪ್ರಾಣಲಿಂಗಸ್ಥಲ ಎಂದೂ; ಯೋಗಾಂಗದಲ್ಲಿ ಶರಣಸ್ಥಲ, ಐಕ್ಯಸ್ಥಲವೆಂದು – ಸ್ಥಲಗಳು ಕೂಡಿರುವುವು. ಷಟ್‌ಸ್ಥಲ ಸಿದ್ಧಾಂತದ ಜ್ಞಾನವಾಗಬೇಕಾದರೆ ಈ ಮೇಲೆ ಹೇಳಿರುವ ಎಲ್ಲ ಸ್ಥಲಗಳ ಸಂಬಂಧ, ಅರ್ಥ, ಲಕ್ಷಣ ಇವುಗಳನ್ನು ಚನ್ನಾಗಿ ತಿಳಿದುಕೊಂಡಿರಬೇಕು. ಬಾಹ್ಯ ಪೂಜಾ ಕ್ರಮಗಳ ಕರ್ಮಗಳಿಗೆ ಆಶ್ರಯನಾದ ಶ್ರೀ ಗುರುವಿನಿಂದ, ದೀಕ್ಷಾಸಮಯದಲ್ಲಿ ಶಿಷ್ಯನಿಗೆ ಕೊಟ್ಟ ಲಿಂಗವೇ ಇಷ್ಟಲಿಂಗ. ಇದನ್ನು ಗುರು ಕ್ರಿಯಾದೀಕ್ಷೆಯಿಂದ ಕೊಡುವನು. ಪ್ರಾಣಾದಿಗಳಿಂದ ಕೂಡಿದ ಸೂಕ್ಷ್ಮ ಶರೀರಕ್ಕೆ ಸಂಲಗ್ನವಾದ ಲಿಂಗವೇ ಪ್ರಾಣಲಿಂಗ. ಇದನ್ನು ಗುರುಮಂತ್ರ ದೀಕ್ಷೆಯಿಂದ ದಯಪಾಲಿಸಿರುವನು. ಚಿನ್ಮಯವಾದ ಆತ್ಮಲಿಂಗವು ಆತ್ಮನೊಡನೆ ಸಂಲಗ್ನವಾದುದೇ ಭಾವಲಿಂಗವೆನಿಸುವುದು. ಇದನ್ನು ಗುರುಜ್ಞಾನ ದೀಕ್ಷೆಯಿಂದ ಶಿಷ್ಯನಿಗೆ ಕೊಡುವನು. ಇಷ್ಟಲಿಂಗವು ಆನಂದರೂಪವನ್ನು, ಪ್ರಾಣಲಿಂಗವು ಚಿದ್ರೂಪವನ್ನು, ಭಾವಲಿಂಗವು ಸದ್ರೂಪವನ್ನು ಹೊಂದಿರುವುವು. ಇಂತಿಷ್ಟು ಲಿಂಗಸ್ಥಲದ ವಿಷಯ.


ಇನ್ನು ಅಂಗಸ್ಥಲವನ್ನು ಕುರಿತು ಹೇಳಬೇಕಾದರೆ, ಅಲ್ಲಿ ಬರುವ ತ್ಯಾಂಗಾಂಗವೆಂದರೆ ಸ್ಥೂಲ ದೇಹ, ಬಾಹ್ಯ ವಿಷಯಗಳ ಆಸೆ-ಆಮಿಷಗಳನ್ನು ಬಿಟ್ಟುಕೊಟ್ಟು ಇಷ್ಟಲಿಂಗದ ಉಪಾಸನೆ ಮಾಡುವ ಸ್ಥಲವೆ. ಸಂಸಾರ ಭ್ರಾಂತಿಯ ತ್ಯಾಗ ಮಾಡುವುದರಿಂದ ಇದು ತ್ಯಾಗಾಂಗವೆನಿಸಿದೆ. ವಿಷಯಾಶಕ್ತಿಗಳನ್ನು ಬಿಟ್ಟು ಶಿವಪ್ರಸಾದದ ಭಾವದಿಂದ ಎಲ್ಲ ಭೋಗಗಳನ್ನು ಭೋಗಿಸುವುದು ಭೋಗಾಂಗವೆನಿಸುವುದು. ಶುದ್ಧಾತ್ಮಕನಾದ ಸಾಧಕನು, ಶಿವಜ್ಞಾನದಿಂದ ಯುಕ್ತನಾಗಿ ಎಲ್ಲಡೆಯಲ್ಲೂ ಶಿವನನ್ನೇ ಸಾಕ್ಷಾತ್ಕರಿಸಿ ಶಿವಯೋಗದೊಂದಿಗೆ ಬೆರೆತಿರುವುದೇ ಯೋಗಾಂಗವೆನಿಸುವುದು,

ಭಕ್ತ, ಮಾಹೇಶ ಸ್ಥಲಗಳೆರಡರಲ್ಲಿ ಸಾಧಕ ಗುರು–ಲಿಂಗ–ಜಂಗಮ ಇವರ ಶ್ರದ್ಧಾಪೂರ್ವಕವಾದ ಪೂಜೆ, ಆಚಾರ-ವಿಚಾರಗಳು, ಭಕ್ತಿಯ ನಿಷ್ಠೆ ಎಲ್ಲವನ್ನು ಆಚರಿಸಿ ಸದಾಚಾರಿಯಾಗಿರಬೇಕು. ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಪಾದೋದಕ, ಪ್ರಸಾದ,ಮಂತ್ರ–ಎಂಬೀ ಅಷ್ಟಾವರಣಗಳ ಆಚರಣೆ ಅಗತ್ಯ. ಗುರು ಜ್ಞಾನಮೂರ್ತಿ; ಲಿಂಗ ಸಾಕ್ಷಾತ್ ಪರಮಾತ್ಮನ ಸ್ವರೂಪ, ಜಂಗಮರು ಪರಿಪೂರ್ಣಭಕ್ತರು ಆಗಿರುವುದರಿಂದ ಇವರನ್ನು ಶ್ರದ್ಧೆಯಿಂದ, ನಿಷ್ಠೆಯಿಂದ, ಭಕ್ತಿಯಿಂದ ಪೂಜಿಸಬೇಕು. ಅವರ ಕಾರುಣ್ಯಕ್ಕೆ ಕಾರಣರಾಗಬೇಕು. ವಿಭೂತಿ ಅಂತರಂಗ, ಬಹಿರಂಗಗಳ ಶಕ್ತಿಯ ಸಂಕೇತ; ರುದ್ರಾಕ್ಷಿ ರುದ್ರನ ಜ್ಞಾನ ದೃಷ್ಟಿಯ ಸಂಕೇತ; ಪಾದೋದಕ ಪರಮಾತ್ಮನ ಅನುಗ್ರಹದ ದ್ಯೂತಕ; ಪ್ರಸಾದ ಸರ್ವಾರ್ಪಣೆ ಕ್ರಿಯೆಯ ಗುರುತು; ಈ ಅಷ್ಟಾವರಣಗಳ ಅರ್ಥವನ್ನು ಚನ್ನಾಗಿ ತಿಳಿದು ಆಚರಿಸಬೇಕು. ಅರ್ಥ ತಿಳಿಯದೇ ಆಚರಿಸಿದಲ್ಲಿ ಸಾಧಕ ಪಂಚಮಹಾಪಾಪಕ್ಕೆ ಗುರಿಯಾಗುವನು; ಆಚರಣೆಯಲ್ಲಿ ಭಕ್ತನಿಗೆ ಡಾಂಭಿಕತೆ ಕೂಡದು; ಅವನು ಮಿಥ್ಯಾಚಾರನಾಗಬಾರದು. ಲಿಂಗಾಂಗ ಸಾಮರಸ್ಯದ ದೃಷ್ಟಿಯಿಂದ ಭಕ್ತನು ಅಷ್ಟಾವರಣದ

ಆಚರಣೆಗೆ ಕಾರಣನಾಗಬೇಕು. ಆಗ ಗುರು ಪ್ರತ್ಯಕ್ಷ ಜ್ಞಾನ ರೂಪದಲ್ಲಿ ಬಂದು, ಅಂತಃಕರಣದಲ್ಲಿ ನೆಲಸುವನು. ಲಿಂಗಪೂಜೆ ಪರಮಾತ್ಮನ ಸಾಕ್ಷಾತ್ಕಾರ ಮಾಡಿಕೊಡುವುದು. ಜಂಗಮರ ಸೇವೆಯಿಂದ ಅಪರ ಅನುಭವ ದೊರೆಯುವುದು; ಪ್ರಸಾದವೂ ಅಂಗದ ಅಹಂಕಾರ ಕಳೆದು, ಭೋಗಭಾವನೆಯನ್ನಳಿಸಿ, ಲಿಂಗಭೋಗಪಭೋಗಿಯಾಗುವಂತೆ ಮಾಡುವುದು. ವಿಭೂತಿಯು ಅಂತರಂಗವನ್ನು ಶುದ್ಧಿಗೊಳಿಸುವುದು. ರುದ್ರಾಕ್ಷಿ ಶಿವನ ಸಾಕ್ಷಾತ್ಕಾರಕ್ಕೆ ಕಣ್ಣನ್ನು ದಯಪಾಲಿಸುವುದು; ಲಿಂಗಧಾರಣೆಯು ಅಂಗದ ಗುಣಗಳನ್ನು ಕಳೆದು ಲಿಂಗಗುಣಗಳನ್ನು ಅಳವಡಿಸಲು ಸಹಾಯಕವಾಗುವುದು. ಇಂತಿಷ್ಟು ತ್ಯಾಗಾಂಗದಲ್ಲಿ ಬರುವ ಭಕ್ತ, ಮಾಹೇಶ ಸ್ಥಲಗಳ ವಿವೇಚನೆ.

ಭೋಗಾಂಗದಲ್ಲಿ ಬರುವ ಪ್ರಸಾದಿ ಸ್ಥಲದ ಮುಖ್ಯ ಲಕ್ಷಣವೆಂದರೆ ಶಿವನಿಗೆ ಅರ್ಪಿತವಾದುದು ಸೇವಿಸವೆ, ಅದನ್ನು ಪ್ರಾಣಾಂತಿಕದಲ್ಲಿ ಧರಿಸುವುದು. ತ್ಯಾಗಾಂಗದಿಂದ ಬಂದ ನಿರ್ಮಲವಾದ ಭೋಗಗಳನ್ನು, ಲಿಂಗಕ್ಕೆ ಅರ್ಪಿಸಿ ನಂತರ ಅವನ್ನು ಪ್ರಸಾದವೆಂದು ಭೋಗಿಸುತ್ತಾ ಹೋದರೆ ಅಂಗಗುಣ ಕಳೆದು, ಲಿಂಗಗುಣ ಮೂಡುವುದು. ಲಿಂಗವೇ ತನ್ನ ಪ್ರಾಣವೆಂಬ ಭಾವನೆ ಮೂಡುವುದು. ಪ್ರಾಣ, ಲಿಂಗ, ಶಿವ – ಇವು ಬೇರೆಯಲ್ಲ ಎಂದು ತಿಳಿಯುವನೇ ಪ್ರಾಣಲಿಂಗಿ. →

ಯೋಗಾಂಗದಲ್ಲಿ ಬರುವ ಶರಣ ಸ್ಥಲದ ಮುಖ್ಯ ಲಕ್ಷಣವೆಂದರೆ, ವಿತ್ತೇಚ್ಛ, ಪುತ್ರೇಚ್ಛ ಮತ್ತು ಲೋಕೇಚ್ಛ – ಇವುಗಳನ್ನು ದಾಟಿ, ನಿತ್ಯ ಪರಮಾತ್ಮನ ಧ್ಯಾನದಲ್ಲಿ ನಿರತನಾಗಿರುವುದು. ಐಕ್ಯಸ್ಥಲದಲ್ಲಿ, ಶರಣನು ಶಿವಲಿಂಗದೊಡನೆ ಸದಾ ಐಕ್ಯಗೊಳ್ಳುವುದು. ಲಿಂಗಸ್ಥಲದಲ್ಲಿರುವ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜರಲಿಂಗ, ಪ್ರಸಾದಿಲಿಂಗ ಮತ್ತು ಮಹಾಲಿಂಗ ಸ್ಥಲದಲ್ಲಿ ಕ್ರಮವಾಗಿ ಕ್ರಿಯಾಶಕ್ತಿ, ಜ್ಞಾನಶಕ್ತಿ, ಇಚ್ಛಾಶಕ್ತಿ, ಆದಿಶಕ್ತಿ, ಪರಾಶಕ್ತಿ, ಚಿತ್‌ಶಕ್ತಿಗಳೆಂಬ ಆರು ಶಕ್ತಿಗಳು ಅಧಿಷ್ಠಾನವಾಗಿರುವುವು. ಇದೇ ಪ್ರಕಾರ ಅಂಗಸ್ಥಲದಲ್ಲಿರುವ ಭಕ್ತ, ಮಾಹೇಶ, ಪ್ರಸಾದಿ, ಪ್ರಾಣ, ಶರಣ, ಐಕ್ಯಸ್ಥಲದಲ್ಲಿ ಕ್ರಮವಾಗಿ ಸದ್ಭಕ್ತಿ, ನೈಷ್ಠಿಕಾಭಕ್ತಿ, ಅವಧಾನ ಭಕ್ತಿ, ಅನುಭಾವ ಭಕ್ತಿ, ಆನಂದ ಭಕ್ತಿ ಮತ್ತು ಸಮರಸ ಭಕ್ತಿ ಎಂದು ಅಧಿಷ್ಠಾನಗೊಂಡಿರುವುವು. ಹೀಗೆ ಷಟ್‌ಸ್ಥಲದ ವಿವೇಚನೆ ವಿಸ್ತಾರವಾದುದು. ಮುಂದಿನ ಹಂತಗಳಲ್ಲಿ ಈ ಸ್ಥಲಗಳು ಕ್ರಮೇಣ, ಪರಸ್ಪರ ಸಂಮಿಶ್ರಣದಿಂದ 36, 101 ಹಾಗು 206 ಸ್ಥಲಗಳಾಗುವುವು. ಒಟ್ಟು ಷಟ್‌ಸ್ಥಲ ರಚನಾಕ್ರಮವನ್ನು ರೇಖಾ ಚಿತ್ರದೊಂದಿಗೆ ಈ ರೀತಿ ತಿಳಿಯಪಡಿಸಬಹುದು:



ಷಟ್‌ಸ್ಥಲ ವಿಭಾಗ ಕ್ರಮವು ಏಕಸಾಮ್ಯತೆಯನ್ನು ಪಡೆದಿಲ್ಲ. ಒಟ್ಟು ಷಟ್‌ಸ್ಥಲ ಚೌಕಟ್ಟಿನಲ್ಲಿ ಎಲ್ಲವು ಸಮರ್ಥಿಸಿ ನಿಂತಿವೆ. ಷಟ್‌ಸ್ಥಲ ಮಾರ್ಗ ಅನುಭಾವಿಗಳಿಗೆ ಲಿಂಗಸ್ವರೂಪ, ಶಕ್ತಿ ಭಕ್ತಿಗಳ ಕಲ್ಪನೆ ಮೂಡಿಸುತ್ತವೆ. ಇದು ಕೇವಲ ತಾತ್ವಿಕ ಜಿಜ್ಞಾಸೆಯ ಮೇಲೆಗೆ ವರ್ಣಿತವಾಗಿಲ್ಲ. ಶರಣರು ಈ ಸ್ಥಲ ಸಿದ್ಧಾಂತವನ್ನು ಆಚರಣೆಯ ಮಾರ್ಗದಲ್ಲಿ, ವಿಚಾರ ಶೀಲತೆಯಿಂದ ದರ್ಶಿಸಿಕೊಂಡರು. ಇದು ವೀರಶೈವ ಧರ್ಮದಲ್ಲಿ ಒಂದು ಅದ್ವಿತೀಯ ಸಂಗತಿ. ಇಲ್ಲಿಯ ಮುಖ್ಯ ಉದ್ದೇಶ ಸಾಧಕನು ಮುಕ್ತಿ ಸೋಪಾನದ ನಿಚ್ಚಣಿಯನ್ನು ಹೇಗೆ ಏರಬೇಕೆಂಬುದು; ಅನಂತರ ಅಲ್ಲಿ ಐಕ್ಯಗೊಳ್ಳುವುದು.

ಗ್ರಂಥಋಣ

1. ವಚನ ಸಾಹಿತ್ಯದಲ್ಲಿ ವೀರಶೈವ ಧರ್ಮ – ಡಾ॥ ಎಚ್. ತಿಪ್ಪೇರುದ್ರಸ್ವಾಮಿ.
2. ಷಟ್‌ಸ್ಥಲ – ಡಾ॥ ಆರ್. ಸಿ. ಹಿರೇಮಠ.
3. ದೇವರ ದಾಸಿಮಯ್ಯನ ವಚನಗಳು – ಸಂ. : ಡಾ॥ ಫ. ಗು. ಹಳಕಟ್ಟಿ.

ಲೇಖಕರು :
ಬಿ. ವಿ. ವೈಕುಂಠರಾಜು, ಎಂ.ಎ.,
ಬೆಂಗಳೂರು.

ವೀರಶೈವ - ಧರ್ಮ - ಜಾತಿ ?

ಜಗತ್ತಿನ ಎಲ್ಲ ಧರ್ಮಗಳಿಗೂ ಆಗಿರುವಂತೆ ವೀರಶೈವ ಧರ್ಮಕ್ಕೂ ದುರವಸ್ಥೆ ಬಂದೊದಗಿದೆ. ಇದಕ್ಕೆ ಕಾರಣ ಹುಡುಕಲು ಪ್ರಯಾಸಪಡಬೇಕಾಗಿಲ್ಲ. ತನ್ನ ಸುತ್ತಮುತ್ತಲ ಸಮಾಜ ಕೊಳೆತು ನಾರುತ್ತಿರುವುದನ್ನು ನೋಡಿ ಅದರ ವಿರುದ್ಧ ಆ ಪರಿಸ್ಥಿತಿಗೆ ಕಾರಣರಾದ ವ್ಯಕ್ತಿಗಳ ವಿರುದ್ಧ ಒಬ್ಬ ಆಥವಾ ಹಲವರು ಸಿಡಿದೆದ್ದಾಗ ಒಂದು ಹೊಸ ಧರ್ಮ ಸ್ಥಾಪನೆಯಾಗುವುದನ್ನು ಇತಿಹಾಸದುದ್ದಕ್ಕೂ ನಾವು ನೋಡಬಹುದು.

ತಾನು ಜೀವಿಸುತ್ತಿರುವ ಸಮಾಜದಲ್ಲಿರುವ ಧಾರ್ಮಿಕ ಮತ್ತು ಸಾಮಾಜಿಕ ಅಸಮತೆಯ ವಿರುದ್ಧ ಹೋರಾಡುವವರು ಸಮಾನತೆಯ ಆಧಾರದ ಮೇಲೆ ಹೊಸದೊಂದು ಸಮಾಜವನ್ನು ನಿರ್ಮಿಸಲು ಪ್ರಯತ್ನಿಸುತ್ತಾರೆ. ಅದಕ್ಕಾಗಿ ಹೊಸ ಸಿದ್ಧಾಂತಗಳನ್ನು, ತತ್ವಗಳನ್ನು ರೂಪಿಸಬೇಕಾಗುತ್ತದೆ. ಈ ಸಿದ್ಧಾಂತ ಅಥವಾ ತತ್ವಗಳು ಕೆಲವರನ್ನು ಆಕರ್ಷಿಸುತ್ತವೆ. ಅವರು ಆ ಸಿದ್ಧಾಂತಗಳನ್ನು ರೂಪಿಸಿದ ವ್ಯಕ್ತಿಯನ್ನು ತಮ್ಮ ಮುಖಂಡನೆಂದು ಒಪ್ಪಿಕೊಳ್ಳುತ್ತಾರೆ. ಈ ಹೊಸತನ್ನು ಒಪ್ಪಿಕೊಳ್ಳುವವರ ಗುಂಪು ಬೆಳೆದಂತೆ ಅದೇ ಒಂದು ಸಮಾಜವಾಗಿ ನಿರ್ಮಾಣಗೊಳ್ಳುತ್ತದೆ. ಹೊಸ ಧರ್ಮ ಹುಟ್ಟಿಕೊಳ್ಳುವುದು ಹೀಗೆ. ಹೊಸ ಸಿದ್ಧಾಂತ ರೂಪಿಸಿದವನು ಧರ್ಮ ಸಂಸ್ಥಾಪಕನಾಗುತ್ತಾನೆ. ಆ ತತ್ವಗಳನ್ನು ಪ್ರಸಾರ ಮಾಡುವವರು ಧರ್ಮ ಪ್ರಚಾರಕರಾಗುತ್ತಾರೆ. ಹೊಸದಾಗಿ ಈ ಧರ್ಮಕ್ಕೆ ಸೇರಿಕೊಂಡವರೆಲ್ಲಾ ಅದರ ತತ್ವಗಳನ್ನು ತಮ್ಮ ಬದುಕಿನಲ್ಲಿ ಅನುಷ್ಠಾನಕ್ಕೆ ತರಲು ಪ್ರಯತ್ನಿಸುತ್ತಾರೆ. ತಮ್ಮ ಬದುಕಿಗೆ ಹೊಸ ಅರ್ಥವನ್ನು ಕಂಡುಕೊಳ್ಳುತ್ತಾರೆ.

ತಮ್ಮ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ತಾವು ನಂಬಿದ ಧರ್ಮವನ್ನೇ ಮುಂದುವರಿಸಿಕೊಂಡು ಹೋಗಬೇಕು ಎನ್ನುವ ಬಯಕೆ ಈ ಜನಗಳಲ್ಲಿರುವುದು ಅಸಹಜವೇನಲ್ಲ. ಆದರೆ ವಾಸ್ತವಿಕವಾಗಿ ಆಗುವುದೇನು? ಅವರು ಜೀವಿಸಿದ್ದಾಗ ತಮ್ಮ ಮಕ್ಕಳಿಗೆ ತಾವು ನಂಬಿದ ತತ್ವಗಳನ್ನು ತಿಳಿಯ ಹೇಳುತ್ತಾರೆ. ಇದು ಹೀಗೆಯೇ ತಲೆಮಾರಿನಿಂದ ತಲೆಮಾರಿಗೆ ಮುಂದುವರಿದುಕೊಂಡು ಹೋಗಬೇಕೆನ್ನುವ ತಮ್ಮ ಆಸೆಯ ಗತಿಯೇನಾಗುತ್ತದೆ ಎನ್ನುವುದನ್ನು ಕಣ್ಣಾರೆ ನೋಡಲು ಈ ಜನ ಜೀವಿಸಿರುವುದಿಲ್ಲ. ಈ ತತ್ವಗಳ ಮೇಲಿನ ನಂಬಿಕೆ ತಲೆಮಾರಿನಿಂದ ತಲೆಮಾರಿಗೆ ಕ್ಷೀಣಿಸುತ್ತ ಹೋಗುತ್ತದೆ. ಅದಕ್ಕೆ ಬದಲಾದ ಸಾಮಾಜಿಕ ಕಾರಣವಾಗಬಹುದು, ಅಥವಾ ಆ ತತ್ವಗಳ ನಿಜವಾದ ಅರ್ಥವನ್ನು ಕಂಡುಕೊಳ್ಳುವ ಪ್ರಯತ್ನ ಮಾಯವಾಗಬಹುದು. ಅಥವಾ ಇನ್ನಾವುದೇ ಕಾರಣವಿರಬಹುದು. ಏನೇ ಆದರೂ ವ್ಯಕ್ತಿಗಳ ಮೇಲೆ ಹೊಸ ಧರ್ಮದ ತತ್ವಗಳ ಪ್ರಭಾವ ಕಡಿಮೆಯಾಗುತ್ತಾ ಹೋಗುತ್ತದೆ. ಆದರೂ ಆ ಜನ ತಮ್ಮನ್ನು ಗುರುತಿಸಿಕೊಳ್ಳುವಾಗ ಇಂಥ ಧರ್ಮದವರೆಂದು ಹೇಳಿಕೊಳ್ಳುತ್ತಾರೆ. ಎರಡು ಮೂರು ಶತಮಾನಗಳನಂತರ ಆ ಧರ್ಮದವರೆಂದು ಹೇಳಿಕೊಳ್ಳುವ ಜನರ ಬದುಕಿನಲ್ಲಿ ಆದರ ತತ್ವಗಳು ಯಾವುವೂ ಆಚರಣೆಯಲ್ಲಿರುವುದಿಲ್ಲ. ಮತ್ತೆ ಸಮಾಜ ಕೊಳೆತುನಾರುವ ಸ್ಥಿತಿಗೆ ಬರುತ್ತದೆ. ಇದು ಮಿತಿಮೀರಿದಾಗ ಮತ್ತೊಬ್ಬ ಧರ್ಮ ಸಂಸ್ಥಾಪಕ ಬರಬೇಕು. ನಮ್ಮಲ್ಲಿ ಅವನನ್ನು ಅವತಾರ ಪುರುಷ ಎಂದು ಕರೆಯುತ್ತೇವೆ. 'ಅಧರ್ಮ ಅಭ್ಯುದಯವಾದಾಗ ಧರ್ಮಸಂಸ್ಥಾಪನೆಗಾಗಿ ಅವತರಿಸುತ್ತೇನೆ' ಎಂದು ಗೀತಾಚಾರ್ಯನೇ ಹೇಳುತ್ತಾನೆ. ಎಂದರೆ ಆಗಾಗ ಅಧರ್ಮ ಅಭ್ಯುದಯವಾಗುವುದು ವಾಸ್ತವಿಕ ಎನ್ನುವ ಪ್ರಜ್ಞೆ ನಮ್ಮ ಜನರಲ್ಲಿ ಮೊದಲಿನಿಂದಲೂ ಇದೆ. ಹೀಗಾಗುವುದಕ್ಕೆ ಕಾರಣವೇನು? ಒಂದೊಂದು ಗುಂಪಿನ ಜನ ಕೆಲವೊಂದು ತತ್ವಗಳನ್ನು ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತಂದಿರುತ್ತಾರೆ. ಇತರ ನಂತರ ಆ ತತ್ವಗಳೂ ಜೀವಂತವಾಗಿ ಉಳಿಯಬೇಕಾದರೆ ಅವುಗಳಲ್ಲಿ ಅಷ್ಟೇ ಗಾತ್ರವಾದ ನಂಬಿಕೆಯನ್ನು ಇಟ್ಟುಕೊಂಡಿರುವವರು ಇರಬೇಕಾದುದು ಅಗತ್ಯ. ಎಂದರೆ ಹೊಸ ಹೊಸ ಜನ ಆ ತತ್ವಗಳ ಕಡೆ ಆಕರ್ಷಿತರಾಗುತ್ತಿರಬೇಕು. ಅವರು ಮುಂಚೆ ಬೇರೆ ಧರ್ಮಕ್ಕೆ ಸೇರಿದವರೂ ಆಗಿರಬಹುದು. ಹಾಗಾದಾಗ ಮಾತ್ರ ಆ ಧರ್ಮವೂ ಉಳಿಯುತ್ತದೆ, ಅದರ ತತ್ವಗಳೂ ಉಳಿಯುತ್ತವೆ. ಹಾಗಿರಬೇಕಾದರೆ ಒಬ್ಬ ವ್ಯಕ್ತಿಗೆ ತನಗೆ ಬೇಕಾದ ಧರ್ಮವನ್ನು ಆರಿಸಿಕೊಳ್ಳಲು ಎಷ್ಟು ಸ್ವಾತಂತ್ರ್ಯವಿರುತ್ತದೆಯೋ ಅವನ ಮಗನಿಗೂ ಅಷ್ಟೇ ಸ್ವಾತಂತ್ರ್ಯವಿರಬೇಕು. ಆದರೆ ಒಬ್ಬ ವ್ಯಕ್ತಿ ಒಂದು ಧರ್ಮಕ್ಕೆ ಸೇರಿದನೆಂದರೆ ಅವನ ಮಗ ಕೇವಲ ಹುಟ್ಟಿನ ಬಲದಿಂದ ಅದೇ ಧರ್ಮಕ್ಕೆ ಸೇರಿದವನೆಂದು ಪರಿಗಣಿಸಲಾಗುತ್ತದೆ. ತಂದೆಯ ಆಸ್ತಿಗೆ ವಾರಸುದಾರನಾದಂತೆ ಧರ್ಮಕ್ಕೂ ವಾರಸುದಾರನಾಗುತ್ತಾನೆ. ಎಂದರೆ ಹುಟ್ಟಿಗೂ ಧರ್ಮಕ್ಕೂ ಅವಿಭಾಜ್ಯ ಸಂಬಂಧ ಬೆಸೆದುಗೊಂಡಿದೆ. ಇದೇ ಎಲ್ಲ ಧರ್ಮಗಳ ದೋಷ. ಅದರ ಅವನತಿಗೂ ಇದೇ ಕಾರಣ ಎನ್ನುವ ಸತ್ಯವನ್ನು ಮನಗಂಡರೆ ಧರ್ಮಗಳಿಗೆ ಬರುವ ದುರವಸ್ಥೆಗೆ ಕಾರಣ ತಾನಾಗಿ ಹೊಳೆಯುತ್ತದೆ.

ನನ್ನ ಈ ಅಭಿಪ್ರಾಯಗಳು ಸ್ಪಷ್ಟವಾಗುವುದಕ್ಕಾಗಿ ಕೆಲವು ಉದಾಹರಣೆಗಳನ್ನು ನೀಡಬೇಕಾದುದು ಅಗತ್ಯ. ವೈದಿಕ ಧರ್ಮ ಮನುಷ್ಯನ ದುಃಖವನ್ನು ನಿವಾರಿಸಲು ಶಕ್ತವಾಗಿಲ್ಲ ಎನ್ನುವುದನ್ನು ಗೌತಮ ಗುರುತಿಸಿದ. ಹಲವು ವರ್ಷಗಳ ಯೋಜನೆಯ ಪರಿಣಾಮವಾಗಿ ಅದಕ್ಕೆ ಪರಿಹಾರವನ್ನು ಕಂಡುಕೊಳ್ಳಲು ಯತ್ನಿಸಿ ಅದರಲ್ಲಿ ಯಶಸ್ವಿಯಾಗಿ ಬುದ್ಧನೂ ಆದ. ಬೌದ್ಧ ಧರ್ಮ ಸ್ಥಾಪನೆಯೂ ಆಯಿತು. ಬೌದ್ಧ ಧರ್ಮದ ಸರಳ ತತ್ವಗಳಿಂದಾಗಿ ಅದು ಭಾರತ

ದಲ್ಲೂ ವಿದೇಶಗಳಲ್ಲೂ ವ್ಯಾಪಕವಾಗಿ ಬಹುಬೇಗ ಹರಡಲಾರಂಭಿಸಿತು. ಆದರೆ ಇದು ಎಷ್ಟು ಬೇಗ ಹರಡಲಾರಂಭಿಸಿತೋ ಅಷ್ಟೇ ಬೇಗ ಕ್ಷೀಣಿಸಲಾರಂಭಿಸಿತು. ಇದಕ್ಕೆ ಕಾರಣ ಕ್ರಮೇಣ ಆ ಧರ್ಮಕ್ಕೆ ಸೇರಿದ ಜನರಿಗೆ ಬುದ್ಧನ ತತ್ವಗಳಿಗಿಂತ ಬುದ್ಧನೇ ಮುಖ್ಯನಾದ. ಅವನೂ ಅವತಾರ ಪುರುಷನಾದ. ಗುಡಿಗುಂಡಾರಗಳು ನಿರ್ಮಾಣವಾದುವು. (ಹಲವು ವರ್ಷಗಳ ದೀರ್ಘ ಯೋಚನೆಯ ಫಲವಾಗಿ ಆತ ದುಃಖಕ್ಕೆ ಕಾರಣ ಕಂಡುಹಿಡಿದ. ಆದರೆ ಜನ ಗೌತಮ ಒಂದು ಮರದ ಕೆಳಗೆ ಕುಳಿತಿದ್ದರಿಂದಾಗಿ ಜ್ಞಾನೋದಯವಾಗಿ ಬುದ್ಧನಾದ ಎಂದು ಗುರುತಿಸಿ ಅದನ್ನು ಭೋದಿವೃಕ್ಷ ಎಂದು ಕರೆದರು) ಅಲ್ಲಿಗೆ ಬುದ್ಧನ ಅವಸಾನ ಸಂಪೂರ್ಣವಾಯಿತು. ಬೌದ್ಧ ಧರ್ಮದ ಕತೆಯೂ ಮುಗಿಯಿತು. ವೈದಿಕ ಸಮಾಜಕ್ಕೂ ಬೌದ್ಧ ಧರ್ಮಕ್ಕೂ ಏನೂ ವ್ಯತ್ಯಾಸವಿಲ್ಲದಂತಾದಾಗ ಅದಕ್ಕೆ ಪ್ರತ್ಯೇಕವಾದ ಅಸ್ತಿತ್ವವಾದರೂ ಹೇಗೆ ಉಳಿದೀತು? ಸಿಡಿಯಲು ಕಾರಣವಾದಸಮಾಜಕ್ಕೂ ಸಿಡಿದುಬಂದ ಸಮಾಜಕ್ಕೂ ವ್ಯತ್ಯಾಸವಿಲ್ಲದಂತಾಗುವುದು ವಿಪರ್ಯಾಸವಾದರೂ ಅದು ವಾಸ್ತವಿಕ ಸತ್ಯ. ಕೊನೆಗೆ ವೈದಿಕ ಸಮಾಜ ಬೌದ್ಧ ಧರ್ಮವನ್ನು ತನ್ನಲ್ಲಿಯೇ ಸೇರಿಸಿಕೊಂಡುಬಿಟ್ಟಿತು. ಭಾರತದ ಹೊರಗೂ ಇದೇ ಸ್ಥಿತಿ. ಕ್ರಿಸ್ತ ಹೊಸ ಧರ್ಮವನ್ನು ನೆಲೆಗೊಳಿಸಿದ. ಕೆಲವು ಶತಮಾನಗಳ ನಂತರ ಕ್ರೈಸ್ತ ಧರ್ಮವೂ ಕೆಲವರ ಖಾಸಗಿ ಸೊತ್ತು ಎನ್ನುವ ಪರಿಸ್ಥಿತಿ ಬಂದಾಗ ಒಬ್ಬಬ್ಬರು ಪ್ರತಿಭಟಿಸಿ ಹೊರ ಬಂದರು. ಅವರೂ ಅವರ ಅನುಯಾಯಿಗಳೂ ಪ್ರಾಟೆಸ್ಟಂಟರಾದರು. ಆದರೆ ಈಗ ಕ್ಯಾಥೋಲಿಕ್ಕರಿಗೂ ಪ್ರಾಟೆಸ್ಟಂಟರಿಗೂ ವ್ಯತ್ಯಾಸವೇನಾದರೂ ಉಳಿದಿದೆಯೆ ? ಧರ್ಮಕ್ಕೂ, ಹುಟ್ಟಿಗೂ ಸಂಬಂಧ ವೇರ್ಪಟ್ಟರೆ ಆಗುವ ಪರಿಸ್ಥಿತಿಯೇ ಇದು. ವೀರಶೈವ ಧರ್ಮಕ್ಕೂ ಆಗಿರುವ ಗತಿಯೂ ಇದೇ.

ವೀರಶೈವ ಧರ್ಮ ಸ್ಥಾಪನೆಯಾಗುವಾಗ ಇದ್ದ ಸಮಾಜದ ಸ್ಥಿತಿಯನ್ನು ಸ್ವಲ್ಪ ವಿವೇಚಿಸಿದರೆ ಅದರ ಉಗಮಕ್ಕೆ ಕಾರಣ ತಿಳಿಯುತ್ತದೆ. ವೈದಿಕ ಸಮಾಜದ ವರ್ಣಾಶ್ರಮ ಧರ್ಮದ ವ್ಯವಸ್ಥೆಯಿಂದಾಗಿ ಜ್ಞಾನ ಕೆಲವೇ ವರ್ಗಗಳ ಸ್ವತ್ತಾಗಿತ್ತು. ಬ್ರಾಹ್ಮಣರು ಭೂಮಿಯ ಮೇಲಿನ ದೇವತೆಗಳು ಎನ್ನಿಸಿಕೊಂಡಿದ್ದರು. ಉಳಿದ ಸಮಸ್ತ ಜನರೂ ಇರುವುದು ದೇವತೆಗಳ ಪೂಜೆಗಾಗಿಯೇ ಅಲ್ಲವೆ ? ತಮ್ಮ ಸೇವೆಗಾಗಿಯೇ ಹುಟ್ಟಿ ಬದುಕುತ್ತಿರುವ ಜನರಿಗೆ ಜ್ಞಾನವಾದರೂ ಏಕೆ ಬೇಕು ? ಆದ್ದರಿಂದ ಜ್ಞಾನಭಂಡಾರದ ಬೀಗದ ಕೈಯನ್ನು ತಮ್ಮ ಬಳಿಯೇ ಇಟ್ಟುಕೊಂಡರು. (ಅವರಾದರೂ ಅದನ್ನು ಎಷ್ಟರಮಟ್ಟಿಗೆ ಉಪಯೋಗಿಸಿಕೊಂಡರು ಎನ್ನುವುದು ಬೇರೆ ವಿಷಯ) ಬ್ರಾಹ್ಮಣ ಜಾತಿಯಲ್ಲೇ ಹುಟ್ಟಿದರೂ ಹೆಂಗಸರು ಮಾತ್ರ ಆ ಜಾತಿಗಿರುವ ಎಲ್ಲ ಸೌಲಭ್ಯಗಳಿಂದ ವಂಚಿತರು. ಹೆಣ್ಣು ಕೇವಲ ಭೋಗದ ವಸ್ತು ಎನ್ನುವ ಭಾವನೆ ಬ್ರಾಹ್ಮಣ ಗಂಡಸರಲ್ಲಿ ನೆಲೆಯೂರಿತ್ತು. ಈ ಪರಿಸ್ಥಿತಿ ಆಚಂದ್ರಾರ್ಕವಾಗಿ ಉಳಿದುಹೋಗುವ ಭೀತಿ ಬಂದಾಗ ಕೆಲವರಾದರೂ ಅದನ್ನು ಪ್ರತಿಭಟಿಸಿದರು. ಭಾರತದಲ್ಲಿ ಅಲ್ಲಲ್ಲಿ ಪ್ರತಿಭಟನೆ ವ್ಯಕ್ತವಾಯಿತು. ಆದರೆ ಕರ್ನಾಟಕದಲ್ಲಿ ಈ ಪ್ರತಿಭಟನೆ ಮತ್ತೊಂದು ಧರ್ಮದ ಸ್ಥಾಪನೆಗೆ ನಾಂದಿಯಾಯಿತು. ವೀರಶೈವ ಧರ್ಮ ಸ್ಥಾಪನೆಯಾಯಿತು. ಬಸವೇಶ್ವರ ಬ್ರಾಹ್ಮಣನಾಗಿ ಹುಟ್ಟಿದರೂ ಧಾರ್ಮಿಕ, ಸಾಮಾಜಿಕ ಅಸಮತೆಯನ್ನು ಕಂಡು ರೋಸಿಹೋಗಿ ಜನಿವಾರವನ್ನೇ ಕಿತ್ತೊಗೆದು ಹೊರಗೆ ಬಂದ. ನನ್ನ ದೃಷ್ಟಿಯಲ್ಲಿ ಬಸವಣ್ಣ ವೀರಶೈವ ಧರ್ಮದ ಪ್ರಾಥಿನಿಧಿಕ ವ್ಯಕ್ತಿ. ಈತ ಧಾರ್ಮಿಕ ಅಸಮತೆಗಿಂತ ಸಾಮಾಜಿಕ ಅಸಮತೆಯ ವಿರುದ್ಧ ಹೋರಾಡಿದುದೇ ನಮಗೆ ಮುಖ್ಯವಾದ ಅಂಶ. ಬ್ರಾಹ್ಮಣ ಮಧುವರಸ, ಅಸ್ಪೃಶ್ಯ ಹರಳಯ್ಯರ ಮನೆತನಗಳ ನಡುವೆ ವಿವಾಹ ಸಂಬಂಧವನ್ನು ಏರ್ಪಡಿಸಿದ ಬಸವಣ್ಣನವರ ಸಾಧನೆ ನಮ್ಮ ಇತಿಹಾಸದಲ್ಲಿಯೇ ಮಹತ್ವದ ಘಟನೆ. ಜಾತಿ ವ್ಯವಸ್ಥೆಯನ್ನು ಕಿತ್ತೊಗೆಯಲು ಮಾಡಿದ ಮಹಾ ಪ್ರಯತ್ನವಿದು. ಇತರ ವೀರಶೈವ ಧರ್ಮದ ಪ್ರಚಾರಕರೆಲ್ಲರೂ ಸಾಮಾಜಿಕ ಅಸಮತೆಯ ವಿರುದ್ಧ ಹೋರಾಡಿದರು. ಮನುಷ್ಯರೆಲ್ಲಾ ಒಂದೇ, ಯಾರೂ ಮೇಲು ಕೀಳಿಲ್ಲ ಎನ್ನುವ ಸರ್ವೋಚ್ಚ ಭಾವದಿಂದ ವೀರಶೈವ ಧರ್ಮ ಸ್ಥಾಪನೆಯಾಯಿತು. ಯಾವ ಜಾತಿಯವರು ಬೇಕಾದರೂ ಇದರ ತೆಕ್ಕೆಗೆ ಬರಬಹುದು. ಇಲ್ಲಿಗೆ ಬಂದಮೇಲೆ ಎಲ್ಲರೂ ಹೊಸಹುಟ್ಟು ಪಡೆದಂತೆ. ಹೆಣ್ಣಿಗೂ ಪೂರ್ಣ ವ್ಯಕ್ತಿತ್ವ ಈ ಸಮಾಜದಲ್ಲಿ ಲಭಿಸಿತು. ಅನುಭವ ಮಂಟಪದಲ್ಲಿ ಜಾತಿ ಭೇದವಿಲ್ಲದೆ, ಅಂಗಭೇದವಿಲ್ಲದೆ ಒಂದಾಗಿ ಕುಳಿತು ಚರ್ಚಿಸಿದರು. ವೈದಿಕ ಸಮಾಜದಲ್ಲಿ ಮನೆಮಾಡಿಕೊಂಡಿದ್ದ ಗೊಡ್ಡು ಕಂದಾಚಾರಗಳು ಇಲ್ಲಿ ತಪ್ಪಿಯೂ ನುಸುಳದಂತೆ ಜಾಗ್ರತೆ ವಹಿಸಿದರು. ಎಂಟುನೂರು ವರ್ಷಗಳಿಗೂ ಹಿಂದೆ ಅಜ್ಞಾನವೇ ಮೈವೆತ್ತಂತೆ ಇದ್ದ ಸಮಾಜದಲ್ಲಿ ಧಾರ್ಮಿಕ, ಸಾಮಾಜಿಕ, ಸಾಹಿತ್ಯ ಕ್ರಾಂತಿ ನಡೆಯಿತು ಎನ್ನುವುದನ್ನು ಗಮನಿಸಿದಾಗ ವೀರಶೈವ ಧರ್ಮ ಪ್ರಚಾರಕರು ಅದರಲ್ಲಿಯೂ ವಚನಕಾರರ ಸಾಧನೆ ನಮಗೆ ಅರ್ಥವಾಗುತ್ತದೆ. ಆದರೆ ಈಗ ? ಇದೇ ನನ್ನ ಮುಖ್ಯ ಪ್ರಶ್ನೆ.

ವೈದಿಕ ಸಮಾಜಕ್ಕೂ (ಈ ಮಾತನ್ನು ಉಪಯೋಗಿಸುವಾಗ ಒಟ್ಟು ಹಿಂದೂ ಸಮಾಜವನ್ನು ದೃಷ್ಟಿಯಲ್ಲಿಟ್ಟುಕೊಂಡಿದ್ದೇನೆ) ಅದರಿಂದ ಸಿಡಿದು ಬಂದ ವೀರಶೈವ ಸಮಾಜಕ್ಕೂ ಈಗ ವ್ಯತಾಸವೇನಾದರೂ ಉಳಿದಿದೆಯೇ ? ಬುದ್ಧನಿಗೆ ಆದ ಗತಿಯೇ ಬಸವಣ್ಣನಿಗೂ ಆಯಿತು. ಬಸವಣ್ಣ ಮರೆಯಾದ ಕೇವಲ ಒಂದು ಶತಮಾನದ ಅವಧಿಯಲ್ಲಿ ಆತನ ಸುತ್ತ ಪವಾಡಗಳ ಕತೆಗಳು ಹುಟ್ಟಿಕೊಂಡವು. ಹರಿಹರನ 'ಬಸವರಾಜದೇವರ ರಗಳೆ'ಯನ್ನು ಓದಿದವರಿಗೆ ಈ ಮಾತು ಅರ್ಥವಾಗುತ್ತದೆ. ಅದಾದ ನಂತರ ಇನ್ನೆಷ್ಟು ಪವಾಡಗಳ ಕತೆಗಳು ಸೇರಿಕೊಂಡವೋ ! ಪವಾಡಗಳು ನಡೆದುವೋ ಇಲ್ಲವೋ ನನಗೆ ಮುಖ್ಯವಲ್ಲ. ಆದರೆ ಪವಾಡಗಳಿಗೇ ಪ್ರಾಧಾನ್ಯ ಬಂದು ಆತ ಸಾರಿದ ತತ್ವಗಳು ಮರೆಯಾದವು. ಬಸವಣ್ಣನ ಸಾಧನೆಯನ್ನು ನೋಡಿ ಒಬ್ಬ ಮನುಷ್ಯ ಮಾತ್ರದವನಿಂದ ಇಷ್ಟೆಲ್ಲ ಸಾಧ್ಯವೆ ಎಂದು ಕೆಲವರಿಗೆ ಅನಿಸಿರಬೇಕು. ಅದರ ಪರಿಣಾಮ ಆತ ನಂದಿಯ ಅವತಾರವಾದ. ಜಂಗಮರೆಲ್ಲ ಶಿವಗಣಗಳಾದರು. ಒಬ್ಬ ಮನುಷ್ಯನನ್ನು ಆತ ಮನುಷ್ಯನಲ್ಲ ದೇವರು ಎಂದು ಹೇಳಿದ ಮೇಲೆ ಅಲ್ಲಿಗೆ ಆತನ ಮತ್ತು ಆತನ ತತ್ವಗಳ ಕತೆ ಮುಗಿಯಿತು. ಕ್ರಮೇಣ ವೈದಿಕ ಸಮಾಜದ ಎಲ್ಲ ಅನಿಷ್ಟಗಳೂ ಒಂದೊಂದಾಗಿ ಈ ಹೊಸ ಸಮಾಜ

ದಲ್ಲಿ ತೂರಿಕೊಂಡವು. ಕಟ್ಟುಕಟ್ಟಳೆಗಳು, ಧಾರ್ಮಿಕ ವಿಧಿಗಳು ಪ್ರಾರಂಭವಾದುವು. ಮೇಲು ಕೀಳಿಲ್ಲದ ಈ ಸಮಾಜದಲ್ಲಿಯೂ ಹಲವು ವರ್ಗಗಳು ಹುಟ್ಟಿಕೊಂಡವು. ಮಧುವರಸರು ಮಧುವರಸರಾಗಿಯೇ ಉಳಿದರು. ಹರಳಯ್ಯರು ಹರಳಯ್ಯರಾಗಿಯೇ ಉಳಿದರು. (ಬ್ರಾಹ್ಮಣರಾಗಿ ಬಂದವರು ಬ್ರಾಹ್ಮಣರಾಗಿ, ಅಸ್ಪೃಶ್ಯರಾಗಿ ಬಂದವರು ಅಸ್ಪೃಶ್ಯರಾಗಿಯೇ ಉಳಿದಿದ್ದಾರೆ) ನಾನು ಕಾಲೇಜಿನಲ್ಲಿ ಓದುತ್ತಿದ್ದಾಗ ಭೂತಯ್ಯ ಎನ್ನುವ ಹುಡುಗ ತನ್ನ ಹೆಸರು ಚೆನ್ನಾಗಿಲ್ಲವೆಂದು ಪ್ರಸಾದ್ ಎಂದು ಬದಲಾಯಿಸಿಕೊಂಡ. ಆದರೆ ಹುಡುಗರು ಆತನನ್ನು ಕರೆಯಲಾರಂಭಿಸಿದ್ದು ಭೂತಪ್ರಸಾದ್ ಎಂದು. ಹಳೆಯದು ಹೋಗದೆ ಹೊಸದರ ಜೊತೆಯಲ್ಲಿ ಸೇರಿಕೊಂಡಿತು. ವೀರಶೈವ ಸಮಾಜಕ್ಕೆ ಬಂದವರ ಸ್ಥಿತಿಯೂ ಹೀಗೆಯೇ ಆಯಿತು. ಜಂಗಮರು, ಬಣಜಿಗ ಲಿಂಗಾಯಿತರು, ನೊಣಬ ಲಿಂಗಾಯಿತರು, ರೆಡ್ಡಿ ಲಿಂಗಾಯಿತರು, ಸಾದು ಲಿಂಗಾಯಿತರು ಹೀಗೆ ಮೊದಲ ಜಾತಿಯ ಹೆಸರೂ ಉಳಿದುಕೊಂಡಿರುವುದನ್ನು ನೋಡಿದರೆ ಸಾಕು ಅವರ ಈಗಿನ ಸ್ಥಾನ–ಮಾನ ಅರ್ಥವಾಗುತ್ತದೆ. ಇವರಲ್ಲಿ ಜಂಗಮರು ಮೇಲು, ಉಳಿದವರು ಅವರಿಗಿಂತ ಕಡಿಮೆ. ಎಂದರೆ ವೈದಿಕ ಸಮಾಜ ಅಲ್ಲಿಯೂ ಯಥಾವತ್ತಾಗಿ ಉಳಿದುಕೊಂಡು ಬಂದಿತು. ಎಲ್ಲ ಧರ್ಮಗಳಂತೆ ವೀರಶೈವ ಧರ್ಮವೂ ಜಾತಿಯಾಗಿ ಮಾರ್ಪಟ್ಟಿತು.

ವೈದಿಕ ಸಮಾಜದಲ್ಲಿ ಕಾಯಕ ಮಾಡದೆಯೇ ಇತರರ ಕಾರ್ಯದ ಫಲವನ್ನು ಅನುಭವಿಸುತ್ತಿದ್ದ ಪುರೋಹಿತ ವರ್ಗವನ್ನು ನೋಡಿ ಎಳತನದಲ್ಲಿಯೇ ಬಸವಣ್ಣನವರಿಗೆ ಬೇಸರವಾಗಿರಬೇಕು. ಮುಂದೆ ಅವರು 'ಕಾಯಕವೇ ಕೈಲಾಸ' ಎಂದು ದುಡಿಮೆಗೆ ಮಹತ್ವವನ್ನು ಕೊಟ್ಟರು. (ವೀರಶೈವ ಸಮಾಜ ದುಡಿಮೆಗೆ ಪ್ರಮುಖ ಸ್ಥಾನ ಕೊಟ್ಟಿತು). ಆದರೆ ವೀರಶೈವ ಸಮಾಜದಲ್ಲಿ ಪುರೋಹಿತ ವರ್ಗ ಈಗಿಲ್ಲವೆ ? ಕರ್ನಾಟಕದಲ್ಲಿಯೇ ಸುಮಾರು ಎರಡು ಸಾವಿರ ಮಠಗಳು (ಚಿಕ್ಕವು, ಪುಟ್ಟವೂ ಸೇರಿ) ಇವೆಯೆಂದು ಕೇಳಿದ್ದೇನೆ. ಇಲ್ಲಿ ಇರುವ ಜನ ಏನು ಮಾಡುತ್ತಿದ್ದಾರೆ ? ಕೈ ಬೆರಳಲ್ಲಿ ಎಣಿಸಬಹುದಾದಷ್ಟು ಮಠಗಳು ಶಿಕ್ಷಣದ ಉನ್ನತಿ ಮತ್ತಿತರ ಸಾಮಾಜಿಕ ಕಾರ್ಯಗಳನ್ನು ಕೈಕೊಂಡಿರಬಹುದು. ಆದರೆ ಬಹುತೇಕ ಮಠಗಳು, ಅನುಭವಮಂಟಪಕ್ಕೂ ಈಮಠಗಳಿಗೂ ಹೋಲಿಕೆ ಮಾಡಲು ಸಾಧ್ಯವೇ? ಅನುಭವ ಮಂಟಪದಲ್ಲಿ ಎಲ್ಲರೂ ಸಮಾನರಾಗಿ ಕುಳಿತು ಚರ್ಚಿಸುತ್ತಿದ್ದರು. ಆದರೆ ಈ ಮಠಗಳಲ್ಲಿ, ಇವರಲ್ಲಿ ಎಷ್ಟು ಜನ ಬಸವಣ್ಣನವರ ವಚನಗಳನ್ನು ಅರ್ಥಮಾಡಿಕೊಂಡಿದ್ದಾರೆ ? ಈ ಮಠಗಳನ್ನು ಅವಲಂಬಿಸಿ ಸುಮ್ಮನೆ ಕೂಳು ತಿನ್ನುತ್ತಿರುವ ಬಂದಳಿಕೆಗಳು ಎಷ್ಟು ಮಂದಿ ? ಈ ಮಠಗಳಿಗೂ ವೈದಿಕ ಮಠಗಳಿಗೂ ವ್ಯತ್ಯಾಸವೇನು? ಅಲ್ಲಿಯೂ ಕಪ್ಪಕಾಣಕೆ ನಡೆಯತ್ತದೆ, ಇಲ್ಲಿಯೂ ನಡೆಯುತ್ತದೆ. ಎಂದರೆ ಈ ಮಠದ ವ್ಯವಸ್ಥೆಯೇ ವೈದಿಕ ಸಮಾಜದಿಂದ ಎರವಲು ತೆಗೆದುಕೊಂಡಿದ್ದು. ಇವರಿಂದ ಧರ್ಮದ ಪ್ರಚಾರವಾಗುತ್ತಿದೆಯೆ ? ಆಗುತ್ತಿದೆ ಎಂದು ನನ್ನ ವೀರಶೈವ ಮಿತ್ರರೇ ಹೇಳುತ್ತಿಲ್ಲ. ಎಂದಮೇಲೆ ' ಕಾಯಕವೇ ಕೈಲಾಸ ' ಎನ್ನುವ ಮಾತಿಗೆ ಬೆಲೆಯೆಲ್ಲಿ ? ಎಂಟು ನೂರು ವರ್ಷಗಳಾದರೂ ತನ್ನಲ್ಲಿಯೇ ಹಲವು ವರ್ಗಗಳನ್ನು ಇಟ್ಟುಕೊಂಡಿರುವ, ಮೇಲು ಕೀಳುಗಳನ್ನು ಜೋಪಾನವಾಗಿ ಉಳಿಸಿಕೊಂಡು ಬಂದಿರುವ ವೀರಶೈವಧರ್ಮ ಧರ್ಮವಾಗಿ ಉಳಿದಿದೆ ಎಂದು ಹೇಳಲು ಯಾರಿಗೆ ಧೈರ್ಯವಿದೆ ? ಆದ್ದರಿಂದಲೇ ನನ್ನ ದೃಷ್ಟಿಯಲ್ಲಿ ವೈದಿಕ ಸಮಾಜದ ಹಲವು ಜಾತಿಗಳಂತೆ ವೀರಶೈವ ಧರ್ಮವೂ ಒಂದು ಜಾತಿಯಾಗಿ ಮಾರ್ಪಟ್ಟಿದೆ. ಧರ್ಮ ವೈಯಕ್ತಿಕ ಜೀವನದಲ್ಲಿ ಅನುಷ್ಠಾನಕ್ಕೆ ತರುವಂತಹದ್ದು. ಧರ್ಮಕ್ಕೂ ಹುಟ್ಟಿಗೂ ಅಂಟಿ ಬಂದಿರುವ ನಂಟು ವೀರಶೈವ ಧರ್ಮದಲ್ಲೂ ಮುಂದುವರಿದಿದ್ದರಿಂದಲೇ ಇಂತಹ ದುರವಸ್ಥೆ ಬಂದಿದೆ ಎನ್ನುವುದನ್ನು ಗಮನಿಸಬೇಕು. ಇದು ಎಲ್ಲ ಧರ್ಮಗಳಿಗೂ ಅನ್ವಯಿಸುವ ಸಾರ್ವತ್ರಿಕ ಮಾತು.

ವೀರಶೈವಧರ್ಮ ಮತ್ತು ಜೈನಧರ್ಮ

ಲೇಖಕರು :
ಜಿ. ಬ್ರಹ್ಮಪ್ಪ, ಎಂ.ಎ.,
ಕನ್ನಡ ರೀಡರ್
ಮಹದೇಶ್ವರ ಕಾಲೇಜ್, ಕೊಳ್ಳೆಗಾಲ

ವೀರಶೈವ ಧರ್ಮಕ್ಕೂ ಜೈನಧರ್ಮಕ್ಕೂ ಅವಿನಾಭಾವಿ ಸಂಬಂಧವಿಲ್ಲದಿದ್ದರೂ ದೃಷ್ಟಿಕೋನದಲ್ಲಿ ಅನ್ಯೋನ್ಯತೆ ಹೆಚ್ಚಾಗಿದೆ. ಜೈನ ಧರ್ಮದ ಆದಿಪ್ರವರ್ತಕನಾದ ವೃಷಭದೇವನು ವೃಷಭ ಲಾಂಛನವುಳ್ಳವನಾಗಿರುವನು. ಇತ್ತ ಶಿವಲಿಂಗದ ಮುಂದೆ ನಂದಿಯ ಮೂರ್ತಿಯನ್ನು ನಾವು ಕಾಣಬಹುದು. ಕರ್ಮವಿಧ್ವಂಸನಕ್ಕಾಗಿ ವೃಷಭದೇವನು ರತ್ನತ್ರಯ ಮಾರ್ಗವನ್ನು ಬೋಧಿಸಿದನು. ರತ್ನತ್ರಯವನ್ನೇ ಪ್ರತಿಮಾರೂಪದಲ್ಲಿ ತ್ರಿಶೂಲವಾಗಿ ಚಿತ್ರಿಸಲೂಬಹುದು ಅತ್ತ ಶಿವನು ತ್ರಿಶೂಲಧಾರಿಯಾಗಿರುವನು. ವೃಷಭದೇವನ ವ್ಯಕ್ತಿ ಚಿತ್ರಣಕ್ಕೂ ಶಿವನ ವ್ಯಕ್ತಿಚಿತ್ರಣಕ್ಕೂ ಹೋಲಿಕೆಯುಂಟು. ಇಬ್ಬರೂ ದಿಗಂಬರರೇ. ವೃಷಭದೇವ ಕೈಲಾಸದಲ್ಲಿ ನಿರ್ವಾಣವನ್ನು ಪಡೆದು ಕೈಲಾಸನಾಥನಾದನು. ಇತ್ತ ಶಿವನನ್ನೂ ಕೈಲಾಸಾಧಿಪತಿಯೆನ್ನುವರು. ವೃಷಭದೇವ ನಿರ್ವಾಣ ಪಡೆದ ದಿನ ಜೈನರಿಗೆ ಜಿನರಾತ್ರಿಯಾದರೆ, ಅಂದೇ ಶೈವರು ಶಿವರಾತ್ರಿಯನ್ನು ಆಚರಿಸುವರು. ಜೈನತ್ರಿಷಷ್ಠಿ ಶಲಾಕಾಪುರಷರ ಚರಿತೆಗೆ ಸಂವಾದಿಯಾಗಿ ಶೈವರಲ್ಲೂ ತ್ರಿಷಷ್ಠಿ ಪುರಾತನದ ಚರಿತೆ ಬೆಳೆಯಿತು. ವೃಷಭದೇವನ ಮೋಕ್ಷಮಾರ್ಗವನ್ನು ಅಂದಿಗೆ ವ್ಯಾಖ್ಯಾನಿಸಿದವರನ್ನು ಗಣಧರರೆನ್ನುವರು. ಶಿವನ ಬಳಿಯೂ ಗಣನಾಯಕರಿರುವರು. ವೃಷಭದೇವನು ಸಾಧಕನಿಗೆ 14 ಗಣಸ್ಥಾನಗಳ ಸಾಧನಾಮಾರ್ಗವನ್ನು ತೋರಿಸಿಕೊಟ್ಟನು. ಇತ್ತ ಶೈವ ಧರ್ಮವು ಷಟ್‌ಸ್ಥಲ ಸಿದ್ಧಾಂತವನ್ನು ರೂಪಿಸಿದೆ. ವೃಷಭದೇವ ಸಮವಸರಣದಲ್ಲಿ ವಿರಾಜಮಾನನಾಗಿ ಧರ್ಮೋಪದೇಶಗೈದರೆ ಅತ್ತ ಶರಣರು ಅನುಭವಮಂಟಪದಲ್ಲಿ ವಿರಾಜಮಾನರಾಗಿ ಧಾರ್ಮಿಕ ಜಿಜ್ಞಾಸೆ ನಡೆಸಿದರು. ಈ ಎಲ್ಲ ಹೋಲಿಕೆಗಳನ್ನು ನಾವು ಅಕಸ್ಮಿಕವೆಂದು ತಳ್ಳಿಹಾಕಲು ಸಾಧ್ಯವೆ ?

ಜೈನ ಧರ್ಮವು ವಿಶ್ವಧರ್ಮವಾಗಿದೆ. ಜೀವಕೋಟಿಯ ಧರ್ಮವಾಗಿದೆ. ಮಾನವಕುಲವನ್ನೆಲ್ಲ ಒಂದೆದು ತೀರ್ಥಂಕರರು ವಿಶ್ವಾನುಕಂಪದಿಂದ ಸಾರಿರುವರು. ಉಚ್ಚ ನೀಚಕಲ್ಪನೆಗೆ ಇಲ್ಲಿ ಎಡೆಯಿಲ್ಲ. ಜಾತಿಯಿಂದ ಯಾರೂ ದೊಡ್ಡವರಾಗಲು ಸಾಧ್ಯವಿಲ್ಲ, ನೀತಿಯಿಂದ ದೊಡ್ಡವರಾಗಬೇಕು ಎಂದು ಜೈನ ಧರ್ಮವು ಒತ್ತಿ ಒತ್ತಿ ಹೇಳಿದೆ.

> ಸಮ್ಯಗ್ದರ್ಶನಸಂಪನ್ನ ಮಪಿ ಮಾತಂಗದೇಹಜಮ್ ।
> ದೇವಾದೇವಂ ವಿದೂರ್ಭಸ್ಮ ಗೂಢಾಂ ಗಾರಾಂತರೌಜಸಂ ॥[1]

— ಚಂಡಾಲರ ಹೊಟ್ಟೆಯಲ್ಲಿ ಹುಟ್ಟಿದವನಿದ್ದರೂ ಸಮ್ಯಗ್‌ದರ್ಶನದಿಂದ ಕೂಡಿದವನಾದರೆ ಅವನು ದೇವನೆನಿಸುವನು — ಜೈನರ ಉಸಿರಾದ ಸಮ್ಯಗ್ ದರ್ಶನವನ್ನು ಚಂಡಾಲನೂ ಧರಿಸಿ ಉದ್ಧಾರವಾಗಬಹುದು.

> "ಅವನುಮಕ್ಕೆ ನಿಮ್ಮಡಿಗಳಂ ನೆನೆವಾತನೆ ನನ್ನ
> ಬಂಧು.... ಎನ್ನಮೆಚ್ಚಿನಾದೇವನಂ ನಚ್ಚಿದಾ–
> ತನೆನಗನ್ಯನೇ ಪೇಳ್ ಅಪರಾಜಿತೇಶ್ವರಾ"[2]

ಜಿನಾರಾಧಕರು ಯಾರಾದರೂ ಸರಿ ಅವರೆಲ್ಲ ನನ್ನ ಬಂಧುಗಳು ಎಂದು ರತ್ನಾಕರ ಬಿಚ್ಚುಹೃದಯದಿಂದ ಹೇಳಿರುವನು. "ಮನುಷ್ಯಜಾತಿತಾನೊಂದೆವಲಂ"[3] — ಇದು ಆದಿ ಕವಿ ಪಂಪನ ಉದ್ಗಾರ ! ಮಹಾವೀರ ತೀರ್ಥಂಕರರೂ ಜಾತಿಮತವನ್ನು ತೊತ್ತಳದುಳಿದರು. ಕೇಶಿ ಎಂಬ ಮಾದಿಗರವನಿಗೆ ಈ ತೀರ್ಥಂಕರರು ಹೃದಯ ತುಂಬಿ ಅನುಗ್ರಹಿಸಿದರು ಮಾನವ ಕುಲದ ಕಲ್ಯಾಣವೇ ಜೈನತೀರ್ಥಂಕರ ಪರಂಪರೆಯ ಗುರಿಯಾಗಿದೆ.

ಇತ್ತ ವೀರಶೈವ ಧರ್ಮವೂ ಮಾನವ ಕಲ್ಯಾಣಕ್ಕಾಗಿ ಹಾತೊರೆಯುವುದು. ಉಚ್ಚನೀಚ ಕಲ್ಪನೆಗೆ ಶಿವಶರಣರು ಕಾಸಿನ ಬೆಲೆಯನ್ನೂ ಕೊಟ್ಟಿಲ್ಲ. "ಶ್ವಪಚನಾದೊಡೇಂ ಶಿವಭಕ್ತನೇ ಕುಲಜನು"[4] — ಶಿವಭಕ್ತನಾದರೆ ಮುಗಿಯಿತು, ಅವನ ಜಾತಿ ಸೂತಕವೂ ಪರಿಹಾರವಾಗುವುದು. ಎಂದು ಬಸವಣ್ಣನವರು ಸಾರಿದರು. ಜೈನಧರ್ಮ ಹಾಗು ಶೈವ ಧರ್ಮಗಳು ನೀತಿಪ್ರಧಾನವಾದ ಧರ್ಮಗಳು.

ಜೈನ ಶ್ರಾವಕಿಯರು ಧರ್ಮಗ್ರಂಥಗಳನ್ನು ಓದಬಹುದು. ಮನೆ ಮಠ ತೊರೆದು ಆರ್ಯಿಕೆಯರಾಗಿ ತಪವೆಸಗಬಹುದು. ಜೈನ ಚತುಸ್ಸಂಘದಲ್ಲಿ ಮುನಿ-ಆರ್ಯಿಕೆ-ಶ್ರಾವಕೆ-ಶ್ರಾವಕ ಈ ನಾಲ್ಕು ಗುಂಪುಗಳಿವೆ. ಆದರಿಂದ ಸ್ತ್ರೀಗೆ ಜೈನಧರ್ಮ ಗೌರವಯುತ ಸ್ಥಾನವನ್ನು ನೀಡಿದೆ. ಸಂಸಾರದಲ್ಲಿ ವಿರಕ್ತಳಾದ ಶ್ರಾವಿಕೆಯು ಆರ್ಯಿಕೆಯಾಗಿ ಆತ್ಮೋದ್ಧಾರವನ್ನು ಮಾಡಿಕೊಳ್ಳಬಹುದು. ವೀರಶೈವ ಧರ್ಮದಲ್ಲೂ ಸ್ತ್ರೀಗೆ ಪುರುಷರಂತೆ ಧಾರ್ಮಿಕ ಸದವಕಾಶಗಳು ಲಭಿಸಿವೆ. ಅಕ್ಕಮಹಾದೇವಿ ಶರಣೆಯಾಗಿ, ಸಂಸಾರ ದೂರಳಾಗಿ ಸಾಧನೆಯೆಸಗಿದಳು.

---

1 ಶ್ರೀ ಮಿರ್ಜಿ ಅಣ್ಣಾರಾಯರ, ರತ್ನಕರಂಡಕ ಶ್ರಾವಕಾಚಾರ, ಪು. 162

2 ರತ್ನಾಕರ, ಅಪರಾಜಿತ ಶತಕ 54

3 ಪಂಪ, ಆದಿಪುರಾಣ, 16 ನೇ ಆಶ್ವಾಸ

4 ಬಸವಣ್ಣನವರ ವಚನ 658

ವೀರಶೈವ ಧರ್ಮದಲ್ಲಿ ಷಟ್‌ಸ್ಥಲಗಳ ಚಿತ್ರಣ:

	ಸ್ಥಲ	ಭಕ್ತಿ	ಲಿಂಗ
1.	ಭಕ್ತ	ಸದ್ಭಕ್ತಿ	ಆಚಾರಲಿಂಗ
2.	ಮಹೇಶ	ನೈಷ್ಠಿಕಾಭಕ್ತಿ	ಗುರುಲಿಂಗ
3.	ಪ್ರಸಾದಿ	ಅವಧಾನಭಕ್ತಿ	ಶಿವಲಿಂಗ
4.	ಪ್ರಾಣಲಿಂಗಿ	ಅನುಭವಭಕ್ತಿ	ಜಂಗಮಲಿಂಗ
5.	ಶರಣ	ಆನಂದಭಕ್ತಿ	ಪ್ರಸಾದಲಿಂಗ
6.	ಐಕ್ಯ	ಸಮರಸಭಕ್ತಿ	ಮಹಾಲಿಂಗ

ಏಕಮೇವಾದ್ವಿತಿಯಂ ಎಂಬ ಪರವಸ್ತುವಿನ ಅಂತಃಸ್ಫುರಣದಿಂದ ಅನಂತಾತ್ಮಗಳು ಹೊರಬಿದ್ದು ಮಲತ್ರಯಗಳ ಸೆಳತಕ್ಕೆ ಸಿಕ್ಕಿ ಜೀವಾತ್ಮರಾಗುವರು. ತಮ್ಮ ಸಹಜ ಸ್ವರೂಪವನ್ನು ಮರೆತುದರ ಕಾರಣ ಶರೀರ ಪ್ರಾಪ್ತಿಯಾಗಿ ಭವ ಮೂಲಾಧರರಾಗುವರು. ಪರವಸ್ತುವೇ ಲಿಂಗ ಮತ್ತು ಅಂಗವಾಗಿ ವೀರಶೈವ ಸಿದ್ಧಾಂತದಲ್ಲಿ ವಿಂಗಡವಾಗಿದೆ. ಲಿಂಗಾಂಗಗಳು ಜೊತೆ ಜೊತೆ ನಿರಂತರವಾಗಿ ಭ್ರಮಿಸುವುವು. ಜೀವಾತ್ಮವು ಪರಮಾತ್ಮ ಕಳೆಯನ್ನು ಮತ್ತೆ ಉದ್ದೀಪನೆಗೊಳಿಸಿ ಲಿಂಗಾಂಗ ಸಾಮರಸ್ಯವನ್ನು ತಂದುಕೊಂಡು ಉದ್ಧಾರವಾಗಬೇಕು. ಈ ಉದ್ಧಾರ ಮಾರ್ಗವೇ ಷಟ್‌ಸ್ಥಲ ಮಾರ್ಗ. ಪ್ರತಿಯೊಂದು ಸ್ಥಲದ ಸ್ವಭಾವವನ್ನು ನಾವು ಅಲ್ಲಲ್ಲಿಯ ಭಕ್ತಿಯಿಂದಲೂ ಲಿಂಗದಿಂದಲೂ ಅರಿಯಬಹುದು. ಭಕ್ತನಾದಾಗ ಸಾಧನೆ ಪ್ರಾರಂಭವಾಗುವುದು. ಕ್ರಮವಾಗಿ ಮುಂದುವರಿದು ಮೇಲೇರಿ ಐಕ್ಯಸ್ಥಲ ಪ್ರಾಪ್ತಿಯಾದಾಗ ಸಾಧನೆ ಮುಕ್ತಾಯವಾಗುವುದು. ಲಿಂಗಾಂಗಗಳು ಅವಿನಾಭಾವಿ ಸಂಬಂಧವನ್ನು ಪಡೆಯುವುವು.

ಜೈನಧರ್ಮದಲ್ಲಿ ಸಾಧಕನ ಸಾಧನಾ ಮಾರ್ಗದಲ್ಲಿ 14 ನಿಲ್ದಾಣಗಳಿವೆ. ಇವನ್ನು **ಗುಣಸ್ಥಾನವೆನ್ನುವರು.**

1. ಮಿಥ್ಯಾದೃಷ್ಟಿ
2. ಸಾಸಾದನ
3. ಮಿಶ್ರ
4. ಅವಿವತಸಮ್ಯನ್‌ದೃಷ್ಟಿ
5. ದೇಶವಿರತಿ
6. ಪ್ರಮತ್ತವಿರತ
7. ಅಪ್ರಮತ್ತವಿರತ
8. ಅಪೂರ್ವಕರಣ
9. ಅನಿವೃತ್ತಿಕರಣ
10. ಸೂಕ್ಷ್ಮಸಾಂಪರಾಯ
11. ಉಪಶಾಂತಕಷಾಯ
12. ಕ್ಷೀಣಕಷಾಯ
13. ಸಂಯೋಗಕೇವಲಿ
14. ಅಯೋಗಕೇವಲಿ

ಇಲ್ಲಿ ನಾಲ್ಕನೆಯ ಗುಣಸ್ಥಾನದಿಂದ ಸಮ್ಯಕ್ತ ಅಂಕುರಾರ್ಪಣವಾಗುವುದು. ಐದನೆಯ ಗುಣಸ್ಥಾನದಲ್ಲಿ ಸಾಧನೆ ಪ್ರಾರಂಭವಾಗುವುದು. ಆರನೆಯಗುಣಸ್ಥಾನಕ್ಕೆ ಬರಲು ದಿಗಂ[illegible]ತಿಯಾಗಬೇಕು. ಅದರಿಂದ ಹನ್ನೆರಡನೆಯ ಗುಣಸ್ಥಾನ ಪೂರ್ತಿ ನಿಗ್ರ್ರಂಥ ಮುನಿಯ ಸಾಧನಾರಂಗವಾಗಿದೆ. 13 ನೆಯ ಗುಣಸ್ಥಾನಕ್ಕೆ ಏರಿದವರನ್ನು ಅರಹಂತರೆನ್ನುವರು. ದೇಹಧಾರಿ ಪರಮಾತ್ಮರೆನ್ನುವರು. ಘಾತಿಕರ್ಮಗಳನ್ನು ಇವರು ಗೆದ್ದಿರುವರು. 14 ನೆಯ ಗುಣಸ್ಥಾನದಲ್ಲಿ ಅಘಾತಿಕ ಮಾರ್ಗಗಳನ್ನು ಗೆದ್ದು ಚೇತನ ಕ್ಷಣಕಾಲ ಅಲ್ಲಿದ್ದು ಅನಂತರ ಸಿದ್ಧ ಲೋಕಕ್ಕೆ ಲಂಘಿಸಿ ನಿರುಪಾಧಿಕ ಸುಖದಲ್ಲಿ ಅದಂತಸಿರಿಲೋಲನಾಗಿ ಓಲಾಡುವುದು.

ವೀರಶೈವರ ಐಕ್ಯಾವಸ್ಥೆಯಲ್ಲಿ ಲಿಂಗಾಂಗ ಸಾಮರಸ್ಯ ದೊರಕಿತು ಜೀವಾತ್ಮವು ಶಿವಪದವಿಯಲ್ಲಿ ಲೀನವಾಗಿ ಹೋಗುವುದು. ಈ ಅವಸ್ಥೆಗೂ ಜೈನ ಅರಹಂತಾವಸ್ಥೆಗೂ ಹೋಲಿಕೆಯಿದೆ. ಯೋಗಿಗಳಾದವರು ಈ ಎರಡೂ ಸಂದರ್ಭಗಳನ್ನು ತುಲನಾತ್ಮಕವಾಗಿ ವಿವೇಚಿಸಿ ನೋಡಬೇಕು. ಆರನೆಯ ಗುಣಸ್ಥಾನದಿಂದ ಮುಂದೆಹೋದಂತೆ ಚೇತನವು ಆಧ್ಯಾತ್ಮಿಕ ಮೂಸೆಯಲ್ಲಿ ಪುಟಕ್ಕಿಟ್ಟು ಬಂಗಾರವಾಗಿ ಕೊಳಗಿ 13-14 ನೆಯ ಗುಣಸ್ಥಾನದಲಿ ಅಪರಂಜಿಯಾಗಿ ಹೋಗುವುದು. ಭಕ್ತಸ್ಥಲದಿಂದ ಮೇಲೇರುತ್ತ ಜೀವಾತ್ಮ ಪಾವನವಾಗುತ್ತಸಾಗಿ ಮಲರಹಿತವಾಗುತ್ತ ಐಕ್ಯಸ್ಥಲದಲ್ಲಿ ಶಿವಪ್ರಕಾಶಿಯಾಗಿ ತೊಳಗುವುದು.

ಇನ್ನು ಸಾಹಿತ್ಯರಂಗದಲ್ಲಿ ವೀರಶೈವ ಹಾಗೂ ಜೈನಧರ್ಮಗಳಿಗಿರುವ ಸಾಮೀಪ್ಯವನ್ನೂ ಸಾದೃಶ್ಯವನ್ನೂ ನಾವು ನೋಡಬಹುದು.

ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ;
ಮೋಹಕ್ಕೆ ಮಗಳಾಗಿ ಹುಟ್ಟಿದಳು ಮಾಯೆ
ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ;
ಇದಾವಪರಿಯಲ್ಲಿ ಕಾಡಿತ್ತು ಮಾಯೆ !
ಈ ಮಾಯೆ ಕಳೆವೊಡೆನ್ನಳವಲ್ಲ
ನೀವೇ ಬಲ್ಲಿರಿ ಕೂಡಲ ಸಂಗಮದೇವ[8]

ಮಾಯೆಯ ನಾನಾ ರೂಪವನ್ನು ಬಸವಣ್ಣನವರು ಕಂಡುಉಂಡು ತಳಮಳಿಸಿರುವರು.

ಆರಾರಲ್ಲದ ಗರ್ಭದೊಳ್ ಬಳೆಯನ್ ಆರಾರೊಂದು
ಮೂತ್ರಾಧ್ವದೊಳ್ ।
ಬಾರಂ ಬಂದುರೆ ಬಂಧುಗಳ್ ಪಿತೃಗಳ್
ಎಂದೆನ್ನಂಗನಾನೇಕಮೆಂ ॥
ದಾರಾರೆಂಜಲನುಣ್ಣನಾತ್ಮಜರೆನುತ್ತಾರಾರದುರ್ಗಂಧದಿಂ ।
ಚಾರಿತ್ರಂಗಿಡನಾತ್ಮನೇಂಭ್ರಮಿತನೋರತ್ನಾಕರಾಧೀಶ್ವರಾ ॥[9]

ಭವಮಾಲೆಯ ತೊಡರನ್ನು ರತ್ನಾಕರ ಕವಿ ಕಣ್ಣಿಗೆಕಟ್ಟುವಂತೆ ಚಿತ್ರಿಸಿರುವನು.

[8] ಬಸವಣ್ಣನವರ ವಚನ 15 [9] ರತ್ನಾಕರ ಶತಕ 29

ತನುವ ಕೊಟ್ಟು ಗುರುವನೊಲಿಸಬೇಕು;
ಮನವ ಕೊಟ್ಟು ಲಿಂಗವನೊಲಿಸಬೇಕು;
ಧನವ ಕೊಟ್ಟು ಜಂಗಮವನೊಲಿಸಬೇಕು;
ಈ ತ್ರಿವಿಧವ ಹೊರಗು ಮಾಡಿ ಹಸೆಯ ಹೊಯ್ಸಿ
ಕುರುಹ ಪೂಜಿಸುವರ ಮೆಚ್ಚ ಕೂಡಲ ಸಂಗಮದೇವ ||[7]

ಶಿವಾಚಾರವು ತ್ಯಾಗದ ವಿಚಾರವಾಗಿದೆ. ಸ್ವಾರ್ಥಿಗಳಿಗೂ ಲೋಭಿಗಳಿಗೂ ಶಿವಾಚಾರದಲ್ಲಿ ಎಡೆಯೇ ಇಲ್ಲ.

ತನುವುಂ ಸಂಘದ ಸೇವೆಯೊಳ್ ಮನಮುರ್ಕ ಆತ್ಮಧ್ಯಾನದ
ಭ್ಯಾಸದೊಳ್ ।
ಧನಮುಂ ದಾನಸುಪೂಜೆಯೊಳ್ ದಿನಮನರ್ಹದ್ದರ್ಮ
ಕಾರ್ಯಪ್ರವ ||
ರ್ತನೆಯೊಳ್ ಪರ್ವವನೊಲ್ದು ನೋಂಪಿಗಳೊಳ್
ಇರ್ದಾಯುಷ್ಯಮಂ ಮೋಕ್ಷ ಚಿಂ ।
ತನೆಯೊಳ್ ಕೀರ್ಚುವಸರ್ಗೃಹಸ್ಥನ್ ಅನಘಂ
ರತ್ನಾಕರಾಧೀಶ್ವರಾ ||

ಜೈನ ಶ್ರಾವಕನ ದಿನಚರಿಗೆ ರತ್ನಾಕರ ಮೋಕ್ಷಮಾರ್ಗದರಸಲೇಪನ ವೆಸಗಿರುವನು. ತ್ಯಾಗಿಯಾಗದವನು, ಭಕ್ತನಾಗದವನು ಜೈನನೂ ಆಗಲಾರ, ಶಿವಭಕ್ತನೂ ಆಗಲಾರ.

ನೀನೊಲಿದರೆ ಕೊರಡು ಕೊನರುವುದಯ್ಯ;
ನೀನೊಲಿದರೆ ಬರಡು ಹಯನಹುದಯ್ಯ;
ನೀನೊಲಿದರೆ ವಿಷವೇ ಅಮೃತವಹುದಯ್ಯ;
ನೀನೊಲಿದರೆ ಸಕಲ ಪಡಿಪದಾರ್ಥ
ಇದರಲಿರ್ಪುವು ಕೂಡಲಸಂಗಮದೇವಾ ![9]

ಶಿವಕೃಪೆಗೆ ಪಾತ್ರನಾದವನ ಬದುಕ ಬಂಗಾರವಾಗುವುದು. ಶಿವಕೃಪೆ ಪಡೆದವನ ಕೈಯಲ್ಲಿ ಚಿಂತಾಮಣಿಯೇ ಇದ್ದಂತಾಗುವುದು.

ನಿನ್ನಂಚಿಂತಿಸುತಿರ್ಪವಂಗೆ ಪರದೇಶಂ ತನ್ನದೇಶಂಪರರ್ ।
ತನ್ನಿಷ್ಟರ್ ಪಗೆಗಳ್ ಭಟರ್ ದೊರೆಗಳಾತ್ಮಸ್ನೇಹಿತರ್
ಕಿಚ್ಚುಬಾ ।
ವನ್ನಂ ವ್ಯಾಧಿಸುಖಂ ವಿಷಂ ಸುಧೆ ಯೆನ್ನಿಕ್ಕುಂನೋಡೆ
ನೀನಿರ್ದುಮಾ ।
ನಿನ್ನೊಂದಕ್ಕೆಳಸಿರ್ಪನೇಕೆಯಕಟಾ ರತ್ನಾಕರಾಧೀಶ್ವರಾ ||[10]

ಜಿನಭಕ್ತ ಕಲ್ಪವೃಕ್ಷದ ತಣ್ಣೆಳಲ್ಲಿ ಇದ್ದವನಂತೆ ಬಾಳಿನುದ್ದಕ್ಕೂ ಹಾಯಾಗಿರುವನೆಂದು ರತ್ನಾಕರ ಆಶ್ವಾಸನೆ ಕೊಡುವನು. ಜಿನ ಕೃಪೆಗೂ ಅಂತರವಿದೆಯೆ ?

ವಚನದಲಿ ನಾಮಾಮೃತ ತುಂಬಿ
ನಯನದಲಿ ಮೂರುತಿ ತುಂಬಿ
ಮನದಲಿ ನಿಮ್ಮ ನೆನಹುತುಂಬಿ
ಕಿವಿಯಲಿ ಕೀರುತಿ ತುಂಬಿ
ಕೂಡಲಸಂಗಮದೇವಾ ನಿಮ್ಮ ಚರಣದಲಾನುತುಂಬಿ.[1]

ಪಂಚೇಂದ್ರಿಯಗಳೂ ಶಿವಮಹಿಮೆಯಲ್ಲಿ ಮೀಯಬೇಕು. ಶಿವ ಪ್ರಸಾದದಲ್ಲಿ ಇವು ಓಲಾಡಬೇಕು. ಶಿವಪ್ರಕಾಶದಲ್ಲಿ ಕುಣಿದಾಡ ಬೇಕು. ಶಿವಾನಂದದಲ್ಲಿ ಒಂದಾಗಿ ಹೋಗಬೇಕು.

ನಾಲಗೆಗಾಮದಿಚ್ಛಿತವನಾಮ ರಸಾಯನವೊಂದೆ ನನ್ನ ಚಿ ।
ತ್ತಾಲಯದೊಳ್ ಬೆಳರ್ಪ ಮಣಿದೀಪವಮಾವುದು ನಿನ್ನ
ರೂಪಿ ಪೊ ||
ಯ್ಮಾಲೆಯ ಮೆಯ್ಯ ಭಾರಣೆಯ ಹಿಂಗಿಸುವೌಷಧಿ
ಯಾವುದೆನ್ನ ಚಿ ।
ತ್ಪಾಲಕ ನಿನ್ನಮಾರ್ಗದ ತಪಂಗಳಲಾ ಅಪರಾಜಿತೇಶ್ವರಾ ||[2]

ಶ್ರಾವಕನ ಒಳಗೂ ಹೊರಗೂ ಪರಮಾತ್ಮ ಪ್ರಕಾಶ ಪ್ರವಹಿಸ ಬೇಕು. ಪರಮಾತ್ಮ ಗುಣಗಳು ಹರಿದಾಡಬೇಕು. ಬಾಳು ಜಿನ ಪ್ರಭಾವನೆಗೆ ಮುಡಿಪಾದಾಗ ಇದು ಸಾಧ್ಯವಾಗುವುದು.

ಶರಣನಿದ್ರೆಗೈದರೆ ಜಪಕಾಣಿರೊ,
ಶರಣನೆದ್ದು ಕುಳಿತರೆ ಶಿವರಾತ್ರಿ ಕಾಣಿರೊ,
ಶರಣ ನಡೆದುದೇ ಪಾವನ ಕಾಣಿರೊ,
ಶರಣ ನುಡಿದುದೇ ಪರತತ್ವ ಕಾಣಿರೋ ।
ಕೂಡಲ ಸಂಗನ ಶರಣರ ಕಾಯವೇ ಕೈಲಾಸ ಕಾಣಿರೋ ।[3]

ಶರಣ ಬೇರೆಯಲ್ಲ ಶಿವ ಬೇರೆಯಲ್ಲ. ಶರಣನೆಂದರೆ ಜಂಗಮ ಶಿವಾಲಯ, ಅವರ ಉಸಿರಾಟವೆಲ್ಲ ವಿಶ್ವಾನುಕಂಪವೇ.

ರವಿನಡೆದತ್ತಲೆಲ್ಲ ಬೆಳಗಲ್ಲದೆ ಕತ್ತಲೆಯುಂಟೆಯಾತ್ಮಕ ।
ತ್ವವೆ ಮನದಲ್ಲಿ ನಟ್ಟು ನುಡಿವಾತನ ಮಾತುಗಳೆಲ್ಲ
ಮೋಕ್ಷಮಾ ||
ರ್ಗವೇ ಯಾವನೆಲ್ಲಿನಿಂದನದು ತೀರ್ಥವವಂನಡೆದತ್ತಸರ್ವರು
ತ್ಸವಮಿದು ನಿನ್ನ ಮಾರ್ಗದ ರಹಸ್ಯವಲಾ
ಅಪರಾಜಿತೇಶ್ವರಾ ||[4]

ಜಿನಮುನಿಯ ಮಹಿಮೆಯನ್ನು ರತ್ನಾಕರ ಇಲ್ಲಿ ಬಣ್ಣಿಸಿರುನು. ಬಸವಣ್ಣನವರ ಶರಣ ಮಹಿಮೆಗೂ ರತ್ನಾಕರನ ಜಿನಮುವ-

7 ಬಸವಣ್ಣನವರ ವಚನ 206
9 ಬಸವಣ್ಣನವರ ವಚನ 66
10 ರತ್ನಾಕರಶತಕ 122

1 ಬಸವಣ್ಣನವರ ವಚನ 492
2 ರತ್ನಾಕರ, ಅಪರಾಜಿತಶತಕ 44
3 ಬಸವಣ್ಣನವರ ವಚನ 872
4 ರತ್ನಾಕರ, ಅಪರಾಜಿತ ಶತಕ 121

ನಿಯಮ [illegible]ಗೂ ಅಂತರವೇ ಇಲ್ಲ. ಒಂದಕ್ಕೊಂದು ವ್ಯಾಖ್ಯಾನವಾಗಿ ಪೂರಕವಾಗಿ ನಿಲ್ಲುವವು

ಉಳ್ಳವರು ಶಿವಾಲಯವ ಮಾಡುವರು,
ನಾನೇನ ಮಾಡುವೆ ? ಬಡವನಯ್ಯಾ
ಎನ್ನ ಕಾಲೇ ಕಂಬ, ದೇಹವೇ ದೇಗುಲ
ಶಿರ ಹೊನ್ನಕಳಸವಯ್ಯಾ ಕೂಡಲಸಂಗಮದೇವ ಕೇಳಯ್ಯಾ
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.[5]

ಶಿವಶರಣನ ದೇಹವು ಶಿವಾಲಯ. ಅದರಲ್ಲೂ ಜೀವಂತ ಶಿವಾಲಯ. ಅಳಿವಿಲ್ಲದ ಶಿವಾಲಯ. ಇದು ಜಂಗಮಶಿವಾಲಯ. ಭಕ್ತನನ್ನು ಅರಸಿ ಅರಸಿ ಹೋಗುವ ಶಿವಾಲಯ. ಭಕ್ತನೊಡನೆ ಇದು ನುಡಿವ ಶಿವಾಲಯ !

ತನುಜಿನಗೃಹವೆಂದು ಮನಸಿಂಹಪೀಠವೆಂ ।
ದನುಪಮಾತ್ಮನೆ ಜಿನನೆಂದು ॥
ನೆನಹವೆಲ್ಲವ ಬಿಟ್ಟು ಕಣ್ಮುಚ್ಚಿನೋ
ಳ್ಪಾಗ ಜಿನನಾಥತೋರುವನೊಳಗೆ ॥

ಜೈನ ಸಾಧಕನ ದೇಹವೂ ಜಿನಾಲಯವಾಗಬೇಕು. ಆಗ ಆತ್ಮವು ಜಿನವಾಗುವುದು. ಶಿವಾಲಯ ಮತ್ತು ಜಿನಾಲಯಗಳು ಪ್ರಾಥಮಿಕಾವಸ್ಥೆಗೇ ಹೊರತು ಪ್ರವುಡಾವಸ್ಥೆಗಲ್ಲ.

ಛಲ ಬೇಕು ಶರಣಂಗೆ ಪರಧನವನೊಲ್ಲೆನೆಂಬ
ಛಲ ಬೇಕು ಶರಣಂಗೆ ಪರಸತಿಯನೊಲ್ಲೆನೆಂಬ
ಛಲ ಬೇಕು ಶರಣಂಗೆ ಪರದೈವವನೊಲ್ಲೆನೆಂಬ[6]

ಸಮ್ಯಕ್ತ್ವ ಹಾಗು ಪಂಚಾಣು ವ್ರತಗಳು ಛಲದ ಮಾರ್ಗಗಳೇ ಆಗಿವೆ. ಛಲ ಜಿನಮಾರ್ಗಕ್ಕೂ ಬೇಕು. ಶಿವಮಾರ್ಗಕ್ಕೂ ಬೇಕು. ಈ ಎರಡು ಧರ್ಮಗಳೂ ಅಹಿಂಸಾ ಧರ್ಮಗಳಾಗಿವೆ. ಎರಡು ಧರ್ಮಗಳೂ ವಿಶ್ವಧರ್ಮಗಳೇ.

[5] ಬಸವಣ್ಣನವರ ವಚನ 820

ವೀರಶೈವ ಧರ್ಮ ಮತ್ತು ಬೌದ್ಧಧರ್ಮ

ಲೇಖಕರು :
ಎನ್. ಬಸವಾರಾಧ್ಯ, ಎಂ.ಎ.,
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ
ಮೈಸೂರು

ಭರತಖಂಡದ ಸನಾತನಧರ್ಮಗಳಲ್ಲಿ ಬೌದ್ಧಧರ್ಮ ಪ್ರಮುಖವಾದುದು. ಈ ಧರ್ಮದ ಸಂಸ್ಥಾಪಕ ಗೌತಮ ಬುದ್ಧ. ಆತನು ಪರಿನಿರ್ವಾಣ ಹೊಂದಿ ಇಂದಿಗೆ 2500 ವರ್ಷಗಳು ಸಂದಿದ್ದರೂ ಮಾನವ ಜನಾಂಗದಮೇಲೆ ಆತನ ಪ್ರಭಾವ ಮುದ್ರೆ ಇನ್ನೂ ಮಾಸಿಹೋಗಿಲ್ಲ. ಬುದ್ಧನ ಜೀವನ ಚರಿತ್ರೆ ಚಿರಪರಿಚಿತವಾದುದು. ವಿಶ್ವದ ಮಹಾನುಭಾವರ ಚರಿತ್ರೆಯ ಆಗಸದಲ್ಲಿ ಬುದ್ಧ ಶಾಶ್ವತ ಧ್ರುವತಾರೆಯಾಗಿ ಮಿನುಗುತ್ತಿದ್ದಾನೆ. ಆತನು ಮಹಾಜ್ಞಾನಿಯೆಂದೂ ಧರ್ಮದಾನಿಯೆಂದೂ ಲೋಕವಿಖ್ಯಾತಿಯನ್ನು ಪಡೆದಿದ್ದಾನೆ. ಸತ್ಯ, ಪ್ರೇಮ, ದಯೆಗಳಿಂದ ಕೂಡಿದ ಉತ್ಕೃಷ್ಟ ಧರ್ಮಬೋಧನೆಯಿಂದಲೂ, ಪರಿಶುದ್ಧನಾದ ಜೀವನದಿಂದಲೂ ಲೋಕಪೂಜ್ಯತೆಯನ್ನು ಪಡೆದಿದ್ದಾನೆ. ಬುದ್ಧನು ಬೋಧಿಸಿದ ದಿವ್ಯತತ್ವಗಳು ಪ್ರಗತಿಪರವಾಗಿ ಸರ್ವರಿಗೂ ಸರ್ವಕಾಲದಲ್ಲೂ ಆದರ್ಶಪ್ರಾಯವಾಗಿ ಚಿರನೂತನವಾಗಿ ಬೆಳಗುತ್ತಿವೆ.

ಲೋಕಕಲ್ಯಾಣಕ್ಕಾಗಿ ಜನ್ಮವೆತ್ತಿದ ಪವಾಡಪುರುಷ ಬುದ್ಧ ಜೀವನದ ಜಂಜಾಟದಲ್ಲಿ ತೊಳಲುತ್ತಿದ್ದ ಮಾನವಕೋಟಿಯ ಕಷ್ಟಕಾರ್ಪಣ್ಯಗಳನ್ನು ಕಂಡು ಮರುಗಿ ಅವರ ಆತ್ಮೋದ್ಧಾರಕ್ಕಾಗಿ ತನ್ನ ತನುಮನಧನಗಳನ್ನು ಧಾರೆಯೆರೆದಿದ್ದಾನೆ. ರಾಜ್ಯವನ್ನೂ ಕೈಹಿಡಿದ ಹೆಂಡತಿಯನ್ನೂ ಪ್ರೀತಿಯ ಕುವರನನ್ನೂ ಬಂಧುಬಳಗವನ್ನೂ ತ್ಯಜಿಸಿ ಸೇವಾಪಥವನ್ನು ಕೈಕೊಂಡು ಮಾನವ ಜನಾಂಗದ ಉದ್ಧಾರವನ್ನು ಮಾಡಿದ್ದಾನೆ. ಅಹಿಂಸೆಯೇ ಪರಮಧರ್ಮವೆಂಬುದನ್ನು ಸಾರಿ ತೋರಿದ್ದಾನೆ.

ಬುದ್ಧನ ದೃಷ್ಟಿಯಲ್ಲಿ ಮಾನವತ್ವದ ಕಲ್ಪನೆ ಜನಾಂಗ ಮತ್ತು ರಾಷ್ಟ್ರಗಳ ಎಲ್ಲೆಯನ್ನು ಮೀರಿದ್ದು. ಕಳಂಕರಹಿತನಾಗಿ ಆತ್ಮದೀಪದ ನೆರವಿನಿಂದ ತನ್ನ ಭವಿಷ್ಯವನ್ನು ತಾನೇ ರೂಪಿಸಿಕೊಳ್ಳಬಲ್ಲ ನೂತನ ಮಾದರಿಯ ಸ್ವತಂತ್ರ ಪುರುಷನ ಆವಿರ್ಭಾವವೇ ಬುದ್ಧನ ಗುರಿಯಾಗಿತ್ತು. ಆತನು ಧಾರ್ಮಿಕ ಪರಂಪರೆಯ ಒಬ್ಬ ವಿಶಿಷ್ಟ ಪ್ರತಿನಿಧಿ.

ವೈದಿಕ ಧರ್ಮದಲ್ಲಿ ಪ್ರಚಾರದಲ್ಲಿದ್ದ ಯಜ್ಞಯಾಗಾದಿಗಳನ್ನೂ, ಪ್ರಾಣಿಹಿಂಸೆಯನ್ನೂ ಚಾತುರ್ವರ್ಣ್ಯ ಪದ್ಧತಿಯನ್ನೂ ಖಂಡಿಸಿ ಅದಕ್ಕೆ ಬದಲಾಗಿ ಅಹಿಂಸೆಯ ಹೊಸ ಹಾದಿಯನ್ನು ತೆರೆದು ಸಮತಾವಾದದ ಒಂದು ನಿರ್ದಿಷ್ಟ ನೀತಿಯನ್ನು ಎತ್ತಿ ಹಿಡಿದನು. ಸ್ತ್ರೀಯರಿಗಿದ್ದ ಧಾರ್ಮಿಕ ಪಾರತಂತ್ರ್ಯವನ್ನು ಕಿತ್ತೊಗೆದು ಅವರಿಗೂ ಸಮಾಜದಲ್ಲಿ ಸಮಾನ ಹಕ್ಕುಬಾಧ್ಯತೆಗಳನ್ನು ಒದಗಿಸಿಕೊಟ್ಟನು. ಈ ವಿಶಿಷ್ಟ ತತ್ವಗಳಿಂದ ಕೂಡಿದ್ದ ಬೌದ್ಧಧರ್ಮ ಸರ್ವಜನಾದರಣೀಯವಾಯಿತು. ಅನೇಕ ರಾಜಮಹಾರಾಜರು ಕೂಡ ಈ ಧರ್ಮವನ್ನವಲಂಬಿಸಿ ವಿಶೇಷ ಪ್ರೋತ್ಸಾಹವನ್ನು ಕೊಟ್ಟರು. ಅವರಲ್ಲಿ ಪ್ರಖ್ಯಾತನಾದ ಅಶೋಕ ಚಕ್ರವರ್ತಿ ಬೌದ್ಧ ಧರ್ಮದ ಉದಾತ್ತ ತತ್ವಗಳಿಗೆ ಮಾರುಹೋಗಿ ತನ್ನ ದೇಶದಲ್ಲಿ ಮಾತ್ರವಲ್ಲದೆ ಹೊರದೇಶಗಳಲ್ಲಿಯೂ ಆ ಧರ್ಮವನ್ನು ಪ್ರಚುರಪಡಿಸಿದನು. ತತ್ಫಲವಾಗಿಯೇ ಬೌದ್ಧಧರ್ಮವು ಸಿಂಹಳ, ಬರ್ಮ, ನೇಪಾಳ, ಭೂತಾನ, ಸಿಕ್ಕಿಂ, ಕಾಂಬೋಡಿಯ, ಚೀಣ, ಜಪಾನ್, ಇಂಡೋನೇಷ್ಯಾಗಳಲ್ಲೆಲ್ಲಾ ಹರಡಿಕೊಂಡಿತು.

(ಸ್ವಾಮಿ ವಿವೇಕಾನಂದ, ಮಹಾತ್ಮಗಾಂಧಿ, ಪಂಡಿತ ಜವಹರಲಾಲ್ ನೆಹರು ಇವರೇ ಮೊದಲಾದ ಪ್ರತಿಭಾನ್ವಿತ ವ್ಯಕ್ತಿಗಳು ಬೌದ್ಧಧರ್ಮದ ಉಚ್ಚನೀತಿಯಿಂದ ಉತ್ತೇಜಿತರಾಗಿ ಅದನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸಿದ್ದಾರೆ)

ಬುದ್ಧ ಎಂದರೆ ಜ್ಞಾನಿ, ಪರತತ್ವವನ್ನು ತಿಳಿದವನು ಎಂದರ್ಥ. ಜನಸಾಮಾನ್ಯರಿಗೆ ದುರ್ಲಭವಾದ ಉಚ್ಚಜ್ಞಾನವನ್ನೂ, ಶೀಲವನ್ನೂ ಪಡೆದವನೇ ಬುದ್ಧ. ಎಲ್ಲ ಮಾನವರಂತೆಯೇ ಜನ್ಮತಾಳಿದ ಬುದ್ಧ ತನ್ನ ಅಪಾರವಾದ ತ್ಯಾಗದಿಂದಲೂ ಹಸನಾದ ಬಾಳಿನಿಂದಲೂ ದೇವತ್ವವನ್ನು ಪಡೆದನು. ಮಾನವರ ಉದ್ಧಾರಕ್ಕೂ ಉತ್ಥಾನಕ್ಕೂ ಅಹಿಂಸಾಮಾರ್ಗದ ಹೊಸಬೆಳಕನ್ನು ಬೀರಿ ವಿಶ್ವಪ್ರೇಮವನ್ನು ಹರಡಿದನು.

ಬೌದ್ಧಧರ್ಮದ ಮೂಲತತ್ವಗಳನ್ನು ಸಂಗ್ರಹವಾಗಿ ಹೀಗೆ ಹೇಳಬಹುದು. ಮಾನವ ಜೀವನವು ದುಃಖಮಯವಾದುದು. ಆತ್ಮದ ನಿಜಸ್ವರೂಪವನ್ನು ಅರಿಯದಿರುವುದೇ ಅವಿದ್ಯೆ. ಈ ಅವಿದ್ಯೆಯೇ ಎಲ್ಲ ದುಃಖಗಳಿಗೂ ಮೂಲ. ದೇಹಮನಸ್ಸುಗಳಿಂದ ಭಿನ್ನವಾದ ಆತ್ಮವೆಂಬುದು ಇಲ್ಲ. ಪ್ರತ್ಯೇಕ ಅಸ್ತಿತ್ವವಿಲ್ಲದ ಈ ಆತ್ಮಬಂಧನಕ್ಕೊಳಗಾಗುವುದೇ ಸಮಸ್ತ ದುಃಖಗಳಿಗೂ ಕಾರಣ. ಈ ದುಃಖವನ್ನು ಹೋಗಲಾಡಿಸಿಕೊಳ್ಳುವುದು ಸಾಧ್ಯವಿದೆ. ದುಃಖಕ್ಕೆ ಆತ್ಮದ ಅರಿವಿನ ಅಭಾವವೊಂದೇ ಕಾರಣವಲ್ಲ. ಇದಕ್ಕೆ ಹನ್ನೊಂದು ಕಾರಣಗಳಿವೆ. ಇವುಗಳಲ್ಲಿ ತೃಷ್ಣೆ, ಮರಣ, ಪುನರ್ಜನ್ಮ ಈ ಮೂರು ಮುಖ್ಯವಾದವು. ಅವಿದ್ಯೆಯಿಂದ ತೃಷ್ಣೆ ಹುಟ್ಟುತ್ತದೆ. ಅತೃಪ್ತ ಆಕಾಂಕ್ಷೆಗಳ ಫಲವಾಗಿ ಪುನರ್ಜನ್ಮ ಪ್ರಾಪ್ತವಾಗುತ್ತದೆ. ಈ ಜನನ ಮರಣಗಳಿಗೆ ಒಂದು

ಮುಕ್ತಾಯಹಾಕಲೇಬೇಕು. ಅವಿದ್ಯೆ, ಜನನ, ಮರಣಗಳ ಪರಿಸಮಾಪ್ತಿಯೇ ನಿರ್ವಾಣ. ಈ ನಿರ್ವಾಣವನ್ನು ಪಡೆದವನೇ ಅರ್ಹಂತ ದುಃಖದ ನಿವಾರಣೆಗೆ ಸರಿಯಾದ ಮಾರ್ಗವೆಂದರೆ ಜ್ಞಾನ. ಶೀಲ ಪ್ರಜ್ಞೆ ಸಮಾಧಿ ಮುಂತಾದುವುಗಳ ಅನುಸರಣೆಯೇ ಈ ಮಾರ್ಗ.

ಬುದ್ಧ ಯಾವ ಹೊಸ ವೇದಾಂತವನ್ನೂ ಬೋಧಿಸಲಿಲ್ಲ. ಮಾನವನ ಮುಕ್ತಿಗೆ ಸಹಜವಾಗಿ ಸಾಧಕವಾದ ಧರ್ಮ, ನೀತಿ, ಕರ್ಮ ಜ್ಞಾನಗಳನ್ನು ಬೋಧಿಸಿದನು. ಅನಾವಶ್ಯಕವಾದ ಸಿದ್ಧಾಂತಗಳನ್ನಾಗಲಿ ನಿಷ್ಕಾರಣವಾದ ಜಿಜ್ಞಾಸೆಗಳನ್ನಾಗಲಿ ಬುದ್ಧ ಜನತೆಗೆ ಬೋಧಿಸಲಿಲ್ಲ. ಇಹಪರಗಳ ಎಲ್ಲ ದುಃಖಗಳಿಂದಲೂ ಬಿಡುಗಡೆಹೊಂದಿ ಮುಕ್ತಿಯನ್ನ ರಸುವ ದಿವ್ಯ ಮಾರ್ಗವನ್ನು ತೋರಿದನು.

ಪ್ರಾಪಂಚಿಕ ಸುಖಗಳೆಲ್ಲ ಕಷ್ಟದಲ್ಲಿ ಪರ್ಯವಸಾನವಾಗುತ್ತವೆ. ಜನನ, ಮುಪ್ಪು, ಸಾವು, ಪ್ರೀತಿಪಾತ್ರರ ವಿಯೋಗ ಇವೆಲ್ಲ ದುಃಖ-ಹೇತುಗಳು. ಇವಕ್ಕೆಲ್ಲಾ ಆಶೆಯೇ ಮೂಲ. ಆಶೆ ಅತಿಯಾದಂತೆಲ್ಲ ಜನನ ಮರಣಗಳು ಬೆಂಬತ್ತುತ್ತವೆ. ನಿಷ್ಕಾಮವೇ ಮುಕ್ತಿಮಾರ್ಗ. ಅಜನ್ಯವೂ ಅಜ್ಞೇಯವೂ ಆದ ನಿರ್ದುಷ್ಟ ಆವಸ್ಥೆಯಲ್ಲಿ ಜೀವ ಪುನರ್ಜನ್ಮದ ದುಃಖವನ್ನು ಕಳೆದುಕೊಂಡು ಕರ್ಮಮುಕ್ತನಾಗುತ್ತಾನೆ. ಇದೇ ಪರಮಮಾರ್ಗ ಇದರ ಸಾಧನೆಯೇ ಪರಮ ಸಾಧನೆ. ಕಾಮವನ್ನು ತ್ಯಜಿಸಿ ನಿಷ್ಕಾಮ ಮಾರ್ಗದಲ್ಲಿ ನಡೆದರೆ ಮುಕ್ತಿಯನ್ನು ಪಡೆಯುವುದರಲ್ಲಿ ಸಂದೇಹವಿಲ್ಲ. ಎಣ್ಣೆಯಿಲ್ಲದ ಹಣತೆಯ ದೀವಿಗೆಯು ನಂದುವಂತೆ ಕಾಮ್ಯಕರ್ಮವು ಕರಗಿ ದುಃಖ ನಿವೃತ್ತಿಯಾಗುವುದು. ಆಗ ಹೊಸ ಹೊಸ ಆಶೆಗಳಿಗೆ ಎಡೆಯಿರುವುದಿಲ್ಲ. ಪುನರ್ಜನ್ಮಗಳ ಪಾಶವಿರುವುದಿಲ್ಲ. ಮೃತ್ಯುವಿನ ಬಂಧನವಿರುವುದಿಲ್ಲ ಇದೇ ಬುದ್ಧ ಸಾರಿದ ಭವ್ಯತತ್ತ್ವ.

ಬೌದ್ಧ ಧರ್ಮದಲ್ಲಿ ದುಃಖಾತೀತವೂ ಸಚ್ಚಿದಾನಂದವೂ ಆದ ನಿರ್ವಾಣವನ್ನು ಪಡೆಯಲು ಮಾಡಬೇಕಾದ ಸಾಧನೆಗಳನ್ನು ಎಂಟು ಬಗೆಯಾಗಿ ವಿಂಗಡಿಸಿದ್ದಾನೆ. ಈ ಅಷ್ಟಾಂಗಿಕ ಮಾರ್ಗವು ಸುಗಮವೂ ಜೀವನ್ಮುಕ್ತಿಯನ್ನು ಕೊಡತಕ್ಕ ಸನ್ಮಾರ್ಗವೂ ಆಗಿದೆ ಈ ಅಷ್ಟಾಂಗಿಕ ಮಾರ್ಗಗಳನ್ನು ಸಾಧಿಸಿದವನು ನಿರ್ವಾಣವನ್ನು ಹೊಂದುತ್ತಾನೆ. ಈ ನಿರ್ವಾಣವೇ ಪರಮಸ್ಥಿತಿ. ಅದೇ ಪವಿತ್ರ ಸಾಧನೆ. ಈರ್ಷೆ, ಭ್ರಾಂತಿ, ವ್ಯಾಮೋಹ ಎಲ್ಲವೂ ಕರಗಿ ಮರೆಯಾಗುವುವು. ಈ ಅನುಭವವೇ ಮುಕ್ತಿ. ಈ ಆನಂದವೇ ಮೋಕ್ಷ.

ಹಿಂದೂಗಳು ತಮ್ಮ ಪ್ರಮಾಣಗ್ರಂಥಗಳಾದ ವೇದಗಳನ್ನು ಅಪೌರುಷೇಯವೆಂದು ನಂಬಿರುವಂತೆಯೇ ಬೌದ್ಧರು 'ತ್ರಿಪಿಟಕ' ಅಥವಾ 'ಬುದ್ಧವಚನ'ಗಳಲ್ಲಿನ ಪ್ರತಿಯೊಂದು ವರ್ಣವೂ ಬುದ್ಧದೇವನ ಮುಖದಿಂದ ಬಂದುದೆಂದು ನಂಬಿದ್ದಾರೆ. ಹಿಂದೂಧರ್ಮದಲ್ಲಿ ವೇದಗಳಿಗೆ ಯಾವ ಸ್ಥಾನವಿದೆಯೋ ಅದೇ ಸ್ಥಾನ 'ಪಿಟಕ'ಗಳಿಗೆ ಬೌದ್ಧ ಧರ್ಮದಲ್ಲಿದೆ. ಈ 'ಪಿಟಕ'ಗಳು ಮೂರು. ೧. ವಿನಯಪಿಟಕ ೨. ಸುತ್ತಪಿಟಕ ೩. ಅಭಿದಮ್ಮ ಪಿಟಕ. ವಿನಯಪಿಟಕದಲ್ಲಿ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ನಿಯಮಗಳ ವಿಸ್ತಾರವಾದ ವರ್ಣನೆಯಿದೆ. ಭಿಕ್ಷು ಭಿಕ್ಷುಣಿಯರ ದಿನಚರ್ಯೆ, ಬದುಕಿಗೆ ಅಗತ್ಯವಾದ ನಿಯಮಗಳೆಲ್ಲವೂ ಅದರಲ್ಲಿವೆ. ಸುತ್ತಪಿಟಕ ಬಹುಮುಖ್ಯವಾದದ್ದು. ಬೌದ್ಧ ಧರ್ಮದ ಮುಖ್ಯ ಸಿದ್ಧಾಂತಗಳೆಲ್ಲವೂ ಇದರಲ್ಲಿ ಸ್ಪಷ್ಟವಾಗಿ ವಿವರಿಸಲ್ಪಟ್ಟಿವೆ. ಇನ್ನು ಮೂರನೆಯ ಅಭಿಧಮ್ಮ ಪಿಟಕದಲ್ಲಿ ಧರ್ಮದ ಹಾಗೂ ಕ್ರಿಯಾಕಲಾಪದ ಪಾಂಡಿತ್ಯಪೂರ್ಣವಾದ ವ್ಯಾಖ್ಯಾನವಿದೆ.

ಹಿಂದೂಧರ್ಮದಲ್ಲಿ ಭಗವದ್ಗೀತೆಗೆ ಇರುವ ಸ್ಥಾನವೇ ಬೌದ್ಧ ಧರ್ಮದಲ್ಲಿ ಧಮ್ಮಪದಕ್ಕಿದೆ. ಈ ಧಮ್ಮಪದ ಸುತ್ತಪಿಟಕದ ಬುದ್ಧ ಕನಿಕಾಯದ ಅಂಗ. ಧರ್ಮವನ್ನು ಅರಿತುಕೊಳ್ಳಲು ಈ ಧಮ್ಮಪದ ಒಂದೇ ಸಾಕು. ಮನುಷ್ಯನನ್ನು ಕತ್ತಲೆಯಿಂದ ಬೆಳಕಿಗೆ ಒಯ್ಯುವ ದೀಪ ಧಮ್ಮಪದ.

ಬುದ್ಧ ಆಜೀವ ಪರ್ಯಂತ ಧರ್ಮಬೋಧನೆಯಲ್ಲೇ ತೊಡಗಿದ್ದ. ತನ್ನ ಶಿಷ್ಯರಿಗೂ ಭಿಕ್ಷುಗಳಿಗೂ ಹೀಗೆ ಉಪದೇಶಿಸಿದ್ದಾನೆ. "ಭಿಕ್ಷುಗಳೇ ಸಂಸಾರ ಅನಾದಿ, ಅವಿದ್ಯೆ, ತೃಷ್ಣೆಗಳಿಂದ ಪ್ರೇರಿತವಾಗಿ ಸಂಚಾಲಿತವಾಗಿ ಪ್ರಾಣಿಗಳು ಅಲೆಯುತ್ತಾ ತಿರುಗಾಡುತ್ತವೆ. ಆದಿ ಅಂತ್ಯದ ಅರಿವೇ ಅವಕ್ಕೆ ಆಗುವುದಿಲ್ಲ. ಭವಚಕ್ರದಲ್ಲಿ ಸಿಕ್ಕಿಬಿದ್ದ ಪ್ರಾಣ ಅನಾದಿಕಾಲದಿಂದ ಮತ್ತೆ ಮತ್ತೆ ಹುಟ್ಟಿ ಸಾಯುತ್ತ ಬರುತ್ತಿದೆ. ಪ್ರಿಯವಿಯೋಗ ಅಪ್ರಿಯಸಂಯೋಗಗಳ ಬೇಗೆಯಿಂದ ಅತ್ತು ಅತ್ತು ಕಣ್ಣೀರು ಬಿಡುತ್ತಿದೆ. ಈ ತೀವ್ರ ದುಃಖಕಾರಕವಾದ ಸಂಸ್ಕಾರಗಳಿಂದ ಬಿಡುಗಡೆ ಹೊಂದಿ ವೈರಾಗ್ಯ ಗಳಿಸಿ ಮುಕ್ತಿಯನ್ನು ಪಡೆಯಿರಿ.

"ಜಿಗಚ್ಛಾ ಪರಮಾರೋಗಾ, ಸಂಖಾರಾ ಪರಮಾ ದುಃಖಾ
ಏವಂಜ್ಞತ್ವಾ ಯಥಾಭೂತಂ ನಿಬ್ಬಾನಂ ಪರಮಂ ಸುಖಂ"

ರೋಗಕ್ಕೆ ಮೂಲ ಜಿಗೃಕ್ಷೆ, ಬಯಕೆ, ತೃಷ್ಣೆ. ಎಲ್ಲ ದುಃಖಕ್ಕೂ ಮೂಲ ಸಂಸ್ಕಾರ— ಈ ತತ್ವವನ್ನು ಅರಿತುಕೊಂಡು ತೃಷ್ಣೆ ಸಂಸ್ಕಾರಗಳನ್ನು ನಾಶಮಾಡಿದರೆ ನಿರ್ವಾಣ ಲಭಿಸುತ್ತದೆ. ಅಷ್ಟಾಂಗ ಮಾರ್ಗದಿಂದ ನಿರ್ವಾಣ ಪಡೆಯುವುದು, ತೃಷ್ಣೆಯಿಂದ ಬಿಡುಗಡೆ ಹೊಂದುವುದು, ವಾಸನಾಮುಕ್ತಿ ಪಡೆಯುವುದು ನಿಮ್ಮ ನಿಮ್ಮ ಕೈಯಲ್ಲೇ ಇದೆ. ಇದರ ಸಹಾಯದಿಂದ ಯಾರು ಬೇಕಾದರೂ ನಿರ್ವಾಣವನ್ನು ಹೊಂದಬಹುದು. ಭಿಕ್ಷುಗಳೇ, ನೀವು ಆತ್ಮದೀಪ ಆಗಿ ವಿಹರಿಸಿ; ನಿಮ್ಮನ್ನು ನೀವೇ ಶರಣುಹೋಗಿ. ಯಾರ ನೆರವನ್ನು ಅಪೇಕ್ಷಿಸಬೇಡಿ. ಧರ್ಮವನ್ನು ಮಾತ್ರ ನಿಮ್ಮ ದೀಪವನ್ನಾಗಿ ಮಾಡಿಕೊಳ್ಳಿ. ಧರ್ಮಕ್ಕೆ ಮಾತ್ರ ಶರಣು ಹೋಗಿ.

ಅತ್ತ ದೀಪಾ ಅತ್ತ ಸರಣಾ ಅನನ್ನ ಸರಣಾ
ಧರ್ಮದೀಪಾ ಧರ್ಮ ಸರಣಾ ಹೋತ

ಈವರೆಗೆ ಬೌದ್ಧಧರ್ಮದ ಸ್ಥೂಲ ಚಿತ್ರಣವನ್ನು ಕೊಡಲಾಗಿದೆ. ಇನ್ನು ಮುಂದೆ ಬುದ್ಧ ಮತ್ತು ಬಸವೇಶ್ವರರ ಒಂದು ಸಾಮಾನ್ಯ ಹೋಲಿಕೆಯನ್ನೂ 'ಅವರು ವಿಶ್ವಕ್ಕೆ ಸಾರಿದ ಸಂದೇಶವನ್ನೂ ಸಂಕ್ಷೇಪವಾಗಿ ನಿರೂಪಿಸಬಯಸುವೆ.

ಬುದ್ಧ ಬಸವೇಶ್ವರರು ಲೋಕಕಲ್ಯಾಣಾರ್ಥವಾಗಿ ಜನ್ಮತಾಳಿದ ವಿಭೂತಿ ಪುರುಷರು. ಇವರಿಬ್ಬರ ಜೀವನ, ಸಾಧನೆ ಬೋಧನೆಗಳಲ್ಲಿ ಹಲವಾರು ಸಾದೃಶ್ಯಗಳಿವೆ. ಯಜ್ಞ ಯಾಗಾದಿಗಳಲ್ಲಿ ನಡೆಯುತ್ತಿದ್ದ ಕರ್ಮಕಾಂಡ, ಮೂರ್ತಿಪೂಜೆ, ಅಸ್ಪೃಶ್ಯತೆ ಇವೇ ಮೊದಲಾದ ಅಂದಿನ ಪದ್ಧತಿಗಳನ್ನು ಇಬ್ಬರೂ ಪ್ರತಿಭಟಿಸಿದ್ದಾರೆ. ಬುದ್ಧನ ಕಾಲದಲ್ಲಿದ್ದ ಸಾಮಾಜಿಕ ಪರಿಸ್ಥಿತಿಯೇ ಬಸವೇಶ್ವರನ ಕಾಲದಲ್ಲೂ ಇತ್ತು. ಸ್ವತಂತ್ರವಾದ ವಿಚಾರ

ದೃಷ್ಟಿಯಿಂದ ಕೂಡಿದ್ದ ಇಬ್ಬರ ದೃಷ್ಟಿಯೂ ಒಂದೇ ತೆರನಾಗಿತ್ತು. ಈ ಇಬ್ಬರು ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಅನ್ಯಾಯ ಅತ್ಯಾಚಾರಗಳನ್ನು ಕಂಡು ಮನನೊಂದಿದ್ದಾರೆ. ಅಧಿಕಾರ ದರ್ಪಗಳಿಂದ ಜನತೆಯನ್ನು ಅಂಕೆಯಲ್ಲಿಟ್ಟುಕೊಳ್ಳುವುದಕ್ಕೆ ಬದಲಾಗಿ ದಯೆ, ಕರುಣೆ, ಪ್ರೇಮಗಳಿಂದ ಜನ ಮನಸನ್ನು ಒಲಿಸಿಕೊಳ್ಳುವ ಮಾರ್ಗವನ್ನು ತೋರಿದ್ದಾರೆ. ವ್ಯಕ್ತಿಸ್ವಾತಂತ್ರ್ಯಕ್ಕೆ ಇಬ್ಬರೂ ಮಹತ್ವದ ಸ್ಥಾನವನ್ನು ಕೊಟ್ಟಿದ್ದಾರೆ. ಬಸವಣ್ಣನವರಾದರೋ ಮರ್ತ್ಯ ಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ'ಎಂಬುದನ್ನು ದೃಢವಾಗಿ ನಂಬಿದ್ದರು. ಧಾರ್ಮಿಕ ಜಾಗೃತಿಯನ್ನು ಸಾಮಾಜಿಕ ಸುಧಾರಣೆಯನ್ನೂ ಉಂಟುಮಾಡುವಲ್ಲಿ ಇವರಿಬ್ಬರೂ ಅವಿಶ್ರಾಂತವಾಗಿ ಶ್ರಮಿಸಿದ್ದಾರೆ.

ಮನಸ್ಸೇ ಎಲ್ಲ ಪ್ರವೃತ್ತಿಗಳಿಗೂ ಮೂಲ ಎಂಬುದನ್ನು ಬುದ್ಧ ಹೀಗೆ ಹೇಳಿದ್ದಾನೆ.

ಮನೋ ಪುಬ್ಬಂಗಮಾ ಧಮ್ಮಾಮನೋ ಸೇಠ್ಠಾಮನೋಮಯಾ
ಮನಸಾ ಚೇ ಪ್ರಸನ್ನೇನ ಭಾಸ್ಸತಿ ವಾ ಕರೋತಿ ವಾ
ತತೋ ನಂ ಸುಖಮನ್ವೇತಿ ಛಾಯಾ ವ ಅನಪಾಯಿನೀ

ಲೋಕದ ಎಲ್ಲ ಪ್ರವೃತ್ತಿಗಳಿಗೂ ಮನಸ್ಸೇ ಮೂಲ. ಈ ಮನಸ್ಸಿನಲ್ಲೇ ಎಲ್ಲ ಹುಟ್ಟುತ್ತದೆ. ಶುದ್ಧಮನಸ್ಸಿನಿಂದ ನಡೆದರೆ ಅಥವಾ ನುಡಿದರೆ ಸುಖ ಬೆನ್ನುಹತ್ತಿ ಬರುತ್ತದೆ. ಅದು ಹೇಗೆಂದರೆ ನೆರಳು ಮನುಷ್ಯನನ್ನು ಹಿಂಬಾಲಿಸಿ ಬರುವಂತೆ. ಇದೇ ಅಭಿಪ್ರಾಯವನ್ನು ಬಸವಣ್ಣನವರು ಹೀಗೆ ನಿರೂಪಿಸಿದ್ದಾರೆ.

ಮರನನೇರಿದ ಮರ್ಕಟನಂತೆ
ಹಲವು ಕೊಂಬೆಗೆ ಹಾಯುತಲಿದೆ;
ಬೆಂದ ಮನವ ನಾನೆಂತು ನಂಬುವೆನಯ್ಯಾ
ಎಂತು ನಚ್ಚುವೆನಯ್ಯಾ
"ಎನ್ನ ನಡೆಯೊಂದು ಪರಿ; ಎನ್ನ ನುಡಿಯೊಂದು ಪರಿ;
ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯಾ"
ನುಡಿಗೆ ತಕ್ಕ ನಡೆಯ ಕಂಡೊಡೆ
ಕೂಡಲ ಸಂಗಮದೇವನೊಳಗಿರ್ಪನಯ್ಯಾ

ತಾನು ಮಾಡಿದ ಪಾಪ ತನಗೇ ಅಂಟಿಕೊಳ್ಳುತ್ತದೆ. ಪಾಪವನ್ನು ಮಾಡದಿದ್ದರೆ ಮನುಷ್ಯ ಶುದ್ಧನಾಗಿರುತ್ತಾನೆ. ಈ ಶುದ್ಧಾಶುದ್ಧತೆ ತನ್ನನ್ನೇ ಅವಲಂಬಿಸಿರುತ್ತದೆ. ಒಬ್ಬರು ಮತ್ತೊಬ್ಬರನ್ನು ಎಂದಿಗೂ ಶುದ್ಧಮಾಡಲಾರರು.

ಅತ್ತನಾ ವಕತಂ ಪಾಪಂ ಅತ್ತಾನಾ ಸಂಕಿಲಿಸ್ಸತಿ ।
ಅತ್ತಾನಾ ಅಕತಂ ಪಾಪಂ ಅತ್ತನಾವ ವಿಸುಜ್ಝತಿ
ಸುದ್ಧೀ ಅಸುದ್ಧೀ ಪಚ್ಚತ್ತಂ ನಾ ಇಗೋ ಅ ಇಞ್ಞಂ
ವಿಸೋಧಯೇ ॥

ಬಸವಣ್ಣನವರು :
" ಮುನ್ನ ಮಾಡಿದ ಪಾಪ ಬೆನ್ನಬಿಡವನ್ನಕ್ಕ
ಇನ್ನು ಬಯಸಿದರುಂಟೆ
ಭಕ್ತಿಯುಳ್ಳವರ ನೋಡಿ ನೋಡಿ ಬಯಸಿದರುಂಟೆ"

'ಪುಣ್ಯ ಪಾಪವೆಂಬುವು ತಮ್ಮಿಷ್ಟಕಂಡಿರೇ'
ಎಂದು ಮುಂತಾಗಿ ಹೇಳಿದ್ದಾರೆ.

ಅತ್ತಾನಂ ಚೇ ತಥಾ ತಯಿರಾ ಯಥ ಇಞ್ಞಾಮನು ಸಾಸತಿ ।
ಸುದಂತೋ ವತ ದಮೇಥ ಅತ್ತಾಹಿ ಕಿರದುದ್ದಮೋ ॥

ಮನುಷ್ಯ ಬೇರೊಬ್ಬರಿಗೆ ಹೇಗಿರಬೇಕೆಂಬುದನ್ನು ಉಪದೇಶಿಸುವುದಕ್ಕೆ ಮೊದಲು ತಾನು ಆ ರೀತಿ ಆಗಬೇಕು. ತನ್ನ ಇಂದ್ರಿಯಗಳನ್ನು ಸ್ವಾಧೀನಪಡಿಸಿಕೊಳ್ಳಬೇಕು. ಆ ಮೇಲೆ ಬೇರೆಯವರಿಗೆ ಉಪದೇಶ ಮಾಡಬೇಕು. ವಾಸ್ತವವಾಗಿ ತನ್ನನ್ನು ತಾನು ದಮನಮಾಡಿಕೊಳ್ಳುವುದು ದುಸ್ತರವಾದುದು, ಎಂದು ಬುದ್ಧ ಹೇಳಿದರೆ,

ಬಸವಣ್ಣನವರು :
"ಲೋಕದ ಡೊಂಕ ನೀವೇಕೆ ತಿದ್ದುವಿರಿ ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ.
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
ಕೂಡಲಸಂಗಮದೇವ" ಎಂದಿದ್ದಾರೆ.

ಯೋ ಪಾಣಮತಿ ಪಾತೇತಿ ಮುಸಾವಾದಂ ಚ ಭಾಸತಿ ।
ಲೋಕೇ ಅದಿನ್ನಂ ಆದಿಯತಿ ಪರದಾರಂ ಚ ಗಚ್ಛತಿ ॥
ಸುರಾ ಮೇರಯಪಾನಂ ಚ ಯೋ ನರೋ ಅನುಯುಂಜತಿ ।
ಇದೇವ ಮೇಸೋ ಲೋಕಸ್ಮಿಂ ಮೂಲಂ ಖಣತಿ ಅತ್ತನೋ

ಪ್ರಾಣಿಹಿಂಸೆ ಮಾಡುವವನು, ಸುಳ್ಳು ಹೇಳುವವನು, ಅನ್ಯರ ಪದಾರ್ಥಗಳನ್ನು ಅಪ್ಪಣೆಯಿಲ್ಲದೆ ತೆಗೆದುಕೊಳ್ಳುವವನು, ಪರಸ್ತ್ರೀ ಗಮನ ಮಾಡುವವನು, ಹೆಂಡ ಕುಡಿಯುವವನು – ಇವರು ಈ ಲೋಕದಲ್ಲೇ ತಮ್ಮ ಮೂಲವನ್ನು ತೋಡುತ್ತಾರೆ.
ಇದೇ ಅಭಿಪ್ರಾಯವನ್ನು ಬಸವಣ್ಣನವರು :

"ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ;
ಮುನಿಯಬೇಡ ಅನ್ಯರಿಗೆ ಅಸಹ್ಯಪಡಬೇಡ.
ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ"
ಎಂದು ಹೇಳಿದ್ದಾರೆ.

ಈ ಮೇಲೆ ಉದಾಹರಿಸಿದ ಸೂಕ್ತಿಗಳು ಕೇವಲ ದಿಗ್ದರ್ಶನಾರ್ಥಕವಾಗಿ, ಈ ತೆರನ ಹಲವಾರು ಸಾದೃಶ್ಯ ಸೂಕ್ತಿಗಳು ಇವರಿಬ್ಬರ ಬೋಧನೆಗಳಲ್ಲಿ ಕಂಡುಬರುತ್ತವೆ. ಲೋಕದಲ್ಲಿ ಇಂದು ಎಲ್ಲೆಲ್ಲೂ ಆವರಿಸಿರುವ ಅಜ್ಞಾನ, ಅಂಧಕಾರ, ಅನೀತಿ, ಕಷ್ಟಕಾರ್ಪಣ್ಯಗಳ ನಿವಾರಣೆಗೆ, ಮತ್ತೊಮ್ಮೆ ಬುದ್ಧ ಬಸವೇಶ್ವರರ ಅವತಾರವಾಗಬೇಕಾದೀತು.

ಬುದ್ಧ ಬಸವೇಶ್ವರರ ಸಂದೇಶ ಏಕಪ್ರಕಾರವಾದುದಾದರೂ ಇವರಿಬ್ಬರ ಸಾಧನಮಾರ್ಗದಲ್ಲಿ ಭೇದವಿದೆ. ಬೌದ್ಧಧರ್ಮದಲ್ಲಿ ಭಿಕ್ಷಾವೃತ್ತಿಗೆ ಮನ್ನಣೆಯಿದೆ. ಆದರೆ ಬಸವೇಶ್ವರರ ಬೋಧೆಯಲ್ಲಿ ಕಾಯಕಕ್ಕೆ ಪ್ರಮುಖ ಪಾತ್ರವನ್ನು ಕೊಡಲಾಗಿದೆ. ಸಂಸಾರದಲ್ಲಿದ್ದುಕೊಂಡೇ ಜೀವನೋಪಾಯಕ್ಕಾಗಿ ತಮ್ಮ ತಮ್ಮ ಕಾಯಕಗಳನ್ನು

ಕೈಕೊಂಡು, ಸಮಾಜಕ್ಕೆ ಹೊರೆಯಾಗದಂತೆ ಭಕ್ತಿಯಿಂದ ಶಿವನ ಸಾಕ್ಷಾತ್ಕಾರವನ್ನು ಮಾಡಿಕೊಳ್ಳಬೇಕು. ಇದು ಬಹುಮುಖ್ಯವಾದ ಅಂಶ.

ಬುದ್ಧನ ನಿರ್ವಾಣದ ತರುವಾಯ ಬೌದ್ಧಧರ್ಮ ಕವಲುಗಳಾಗಿ ಒಡೆಯಿತು. ಅವುಗಳಲ್ಲಿ ಮುಖ್ಯವಾದುವು ಹೀನಯಾನ ಮತ್ತು ಮಹಾಯಾನ ಪಂಥಗಳು. ಶುಭ ಅಶುಭವಾಸನಾ ಕರ್ಮಗಳೆರಡೂ ಹೇಯವಾದುವು. ಇವೆರಡನ್ನೂ ತ್ಯಜಿಸಬೇಕು ಎಂಬುದು ಹೀನಯಾನದ ಧ್ಯೇಯ. ಈ ಹೀನಯಾನದಲ್ಲಿ ಅಷ್ಟಾಂಗಮಾರ್ಗ ಮುಖ್ಯ.

ಅಶುಭವಾಸನೆಗಳನ್ನು ಬಿಟ್ಟು ಶುಭವಾಸನೆಗಳನ್ನು ಬೆಳಸಿಕೊಳ್ಳಬೇಕೆಂಬುದು ಮಹಾಯಾನದ ಧ್ಯೇಯ. ಈ ಧರ್ಮದ ಆಂತರಿಕ ಪ್ರಭೇದಗಳೇನೇ ಇರಲಿ. ಅದರ ಮೂಲತತ್ವಗಳು ಸಾರ್ವಕಾಲಿಕವಾದುವು. ಈ ಧರ್ಮದ ಆಚಾರ ವಿಚಾರಗಳು ಮತ್ತೊಮ್ಮೆ ನಾಡಿನಲ್ಲಿ ಪ್ರಚಾರವಾಗಬೇಕಾಗಿವೆ. ಈ ಧರ್ಮದ ಬೀಜಮಂತ್ರವನ್ನು ಪಠಿಸಿ ಈ ಮಾತುಗಳನ್ನು ಮುಗಿಸಬಹುದು.

ಬುದ್ಧಂ ಸರಣಂ ಗಚ್ಛಾಮಿ
ಧಮ್ಮಂ ಸರಣಂ ಗಚ್ಛಾಮಿ
ಸಂಘಂ ಸರಣಂ ಗಚ್ಛಾಮಿ

ಧರ್ಮ:- ವೀರಶೈವ ಮತ್ತು ಕ್ರೈಸ್ತ

ಪ್ರೊ: ವಿಲ್ಯಂ ಮಾಡ್ತ, ಎಂ.ಎ.,
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಪ್ರಗತಿಯತ್ತ ಧಾವಿಸುತ್ತಿರುವ ಇಂದಿನ ಮಾನವನಿಗೆ ವಿಜ್ಞಾನ, ಸಂಸ್ಕೃತಿ, ತತ್ವ, ಧರ್ಮ ಮೊದಲಾದವುಗಳ ಬಗೆಗೆ, ಅಂತೆಯೇ ಅವುಗಳೊಳಗಿನ ಪರಸ್ಪರ ಕಾರ್ಯಕಾರಣ ಸಂಬಂಧಗಳ ಕುರಿತು ಸಾವಧಾನದಿಂದ ವಿವೇಚಿಸಲು ಸಮಯದ ಅವಕಾಶವೂ ಮನೋಸ್ಥೈರ್ಯದ ಬಲವೂ ಸಿಗದಿರುವುದು ವಿಷಾದನೀಯ ಸಂಗತಿ. ಈ ಕೊರತೆಯಿಂದಾಗಿ ಆತನ ಮೌಲ್ಯಪ್ರಜ್ಞೆ ಅಳಿದುಹೋಗಿ, ಸಮನ್ವಯ ದೃಷ್ಟಿ ಕುಸಿದುಹೋಗಿ ಜೀವನದಲ್ಲಿಯ ಸಚ್ಚಿದಾನಂದನನ್ನೇ ಕಳೆದುಕೊಂಡು "ದೇವನೆಲ್ಲಿ?" ಎಂಬ ಹುಚ್ಚು ಪ್ರಶ್ನೆಯನ್ನು ಆತ ಬಿಚ್ಚುಮನಸ್ಸಿನಿಂದ ಕೇಳತೊಡಗಿದ್ದಾನೆ; ದೇವ ಸತ್ತನೆಂದು ಸಾರಿ ಸಾರಿ ಮಾಹವೀರತೆಗೆಯೇ ತಾನು ಸತ್ತು ಶುದ್ಧ ಪಶುವಿನಂತೆ ಬಾಳುತ್ತಾನೆ. ಇಂತಹ ವ್ಯಕ್ತಿ ಸ್ಥಿತಪ್ರಜ್ಞನಾಗಬಲ್ಲನೆ? ಇಂದು ಜೀವಂತ ಬಾಳಿಕೊಂಡಿರುವ ಧರ್ಮಗಳು ಈ ಪ್ರಶ್ನೆಗೆ ಉತ್ತರ ಕೊಡಲೇಬೇಕು. ಇಲ್ಲವಾದರೆ ಅವು ಜೀವಂತ ಇದ್ದೂ ಸತ್ತುಬಿದ್ದಂತೆ!

ಇಂದಿನ ಧರ್ಮಗಳು ನವನಾಗರಿಕತೆಯ ಈ ಮೂಲಭೂತ ಪ್ರಶ್ನೆಗೆ ಶೀಘ್ರವಾಗವೆ ಸಮರ್ಪಕ ಉತ್ತರಕೊಡುವ ಹಂಬಲವನ್ನು ತೋರಿಸುತ್ತವೆಂಬುದು ಸಂತೋಷದಿಂದ ಒಪ್ಪತಕ್ಕ ವಿಷಯ. ಈ ಹೊಣೆಗಾರಿಕೆಯ ಕೆಲಸ ಸುಸೂತ್ರವಾಗಿ ನೆರವೇರಿಸಲು ಸರ್ವಧರ್ಮಗಳು ಒಗ್ಗಟ್ಟಿನಿಂದ ದುಡಿಯುವುದು ಅಗತ್ಯವೆಂಬುದೂ ಅವುಗಳಿಗೆ ಮನವರಿಕೆಯಾಗಿದೆ. ಈ ದಿಸೆಯಲ್ಲಿ ಕ್ರೈಸ್ತಧರ್ಮದ ದ್ವಿತೀಯ ವ್ಯಾಟಿಕನ್ ಮಹಾಸಭೆ ಸುದೀರ್ಘ ಚರ್ಚೆ ನಡೆಯಿಸಿ ಕಾರ್ಯಪ್ರವೃತ್ತವಾಗಿದೆಯಲ್ಲದೆ ಅನೇಕ ಇತರ ಧರ್ಮಗಳೂ ಸರ್ವಧರ್ಮ ಸಮ್ಮೇಳನಗಳನ್ನು ನಡೆಯಿಸಿ ಮಾನವನ ಮಾನವೀಕರಣ ದೈವೀಕರಣಗಳಿಗೋಸ್ಕರ ಸಹಕಾರ ಭಾವದಿಂದ ದುಡಿಯಲು ಅನುವಾಗಿವೆ. ಆದರೂ ರಭಸದಿಂದ ಆಗಬೇಕಾದ ಈ ಕಾರ್ಯ ಬಹುನಿಧಾನದಲ್ಲಿ ಆಗುವುದು ಶೋಚನೀಯವೇ ಸರಿ.

ಇಂದು ಇರುವುದೆಂದರೆ ಕೂಡಿರುವುದು; ತಿಳಿದುಕೊಳ್ಳುವುದೆಂದರೆ ಪರಸ್ಪರ ಸಂಬಂಧಗಳನ್ನು ತಿಳಿದುಕೊಳ್ಳುವುದು. ಈ ನೆಲೆಯಲ್ಲಿಯೇ ಜೀವನದ, ಧರ್ಮದ ವಾಸ್ತವಿಕಾರ್ಥ ನಮಗೆ ದೊರಕುವುದು ಈ ಹಿನ್ನೆಲೆಯಲ್ಲಿಯೇ ಧರ್ಮ ಧರ್ಮಗಳೊಳಗೆ ಸಂವಾದ ನಡೆಯಬೇಕು; ಅವುಗಳ ತುಲನಾತ್ಮಕ ಅಧ್ಯಯನ ಅಧ್ಯಾಪನಗಳು ನಡೆಯಬೇಕು. ಈ ಕಾರ್ಯ ನಡೆಯದಿದ್ದಲ್ಲಿ ಪ್ರತಿಯೊಂದು ಧರ್ಮವೂ ತನ್ನ ತನ್ನ ರಾಜ್ಯದಲ್ಲಿ ಚಕ್ರವರ್ತಿಯಾಗಿ ನಿಂತು ಹತ್ತಬೇಕಾದ ಮಾನವನಿಗೆ ಸೋಪಾನವಾಗಿ ನಿಲ್ಲದೆ ಒಂದು ಅತ್ಯಂತ ನಿರುಪಯುಕ್ತ ಅರ್ಥಹೀನ ವಸ್ತುವಾಗಿ ಉಳಿಯುವುದು. ನಡೆಯಬೇಕಾದ ತೌಲನಿಕ ಅಧ್ಯಯನದಲ್ಲಿ ಪ್ರಸ್ತುತ ಲೇಖ ಒಂದು ಪುಟ್ಟ ಹೆಜ್ಜೆ.

ಧರ್ಮ : ಆಧುನಿಕ ತತ್ವಜ್ಞಾನಿಗಳು ಧರ್ಮದ ಕಲ್ಪನೆಯನ್ನು ಕಂಡುಹಿಡಿಯಲು ಅಷ್ಟವಿಧಗಳನ್ನು ಗುರುತಿಸಿದ್ದಾರೆ[1] ಅವುಗಳಲ್ಲಿ ನಿಷ್ಪತ್ತಿವಿಧಾನ (Etymological method)ವೇ ಬಹು ಪ್ರಚಲಿತವಾಗಿದೆ. ಇದರ ಪ್ರಕಾರ ಧರ್ಮವೆಂಬ ಪದ 'ಧೃ'[2] ಎಂಬ ಮೂಲಪ್ರಕೃತಿ (Root) ಯಿಂದ ಬಂದು ಸ್ಥಿರತೆ (Steadfastres) ದೃಢತೆ (Bindingnes) ಋಜುಮಾರ್ಗ (Righte ousnes), ಸ್ವತ್ತು (Property) ಮೊದಲಾಗಿ ತತ್ವಶಾಸ್ತ್ರದಲ್ಲಿ ಬಳಕೆಯಲ್ಲಿದೆ.[3]

ಧರ್ಮದ ನಿಷ್ಪತ್ತಿಯಾರ್ಥ ಸಂಸ್ಕೃತಿ ಸಂಸ್ಕೃತಿಗಳಲ್ಲಿ ಭಿನ್ನತೆಯನ್ನು ಪಡೆಯಬಹುದಾದುದರಿಂದ ಅದು ಮೂಲತಃ ಸಾಪೇಕ್ಷಾರ್ಥಕ (Relative) ಬೇರೆ ಬೇರೆ ಧರ್ಮಗಳಲ್ಲಿ ಯಾವಾವ ರೀತಿಯಲ್ಲಿ ಧರ್ಮ ವ್ಯಕ್ತಗೊಂಡಿದೆ ಎಂಬುದನ್ನು ಗುರುತಿಸಿದರೆ ಅದರ ಸ್ಥೂಲರೂಪ ನಮಗೆ ಸಿಗುವುದಲ್ಲದೆ ಅದರ ವಾಸ್ತವಿಕ ವಾಖ್ಯೆ (Existential-difinition) ಯು ನಮಗೆ ದೊರಕುವುದು.

ಲಿಂಗ, ಅಂಗ ಮತ್ತು ಲಿಂಗಾಂಗ ಸಂಬಂಧಗಳ ಬಗೆಗೆ ಪ್ರತಿಯೊಂದು ಧರ್ಮದಲ್ಲಿ ಕೂಡಾ ಇತ್ಯರ್ಥಕ (Positive) ನೇತ್ಯರ್ಥಕ ತತ್ವ, ಸಿದ್ಧಾಂತಗಳ ಮತ್ತು ಅವುಗಳ ವಾಖ್ಯಾನ ವಿವರಗಳ ಸ್ಥೂಲ ರೂಪದ ಚೌಕಟ್ಟೊಂದು ಕಂಡುಬರುತ್ತದೆ.

ಪ್ರಸ್ತುತದಲ್ಲಿ ಇದನ್ನೇ ಧರ್ಮವೆಂದು ವಾಸ್ತವಿಕವಾಗಿಟ್ಟುಕೊಂಡು ಅದು ವೀರಶೈವ ಮತ್ತು ಕ್ರೈಸ್ತಧರ್ಮಗಳಲ್ಲಿ ಹೇಗೆ ಕಂಡುಬರುತ್ತದೆಂಬುದನ್ನು ತೋರಿಸಿ ಕೊನೆಯದಾಗಿ ಅವುಗಳಲ್ಲಿಯ ಹೋಲಿಕೆಯನ್ನು ಗುರುತಿಸಿದ್ದೇನೆ. ಧರ್ಮಕ್ಕೆ ತತ್ವ, ಅನುಭಾವ, ವಿಧಿಕರ್ಮ, ಪುರಾಣ, ನೀತಿ ಮೊದಲಾದ ಅನೇಕ ಮುಖ[4]ಗಳಿದ್ದರೂ ಪ್ರಸ್ತುತದಲ್ಲಿ ಅದರ ತತ್ವ (Doctrine) ವಿವೇಚನೆಗೆ ಈ ಅಧ್ಯಯನವನ್ನು ಸೀಮಿತಗೊಳಿಸಿದ್ದೇನೆ.

ವೀರಶೈವಧರ್ಮ : ಈ ಭಾಗದಲ್ಲಿ ವೀರಶೈವಧರ್ಮದೊಳಗೆ ಲಿಂಗ, ಅಂಗ ಮತ್ತು ಅವುಗಳೊಳಗಿನ ಸಂಬಂಧ ಕುರಿತು ಇರುವ ತತ್ವಗಳನ್ನು ಮಂಡಿಸಿದ್ದೇನೆ. ಮಾತ್ರವಲ್ಲದೆ ತೌಲನಿಕ ಅಧ್ಯಯನದ ಬೆಳಕಿನಲ್ಲಿ ಅವಶ್ಯಕಂಡಲ್ಲಿ ನನ್ನ ತಿಳಿವಳಿಕೆಯ ಪ್ರಕಾರ ವ್ಯಾಖ್ಯಾನಿಸಿದ್ದೇನೆ. ಇಂತಹ ವ್ಯಾಖ್ಯಾನ ಧರ್ಮಗಳ ತೌಲನಿಕ ಅಧ್ಯಯನದಲ್ಲಿ ಅನಿವಾರ್ಯ ಮಾತ್ರವಲ್ಲ ಉಪಯುಕ್ತವಾಗಿಯೇ ಕಂಡುಬರಬಹುದು.

ವೀರಶೈವ ಅನುಭಾವವನ್ನು ಶಕ್ತಿ ವಿಶಿಷ್ಟಾದ್ವೈತವೆಂದು ಕರೆಯುತ್ತಾರೆ: "ಶಕ್ತಿಶ್ಚ ಶಕ್ತಿಶ್ಚ ಶಕ್ತೀತಾಭ್ಯಾಂ ವಿಶಿಷ್ಟೌ ಜೀವೇಶೌ ತಯೋಃ

…ದ್ವೈತಂ ಶಕ್ತಿ ವಿಶಿಷ್ಟಾದ್ವೈತಂ" ಎಂಬುದೇ ಶಕ್ತಿವಿಶಿಷ್ಟಾದ್ವೈತದ ನಿಷ್ಪತ್ತಿ.[5]

ಪರಶಿವ : ನಿಷ್ಕಲ – ಸಕಲ ಸ್ಥಲ ಶಕ್ತಿವಿಶಿಷ್ಟಾದ್ವೈತದ ಪ್ರಕಾರ ಅನಾದಿಯಾದ ಪರಬ್ರಹ್ಮವೇ ಮೂಲಭೂತವಾದ ಸತ್ಯ ಈ ಪರಬ್ರಹ್ಮ ಶಕ್ತಿವಿಶಿಷ್ಟವಾಗಿದೆ. ನಿಷ್ಕಲ ಸ್ಥಿತಿಯಲ್ಲಿ ಪರಬ್ರಹ್ಮದಲ್ಲಿ ಶಕ್ತಿ ಅವ್ಯಕ್ತಗೊಂಡಿರುತ್ತದೆ. ಪರಬ್ರಹ್ಮದ ಈ ನಿರ್ವಯಲಿನ ಸ್ಥಿತಿಯನ್ನು ಸರ್ವಶೂನ್ಯ ನಿರಾಲಂಬ ಸ್ಥಲವೆಂದು ತೋಂಟದ ಸಿದ್ಧಲಿಂಗಯತಿಗಳು ಕರೆದಿದ್ದಾರೆ[6] ಈ ಸರ್ವಶೂನ್ಯ ಅಸ್ತಿತ್ವರಹಿತ ಶೂನ್ಯವಲ್ಲ; ಅವ್ಯಕ್ತ ಸ್ಥಿತಿಯಲ್ಲಿ ಎಲ್ಲವನ್ನೂ ಒಳಗೊಂಡ ಪರಿಪೂರ್ಣ ಶೂನ್ಯ[7]"ಈ ಬಯಲು ಇಲ್ಲದ ಬಯಲಲ್ಲ, ಇದ್ದ ಬಯಲು; ಸರ್ವಶೂನ್ಯವನ್ನು ಒಳಗೊಂಡು ತಾನು ತಾನಾಗಿರ್ದ ಬಯಲು..."[8]

ಈ ನಿಶ್ಶಬ್ದ ಪರಬ್ರಹ್ಮದಲ್ಲಿ ಸ್ವಶಕ್ತಿ ಜಾಗೃತಗೊಂಡಾಗ ಅರ್ಥಾತ್ ನಿಶ್ಶಬ್ದ ಶಬ್ದವಾದಾಗ[9] ಸ್ವಸ್ವರೂಪ – ಸಚ್ಚಿದಾನಂದದ[10] – ಅರಿವು ಅಲ್ಲಿ ಮೊಳೆದೋರುತ್ತದೆ. ಸತ್ತಿನ ಚಿಚ್ಛಕ್ತಿಯ ಸ್ಫುರಣದಿಂದಾಗಿ ಸತ್ತಿಗೆ ತನ್ನ ಅರಿವಾಗಿ ತನ್ನಲ್ಲಿ ಆನಂದವುಂಟಾಗುತ್ತದೆ. ಹೀಗೆ ನಿಷ್ಕಲ ಪರಬ್ರಹ್ಮ ಸಕಲನಾಗುತ್ತಾನೆ; ಅರ್ಥಾತ್ ಅವ್ಯಕ್ತ ಪರಬ್ರಹ್ಮ ಅಸ್ಮಿ ಪ್ರಕಾಶೇ, ನಾದಾಮಿ ಯೆಂಬ ಸ್ಥಿತಿಯುಳ್ಳವನಾಗಿ ತನಗೆ ತಾನು ವ್ಯಕ್ತನಾಗುತ್ತಾನೆ.

ಪರಶಿವ ಏಕೈಕ ಮತ್ತು ವಿಶ್ವಾತೀತ : ಉಪನಿಷತ್ತುಗಳಲ್ಲಿ ಅಸ್ಪಷ್ಟವಾಗಿದ್ದು ಅಲ್ಲಲ್ಲಿ ಕಂಡುಬರುವ,[11] ಭಗವದ್ಗೀತೆ[12]ಯಲ್ಲಿ ಸ್ಪಷ್ಟವಾಗಿ ಮೂಡಿರುವ ಏಕದೇವವಾದ ವೀರಶೈವಧರ್ಮದಲ್ಲಿ ಬೇರೂರಿದೆ. ಪರಶಿವನಲ್ಲಿ ದ್ವೈತವಿಲ್ಲ. ಆತ ಅನೇಕನಲ್ಲ. ಆತನೊಬ್ಬನೆ. ಪರಶಿವನು ಶಕ್ತಿವಿಶಿಷ್ಟನೆಂದ[13] ಕೂಡಲೆ ಆತನಲ್ಲಿ ಎರಡು ಇರಬೇಕಾಗಿಲ್ಲ. ಶಕ್ತಿಯೆಂಬುದು ಪರಶಿವನ ಕ್ರಿಯಾಗುಣ (Active divine will) ವನ್ನು ತೋರಿಸುತ್ತದೆ. ಸೂರ್ಯನ ಬೆಳಕಿಗೂ ಸೂರ್ಯನಿಗೂ ಅಭೇದ ಸಂಬಂಧವಿರುವಂತೆ ಶಿವ-ಶಕ್ತಿಯರ ಸಂಬಂಧವಿದೆ[14] :

ಶಿವಶಕ್ತಿ ಸಂಪುಟವೆಂಬುದೆಂತು ಹೇಳಿರಣ್ಣ
ಶಿವನೇ ಚೈತನ್ಯಾತ್ಮಕನು ಶಕ್ತಿಯೇ ಚಿತ್ತು
ಇಂತು ಚೈತನ್ಯಾತ್ಮಕನೇ ಚಿತ್ಸ್ವರೂಪನೆಂದರಿಯಬಲ್ಲಡೆ
ಆತನೆ ಶರಣ ಗುಹೇಶ್ವರ

ಎಂಬ ವಚನ ಈ ಸತ್ಯವನ್ನು ತಿಳಿಯಾಗಿ ಹೇಳುತ್ತದೆ.

ಶರಣರ ವಚನಗಳಲ್ಲಿ ಏಕದೇವವಾದ ಸ್ಪಷ್ಟವಾಗಿ ಉಲ್ಲೇಖಗೊಂಡಿದೆ.

"ಈಪ ಕಾವಡೆ ನಮ್ಮ .... ಸಂಗಯ್ಯನಲ್ಲದೆ ಮತ್ತೊಂದು ದೈವವಿಲ್ಲ" (ಬ. ವ. 558)[15] "ಅಗಮ್ಯ ...... ದೇವನಲ್ಲದೆ ಮತ್ತಾರೂ ಇಲ್ಲ" (ಬ. ವ. 815). "ಪಶುಪತಿ ಜಗಕ್ಕೇಕೋ ದೇವ. ಸ್ವರ್ಗ ಮರ್ತ್ಯ ಪಾತಾಳದೊಳಗೆ ಒಬ್ಬನೇ ದೇವ... ದೇವ " (ಬ. ವ. 526)[16]

ಪರಶಿವ – ಪರವಸ್ತು – ಸಚರಾಚರ ಜಗತ್ತನ್ನೆಲ್ಲ ಮೀರಿ ವಿಶ್ವಾತೀತವಾಗಿದೆ. ಸಿದ್ಧರಾಮನ ಮಾತಿನಲ್ಲಿ ಹೇಳಬೇಕಾದರೆ ಅದು 'ಆದಿಯಲ್ಲಿ ಬಯಲು, ಅಂತ್ಯದಲ್ಲಿ ಬಯಲು'[17]

ಪರಶಿವ ಕೇವಲ ಪರವಸ್ತುವಲ್ಲ. ಸಕಲ ಪರಶಿವನು ಪರಮಪುರುಷ (Supreme Person) ನೂ ಹೌದು. ಇದನ್ನು ಸೂಚಿಸುವುದಕ್ಕಾಗಿ ಪರಶಿವ ಎಂಬ ಪ್ರಕೃತಿಗೆ (Stem) -ಅನ್ ಎಂಬ ಏಕವಚನದ ಪುಲ್ಲಿಂಗ ಪ್ರತ್ಯಯವನ್ನು ಕೂಡಿಸಿ ಪರಶಿವನು ಎಂಬ ಪದವನ್ನು ವೀರಶೈವ ಅನುಭಾವದಲ್ಲಿ ಬಳಸಿದ್ದಾರೆ. ಈ ಜ್ಯೋತಿ ಪುರುಷನು[18] ಭಕ್ತರಿಗೆ ತಂದೆಯೂ ಹೌದು; ತಾಯಿಯೂ ಹೌದು; ಅವನಿಲ್ಲದೆ ಬೇರಾರೂ ಇಲ್ಲ.[19] ಕಾರಣ ಶರಣನು ತನ್ನ ಅಸಾಮರ್ಥ್ಯವನ್ನು ತೋರಿಸಿ ದೈವೀಪಥದ ಸೋಪಾನದಲ್ಲಿ ಮುಂದೆ ಹೋಗುವಾಗ ಪರಮ ತಂದೆಗೆ ಮೊರೆಹೋಗುವುದು ಸ್ವಾಭಾವಿಕ.[20]

ಏಕೈಕ ಪರಶಿವ ವಿಶ್ವಾಂತರ್ಯಾಮಿ : ವೀರಶೈವರ ಧರ್ಮದಲ್ಲಿ ಪರಶಿವನು ವಿಶ್ವಾತೀತನೆಂದು ವರ್ಣಿತನಾದರೂ ಕೂಡಲೇ ಆತನ ವಿಶ್ವವ್ಯಾಪಕತೆಯನ್ನು ಒತ್ತಿಯೊತ್ತಿ ಹೇಳಲು ಶರಣರು ಮರೆತಿಲ್ಲ. ಪರಶಿವ ಸೃಷ್ಟಿಯನ್ನು ಮೀರಿ ನಿಂತರೂ ಸೃಷ್ಟಿ ಆತನನ್ನು ಬಿಟ್ಟಿಲ್ಲ. ಶ್ವೇತಾಶ್ವತರ ಉಪನಿಷತ್ತಿನಲ್ಲಿಯೇ[21]ರುದ್ರ-ಶಿವನು ಸ್ವಶಕ್ತಿಯ ಮೂಲಕ ಹಾಲಿನಲ್ಲಿರುವ ತುಪ್ಪದಂತೆ ವಿಶ್ವದಲ್ಲಿ ಅಂತರ್ಗತನಾಗಿದ್ದಾನೆಂಬ ಭಾವನೆ ಇದ್ದು ಅದು ಗೀತೆಯಲ್ಲಿ[22] ವ್ಯಾಪಕವಾಗಿ ಕಾಣಬಂದು ಶರಣರ ಅನುಭಾವದಲ್ಲಿ ಗಟ್ಟಿಯಾಗಿ ನಿಂತಿದೆ.

ಪರಶಿವನ ಚಿಚ್ಛಕ್ತಿಯ ಅಭಿವ್ಯಕ್ತಿ(Expression of Divine Will) ಯಿಂದಾಗಿ ಸೃಷ್ಟಿ ಉಂಟಾದುದರಿಂದ ಪರಶಿವ ಸೃಷ್ಟಿಯಲ್ಲಿ ಸರ್ವವ್ಯಾಪಕನಾಗಿದ್ದಾನೆ. ಬಸವಣ್ಣನವರು ಈ ತಥ್ಯವನ್ನು ಅನುಭವಿಸಿ ಹೀಗೆ ಹಾಡಿರುವರು.

ಎತ್ತೆತ್ತ ನೋಡಿದಡತ್ತತ್ತ ನೀನೇ ದೇವಾ
ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ ಪಾತಾಳ
ದಿಂದತ್ತತ್ತ

ನಿಮ್ಮ ಶ್ರೀಚರಣ. ಬ್ರಹ್ಮಾಂಡದಿಂತ್ತತ್ತ ನಿಮ್ಮ ಶ್ರೀ ಮಕುಟ[23] ಸಿದ್ಧರಾಮ ಶಿವಯೋಗಿ[24] ವಿಶ್ವವ್ಯಾಪಿ ಲಿಂಗನ ಬಗ್ಗೆ ಸುಂದರವಾಗಿ ಹಾಡಿದ್ದಾರೆ.[25] ಇಂತಹ ವಚನಗಳು ವಚನ ಸಾಹಿತ್ಯದಲ್ಲಿ ಭಕ್ತಿಯಾವೇಶದಿಂದ ಹೊರಹೊಮ್ಮಿವೆ.

ಮಹಾಲಿಂಗಲೀಲೆ : ಅಂಗ ಉಪನಿಷತ್ತುಗಳಲ್ಲಿ ದೇವಮಾನವರೊಳಗೆ ಬಹಳ ಸಲ ಅದ್ವೈತವನ್ನು ಕಂಡರೂ ಶ್ವೇತಾಶ್ವತರ ಉಪನಿಷತ್ತಿನಲ್ಲಿ ದ್ವೈತವನ್ನು ಕಾಣುತ್ತೇವೆ.[26] ಗೀತೆಯಲ್ಲಿ ಜೀವಾತ್ಮರುಗಳು ನಿತ್ಯ, ಅಮರ ಮತ್ತು ದಿವ್ಯವೆಂಬುದಾಗಿ ವಿವರಿಸಲಾಗಿದೆ.[27]

ಶಕ್ತಿವಿಶಿಷ್ಟಾದ್ವೈತದಲ್ಲಿ ಸೃಷ್ಟಿಯೆಂಬುದು ಪರಶಿವ ಲೀಲೆ. ಈ ಶಿವಲೀಲೆಗೆ ಶಿವ-ಶಕ್ತಿ (Divine Creative Power) ಯೇ ಕಾರಣ.

ಲೀಲೆಯುದು ಪರಬೊಮ್ಮದ ಇಚ್ಛೆ;
ಇಚ್ಛೆಯುದು ಸಕಲಜೀವ ಜಾಲೋತ್ಪತ್ತಿ;
ಸಕಲಜೀವ ಜಾಲೋತ್ಪತ್ತ್ಯವದು ಜಗದ್ರಚನೆ;
ಜಗದ್ರಚನೆಯುದು ಜಗತ್ಪ್ರಳಯ ನೋಡಾ ಕಪಿಲಸಿದ್ಧ
ಮಲ್ಲಿಕಾರ್ಜುನಾ[28]

ನಿಷ್ಕಲ ಪರಶಿವದಲ್ಲಿ (the Ground of being) ಚಿಚ್ಛಕ್ತಿ ಜಾಗೃತಗೊಂಡಾಗ ಅದು ಸಕಲ ಪರಶಿವ (Personal God) ಆಯಿತಲ್ಲದೆ ಮಹಾಲಿಂಗವೂ (Creator) ಆಯಿತು.[29] ಆತ್ಮರುಗಳೂ ಪಂಚವಿಂಶತಿ ತತ್ವಗಳೂ ಈ ಮಹಾಲಿಂಗದಿಂದಲೇ. ಕಾರಣ ಸರ್ವ ಸಚರಾಚರ ಸೃಷ್ಟಿಗೆ ಮೂಲಕಾರಣ (Source of being) ಆಧಾರ (Support) ಅಂತೆಯೇ ಅಂತಿಮ ಗುರಿ (final end) ಯೂ ಕೂಡ ಸ್ವಯಂಭು ಮಹಾಲಿಂಗ ಸ್ಥಲವೇ. (Self existant Creator)[29]

ಮಹಾಲಿಂಗದಿಂದ ಉಂಟಾದ ಆತ್ಮಗಳಲ್ಲಿ ಶಿವಶಕ್ತಿ ಇದ್ದರೂ ಅವು ಆಣವಮಲ, ಮಾಯಾಮಲ ಮತ್ತು ಕಾರ್ಮಿಕ ಮಲಗಳೆಂಬ ಮಲತ್ರಯದ ಆವರಣದಲ್ಲಿ ಸಿಕ್ಕಿಬಿಡುತ್ತವೆ ಈ ಮಲಸಂಬಾಧದಿಂದಾಗಿ ಆತ್ಮಶುದ್ಧಿಗೆ ಭಂಗವುಂಟಾಗುತ್ತದೆ. ಇಂತಹ ಮಲಾವೃತನಾದ ಆತ್ಮನನ್ನೂ ಅಂಗನೆಂದೂ ಜೀವಾತ್ಮನೆಂದೂ ಕರೆಯುತ್ತಾರೆ.

ಅಂಗನಲ್ಲಿ ಅಡಗಿಕೊಂಡಿರುವ ಶಿವಶಕ್ತಿಯನ್ನು ಶಿವಭಕ್ತಿಯೆಂದು ಕರೆಯುತ್ತಾರೆ ತಚ್ಛಕ್ತಿಯ ಉಪಾಸನೆ[30] ಯಿಂದಾಗಿ ಮಾತ್ರ ಮಲತ್ರಯಗಳಿಂದ ಬಿಡುಗಡೆಹೊಂದಿ ಮುಕ್ತಿಯನ್ನು ಪಡೆಯಲು ಸಾಧ್ಯ.

ಲಿಂಗಾಂಗ ಸಂಬಂಧ ದ್ವೈತಾದ್ವೈತ : ಸಕಲ ಪರಬ್ರಹ್ಮ ನಿಷ್ಕಲಪರಬ್ರಹ್ಮದ ಸ್ವಯಂಪ್ರೇರಿತ ಜಾಗೃತಸ್ಥಿತಿಯಾದರೆ ಮಹಾಲಿಂಗ ಅದರ ಸ್ವಯಂಪ್ರೇರಿತ ಸೃಷ್ಟಿಕರ್ತಸ್ಥಿತಿ. ಪರಬ್ರಹ್ಮನ ಚಿಚ್ಛಕ್ತಿ ಅರ್ಥಾತ್ ಇಚ್ಛಾಶಕ್ತಿ (Will) ಆತನ ಒಂದುಗುಣ. ಪರಬ್ರಹ್ಮನಲ್ಲಿ ಆತನ ಕ್ರಿಯಾಶೀಲಗುಣಕ್ಕೂ ಆತನಿಗೂ ಅಭೇದವಾದರೂ ಮಹಾಲಿಂಗಕ್ಕೆ ತವಿಚ್ಛೆಯಿಂದ ಉಂಟಾದ ಅಂಗಕ್ಕೆ ಬೇಧವಿದೆ. ಆದ್ದರಿಂದಲೇ ಶಿವನೂ ಸತ್ಯ ಜಗತ್ತೂ ಸತ್ಯವೆನ್ನುವುದು. ಅಂಗನಿಗೆ ಲಿಂಗಸ್ಥಲ[31] ವಾಗಿದೆ. ಆದರೆ ಅಂಗ ಸ್ಥಲವಲ್ಲ. ಕಾರಣ ಲಿಂಗ ಮತ್ತು ಅಂಗವಲ್ಲಿ ದ್ವೈತ ಸಂಬಂಧ. ಅಂಗ ಬೇರೆಯಾದುದರಿಂದಲೇ ಅವು ಲಿಂಗದಲ್ಲಿ ಸಾಮರಸ್ಯವನ್ನು ಪಡೆಯಬೇಕು. ಈ ಕಾರ್ಯದ ಯಶಸ್ವಿಗಾಗಿಯೇ ಶಿವನು ಗುರುವಾಗಿ ಭಕ್ತನಲ್ಲಿ ಬರುತ್ತಾನೆ.

ವೀರಶೈವ ಸಿದ್ಧಾಂತದ ಪ್ರಕಾರ ಅಂಗ ಮೂಲ ಮಾಯವಾದರೂ ದಿವ್ಯ (Divine)[32] ಅಂಗನು ಶಿವಶಕ್ತಿಯಿಂದಾಗಿ ಉಂಟಾದವನಾದುದರಿಂದ ಆತ ಶಿವಭಕ್ತಿ (Divine element)ಯನ್ನು ಒಳಗೊಂಡಿದ್ದಾನೆ.

ತನ್ನಲ್ಲಿರುವ ಭಕ್ತಿಯಿಂದ ಅಂಗನು ಲಿಂಗಮಯನಾಗುವುದು ಸಾಧ್ಯ. ಅಂಗನು ಲಿಂಗಮಯನಾದಾಗ, ಲಿಂಗನಲ್ಲಿ ಸಾಮರಸ್ಯ ಪಡೆದಾಗ ವಾಸ್ತವಿಕವಾಗಿ ಲಿಂಗನು ಅತೀತನಾಗಿದ್ದೂ ಅಂಗದೊಡನೆ ಒಂದಾಗುತ್ತಾನೆ. ಆದ್ದರಿಂದಲೇ ಡಾ॥ ನಂದೀಮಠರು ಲಿಂಗಾಂಗ ಸಾಮರಸ್ಯವನ್ನು ಕುರಿತು "It is not an inseperable union "[33] ಎಂದಿದ್ದಾರೆ.

ಕ್ರೈಸ್ತ ಧರ್ಮ : ಈ ಭಾಗದಲ್ಲಿ ಕ್ರೈಸ್ತಧರ್ಮದಲ್ಲಿ ದೇವರು, ಮಾನವ ಮತ್ತು ಅವರೊಳಗಿನ ಬಾಂಧವ್ಯವ ಕುರಿತು ಇರುವ ತತ್ವಗಳನ್ನು ವಿವರಿಸಿದ್ದೇನೆ. ಹೀಗೆ ಮಾಡುವಲ್ಲಿ ಆದಷ್ಟು ಮಟ್ಟಿಗೆ ಕ್ರೈಸ್ತ ಧರ್ಮ ಶಾಸ್ತ್ರಜ್ಞರು ಬರೆದ ಗ್ರಂಥಗಳನ್ನು ಅವಲಂಬಿಸಿದರೂ ಧರ್ಮದ ತೌಲನಿಕ ಅಧ್ಯಯನ ದೃಷ್ಟಿಯಿಂದ ಪ್ರಸ್ತುತ ಲೇಖನ ಬರೆದುದರಿಂದ ನನ್ನ ವೈಯಕ್ತಿಕ ವಿಚಾರಗಳು ಇಲ್ಲಿ ಸೇರಿಕೊಂಡಿವೆ. ಅವು ನನ್ನ ವೈಯಕ್ತಿಕ ಅಭಿಪ್ರಾಯಗಳು ಮಾತ್ರ.

ಒಲವೇ ತ್ರಏಕ ಸ್ವರೂಪಿ ಶಿವ[34] : ಶಿವ ಒಂದು ದಿವ್ಯ ರಹಸ್ಯಾತ್ಮಕ[35] ಅನಾದಿ[36] ಸತ್ತು.[37] ಈ ಸತ್ತನ್ನು ಸಂಪೂರ್ಣವಾಗಿ ಅರಿತುಕೊಳ್ಳುವುದಾಗಲಿ ಮಾತಿಗಿಳಿಸುವುದಾಗಲಿ ಅಸಾಧ್ಯದ ಕೆಲಸ. ಭಕ್ತನ ಸ್ಥಿತಿಗತಿಗನುಸಾರವಾಗಿ ಅದನ್ನು ಅನುಭವಿಸುವುದು ಮಾತ್ರ ಸಾಧ್ಯ[38].

ನಿರಾಕಾರನಾದ ಶಿವನು ಅನಾದಿಯಿಂದಲೂ ಸತ್(God lead: Source of being), ಚಿತ್ (Logos: conscious being) ಆನಂದ (Blissful communication) ಆಗಿರುವನು. ಈ ಮೂರು ದಿವ್ಯ ಸತ್, ದಿವ್ಯ ಚಿತ್ ಮತ್ತು ದಿವ್ಯಾನಂದ ಶಿವನಲ್ಲಿ ಒಂದೇ[39] ಆಗಿರುವುದರಿಂದಲೇ ಆತ ತ್ರಯದೇವರುಗಳಾಗದೆ ತ್ರಏಕ (Triune) ದೇವನಾಗಿರುವನು.[40] ಕಾರಣ, ಶಿವ ಮೂರು ಅಲ್ಲ; ಶಿವನೊಬ್ಬನೆ.[41] ಆತನ ಇರುವಿಕೆಯ ರೀತಿ ಸಚ್ಚಿದಾನಂದ.[42] ಆತನು ಸಕಲ ಸ್ಥಲ.[43] ಆದ್ದರಿಂದಲೇ ಪರಮ ದಿವ್ಯ[44] ಪುರುಷನೂ[45] ಆಗಿರುವನು. ಈತನು ಒಲವೇ ಆಗಿರುವನು.[46]

ತ್ರಏಕ ಶಿವ ವಿಶ್ವಾತೀತ : ಶಿವನು ವಿಶ್ವಾತೀತನೆಂಬ ಸತ್ಯ ಕ್ರೈಸ್ತದರ್ಶನಕ್ಕೆ ಯೆಹೂದಿ ದರ್ಶನದಿಂದ ಬಂದ ಮೂಲಸೊತ್ತುಗಳಲ್ಲೊಂದು.[47] ಶಿವನು ವಿಶ್ವಾತೀತನಾದುದರಿಂದ ಆತನ ಸೃಷ್ಟಿಗೆ ಆತ ಸೀಮಿತನಾಗಿಲ್ಲ.[43] ಆದಿಯಲ್ಲಿ ದೇವನು ಸ್ವರ್ಗಲೋಕವನ್ನೂ ಭೂಲೋಕವನ್ನೂ ಸೃಷ್ಟಿಸಿದನೆಂಬುದು ಕ್ರೈಸ್ತ ಶ್ರುತಿಯ ಶ್ರೀವಾಕ್ಯ.[49] ಈ ಶ್ರೀವಾಕ್ಯದಿಂದಲೇ ಆತನ ವಿಶ್ವಾತೀತತೆ ಎದ್ದು ಕಾಣುತ್ತದೆ.

ತ್ರಏಕ ಶಿವ ವಿಶ್ವಾಂತರ್ಯಾಮಿ : ಕ್ರೈಸ್ತಧರ್ಮ ತ್ರಏಕ ಶಿವನ ವಿಶ್ವಾತೀತತೆಯನ್ನು ಸಹಜವಾಗಿ ಒಪ್ಪಿಕೊಂಡಿದ್ದರೂ ಅದು ಆತನ ವಿಶ್ವಾಂತರ್ಯಾಮಿ ಗುಣಕ್ಕೆ ಹೆಚ್ಚಿನ ಪ್ರಾಧಾನ್ಯವನ್ನು ಕೊಡುತ್ತದೆ. ಸೃಷ್ಟಿ ಶಿವನ ಸದಿಚ್ಛೆಯ ಪರಿಣಾಮವಾದುದರಿಂದ ಆತ ಕಾರ್ಯಸಾಧಕ ಕಾರಣವಾಗಿ (efficient cause) ವಿಶ್ವದಲ್ಲೆಲ್ಲ ಇದ್ದಾನೆ. ಅಂತೆಯೇ ಸೃಷ್ಟಿಯೆಂಬುದು ಆತನ ಸ್ವಾಭಿವ್ಯಕ್ತಿಯಾಗಿರುವುದರಿಂದ ಅದು ಆತನಂತೆ ಸತ್ಯವೂ ಹೌದು ದಿವ್ಯವೂ ಹೌದು. ಸೃಷ್ಟಿಯ ಕೇಂದ್ರವೂ ಮೂಲ ಚೈತನ್ಯವೂ ಆತನೆ.[50] ಸೃಷ್ಟಿಯಲ್ಲಿ ಆತ ನೆಲಸಿಕೊಂಡಿದ್ದಾನೆ.[51] ಒಟ್ಟಿನಲ್ಲಿ ಶಿವನು ಮಾನವನ ದೈನಂದಿನ ಜೀವನದಲ್ಲಿ ಹಾಸುಹೊಕ್ಕಾಗಿದ್ದುಕೊಂಡು ವಿಶ್ವಾಂತರ್ಯಾಮಿಯಾಗಿದ್ದು ಎಲ್ಲದಕ್ಕೂ ಪ್ರೇರಕ ಶಕ್ತಿಯಾಗಿರುವನು.[52]

ದಿವ್ಯ ಒಲವಿನ ಅಭಿವ್ಯಕ್ತಿ : ಮಾನವ ಒಲವಿನ ಮುಖ್ಯ ಗುಣ ಸ್ವಾಭಿವ್ಯಕ್ತಿ. ಇದು ಸ್ವಯಂಪ್ರೇರಿತ. ದಿವ್ಯ ಒಲವಿನ ಸ್ವಯಂಪ್ರೇರಿತ ಬಹಿರ್ಮುಖಿ ಅಭಿವ್ಯಕ್ತಿಯೇ[53] ಸೃಷ್ಟಿ.[54] ಆದ್ದರಿಂದ ಶಿವನೇ ಅದಕ್ಕೆ ಮೂಲಕಾರಣ (Source),[55] ನಿತ್ಯ ಆಧಾರ (Support),[56] ಮತ್ತು ಪರಮ ಗುರಿ.[57] ಈ ದಿವ್ಯಾಭಿವ್ಯಕ್ತಿಯ ವಿಕಾಸವೇ ಸೃಷ್ಟಿಯ

ವಿಕಾಸ (Evolution). ಶಿವ-ಕೃಪೆಯೇ[58] ವಿಕಾಸದ ಆಂತರಿಕ ಶಕ್ತಿ (Internal dy namism). ಮಾನವ ಈ ವಿಕಾಸದ ಪ್ರಸ್ತುತ ಶಿಖರ. ಈ ವಿಕಾಸದ ಪರಿಪೂರ್ಣ ರೂಪ ದೇವ-ಮಾನವ (God-man). ಮಾನವನ ದೇವ-ಮಾನವ ಸ್ಥಿತಿ ಮಾನವಶಿವ ಯೇಸುಕ್ರಿಸ್ತನಲ್ಲಿ ಸಫಲತೆಗೊಂಡಿವೆ.[59] ಆದ್ದರಿಂದ ಪರಶಿವನ ಸಂಪೂರ್ಣ ಅಭಿವ್ಯಕ್ತಿ[60] – ಆತನ ಪರಮ ಪುತ್ರ–ಯೇಸುಕ್ರಿಸ್ತನೆಂಬುದು ಕ್ರೈಸ್ತಧರ್ಮದ ತಿರುಳು. ಅಂತೆಯೇ ಮಾನವ ಕೋಟಿಗೆ ಆದರ ಸಂದೇಶ ಮತ್ತು ಆತನಿಗೆ ತೋರಿಸುವ ಆತನು ಗಳಿಸಬೇಕಾದ ಮುಂದಿನ ಸ್ಥಿತಿ.

ಮಾನವ ದಿವ್ಯದ ಅಭಿವ್ಯಕ್ತಿಯಾದುದರಿಂದ ಆತನೂ ದಿವ್ಯ. ದಿವ್ಯದಿಂದ ಹುಟ್ಟಿದ ಮಾನವ ದಿವ್ಯ ಪ್ರೇಮದಲ್ಲಿ ಒಂದಾಗಬೇಕೆಂಬುದೇ ಶಿವನೇಚ್ಛೆ.[61] ಆತನ ಸದಿಚ್ಛೆಯಿಂದಲೇ ಶಿವ ಪ್ರಸಾದ – ಶಿವ ಕೃಪೆ (Sanetifying grace) ನಮಗೆ ಕರುಣೆಯಾಗಿದೆ. ಶಿವಾನಂದದಲ್ಲಿ ಪಾಲುದಾರನಾಗುವುದೇ ನಿತ್ಯಸಹಭಾಗಿಯಾಗಿರುವುದೇ ನಮ್ಮ ಮುಕ್ತಿ. ಇದೇ ಶಿವೈಕ್ಯ. ಇದುವೇ ಮಾನವ ಬಾಳಿನ ಗುರಿ. ಇದೇ ಕಾಯಕ. ಶಿವೈಕ್ಯವನ್ನು ಸಾಧಿಸುವ ಮಾನವನ ಕಾಯಕದಲ್ಲಿ ಶಿವಪ್ರಸಾದ ಇದ್ದೇ ಇದೆ. ಆದ್ದರಿಂದಲೇ ಅದು ಕಾಯಕ.

ಲಿಂಗಾಂಗ ಸಂಬಂಧ; ದ್ವೈತಾದ್ವೈತ: ಪರಶಿವನ ಸ್ವಯಂ ಪ್ರೇರಿತ ಸ್ವಾಭಿವ್ಯಕ್ತಿಯೇ ಸೃಷ್ಟಿ.[62] ಸೃಷ್ಟಿಯಲ್ಲಿ ಸದಭಿವ್ಯಕ್ತಿ ಅವ್ಯಕ್ತದಿಂದ ವ್ಯಕ್ತವಾಗಿ ವ್ಯಕ್ತದಿಂದ ಸುವ್ಯಕ್ತವಾಗಿ ಅಭಿವ್ಯಕ್ತಗೊಳ್ಳುತ್ತಾ ಇದೆ. ಈ ವ್ಯಕ್ರಾಂತಿಯೇ ಇತಿಹಾಸ. ಮಾನವನಲ್ಲಿ ಈ ಅಭಿವ್ಯಕ್ತಿ ಮನೋಮಯವಾಗಿರುವುದರಿಂದ ಆತನಲ್ಲಿ ಲಿಂಗಾಂಗ ಸಂಬಂಧ ಬಹಳ ಆತ್ಮೀಯ ಮತ್ತು ಪಾಲುದಾರ ಸ್ವಭಾವ (Participative) ದ್ದಾಗಿದೆ.[63] ಕಾರಣ ಮಾನವ ಮಹಾಲಿಂಗದ ಸಂಕ್ಷೇಪಾಕೃತಿ (Image)[64] ಯೆನ್ನಬಹುದು.

ಸಚರಾಚರ ಸೃಷ್ಟಿ ಶಿವನ ಸ್ವಾಭಿವ್ಯಕ್ತಿಯಾದುದರಿಂದ ಶಿವ ಮತ್ತು ಸೃಷ್ಟಿಯ ಸಂಬಂಧ ಅದ್ವೈತ; ಆದರೆ ಶಿವ ಸೃಷ್ಟಿಗೆ ಸೀಮಿತನಾಗದೆ ಮೀರಿ ಇರುವುದರಿಂದ ಅಲ್ಲಿ ದ್ವೈತವೂ ಇದೆ. ಇಂತಹ ಈ ಅಸಾಮಾನ್ಯ ಸಂಬಂಧವನ್ನು ದ್ವೈತಾದ್ವೈತವೆಂದು ಕರೆಯಬಯಸುತ್ತೇನೆ.[65] ಈ ದ್ವೈತಭಾವವು ಲಿಂಗಾಂಗದ ದಿವ್ಯದಾಂಪತ್ಯಾನುಭವದಲ್ಲಿ ಇದ್ದೂ ಇಲ್ಲದಂತಾಗುತ್ತದೆ. ಸರ್ವವೂ ಶಿವಮಯವಾದಾಗ ದಿವ್ಯ ಇರವಿನಲ್ಲಿ ಒಲವಿನಲ್ಲಿ ಸ್ಥಿರವಾಗಿ ತನ್ಮಯನಾಗಿರುವಾಗ ಅವಭಾವಕ್ಕೆ ಸ್ಥಾನವೆಲ್ಲಿ? ಎತ್ತೆತ್ತಲೂ ಒಲವೊಂದೇ ಉಳಿಯುವುದು. ಇದೇ ಮುಕ್ತಿಯಾನುಭವ.

ಕೊನೆಯ ಮಾತು: ಧಾರ್ಮಿಕ ತತ್ವಗಳು ಹುಟ್ಟುವಲ್ಲಿಯ ಸಂಸ್ಕೃತಿ ಬೆಳೆಯುವ ಪರಿಸರ ಭಿನ್ನಭಿನ್ನವಾಗಿರುವುದರಿಂದ ಕೆಲವೊಮ್ಮೆ ಅವು ಭಿನ್ನವಾಗಿರುತ್ತವೆ. ಹಲವಾರು ಸಲ ಭಿನ್ನವಾಗಿ ಇಲ್ಲದಿದ್ದರೂ ಭಿನ್ನವಾಗಿ ತೋರುತ್ತವೆ. ಧರ್ಮಗಳ ತುಲನಾತ್ಮಕ ಅಧ್ಯಯನ ಹೆಚ್ಚೆಚ್ಚು ಆಳವಾಗಿ ಪರಸ್ಪರ ತಿಳಿದುಕೊಳ್ಳುವ ಹಂಬಲದಿಂದ ಭ್ರಾತೃ ಭಾವದಿಂದ ನಡೆಯಿಸಿದಾಗ ಅವುಗಳೆಲ್ಲವೂ ಮಾನವನನ್ನು ದೈವತ್ವದೆಡೆಗೆ ಸಾಗಿಸುವ ಪ್ರಯತ್ನಮಾಡುತ್ತಿವೆ ಎಂಬ ಸತ್ಯದ ಅರಿವು ಮೂಡುತ್ತದೆ. ಕ್ರೈಸ್ತದರ್ಶನವನ್ನು ಉಪನಿಷತ್ತು[66], ಶೈವಸಿದ್ಧಾಂತ[67] ಮತ್ತು ವೀರಶೈವ ಅನುಭವ[68] ದೊಡನೆ ಹೋಲಿಸಿ ನೋಡಿದಾಗ ಅವುಗಳಲ್ಲಿ ಪರಸ್ಪರ ಭಿನ್ನಾಂಶಗಳು ಕ್ವಚಿತ್ತಾಗಿಯೇ ಇದ್ದು ಹೋಲುವ ಅಂಶಗಳೇ ಹೆಚ್ಚಾಗಿದ್ದು ಅವು ಪರಸ್ಪರ ಪೂರಕವಾಗಿ ಕಾಣುತ್ತವೆ.

ಪ್ರಸ್ತುತ ಅಧ್ಯಯನದಲ್ಲಿ ವಿವರಿಸಿದ ಪ್ರಕಾರ ವೀರಶೈವ ಮತ್ತು ಕ್ರೈಸ್ತಧಾರ್ಮಿಕ ತತ್ವಗಳು ಮಂಡಿಸಿದಂತೆ ಸಚ್ಚಿದಾನಂದನಾದ ಶಿವನು ಸರ್ವಾತೀತನೂ ಸರ್ವಾಂತರ್ಯಾಮಿಯೂ ಆಗಿರುವನು. ಆತನೊಬ್ಬನೆ ಸತ್ಯ ಉಳಿದವು ಮಿಥ್ಯವಲ್ಲ. ಶಿವನೂ ಆತನ ಲೀಲೆಯಿಂದಾದ ಸೃಷ್ಟಿಯು ಸತ್ಯ ಹಾಗೂ ದಿವ್ಯ. ಶಿವೇಚ್ಛೆಯೇ ಸೃಷ್ಟಿಗೆ ಕಾರಣ, ಶಿವ ಪ್ರಸಾದವೇ ಅದಕ್ಕೆ ಆಧಾರ ಶಿವಾನಂದದಲ್ಲಿಯೇ ಅದರ ಕೊನೆ. ಶಿವಾನಂದದಲ್ಲಿ ತಾನಿದಿರೆಂಬ ಭಾವನೆಯಿರುವುದಿಲ್ಲ. ಕಾರಣ ಮುಕ್ತಿಯೆಂಬುದು ಸತಿ ಪತಿ ಭಾವದ ಪರಮ ದಿವ್ಯ ಸ್ಥಿತಿ; ಪವಿತ್ರದಾಂಪತ್ಯದ ಸಮರಸ ಜೀವನ. ಇದು ಕೊನೆಯಿಲ್ಲದ ಜೀವನ. ಪರಶಿವನು ಲಿಂಗಾಂಗ ಸಾಮರಸ್ಯಕ್ಕು ಮಿಗಿಲಾಗಿ ಅತೀತನಾಗಿರುವುದರಿಂದಲೇ ಲಿಂಗಾಂಗದ ಈ ವಿಶಿಷ್ಟ ಸಂಬಂಧವನ್ನು (Relatio sui generis) ದ್ವೈತಾದ್ವೈತವೆಂದು ಕರೆದಿದ್ದೇವೆ.

ತೌಲನಿಕ ಅಧ್ಯಯನದ ಮೊದಲು ಇಬ್ಬಗೆಯಾಗಿಕಾಣುವ ವೀರಶೈವ ಮತ್ತು ಕ್ರೈಸ್ತಧರ್ಮಗಳು ಅಧ್ಯಯನದ ಕೊನೆಗೆ ಮೂಲಭೂತವಾಗಿ ತಾತ್ವಿಕದೃಷ್ಟಿಯಿಂದ ಬಹು ಸಮೀಪವಾಗಿದ್ದು ಪರಸ್ಪರ ಹೋಲುತ್ತವೆ. ಈ ಹೋಲಿಕೆಗೆ ಐತಿಹಾಸಿಕ ಕಾರಣಗಳು ಇರಬಹುದಾದರೂ ಮೂಲತಃ ಎಲ್ಲದಕ್ಕೂ ಪ್ರೇರಣೆಯಾಗಿರುವ ಶಿವಶಕ್ತಿ–ದೈವೇಚ್ಛೆ-ಒಂದೇಯಾಗಿರುವುದೇ ಕಾರಣವೆಂದು ನನ್ನ ತಿಳುವಳಿಕೆ.

ಕ್ರೈಸ್ತ ಸಿದ್ಧಾಂತಕ್ಕೆ ವೀರಶೈವ ಪರಿಭಾಷೆಯನ್ನು ಒದಗಿಸಿದರೆ ಅವುಗಳನ್ನು ಪರಸ್ಪರ ತಿಳಿದುಕೊಂಡು ಕತ್ತಲೆಯಿಂದ ಬೆಳಕಿನತ್ತ ಸಾಗಲು ಸುಲಭವಾಗಬಹುದು. ಅಷ್ಟೇ ಅಲ್ಲದೆ ವೀರಶೈವರೂ, ಕ್ರೈಸ್ತರೂ ದೇವ ಪುತ್ರರೇ, ಶಿವಕುಮಾರರೇ ಎಂಬ ಸಹೋದರ ಭಾವನೆ ಬೆಳೆಯಲಿಕ್ಕೆ ಅನುಕೂಲವಾದೀತು. ಇದರಿಂದಾಗಿ ಪರಸ್ಪರ ಸಹಕಾರಿ ಜೀವನ ನಡೆಯಿಸಿ ಮಾನವನ ಸರ್ವತೋಮುಖ ಅಭಿವೃದ್ಧಿಗೋಸ್ಕರ ಸಂಘಟಿತರಾಗಿ ದುಡಿಯಲು ಅನುಕೂಲವಾಗುವುದು. ಧರ್ಮ ಧರ್ಮಗಳ ತಿಕ್ಕಾಟ ಕಡಿಮೆಯಾಗಿ ಸೋದರ ಭಾವ ಬೆಳೆದಾಗ ಧರ್ಮ ಸತ್ತಿಲ್ಲ, ದೇವರು ಇದ್ದಾನೆ ಎಂಬ ಭಾವನೆ ಕಾರ್ಯರೂಪವಾಗಿ ಜೀವನದಲ್ಲಿ ಬರಲು ಸಾಧ್ಯವಾಗುವುದು. ಮಾನವನೇ ದೇವರ ಸಾಕ್ಷಾತ್ಕಾರ ರೂಪವಾದಾಗ ದೇವರೆಲ್ಲಿ ಎಂಬ ಪ್ರಶ್ನೆ ಧಾರ್ಮಿಕ ಜೀವನದ ಬೆಳಕಿನಲ್ಲಿ ಕರಗಿ ಹೋಗುವುದು.

ಈ ದಿಸೆಯಲ್ಲಿ ವೀರಶೈವ ಅನುಭಾವಕ್ಕೆ ಒಂದು ಸೈದ್ಧಾಂತಿಕ ಚೌಕಟ್ಟನ್ನು ಒದಗಿಸುವುದು ಅವಶ್ಯ. ಈ ವಿಷಯದಲ್ಲಿ ಅವರ ಆಸಕ್ತಿ ಬೆಳೆಯದಿರುವುದೇ[69] ವೀರಶೈವ ಅನುಭಾವಕ್ಕೆ ಜಾಗತಿಕ ಸ್ಥಾನಮಾನ ದೊರಕದೆ ಇರಲು ಕಾರಣವೆಂದು ನನ್ನ ಅಭಿಪ್ರಾಯ. ಯಾಕೆಂದರೆ ಪರಸ್ಪರ ಅಧ್ಯಯನಕ್ಕೆ ತತ್ವಜ್ಞಾನದ ಸಾಮಾನ್ಯ ಚೌಕಟ್ಟು ಅಗತ್ಯ. ಇದರ ಕುರಿತು ಹೆಚ್ಚಿನ ಒತ್ತು ತೋರಿಸುವುದು ಅವಶ್ಯ. ಈ ಅವಶ್ಯಕತೆ ತೌಲನಿಕ ಅಧ್ಯಯನದಿಂದಾಗಿ ತಿಳಿದುಬರುವುದು. ಕ್ರೈಸ್ತದರ್ಶನದ ಅಭ್ಯಾಸದಿಂದಾಗಿ ವೀರಶೈವ ಅನುಭಾವಕ್ಕೆ ತಾತ್ವಿಕ ಚೌಕಟ್ಟನ್ನು ರೂಪಿಸಲು ಅನುಕೂಲವಾಗಬಹುದು.

ಅಡಿ ಟಿಪ್ಪಣಿಗಳು :

1. Norbert Schiffers, 'Concept of Religion', Karl Rahner (Ed.) Encyclopedia of Theology, 1975, p. 1357-8

2. R. L. Tuner, A comparative Dictionery of the Indo Aryan Languages, Fasc. V 1965, no. 6753 p. 386

3. Mariasusai Dhavamony, Love of God According to Saiva Siddhanta, 1971, pp. 153, 291, 338.

4. Ninian Smart, The Yogi and the Devotee; The Interplay between the Upanishads and Catholic Theology, 1968, p. 52.

5. ಎಂ. ಬಿ. ಕೊಟ್ರಶೆಟ್ಟಿ, ಸಿದ್ಧರಾಮ ಶಿವಯೋಗಿ, 1975 ಪು- 199

6. ಅದೇ

7. ಎಚ್. ತಿಪ್ಪೇರುದ್ರಸ್ವಾಮಿ, "ಶರಣರ ಶೂನ್ಯ ತತ್ವ", ಚಿತ್ರಭಿ, 1972, ಪು. 350-358

8. ಸಂ. ಶಿ. ಭೂಸನೂರಮಠ, ಶೂನ್ಯ ಸಂಪಾದನೆಯ ಪರಾಮರ್ಶೆ, ಪು. 71

9. ವ್ಹಿ. ಎಸ್. ಕಂಬಿ, ವೀರಶೈವ ದರ್ಶನ ಮೀಮಾಂಸೆ, 1971, ಪು 62-93

10 ಸಚ್ಚಿದಾನಂದವೆಂಬ ಪರಿಭಾಷೆ ವೇದಾಂತದ್ದು.

11. Mand. Up. 2.12, 20 See also Mund. Up. 2 1 1-2 and 3.1.3; 1 10; 6.5-11

12 14.27

13. ಪ ಶಿವನು ಶಕ್ತಿವಿಶಿಷ್ಟನೆಂಬ ಸಿದ್ಧಾಂತ ಕಾಶ್ಮೀರ ಶೈವ ಅಂತೆಯೇ ತಮಿಳ-ನಾಡಿನ ಶೈವ ಸಿದ್ಧಾಂತಗಳಲ್ಲಿಯೂ ಕಾಣಬಹುದು. ನೋಡಿ: Shree Kumaraswamiji, 'Virasavism', The Cultural Heritage cf India, Haridas Bhattachryayya (Ed.), Vol IV, Reprint 1969, p. 104. foot note 12. (First Edition (3 vols.) 1937) ಮತ್ತು M. Dhavamony, Op. Cit. p. 181, 182, 184. 186, 187, 196, 197, 246, 255, 262, 271-2, 276, 301, 320, 323

14. Kumaraswamiji, Op. Cit. p 104

15. ಬಸವಣ್ಣನವರ) ವ(ಚನಗಳು) — ಇವುಗಳನ್ನು ಎಸ್. ಆರ್. ಗುಂಜಾಳ, ಬಸವಣ್ಣನವರ ವಚನ ಪದಪ್ರಯೋಗ ಕೋಶ, 1973 ಎಂಬ ಕೃತಿಯಿಂದ ಆರಿಸಲಾಗಿದೆ.

16. ನೋಡಿ: ಅದೇ 544, 613, 616 ಇತ್ಯಾದಿ

17. ಸಿ. ಷ. ವ. 663 ನೋಡಿ ಎಂ. ಬಿ. ಕೊಟ್ರಶೆಟ್ಟಿ, ಅದೇ ಪು 179

18. ಬ. ವ. 955

19. ಅದೇ 480

20. ಅದೇ 59

21. 4.1; 6.8 ef. Dhavamony, Op Cit.

22. 10.20; 15.15.7.8 ff.; 7-10 9.18) & bid.

23. ಬ. ವ. 743 ನೋಡಿ 532 ಕೂಡಾ

24. ಲಿಂಗ ವಿಶ್ವವ್ಯಾಪಿ, ಲಿಂಗ ವಿಶ್ವತೋಚಕ್ಷು
ಲಿಂಗ ವಿಶ್ವತೋಮುಖ, ವಿಶ್ವ ಬಾಹು
ಲಿಂಗ ವಿಶ್ವತೋಪಾದ, ಲಿಂಗ ವಿಶ್ವಾತ್ಮಕನು
ಲಿಂಗ ಜಗಜನ್ಮಸ್ಥಲ, ಯೋಗಿನಾಥ (52)

25. ಡಾ॥ ಎಂ ಬಿ ಕೊಟ್ರಶೆಟ್ಟಿ, ಸೂ(ಚಿಸಿದ) ಕೃ(ತಿ), ಪು. 166

26. 4.1; 6 3

27. 2.18-20

28. ಸಿ. ಷ. ವ. 590. ಎಂ. ಬಿ. ಕೊಟ್ರಶೆಟ್ಟಿ, ಸೂ. ಕೃ. ಪು. 200

29. ಎಂ. ಬಿ. ಕೊಟ್ರಶೆಟ್ಟಿ, ಸೂ. ಕೃ. ಪು. 201 ಅ. ಟಿ. 1

30. ಈ ಉಪಾಸನೆಯನ್ನು ಷಟ್‌ಸ್ಥಲ ಸಾಧನೆಯೆಂದು ವೀರಶೈವ ಪರಿಭಾಷೆಯಲ್ಲಿ ಕರೆಯಲಾಗಿದೆ

31. ಸ್ಥ + ಲ > ಸ್ಥಲ 'ಮೂಲಕಾರಣ' ಆಧಾರ + ಗುರಿ Kumara Swamiji, Op. Cit. p 104 f n. 12

32. ಎಸ್. ಎಂ. ವೃಷಭೇಂದ್ರಸ್ವಾಮಿ, ಕನ್ನಡ ಸಾಹಿತ್ಯದಲ್ಲಿ ಅಲ್ಲಮ ಪ್ರಭುದೇವ (ಪಿಹೆಚ್. ಡಿ. ಪ್ರಬಂಧದ ಹಸ್ತಪ್ರತಿ) ಪು. 33-34

33. S. C. Nandimath, A Handbook on Virasaivism, 1942, p. 93

34. ಶಿವ (ಪ್ಪ) ನೆಂದರೆ ದ್ರಾವಿಡ ಭಾಷೆಯಲ್ಲೊಂದಾದ ತಮಿಳಿನಲ್ಲಿ ಸುಂದರನ, ಕೆಂಬಣ್ಣದವನೆಂದರ್ಥ (DED 1607) ಶಿವನೆಂಬ ಪದವನ್ನು ಸಂಸ್ಕೃತದ ದೇವ ಎಂಬ ಪದಕ್ಕೆ ಸಂವಾದಿಯಾಗಿ ದ್ರಾವಿಡ ಭಾಷೆಯಲ್ಲಿ ಬಳಸಲಾಗಿದೆ. ಉದಾ: ನೋಡಿ: M. Dhavamony, Op.Cit. pp.109, 128, 141, 177, 199, 255, 256 ವೈದಿಕ ಆಧ್ಯಾತ್ಮದಲ್ಲಿಯೂ ರುದ್ರನನ್ನು ಶಿವನೆಂದು (ರುದ್ರ-ಶಿವ) ಕರೆಯುವುದುಂಟು. ನೋಡಿ: ಅದೇ ಪು. 54, 62, 104, 106, 112, 160

35. Mt Lli; Karl Rahner, 'Mystery' Encyclopedia of Theology, K Rahner (Ed.) 1975, pp. 1000-4. Scriptural quotations are from the Jerusalem Bible.

36. Gerard Haeffner, 'Infinity' & bid pp. 717-9

37. Joseph Moler, 'Truth', & bid pp. 1771-6

38. Wis. 13 *1*-9; Rom. *1:18-21*

39. Rv. *22*1

40. ಕ್ರೈಸ್ತ ಶ್ರುತಿಯ ಪ್ರಕಾರ ಈ ದಿವ್ಯ ಕ್ರಿಯಿಕ ದೇವನನ್ನು ತಂದೆ-ಮಗ ಪವಿತ್ರಾತ್ಮನೆಂದು ಕರೆಯಲಾಗಿದೆ: Jo *15*g; Rom 9d; *1* Cor *62*; Heb. *1*c. ಪರಶಿವ (father) ನ ಸ್ವಾಭಿವ್ಯಕ್ತಿ (Self expression) ಯೇ ದಿವ್ಯಶಬ್ದ (Logos)-ಮಗ (Son)-; ಸ್ವಸಂಸರ್ಗತೆ (Self communication) ಯೇ ಪವಿತ್ರಾತ್ಮ (Spirit) ಇದು ಪರಶಿವನ ಅಸ್ತಿತ್ವದ ರೀತಿ ಆತನಲ್ಲಿ ಸ್ವಸತ್ (father) ಸ್ವಾಭಿವ್ಯಕ್ತಿ (Son) ಮತ್ತು ಸ್ವಸಂಸರ್ಗತೆ (Spirit) ಅಭೇದವಾಗಿದೆ ನೋಡಿ: Karl Rahner, 'Trinity in Theology', Encyclopedia of Theology, pp. *1764-1771* ಪ್ರತ್ಯೇಕವಾಗಿ ವಿಭಾಗ E. ಅಲ್ಲದೆ Raymond Panikkar, The Trinity in World Religions, *1*970. p. 67.

41. MK *12, 32*; Jo *3*; Jo 8g; *1* ThK; Heb *11*c; Gn *1*a, *19*a, *35*b: Dt 66.*1*k, *18*f; Jdt 8d; Ws 14j; *1*541m, 42f, 45p. Jr 2i; Zc *1*i; *1*4h

42. Karl Rahner, 'Jesus Christ', Encycl of Thel. p *767*c

43. ಆತ ನಿಷ್ಕಲ ಸ್ಥಲ ಎಂಬ ಅನುಭಾವ ಎಕಾರ್ಟ್ ಮೊದಲಾದವರ ಅನುಭಾವ ಸಾಹಿತ್ಯದಲ್ಲಿ ಕಾಣಬಹುದು.

44. Les Scheffezyle 'God: The Divine' ET pp. 555-9

45. ET pp. 1767-1771

46 I Jo 4: 8ಅ, 16. ಒಲವೇ ದೇವರು: "ಅನ್ಬೇ ಶಿವಂ" ಎಂಬ ಮಾತನ್ನು ಕ್ರಿ. ಶ. 5–6ನೇ ಶತಮಾನದ ತಮಿಳು ಶಿವಭಕ್ತರು ಬಳಸಿದ್ದಾರೆ. (ತಿರುಮಂತಿರಂ, 257)

47. Ninian Smart, The Yogi and the Devotee: The Interplay between the Upanishads and Catholic Theology, p. 68

48. Summa Theologica I, of 8, a 3; Tim 6.16

49. Gn. 1a ಅಂತೆಯೇ ನೋಡಿ : IS 42f; AC 7k

50. Jos 6a; Pierre Teilhard de Chardin, The Phenomenon of Man 1967 (First pub. 1955)

51. Jo 14n; I Cor 3e

52. Eph: 4:6

53. Self exteriorization, i.e. Creatio ex nihilo; Gn. 1

54. Pieter Smulders, 'Creation' ET. p. 319

55. Acts 4:24; Rv. 10:6i; 14.7; Acts 14:15-17 k, 1

56. Rev. 4.11 k

57. P. Smulders, Op. Cit. p. 318 no. 3.a; 1Cor 8:6; Rom 11 36; Heb 2.10

58. Karl Rahner, 'Evolution', ET, P. 481 no. iii

59. K. Rahner, 'Jesus Christ', & bid, p. 758, no.5

60. 2 Cor 4 4; Col 1: 15-17; Heb 1 2 ff; 10-12; Jn 1.1-18

61. Vatican II, Gandium et spes, art. 22

62. Walter Kern, 'Doctrine of Creation' ET. pp. 576-81

63. W. Kern, Op. Cit. p 579; ST. I. 30, 2 and 1

64. Gn. 1: 26-27; 5:1, 3; 9:6

65. Walter Kern, 'God-World relationship', ET. pp. 576-581

66- N. Smart, Op. Cit.

67. M. Dhavamony, Op Cit.

68. ಪ್ರಸ್ತುತ ಅಧ್ಯಯನ

69. S. C. Nandimath, A Handbook of Virasai-vism, 1942, p. 93

ಕಾಯಕ ಮತ್ತು ಕಾಲಿಂಗ್('ವೃತ್ತಿ')

(ಒಂದು ತುಲನಾತ್ಮಕ ವಿಶ್ಲೇಷಣೆ)

ಲೇಖಕರು:
ಡಾ|| ಹೆಚ್. ಎಂ. ಸದಾಶಿವಯ್ಯ ಎಂ.ಎ.,ಪಿ.ಹೆಚ್.ಡಿ.,
ಮೈಸೂರು

ಆದಿಯಿಂದಲೂ ಧರ್ಮ ಮಾನವ ಜೀವನದಲ್ಲಿ ಪ್ರಮುಖಪಾತ್ರ ವಹಿಸಿದೆ. ಧಾರ್ಮಿಕ ಭಾವನೆಗಳಲ್ಲಿ ವಿವಿಧ ರೀತಿಯ ವ್ಯತ್ಯಾಸಗಳಿವೆ. ಹಾಗೆಯೇ ಅದರ ಸ್ವರೂಪ ಮತ್ತು ಆಚರಣೆಗಳಲ್ಲಿ ವಿವಿಧ ಬಗೆಯ ವ್ಯತ್ಯಾಸಗಳು ಕಾಣಬರುತ್ತವೆ. ಶಂಕರಾಚಾರ್ಯರಿಗೆ ಅದ್ವೈತ ಸಿದ್ಧಾಂತದ ಮೇಲೆ ರೂಪಿತವಾದ ಪರಬ್ರಹ್ಮ ಭಾವನೆಯೆ ಬ್ರಹ್ಮ, ಆಫ್ರಿಕದ ಆದಿವಾಸಿಗಳಿಗೆ, ಒಂದು ಮರದಕೊಂಬೆಯನ್ನು ಪ್ರತಿಷ್ಠಿಸಿ, ಅದರ ಸುತ್ತ ಅನೇಕ ಘಂಟೆಗಳ ಕಾಲ ಉನ್ಮತ್ತತೆಯಿಂದ ಜ್ಞಾನ ಕಳೆದುಕೊಳ್ಳುವವರೆಗೆ ಕುಣಿಯುವುದು ಧರ್ಮ. ಮಂತ್ರಗಳನ್ನು ಹೇಳುತ್ತಾ ಹೂವು ಮತ್ತು ಪತ್ರೆಗಳಿಂದ ಈಶ್ವರನನ್ನು ಆರಾಧಿಸುವುದು ಧರ್ಮವಾದರೆ, ಒಂದು ಭೂಮಿಯು ಫಲವತ್ತಾಗಲಿ, ಒಂದು ದೊಡ್ಡ ಸೇತುವೆಯ ಕೆಲಸ ನಿರ್ವಿಘ್ನವಾಗಿ ನೆರವೇರಲಿ ಎಂದು ನರಬಲಿಯನ್ನು ಧರ್ಮದ ಹೆಸರಿನಲ್ಲಿ ಕೊಡುತ್ತಾರೆ "ಮಾರಮ್ಮ, ಗಂಗಮ್ಮ, ಭಕ್ತರಿಂದ ಮೊದಲಾಗಿ, ಕೋಳಿ ಕೋಣ ಬಲಿಕೊಡುವುದರಿಂದ ಮೊದಲಾಗಿ, ನಿರ್ಗುಣ ನಿರಾಕಾರ ವಸ್ತುವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವ ಮಹಾ ಮೇಧಾವಿಗಳವರೆಗೂ ಎಲ್ಲ ದರ್ಜೆಗಳ, ಎಲ್ಲ ಅಂತಸ್ತುಗಳ, ಎಲ್ಲ ಯೋಗ್ಯತೆಗಳ ಜನರಿಗೂ ಅವರವರ ಬುದ್ಧಿ ಸಂಸ್ಕಾರಗಳಿಗೆ ತಕ್ಕಂತೆ ಆತ್ಮೋದ್ಧಾರದ ಸಂತೃಪ್ತಿಯನ್ನು ಒದಗಿಸುತ್ತದೆ." ಹೀಗೆ ಹೇಳಿರುವ ಡಿ. ವಿ ಜಿ. ಯವರ ಮಾತುಗಳು ಕೇವಲ ಹಿಂದು ಧರ್ಮಕ್ಕೆ ಸೀಮಿತವಾಗದೆ, ಪ್ರಪಂಚದ ಎಲ್ಲಾ ಧರ್ಮಗಳಿಗೂ ಅನ್ವಯಿಸುತ್ತವೆ. ಎಮಿಲಿ ಡರ್ಕೀಂ ಎಂಬ ಸುಪ್ರಸಿದ್ಧ ಫ್ರೆಂಚ್ ಸಮಾಜಶಾಸ್ತ್ರಜ್ಞನು, ಧರ್ಮದ ವಿಷಯವನ್ನು ಆಳವಾಗಿ ಸಂಶೋಧಿಸಿ, ವಿವಿಧ ಸಮಾಜಗಳಲ್ಲಿ ವಿವಿಧ ಕಾಲಗಳಲ್ಲಿ ರೂಢಿಯಲ್ಲಿದ್ದ ಧಾರ್ಮಿಕ ನಂಬಿಕೆಗಳನ್ನು ಮತ್ತು ಕ್ರಿಯಾವಿಧಿಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿ "ವಾಸ್ತವಿಕವಾಗಿ ಧರ್ಮಗಳಾವುವೂ ಸುಳ್ಳಲ್ಲ" ಎಂದು ತಿಳಿಸಿರುವನು. ಮಾನವ ಜೀವನದಲ್ಲಿ ಉದ್ಭವಿಸುವ ಮೂಲಭೂತ ಸಮಸ್ಯೆಗಳಿಗೆ, ಮಾನವ ಜೀವನದ ಅಸ್ತಿತ್ವ ಸಂದರ್ಭಗಳಿಗೆ ಅನುಸಾರವಾಗಿ ಉತ್ತರಗಳನ್ನು ಕೊಡಲು ವಿವಿಧ ಧರ್ಮಗಳು ಪ್ರಯತ್ನಿಸುತ್ತವೆ. ವಿವಿಧ ಧರ್ಮಗಳು ಪ್ರತಿಪಾದಿಸುವ ಭಾವನೆಗಳ ಔನ್ನತ್ಯದ ಆಧಾರದ ಮೇಲೆ, ಒಂದು ಶ್ರೇಣಿಯಲ್ಲಿ ಧರ್ಮಗಳನ್ನು ಗೊತ್ತುಮಾಡಲು ಸಾಧ್ಯವೆಂದು ಡರ್ಕೀಂನು ತಿಳಿಸಿರುವನು ಮಾನವ ಪ್ರಕೃತಿಯು ಒಂದೆ. ಆತನ ಅಭಿಲಾಷೆಗಳು, ಆಶೋತ್ತರಗಳು, ಗುರಿಗಳು ಭಾವನೆಗಳು ಆದರ್ಶಗಳು, ಧ್ಯೇಯಗಳು ವಿವಿಧ ರೀತಿಯಲ್ಲಿರುತ್ತವೆ. ತನ್ನ ಗುರಿಯನ್ನು ಮುಟ್ಟಲು, ಆದರ್ಶವನ್ನು ಸಾಧಿಸಲು ಮಾನವನು ಹಲವು ಮಾರ್ಗಗಳನ್ನು ಅನುಸರಿಸುತ್ತಿರುವುದು ಮಾನವನ ಸಾಮಾಜಿಕ ಚರಿತ್ರೆಯಲ್ಲಿ ಕಾಣಬರುತ್ತದೆ. ಇವುಗಳ ತುಲನಾತ್ಮಕ ಅಧ್ಯಯನವು ವಿವಿಧ ಧರ್ಮಗಳ ಮೂಲಭೂತ ಸಾಮ್ಯವನ್ನು ನಮಗೆ ತಿಳಿಸುತ್ತದೆ. ಮಾನವನು ಸಾಮಾಜಿಕ ಜೀವಿ. ಆತನೊಬ್ಬನೆ ಎಂದಿಗೂ ಬಾಳಲು ಇಚ್ಛಿಸುವುದಿಲ್ಲ. ಇತರರೊಂದಿಗೆ ಬಾಳುವಾಗ ಅನೇಕ ಸಮಸ್ಯೆಗಳು ತಲೆದೋರುತ್ತವೆ. ಆತನು ವಿವಿಧ ಕ್ಲೇಶಗಳಿಗೆ ತುತ್ತಾಗುತ್ತಾನೆ. ತನ್ನ ಜೀವನವನ್ನು ಆದಷ್ಟು ಸುಗಮಗೊಳಿಸಲು ನಿರಂತರವಾಗಿ ಪ್ರಯತ್ನಿಸುತ್ತಾನೆ. ಈ ಪ್ರಯತ್ನವು ಸಫಲವಾಗಬೇಕಾದರೆ ಧರ್ಮವು ಅಗತ್ಯ. ಈ ಪ್ರಯತ್ನದ ಫಲವೂ ಒಂದುರೀತಿಯಲ್ಲಿ ಧರ್ಮವೆಂದರೆ ಅತಿಶಯೋಕ್ತಿಯಲ್ಲ. ಮಾನವ ಜೀವನದಲ್ಲಿ ಒಬ್ಬರೊಬ್ಬರ ಸಹಾಯ, ಅವಲಂಬನ ಇವುಗಳ ಅಗತ್ಯವನ್ನು ಕಂಡಂತೆ, ಪ್ರಕೃತಿಯ ವಿವಿಧ ಶಕ್ತಿಗಳ ಪ್ರಭಾವವನ್ನು ಅರಿತು, ಅವುಗಳ ಮೇಲೆ ತನ್ನ ಜೀವನವು ಅವಲಂಬಿಸಿರುವ ರೀತಿಯನ್ನು ಅರಿಯುತ್ತಾನೆ. ವಿವಿಧ ಸಮಸ್ಯೆಗಳನ್ನು ಬಿಡಿಸಲು ಜ್ಞಾನವು ಅಗತ್ಯ. ಅವನಿಗೆ ಗೋಚರಿಸುವ ಪರಿಹಾರಗಳು ಅವನ ಜ್ಞಾನದ ಮಟ್ಟವನ್ನು ಅವಲಂಬಿಸಿರುತ್ತವೆ. ಅವನ ಜ್ಞಾನವು ವೃದ್ಧಿಯಾದಂತೆ ಅವನ ಪರಿಹಾರವು ಉತ್ತಮವಾಗುತ್ತದೆ. ಒಂದು ಕಡೆ ಪ್ರಕೃತಿ ವಿಜ್ಞಾನವು ಮಾನವನಿಗೆ ನೈಸರ್ಗಿಕ ಶಕ್ತಿಗಳ ಮೇಲೆ ಹೆಚ್ಚು ಹೆಚ್ಚಾಗಿ ಸ್ವಾಮ್ಯವನ್ನು ಸ್ಥಾಪಿಸಲು ಸಹಾಯಕವಾಗುತ್ತದೆ. ಇನ್ನೊಂದು ಕಡೆ ಸಮಾಜ ವಿಜ್ಞಾನವು ಮಾನವ ಜೀವನದ ನಾನಾ ಅಂಶಗಳ ವೈವಿಧ್ಯ ಮತ್ತು ಸಂಪತ್ತುಗಳನ್ನು ಅರಿಯಲು ಸಹಾಯಕವಾಗಿ, ಮಾನವ ಜೀವನವನ್ನು ಆದಷ್ಟು ಸುಖಮಯ ಮಾಡಲು ಪ್ರಯತ್ನಿಸುತ್ತದೆ. ಚಾರಿತ್ರಿಕವಾಗಿ ಅವಲೋಕಿಸಿದರೆ, ಧರ್ಮವಿಲ್ಲಧ ಸಮಾಜವು ಯಾವಾಗಲೂ ಅಸ್ತಿತ್ವದಲ್ಲಿರಲಿಲ್ಲ. ಕುಟುಂಬವಿಲ್ಲದ ಸಮಾಜವು ಹೇಗೆ ಎಂದೂ ಅಸ್ತಿತ್ವದಲ್ಲಿರಲಿಲ್ಲವೋ, ಹಾಗೆಯೆ ಧರ್ಮವಿಲ್ಲದ ಸಮಾಜವನ್ನು ನಾವು ಕಾಣಲಾರೆವು. ದರ್ಕೀಂನು ಧರ್ಮದ ಸಾಮಾಜಿಕ ಪ್ರಾಮುಖ್ಯತೆಯನ್ನು, ತನ್ನ ಸುಪ್ರಸಿದ್ಧ ಗ್ರಂಥವಾದ "ದಿ ಎಲಿಮೆಂಟರಿ ಫಾರಮ್ಸ್ ಆಫ್ ರಿಲಿಜಿಯಸ್ ಲೈಫ್" ಹೀಗೆ ವಿವರಿಸಿದ್ದಾನೆ "ಈ ಪುಸ್ತಕದ ಸಾಮಾನ್ಯ ಸಿದ್ಧಾಂತವು ಉತ್ಕೃಷ್ಟವಾಗಿ ಸಾಮಾಜಿಕ.. ಸಾಮಾಜಿಕ ಅಭಿಪ್ರಾಯಗಳು ಧರ್ಮದಲ್ಲಿ ರೂಪಗೊಳ್ಳುತ್ತವೆ."

ಪ್ರತಿಯೊಂದು ಧರ್ಮದಲ್ಲಿ ಎರಡು ಅಂಶಗಳು ಇರುತ್ತವೆ. ಒಂದು ವೈಯಕ್ತಿಕವಾದುದು. ಇನ್ನೊಂದು ಸಾಮಾಜಿಕವಾದುದು. ಧರ್ಮವು ವ್ಯಕ್ತಿಯ ಜೀವನದ ಔನ್ನತ್ಯಕ್ಕೆ ಅತ್ಯಂತ ಆವಶ್ಯಕವಾದುದರಿಂದಲೇ, ಪೂಜೆ, ಪ್ರಾರ್ಥನೆ, ಧ್ಯಾನ ಮೊದಲಾದವುಗಳು ವ್ಯಕ್ತಿಯ ಧಾರ್ಮಿಕ ಜೀವನದ ಪ್ರಮುಖ ಅಂಶಗಳಿವೆ. ವ್ಯಕ್ತಿಯು ತನ್ನ ಮುಕ್ತಿ

ಧಾರ್ಮಿಕನು ಏಕಾಂತದಲ್ಲಿ, ಇತರರನ್ನು ನಿರ್ಲಕ್ಷಿಸುವಂತಿಲ್ಲ. ಅವರೆಲ್ಲರೂ ಜನಜೀವನದಲ್ಲಿ ಹಾಸು ಹೊಕ್ಕಾಗಿರುವರು. ಅವರ ಮೇಲ್ಮೆಗೂ ತನ್ನ ಮೇಲ್ಮೆಗೂ ನಿಕಟವಾದ ಸಂಬಂಧವಿರುತ್ತದೆ. ಆದುದರಿಂದ ತನ್ನ ಮೇಲ್ಮೆಗಾದರೂ ಪರರ ಹಿತವನ್ನು ಪರಿಗಣಿಸುವುದು ಅಗತ್ಯವಾಗುತ್ತದೆ. ಧಾರ್ಮಿಕ ವ್ಯಕ್ತಿಯು ಪರೋಪಕಾರಿ. ಪರರ ಕ್ಲೇಶಗಳ ನಿವಾರಣೆಗೆ ನಿರಂತರವಾಗಿ ಪ್ರಯತ್ನಿಸುತ್ತಾನೆ. ಸಾಮಾಜಿಕ ಜೀವನವು, ಪರಸ್ಪರಾವಲಂಬನೆಯನ್ನು ಸ್ಪಷ್ಟಗೊಳಿಸಿದರೆ, ಧರ್ಮವು ಬೇರೆಯ ರೂಪದಲ್ಲಿ, ವ್ಯಕ್ತಿಯನ್ನು ಸಮುಷ್ಟಿಯ ಜೊತೆಗೆ ಬಂಧಿಸುತ್ತದೆ. ಪ್ರತಿಯೊಬ್ಬ ಮನುಷ್ಯನೂ ಈಶ್ವರ ಚೈತನ್ಯದ ಒಂದು ಭಾಗ, ಆದುದರಿಂದ ಪ್ರತಿಯೊಂದು ಧರ್ಮವೂ, ಮನುಷ್ಯರೆಲ್ಲರೂ ಒಬ್ಬ ದೇವನ ಮಕ್ಕಳು, ಅವರೆಲ್ಲರೂ ಸಹೋದರರು. ಆದುದರಿಂದ ಪರಸ್ಪರ ಸಹಾಯ, ತ್ಯಾಗ, ಸಹನೆ, ಅನುಕಂಪ, ಉಪಕಾರ ಮೊದಲಾದ ಗುಣಗಳು ಪ್ರತಿಯೊಂದು ಧರ್ಮದಲ್ಲಿಯೂ ಉನ್ನತ ಸ್ಥಾನವನ್ನು ಪಡೆದಿದೆ. ಪ್ರತಿಯೊಂದು ಧರ್ಮವೂ ನೈತಿಕ ಅಂಶವನ್ನು ಹೊಂದಿರುತ್ತದೆ. ನೈತಿಕ ಅಂಶವಿಲ್ಲದ ಧರ್ಮವಿಲ್ಲ. ದೇವರಿಲ್ಲದ ನೀತಿಸಂಹಿತೆ ಇರಲು ಸಾಧ್ಯ. ಆದರೆ ನೀತಿ ಇಲ್ಲದ ಧರ್ಮವಿಲ್ಲ. ಒಬ್ಬ ವ್ಯಕ್ತಿಯು ದೇವರನ್ನು ನಂಬದೆ ನೀತಿಯುತವಾದ ಜೀವನವನ್ನು ಸಾಗಿಸಬಹುದು. ಆದರೆ ನೀತಿ ಇಲ್ಲದ ಧರ್ಮವನ್ನು ಯಾರೂ ಪುರಸ್ಕರಿಸುವುದಿಲ್ಲ. ಲೌಕಿಕ ಜೀವನವು ಆಧ್ಯಾತ್ಮಿಕ ಜೀವನದಿಂದ ಪ್ರತ್ಯೇಕವಾದುದಲ್ಲ. ಅವೆರಡೂ ಪರಿಪೂರ್ಣ ಜೀವನದ ಅವಿಭಾಜ್ಯ ಅಂಗಗಳು "ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು. ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ" ಎಂಬ ಬಸವಣ್ಣನವರ ವಚನವು ಲೌಕಿಕ ಜೀವನದ ಅಗತ್ಯ ಮತ್ತು ಔನ್ನತ್ಯಗಳನ್ನು ಮನಮುಟ್ಟುವಂತೆ ತಿಳಿಸುತ್ತದೆ. "ಮುಕ್ತನಿಗೆ ಸಂಸಾರವು ಭಾರವಲ್ಲ. ಅದು ಲೀಲೆ……… ಜೀವನೋತ್ಕರ್ಷವೇ ಧರ್ಮದ ಗುರಿ ……… ಜೀವನವು ತುಚ್ಛವಲ್ಲ. ಅದು ಶ್ರೇಯೋವಕಾಶ ಮತ್ತು ಮಹಾಕರ್ತವ್ಯ." ಆದುದರಿಂದ ಜೀವನ್ಮುಕ್ತ ಮಹಾನುಭಾವರು ನಿರಂತರವಾಗಿ ಮಾನವ ಜೀವನದ ಉತ್ಕರ್ಷಕ್ಕೆ ತಮ್ಮ ಜೀವನವನ್ನು ಮೀಸಲಾಗಿಟ್ಟರು. ಬುದ್ಧ, ಏಸೂಕ್ರಿಸ್ತ, ಮಹಮದ್, ಶಂಕರ, ಬಸವ, ವಿವೇಕಾನಂದ, ಗಾಂಧೀಜಿ ಇವರುಗಳ ಜೀವನವೇ ಇದಕ್ಕೆ ಸಾಕ್ಷಿ.

ಅನೇಕ ಸಮಾಜಶಾಸ್ತ್ರಜ್ಞರು ಧರ್ಮದ ಮೂಲವನ್ನು ವಿಶ್ಲೇಶಿಸುವಾಗ, ಕ್ರಿಯಾತ್ಮಕ ತತ್ವದ ಹಿನ್ನೆಲೆಯಲ್ಲಿ ಧರ್ಮದ ಉಗಮ ಮತ್ತು ಕಾರ್ಯಗಳನ್ನು ನಿರೂಪಿಸಿರುವರು. ಧರ್ಮವು ಸಾಮಾಜಿಕ ರಚನೆಗೆ ಪುಷ್ಟಿಕೊಟ್ಟು, ಅದರ ಸುಭದ್ರ ಅನುಕೂಲವಾದ ನೀತಿ ನಿಯಮಗಳನ್ನು ಸೂಚಿಸುತ್ತದೆ. ಧರ್ಮವು ಸಮಾಜದ ಉಳಿವಿಗೆ ಮತ್ತು ಸ್ಥಿರತೆಗೆ ಅಗತ್ಯವಾದ ಮನೋಭಾವಗಳನ್ನು ಪೋಷಿಸುತ್ತದೆ. ಧರ್ಮವು ವಿಧಿಸಿರುವ ನಿಯಮಗಳು ಸಮಾಜದ ಸದಸ್ಯರ ಸಂಬಂಧಗಳಲ್ಲಿ ಸಹಾಯ, ಸೌಹಾರ್ದ, ತ್ಯಾಗ, ಮೊದಲಾದ ಗುಣಗಳಿಗೆ ಆದ್ಯತೆಯನ್ನು ಕೊಟ್ಟು, ಅವರಲ್ಲಿ ಏಕತಾಭಾವನೆಯನ್ನು ಪೋಷಿಸುತ್ತದೆ. ಇದು 'ಧರ್ಮ' ಪದದ ಅರ್ಥವನ್ನು ಅವಲೋಕಿಸಿದರೆ ಸ್ಪಷ್ಟವಾಗಿ ಕಾಣುತ್ತದೆ. ಧರಿಸಬಲ್ಲುದು ಧರ್ಮ. ಯಾವುದನ್ನು ನಾವು ಪಾಲಿಸಿದರೆ ಅದು ನಮ್ಮನ್ನು ಪಾಲಿಸುವುದೋ ಅದು ಧರ್ಮ. ಆಂಗ್ಲ ಭಾಷೆಯಲ್ಲಿ ಧರ್ಮಕ್ಕೆ, ರಿಲಿಜನ್ (religion) ಎಂಬ ಪದವಿದೆ. ಅದರ ಮೂಲಶಬ್ದವನ್ನು ಪರಿಶೀಲಿಸಿದರೆ ಧರ್ಮದ ತಿರುಳು ಗೋಚರಿಸುತ್ತದೆ. 'ರಿಲಿಜನ್' ಎಂಬ ಪದವು ಲ್ಯಾಟಿನ್ ಭಾಷೆಯ 'ರಿಲಿಗಾರೆ' ಎಂಬ ಪದದಿಂದ ಬಂದುದು. ಆ ಪದದ ಅರ್ಥ ಪರಸ್ಪರ ಬಂಧಿಸುವುದು. ತಮ್ಮ ಜೀವನದ ಸಂತೋಷ, ಸುಖ ದುಃಖಗಳಲ್ಲಿ ಪರಸ್ಪರ ಭಾಗಿಗಳಾಗುತ್ತಾರೆ. ಆದುದರಿಂದ ವಿವಿಧ ನೀತಿ ನಿಯಮಗಳು ಧರ್ಮದ ಅವಿಭಾಜ್ಯ ಅಂಗಗಳೆಂದು ಎಲ್ಲಾ ಧರ್ಮಗಳೂ ಅಂಗೀಕರಿಸಿವೆ. ಒಟ್ಟಿನಲ್ಲಿ ಹೇಳುವುದಾದರೆ "ಸಂಪೂರ್ಣ ಧರ್ಮವು ಒಂದು ಸಾಮಾಜಿಕ ಸಂಗತಿ. ಅವರಲ್ಲಿ ಎಲ್ಲರೂ ಭಾಗಿಗಳು. ಅದರ ಅನೇಕ ಅರ್ಥಪೂರ್ಣ ಅಂಶಗಳು ಸಮೂಹದ ಪರಸ್ಪರ ಕ್ರಿಯೆಗಳಿಂದ ಮೂಡಿಬಂದವುಗಳು. ಧರ್ಮದ ಉಗಮಕ್ಕೆ ಸ್ಫೂರ್ತಿ ಕೊಡುವ ಭಾವನೆಗಳು ಮಾನವ ಜೀವನದ ಸಮಸ್ಯೆಗಳಿಗೆ ಅದು ನೀಡುವ ಪರಿಹಾರಗಳೂ ಸಾಮಾಜಿಕವಾದುವು."

ಮಾನವ ಚರಿತ್ರೆಯನ್ನು ಅವಲೋಕಿಸಿದರೆ, ಆದಿಯಿಂದಲೂ ಆರ್ಥಿಕ ಜೀವನದ ಪ್ರಾಮುಖ್ಯತೆಯು ಕಾಣಬರುತ್ತದೆ. ವಿಶಾಲವಾದ ಅರ್ಥದಲ್ಲಿ ಹೇಳುವುದಾದರೆ, ಮನುಷ್ಯನ ಆಹಾರ ಮತ್ತು ಆಸ್ತಿಗಳಿಗೆ ಸಂಬಂಧಿಸಿದ ವ್ಯವಹಾರಗಳು ಆರ್ಥಿಕ ಸಂಸ್ಥೆಗಳ ಕಾರ್ಯಕ್ಷೇತ್ರ. ಈ ವಿಶಾಲವಾದ ದೃಷ್ಟಿಯಿಂದಲೆ ಮಾರ್ಷಲನು ಅರ್ಥಶಾಸ್ತ್ರವನ್ನು "ಮನುಷ್ಯನ ವ್ಯಾವಹಾರಿಕ ಜೀವನವನ್ನು ಅಭ್ಯಾಸಿಸುವ ಶಾಸ್ತ್ರ" ಎಂದು ವಿವರಿಸಿದನು. ಆದಿಮಾನವನು ತನ್ನ ದೈನಂದಿನ ಜೀವನದ ಬಹುಭಾಗವನ್ನು ಆಹಾರಾನ್ವೇಷಣೆಯಲ್ಲಿ ಕಳೆಯುತ್ತಿದ್ದನು. ಆಧುನಿಕ ಮನುಷ್ಯನೂ ಸಹ ತನ್ನ ಜೀವನಕ್ಕೋಸ್ಕರ ಸಂಪಾದನೆಯಲ್ಲಿ ನಿರತನಾಗಿದ್ದಾನೆ. ಜೀವನ ನಿರ್ವಹಣೆಗೆ ಬೇಕಾಗುವ ವಸ್ತುಗಳನ್ನು ಹೊಂದುವ ಉದ್ದೇಶದಿಂದ ಆತನು ಹಲವು ವಿಧವಾದ ಹಣಗಳಿಕೆಯ ಕಾರ್ಯಗಳಲ್ಲಿ ನಿರತನಾಗಿದ್ದಾನೆ. ಹೀಗೆ ಮನುಷ್ಯನು ತನ್ನ ಜೀವನದ ಅಗತ್ಯ ಬೇಡಿಕೆಗಳ ಪೂರೈಕೆಗೋಸ್ಕರ ವಿವಿಧ ವೃತ್ತಿಗಳಲ್ಲಿ ನಿರತನಾಗುತ್ತಾನೆ. ಆದುದರಿಂದಲೇ ಮಾನವನು ನಿರತನಾಗಿರುವ ವೃತ್ತಿ ಯಾವುದು, ಆತನು ಯಾರ ಸಲುವಾಗಿ ದುಡಿಯುತ್ತಾನೆ ಮತ್ತು ಆ ದುಡಿಮೆಯ ಫಲದ ಹಂಚಿಕೆಯು ಯಾವ ರೀತಿಯಲ್ಲಿರಬೇಕು, ಈ ವಿಚಾರಗಳು ಒಟ್ಟು ಸಮುದಾಯದ ಕಲ್ಯಾಣಕ್ಕೆ ನಿಕಟವಾದ ಸಂಬಂಧಗಳನ್ನು ಹೊಂದಿರುತ್ತವೆ. ಮಾನವನ ಆರ್ಥಿಕ ಜೀವನಕ್ಕೂ ಉಳಿದ ಭಾಗಗಳಿಗೂ ನಿಕಟವಾದ ಸಂಬಂಧಗಳಿವೆ. ಮಾನವ ಜೀವನದ ವಿವಿಧ ಭಾಗಗಳು ಪ್ರತ್ಯೇಕಗಳು ಮಾತ್ರ. ಅವು ಪರಸ್ಪರ ವಿರುದ್ಧವಾದುವುಗಳಲ್ಲ. ಅವುಗಳನ್ನು ಸಾಮರಸ್ಯ ದೃಷ್ಟಿಯಿಂದ ನೋಡುವುದು ಸುಗಮ ಸಾಮಾಜಿಕ ಜೀವನಕ್ಕೆ ಅಗತ್ಯ. ಈ ಸಾಮರಸ್ಯದೃಷ್ಟಿಯನ್ನು ಪೋಷಿಸಲು ಧರ್ಮವು ಅಗತ್ಯ. ಪ್ರಪಂಚದ ವಿವಿಧ ಧರ್ಮಗಳು ಆರ್ಥಿಕ ಅಂಶದ ಪ್ರಾಮುಖ್ಯತೆಯನ್ನು ಪರಿಗಣಿಸಿ ಅದರ ಸ್ಥಾನವನ್ನು ನಿರೂಪಿಸಿರುವರು. ಲೌಕಿಕ ಜೀವನವನ್ನು ತುಚ್ಛವಾಗಿ ಕಂಡು, ಜೀವನದ ಅಗತ್ಯಗಳನ್ನು ನಿರ್ಲಕ್ಷಿಸಿ, ಜೀವನವನ್ನು ಸಾಗಿಸಬೇಕೆಂದು ಪ್ರಪಂಚದ ಯಾವ ಪ್ರಮುಖ ಧರ್ಮವೂ ಪ್ರತಿಪಾದಿಸಿಲ್ಲ. ಆರ್ಥಿಕ ಶಕ್ತಿಗಳನ್ನು ಒಂದು ಎಲ್ಲೆಯಲ್ಲಿರಿಸಬೇಕಾದ ಅಗತ್ಯವನ್ನು ಎಲ್ಲಾ ಧರ್ಮಗಳೂ ತಿಳಿಸಿವೆ. ಧಾರ್ಮಿಕ ವ್ಯಕ್ತಿಯು ಸಮಾಜದ ಹಿತಕ್ಕೆ ವಿರೋಧಿಯಲ್ಲ. ಆತನ ಜೀವನವು ಶಿಸ್ತಿನ ಜೀವನ. ಆ ಸಂಯಮ ಮತ್ತು ಶಿಸ್ತುಗಳು ಹೊರಗಿನ ಬಲ ಪ್ರಭಾವದಿಂದ ಬಂದುವುಗಳಲ್ಲ. ಅವು ಆತನ ಅಂತರ್‌ಜ್ಞಾನದಿಂದ ಮೂಡಿಬಂದವುಗಳು. ತನ್ನಂತೆ ಎಲ್ಲರೂ

ಈಶ್ವರನ ಅಂಶವಾದುದರಿಂದ, ಇತರರ ಸುಖವನ್ನು ಪರಿಗಣಿಸ ವುದು ಆತನಿಗೆ ಕೇವಲ ಕರ್ತವ್ಯವಾಗದೆ, ಅಭ್ಯಾಸವಾಗಿ ಪರಿಣಮಿಸಿದೆ. ಒಳ್ಳೆಯ ಕೆಲಸಗಳಲ್ಲಿ ನಿರತನಾಗಿರುವುದು ಆತನ ಸ್ವಭಾವ. ಉಸಿರಾಡು ವುದು ಆತನಿಗೆ ಎಷ್ಟು ನೈಜವೋ, ಒಳ್ಳೆಯ ಕಾರ್ಯಗಳಲ್ಲಿ ನಿರತನಾಗಿ ರುವುದು ಧಾರ್ಮಿಕ ವ್ಯಕ್ತಿಗೆ ಅಷ್ಟೇ ಸಹಜ. ಈ ಅರ್ಥವನ್ನು ಪರಿ ಗಣಿಸಿಯೇ ಅರಿಸ್ಟಾಟಲ್ ಮಹಾಶಯನು – ಒಳ್ಳೆಯ ಕೆಲಸಗಳಲ್ಲಿ ನಿರತ ವಾಗಿರುವ ಅಭ್ಯಾಸ ಅಥವಾ ರೂಢಿಯನ್ನು ಹೊಂದಿರುವವನು ಒಳ್ಳೆಯ ಮನುಷ್ಯನೆಂದು ತಿಳಿಸಿದನು. ಒಳ್ಳೆಯ ಕೆಲಸಗಳು ಆತನ ಜೀವನದ ಹಾಸುಹೊಕ್ಕಾಗಿ, ನೀರಿನಂತೆ ಹರಿಯುತ್ತವೆ.

ಲೌಕಿಕ ಜೀವನದ ಪ್ರಾಮುಖ್ಯವನ್ನು ಸ್ಥೂಲವಾಗಿ ತಿಳಿಸಿ. ಅದಕ್ಕೂ ಧರ್ಮಕ್ಕೂ ಇರುವ ನಿಕಟ ಸಂಬಂಧವನ್ನು ಸಂಕ್ಷಿಪ್ತವಾಗಿ ವಿವರಿಸಲಾಯಿತು. ವೀರಶೈವ ಧರ್ಮದಲ್ಲಿ ಕಾಯಕವು ಹೀಗೆ ಆರ್ಥಿಕ ಧಾರ್ಮಿಕ ಭಾಗಗಳಲ್ಲಿ ಸಾಮರಸ್ಯವನ್ನು ನಿರೂಪಿಸಿ, ಆರ್ಥಿಕ ಜೀವನಕ್ಕೆ ಒಂದು ಆಧ್ಯಾತ್ಮಿಕ ಮೆರಗನ್ನು ಕೊಟ್ಟು, ವೃತ್ತಿಗೌರವ ತತ್ವನಿರೂಪಣೆಗೆ ಮಾತ್ರ ಸೀಮಿತವಾಗಿದೆ, ವೃತ್ತಿ ದೈವತ್ವದ ಹಿನ್ನೆಲೆಯಲ್ಲಿ ವಿವಿಧ ವೃತ್ತಿ ಗಳನ್ನು ಅವಲೋಕಿಸುವ ಅಗತ್ಯವನ್ನು ನಿರೂಪಿಸಲಾಗಿದೆ. ಪಾಶ್ಚಾತ್ಯರ ಪ್ರಾಟೆಸ್ಟೆಂಟ್ ಧರ್ಮದ ನೀತಿ ಸಂಹಿತೆಯಲ್ಲಿ ಬರುವ "ಕಾಲಿಂಗ್" ಅಥವಾ "ವೃತ್ತಿ" ಎಂಬ ಭಾವನೆಯಲ್ಲಿರುವ ಆಧ್ಯಾತ್ಮಿಕ ಅಂಶವನ್ನು ವಿವರಿಸಿ, ಕಾಯಕ ಮತ್ತು ಕಾಲಿಂಗ್ ಭಾವನೆಗಳಿಗೆ ಇರುವ ಸಾಮ್ಯಗ ಳನ್ನು ವಿವರಿಸಲಾಗುವುದು. ಈ ಪ್ರಬಂಧದಲ್ಲಿ ವೀರಶೈವ ಮತ್ತು ಪ್ರಾಟೆಸ್ಟೆಂಟ್ ಧರ್ಮತತ್ವಗಳ ನಿರೂಪಣೆಯು ಪ್ರಯತ್ನಕ್ಕೆ ಹೋಗಿಲ್ಲ. ಆರ್ಥಿಕ ಜೀವನದಲ್ಲಿ ಎರಡು ಪ್ರಮುಖ ಭಾವನೆಗಳು ಧಾರ್ಮಿಕ ತಿರುಳನ್ನು ಹೊಂದಿ, ಮಾನವ ಜೀವನದಲ್ಲಿ ಸಾಮರಸ್ಯವನ್ನು ಸ್ಥಾಪಿಸಲು ಸಹಾ ಯಕವಾದುವು ಎಂಬುದನ್ನು ತುಲನಾತ್ಮಕ ದೃಷ್ಟಿಯಿಂದ ವಿಶ್ಲೇಷಿಸಲಾ ಗುವುದು.

'ಕಾಯಕ' ಎಂಬ ಪದವು ಸಂಸ್ಕೃತದ 'ಕಾಯ' ಎಂಬ ಪದದಿಂದ ಬಂದುದು ಕಾಯವೆಂದರೆ ಶರೀರ. ಶರೀರಶ್ರಮದಿಂದ ಉಂಟಾದ ಕೆಲಸವೆ ಕಾಯಕ ಎಂದು, ಆ ಪದದ ಅರ್ಥವು ಸೂಚಿತವಾಗಿದೆ. ಮನುಷ್ಯನು ಸ್ವಶ್ರಮದಿಂದ ಜೀವನವನ್ನು ಸಾಗಿಸಬೇಕು. ಅವನು ತನ್ನ ಜೀವನ ನಿರ್ವಹಣೆಗೆ, ಒಂದು ಉದ್ಯೋಗ ಅಥವಾ ವೃತ್ತಿಯಲ್ಲಿ ನಿರತನಾಗಿರಬೇಕು. ವಚನಕಾರರು ಕರ್ಮ ಎಂಬ ಪದವನ್ನು ಬಹು ವಿಶಾಲವಾದ ಅರ್ಥದಲ್ಲಿ ಉಪಯೋಗಿಸದೆ, ಒಂದು ವಿಶಿಷ್ಟ ಅರ್ಥದಲ್ಲಿ ಉಪಯೋಗಿಸಿರುವರು. "ಇಲ್ಲಿ ಕರ್ಮವೆಂದರೆ, ತನ್ನ ಮತ್ತು ಸಮಾಜದ ಧಾರಣೆ ಹಾಗೂ ವಿಕಾಸಕ್ಕಾಗಿ, ಸ್ವಶಕ್ತಿ ಹಾಗೂ ಪರಿಸ್ಥಿತಿ, ಇವುಗಳಿಗೆ ಅನುಗುಣವಾಗಿ ಪ್ರತಿಯೊಬ್ಬನೂ ಮಾಡತಕ್ಕ ಕರ್ತವ್ಯವು" ಕರ್ಮವು ಮನುಷ್ಯನ ಕ್ರಿಯಾಶಕ್ತಿಯನ್ನು ಅವಲಂಬಿಸಿದೆ. ಇಂತಹ ಕಾರ್ಯದಲ್ಲಿ ನಿರತನಾಗಬೇಕೆಂದು ನಿರ್ಣಯವನ್ನು ಮಾಡಬೇಕು. ಆ ನಿರ್ಣಯವು ಕರ್ಮೇಂದ್ರಿಯಗಳ ಶಕ್ತಿಗೆ ಅನುಗುಣವಾಗಿರಬೇಕು. ಒಟ್ಟಿನಲ್ಲಿ ಹೇಳುವುದಾದರೆ ಕಾಯಕಕ್ಕೆ ನಿರ್ಮಲ ನಿರ್ಣಯಶಕ್ತಿ ಮತ್ತು ಉತ್ಸಾಹಯುಕ್ತವಾದ ಕರ್ಮಶಕ್ತಿ ಇವುಗಳು ಅವಶ್ಯಕ. ಜೀವನಕ್ಕೆ ಕರ್ಮವು ಅತ್ಯಂತ ಅವಶ್ಯಕವೆಂದು ವಚನಕಾರರು ತಿಳಿಸಿದರು ಶರಣ ಸಿದ್ಧರಾಮಯ್ಯನ ವಚನವು ಇದನ್ನು ತಿಳಿಸುತ್ತದೆ "ಕೃಷಿಯಮಾಡಿ ಉಣ್ಣದೆ ಹಸಿವು ಹರಿವ ಪರಿ ಇನ್ನೆಂತೋ ? ಕರ್ಮಯೋಗವ ಮಾಡದೆ ನಿರ್ಮಲ ಸುಚಿತ್ತವನರಿವ ಪರಿ ಇನ್ನೆಂತೋ? ಬೇಯದೆ ಅಶನವನುಂಬ ಠಾವಾವುದು ಕಪಿಲಸಿದ್ಧ ಮಲ್ಲಿಕಾರ್ಜುನಾ ?" ಸಾಮಾನ್ಯವಾದರೂ, ದೇಹ ಪೋಷಣೆಗೆ ಅಡಿಗೆಮಾಡಿ ಊಟ ಮಾಡಿದಹೊರತೂ ಆಗದು. ದೇಹ ಪೋಷಣೆಗೆ ಒಂದು ವೃತ್ತಿಯನ್ನು ಕೈಕೊಳ್ಳಬೇಕು. ಇದೇ ಕರ್ತವ್ಯ ಕರ್ಮ. ಕರ್ತವ್ಯಕರ್ಮವು ಅವಶ್ಯಕ. ಕರ್ಮಕ್ಷೇತ್ರವನ್ನು ಬಿಟ್ಟು ಓಡಿಹೋಗುವುದು ನಿಜವಾದ ಭಕ್ತನ ಲಕ್ಷಣವಲ್ಲ ಕಠಿಣಪ್ರಸಂಗ ಬಂದರೂ ಕರ್ತವ್ಯಕರ್ಮವನ್ನು ಬಿಡಕೂಡದು. ಕರ್ತವ್ಯ ನಿರ್ವಹಣೆ ಯಲ್ಲಿ ಬರುವ ತೊಡಕುಗಳನ್ನು ದೇವರು ಒಡ್ಡಿದ ಪರೀಕ್ಷಾಪ್ರಸಂಗಗ ಳೆಂದು ಭಾವಿಸಿ, ತನ್ನ ಕರ್ತವ್ಯದ ದಾರಿಯನ್ನು ಬಿಡದೆ ಧೈರ್ಯದಿಂದ ನಡೆಯಬೇಕು. ಇದನ್ನು ದೇವರ ದಾಸಿಮಯ್ಯನವರು ತಿಳಿಸಿರುವರು. "ಹರ ತನ್ನ ಭಕ್ತರ ತಿರಿವಂತೆ ಮಾಡುವ. ಒರೆದು ನೋಡುವ ಸುವರ್ಣದ ಚಿನ್ನದಂತೆ, ಅರೆದು ನೋಡುವ ಚಂದನದಂತೆ, ಅರಿದು ನೋಡುವ ಕಬ್ಬಿನ ಕೋಲಿನಂತೆ, ಬೆದರದೆ ಬೆಚ್ಚದೆ ಇದ್ದಡೆ ಕರನಿಱಿದು ಎತ್ತಿಕೊಂಬ ನಮ್ಮ ರಾಮನಾಥನು." ಕರ್ಮಕ್ಷೇತ್ರದಲ್ಲಿ ಯಾವ ತೊಡಕು ಬಂದರೂ ಧೃತಿಗೆಡಬಾರದು. ಯಾವ ಕಠಿಣ ಪ್ರಸಂಗ ಬಂದರೂ ಹಿಂಜರಿಯದೆ, ದೇವರು ನಮ್ಮನ್ನು ಪರೀಕ್ಷಿಸಿದರೂ, ಅಂಜದೆ ಅಳುಕದೆ ಇರಬೇಕು. ದೇವರು ನಮಗೆ ಕಷ್ಟಗಳನ್ನು ಕೊಟ್ಟು ನಮ್ಮ ಸ್ಥೈರ್ಯ ವನ್ನು ಒರೆಹಚ್ಚುತ್ತಾನೆ. ದೇವರು ನಮ್ಮನ್ನು ಅರೆದು ನೋಡಿದರೆ, ಚಂದನದಂತೆ ಮತ್ತಷ್ಟು ಕಂಪನ್ನು ಬೀರಬೇಕು. ನಮ್ಮನ್ನು ಹಿಂಡಿ ನೋಡಿದಾಗ ಹೆಚ್ಚು ಹೆಚ್ಚಾಗಿ ರಸರಸವನ್ನು ಸೂಸಬೇಕು. ಆಗ ಅವನು ಪ್ರೀತನಾಗಿ ಕೈಹಿಡಿದು ಎತ್ತಿಕೊಳ್ಳುತ್ತಾನೆ. ಸಮಾಜದಲ್ಲಿ ನಾವು ಯಾರಿಗೂ ಭಾರವಾಗಿರಬಾರದು. ಕಾಯಕವು ಪರಮ ಕರ್ತವ್ಯ. ಕರ್ಮಯೋಗಿಯು ದೇವರ ಪೂಜೆಯಲ್ಲಿ ನಿರತನಾಗಿರು ವವನು. ಆದುದರಿಂದಲೇ "ಕಾಯಕವೇ ಕೈಲಾಸ." ಎಲ್ಲರೂ ಕಾಯಕದಲ್ಲಿ ನಿರತರಾಗಿರಬೇಕು. ನೂಲಿ ಚಂದಯ್ಯಗಳು ಪ್ರಭು ದೇವರಿಗೆ ಬಿನ್ನೈಸುವ ವಚನದಲ್ಲಿ ಈ ಭಾವವು ಅತ್ಯುತ್ತಮವಾಗಿ ವ್ಯಕ್ತಪಡುತ್ತದೆ. "ಗುರುವಾದರು ಕಾಯಕದಿಂದಲೆ ಜೀವನ್ಮುಕ್ತಿ. ಲಿಂಗವಾದರು ಕಾಯಕದಿಂದಲೇ ಲಿಂಗದ ಶಿಲೆಯ ಕುಲ ಹರಿವುದು. ಜಂಗಮವಾದರು ಕಾಯಕದಿಂದಲೆ ತನ್ನ ವೇಶದ ಪಾಶ ಹರಿವುದು. ಗುರುವಾದರೂ ಚರಸೇವೆಯ ಮಾಡಬೇಕು. ಲಿಂಗವಾದರೂ ಚರಸೇ ವೆಯ ಮಾಡಬೇಕು. ಜಂಗಮವಾದರೂ ಚರಸೇವೆಯ ಮಾಡಬೇಕು. ಇದು ಚಂದೇಶ್ವರ ಲಿಂಗದ ಅರಿವು ಕೇಳಾ ಪ್ರಭುವೆ." ಸಂಪಾದನೆಯೇ ಮುಖ್ಯವಲ್ಲ. ಆ ಸಂಪಾದನೆಯು ಶುದ್ಧವಾಗಿರಬೇಕು. ಆಗಲೆ ಅದರ ವಿನಿಯೋಗವು ಸಾರ್ಥಕವಾಗುತ್ತದೆ. ಸತ್ಯಶುದ್ಧ ಕಾಯಕದಿಂದ ಸಂಪಾದಿಸಿದ ದ್ರವ್ಯದಿಂದ ಮಾಡಿದ ನೈವೇದ್ಯವನ್ನು ಶಿವನು ಪ್ರೇಮಪು ರಸ್ಸರವಾಗಿ ಸ್ವೀಕರಿಸುತ್ತಾನೆ. ಹಗ್ಗವನ್ನು ಬಸವಣ್ಣನವರಿಗೆ ಕೊಟ್ಟು, ಸಾವಿರ ಮೊಹರಗಳನ್ನು ತಂದ ಲಿಂಗವನ್ನು ಕಂಡು ಚಂದಯ್ಯನು ಕಳವಿ ನಿಂದ ತಂದೆಯೋ ಎಂದು ಕೇಡಿಸುತ್ತಾನೆ. "ಸತ್ಯ ಶುದ್ಧ ಕಾಯಕದಿಂದ ಬಂದ ದ್ರವ್ಯದಲ್ಲಿ ಚಿತ್ತ ನಿಶ್ಚಂದವಾಗಿರಬೇಕು. ಎಂದಿನ ನಿತ್ಯ ನೇಮದಲ್ಲಿ ಸಂದಿಲ್ಲದಿರಬೇಕು. ನೇಮದ ಕೂಲಿಯ ಬಿಟ್ಟು, ಹೇಮ ದಾಸೆಗೆ ಕಾಮಿಸಿ ದ್ರವ್ಯವ ಹಿಡಿದರೆ, ತಾ ಮಾಡುವ ಸೇವೆ ನಷ್ಟವಯ್ಯ. ನಿನ್ನಾಸೆಯ ಮೇಪದ ಪಾಶಕ್ಕೆ ನೀನೇ ಹೋಗು. ನಮ್ಮ ಜಂಗಮ

ಪ್ರಸಾದದಾಗೆ ಚಂದೇಶ್ವರ ಲಿಂಗಕ್ಕೆ ಪ್ರಾಣವಯ್ಯ". "ಕಂದಿಸಿ ಕುಂದಿಸಿ ಬಂಧಿಸಿ ನೋಯಿಸಿ ಕಂಡ ಕಂಡವರ ಬೇಡಿ ತಂದು ಜಂಗಮ ಲಿಂಗಕ್ಕೆ ದಾಸೋಹವ ಮಾಡಿಹೆನೆಂಬ ದಂದುಗನ ಮಾಟ ಲಿಂಗಕ್ಕೆ ನೈವೇದ್ಯ ಸಲ್ಲದು. ತನು ಕರಗಿ ಮನಬಳಲಿ ಬಂದ ತೆರದನುವನರಿದು ಸಂದಿಲ್ಲದೆ ಸಂಶಯವಿಲ್ಲದೆ ಜಂಗಮಲಿಂಗಕ್ಕೆ ದಾಸೋಹವ ಮಾಡುವುದೆ ಮಾಟ. ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು ಲಿಂಗಾರ್ಪಿತವಲ್ಲದೆ ದುರಾಸೆಯಿಂದ ಬಂದುದು ಅನರ್ಪಿತ. ಇದು ಕಾರಣ ಸತ್ಯಶುದ್ಧ ಕಾಯಕದ ನಿತ್ಯದ್ರವ್ಯವಾದರೆ ಚಂದೇಶ್ವರಲಿಂಗಕ್ಕೆ ನೈವೇದ್ಯ ಸಂದಿತ್ತು ಕೇಳಯ್ಯಾ."

ಕೆಲಸಕ್ಕೆ ತಕ್ಕಂತೆ ಕೂಲಿಯನ್ನು ಪಡೆಯುವುದು ಸಾಧಕನ ಲಕ್ಷಣ. ಸುಲಭವಾಗಿ ದೊರಕಿತೆಂದು, ಆಸೆಯಿಂದ ಹೆಚ್ಚು ಹೆಚ್ಚಾಗಿ ದ್ರವ್ಯವನ್ನು ಶೇಖರಿಸಬಾರದು. ಕರ್ಮಾರ್ಜನೆಯಲ್ಲಿ ಭಾವ ಪರಿಶುದ್ಧತೆ ಇದ್ದರೆ ಸೇವೆಗೆ ಬೇಕಾಗುವ ದ್ರವ್ಯ ದೊರಕುತ್ತದೆ. "ಆಯ್ದಕ್ಕಿ ಮಾರಯ್ಯಗಳ ಸಂಪಾದನೆ"ಯಿಂದ ಇದು ಸ್ಪಷ್ಟವಾಗುತ್ತದೆ. ಆಯ್ದಕ್ಕಿ ಮಾರಯ್ಯನು ಹೆಚ್ಚು ಧಾನ್ಯವನ್ನು ಶೇಖರಿಸಿ ತಂದಾಗ, ಆತನ ಹೆಂಡತಿ ಲಕ್ಕಮ್ಮ "ಈಸಕ್ಕಿಯಾಸೆ ನಿಮಗೇಕಯ್ಯ? ಈಶ್ವರನೊಪ್ಪ" ಎಂದು ವಿಡಂಬಿಸುತ್ತಾಳೆ. ಆಸೆಯನ್ನು ಬಿಟ್ಟು ನಿಸ್ಪೃಹತೆಯಿಂದ ಸತ್ಯ ಶುದ್ಧ ಕಾಯಕದಿಂದ ಬಂದ ಸಂಪಾದನೆಯು ಎಲ್ಲಾ ವಿಧವಾದ ದಾಸೋಹಕ್ಕೂ ಸಾಕಾಗುತ್ತದೆ. "ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ, ಚಿತ್ತ ಶುದ್ಧದಲ್ಲಿ ಕಾಯಕವ ಮಾಡುವಲ್ಲಿ ಸದ್ಭಕ್ತರಿಗೆ, ಎತ್ತನೋಡಿದತ್ತ ಲಕ್ಷ್ಮಿ ತಾನಾಗಿಪ್ಪಳು. ಮಾರಯ್ಯಪ್ರಿಯ ಅಮರೇಶ್ವರ ಲಿಂಗದ ಸೇವೆಯುಳ್ಳನಕ್ಕ."

ಯಾವ ವೃತ್ತಿಯೂ ಹೀನವಲ್ಲ. ಎಲ್ಲಾ ವೃತ್ತಿಗಳು ಗೌರವಕ್ಕೆ ಅರ್ಹವಾದವು. ವೃತ್ತಿಯಲ್ಲಿ ತೊಡಗಿರುವ ಮನುಷ್ಯನ ಮನೋಭಾವವು ಮುಖ್ಯ. ಶಿವಶರಣರಲ್ಲಿ ಎಲ್ಲಾ ವೃತ್ತಿಯವರೂ ಇದ್ದರು. ಅಪ್ಪಣ್ಣನು ಕ್ಷೌರಿಕ, ಕಕ್ಕಯ್ಯನು ಮೋಚಿ, ದಾಸಿಮಯ್ಯನು ನೇಕಾರ, ಮಾಚಯ್ಯನು ಅಗಸ, ಬೊಮ್ಮಯ್ಯನು ಮದ್ದಲೆ ಬಾರಿಸುವವನು, ಬಸವಣ್ಣನು ಬಿಜ್ಜಳನ ಮಂತ್ರಿ. ಪ್ರತಿಯೊಂದು ವೃತ್ತಿಯೂ ಪವಿತ್ರವೆಂದು ಪರಿಗಣಿಸಲಾಗಿತ್ತು. ಎಲ್ಲಾ ವೃತ್ತಿಗಳು ಸಮಾನ. ಆದುದರಿಂದ ಅವರೆಲ್ಲರೂ ಶಿವಭಕ್ತರೆ. ಬಸವಣ್ಣನವರು ಈ ಅಭಿಪ್ರಾಯವನ್ನು ಒತ್ತಿ ಹೇಳಿದ್ದಾರೆ.

> "ದೇವಸಹಿತ ಭಕ್ತ ಮನೆಗೆ ಬಂದರೆ ಕಾಯಕವಾವುದೆಂದು
> ಬೆಸಗೊಂಡರೆ ನಿಮ್ಮಾಣೆ! ನಿಮ್ಮ ಪುರಾತರಾಣೆ!
> ತಲೆದಂಡ! ತಲೆದಂಡ! ಕೂಡಲ ಸಂಗಮ ದೇವಾ
> ಭಕ್ತರ ಕುಲವನರಸಿದರೆ ನಿಮ್ಮ ರಾಣಿ ವಾಸದಾಣೆ"

ಪ್ರತಿಯೊಂದು ಕಾಯಕವನ್ನು ಶ್ರದ್ಧೆಯಿಂದ ನಿರ್ವಹಿಸಬೇಕು. ಒಂದು ಗೊತ್ತಾದ ಕಾಯಕದಲ್ಲಿ ಭಕ್ತನು ಶ್ರದ್ಧೆಯಿಂದ ಸದಾ ನಿರತನಾಗಿರಬೇಕು. ತನ್ನ ಅಭಿರುಚಿ ಶಕ್ತಿಗಳನ್ನು ಸರಿಯಾಗಿ ಗ್ರಹಿಸಿ ಒಂದು ವೃತ್ತಿಯಲ್ಲಿ ನಿರತನಾಗಬೇಕು.

ಹೀಗೆ ಸತ್ಯಶುದ್ಧ ಕಾಯಕದಿಂದ ಗಳಿಸಿದ ದ್ರವ್ಯವನ್ನು ಸಮಾಜದ ಸದಸ್ಯರ ಅನುಕೂಲತೆಗೆ, ಸೇವಾಮನೋಭಾವದಿಂದ ಉಪಯೋಗಿಸಬೇಕು. ಈ ಸಹಾಯದಲ್ಲಿ ಅರ್ಪಣದ ಭಾವನೆ ಇರಬೇಕು. ಅಹಂಕಾರಕ್ಕೆ ಅವಕಾಶವಿಲ್ಲ. ಈಶ್ವರನ ಪ್ರಸಾದದಿಂದ ಬಂದುದು ಈಶ್ವರಾರ್ಪಣವಾಗಲಿ ಎಂಬ ನಮ್ರತೆಯಿಂದ ಭಕ್ತನು ತಾನು ದುಡಿದುದ್ದನ್ನು ಸರ್ವರ ಹಿತಕ್ಕೆ ಉಪಯೋಗಿಸಬೇಕು. ಇದನ್ನು ಈಶ ಸೇವಾಭಾವದಿಂದ ಸಮರ್ಪಿಸಬೇಕು. ಉರಿಲಿಂಗಪೆದ್ದಿ ಎಂಬ ಶಿವಶರಣನು ದಾಸೋಹದಲ್ಲಿ ನಾಲ್ಕು ವಿಧಗಳನ್ನು ನಿರೂಪಿಸಿದ್ದಾನೆ. ತಾನು ಮತ್ತು ಇತರರೆಲ್ಲರೂ ಈಶ್ವರರೆಂಬ ಭಾವನೆಯಿಂದ ಸೇವೆಯನ್ನು ಸಲ್ಲಿಸಬೇಕು. ಎಲ್ಲರೂ ಒಂದೆ. ಬೇಧಭಾವನೆಗಳಿಗೆ ಎಡೆಯಿಲ್ಲ. ಸಮಗ್ರ ಸಮತೆಯಿಂದ ಸೇವಿಸಬೇಕು. ಇದು ದಾಸೋಹದಲ್ಲಿ ಅತ್ಯುತ್ತಮವಾದುದು. ಎರಡನೆಯ ಬಗೆಯ ದಾಸೋಹದಲ್ಲಿ, ಒಬ್ಬ ವ್ಯಕ್ತಿಯು ತಾನು ಸಂಪಾದಿಸಿದುದನ್ನು ಭಕ್ತಿಯಿಂದ ಇತರರ ಸೇವೆಯಲ್ಲಿ ವಿನಿಯೋಗಿಸುವುದು. ಮೂರನೆಯ ವಿಧವಾದ ದಾಸೋಹದಲ್ಲಿ, ಒಬ್ಬನು ತಾನುಗಳಿಸಿದುದನ್ನು, ತನ್ನ ಹೆಂಡತಿ, ಮಕ್ಕಳು ಮತ್ತು ಸ್ನೇಹಿತರಿಗೆ ವಿನಿಯೋಗಿಸುವಂತೆ, ಇತರರಿಗೆ ಆತ್ಮೀಯತೆಯಿಂದ ವಿನಿಯೋಗಿಸಬೇಕು. ನಾಲ್ಕನೆಯ ರೀತಿಯ ದಾಸೋಹದಲ್ಲಿ, ಒಬ್ಬ ವ್ಯಕ್ತಿಯು ತಾನು ಸಂಪಾದಿಸಿದುದರಲ್ಲಿ ಎಷ್ಟು ಸಾಧ್ಯವೊ ಅಷ್ಟನ್ನಾದರೂ ಇತರರಿಗೆ ಉಪಯೋಗಿಸಬೇಕು. ಈ ವಿಧವಾದ ದಾಸೋಹವನ್ನಾದರೂ ಮಾಡದೆ ಇರುವ ವ್ಯಕ್ತಿ ಸಮಾಜದ ನಿಂದನೆಗೊಳಗಾಗುತ್ತಾನೆ.

ಒಟ್ಟಿನಲ್ಲಿ ಹೇಳುವುದಾದರೆ ಸಂಪಾದಿಸಿದ ಐಶ್ವರ್ಯವನ್ನು ದುರಾಸೆಯಿಂದ ಶೇಖರಿಸದೆ, ಪರಹಿತಕ್ಕೆ ಉಪಯೋಗಿಸಬೇಕು. ಲೋಕಹಿತಕ್ಕೆ ಸಾಧನವಾದುದೆಲ್ಲವನ್ನೂ, ಸ್ವಪ್ರಯೋಜನದ ದೃಷ್ಟಿಯಿಲ್ಲದೆ ಮಾಡಬೇಕೆಂಬುದು ವಚನಕಾರರ ಆಣತಿ. ಮುಕ್ತನಿಗೆ ಕಾರ್ಯ ನಿರ್ವಹಣೆಯಿಂದ ಆಯಾಸವಾಗದು. ಆತನು ಬಹಿರಂಗದಲ್ಲಿ ಶರೀರಕ್ಕೆ ಶ್ರಮಕೊಟ್ಟರೂ, ಅಂತರಂಗದಲ್ಲಿ ಆತನಿಗೆ ಆಯಾಸವಿಲ್ಲ. ತನಗೆ ದೊರೆತದ್ದು ಶಿವಾನುಗ್ರಹ. ಇತರರಿಗೆ ಕೊಟ್ಟದ್ದು ಶಿವಾರ್ಪಣ. ನಿತ್ಯಜೀವನದ ಕರ್ಮ ಪ್ರತಿಯೊಬ್ಬರೂ ಮಾಡಲೇಬೇಕು. ಇದು ಸ್ವತಸಿದ್ಧವಾದ ಸಂಗತಿ. ಕಾರ್ಯದಲ್ಲಿ ಅಹಂಭಾವವನ್ನು ಬಿಡಬೇಕು. ಕೆಲಸದಲ್ಲಿ ಶ್ರದ್ಧೆ ಉತ್ಸಾಹಗಳಿರಬೇಕು. ಅಪರಿಗ್ರಹತತ್ವ ಭಾರತದ ಧಾರ್ಮಿಕ ಸಂಪ್ರದಾಯದಲ್ಲಿ ಅತ್ಯುನ್ನತ ಸ್ಥಾನವನ್ನು ಪಡೆದಿದೆ. ಹಿಂದು ಮತ್ತು ಬೌದ್ಧಧರ್ಮಗಳಲ್ಲಿ ಅಪರಿಗ್ರಹವು ಸಾಮಾಜಿಕ ಜೀವನದ ಆದ್ಯ ತತ್ವವಾಗಿದೆ. ವೀರಶೈವ ಧರ್ಮದಲ್ಲಿ ಅದು ಅದ್ವಿತೀಯ ಸ್ಥಾನವನ್ನು ಪಡೆದಿರುವುದು ಕಾಯಕದ ತತ್ವದಿಂದ ಸ್ಫುಟವಾಗುತ್ತದೆ. ತಾನು ಜಗತ್ತಿಗೆ ಕೊಡಬೇಕಾದುದು ಹೆಚ್ಚೆಂಬ ಭಾವನೆಯಿಂದ ಶರಣನು ಕರ್ತವ್ಯಕರ್ಮದಲ್ಲಿ ತೊಡಗುತ್ತಾನೆ. ಹೀಗೆ ಜೀವನವನ್ನು ಸಾಗಿಸಿದರೆ ಅವನು ಜೀವನ್ಮುಕ್ತನಾಗುತ್ತಾನೆ. ಲೋಕಕಲ್ಯಾಣವಾಗುತ್ತದೆ.

ಕ್ರಿ. ಶ. ೧೬ ನೇ ಶತಮಾನದಲ್ಲಿ ಯೂರೋಪಿನಲ್ಲಿ ಧರ್ಮಕ್ರಾಂತಿಯಾಗಿ ಪ್ರಾಟೆಸ್ಟೆಂಟ್ ಧರ್ಮವು ಉದಯಿಸಿತು. ರೋಮನ್ ಕ್ಯಾಥೊಲಿಕ್ ಮತವನ್ನು ಪ್ರತಿಭಟಿಸಿತು. ಇದರಿಂದ ಕ್ರೈಸ್ತ ಧರ್ಮದ ಸುಧಾರಣೆಯಾಯಿತು. ಕ್ರೈಸ್ತ ಧರ್ಮದಲ್ಲಿ ಕಲೆಹಾಕಿದ್ದ ವಿವಿಧ ದೋಷಗಳನ್ನು ನಿವಾರಿಸಲು ಪ್ರಾಟೆಸ್ಟೆಂಟ್ ಧರ್ಮವು ಪ್ರಯತ್ನಿಸಿತು. ಇಂಗ್ಲೆಂಡಿನ ಎಲಿಜಬೆತ್ ರಾಣಿಯ ಕಾಲದಲ್ಲಿ ನಡೆದ ಕ್ರೈಸ್ತ ಮತ ಸುಧಾರಣೆಯು ಅಸಂಪೂರ್ಣವೆಂದು ಅಭಿಪ್ರಾಯಪಟ್ಟು, ಅಶಾಸ್ತ್ರೀಯವೂ

ದೋಷಣೀಯವೂ ಆದ ಆಚಾರಗಳನ್ನು ತೊಡೆದು ಹಾಕಲು ಪ್ರಯತ್ನಿಸಿದ ಪ್ರೊಟೆಸ್ಟೆಂಟ್ ಮತಸ್ಥರ ಒಂದು ಪ್ರಮುಖ ಗುಂಪಿಗೆ ಪ್ಯೂರಿಟನ್ನರೆಂದು ಹೆಸರು. ಪ್ಯೂರಿಟನ್ನನು ಧರ್ಮಶುದ್ಧಿವಾದಿ, ಮಹಾನೇಮಿಷ್ಠ. ಹಿಂದೂ ಧರ್ಮದಲ್ಲಿನ ದೋಷಗಳನ್ನು ತೊಡೆದು ಹಾಕಲು ವೀರಶೈವ ಧರ್ಮವು ಉದಯಿಸಿದಂತೆ, ಕ್ರೈಸ್ತ ಧರ್ಮದಲ್ಲಿದ್ದ ನ್ಯೂನತೆಗಳನ್ನು ತೊಡೆದು ಹಾಕಲು ಪ್ರಾಟೆಸ್ಟೆಂಟ್ ಧರ್ಮವು ಉದಯಿಸಿತು. ಆರ್. ಇ. ಎನ್‌ಕೋವನ್ನನು ವೀರಶೈವರನ್ನು "ಶಾಂತಿಪ್ರಿಯರಾದ ಪ್ಯೂರಿಟನ್ನರು ಅಥವಾ ಧರ್ಮಶುದ್ಧಿವಾದಿಗಳು" ಎಂದು ಕರೆದಿರುವುದು ಗಮನಾರ್ಹವಾದುದು. ಪ್ರಾಟೆಸ್ಟೆಂಟ್ ನೀತಿ ಸಂಹಿತೆಗೂ ವೀರಶೈವ ನೀತಿ ಸಂಹಿತೆಗೂ ಮುಖ್ಯವಾದ ಸಾಮ್ಯಗಳಿವೆ. ಪ್ರಾಟೆಸ್ಟೆಂಟ್ ಧರ್ಮದ ಉಗಮಕ್ಕೆ ಮೊದಲು, ಕ್ರೈಸ್ತರ ಧರ್ಮಗ್ರಂಥವಾದ ಬೈಬಲ್ಲನ್ನು ಕ್ರೈಸ್ತ ಪುರೋಹಿತರು ಅಥವಾ ಪಾದ್ರಿಗಳು ಮಾತ್ರ ಅಧ್ಯಯನ ಮಾಡಬಹುದಾಗಿತ್ತು. ಮಾರ್ಟಿನ್‌ಲ್ಯೂಥರನು ಬೈಬಲ್ಲನ್ನು ಭಾಷಾಂತರಿಸಿದ ಮೇಲೆ, ಸಾಧಾರಣವಾದ ಮನುಷ್ಯನಿಗೂ ಸಹ ಧರ್ಮಗ್ರಂಥಗಳನ್ನು ಅಧ್ಯಯನ ಮಾಡುವ ಅವಕಾಶವು ಕಲ್ಪಿತವಾಯಿತು. ಇದರಿಂದ ಧಾರ್ಮಿಕ ವಿಚಾರದಚಿಂತನ ಮತ್ತು ಅದರ ವಿಮರ್ಶೆಗಳು ಹೆಚ್ಚಾಗಿ ವೈಯಕ್ತಿಕವಾಯಿತು. ಧರ್ಮಗ್ರಂಥಗಳನ್ನು ಓದುವ ಅನುಕೂಲವು ಎಲ್ಲರಿಗೂ ಲಭ್ಯವಾಯಿತು. ವೀರಶೈವ ವಚನಕಾರರು ಜನಸಾಮಾನ್ಯರು ಉಪಯೋಗಿಸುವ ಭಾಷೆಯಲ್ಲಿ ಹಿಂದೂ ಧರ್ಮದ ತಿರುಳನ್ನು ಕನ್ನಡದಲ್ಲಿ ಎಲ್ಲರಿಗೂ ನಿಲುಕುವಂತೆ ನಿರೂಪಿಸಿದರು. ಧಾರ್ಮಿಕ ಮತ್ತು ನೈತಿಕ ತತ್ವಗಳನ್ನು ಸರಳವಾದ ಭಾಷೆಯಲ್ಲಿ ನಿರೂಪಿಸಿದರು. ಪ್ರೊ|| ಟಿ. ಎಸ್. ವೆಂಕಣ್ಣಯ್ಯನವರು ತಿಳಿಸಿರುವಂತೆ "ವೀರಶೈವ ಸಂತರು ಧರ್ಮಗ್ರಂಥಗಳ ಸಾರವನ್ನು ಗ್ರಹಿಸಿ, ಅವುಗಳ ತತ್ವಗಳನ್ನು ಜನಸಾಮಾನ್ಯರು ಸುಲಭವಾಗಿ ತಿಳಿದುಕೊಳ್ಳುವ ಗದ್ಯದಲ್ಲಿ ನಿರೂಪಿಸಿದರು. ಅವನ್ನು ಅರ್ಥ ಮಾಡಿಕೊಳ್ಳಲು ಯಾವ ಪಾಂಡಿತ್ಯದ ಅವಶ್ಯಕತೆಯೂ ಇಲ್ಲ. ವಚನಗಳೆಲ್ಲವೂ ಸರಳ ಕನ್ನಡದಲ್ಲಿ ರಚಿತವಾದುವುಗಳು." ಶ್ರೀ ಎಂ ಆರ್. ಶ್ರೀನಿವಾಸಮೂರ್ತಿಗಳು ವಚನಗಳನ್ನು ಕನ್ನಡ ಉಪನಿಷತ್ತುಗಳೆಂದು ಕರೆದಿರುವುದು ಗಮನಾರ್ಹವಾದ ವಿಚಾರ.

ವೀರಶೈವ ಧರ್ಮಕ್ಕೂ ಮತ್ತು ಪ್ರಾಟೆಸ್ಟೆಂಟ್ ಮತಕ್ಕೂ ಇರುವ ಎರಡನೆಯ ಮುಖ್ಯ ಸಾಮ್ಯವು, 'ಕಾಯಕ' ಮತ್ತು 'ವೃತ್ತಿ' (ಕಾಲಿಂಗ್) ಇವುಗಳಿಗೆ ಇರುವ ಸಾಮ್ಯ. 'ಕಾಲ್' ಎಂದರೆ ಒಂದು ನಿರ್ದಿಷ್ಟ ಕಾರ್ಯದಲ್ಲಿ ದೈವಪ್ರೇರಣೆಯಿಂದ ಭಾಗವಹಿಸುವುದು. ಹೀಗೆ ಒಬ್ಬ ವ್ಯಕ್ತಿಯು ಒಂದು ಗೊತ್ತಾದ ವೃತ್ತಿಯನ್ನು ಅನುಸರಿಸುವುದಕ್ಕೆ 'ಕಾಲಿಂಗ್' ಎಂಬ ಹೆಸರಿದೆ. ಇದು ಅವನಿಗೆ ವೃತ್ತಿ. ಈ ವೃತ್ತಿಯಲ್ಲಿ ಆತನು ಪರಿಣತೆಯನ್ನು ಸಂಪಾದಿಸಬೇಕು. ವ್ಯಕ್ತಿಗೆ ದೈವ ಪ್ರೇರಣೆ ಎಂಬ ಭಾವನೆ ಮೂಡಿದರೆ, ಆತನಿಗೆ ಆ ಕಾರ್ಯದಲ್ಲಿ ಆಸಕ್ತಿ, ಶ್ರದ್ಧೆ ಇವುಗಳು ಉಂಟಾಗುತ್ತವೆ. ವ್ಯಕ್ತಿಯು ಉತ್ಸಾಹದಿಂದ, ಆ ವೃತ್ತಿಯನ್ನು ಅವಲಂಬಿಸುತ್ತಾನೆ. ಅದನ್ನು ಬದಲಾಯಿಸಲು ಹೋಗುವುದಿಲ್ಲ. ಅದು ದೈವ ನಿಯಾಮಕವೆಂಬ ಭಾವನೆ ಇರುವುದರಿಂದ, ಅದು ದೇವರಸೇವೆ ಎಂಬ ಭಾವನೆಯಿಂದ ಏಕಮನಸ್ಸಿನಿಂದ ಒಂದು ನಿರ್ದಿಷ್ಟ ವೃತ್ತಿಯಲ್ಲಿ ತೊಡಗಿ, ಕಾಲಕ್ರಮೇಣ ಅದರಲ್ಲಿ ಪರಿಣತೆಯನ್ನು ಸಂಪಾದಿಸಿಕೊಳ್ಳುತ್ತಾನೆ. ಆ 'ವೃತ್ತಿ' ಯನ್ನು ಭಗವದ್ವಿಧಿ ಎಂದು ಸ್ವೀಕರಿಸಿ ಶ್ರದ್ಧೆಯಿಂದಲೂ ಉತ್ಸಾಹದಿಂದಲೂ ಕಾರ್ಯೋನ್ಮುಖನಾಗುತ್ತಾನೆ. ಲ್ಯೂಥರನ ಪ್ರಕಾರ ಒಂದು 'ವೃತ್ತಿ'ಯಲ್ಲಿ ತೊಡಗುವುದು ಭ್ರಾತೃಪ್ರೇಮದ ಅಭಿವ್ಯಕ್ತಿ. ಎಲ್ಲರೂ ಸಹೋದರರು. ತಾನು ಆ 'ವೃತ್ತಿ' ಯಲ್ಲಿರುವುದರಿಂದ, ತನ್ನ ಸಹೋದರರೆಲ್ಲರಿಗೂ ಅನುಕೂಲವಾಗುತ್ತದೆ ಎಂಬ ಭಾವನೆಯು ಮೂಡುತ್ತದೆ. ಪ್ರತಿಯೊಂದು ನ್ಯಾಯವಾದ ವೃತ್ತಿಯೂ ಭಗವಂತನ ದೃಷ್ಟಿಯಲ್ಲಿ ಒಂದೇ ವಿಧವಾದ ಮೌಲ್ಯವನ್ನು ಹೊಂದಿರುತ್ತದೆ. ಪ್ರಾಟೆಸ್ಟೆಂಟ್ ಧರ್ಮದ ಉದಯಕ್ಕೆ ಮೊದಲು ಜನರಿಗೆ ಲೌಕಿಕ ಜೀವನದಲ್ಲಿ ಹೆಚ್ಚು ಉತ್ಸಾಹವಿರಲಿಲ್ಲ. ಪಾರಮಾರ್ಥಿಕ ಜೀವನದಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸಲು ಕ್ರೈಸ್ತಧರ್ಮದ ಮಠಾಧಿಪತಿಗಳು ಮತ್ತು ಪಾದ್ರಿಗಳು ಜನರಿಗೆ ಬೋಧಿಸುತ್ತಿದ್ದರು. ಇದರಿಂದ ಅತ್ಯುನ್ನತ ಮೇಧಾವಿಗಳಲ್ಲಿ ಅನೇಕರು ಪಾರಮಾರ್ಥಿಕ ಜೀವನದ ಹಿರಿಮೆಗೆ ಒಲಿದು, ಧಾರ್ಮಿಕ ಜೀವನದಲ್ಲಿ ಹೆಚ್ಚುಹೆಚ್ಚಾದ ಆಸಕ್ತಿಯನ್ನು ವಹಿಸುತ್ತಿದ್ದರು. ಅವರು ಸನ್ಯಾಸವನ್ನು ಸ್ವೀಕರಿಸಿ ಮಠಗಳನ್ನು ಸೇರಿ, ಅಲ್ಲಿ ಪೂಜೆ, ಪ್ರಾರ್ಥನೆ, ಅಧ್ಯಯನ, ಪ್ರವಚನ ಮೊಲಾದುವುಗಳಲ್ಲಿ ನಿರತರಾಗಿದ್ದರು. ಧಾರ್ಮಿಕ ಜೀವನವು ಅತ್ಯುನ್ನತವೆಂಬ ಭಾವನೆಯು ಸರ್ವವ್ಯಾಪಕವಾಗಿತ್ತು. ಪ್ರಾಟೆಸ್ಟೆಂಟ್ ಧರ್ಮದಲ್ಲಿ ನಿರೂಪಿತವಾದ ನೀತಿಸಂಹಿತೆಯ ಪರಿಣಾಮಗಳನ್ನು, ಮ್ಯಾಕ್ಸ್ ವೆಬರನು "ದಿ ಪ್ರೊಟೆಸ್ಟೆಂಟ್ ಎಥಿಕ್ ಅಂಡ್ ದಿ ಸ್ಪಿರಿಟ್ ಆಫ್ ಕ್ಯಾಪಿಟಲಿಸಂ" ಎಂಬ ಸುಪ್ರಸಿದ್ಧ ಗ್ರಂಥದಲ್ಲಿ ಸವಿಸ್ತಾರವಾಗಿ ವಿಶ್ಲೇಷಿಸಿರುವನು. ಲೌಕಿಕ ವೃತ್ತಿಯಲ್ಲಿ ತೊಡಗುವುದು ಭಗವದಿಚ್ಛೆ, ಇದರಿಂದ ವ್ಯಕ್ತಿಯು ಮೋಕ್ಷಕ್ಕೆ ಅರ್ಹನಾಗುತ್ತಾನೆಂದು ಪ್ರಾಟೆಸ್ಟೆಂಟ್ ನೀತಿ ಸಂಹಿತೆಯು ತಿಳಿಸಿತು. ಲೌಕಿಕ ಜೀವನದಿಂದ ಧಾರ್ಮಿಕ ಜೀವನದ ಕಡೆಗೆ ಹರಿದು ಹೋಗುತ್ತಿದ್ದ ಅತ್ಯುನ್ನತ ವ್ಯಕ್ತಿಗಳ ಪ್ರತಿಭೆಗೆ ಇದು ಒಂದು ಅಣೆಕಟ್ಟಾಯಿತೆಂದು ವೆಬರನು ತಿಳಿಸುತ್ತಾನೆ. ಇದರಿಂದ ಅನೇಕ ಪ್ರತಿಭಾವಂತರ ಉಪಯೋಗವು ಲೌಕಿಕ ಜೀವನದ ಉತ್ಕೃಷ್ಟತೆಗೆ ಅನುಕೂಲವಾಯಿತು. ಲೌಕಿಕ ಜೀವನದ ಒಂದು ವೃತ್ತಿಯನ್ನು ಅನುಸರಿಸುವುದು, ಧಾರ್ಮಿಕ ಜೀವನದಲ್ಲಿ ಪಾದ್ರಿಯಾಗುವಷ್ಟೆ ಉತ್ತಮವೆಂಬ ಭಾವನೆಯು ವ್ಯಾಪಕವಾಗಿ ಮೂಡತೊಡಗಿತು. ಇವೆರಡೂ ಭಗವದ್ವಿಧಿಯ ಸ್ವೀಕಾರವೆಂದು ಪ್ಯೂರಿಟನ್ ನೀತಿ ಸಂಹಿತೆಯು ತಿಳಿಸಿತು. ಒಂದು ವೃತ್ತಿಯಲ್ಲಿ ನಿರತನಾಗಿರುವವನು ಕಾಲಕ್ರಮೇಣ ಅದರಲ್ಲಿ ಪರಿಣತನಾಗುತ್ತಾನೆ. ಇದರಿಂದ ಆತನು ಕೆಲಸವನ್ನು ಸುಲಭವಾಗಿ ನಿರ್ವಹಿಸುತ್ತಾನೆ. ಆತನು ಹೆಚ್ಚು ಹೆಚ್ಚಾಗಿ ಹಣವನ್ನು ಗಳಿಸಲುಪಕ್ರಮಿಸುತ್ತಾನೆ. ಆತನು ಎಷ್ಟೇ ಐಶ್ವರ್ಯವಂತನಾದರೂ, ಆತನ ಜೀವನವು ಸರಳವಾಗಿರಬೇಕೆಂದು ಪ್ರಾಟೆಸ್ಟೆಂಟ್ ನೀತಿಸಂಹಿತೆಯು ತಿಳಿಸುತ್ತದೆ. ಆತನ ಜೀವನದಲ್ಲಿ "ಲೌಕಿಕ ವಿರಕ್ತಿ" (Worldly asceticism) ಪೋಷಿತವಾಗಬೇಕು. ತಾನು ನಿರ್ವಹಿಸುವ ಕಾರ್ಯ ದೈವಪ್ರೇರಣೆಯಿಂದ ಬಂದುದು. ಅದರಲ್ಲಿ ಶ್ರದ್ಧೆ ಉತ್ಸಾಹಗಳನ್ನು ತೋರಿಸಿ ಪರಿಣತೆಯನ್ನು ಸಂಪಾದಿಸಿ, ಸದಾ ಆ ಕಾರ್ಯದಲ್ಲಿ ತೊಡಗಿರುವುದು ಭಗವಂತನ ಅಪ್ಪಣೆ. ಪ್ಯೂರಿಟನ್ನರ "ಪ್ರಾಪಂಚಿಕ ವಿರಕ್ತಿ ಭಾವನೆಯ ಪ್ರಕಾರ ಒಂದು ವೃತ್ತಿಯಲ್ಲಿ ಸಂಪಾದಿಸಿದ ಹಣದ ಶೇಖರಣೆಯು ದೇವರ ಪ್ರಸಾದವೆಂದು ಪರಿಗಣಿಸಲ್ಪಟ್ಟಿತ್ತು." ಒಂದು "ವೃತ್ತಿ"ಯಲ್ಲಿ ನಿರತನಾಗಿರುವ ವ್ಯಕ್ತಿ, ತನ್ನ ಉದ್ಯೋಗದಲ್ಲಿ ಹೆಚ್ಚು ಪರಿಣತೆಯನ್ನು ಹೊಂದಿ ತನ್ನ ಸಂಪತ್ತನ್ನು ಅಭಿವೃದ್ಧಿಗೊಳಿಸುತ್ತಾನೆ.

ಹಣ ಶೇಖರಣೆಯು ಅವಿಚ್ಛಿನ್ನವಾಗಿ ಮುಂದುವರಿಯುತ್ತದೆ. ಆದರೆ ಆತನು ದುಂದು ವೆಚ್ಚದಲ್ಲಿ ತೊಡಗಬಾರದು. ಆತನ ಜೀವನ ಆದಷ್ಟು ಸರಳವಾಗಿರಬೇಕು. ಗಳಿಕೆ ಹೆಚ್ಚಿತು. ವೆಚ್ಚಕ್ಕೆ ತಡೆಯಾಯಿತು. ಅನಿವಾರ್ಯವಾಗಿ ಐಶ್ವರ್ಯ ಅಭಿವೃದ್ಧಿಯು ಅವಿಚ್ಛಿನ್ನವಾಗಿ ಬೆಳೆಯಿತು. ಇದು ಬಂಡವಾಳಗಾರಿಕೆಯ ಬೆಳವಣಿಗೆಗೆ ಸಹಾಯಕವಾಯಿತು. ಒಂದು ಲೌಕಿಕ "ವೃತ್ತಿ"ಯು ಭ್ರಾತೃಪ್ರೇಮದ ಅಭಿವ್ಯಕ್ತಿಯಾದುದರಿಂದ, ಗಳಿಸಿದ ಧನವನ್ನು ಪರೋಪಕಾರ ಕಾರ್ಯಗಳಲ್ಲಿ ವಿನಿಯೋಗಿಸಬೇಕೆಂದು ಪ್ರಾಟೆಸ್ಟೆಂಟ್ ನೀತಿಸಂಹಿತೆಯು ತಿಳಿಸಿತು. ಹಣ ಶೇಖರಣೆಯು ತಪ್ಪಲ್ಲ. ಆದರೆ ಆ ಹಣದ ದುಂದು ವಿನಿಯೋಗ ಆಕ್ಷೇಪಣೀಯವಾದುದು.

ಹೀಗೆ ವೀರಶೈವ ಧರ್ಮದ ಕಾಯಕದ ಭಾವನೆಗೂ ಪ್ರಾಟೆಸ್ಟೆಂಟ್ ಧರ್ಮದ "ವೃತ್ತಿ" (Calling) ಭಾವನೆಗೂ ಸಾಮ್ಯವಿದೆ. ಆದರೆ ಈ ಭಾವನೆಗಳಲ್ಲಿರುವ ಪ್ರಮುಖ ವ್ಯತ್ಯಾಸಗಳನ್ನು ಸ್ಥೂಲವಾಗಿ ಸೂಚಿಸುವುದು ಅಪ್ರಕೃತವಾಗಲಾರದು. ಕ್ಯಾಲ್ವಿನಿಸಂ-ಪ್ರಾಟೆಸ್ಟೆಂಟ್ ಧರ್ಮದ ಒಂದು ಪಂಥ-ತತ್ವದಲ್ಲಿ ಅತಿಮುಖ್ಯವಾದ ಭಾವನೆಯೆಂದರೆ "ಆದಿನಿರ್ಧಾರ" (Predestination) ಈ ತತ್ವದ ಪ್ರಕಾರ ದೇವರು ಅನಾದಿಕಾಲದಲ್ಲೇ ಮನುಷ್ಯವರ್ಗದಲ್ಲಿ ಕೆಲವರನ್ನು ಮೋಕ್ಷಕ್ಕೆ, ಶಾಶ್ವತ ಜೀವನಕ್ಕೆ ಗೊತ್ತುಮಾಡುತ್ತಾನೆ ಮುಂದೆ ನಡೆಯುವುದನ್ನು, ದೇವರು, ಮೊದಲೇ ಸಂಕಲ್ಪಿಸಿರುತ್ತಾನೆ. ಆ ಸಂಕಲ್ಪ ಬದಲಾಯಿಸಲು ಯಾರಿಂದಲೂ ಸಾಧ್ಯವಿಲ್ಲ. "ಕ್ಯಾಲ್ವಿನ್ನನ ದೇವರು, ನ್ಯೂಟೆಸ್ಟಮೆಂಟಿನ ದಯಾಮಯನಾದ ತಂದೆಯಲ್ಲ. ದೇವರು ಮನುಷ್ಯನ ಗ್ರಹಿಕೆಗೆ ಮೀರಿದ ಅನಂತನು. ವಿಶ್ವದ ಪ್ರತಿಯೊಂದು ಸಂಗತಿಯೂ ಆತನಿಂದ ವಿಧಿಸಲ್ಪಟ್ಟಿದೆ. ಆತನ ಆಣತಿ ಅಥವ ವಿಧಿಯು ಮಾನವ ಗ್ರಹಿಕೆಗೆ ಮೀರಿದುದು. ಆತನ ಕಟ್ಟಳೆಗಳನ್ನು ಬದಲಾಯಿಸಲು ಸಾಧ್ಯವಿಲ್ಲ. ಭಗವದನುಗ್ರಹ ಅಚಲವಾದುದರಿಂದ, ಭಗವದನುಗ್ರಹಕ್ಕೆ ಪಾತ್ರನಾಗದಿರುವವನು ಅದನ್ನು ಪಡೆಯಲು ಸಾಧ್ಯವಿಲ್ಲ." ವೀರಶೈವ ಧರ್ಮದಲ್ಲಿ ಭಗವದನುಗ್ರಹ ತತ್ವನಿರೂಪಣೆ ಬೇರೆಯ ರೀತಿಯದು. ಶಿವನು ದಯಾಮಯ. ಆತನು ಮಹಾಕರುಣಿ. ದಯಾಮಯನಾದ ಶಿವನು ಮೋಕ್ಷಕ್ಕೆ ಇಚ್ಛಿಸಿದವರೆಲ್ಲರಿಗೂ ಸಹಾಯಮಾಡಿ ಅನುಗ್ರಹಿಸುತ್ತಾನೆ. ಯಾರು ಬೇಕಾದರೂ ಸತ್ಕಾರ್ಯಗಳಿಂದ, ಕಾಯಕದಿಂದ ಭಗವದನುಗ್ರಹವನ್ನು ಸಂಪಾದಿಸಬಹುದು. ಆದರೆ ಕ್ಯಾಲ್ವಿನಿಸಂ ಪಂಥದ ಪ್ರಕಾರ ದೈವಾನುಗ್ರಹ ದೇವರಿಂದ ಇಳಿದು ಬರುತ್ತದೆ. ಅದು ವ್ಯಕ್ತಿಯ ಕರ್ಮಗಳನ್ನು ಅವಲಂಬಿಸಿಲ್ಲ. "ಒಳ್ಳೆಯ ಕೆಲಸಗಳು ಮೋಕ್ಷಸಾಧನೆಗೆ ಸಹಾಯಕವಾಗದಿದ್ದರೂ, ವ್ಯಕ್ತಿಯು ದೈವಾನುಗ್ರಹಕ್ಕೆ ಆಯ್ಕೆಯಾಗಿರುವ ಚಿಹ್ನೆಗೆ ಆಗತ್ಯ." ಒಳ್ಳೆಯ ಕೆಲಸಗಳನ್ನು ಮೋಕ್ಷವನ್ನು 'ಕೊಂಡುಕೊಳ್ಳುವ' ತಂತ್ರವಾಗುವುದಿಲ್ಲ. ಆದರೆ ಅವುಗಳು ಒಳ್ಳೆಯ ಕೆಲಸಗಳಲ್ಲಿ ನಿರತನಾಗಿರುವ ವ್ಯಕ್ತಿಗೆ ನರಕದ ಭಯವನ್ನು ತಪ್ಪಿಸಲು ಸಹಾಯಕವಾಗುತ್ತವೆ. "ಈ ಸೀಮಿತ ಅರ್ಥದಲ್ಲಿ ಒಳ್ಳೆಯ ಕೆಲಸಗಳು ಮುಕ್ತಿಗೆ ಸಾದನವಾಗುತ್ತವೆ ಎಂಬ ಭಾವನೆಯನ್ನು ಹೊಂದಲು ಸಹಾಯಕವಾಗುತ್ತವೆ ಎಂದು ಹೇಳಬಹುದು." ವೀರಶೈವ ಧರ್ಮದ ಪ್ರಕಾರ ಚಿತ್ತಶುದ್ಧ ಕಾಯಕವು ಮುಕ್ತಿಗೆ ಸಾಧನವಾಗುತ್ತದೆ "ಕಾಯಕವೆ ಕೈಲಾಸ."

ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಗಮನಿಸುವುದು ಅಗತ್ಯ ವೀರಶೈವ ವಚನಕಾರರು ಬೋಧಿಸಿದ ನೈತಿಕನಿಯಮಗಳು ಪ್ರಧಾನವಾಗಿ ಸರಳವಾದ ಸ್ವಯಂಪೂರ್ಣ ಕೃಷಿಪ್ರಧಾನ ಸಮಾಜಕ್ಕೆ ಅನುಕೂಲವಾಗಿದ್ದವು. ಜನರ ಪರಸ್ಪರ ಸಂಪರ್ಕಗಳು ನಿಕಟವಾಗಿದ್ದವು. ಸದಸ್ಯರ ಪರಸ್ಪರ ಪರಿಚಯವು ಸುಲಭವಾಗಿದ್ದಿತು. ಭಾರತವು ಯಂತ್ರ ಕೈಗಾರಿಕಾಕರಣದ ಹಾದಿಯಲ್ಲಿ ಹೆಜ್ಜೆಯಿಟ್ಟಿರಲಿಲ್ಲ. ಈ ನೀತಿ ನಿಯಮಗಳು ಪ್ರಧಾನವಾಗಿ ಪ್ರಾಥಮಿಕ ಗುಂಪುಗಳು ವ್ಯಾಪಕವಾಗಿ ಪ್ರಭಾವ ಬೀರುವ ಸಣ್ಣ ಸಮಾಜಗಳಿಗೆ ಅನುಕೂಲವಾಗಿದ್ದವು. ಪ್ರಾಟೆಸ್ಟೆಂಟ್ ಧರ್ಮವು ಉಗಮವಾದಾಗ ಪಾಶ್ಚಾತ್ಯ ಸಮಾಜವು ಯಂತ್ರ ಕೈಗಾರಿಕೆಯಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿತ್ತು. ಹಣಗಳಿಕೆಗೆ ಧಾರ್ಮಿಕ ಉತ್ತೇಜನವು ದೊರೆತು, ನಿತ್ಯಜೀವನದಲ್ಲಿ ಕಡಿಮೆ ವ್ಯಯದ ಮನೋವೃತ್ತಿಯು ಬೆಳೆದುದರ ಫಲವಾಗಿ ಬಂಡವಾಳಗಾರಿಕೆಯ ಸ್ಥಾಪನೆಗೆ ಸೂಕ್ತವಾತಾವರಣವು ಏರ್ಪಟ್ಟಿತು. ಇದರಿಂದ ಉತ್ಪಾದನೆಯು ಹೆಚ್ಚಿತು. ಆದರೆ ಉತ್ಪಾದನೆಯ ಲಾಭದಲ್ಲಿ ನ್ಯಾಯವಾದ, ನಿಷ್ಪಕ್ಷಪಾತವಾದ ಹಂಚಿಕೆ ಇರಲಿಲ್ಲ. ಬಂಡವಾಳಗಾರರು ಲಾಭದ ಹೆಚ್ಚು ಭಾಗವನ್ನು ಕಬಳಿಸಿ ಬಂಡವಾಳಶಾಹಿಗೆ ದಾರಿಮಾಡಿದರು. ಲಾಭ ಹಂಚಿಕೆಯು ನ್ಯಾಯ ಸಮ್ಮತವಾಗಿರಲಿಲ್ಲ. ಇದನ್ನು ಕ್ಯಾಲ್ವಿನ್ನನ ಸಮರ್ಥನೆಯನ್ನು ವೆಬರನ ಮಾತುಗಳಿಂದ ಕೇಳೋಣ. "ಅಸಮಾನವಾದ ಹಂಚಿಕೆಯು ದೇವರ ವಿಧಿಗೆ ಅನುಸಾರವಾಗಿರುವುದರಿಂದ, ಅದನ್ನು ದೈವಾನುಗ್ರಹವೆಂದು ಪರಿಗಣಿಸಿ ಕಾರ್ಮಿಕನು ಕಡಿಮೆ ಕೂಲಿಗೆ ದುಡಿದು ದೇವರ ಅನುಗ್ರಹಕ್ಕೆ ಪಾತ್ರನಾಗಬೇಕು." ಸಂಪತ್ತಿನ ಅಭಿವೃದ್ಧಿಯ ಅಪಾಯವನ್ನು ಪ್ರಾಟೆಸ್ಟೆಂಟ್ ಸಂತರು ಅರಿತಿದ್ದರು ಪ್ಯೂರಿಟನ್ನನ ಧನಕ್ಕೆ ಅಂಟಿಕೊಂಡಿರಬಾರದು. . ಪ್ರಾಟೆಸ್ಟೆಂಟ್ ಪ್ರಮುಖ ಸಂತರಲ್ಲೊಬ್ಬನಾದ ಬಾಕ್ಸಟರನ ಪ್ರಪಂಚದ ಐಶ್ವರ್ಯ ಮೊದಲಾದವುಗಳು ಪ್ಯೂರಿಟನ್ನನು ಧರಿಸಿರುವ ಅಳಕವಾದ ಉಡುಪಿನಂತಿರಬೇಕು. ಆ ಉಡುಪನ್ನು ಯಾವಾಗಬೇಕಾದರೂ ಸುಲಭವಾಗಿ ಕಳಚುವಂತಿರಬೇಕು. ಹಾಗೆಯೇ ಪ್ರಾಪಂಚಿಕ ವಸ್ತುಗಳನ್ನು ಪ್ಯೂರಿಟನ್ನನು ಯಾವಾಗ ಬೇಕಾದರೂ ತ್ಯಜಿಸುವಂತೆ ಇರಬೇಕು. ಪ್ರಾಪಂಚಿಕ ವಸ್ತುಗಳಲ್ಲಿ ಪ್ಯೂರಿಟನ್ನನಿಗೆ ಹೆಚ್ಚು ಆಸಕ್ತಿ ಉತ್ಸಾಹವಿರಬೇಕು. ಆದರೆ ಅವುಗಳಿಗೆ ಅಂಟಿಕೊಳ್ಳದೆ ಅವುಗಳನ್ನು ಸುಲಭವಾಗಿ ಬಿಡುವಂತಿರಬೇಕು ಆದರೆ ಅದು ಸುಲಭವಲ್ಲ. "ಪ್ರಾಪಂಚಕ ವಸ್ತುಗಳು ಮಾನವನನ್ನು ಬಂಧಿಸಿರುವ ಕಬ್ಬಿಣದ ಸೆರೆಯಾಯಿತು. ಹಿಂದೆಂದೂ ಕಾಣದಂತೆ ಇಂದು ಪ್ರಾಪಂಚಕ ವಸ್ತುಗಳು ಮಾನವ ಜೀವನವನ್ನು ಆವರಿಸಿವೆ." ಇದು ಐತಿಹಾಸಿಕ ಸತ್ಯ. ಆದರೆ ಈ ಪರಿಸ್ಥಿತಿ ಪ್ರಾಟೆಸ್ಟೆಂಟ್ ಸಾಧುಗಳು ಬೋಧಿಸಿದ ತತ್ವಗಳಿಗೆ ವಿರುದ್ಧವಾದ ಸಂಗತಿ.

ಮಾನವನ ಚರಿತ್ರೆಯನ್ನು ವಿಹಂಗಮ ದೃಷ್ಟಿಯಿಂದ ಅವಲೋಕಿಸಿದರೆ ಕೆಲವು ವಿಚಾರಗಳು ಸ್ಪಷ್ಟವಾಗುತ್ತವೆ. ಲೌಕಿಕ ಜೀವನವು ಮುಖ್ಯ ಅವರ ವಿಚಾರದಲ್ಲಿ ಆಸಡ್ಡೆ ಅಲಕ್ಷ್ಯಗಳು ಸಲ್ಲವು. ಅದು ಗೌರವಾರ್ಹ ಜೀವನ. ಮಾನವ ಜೀವನದಲ್ಲಿ ಧರ್ಮದ ಅಸ್ತಿತ್ವವು ವ್ಯಾಪಕವಾಗಿ ಕಾಣಬರುತ್ತದೆ. ಧರ್ಮಕ್ಕೂ ಸಾಮಾಜಿಕ ಜೀವನಕ್ಕೂ ಇರುವ ಸಂಬಂಧಗಳು ಕಾಲ ದೇಶಗಳಲ್ಲಿ ಸಂದರ್ಭಗಳಿಗೆ ಅನುಸಾರವಾಗಿ ಹಲವು ವ್ಯತ್ಯಾಸಗಳನ್ನು ವ್ಯಕ್ತಪಡಿಸುತ್ತವೆ. ಹೀಗಿದ್ದರೂ ಒಂದಲ್ಲ ಒಂದು ರೀತಿಯಿಂದ ಧರ್ಮವು ಜೀವನದಮೇಲೆ ಪ್ರಭಾವವನ್ನು ಬೀರುತ್ತದೆ. ಲೌಕಿಕ ಜೀವ

ನದಲ್ಲಿ ಆರ್ಥಿಕ ಅಂಶದ ಅಸ್ತಿತ್ವ ಮತ್ತು ಅದಕ್ಕೂ ಸಮಾಜಿಕ ಜೀವನದ ವಿವಿಧ ಅಂಶಗಳಿಗೂ ಇರುವ ನಿಕಟ ಸಂಬಂಧಗಳ ಅಗತ್ಯವನ್ನು ಒಪ್ಪಬೇಕು. ಸಂಘಜೀವನ ಸ್ವಾಭಾವಿಕವಾದರೂ, ಅದರಲ್ಲಿ ಉದ್ಭವಿಸುವ ಸಮಸ್ಯೆಗಳು ನಿರಂತರವಾಗಿ ಬೆಳೆಯುತ್ತಾ ಹೋಗುತ್ತವೆ. ಸಮಾಜವು ಸಂಕೀರ್ಣವಾದಂತೆ, ಲೌಕಿಕ ಜೀವನದ ಅಗತ್ಯಗಳ ವೈವಿಧ್ಯವು ಹೆಚ್ಚಿದಂತೆ, ಸಾಮಾಜಿಕ ಸಮಸ್ಯೆಗಳು ಜಟಿಲವಾಗುತ್ತವೆ. ಸಾಮಾಜಿಕ ಜೀವನದಲ್ಲಿ ಆರ್ಥಿಕ ಅಂಶವು ಅಗತ್ಯವಾದುದಲ್ಲದೆ, ಅದು ಸಂಘರ್ಷಣೆಗಳ ಕೇಂದ್ರವೆಂಬ ಸತ್ಯವನ್ನು ಅನೇಕ ಮಹಾನುಭಾವರು ಅರಿತು, ಅದರ ಪರಿಹಾರಕ್ಕೆ ಹಲವು ಮಾರ್ಗಗಳನ್ನು ಸೂಚಿಸಿರುವರು. ಹಿಂದುಗಳ ವಿಚಾರ ಧಾರೆಯಲ್ಲಿ 'ಸ್ವಧರ್ಮ' 'ನಿಷ್ಕಾಮಕರ್ಮ' ಭಾವನೆಗಳು ಸಾಮಾಜಿಕ ಜೀವನದಲ್ಲಿ ಸಾಮರಸ್ಯವನ್ನು ರೂಪಿಸುವ ಶಕ್ತಿಗಳಾಗುತ್ತವೆ ಎಂದು ತಿಳಿಯಪಡಿಸಿದರೆ, ಹಿಂದೂ ಧರ್ಮದ ಪಾರಂಪರ್ಯದಲ್ಲಿ ರೂಪಿತವಾದ ವೀರಶೈವ ಧರ್ಮವು, 'ಕಾಯಕ' ಮತ್ತು 'ದಾಸೋಹ' ಭಾವನೆಗಳು ಸಾಮಾಜಿಕ ಜೀವನದಲ್ಲಿ ಶಾಂತಿ ಮತ್ತು ಸಾಮರಸ್ಯವನ್ನು ಸ್ಥಾಪಿಸಲು ಅನುಕೂಲವಾದುವುಗಳೆಂದು ತಿಳಿಯಪಡಿಸಿದೆ. ಈ ಎರಡು ವಿಚಾರಧಾರೆಗಳು, ಸಮಾಜವು ಸ್ವಯಂಪೂರ್ಣತೆಯನ್ನು ಹೊಂದಿದ್ದು, ಸಾಮಾಜಿಕ ಜೀವನವು ಸರಳವಾಗಿದ್ದಾಗ, ಮೂಡಿಬಂದವು. ಅವುಗಳ ಮೂಲತತ್ತ್ವಗಳು ಇಂದಿಗೂ ಸಹ ಸತ್ಯವೆಂಬುದನ್ನು ಎಲ್ಲರೂ ಒಪ್ಪಬೇಕು. ಪಾಶ್ಚಾತ್ಯರ ಪ್ರಾಟೆಸ್ಟೆಂಟ್ ಧರ್ಮದ ಸಂತರು 'ವೃತ್ತಿ' ಮತ್ತು 'ಪ್ರಾಸಂಚಿಕ ವಿರಕ್ತಿ'. ಎಂಬ ಭಾವನೆಗಳನ್ನು ಅನುಸರಿಸಿದಲ್ಲಿ, ಸಾಮಾಜಿಕ ಸಾಮರಸ್ಯವು ಸ್ಥಾಪಿತವಾಗುತ್ತದೆ ಎಂದು ಭಾವಿಸಿದರು.

ಮಾನವ ಜೀವನದ ಸಂದರ್ಭಗಳಲ್ಲಿ ಮಹತ್ವ ಬದಲಾವಣೆಗಳಾಗಿದ್ದರೂ, ಸಮಸ್ಯೆಗಳ ಮೂಲದಲ್ಲಿ ಇರುವ ಭಾವನೆಗಳಲ್ಲಿ ಸಾಮ್ಯಗಳು ಕಾಣಬರುತ್ತವೆ. ಹಾಗೆಯೇ ಸಮಸ್ಯೆಗಳ ನಿವಾರಣೆಗೆ ರೂಪಿತವಾಗಿರುವ ವಿವಿಧ ಪರಿಹಾರ ಮಾರ್ಗಗಳಲ್ಲಿ ಕಾಣಬರುವ ಉನ್ನತಭಾವನೆಗಳಲ್ಲಿಯೂ ಸಾಮ್ಯವನ್ನು ಕಾಣಬಹುದು. ಸ್ವಲ್ಪ ಆಳವಾಗಿ ಯೋಚಿಸಿದರೆ, ಸ್ವಧರ್ಮ, ಕಾಯಕ ಮತ್ತು 'ವೃತ್ತಿ' ಇವುಗಳಲ್ಲಿ ಕಾಣಬರುವ ಸಾಮಾನ್ಯ ಭಾವನೆಯು ಶ್ರದ್ಧೆಯಿಂದ ಕೂಡಿದ ದುಡಿಮೆ. ದುಡಿಮೆಯಲ್ಲಿ ಆಸಕ್ತಿ ಇದ್ದು, ಅದರ ಫಲದ ವಿಚಾರದಲ್ಲಿ ನಿರ್ಲಿಪ್ತತೆ ಇದ್ದರೆ, ಅದರ ಸಹಾಯದಿಂದ ಇತರರ ಜೀವನವನ್ನು ಉತ್ತಮಗೊಳಿಸಲು ಸಹಾಯಕವಾಗುತ್ತದೆ. ದುಡಿಮೆಯ ಫಲದ ಹಂಚಿಕೆಯು ನ್ಯಾಯವಾಗಿರಬೇಕೆಂಬ ಆಕಾಂಕ್ಷೆಯು ಆದಿಯಿಂದಲೂ ಮಾನವ ಸಮಾಜದಲ್ಲಿರುವುದು ಕಾಣಬರುತ್ತದೆ. ಮಾನವನು ಸ್ವಾರ್ಥಿ. ಕರ್ಮಕ್ಕೆ ಸ್ವಾರ್ಥತೆಯು ಸುಲಭವಾಗಿ ಅಂಟಿಕೊಳ್ಳುತ್ತದೆ. ಸ್ವಾರ್ಥವನ್ನು ಸಂಪೂರ್ಣವಾಗಿ ತ್ಯಜಿಸಲು ಸಾಧ್ಯವಾಗದೆಂಬುದನ್ನು ಅರಿತು, ವ್ಯಕ್ತಿಯ ಅಭಿಲಾಷೆಗಳಿಗೂ ಸಮಷ್ಟಿಯ ಹಿತಕ್ಕು ಸಾಮರಸ್ಯವನ್ನು ಸ್ಥಾಪಿಸುವ ಉದ್ದೇಶದಿಂದ ನೈತಿಕ ನಿಯಮಗಳು ಪ್ರತಿಯೊಂದು ಸಮಾಜದಲ್ಲಿಯೂ ರೂಪಿತವಾಗಿವೆ. ಧರ್ಮವು ಪ್ರಾಧಾನ್ಯವಾಗಿ ವ್ಯಕ್ತಿಯ ಮುಕ್ತಿಗೆ ಸಂಬಂಧಿಸಿದ್ದರೂ, ವ್ಯಕ್ತಿಯ ಕಲ್ಯಾಣವು ಸಮಾಜಿಕ ಜೀವನದ ಮಧ್ಯದಲ್ಲಿ ಆಗಬೇಕಾದ ಅವಶ್ಯಕತೆಯನ್ನು ಅರಿತು, ಧರ್ಮವು ನೀತಿ ಸಂಹಿತೆಯನ್ನು ತನ್ನ ಅವಿಭಾಜ್ಯ ಅಂಗವಾಗಿ ಪರಿಗಣಿಸಿತು.

ಒಟ್ಟಿನಲ್ಲಿ ಹೇಳುವುದಾದರೆ ಇಂದು ನಾವು ನಿರಂತರವಾಗಿ ಎಲ್ಲಾ ಕಡೆಯಲ್ಲಿಯೂ ಕೇಳುತ್ತಿರುವ ಗುರಿನುಡಿಗಳು, ಹೆಚ್ಚು ಉತ್ಪಾದನೆ, ಸಂಪದಭಿವೃದ್ಧಿ, ಸಾಮಾಜಿಕ ನ್ಯಾಯ. ಈ ಭಾವನೆಗಳನ್ನು ವಿವಿಧ ಧರ್ಮಗಳು ಪ್ರತಿಪಾದಿಸಿವೆ. ಕಾಯಕ ಮತ್ತು ದಾಸೋಹ ತತ್ವಗಳು, ಈ ಭಾವನೆಗಳನ್ನು ಪ್ರತಿಪಾದಿಸಿದವು. ಶ್ರದ್ಧೆಯಿಂದ ದುಡಿದು ಸಂಪಾದಿಸಿ, ತನಗೆ ಎಷ್ಟು ಬೇಕೋ ಅಷ್ಟನ್ನು ಉಪಯೋಗಿಸಿ, ಉಳಿದುದನ್ನು ಇತರರ ಕಲ್ಯಾಣಕ್ಕೆ ಉಪಯೋಗಿಸುವ ಅಗತ್ಯವನ್ನು ಧರ್ಮವು ತಿಳಿಸುತ್ತದೆ. ಭಾರತ ದೇಶದ ಧಾರ್ಮಿಕ ಪರಂಪರೆಯಲ್ಲಿ ಅದ್ವಿತೀಯ ಸ್ಥಾನವನ್ನು ಪಡೆದಿರುವ 'ಅಪರಿಗ್ರಹ' ತತ್ವವು, ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸುವ ಮತ್ತು ಸಾಮಾಜಿಕ ನ್ಯಾಯ ಸ್ಥಾಪನೆಯ ಗುರಿಯನ್ನು ಸಾಧಿಸುವ ಪ್ರಯತ್ನಗಳಿಗೆ ತಾತ್ವಿಕ ಅಡಿಪಾಯವೆಂದರೆ ಅತಿಶಯೋಕ್ತಿಯಲ್ಲ. ಧರ್ಮದ ಮೂಲತತ್ವಗಳಲ್ಲಿ ನಂಬಿಕೆಯನ್ನು ಹೊಂದಿರುವ ಮಾನವನು, ಅತಿವೇಗದಿಂದ ಬದಲಾಗುತ್ತಿರುವ ಸಮಾಜದ ಸಂದರ್ಭಗಳನ್ನು ಗ್ರಹಿಸಿ, ತನ್ನ ಬುದ್ಧಿಶಕ್ತಿಯಿಂದ ಸೂಕ್ತ ಮಾರ್ಗವನ್ನು ರೂಪಿಸಿ ಮಾನವ ಕಲ್ಯಾಣವನ್ನು ಸಾಧಿಸುವನೆಂದು ಆಶಿಸೋಣ.

ಆಧಾರ ಗ್ರಂಥಗಳು :

S. S. Basavanal & Dr. K. R. Srinivasa Iyengar :
The Musings of Basava (1940)

M. Hardekar (Editor) :
Social Structure of Virasaiva Saints (1940)

E. D. James :
The Nature and Function of Priesthood (1955)

Louis Boyer :
The Meaning of Monestic Life (1950)

Max Weber :
The Protestant Ethic and the Spirit of Capitalism 1965

Dr. S. C. Nandimath :
A Hand Book of Virasaivism 1942

R. H Tawney :
Religion and Rise of Capitalism

J. Myinger :
Religion, Society & The Individual (1957)

H. M. Sadasivaiah :
A Comparative Study of two Virasaiva Monsteries 1967

ಎಸ್. ಎಸ್. ಬಸವನಾಳ್ (ಸಂಪಾದಕರು) :
ಬಸವಣ್ಣನವರ ಷಟ್‌ಸ್ಥಲ ವಚನಗಳು (1954)

ರಂಗನಾಥ್ ರಾಮಚಂದ್ರ ದಿವಾಕರ :
ವಚನಶಾಸ್ತ್ರ ರಹಸ್ಯ (1952)

ಪಿ. ಜಿ. ಹಳಕಟ್ಟಿ (ಸಂಪಾದಕರು) :
ವಚನಶಾಸ್ತ್ರ ಸಾರ Vol. I & II

—,,—
ಉರಲಿಂಗ ಪೆದ್ದಿಯ ವಚನಗಳು

ಶಿವಗಣಪ್ರಸಾದಿ ಮಹದೇವಯ್ಯ

ಸಂಪಾದಕ : ಡಾ|| ಎಲ್. ಬಸವರಾಜು :
ಪ್ರಭುದೇವರ ಶೂನ್ಯ ಸಂಪಾದನೆ (1969)

James Hastings :
Encyclopaedia of Religion and Ethics
Vol. III and Vol. VIII

ಏಕಾದಶ ಸ್ತೋತ್ರ ಮಾಲೆ ನಮೋ ನಮಃ

[ಜಯದೇವ ಮಹಾಸ್ವಾಮಿನಾಂ ವಂದೇ]

ಪಿ. ಜಿ. ಬದರೀಮಠ, ಬಿ.ಎಸ್‌ಸಿ., ಬಿ.ಇಡಿ.,
ಎಸ್. ಜೆ. ಎಂ. ಹೈಸ್ಕೂಲ್
ದಾವಣಗೆರೆ

ಜಗದೀಶಂ ಧರೆಗಿಳಿಯುತ
ಭಗವಂತನ ಲೀಲೆ ಮೆರೆಯೆ ಪೀಠವನೇರು-
ತ್ತಗಣಿತ ಭಕ್ತರ ಪೊರೆಯುತ
ಜಗದೋದ್ಧಾರವನು ಗೈದ ಗುರು ಜಯದೇವಂ ||೧||

ಯಶವನು ಪಸರಿಸುತೆಲ್ಲೆಡೆ
ಪೊಸಬೆಳಗಂ ಬೀರುತಿಳೆಯ ನಾಕವಗೈದಂ
ಅಸಮಾಕ್ಷನ ದರುಶನವನು
ವಸುಧೆಯ ಜನಕಿತ್ತ ಮಹಿಮನೇ ಜಯದೇವಂ ||೨||

ದೇವನೆ ನಿಮ್ಮಾಗಮನದ
ಪೂರ್ವದಿ ನಮ್ಮಿರವು ಅಂಧಕಾರದ ರೂಪಂ
ಭಾವಕೆ ಇಂದ್ರಿಯ ವೃಂದಕೆ-
ಆವೇಶದ ಬೆಳಗ ತುಂಬಿದಂ ಜಯದೇವಂ ||೩||

ವಕ್ರತೆಗೀಜಗವೇಗಳು
ಪ್ರಖ್ಯಾತವು ಈ ಗಜಕ್ಕೆ ಅಂಕುಶವಿಡುತಲ್
ಸಕ್ರಮಗೊಳಿಸಲು ಬಂದವ
ವಿಕ್ರಮವನು ಮೆರೆದ ಬಂಟನಾ ಜಯದೇವಂ ||೪||

ಮಠಮಾನ್ಯಗಳಲಿ ಧರ್ಮವ
ಪಠಿಸುವ ಮೇಣ್ ತತ್ವದಾಚರಣೆಯೊಳಗಿರುವಾ
ವಟುಗಳ ನಿರವಿಸಿ ವಿರತಿಯ
ಭಟರನು ಜಗಕಿತ್ತ ವಂದ್ಯನಾ ಜಯದೇವಂ ||೫||

ಹಾಲಾಹಲವನ್ನೀಂಟದೆ
ಕೋಲಾಹಲದೆದುಹು ನಿಂತು ಜಯವನು ಪಡೆದೈ
ಬಾಲಿಶ ಬುದ್ಧಿಯ ಜನತೆಯ
ಲಾಲಿಸಿ ಪಾಲಿಸಿದ ತಂದೆ ನೀಂ ಜಯದೇವಂ ||೬||

ಸ್ವಾಮಿಗಳಿರವನು ನಡೆಯೊಳು
ನೇಮದಿ ತೋರಿಸಿದೆ ನಿನ್ನ ತೆರನಾರಿಲ್ಲೈ
ಹೇಮವ ಮೇಣ್ ಕಾಮಿನಿಯಂ
ಕಾಮಿಸಿದವನಲ್ಲ ನೀನು ಜಯ ಜಯದೇವಾ ||೭||

ಮಿನುಗುವ ತಾರಾಬಳಗದಿ
ಘನತೇಜೋವಂತನಾಗಿ ಬೆಳಗುವ ಚಂದ್ರಂ-
ಗೆಣೆಯಪ್ಪ ಪರಿಯೊಳೀ ಜಗ
ವನು ಬೆಳಗಿದ ಗುರುಗಳಲ್ಲಿ ತಾಂ ಜಯದೇವಂ ||೮||

ನಂದೀಶನ ಕೃಪೆ ಪಡೆದೈ-
ತಂದನು ಹರನಾಣೆಯನ್ನು ಶಿರದಲಿ ಧರಿಸು-
ತ್ತೆಂದನು "ಹರಮತ ಗೆಲ್ಲಲಿ"
ಸಂದನು ಮುರುಗೇಶ ಪಾದದಲಿ ಜಯದೇವಂ ||೯||

ವಂದಿಸುವೆನು ಹೇ ಪೂಜ್ಯನೆ
ಬಂದೀಗಳ್ ಮತ್ತೆ ನೀನು ಜಗವನು ಪೊರೆಯೈ
ಅಂಧಕಾರವು ಹರಡಿದೆ
ಮುಂಪೇಗೈವೇಳ್ಕುಮದನು ತೋರ್ ಜಯದೇವಾ ||೧೦||

ದೇವರದೇವನೆ ನಿನ್ನಾ
ಪಾವನತರ ಚರಣಕಮಲ ಪಾಪವಿನಾಶಂ
ಅವಗಮಾಧ್ಯಾದೊಳಿರಿ
ಸಾವಗಮೆನ್ನನು ಪೊರೆದು ಕಾಯ್ ಜಯದೇವಾ ||೧೧||

ಮಹಾ ಮಂಗಲ



ಮಹಾಕರ್ತೃ ಮುರುಘರಾಜೇಂದ್ರ ಸ್ವಾಮಿಗಳವರ ಸಮಾಧಿಯ ಮೇಲಿರುವ ಗೋಪುರ



ಚಿತ್ರದುರ್ಗ ಬೆಟ್ಟದ ಮೇಲಿರುವ ಮುನ್ನೂರ ಅರವತ್ತು ಅಂಕಣದ ಮೇಲ್ಮಠ